ಸಮರ್ಪಣೆ



ಶ್ರೀ ಧರ್ಮ[illegible] ಮಂಜಯ್ಯ ಹೆಗ್ಗಡೆಯವರ

ಸಮರ್ಪಣೆ

ಶ್ರೀಮಾನ್ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ
ಹಿತೈಷಿಗಳು ಒಪ್ಪಿಸಿದ
ಪ್ರಬಂಧಗಳ ಸಂಪುಟ

೧೯೫೦

ಮುದ್ರಕರು:
ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಮಂಗಳೂರು.

ಹತ್ತು ರೂಪಾಯಿ.

ಬಿನ್ನಹ.

ಜನಸೇವೆ, ದೇಶಸೇವೆ, ಈಶಸೇವೆಗಳಲ್ಲಿ ನಿರತರಾಗಿರುವ ಮಹನೀಯರೂ, ವಿಶ್ವಶಾಂತಿ ಲೋಕಕ್ಷೇಮಗಳ ಚಿಂತನೆಯನ್ನೇ ತಮ್ಮ ದೃಷ್ಟಿಪಥದಲ್ಲಿರಿಸಿಕೊಂಡಿರುವ ಮಹಾನುಭಾವರೂ, ಸರ್ವಧರ್ಮಗಳ ಸಾಮರಸ್ಯಕ್ಕಾಗಿ ತಮ್ಮ ತನುಮನಧನಗಳನ್ನು ಧಾರೆ ಎರೆದು ಧಾರ್ಮಿಕ ಮಂಡಲಕ್ಕೊಂದು ಮೇಲ್ಪಂಕ್ತಿ ಹಾಕಿಟ್ಟ ಮುಂದಾಳುವೂ ನುಡಿ, ವಿದ್ಯೆ, ಕಲೆ, ಸಂಸ್ಕೃತಿಗಳ ವ್ಯಕ್ತ ಪೋಷಕರೂ ಆದ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಂ. ಎಲ್. ಸಿ. ಅವರ ಸೇವಾಧರ್ಮಕ್ಕೆ ಭಕ್ತಿ ವಿಶ್ವಾಸ ಕೃತಜ್ಞತಾಸೂಚಕವಾದ ಏನಾದರೊಂದು ಬಗೆಯ ಶಾಶ್ವತ ರೂಪದ ಮಾನಮನ್ನಣೆಯನ್ನು, ಗೌರವಪಾತ್ರವಾದ ಮರ್ಯಾದೆಯನ್ನು ಸಮಗ್ರ ಕರ್ಣಾಟಕದ ಪರವಾಗಿ ಸಲಿಸಬೇಕೆಂದು ಕೆಲಕಾಲದ ಹಿಂದೆ ಧರ್ಮಸ್ಥಳದ ಧರ್ಮಸಮ್ಮೇಳನಕ್ಕೆ ನೆರೆದಿದ್ದ ಸ್ಥಳ ಪರಸ್ಥಳಗಳ, ಕರ್ಣಾಟಕದ ನಾನಾ ಭಾಗಗಳ ವಿದ್ವಾಂಸರ ಮತ್ತು ಸಾಮಾನ್ಯರೆಲ್ಲರಲ್ಲಿಯೂ ಹಿರಿಯಾಸೆ ಮೂಡಿತ್ತು. ಇಂಥ ಸಂದರ್ಭಗಳಲ್ಲಿ ಎಲ್ಲೆಲ್ಲೂ ನಡೆದು ಬಂದಿರುವ ರೂಢಿಯಂತೆ, ಶ್ರೀಮಾನ್ ಹೆಗ್ಗಡೆಯವರ ನಾನಾ ಮುಖವಾದ ಕಾರ್ಯಕ್ಷೇತ್ರಗಳಲ್ಲಿನ ಚಟುವಟಿಕೆಗಳನ್ನು ಒಳಗೊಂಡ ಅವರ ಬಗೆಬಗೆಯ ಅಭಿರುಚಿಗೊಪ್ಪುವ ವಿಷಯಗಳ ಮೇಲೆ ಎಲ್ಲೆಡೆಯ ಕರ್ಣಾಟಕ ಲೇಖಕೋತ್ತಮರಿಂದ ಲೇಖನಗಳನ್ನು ಬರೆಸಿ ತರಿಸಿಕೊಳ್ಳಬೇಕು, ಆ ಪ್ರಬಂಧಗಳನ್ನು ಒಂದು ಗ್ರಂಥರೂಪದಲ್ಲಿ ಅಚ್ಚು ಹಾಕಿಸಬೇಕು, ಮತ್ತದನ್ನು ಒಪ್ಪಿಸಲು ಶ್ರೀಯುತ ಹೆಗ್ಗಡೆಯವರಿಗೆ ಅರವತ್ತನೆಯ ವರ್ಷ ತುಂಬಿಬರುವ ಈ ಸನ್ನಿವೇಶವೇ ತಕ್ಕ ಕಾಲ ಎಂಬ ಸೂಚನೆ ಬಂದಿತ್ತು. ಆಗ ಅದಕ್ಕೆ ಸರ್ವತೋಮುಖವಾದ ಬೆಂಬಲ ದೊರಕಿದ ಕಾರಣ ಅಗತ್ಯವಿರುವ ಸಮಿತಿಗಳೇರ್ಪಟ್ಟು ಕಾರ್ಯಾರಂಭವಾಯಿತು. ಶ್ರೀಮಾನ್ ಹೆಗ್ಗಡೆಯವರನ್ನು ಬಲ್ಲವರೂ ಅವರ ಪರಿಚಿತರೂ ಅವರ ಆಪ್ತೇಷ್ಟರೂ ಅವರ ರೀತಿನೀತಿಗಳನ್ನು ಮೆಚ್ಚಿದವರೂ ಅವರಲ್ಲಿ ಪ್ರೇಮ ಅಭಿಮಾನಗಳಿರುವವರೂ ಆದ ಈ ಜಿಲ್ಲೆಯ ಮತ್ತು ಹೊರಗಡೆಯ ಹಲವು ವಿದ್ವಾಂಸರು ಲೇಖನಗಳನ್ನು ಕಳುಹಿಸಿಕೊಟ್ಟರು. ಶ್ರೀ. ಕಡೆಂಗೋಡ್ಲು ಶಂಕರ ಭಟ್ಟರು ಲೇಖಗಳನ್ನು ನೋಡಿ ಕೊಡುವ, ಶ್ರೀ. ಕೋಟ ಶಿವರಾಮ ಕಾರಂತರು ಗ್ರಂಥದ ಚಿತ್ರಭಾಗವನ್ನು ವ್ಯವಸ್ಥೆಗೊಳಿಸುವ, ಶ್ರೀ. ಎ. ರಾಮಣ್ಣ ಸೆಟ್ಟರು ಲೇಖನ ಸಂಗ್ರಹಕ್ಕಾಗಿ ವ್ಯವಹರಿಸುವ, 'ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್' ಅವರೂ ಕೆಲ ಚಿತ್ರಗಳನ್ನು 'ಶಾರದಾ ಪ್ರೆಸ್ಸಿ'ನವರೂ ಮುದ್ರಿಸುವ ಆಯಾ ಕೆಲಸಗಳನ್ನು ನಿರ್ವಂಚನೆಯಿಂದ ಶ್ರದ್ಧೆಯಿಂದ ಮಾಡಿದುದರಿಂದ ಗ್ರಂಥ ಪ್ರಕಟಣೆಗೆ ತೊಡಗಿದ ಮೊದಲು ಅದು ಪೂರ್ತಿಯಾಗುವ ವರೆಗೆ ಅವೆಲ್ಲ ಕೆಲಸಗಳೂ ಸುಗಮವೂ ಸುಲಭಸಾಧ್ಯವೂ ಆಯಿತು. ಗ್ರಂಥ ಆದಿಯಲ್ಲಿ ಉದ್ದೇಶಿಸಿದಷ್ಟು ದೊಡ್ಡದಾಗಿದೆ ಎಂದು ಸಮಿತಿಗಳವರು ತಿಳಿದುಕೊಂಡಿಲ್ಲ; ಬರಬಹುದಾಗಿದ್ದ ಬರಬೇಕಾಗಿದ್ದ ಎಲ್ಲರ ಲೇಖಗಳೂ ಬಂದಿವೆ ಎಂಬ ಈ ತೃಪ್ತಿ ಆ ಸಂತೋಷ ಅವರಿಗಿಲ್ಲ. ಬಂದ ಲೇಖಗಳಲ್ಲಿಯೂ ವ್ಯವಧಾನ ಸಾಲದೆ ಕೆಲವನ್ನು ಹಿಂದುಳಿಸಬೇಕಾಯಿತಲ್ಲ ಎಂಬ ಕೊರಗು ಅವರಿಗಿಲ್ಲದಿಲ್ಲ. ಇದರ ಜೊತೆಯಲ್ಲಿ ಶ್ರೀಮಾನ್ ಹೆಗ್ಗಡೆಯವರ ಬಹು ವಿಶಾಲ ವ್ಯಾಪ್ತಿಯ ಎಲ್ಲ ಕಾರ್ಯಭಾಗಗಳಿಗೆ ಎಲ್ಲ ಕರ್ಮಕ್ಷೇತ್ರಗಳಿಗೆ ಎಲ್ಲ ಚಟುವಟಿಕೆಗಳಿಗೆ ಸಂಬಂಧಿಸಿದ ಎಲ್ಲ ಪ್ರಬಂಧಗಳೂ ಇದೊಂದು ಗ್ರಂಥದಲ್ಲೇ ಅಡಗಿದೆ ಎನ್ನುವ ಗ್ರಹಿಕೆಯಾದರೂ ಸಮಿತಿಗಳವರದಲ್ಲ; ಅಷ್ಟು ಧೈರ್ಯ ಅವರಿಗಿಲ್ಲ. ಒಟ್ಟು ಇದರಲ್ಲಿರುವುದು—ಶ್ರೀಮಾನ್ ಹೆಗ್ಗಡೆಯವರ ಕೆಲವು ಮುಖ್ಯ ಚುರುಕಾದ ಚಟುವಟಿಕೆಗಳ ಅವರ ಸತ್ವಮಯ ಜೀವನದಲ್ಲಿನ ಕೆಲವು ಮುಖ್ಯ ಅವಿಶ್ರಾಂತ ಸೇವೆಯ ಅಂಶಗಳ ಪರಿಚಯ ಮಾಡಿಸಿ ಕೊಡುವ ಅವನ್ನು ವಿವರಿಸುವ ಪ್ರಾತಿನಿಧ್ಯ ಸ್ವರೂಪದ ಕೆಲವು ಪ್ರಬಂಧಗಳ ಸಂಗ್ರಹ ಮಾತ್ರ. ಕೆಲವು ತಿಂಗಳ ಹಿಂದೆ ಶ್ರೀಮಾನ್ ಹೆಗ್ಗಡೆಯವರಿಗೆ ಅವರ ನಾನಾ ಉದ್ಯಮ ಆಸಕ್ತಿಗಳ ಜೀವಮಾನದಲ್ಲಿ ಅರವತ್ತು ತುಂಬಿ ಅರವತ್ತೊಂದನೆಯ ವರ್ಷವಾರಂಭಿಸಿದೆ. ಆ ಮಹೋತ್ಸವದ ಲಾಂಛನವಾಗಿ—"ಹೂ ಕೊಡುವಲ್ಲಿ ಹೂವಿನ ಎಸಳು" ಎಂಬಂತೆ, ಶ್ರೀಮಾನ್ ಹೆಗ್ಗಡೆಯವರಿಗೆ ವಿನಯಪೂರ್ವಕವಾಗಿ ಈ ಪುಟ್ಟ ಗ್ರಂಥವನ್ನು ಸಮರ್ಪಿಸುವುದಾಗಿದೆ. ಗ್ರಂಥದಲ್ಲಿ ಕುಂದುಕೊರತೆಗಳು ಹೆಚ್ಚು ಕಡಿಮೆಗಳಿದ್ದಾವು; ನಾಡಿನ ಹಿರಿಯರೂ ಕಿರಿಯರೂ ಎಲ್ಲರೂ ಅವುಗಳನ್ನು ಮರೆತಾರೆಂಬ ಗ್ರಂಥದ ಉದ್ದೇಶವನ್ನು ಮಾತ್ರ ನೆನಪಿನಲ್ಲಿರಿಸಿಕೊಂಡಾರೆಂಬ ಬಲವಾದ ನಂಬಿಕೆಯುಂಟು. ಆ ಸಹೃದಯರಿಗೂ ಈ ಗ್ರಂಥ ಪ್ರಕಟಣೆಗೆ ನೆರವಾದ ಎಲ್ಲರಿಗೂ ಹೃತ್ಪೂರ್ವಕವಾದ ಅನಂತ ವಂದನೆ.

"ಸಮರ್ಪಣೆ" ಪ್ರಕಾಶನ ಸಮಿತಿ ಸದಸ್ಯರು:

ಸಂಪಾದಕ ಮಂಡಲಿ:

ಅನುಕ್ರಮಣಿಕೆ

THE PALACE,
MYSORE.
೧೧—೧೧—೧೯೪೯.

ಶ್ರೀಃ

ಶ್ರೀಮಚ್ಚಾಮುಂಡಿಕಾಂಬಾ ಚರಣಸರಸಿಜ ದ್ವಂದ್ವ ಸೇವಾಧುರೀಣ ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ ಮಹೀಶೂರ ಮಹಾಸಂಸ್ಥಾನ ದೇದೀಪ್ಯಮಾನ ನಿಖಿಲ ಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ ನಿಖಿಲ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃ ಪಾರಾವಾರ ಕಲಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀ ವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಕರ್ಣಾಟಕ ಸಿಂಹಾಸನಾಧೀಶ್ವರ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ., ಮಹಾಸ್ವಾಮಿಯವರು.

ಧರ್ಮಸ್ಥಳದ ಶ್ರೀ ಮಂಜನಾಥಸ್ವಾಮಿಯ ಪ್ರಧಾನ ಧರ್ಮಾಧಿಕಾರಿಗಳಾದ ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರ ಷಷ್ಟ್ಯಬ್ದಪೂರ್ತಿ ಮಹೋತ್ಸವವು ನಡೆಯುವುದೆಂದೂ, ಅವರಿಗೆ ಸಂಭಾವನಾಗ್ರಂಥದ ಕಾಣಿಕೆಯು ಸಮರ್ಪಿತವಾಗುವುದೆಂದು ಕೇಳಿ ನಮ್ಮ ಮನಸ್ಸಿಗೆ ಅತ್ಯಂತ ಸಂತೋಷವುಂಟಾಗಿದೆ. ಈ ಷಷ್ಟಿಪೂರ್ತಿಸಂಭಾವನಾ ಸಮಾರಂಭದಲ್ಲಿ ಭಾಗಿಗಳಾಗಲು ನಾವು ಬಹು ಸಂತೋಷಪಡುತ್ತೇವೆ. ಪುಣ್ಯಕ್ಷೇತ್ರವಾದ ಧರ್ಮಸ್ಥಳಕ್ಕೆ ಹೋಗಿ ಬಂದಿರುವ ಯಾತ್ರಿಕರೆಲ್ಲರಿಗೂ ಅವರ ಸರಳ ಜೀವನವೂ, ಪರೋಪಕಾರ ಪ್ರವೃತ್ತಿಯೂ ಅನ್ಯಮತ ಸಹಿಷ್ಣುತಯೇ ಮುಂತಾದ ಸದ್ಗುಣಗಳೂ ಹೃದಯಂಗಮವಾಗಿ ಗೋಚರವಾಗಿರುವುದರಲ್ಲಿ ಸಂದೇಹವಿಲ್ಲ. ಸಕಲ ಧರ್ಮಗಳೂ ವಿಶ್ವಪ್ರೇಮಕ್ಕೆ ರಾಜಮಾರ್ಗಗಳೆಂಬುದನ್ನು ಮನಗಂಡಿರುವ ಮಹನೀಯರಲ್ಲಿ ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರೂ ಒಬ್ಬರೆಂದು ಧಾರಾಳವಾಗಿ ಹೇಳಬಹುದಾಗಿದೆ. ಅವರು ಪ್ರತಿವರ್ಷವೂ ಉತ್ಸಾಹದಿಂದ ನೆರವೇರಿಸುವ ಸರ್ವಧರ್ಮ ಸಮ್ಮೇಳನವೂ ಅದಕ್ಕೊಂದು ನಿದರ್ಶನವಾಗಿದೆ. ಆಡಳಿತ ನಿರ್ವಹಣದಲ್ಲಿ ಅವರಿಗಿರುವ ಸಾಮರ್ಥ್ಯವೂ, ಅತಿಥಿ ಸತ್ಕಾರದಲ್ಲಿ ಅವರು ತೋರಿಸುವ ಆದರ ವಿಶ್ವಾಸಗಳೂ ಸುಪ್ರಸಿದ್ಧವಾಗಿವೆ. ಅವರು ಚಿರಕಾಲ ಆರೋಗ್ಯ ದೃಢಕಾಯರಾಗಿದ್ದು ನಮ್ಮ ನಾಡಿಗೂ ಮತ್ತು ನಮ್ಮ ದೇಶಬಾಂಧವರಿಗೂ ಇತೋಪ್ಯಧಿಕವಾಗಿ ಸೇವೆ ಸಲ್ಲಿಸುವಂತೆ ಭಗವಂತನು ಅನುಗ್ರಹಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಶ್ರೀ ಜಯಚಾಮರಾಜ ಒಡೆಯರ್.

R. R. DIWAKAR,
MINISTER,
Ministry of Information & Broadcasting,
Government of India,

ನವದೆಹಲಿ,
ಜುಲೈ ೮, ೪೯.

ಶ್ರೀ ಧರ್ಮಸ್ಥಳ ಹೆಗ್ಗಡೆಯವರ ವರ್ಧಂತಿ ಉತ್ಸವವು ಆಗುವುದೆಂಬುದನ್ನು ಕೇಳಿ ಬಹಳ ಸಂತೋಷವಾಯಿತು. ಅವರ ಹಾಗೂ ನನ್ನ ಪರಿಚಯವು ಬಹಳ ದಿವಸದ್ದು. ತಮ್ಮ ಅನೇಕ ಲೋಕಪ್ರಿಯ ಗುಣಗಳ ಮೂಲಕ ಮತ್ತು ಉದಾರಭಾವನೆಯ ಮೂಲಕ ಸರ್ವರಿಗೂ ಬೇಕಾದವರಾಗಿದ್ದಾರೆ. ಈ ಸಮಯದಲ್ಲಿ ಅವರಿಗೆ ನಾನು ಅತ್ಯಂತ ಅಂತಃಕರಣಪೂರ್ವಕವಾಗಿ ಆಯುರಾರೋಗ್ಯವನ್ನು ಕೋರುವೆನು. ಪರಮಾತ್ಮನು ಅವರಿಗೆ ದೀರ್ಘಾಯುಷ್ಯವನ್ನು ಕೊಟ್ಟು ಅವರಿಂದ ಇನ್ನೂ ಹೆಚ್ಚು ಸತ್ಕಾರ್ಯಗಳನ್ನು ಮಾಡಿಸಲೆಂದು ಹಾರೈಸುವೆ.

ತಮ್ಮವನಾದ,

ರಂಗನಾಥ ದಿವಾಕರ.

A. B. SHETTY,
MINISTER,
Government of Madras.

Madras,
29—7—1949.

ಶ್ರೀ ಧರ್ಮಸ್ಥಳ ಮಂಜಯ ಹೆಗ್ಡೆಯವರ ಲೋಕಸೇವೆಯ ನೆನಪಿಗಾಗಿ ಸ್ಮಾರಕ ಗ್ರಂಥವನ್ನು ಸಮರ್ಪಿಸುವ ಈ ಕಾರ್ಯವು ಅತ್ಯಂತ ಸ್ತುತ್ಯವಾಗಿದೆ. ಇವರು ಮೂವತ್ತೊಂದು ವರುಷಗಳ ಕಾಲ ಸಾರ್ವಜನಿಕ ಸೇವೆಯಲ್ಲಿ ತಮ್ಮ ತನುಮನೋಧನಗಳನ್ನು ಸವೆದಿದ್ದಾರೆ. ಇವರ ಮತಸಹಿಷ್ಣುತೆಗೆ, ಶಾಂತಿಪ್ರಿಯತೆಗೆ, ಇವರು ನಡೆಸುತ್ತಿರುವ ಸರ್ವ ಧರ್ಮ ಸಮ್ಮೇಳನವೇ ಸಾಕ್ಷಿ. ಇವರು ಶಾಸನ ಸಭೆಗಳ ಸದಸ್ಯರಾಗಿ, ರಾಜಕೀಯರಂಗದಲ್ಲಿ ದುಡಿಯುತಿದ್ದಂತೆ, ಧರ್ಮಸ್ಥಳದ ಮುಖ್ಯಸ್ಥರಾಗಿ ದಾನಧರ್ಮಗಳಿಂದ ಜನಮನವನ್ನೂ ತಣಿಸುತ್ತಿದ್ದಾರೆ. ಇವರು ವಿಶಾಲ ಹೃದಯಿಗಳು, ಸುಸಂಸ್ಕೃತರು, ಮಹಾ ಉದಾರಿಗಳು—ಮಾತ್ರವಲ್ಲ ಉತ್ತಮ ಕಲಾವಿದರೂ ಸಾಹಿತ್ಯಪ್ರೇಮಿಗಳೂ ಆಗಿದ್ದಾರೆ. ಇವರ ಸೌಜನ್ಯ ಸೌಶೀಲ್ಯಗಳೇ ಇವರನ್ನು ಜನಪ್ರಿಯರನ್ನಾಗಿ ಮಾಡಿವೆಯೆಂಬುದರಲ್ಲಿ ಸಂದೇಹವಿಲ್ಲ. ಇಂದಿನ ವಾತಾವರಣದಂತೆ ಶ್ರೀಮಾನ್ ಹೆಗ್ಡೆಯವರಂತಹ ಲೋಕಸೇವಕರು ಎಷ್ಟು ಜನರಿದ್ದರೂ ಸಾಲದು. ಇವರ ಔದಾರ್ಯ-ಪರೋಪಕಾರಗಳು ಇನ್ನಷ್ಟು ಹೆಚ್ಚಿ ಕನ್ನಡ ನಾಡಿಗೇ ಆದರ್ಶವಾಗಲಿ.

A. B. Shetty,
29 - 7 –'49.

K. R. Karanth, B.A., LL.B., M.L.A.,
Ex-Minister for Revenue, Govt. of Madras.

Mangalore,
9—10—'49.

I am glad to join in the 60th birthday celebration of my esteemed friend and colleague Shri Dharmastal Manjaya Hegde, M. L. C. I have had the pleasure of knowing him for nearly 25 years now. We have been co-workers in many fields.

2. In the old Legislative Council the law, called the Jain Succession Act 1929, got passed at my instance was really the Bill prepared and introduced by him in the earlier Council of which he was a member. Later in the thirties, we worked together for many years in the District Landholders' Association and in particular in the report prepared in 1931 on the conditions of life of the people in the interior villages of the Puttur Taluk which opened the eyes of the people to the retrograde forest policy of Government in regard to these areas. Many of the grievances which cried out for redress in that report are still to be removed though 18 years have since passed.

3. Mr. Hegde has been a gentleman of real charity befitting the great place of pilgrimage called "Dharmastal." Many have been his charities to various institutions in this district, both Jain and Non-Jain. The two most important of these which I have seen are the "Siddavana" a Gurukul at Ujre, and the fine school building he built and donated for the High School in the place which would not have come into existence but for his munificence. All these have come from him silently and without pomp, and which is rare in these days. Many may not know that he is a good painter in oil colours, and a fine embodiment of Kannada learning and culture. In religion whilst himself a staunch and orthodox Jain, his catholicity is exemplified in the annual conferences of all religions which are being held for many years now during the annual Sasti festival at Dharmastal. May God bless him with good health and many more years of useful service to our districit and to Karnatak!

K. R. Karanth,
9—10—1949.

MIRZA M. ISMAIL.

2, Ali Asker Road,
Bangalore,
26—9—1949.

ಶ್ರೀ ಮಂಜಯ್ಯ ಹೆಗ್ಗಡೆಯವರ 'ಷಷ್ಟಿ ಪೂರ್ತಿ' ಉತ್ಸವವು ಜರುಗಲಿದೆಯೆಂದೂ, ಅವರನ್ನು ಗೌರವಿಸಲು ತಾವುಗಳು ಒಂದು ಸಂಭಾವನಾಗ್ರಂಥವನ್ನು ಪ್ರಕಟಿಸುತ್ತೀರೆಂದೂ ಕೇಳಿ ಹರ್ಷವಾಯಿತು. ನಾನು ಕೆಲವು ವರ್ಷಗಳ ಹಿಂದೆ ಧರ್ಮಸ್ಥಳಕ್ಕೆ ಹೋಗಿದ್ದು ಅಲ್ಲಿ ದೇವಾಲಯಗಳನ್ನು ನೋಡಿ ಆನಂದಿಸಿದ್ದೇನೆ. ಶ್ರೀ. ಹೆಗ್ಗಡೆ ಅವರು ನನಗೆ ಅಪೂರ್ವವಾದ ಗೌರವಾದರಗಳನ್ನು ತೋರಿಸಿದ್ದಾರೆ. ಅಲ್ಲಿಯ ಸುಂದರ ದೃಶ್ಯಗಳೂ, ಶ್ರೀ. ಹೆಗ್ಗಡೆಯವರ ಔದಾರ್ಯವೂ ಇನ್ನೂ ಕಣ್ಣಿಗೆ ಕಟ್ಟಿದಂತಿದೆ.

ದೇವರ ಇಚ್ಛೆಯಿದ್ದಲ್ಲಿ ಇನ್ನೊ ಒಮ್ಮೆ ಆ ಪ್ರಾಂತ ಬಂದು ದೇವಸ್ಥಾನಗಳನ್ನೂ, ಹೆಗ್ಗಡಿಯವರನ್ನೂ ಸಂದರ್ಶಿಸಬೇಕೆಂಬ ಇಚ್ಛೆ ಇದೆ. ಶ್ರೀ. ಹೆಗ್ಗಡೆಯವರು ತಮ್ಮ ಸೇವಾಕಾರ್ಯಗಳನ್ನು ಮುಂದುವರಿಸಿಕೊಂಡು ಬರುವಂತೆ ದೇವರು ಅವರಿಗೆ ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಲೆಂದೂ, ನಿಮ್ಮ ಸಂಭಾವನಾಗ್ರಂಥ ಶೀಘ್ರ ಪ್ರಕಟವಾಗಲೆಂದೂ ಈ ಸಂದರ್ಭದಲ್ಲಿ ಆಶಿಸುತ್ತೇನೆ.

ಇಂತೀ ತಮ್ಮ ವಿಶ್ವಾಸಿ,

Mirza M. Ismail.

N. CHANDRASEKHARA AIYAR,
RETIRED JUDGE, HIGH COURT,

Madras,
25—10—1949.

M. R. Ry. Sri Manjaya Hegde of Dharmasthala in S. Canara is an institution and not a mere individual. He has set an example of public service which very few have excelled. He has been a keen patron of learning and his charities are well-known. His keen interest in causes calculated to promote true public welfare and his ardent efforts to foster high ideals of religion and spirituality have earned for him well deserved respect. May he live for many more years in full possession of mental and bodily vigour.

N. Chandrasekhara Aiyar.

OFFICE OF THE HIGH COMMISSIONER
FOR THE UNITED KINGDOM
6, ALBUQUERQUE ROAD
NEW DELHI
28th October, 1949.

Sir Archibald Nye has asked me to reply to your letter, undated, on the subject of your proposal to present "Grantha Kanika" to Sri Dharmastala Manjaya Hegde, and to forward the following message for inclusion.

"I was gratified to learn that it is proposed to present 'Grantha Kanika' to Sri Dharmastala Manjaya Hegde on his attainment of his 60th birthday in recognition of many years of public and social service to the community. It must be with a deep sense of satisfaction that he can look back over this period and I would like to wish him many more active and productive years in which to carry on his excellent work. Service such as his has an immeasurable effect on the happiness and wellbeing of his fellowmen and its truest recognition will be found in the hearts of those he has served."

S. J. G. Fingland,
Private Secretary.

His Holiness
Sree Charukeerthi Pandithacharyavarya
Swamiji

JAIN MUTT.
SHRAVANABELGOLA,
(MYSORE STATE)

ಸ್ವಸ್ತಿ ಶ್ರೀಮದ್ರಾಯರಾಜಗುರು ಭೂಮಂಡಲಾಚಾರ್ಯವರ್ಯ ಮಹಾವಾದವಾದೀಶ್ವರ ರಾಯವಾದಿಪಿತಾಮಹ ಸಕಲವಿದ್ವಜ್ಜನ ಸಾರ್ವಭೌಮಾದ್ಯನೇಕ ಬಿರುದಾವಳೀ ವಿರಾಜಮಾನ ಶ್ರೀಮನ್ನಿಜಘಟಿಕಸ್ಥಾನ ದಿಳ್ಳಿ ಕನಕಾದ್ರಿ ಶ್ವೇತಪುರ ಸುಧಾಪುರ ಸಂಗೀತಪುರ ಕ್ಷೇಮವೇಣುಪುರ ಶ್ರೀಮದ್ಬೆಳುಗುಳ ಸಿದ್ಧಸಿಂಹಾಸನಾಧೀಶ್ವರ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಯವರು:—

ಸನಾತನ ಹಿಂದೂ ವೈದಿಕ ಧರ್ಮ ಮತ್ತು ಜೈನಧರ್ಮದ ರಹಸ್ಯವನ್ನರಿತ ಶ್ರೀ ಹೆಗ್ಗಡೆಯವರು ಶ್ರೀ ಧರ್ಮಕ್ಷೇತ್ರದ ಅಧಿಕಾರವನ್ನು ವಹಿಸಿ ಕಳೆದ 31 ವರ್ಷಗಳಲ್ಲಿ ಧರ್ಮ-ಸಾಹಿತ್ಯ-ಕಲೆ-ರಾಜಕೀಯ ರಂಗಗಳಲ್ಲಿ ಮಾಡಿದ ಸೇವೆಯು ಆದರ್ಶವಾದುದು. ವಿವಿಧಮತ ಧರ್ಮಸಮ್ಮೇಳನ, ಸಿದ್ಧವನ ಗುರುಕುಲ, ಕರ್ಣಾಟಕ ವಿದ್ಯಾಲಯ ಇವುಗಳೇ ಅವರ ಸಮಾಜಸೇವೆಯ ನಿದರ್ಶನಗಳಾಗಿವೆ. ತನುವಂ ಸಂದ ಸೇವೆಯೊಳ್ ಎಂದು ರತ್ನಾಕರ ವರ್ಣಿಯು ಹೇಳಿರುವಂತೆ ಪಾತ್ರವರಿತು ವಿವಿಧ ಧರ್ಮಗಳನ್ನು ಮಾಡಿ ಪ್ರೇಮಪೂರ್ಣ ಅಹಿಂಸಾತತ್ವದಿಂದ ಯಾತ್ರಿಕರಿಗೆ ಆನಂದವನ್ನು ನೀಡಿ ಕ್ಷೇತ್ರದ ಕಲಾ ಸಾನಿಧ್ಯವನ್ನೂ ನಾಡಿನ ಸರ್ವತೋಮುಖವಾದ ಏಳಿಗೆಯನ್ನೂ ಮಾಡುವುದೇ ಜೀವನದ ಧ್ಯೇಯವೆಂದು ಬದ್ಧಕಂಕಣರಾದ ಅವರಿಗೆ ದೀರ್ಘಾಯುರಾರೋಗ್ಯವನ್ನೂ ಸರ್ವ ಕಾರ್ಯದಲ್ಲಿ ಶುಭ ಮತ್ತು ಜಯವನ್ನೂ ತ್ರಿಕರಣಗಳಲ್ಲಿ ಶಾಂತಿಯನ್ನೂ ಸರ್ವ ಸಂಪತ್ಸಮೃದ್ಧಿಯನ್ನೂ ಕೊಟ್ಟು ಬಹುಕಾಲ ಬಾಳಿ ಬೆಳಗಿ-ಬೆಳಗಿಸುವಂತೆ ಶ್ರೀ ಚಂದ್ರನಾಥನೂ ಮಂಜುನಾಥನೂ ಕಾಪಾಡಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಇತಿ ಭದ್ರಂ ಭೂಯಾತ್.

ವರ್ಧತಾಂ ಜಿನಶಾಸನಂ.

ಶ್ರೀ ಸ್ವಾಮಿಗಳವರು.

ಚಿತ್ರಾಪುರ ಮಠ, ಶಿರಾಲಿ, ಉ. ಕ.,
4—10—1949.

ಸ್ವಸ್ತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ......ಶ್ರೀಮದ್ಗೌಡಪಾದ ಶ್ರೀಮತ್ಕೃಷ್ಣಾಶ್ರಮಕರಕಮಲಸಂಜಾತ ಶ್ರೀಮತ್ಪಾಂಡುರಂಗಾಶ್ರಮಾನುಗೃಹೀತ ಗುರುಪಾದಪುಷ್ಕರೈಕತಾನಧ್ಯಾನಮಕರನ್ದ ಷಟ್ಪದಾಯಮಾನ ಸ್ವಾನ್ತ ಶ್ರೀ ಚಿತ್ರಾಪುರಾಧಿಷ್ಠಿತ ಶ್ರೀಮದಾನಂದಾಶ್ರಮ ಸ್ವಾಮಿಗಳವರು.

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿಯ ಶ್ರೀ ಮಂಜುನಾಥ ದೇವಾಲಯದ ಆದರ್ಶ ಅಧಿಪತಿಗಳಾದ ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ಅವರ ಷಷ್ಠ್ಯಬ್ದ ಪೂರ್ತಿಯ ಸಂಕೇತವಾಗಿ ಅವರಲ್ಲಿ ಪ್ರೇಮಾದರವುಳ್ಳ ಕೆಲ ಮಹನೀಯರು ಪ್ರಶಸ್ತಿ ಗ್ರಂಥ ಕಾಣಿಕೆಯನ್ನರ್ಪಿಸಲು ಉದ್ಯುಕ್ತರಾದುದು ಆಸ್ತಿಕವರ್ಗಕ್ಕೆಲ್ಲ ತುಂಬ ಸಂತೋಷಕರವಾಗಿದೆ.

ಧರ್ಮಸ್ಥಳವು ಭಕ್ತಜನರ ಕಷ್ಟಪರಿಹಾರ–ಇಷ್ಟಸಿದ್ಧಿಗಳನ್ನು ಪೂರೈಸಿ ಕೊಡುವ ಒಳ್ಳೆಯ ಜಾಗೃತಸ್ಥಾನವಾಗಿದೆಯಾಗಿ ಆಸ್ತಿಕವರ್ಗದಲ್ಲಿ ಅನುಭವ ಮೂಲಕವಾದ ನಂಬಿಕೆಯಿದೆ. ಶ್ರೀ ಹೆಗ್ಗಡೆಯವರು ಈ ಕ್ಷೇತ್ರದಲ್ಲಿ ಹಿಂದಿನಿಂದಲೂ ನಡೆದು ಬಂದ ನಿತ್ಯದ ವಿನಿಯೋಗಗಳನ್ನೂ ವಿಶೇಷ ಉತ್ಸವಾದಿಗಳನ್ನೂ ಯೋಗ್ಯ ರೀತಿಯಿಂದ ನಡೆಸಿಕೊಂಡು ಬರುವದರ ಜತೆಗೆ ಇಲ್ಲಿಗೆ ಬರುವ ಭಕ್ತವೃಂದದ ಸೌಕರ್ಯಕ್ಕಾಗಿ ಅವಶ್ಯವುಳ್ಳ ಏರ್ಪಾಡುಗಳನ್ನೂ ಮಾಡಿದ್ದಾರೆ, ಉತ್ತಮವಾದ ಛತ್ರಗಳನ್ನೂ ವಾಚನಾಲಯವನ್ನೂ ಔಷಧಾಲಯವನ್ನೂ ನಿರ್ಮಿಸಿ ಹಳ್ಳಿಯಲ್ಲಿಯೂ ನಗರದ ಸೌಕರ್ಯಗಳನ್ನು ಒದಗಿಸಿಕೊಟ್ಟು ಆ ಮೂಲಕ ಇವರು ಮಾಡುತ್ತಿರುವ ಭಕ್ತಜನರ ಸೇವೆಯು ಸ್ತುತ್ಯವಾಗಿದೆ.

ಧರ್ಮಸ್ಥಳದ ಹಾಗೂ ನೆರೆಕೆರೆಯ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಶಾಲೆಯನ್ನೂ ಆಯಾ ಮತಧರ್ಮದ ಹುಡುಗರಿಗೆ ಲೌಕಿಕ ಶಿಕ್ಷಣದ ಜತೆಯಲ್ಲೆ ಅವರವರ ಮತಧರ್ಮಗಳ ಶಿಕ್ಷಣವನ್ನೂ ಕೊಡಲು ಅನುಕೂಲವಾಗುವಂತೆ ಒಂದು ಗುರುಕುಲವನ್ನೂ ನಡಿಸುವದರಿಂದ ಇವರ ವಿದ್ಯಾದಾನತತ್ಪರತೆಯೂ ಮತ-ಧರ್ಮಗಳಲ್ಲಿಯ ಪ್ರೀತಿಯೂ ವ್ಯಕ್ತವಾಗುವದು.

ನಮ್ಮ ದೇಶದಲ್ಲಿ ಎಷ್ಟೋ ಧರ್ಮಗಳೂ ಮತಗಳೂ ಪ್ರಚಾರದಲ್ಲಿವೆ. ಅವುಗಳ ಅನುಯಾಯಿಗಳಲ್ಲಿ ಹಲವರು ತಮ್ಮ ಮತವನ್ನೇ ಸರಿಯಾಗಿ ಅರಿಯದವರೂ ಇನ್ನೂ ಕೆಲವರು ಸ್ವಮತವನ್ನು ಅರಿತರೂ ಬೇರೆ ಮತಗಳ ಅರಿವಿಲ್ಲದವರೂ ಇರುವದರಿಂದ ಭಿನ್ನಭಿನ್ನ ಮತದವರಲ್ಲಿ ವೈಷಮ್ಯವುಂಟಾಗಿ ದೇಶದ ಏಳಿಗೆಗೆ ಅವಶ್ಯವಾದ ಪರಸ್ಪರ ಪ್ರೀತಿ ಸಂಘಟನೆ ಮತ್ತು ಐಕ್ಯ ಇವುಗಳಿಗೆ ತೊಡಕುಂಟಾಗಿದೆ. ಶ್ರೀ ಹೆಗ್ಗಡೆಯವರು ಎಲ್ಲಾ ಮತ-ಧರ್ಮಗಳ ತತ್ವವನ್ನು ಅರಿತವರಾಗಿದ್ದು

ಆಯಾಯ ಮತದವರ ಪ್ರತಿಪಾದನೆಯ ಶೈಲಿ ಅಥವಾ ಭಾಷೆಯಲ್ಲಿ ವ್ಯತ್ಯಾಸವಿದ್ದರೂ ಅವುಗಳ ಮೂಲತತ್ವಗಳು ಒಂದೇ ಆಗಿದ್ದು ಅವೆಲ್ಲವೂ ಒಂದೇ ಸ್ಥಾನವನ್ನು ಸೇರುವ ಬೇರೆ ಬೇರೆ ಮಾರ್ಗಗಳಾಗಿವೆಯೆಂಬ ಧರ್ಮಸಮನ್ವಯ-ಭಾವನೆಯುಳ್ಳ ವರಾಗಿದ್ದಾರೆ. ಈ ಸಮನ್ವಯ-ಭಾವನೆಯನ್ನು ಜನರಲ್ಲಿ ಪ್ರಚುರಗೊಳಿಸುವ ಸಲು ವಾಗಿ ಪ್ರತಿ ವರ್ಷವೂ ಧರ್ಮಸ್ಥಳದಲ್ಲಿ ಜರಗುವ ದೀಪೋತ್ಸವದ ಸಮಯದಲ್ಲಿ ವಿವಿಧಮತ ಧರ್ಮಸಮ್ಮೇಳನವನ್ನು ಕೆಲವು ವರ್ಷಗಳಿಂದ ನಡೆಸುತ್ತಿದ್ದು ಅದರಲ್ಲಿ ಆಯಾ ಮತ ಧರ್ಮಗಳ ಅಭಿಜ್ಞರಿಂದ ಯಾವದಾದರೂ ಧಾರ್ಮಿಕತತ್ವಗಳನ್ನು ಕುರಿತು ಅವರವರ ಮತಾನುಸಾರವಾಗಿ ಪ್ರತಿಪಾದನರೂಪವಾದ ಪ್ರವಚನಗಳ ನ್ನೇರ್ಪಡಿಸಿ ಅದರಿಂದ ಆ ಸಮಯ ಅಲ್ಲಿ ನೆರೆದ ಭಕ್ತಜನರು ಸ್ವಮತಾನುಷ್ಠಾನದಿಂದ ಶ್ರೇಯಸ್ಸನ್ನೂ ಪರಮತಜ್ಞಾನದಿಂದ ಪರಸ್ಪರ ಬಾಂಧವ್ಯವನ್ನೂ ಹೊಂದಲಿಕ್ಕೆ ಅನುಕೂಲವಾದ ಸನ್ನಿವೇಶವನ್ನೊದಗಿಸುತ್ತಿರುವುದು ಇವರು ಉಪಕ್ರಮಿಸಿದ ಅತ್ಯಂತ ಮಹತ್ವದ ಕಾರ್ಯವಾಗಿದೆ.

ಕಲೋಪಾಸನೆಯು ಮಾನವನ ಸುಸಂಸ್ಕೃತ ಆತ್ಮದ ಗುರುತೆಂದು ಎಣಿ ಸುವಲ್ಲಿ ಶ್ರೀ ಹೆಗ್ಗಡೆಯವರು ಉತ್ತಮ ಚಿತ್ರಕಾರರಾಗಿರುವರೆನ್ನುವದು ಇವರು ಚಿತ್ರಿ ಸಿದ ಸುಂದರವಾದ ಚಿತ್ರಗಳನ್ನು ನೋಡಿದವರಿಗೆ ಖಚಿತವಾಗದಿರಲಿಕ್ಕಿಲ್ಲ.

ತನ್ನ ಅಧೀನದಲ್ಲಿ ಹೇರಳವಾದ ಸಂಪತ್ತಿದ್ದರೂ ಅದೆಲ್ಲವನ್ನು ದೇವರ ಆರಾಧನೆಗೂ ಭಕ್ತಜನರ ಸೌಕರ್ಯಗಳಿಗೂ ದಾನಧರ್ಮಾದಿಗಳಿಗೂ ಇನ್ನಿತರ ಲೋಕೋಪಕಾರದ ಕಾರ್ಯಗಳಿಗೂ ವಿನಿಯೋಗಿಸಿ ತಾನು ತ್ಯಾಗಮಯವೂ ಶ್ರದ್ಧಾ ಭಕ್ತಿಧರ್ಮಾತ್ಮಕವೂ ಆದ ಸಾದಾ ಜೀವನವನ್ನು ನಡೆಸುತ್ತಿರುವ ಇವರನ್ನು ನೋಡಿ ಇಂದಿಗೂ ವೀತರಾಗಿಗಳೂ ಕರ್ಮಯೋಗಿಗಳೂ ಆದ ಜನಕನಂಥ ರಾಜರ್ಷಿ ಗಳು ಇರುವರೆಂಬದನ್ನು ಯಾರಾದರೂ ಮನಗಾಣಬಹುದು.

ಪರಮಾತ್ಮನು ಶ್ರೀ ಹೆಗ್ಗಡೆಯವರಿಗೆ ಆರೋಗ್ಯವನ್ನೂ ದೀರ್ಘಾಯುಷ್ಯ ವನ್ನೂ ದಯಪಾಲಿಸಿ ಇವರಿಂದ ಶ್ರೀ ಕ್ಷೇತ್ರದ ಕೀರ್ತಿ-ಮಹತ್ವಗಳು ಇನ್ನಷ್ಟು ಉಜ್ವಲವಾಗುವಂತೆ ಅನುಗ್ರಹಿಸಲೆಂದು ಆತನ ಚರಣಗಳಲ್ಲಿ ಬೇಡುವೆವು.

ಆನಂದಾಶ್ರಮಸ್ವಾಮಿ.

ಶ್ರೀಮದ್ವಿದ್ಯಾಸಮುದ್ರತೀರ್ಥ ಶ್ರೀಪಾದಂಗಳವರು,
ಶ್ರೀ ಕಣಿಯೂರು ಮಠ,

ಉಡುಪಿ, ದ. ಕ.,
18—8—1949.

ಧೀರೋದಾತ್ತ ಪ್ರಕೃತಿಗಳಾದ ಈ ಮಹನೀಯರ ಆಡಳಿತದಲ್ಲಿ ಶ್ರೀ ಧರ್ಮಸ್ಥಳದ ದೇವಾಲಯದ ಸ್ಥಿತಿಯು ಯೋಚಿಸಲಾರದಷ್ಟು ಪ್ರಗತಿಯನ್ನು ಹೊಂದಿರುತ್ತದೆಂಬುದು ಅಲ್ಲಿಗೆ ಹೋಗಿ ನೋಡಿದವರಿಗೆಲ್ಲಾ ಪ್ರತ್ಯಕ್ಷವಾದುದು.

ಮಾನನೀಯರಾದವರನ್ನು ಯೋಗ್ಯತಾನುಸಾರ ಸನ್ಮಾನಿಸುವುದರಲ್ಲಿಯೂ, ವಿದ್ವಾಂಸರನ್ನು ಸತ್ಕರಿಸುವುದರಲ್ಲಿಯೂ, ಅತಿಥಿ ಅಭ್ಯಾಗತರನ್ನು ತೃಪ್ತಿಗೊಳಿಸುವುದರಲ್ಲಿಯೂ, ಶ್ರೀಯುತರ ಔದಾರ್ಯವು ಅಸಾಧಾರಣವಾಗಿ ಶ್ಲಾಘನೀಯವಾದುದು.

ಅನೇಕ ವರ್ಷದಿಂದ ಶ್ರೀಯುತರು ನಡೆಯಿಸುತ್ತಲಿರುವ ಸರ್ವಮತ ಸಮ್ಮೇಳನ ಮಹಾಕಾರ್ಯವಂತೂ ದಿಗ್ದೇಶಗಳಲ್ಲಿ ತನ್ನ ಕೀರ್ತಿ ಬಾವುಟನ್ನೇರಿಸುತ್ತ ಸಹೃದಯ ಧುರೀಣರಾದ ಶ್ರೀಯುತರ ಸರ್ವಮತ ತತ್ವಸಮಾನದೃಷ್ಟಿಯನ್ನೂ ಸಹನ ಶಕ್ತಿಯನ್ನೂ ವ್ಯಕ್ತಗೊಳಿಸುತ್ತದೆ.

ಇಂತಹ ಲೋಕಮಾನ್ಯರಾದ ತೌಳವ ದೇಶಕ್ಕೇ ಮುಕುಟಮಣಿಯಂತಿರುವ ಶ್ರೀ. ಹೆಗ್ಡೆಯವರು ಶ್ರೀ ಮಂಜುನಾಥ ದೇವರ ಕರುಣಾಕವಚ ಪ್ರಾವೃತರಾಗಿ ಆಯುರಾರೋಗ್ಯಸಂಪನ್ನರಾಗಿ ಬಹುಕಾಲ ಜನ ಸಮಾಜಕ್ಕೆ ಉಪಕಾರ ಮಾಡುತ್ತ ಆಚಂದ್ರಾರ್ಕವಾಗಿ ತಮ್ಮ ಕೀರ್ತಿಯು ಲೋಕವನ್ನು ಬೆಳಗಿಸುವಂತಹ ಲೋಕೋತ್ತರ ಸತ್ಕಾರ್ಯಗಳನ್ನು ಮಾಡುತ್ತ ಚಿರಕಾಲ ಸುಖವಾಗಿ ಬಾಳುವಂತೆ ಶ್ರೀ ದೇವರು ಅನುಗ್ರಹಿಸಲೆಂದು ನಮ್ಮ ಆರಾಧ್ಯ ಶ್ರೀ ಕೃಷ್ಣ ನರಸಿಂಹ ದೇವರನ್ನು ಸರ್ವದಾ ಪ್ರಾರ್ಥಿಸುತ್ತೇವೆ.

ಇತ್ಯನೇಕ ಶ್ರೀಮನ್ನಾರಾಯಣ ಸ್ಮರಣೆಗಳು.

ಶ್ರೀ ದೇವೇಂದ್ರಕೀರ್ತಿ
ಭಟ್ಟಾರಕಪಟ್ಟಾಚಾರ್ಯವರ್ಯ ಸ್ವಾಮಿಗಳು

ಹೊಂಬುಜಮಠ,
೧೦ — ೧೦ — ೧೯೪೯.

ನಮ್ಮ ದಕ್ಷಿಣ ದೇಶಕ್ಕೆ ರತ್ನಪ್ರಾಯರಾದ ಧರ್ಮಸ್ಥಳದ ಶ್ರೀಯುತ ಮಾನ್ಯ ಮಂಜಯ್ಯ ಹೆಗ್ಗಡೆಯವರ ಪರಿಚಯವಿಲ್ಲದವರು ಅತಿ ವಿರಳ. ದಕ್ಷಿಣ ದೇಶದ ಅನೇಕ ಪ್ರಮುಖರೂ, ಗುಣಗ್ರಾಹಿಗಳೂ ಪಂಡಿತೋತ್ತಮರೂ ಸೇರಿ ಅವರ 60ನೆಯ ವರುಷದ ಸವಿ ನೆನಪಿಗಾಗಿ ಒಂದು ಪುಸ್ತಕವನ್ನು ತಯಾರಿಸಿ ಅವರಿಗೆ ಸಮರ್ಪಿಸಬೇಕೆಂದು ನಿರ್ಧರಿಸಿದ್ದು ಸುವರ್ಣಕ್ಕೆ ಸುಗಂಧ ಕೊಟ್ಟಂತೆಯೂ, ಹಾಲಿಗೆ ಸಕ್ಕರೆ ಬೆರಸಿದಂತೆಯೂ, ಆಗಿದೆ. ಒಬ್ಬ ವ್ಯಕ್ತಿಯನ್ನು ಘನ ಕೋವಿದರಾದಃ ಸಾವಿರಾರು ಮಂದಿ ಸ್ಮರಿಸುತ್ತಿರಬೇಕಾದರೆ ಆ ವ್ಯಕ್ತಿಯಲ್ಲಿ ಲೋಕೋಪಕಾರಕವಾದ ಪವಿತ್ರ ಗುಣಕ್ರಿಯಾಭಾವನೆಗಳು ಇದ್ದೇ ಇರಬೇಕೆಂಬುದು ನಿರ್ವಿವಾದ.

ಶ್ರೀಮಾನ್ ಮಂಜಯ್ಯ ಹೆಗ್ಡೆಯವರ ಒಡನಾಟದಲ್ಲಿ ಸ್ವಲ್ಪ ಸಮಯ ಇದ್ದರೆ ಸಾಕು. ಆ ಮೇಲೆ ಅವರನ್ನು ಅಗಲಿ ಹೋಗುವುದೇ ಕಷ್ಟವಾಗುತ್ತದೆ. ಕನಸಿನಲ್ಲಿಯೂ ಅವರನ್ನು ಸ್ಮರಿಸುತ್ತಿರಬೇಕಾಗುತ್ತದೆ. * * * * ಇಂತಹ ವ್ಯಕ್ತಿಯನ್ನು ಪಡೆದ ನಾವುಗಳು ಧನ್ಯರು. ಇವರ ಸ್ಥಾನದಲ್ಲಿ ಪ್ರತಿನಿತ್ಯಲೂ ಅಶನೌಷಧಾಭಯ ಶಾಸ್ತ್ರಗಳೆಂಬ ನಾಲ್ಕು ವಿಧವಾದ ದಾನಗಳು ನಡೆಯುತ್ತಿರುತ್ತವೆ. ಇವರು ಮಾಡಿರುವ ದಾನ, ಧರ್ಮ, ಪರೋಪಕಾರ, ಸಮಾಜಸೇವೆ, ಲೋಕ-ಜನಸೇವೆ ಕ್ಷೇತ್ರಾಭಿವೃದ್ಧಿಕಾರ್ಯ ಆದಾಯಾಭಿವೃದ್ಧಿ ಮೊದಲಾದುವುಗಳ ಅಳತೆ ಎಷ್ಟೆಂಬುದು ವೇದ್ಯವಾಗುತ್ತದೆ. * * * *

ಇವರ ಸರಳ ಹೃದಯ, ಸತ್ಯ ನಡತೆ, ದೈವಭಕ್ತಿಯ ಉದಾರತೆಗೆ ಶ್ರೀ ಮಂಜುನಾಥನು ಪ್ರಸನ್ನನಾಗಿ ಇವರ ಮಾತು ಹುಶಿಯಾಗದಂತೆ ನಡೆಸಿಕೊಟ್ಟು ಕಾಪಾಡುತ್ತಿರುವುದು ಸರ್ವಜನ ವಿದಿತವಾಗಿದೆ. ಈ ಕಾರಣದಿಂದಲೇ ಇವರಿಗೆ ಮಾತನಾಡುವ ಮಂಜುನಾಥ ಎಂಬ ಪ್ರತೀತಿಯು ಲೋಕಪ್ರಸಿದ್ಧವಾಗಿದೆ. ಇವರಿಗೆ ಸರ್ವತ್ರ ಸರ್ವದಾ ಜಯವಾಗಲಿ.

ಇವರು ಇನ್ನು ಬಹುಕಾಲದ ವರೇಗೆ ಚಿರಂಜೀವಿಗಳಾಗಿ ಈ ನಾಡಿನ ತಮ್ಮ ಹಿತಚಿಂತಕರ ಕಣ್ಣೆದುರು ಆರೋಗ್ಯ ಭಾಗ್ಯ ಸುಖಸಂಪತ್ತಿನಿಂದ ತುಂಬಿ ಮೆರೆಯಲೆಂದು ಶ್ರೀ ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇವೆ. ಮತ್ತು ಆಶೀರ್ವಚನದಿಂದ ಹರಸುತ್ತೇವೆ.

ಇತಿ ಭದ್ರಂ ಶುಭಂ ಮಂಗಲಂ

“ಮಂಗಲಾಷ್ಟಕ”

ದಿವಂಗತ ಪಂಡಿತ ಶ್ರೀ. ಯಂ. ರಾಘವೇಂದ್ರಾಚಾರ್ಯ, ಮಂಗಳೂರು.

ತ್ಯಕ್ತ್ವಾ ಸ್ವಸ್ತರುತಾಂ ನರಸ್ತ್ವಮಭವದ್ಭಕ್ತೇಷ್ಟ ಚಿಂತಾಮಣಿಃ ।
ವಿದ್ವಾನ್ ಪೂರ್ಣಕಲಸ್ಸಮಸ್ತ ಜನತಾನಂದೋಽಸಮಃ ಕೀರ್ತಿತಃ ॥

ಸದ್ಧರ್ಮಸ್ಥಲ ಮಂಜುನಾಥ ಭಗವತ್ಪಾದಾಬ್ಜ ಸಂಸೇವಕಃ ।
ಶ್ರೀಮಾನ್ ಮಂಜಯ ಹೆಗ್ಡೇ ಸತ್ಸು ಮಹಿತೋ ಜೀವೇಚ್ಛತಂ ವತ್ಸರಾನ್ ॥ ೧ ॥

ಶ್ರೀಮದ್ಧರ್ಮಸ್ಥಲ ಕ್ಷೇತ್ರೇ ಮಂಜುನಾಥ ಪ್ರಸಾದಕಃ ।
ನಾನಾದಿಗ್ದೇಶ ಸಂಪ್ರಾಪ್ತ ಯಾತ್ರಿಕಾತಿಥ್ಯ ದೀಕ್ಷಿತಃ ॥ ೨ ॥

ಕ್ಷೇತ್ರಸ್ಥ ದೇವ ದೈವೇಷು ದೃಢಭಕ್ತಿ ಸಮನ್ವಿತಃ ।
ತ್ರಿಕಾಲಪೂಜನೈಶ್ಚೈವ ಭಗವತ್ತೋಷಣೈಃ ಸದಾ ॥ ೩ ॥

ಲಕ್ಷದೀಪೋತ್ಸವೈಃ ಶ್ರೇಷ್ಠೈರ್ನವರಾತ್ರ ಮಹೋತ್ಸವೈಃ ।
ರಥೋತ್ಸವ ಸಮಾರಂಭೈಃ ಪ್ರೀಣಯನ್ಪರಮೇಶ್ವರಂ ॥ ೪ ॥

ನಿತ್ಯಂ ಮೃಷ್ಟಾನ್ನದಾನಾದಿ ಬ್ರಹ್ಮಭೋಜನ ಸಂಭ್ರಮೈಃ ।
ಬ್ರಾಹ್ಮಣ್ಯಂ ಸುಸ್ಥಿರೀಕುರ್ವನ್ ವಿದಿತೋ ಬ್ರಾಹ್ಮಣಪ್ರಿಯಃ ॥ ೫ ॥

ಬಾಲವಿದ್ಯಾರ್ಥಿನಾಂ ಪಾಠಶಾಲಾ ಸಂಸ್ಥಾಪಕೋಽಪ್ಯಸೌ ।
ರುಗ್ಣಾನಾಮುಪಕಾರಾಯ ಚಿಕಿತ್ಸಾಲಯಕಾರಕಃ ॥ ೬ ॥

ಬಹು ಪುಣ್ಯಾಭಿಗಮ್ಯೋಽಸೌ ಮಹೋದಾರೋಜನಪ್ರಿಯಃ ।
ಪರಾರ್ಥೈಃ ಕರ್ಮಭಿಃ ಶ್ಲಾಘ್ಯೈಃ ಪ್ರಜಾನಾಥ ಇವಾಪರಃ ॥ ೭ ॥

ಸಾಕ್ಷಾದ್ವ್ಯಾಸವ ಐಶ್ವರ್ಯೇ ಬುದ್ಧ್ಯುತ್ಕರ್ಷೇ ಬೃಹಸ್ಪತಿಃ ।
ದಾನೇ ಬಲಿಶ್ಚ ಕರ್ಣಶ್ಚ ಗಾಂಭೀರ್ಯೇ ವರುಣಾಲಯಃ ॥ ೮ ॥

ಶ್ರೀಮಂಜುನಾಥಕೃಪಯಾ ಪುತ್ರಮಿತ್ರ ಕಲತ್ರವಾನ್ ।
ಶ್ರೀಮಾನ್ಮಂಜಯ ಹೆಗ್ಡೇಽಸೌ ರಾಜತಾಮುತ್ತರೋತ್ತರಂ ॥ ೯ ॥

ಶ್ರೀಮಾನ್ಮಂಜಯ ಹೆಗ್ಡೀಯಂ ಮಾಂಗಲ್ಯಂ ಮಂಗಲಾಷ್ಟಕಂ ।
ಸುಕೃತೀಂದ್ರಯತಿಚ್ಛಾತ್ರ ರಾಘವೇಂದ್ರೇಣ ನಿರ್ಮಿತಂ ॥ ೧೦ ॥

ಧಾರ್ಮಿಕ ಷಷ್ಠಿಪೂರ್ತಿ

ಶ್ರೀ. ಮುಳಿಯ ತಿಮ್ಮಪ್ಪಯ್ಯ, ಮಂಗಳೂರು.

---

1 ಎದೆಯಂ ಸಂತತಮುಪ್ಪುತಂ ಪಳಗಿದಾ ಸೌಶೀಲ್ಯದಿಂದಂ ದಯಾ
ನಿಧಿಯೆಂದೆನ್ನಿಸಿ ರನ್ನಗನ್ನಡಿಯೆ ಲೋಕಕ್ಕಾಗಿ ಧರ್ಮಸ್ಥಳಂ
ಪುದಿಯಲ್ ಸಾರ್ಥಕವಾಗೆ ಸಂದು ದಯೆ ದಾನಂ ಶೀಲವೆಂದೆತ್ತಲುಂ
ಬೆದೆಗೊಂಡೊಪ್ಪುವ ಮಂಜಯಂ ಜಯಿಕೆತಾನೀ ಷಷ್ಠಿಪೂರ್ತ್ಯಂಕದೊಳ್.

2 ಸರ್ವರಪೆಂಪುವೆತ್ತುದಯಕಂತವರೆಲ್ಲರ ಚಿತ್ತವೃತ್ತಿಯಂ
ಪರ್ವಿರಿವೇಹುದಕ್ಕರಿ ರಸಾಯನವಾಗಿಯದಂತರಂಗವಂ
ಕೊರ್ವಿಸಬೇಕು ಸತ್ಯದೆಸಕಂ ಬೆಸೆದೊಪ್ಪುವ ಧರ್ಮಸಾರವಂ
ನಿರ್ವಹಿಸುತ್ತೆ ನಿನ್ನವೊಲು ಬಾಳ್ಕೆಯನಾರ್ ಬೆಳಗಲ್ಕೆ ಬಲ್ಲವರ್?

3 ಅಂತಹ ಧರ್ಮಮೂರ್ತಿಯೆನೆ ಮುಕ್ಕರಣಂ ಬಲಿದಂದಿನಿಂದೆ ಧ-
ರ್ಮಂ ತಳಿರೇಳೆ ಕರ್ಮದ ಮುಗುಳ್ವೊನೆದೋರೆ ಪೊದಳ್ದ ಶೀಲವೆ
ತ್ತಂತರಗೊಂಡು ಸಾರೆ ಮಿಡಿಕಾಯ್ ಸಲೆ ಪಣ್ಣನೆ ನಾಡನೇಗಳುಂ
ಸಂತಸಕೇರಿಪಾ ಪರಮಧಾರ್ಮಿಕ ನಿನ್ನನದೆಂತು ಬಣ್ಣಿಪೆಂ

4 ನಿನಗರುವತ್ತು ಸಂಧಿಸಿದುದೈಹರಯಂ ಬಗೆಗಂತರಿಂದೆ ನಾ
ಡಿನಮನದೊಂದು ನಂದನವನಂ ಮುಗುಳ್ದೊಪ್ಪಿತು ತುಂಬಿಕೋಕಿಲಂ
ಗಿಣಿದನಿದೋರುಗುಂ ಮನದ ಮಾತಿನ ಮಾಳ್ಕೆಯ ಕಂಪುಪರ್ಬಿಕ
ರ್ಬಿನಗೆಣೆಯಾದುದೀ ಬಿದಿರಿನಲ್ ಸಲುವೆನ್ನಕರಂ ವಿರಾಜಿಕೆ

5 ಮತಗಳ ಸಾರಮಾಕಲೆಗಳಾಗರವೊಪ್ಪುವ ಚಿತ್ರಮಂದಿರಂ
ಸತತಮುದಾತ್ತಧರ್ಮಗಳ ಮೂರ್ತಿಯೆನಲ್ ನೃಪತುಂಗನಂದದಿಂ
ವ್ಯತಿಕರಲಿಲ್ಲವೆಂದೆನಿಪ ಧರ್ಮದುಸಿರ್ ವರಕರ್ಮವೀರ ನಿ
ನ್ನತಿಶಯಮಾದ ಮಾರ್ಗವೆನೆ ಕಂಡವರಾರ್ ಸಲೆಕಂಡು ಸಾಗುವರ್

6 ಹೆಗ್ಗಡೆಯಾದವರ್ ಹಲಬರಂತವರೊಳ್ ಬಗೆಗೊಂಡು ಸರ್ವಸಂ-
ಪದ್ಗುಣಶಾಲಿಯಾಗಿ ಗುಣದಂದದೆ ಬಟ್ಟೆಯನಾಗಿಸುತ್ತೆ ಸ
ದ್ವರ್ಗದ ಸರ್ವಧಾರಿಯೆನೆ ರಾಜಿಪ ಮಂಜಯ ನಿನ್ನಪೆರ್ಮೆಗೆ
ಲ್ಲಗುರ್ರಿಯೊಂದೆನಲ್ ಪರಮನಂ ಮನದೊಳ್ ನೆಲೆಗೆಯ್ಯುತರ್ಚಿಕೆ.

7 ಧರ್ಮದ ಮೂರ್ತಿಯೆಂದೆನಿಸಿತಾಂ ಸರಕಾರ ಸಭಾಸದಸ್ಯ ಭಾ
ವಂ ಮೆರೆಯಲ್ಕೆ ಸದ್ವಿನಯಕೊಪ್ಪುವನಿಕ್ಕಿದ ಮಾಳ್ಕೆಯಿಂದೆ ಸ-
ತ್ಕರ್ಮಕೆ ಕೊಟ್ಟ ಜೀವಕಳೆ ನಮ್ಮಯ ಕನ್ನಡನಾಡ ಭಾಗ್ಯದೊಂ-
ದುಮ್ಮಹವಾಗಿ ಧರ್ಮದೊಳೆ ಕನ್ನಡಮಂಮೆರೆ ಮಂಜಯ ಪ್ರಭೂ.

ಶುಭಾಶಂಸೆ.

ಪುಂಡೂರು ಶ್ರೀ. ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಕಾಸರಗೋಡು.

(ಕಂದ)

ಆವಂ ಭಕ್ತಾಭೀಷ್ಟವ ।
ನೀವಾಶ್ರಯ ಮೂರ್ತಿಯೆನಿಸಿ ಸನ್ನುತನಹನೋ ॥
ಆ ವಂದ್ಯಂ 'ಧರ್ಮಸ್ಥಲ' ।
ದೇವಂ—ಶ್ರೀ ಮಂಜುನಾಥನೀಯಲಿ ಶುಭಮಂ. ॥ ೧ ॥

ನಂಬಿದರಿಗೆ ಸುಖದಿಂಬಂ ।
ನಂಬದರಿಗೆ ಘೋರದುಃಖದಂಬಂ ಕೊಡುವಾ ॥
ಗಂಭೀರ ಸಮಾರಂಭ ಕ ।
ದಂಬಂ—ಶ್ರೀ ಮಂಜುನಾಥನೀಯಲಿ ಶುಭಮಂ. ॥ ೨ ॥

ಆವಾ ಕ್ಷೇತ್ರದ ಪೆಸರಂ ।
ಜೀವರ್ ಮುನಿ'ದಾಣೆ'ಯಿಡಲು ಭಯಗೊಳ್ಳುವರೋ ॥
ಆ ವಿಮಲ 'ಸ್ಥಲ' ವಿಲಸ ।
ದ್ಭಾವಂ—ಶ್ರೀ ಮಂಜುನಾಥನೀಯಲಿ ಶುಭಮಂ. ॥ ೩ ॥

ಆ ರಾಜದೈವಸೂತ್ರ ವಿ ।
ಚಾರಾಸ್ಥಾನ ಪ್ರಧಾನ ಸಂಧಾನಗಳಿಂ ॥
ರಾರಾಜಿಪ ಶರಣ ಜನೋ ।
ದ್ಧಾರಂ—ಶ್ರೀ ಮಂಜುನಾಥನೀಯಲಿ ಶುಭಮಂ. ॥ ೪ ॥

ಸಾಮಂತರಾಜ ವಿಭವ ।
ಶ್ರೀಮಾನ್ ಮಂಜಯ್ಯ ಹೆಗ್ಗಡೆಯ ಸಮ್ಮುಖದೊಳ್ ॥
ಕಾಮಿತವೀವಾ ಧರ್ಮಾ ।
ರಾಮಂ—ಶ್ರೀ ಮಂಜುನಾಥನೀಯಲಿ ಶುಭಮಂ ॥ ೫ ॥

ಆ ದಾನಶೂರ ಹೆಗ್ಗಡೆ ।
ಯಾದರದಿಂ ಧರ್ಮದೈವ ಬಲದಿಂ ಭರದಿಂ ॥
ಮೇದಿನಿಗಾಗಲಿ ನಿತ್ಯಾ ।
ಮೋದಂ—ಶ್ರೀ ಮಂಜುನಾಥನೀಯಲಿ ಶುಭಮಂ ॥ ೬ ॥



ಶ್ರೀಮಾನ್ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು, ಎಮ್. ಎಲ್. ಸಿ. ([illegible])

ಶ್ರೀ ಕ್ಷೇತ್ರವೂ ಕ್ಷೇತ್ರಪಾಲಕರೂ

ಮಹಾಶಯರ ಬಹುಮುಖವಾದ ಯೋಗ್ಯತೆ

ದಿವಂಗತ ರಾವ್‌ಸಾಹೇಬ್ ಮಂಜೇಶ್ವರ ಅನಂತರಾವ್, ಬಿ. ಎ., ಬಿ. ಎಲ್.

೧೯೩೩ ಮೊದಲ್ಗೊಂಡು ಕಾರ್ತಿಕ ಬಹುಳ ಅಮಾವಾಸ್ಯೆಯ ಸಂದರ್ಭದ ಲಕ್ಷದೀಪೋತ್ಸವ ಸಮಾರಂಭಗಳ ವೇಳೆ ಪ್ರತಿವರ್ಷ ನಾನು ಧರ್ಮಸ್ಥಳಕ್ಕೆ ಹೋಗಿ ಒಂದೆರಡು ದಿನಗಳಾದರೂ ಅಲ್ಲಿ ತಂಗಿ ದೇವರ ದರ್ಶನದ ಲಾಭ ಪಡೆದು ಯಥಾನುಶಕ್ತಿ ಸೇವೆಮಾಡಿಸಿ ವಾಪಸು ಬರುವ ವಾಡಿಕೆಯನ್ನನುಸರಿಸಿಕೊಂಡು ಬಂದವನಾಗಿರುತ್ತೇನೆ. ಕೆಲವು ವರ್ಷಗಳಲ್ಲಿ ರಥೋತ್ಸವದ ವೇಳೆಗೆ ಹೋದುದೂ ಉಂಟು. ಆದರೆ ೧೯೪೬ರಲ್ಲಿ ಮಾತ್ರ, ನನ್ನ ಅಸ್ವಸ್ಥದ ಬಗ್ಗೆ ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೋಸ್ಕರ ನಾನು ಜಿಲ್ಲೆಯ ಹೊರಗೆ ಹೋಗಿದ್ದುದರಿಂದ, ಸಕಾಲಕ್ಕೆ ವಾಪಸು ಬರಲಿಕ್ಕೇ ಸಾಧ್ಯವಾಗದೆ, ಆ ವರ್ಷದ ಲಕ್ಷದೀಪೋತ್ಸವಗಳ ಸಂದರ್ಭದಲ್ಲಿ ನಾನು ಧರ್ಮಸ್ಥಳಕ್ಕೆ ಹೋಗಿರಲಿಲ್ಲ. ಅನಂತರ ನಾನು ಅಲ್ಲಿಗೆ ಹೋದುದು ಮರುವರ್ಷದ, ಅಂದರೆ, ೧೯೪೭ರಲ್ಲಿನ ಲಕ್ಷದೀಪೋತ್ಸವಗಳ ಸಂದರ್ಭದಲ್ಲಾಗಿತ್ತು. ಹೀಗಾಗಿ, ಆ ಸರ್ತಿ ನಾನು ಹೋದುದಕ್ಕೂ ಅದರ ಮೊದಲು ಹೋಗಿದ್ದುದಕ್ಕೂ ನಡುವೆ ಎರಡು ವರ್ಷಗಳ ಅಂತರವಿತ್ತು.

ಪರಂತು, ಆ ಎರಡು ವರ್ಷಗಳೊಳಗೆ ಅಲ್ಲಿ ಎಷ್ಟೋ ಮಾರ್ಪಾಟುಗಳು ಆಗಿದ್ದುವು. ಉಜಿರೆಯಿಂದ ಧರ್ಮಸ್ಥಳಕ್ಕೆ ಹೋಗುವಾಗ ದಾರಿಗರಿಗೆ ಕಾಣುತ್ತಿದ್ದ ಸಿದ್ಧವನ ಪ್ರದೇಶದಲ್ಲಿ ಎಷ್ಟೋ ಹೊಸ ಹೊಸ ಕಟ್ಟಡಗಳು ಕಾಣಿಸುತ್ತಿದ್ದು, ಮುಂದರಿಸಿ ಹೋದಾಗ ನೇತ್ರಾವತಿ ಹೊಳೆ ದಾಟುವುದಕ್ಕೆ ಸೇತುವೆ ಮಾಡಿಸಿದ್ದುದೂ ಕಂಡುಬರುತ್ತಿತ್ತು. ಆ ಮೂಲಕ ಕಾಲು ನಡಿಗೆಯಿಂದಾಗಲಿ, ಮೋಟರುಬಂಡಿ ಮುಂತಾದ ವಾಹನಗಳಲ್ಲಾಗಲಿ ಯಾತ್ರಿಕರು ಏನೊಂದೂ ಆತಂಕವಿಲ್ಲದೆ ದೇವಸ್ಥಾನದ ವರೆಗೂ ಸೀದಾ ಹೋಗಬಹುದಾಗಿತ್ತು. ಧರ್ಮಸ್ಥಳ ಗ್ರಾಮವನ್ನು ಪ್ರವೇಶಿಸಿದೊಡನೆ, ಹಳೆ ಕಟ್ಟಡಗಳ ದುರುಸ್ತಿ, ಹೊಸ ಕಟ್ಟಡಗಳ ನಿರ್ಮಾಣ ಮುಂತಾದ ಕುರುಹುಗಳು ಅಲ್ಲಲ್ಲಿ ತೋರುತ್ತಿ, ಕೆಲವೆಡೆ ಸ್ಥಳದ ಹಿಂದಿನ ರೂಪವೇ ಬದಲಾಗಿ ಹೋಗಿ ಹೊಸರೂಪಧಾರಣದ ಮೂಲಕ ಸುಂದರವಾಗಿ ಶೋಭಿಸುತ್ತಿತ್ತು. ದೇವಸ್ಥಾನದ ಮುಂಭಾಗದಲ್ಲಿ ವ ಒಳಗಡೆಯಲ್ಲಿ ಮತ್ತು ಬೀಡಿನಲ್ಲಿ ಸಹ ವಿದ್ಯುಚ್ಛಕ್ತಿಯ ಮೂಲಕ ಬೆಳಗುವ ಹೊಸ ಮಾದರಿಯ ದೀಪಗಳಾಗಿ, ದೇವಸ್ಥಾನದ ಇದಿರಿನ ಕಾರಂಜಿಯ ಸುತ್ತಮುತ್ತ ಹೊಸ ಮಾದರಿಯ ಸೌಂದರ್ಯಾತಿಶಯಗಳೂ ಕಂಗೊಳಿಸುತ್ತಿದ್ದುವು. ಸಾಯಂಕಾಲವಾಗುತ್ತಲೇ ಬಾನುಲಿಯ ಪ್ರಸಾರದ ಮೂಲಕ ಬೀಡಿನೊಳಗಿಂದ ಹೊರಡುತ್ತಿರುವ ಸಂಗೀತವಿಶೇಷಗಳು ಸಮಸ್ತ ಯಾತ್ರಿಕರ ಮನೋರಂಜನೆಗಾಗಿ ದೇವಸ್ಥಾನದ ಮುಂಗಡೆ ಏರ್ಪಟ್ಟಿದ್ದ ವಾಕ್ಪುಷ್ಟೀಕರಣದ ಸವಲತ್ತಿನ ದ್ವಾರಾ ಎಣ್ದೆಸೆಗಳಿಗೂ ಹರಡಿ ಸ್ಪಷ್ಟವಾಗಿ ಕೇಳಿಸಲಾರಂಭವಾಯಿತು. ಉತ್ಸವ ಕಾಲವು ಸಮೀಪಿಸಿದಾಗ ಶ್ರೀದೇವರ ಉತ್ಸವ ಮೂರ್ತಿಯನ್ನು ಕೂತುಕೊಳ್ಳಿಸುವುದಕ್ಕೆ ಆ ವರೆಗೆ ಇಲ್ಲದೆ ಹೊಸತಾಗಿ ಮಾಡಿಸಿ ಮೈಸೂರಿನಿಂದ ತರಿಸಿದ ಬೆಳ್ಳಿಯ ವಾಹನವೊಂದು ಇದಿರಿಗೆ ತರಲ್ಪಟ್ಟು ಇದೇ ಉತ್ಸವಕ್ಕೆ ಹೊಸ ಬಗೆಯ ಮೆರುಗು ಉಂಟಾದುದು ಗೋಚರವಾಯಿತು.

ಹೀಗೆ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಸೂಚಕವಾದ ಹೊಸ ಹೊಸ ಕುರುಹುಗಳು ಸರ್ವರ ಗಮನಕ್ಕೆ ಬರುತ್ತಿರುವುದು ಧರ್ಮಸ್ಥಳ ಕ್ಷೇತ್ರದ ಮುಖ್ಯ ಲಕ್ಷಣವಾಗಿರುತ್ತದೆ. ಧರ್ಮಸ್ಥಳ ಕ್ಷೇತ್ರವೆಂದೊಡನೆ ಅಲ್ಲಿಯ ಪಟ್ಟದಲ್ಲಿ ಪ್ರತಿಷ್ಠಿತರಾದ ಹೆಗ್ಗಡೆಯವರನ್ನು ಬೆರಳಿಟ್ಟು ತೋರಿಸಿದಂತಾಗುತ್ತದೆ. ಯಾವ ಸಂಸ್ಥೆಯ ಸ್ಥಿತಿಗತಿಯಾದರೂ ಅದರ ಚಾಲಕರ ಮೇಲೆ ಹೊಂದಿಕೊಂಡಿದೆ. ಮತಸಂಬಂಧವಾದ ದೇವಾಲಯಗಳೇ ಮೊದಲಾದ ಸಂಸ್ಥೆಗಳ ಸಿರಿಯು ಇತರ ಸಂಸ್ಥೆಗಳಿಗಿಂತ ಹೆಚ್ಚು ಮಟ್ಟಿಗೆ ಅವುಗಳ ಚಾಲಕರ ಮೇಲೆ ಹೊಂದಿಕೊಂಡಿರು

ತ್ತದೆ. ನೌಕರರು ಅವರವರ ಕೆಲಸಗಳನ್ನು ಯಥಾಕಾಲಗಳಲ್ಲಿ ಯಥಾವಿಧಿಯಾಗಿ ನಡೆಸುತ್ತಿರಬಹುದು. ಆದರೆ ಜರುಗಬೇಕಾದ ಕರ್ಮಕರ್ಮಾಂಗಗಳ ಪರಿಣಾಮವು ಕೇವಲ ಮಂತ್ರತಂತ್ರಗಳನ್ನು ಅನುಸರಿಸಿಕೊಂಡಿರುವಂತಹುದಲ್ಲ. ವೈದಿಕರಲ್ಲಿ "ಮಂತ್ರಕ್ಕಿಂತ ಉಗುಳು ಜಾಸ್ತಿ" ಎಂಬ ಮಾದರಿಯವರೂ ಇರುತ್ತಾರೆ. ಮಂತ್ರಕ್ಕಿಂತ ತಂತ್ರ ಜಾಸ್ತಿಯಾದರೂ ಫಲವಿಲ್ಲ. ತಂತ್ರಕ್ಕಿಂತ ಮಂತ್ರ ಜಾಸ್ತಿಯಾದರೂ ಪ್ರಯೋಜನವಿಲ್ಲ. ಮಂತ್ರತಂತ್ರಗಳೊಳಗೆ ಸಾಮರಸ್ಯವಿದ್ದರೂ ಸಾರ್ಥಕ್ಯವು ಒದಗದು. ಎಲ್ಲಾ ಕೆಲಸಗಳಲ್ಲಿಯೂ ಮನಸ್ಸು ಮುಖ್ಯ. ಮಾನಸಿಕಾವಸ್ಥೆ ಸರಿಯಾಗಿದ್ದ ಹೊರತು ಮಂತ್ರತಂತ್ರಗಳು ಫಲಿಸಲಾರವು. ಆಸುರೀಪ್ರಕೃತಿಯವರು ಎಷ್ಟು ಮಂತ್ರತಂತ್ರಗಳನ್ನು ಹೇಗೆ ನಡೆಸಿದರೂ, ಕ್ಷೇತ್ರಕ್ಕೆ ಕಲಾಸಾನ್ನಿಧ್ಯವು ಪ್ರಾಪ್ತವಾಗದು, ಮಾತ್ರವಲ್ಲ, ಮೊದಲಿದ್ದ ಕಲಾಸಾನ್ನಿಧ್ಯವು ಕಾಲಕ್ರಮೇಣ ಕ್ಷೀಣಿಸಿ ಕೊನೆಗೆ ಅಳಿದು ಹೋಗಬಹುದು. ಚಾಲಕರು ದೈವೀಪ್ರಕೃತಿಯವರಾಗಿದ್ದರೆ ಮಾತ್ರವೇ ಸಂಸ್ಥೆಯ ಪ್ರಭಾವವು ಹೆಚ್ಚುಹೆಚ್ಚಾಗಿ ಬೆಳಗುವುದು.

ಧರ್ಮಸ್ಥಳ ಕ್ಷೇತ್ರದ ಮಾತೆತ್ತಿದೊಡನೆ ಅದರ ಪ್ರಕೃತದ ಧರ್ಮಕರ್ತರಾದ ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರ ವ್ಯಕ್ತಿತ್ವವು ಮನದಟ್ಟಾಗುವುದು. ಬಾಹ್ಯ ಪರಿಸರಗಳ ಶುಚಿತ್ವವನ್ನಾಗಲಿ, ಹೊಸ ಕಟ್ಟಡಗಳ ರೂಪನ್ನಾಗಲಿ, ಗ್ರಾಮಸ್ಥರ ಮತ್ತು ಯಾತ್ರಿಕರ ಆರೋಗ್ಯ ಪರಿಪಾಲನೆ, ಅನಾರೋಗ್ಯ ನಿವಾರಣೆಗಳ ಬಗ್ಗೆ ಮಾಡಿರುವ ಸೌಕರ್ಯಗಳನ್ನಾಗಲಿ, ಮಕ್ಕಳ ಲೌಕಿಕವ ಧಾರ್ಮಿಕ ಶಿಕ್ಷಣಕ್ಕೋಸ್ಕರ ಏರ್ಪಡಿಸಿರುವ ಸಿದ್ಧವನ ಮುಂತಾದ ಗುರುಕುಲದಂತಹ ಸಂಸ್ಥೆಗಳನ್ನಾಗಲಿ, ಸದಸದ್ವಿವೇಚನೆಯಿಂದ ಸಂಗ್ರಹಿಸಿ ಇಟ್ಟಿರುವ ಉದ್ಗ್ರಂಥಗಳ ಭಂಡಾರವನ್ನಾಗಲಿ, ಇರುವವರ ಮತ್ತು ಬರುವವರ ಶ್ರೇಯೋಭಿವೃದ್ಧಿಗೆ ಸಹಾಯವಾಗುವಂತೆ ಜರುಗಿಸುವ ಸಮ್ಮೇಳನಗಳನ್ನಾಗಲಿ, "ಎಲ್ಲಿ ನೋಡಿದೊಡಲ್ಲಿ" ಕಂಡುಬರುತ್ತಿರುವ ಲಲಿತಕಲಾನೈಪುಣ್ಯ ಸೂಚಕವಾದ ಚಿತ್ರಗಳು, ಲಾಲಕಿ ರಥ ಮುಂತಾದ ವಾಹನಗಳು, ಮಂಟಪಗಳು, ಇತರ ದೃಶ್ಯಗಳು, ಮೊದಲಾದುವುಗಳನ್ನಾಗಲಿ, ಯಾವುದನ್ನು ಪರಿಶೀಲಿಸಿದರೂ, ಧರ್ಮಾರ್ಥಕಾಮಮೋಕ್ಷವೆಂಬ ನಾಲ್ಕು ಪುರುಷಾರ್ಥಗಳನ್ನೂ ಸಾಧಿಸುವುದರಲ್ಲಿ ಪರಿಪೂರ್ಣತೆಯನ್ನು ಗಳಿಸಿಕೊಳ್ಳುವ ಧ್ಯೇಯವುಳ್ಳ ಮಹಾನುಭಾವರಾಗಿರುವಂತಹ ವ್ಯಕ್ತಿಯ ಕೈವಾಡವೇ ಗೋಚರವಾಗುವುದು.

ಸಂಸ್ಥೆಗಳ ಆಡಳಿತೆ ನಡೆಸಿಕೊಂಡಿರುವವರಲ್ಲಿ ಇಂತಹ ಬಹುಮುಖತ್ವವು ತೋರುವುದು ಬಹಳ ಅಪರೂಪ. ಚಿತ್ರಿಕನಾಗಿರುವವನಿಗೆ ಚಿತ್ರಗಳಲ್ಲಿ ಅಲ್ಲದೆ ಅನ್ಯಥಾ ಉತ್ಸಾಹವಿರುವುದಿಲ್ಲ. ಕಟ್ಟಡ ಕಟ್ಟಿಸುವ ಅಭಿರುಚಿ ಇದ್ದವನಿಗೆ ಬೇರೆ ಗೊಡವೆ ಇಲ್ಲ. ದೇವರ ನಿತ್ಯನೈಮಿತ್ತಿಕ ಸೇವೆಗಳನ್ನು ಮಾಡಿಸುವವನು ಇತರ ಗೋಜಿಗೆ ಹೋಗುವುದಿಲ್ಲ. ಆಸ್ತಿಗಳ ಆಡಳಿತ ನೋಡುವವನಿಗೆ ಧಾರ್ಮಿಕ ವಿಷಯಗಳಲ್ಲಿ ಮನಸ್ಸು ನಾಟುವುದಿಲ್ಲ. ಮೆರವಣಿಗೆ, ಉತ್ಸವಾದಿ ಆಡಂಬರದ ಪ್ರೀತಿಯವನ ಲಕ್ಷ್ಯವು ದೇವಾಲಯಗಳ ನಿಜವಾದ ತಿರುಳಾಗಿರುವ ಕಲಾಸಾನ್ನಿಧ್ಯದ ಕಡೆಗೆ ಸುಳಿಯುವುದಿಲ್ಲ. ಆಯವ್ಯಯಗಳ ಗೊಂದಲದಲ್ಲಿ ದಕ್ಷನಾಗಿರುವಾತನ ಗಮನವು ಆರೋಗ್ಯರಕ್ಷಣೆ, ವಿದ್ಯಾಪ್ರಸಾರ, ಕೃಷಿಕಾರ್ಯಗಳ ವಿಸ್ತರಣ, ಕೃಷಿಕರ ಪುರೋಭಿವೃದ್ಧಿ ಮುಂತಾದ ಬಗೆಬಗೆಯ ನಾಗರಿಕ, ಸಾಮಾಜಿಕ, ಸಾಂಪತ್ತಿಕ ವಿಷಯಗಳಿಗೆ ತಿರುಗುವುದಿಲ್ಲ. ಆದರೆ ಧರ್ಮಸ್ಥಳದ ಅನುಭವವಿರುವವರಿಗೆ ಈ ಸರ್ವ ವಿಷಯಗಳಲ್ಲಿಯೂ ಏಕಪ್ರಕಾರವಾದ ಕಾರ್ಯನಿರ್ವಹಣ ನಡೆಯುತ್ತಿರುವುದು ಕಂಡುಬರುತ್ತದೆ.

ಶ್ರೀಮಾನ್ ಹೆಗ್ಗಡೆಯವರು ಆ ಹೆಗ್ಗಡೆತನದ ಪಟ್ಟಕ್ಕೆ ಬಂದು ೨೫ ವರ್ಷಗಳಾದಾಗ ಅದರ ರಜತೋತ್ಸವ ಸಮಾರಂಭದ ಸಂದರ್ಭದಲ್ಲಿ ಅವರಿಗೆ ಅರ್ಪಿಸಿದ ಮಾನಪತ್ರಕ್ಕೆ ಉತ್ತರವಾಗಿ ಅವರು ಕೊಟ್ಟ ಭಾಷಣದಲ್ಲಿ ಅವರ ಜೀವನ ಚರಿತೆಯ ಸಂಕ್ಷೇಪವಾದ ವಿವರವಿತ್ತು. ಶ್ರೀಮಾನ್ ಹೆಗ್ಗಡೆಯವರನ್ನು ಮೊದಲೇ ಚೆನ್ನಾಗಿ ಬಲ್ಲವರಿಗೆ ಆ ವಿವರವು ಬಹಳ ಸ್ವಲ್ಪವೆಂದೇ ಮನವರಿಕೆಯಾದೀತು. ಆದರೂ ಮೊದಲೇ ಅವರ ಪರಿಚಯವಿಲ್ಲದವರು ಆ ವಿವರದಿಂದ ಅಗತ್ಯದ ಮಾಹಿತಿ ಪಡಕೊಳ್ಳಬಹುದು. ಅಂತಹ ಮಾಹಿತಿಯಿಂದ ಹೆಗ್ಗಡೆಯವರ ಬಹುಮುಖವಾದ ಯೋಗ್ಯತೆಯ ತಕ್ಕಷ್ಟು ಅರಿವು ಎಲ್ಲರಿಗೆ ಆಗುವುದು. ಆ ತೆರದ ಬಹು ಮುಖವಾದ ಯೋಗ್ಯತೆಯುಳ್ಳವರ ಕಾರ್ಯಗಳು ಸರ್ವತೋಮುಖವಾಗಿ ವಿಸ್ತರಿಸಿ ಬಹು ವಿಧವಾಗಿ ಜನರ ಐಹಿಕಾ

ಮುಷ್ಮಿಕ ಶ್ರೇಯಪ್ರೇಯಗಳಿಗೆ ನೆರವಾಗುವುದರಲ್ಲಿ ಆಶ್ಚರ್ಯವೇನೂ ಇರಲಾರದು. ಅಂತಹ ಮಹಾಶಯರು ನಮ್ಮ ನಾಡಿನಲ್ಲಿ ಬದುಕಿ ಬಾಳುತ್ತಿರುವುದು ಮತ್ತು ಅಂತಹವರ ಜೀವಿತಕಾಲದಲ್ಲಿ ನಾವೂ ಜೀವಿಸಿಕೊಂಡಿರುವುದು ನಮ್ಮೆಲ್ಲರ ಸುಕೃತವೆಂದೇ ಹೇಳಬಹುದು. ನಮ್ಮನ್ನು ಅಷ್ಟು ಪುಣ್ಯವಂತರಾಗಿ ಮಾಡಿದುದಕ್ಕೆ ದೇವರನ್ನು ಸ್ಮರಿಸಿ, ಆ ಪುಣ್ಯಕ್ಕೆ ಕಾರಣರಾಗಿರುವ ಈ ಸದ್ಗೃಹಸ್ಥರಿಂದ ನಮಗೆ ಇದುವರೆಗೆ ಲಭಿಸಿರುವ ಪ್ರಯೋಜನಗಳಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುವ ಬಗ್ಗೆ ಶಕ್ತ್ಯನುಸಾರವಾದ ಸಂಭಾವನೆಯಾಗಿ ಲೇಖನದ ರೂಪದಲ್ಲಾದರೂ ಒಂದು ಕಾಣಿಕೆಯನ್ನು ಅರ್ಪಿಸುವರೆ ನಿರ್ಧರಿಸಿದುದು ಅತಿ ಸಮಂಜಸವೆಂಬುದು ನಿರ್ವಿವಾದವಾಗಿದೆ.

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ॥

ಎಂದು ಶ್ರೀಮದ್ಭಗವದ್ಗೀತೆಯಲ್ಲಿ ಒಂದು ಶ್ಲೋಕವಿದೆ. ಹಾಗೆ, ಅರೆ ಹೊಟ್ಟೆಯಿಂದ ಕಾಲಕ್ಷೇಪ ನಡೆಸುವವರೇ ಅತ್ಯಧಿಕವಾಗಿರುವ ಜನಸಂಖ್ಯೆಯಿಂದ ಕೂಡಿರುವ ನಮ್ಮ ಬಡನಾಡಿನಲ್ಲಿ ಜನರ ಜೀವಮಾನದ ಸರಾಸರಿ ಮಿತಿಯು ೬೦ ವರ್ಷಗಳಿಗಿಂತ ಎಷ್ಟೋ ಕಡಿಮೆಯಿರುತ್ತದೆ. ೬೦ ವರ್ಷಗಳ ವರೆಗೆ ಬದುಕಿರುವವರು ಬಹಳ ಕಡಿಮೆ. ಅವರೊಳಗೆ ಆದರ್ಶಜೀವನವನ್ನು ನಡೆಸುತ್ತ ಕೃತಕೃತ್ಯರೆಂದೆಣಿಸಲ್ಪಡುವಂತೆ ಬಾಳುವವರು ಇನ್ನೂ ಕಡಿಮೆ. ಅಂತಹ ಅತ್ಯಲ್ಪ ಸಂಖ್ಯೆಯ ಅಪೂರ್ವ ವ್ಯಕ್ತಿಗಳಲ್ಲಿ ಶ್ರೀಮಾನ್ ಹೆಗ್ಗಡೆಯವರೊಬ್ಬರು. ಆದುದರಿಂದ ಅವರನ್ನು ಕ್ಷೇಮದಿಂದಿರಿಸಿ, ದೇಹಶಕ್ತಿ ಬುದ್ಧಿಶಕ್ತಿಗಳನ್ನು ಕಡಿಮೆ ಮಾಡದೆ, "ಶತಸಂವತ್ಸರಂ ದೀರ್ಘಮಾಯುಃ" ಎಂಬ ಮುಂತಾದ ಆಶೀರ್ವಚನಗಳಲ್ಲಿರುವಂತೆ ಅವರ ಆಯುಸ್ಸನ್ನು ಬೆಳೆಸಿ, ಅವರಿಗೆ ಎಂದೆಂದಿಗೂ ಶುಭವಾಗುವಂತೆ ಅನುಗ್ರಹಿಸಬೇಕೆಂದು ಶ್ರೀ ಧರ್ಮಸ್ಥಳಕ್ಷೇತ್ರಕ್ಕೆ ಅಜರಾಮರವಾದ ಕೀರ್ತಿ ತಂದ ವ ತರುತ್ತಿರುವ ಶ್ರೀ ಮಂಜುನಾಥ ಸ್ವಾಮಿಯನ್ನು ಪ್ರಾರ್ಥಿಸಿಕೊಳ್ಳುವುದೇ ಈ ಸಂದರ್ಭದ ಕೊನೆಯ ಕರ್ತವ್ಯವಾಗಿರುತ್ತದೆ.

ನಾನು ಕಂಡ ಹೆಗ್ಗಡೆಯವರು

(ಒಂದು ಸಂದರ್ಶನ)

ಶ್ರೀ। ವಿರ್ಜಿ ಅಣ್ಣಾರಾಯರು, ಶಾಂತಿ ಸೇವಾಸದನ, ಸೇಡಬಾಳ.

ಮುಂಜಾವಿನ ಸಮಯ. ಇದೀಗ ರವಿಯ ಚೆಂಬೆಳಕು ವನಶ್ರೀಯ ಮುಖವನ್ನರಳಿಸುತ್ತಿದೆ. ಸುತ್ತಲೂ ಕುಲುಕುಲು ನಗುತ್ತಿರುವ ವನಶ್ರೀ. ಇಂಥ ಸೌಂದರ್ಯವನ್ನೂ ಹಿಂದೂಡುತ್ತ ನಮ್ಮ ಕಾರುಗಳು ಮುಂದೆ ಮುಂದೆ ಧಾವಿಸುತ್ತಿವೆ. ಹೊರಗಿನ ಸೃಷ್ಟಿ ಸೌಂದರ್ಯದ ಮೋಹಕತೆಯಲ್ಲಿಯೂ ಹೃದಯಾಂತ ರಾಳದಿಂದ ಕಾರ್ಕಳದ ಗೊಮ್ಮಟನ ಚೆಲುವಿನ ದರ್ಶನ ಮುನ್ನುಗ್ಗಿ ಬರುವದು. ಬಗೆಗಣ್ಣು ಅರಳುವದು. ಹಾಗೆಯೇ ಮೂಡಬಿದ್ರಿಯ ಸಾವಿರ ಕಂಬದ ಬಸದಿ, ವೇಣೂರ ಗೊಮ್ಮಟ ಮೂರ್ತಿ ಇತ್ಯಾದಿಗಳ ಚಿತ್ರಗಳೂ ಮನದಲ್ಲಿ ಸುಳಿಯುವವು. ಒಳಗಿನಿಂದ ಚಿಮ್ಮಿ ಬರುತ್ತಿರುವ ಚೆಲುವಿನ ಬುಗ್ಗೆ, ಹೊರಗಿನ ಸೃಷ್ಟಿಸೌಂದರ್ಯದ ಆವರಣಗಳು ಕೂಡಿ ನನ್ನನ್ನು ಯಾವದೋ ಒಂದು ಲೋಕದಲ್ಲಿ ಒಯ್ದುಬಿಟ್ಟಂತಾಗಿದ್ದಿತು. ನನ್ನ ದೇಹದ ಮೇಲೆ—ನನ್ನ ಭಾವನೆಗಳ ಮೇಲೆ–ಬುದ್ಧಿಯ ಹಿಡತ ತಪ್ಪಿದಂತಿತ್ತು. ಭ್ರಮಿಷ್ಟನಂತಾಗಿದ್ದೆ. ಅದರಲ್ಲೂ ಚೇತರಿಸಿ ಕಾರು ನಡೆಯಿಸುವವನಿಗೆ ಹೇಳಿದೆ:

"ಧರ್ಮಸ್ಥಳಕ್ಕೆ ಹೋಗಿಯೇ ಚಿಕ್ಕಮುಗಳೂರಿಗೆ ಹೋಗಬೇಕು."

"ದಾರಿಯಿಂದ ಆರು ಮೈಲು ಒಳಗೆ ಹೋಗಬೇಕು ಸ್ವಾಮಿ" ಕಾರಿನವರು ಹೇಳಿದರು.

"ಹೋಗೋಣಲ್ಲ." ಎಂದೆ ನಾನು.

"ಅಲ್ಲೇನು ಜೈನ ದೇವಸ್ಥಾನಗಳಿವೆಯೆ?"

ನನ್ನ ಕೂಡ ಬಂದ ಉಳಿದ ಯಾತ್ರಿಕರು ಪ್ರಶ್ನೆ ಎತ್ತಿದರು. ಅವರಿಗೆ ಅನ್ಯಮತೀಯರ ದೇವಾಲಯಗಳ ದರ್ಶನ ಬೇಕಿರಲಿಲ್ಲ.

"ದೇವರಿಲ್ಲದ ಸ್ಥಾನ ಯಾವುದಿದೆ ಜಗತ್ತಿನಲ್ಲಿ? ಇದಂತೂ ಧರ್ಮಸ್ಥಳ. . . ." ಎಂದು ಜೊತೆಯವರ ಮನಸ್ಸನ್ನು ಒಲಿಸಲೆಂದು ಮಾತನಾಡಿದೆ. ನನ್ನ ಮಾತನ್ನು ನಡುವೆಯೇ ತಡೆದು ಕಾರಿನವ ತಟ್ಟನೆ ನುಡಿದ:

"ಇಲ್ಲಿಯ ವರೆಗೆ ತಾವು ನಿರ್ಜೀವ ಮೂರ್ತಿಗಳ ದರ್ಶನ ಮಾಡಿದಿರಿ. ಇನ್ನು ಸಜೀವ ಮೂರ್ತಿಯ ದರ್ಶನ ಪಡೆಯಬೇಕು. ಜೀವಂತ ಜಿನಮೂರ್ತಿ—ಹೆಗ್ಗಡೆಯವರು—ಧರ್ಮಸ್ಥಳದಲ್ಲಿದ್ದಾರೆ!"

ಈಗಾಗಲೇ ಧರ್ಮಸ್ಥಳದ ಸರ್ವಧರ್ಮಪರಿಷತ್ತಿನ ಬಗ್ಗೆ ಪತ್ರಿಕೆಗಳಲ್ಲಿ ಹಲವು ಸಲ ಓದಿದ್ದೆ. ಹೆಗ್ಗಡೆಯವರ ಹೆಸರನ್ನು ಕೇಳಿದ್ದೆ. ಅವರನ್ನು ಒಮ್ಮೆ ಕಾಣಬೇಕೆಂಬ ಲವಲವಿಕೆಯೂ ನನ್ನೊಳಗಿತ್ತು. ಶ್ರೀ ಮಂಜುನಾಥ ದೇವಾಲಯದ ಬಗ್ಗೆ ನನಗೆ ಈಗಿನಷ್ಟು ಪರಿಚಯವಿರಲಿಲ್ಲ.

ಧರ್ಮಸ್ಥಳಕ್ಕೆ ಹೋಗುವದು ಶ್ರೀ ಮಂಜುನಾಥನ ದರ್ಶನಕ್ಕೆಂದಲ್ಲ, ಮಂಜಯ್ಯನವರ ದರ್ಶನಕ್ಕೆಂದು ನಾನು ಭಾವಿಸಿದ್ದೆ. ಅದರಲ್ಲಿ ಕಾರು ನಡೆಯಿಸುವವನ ಮೇಲಿನ ಮಾತುಗಳನ್ನು ಕೇಳಿದಾಗಲಂತೂ ನನ್ನಲ್ಲಿ ಹೆಗ್ಗಡೆಯವರ ವಿಷಯದಲ್ಲಿದ್ದ ಭಕ್ತಿ ಇಮ್ಮಡಿಯಾಯಿತು. ಚಿಕ್ಕಮುಗಳೂರಿನಲ್ಲಿ ಒಂದು ಕಾರು ನಡೆಯಿಸುವ ಸಾಮಾನ್ಯ ವ್ಯಕ್ತಿ–ಅದೂ ಮುಸಲ್ಮಾನ ವ್ಯಕ್ತಿಯ ಮೇಲೆ ಹೆಗ್ಗಡೆಯವರ ಪ್ರಭಾವ ಇಷ್ಟಿದ್ದೀತೆಂದು ನಾನು ಕಲ್ಪಿಸಿರಲಿಲ್ಲ. ಆ ಸೀಮೆಯ ಜನರು ಹೆಗ್ಗಡೆಯವರನ್ನು ಯಾವ ರೀತಿ ತಮ್ಮ ಹೃದಯದಲ್ಲಿಟ್ಟು ಪೂಜಿಸುವರೆಂಬುದು ಇನ್ನೂ ಧರ್ಮಸ್ಥಳದ ದಾರಿಯಲ್ಲಿರುವಾಗಲೇ ನನಗೆ ತಿಳಿದು ಬಂತು. ಅವರನ್ನು ಕಾಣುವ ಆತುರ ಹೆಚ್ಚಾಯಿತು.

ಮಾತೇನೋ ಧರ್ಮಸ್ಥಳಕ್ಕೆ ಹೋಗುವ ವಿಷಯದಲ್ಲಿ ಕೊನೆಮುಟ್ಟಿರಲಿಲ್ಲ. ಮನಸ್ಸೋ ಎಂದೋ ನಿಶ್ಚಯಿಸಿ ಬಿಟ್ಟಿತ್ತು. ಸ್ವಲ್ಪ ದೂರ ಹೋದ ಮೇಲೆ ಕಾರುಗಳು ತನ್ನಿಂದ ತಾನೇ ಧರ್ಮಸ್ಥಳದ ದಾರಿಯನ್ನು ಹಿಡಿದವು. ಧರ್ಮಸ್ಥಳಕ್ಕೆ ಹೋಗುವ ದಾರಿಯೇನೋ ಒಳ್ಳೆಯದಿರಲಿಲ್ಲ. ಆದರೆ ಆ ದಾರಿಯ ಎರಡೂ ಮಗ್ಗಲಿಗಿರುವ ಸೃಷ್ಟಿಸೌಂದರ್ಯ ಅಮೂಲ್ಯವಾದುದು, ಅನುಪಮವಾದುದು.

ಧರ್ಮಸ್ಥಳದಲ್ಲಿ ಪ್ರವೇಶಿಸುವವರು ಪವಿತ್ರರಾಗಿಯೇ ಅಲ್ಲಿ ಕಾಲಿಡಬೇಕು. ಆ ರೀತಿ ನಿಸರ್ಗದ ರಚನೆಯೇ ಇದೆ. ನೇತ್ರಾವತಿಯ ತೀರ್ಥದಲ್ಲಿ ಮಿಂದು ಮುಂದಡಿಯಿಟ್ಟೆವು. ಶ್ರೀ ಮಂಜುನಾಥನ ಮಹಾಪೂಜೆಗೆ ಇನ್ನೂ ಅವಕಾಶವಿತ್ತು. ದೇವಾಲಯವನ್ನು ಪ್ರವೇಶಿಸುವ ಬದಲು ಅರಮನೆಯನ್ನು ಪ್ರವೇಶಿಸಿದೆವು. ಜೊತೆಯವರಿಗಿಂತ ನನ್ನಲ್ಲಿ ಹೆಗ್ಗಡೆಯವರನ್ನು ಕಾಣುವ ಕುತೂಹಲ ಹೆಚ್ಚಾಗಿತ್ತು.

ಧರ್ಮಸ್ಥಳವಿರುವದು ಸೃಷ್ಟಿಸೌಂದರ್ಯದ ರಾಶಿಯಲ್ಲಾದರೆ ಅರಮನೆಯು ಸೌಂದರ್ಯದ ತವರುಮನೆಯಲ್ಲಿದೆ. ಮಂಜುನಾಥ ದೇವಸ್ಥಾನದ ಎದುರಿನ ಹೆಗ್ಗಡೆಯವರ ಮನೆಯಲ್ಲಿ ಪ್ರವೇಶಿಸಿದಾಗ ನಮಗೆ ಗೊತ್ತಿಲ್ಲದೇನೇ ನಾವು ಅರಮನೆಯ ಮಹಡಿಯ ಮೇಲೆ ಹೋಗಿರುತ್ತೇವೆ. ಹೀಗೆ ಹೆಗ್ಗಡೆಯವರ ವಾಸಸ್ಥಾನವೇ ಮೊದಲು ನಮ್ಮನ್ನು ಮೇಲಕ್ಕೊಯ್ಯುತ್ತದೆ. ಅಲ್ಲಿಯ ಅಚ್ಚುಕಟ್ಟು, ಶಿಸ್ತುಸ್ವಚ್ಛತೆಗಳು ನಮ್ಮ ಮನಸ್ಸನ್ನು ಅರಳಿಸುತ್ತವೆ. ಸಾವಿರಾರು ಜನ ಯಾತ್ರಿಕರು ದಿನಾಲು ಬಂದುಹೋಗುವ 'ಧರ್ಮಶಾಲೆ'ಯಂತಿರುವ—ಹೆಗ್ಗಡೆಯವರ ಧರ್ಮಾರ್ಥ ಶಾಲೆ ಇದಲ್ಲ; ಅದು ಬೇರೆಯಿದೆ.—ಈ ಮನೆ ಇಷ್ಟು ಚೊಕ್ಕಟವಾಗಿರುವದೆಂತು ಎಂಬ ಪ್ರಶ್ನೆಯು ಎಲ್ಲರ ಮನದಲ್ಲಿಯೂ ಹುಟ್ಟುವದು. ಮನೆಯಲ್ಲಿ ಮನೆಯೊಡೆಯನಿದ್ದಾನೆಂಬುದಕ್ಕೆ ಅಲ್ಲಿಯ ಶಿಸ್ತೇ ಸಾಕ್ಷಿ. ಅರಮನೆಯ ಮೊಗಸಾಲೆಯಲ್ಲಿ ಹೋದಾಗ—ದಣಿದು ಹೋದವರಿಗೂ ಕೂಡ—ಅಲ್ಲಿರುವ ಸುಂದರವಾದ ಸುಖಾಸನಗಳು ಮನಸ್ಸನ್ನು ಸೆಳೆಯುವದಕ್ಕಿಂತ ಮೊದಲು ಚಿತ್ರಗಳು ನಮ್ಮ ಚಿತ್ತವನ್ನಾಕರ್ಷಿಸುತ್ತವೆ. ಅವುಗಳನ್ನು ನೋಡುನೋಡುತ್ತಿರುವಾಗ—ಹೆಗ್ಗಡೆಯವರೇ ಅವುಗಳನ್ನು ಬರೆದವರೆಂದು ತಿಳಿದಾಗ—ಆ ಅರಮನೆಯಲ್ಲಿಯ ಅಚ್ಚುಕಟ್ಟಿನ ಅರ್ಥ ನಮಗೆ ಹೊಳೆಯುವದು. ಹೊರಳಿ ಮೊಗಸಾಲೆಯ ತುಂಬ ಇನ್ನೊಮ್ಮೆ ದೃಷ್ಟಿಯನ್ನಾಡಿಸಬೇಕೆಂದೆನಿಸುವದು. ಆಗ ನಮ್ಮ ದೃಷ್ಟಿ ಹರಿದಲ್ಲೆಲ್ಲ ಕಲಾವಂತಿಕೆಯನ್ನೇ ಗುರುತಿಸುವದು. ಅರಮನೆಯಲ್ಲಿ ಬಂದ ಕೂಡಲೆ ನಮ್ಮ ಮನಸ್ಸು ಪ್ರಸನ್ನವಾದುದು, ಯಾವುದೋ ಒಂದು ಜಾದುವಿನ ಕೋಲನ್ನಾಡಿಸಿದಂತೆ ನಾವು ಮುಗ್ಧರಾದುದು ಯಾವುದಕ್ಕೆಂಬುದು ಈಗ ಹೊಳೆಯುವದು. ಕಟ್ಟಿಗೆಯ ಕುರ್ಚಿಗಳನ್ನು ಇಟ್ಟಿರುವ ಕ್ರಮದಲ್ಲಿಯೂ ಒಂದು ಕಲೆಯಿದೆ. ಹಾಸಿದ ಹಾಸಿಗೆಗಳೂ ದಿಂಬುಗಳೂ ಕೂಡ ತಾವಿರುವ ರೀತಿಯಲ್ಲಿ ಚೆಲುವನ್ನು ಬೀರುತ್ತವೆ, ಹೆಗ್ಗಡೆಯವರ ಕಲಾಪ್ರಿಯತೆಯನ್ನು ಪ್ರದರ್ಶಿಸುತ್ತವೆ.

ತುಸು ಹೊತ್ತಿನಲ್ಲಿ ಹೆಗ್ಗಡೆಯವರು ಮೊಗಸಾಲೆಗೆ ಬಂದರು. ಅಲ್ಲಿಯ ಜನರಲ್ಲಿ ಆಗುವ ಗಡಬಿಡಿಯನ್ನು ಕಂಡೇ ಹೆಗ್ಗಡೆಯೆಂಬವರು ಬಂದಿರಬೇಕೆಂದು ನಾವು ತಿಳಿದುಕೊಳ್ಳಬೇಕಷ್ಟೆ. ಅಷ್ಟು ಸಾದಾ ವ್ಯಕ್ತಿ ಮಂಜಯ್ಯ ಹೆಗ್ಗಡೆಯವರು. ಎತ್ತರವಾದ ನಿಲುವು. ಆದರೂ ಆ ಎತ್ತರವು ಒಡೆದು ತೋರದಂತಿರುವ ಮೈಕಟ್ಟು ನಸು ಕಪ್ಪಾದರೂ ತೇಜೋಮಯವಾದ ಮುಖ. ಅಪೂರ್ವ ಪ್ರಭೆಯುಳ್ಳ ಆ ಎರಡು ಕಣ್ಣುಗಳು; ಯಾರ ಹೃದಯವನ್ನೂ ಕೂಡಲೆ ಅರಿಯಬಲ್ಲೆನೆನ್ನುವ ನೋಟ. ಅದರಲ್ಲೂ ತೀಕ್ಷ್ಣತೆಗಿಂತ ದಯಾರ್ದ್ರತೆಯ ವರ್ಚಸ್ಸು ಹೆಚ್ಚು. ತಲೆಗೆ ರುಮಾಲು ಸುತ್ತಿ, ಮೈಗೆ ನಯವಾದ ಶಾಲು ಹೊದೆದುಕೊಂಡು, ತಿದ್ದಿ ದೋತರವನ್ನು ಉಟ್ಟಿದ್ದರು. ದೇವಸ್ಥಾನಕ್ಕೆ ಹೊರಡುವ ಸಿದ್ಧತೆಯಲ್ಲಿಯೇ ಇದ್ದರು. ಪೂಜಾರಿಗಳು ಕರೆಯಲಿಕ್ಕೂ ಬಂದಿದ್ದರು. ಆದರೂ ನನ್ನ ಕೂಡ ಮಾತಿಗೆ ಆರಂಭಿಸಿದರು.

ತಾವು ನಿಂತುಕೊಂಡೇ ಇದ್ದರೂ ನನಗೆ ಕುರ್ಚಿಯೊಂದರಲ್ಲಿ ಕೂಡಲಿಕ್ಕೆ ಹೇಳಿದರು. ನಾನೂ ಹಾಗೇ ನಿಂತೆ. ಏನು ಭಾವಿಸಿದರೋ ಏನೋ? ಅವರು ಕುರ್ಚಿಯೊಂದರಲ್ಲಿ ಕುಳಿತು, ನನ್ನನ್ನು ಎದುರಿನ ಕುರ್ಚಿಯ ಮೇಲೆ ಕೂಡಿಸಿಕೊಂಡರು. ಆ ಮೇಲೆ ಸಲುಗೆಯಿಂದ ಕೇಳಿದರು:

"ನಿಮ್ಮ ಊರಾವುದು? ಹೆಸರೇನು? ಯಾವ ಕಡೆಯಿಂದ ಬಂದಿರಿ?"

"ನಮ್ಮೂರು ಸೇಡಬಾಳ. ಬೆಳೆಗಾಂವಿ ಜಿಲ್ಲೆಯ ಒಂದು ಹಳ್ಳಿ. ಮಿರ್ಜಿ ಅಣ್ಣಾರಾಯ ಎಂಬುದು ನನ್ನ ಹೆಸರು. ಕನ್ನಡ ಸಾಲೆಯಲ್ಲಿ ಶಿಕ್ಷಕ ನಾನು. ಮನೆಯವರನ್ನೆಲ್ಲ ಕರೆದುಕೊಂಡು, ಕಾರ್ಕಳ, ಮೂಡಬಿದ್ರಿಗಳತ್ತ ಯಾತ್ರೆಗೆ ಬಂದಿದ್ದೆ. ಹಾಗೆ ತಮ್ಮನ್ನು ಕಂಡು ಹೋಗಬೇಕೆಂದು ಬಂದೆವು. . . ."

ಪರಿಚಯ ಮಾಡಿಕೊಡುವ ರೀತಿಯಲ್ಲಿ ನಾನು ಮಾತನಾಡಿದೆ.

"ನೀವೇ ಏನು, 'ಜೀವನ' ಪತ್ರಿಕೆಯಲ್ಲಿ ಭರತೇಶ ವೈಭವದ ಶೋಭನ ಸಂಧಿಗಳನ್ನು ಕುರಿತು ಬರೆದವರು? ಆ ಸಂಧಿಗಳು ಎಲ್ಲಿ ದೊರೆತವು?" ಧ್ವನಿಯಲ್ಲಿ ಕುತೂಹಲವಿತ್ತು.

"ಉಗಾರ ಗೌಡರಲ್ಲಿ ಸಿಕ್ಕವು . . . ಹಳೆಯ ಗ್ರಂಥಗಳನ್ನು ನೋಡುವಾಗ "ಭರತೇಶ ವೈಭವ"ದ ಪ್ರತಿಯೊಂದು ದೊರೆಯಿತು. ಅದರಲ್ಲಿ ಈ ನಾಲ್ಕು ಸಂಧಿಗಳು ಹೆಚ್ಚಿಗೆ ಇದ್ದವು. . . ."

ಎಂದು ಮುಂತಾಗಿ ಶೋಭನ ಸಂಧಿಗಳ ಸಂಶೋಧನ ವಿಷಯವನ್ನು ಸ್ವಲ್ಪದರಲ್ಲಿ ಹೇಳಿ ಮುಗಿಸಿದೆ.

"ಶ್ರೀ ಶಾಂತಿಸಾಗರ ಆಶ್ರಮ ನಿಮ್ಮ ಸೇಡಬಾಳದಲ್ಲಿಯೇ ಇದೆಯೋ? ಊರಲ್ಲಿ ಮತ್ತಾವ ಸಾರ್ವಜನಿಕ ಸಂಸ್ಥೆಗಳಿವೆ?"

ಎಂದು ಕೇಳಿದರು ಹೆಗ್ಗಡೆಯವರು. ದನಿಯಲ್ಲಿ ಕುತೂಹಲವಿದ್ದಷ್ಟೇ ಆತುರವೂ ಇತ್ತು. ಪೂಜೆಗೆ ಹೊರಡುವ ಹೊತ್ತಾಗಿದೆ ಎಂಬುದನ್ನರಿತು, ನಾನೇ ಮಾತು ಮುಗಿಸುವ ರೀತಿಯಲ್ಲಿ ಉತ್ತರ ಕೊಟ್ಟೆ.

"ಅಹುದು; ನಮ್ಮೂರಲ್ಲಿಯೇ ಆಶ್ರಮವಿದೆ. ."

"ಅಲ್ಲಿ ನಡೆಯುವ ಶಿಕ್ಷಣ ಪದ್ಧತಿ ಯಾವುದು?" ನಡುವೆಯೇ ಹೆಗ್ಗಡೆಯವರು ಮತ್ತೆ ಪ್ರಶ್ನೆ ಮಾಡಿದರು. ಎಲ್ಲ ಕೇಳಿಕೊಳ್ಳಬೇಕೆಂಬ ಲವಲವಿಕೆ ಅವರಲ್ಲಿ.

"ಸಾಯಂಕಾಲದ ವರೆಗೆ ಇರುವೆ. ಹಿಂದಿನಿಂದ ಮಾತನಾಡೋಣಲ್ಲ."

"ಸಂತೋಷ! ಹಾಗೇ ಆಗಲಿ."

ಎಂದು ಎದ್ದರು ಹೆಗ್ಗಡೆಯವರು. ನಾನೂ ಎದ್ದೆ. ಬಾಗಿ ಅವರ ಪಾದಕ್ಕೊಮ್ಮೆ ವಂದಿಸಿದೆ. ಮೊದಲ ಸಲ ಉತ್ತರ ಕರ್ನಾಟಕದವರ ರೀತಿಯಲ್ಲಿ ನಿಂತುಕೊಂಡೇ ನಮಸ್ಕಾರ ಮಾಡಿದ್ದಕ್ಕೆ ನನಗೇ ಸಂಕೋಚವೆನಿಸಿತ್ತು. ಹೆಗ್ಗಡೆಯವರ ಕೂಡ ಕಳೆದ ಆ ಐದು ನಿಮಿಷಗಳಲ್ಲಿ ನನ್ನ ನಡತೆಯಲ್ಲಿ ಇಷ್ಟು ಪರಿವರ್ತನವಾಗಿತ್ತು. ಸಾಷ್ಟಾಂಗ ಪ್ರಣಾಮ ಮಾಡುವ ಯಾತ್ರಿಕರಿಗೆ ಕೈ ಮುಗಿಯುತ್ತ ದೇವಸ್ಥಾನದ ಕಡೆಗೆ ನಡೆದರು ಹೆಗ್ಗಡೆಯವರು. ಆದರಲ್ಲಿಯೇ ಹೊರಳಿ ನೋಡಿ ಮತ್ತೆ ಹೇಳಿದರು:

"ಈಗ ಶ್ರೀ ಮಂಜುನಾಥನ ಪೂಜೆಗೆ ಆರಂಭವಾಗುವುದು. ಹಣ್ಣು ಕಾಯಿ ಮಾಡಿಸಿಕೊಳ್ಳಿರಿ. ಆಶೀರ್ವಾದ ಪಡೆಯಿರಿ. ನಿಮ್ಮ ಜನರನ್ನೆಲ್ಲ ಕರೆದುಕೊಂಡು ಊಟಕ್ಕೆ ಇಲ್ಲಿಯೇ ಬನ್ನಿ."

"ತಮ್ಮ ಅಪ್ಪಣೆಯಂತಾಗಲಿ"

"ತೀರ್ಥಸ್ನಾನವಾಗಬೇಕೇನೋ?"

"ತೀರಿಸಿಕೊಂಡೇ ಬಂದಿದ್ದೇವೆ."

"ಹಾಗಾದರೆ ಕೂಡಲೇ ಬಂದು ಬಿಡಿರಿ ದೇವಸ್ಥಾನಕ್ಕೆ" ಎಂದು ಅಪ್ಪಣೆಯಿತ್ತು ಹೆಗ್ಗಡೆಯವರು ದೇವಸ್ಥಾನದತ್ತ ತೆರಳಿದರು. ಅವರ ನಡೆನುಡಿಗಳಲ್ಲಿ ಒಡಮೂಡಿದ ಸೌಜನ್ಯಸಹಜತೆಗಳಿಗೆ ಮುಗ್ಧನಾಗಿ ನಿಂತಲ್ಲಿಯೇ ನಿಂತುಬಿಟ್ಟೆ. ನಡೆದ ಅವರ ಕಡೆಗೇನೇ ನೋಡುತ್ತಿದ್ದೆ.

"ಹಿಂದೊಮ್ಮೆ ಬಂದಿದ್ದಿ ಅಣ್ಣಾ?" ನನ್ನ ತಾಯಿ ಕೇಳಿದರು.

"ಇ . . . .ಲ್ಲ!" ಎಚ್ಚತ್ತು ನುಡಿದೆ.

"ನಿನಗೂ ಇವರಿಗೂ ಗುರುತ ಎಲ್ಲಿ ಅಗಿತ್ತು?" ದೊಡ್ಡವ್ವ ಕೇಳಿದರು.

"ಇದೇ ಮೊದಲ ಸಲ ನಾನವರನ್ನು ಕಂಡದ್ದು . . ."

"ಇಂಥವರನ್ನ ಹಾದಿಯೊಳಗೆ ಬಿಟ್ಟು ಮುಂದೆ ಹೋಗೋಣ ಅಂದರೆ ಮಾಸ್ತರ ಹೇಗೆ ಕೇಳ್ಯಾನ ತಾಯಿ! ದೇವರಂಥ ಮನುಷ್ಯರು! ಇಂಥವರು ಇನ್ನೂ ಲೋಕದೊಳಗೆ ಇದ್ದಾರಂತೇ ವೇಳೆವೇಳೆಗೆ ಮಳೆ ಬೆಳೆ ಬರುತದಲ್ಲ . . ."

ಎಂದು ಹೆಗ್ಗಡೆಯವರನ್ನು ಕುರಿತು ನನ್ನ ಮುಪ್ಪಿನ ಸೋದರತ್ತೆ ಉದ್ಗಾರ ತೆಗೆದಳು.

ಸ್ವಲ್ಪ ಹೊತ್ತಿನಲ್ಲಿ ಹಣ್ಣುಕಾಯಿಗಳನ್ನು ಕೊಂಡುಕೊಂಡು ನಾವೆಲ್ಲರೂ ಶ್ರೀ ಮಂಜುನಾಥ ದೇವಾಲಯವನ್ನು ಪ್ರವೇಶಿಸಿದೆವು. ಅಲ್ಲಿ ನಡೆಯುವ ಪೂಜೆಯ ವೈಭವವನ್ನು ಕಂಡು, ದೇವಸ್ಥಾನದ ಶಿಸ್ತನ್ನು ನೋಡಿ, ಯಾತ್ರಿಕರಲ್ಲಿಯೂ ಧರ್ಮಾಧಿಕಾರಿಗಳಾದ ಹೆಗ್ಗಡೆಯವರಲ್ಲಿಯೂ ಪ್ರಕಟವಾಗುತ್ತಿರುವ ಭಕ್ತಿಭಾವವನ್ನು ಕಂಡು ಭಾವಿಕರಾದೆವು. ಒಂದು ಕ್ಷಣದಲ್ಲಿಯೇ ಭಕ್ತಿ ಪರವಶರಾಗಿ ಪೂಜಾಮಹೋತ್ಸವದಲ್ಲಿ ತನ್ಮಯರಾಗಿ ಬಿಟ್ಟೆವು.

ಪೂಜೆ ಮುಗಿಯಿತು. ಅಲ್ಲಿಯ ದರ್ಶನದ ರೀತಿ ದೇವಸ್ಥಾನಕ್ಕೆ ಕಾಣಿಕೆ ಸಲ್ಲಿಸುವ ಕ್ರಮಗಳನ್ನು ಅರಿ

ಯದೆ ಕಕ್ಕಾಬಿಕ್ಕಿಯಾದ ನಮ್ಮನ್ನು ತಾವು ಕುಳಿತಲ್ಲಿಂದಲೇ ಕಂಡರು ಹೆಗ್ಗಡೆಯವರು. ಸಾವಿರಾರು ಜನ ಯಾತ್ರಿಕರ ಸಮೂಹವಿದ್ದರೂ ಯಾರಿಗೆ ಏನಾಗಬೇಕಾಗಿದೆ ಎಂಬುದನ್ನು ಅರಿತುಕೊಳ್ಳುವ ಸಾಮರ್ಥ್ಯ ಅವರಲ್ಲಿದೆ. ಒಬ್ಬ ಅರ್ಚಕನನ್ನು ನಮ್ಮೆಡೆಗೆ ಕಳಿಸಿದರು. ಅವನು ನಮಗೆ ಶ್ರೀ ಮಂಜುನಾಥನ ದರ್ಶನ ಮಾಡಿಸಿ ತೀರ್ಥ ಕೊಡಿಸಿ, ಮಂದಿರದಲ್ಲೆಲ್ಲ ಸುತ್ತಾಡಿಸಿ, ಹೆಗ್ಗಡೆಯವರ ಅರಮಂದಿರಕ್ಕೆ ತಂದು ಬಿಟ್ಟು ಹೋದನು.

ಹೆಗ್ಗಡೆಯವರಿನ್ನೂ ದೇವಾಲಯದಲ್ಲಿಯೇ ಇದ್ದರು. ಯಾತ್ರಿಕರ ಯೋಗಕ್ಷೇಮ ಕೇಳಿಕೊಳ್ಳುತ್ತಿದ್ದರು. ಅವರು ಬರುವ ದಾರೀ ಕಾಯುತ್ತ ನಾನು ಅರಮನೆಯ ಬಾಗಿಲಲ್ಲಿ ನಿಂತಿದ್ದೆ. ದೇವಾಲಯದಿಂದ ಶ್ರೀ ಮಂಜುನಾಥನೇ ಹೊರಗೆ ಬರುವಂತೆ ಮಂಜಯ್ಯನವರು ಹೊರಗೆ ಬಂದರು. ಯಾತ್ರಿಕರ ಗುಂಪು ತನ್ನಿಂದ ತಾನೇ ದಾರಿ ಬಿಟ್ಟಿತು; ಬದಿಗಾಯಿತು. ಯಾವ ಅರಸು ಬಂದರೂ ಜನ ದಾರಿ ಬಿಡಲಿಕ್ಕಿಲ್ಲ. ಅಂಥ ಮರ್ಯಾದೆ ಸಲ್ಲುವುದು ಹೆಗ್ಗಡೆಯವರಿಗೆ. ಇದನ್ನು ಕಂಡಾಗ ಹೆಗ್ಗಡೆಯವರ ಮನೆಯು 'ಅರಮನೆ' ಎನ್ನಿಸಿಕೊಳ್ಳುವುದರ ಅರ್ಥ ನನಗೆ ಹೊಳೆಯಿತು. 'ಇವರು ನಿಜವಾಗಿ ಧರ್ಮಾಧಿಕಾರಿಗಳು!' ಎಂಬ ಉದ್ಗಾರ ನನಗೆ ಗೊತ್ತಿಲ್ಲದೇನೇ ನನ್ನ ಬಾಯಿಂದ ಹೊರಟಿತು.

ಶ್ರೀ ಮಂಜುನಾಥನ ಮಹಾಪೂಜೆಯನ್ನು ಮುಗಿಸಿಕೊಂಡು ಮಂಜಯ್ಯನವರು ಮನೆಯೊಳಗಿನ ಜಿನಪೂಜೆಗೆ ಕೂಡತಕ್ಕವರು. ಅದಕ್ಕಿಂತ ಮುಂಚೆ ನಮ್ಮೆಲ್ಲರಿಗೂ ಜಿನದರ್ಶನ ಮಾಡಿಕೊಂಡು ಬರುವಂತೆ ಸೂಚನೆಯಾಯಿತು. ಅರಮನೆಯೊಳಗಿನ ಜಿನಮಂದಿರ! ಕೇಳುವುದೇನು ಅದರ ವೈಭವ! ನಿರಾಭರಣ ಸುಂದರನಾದ ಜಿನನ ಮಂದಿರವು ಸರಳ ಸೌಂದರ್ಯದಿಂದ ಶೋಭಿಸುತಿತ್ತು. ಆಡಂಬರದ ಒಂದಂಶವೂ ಅದರಲ್ಲಿಲ್ಲ. ಹೆಗ್ಗಡೆಯವರ ಜೀವನದ ಸರಳತೆಗೆ ಅದೊಂದು ಕನ್ನಡಿಯಂತಿದೆ. ಬೆರಗುಪಟ್ಟು ಜಿನಬಿಂಬವನ್ನೂ ಶಾಸ್ತ್ರಗಳನ್ನೂ ನೋಡುತ್ತಿರುವಷ್ಟರಲ್ಲಿ ಸ್ವತಃ ಹೆಗ್ಗಡೆಯವರೇ ಅಲ್ಲಿಗೆ ಬಂದರು. ನಾವು ಏಳ ತೊಡಗಲು ಕೂಡಲಿಕ್ಕೆ ಹೇಳಿದರು.

"ಧವಲ ಗ್ರಂಥದ ಪ್ರತಿಯನ್ನು ನಿಮಗೆ ತೋರಿಸಬೇಕೆನಿಸಿತು . . . ಬಂದೆ".

"ಹಿಂದಿಯಲ್ಲಿ ಪ್ರಕಟವಾದುದೋ?"

ನೋಡಿರುವೆನೆನ್ನುವ ಭಾವವನ್ನು ಪ್ರದರ್ಶಿಸುತ್ತ ನಾನು ನುಡಿದೆ:

"ಅಲ್ಲ; ಕನ್ನಡಕ್ಕೆ ಅನುವಾದ ಮಾಡಿಸಿರುವೆ. ಇನ್ನೂ ಬಹಳ ಕೆಲಸ ಆಗಬೇಕು. ಒಂದೆರಡು ಪುಟಗಳನ್ನು ನೋಡಿರಿ. ಶೈಲಿ ಹೇಗಿದೆ, ಸಂಸ್ಕೃತ ಪಂಡಿತರೊಬ್ಬರ ಶೈಲಿಯಿದು. ಹೊಸ ತರುಣರು ಇಂಥ ಕೆಲಸಕ್ಕೆ ಮುಂದೆ ಬರುವದಿಲ್ಲ. ಅವರಿಗೆ ದೀರ್ಘ ಪರಿಶ್ರಮ ಮಾಡುವ ಅಭ್ಯಾಸವೇ ಇಲ್ಲ."

ಎಂದು ಧವಲ ಗ್ರಂಥದ ಕನ್ನಡ ಪ್ರತಿಗಳನ್ನು ನನ್ನ ಕೈಗೆ ಕೊಟ್ಟರು. ಅವುಗಳ ಭಾರಕ್ಕೆ ನನ್ನ ಕೈಗಳು ಸೋಲುವಂತಿತ್ತು. ಮೆಲ್ಲನೆ ನುಡಿದೆ,—

"ದೊಡ್ಡ ಕೆಲಸ ಮಾಡಿಸಿದಿರಿ!"

"ಇನ್ನೂ ಅಚ್ಚಾಗಿ ಬೆಳಕಿಗೆ ಬರಬೇಕು."

ನಾನು ಸಂತುಷ್ಟನಾದಂತೆ ನುಡಿದರೆ ಅವರ ಮಾತು ಅಸಂತುಷ್ಟರಂತೆ ಬಂತು. ಅದನ್ನು ಗಮನಿಸಿ ಮಾತನ್ನು ಮುಂದರಿಸಿದೆ:

"ಹಿಂದಿನ ಕಾಲಕ್ಕೆ ನೃಪತುಂಗನು ವೀರಸೇನ, ಜಿನಸೇನರಿಂದ ಗ್ರಂಥಗಳನ್ನು ಬರೆಯಿಸಿ 'ಅತಿಶಯ ಧವಲ' ಎಂಬ ಬಿರುದು ಪಡೆದ. ಈ ಕಾಲಕ್ಕೆ ತಮ್ಮಂಥವರಿಂದ ಅಂಥ ಸೇವೆ ಸಲ್ಲಬೇಕಾಗಿದೆ."

ನನ್ನ ಮಾತಿನಿಂದ ಅವರು ಸಂತಸಗೊಂಡಂತೆ ತೋರಲಿಲ್ಲ. ಸ್ತುತಿ ಸೇರದೇನೋ ಇವರಿಗೆಂದು ಸುಮ್ಮನಾದೆ. ಅವರೇ ಮುಂದೆ ಹೇಳಿದರು:

"ಇದು ವ್ಯಕ್ತಿಗಳಿಂದ ಆಗುವ ಕೆಲಸವಲ್ಲ. ಬಹಳ ಖರ್ಚಿನ ಕೆಲಸ. ನಾಡಿನ ಜನತೆ ಮುಂದೆ ಬರಬೇಕು, ಸಂಘ, ಸಂಸ್ಥೆಗಳಿಂದ ಇಂಥ ಮಹಾಗ್ರಂಥಗಳು ಪ್ರಕಟವಾಗಬೇಕು. ಇದೇನೋ ಮತಗ್ರಂಥವಿದೆ. ಆಗಲಿಕ್ಕೆ ವಿಲಂಬವಾದೀತು. ಆದರೆ ಎಲ್ಲರಿಗೂ ಬೇಕಾಗಿರುವ ಕನ್ನಡ ವಿಶ್ವಕೋಶ, ಶಬ್ದಕೋಶಗಳಿಗೂ ಗತಿಯಿಲ್ಲ. ಜನತೆಯಲ್ಲಿ ಜ್ಞಾನಲಾಲಸೆಯೇ ಕಡಿಮೆ. ಅದು ಬೆಳೆಯಬೇಕು. . . ."

ಮುಂದೆ ಅವರು ಜಿನಪೂಜೆಯಲ್ಲಿ ತೊಡಗಿದರು. ಆಗಿನ ಅವರ ಭಕ್ತಿಭಾವಗಳನ್ನು ಕಂಡರೆ ನನಗೆ ರತ್ನಾಕರ ಕವಿಯು ವರ್ಣಿಸಿದ ಭರತೇಶನ ನೆನಪು ಈಗಲೂ ಬರುವದು. ಅವರ ಪೂಜಾವಿಧಿಯು ಮುಗಿದ ತರು

ವಾಯ ಊಟಕ್ಕೆ ಕುಳಿತೆವು. ನಮ್ಮೆಲ್ಲರ ಜೊತೆಗೇನೇ ಹೆಗ್ಗಡೆಯವರೂ ಊಟಕ್ಕೆ ಕುಳಿತರು. ಅವರು ತಕ್ಕೊಳ್ಳುವ ಆಹಾರವೂ ಮಿತವಾದುದು, ಹಿತವಾದುದು. ಛತ್ರದಲ್ಲಿರುವ ಊಟವೂ ಹೆಗ್ಗಡೆಯವರ ಅರಮನೆಯ ಊಟವೂ ಒಂದೇ ರೀತಿಯಾಗಿರುವದು. ಊಟದಲ್ಲಿ ಸ್ವಚ್ಛತೆಯ ಕಡೆಗೆ ಲಕ್ಷ್ಯ ಹೆಚ್ಚು. ಆರೋಗ್ಯಕರವಾದ ಆಹಾರವನ್ನಷ್ಟೇ ಹೆಗ್ಗಡೆಯವರು ಸ್ವೀಕರಿಸುವರು. ನಾಲಿಗೆಯ ರುಚಿಗಾಗಿ ತಿನ್ನುವದು ಅವರಿಗೆ ಒಗ್ಗುವದಿಲ್ಲ. ಕರಿದ ಪದಾರ್ಥವನ್ನಂತೂ ಅವರು ತಿನ್ನುವುದೇ ಇಲ್ಲ. ನಮಗಾಗಿ ಮಾಡಿಸಿದ ಬೂಂದಿಯ ಉಂಡಿಗಳನ್ನು ನಾವಷ್ಟೇ ತಿಂದೆವು. ಅವರು ನಮಗೆ ಸವಿಸವಿಯಾದ ತಿನಿಸನ್ನು ತಿನ್ನಿಸಿಯೇ ಸಂತೋಷಪಟ್ಟರು. ಇನ್ನೊಬ್ಬರ ಸುಖವನ್ನು ಕಂಡು ಸಂತಸಪಡುವ ಸ್ವಭಾವ ಅವರದು.

ಈಗ ಐದು ವರ್ಷಗಳು ಉರುಳಿ ಹೋಗಿದ್ದರೂ ಧರ್ಮಸ್ಥಳದಲ್ಲಿಯ ಆ ಒಂದು ಊಟ ಇನ್ನೂ ಮರೆತು ಹೋಗಿಲ್ಲ. ಅಂಥ ರಸದೂಟವದು. ಸತ್ಸಂಗ, ಸಿಹಿಯಾದ ಊಟ, ಮೇಲೆ ದೇವರ ಸಾನ್ನಿಧ್ಯ ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು ಮಾನವನಿಗೆ? ಬೇಕಾದುದೆಲ್ಲ ದೊರೆತಂತಾಗಿ ನಮ್ಮ ಮನಸ್ಸು ಪ್ರಫುಲ್ಲಿತವಾಯಿತು. ಅದರ ಜೊತೆಗೆ ಎರಡು ತುತ್ತು ಅನ್ನವೂ ಹೆಚ್ಚಾಗಿಯೇ ಹೊಟ್ಟೆಯಲ್ಲಿ ಬಿತ್ತು. ಅಂದ ಮೇಲೆ ಕೇಳುವದೇನು, ನಮ್ಮ ಜೊತೆಯವರೆಲ್ಲ ಮಧ್ಯಾಹ್ನದ ನಿದ್ರೆಗೆ ಸ್ಥಳವನ್ನು ಶೋಧಿಸ ಹತ್ತಿದರು. ಇದನ್ನರಿತು ಹೆಗ್ಗಡೆಯವರು ಅರಮನೆಯಲ್ಲಿಯ ಕೆಳಭಾಗದ ಮೊಗಸಾಲೆಯನ್ನು ತೋರಿಸಲಿಕ್ಕೆ ಸೇವಕರಿಗೆ ತಿಳಿಸಿದರು. ಅದಲ್ಲದೆ ಅಲ್ಲಿ ಹಾಸಿಗೆ ಹಾಸಿ ಕೊಡಲಿಕ್ಕೂ ಸೂಚಿಸಿದರು. ಧರ್ಮಸ್ಥಳದಲ್ಲಿ ಬೇಸಿಗೆಯಲ್ಲಿ ಬಿಸಿಲು ಬಹಳ. ಅದರಲ್ಲೂ ನಾವು ಅಲ್ಲಿಗೆ ಹೋದದ್ದು ಮೇ ತಿಂಗಳಲ್ಲಿ. ಹೊರಗೆ ಮೇ ತಿಂಗಳ ಮಧ್ಯಾಹ್ನದ ಬಿಸಿಲು ಸುಡುತ್ತಿದೆ. ನಮಗೆ ತಂಪಾದ ನೆಲಮನೆಯಲ್ಲಿ ಪವಡಿಸಲು ಸ್ಥಾನ ದೊರೆತಿದೆ. ಅದರಲ್ಲೂ ರಸದೂಟವಾಗಿದೆ. ಅಂದ ಮೇಲೆ ಕೇಳುವದೇನು? ಎಲ್ಲರೂ ಮರುಕ್ಷಣದಲ್ಲಿ ನಿದ್ರಾವಶರಾದರು.

ನನಗೂ ತುಸು ತೂಕಡಿಕೆ ಬಂತು. ಆದರೆ ನಾನು ಮಲಗುವ ಗೊಡವೆಗೆ ಹೋಗಲಿಲ್ಲ. ನಾನು ನಮ್ಮ ಯಾತ್ರಿಕರಲ್ಲಿ ಮುಖಂಡ. ಎಲ್ಲರನ್ನೂ ಸುಖರೂಪದಿಂದ ಯಾತ್ರೆ ಮಾಡಿಸಿ, ಮರಳಿ ಮನೆಗೆ ತಂದು ಬಿಡುವ ವರೆಗೆ ನನಗೆ ನಿದ್ರೆ ಹತ್ತದು. ಆ ಹೊತ್ತು ಸಾಯಂಕಾಲಕ್ಕೆ ಚಿಕ್ಕಮಗಳೂರನ್ನು ಸೇರಲೇ ಬೇಕಾಗಿತ್ತು. ಹೆಗ್ಗಡೆಯವರ ಸಹವಾಸದಲ್ಲಿ ಹೆಚ್ಚು ಕಾಲ ಇರಬೇಕೆಂದು ಮನಸ್ಸು ಹರಿಯುತಿತ್ತು. ಆದರದೂ ಸಾಧ್ಯವಿರಲಿಲ್ಲ. ಈಗಾಗಲೇ ಮನೆಯನ್ನು ಬಿಟ್ಟು ತಿಂಗಳ ಮೇಲಾಗಿದ್ದಿತು. ಬೇಗನೆ ಮುಂದೆ ಸಾಗಬೇಕಾಗಿದ್ದಿತು. ಅದರಿಂದ ಇಲ್ಲಿರುವಷ್ಟು ಕಾಲವನ್ನಾದರೂ ಹೆಗ್ಗಡೆಯವರ ಜೊತೆಯಲ್ಲಿ ಕಳೆಯಬೇಕು, ಅವರ ಅಮೃತ ವಾಕ್ಯಗಳನ್ನು ಕೇಳಿ ತಣಿಯಬೇಕು ಎಂದು ಒರಗಿದಲ್ಲಿಯೇ ನಿಶ್ಚಯಿಸಿದೆ. ಮರುಕ್ಷಣದಲ್ಲಿ ಬಿಸಿಲು ಹೊತ್ತು, ಸ್ವಲ್ಪ ವಿಶ್ರಾಂತಿ ತಕ್ಕೊಳ್ಳಲಿ, ದಿನಾಲು ನನ್ನಂಥವರು ಸಾವಿರಾರು ಜನ ಬಂದು ಹೋಗತಕ್ಕವರು, ಎಷ್ಟು ಜನರನ್ನು ಅವರೊಬ್ಬರೇ ತಣಿಸಬೇಕು ಎಂದೇನೇನೋ ವಿಚಾರಗಳು ಬಂದವು. ಬುದ್ಧಿ ಹಿಂದೆಳೆಯುತ್ತಿದ್ದರೂ ಭಾವ ಕೇಳಲಿಲ್ಲ. ಅದು ಮುನ್ನುಗ್ಗಿ ಒಬ್ಬ ಸೇವಕನನ್ನು ಕರೆದು ಕೇಳಲಿಕ್ಕೆ ಹಚ್ಚಿತು.

"ಹೆಗ್ಗಡೆಯವರು ವಿಶ್ರಾಂತಿ ತಕ್ಕೊಳ್ಳುತ್ತಿರುವರೋ?"

"ಇಲ್ಲ ಸ್ವಾಮಿ, ಅವರು ಮಧ್ಯಾಹ್ನದಲ್ಲಿ ಎಂದೂ ಮಲಗುವದಿಲ್ಲ. ಇರುಳು ಒಂದೆರಡು ತಾಸು ನಿದ್ರೆ ಮಾಡುವರೋ ಇಲ್ಲವೋ! ಭೂಭಾರವನ್ನು ಹೊತ್ತ ಆದಿಶೇಷನಿಗೆ ನಿದ್ರೆಯೆಲ್ಲಿ ಸ್ವಾಮಿ? ಅವನು ಸ್ವಲ್ಪ ತೂಕಡಿಸಿದರೂ ನಾವು ಹೋಗಿ ಬಿಟ್ಟೇವಲ್ಲ!"

ಅರಮನೆಯ ಸೇವಕನಿಂದ ಅಂದು ಕೇಳಿದ ಈ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಗುಣಿಗುಣಿಸುತ್ತಲಿವೆ. ಹತ್ತು ಹದಿನೈದು ಜನ ಯಾತ್ರಿಕರನ್ನು ನಾಲ್ಕೂರುಗಳಲ್ಲಿ ಸುತ್ತಾಡಿಸಿ ಒಯ್ಯುವ ಹೊಣೆ ಹೊತ್ತ ನಾನು ಮಧ್ಯಾಹ್ನ ಯೋಚಿಸುತ್ತಿದ್ದೆ. ನಿತ್ಯ ಸಾವಿರಾರು ಜನ ಬಂದು ಹೋಗುವ ಕ್ಷೇತ್ರದಲ್ಲಿ ಎಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳುವ ಕ್ಷೇತ್ರಪಾಲನಿಗೆ ನಿದ್ರೆ ಎಲ್ಲಿ? ಎಂದು ನನ್ನನ್ನೇ ನಾನು ಸಮಾಧಾನ ಮಾಡಿಕೊಂಡು ಕೇಳಿದೆ:

"ಈಗ ಅವರನ್ನು ಕಾಣಬಹುದೊ?"

"ಇಲ್ಲ. ಈಗ ಅವರು ಜಿನಮಂದಿರದಲ್ಲಿದ್ದಾರೆ . . . ." ಎಂದ ಆತ.

ಮಧ್ಯಾಹ್ನದ 'ಸಾಮಾಯಿಕ' ಮಾಡುತ್ತಿರಬೇಕೆಂಬ ಕಲ್ಪನೆ ನನಗೆ ಬಂತು. ಇಂಥ ಜನಜಾತ್ರೆಯಲ್ಲಿದ್ದೂ ತಮ್ಮ ನಿತ್ಯವಿಧಿ, ನಿಯಮ ಜಪತಪಗಳನ್ನೆಲ್ಲ ತಪ್ಪದೆ ನೆರವೇರಿಸುತ್ತಾರಲ್ಲ ಎಂದು ಮನದಲ್ಲಿಯೇ ಎಂದುಕೊಂಡೆ. ಸಂಸಾರಿಯಾಗಿಯೂ ತ್ಯಾಗವೀರರಿವರು. ಭೋಗದಲ್ಲಿದ್ದ ಯೋಗಿಗಳು. ಆದರ್ಶ ಶ್ರಾವಕರು ಹೆಗ್ಗಡೆಯವರು. ಅವರ ಜಪ-ತಪಗಳು ಮುಗಿಯುವ ವರೆಗೆ ನಾನೂ ಸ್ವಲ್ಪ ಹೊರಗೆ ಹೋಗಿ ಬರಬೇಕೆಂದು ಮಾಡಿದೆ.

ಹೊರಗೆ ಹೊರಟೊಡನೆಯೇ ಹೆಗ್ಗಡೆಯವರ ಕಾರ್ಯಕ್ಷೇತ್ರ ದೇವಸ್ಥಾನದ ಅವಾರದಲ್ಲಷ್ಟೇ ನಿಂತಿಲ್ಲ, ಅದು ಹೊರಗೂ ವ್ಯಾಪಿಸಿದೆ ಎಂಬುದು ಗೊತ್ತಾಯಿತು. ಹಿಂದೆ ಅವರು ಮದ್ರಾಸ ಶಾಸನಸಭಾಸದಸ್ಯರಿದ್ದ ಸಂಗತಿ ತಿಳಿಯಿತು. 'ಎಲಾ, ಇವರು ಇನ್ನೂ ಏನೇನು ಇದ್ದಾರಪ್ಪ!' ಎಂಬ ಬೆರಗಿನ ಮುದ್ರೆಯಿಂದಲೇ ಧರ್ಮಾರ್ಥ ಆಸ್ಪತ್ರೆ, ಧರ್ಮಾರ್ಥ ಶಾಲೆ, ಯಾತ್ರಿಕರ ಬಿಡಾರಗಳನ್ನೆಲ್ಲ ಸುತ್ತಾಡಿ ಬಂದೆ. ಆಗ ಹೆಗ್ಗಡೆಯವರೊಬ್ಬರು ಸಾಮಾನ್ಯ ವ್ಯಕ್ತಿಯಲ್ಲ, ದೇವತಾ ಮನುಷ್ಯರು; ಇವರ ಜನ್ಮ ಒಂದು ಉದ್ದೇಶಸಾಧನೆಗಾಗಿ ಆಗಿರಬೇಕು; ಆ ಸಾಧನೆಯಲ್ಲಿ ಇವರ ಬಾಳು ಸವೆಯುತ್ತಿದೆ ಎಂದೇನೇನೋ ವಿಚಾರಿಸುತ್ತ ಅರಮನೆಗೆ ತಿರುಗುವಷ್ಟರಲ್ಲಿ ಹೆಗ್ಗಡೆಯವರು ನನ್ನ ದಾರೀ ಕಾಯುತ್ತಲೇ ಇದ್ದರು. ನಮಗೆ ವಿಶ್ರಾಂತಿ ತೆಗೆದುಕೊಳ್ಳಲಿಕ್ಕೆ ಹೇಳಿದ ಕೆಳಮನೆಯ ಮೊಗಸಾಲೆಯಲ್ಲಿ ಶತಪಥ ಹಾಕುತ್ತಿದ್ದರು. ಅವಸರದಿಂದ ಹೋಗಿ ಮಾತಿಗೆ ಆರಂಭಿಸಬೇಕೆಂದೆ. ಆದರೆ ಮೊದಲು ಅವರೇ ಕೇಳಿದರು:

"ಇಂಥ ಬಿಸಿಲೊಳಗೇ ಹೊರಗೆ ಹೋಗಿದ್ದಿರಲ್ಲ?"

"ಬಿಸಿಲೂ ಬೆಳದಿಂಗಳೆನಿಸುತ್ತಿದೆ ತಮ್ಮ ಸನ್ನಿಧಿಯಲ್ಲಿ . . ." ಎಂದೆ ನಾನು.

"ಹಾಗೆಲ್ಲ ಹೇಳಬಾರದು. ಶ್ರೀ ಮಂಜುನಾಥ ನಡೆಯಿಸಿದ್ದಾನೆ. ಸಾಗಿದೆ." ಸ್ವಲ್ಪ ತಡೆದು 'ನಿಮ್ಮೂರ ಆಶ್ರಮದಲ್ಲಿ ಯಾವ ಶಿಕ್ಷಣ ಕೊಡಲಾಗುತ್ತಿದೆ?" ಎಂದು ಮುಂಜಾನೆಯ ವಿಷಯವನ್ನು ಮುಂದರಿಸಿದರು. ಅವರ ಧೀಶಕ್ತಿಯನ್ನು ಕಂಡು ನಾನು ಬೆರಳು ಕಚ್ಚಿದೆ. ಇಷ್ಟೆಲ್ಲ ಕಾರ್ಯಗಳಲ್ಲಿಯೂ ಮುಂಜಾನೆಯ ಮಾತಿನ ಎಳೆಯನ್ನು ನೆನಪಿಟ್ಟು ಕೇಳುತ್ತಾರಲ್ಲ ಎಂದು ಬೆರಗುವಟ್ಟೆ. ಹಾಗೆಯೇ ಅನೇಕ ವಿಷಯಗಳ ಬಗ್ಗೆ ಮಾತನಾಡುತ್ತ 'ಕರ್ನಾಟಕ ವಿದ್ಯಾಲಯ' ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದಿರುವ ತಮ್ಮ ವಿಚಾರ ತಿಳಿಸಿದರು. ನಮ್ಮೂರ ಆಶ್ರಮದಲ್ಲಿಯ ಶಿಕ್ಷಣ ಕ್ರಮದ ಬಗ್ಗೆ ಇಷ್ಟೆಲ್ಲ ಕೇಳುತ್ತಿದ್ದುದರ ಅರ್ಥ ಈಗ ನನಗೆ ಹೊಳೆಯಿತು. ಅವರಿಗೆ ಆದರ್ಶ ವಿದ್ಯಾಲಯ ಒಂದನ್ನು ಆರಂಭಿಸಬೇಕಾಗಿದ್ದಿತು.*

ಹೆಗ್ಗಡೆಯವರ ವಿಚಾರಗಳು ಉಚ್ಚ ತರಗತಿಯವು. ಅವರು ಬೋಧಿಸುವ, ಆಚರಿಸುವ ಧರ್ಮಗಳು ಮಾನವ ಧರ್ಮಗಳು. ಅವರು ಯಾವ ಕೆಲಸವನ್ನು ಆರಂಭಿಸಬೇಕಾದರೂ, ಪೂರ್ಣ ವಿಚಾರಿಸಿ ಆರಂಭಿಸುವರು. ಆರಂಭಿಸಿದ ಕಾರ್ಯ ಮನುಲೋಕಕ್ಕೆ ಆದರ್ಶವಾಗಿರುವುದು, ಹಿತಕರವಾಗಿರುವುದು. ಈ ನಾಲ್ಕು ಮಾತುಗಳಲ್ಲಿಯೇ ಅವರೊಡನೆ ಮಾತನಾಡಿ ನಾನು ತಿಳಿದುಕೊಂಡುದನ್ನು ಹೇಳಿ ಮುಗಿಸುತ್ತೇನೆ. ಅವರ ಮಾತಿನಲ್ಲಿಯ ನಯ, ಮಾಧುರ್ಯಗಳನ್ನು ಲೆಕ್ಕಣಿಕೆ ಚಿತ್ರಿಸಲಾರದು. ಅವರ ಕೂಡ ಮಾತನಾಡುವದು ತುಂಬಾ ಸುಖಕರ ಎಂಬುದನ್ನು ಮಾತ್ರ ಹೇಳಲಿಕ್ಕೆ ಸಾಧ್ಯ.

ಇಳಿ ಹೊತ್ತಾಯಿತು. ಬಿಸಿಲಿನ ತಾಪವೂ ಬಹಳಷ್ಟು ಕಡಿಮೆಯಾಗಿದ್ದಿತು. ನಮಗೆ ಹೊರಡಬಹುದೆಂದು ಅಪ್ಪಣೆ ಕೊಟ್ಟೇ ಹೆಗ್ಗಡೆಯವರು ಮೇಲೆ ಹೋಗಿದ್ದರು. ಆದರೂ ಹೊರಡುವ ಮುಂಚೆ ಇನ್ನೊಮ್ಮೆ ಕಂಡು ಹೋಗಬೇಕೆಂಬ ಆಶೆ ನನ್ನಲ್ಲಿ ಬಲವತ್ತರವಾಗಿತ್ತು. ಅದನ್ನು ನಮ್ಮ ಬಳಗದವರಿಗೆ ತಿಳಿಸಿದೆ.

"ಸುಮ್ಮನೆ ಮೇಲಿಂದ ಮೇಲೆ ಅವರಿಗೇನು ಕಷ್ಟ ಕೊಡುವುದು?" ಎಂದಳು ನನ್ನಾಕೆ.

"ಮಾತನಾಡುವುದು ಬೇಡ, ಸುಮ್ಮನೆ ಅವರನ್ನು ನೋಡಿ ಹೋಗೋಣ. ನನ್ನ ಕಣ್ಣುಗಳು ಇಂಥವರನ್ನು ಇನ್ನೇನೂ ತಿರುಗಿ ಕಾಣುವಂತಿಲ್ಲ . ." ಎಂದು ಮುಪ್ಪಿನ ಸೋದರತ್ತೆ ಸೂಚಿಸಿದರು.

---

*ಕರ್ನಾಟಕ ವಿದ್ಯಾಲಯವು ಮುಂದೆ ೧೯೧೭ನೆಯ ಇಸವಿಯಲ್ಲಿ ಆರಂಭವಾಯಿತು.

"ದೇಶದೊಳಗ ಒಬ್ಬರಿಬ್ಬರು ಇಂಥಾ ಪುಣ್ಯಾತ್ಮರು ಇರುವವರು. ದಿನಾ ಎಲ್ಲಿಂದ ನೋಡಲಿಕ್ಕೆ ಸಿಕ್ಕಾರು?" ಎಂದು ಇನ್ನೊಬ್ಬರು ಕೇಳಿದರು.

ಕೊನೆಗೆ ಹೆಗ್ಗಡೆಯವರನ್ನು ಇನ್ನೊಮ್ಮೆ ಕಂಡು ಹೊರಡತಕ್ಕದೆಂದು ನಿಶ್ಚಯಿಸಿದೆವು. ಅದಕ್ಕಾಗಿ ಮೇಲೆ ಹೋದೆವು.

ಈಗಾಗಲೇ ಯಾತ್ರಿಕರ ಗುಂಪು ಹೆಗ್ಗಡೆಯವರ ದರ್ಶನಕ್ಕಾಗಿ ಕಾದು ನಿಂತಿದ್ದಿತು. ಅದರಲ್ಲಿ ಬಡವ ಬಲ್ಲಿದರೆಲ್ಲರೂ ಸೇರಿದ್ದರು. ಎಲ್ಲರನ್ನೂ ಸಮದೃಷ್ಟಿಯಿಂದ ಕಾಣುವ ಹಿರಿಮೆ ಹೆಗ್ಗಡೆಯವರಲ್ಲಿದೆ. ನನಗೆ ಹೆಗ್ಗಡೆಯವರೊಡನೆ ಈಗ ಮಾತನಾಡುವದಿರಲಿಲ್ಲ. ಸಹಜ ಕಂಡು ಹೊರಡುವದಿತ್ತು. ಎಲ್ಲರೊಡನೆ ಅವರು ಕುಳಿತ ಕೋಣೆಗೆ ನುಗ್ಗಿದೆ. ವಂದಿಸಿದೆ. ನನ್ನ ಜೊತೆಯವರೂ ವಂದಿಸಿದರು.

"ಹೋಗಿ ಬರುವೆ" ಎಂದು ಹೇಳಬೇಕೆಂದೆ.

"ತಮ್ಮ ಮನೆಯವರನ್ನ ಎಲ್ಲಿ ಕಾಣಲಿಲ್ಲ? ಆ ಮಹಾ ತಾಯಿ ಎಂಥಾ ಗರತಿ ಮಗಳು ಇದ್ದಾಳೊ?" ಎಂದು ಅರ್ಧ ಸ್ಪಷ್ಟವಾಗಿ ಅರ್ಧ ತನ್ನೊಳಗೇ ಎನ್ನುವಂತೆ ನನ್ನ ಸೋದರತ್ತೆ ಮಾತು ಸೇರಿಸಿದಳು. ತಾನಾಡಿದ್ದು ಏನಾದರೂ ತಪ್ಪಾಯಿತೋ ಏನೋ ಎಂದು ಕೈ ಜೋಡಿಸಿದಳು.

"ಈಗ ಕಾರ್ಕಳದಲ್ಲಿ ಇದ್ದಾರೆ. ಕೆಲವು ದಿನಗಳಿಂದ ಮೈಯಲ್ಲಿ ಚೆನ್ನಾಗಿಲ್ಲ." ಎಂಬ ಎರಡೇ ಮಾತು ಹೆಗ್ಗಡೆಯವರು ಆಡಿ ಸುಮ್ಮನಾದರು.

"ಪರಮೇಶ್ವರನ ಆಟ!"

ಎಂದು ಸೋದರತ್ತೆ ಕೈಮುಗಿದಳು. ಭಾರವಾದ ಮನಸ್ಸಿನಿಂದ ಅಲ್ಲಿಂದ ಹೊರಟೆವು. ಹೆಗ್ಗಡೆಯವರೇ ಇನ್ನೊಂದು ಮಾತನಾಡಿದರು.

"ಬಹಳ ಜನ ಬಂದಿದ್ದೀರಿ. ದೂರಿನ ಪ್ರವಾಸ; ದುಡ್ಡು ಬೇಕಿದ್ದರೆ ಕೊಡುವೆ. ಸಂಕೋಚ ಮಾಡಿಕೊಳ್ಳಬೇಡಿರಿ!"

"ಬೇಡ ನಮ್ಮಪ್ಪ! ನಿನ್ನ ಆಶೀರ್ವಾದ ಒಂದು ಇದ್ದರೆ ಸಾಕು. . ."

ಎಂದು ನನ್ನ ಸೋದರತ್ತೆಯೇ ಉತ್ತರ ಕೊಟ್ಟಳು. ಅರಮನೆಯಿಂದ ಹೊರಗೆ ಬಂದೆವು. ರವಿಯು ಪಶ್ಚಿಮ ದಿಕ್ಕಿನಲ್ಲಿ ಕೆಳಗಿಳಿದಿದ್ದ. ಅವನ ಸ್ವರ್ಣ ಕಿರಣಗಳ ಪ್ರಭೆಯಲ್ಲಿ ಶ್ರೀ ಮಂಜುನಾಥ ದೇವಾಲಯವು ಸುವರ್ಣದಲ್ಲಿ ಮಾಡಿರುವಂತೆ ಕಾಣಿಸಿತು. ಸುತ್ತಲಿನ ಸೃಷ್ಟಿಯೂ ಸುವರ್ಣದ ರಾಶಿಯಂತೆ ಕಂಗೊಳಿಸುತಿತ್ತು.

"ಧರ್ಮಸ್ಥಳ ಅಲ್ಲವೆ ಈ ಊರ ಹೆಸರು?"

ನನ್ನ ತಾಯಿಯ ಪ್ರಶ್ನೆಯಿದು.

"ಹೆಗ್ಗಡೆಯವರಿಂದಲೇ ಊರಿಗೆ ಈ ಹೆಸರು ಬಂದಿರಬೇಕು. . . ."

ನನ್ನ ಸೋದರತ್ತೆಯ ತರ್ಕವಿದು.

"ಹಾಗೇನಲ್ಲ. ಊರು, ದೇವಸ್ಥಾನಗಳು ಮೊದಲಿಂದಲೂ ಇವೆ. ಧರ್ಮಸ್ಥಳ ಎಂಬ ಹೆಸರೇನು ಹೊಸದಾಗಿ ಬಂದುದಲ್ಲ. ಇವರಿಗಿಂತ ಮೊದಲು ಚಂದಯ್ಯ ಹೆಗ್ಗಡೆಯವರು ದೇವಸ್ಥಾನದ ವ್ಯವಸ್ಥೆ ನೋಡುತ್ತಿದ್ದರು. . . ."

ಎಂದು ನಾನು ವಿವರಿಸುತ್ತ ಮೋಟಾರಿನ ಕಡೆಗೆ ನಡೆದೆ. ಆದರೆ ನನ್ನ ಮಾತಿನಲ್ಲಿ ಸೋದರತ್ತೆಗೆ ನಂಬುಗೆ ಹುಟ್ಟುವಂತೆ ತೋರಲಿಲ್ಲ.

"ಮಂಜಯ್ಯ ಇಲ್ಲಿಯ ಹೆಗ್ಗಡೆಯವರು, ಮಂಜುನಾಥ ದೇವರು . . . ಅದು ಅರಮನೆ, ಇದು ದೇವಾಲಯ . . . ಎಲ್ಲಾ ಒಂದೇ . . ."

ಎಂದು ಹೊರಹೊರಳಿ ನೋಡುತ್ತ ಕಾರಿನೆಡೆಗೆ ಅವಳು ಬರುತ್ತಿದ್ದಳು.



ಮಹಾವೀರಸ್ವಾಮಿ

ಶ್ರೀ। ಮ. ಪ್ರ. ಪೂಜಾರ.

ಒಂದು ದಿನ ದಿಕ್ಕುಗಳು ಸುಪ್ರಸನ್ನವಾಗಿವೆ; ಆಗಸವು ನಿರ್ಮಲವಾಗಿದೆ; ನಾಲ್ಕೂ ಕಡೆಗೆ ಹೂಗಂಪಿನ ತಂಗಾಳಿಯು ಸುಳಿದಾಡುತ್ತಿದೆ; ಕುಂದಪುರದ ಗಣನಾಯಕ (ರಾಜ)ನಾದ ಸಿದ್ಧಾರ್ಥನು ಸಿಂಹಾಸನದ ಮೇಲೆ ಕುಳಿತಿದ್ದಾನೆ. ಇಂತಹ ಹೊತ್ತಿನಲ್ಲಿ ಕೆಳದಿಯರೊಡನೆ ಮಹಾರಾಣಿ ತ್ರಿಶಲೆಯು ಓಲಗಕ್ಕೆ ಬಂದಳು. ಬೆಳಗಿನಲ್ಲಿ ಎದ್ದೊಡನೆ ತನ್ನ ಮನದನ್ನೆಯು ಓಲಗಕ್ಕೆ ಬರುತ್ತಿರುವುದನ್ನು ಕಂಡು ಅರಸನು ಸೋಜಿಗಬಟ್ಟು ಕೇಳುತ್ತಾನೆ—ಪ್ರಿಯೇ ತ್ರಿಶಲೇ, ಈ ಹೊತ್ತಿನಲ್ಲಿ ಇಲ್ಲಿಗೆ ಬಂದುದೇಕೆ? ತ್ರಿಶಲೆಗೆ ಶ್ರೀಪ್ರಿಯಕಾರಿಣಿ ಎಂಬುದು ಇನ್ನೊಂದು ಹೆಸರು. ಪ್ರಿಯಕಾರಿಣಿಯು ವೈಶಾಲಿಯ ಹೆಸರಾದ ಚೇಟಕ ಮಹಾರಾಜನ ಹಿರಿಯ ಮಗಳು. ಸಿದ್ಧಾರ್ಥ ಮಹಾರಾಜನಿಗೆ ಆಕೆ ಒಪ್ಪುವಂತಹ ಸಹಧರ್ಮಿಣಿಯು; ಸುಖಸಂಪತ್ತುಗಳು, ಪುಣ್ಯಕರ್ಮಾನುಷ್ಠಾನ ಇವುಗಳಿಗೆ ಮೇರೆಯಿರಲಿಲ್ಲಾದರೂ ಈ ಗಂಡಹೆಂಡಿರು ಬಹುಕಾಲ ಮಕ್ಕಳ ಸುಖವನ್ನು ಪಡೆಯಲಿಲ್ಲ.

ಪತಿಯ ಮಾತಿಗೆ ಪ್ರಿಯಕಾರಿಣಿಯು ಉತ್ತರವಿತ್ತಳು—ಪ್ರಾಣಪ್ರಿಯರೇ, ಒಂದು ಸೋಜಿಗದ ಸುದ್ದಿಯುಂಟು. ರಾತ್ರಿಯು ಸ್ವಲ್ಪ ಉಳಿದಿರಬಹುದು. ನಾನಿನ್ನೂ ನಿದ್ದೆಯಲ್ಲಿದ್ದೆನು. ವಿಚಿತ್ರವಾದ ಒಂದು ಕನಸನ್ನು ಕಂಡೆನು; ಆಗ ಕಂಡುದನ್ನೆಲ್ಲ ಈಗ ಹೇಳಲು ನನಗೆ ಶಕ್ತಿ ಸಾಲದು.

ಮಹಾರಾಜನು ವಿನಯದಿಂದ—ಹೇಳು, ತ್ರಿಶಲೇ ಹೇಳು, ಕನಸಿನಲ್ಲಿ ಏನೇನ ಕಂಡೆ?

ತ್ರಿಶಲೆ—ಮಹಾರಾಜರೇ, ಮೊದಲು ಕಂಡುದು ನಾಲ್ಕು ಕೋರೆಗಳುಳ್ಳ ಸುಂದರವಾದ ದೊಡ್ಡದೊಂದು ಬಿಳಿಯಾನೆ; ತರುವಾಯ ಮನೋಹರವಾದ ಒಂದು ಎತ್ತನ್ನು ಕಂಡೆನು; ಬಳಿಕ ತಾವರೆಯ ಮೇಲೆ ನೆಲಸಿದ ಲಕ್ಷ್ಮೀದೇವಿಯು ಕಾಣಿಸಿದಳು. ಆ ಮೇಲೆ ನಳನಳಿಸುವ ಮಂದಾರ ಪುಷ್ಪಮಾಲೆಗಳೆರಡನ್ನು ನೋಡಿದೆನು. ಮುಂದೆ ತಂಗದಿರನಾದ ಚಂದಿರನು ಗೋಚರನಾದನು. ಅಷ್ಟರಲ್ಲಿ ಬಿಸುಗದಿರನಾದ ಸೂರ್ಯನು ಮೂಡಿದನು. ಆ ಬಳಿಕ ಅಂದವಾದ ಎರಡು ಮೀನುಗಳು ಕಣ್ಣಿಗೆ ಬಿದ್ದುವು. ಮತ್ತೆ ಮುಂದೆ ನೋಡಲು ಮಂಗಲಕರವಾದ ಎರಡು ತುಂಬಿದ ಕೊಡಗಳು. ಆಚೆಗೆ ಅರಳಿದ ತಾವರೆಗಳ ಕೊಳ; ಮುಂದೆ ನೆಲೆಯಿಲ್ಲದ ಕಡಲು. ಮುಂದೆ ಮತ್ತೆ ವೈಭವವುಳ್ಳ ರಾಜಸಿಂಹಾಸನವೊಂದು ಕಾಣಿಸಿತು. ಆ ಬಳಿಕ ಒಂದು ಅದ್ಭುತವಾದ ದೇವರಥವನ್ನು ಕಂಡೆನು. ತರುವಾಯ ನಾಗಭವನವನ್ನೂ ಹೊಳೆಹೊಳೆಯುವ ರತ್ನರಾಶಿಯನ್ನೂ, ಹೊಗೆಯಿಲ್ಲದ ಅಗ್ನಿಯನ್ನೂ ಕಂಡೆನು. ಮಹಾರಾಜರೇ ಮುಂಜಾವದ ಹೊತ್ತಿಗೆ ನಿದ್ದೆಯಲ್ಲಿ ಈ ಹದಿನಾರು ಪದಾರ್ಥಗಳು ಕನಸಿನಲ್ಲಿ ಕಾಣಿಸಿದುವು.

ಸಿದ್ಧಾರ್ಥ ಮಹಾರಾಜನು ಪರಾಕ್ರಮಿಯೂ, ನ್ಯಾಯನಿಷ್ಠನೂ, ಪ್ರಜಾವತ್ಸಲನೂ ಇದ್ದಂತೆ, ಧರ್ಮಿಷ್ಠನೂ, ಜ್ಞಾನವಂತನೂ ಆಗಿದ್ದನು. ನಾಲ್ಕೂ ಕಡೆಗೆ ಆತನು ಜ್ಞಾನಿಯೆಂದು ಹೆಸರಾಗಿದ್ದನು. ಆತನು ತನ್ನ ಅವಧಿಜ್ಞಾನದಿಂದ ಈ ಕನಸಿನ ಶುಭಫಲಗಳನ್ನರಿತು ಮಡದಿಯಾದ ಪ್ರಿಯಕಾರಿಣಿಯನ್ನು ಕುರಿತು ಈ ಮೇರೆಗೆ ಹೇಳಿದನು.

ಪ್ರಿಯೇ, ಇಂದಿಗೆ ನಮ್ಮ ಮಾನವಜನ್ಮವು ಸಾರ್ಥಕವಾಯಿತು.

ಅರಸಿಯು ಕಣ್ಣರಳಿಸಿ, ಪ್ರಾಣಪ್ರಿಯಾ ಅದೆಂತು? ಎಂದಳು. ಅರಸನು ಹೇಳತೊಡಗಿದನು:—ಪ್ರಿಯಕಾರಿಣೀ, ಇನ್ನು ನಾವು ಸತ್ಪುತ್ರನನ್ನು ಪಡೆಯುವೆವು. ಆ ಕುಮಾರನು ಎಂತಹನಾಗುವನೆಂಬುದನ್ನು ನೀನು ಕನಸಿನಲ್ಲಿ ಕಂಡ ವಸ್ತುಗಳೇ ಸೂಚಿಸುವುವು. ಆ ಮಗನು ಭವಸಾಗರದ ತೀರ್ಥವನ್ನು ನಿರ್ಮಿಸಿ ತೀರ್ಥಂಕರನಾಗುವನೆಂಬುದು ಆನೆಯನ್ನು ಕಂಡುದರ ಫಲವು. ಧರ್ಮವು ಆತನನ್ನವಲಂಬಿಸುವುದೆಂಬುದಕ್ಕೆ ವೃಷಭದರ್ಶನವು ಸೂಚಕವಾಗಿದೆ. ಕರ್ಮವೆಂಬ ಗಜಕ್ಕೆ ಆ ಅನಂತವೀರ್ಯಶಾಲಿಯು ಸಿಂಹರೂಪನೆಂಬುದಕ್ಕೆ ಸಿಂಹ

ವನ್ನು ಕಂಡುದೇ ಸೂಚನೆಯು. ಹುಟ್ಟಿದೊಡನೆ ಆ ಶಿಶುವಿಗೆ ಇಂದ್ರಾದಿ ದೇವತೆಗಳು ಸುಮೇರು ಪರ್ವತದಲ್ಲಿ ಅಭಿಷೇಕ ಮಾಡುವರೆಂಬುದನ್ನು ಲಕ್ಷ್ಮೀದರ್ಶನವು ಸೂಚಿಸುವುದು. ಎರಡು ಮಂದಾರಮಾಲೆಗಳನ್ನು ಕಂಡುದರಿಂದ ಕುಮಾರನ ದೇಹವು ಸುಗಂಧವಾಗಿರುವುದೆಂದೂ ಆತನ ಸತ್ಯಧರ್ಮದ ಖ್ಯಾತಿಯು ದಿಕ್ಕುದಿಕ್ಕಿಗೆ ಹಬ್ಬುವುದೆಂದೂ ತೋರಿಬರುವುದು. ಧರ್ಮಾಪೇಕ್ಷಿಗಳಾದ ಸಾಧುಗಳಿಗೆ ಕುಮಾರನು ಅಮೃತವನ್ನೆರಚುವ ಪೂರ್ಣಚಂದ್ರನು. ಅಜ್ಞಾನಾಂಧಕಾರವನ್ನೋಡಿಸುವಲ್ಲಿ ಆತನು ಸೂರ್ಯನು. ಮೀನಗಳೆರಡನ್ನು ಕಂಡುದು ಕುಮಾರನು ಅನಂತಸುಖವನ್ನು ಪಡೆವನೆಂದೂ, ಅನ್ಯರಿಗಾಗಿ ಅನಂತಸುಖದ ಮಾರ್ಗವನ್ನು ತೋರಿಸುವನೆಂದೂ ಕಂಡುಬರುವುದು. ಅರಳಿದ ತಾವರೆಗಳ ಕೊಳದಂತೆ ಕುಮಾರನ ದೇಹವು ಸರ್ವಶುಭಲಕ್ಷಣಗಳಿಂದ ಒಪ್ಪುವುದು. ನೆಲೆಯಿಲ್ಲದ ಸಾಗರವು ಕುಮಾರನ ಶಾಶ್ವತವಾದ ಕೇವಲ ಜ್ಞಾನದ ಸೂಚಕವು. ಸಿಂಹಾಸನವನ್ನು ಕಂಡುದು ಕುಮಾರನಿಗೆ ಧರ್ಮಸಾಮ್ರಾಜ್ಯವು ದೊರೆವುದೆಂದು ಹೇಳುವುದು. ಸ್ವರ್ಗೀಯ ವಿಮಾನವು ಕುಮಾರನು ದಿವ್ಯಲೋಕವನ್ನು ಬಿಟ್ಟು ಇಳಿದು ಬರುವನೆಂಬುದನ್ನು ತೋರಿಸುವುದು. ನಾಗೇಂದ್ರಭವನವು ಕುಮಾರನ ಅನಂತಗುಣಗಳನ್ನು ತೋರ್ಪಡಿಸುವುದು. ನಿರ್ಧೂಮಾಗ್ನಿಯು ಕುಮಾರನು ಕರ್ಮಮಲವನ್ನು ದಹಿಸಿಬಿಡುವನೆಂಬುದನ್ನು ಸ್ಪಷ್ಟಪಡಿಸುವುದು.

ಭಗವಂತನು ತಮಗೆ ಪುತ್ರನಾಗಿ ಜನಿಸುವನೆಂಬುದನ್ನರಿತ ಸಿದ್ಧಾರ್ಥ ಮಹಾರಾಜನಿಗೂ ಪ್ರಿಯಕಾರಿಣೀ ಮಹಾರಾಜ್ಞಿಗೂ ಆದ ಅಪಾರವಾದ ಆನಂದವನ್ನು ವರ್ಣಿಸುವುದು ಅಸಾಧ್ಯವು.

ತ್ರಿಶಲೆಯು ಗರ್ಭಿಣಿಯಾದ ಬಳಿಕ ಆಕೆಗೆ ಯಾವ ಬಳಲಿಕೆಯೂ ಇರಲಿಲ್ಲ. ದೇವರಾಜನಾದ ಇಂದ್ರನ ಅಪ್ಪಣೆಯ ಮೇರೆಗೆ ದೇವಕುಮಾರಿಯರು ಯಾವಾಗಲೂ ಆಕೆಯ ಸೇವೆಮಾಡುವರು. ಅವರು ಹಗಲೆಲ್ಲ ಮಧುರಭಾಷಣಗಳಿಂದ ರಾಣಿಗೆ ಸೊಗಸನ್ನುಂಟುಮಾಡುವರು. ಮಹಾಮಹಿಮನನ್ನು ಬಸಿರೊಳಗೆ ಧರಿಸಿ ತ್ರಿಶಲೆಯು ಅತಿಶಯ ಜ್ಞಾನವುಳ್ಳವಳಾದಳು. ಗೆಳತಿಯೊಬ್ಬಳು ತ್ರಿಶಲೆಯನ್ನು ಕುರಿತು—ಈ ಜಗತ್ತಿನಲ್ಲಿ ಧ್ಯಾನ ಮಾಡಬೇಕಾದ ವಸ್ತುಗಳಲ್ಲಿ ಸರ್ವೋತ್ತಮವಾದುದು ಯಾವುದು ಎಂದು ಕೇಳಿದಳು. ಆಗ ತ್ರಿಶಲೆಯು—ಪಂಚಪರಮೇಷ್ಠಿಗಳೇ ಸರ್ವೋತ್ತಮರು; ಜಿನಾಗಮ, ಆತ್ಮತತ್ತ್ವ, ಧರ್ಮ್ಯಧ್ಯಾನ, ಶುಕ್ಲಧ್ಯಾನ ಇವುಗಳಿಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ ಎಂದು ಉತ್ತರವಿತ್ತಳು.

ಗೆಳತಿ—ಲೋಕದಲ್ಲಿ ಅತಿ ನೀಚರಾದ ಭಯಂಕರರಾದ ಕಳ್ಳರಾರು?

ತ್ರಿಶಲೆ—ಇಂದ್ರಿಯಭೋಗ್ಯವಿಷಯಗಳಿಂತ ಹೆಚ್ಚಿನ ಕಳ್ಳರಿಲ್ಲ; ಏಕೆಂದರೆ, ಅವು ಧರ್ಮರೂಪರತ್ನಗಳನ್ನಪಹರಿಸಿ ಎಲ್ಲ ತರದ ಕೇಡನ್ನುಂಟುಮಾಡುವುವು.

ಈ ಮೇರೆಗೆ ತ್ರಿಶಲೆಯು ಧರ್ಮದ ಆಲೋಚನೆಯಲ್ಲಿ ಕಾಲವನ್ನು ಕಳೆಯ ತೊಡಗಿದಳು. ಆಕೆಯ ಅಸಾಧಾರಣ ಜ್ಞಾನವನ್ನು ಕಂಡು ಎಲ್ಲರೂ ಬೆರಗಾಗುತ್ತಿದ್ದರು. ಮಹಾರಾಣಿಯ ಗರ್ಭದೊಡನೆ ಕುಂದಪುರದ ಐಶ್ವರ್ಯವೂ ದಿನದಿನಕ್ಕೆ ಬಳೆಯತೊಡಗಿತು.

ಬಹುಕಾಲಕ್ಕೆ ಮುಂಚೆಯೇ ಸುಖಮಯವಾದ ಸುಷಮಸುಷಮ ಎಂಬ ಯುಗವು ಮುಗಿದುಹೋಗಿತ್ತು. ಹಾಗೆಯೇ ಅಲ್ಪ ದುಃಖಮಿಶ್ರವಾದ ಸುಷಮದುಃಷಮ ಎಂಬ ಯುಗವೂ ಗತಿಸಿಹೋಗಿತ್ತು. ಆಗ ಅಲ್ಪ ಸುಖಮಿಶ್ರವೂ ದುಃಖಮಯವೂ ಆದ ದುಃಷಮಸುಷಮ ಎಂಬ ಯುಗವು ನಡೆದಿತ್ತು. ಈ ಯುಗವು ಮುಗಿಯುವುದಕ್ಕೆ ಇನ್ನು ೭೮ ವರ್ಷ, ೮॥ ತಿಂಗಳು ಮಾತ್ರ ಉಳಿದಿತ್ತು. ಮುಂದೆ ಅತಿ ದುಃಖಮಯವಾದ ದುಃಷಮ ಎಂಬ ಯುಗವು ಆರಂಭವಾಗುವುದಿತ್ತು. ಈ ದುಃಷಮ ಯುಗವು ಆರಂಭವಾಗುವುದಕ್ಕೆ ಮೊದಲೇ ತೀರ್ಥಂಕರರು ತಮ್ಮ ಅವತಾರಕಾರ್ಯವನ್ನು ಮುಗಿಸುವರೆಂದು ಜೈನಶಾಸ್ತ್ರಗಳು ಹೇಳುವುವು. ಆ ಮೇರೆಗೆ ದುಃಷಮಸುಷಮ ಯುಗವು ಮುಗಿವುದಕ್ಕೆ ೭೮ ವರ್ಷ, ೮॥ ತಿಂಗಳು ಅವಧಿಯಿರುವಾಗ ಚೈತ್ರ ಶುಕ್ಲ ತ್ರಯೋದಶಿ ಸೋಮವಾರ ಬೆಳಗಿನ ಜಾವದಲ್ಲಿ ಶುಭ ಮುಹೂರ್ತದಲ್ಲಿ ಸಿದ್ಧಾರ್ಥ ಮಹಾರಾಜನ ಜಗತ್ಪ್ರಸಿದ್ಧ ಕುಮಾರನು ತ್ರಿಶಲಾ ಮಹಾರಾಣಿಯ ಗರ್ಭದಿಂದ ಭೂಮಿಯ ಮೇಲೆ ಅವತರಿಸಿದನು. ಕುಮಾರನ ರೂಪವು ಅಸಾಧಾರಣವಾದುದು. ಬಣ್ಣವು ಕಾಸಿದ ಅಪರಂಜಿಯಂತೆ. ಅವಯವಗಳು ಮುದ್ದಾಗಿಯೂ,

ಗಟ್ಟಿಯಾಗಿಯೂ ಇವೆ. ಅಸ್ಥಿಗಳು ವಜ್ರಸಾರದಿಂದ ಮಾಡಿದಂತಿವೆ. ಕುಮಾರನು ಜನನಿಯ ಜಠರದಿಂದ ಭೂಮಿಗೆ ಬಂದೊಡನೆ ಪ್ರಾಚೀದಿಙ್ಮಂಡಲದಿಂದ ಸಹಸ್ರ ರಶ್ಮಿಯು ಉದಯಿಸಿ ಬಂದಂತೆ ಭಾಸವಾಯಿತು.

ದೇವತೆಗಳ ಲೀಲಾಸ್ಥಾನವೆನಿಸಿದ ಸುಮೇರು ಪರ್ವತದಲ್ಲಿ ಒಮ್ಮೆಲಿ ಮಹೋತ್ಸವದ ಯೋಜನೆ ನಡೆಯಿತು. ಅಪ್ಸರ ಸ್ತ್ರೀಯರು ಹಾವಭಾವಗಳೊಡನೆ ಮನೋಹರವಾದ ಗಾಯನನರ್ತನಗಳನ್ನಾರಂಭಿಸಿದರು. ಮೇರು ಪರ್ವತದಲ್ಲಿ ಪಾಂಡುಕವೆಂಬ ರಮ್ಯವಾದ ಬನವಿದೆ. ಆ ಬನದಲ್ಲಿ ಅತ್ಯುಜ್ವಲವಾದ ಪಾಂಡುಕ ವೆಂಬ ಒಂದು ಶಿಲೆಯುಂಟು. ಆ ಶಿಲೆಯ ಮೇಲೆ ಅನಾದಿಕಾಲದಿಂದ ಒಂದು ರತ್ನಮಯ ಸಿಂಹಾಸನವು ಕಾದಿಡಲ್ಪಟ್ಟಿದೆ. ದೇವೇಂದ್ರನು ಸಕಲ ದೇವದೇವಿಯ ರೊಡನೆ ಸಿದ್ಧಾರ್ಥ ಮಹಾರಾಜನ ಅದೇ ಆಗ ಹುಟ್ಟಿದ ಶಿಶುವನ್ನು ರತ್ನಮಯಭೂಷಣಗಳಿಂದ ಸಿಂಗರಿಸಿ ಐರಾ ವತದ ಮೇಲೆ ಕುಳ್ಳಿರಿಸಿಕೊಂಡು ಕುಂದಪುರದಿಂದ ಮೇರು ಪರ್ವತಕ್ಕೆ ಬಂದು ಈ ರತ್ನಸಿಂಹಾಸನದ ಮೇಲೆ ಕುಳ್ಳಿರಿಸಿದನು. ದೇವತೆಗಳು ಕ್ಷೀರಸಾಗರದಿಂದ ಸಾವಿರದೆಂಟು ಕಲಶಗಳನ್ನು ತುಂಬಿ ತಂದರು. ಆ ಪವಿತ್ರೋದಕದಿಂದಲೂ, ವಸ್ತ್ರಾಲಂಕಾರಗಳಿಂದಲೂ ದೇವರಾಜನು ಬಾಲಸ್ವಾಮಿಗೆ ಜನ್ಮಾಭಿಷೇಕ ಕಲ್ಯಾಣ ವನ್ನು ಮಾಡಿದನು. ದೇವತೆಗಳು ಬಾಲಕನ ಸ್ತೋತ್ರ ವನ್ನು ಪಾಡಿದರು. ಇಂದ್ರನು ಸಿದ್ಧಾರ್ಥಪುತ್ರನಿಗೆ ಮಾಡಿದ ಈ ಮಹೋತ್ಸವವು, ತೀರ್ಥಂಕರನಿಗೆ ಆಗುವ ಎರಡನೆಯ ಕಲ್ಯಾಣವು. ಇದಕ್ಕೆ ಜನ್ಮಾಭಿಷೇಕ ಕಲ್ಯಾಣವೆಂದು ಹೆಸರು. ಈ ಬಾಲಕನು ತ್ರಿಶಲೆಯ ಗರ್ಭದಿಂದ ಭೂಮಿಗೆ ಅವತರಿಸಿದಂದಿಗೆ ೯ ತಿಂಗಳು ಮೊದಲು ಆಷಾಢ ಶುಕ್ಲ ಷಷ್ಠಿಯ ದಿವಸ ಬಾಲಕನ ಆತ್ಮವು ಅಚ್ಯುತ ಸ್ವರ್ಗದಿಂದ ಮಾತೃಗರ್ಭಕ್ಕೆ ಅವತರಿಸಿದಾಗಲೂ ದೇವರಾಜನು ಈಗಿನಂತೆ ಸಮಸ್ತ ದೇವದೇವಿಯರೊಡನೆ ಕುಂದಪುರಕ್ಕೆ ಬಂದು ಒಂದು ಮಹೋತ್ಸವವನ್ನು ಮಾಡಿದ್ದನು. ಅದಕ್ಕೆ ತೀರ್ಥಂಕ ರನ ಗರ್ಭಕಲ್ಯಾಣವೆಂದು ಹೆಸರು. ಅದು ಮೊದಲನೆ ಯದು.

ಇಂದ್ರನು ಜನ್ಮಾಭಿಷೇಕ ಕಲ್ಯಾಣಕ್ಕಾಗಿ ಈ ಬಾಲಕನನ್ನು ಕರೆದುಕೊಂಡು ಹೋದ ಬಳಿಕ ತಾಯಿ ತಂದೆಗಳು ಪುತ್ರಶೋಕದಿಂದ ವಿಹ್ವಲರಾಗಬಾರದೆಂದು ಇಂದ್ರಾಣಿಯು ಆ ಬಾಲಕನಂತಹ ಮಾಯಾ ಬಾಲಕ ನನ್ನು ನಿರ್ಮಿಸಿ ತಾಯಿಯ ಮಗ್ಗುಲಲ್ಲಿ ಮಲಗಿಸಿ ಹೋಗಿದ್ದಳು. ಜನ್ಮಾಭಿಷೇಕವಾದ ಬಳಿಕ ಇಂದ್ರನು ಮರಳಿ ಸಿದ್ಧಾರ್ಥಪುತ್ರನನ್ನು ತ್ರಿಶಲೆಯ ಮಗ್ಗುಲಲ್ಲಿ ಮಲಗಿಸಿ ಬಂದನು. ಸಿದ್ಧಾರ್ಥಪುತ್ರನು ಮುಂದೆ ಪ್ರಬಲನಾದ ಕರ್ಮರೂಪವೈರಿಯನ್ನು ನಿರ್ಮೂಲನ ಮಾಡುವನೆಂದೂ, ಆತನ ಗುಣಗಣಕ್ಕೆ ಮೇರೆಯಿಲ್ಲ ವೆಂದೂ ಬಗೆದು ಇಂದ್ರನು ಆ ಬಾಲಕನಿಗೆ ವೀರ, ವರ್ಧಮಾನ ಎಂಬ ಎರಡು ಹೆಸರುಗಳನ್ನಿಟ್ಟನು.

ಈ ವರೆಗೆ ಮಕ್ಕಳ ಮೋರೆಯನ್ನು ಕಾಣದ ಅರಸು ಅರಸಿಯರು ಶುಭಲಕ್ಷಣಯುಕ್ತನಾಗಿ ತೇಜಸ್ವಿ ಯಾಗಿ ಬಳೆಯುತ್ತಿರುವ ಸುಪುತ್ರನು ದೊರೆತುದರಿಂದ ಆನಂದಸಾಗರದಲ್ಲಿ ಓಲಾಡಿದರು. ಸಿದ್ಧಾರ್ಥಮಹಾ ರಾಜನು ಹತ್ತು ದಿನಗಳ ವರೆಗೆ ರಾಜ್ಯದಲ್ಲೆಲ್ಲ ಉತ್ಸವವು ನಡೆಯುವಂತೆ ಮಾಡಿದನು. ಕುಂದಪುರದಲ್ಲಿ ನಡೆದ ದೀಪೋತ್ಸವದಿಂದ ರಾತ್ರಿಯೂ ಹಗಲಿನಂತೆ ಕಾಣಿಸು ತ್ತಿತ್ತು. ಸೆರೆಯಾಳುಗಳು ಬಿಡುಗಡೆ ಹೊಂದಿದರು. ದೀನಾನಾಥರು ದಾನಗಳಿಂದ ತಣಿದರು. ಸಿದ್ಧಾರ್ಥ ಮಹಾರಾಜನು ಈ ಸತ್ಕಾರ್ಯಗಳಲ್ಲಿ ತನ್ನನ್ನೇ ತಾನು ಮರೆತನು. ಕುಂದಪುರವಾಸಿಗಳ ಆನಂದಕ್ಕೆ ಎಣೆ ಯಿಲ್ಲ. ಮುನಿಗಳು ಬಾಲಸ್ವಾಮಿಯನ್ನು ಕಂಡು ಧನ್ಯರಾದರು. ವಿಜಯ, ಸಂಜಯ ಎಂಬ ಇಬ್ಬರು ಯತಿಗಳು ಬಾಲಕನನ್ನು ನೋಡಿದೊಡನೆ ತಮ್ಮ ಹೃದ ಯಾಂಧಕಾರವನ್ನು ಕಳೆದುಕೊಂಡರು. ಅವರ ಬಹು ಕಾಲದ ಸಂಶಯಗ್ರಂಥಿಗಳು ಬಿಚ್ಚಿದುವು. ಆಗ ಅವರು ಸಂತಸಗೊಂಡು ಬಾಲಕನಿಗೆ 'ಸನ್ಮತಿ' ಎಂಬ ಹೆಸರನ್ನಿಟ್ಟುಹೋದರು.

(೨)

ರಾಜಕುಮಾರನಾದ ವರ್ಧಮಾನನು ಸುಂದ ರನೂ, ಅಚ್ಚುಮೆಚ್ಚಿನ ಮೈಕಟ್ಟಿನವನೂ ಇದ್ದುದಲ್ಲದೆ ಆತನು ಅತ್ಯಂತ ಬಲಶಾಲಿಯೂ, ವೀರ್ಯಶಾಲಿಯೂ ಆಗಿದ್ದನು. ಆತನ ಸಾಹಸವನ್ನೂ, ನಿರ್ಭೀಕತೆಯನ್ನೂ ಕಂಡು ಎಲ್ಲರೂ ಬೆರಗುಬಡುವರು. ಒಡನಾಡಿಗಳಲ್ಲಿ ಯಾರೂ ಆತನನ್ನು ಹೋಲುತ್ತಿರಲಿಲ್ಲ. ಜಗತ್ತಿನಲ್ಲಿಯೇ

ಅಂತಹ ಶ್ರೇಷ್ಠ ಕುಮಾರನು ಇರಲಿಲ್ಲವೆಂದು ಹೇಳಿದರೆ ಸ್ವಲ್ಪವೂ ಅತಿಶಯೋಕ್ತಿಯೆನಿಸದು.

ದೇವೇಂದ್ರನು ತನ್ನ ಓಲಗದಲ್ಲಿ ಒಂದು ದಿನ ವರ್ಧಮಾನಕುಮಾರನ ಬಲವೀರ್ಯಗಳ ವಿಷಯವಾಗಿಯೇ ಮಾತನಾಡುತ್ತಿದ್ದನು. ದೇವತೆಗಳೆಲ್ಲ ಕುಮಾರನ ಗುಣಾತಿಶಯಗಳನ್ನು ಕೇಳಿ ಹರ್ಷಬಟ್ಟರು. ಅವರಲ್ಲಿ ಸಂಗಮನೆಂಬೊಬ್ಬ ದೇವನು ಸಂಶಯಗೊಂಡು—ಸಿದ್ಧಾರ್ಥಕುಮಾರನಿಗೆ ನಿಜವಾಗಿ ಈಶ್ವರತ್ವವು ಸಲ್ಲಬಹುದೇ? ನಿಜವಾಗಿ ಆತನು ಅಷ್ಟೊಂದು ವೀರನೇ? ಪರೀಕ್ಷಿಸಿ ನೋಡುವ ಎಂದು ಸಂಕಲ್ಪಿಸಿದನು.

ಕುಂದಪುರದಲ್ಲಿ ಚಿಕ್ಕ ಚಿಕ್ಕ ಅರಸು ಮಕ್ಕಳು ಮರಗೆರಸಿಯ (ಗಿಡಮಂಗನ) ಆಟವನ್ನಾಡುತ್ತಿದ್ದರು. ಒಮ್ಮೆಲಿ ಒಂದು ದೊಡ್ಡ ಕೃಷ್ಣಸರ್ಪವು ಬಂದು ವರ್ಧಮಾನ ಕುಮಾರನೇರಿದ ಮರಕ್ಕೆ ಸುತ್ತುಹಾಕಿತು. ಎಲ್ಲ ಹುಡುಗರು ಆ ಹಾವಿನ ಭಯಂಕರ ಆಕಾರವನ್ನು ನೋಡಿ, ಅದರ ರಭಸದ ಫೂತ್ಕಾರವನ್ನು ಕೇಳಿ ತಂತಮ್ಮ ಮರದಿಂದ ದುಮ್ಮಿಕ್ಕಿ ದಿಕ್ಕುಗೆಟ್ಟು ಓಡಿಹೋದರು. ಆದರೆ ವರ್ಧಮಾನನು ಉಲುಕಾಡದೆ ಇದ್ದನು. ಆತನು ಸ್ವಲ್ಪವೂ ಅಂಜದೆ ಆ ಸರ್ಪನ ಹೆಡೆಯ ಮೇಲೆ ಅಡಿಯಿಟ್ಟು ಮೆಲ್ಲನೆ ಮರದಿಂದ ಕೆಳಗಿಳಿದು ಅದನ್ನು ಕೈಯಲ್ಲಿ ಹಿಡಿದುಕೊಂಡು ಹುಡುಗತನದ ಹಲವು ಆಟಗಳನ್ನಾಡತೊಡಗಿದನು. ಸರ್ಪವು ಸೋತು ಕಳವಳಗೊಂಡಿತು. ಆಗ ಸರ್ಪರೂಪವನ್ನು ಬಿಟ್ಟು ಸಂಗಮದೇವನು ನಿಜರೂಪವನ್ನು ಧರಿಸಿ ಬಗೆಬಗೆಯ ಸ್ತುತಿಗಳಿಂದ ವೀರಕುಮಾರನನ್ನು ಸ್ತುತಿಸಿದನು. ಆತನ ಸಂಶಯವು ದೂರವಾಯಿತು. ವರ್ಧಮಾನನು ನಿಜವಾಗಿ ಮಹಾವೀರನೆಂದು ತಿಳಿದನು. ಆಗ ಚಿನ್ನದ ಕಲಶದಿಂದ ಕುಮಾರನಿಗೆ ಭಕ್ತಿಯಿಂದ ಅಭಿಷೇಕ ಮಾಡಿ ಮಹಾವೀರನೆಂದು ಹೆಸರಿಟ್ಟು ಹೊರಟುಹೋದನು.

ಸಾಧಾರಣವಾಗಿ ಮಕ್ಕಳಿಗೆ ಐದನೆಯ ವರ್ಷ ವಿದ್ಯಾರಂಭ ಮಾಡಿಸುವರು; ಮತ್ತು ತಕ್ಕ ಗುರುಗಳ ಬಳಿಗೆ ಅವರನ್ನು ಕಳುಹುವರು. ಆದರೆ ವರ್ಧಮಾನ ಕುಮಾರನಿಗೆ ಇದು ಯಾವುದೂ ಬೇಕಾಗಲಿಲ್ಲ. ಪೂರ್ವಜನ್ಮಸಂಸ್ಕಾರದಿಂದ ಆತನು ಹುಟ್ಟಿದಾಗಲೇ ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನಗಳನ್ನು ಪಡೆದಿದ್ದನು. ಆದುದರಿಂದ ಆತನು ಈ ಲೋಕದಲ್ಲಿ ಕಲಿಯಬೇಕಾದುದೇನು ಉಳಿದಿತ್ತು? ಮತ್ತು ಇಂತಹ ಜ್ಞಾನಿಗೆ ವಿದ್ಯೆ ಹೇಳಿ ಕೊಡುವ ಗುರುವಾದರೂ ಯಾರು?

ನೋಡನೋಡುತ್ತ ಸಿದ್ಧಾರ್ಥ ಮಹಾರಾಜನ ಈ ಅಲೌಕಿಕ ಪುತ್ರನಿಗೆ ಎಂಟನೆಯ ವರ್ಷವು ನಡೆಯಿತು. ರಾಜವೈಭವದೊಳಗಿನ ಮೋಹಕವಾದ ವಸ್ತುಗಳಿಗೆ ಮನಸ್ಸೆಳೆಯುವ ಸಮಯವಿದು. ದೂರದಲ್ಲಿ ಸಂಸಾರವು ತನ್ನ ಮೋಹಮಯ ಇಂದ್ರಜಾಲವನ್ನು ಬೀಸಿ ತನ್ನ ಮೋಹಕಸ್ವರದಿಂದ ರಾಜಕುಮಾರನನ್ನು ಕರೆಯುತ್ತಿದೆ. ಆದರೆ ವರ್ಧಮಾನನು, ಶುದ್ಧಸ್ವಭಾವನಾದ ಆತ್ಮನು ಕರ್ಮಮಲಿನ ಸಂಸಾರದಿಂದ ಭಿನ್ನನಾದವನೆಂದೂ, ಸಂಸಾರವನ್ನು ತೊರೆದಾಗಲೇ ಅನಂತಸುಖದ ಬಾಗಿಲು ತೆರೆದಂತಾಗುವುದೆಂದೂ ಬಲ್ಲವನು. ಸಂಸಾರದ ಸುಖವು ಮೃಗಜಲದಂತೆ ಅಸತ್ಯವಾದುದೆಂದೂ, ಆ ಸುಖದ ಆಸೆಯಿಂದ ದುಃಖವು ಹೆಚು ವುದೆಂದೂ, ಕರ್ಮಬಂಧನವು ಇನ್ನಿಷ್ಟು ಬಿಗಿಯಾಗುವುದೆಂದೂ ತಿಳಿದವನು. ಆದುದರಿಂದ ಆತನು ಎಂಟನೆಯ ವರ್ಷದಲ್ಲಿಯೇ ದೃಢಚಿತ್ತದಿಂದ ಅಹಿಂಸಾದಿ ದ್ವಾದಶವ್ರತಗಳನ್ನೂ, ಎಲ್ಲ ಶ್ರಾವಕಧರ್ಮಗಳನ್ನೂ ಕೈಕೊಂಡನು. ಬಾಲ್ಯದಲ್ಲಿಯೇ ಕುಮಾರನ ಈ ಧರ್ಮಾಚರಣೆಯನ್ನು ಕಂಡು ಎಲ್ಲರೂ ಸೋಜಿಗಗೊಂಡರು. ಕರ್ಮಪಾಶದೊಡನೆ ಸಂಸಾರವು ತಾನಾಗಿ ಬಿಟ್ಟು ಸರಿಯಲಾರಂಭಿಸಿತು.

ಕುಮಾರನು ಈ ಮೇರೆಗೆ ಧರ್ಮಪರನಾಗಿದ್ದರೂ ಸಂಸಾರದಲ್ಲಿರುವ ವರೆಗೆ ಸಂಸಾರಿಯಂತೆಯೇ ತೋರುತ್ತಿದ್ದನು. ಆದರೆ ಆತನು ನೀರ ಮೇಲಿನ ಕಮಲದೆಲೆಯಂತೆ ನಿರ್ಲಿಪ್ತನಾಗಿದ್ದನು. ಯಾವಾಗಲೂ ಆತ್ಮಚಿಂತನ, ಮುಕ್ತಿಮಾರ್ಗದ ಆಲೋಚನೆ ಇವುಗಳಲ್ಲಿಯೇ ತೊಡಗಿರುತ್ತಿದ್ದನು. ಆದರೆ ಇತ್ತ ತಾಯಿ ತಂದೆಗಳ ಸೇವೆಯಲ್ಲಿಯೂ ತನ್ನ ಸ್ವಜನರ ಆನಂದವನ್ನು ಹೆಚ್ಚಿಸುವುದರಲ್ಲಿಯೂ ರಾಜಕಾರ್ಯಗಳನ್ನು ನಿರ್ವಹಿಸುವುದರಲ್ಲಿಯೂ ತತ್ಪರನಾಗಿದ್ದನು. ವರ್ಧಮಾನ ಕುಮಾರನು ಮದುವೆ ಮಾಡಿಕೊಳ್ಳಲಿಲ್ಲ. ಕೊನೆಗೂ ಬ್ರಹ್ಮಚರ್ಯವನ್ನು ಪಾಲಿಸಿದನು. ಆದರೂ ಸಂಸಾರದಲ್ಲಿರುವ ವರೆಗೆ ಆತನು ಧರ್ಮಕ್ಕೆ ವಿರೋಧಿ

ಯಲ್ಲದ ಕಾವ್ಯ, ಗೀತ, ವಾದ್ಯ ಮೊದಲಾದುವುಗಳ ಸೊಗಸಿಗೂ ವಿಮುಖನಾಗಿರಲಿಲ್ಲ. ಈ ಮೇರೆಗೆ ಅರಸುಮಗನಾದ ವರ್ಧಮಾನನಿಗೆ ೩೦ ವರ್ಷಗಳು ಸಂದುವು. (೩)

ಧ್ಯಾನಮಗ್ನನಾದ ರಾಜಕುಮಾರನು ತನ್ನ ಅವಧಿ ಜ್ಞಾನದ ಬಲದಿಂದ ಕಂಡುದೇನೆಂದರೆ—

"ಕರ್ಮದ ತರುವಾಯ ಜನ್ಮವು, ದುಃಖದ ತರುವಾಯ ಮತ್ತೆ ದುಃಖವು; ಕರ್ಮವು ಅನಾದಿಕಾಲದಿಂದ ತನ್ನನ್ನು ಸಂಸಾರಚಕ್ರದಲ್ಲಿ ತೊಳಲಾಡಿಸುತ್ತಿದೆ. ಜಂಬೂದ್ವೀಪದೊಳಗಿನ ಮಧುವನದಲ್ಲಿ ಪುರೂರವನೆಂಬ ಭಿಲ್ಲನ ಶರೀರದಲ್ಲಿ ಜನ್ಮಹೊಂದಿ ಸಾಗರಸೇನನೆಂಬ ಮುನಿಯ ಬಳಿಯಲ್ಲಿ ಎಂದೋ ಒಮ್ಮೆ ನಾನು ಉಪದೇಶವನ್ನು ಹೊಂದಿದ್ದೆನು. ಎಂದೋ ಒಮ್ಮೆ ನಾನು ಭರತ ಚಕ್ರವರ್ತಿಗೆ ಮರೀಚಿಯೆಂಬ ಮಗನಾಗಿ ಹುಟ್ಟಿ ಜಿನದೀಕ್ಷೆಯ ಪಡೆದು ಪರೀಷಹ (ಶೀತೋಷ್ಣಾದಿ)ಗಳನ್ನು ಜಯಿಸಲಾರದೆ ಸಾಂಖ್ಯಮತವನ್ನವಲಂಬಿಸಿದ್ದೆನು. ಮತ್ತೆ ನಾನೊಮ್ಮೆ ಐದನೆಯ ಸ್ವರ್ಗದಲ್ಲಿ ವಾಸವಾಗಿದ್ದೆನು. ಒಮ್ಮೆ ಕೌಲೀಯಕ ನಗರದಲ್ಲಿ ಕೌಶಿಕನೆಂಬ ಬ್ರಾಹ್ಮಣನಿಗೆ ಮಗನಾಗಿ ಹುಟ್ಟಿ ಮಿಥ್ಯಾತತ್ತ್ವಗಳನ್ನು ಪ್ರಚಾರಪಡಿಸಿದ್ದೆನು. ಮತ್ತೊಮ್ಮೆ ಮೊದಲನೆಯ ಸ್ವರ್ಗದಲ್ಲಿದ್ದು ವಿಷಯೋಪಭೋಗಮದದಿಂದ ಉನ್ಮತ್ತನಾಗಿದ್ದೆನು. ಒಮ್ಮೆ ಸ್ಥೂಣಾಗರ ನಗರದಲ್ಲಿ ಭಾರದ್ವಾಜನೆಂಬ ಬ್ರಾಹ್ಮಣನಿಗೆ ಪುಷ್ಪಮಿತ್ರನೆಂಬ ಮಗನಾಗಿ ಹುಟ್ಟಿ ಹಠಯೋಗವನ್ನು ಸಾಧಿಸುತ್ತಿದ್ದೆನು. ಮತ್ತೆ ಅದರ ಫಲದಿಂದ ಒಮ್ಮೆ ಸ್ವರ್ಗದಲ್ಲಿ ದೇವನಾಗಿದ್ದೆನು. ಒಮ್ಮೆ ಶ್ವೇತಿನಿಕಾ ಎಂಬ ಪಟ್ಟಣದ ಅಗ್ನಿಭೂತಿಯೆಂಬ ಅಗ್ನಿಹೋತ್ರಿ ಬ್ರಾಹ್ಮಣನಿಗೆ ಗೌತಮಿಯ ಹೊಟ್ಟೆಯಲ್ಲಿ ಅಗ್ನಿಸಹನೆಂಬ ಮಗನಾಗಿ ಹುಟ್ಟಿ ಸಂನ್ಯಾಸ ಧರ್ಮವನ್ನು ಪಾಲಿಸಿದ್ದೆನು. ಮತ್ತು ಅದರ ಫಲರೂಪವಾಗಿ ಸನತ್ಕುಮಾರಸ್ವರ್ಗದಲ್ಲಿ ಮಹಾವೈಭವಶಾಲಿಯಾದ ದೇವನಾಗಿ ಇದ್ದೆನು. ಒಮ್ಮೆ ಭರತಕ್ಷೇತ್ರದ ಮಂದಿರಪುರದ ಗೌತಮನೆಂಬ ಬ್ರಾಹ್ಮಣನಿಗೆ ಅಗ್ನಿಮಿತ್ರನೆಂಬ ಮಗನಾಗಿ ಹುಟ್ಟಿದ್ದೆನು. ಮತ್ತೆ ಸ್ವರ್ಗದಲ್ಲಿ ದೇವನಾಗಿ ವಾಸವಾಗಿದ್ದೆನು. ಒಮ್ಮೆ ಸ್ವಸ್ತಿಮತಿ ಎಂಬ ನಗರಿಯಲ್ಲಿ ಸಂತಶಯನನೆಂಬ ಬ್ರಾಹ್ಮಣನಿಗೆ ಭಾರದ್ವಾಜನೆಂಬ ಮಗನಾಗಿ ಹುಟ್ಟಿ ಸಂನ್ಯಾಸತಪಸ್ಸನ್ನಾಚರಿಸಿದೆನು. ಬಳಿಕ ಅದರ ಫಲರೂಪವಾಗಿ ಸ್ವರ್ಗಧಲ್ಲಿ ದೇವಸ್ತ್ರೀಸಮಾಗಮಸುಖವನ್ನು ಭೋಗಿಸಿದೆನು. ದೇವಾಂಗನೆಯರ ವಿಯೋಗವಾಗಲು ಅಳುತ್ತಅಳುತ್ತ, ಪುಣ್ಯಕ್ಷಯವಾಗಲು ದೀರ್ಘಕಾಲ ಘೋರವಾದ ನರಕದಲ್ಲಿ ಸಮಸ್ತ ಯಾತನೆಗಳನ್ನನುಭೋಗಿಸಿದೆನು. ಒಮ್ಮೆ ಏಕೇಂದ್ರಿಯ ಜೀವನಾಗಿ, ಇನ್ನೊಮ್ಮೆ ದ್ವೀಂದ್ರಿಯ ಜೀವನಾಗಿ ಹಲವು ಜನ್ಮಗಳನ್ನು ನೀಗಿದೆನು. ಒಂದಾನೊಂದು ಕಾಲದಲ್ಲಿ ರಾಜಗೃಹನಗರದಲ್ಲಿ ಶಾಂಡಿಲ್ಯನೆಂಬ ಬ್ರಾಹ್ಮಣನಿಗೆ ಪಾರಾಶರಿಯ ಹೊಟ್ಟೆಯಲ್ಲಿ ಸ್ಥಾವರನೆಂಬ ಮಗನಾಗಿ ಹುಟ್ಟಿ ತಪಸ್ಸನ್ನಾಚರಿಸಿ ಅದರ ಫಲದಿಂದ ಬ್ರಹ್ಮಸ್ವರ್ಗವನ್ನು ಪಡೆದಿದ್ದೆನು."

ವರ್ಧಮಾನ ಸ್ವಾಮಿಯು ಮತ್ತೆ ತನ್ನ ಅವಧಿ ಜ್ಞಾನಬಲದಿಂದ ಈ ಮೇರೆಗೆ ನೋಡಲಾರಂಭಿಸಿದನು. "ಒಂದು ಕಾಲದಲ್ಲಿ ನಾನು ರಾಜಗೃಹ ನಗರದರಸನಾದ ಬಿಲ್ವಭೂತಿಗೆ ಬಿಲ್ವನಂದಿ ಎಂಬ ಮಗನಾಗಿ ಹುಟ್ಟಿದೆನು. ಬಿಲ್ವಭೂತಿಯು ತನ್ನ ತಮ್ಮನಾದ ವಿಶಾಖಭೂತಿಗೆ ರಾಜ್ಯಭಾರವನ್ನು ಕೊಟ್ಟು ಸಂನ್ಯಾಸವನ್ನು ಸ್ವೀಕರಿಸಿದನು. ಬಿಲ್ವನಂದಿಯು ಯುವರಾಜನಾಗಿದ್ದನು. ವಿಶಾಖಭೂತಿಯ ಮಗನಾದ ವಿಶಾಖನಂದಿಗೂ ಬಿಲ್ವನಂದಿಗೂ ಕಲಹವಾಯಿತು. ವಿಶಾಖಭೂತಿಯು ಮಗನ ಪಕ್ಷವನ್ನು ಹಿಡಿದು ಬಿಲ್ವನಂದಿಯೊಡನೆ ಯುದ್ಧವನ್ನು ಹೂಡಿದನು. ಯುದ್ಧದಲ್ಲಿ ಬಿಲ್ವನಂದಿಯು ಗೆದ್ದನು. ಆದರೆ ಬಿಲ್ವನಂದಿಯು ಆಕಸ್ಮಿಕವಾಗಿ ಉಂಟಾದ ವೈರಾಗ್ಯದಿಂದ ಮುನಿವೃತ್ತಿಯನ್ನವಲಂಬಿಸಿದನು. ವಿಶಾಖನಂದಿಗೆ ರಾಜ್ಯಭಾರವನ್ನು ಕೊಟ್ಟು ವಿಶಾಖಭೂತಿಯೂ ಸಂನ್ಯಾಸವನ್ನೈದಿದನು. ವಿಶಾಖನಂದಿಯು ರಾಜ್ಯವನ್ನು ಕಾದುಕೊಳ್ಳಲಾರದೆ ಸ್ವಲ್ಪ ಕಾಲದಲ್ಲಿ ರಾಜ್ಯಭ್ರಷ್ಟನಾದನು. ಈ ಕಾಲಕ್ಕೆ ಬಿಲ್ವನಂದಿಯು ಮಥುರೆಯಲ್ಲಿದ್ದನು. ಒಂದು ದಿನ ಒಂದು ಎತ್ತು ನೂಕಿ ಆತನನ್ನು ಕೆಡಹಿತು. ಬಳಿಯಲ್ಲಿ ವಿಶಾಖನಂದಿಯು ನಿಂತಿದ್ದನು. ಬಿಲ್ವನಂದಿಯು ಬಿದ್ದುದನ್ನು ಕಂಡು ಆತನು ನಗೆಯನ್ನು ತಡೆಯಲಾರದೆ ಹೋದನು. ಬಿಲ್ವನಂದಿಯು ಸಿಟ್ಟಿನಿಂದ ಸಂತಾಪಬಡುತ್ತ ಕೊನೆಗೆ ಪ್ರಾಣಬಿಟ್ಟನು. ಬಿಲ್ವನಂದಿ ಮುನಿಯು ಹತ್ತನೆಯ ಸ್ವರ್ಗದಲ್ಲಿ ದೇವನಾದನು.

ರಾಜಕುಮಾರನು ಮತ್ತೆ ನೋಡಿದನು:—ಒಮ್ಮೆ ಪೋದನಪುರದರಸನಾದ ಬಾಹುಬಲಿಗೆ ಮೃಗಾವತಿ ರಾಣಿಯ ಹೊಟ್ಟೆಯಲ್ಲಿ ತ್ರಿಪಿಷ್ಟನೆಂಬ ಮಗನಾಗಿ ಹುಟ್ಟಿದೆನು. ತ್ರಿಪಿಷ್ಟನು ಚಕ್ರವರ್ತಿಯಾಗಿ ಅಪಾರವಾದ ರಾಜ್ಯ, ಸುಂದರಿಯರಾದ ರಾಣಿಯರು, ಅಪರಿಮಿತವಾದ ಐಶ್ವರ್ಯ ಇವುಗಳನ್ನು ಪಡೆದನು. ಆದರೆ ಆತನು ಹಿಂಸೆ ಮೊದಲಾದ ದುಷ್ಕರ್ಮಗಳನ್ನು ಬಿಡಲಿಲ್ಲ. ಮಾನವಲೀಲೆ ಮುಗಿದ ಬಳಿಕ ತ್ರಿಪಿಷ್ಟನು ಘೋರನರಕದಲ್ಲಿ ಅನುಭವಿಸಿದ ಯಾತನೆಗಳನ್ನು ವರ್ಣಿಸುವುದು ಅಸಾಧ್ಯವು.

ಮಹಾವೀರ ಸ್ವಾಮಿಯು ಮತ್ತೆ ನೋಡಿದನು:–ಆ ಬಳಿಕ ನಾನು ಪ್ರವಿಪುಲಸಿಂಹವೆಂಬ ಪರ್ವತದಲ್ಲಿ ಒಂದು ಸಿಂಹನಾಗಿ ಹುಟ್ಟಿದೆನು. ಮತ್ತೆ ನರಕಭೋಗವು. ತರುವಾಯ ವರಾಹಪರ್ವತದಲ್ಲಿ ಮತ್ತೆ ಸಿಂಹಜನ್ಮವು. ಈ ಜನ್ಮದಲ್ಲಿ ಅಮಿತಕೀರ್ತಿ ಅಮಿತಪ್ರಭ ಎಂಬ ಚಾರಣರ ಧರ್ಮೋಪದೇಶವನ್ನು ಶ್ರವಣಮಾಡಿ ಹಿಂಸಾವೃತ್ತಿಯನ್ನು ತೊರೆದೆನು. ಅಹಿಂಸಾಚರಣೆಯ ಫಲದಿಂದ ಮತ್ತೆ ಸೌಧರ್ಮಸ್ವರ್ಗದಲ್ಲಿ ಹರಿಧ್ವಜನೆಂಬ ದೇವನಾದೆನು.

ಸಿದ್ಧಾರ್ಥಪುತ್ರನು ಮತ್ತೆ ನೋಡಿದನು,–ಒಮ್ಮೆ ಕಚ್ಛ ದೇಶದೊಳಗಿನ ಹೇಮಪುರದರಸನಾದ ಕನಕಾಭನಿಗೆ ಕನಕಧ್ವಜನೆಂಬ ಮಗನಾಗಿ ಹುಟ್ಟಿದೆನು. ರಾಜ್ಯವು ದೊರೆತ ಬಳಿಕ ರಾಣಿಯೊಡನೆ ಪರಮ ಸುಖದಿಂದ ಕಾಲ ಕಳೆದೆನು. ಈ ಕಾಲದಲ್ಲಿ ಒಬ್ಬ ಮುನಿವರನಿಂದ ಜಿನದೀಕ್ಷೆಯನ್ನು ಪಡೆದೆನು. ಅತಿ ಪ್ರಯತ್ನದಿಂದ ಆ ದೀಕ್ಷೆಯನ್ನು ಪಾಲಿಸಿದೆನು. ಅದರಿಂದ ಎಂಟನೆಯ ಸ್ವರ್ಗದಲ್ಲಿ ದೇವಾನಂದನೆಂಬ ದೇವನಾದೆನು. ದೇವಭೋಗಗಳನ್ನನುಭೋಗಿಸುತ್ತಿದ್ದರೂ ನಾನು ಒಂದು ಕ್ಷಣವೂ ಜಿನಧರ್ಮವನ್ನು ಮರೆಯಲಿಲ್ಲ.

ವರ್ಧಮಾನಸ್ವಾಮಿಯು ಮತ್ತೆ ನೋಡಿದನು:–ಒಮ್ಮೆ ಉಜ್ಜಯಿನೀ ನಗರದ ಅರಸು ವಜ್ರಸೇನನಿಗೆ ಸುಶೀಲಾ ರಾಣಿಯ ಹೊಟ್ಟೆಯಲ್ಲಿ ಹರಿಷೇಣನೆಂಬ ಮಗನಾಗಿ ಹುಟ್ಟಿದೆನು. ಧರ್ಮದಿಂದ ರಾಜ್ಯಪಾಲನೆ ಮಾಡಿ ಆಯುರವಸಾನದಲ್ಲಿ ಸುಪ್ರತಿಷ್ಠಿತನೆಂಬ ಮುನಿಯ ಬಳಿಯಲ್ಲಿ ಮುನಿದೀಕ್ಷೆಯನ್ನು ಪಡೆದೆನು. ಮರಣಕಾಲದಲ್ಲಿ ಸಲ್ಲೇಖನಾವ್ರತವನ್ನು ಆಚರಿಸಿ ಪ್ರೀತಿವರ್ಧನವಿಮಾನದಲ್ಲಿ ದೇವತ್ವವನ್ನು ಪಡೆದೆನು.

ಅರಸುಮಗನು ಮತ್ತೆ ನೋಡಿದನು—ಕ್ಷೇಮದ್ಯುತಿ ನಗರದರಸನಾದ ಧನಂಜಯನಿಗೆ ಪ್ರಿಯಮಿತ್ರನೆಂಬ ಮಗನಾಗಿ ಭೂತಲದ ಮೇಲೆ ಮತ್ತೆ ಅವತರಿಸಿದೆನು. ಆಗ ಚಕ್ರವರ್ತಿಯಾಗಿ ಧರ್ಮದಿಂದ ರಾಜ್ಯವಾಳಿದೆನು. ಕೊನೆಯಲ್ಲಿ ತೀರ್ಥಂಕರರ ಸಮವಸರಣಕ್ಕೆ ಹೋಗಿ ಭಗವದ್ವಾಣಿಯನ್ನು ಕೇಳಿದೆನು. ಬಳಿಕ ಕ್ಷೇಮಂಕರನೆಂಬ ಮುನಿಯ ಬಳಿಯಲ್ಲಿ ದೀಕ್ಷೆ ಹೊಂದಿ ರಾಜ್ಯ ಮೊದಲಾದುವನ್ನು ತೊರೆದು ಮರಣೋತ್ತರದಲ್ಲಿ ರುಚಕವೆಂಬ ವಿಮಾನದಲ್ಲಿ ದೇವನಾಗಿ ಹುಟ್ಟಿದೆನು.

ಅರಸುಮಗನು ಮತ್ತೆ ನೋಡಿದನು:–ಭರತಕ್ಷೇತ್ರದ ಪೂರ್ವ ದೇಶಕ್ಕೆ ಸೇರಿದ ಶ್ವೇತಾತಪತ್ರವೆಂಬ ನಗರದ ಅರಸು ನಂದವರ್ಧನನಿಗೆ ಆತನ ಪಟ್ಟದರಸಿ ವೀರವತಿಯ ಬಸಿರಲ್ಲಿ ನಂದನನೆಂಬ ಮಗನಾಗಿ ಹುಟ್ಟಿದೆನು. ತಂದೆಯು ಸಂನ್ಯಾಸವನ್ನು ಸ್ವೀಕರಿಸಲು ಅರಸನಾದೆನು. ಒಮ್ಮೆ ಒಬ್ಬ ಮುನಿವರನು ನನ್ನ ಭವಾವಳಿಯನ್ನು ಹೇಳಿದನು. ಅದರಿಂದ ನಂದನ ಮಹಾರಾಜನಾದ ನಾನು ನಿರ್ವೇಗವನ್ನು ಹೊಂದಿದೆನು. ಆಗ ಮುನಿವೃತ್ತಿಯನ್ನವಲಂಬಿಸಿ ಶೀಲವ್ರತ ಮೊದಲಾದ ಕಠೋರ ನಿಯಮಗಳನ್ನು ಪಾಲಿಸುತ್ತ ಏಕಾಗ್ರತೆಯನ್ನು ಪಡೆದೆನು. ಆಯುರವಸಾನದಲ್ಲಿ ಸಮಾಧಿಯಿಂದ ದೇಹತ್ಯಾಗ ಮಾಡಿ ಪುಷ್ಪೋತ್ತರ ವಿಮಾನದಲ್ಲಿ ದೇವತ್ವವನ್ನು ಪಡೆದೆನು. ಆ ನಂದನನೇ ಪುಷ್ಪೋತ್ತರ ವಿಮಾನದಿಂದ ಭೂತಲಕ್ಕಿಳಿದು ಸಿದ್ಧಾರ್ಥನಿಗೆ ಮಗನಾಗಿ ಹುಟ್ಟಿರುವೆನು.

ಈ ಮೇರೆಗೆ ಅನಾದಿಕಾಲದಿಂದ ನಾನು ಎಷ್ಟು ಜನ್ಮಗಳನ್ನು, ಎಷ್ಟು ಅವಸ್ಥೆಗಳನ್ನು, ಎಷ್ಟು ಸುಖದುಃಖಗಳನ್ನು ಅನುಭೋಗಿಸುತ್ತ ಬಂದಿರುವೆನೆಂಬುದಕ್ಕೆ ಮೇರೆಯೇ ಇಲ್ಲವಲ್ಲ? ಎಂದು ಆಲೋಚಿಸುತ್ತ ಸಂಸಾರದ ಅಲಂಘನೀಯತ್ವವನ್ನು ಭಾವಿಸಿ ಆತನು ರೋಮಾಂಚಿತನಾದನು. ಎಷ್ಟು ಜನ್ಮಗಳನ್ನು ವ್ಯರ್ಥವಾಗಿ ಕಳೆದೆನಲ್ಲಾ ಎಂದು ವರ್ಧಮಾನ ಕುಮಾರನು ಕಳವಳಗೊಂಡನು. ಈಗ ನಾನು ಮತಿ ಶ್ರುತಿ ಅವಧಿ ಎಂಬ ಮೂರು ಜ್ಞಾನಗಳನ್ನು ಪದೆದಿರುವೆನು. ಆತ್ಮನು ಕರ್ಮದಿಂದ ಭಿನ್ನನಾದವನೆಂಬ ಜ್ಞಾನವು ನನಗಿದೆ. ಇದ್ದ

ರೇನು? ೩೦ ವರ್ಷಗಳ ಆಯುಷ್ಯವನ್ನು ವ್ಯರ್ಥವಾಗಿ ಕಳೆದೆನು. ನಿರ್ವೇಗವನ್ನವಲಂಬಿಸಿ ಕೇವಲ ಜ್ಞಾನಕ್ಕಾಗಿ ತಪವನ್ನಾಚರಿಸಲಿಲ್ಲವಲ್ಲಾ? ಅಜ್ಞಾನಕೃತಪಾಪವು ತತ್ತ್ವಜ್ಞಾನದಿಂದ ನಷ್ಟವಾಗುವುದು; ಆದರೆ ನನ್ನ ಜ್ಞಾನಕೃತಪಾಪವು ಹೇಗೆ ಹೋದೀತು? ಸಕಲ ಅನರ್ಥಗಳಿಗೆ ಮೂಲವಾದ ಮೋಹವು ಇನ್ನೂ ಅಡಗಲಿಲ್ಲವಲ್ಲಾ ಎಂದು ಆತನು ಅನುತಾಪಗೊಂಡನು.

ಈಗ ವರ್ಧಮಾನನಿಗೆ ಮರ್ಮಭೇದಿಯಾದ ನಿರ್ವೇಗವುಂಟಾಯಿತು. ಆತನು ಆತ್ಮಗ್ಲಾನಿ ಹೊಂದಿ ಸಂಸಾರವನ್ನು ಬಿಡಲೇಬೇಕೆಂದು ನಿಶ್ಚಯ ಮಾಡಿದನು. ತಂದೆ ತಾಯಿ ಆಪ್ತ ಇಷ್ಟ ಮೊದಲಾದವರ ಮೋಹವನ್ನು ಬಿಟ್ಟುಕೊಟ್ಟನು. ಶರೀರಾದಿಗಳು ಅನಿತ್ಯಗಳು, ಆತ್ಮನ ಹೊರತು ಆತ್ಮನಿಗೆ ರಕ್ಷಕರಿಲ್ಲ, ಸಂಸಾರವು ಅನಾದಿಯಾಗಿಯೂ ಕುಟಿಲವಾಗಿಯೂ ಇದೆ; ಆತ್ಮನೇ ಆತ್ಮನಿಗೆ ಸಹಾಯವು. ಆತನು ಶರೀರಾದಿಗಳಿಂದ ಭಿನ್ನನು. ಆತ್ಮನು ಶುದ್ಧನು; ದೇಹಾದಿಗಳು ಅಶುಚಿಗಳು. ಕರ್ಮಗಳ ಆಸ್ರವದಿಂದಲೇ ಆತ್ಮನು ಬದ್ಧನಾಗುವನು. ಕರ್ಮಾಸ್ರವವನ್ನು ತಡೆಯುವುದು ಆತ್ಮನ ಕರ್ತವ್ಯವು. ಕರ್ಮಕ್ಷಯದಿಂದಲೇ ಮೋಕ್ಷವು; ಲೋಕಾಕಾಶದ ಮೇಲ್ಗಡೆಗೆ ಮುಕ್ತಜೀವರು ವಿರಾಜಮಾನರಾಗುವರು. ಜಗತ್ತಿನಲ್ಲಿ ಮಾನವಜನ್ಮವೂ, ಆತ್ಮಾನುಸಂಧಾನವೂ ದುರ್ಲಭವಾಗಿವೆ. ಸರ್ವಜ್ಞನು ಹೇಳಿದ ರತ್ನತ್ರಯವನ್ನು ಸಾಧಿಸುವುದೇ ಧರ್ಮವು; ಈ ಹನ್ನೆರಡು ವಿಷಯಗಳನ್ನು ಮಹಾವೀರಸ್ವಾಮಿಯು 'ಅನುಪ್ರೇಕ್ಷೆ' ಮಾಡತೊಡಗಿದನು. ಕೊನೆಗೆ ಸಂಸಾರತ್ಯಾಗದ ಸಂಕಲ್ಪ ಮಾಡಿದನು.

"ಮಗನೇ, ನೀನು ಕಠೋರವಾದ ತಪಶ್ಚರಣವನ್ನು ಸಹಿಸಿಕೊಳ್ಳಲಾರೆ. ಅದಕ್ಕೆ ಕಾಲವು ಮುಂದೆ ಬರುವುದು. ಈಗ ರಾಜಭೋಗಗಳನ್ನು ಭೋಗಿಸು. ತಂದೆಗೆ ರಾಜಕಾರ್ಯಗಳಲ್ಲಿ ನೆರವಾಗು; ಮುಂದೆ ತಕ್ಕ ಕಾಲದಲ್ಲಿ ಸಂನ್ಯಾಸವನ್ನು ಬೇಕಾದರೆ ಸ್ವೀಕರಿಸು." ಎಂದು ಪುತ್ರವತ್ಸಲೆಯಾದ ತ್ರಿಶಲೆಯು ಮಗನಿಗೆ ಹೇಳುತ್ತಲೇ ಇದ್ದಳು.

ವರ್ಧಮಾನನ ಸಂಸಾರ ಮೋಹಪಾಶವು ಹರಿದು ಹೋಗಿತ್ತು. ಆತನು ತಾಯಿಗೆ ಅಮ್ಮಾ, ಸಂಸಾರವು ಇಂದ್ರಜಾಲದಂತಿರುವುದು. ಇದರೊಳಗಿನ ಸಕಲ ಪದಾರ್ಥಗಳೂ ನೀರ್ಗುಳ್ಳೆಗಳಂತೆ ಅನಿತ್ಯಗಳಾಗಿವೆ. ರೋಗ ಶೋಕ ಆಧಿ ಜರಾಮರಣಗಳು ನಿತಂತರವಾಗಿ ಅಲೆದಾಡುತ್ತಿರುವಲ್ಲಿ ಸುಖವೆಲ್ಲಿಂದ ಬರಬೇಕು? ಈ ಸಂಸಾರವನ್ನು ನಾನು ತೊರೆದೇ ತೀರುವೆನು ಎಂದು ಹೇಳುತ್ತಿದ್ದನು.

ರಾಜಪುತ್ರನ ಮನೋದಾರ್ಢ್ಯದ ಮುಂದೆ ತಾಯಿಯ ನಲ್ನುಡಿಗಳ ಆಟವು ನಡೆಯಲಿಲ್ಲ. ಸಿದ್ಧಾರ್ಥ ಮಹಾರಾಜನು ತನ್ನ ಮಗನು ಸರ್ವಸಾಮಾನ್ಯನಲ್ಲವೆಂಬುದನ್ನರಿತಿದ್ದನು. ಮಗನು ಸಂಸಾರವನ್ನು ತೊರೆವನೆಂದು ಆತನು ತಿಳಿದರೂ ಅದಕ್ಕೆ ಅಡ್ಡಿ ಮಾಡಲಿಲ್ಲ.

ಸ್ವರ್ಗದಲ್ಲಿ ದೇವೇಂದ್ರನ ಸಿಂಹಾಸನವು ಕಂಪಿಸತೊಡಗಿತು. ತೀರ್ಥಂಕರನ ನಿಷ್ಕ್ರಮಣ (ಸಂಸಾರವನ್ನು ತೊರೆದು ಹೊರಡುವ) ಕಾಲವು ಬಂದಿತೆಂದು ತಿಳಿದು ಆತನು ಈ ನಿಷ್ಕ್ರಮಣ ಕಲ್ಯಾಣ (ಉತ್ಸವ) ಕ್ಕಾಗಿ ಸಜ್ಜಾದನು. ಎಲ್ಲ ದೇವತೆಗಳೊಡನೆ ಇಂದ್ರನು ಚಂದ್ರಪ್ರಭವೆಂಬ ರತ್ನಮಯವಾದ ಪಲ್ಲಕಿಯನ್ನು ತೆಗೆದುಕೊಂಡು ಸಿದ್ಧಾರ್ಥ ಮಹಾರಾಜನ ಅರಮನೆಗೆ ಬಂದನು. ಕೂಡಲೆ ದೊಡ್ಡ ಉತ್ಸವವು ನಡೆಯಿತು. ಕುಂದಪುರದ ಜನರೆಲ್ಲ ಆಶ್ಚರ್ಯದಿಂದ ನೆರೆದು ರಾಜಪುತ್ರನ ನಿಷ್ಕ್ರಮಣ ಕಲ್ಯಾಣವನ್ನು ಭಕ್ತಿಯಿಂದ ನೋಡತೊಡಗಿದರು. ವರ್ಧಮಾನನು ತನ್ನ ರಾಜ್ಯವೈಭವವನ್ನೆಲ್ಲ ತನ್ನ ಕೈಯಿಂದ ಯಾಚಕರಿಗೆ ದಾನ ಮಾಡಿದನು. ದೇವತೆಗಳು ವರ್ಧಮಾನ ಸ್ವಾಮಿಯನ್ನು ಪಲ್ಲಕಿಯಲ್ಲಿ ಕುಳ್ಳಿರಿಸಿಕೊಂಡು ಅರಮನೆಯಿಂದ ಹೊರಟರು. ನೆರೆದ ಜನರ ಗುಂಪಿನೊಳಗಿಂದ ಪಲ್ಲಕ್ಕಿಯು ರಾಜಮಾರ್ಗವನ್ನು ಕ್ರಮಿಸತೊಡಗಿತು. ಮಹಾವೀರಸ್ವಾಮಿಯು ಮನೆಯಲ್ಲಿರುವುದು ಇಂದಿಗೆ ಮುಗಿಯಿತು.

ಇದೇನೂ ಚೈತ್ರ ಯಾತ್ರೆಯ ಸಂಭ್ರಮವಲ್ಲ; ಇದೇನೂ ಜಯಲಕ್ಷ್ಮಿಯ ಸಮಾಗಮದ ಉಲ್ಲಾಸವಲ್ಲ; ಇದೇನೂ ಚಕ್ರವರ್ತಿ ವೈಭವದ ಉತ್ಸವವಲ್ಲ. ಇದೇನೂ ರಾಜಪುತ್ರನ ಮದುವೆಯ ಮೆರವಣಿಗೆಯಲ್ಲ. ಈ ದಿವಸ ವರ್ಧಮಾನನು ಯಾವುದೋ ಒಂದು ಗೊತ್ತಿಲ್ಲದ, ಮೇರೆಯಿಲ್ಲದ ದಾರಿಗೆ ಹೊರಟಿದ್ದಾನೆ. ಇನ್ನು ಆತನು ಹಿಂದಿರುಗುವುದಿಲ್ಲ. ತ್ರಿಶಲಾ ರಾಣಿಯು ಶೋಕದಿಂದ ಮುಂದುಗಾಣದೆ ರಾಜಮಾರ್ಗದಲ್ಲಿ ಜನರ ಗುಂಪಿನ ಹಿಂದೆ ಓಡುತ್ತ ಬರುತ್ತಿರುವಳು. ತನ್ನವರು,

ದಾಸಿಯರು, ಗೆಳತಿಯರು ಯಾರೂ ಆಕೆಯನ್ನು ಹಿಡಿದು ನಿಲ್ಲಿಸಲಾರದೆ ಹೋದರು. ಎದೆಯೊಡೆಯಿಸುವ ನೋಟವು!

ಆಗ ಒಬ್ಬ ಮಹಾಪುರುಷನು ರಾಣಿಯನ್ನು ಕುರಿತು—ದೇವೀ, ಇದೇನು? ನಿನ್ನ ಮಗನು ಜಗದ್ಗುರುವು; ತ್ರಿಲೋಕದ ಸ್ವಾಮಿಯು; ಅನಂತಶಕ್ತಿಸಂಪನ್ನನು; ಆತನು ಭವಸಾಗರವನ್ನು ದಾಟುವುದಕ್ಕೆ ನಡೆದಿದ್ದಾನೆ. ಮುಂದೆ ಆತನು ಅನೇಕರನ್ನು ಭವಸಾಗರದಿಂದ ದಾಟಿಸುವನು. ಅವನೇನು ಅಲ್ಪ ಮನುಷ್ಯರಂತೆ ಮನೆಯಲ್ಲಿ ಕಾಲ ಕಳೆಯಲಾಪನೇ ಎಂದು ಕೇಳಿದನು.

ತ್ರಿಶಲೆಯ ಮೋಹವು ಹರಿಯಿತು. ಸಂಸಾರದ ಘೋರರೂಪವು ಆಕೆಯ ಕಣ್ಣೆದುರಿಗೆ ಕಟ್ಟಿತು. ಆಕೆಯು ಕಣ್ಣೀರನ್ನೊರೆಸಿಕೊಂಡು ಹಿಂದಿರುಗಿ ಅರಮನೆಗೆ ನಡೆದಳು.

(೪)

ವರ್ಧಮಾನ ಸ್ವಾಮಿಯ ಪಲ್ಲಕ್ಕಿಯು ವನಖಂಡವೆಂಬ ಅಡವಿಗೆ ಬಂದು ಮುಟ್ಟಿತು.

ಮಹಾವೀರ ಸ್ವಾಮಿಯು ಪಲ್ಲಕ್ಕಿಯಿಂದಿಳಿದನು. ಒಂದು ಅಶೋಕವೃಕ್ಷದ ಕೆಳಗಿರುವ ಸ್ಫಟಿಕ ಶಿಲೆಯ ಮೇಲೆ ನಿಂತು ಮೈಮೇಲಿನ ಆಭರಣಗಳನ್ನೆಲ್ಲ ಬಿಚ್ಚಿದನು. ಕೊನೆಗೆ ಮೈಮೇಲಿನ ಬಟ್ಟೆಗಳನ್ನೂ ಕಳೆದು ದಿಗಂಬರನಾದನು. ಬಳಿಕ ಉತ್ತರಕ್ಕೆ ಮೋರೆ ಮಾಡಿ 'ಓಂ ನಮಃ ಸಿದ್ಧೇ ಭ್ಯಃ' ಎಂಬ ಮಂತ್ರವನ್ನುಚ್ಚರಿಸಿ ತನ್ನ ಮಸ್ತಕದಿಂದ ಐದು ಮುಷ್ಟಿ ಕೇಶಗಳನ್ನು ತನ್ನ ಕೈಯಿಂದ ಕಿತ್ತು ಚೆಲ್ಲಿದನು. ವೀರಸ್ವಾಮಿಯು ಈ ಮೇರೆಗೆ ಮಾರ್ಗಶೀರ್ಷ ಶುಕ್ಲದಶಮಿಯ ದಿವಸ ಮುನಿವ್ರತವನ್ನು ಸ್ವೀಕರಿಸಿದನು. ಆತನ ನಗ್ನದೇಹವು ತೇಜೋಬಿಂಬದಂತೆ ಕಂಗೊಳಿಸತೊಡಗಿತು.

ವರ್ಧಮಾನನು ಸಮಾಹಿತಚಿತ್ತನಾಗಿ ದೃಢನಿಶ್ಚಯದಿಂದ ಕಠೋರವಾದ ತಪಸ್ಸನ್ನಾಚರಿಸತೊಡಗಿದನು. ವ್ರತಾಚರಣ, ಪರೀಷಹಜಯ, ದೀರ್ಘಕಾಲೋಪವಾಸ, ಆತ್ಮಧ್ಯಾನ, ದೇಶಭ್ರಮಣ ಇವು ಈತನ ಕರ್ತವ್ಯಗಳಾದುವು. ದೀಕ್ಷಾಗ್ರಹಣವಾದ ತರುವಾಯ ಮಹಾವೀರನು ಒಂದೊಂದರಂತೆ ಆರು ತಿಂಗಳು ನಿಶ್ಚಲ ಧ್ಯಾನಾರೂಢನಾಗಿದ್ದನು. ಆರು ತಿಂಗಳ ತರುವಾಯ ಪಾರಣೆಗಾಗಿ ಆತನು ಕುಲಪುರವೆಂಬ ನಗರಕ್ಕೆ ಹೋದನು. ಮುನಿವರನ ಆಹಾರಗ್ರಹಣಕ್ಕೆ ಇದೇ ಮೊದಲು. ಇದೇ ಮೊದಲ ಪಾರಣೆ. ಕುಲಪುರದರಸನು ಅತಿಭಕ್ತಿಯಿಂದ ಮಹಾತ್ಮನಿಗೆ ಆಹಾರವನ್ನಿತ್ತನು. ಭೂಪತಿಯಾದ ಸಿದ್ಧಾರ್ಥನ ಮಗನು ಈಗ ಕರತಲಭಿಕ್ಷೆ ಬೇಡುವನು. ಕುಲಪುರರಾಜನು ನೀಡಿದ ಆಹಾರವನ್ನು ಸ್ವಲ್ಪ ಸ್ವೀಕರಿಸಿ ಪಾರಣೆಯ ಮುಗಿಸಿದನು.

ಕುಲಪುರದಿಂದ ಮುಂದೆ ವರ್ಧಮಾನನು ದಶಪುರ ನಗರಕ್ಕೆ ಪ್ರಯಾಣ ಮಾಡಿದನು. ಕುಲಪುರದರಸನು ಅಲ್ಲಿಗೆ ಹೋಗಿ ಮತ್ತೆ ಆಹಾರದಾನ ಮಾಡಿದನು. ಬಳಿಕ ವರ್ಧಮಾನನು ಮತ್ತೆ ಅಡವಿಗೆ ಬಂದನು. ಅಡವಿಯಲ್ಲಿರಲಿ, ದೇಶದಲ್ಲಿರಲಿ, ಪಟ್ಟಣದಲ್ಲಿರಲಿ ಎಲ್ಲಿ ಹೋದರೂ ಆತನ ಆತ್ಮಧ್ಯಾನವು ನಿರಂತರವಾಗಿ ನಡೆದಿತ್ತು.

ಹೀಗೆ ತಿರುಗಾಡುತ್ತಿರುವಾಗ ಆತನು ಒಮ್ಮೆ ಉಜ್ಜಯಿನಿಯ ಬಳಿಯಲ್ಲಿರುವ ಅತಿಮುಕ್ತಕವೆಂಬ ಸ್ಮಶಾನಕ್ಕೆ ಬಂದನು. ಕಗ್ಗತ್ತಲೆಯ ರಾತ್ರಿಯೊದಗಿತು. ಎದೆಗಾರನೆಂದು ಹೆಸರಾದವನು ಕೂಡ ಆ ಭಯಾನಕ ರಾತ್ರಿಯಲ್ಲಿ ಆ ಸ್ಮಶಾನದಲ್ಲಿ ನಿಲ್ಲಲಾರನು. ಮುನಿನಾಥನು ಆ ರಾತ್ರಿ ಆ ಸ್ಮಶಾನದಲ್ಲಿಯೇ ನಿಂತನು. ಒಮ್ಮೆಲೆ ಕಡಕಡವೆಂದು ಸಿಡಿಲಿನ ಗರ್ಜನೆಯಾಯಿತು. ಅಡಿಗಡಿಗೆ ಕೋಲ್ಮಿಂಚು ಮಿಂಚತೊಡಗಿತು. ಕಗ್ಗತ್ತಲೆಯು ಇನ್ನೂ ದಟಿತವಾಯಿತು. ಹಾವು, ಚೇಳು, ಹುಲಿ, ಕರಡಿ, ಸಿಂಹ ಮೊದಲಾದ ಕ್ರೂರ ಜಂತುಗಳು ಮಹಾವೀರನನ್ನು ಎದುರಿಸಿ ಬಂದುವು. ವಿಗಡವಾದ ಬೇತಾಳಗಳು ಥೈ ಥೈ ಕುಣಿಯತೊಡಗಿದುವು. ಇಂತಹ ಸಂಕಟ ಸಮಯದಲ್ಲಿ ವರ್ಧಮಾನ ಮುನಿಯು ಏನೂ ಅಳುಕಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಇದೆಲ್ಲ ಮಾಯವಾಯಿತು. ಅಷ್ಟರಲ್ಲಿ ಅತ್ಯಂತ ಸುಂದರಿಯರಾದ ದೇವಲೋಕದ ತರುಣಿಯರು ಇಂಪಾಗಿ ಗಾಯನ ಮಾಡುತ್ತ ಬಗೆಬಗೆಯ ಹಾವಭಾವಗಳನ್ನು ತೋರಿಸಿ ಕುಣಿಯುತ್ತ ಮುನಿವೀರನನ್ನು ಬಳಸಿ ನಿಂತರು. ಆದರೆ ಮುನಿಯು ಅಚಲನು, ಸ್ಥಿರನು. ಮನಸ್ಸಿನಲ್ಲಿ ಏನೂ ವಿಕಾರವಿಲ್ಲ. ಆಗ ವರ್ಧಮಾನನು ಸ್ಥಾಣು ಎಂಬ ಏಕಾದಶ ರುದ್ರರು ತನಗೆ ವಿನಯದಿಂದ ಎರಗುತ್ತಿರುವುದನ್ನು ಕಂಡನು. ಮಹಾವೀರನ ಸತ್ವವನ್ನು ಪರೀಕ್ಷಿಸುವುದಕ್ಕಾಗಿಯೇ

ಇದೆಲ್ಲವನ್ನು ಅವರು ಉಂಟುಮಾಡಿದ್ದರು. ಈಗ ರುದ್ರರು ವರ್ಧಮಾನನನ್ನು ಹೊಗಳಿ ಹೊರಟು ಹೋದರು.

ಉಜ್ಜಯಿನೀ ಸ್ಮಶಾನದಲ್ಲಿ ನಡೆದ ಈ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ವೀರಸ್ವಾಮಿಯು ಕೌಶಾಂಬೀ ನಗರಕ್ಕೆ ಪ್ರಯಾಣ ಮಾಡಿದನು. ಆತನ ಪಾರಣಾ ಕಾಲವು ಒದಗಿತು. ವರ್ಧಮಾನ ಮುನಿಯು ರಾಜಮಾರ್ಗದಿಂದ ಹೋಗುತ್ತಿರಲು ಒಮ್ಮೆಲೆ ಕುಗ್ಗಿದ ದನಿಯಿಂದ 'ನಿಲ್ಲು ನಿಲ್ಲು' ಎಂದು ಕೂಗಿದಂತಾಯಿತು.

ಮಹಾವೀರನು ನೋಡುತ್ತಾನೆ—ಮೋಡಗವಿದ ಚಂದ್ರನಂತೆಯೂ, ಹೊಗೆ ಸುತ್ತಿದ ಅಗ್ನಿಯಂತೆಯೂ ಮಲಿನ ವೇಷವುಳ್ಳ ಅತ್ಯುಜ್ವಲಾಕೃತಿಯ ಒಬ್ಬ ಸುಂದರಿಯಾದ ತರುಣಿಯು ಸಾವೆಯಕ್ಕಿಯ ಅನ್ನವನ್ನು ಸಿದ್ಧಪಡಿಸಿಕೊಂಡು ಭಕ್ತಿಯಿಂದ ತನ್ನ ಬರವನ್ನು ಹಾರೈಸಿಕೊಂಡು ನಿಂತಿದ್ದಾಳೆ. ಆ ತರುಣಿಯ ಲಾವಣ್ಯವು ಆ ಮಲಿನವೇಷದಲ್ಲಿಯೂ ಹೊರಚೆಲ್ಲುತ್ತಿತ್ತು. ಮಹಾವೀರ ಮುನಿಗೆ ಇಕ್ಕುವುದಕ್ಕೆ ಆ ತರುಣಿಯ ಬಳಿಯಲ್ಲಿ ಆ ಅನ್ನದ ಹೊರತು ಇನ್ನೇನೂ ಇರಲಿಲ್ಲ. ಆದರೆ ಹೃದಯದೊಳಗೆ ಭಕ್ತಿಯು ಮಾತ್ರ ಪರಿಪೂರ್ಣವಾಗಿ ಇತ್ತು. ಆ ಭಕ್ತಿಯನ್ನೇ ಆಕೆಯು ಮುನಿವರನ ಚರಣಗಳ ಮೇಲೆ ಅರ್ಪಿಸಿದಳು. ವರ್ಧಮಾನನು ಒಳಗೆ ಹೋಗಿ ಆದರದಿಂದ ಆ ಸ್ತ್ರೀಯು ನೀಡಿದ ಅನ್ನವನ್ನು ಸ್ವೀಕರಿಸಿದನು. ಆ ಕದನ್ನವು ವೀರಮುನಿಯ ಪ್ರಭಾವದಿಂದ ಕ್ಷೀರವಾಗಿ ಪರಿಣಮಿಸಿತ್ತು.

ಈ ರಮಣಿಯು ಪತಿವ್ರತಾಶಿರೋಮಣಿಯಾದ ಚಂದನೆಯು. ಒಂದಾನೊಂದು ಕಾಲದಲ್ಲಿ ಆಕೆ ಒಳ್ಳೆಯ ಸ್ಥಿತಿಯಲ್ಲಿದ್ದಳು. ಅವಳು ವೈಶಾಲೀ ನಗರದ ಪರಾಕ್ರಮಿಯಾದ ಚೇಟಕ ಮಹಾರಾಜನ ಮಗಳು. ಈಕೆಯಂತಹ ಗುಣವತಿಯೂ, ಭಕ್ತಿವತಿಯೂ ಆದ ಸ್ತ್ರೀಯು ಆ ಕಾಲದಲ್ಲಿ ಇನ್ನೆಲ್ಲಿಯೂ ಇರಲಿಲ್ಲ. ಈಕೆಯ ಅಸಾಧಾರಣ ಸೌಂದರ್ಯಕ್ಕೆ ಎಣೆಯೇ ಇರಲಿಲ್ಲ. ಆದರೆ ಈ ರೂಪವೇ ಆಕೆಗೆ ಮುಳುವಾಯಿತು. ಒಂದು ದಿನ ಆಕೆಯು ಅರಮನೆಯ ಹೂದೋಟದಲ್ಲಿ ತಿರುಗಾಡುತ್ತಿರುವಾಗ ಒಬ್ಬ ವಿದ್ಯಾಧರನು ಆಕೆಯ ರೂಪಕ್ಕೆ ಮರುಳಾಗಿ ಒಮ್ಮೆಲೆ ಆಕೆಯನ್ನು ಎತ್ತಿಕೊಂಡು ತನ್ನ ವಿಮಾನದಲ್ಲಿ ಹಾಕಿಕೊಂಡು ಹೊರಟು ಹೋದನು. ಆದರೆ ದಾರಿಯಲ್ಲಿ ಆ ಕಾಮಾಂಧನಿಗೆ ತನಗೆ ಹೆಂಡತಿ ಇರುವಳೆಂದೂ, ಏನಾದರೂ ಹೆಂಡತಿಯು ಈ ರಾಜಕುಮಾರಿಯೊಡನೆ ಸಮಾಗಮವಾಗಗೊಡಲಾರಳೆಂದೂ ಅರಿವು ಹುಟ್ಟಿತು. ಆಗ ಆ ವಿದ್ಯಾಧರನು ಹೆಂಡತಿಗೆ ಅಂಜಿ ಆ ರಾಜಪುತ್ರಿಯನ್ನು ದಾರಿಯೊಳಗಿನ ಒಂದು ಭಯಂಕರವಾದ ಕಾಡಿನಲ್ಲಿರಿಸಿ ಹೊರಟು ಹೋದನು. ಆ ಕಗ್ಗಾಡಿನಲ್ಲಿ ಚಂದನೆಯು ಗತಿಗಾಣದೆ ಅಂಜಿ ಅಳತೊಡಗಿದಳು. ಆಕೆಯ ಅಳುವನ್ನು ಕೇಳಿ ಒಬ್ಬ ಭಿಲ್ಲನು ಅಲ್ಲಿಗೆ ಬಂದನು. ಆ ದುರ್ವೃತ್ತನು ಆಕೆಯನ್ನು ಹಿಡಿದೊಯ್ದು ಕೌಶಾಂಬಿಯ ವೃಷಭಸೇನನೆಂಬ ಬಣಜಿಗನಿಗೆ ಮಾರಿದನು. ವೃಷಭಸೇನನು ಚಂದನೆಯನ್ನು ಮನೆಯಲ್ಲಿಟ್ಟುಕೊಂಡನು. ಆದರೆ ಆತನ ಹೆಂಡತಿಯಾದ ಸುಭದ್ರೆಯು ಚಂದನೆಯ ಅಲೌಕಿಕಸೌಂದರ್ಯವನ್ನು ಕಂಡು, ಇಂತಹ ರೂಪಕ್ಕೆ ಪತಿಯು ಮನಸೋತಾನೆಂದು ಅಂಜಿ ಪತಿಯ ಕಣ್ಮರೆಯಾಗುವಂತೆ ಆಕೆಯನ್ನು ಎರಡನೆಯ ಮನೆಯಲ್ಲಿಟ್ಟಳು. ಮುರಕ ಮನೆಯ ವಾಸ, ಬಡಗೂಳು, ಹರಕು ಬಟ್ಟೆ, ಮೈ ತುಂಬ ಕೆಲಸ ಇವುಗಳಿಗೆ ಚಂದನೆಯು ಬೇಸತ್ತಳು. ಇಂತಹ ದುರವಸ್ಥೆಯಲ್ಲಿಯೂ ಚಂದನೆಯು ತನ್ನ ಶೀಲವ್ರತ ಮೊದಲಾದುವನ್ನು ಕೈಯಲ್ಲಾದ ಮಟ್ಟಿಗೆ ನಡೆಯಿಸಿಕೊಂಡು ಬಂದಳು. ಈ ದಿನ ಆಕೆಯ ಜೀವನದ ಮಹಾವ್ರತವು ಪೂರ್ಣವಾಯಿತು.

ಸಾಕ್ಷಾತ್ ಭಗವಂತನು ಚಂದನೆಯ ಅತಿಥ್ಯವನ್ನು ಸ್ವೀಕರಿಸಿದನು.

ಅಲೌಕಿಕ ಅತಿಥಿಯ ಸತ್ಕಾರ ಮಾಡಿದುದರಿಂದ ಚಂದನೆಯ ಕೀರ್ತಿಯು ಎಲ್ಲ ಕಡೆಗೆ ಪಸರಿಸಿತು. ಕೌಶಾಂಬೀ ನಗರದ ರಾಣಿ ಮೃಗಾವತಿಯಿಂದ ಆಕೆಗೆ ಕರೆ ಬಂದಿತು. ಚಂದನೆಯು ಅರಮನೆಗೆ ಹೋದಳು; ಇದೇನು? ಪರಗೃಹದಲ್ಲಿ ಬಳಲುತ್ತಿದ್ದ ಚಂದನೆಯನ್ನು ಈ ದಿನ ಮೃಗಾವತೀ ಮಹಾರಾಣಿಯು ಎದೆಗೆ ಅವಚಿಕೊಂಡಿರುವಳು! ಮೃಗಾವತಿಯೂ ಚೇಟಕ ಮಹಾರಾಜನ ಮಗಳು. ಚಂದನೆಯು ಆಕೆಯ ತಂಗಿಯು. ಇಷ್ಟು ದಿನಗಳ ತರುವಾಯ ಅಕ್ಕತಂಗಿಯರಿಗೆ ಪರಿಚಯವಾಯಿತು. ಅಂದಿನಿಂದ ಚಂದನೆಯು ಅರಮನೆಯಲ್ಲಿಯೇ ಇರತೊಡಗಿದಳು.

ಆದರೆ ಚಂದನೆಯ ಹೃದಯದಲ್ಲಿ ಅಂಕುರಿಸಿದ ಆಕಾಂಕ್ಷೆಯು ಈ ಕ್ಷಣಿಕವಾದ ಅರಮನೆಯ ಸುಖ ಭೋಗಗಳಿಂದ ತೃಪ್ತಿಗೊಳ್ಳುವಂತಹುದಲ್ಲ. ಆಕೆಯು ಆಮರಣ ಕುಮಾರಿಯಾಗಿಯೇ ಇದ್ದುಕೊಂಡು ಶ್ರದ್ಧೆಯಿಂದ ಧರ್ಮವನ್ನಾಚರಿಸತೊಡಗಿದಳು. ಕಾಲಾಂತರದಲ್ಲಿ ೩೬೦೦೦ ಆರ್ಯಿಕೆಯರು ಸಂಸಾರವನ್ನು ತೊರೆದು ವೀರಸ್ವಾಮಿಯ ಉಪದೇಶವನ್ನು ಗ್ರಹಿಸಿ ವಿರಾಗಿಣಿಯರಾದರು. ಚಂದನೆಯು ಅವರಿಗೆಲ್ಲ ನಾಯಿಕೆಯಾದಳು.

ಈ ಮೇರೆಗೆ ಮಹಾವೀರಸ್ವಾಮಿಯು ಪರಿವ್ರಾಜಕನಾಗಿಯೂ, ತಪಸ್ವಿಯಾಗಿಯೂ ಮತ್ತೆ ಹನ್ನೆರಡು ವರ್ಷಗಳನ್ನು ಕಳೆದನು.

ವೈಶಾಖಮಾಸ; ಶುಕ್ಲಪಕ್ಷದ ದಶಮಿ, ಸಂಧ್ಯಾಕಾಲದಲ್ಲಿ ದಿಕ್ಕುಗಳೆಲ್ಲ ನಿರ್ಮಲವಾಗಿಯೂ ಶಾಂತವಾಗಿಯೂ ಇವೆ. ಮಹಾವೀರ ಸ್ವಾಮಿಯು ಜಂಭಿಕಾಗ್ರಾಮದಲ್ಲಿ ಋಜುಕೂಲೆ ಎಂಬ ಹೊಳೆಯ ದಡದ ಮೇಲೆ ಶಾಲವೃಕ್ಷದ ಕೆಳಗೆ ಸಮಾಧಿಯಲ್ಲಿ ಕುಳಿತಿರುವನು. ನೋಡುನೋಡುತ್ತ ಆತನು ಆರನೆಯ ಮತ್ತು ಏಳನೆಯ ಗುಣಸ್ಥಾನಗಳನ್ನು ದಾಟಿದನು. ಕ್ರಮದಿಂದ ಎಂಟನೆಯ, ಒಂಭತ್ತನೆಯ ಹತ್ತನೆಯ ಗುಣಸ್ಥಾನಗಳನ್ನು ಹೊಂದಿದನು. ಆತನ ಮೋಹನೀಯ ಕರ್ಮಗಳೆಲ್ಲ ನಿಃಶೇಷವಾಗಿ ಕ್ಷಯಿಸಿದುವು. ಸಾಧಕಶ್ರೇಷ್ಠನಾದ ವೀರಮುನಿಯು ಗುಣಸ್ಥಾನಗಳನ್ನೆಲ್ಲ ದಾಟಿ ನಡೆದನು. ಕ್ರಮದಿಂದ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯ ಕರ್ಮಗಳೆಲ್ಲ ಲಯವಾದುವು. ಈ ಮೇರೆಗೆ ಘಾತಿಕರ್ಮಕ್ಷಯವಾದ ಬಳಿಕ ವರ್ಧಮಾನ ಸ್ವಾಮಿಯು ವಿಶುದ್ಧ-ಕೇವಲ ಜ್ಞಾನವನ್ನು ಪಡೆದನು. ಈಗ ಆತನು ಅನಂತಜ್ಞಾನ, ಅನಂತವೀರ್ಯ, ಅನಂತದರ್ಶನ, ಅನಂತಸುಖ ಎಂಬೀ ಅನಂತಚತುಷ್ಟಯವನ್ನು ಪಡೆದನು. ಮಹಾವೀರನು ಸರ್ವಜ್ಞನೂ, ವೀತರಾಗನೂ, ಜೀವನ್ಮುಕ್ತನೂ, ಪರಮಾತ್ಮನೂ ಆದನು.

ವೀರಸ್ವಾಮಿಗೆ ಕೇವಲ ಜ್ಞಾನೋತ್ಪತ್ತಿಯಾದ ಬಳಿಕ ಇಂದ್ರಾದಿ ದೇವತೆಗಳು ಮಹಾವೈಭವದಿಂದ ಪೂಜಾದಿಗಳನ್ನು ಮಾಡಿ ನಾಲ್ಕನೆಯ ಕಲ್ಯಾಣ (ಕೇವಲ ಜ್ಞಾನ ಕಲ್ಯಾಣ)ವನ್ನು ಜರುಗಿಸಿದರು.

(೫)

ದೇವೇಂದ್ರನ ಅಪ್ಪಣೆಯ ಮೇರೆಗೆ ಕುಬೇರನು ಸಮವಸರಣವೆಂಬ ತೀರ್ಥಂಕರ ಮಹಾಸಭೆಯನ್ನು ರಚಿಸಿದನು. ಈ ಅಪೂರ್ವ ಸಭೆಯಲ್ಲಿ ಮುನಿಗಳು ಆರ್ಯಿಕೆಯರು, ಶ್ರಾವಕರು, ಶ್ರಾವಿಕೆಯರು, ತಿರ್ಯಂಚಗಳು, ಭವನವಾಸಿದೇವರು, ವ್ಯಂತರದೇವರು, ಜ್ಯೋತಿಷ್ಕದೇವರು, ವೈಮಾನಿಕ ದೇವರು, ಚತುರ್ವಿಧ ದೇವಾಂಗನೆಯರು ಇವರೆಲ್ಲರ ಸಲುವಾಗಿ ಬೇರೆ ಬೇರೆ ಭಾಗಗಳು ಗೊತ್ತು ಮಾಡಲ್ಪಟ್ಟಿದ್ದುವು. ಮಧ್ಯದಲ್ಲಿ ರತ್ನಮಯ ಸಿಂಹಾಸನವು. ಆದರ ಮೇಲೆ ಚಿನ್ನದ ಕಮಲವು. ಇದೇ ತೀರ್ಥಂಕರನ ಗಂಧಕುಟಿ ಎಂಬ ಆಸನವು. ಈ ಆಸನದ ನಾಲ್ಕಂಗುಲಿ ಅಂತರದ ಮೇಲೆ ಅಂತರಿಕ್ಷದಲ್ಲಿ ಶ್ರೀ ಮಹಾವೀರಸ್ವಾಮಿಯು ಕುಳಿತುಕೊಂಡು ಅರ್ಧ ಮಾಗಧೀ ಭಾಷೆಯಿಂದ ಧರ್ಮನಿರೂಪಣ ಮಾಡತೊಡಗಿದನು. ದೇವತೆಗಳು ಚಾಮರಗಳನ್ನು ಬೀಸುತ್ತಿದ್ದರು. ಆನಂದದ ಹೂಮಳೆ ಕರೆಯಿತು. ದೇವದುಂದುಭಿಗಳು ಮೊಳಗಿದುವು.

ಸಮವಸರಣದಲ್ಲಿ ಯಾರಿಗೂ ಪ್ರವೇಶಕ್ಕೆ ಪ್ರತಿಬಂಧವಿಲ್ಲ. ಮಗಧ ದೇಶದ ಶ್ರೇಣಿಕ ಮಹಾರಾಜನು ಈ ಮಹಾಸಭೆಯಲ್ಲಿ ಭಗವದ್ವಾಣಿಯನ್ನು ಭಕ್ತಿಯಿಂದ ಕೇಳುತ್ತಿದ್ದನು. ಸಮವಸರಣದಲ್ಲಿ ಮಾನ, ಮೋಹ, ದಂಭ, ಹಿಂಸೆ ಮೊದಲಾದುವೇನೂ ಇಲ್ಲ. ಕೇವಲ ಶಾಂತಿಯ ಮಲಯಾನಿಲವು ಅಲ್ಲಿ ಯಾವಾಗಲೂ ಸುಳಿದಾಡುವುದು. ಪಾಂಡಿತ್ಯಗರ್ವವುಳ್ಳ ಇಂದ್ರಭೂತಿಯು ಸಮವಸರಣದ ನಡುಗಂಬವನ್ನು ಕಂಡೇ ತನ್ನ ವಿದ್ಯಾಗರ್ವಕ್ಕೆ ಜಲಾಂಜಲಿಯನ್ನಿತ್ತನು. ವಾಯುಭೂತಿ ಮೊದಲಾದ ಸೋದರರೂ ಶಿಷ್ಯರೂ ಇವರನ್ನೊಡಗೊಂಡು ಆತನು ಈ ತೀರ್ಥಂಕರ ಸಭೆಗೆ ಬಂದನು. ಈ ಇಂದ್ರಭೂತಿ ಗೌತಮನೇ ಮೊದಲ ಗಣಧರನು, ಎಂದರೆ ಸಂಘನಾಯಕನು.

ಮಹಾವೀರಸ್ವಾಮಿಯು ನಿರ್ವಾಣವನ್ನು ಪಡೆದ ದಿವಸವೇ ಇಂದ್ರಭೂತಿಯು ಕೇವಲ ಜ್ಞಾನವನ್ನು ಪಡೆದನು. ಇಂದ್ರಭೂತಿಯೊಬ್ಬನ ಹೊರತು ಅಗ್ನಿಭೂತಿ, ವಾಯುಭೂತಿ, ಶುಚಿದತ್ತ, ಸುಧರ್ಮ, ಮಾಂಡವ್ಯ, ಮೌರ್ಯಪುತ್ರ, ಅಕಂಪನ, ಅಚಲ, ಮೇದಾರ್ಯ, ಪ್ರಭಾಸ ಎಂಬ ಹತ್ತು ಜನ ಗಣಧರರು ಮಹಾವೀರನ

ಸಮವಸರಣದಲ್ಲಿದ್ದರು. ೨೮೦೦೦ ಮುನಿಗಳು ೩೬೦೦೦ ಆರ್ಯಿಕೆಯರು, ೧ ಲಕ್ಷ ಗೃಹಸ್ಥರು, ೩ ಲಕ್ಷ ಶ್ರಾವಿಕೆಯರು ಸ್ವಾಮಿಯ ಧರ್ಮಾಮೃತಾಸ್ವಾದನದಿಂದ ಪರಿತೃಪ್ತಿಯನ್ನೈದಿದರು.

ಕೇವಲ ಜ್ಞಾನೋತ್ಪತ್ತಿಯಾದ ಬಳಿಕ ವೀರಸ್ವಾಮಿಯು ೩೦ ವರ್ಷ ಧರ್ಮಪ್ರಸಾರ ಮಾಡುತ್ತ ಸಂಚಾರ ಮಾಡಿದನು. ದೇಶದೇಶಗಳಲ್ಲಿ ತಿರುಗಿ ಆತನು ಮುಕ್ತಿಮಾರ್ಗವನ್ನು ಜನಕ್ಕೆ ತೋರಿದನು. ಆತನ ಅಪೂರ್ವವಾದ ಸಮವಸರಣವು ಆತನ ಸಂಗಡ ಇರುತ್ತಿತ್ತು. ಸಂಸಾರಶೋಕತಾಪಗಳಿಂದ ಬಳಲಿ ಬೆಂಡಾದ ಜೀವರು ಆತುರತೆಯಿಂದ ಬಂದು ಮಹಾಪುರುಷನ ಈ ಧರ್ಮಸಭೆಯ ಆಸರವನ್ನು ಪಡೆಯುತ್ತಿದ್ದರು. ಭಕ್ತವತ್ಸಲನಾದ ಸ್ವಾಮಿಯು ಜೀವರಿಗೆ ಸತ್ಯಧರ್ಮವನ್ನು ಬೋಧಿಸುವುದಕ್ಕಾಗಿ, ಅವರ ಅಜ್ಞಾನಾಂಧಕಾರವನ್ನು ಹೊಡೆದೋಡಿಸುವುದಕ್ಕಾಗಿ ಮಗಧ, ಮಿಥಿಲೆ, ಶ್ರಾವಸ್ತಿ, ಹಿಮಾಲಯ ಪ್ರದೇಶ ಮೊದಲಾದ ಕಡೆಗಳಲ್ಲೆಲ್ಲ ಸಂಚಾರ ಮಾಡಿದನು. ಶ್ರೇಣಿಕ, ಚೇಟಕ, ವಾರಿಷೇಣ, ಜೀವಂಧರ, ಅಭಯಕುಮಾರ ಮೊದಲಾದ ರಾಜರೂ, ರಾಜಕುಮಾರರೂ ಮಹಾವೀರಸ್ವಾಮಿಯ ಧರ್ಮವನ್ನು ಭಕ್ತಿಯಿಂದ ಸ್ವೀಕರಿಸಿದರು. ಭರತಖಂಡದಲ್ಲಿ ಹೊಸ ಧರ್ಮಜೀವನವು ಕಳೆಯೇರಿತು.

ನಿರ್ವಾಣ ಹೊಂದುವುದಕ್ಕೆ ಒಂದು ತಿಂಗಳಿರುವಾಗ ಮಹಾವೀರನು ಪಾವಾಪುರಿಗೆ ಬಂದನು. ಕಾರ್ತಿಕ ಮಾಸದ ಕೃಷ್ಣಪಕ್ಷದ ಚತುರ್ದಶಿಯು. ವೀರಮುನಿಯು ಶುಕ್ಲಧ್ಯಾನನುಗ್ನನಾದನು. ಆಗ ಬೆಳಗಾಗುತ್ತ ಬಂದಿತ್ತು. ವರ್ಧಮಾನನು ಕ್ರಮವಾಗಿ ಗೋತ್ರ, ವೇದನೀಯ, ನಾಮ, ಆಯು ಈ ನಾಲ್ಕು ಅಘಾತಿ ಕರ್ಮಗಳನ್ನು ನಿರ್ಮೂಲ ಮಾಡಿದನು. ಕೃಷ್ಣಚತುರ್ದಶಿಯ ಕಾರಿರುಳು ಕೂಡಲೆ ದಿವ್ಯಪ್ರಕಾಶದಿಂದ ಬೆಳಗತೊಡಗಿತು. ಲೋಕದ ಜನಕ್ಕೆ ಒಂದು ಅಪೂರ್ವವಾದ ಪ್ರಕಾಶದ ನೋಟವು ಕಾಣಿಸತೊಡಗಿತು. ಸಾಗರವು ನಿಂತು ನಿಂತು ಭೋರ್ಗರೆಯ ತೊಡಗಿತು. ಭೂಮಿಯು ಕಂಪಿಸಿತು. ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳಗಿದುವು. ಮಹಾವೀರನ ಮುಕ್ತಆತ್ಮವು ವಿದೇಹಮೋಕ್ಷವನ್ನೈದಿ ದೂರಕ್ಕೆ ಅತಿ ದೂರಕ್ಕೆ ಹೋಗಿ ಲೋಕಾಕಾಶದ ಶಿಖರದಲ್ಲಿರುವ ಶಾಂತಿಮಯ ಸಿದ್ಧಕ್ಷೇತ್ರಕ್ಕೆ ಹೋಯಿತು. ಭೂಮಿಯ ಮೇಲೆ ಆತನ ನಶ್ವರ ಜಡದೇಹದ ನಖಕೇಶಗಳು ಮಾತ್ರ ಉಳಿದುವು.

ಇಂದ್ರನ ಸಿಂಹಾಸನವು ಕೊನೆಯ ಬಾರಿ ಕಂಪಿಸಿತು. ದೇವತೆಗಳನ್ನೊಡಗೂಡಿ ಆತನು ಪಾವಾ ನಗರಿಗೆ ಬಂದು ಮಹಾವೈಭವದಿಂದ ತೀರ್ಥಂಕರನ ನಿರ್ವಾಣಕಲ್ಯಾಣವೆಂಬ ಐದನೆಯ ಕಲ್ಯಾಣವನ್ನು ಜರುಗಿಸಿದನು. ಮಹಾವೀರಸ್ವಾಮಿಯ ದೇಹದ ನಖಕೇಶಗಳನ್ನು ದೇವತೆಗಳು ರತ್ನಖಚಿತ ಕರಂಡದಲ್ಲಿ ಹಾಕಿಕೊಂಡು ಉತ್ಸವದಿಂದ ಆ ಕರಂಡವನ್ನು ಕ್ಷೀರಸಾಗರದಲ್ಲಿ ಚೆಲ್ಲಿದರು. ಎಲ್ಲವೂ ಮುಗಿಯಿತು.

ಮಹಾವೀರಸ್ವಾಮಿಯ ನಿರ್ವಾಣದೊಡನೆ ಜ್ಞಾನರವಿಯ ಅಸ್ತವಾಯಿತು. ಆದರೆ ಕೃತಜ್ಞರಾದ ಭಾರತವಾಸಿಗಳು ಆ ದುಃಖವನ್ನು ಮರೆಯಲಿಲ್ಲ. ಆದುದರಿಂದಲೇ ಅವರು ದೀಪಾವಲಿಯ ಪ್ರಕಾಶದಿಂದ ಅದರ ಸ್ಮಾರಕವನ್ನು ಮಾಡಿದರು. ದೇವತೆಗಳು ನಿರ್ವಾಣಕಲ್ಯಾಣ ಕಾಲದಲ್ಲಿ ಹತ್ತಿಸಿದ ದೀಪಾಲೋಕದಿಂದ ಆಕಾಶವು ಉಜ್ವಲವಾದಾಗ ಭಾರತವಾಸಿಗಳು ಹತ್ತಿಸಿದ ದೀಪಾವಲಿಯ ಆಲೋಕದಿಂದ ಭೂಲೋಕವೂ ಉಜ್ವಲವಾಯಿತು.

ಮೇಲೆ ವಿವರಿಸಿದ ಮಹಾವೀರಸ್ವಾಮಿಯ ಚರಿತ್ರವು ದಿಗಂಬರ ಸಾಂಪ್ರದಾಯದ ಗ್ರಂಥಗಳನ್ನನುಸರಿಸಿದೆ. ಶ್ವೇತಾಂಬರ ಸಾಂಪ್ರದಾಯದವರಲ್ಲಿ ಪ್ರಚಲಿತವಾದ ಚರಿತ್ರಕ್ಕೂ ಇದಕ್ಕೂ ಕೆಲವೆಡೆಯಲ್ಲಿ ಭೇದಗಳುಂಟು. ಶ್ವೇತಾಂಬರರು ಮಹಾವೀರನು ಒಬ್ಬ ಬ್ರಾಹ್ಮಣಿಯ ಗರ್ಭದಲ್ಲಿ ಅವತರಿಸಿದನೆಂದೂ, ಮುಂದೆ ಇಂದ್ರನು ಆ ಗರ್ಭವನ್ನು ತ್ರಿಶಲೆಯ ಬಸಿರಲ್ಲಿರಿಸಿದನೆಂದೂ ಹೇಳುವರು. ಶ್ವೇತಾಂಬರರು ವರ್ಧಮಾನನಿಗೆ ವಿವಾಹವಾಗಿತ್ತೆಂದು ಹೇಳುವರು. ಆತನು ಸಂಚರಿಸಿದ ಸ್ಥಾನಗಳ ವಿಷಯವಾಗಿಯೂ ಸ್ವಲ್ಪ ಮತಭೇದವುಂಟು. ಈ ಸಂಕ್ಷಿಪ್ತ ಚರಿತ್ರದಲ್ಲಿ ಆ ಎಲ್ಲ ವಿಷಯಗಳ ಸಮಾಲೋಚನೆಯು ಅನಾವಶ್ಯಕವು.

ಮಹಾವೀರನ ಚರಿತ್ರೆಯಲ್ಲಿ ಹಲವು ಅಲೌಕಿಕ ಘಟನೆಗಳನ್ನು ಕಾಣುವೆವು. ಪ್ರತಿ ಒಂದು ಧರ್ಮದ ಪ್ರತಿಷ್ಠಾಪಕನ ಇಲ್ಲವೆ ಉದ್ಧಾರಕನ ಚರಿತ್ರೆಯಲ್ಲಿ ಈ ತರದ ಘಟನೆಗಳು ಇದ್ದೇ ಇರುವವು. ಈ ಕಾಲದ ವಿಜ್ಞಾನ ಶಾಸ್ತ್ರಗಳ ಅಭಿಮಾನಿಗಳು ಇಂತಹ ಅಲೌಕಿಕ

ಘಟನೆಗಳನ್ನು ನಂಬಲಾರರೆಂಬುದನ್ನು ನಾವು ಬಲ್ಲೆವು. ಆದರೆ ಅಷ್ಟರಿಂದಲೇ ಮಹಾವೀರನ ಐತಿಹಾಸಿಕ ಅಸ್ತಿತ್ವವನ್ನೇ ಹಾರಿಸಿ ಬಿಡುವುದನ್ನು ನಾವು ಒಪ್ಪಲಾರೆವು. ಒಂದು ಕಾಲದಲ್ಲಿ ಮಹಾವೀರಸ್ವಾಮಿಯು ಇದ್ದನೆಂಬುದನ್ನು ಒಪ್ಪಲೇಬೇಕು. ಮಥುರೆಯಲ್ಲಿ ದೊರೆತ ಪ್ರಾಚೀನ ಮೂರ್ತಿಗಳಲ್ಲಿ ತೀರ್ಥಂಕರರ ಮೂರ್ತಿಗಳುಂಟು. ಆದರೆ ಅವುಗಳಲ್ಲಿ ಮಹಾವೀರನ ಮೂರ್ತಿಯು ಇಲ್ಲ. ಇದರಿಂದ ಮಹಾವೀರಸ್ವಾಮಿಯು ಅವತರಿಸುವದಕ್ಕಿಂತ ಪೂರ್ವದಲ್ಲಿಯೇ ಆ ಮೂರ್ತಿಗಳು ರಚಿಸಲ್ಪಟ್ಟವೆಂದು ಕಂಡು ಬರುವುದು. ಮಜ್ಝಿಮನಿಕಾಯವೆಂಬ ಪ್ರಾಚೀನ ಬೌದ್ಧ ಗ್ರಂಥದಲ್ಲಿರುವ ಬುದ್ಧನ ವಚನಗಳಲ್ಲಿ ಮಹಾವೀರನ ಉಲ್ಲೇಖವುಂಟು. ಅಲ್ಲಿ ಮಹಾವೀರನನ್ನು ನಾತಪುತ್ರ ಎಂದು ಉಲ್ಲೇಖಿಸಿರುವರು. ಮಹಾವೀರನು ಜ್ಞಾತೃಗೋತ್ರದವನು. ಬೌದ್ಧರು ಆತನನ್ನು ಜ್ಞಾತೃಪುತ್ರನೆಂದು ಕರೆದಿರುವರು. ನಾತ ಪುತ್ತ ಎಂಬುದು ಜ್ಞಾತೃಪುತ್ರ ಎಂಬುದರ ರೂಪಾಂತರವು. ಮಜ್ಝಿಮನಿಕಾಯದಲ್ಲಿ ಮಹಾವೀರನು ಸರ್ವಜ್ಞತೆಯನ್ನು ಪಡೆದಿದ್ದನೆಂದೂ ಹೇಳಿದೆ. ಇದರಿಂದ ಬುದ್ಧದೇವನಿಗಿಂತ ಮಹಾವೀರನು ಪೂರ್ವದವನೆಂದೂ ತಿಳಿಯುವುದು. ಮಹಾವೀರಸ್ವಾಮಿಯ ಚರಿತ್ರಕ್ಕೆ ಸಂಬಂಧಿಸಿದ ಕುಂಡಪುರ, ಪಾವಾಪುರಿ ಮೊದಲಾದ ಸ್ಥಾನಗಳು ಈಗಲೂ ತೋರಿಸಲ್ಪಡುತ್ತಿವೆ. ಮಹಾವೀರ ಚರಿತ್ರದೊಳಗಿನ ಚೇಟಕ, ಶ್ರೇಣಿಕ ಮಹಾರಾಜರು ಐತಿಹಾಸಿಕ ವ್ಯಕ್ತಿಗಳು. ಹೀಗಿರುವಾಗ ಮಹಾವೀರನು ಕಾಲ್ಪನಿಕ ವ್ಯಕ್ತಿಯೆಂದು ಹೇಳುವುದು ಅಸಂಗತವು. ಜೈನರು ಮಹಾವೀರಸ್ವಾಮಿಯು ನಿರ್ವಾಣದ ದಿನದಿಂದ ವರ್ಷ ಗಣನೆಯನ್ನು ಮಾಡುವರು. ನಮ್ಮ ಪ್ರಾಂತ್ಯದಲ್ಲಿ ಜೈನರಲ್ಲದವರು ಕೂಡ ಕಾರ್ತಿಕದಲ್ಲಿ ವರ್ಷಾರಂಭವನ್ನು ಮಾಡುವರು. ಗುಜರಾಥದಲ್ಲಿ ಕಾರ್ತಿಕ ಶು. ಪ್ರತಿಪದೆಯೆ ವರ್ಷಾರಂಭದ ದಿನವು. ಈ ಮಾತಿನಲ್ಲಿಯೂ ಮಹಾವೀರಸ್ವಾಮಿಯ ನಿರ್ವಾಣದ ಸಂಗತಿಯು ಅಡಕವಾಗಿದೆಯೆಂದು ತೋರುವುದು. ಕಾರ್ತಿಕದಲ್ಲಿ ನಡೆಯುವ ದೀಪಾವಲಿಯ ಉತ್ಸವಕ್ಕೂ ಮಹಾವೀರ ನಿರ್ವಾಣಕ್ಕೂ ಸಂಬಂಧವಿರಬಹುದೆಂದು ತೋರುವುದು. ಜೈನ ಹರಿವಂಶ ಪುರಾಣದಲ್ಲಿ ಈ ಮೇರೆಗೆ ಹೇಳಿದೆ—

> ತತಶ್ಚ ಲೋಕಃ ಪ್ರತಿವರ್ಷಮಾದರಾತ್ ।
> ಪ್ರಸಿದ್ಧದೀಪಾಲಿಕಯಾತ್ರ ಭಾರತೇ ॥
> ಸಮುದ್ಯತಃ ಪೂಜಯಿತುಂ ಜಿನೇಶ್ವರಂ ।
> ಜಿನೇಂದ್ರ ನಿರ್ವಾಣವಿಭೂತಿ ಭಕ್ತಿಭಾಕ್ ॥

ಈ ಶ್ಲೋಕದಿಂದ ಮಹಾವೀರನಿರ್ವಾಣಕಾಲದಿಂದಲೇ ದೀಪಾವಲಿಯ ಉತ್ಪತ್ತಿಯೆಂದು ಕಂಡು ಬರುವುದು. ಮಹಾವೀರನು ಐತಿಹಾಸಿಕ ಮಹಾಪುರುಷನು. ನೇಮಿಚಂದ್ರಾಚಾರ್ಯನು ತನ್ನ ತ್ರೈಲೋಕ್ಯಸಾರದಲ್ಲಿ ಮಹಾವೀರ ನಿರ್ವಾಣವಾದ ೬೦೫ ವರ್ಷ, ೫ ತಿಂಗಳ ತರುವಾಯ ಶಕರಾಜನು ಆವಿರ್ಭಸಿದನೆಂದು ಹೇಳಿರುವನು. ಈಗ ೧೮೪೯ನೆಯ ಶಕಾಬ್ದವು. ಆದುದರಿಂದ ಇಂದಿನಿಂದ ೧೮೪೯ + ೬೦೫ = ೨೪೫೪ ವರ್ಷಗಳ ಪೂರ್ವದಲ್ಲಿ ಅಥವಾ ೨೪೫೪–೧೯೨೭=೫೨೭ ಕ್ರಿ. ಪೂ. ವರ್ಷದಲ್ಲಿ ಮಹಾವೀರನು ನಿರ್ವಾಣ ಹೊಂದಿದನೆಂದು ಹೇಳಬೇಕಾಗುವದು. ಆರ್ಯವಿದ್ಯಾ ಸುಧಾಕರವೆಂಬ ಗ್ರಂಥದಿಂದಲೂ ಕ್ರಿ. ಪೂ. ೫೨೭ರಲ್ಲಿ ಮಹಾವೀರನು ನಿರ್ವಾಣ ಹೊಂದಿದನೆಂದು ಸಿದ್ಧವಾಗುವುದು. ದಿಗಂಬರ ಜೈನ ಸಾಂಪ್ರದಾಯದ ಸರಸ್ವತೀಗಚ್ಛದ ಪಟ್ಟಾವಲಿಯೂ ಈ ಮಾತನ್ನೇ ಸಮರ್ಥಿಸುವುದು. ವೀರಸ್ವಾಮಿಯು ೭೨ ವರ್ಷ ಭೂತಲದಲ್ಲಿ ಜೀವಿಸಿದ್ದನು. ಮೇಲೆ ಹೇಳಿದ ಲೆಕ್ಕದಿಂದ ಕ್ರಿ. ಪೂ. ೫೯೯ರಲ್ಲಿ ಆತನ ಜನ್ಮವು; ಕ್ರಿ. ಪೂ. ೫೬೯ರಲ್ಲಿ ಆತನು ಮುನಿವೃತ್ತಿಯನ್ನವಲಂಬಿಸಿದನು. ಕ್ರಿ. ಪೂ. ೫೫೭ರಲ್ಲಿ ಆತನಿಗೆ ಕೇವಲಜ್ಞಾನವುಂಟಾಯಿತು. ಕ್ರಿ. ಪೂ. ೫೨೭ರಲ್ಲಿ ಮಹಾವೀರಸ್ವಾಮಿಯು ನಿರ್ವಾಣವನ್ನು ಪಡೆದನು.

ಆದಿ ತೀರ್ಥಂಕರರೂ ಅವರ ಚಾರಿತ್ರಿಕ ವಿಶೇಷತೆಯೂ

ಶ್ರೀ ವಿ. ಲೋಕನಾಥ ಶಾಸ್ತ್ರಿ, ಮೂಡಬಿದ್ರೆ.

ಈ ಭಾರತವರ್ಷದಲ್ಲಿ ಹಲವು ಧರ್ಮಗಳು ಪ್ರಚಲಿತಗಳಾಗಿವೆ. ಅವುಗಳಲ್ಲಿ ಜೈನಧರ್ಮವು ಅತಿ ಪ್ರಾಚೀನವಾದುದು. ಜಿನೇಶ್ವರನಿಂದ ನಿರೂಪಿಸಲ್ಪಟ್ಟ ಧರ್ಮಕ್ಕೆ ಜೈನಧರ್ಮವೆಂದು ಹೆಸರು. ಸಂಸಾರಪರಿಭ್ರಮಣೆಗೆ ಕಾರಣವೂ ಜಯಿಸಲಸಾಧ್ಯವೂ ಆದ ಜ್ಞಾನಾವರಣಾದಿ ಕರ್ಮಗಳನ್ನು ಜಯಿಸಿದವರಿಗೆ ಜಿನರೆಂದು ಹೆಸರು. ಅಂತಹ ಮಹಾಪುರುಷರಿಂದ ಪ್ರತಿಪಾದಿಸಲ್ಪಟ್ಟ ಧರ್ಮಕ್ಕೆ ಜಿನಧರ್ಮ ಅಥವಾ ಜೈನಧರ್ಮವೆನ್ನುವರು. ಅಂತಹ ಧರ್ಮವನ್ನು ಉಪದೇಶಿಸಿದವರಿಗೆ ತೀರ್ಥಂಕರರೆನ್ನುತ್ತಾರೆ. ಅಂತಹ ತೀರ್ಥಂಕರರು ೨೪ ಮಂದಿ. ಅವರಲ್ಲಿ ಮೊದಲನೆಯ ತೀರ್ಥಂಕರರಿಗೆ ಆದಿಜಿನ, ವೃಷಭಜಿನ, ಆದಿನಾಥ ಮೊದಲಾದ ಹೆಸರುಗಳಿವೆ.

ತೀರ್ಥವೆಂದರೆ ಆಗಮ—ದ್ವಾದಶಾಂಗ ಶಾಸ್ತ್ರವೆಂದರ್ಥ; ಈ ಸಂಸಾರ ಸಮುದ್ರದಿಂದ ಪಾರಾಗುವ ಉಪಾಯವನ್ನು ನಿರೂಪಿಸಿದವರು ತೀರ್ಥಂಕರರು. ಅಥವಾ ತೀರ್ಥವೆಂದರೆ ಜಿನೇಶ್ವರರಿಂದ ನಿರೂಪಿಸಲ್ಪಟ್ಟ ಶಾಸ್ತ್ರವನ್ನು ತಿಳಿದಿರುವ ಗಣಧರಾದಿ ಮುನಿಗಳು. ಅಂತಹ ಮುನಿಗಳನ್ನು ಉಂಟುಮಾಡುವವರಿಗೆ ತೀರ್ಥಂಕರರೆನ್ನುವರು. ಜಿನಮುಖಕಮಲದಿಂದ ಉತ್ಪನ್ನವಾದ ದಿವ್ಯಧ್ವನಿಯ ಮೂಲಕ ಹನ್ನೆರಡು ವಿಭಾಗವುಳ್ಳ ದ್ವಾದಶಾಂಗವೇದಗಳ ರಚನೆಯಾಯಿತು. ಅಂತಹ ವೇದಗಳನ್ನು ತಿಳಿದಿರುವ ಗಣಧರರು ಮೊದಲಾದ ಮುನಿಗಳಿಗೂ ಔಪಚಾರಿಕವಾಗಿ ತೀರ್ಥಂಕರರೆನ್ನುವರು. ಅಂತು ವೃಷಭಾದಿ ಮಹಾವೀರಾಂತ್ಯರಾದ ೨೪ ಮಂದಿ ಮಹಾಪುರುಷರಿಗೆ ಪ್ರಾಮುಖ್ಯವಾಗಿ ತೀರ್ಥಂಕರರೆನ್ನುವುದು. ತೀರ್ಥ ಶಬ್ದದ ಲಕ್ಷಣವು ಹೀಗಿದೆ:—

ಜೈನಶ್ರುತತದಾಧಾರೌ, ತೀರ್ಥಂ ದ್ವಾವೇವ ತತ್ತ್ವತ: ।
ಸಂಸಾರಸ್ತೀರ್ಯತೇ ತಾಭ್ಯಾಂ, ತತ್ಸೇವೀ ತೀರ್ಥಸೇವಕ: ॥

ಜೈನಶಾಸ್ತ್ರ ಮತ್ತು ಅದಕ್ಕೆ ಆಧಾರಭೂತರಾದ ಜಿನರು, ಗಣಧರಾದಿ ಮುನಿಗಳು ಇವೇ ನಿಜವಾದ ತೀರ್ಥ; ಇವೆರಡರಿಂದ ನಾವು ಸಂಸಾರದ ಸಾರವನ್ನು ಹೊಂದುವೆವು. ಅವರ ಸೇವೆಯನ್ನು ಮಾಡುವವರಿಗೆ ತೀರ್ಥಸೇವಕರೆಂದು ಇದರರ್ಥ.

ಈಗ ಆದಿಜಿನರಿಗೆ ತೀರ್ಥಂಕರರೆಂದು ಏಕೆ ಅನ್ನಬೇಕು? ಅವರಲ್ಲಿ ಅಂತಹ ಸರ್ವತ್ರ ಪ್ರಸಿದ್ಧವಾಗಿರುವ ವಿಶೇಷತೆಯೇನು? ಎಂದು ನೋಡುವ.

ಹಿಂದುಗಳ ಅತಿ ಪ್ರಾಚೀನವಾದ ಧರ್ಮಶಾಸ್ತ್ರವೆಂದರೆ ವೇದ. ಅದನ್ನು ಯಾರೂ ಮಾಡಿದವರಿಲ್ಲ. ಅದು ಅಪೌರುಷೇಯವೆಂದು ಹೇಳುವರು. ಕೆಲವರು ಈಶ್ವರನೇ ಸೃಷ್ಟಿಕರ್ತನೆನ್ನುವರು. ಋಗ್ವೇದದಲ್ಲಿ ಚತುರ್ವಿಂಶತಿ ತೀರ್ಥಂಕರರ ಸ್ತುತಿಯನ್ನು ಇಂತು ಮಾಡಿರುತ್ತಾರೆ:—

"ಓಂ ತ್ರೈಲೋಕ್ಯಪ್ರತಿಷ್ಠಿತಾನ್ ಚತುರ್ವಿಂಶತಿ ತೀರ್ಥಂಕರಾನ್ ವೃಷಭಾದ್ಯಾನ್ ವರ್ಧಮಾನಾಂತಾನ್ ಶರಣಂ ಪ್ರಪದ್ಯೇ. ಓಂ ಪವಿತ್ರಂ ನಗ್ನಮುಪವಿ ಪ್ರಸಾಮಹೇ ಯೇಷಾಂ ನಗ್ನಾ ಜಾತಿರ್ಯೇಷಾಂ ವೀರಾ:"

ಮೂರು ಲೋಕದಲ್ಲಿ ಪ್ರಸಿದ್ಧರೂ ವೃಷಭಾದಿ ವರ್ಧಮಾನಾಂತ್ಯರಾದ ೨೪ ಮಂದಿ ತೀರ್ಥಂಕರರಿಗೆ ಶರಣಾಗತನಾಗುವೆನು. ಅವರು ಪರಿಗ್ರಹರಹಿತ—ನಿರ್ಗ್ರಂಥರಾಗಿರುವರು. ಅವರ ಜಾತಿ ವೀರ ಅಂದರೆ ಕ್ಷತ್ರಿಯರು. ಕರ್ಮಶತ್ರುಗಳನ್ನು ಜಯಿಸಿದವರೆಂದರ್ಥ. ಯಜುರ್ವೇದದಲ್ಲಿ:—

ಓಂ ನಮೋ ಅರ್ಹತೋ ವೃಷಭೋ, ಓಂ ವೃಷಭಂ ಪವಿತ್ರಂ ಪುರುಹೂತಮಧ್ವರಂ ಯಜ್ಞೇಷು ನಗ್ನಂ ಪರಮಂ ಮಾಹಸಂ ಸ್ತುತಂ ವರಂ ಶತ್ರುಂ ಜಯಂತಂ ಪಶುಇಂದ್ರಮಾಹುತಿರಿತಿ ಸ್ವಾಹಾ."

"ಅರ್ಹಂತರಾದ ವೃಷಭಜಿನರಿಗೆ ನಮಸ್ಕಾರ. ಈ ವೃಷಭಜಿನರು ಪವಿತ್ರರೂ ನಗ್ನರೂ ಉತ್ತಮರೂ ತೇಜಸ್ವಿಗಳೂ ಸ್ತುತಿಸಲ್ಪಟ್ಟವರೂ ಶ್ರೇಷ್ಠರೂ ಕರ್ಮಶತ್ರು

ಗಳನ್ನು ಗೆದ್ದವರೂ ಪಶುಇಂದ್ರ (ವೃಷಭೇಂದ್ರ)ನೆಂದು ಕರೆಯಲ್ಪಡುವವರೂ ಆದ ಅವರಿಗೆ ಆಹುತಿಯನ್ನು ಅರ್ಪಿಸುವೆನು" ಎಂದು ಇದರರ್ಥ.

ಮನುಸ್ಮೃತಿಯೆಂಬ ಗ್ರಂಥದಲ್ಲಿ:—

ಎಲ್ಲರ ವಂಶಪರಂಪರೆಗೆ ಕಾರಣರಾದ ವಿಮಲ ವಾಹನ, ಚಕ್ಷುಷ್ಮಾನ್, ಯಶಸ್ವೀ, ಅಭಿಚಂದ್ರ ಮೊದ ಲಾದ ಮನುಗಳ ಹೆಸರುಗಳನ್ನೂ ಇವರು ಭಾರತವರ್ಷ ದಲ್ಲಿ ಕುಲಂಕರರೆಂದೂ ಆ ಮೇಲೆ ಕೊನೆಯ ಮನು ವಾದ ನಾಭಿರಾಜನ ಪತ್ನಿ ಮರುದೇವಿಯ ಗರ್ಭದಲ್ಲಿ ಜನಿಸಿದವನೂ, ಪರಾಕ್ರಮಶಾಲಿಯೂ, ಕ್ಷತ್ರಿಯರ ಧರ್ಮವನ್ನು ಬೋಧಿಸಿದವನೂ, ದೇವಾಸುರವಂದ್ಯನೂ, ನೀತಿತ್ರಯ—ದಂಡನೀತಿ ಮೊದಲಾದ ನಿಯಮಗಳನ್ನು ಮಾಡಿದವನೂ ಆದ ಆದಿಜಿನನು ಮೊದಲು ಆದನೆಂದೂ ಹೇಳಿದೆ:—

ಕುಲಾದಿಬೀಜಂ ಸರ್ವೇಷಾಂ, ಪ್ರಥಮೋ ವಿಮಲವಾಹನಃ ॥
ಚಕ್ಷುಷ್ಮಾನ್ ಯಶಸ್ವೀ ನಾಭಿಚಂದ್ರೋಥ ಪ್ರಸೇನಜಿತ್ ॥
ಮರುದೇವಶ್ಚ ನಾಭಿಶ್ಚ ಭರತೇ ಕುಲಸತ್ತಮಾಃ ॥
ಅಷ್ಟಮೋ ಮರುದೇವ್ಯಾಂತು, ನಾಭೇರ್ಜಾತ ಉರುಕ್ರಮಃ॥
ದರ್ಶಯನ್ ಕರ್ಮವೀರಾಣಾಂ, ಸುರಾಸುರನಮಸ್ಕೃತಃ ॥
ನೀತಿತ್ರಿತಯಕರ್ತಾ ಯೋ, ಯುಗಾದೌ ಪ್ರಥಮೋ ಜಿನಃ ॥

ವೈದಿಕರಿಗೆ ಮಾನ್ಯಗ್ರಂಥವಾದ ಭಾಗವತದ ಲ್ಲಿಯೂ ಹಲವು ಕಡೆ ವೃಷಭಜಿನನ ಉಲ್ಲೇಖವಿದೆ.

ನಾಭಿರಾಜನನ್ನು ಸಂತೋಷಪಡಿಸಲು ಅವನ ಪ್ರಿಯಪತ್ನಿಯಾದ ಮರುದೇವಿಯ ಗರ್ಭದಲ್ಲಿ ವೃಷಭ ಜಿನನು ಜನ್ಮವೆತ್ತಿದನೆಂದೂ, ಅವನ ಮೈಬಣ್ಣ ಶುಭ್ರ ವೆಂದೂ, ಅವನು ನಿರ್ಗ್ರಂಥ ಮುನಿಗಳ ಧರ್ಮವನ್ನು ಬೋಧಿಸಲು ಅವತರಿಸಿದನೆಂದೂ, ಆ ಮೇಲೆ ಭಗ ವಾನ್ ವೃಷಭಜಿನನು ಗೃಹಸ್ಥ—ಶ್ರಾವಕರ ಧರ್ಮ ವನ್ನು ಬೋಧಿಸುವುದಕ್ಕಾಗಿ ದೇವೇಂದ್ರನಿಂದ ನಿರ್ಣೈ ಯಿಸಲ್ಪಟ್ಟ ಜಯಂತಿಯೆಂಬ ಕನ್ಯೆಯೊಡನೆ ಇಹಪರ ಸುಖಕ್ಕೋಸ್ಕರ ಲಗ್ನವಾದನೆಂದೂ, ಆಕೆಯಲ್ಲಿ ತನಗೆ ಸಮಾನರಾದ ನೂರು ಮಂದಿ ಮಕ್ಕಳು ಹುಟ್ಟಿದರೆಂದೂ, ಅವರಲ್ಲಿ ಮಹಾಯೋಗಿಯಾದ ಭರತನು ಹಿರಿಯನೂ ಉತ್ತಮ ಗುಣವಂತನೂ ಆಗಿದ್ದನೆಂದೂ, ಅವನಿಂದಲೇ ಈ ಆರ್ಯಾಖಂಡಕ್ಕೆ ಭಾರತವರ್ಷವೆಂಬ ಹೆಸರು ಬಂತೆಂದೂ ಇಂತು ಉಲ್ಲೇಖವಿದೆ.

"ನಾಭೇಃ ಪ್ರಿಯಚಿಕೀರ್ಷಯಾ ತದವರೋಧಾ ಯನೇ ಮರುದೇವ್ಯಾಂ ಧರ್ಮಾನ್ ದರ್ಶಯಿತು ಕಾಮೋ ವಾತರಸನಾನಾಂ ಶ್ರಮಣಾನಾಂ ಋಷೀಣಾಂ ಊರ್ಧ್ವಮಂಥಿನಾಂ ಶುಕ್ಲಯಾ ತನ್ವಾವತತಾರ."

"ಅಥ ಭಗವಾನ್ ವೃಷಭದೇವೋ . . . ಗೃಹ ಮೇಧಿನಾಂ ಧರ್ಮಮನುಶಿಕ್ಷಮಾಣೋ ಜಯಂತ್ಯಾ ಮಿಂದ್ರದತ್ತಾಯಾಂ ಉಭಯಲಕ್ಷಣಂಕರ್ಮ ಸಮಾ ಮ್ನಾತ್ನಮಭಿಯುಂಜನ್ನಾತ್ಮಸಮಾನಾನಾಂ ಆತ್ಮಜಾನಾಂ ಶತಂ ಜನಯಾಮಾಸ ಯೇಷಾಂ ಖಲು ಮಹಾಯೋಗೀ ಭರತೋ ಜ್ಯೇಷ್ಠಃ ಶ್ರೇಷ್ಠಗುಣ ಆಸೀತ್-ಏನೇದಂ ವರ್ಷಂ ಭಾರತಮಿತಿ ವ್ಯಪದಿಶಂತಿ."

ಇವಲ್ಲದೆ, ಭಾಗವತದ ೫ ಸ್ಕಂಧ ಅಧ್ಯಾಯ ೫ರಲ್ಲಿ ಇನ್ನೂ ಕೆಲವು ಉಲ್ಲೇಖಗಳಿವೆ:—

"ಇಂತು ಮಹಾನುಭಾವನೂ, ಪರಮ ಮಿತ್ರನೂ, ಭಗವಂತನೂ ಆದ ವೃಷಭದೇವನು ಮಕ್ಕಳಿಗೆ ಗೃಹಸ್ಥ ಧರ್ಮವನ್ನು ಬೋಧಿಸಿ, ಶಾಂತಸ್ವಭಾವವುಳ್ಳವರೂ ಕರ್ಮನಾಶವನ್ನು ಮಾಡಲಿಚ್ಛೆಯುಳ್ಳವರೂ ಆದ ಮಹಾ ಮುನಿಗಳ ಭಕ್ತಿ, ಜ್ಞಾನ, ವೈರಾಗ್ಯವೇ ಲಕ್ಷಣವಾಗುಳ್ಳ ಪರಮಹಂಸ (ಪರಮಾತ್ಮ) ಧರ್ಮವನ್ನು ಉಪದೇಶಿಸಿ ತನ್ನ ಹಿರಿಯ ಮಗನಾದ ಭರತನಿಗೆ ಲೋಕರಕ್ಷಣಾರ್ಥ ವಾಗಿ ರಾಜ್ಯಾಭಿಷೇಕವನ್ನು ಮಾಡಿ, ತಾನು ಶರೀರ ಮಾತ್ರ ಪರಿಗ್ರಹವುಳ್ಳ ನಿರ್ಗ್ರಂಥ ದೀಕ್ಷೆಯನ್ನು ತಾಳಿದನು."

"ಏವಮನುಶಾಸ್ಯ ಆತ್ಮಜಾನ್ ಸ್ವಯಂ ಲೋಕಾ ನುಶಾಸನಾರ್ಥಂ ಮಹಾನುಭಾವಃ ಪರಮಸುಹೃತ್ ಭಗವಾನ್ ವೃಷಭದೇವಃ ಉಪಶಮಶೀಲಾನಾಂ ಉಪ ರತಕರ್ಮಣಾಂ ಮಹಾಮುನೀನಾಂ ಭಕ್ತಿ—ಜ್ಞಾನ ವೈರಾಗ್ಯಲಕ್ಷಣಂ ಪಾರಮಹಂಸ್ಯಧರ್ಮಂ ಉಪಶಿಕ್ಷ ಮಾಣಃ ಸ್ವತನಯ ಜ್ಯೇಷ್ಠಂ ಭರತಂ ಧರಣೀಪಾಲ ನಾಯ ಅಭಿಷಿಚ್ಯ ಸ್ವಯಂ ಉರ್ವರಿತಶರೀರಮಾತ್ರ ಪರಿಗ್ರಹಃ ಪ್ರವವ್ರಾಜ"

ಇಂತು ಜೈನಧರ್ಮವು ಅತಿ ಪ್ರಾಚೀನವಾದು

ದೆನ್ನುವುದಕ್ಕೆ ಅನೇಕ ಕಾರಣಗಳಿವೆ. ಜೈನಧರ್ಮದ ಆದ್ಯ ಸಂಸ್ಥಾಪಕನೇ ವೃಷಭತೀರ್ಥಂಕರನು. ಆದುದರಿಂದ ಅತಿ ಪ್ರಾಚೀನವಾದ ಹಿಂದೂ ಧರ್ಮೀಯರ ವೇದ, ಭಾಗವತ ಮೊದಲಾದ ಗ್ರಂಥಗಳಲ್ಲಿ ಆತನ ಉಲ್ಲೇಖವಿರುವುದರಿಂದ ಅವನು ಐತಿಹಾಸಿಕ ಪುರುಷನೆನ್ನುವುದರಲ್ಲಿ ಸಂದೇಹವಿರದು. ಅಲ್ಲದೆ, ವೇದಗಳಲ್ಲಿ ವೃಷಭ, ಅಜಿತ, ಸುಪಾರ್ಶ್ವ, ಅರಿಷ್ಟನೇಮಿ ಮತ್ತು ಮಹಾವೀರ ಈ ತೀರ್ಥಂಕರರ ವ್ಯಕ್ತಿಶಃ ಉಲ್ಲೇಖವೂ, ನಾನು ವೃಷಭಾದಿ ವರ್ಧಮಾನಾಂತ್ಯರಾದ ೨೪ ಮಂದಿ ತೀರ್ಥಂಕರರ ಶರಣವನ್ನು ಹೊಂದುವೆನೆಂದು ಸಮಷ್ಟಿ ರೂಪವಾದ ಉಲ್ಲೇಖವೂ ಇರುವುದರಿಂದ ಎಲ್ಲಾ ತೀರ್ಥಂಕರರೂ ಐತಿಹಾಸಿಕ ಮಹಾಪುರುಷರೆಂದೇ ಸಿದ್ಧವಾಗುವುದು. ಯೋಗವಾಸಿಷ್ಠದಲ್ಲಿ—

ನಾಹಂ ರಾಮೋ ನಮೇ ವಾಂಛಾ, ಭಾವೇಷು ಚ
ನಮೇ ಮನಃ ।
ಶಾಂತಿಮಾಸ್ಥಾತುಮಿಚ್ಛಾಮಿ, ಸ್ವಾತ್ಮನ್ಯೇವ ಜಿನೋ
ಯಥಾ ॥

ಇನ್ನೂ ಆದಿಜಿನನ ಹಲವು ವಿಶೇಷತೆಗಳನ್ನು ಜೈನಪುರಾಣಗಳಲ್ಲಿ ಹೇಳಿರುತ್ತಾರೆ:—ಪೂರ್ವದಲ್ಲಿ ಈ ಭಾರತವರ್ಷವು ಭೋಗಭೂಮಿಯಾಗಿದ್ದಿತು. ಆಗ ದಶವಿಧವಾದ ಕಲ್ಪವೃಕ್ಷಗಳಿಂದ ಧನ, ಧಾನ್ಯ, ವಸ್ತ್ರ, ಆಭರಣ ಮೊದಲಾದ ಇಚ್ಛಿತ ವಸ್ತುಗಳು ಪ್ರಾಪ್ತವಾಗುತ್ತಿದ್ದುವು. ಇಂತಹ ಭೋಗಭೂಮಿಯ ಪರಿಸ್ಥಿತಿಯು ಬಹುಗಾಲದ ವರೆಗಿದ್ದು, ಅನಂತರ ಅವಸರ್ಪಿಣಿಯ ಕಾಲದ ಮಹಿಮೆಯಿಂದ ಹ್ರಾಸವಾಗಿ ಕರ್ಮಭೂಮಿಯಾಗಿ ಮಾರ್ಪಟ್ಟಿತು. ಆದರೆ, ಆಗ ಅದರ ಪರಿಜ್ಞಾನವಿಲ್ಲದುದರಿಂದ ಜನರು ಭಯಗ್ರಸ್ತರಾದುದರಿಂದ ಅವರನ್ನು ಬೋಧಿಸಿ ನಿರ್ಭಯರನ್ನಾಗಿ ಮಾಡಿದವರೂ, ಪ್ರತಿಭಾಸಂಪನ್ನರೂ, ರಕ್ಷಕರೂ, ಶಿಕ್ಷಕರೂ, ಅವಧಿಜ್ಞಾನವುಳ್ಳವರೂ ಆದ ಚಾಲಕರು ಜನ್ಮವೆತ್ತಿದರು. ಅವರಿಗೆ ಮನುಗಳು ಅಥವಾ ಕುಲಂಕರರೆಂದು ಹೆಸರು. ಅವರು ಪ್ರತಿಶ್ರುತಿ, ಸನ್ಮತಿ ಮೊದಲಾಗಿ ಹದಿನಾಲ್ಕು ಮಂದಿ. ಕೊನೆಯ ಮನು ನಾಭಿರಾಜ. ಆತನ ಕಾಲದಲ್ಲೇ ಮಕ್ಕಳ ನಾಭಿನಾಳವನ್ನು ಕತ್ತರಿಸುವ ಉಪಾಯವನ್ನು ತಿಳಿಸಿದ್ದರಿಂದ ಆತನಿಗೆ ನಾಭಿರಾಜನೆಂಬ ಹೆಸರಾದುದು. ದೇವೇಂದ್ರನಿಂದ ಅಯೋಧ್ಯಾ ನಗರದ ರಚನೆ, ನಾಭಿರಾಜಮರುದೇವಿಯರ ವಿವಾಹಸಂಸ್ಕಾರ, ಮರುದೇವಿಯ ಗರ್ಭದಲ್ಲಿ ಆದಿಜಿನನ ಜನನ, ಅವನು ಕಲ್ಪವೃಕ್ಷಗಳ ಅಭಾವದಿಂದ ಪೀಡಿತರಾದ ಪ್ರಜೆಗಳಿಗೆ ಸಂರಕ್ಷಣೋಪಾಯವನ್ನೂ ಅಸಿ, ಮಸಿ, ಕೃಷಿ, ವಿದ್ಯಾ, ವಾಣಿಜ್ಯ ಮತ್ತು ಪಶುಪಾಲನವೆಂಬ ಷಟ್ಕರ್ಮಗಳನ್ನೂ ಭರತ, ಬಾಹುಬಲಿ ಮೊದಲಾದ ನೂರು ಮಂದಿ ಮಕ್ಕಳಿಗೆ ೭೨ ಕಲಾ ಶಿಕ್ಷಣವನ್ನೂ, ತ್ರೈವರ್ಣಿಕರ ಕರ್ತವ್ಯ, ಕ್ಷತ್ರಿಯರು ಪ್ರಜೆಗಳ ರಕ್ಷಣೆಗಾಗಿ ಅಸಿಕರ್ಮ—ಖಡ್ಗಧಾರಣೆಯನ್ನೂ, ವೈಶ್ಯರು ಲೇಖನ, ಕೃಷಿ, ವ್ಯಾಪಾರ ಇವುಗಳನ್ನೂ ಶೂದ್ರರು ಪಶುಪಾಲನ ಮೊದಲಾದ ವೃತ್ತಿಗಳನ್ನೂ ಮಾಡುವಂತೆ ಬೋಧಿಸಿದನು. ಆದುದರಿಂದ ಅವನನ್ನು ಜನರು ಪ್ರಜಾಪತಿ, ಬ್ರಹ್ಮಾ, ಸೃಷ್ಟಿಕರ್ತಾ, ವಿಧಾತಾ, ಆದಿಬ್ರಹ್ಮಾ ಮೊದಲಾದ ಹೆಸರುಗಳಿಂದ ಕರೆಯುತ್ತಿದ್ದರು.

ಆದಿಜಿನನು ಬಹುಗಾಲ ರಾಜ್ಯವಾಳಿದನು. ಒಮ್ಮೆ ಆತನ ಸಭೆಯಲ್ಲಿ ದೇವೇಂದ್ರನು ನೀಲಂಜಸೆಯೆಂಬ ಅಪ್ಸರೆಯನ್ನು ನರ್ತನಮಾಡಲು ಆಜ್ಞಾಪಿಸಿದನು. ಆಕೆಯು ನರ್ತನಮಾಡುತ್ತಿರುವಾಗಲೇ ಮರಣವನ್ನು ಹೊಂದಿದಳು. ಆಕೆಯ ದೇಹವು ಅದೃಶ್ಯವಾಯಿತು. ಇಂದ್ರನು ಮರುಕ್ಷಣವೇ ತನ್ನ ವಿಕ್ರಿಯಾಬಲದಿಂದ ಮತ್ತೋರ್ವ ನೀಲಂಜಸೆಯನ್ನು ನಿರ್ಮಿಸಿ, ಆಕೆಯ ನೃತ್ಯವೂ ಮೊದಲಿನ ನೀಲಂಜಸೆಯಂತೆಯೇ ಅಖಂಡವಾಗಿ ಜರಗುವಂತೆ ಮಾಡಿದನು. ಆದರೆ, ಆದಿಜಿನನು ಇದರ ನಿಜಸ್ವರೂಪವನ್ನರಿತು, ಸಂಸಾರದಿಂದ ವಿರಕ್ತನಾಗಿ ಭರತನಿಗೆ ರಾಜ್ಯಾಭಿಷೇಕವನ್ನು ಮಾಡಿ, ಚೈತ್ರ ಬಹುಳ ನವಮಿಯಂದು ದೀಕ್ಷಿತನಾದನು. ಅವನೊಡನೆ ನಾಲ್ಕು ಸಾವಿರ ಮಂದಿ ರಾಜರೂ ದಿಗಂಬರ ಮುನಿಗಳಾದರು. ತೀರ್ಥಂಕರರು ಮೂರು ಲೋಕಕ್ಕೆ ಗುರುಗಳಾಗಿರುವುದರಿಂದ ಸರ್ವಪರಿಗ್ರಹಗಳನ್ನು ತೊರೆದು ತಾವೇ ದೀಕ್ಷಿತರಾಗುವರು. ಕೇಶಲೋಚನ, ಮಹಾವೃತ, ಪಂಚೇಂದ್ರಿಯಜಯ ಮೊದಲಾದ ೨೮ ಮೂಲಗುಣಗಳನ್ನು ಧರಿಸಿ, ಆರು ತಿಂಗಳ ತನಕ ಧ್ಯಾನಾಸಕ್ತರಾದರು.

ಇತರ ದೀಕ್ಷಿತರಾದ ಮುನಿಗಳು ಹಸುತೃಷೆಗಳನು ಸಹಿಸಲಾರದೆ, ನಗ್ನವೇಷವನ್ನು ತೊರೆದು, ಸ್ವೈರಾಚಾರಿಗಳಾದರು. ಆರು ತಿಂಗಳ ನಂತರ ಆದಿಜಿನನು ಧ್ಯಾನವನ್ನು ವಿಸರ್ಜಿಸಿದನು. ಆಗ ಅವನು ಇತರ ಮುನಿಗಳು ಸ್ವೈರಾಚಾರಿಗಳಾದರೆಂದು ಬಗೆದು, ಅಸಮರ್ಥರಾದ ಮುನಿಗಳಿಗೆ ಆಹಾರವಿಧಿಕ್ರಮವನ್ನು ತಿಳಿಸುವುದಕ್ಕಾಗಿ ಅವನು ಆಹಾರಕ್ಕಾಗಿ ವಿಹಾರವನ್ನೆಸಗಿದನು. ಆದರೆ, ಆ ಕಾಲದಲ್ಲಿ ಮುನಿಗಳಿಗೆ ಎಂತು ಆಹಾರದಾನವನ್ನು ಮಾಡಬೇಕು? ಎಂದು ಅದರ ನಿಯಮವನ್ನರಿಯದ ಜನರು ಧನ, ಧಾನ್ಯ, ವಸ್ತ್ರಾಭರಣ ಮೊದಲಾದ ಪದಾರ್ಥಗಳನ್ನು ತಂದೊಪ್ಪಿಸುತ್ತಿದ್ದರು. ಅವನ್ನು ಆದಿಜಿನನು ಸ್ವೀಕರಿಸದೆ, ವಿಹರಿಸುತ್ತಾ, ಆರು ತಿಂಗಳ ನಂತರ ಹಸ್ತಿನಾಪುರಕ್ಕೆ ಬಂದನು. ಇಂತು ನಿರಾಹಾರವಾಗಿ ಒಂದು ವರ್ಷ ಕಳೆಯಿತು.

ಆಗ ಅಲ್ಲಿ ಕುರುವಂಶದ ರಾಜರಾದ ಶ್ರೇಯಾನ್ ಮತ್ತು ಸೋಮಪ್ರಭರೆಂಬವರು ತಮ್ಮ ಅರಮನೆಯತ್ತ ಬರುತ್ತಿರುವ ಆದಿಜಿನನನ್ನು ಕಂಡು ಶ್ರೇಯಾನ್ ರಾಜನಿಗೆ "ಆದಿಜಿನನು ಮೊದಲು ಮೂರನೆಯ ಭವದಲ್ಲಿ ವಜ್ರಜಂಘರಾಜನಿದ್ದಾಗ ನಾನು ಆತನಿಗೆ ಶ್ರೀಮತಿಯೆಂಬ ಪತ್ನಿಯಾಗಿದ್ದೆನೆಂದೂ, ಆಗ ನಾವೀರ್ವರೂ ಚಾರಣ ಮುನಿಯುಗಲಕ್ಕೆ ಆಹಾರದಾನಮಾಡಿರುವೆನೆಂದೂ ಜಾತಿಸ್ಮರಣೆ (ಪೂರ್ವಜನ್ಮದ ಸ್ಮರಣೆ) ಯುಂಟಾಗಿ ವಿಧಿಪೂರ್ವಕವಾಗಿ ಶ್ರೇಯಾನ್ ರಾಜನು ಅವನ ಹಸ್ತಸಂಪುಟದಲ್ಲಿ• ಕಬ್ಬಿನ ಹಾಲು ರಸವನ್ನೆರೆದು, ನಿರಂತರಾಯವಾಗಿ ಆಹಾರವನ್ನು ಮಾಡಿಸಿದನು. ಆಗ ಆದಿಜಿನನು ರಾಜನನ್ನು 'ಅಕ್ಷಯದಾನಮಸ್ತು' ಎಂದು ಹರಸಿದನು. ಆಗ ಅರಮನೆಯಲ್ಲಿ ಪುಷ್ಪವೃಷ್ಟಿ ಮೊದಲಾದ ಪಂಚಾಶ್ಚರ್ಯಗಳಾದುವು.

ಶ್ರೇಯಾನ್ ರಾಜನು ವೈಶಾಖ ಶುದ್ಧ ತದಿಗೆಯಂದು ಆಹಾರದಾನವನ್ನು ಮಾಡಿದುದರಿಂದಲೂ ಅವನನ್ನು ಆದಿಜಿನನು 'ಅಕ್ಷಯದಾನಮಸ್ತು' ಎಂದು ಹರಸಿದ್ದರಿಂದಲೂ ಅಂದಿಗೆ ಅಕ್ಷಯ ತೃತೀಯವೆಂದೂ ದಾನತೀರ್ಥವೆಂದೂ ಪ್ರಸಿದ್ಧವಾಗಿದೆ. ಇದೊಂದು ಜೈನರ ಮುಖ್ಯ ಪರ್ವತಿಥಿ.

ಈ ವಿಷಯವಾಗಿ ಪುಷ್ಪದಂತ ಪುರಾಣದಲ್ಲಿ:—

ಪೂರಿಯ ಸಂವಚ್ಛರ ಉವವಾಸೇ, ಅಕ್ಖಯ
ದಾಣ ಭಣಿವುಂ ಸರಮೇಸೇತಹು ದಿವಸವು ಅಕ್ಖೀಣ
ಸಮಾಯವು, ಅಕ್ಖಯತ ಇಯಣಾವುಂ ಸಂಜಾಯವು॥

ಆ ಮೇಲೆ ಆದಿಜಿನನು ವನಕ್ಕೆ ಬಂದು, ಮೌನಸ್ಥನಾಗಿ ತಪಸ್ಸನ್ನು ಮಾಡುತ್ತ ಒಂದು ಸಾವಿರ ವರ್ಷಗಳು ಕಳೆದುವು. ಕೊನೆಗೆ ಜ್ಞಾನಾವರಣಾದಿ ಘಾತಿಕರ್ಮಗಳನ್ನು ಕೆಡಿಸಿ, ಫಾಲ್ಗುಣ ಬಹುಳ ಏಕಾದಶಿಯಂದು ಸರ್ವಜ್ಞತ್ವವನ್ನು ಪಡೆದನು. ಅನಂತರ ತನ್ನ ದಿವ್ಯಧ್ವನಿಯ ಮೂಲಕ ಗೃಹಸ್ಥಧರ್ಮ ಮತ್ತು ಯತಿಧರ್ಮ ಮೊದಲಾದ ವಿಷಯಗಳನ್ನು ಸಮಸ್ತ ಪ್ರಾಣಿಗಳಿಗೆ ಬೋಧಿಸಿದನು. ಆಗ ಅವನು ಆದಿ ತೀರ್ಥಂಕರನಾದನು.

ಆ ಮೇಲೆ ಆದಿತೀರ್ಥಂಕರರ ಆಯುಃಪರಿಮಾಣವು ಹದಿನಾಲ್ಕು ದಿವಸಗಳು ಮಾತ್ರ ಉಳಿದಿರುವಾಗ ಅವರು ಕೈಲಾಸ ಪರ್ವತಕ್ಕೆ ಹೋಗಿ, ಪೂರ್ವಾಭಿಮುಖವಾಗಿ ಕುಳಿತು, ಯೋಗನಿರೋಧಪೂರ್ವಕ ಧ್ಯಾನಾಸಕ್ತರಾದರು. ಹದಿನಾಲ್ಕನೆಯ ದಿನ ಮಾಘ ಬಹುಳ ಚತುರ್ದಶಿಯಂದು ಸೂರ್ಯೋದಯ ಸಮಯದಲ್ಲಿ ಅಘಾತಿಕರ್ಮವನ್ನು ನಾಶಮಾಡಿ ಮುಕ್ತರಾದರು. ಅಂದಿನಿಂದ ಜಿನರಾತ್ರಿ ಅಥವಾ ಶಿವರಾತ್ರಿಯೆಂಬ ಪರ್ವತಿಥಿಯಾಯಿತು. ಹಿಂದೂ ಧರ್ಮೀಯರೂ ಈ ಪರ್ವತಿಥಿಯನ್ನಾಚರಿಸುತ್ತಾರೆ. ಆದಿತೀರ್ಥಂಕರರಿಗೂ ಸಹಸ್ರನಾಮದಲ್ಲಿ ಶಿವ ಮಹಾದೇವ ಮೊದಲಾದ ಹೆಸರುಗಳಿರುವುದರಿಂದ ಅವರು ಮುಕ್ತರಾದಂದು ಶಿವರಾತ್ರಿಯೆಂದು ಅಂದರೂ ತಪ್ಪಲ್ಲ.

ಆದಿತೀರ್ಥಂಕರರ ಭವಗಳ ದಶಾವತಾರ

ಪ್ರಥಮಭವದಲ್ಲಿ ಜಯವರ್ಮ ಮುನಿ, ೨. ಮಹಾಬಲವಿದ್ಯಾಧರ, ೩. ಲಲಿತಾಂಗದೇವ, ೪. ವಜ್ರಜಂಘ ಮಹಾರಾಜ, ೫. ಭೋಗಭೂಮಿಜಆರ್ಯ, ೬. ಸೌಧರ್ಮಸ್ವರ್ಗದದೇವ, ೭. ಸುವಿಧಿರಾಜ, ೮. ಅಚ್ಯುತೇಂದ್ರ, ೯. ವಜ್ರನಾಭಿ, ೧೦. ಅಹಮಿಂದ್ರದೇವ. ಇವು ಹತ್ತು ಅವರ ಹಿಂದಿನ ಭವದ ದಶಾವ

ತಾರಗಳು. ಆದುದರಿಂದಲೇ ಜಿನಸೇನಾಚಾರ್ಯರು ಸಹಸ್ರನಾಮದಲ್ಲಿ ದಶಾವತಾರನಿಧಾರ್ಯ! ಮಾಂ ಪಾಹಿ ಪರಮೇಶ್ವರ! ಇಂತೆಂದು ಸ್ತುತಿಸಿದ್ದಾರೆ.

ಇಂತು ವಿವಿಧ ವಿಶೇಷತೆಗಳಿಂದ ಕೂಡಿದ ಜೀವನವಾದುದರಿಂದ ಲೋಕದಲ್ಲಿ ಸರ್ವಧರ್ಮೀಯರೂ ಆದಿ ತೀರ್ಥಂಕರರನ್ನು ಪ್ರಶಂಸಿಸಿದ್ದಾರೆ. ಹಿಂದುಗಳ ಪುರಾಣಗಳಲ್ಲಿಯೂ ತೀರ್ಥಂಕರರ ನಾಮೋಲ್ಲೇಖಗಳಿವೆ. ಲೇಖವಿಸ್ತಾರವಾಗುವುದರಿಂದ ಅವುಗಳಲ್ಲಿ ಕೆಲವನು ಮಾತ್ರ ವಾಚಕರ ಮುಂದಿಡುವೆನು.

ಅರುವತ್ತೊಂದು ತೀರ್ಥಗಳ ಯಾತ್ರೆಯಿಂದ ಲಭಿಸುವ ಪುಣ್ಯವು ಆದಿದೇವನ ಸ್ಮರಣೆಯಿಂದ ಪ್ರಾಪ್ತವಾಗುವುದೆಂದು ನಾಗರ ಪುರಾಣದಲ್ಲಿ ಹೇಳಿರುತ್ತಾರೆ:—

ಏಕಷಷ್ಟ್ಯಾಷು ತೀರ್ಥೇಷು, ಯಾತ್ರಾಯಾಂ
ಯತ್ಫಲಂ ಭವೇತ್ ।
ಆದಿನಾಥಸ್ಯ ದೇವಸ್ಯ, ಸ್ಮರಣೇನಾಪಿ ತದ್ಭವೇತ್ ॥

ಭಾಗವತದಲ್ಲಿ:—

ನಾಭಿಸ್ತು ಜನಯೆತ್ಪುತ್ರಂ, ಮರುದೇವ್ಯಾಂ
ಮನೋಹರಂ ।
ವೃಷಭಂ ಕ್ಷತ್ರಿಯಶ್ರೇಷ್ಠಂ, ಸರ್ವಕ್ಷತ್ರಸ್ಯ
ಪೂರ್ವಜಂ ॥
ಋಷಭಾತ್ಮಾ ತತೋ ಜಿಜ್ಞೇ, ವೀರಪುತ್ರಃ
ಶತಾಗ್ರಜಃ ।
ಅಭಿಷಿಚ್ಯ ಭರತಂ ರಾಜ್ಯೇ. ಮಹಾ
ಪ್ರಾವ್ರಜ್ಯಮಾಶ್ರಿತಂ ॥

ಶಿವಪುರಾಣದಲ್ಲಿ:—

ಕೈಲಾಸೇ ವಿಮಲೇ ರಮ್ಯೇ, ವೃಷಭೋಯಂ
ಜಿನೇಶ್ವರಃ ।
ಚಕಾರ ಸ್ವಾವಕಾರಂ ಯಃ, ಸಾರ್ವ:
ಸರ್ವಗತಃ ಶಿವಃ ॥

ಮಹಾಭಾರತದಲ್ಲಿ:—

ರೈವತಾದ್ರೌ ಜಿನೋ ನೇಮಿರ್ಯುಗಾದಿ
ರ್ವಿಮಲಾಚಲೇ ।
ಋಷೀಣಾಮಾಶ್ರಮಾದೇವ, ಮುಕ್ತಿ
ಮಾರ್ಗಸ್ಯ ಕಾರಣಂ ॥
ಪುನಸ್ತತ್ರೈವ ಸರ್ವಜ್ಞಃ, ಸರ್ವದೇವನಮಸ್ಕೃತಃ ।
ಛತ್ರತ್ರಯಾಭಿಸಂಯುಕ್ತಃ, ಪೂಜ್ಯಮೂರ್ತಿ
ರಸೌ ವಹನ್ ॥
ಪರಮಾತ್ಮಾನಮಾತ್ಮಾನಂ, ಲಸತ್ಕೇವಲ
ನಿರ್ಮಲಂ ।
ನಿರಂಜನಂ ನಿರಾಕಾರಂ, ವೃಷಭಂತು
ಮಹೇದ್ವೃಷಂ ॥

ಅರಣ್ಯಪುರಾಣದಲ್ಲಿ:—

ಋಷಭ ಏವ ಭಗವಾನ್ ಬ್ರಹ್ಮಾ............ಇತ್ಯಾದಿ
ಸ್ತುತ್ವಾ ಶತ್ರುಂಜಯಂ ತೀರ್ಥಂ, ನತ್ವಾ
ರೈವತಕಾಚಲಂ ।
ಸ್ನಾತ್ವಾ ಗಜಪಥೇ ಕುಂಡೇ, ಪುನರ್ಜನ್ಮ ನ
ವೇದಯತ್ ॥

ಈ ರೀತಿಯಾಗಿ ಭಗವಾನ್ ವೃಷಭತೀರ್ಥಂಕರರ ಉಲ್ಲೇಖವು ಹಿಂದುಗಳ ಅತಿ ಪ್ರಾಚೀನವಾದ ವೇದ, ಭಾಗವತ, ಪುರಾಣ, ಮನುಸ್ಮೃತಿ ಮೊದಲಾದ ಗ್ರಂಥಗಳಲ್ಲಿರುವುದರಿಂದ ಜೈನಧರ್ಮವು ಅತಿ ಪ್ರಾಚೀನವೆನ್ನುವುದರಲ್ಲಿ ವಿರೋಧವೆನಿಸದು. ಈ ಲೋಕವು ಅನಾದಿಯಾಗಿರುವಂತೆ, ಜೈನಧರ್ಮವೂ ಅನಾದಿಯಾಗಿದೆ. ಧರ್ಮವೆಂದರೆ, ವಸ್ತುಸ್ವಭಾವ, ಕರ್ತವ್ಯ, ಆತ್ಮವಿಶುದ್ಧಿ.

ಜೈನಧರ್ಮದ ಅಂತಿಮ ಗುರಿ ಆತ್ಮಪರಕಲ್ಯಾಣ. ಆತ್ಮವಿಶುದ್ಧಿಯಾಗದೆ ಆತ್ಮಕಲ್ಯಾಣವಾಗದು. ಪರಿಣಾಮ ಶುದ್ಧಿಯಾಗದೆ ಆತ್ಮವಿಶುದ್ಧಿಯಾಗದು. ಆ ಪರಿಣಾಮ ವಿಶುದ್ಧಿಗಾಗಿಯೇ ದೇವಪೂಜೆ, ಸತ್ಪಾತ್ರದಾನ ಮೊದಲಾದ ಸತ್ಕಾರ್ಯಗಳನ್ನು ಮಾಡುವುದಾಗಿದೆ.

ತ್ಯಾಗಸೇವೆಗಳ ಜೀವಜ್ಯೋತಿ

ಶ್ರೀ. ಹುರುಳಿ ಭೀಮರಾವ್

ಪ್ರಪಂಚ ವಿಚಿತ್ರವಾದದ್ದು! ಅಸಂಖ್ಯ ಜೀವರಾಶಿಯ ಈ ಅನಂತಸೃಷ್ಟಿಯಲ್ಲೆಲ್ಲಿ ನೋಡಿದರೂ ಭಿನ್ನ ರೂಪ, ಭಿನ್ನಬುದ್ಧಿ, ಭಿನ್ನಗುಣ, ಭಿನ್ನರುಚಿ—ಎಲ್ಲವೂ ಭಿನ್ನವೇ. ಈ ಭಿನ್ನತೆಯಿಂದಲೇ ದುಃಖಾನಂದ, ಸುಖ ಕಷ್ಟ, ಹಾನಿವೃದ್ಧಿಗಳು. ಇವುಗಳಲ್ಲಿ ದುಃಖ, ಕಷ್ಟ, ಹಾನಿಗಳನ್ನು ತಮ್ಮ ಸ್ವಾರ್ಥಕ್ಕಾಗಿ ಉಂಟುಮಾಡತಕ್ಕ ಶಕ್ತಿಗಳು ಧಾರಾಳ; ಆನಂದಸುಖವೃದ್ಧಿಗಾಗಿ ಯತ್ನಿಸುವ ಪರಾರ್ಥಸಾಧನಶಕ್ತಿಗಳು ವಿರಳ. ಇವೆರಡು ಶಕ್ತಿಗಳೊಳಗೆ ಪ್ರತಿ ಕ್ಷಣದಲ್ಲಿಯೂ ಘರ್ಷಣವಾಗುತ್ತಲೇ ಇವೆ. ದುಷ್ಟ ಕ್ರೂರ ಶಕ್ತಿಗಳು ಆ ಕಾರ್ಯತತ್ಪರವಾಗಿ ಲೋಕಕ್ಷೋಭೆಯನ್ನುಂಟುಮಾಡುತ್ತಿರುವಾಗ ಸಾತ್ವಿಕ ದಯಾಭರಿತಶಕ್ತಿಗಳು ಆ ದುರಾಗ್ರಹ ಶಕ್ತಿಗಳನ್ನು ತಡೆದು ಲೋಕಶಾಂತಿಗಾಗಿ ಹೋರಾಡುವವು. ತಾತ್ಕಾಲಿಕವಾಗಿ ಸಾತ್ವಿಕ ಶಕ್ತಿಗಳಿಗೆ ಜಯಲಾಭ ದೊರಕದಾದರೂ, ಕೊನೆಯಲ್ಲಿ ಶಾಶ್ವತ ಜಯಸಿದ್ಧಿ ಈ ಶಕ್ತಿಗಳಿಗೇ. ಈ ಜಯಸಾಧನೆಗಾಗಿ ಧೃಢಸಂಕಲ್ಪದೊಡನೆ ಮುನ್ನುಗ್ಗಿ, ಬಂದ ಎಡರುತೊಡರುಗಳಿಗೆ ಎದೆಗೊಟ್ಟು ನಿಲ್ಲುವ ವೀರರೇ ಲೋಕವಿಖ್ಯಾತರಾದ ಮಹಾಪುರುಷರು.

ಮಹಾಪುರುಷರನ್ನು ನಾವು ಕಾಣುತ್ತಿರುವುದು ಬರಿಯ ರಾಜಕೀಯ ಕ್ಷೇತ್ರಗಳಲ್ಲೇ ಅಲ್ಲ; ಕೇವಲ ಸ್ವಾತಂತ್ರ್ಯಸಂಗ್ರಾಮದ ಆಂದೋಲನವಲ್ಲಿಯೇ ಅಲ್ಲ; ಜನಜೀವನದ ಅವಿದ್ಯೆ, ಅನಾರೋಗ್ಯ, ಅಜ್ಞಾನಗಳನ್ನು ನಿವಾರಿಸುವಲ್ಲಿ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಜೀವನವನ್ನು ಉನ್ನತಿಗೇರಿಸುವಲ್ಲಿ, ವಾಙ್ಮಯ, ಕಲಾ, ಸಂಸ್ಕೃತಿಸಂಪತ್ತಿನ ಉದ್ಧಾರಮಾರ್ಗವನ್ನು ಪರಿಷ್ಕಾರಗೊಳಿಸುವಲ್ಲಿ, ವಿಶ್ವಶಾಂತಿಗೆ ಮೂಲಾಧಾರವೆನಿಸಿದ ಸಾಮೂಹಿಕ ಸಾಮರಸ್ಯ, ಸಮಭಾವಗಳು ಸರ್ವತ್ರ ವ್ಯಾಪಿಸುವಂತೆ ಸಂಯೋಜಿಸುವಲ್ಲಿ, ಸಂಕ್ಷೇಪತಃ, ಸರ್ವರೀತಿಯಿಂದಲೂ ಮಾನವಕೋಟಿಯು ನಾನಾ ಕಷ್ಟಕ್ಲೇಶಗಳು ಬೇಸಬೇಸರಿಕೆಗಳು ದೂರವಾಗಿ ಜನತೆ ಸುಖ ಸಂತೋಷ ನಿರ್ಭೀತಿನಿಶ್ಚಿಂತೆಗಳಿಂದ ಬಾಳಿಬದುಕುವ ಈ ಬೆಳದಿಂಗಳಂಥ ಸನ್ನಿವೇಶವನ್ನು ಕಲ್ಪಿಸುವಲ್ಲಿ ಕಂಕಣಬದ್ಧರಾದವರು ಯಾರೋ ಅವರೂ ಮಹಾಪುರುಷರೇ.

ಮಹಾಪುರುಷರಲ್ಲಿ ನಾವು ಮುಖ್ಯವಾಗಿ ಕಾಣುವ ಗುಣಗಳೂ ಅವರ ಕಣ್ಣುಗಳೂ ಎರಡು—ತ್ಯಾಗ, ಸೇವೆ. ಈ ತ್ಯಾಗಸೇವೆಗಳ ಕಾರ್ಯ ಹೆಚ್ಚಿದಷ್ಟೂ ಅವುಗಳ ಕರ್ಮಕ್ಷೇತ್ರ ವಿಸ್ತಾರವಾಗುತ್ತ ಹೋದಷ್ಟೂ ಆ ಮಹಾಪುರುಷರ ಬಾಳ್ವೆಯ ಹೊಳಪು ಹೆಚ್ಚುವುದು; ಇದು ತ್ಯಾಗದ ಯುಗ; ಸೇವೆಯ ಶಕೆ. ಜನತೆಯ ಮೇಲ್ಮೆಗಾಗಿ ತ್ಯಾಗ ಬೇಕಾಗಿದೆ; ಜನತೆಯ ಏಳಿಗೆಗಾಗಿ ಸೇವೆ ಅಗತ್ಯ. ಆವೆರಡು ವ್ರತಗಳನ್ನೂ ಪ್ರಾಮಾಣಿಕಬುದ್ಧಿಯಿಂದ ಕೈಕೊಂಡವರಿಂದಲೇ ದೇಶದ ಕಲ್ಯಾಣ; ನಾಡಿನ ಕೀರ್ತಿ. ಅಂಥ ತ್ಯಾಗಶೀಲರೂ ಸೇವಾತತ್ಪರರೂ ದೇಶದಲ್ಲಿ ಇದ್ದಾರೆ. ತ್ಯಾಗ ಮತ್ತು ಸೇವೆಗಳೇ ತಮ್ಮ ಜೀವದ ಉಸಿರೆಂದು ತಿಳಿದಿರುವ ಅವರು ತಮ್ಮ ಕರ್ತವ್ಯಸಾಧನೆಯಲ್ಲಿ ತೊಡಗಿದ್ದಾರೆ. ಸರ್ವ ಕಾರ್ಯಕ್ಷೇತ್ರಗಳಲ್ಲಿಯೂ ಸರ್ವತೋಮುಖವಾಗಿ ಮುಂದುವರಿದು ಎಲ್ಲ ಬಗೆಯ ನೆಮ್ಮದಿಯ ಸುಖಜೀವನದ ಉನ್ನತಿಯನ್ನು ಉಂಟುಮಾಡಲಿಕ್ಕಾಗಿ ಅವರು ತಪಸ್ವಿಗಳಂತೆ ದೀಕ್ಷಿತರಾಗಿದ್ದಾರೆ. ಅಂಥವರಲ್ಲಿ, ತ್ಯಾಗಸೇವೆಗಳ ಸುಖದ ಸಾಧನೆಯಲ್ಲಿ ಮಾತ್ರವೇ ನಾಡಿನ ಸೌಭಾಗ್ಯ ಸಾಧ್ಯವೆಂದು ಖಚಿತ ಮಾಡಿಕೊಂಡವರಲ್ಲಿ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರೊಬ್ಬರು.

ಸಮಾಜದಲ್ಲಿ ಪ್ರತಿಯೊಬ್ಬರ ಹಕ್ಕಾದ ಆ ಸುಖ ಆ ಸಂತೋಷ ಕೆಲವರ ಪಾಲಿಗಿದ್ದು ಹಲವರಿಗಿಲ್ಲದಾಗ ಅದರಿಂದ ಅಶಾಂತಿ ಅತೃಪ್ತಿ ಒಳಗೂ ಹೊರಗೂ ಕೆರಳುತ್ತಿರುವಾಗ ಕೆಲವರು ಅಷ್ಟೈಶ್ವರ್ಯದ ರಾಶಿಯಲ್ಲಿ ಹೊರಳಿ ಹಲವರು ಕಡು ಬಡತನದಿಂದ ನರಳುತ್ತಿರುವಾಗ ಆಗ, ಹಣವಂತರು ಬಡತನವನ್ನು ನೀಗಿಸುವಲ್ಲಿ, ಅಜ್ಞಾನವನ್ನು ತೊಲಗಿಸುವಲ್ಲಿ ತ್ಯಾಗದೀಕ್ಷೆ ವಹಿಸಬೇಕು, ಉದಾರಿಗಳಾಗಬೇಕು, ಸೇವಾಧರ್ಮವನ್ನು ಆಚರಿಸಬೇಕು—ಆ ಸ್ಫೂರ್ತಿ, ಆ ಉತ್ಸಾಹ, ಆ ಪ್ರೇರಣೆ ಅವರಲ್ಲಿ ಉಂಟಾಗಬೇಕು. ಇದೇ ದೊಡ್ಡವರ ಬಲ್ಲ

ವರ ಉಪದೇಶ. ಈ ಉಪದೇಶವನ್ನು ತಮ್ಮ ಜೀವನದ ಪ್ರತಿಯೊಂದು ರಂಗದಲ್ಲಿಯೂ ಅನುಷ್ಠಾನಕ್ಕೆ ತಂದುಕೊಂಡು ಕೃತಾರ್ಥರಾದವರು, ತಾವೂ ಹಾಗೇ ಮಹಾಪುರುಷರ ಸಾಲಿಗೆ ಸೇರತಕ್ಕವರೆಂದು ಪ್ರತ್ಯಕ್ಷ ನಿದರ್ಶನಗಳಿಂದ ತೋರಿಸಿಕೊಟ್ಟವರು ನಮ್ಮ ನಾಡಿನ ತ್ಯಾಗಸೇವೆಗಳ ಉಜ್ವಲ ಜೀವಜ್ಯೋತಿಯಾದ ಶ್ರೀಮಾನ್ ಹೆಗ್ಗಡೆಯವರು.

ಶ್ರೀಮಾನ್ ಧರ್ಮಸ್ಥಳದ ಹೆಗ್ಗಡೆಯವರೆಂದರೆ–ಅದೊಂದು ಮನೆಯ ಮಾತು; ಅವರ ನೇತೃತ್ವಕ್ಕೊಳಪಟ್ಟ ಶ್ರೀ ಧರ್ಮಸ್ಥಳ ಕ್ಷೇತ್ರವೆಂದರೆ,–ಮಹಾರಾಜರಿಂದ ಹಿಡಿದು ತಿರುಕನ ವರೆಗಿನ ಎಲ್ಲರೂ ಬಂದು ಹೋಗುವ, ಬಡವ ಬಲ್ಲಿದ ಆ ಜಾತಿ ಈ ಜಾತಿ ಎಂಬ ಭೇದವರಿಯದ, ಎಲ್ಲರನ್ನೂ ಸಮದೃಷ್ಟಿಯಿಂದ ಕಾಣುವ ಒಂದು ದೊಡ್ಡ ಪವಿತ್ರ ಯಾತ್ರಾಸ್ಥಳ. ಇದನ್ನು ನೋಡದವರಿಗೆ ಜನ್ಮದಲ್ಲೊಮ್ಮೆಯಾದರೂ ನೋಡಬೇಕೆನ್ನಿಸುವ, ಒಮ್ಮೆ ನೋಡಿದವರಿಗೆ ಇನ್ನೊಮ್ಮೆ ನೋಡಬೇಕೆನ್ನಿಸುವ ಆತುರ, ಹಂಬಲಗಳನ್ನು ಉಂಟುಮಾಡುವ ಮಹಾಮಹಿಮೆ ಈ ಕ್ಷೇತ್ರದ್ದು. ಆ ಸೊಬಗಿನ ಸೃಷ್ಟಿಸೌಂದರ್ಯದ ರಾಶಿಯ ನಡುವೆ ಭಕ್ತವೃಂದದ ಸರ್ವಾಭೀಷ್ಟಗಳನ್ನು ಸಲ್ಲಿಸುವ ಶ್ರೀ ಮಂಜುನಾಥಸ್ವಾಮಿ ತನ್ನ ಕಲಾಸಾನ್ನಿಧ್ಯವನ್ನು ಬೀರುತ್ತ ಕುಳಿತಿದ್ದಾನೆ. ಆ ಸ್ವಾಮಿಯ ಕೈಂಕರ್ಯವನ್ನು ವಹಿಸಿ ಅಂತರ್ಯದ ಪ್ರೇರಣೆಯ ಯಾವುದೋ ಒಂದು ಅಗೋಚರ ದಿವ್ಯಶಕ್ತಿಯ ಪ್ರಭಾವಕ್ಕೆ ಕಟ್ಟುಬಿದ್ದವರಂತೆ, ಸ್ವಾಮಿಯ ಸನ್ನಿಧಿಯಲ್ಲಿ ಸ್ವಾಮಿಗಾಗಿ ಶ್ರೀಮಾನ್ ಹೆಗ್ಗಡೆಯವರು ನುಡಿಯುತ್ತಿದ್ದಾರೆ; ನಡೆಯುತ್ತಿದ್ದಾರೆ. ಜನರು ತಮ್ಮ ಕಷ್ಟನಿಷ್ಠುರಗಳಿಗೆ ತಕ್ಕ ನಿವೃತ್ತಿ ಪಡೆದು, ಹರಿಕೆ ಸಲ್ಲಿಸಿ ಕೃತಕೃತ್ಯರಾಗುತಿದ್ದಾರೆ. ಅಲ್ಲಿನ ಧಾರ್ಮಿಕ ಪ್ರಭುತ್ವದ ಶಿಸ್ತು ವ್ಯವಸ್ಥೆಗಳ ರೀತಿ ಗಾಂಭೀರ್ಯಗಳು ಕ್ರಮಬದ್ಧವಾದ ಒಂದು ರಾಜಪ್ರಭುತ್ವದ ಒಂದು ಸರಕಾರದ ಗೌರವ ಪ್ರತಿಷ್ಠೆಗಳ ಲಕ್ಷಣಗಳನ್ನೇ ಸ್ಮರಣೆಗೆ ತಂದುಕೊಡುತ್ತಿವೆ. ಬಂದವರಿಗೆ ಉಳಿಯಲು ಛತ್ರ; ಮಂದಿರ; ಉಚಿತವಾದ ಊಟ ಉಪಚಾರ; ಉಚಿತವಾದ ಚಿಕಿತ್ಸೆ; ಕ್ಷೇತ್ರದಲ್ಲಿ ನಿರ್ಮಲವಾದ ನಲ್ಲಿಯ ನೀರು; ಶುಭ್ರವಾದ ವಿದ್ಯುಚ್ಛಕ್ತಿಯ ದೀಪ; ಜ್ಞಾನಪ್ರಸಾರಕ್ಕೆ ರೇಡಿಯೋ; ವಿಹಾರಕ್ಕೆ ರಮ್ಯವಾದ ಉದ್ಯಾನವನ; ಪ್ರೇಕ್ಷಣೀಯ ಭವನವೆನ್ನಿಸಿ ಶ್ರೀಮಾನ್ ಹೆಗ್ಗಡೆಯವರ ಅರಮನೆ–ಇವೆಲ್ಲ ದರ್ಶಕರಲ್ಲಿ ಮಹದಾನಂದವನ್ನೂ ಕೌತುಕವನ್ನೂ ಉಂಟುಮಾಡಿ, ಕ್ಷೇತ್ರಪಾಲಕರಾದ ಶ್ರೀಮಾನ್ ಹೆಗ್ಗಡೆಯವರ ಕಾರ್ಯದಕ್ಷತೆ, ಧರ್ಮಬುದ್ಧಿ, ಕರ್ತವ್ಯನಿಷ್ಠೆ, ಜನಹಿತಶ್ರದ್ಧೆ, ಅತಿಥಿಸೇವೆಸತ್ಕಾರಗಳದೊಂದು ಹೊಸ ಲೋಕದಲ್ಲಿಯೇ ಅವರನ್ನು ಸುತ್ತಾಡಿಸುತ್ತಿದೆ!

ಧಾರ್ಮಿಕ ವಿಚಾರದಲ್ಲಿ ಧರ್ಮಸ್ಥಳದ ಇತಿಹಾಸದಲ್ಲೇ ಹಿಂದೆಂದೂ ಕಾಣದ ಒಂದು ಹೊಸ ಅಧ್ಯಾಯ ಶ್ರೀಮಾನ್ ಹೆಗ್ಗಡೆಯವರಿಂದ ತೆರೆಯಲ್ಪಟ್ಟಿದೆ. ವಿಶ್ವದ ಎಲ್ಲ ಧರ್ಮಗಳಲ್ಲಿಯೂ ಸಾಮರಸ್ಯವಿರುವುದು, ಒಂದು ಧರ್ಮದವರು ಇನ್ನೊಂದು ಧರ್ಮದವರ ತಿರುಳನ್ನು ತಿಳಿದು, ಪರಮತಸಹಿಷ್ಣುತೆಯ ಪ್ರಜ್ಞೆಯನ್ನು ತಳೆಯುವುದು ದೇಶದ ಶಾಂತಿ, ನಾಡಿನ ನೆಮ್ಮದಿ, ಜನತೆಯ ಜೀವನಸುಖಕ್ಕೆ ಇಂದು ಅತ್ಯಗತ್ಯವಾಗಿದೆ. ಹಿಂದೆ ಒಂದು ಧರ್ಮದವರು ಇನ್ನೊಂದು ಧರ್ಮದವರ ಮೇಲೆ, ತಮ್ಮ ಮತಪ್ರಚಾರಕ್ಕಾಗಿ ಕತ್ತಿ ಕಟ್ಟಿ ಕಾದಾಡಿದ್ದಾರೆ; ಮಡಿದಿದ್ದಾರೆ; ಈಗಲೂ ಅಲ್ಲಲ್ಲಿ ದೊಂಬಿ, ಅಲ್ಲಲ್ಲಿ ಹೊಡೆದಾಟಗಳೂ, ಜಾತಿಮತಗಳ ಹೆಸರಲ್ಲಿ ನಡೆದು ಹಾನಿಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ; ಕೇಳುತ್ತಿದ್ದೇವೆ. ಇವೆಲ್ಲ ಪರಧರ್ಮವನ್ನು ಸಹಿಸಲಾರದ ಅದನ್ನು ದ್ವೇಷಿಸುವ ಸ್ವಮತಾಂಧರಾದ ಮೂಢರ ಪಾಡು. ಈ ಸ್ಥಿತಿ ಸರ್ವಪ್ರಕಾರದಿಂದಲೂ ತಪ್ಪಬೇಕು; ದೇಶವನ್ನು ಇಂಥ ಅಪಾಯದಿಂದ ತಪ್ಪಿಸಬೇಕು. ಕಷ್ಟದಲ್ಲಿ ಚಿತ್ತಶಾಂತಿಯನ್ನು ಉಂಟುಮಾಡುವುದೂ ಪೌರುಷ ಪ್ರಯತ್ನಗಳಿಗೆ ನಾನಾ ಮಾರ್ಗಗಳನ್ನು ತೋರಿಸಿ ಕೊಡುವುದೂ ಇವು ಎಲ್ಲ ಮತಗಳ ಸಾರ; ಅವುಗಳ ಸಂಪತ್ತು; ಅವುಗಳ ವೈಭವ, ವೈಖರಿ. ಇದಕ್ಕೆ ರೂಪುಗೊಟ್ಟಿದ್ದಾರೆ ಶ್ರೀಮಾನ್ ಹೆಗ್ಗಡೆಯವರು. ಪ್ರತಿ ವರ್ಷವೂ ಧರ್ಮಸ್ಥಳದಲ್ಲಿ ಜರಗುತ್ತಿರುವ ಕಾರ್ತಿಕ ದೀಪೋತ್ಸವದ ಕಾಲದಲ್ಲಿ, 'ಸರ್ವಧರ್ಮಸಮ್ಮೇಳನ'ದ ಅಧಿವೇಶಗಳನ್ನು ಜರುಗಿಸುವ ಮಹತ್ಕಾರ್ಯದ ಉಪಕ್ರಮ ಮಾಡಿದ್ದಾರೆ ಅವರು. "ಸರ್ವಧರ್ಮಸಮನ್ವಯ"ವೇ ಮುಕ್ತಿ ಮಾರ್ಗ, ಇದೇ ಲೌಕಿಕ ಸುಖದ ಹಾದಿ ಎಂಬ ಜ್ಞಾನಪ್ರಸಾದ ಆ ಉತ್ಸವಕ್ಕೆ ನೆರೆಯುವ ಸಾವಿರಾರು ಮಂದಿ ಜನಸಾಮಾನ್ಯಕ್ಕೂ ದೊರೆಯುವಂತೆ, ಲೋಕದಲ್ಲಿ ದೈವಭಕ್ತಿ, ಆಸ್ತಿಕ

ಭಾವ ಅಳಿಯದೆ ಉಳಿದು ಬೆಳೆದು ವೃದ್ಧಿಗೊಳ್ಳುವಂತೆ ಈ ಮಹಾಮೇಳದಲ್ಲಿ—ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಜೈನ, ಬೌದ್ಧ, ಇಸ್ಲಾಂ, ಕೈಸ್ತ ಮೊದಲಾದ ಸರ್ವ ಮತಗಳ ಉದಾತ್ತತತ್ವಗಳೂ ತಮ್ಮ ತಮ್ಮ ಮಂಜುಳ ವೀಣಾಧ್ವನಿಯನ್ನು ಬೆರಸಿ ಆ ಸಮುದಾಯ ಸಂಗೀತದ ರಸಮಾಧುರ್ಯವನ್ನು ಹೆಚ್ಚಿಸುವಂತೆ, ಮಾನವ ಕೋಟಿಯ ಬಾಳು ಹಸನಾಗಿ ಬೆಳಗುವಂತೆ, ಶ್ರೀಮಾನ್ ಹೆಗ್ಗಡೆಯವರು, ನಾಡಿನ ಎಲ್ಲ ಕಡೆಗಳಿಂದ ವಿದ್ವಾಂಸರನ್ನು ಈ ಸಮ್ಮೇಳನಕ್ಕೆ ಕರೆಸಿಕೊಂಡು, ಅವರ ಹಿತೋಪದೇಶದ ಮೂಲಕ, ಧರ್ಮಜಾಗ್ರತಿ, ಜನಜಾಗ್ರತಿಯನ್ನು ಉಂಟುಮಾಡುತ್ತಿದ್ದಾರೆ. ಇಂಥ ಜ್ಞಾನದಾನದ ವ್ರತವನ್ನು ಹಿಡಿದವರು, ನಮ್ಮ ನಾಡಿನಲ್ಲಿ, ನಮ್ಮ ದೇಶದಲ್ಲಿ, ಇಡಿಯ ಪ್ರಪಂಚದಲ್ಲೇ ವಿರಳ. ವಿಶ್ವಪ್ರೇಮ, ವಿಶ್ವಬಾಂಧವ್ಯದ ಗೊಣಸನ್ನು ಬಿಗಿ ಮಾಡಲು ಶ್ರೀಮಾನ್ ಹೆಗ್ಗಡೆಯವರು ದೇಶಕ್ಕೆ ಸಲ್ಲಿಸುತ್ತಿರುವ ಸೇವೆ ಇದು ಮಹೋನ್ನತವಾದುದು; ಬಹು ದ್ರವ್ಯ ಬಹು ಶ್ರಮಸಾಧ್ಯವಾದ ಈ ಧಾರ್ಮಿಕ ಯಾಗದ ಅವರ ತ್ಯಾಗಬುದ್ಧಿ ಇತರ ಧರ್ಮಸಂಸ್ಥೆಗಳಿಗೂ ಅನುಕರಣೀಯವೂ ಆದರ್ಶಪ್ರಾಯವೂ ಆದುದು. ಈ ಹೊಸ ಬದುಕನ್ನು ಗಳಿಸಿಕೊಟ್ಟ ಅಮೃತ ಕೀರ್ತಿ ಅವರದು; ಅವರದೇ.

ಹಿಂದೊಂದು ಕಾಲವಿತ್ತೆನ್ನಿ. ಆ ಕಾಲದಲ್ಲಿ ಸಮಾಜದ ಕಾರ್ಯಗಳೆಲ್ಲ ಸುಸೂತ್ರವಾಗಿ ನಡೆಯಬೇಕಿದ್ದರೆ, ಮನುಷ್ಯ ಕಲಿತ ವಿದ್ಯೆ, ಪಡೆದ ಅನುಭವ ಅಲ್ಪವಿದ್ದರೆ ಸಾಕಿತ್ತು. ಆದರೆ ಕಾಲ ವಿದ್ಯಮಾನಗಳು ಬದಲಾಯಿಸಿವೆ. ನಮ್ಮ ಮುಂದೆ ಜಟಿಲ ಪ್ರಶ್ನೆಗಳು ಉದ್ಭವಿಸಿ ಉನ್ನತವಾಗಿ ಎದ್ದು ನಿಂತಿವೆ. ಹೊಸ ಅಗತ್ಯಗಳಿಂದ ಹೊಸ ಹೊಣೆಗಾರಿಕೆ ನಮ್ಮ ಮೇಲೆ ಬಿದ್ದಿದೆ. ಹೊಸ ಹೊಣೆಗಾರಿಕೆಗಾಗಿ ನಾವು ಹೊಸ ಜೀವನ ದೊಡ್ಡ ಜೀವನ ನಡೆಸಬೇಕಾಗಿದೆ. ಇದಕ್ಕಾಗಿ ಜನ ಹೆಚ್ಚು ವಿದ್ಯೆ, ಹೆಚ್ಚು ಅನುಭವ ಪಡೆಯಬೇಕಾಗಿದೆ. ಇದನ್ನು ಅರಿತೇ ಶ್ರೀಮಾನ್ ಹೆಗ್ಗಡೆಯವರು ಆ ದಾರಿಯಲ್ಲಿ ಮುನ್ನಡೆದು, ಬಹು ದೂರ ಮುಂದಕ್ಕೆ ಹೋಗಿದ್ದಾರೆ. ಜನಸಾಮಾನ್ಯವು, ಅದರಲ್ಲಿಯೂ ಹಳ್ಳಿಗಾಡಿನವರು ತಮ್ಮ ಕುಂದುಕೊರತೆಗಳನ್ನೂ ಅಜ್ಞಾನವನ್ನೂ ನೀಗಿ, ನಾಡಿನ ಬಯಕೆಗಳನ್ನೂ ಆವಶ್ಯಕತೆಗಳನ್ನೂ ಈಡೇರಿಸಿಕೊಳ್ಳುವ ಆಸಕ್ತಿಯ ಬೀಜವನ್ನು ಅವರ ನಡುವೆ ಬಿತ್ತುವಲ್ಲಿ ಯಶಸ್ವಿಗಳಾಗಿದ್ದಾರೆ. ಜನತೆಯಲ್ಲಿ ವಿದ್ಯಾರ್ಜನೆಗಾಗಿ ಯಾವ ಹೊಸ ಹುರುಪು, ಹೊಸ ಶಕ್ತಿಯನ್ನು ತುಂಬಬೇಕೋ ಅವನ್ನೆಲ್ಲ ತುಂಬಿದ್ದಾರೆ. ಅವಕಾಶವಿದ್ದಷ್ಟೆಲ್ಲ ಮನಸ್ಸು ಇದ್ದಷ್ಟೆಲ್ಲ ಕೆಲಸ ಮಾಡಲು ಸಾಧ್ಯವಾಗದೆ ಹೋಗಿರಬಹುದಾದರೂ, ಮಾಡುವ ಕೆಲಸಗಳೆಷ್ಟೋ ಇನ್ನೂ ಉಳಿದಿರಬಹುದಾದರೂ, ಮಾಡಿದಷ್ಟು ಕೆಲಸಕ್ಕೆ ಶ್ರೀಮಾನ್ ಹೆಗ್ಗಡೆಯವರಿಗೆ ಸಲ್ಲಬೇಕಾದ ಪ್ರಶಂಸೆ ಕೀರ್ತಿ ದೊಡ್ಡದು. ಪ್ರಾಚೀನ ಗುರುಕುಲ ಪದ್ಧತಿಯ, ಪೂರ್ವಪರಂಪರಾಗತವಾದ ಸಂಸ್ಕೃತಿಯ ಮೇಲ್ಪಂಕ್ತಿಯನ್ನು ಅನುಸರಿಸಿ, ವಿವಿಧ ಶಿಕ್ಷಣ ವಿಷಯಗಳೊಡನೆ ನಾನಾ ಭಾಷಾವ್ಯಾಸಂಗ, ಧರ್ಮ ಕಲೆ ಕೈಗಾರಿಕೆಗಳ ವ್ಯಾಸಂಗದ ಆ ಪಾಠಪ್ರವಚನಗಳ ಬೋಧನೆಯ 'ಶ್ರೀ ಸಿದ್ಧವನ'ವ ಆಶ್ರಮವನ್ನು ಸ್ವತಂತ್ರವಾಗಿ ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಉಚಿತ ನಿಲಯ, ಉಚಿತ ಅಶನ, ಉಚಿತ ವಸನ, ಉಚಿತ ಪುಸ್ತಕಗಳ ವ್ಯವಸ್ಥೆಯಿಂದ ತಮ್ಮ ವಿದ್ಯಾಪಕ್ಷಪಾತವನ್ನು ಅವರು ತೋರಿದ್ದಾರೆ. ಬಡತನದ ಈ ದೇಶದ ಅದರಲ್ಲಿಯೂ ಗ್ರಾಮಾಂತರಗಳವರ ಅಜ್ಞಾನದ ಕಳೆಯನ್ನು ಕಿತ್ತೊಗೆದು, ಸುಜ್ಞಾನದ ಬೆಳಕನ್ನು ಹೊತ್ತಿಸಿ ನಮ್ಮ ಮಕ್ಕಳು ರಾಷ್ಟ್ರಕ್ಕೆ ನಾಡಿಗೆ ಉಪಕಾರಿಗಳಾಗಿ ಬಾಳುವಂತೆ ಮಾಡಿದ್ದಾರೆ; ಉಜಿರೆಯ ಕರ್ಣಾಟಕ ವಿದ್ಯಾಲಯದ (ಹ್ಯಾಸ್ಕೂಲಿನ) ಸ್ಥಾಪನೆಯ ಕಾರ್ಯದಲ್ಲಿ ತಾನೊಬ್ಬ ನೇತೃವಾಗಿ, ದಾತೃವಾಗಿ ಉದಾರವಾದ ಧನದಾನ, ಭೂದಾನ ಮಾಡಿದ್ದಲ್ಲದೆ, ವಿದ್ಯಾರ್ಥಿ ಭವನವೊಂದನ್ನು, ಸುಮಾರು ೪೦ ಸಹಸ್ರ ರೂಪಾಯಿಗಳ ವೆಚ್ಚದಿಂದ, ಅಪ್ರಾರ್ಥಿತರಾಗಿಯೇ ಕಟ್ಟಿಸಿ ಕೊಟ್ಟಿದ್ದಾರೆ. ನಿರಕ್ಷರಕುಕ್ಷಿಗಳಾದ ಮಲೆನಾಡಿನ ಬಹು ಮಂದಿಯ ಜ್ಞಾನಾರ್ಜನೆ, ಉದ್ಯೋಗ, ವೃತ್ತಿಗಳ ಅವಲಂಬನಕ್ಕಾಗಿ, ಮಲೆನಾಡಿಗೆ ಹಿಡಿದ ಅವಿದ್ಯೆಯ ಗ್ರಹಣ ಬಿಡುಗಡೆ ಹೊಂದಲಿಕ್ಕಾಗಿ, ವಿದ್ಯುಚ್ಛಕ್ತಿನ ಪಂಜಿನಂತೆ ವಿದ್ಯಾಪ್ರೇಮದಿಂದ ಶ್ರೀಮಾನ್ ಹೆಗ್ಗಡೆಯವರು ಮಾಡಿದೆ ತ್ಯಾಗ, ತೋರಿದ ಔದಾರ್ಯ ಚಿರಸ್ಮರಣೀಯವಾದದ್ದು; ಬಹು ಘನತರವಾದದ್ದು.

ಶ್ರೀಮಾನ್ ಹೆಗ್ಗಡೆಯವರ ಸಾರ್ವಜನಿಕವಾದ ಚಟುವಟಿಕೆಗಳು ಬಹುಮುಖವಾದುವು. ಮದ್ರಾಸ್ ಕೌನ್ಸಿಲಿನ ಸದಸ್ಯರಾಗಿ ಅವರು ಕೆಲಸ ನಡೆಸಿದರು;

ಹಳ್ಳಿಯ ಬಾಳಿನಲ್ಲಿ ಮಾಧುರ್ಯವನ್ನು ತುಂಬಿದರು; ಮಲೆನಾಡಿನ ಅವನತಿಗೆ ಕಾರಣವಾದ ಮಲೇರಿಯಾ ಜ್ವರದ ನಿವಾರಣೆಯ ಕಾರ್ಯದಲ್ಲಿ ಸೊಂಟಕಟ್ಟಿ ಇಳಿದು ಮುಂದೊತ್ತಿದರು; ಕೋರ್ಟಿಗೆ ಹೋಗಿ ಖರ್ಚಿಗೆ ಮನ ಸ್ತಾಪಕ್ಕೆ ಕಾರಣವಾಗುವ ವ್ಯಾಜ್ಯ ವ್ಯವಹಾರಗಳನ್ನು ವರ್ಷಕ್ಕೆ ಸುಮಾರು ೧,೨೦೦ರಷ್ಟನ್ನು ತಾನೇ ಪಂಚಾಯಿತಿ ಮೂಲವಾದ ತೀರ್ಮಾನದಿಂದ ತೀರಿಸಿಕೊಟ್ಟರು. ಅಲ್ಲಲ್ಲಿ ಬಾವಿ ಕೆರೆಗಳನ್ನು ಅಗೆಯಿಸಿ, ಕ್ಷೇತ್ರಕ್ಕಾಗಿ ಹೊಸ ಸೇತುವೆ, ಹೊಸ ಕಟ್ಟಡಗಳನ್ನು ಕಟ್ಟಿಸಿ, ಹಳೆಯ ಕಟ್ಟೋಣಗಳನ್ನು ದುರುಸ್ತಿ ಮಾಡಿಸಿ, ಹೊಸ ತೋಟಗಳನ್ನಿಡಿಸಿ, ಕೃಷಿಕಾರ್ಯವನ್ನು ಪ್ರೋತ್ಸಾಹಿಸಿ ಹಲವಾರು ಮಂದಿ ನಿರುದ್ಯೋಗಿಗಳಿಗೆ ಕೆಲಸ ಒದಗಿಸುವ ಮೂಲಕ ಅವರಿಗೊಂದು ಜೀವನೋಪಾಯವನ್ನು ಕಲ್ಪಿಸಿ ಕೊಟ್ಟರು; ಕೈಲಾದ ಮಟ್ಟಿಗೆ ಆ ನಿರುದ್ಯೋಗಿಗಳ ಕುಟುಂಬಕ್ಕೆ ಅನ್ನದಾತರಾದರು; ಅಷ್ಟು ಮಟ್ಟಿಗೆ ಬಡತನವನ್ನು ಇಂಗಿಸಿದರು. ಹಲವು ಸಭೆಗಳಲ್ಲಿ ಅಧ್ಯಕ್ಷತೆ ವಹಿಸಿ ಉದಾರದೃಷ್ಟಿಯ ಸಲಹೆ ಅಭಿಪ್ರಾಯಗಳನ್ನಿತ್ತು ಪರಸ್ಪರ ಮೈತ್ರಿಯ, ಸಹಾನುಭೂತಿಯ ವಾತಾವರಣವನ್ನು ಉಂಟು ಮಾಡಿದರು. ಒಟ್ಟು ಶ್ರೀಮಾನ್ ಹೆಗ್ಗಡೆಯವರ ದೇವರ ಸೇವೆ, ದೇಶ ಸೇವೆ, ಸಮಾಜ ಸೇವೆ, ಅವರು ಅದಕ್ಕಾಗಿ ಮಾಡಿರುವ ತ್ಯಾಗ ಇವು ಸ್ವರ್ಣಾಕ್ಷರಗಳಿಂದ ಬರೆದಿಡಲು ಕೊರೆದಿಡಲು ಅರ್ಹವೆನಿಸಿವೆ.

ಇಂದು ಕನ್ನಡ ನುಡಿ ಶ್ರೀಮಾನ್ ಹೆಗ್ಗಡೆಯವರಿಗೆ ತನ್ನ ಕೃತಜ್ಞತೆಯನ್ನು ಸಮರ್ಪಿಸಬೇಕಾಗಿದೆ. ಕನ್ನಡ ಜನತೆಗಾಗಿ ಕನ್ನಡ, ಕನ್ನಡ ಜನರ ಬದುಕಿಗೆ ಕನ್ನಡ ಸಾಹಿತ್ಯ–ಎಂಬುದವರ ಉಚ್ಚ ಜೀವನಾದರ್ಶ. ಕನ್ನಡ ಈ ಹೊತ್ತು ಸುಮಾರು ಎರಡು ಕೋಟಿ ಪ್ರಜಾವರ್ಗದಲ್ಲಿ ಜೀವಂತವಾಗಿರುವ ಭಾಷೆ, ಅವರ ಬದುಕಿನ ಭಾಷೆ. ಅವರ ನಿತ್ಯವ್ಯವಹಾರ, ಜ್ಞಾನಾರ್ಜನೆ, ಸಂಪತ್ಸಾಧನೆ,–ಮೊದಲಾದುವೇನಿದ್ದರೂ ಅವೆಲ್ಲ ಆಗಬೇಕು ಕನ್ನಡದ ಮೂಲಕ. ಕನ್ನಡ ಭಾಷೆಯ ಶ್ರೇಯಸ್ಸೇ ಕನ್ನಡ ಜನತೆಯ ಶ್ರೇಯಸ್ಸು. ಈ ಶ್ರೇಯಸ್ಸಿನ ಸಾಧನೆಗಾಗಿ, ಶ್ರೀಮಾನ್ ಹೆಗ್ಗಡೆಯವರು, ಧರ್ಮಸ್ಥಳದ "ವಿವಿಧಧರ್ಮಸಮ್ಮೇಳನ"ದ ಕಾಲದಲ್ಲೊಂದು ದಿನ ಈ ಕನ್ನಡ ನುಡಿ ಸೇವೆಗಾಗಿ ವಿಾಸಲಿರಿಸುವ ಭಾಷಾಭಿಮಾನವನ್ನು ಪ್ರಕಟಿಸಿದ್ದಾರೆ. ಅವರ ಕನ್ನಡ ಜೀವನದ ಸಾರ್ಥಿಕ್ಯತೆ, ಕಾಸರಗೋಡಿನ "ಸಾಹಿತ್ಯ ಸಮ್ಮೇಳನ"ದ ಸ್ವಾಗತಾಧ್ಯಕ್ಷಸ್ಥಾನದ ಸಮರ್ಥಕಾರ್ಯನಿರ್ವಾಹದಿಂದ ಕನ್ನಡ ನಾಡಿಗೇ ವಿದಿತವಾಗಿದೆ. ಕನ್ನಡಿಗರಲ್ಲಿ ಇವರು ಕನ್ನಡಿಗರೆಂಬುದಕ್ಕೆ ಇವರ ಸೂತ್ರಧಾರತ್ವಕ್ಕೊಳಪಟ್ಟ ಉಜಿರೆಯ 'ಕರ್ನಾಟಕ ವಿದ್ಯಾಲಯ'ವೊಂದು ಸಜೀವ ಸಾಕ್ಷಿ.

ಚಿತ್ರ ಬಿಡಿಸುವಲ್ಲಿ ಶ್ರೀಮಾನ್ ಹೆಗ್ಗಡೆಯವರಿಗೆ ಒಲಿದಿರುವ ಆ ಭಾವನಾಸೃಷ್ಟಿಕೌಶಲ, ರಸಪುಷ್ಟಿಯ ನೈಪುಣ್ಯ ಅನನ್ಯಸಾಧಾರಣವಾದುದು. ಶ್ರೀ ಕ್ಷೇತ್ರದ ದಾರಿಯುದ್ದಕ್ಕೆ, ಅಕ್ಕಪಕ್ಕಗಳಲ್ಲಿ ನೆಳಲ ಹೊಂಬಿಸಲ ಬಣ್ಣದಿಂದ ನಳಿನಳಿಸಿ ಕಳೆಗೂಡಿ ರಮಣೀಯವಾಗಿ ರಂಜಿಸುವ ಆ ನೈಸರ್ಗಿಕಲಾವಣ್ಯದ ದೃಶ್ಯಾವಳಿಗಳನ್ನು ಕಲಾಪೂರ್ಣವಾದ ಕಣ್ಣುಗಳಿಂದ ಕಂಡು, ಕಲಾಪೂರ್ಣಹೃದಯದಿಂದ ಅದರ ಮರ್ಮವನ್ನು ಗ್ರಹಿಸಿ ಸಾರವನ್ನು ಹೀರಿ, ಹಾಗೆ ಆ ಸಹಜಸ್ಫೂರ್ತಿ ತಳೆದ ಮಲೆನಾಡಿನ ಕಲಾಕುಮಾರ, ತನ್ನ ಮುದ್ದಿನ ಮಡಿಲ ಮಗು ಶ್ರೀಮಾನ್ ಹೆಗ್ಗಡೆಯವರೇ ಎಂಬಂತೆ ಪ್ರಕೃತಿ ದೇವಿ ಅವರಿಗೆ ಈ ಚಿತ್ರಕಲಾವಿದ್ಯೆಯ ಸಿದ್ಧಹಸ್ತದ ವರವನ್ನು ಆಶೀರ್ವಾದಪೂರ್ವಕವಾಗಿ ಅನುಗ್ರಹಿಸಿರಬೇಕು! ಅವರು ಬರೆದಿರುವ ಅನೇಕ ಭವ್ಯ ಸುಂದರ ಚಿತ್ರಗಳು ಆ ಊಹನೆಯನ್ನು ಅಹುದೆನ್ನಿಸುತ್ತಿವೆ.

ಶ್ರೀಮಾನ್ ಹೆಗ್ಗಡೆಯವರದು ದೊಡ್ಡ ಜೀವನ; ತುಂಬು ಜೀವನ; ಸರಳ ಜೀವನ. ಅವರ ನಯ ವಿನಯ, ಶೀಲಸೌಜನ್ಯಗಳು ಅವರ ಜೀವನವನ್ನು ಇನ್ನಷ್ಟು ದೊಡ್ಡದಾಗಿ ಮಾಡಿವೆ. ಅವರ ಸೂತ್ರನಿಷ್ಠೆ, ಕರ್ಮನಿಷ್ಠೆ, ಮುಹೂರ್ತನೇಮ, ಸಂಪ್ರದಾಯಪಾಲನೆ, ಲೌಕಿಕದಕ್ಷತೆ, ವ್ರತಜೀವನ ಇವು ಅವರೊಡನೆ ಬಂದ ಗುಣಗಳು. ಅವರ ಸಹವಾಸ, ಅವರ ಸಂಭಾಷಣೆ ಸತ್ಯದರ್ಶನಪ್ರಮಾಣಿಕತೆಗಳ ಮಾರ್ಗದಲ್ಲೊಂದೆರಡು ದೀಪ. ಅವರ ಆತ್ಮಪ್ರಭಾವ, ಆತ್ಮತೇಜಸ್ಸು, ಆತ್ಮಸಂಯಮನ ಅಪೂರ್ವವಾದದ್ದು; ಅವರ ಗ್ರಹಣಶಕ್ತಿ, ವ್ಯಾಸಂಗಶ್ರದ್ಧೆ, ಜಿಜ್ಞಾಸೆಯ ಕುತೂಹಲ, ತಾರತಮ್ಯವರಿಯುವ ಸಾಮರ್ಥ್ಯ— ಇವನ್ನು ಅವರು ಕೊಟ್ಟರುಂಟು. ಇವರ ಸಮ್ಮುಖ

ದಲ್ಲಿ ಮೂಕ ಮಾತಾಡ ಬಯಸುತ್ತಾನೆ; ಕೆಪ್ಪ ಕೇಳಲಿಚ್ಛಿಸುತ್ತಾನೆ; ಕುರುಡ ನೋಡಲೆಳಸುತ್ತಾನೆ. ಅವರ ಸ್ನೇಹದ ಕಣ್ಣು, ಸಹಾನುಭೂತಿಯ ಮುಗುಳ್ನಗು, ಅಭಿಮಾನದ ಹೃದಯ, ಮಾನಮರ್ಯಾದೆಯ ಅಂಗಭಾವ, ಆರಿಸಿ ತೂಗಿ ಆಡುವ ಮೃದುಮಧುರ ನುಡಿ ಇವು ಬಹು ಜನರ ಪರೋಪಕಾರ ಕಾರ್ಯಗಳಿಗೆ, ತ್ಯಾಗಕ್ಕೆ, ಸೇವೆಗೆ ಪ್ರೇರಣೆ ಕೊಟ್ಟಿವೆ. ಲೌಕಿಕ ಪಾರಮಾರ್ಥಿಕ ಪ್ರಪಂಚಗಳ ಮುಂದಾಳಾಗಿ ಪುರೋಹಿತರಾಗಿ, ಜನ ಸುಸಂಘಟನೆಯಿಂದ ಒಮ್ಮನಸ್ಸಿನಿಂದ ಬಾಳುವಂತೆ ಶ್ರೀಮಾನ್ ಹೆಗ್ಗಡೆಯವರು ಕಲಿಸಿ ಕೊಟ್ಟೂ ಕೊಡುತ್ತಲೂ ಇರುವ ಕೋಮಲನಿರ್ಮಲಾಂತಃಕರಣದ ಲೋಕಶಿಕ್ಷಣದ ಮಾನವಪ್ರೇಮದ ಪಾಠವನ್ನು ಯಾರೂ ಎಂದಿಗೂ ಮರೆಯತಕ್ಕುದಲ್ಲ.

ಶ್ರೀಮಾನ್ ಹೆಗ್ಗಡೆಯವರಿಗೀಗ ಅರುವತ್ತು ತುಂಬಿದೆ. ಪದಾರ್ಥಗಳ ಕೊರತೆಯಿಂದ ಧಾರಣೆ ವಾಸಿ ನಾಲ್ಕು ಪಾಲು ಏರಬಹುದಾದರೆ, ಮಹಾಪುರುಷರ ಕೊರತೆ ಇರುವಾಗ ಈ ಮಹಾನುಭಾವರಿಗೂ ಅವರ ಆಯುಷ್ಯವೃದ್ಧಿ, ಬಲವೃದ್ಧಿ ನಾಲ್ಕು ಪಾಲಷ್ಟು ಏಕೆ ಬೆಳೆಯಬಾರದೆಂದು ಜನ ತರ್ಕಿಸುತ್ತಿದೆ. ಶ್ರೀಮಾನ್ ಹೆಗ್ಗಡೆಯವರು ನಿಜವಾಗಿಯೂ ನಾಡಿಗಾಗಿ, ನುಡಿಗಾಗಿ, ಜನಕ್ಕಾಗಿ, ಜನಹಿತಕ್ಕಾಗಿ ಬಹು ಕಾಲ ಬದುಕಬೇಕು. ವಿದ್ಯೆ, ಆರೋಗ್ಯ, ಕೃಷಿಕರ್ಮ ಅವು ತಮಗಾಗಿ ಅವರು ಬಹು ಕಾಲ ಬದುಕಬೇಕೆನ್ನುತ್ತಿವೆ. ಧರ್ಮದೇವತೆಗೆ ಅವರು ಬೇಕು; ಧರ್ಮಕ್ಕೆ ಅವರು ಬೇಕು; ತ್ಯಾಗಕ್ಕೆ ಅವರು ಬೇಕು; ಸೇವೆಗೆ ಅವರು ಬೇಕು! ಊರಿಗೊಬ್ಬ ಅರಸರಂತೆ ಈ ಕಲ್ಪವೃಕ್ಷದ ಆಶ್ರಯವನ್ನು ಔದಾರ್ಯವನ್ನು ನಂಬಿಕೊಂಡು ಬಂದವರೂ ಹಲವರು—ಕವಿಗಳು, ಲೇಖಕರು, ವಿದ್ವಾಂಸರು, ಶಾಸ್ತ್ರಪಾರಂಗತರು, ಗಮಕಿಗಳು, ವಾಗ್ವಿಶಾರದರು, ಭಾಷಣಕಾರರು, ಸಂಗೀತಜ್ಞರು, ನಟರು, ನರ್ತಕರು, ಚಿತ್ರಕಲಾವಿದರು, ಶಿಲ್ಪವಿದ್ಯಾನಿಪುಣರು—ಅವರೆಲ್ಲರಿಗೂ ಇವರು ಬೇಕು; ಅವರೆಲ್ಲ ಶ್ರೀಮಾನ್ ಹೆಗ್ಗಡೆಯವರು ಚಿರಕಾಲ ಬಾಳಲೆಂದು ಭಗವಂತನಲ್ಲಿ ಸಂತತವೂ ಪ್ರಾರ್ಥಿಸುವವರೇ; ಅವರೊಡನೆ ಇತರರೂ ಸ್ವಯಂ ಪ್ರೇರಿತರಾಗಿ ತಮ್ಮ ಕಂಠವನ್ನೂ ಸೇರಿಸುವವರೇ. ಆದುದರಿಂದ ಸಾವಿರಾರು ಮಂದಿಯ ಬದುಕಿಗಾಗಿ, ಬಿದ್ದವರನ್ನು ಹಿಡಿದೆತ್ತುವ ಶ್ರೀಮಾನ್ ಹೆಗ್ಗಡೆಯವರನ್ನು ಅವರ ಅಮೃತಹಸ್ತವನ್ನು ಸಹಸ್ರಕಾಲ ಉಳಿಸೆಂದು ಸಾವಿರಾರು ಮಂದಿ ದೈನ್ಯದಿಂದ ಏಕಮನ ಏಕಕಂಠದಿಂದ, ಭಕ್ತಿಪುರಸ್ಸರವಾಗಿ ಮಾಡಿಕೊಳ್ಳುವ ಈ ಪ್ರಾರ್ಥನೆಯನ್ನು, ಭಕ್ತವತ್ಸಲನಾದ ಜಗದೀಶ್ವರನಾದರೂ ಮನ್ನಿಸದೆ ಇದ್ದಾನೇ?

ಆ ಮನ್ನಣೆಯ ಪ್ರಸನ್ನಧ್ವನಿ ದಶದಿಕ್ಕುಗಳಲ್ಲಿ ಮೊಳಗಲಿ; ಶ್ರೀಮಾನ್ ಹೆಗ್ಗಡೆಯವರ ಗುರುತನದ ಹಿರಿತನದ ಸಂದೇಶ ನಾಡನ್ನು ಬೆಳಗಲಿ; ಅವರು ಚಿರಂಜೀವಿಗಳಾಗಿ ತಮ್ಮ ತ್ಯಾಗಸೇವೆಯ ಭಾಗ್ಯವನ್ನು ಜನತೆಗುಣ್ಣಿಸಲಿ—ತಥಾಸ್ತು!

ಶ್ರೀ ಮೂರ್ತಿಪೂಜೆಯ ಮಹತ್ವ ಮತ್ತು ರಹಸ್ಯ

ಪಂಡಿತ ಚೇಮನಹಳ್ಳಿ ರಘುನಾಥಾಚಾರ್ಯ—ಉಪನಿಷದ್ರತ್ನಾಕರ, ಜ್ಞಾನಗುಣಾಕರ,
ವಿದ್ಯಾರ್ಣವ, ತತ್ವಚಿಂತಾಮಣಿ, ವೇದಾಂತವಿಶಾರದ,
ವಾಙ್ಮಯಮಹೋದಧಿ ಇತ್ಯಾದಿ.

ಶ್ರೀಶಂ ಸದ್ಗುಣನಿರ್ದೋಷಂ ಹಯಾಸ್ಯಂ
ಬೋಧಮೋದದಂ ।
ನಮ್ಯಂ ಸದ್‍ಜ್ಞಾನವೈರಾಗ್ಯ ಭಕ್ತಿಗಮ್ಯಂ ನಮಾಮ್ಯಹಂ ॥
ಶ್ರೀರಾಮಂ ಹನುಮತ್ಸೇವ್ಯಂ ಶ್ರೀಕೃಷ್ಣಂ ಭೀಮಸೇವಿತಂ ।
ಶ್ರೀವ್ಯಾಸಂ ಶ್ರೀಮದಾನಂದ ತೀರ್ಥಸಂಸೇವಿತಂ ಭಜೇ ॥

"ಸುಖಮೇವಮೇಸ್ಯಾದ್ದುಃಖಮನಾಗಪಿಮಾಭೂತ್" ನನಗೆ ಸದಾಸುಖವೇ ಆಗಲಿ, ದುಃಖಲವಲೇಶವಾಗ ಬಾರದೆಂದು ಸರ್ವರೂ ಅಪೇಕ್ಷಿಸುತ್ತಾರೆ. ಇಂಥಾ ಶಾಶ್ವತವಾದ ಮೋಕ್ಷಾಖ್ಯಸುಖವು ಲಭಿಸಬೇಕಾದರೆ ಭಗವದಪರೋಕ್ಷದಿಂದ ಪರಮಾತ್ಮನ ಪ್ರಸಾದ ದೊರೆಯಲು ಈ ಪ್ರಪಂಚದಲ್ಲಿ ವಿವಿಧ ಸಾಂಸಾರಿಕ ದುಃಖಾನುಭವದಿಂದ ವೈರಾಗ್ಯವನ್ನು ಹೊಂದಿ ಭಗವನ್ನಿಷ್ಠಬುದ್ಧಿಯಿಂದ ಶಾಂತನೂ, ಇಂದ್ರಿಯನಿಗ್ರಹವುಳ್ಳವನೂ ಆದ ಮುಮುಕ್ಷುವು, ನಿತ್ಯಾನಿತ್ಯವಸ್ತುವಿವೇಕದಿಂದ ಅನಿತ್ಯವಸ್ತುಗಳಾದ ದಾರಾ, ಪತ್ಯ, ಧನಾದಿಗಳಲ್ಲಿ ಕ್ರಮಕ್ರಮವಾಗಿ ಮೋಹಮಮತೆಗಳನ್ನು ಬಿಡುತ್ತಾ, ಪುತ್ರ, ಮಿತ್ರ ಕಳತ್ರಾದಿ ಸರ್ವ ವಸ್ತುಗಳಲ್ಲೂ ಆದರಪ್ರೀತಿಗಳನ್ನುಂಟುಮಾಡಿ ಸುಖಪ್ರದನಾಗಿ, ಅವೆಲ್ಲದರಕ್ಕಿಂತಲೂ ಅತ್ಯಂತ ಪ್ರಿಯತಮನೂ, ಪ್ರೇಷ್ಟಪ್ರೇಷ್ಟತಮನೂ ಎಂದು ಪ್ರಸಿದ್ಧನಾದ, ಜ್ಞಾನಿಗಳಿಂದ ಉಪಾಸ್ಯನೂ, ಜ್ಞೇಯನೂ, ಪ್ರಾಪ್ಯನೂ, ಸರ್ವಸದ್ಗುಣಪೂರ್ಣನೂ, ಸಮಸ್ತದೋಷದೂರನೂ, ಸಕಲಾನಿಷ್ಟಗಳನ್ನೂ ಪರಿಹರಿಸಿ ಪರಮಾನಂದಾವಾಪ್ತಿರೂಪಮೋಕ್ಷಪ್ರದನೂ ಆದ ಸಕಲ ಜೀವಜಡಾತ್ಮಕಪ್ರಪಂಚದ ದೆಶೆಯಿಂದ ಪರಮಾರ್ಥತಃ ಅತ್ಯಂತ ಭಿನ್ನನೂ, ವಿಲಕ್ಷಣನೂ, ಸ್ವತಂತ್ರನೂ, ಅಚಿಂತ್ಯಾದ್ಭುತಶಕ್ತಿಮಂತನೂ, ಆದ ಭಗವಂತನ ಮಹಿಮೆಗಳನ್ನು ಪ್ರತಿಪಾದಿಸುವ ವೇದ, ಉಪನಿಷತ್ತು, ವೇದಾಂತಗಳೆನಿಸಿರುವ, ಪೌರುಷೇಯ ಮತ್ತು ಅಪೌರುಷೇಯ ಗ್ರಂಥಗಳಲ್ಲಿ ಪುರಾಣೇತಿಹಾಸ ಶ್ರುತಿಸ್ಮೃತಿಶಾಸ್ತ್ರಗಳಲ್ಲಿ ಹೇಳಿರುವ ಮೇರೆಗೆ ವಿಹಿತ ಕರ್ಮಾನುಷ್ಠಾನ, ನಿಷಿದ್ಧಕರ್ಮತ್ಯಾಗ, ಸದ್ಗುರ್ವನುಗ್ರಹಸಂಪಾದನೆಯಿಂದ ಶ್ರವಣ, ಮನನ, ನಿದಿಧ್ಯಾಸನ ಭಗವದಪರೋಕ್ಷ, ಜ್ಞಾನಸಂಪಾದನೆ, ಭಗವತ್ಪೂಜೆ, ಭಾಗವತರ ಸೇವಾದಿ ಉತ್ತಮಸಾಧನೆಗಳನ್ನೂ ಆಚರಿಸಿ ಸಂಸಾರಬಂಧನದಿಂದ ಮುಕ್ತನಾಗಿ. ಎಂದರೆ "ಬಂಧಕೋಭವಪಾಶೇನ ಭವಪಾಶಾಚ್ಚ ಮೋಚಕಃ" ಭವಪಾಶದಲ್ಲಿ ಬಂಧಿತನಾಗಿ ಈಶ್ವರೇಚ್ಛೆಯಿಂದಲೇ ಕರ್ಮನಿಮಿತ್ತಕ ಸಂಸಾರಬಂಧನಿವೃತ್ತಿಯನ್ನು ಪಡೆದು ಸ್ವಸ್ವರೂಪಭೂತವಾದ ಶಾಶ್ವತಸುಖವನ್ನೂ, ಮೌಕ್ತಿಕಾನಂದವನ್ನೂ, ಹೊಂದಲು ಭಗವಂತನ ಪೂಜೆಯನ್ನೂ ಸದಾ ಮಾಡಬೇಕು.

ತತ್ರಾಪಿಜನ್ಮಶತಕೋಟೀಷು ಮಾನುಷತ್ವಂ ।
ತತ್ರಾಪಿಜನ್ಮಶತಕೋಟಿಷು ಬ್ರಾಹ್ಮಣತ್ವಂ ॥
ತತ್ರಾಪಿಜನ್ಮಶತಕೋಟಿಷು ವೈಷ್ಣವತ್ವಂ ।
ತತ್ರಾಪಿಜನ್ಮಶತಕೋಟಿಷು ಮತ್ಪರತ್ವಂ ॥

ಎಂದು ಅನೇಕ ಶತಜನ್ಮಕೋಟಿಗಳು ಕಳೆದರೆ ಮನುಷ್ಯನಾಗಿಯೂ, ನಂತರ ಬ್ರಹ್ಮಜನ್ಮಗಳು ಕಳೆದರೆ ಬ್ರಹ್ಮಜ್ಞಾನಿಯಾಗಿಯೂ, ಪುನಃ ಕೋಟ್ಯಾನುಕೋಟಿ ಜನ್ಮಗಳನ್ನು ಪಡೆದು ವಿಷ್ಣುಭಕ್ತನೂ ವೈಷ್ಣವನೂ ಆಗಿ ಅನಂತಾಸಂಖ್ಯಾಕ ಜನ್ಮಗಳಲ್ಲಿ ಭಗವದಾರಾಧನೆಯನ್ನು ಮಾಡಿ ಪರಮಾತ್ಮನ ಏಕಾಂತಭಕ್ತನೂ ಆಗಿ ಸಾಧನಾಧಿಕ್ಯದಿಂದ ಮುಕ್ತನಾಗುವನೆಂದೂ ಹೇಳಿದೆ. ಈ ವಿಷಯಗಳೆಲ್ಲವನ್ನೂ "ಕರ್ಮರಹಸ್ಯ" ಮತ್ತು "ವೈಷ್ಣವದೀಕ್ಷೆ" ಎಂಬ ಗ್ರಂಥಗಳಲ್ಲಿ ಸವಿಸ್ತಾರವಾಗಿ ನಿರೂಪಿಸಿರುತ್ತೇವೆ. ಅಲ್ಲಿ ನೋಡಬಹುದು.

ಪ್ರಕೃತ ಬ್ರಹ್ಮಸೃಷ್ಟಿಯ ೮೪ ಲಕ್ಷ ಜೀವರಾಶಿಯಲ್ಲಿ ಮಾನವಜನ್ಮವು ಬಹಳ ಉತ್ಕೃಷ್ಟವಾದುದೆಂದು ಅನೇಕ ಪ್ರಕಾರವಾಗಿ ಜ್ಞಾನಿಗಳು ವರ್ಣಿಸಿರುತ್ತಾರೆ. ದೈವಾನುಗ್ರಹದಿಂದಲೇ ಈ ಮನುಷ್ಯತ್ವವೂ, ಸತ್ಸಹವಾಸವೂ, ಮುಮುಕ್ಷುತ್ವವೂ ಲಭಿಸತಕ್ಕವು. ಇವು ಸುಖಪ್ರವೃತ್ತಿಗೆ ಮುಖ್ಯ ಸಾಧಕಗಳು. ಈ ಸುಖ ದುಃಖಗಳು ಮನುಷ್ಯನ ಪುಣ್ಯಪಾಪಕರ್ಮಾಚರಣೆಗಳಿಂದ ಅನುಭವಕ್ಕೆ ಬರುವುವು—ಪುಣ್ಯದ ಫಲವು

ಸುಖವು—ದುಃಖವು ಪಾಪದ ಫಲವು. ವೇದೋಕ್ತವಾದ ವಿಹಿತ ಕರ್ಮಾಚರಣೆಯಿಂದ ಸುಖವೂ, ತದ್ವಿರುದ್ಧವಾದ ಅಧರ್ಮಾಚರಣೆಯಿಂದ ದುಃಖದ ಅನುಭವವೂ ಉಂಟಾಗುವುದು. "ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ" ಮನುಷ್ಯನು ಪುಣ್ಯಕರ್ಮಾಚರಣೆಯಲ್ಲಿ ಆಸಕ್ತನಾಗದೆ ಸುಖವನ್ನು ಬಯಸುತ್ತಾನೆ. ಪುಣ್ಯಫಲವಾದ ಸುಖ, ಆನಂದಗಳನ್ನು ಅಪೇಕ್ಷಿಸುತ್ತಾನೆಯೇ ಹೊರತು ಪುಣ್ಯಪ್ರದವಾದ ಕಾರ್ಯದಲ್ಲಿ ಸರ್ವಥಾ ಆಸಕ್ತನಾಗುವುದಿಲ್ಲ. ಇದರಂತೆಯೇ ದುಃಖವನ್ನೂ ಬೇಡವೆನ್ನುತ್ತಾನೆ. ಆದರೆ ದುಃಖಪ್ರದವಾದ ಪಾಪಕರ್ಮಗಳಲ್ಲಿಯೇ ನಿರತನಾಗಿರುತ್ತಾನೆ. ಅಗ ಬೇಡವೆಂದರೂ ದುಃಖವು ತಾನಾಗಿಯೇ ಒಂದಲ್ಲ ಮತ್ತೊಂದು ವಿಧದಲ್ಲಿ, ಯಾವುದಾದರೊಂದು ಬಗೆಯಲ್ಲಿ ಅನುಭವಕ್ಕೆ ಬರುತ್ತದೆ. ಆಗಲೂ ಎಚ್ಚೆತ್ತು ಕೃತದುಷ್ಕರ್ಮಪಶ್ಚಾತ್ತಾಪವನ್ನು ಹೊಂದಿ ಸತ್ಕಾರ್ಯಗಳಲ್ಲಿ ನಿರತನಾಗಿ ದುಃಖವಿಮೋಚನೆಯೊಡನೆ ಸುಖವನ್ನು ಹೊಂದಬಹುದಾದರೂ, ಇವನ ಬಹು ಕಾಲದ ಪಾಪಸಂಬಂಧವು ಇವನಿಗೆ ಸದ್ಬುದ್ಧಿಯನ್ನು ಪ್ರೇರಿಸುವುದಿಲ್ಲ. ಸತ್ಸಹವಾಸದಲ್ಲಿದ್ದು, ಸದಾಚಾರನಿರತನಾಗಿ ಸತ್ಕರ್ಮಾಚರಣೆಮಾಡುವ ಯೋಗವು ದೊರೆಯಬೇಕಾದರೆ ಸರ್ವಸ್ವತಂತ್ರನೂ, ಸದ್ಗುಣಪೂರ್ಣನೂ, ಪ್ರಭುವೂ ಆದ ಪರಮಾತ್ಮನ ಅನುಗ್ರಹವು ಬೇಕು. ಆದುದರಿಂದ ಲೋಕಕಲ್ಯಾಣವನ್ನು ಬಯಸುವ ಪ್ರತಿಯೊಬ್ಬ ಮನುಷ್ಯನೂ ಸುಖಶಾಂತಿಗಳಿಂದ ಬದುಕಬೇಕಾದರೆ ಜಗದೀಶನ ಕೃಪೆಯನ್ನು ಸಂಪಾದಿಸಲು ನಿಯಮರೀತಿಯಿಂದ ಪರಮಾತ್ಮನನ್ನು ಆರಾಧಿಸಬೇಕು.

ದೇವರ ಪೂಜೆಯು ಆತ್ಮಾರ್ಥಪರಾರ್ಥಗಳೆಂದು ದ್ವಿವಿಧವಾಗಿ ಐಹಿಕಾಮುಷ್ಮಿಕ ಫಲಗಳನ್ನು ಕೊಡುವುದು. ಇಂಥಾ ಭಗವಂತನ ಪೂಜೆ ಮತ್ತು ಉಪಾಸನೆಯ ವಿಧಿವಿಧಾನಗಳಿಂದ ಕೂಡಿದ ಶಾಸ್ತ್ರಸಮೂಹವು ಭಗವನ್ಮುಖೋದ್ಗೀತವಾಗಿ ವಿಷ್ಣು, ಬ್ರಹ್ಮ, ಶಿವಾದಿಗಳಿಂದ ಉಪದಿಷ್ಟವಾಗಿ, ದೇವತೆಗಳ, ಋಷಿಗಳ ಪರಂಪರೆಯಾಗಿ ಬಂದು, ಪಾಂಚರಾತ್ರಾಗನು, ತಂತ್ರಸಾರ ವಿಧಿಶೈವಾಗಮ ವೈಖಾನಸಾಗಮವೆಂಬುದಾಗಿ ಪ್ರಸಿದ್ಧಗಳಾಗಿವೆ. ಇವುಗಳಿಗೆ ಆಗಮುಗಳೆಂದು ಹೆಸರು. ಅಕಾರಃ ಸರ್ವವೇದಾರ್ಥಃ ಗಕಾರೋ ಭುವನತ್ರಯಂ ಮಕಾರೋ ಮಂತ್ರಮೂರ್ತಿಶ್ಚ ತಸ್ಮಾದಾಗಮ ಇಷ್ಯತೇ ಎಂದು ಹೇಳಿದೆ. ಈ ಆಗಮಶಾಸ್ತ್ರವು ಶಿವ, ಕೇಶವಾದಿ ದೇವತೋಪಾಸನೆಯ ಅನುಷ್ಠಾನಭೇದವುಳ್ಳದ್ದಾಗಿ ಆಚರಣೆಗೆ ಬಂದಿದೆ. ಪಾಂಚರಾತ್ರಾಗಮವು ಅಷ್ಟೋತ್ತರ ಶತ (೧೦೮) ಸಂಹಿತಾರೂಪವಾಗಿಯೂ, ತಂತ್ರಸಾರವು ವಿಷ್ಣುವು ಸರ್ಗಾದಿಯಲ್ಲಿ ಬ್ರಹ್ಮನಿಗೆ ಉಪದೇಶಿಸಿದ್ದಾಗಿಯೂ "ವಿಷ್ಣುನಾ ಬ್ರಹ್ಮಣೇ ಪ್ರೋಕ್ತಂ" ಎಂದೂ ತಂತ್ರಸಾರ ಗ್ರಂಥದಲ್ಲೂ, ಶೈವಾಗಮದಲ್ಲಿ 'ಕಾಮಿಕಾ'ಗಮವನ್ನು ಪ್ರಾರಂಭಿಸಿ 'ಪಾತಾಳಾಗಮ'ದವರೆವಿಗೆ ೨೮ ಮೂಲಸಂಹಿತೆಗಳೂ, ಅನೇಕ ಉಪಸಂಹಿತೆಗಳೂ ಉಳ್ಳದ್ದೆಂದೂ, ವೈಖಾನಸಾಗಮವು ಒಂದೇ ಆದರೂ ಭೃಗು, ಅತ್ರಿ, ಮರೀಚಿ, ಕಶ್ಯಪರಿಗೆ ಉಪದೇಶಿಸಲ್ಪಟ್ಟು ಅವರಿಂದ ಅನುಷ್ಠಿತಗಳಾಗಿ ನಾಲ್ಕೂ ವಿಧವಾಗಿ ರೂಢಿಯಲ್ಲಿ ಬಂತೆಂದೂ ಪ್ರಸಿದ್ಧಿಯಲ್ಲಿದೆ.

ಭಗವಂತನು ಭೂಮಿಯಲ್ಲಿ ಅರ್ಚಾರೂಪದಿಂದ ಅವತರಿಸಲು ತನ್ನನ್ನು ಪೂಜಿಸುವ ವೇದಮಂತ್ರಗಳಿಂದ ಕೂಡಿದ ಆರಾಧನಾಶಾಸ್ತ್ರವನ್ನು ತನ್ನಿಂದ ಸೃಷ್ಟಿಸಲ್ಪಟ್ಟ ಚತುರ್ಭುಜವುಳ್ಳ ಸತ್ವಮಯನಾದ, ಶುಭರೂಪಲಕ್ಷಣಗಳಿಂದ ಕೂಡಿದ 'ವಿಖನಸ'ರೆಂಬ ಮುನಿಶ್ರೇಷ್ಠರಿಗೆ ಉಪದೇಶಿಸಿ ಮಹರ್ಷಿಪರಂಪರೆಯಿಂದ ಪ್ರಸಿದ್ಧಿಗೆ ಬಂದುದೇ, ವೈಖಾನಸಾಗಮವು. ಇದರಲ್ಲಿರುವ ವೇದಪ್ರಾಚುರ್ಯದಿಂದಲೇ ಇದಕ್ಕೆ ಆಗಮವೆಂದು ಹೆಸರು.

ಇವುಗಳಲ್ಲಿ ವೇದಗಳಂತೆ ನಿತ್ಯ, ನೈಮಿತ್ತಿಕ, ಕಾಮ್ಯಗಳೆಂಬ ಭೇದಗಳಿವೆ. ಜ್ಞಾನಯೋಗ, ಕ್ರಿಯಾಚರ್ಯಗಳೆಂಬ ನಾಲ್ಕು ಪಾದಗಳಾಗಿ ವಿಭಾಗಿಸಲ್ಪಟ್ಟಿವೆ. "ಹಯಗ್ರೀವಾದಿಮಾ ವಿದ್ಯಾಃ ಶ್ವಸಿತತ್ವೇನ ನಿಃ ಸೃತಾಃ" ಎಂಬಂತೆ ಹಯಗ್ರೀವರೂಪಿಯಾದ ಪರಮಾತ್ಮನ ಮುಖದಿಂದ ವೇದರಾಶಿಯು ಹೇಗೆ ಶ್ವಾಸೋಚ್ಛ್ವಾಸರೂಪವಾಗಿ ನಿಸೃತವಾಗಿವೆಯೋ ಹಾಗೆಯೇ ಆಗಮಗಳೂ ಭಗವನ್ಮುಖೋಲ್ಲಾಸದಿಂದ ಹೊರಬಿದ್ದು ಮಂತ್ರತಂತ್ರಾತ್ಮಕರಹಸ್ಯವಿಚಾರಗಳಿಂದ ಪೂರ್ಣವಾದ ಶಾಸ್ತ್ರಸಮೂಹವಾಗಿರುವುದು.

ಕೃತ, ತ್ರೇತಾ, ದ್ವಾಪರಯುಗಗಳಂತೆ ಸಹಸ್ರಾರು ವರ್ಷಗಳ ಕಾಲ ಜೀವಿಸಿದ್ದು ತಪಸ್ಸನ್ನು ಮಾಡಿ ಯಜ್ಞ, ಯಾಗ, ಪೂಜೆ, ಧ್ಯಾನಾದಿಗಳನ್ನು ಆಚರಿಸಲು ಭಗವತ್ಸಾಕ್ಷಾತ್ಕಾರವನ್ನು ಪಡೆಯಲು 'ಕಲಾವನ್ನ ಗತ

ಪ್ರಾಣಾಃ' . ಎಂಬಂತೆ ಅನ್ನಗತಪ್ರಾಣಗಳಾದ ಕಲಿಯುಗದ ಜನರಿಗೆ ಸಾಧ್ಯವಿಲ್ಲವಾದುದರಿಂದ ಇದನ್ನರಿತ ಭಗವಂತನು ಅಲ್ಪಾಯುಸ್ಸುಳ್ಳ ಸಜ್ಜನರ ಉದ್ಧಾರಕ್ಕಾಗಿ ಸುಲಭವಾದ ಮಾರ್ಗವನ್ನು ಕಂಡುಹಿಡಿದು ಸಹಸ್ರಾರು ವರ್ಷದ ತಪಸ್ಸಿನಿಂದ ಪಡೆಯಬಹುದಾದ ದೈವಾನುಗ್ರಹವನ್ನು ಸ್ವಲ್ಪ ಕಾಲದ ಉಪಾಸನೆಯಿಂದಲೇ ಹೊಂದಬಹುದೆಂದು ದೇವತೆಗಳಿಗೂ ಮಹರ್ಷಿಗಳಿಗೂ ತಿಳಿದು ಹೇಳಿದನು. ಇಂಥಾ ಉಪಾಸನೆಗೆ ಆಶ್ರಯವಾದ ಗ್ರಾಮ, ದೇವಸ್ಥಾನ, ಆಲಯ, ಮಠ, ಮಂದಿರಗಳನ್ನೂ, ತಟಾಕ, ಆರಾಮ, ಪುಷ್ಪೋದ್ಯಾನಾದಿಗಳನ್ನೂ, ವಾಸ್ತುಶಾಸ್ತ್ರವಿಧಾಯಕದಂತೆ ನಿರ್ಮಿಸುವ ಲಕ್ಷಣಗಳನ್ನೂ, ಅವುಗಳಲ್ಲಿ ದೇವರ ಮೂರ್ತಿಗಳನ್ನು ಪ್ರತಿಷ್ಠೆಮಾಡಿ ಪೂಜಿಸುವ ವಿಧಿಗಳನ್ನೂ, ಉಪದೇಶಿಸಿದನು. ಸ್ವಯಂವ್ಯಕ್ತ, ದೈವ, ಆರ್ಷ, ರಾಕ್ಷಸ, ಪೈಶಾಚ, ಮಾನುಷಾದಿಕ್ರಮಗಳಿಂದ ಪ್ರತಿಷ್ಠಿತಗಳಾದ ದೇವತಾಮೂರ್ತಿಗಳನ್ನು ಸಂಪ್ರದಾಯವನ್ನನುಸರಿಸಿ ಆಗಮೋಕ್ತರೀತಿಯಿಂದ ಪೂಜಿಸುತ್ತಾ ಬರಬೇಕೆಂದೂ ವಿಧಿಸಿದನು.

"ಆಗಮೋಕ್ತವಿಧಾನೇ ನ ಕಲೌ ದೇವಾನ್ನಜೇತ್ಸುಧೀಃ" ಇತ್ಯಾದಿ ಪ್ರಮಾಣಾನುಸಾರ ಕಲಿಯುಗದಲ್ಲಿ ಆಗಮವ್ಯತಿರಿಕ್ತವಾದ ಮಾರ್ಗಗಳಿಂದ ಭಗವದ್ಯುಪಾಸನೆ ಮಾಡುವುದು ಸಾಧ್ಯವಿಲ್ಲ–ಮಾಡಿದರೂ ಫಲವಿಲ್ಲ. ಆಗಮವನ್ನು ಉಲ್ಲಂಘಿಸಿ ಯಾವನು ಅನ್ಯಮಾರ್ಗದಲ್ಲಿ ಪ್ರವರ್ತಿಸುವನೋ ಅವನಿಗೆ ಗತಿಯಿಲ್ಲವೆಂದು ಉಕ್ತವಾಗಿದೆ. ಸರ್ವತ್ರ ವ್ಯಾಪ್ತನಾಗಿರುವ ಪರಮಾತ್ಮನು ಶಾಸ್ತ್ರೋಕ್ತ ಲಕ್ಷಣಗಳಿಂದ ನಿರ್ಮಿಸಲ್ಪಟ್ಟ ಶಿಲಾ, ಮೃತ್, ದಾರು, ಲೋಹಾಶ್ಮಕ ಮೂರ್ತಿಗಳಲ್ಲ ಆಗಮೋಕ್ತ ಪ್ರಕಾರವಾಗಿ ಪ್ರತಿಷ್ಠಿತನಾಗಿ ಪೂಜಿಸಲ್ಪಡಬೇಕು. "ಅಪ್ರತಿಷ್ಠಿತಬಿಂಬಸ್ಯ ಪೂಜನಂ ಸಿದ್ಧಹಾನಿಕೃತ್" ಎಂದಿರುವುದರಿಂದ ಪ್ರತಿಷ್ಠೆ ಇಲ್ಲದ ಮೂರ್ತಿಪೂಜೆಗೆ ಅನರ್ಥವೂ ಉಕ್ತವಾಗಿದೆ.

ಅಗ್ನೌ ಕ್ರಿಯಾವತಾಂ ವಿಷ್ಣುಃ ಯೋಗಿನಾಂ ಹೃದಯೇ ಹರಿಃ ।
ಪ್ರತಿಮಾಸ್ವಪ್ರಬುದ್ಧನಾಂ ಸರ್ವತ್ರ ವಿದಿತಾತ್ಮನಾಂ ॥

ಎಂದು ಯಜ್ಞಯಾಗಾದಿ ಕರ್ಮವನ್ನು ಮಾಡತಕ್ಕವರು ಅಗ್ನಿಯಲ್ಲಿ ವಿಷ್ಣುವನ್ನು ಪೂಜಿಸುವರೆಂದೂ ಯೋಗಿಗಳು ತಮ್ಮ ಹೃದಯದಲ್ಲಿ "ಧ್ಯಾನಾವಸ್ಥಿತತದ್ಗತೇನ ಮನಸಾ ಪಶ್ಯಂತಿಯಂ ಯೋಗಿನಃ" ಎಂಬಂತೆ ಅಪರೋಕ್ಷಕರಿಸಿಕೊಂಡು ಧ್ಯಾನಪೂಜೆ ಮಾಡುವರೆಂತಲೂ, ತದತಿರಿಕ್ತ ಅಪರೋಕ್ಷಜ್ಞಾನಶೂನ್ಯರಾದ ಅಜ್ಞರಿಗೆ ಸಾಕ್ಷಾತ್ಪೂಜೆಯು ಪ್ರತಿಮಾದಿಗಳಲ್ಲಿ ಆವಶ್ಯಕವಾದುದರಿಂದ ಭಗವಂತನು ಮೂರ್ತಿಗಳಲ್ಲಿ ಪೂಜಿಸಲ್ಪಡುವನೆಂದೂ, ನಿತ್ಯಾಪರೋಕ್ಷವುಳ್ಳವರು ಸರ್ವತ್ರ ಭಗವಂತನನ್ನೂ ಪೂಜಿಸುವರೆಂದೂ ಹೇಳಲ್ಪಟ್ಟಿದೆ.

ಪೂಜ್ಯಶ್ಚ ಭಗವಾನ್ನಿತ್ಯಂ ಚಕ್ರಾಬ್ಜಾದಿಕಮಂಡಲೇ ।
ಹೃದಯೇವಾಚಲೇವಾಪಿ ಜಲೇವಾ ಕೇವಲೇ ಸ್ಥಲೇ ॥

ಭಗವಂತನನ್ನು ಚಕ್ರಾಬ್ಜ, ಭದ್ರಕ, ಆಯಾ ದೇವತೆಗಳ ಯಂತ್ರಗಳಲ್ಲಿ ಅಗ್ನಿಸೂರ್ಯಾದಿಗಳಲ್ಲಿ, ಸಾಲಿಗ್ರಾಮ, ಲಿಂಗಾದಿ ಅಚಲಪ್ರತಿಮೆ ಅಥವಾ ದೇವಾಲಯಾದಿಗಳಲ್ಲಿರುವ ಸ್ಥಿರಪ್ರತಿಮೆ, ಅಥವಾ ಸನ್ಯಾಸಿ, ಗುರು ಮೊದಲಾದ ಚಲಪ್ರತಿಮೆಗಳಲ್ಲಿ ಅಚಲ ಪ್ರತಿಮೆಗಳೆನಿಸಿದ ಮೂರ್ತಿಗಳಲ್ಲ, ಇಂದ್ರಿಯ ನಿಗ್ರಹದಿಂದ ಕೂಡಿ ಸಮಾಹಿತಮನಸ್ಕನಾಗಿ ಪೂಜಿಸಬೇಕು ಎಂದು "ಅರ್ಚಾಯಾಂ ಸ್ಥಂಡಿಲೇ ಸೂರ್ಯೇ ಜಲೇ ವಹ್ನೌ ಗುರಾವಪಿ" ಎಂದು ಭಾಗವತದಲ್ಲಿ ಹೇಳಿದೆ. ಕೇವಲ ಭೂಮಿಯಲ್ಲಿ ಮಂಡಲವನ್ನು ಮಾಡಿ ಅದರ ಮೇಲೆ ಬೇರೊಂದು ಅಧಿಷ್ಠಾನವಿಲ್ಲದೆ ಪರಮಾತ್ಮನನ್ನು ಪೂಜಿಸುವುದು ಎಂದೂ ಉಕ್ತವಾಗಿದೆ.

ಸಾಲಿಗ್ರಾಮೇ ಮಣೌ ಯಂತ್ರೇ ಸ್ಥಂಡಿಲೇ ಪ್ರತಿಮಾಸು ಚ
ಹರೇಃ ಪೂಜಾತು ಕರ್ತವ್ಯಾ ಅಪ್ಸ್ವಗ್ನೌ ಹೃದಯೇ ರವೌ ॥

ಎಂಬ ತಂತ್ರದಲ್ಲಿ ಹೇಳಿದಂತೆ ಸಾಲಿಗ್ರಾಮ, ಮಣಿ, ಯಂತ್ರ, ಸ್ಥಂಡಿಲ (ಭೂಮಿಯಲ್ಲಿ ಮಂಡಲ) ಪ್ರತಿಮೆಗಳು, ನೀರು, ಅಗ್ನಿ, ಹೃದಯ, ಸೂರ್ಯರಲ್ಲಿ ಭಗವಂತನು ಆರಾಧಿಸಲ್ಪಡಬೇಕು. ಕೆಲವು ಆಗಮಗಳಲ್ಲಿ ಸುವರ್ಣ, ರಜತಾದಿಗಳಿಂದ ಮಾಡಿದ ಪೀಠದಲ್ಲಿ, ಚಕ್ರಾಬ್ಜಾದಿಕ ಮಂಡಲಗಳನ್ನೂ, ಆಯಾ ದೇವತಾ ಯಂತ್ರಗಳನ್ನೂ ಲೇಖನ ಮಾಡಿ, ಅದರ ಮೇಲೆ ಅಚಲ ಪ್ರತಿಮೆಯನ್ನಿಟ್ಟು ಪುಷ್ಪಾದಿಗಳಿಂದ ಪೂಜಿಸಬೇಕು ಎಂದು ಸಿದ್ಧಾಂತತಂತ್ರವೆಂಬ ಗ್ರಂಥದಲ್ಲಿ ಹೇಳಿದೆ.

The Tantric Karma Yoga wherein the mind by worship, salutation and the like becomes revitted on the Lord is accessible to all and easy to start

with. It is this kind that is known as immage worship. Here the aspirant attunes his mind to fix the existence of his beloved deity in his own heart or in a stone or in clay or in some such defined spot. To that he concentrates his attention as the Lord, and offers material worship with his offerings, humble or rich as he could acquite for the Lord blesses him not in accordance with the value of his offerings but according to the fervour of his devotion. As Geeta says—

"ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥"

He who offers to me with devotion a leaf, a flower, a fruit, or water, that I accept from him as aspirant (Striving self) offered with devotion this kind of worship is the normal aspirant the best, as it is easy and tending to the greatest goal.

Immages are of eight kinds—

"ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ।
ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾಃ ಸ್ಮೃತಾಃ ॥"

(1) ಶೈಲೀ—Made of stone—Here the figure of the Deity is beautifully cut in a slab of stone and installed in a temple for worship.

(2) ದಾರುಮಯೀ—Made of wood—Like stone image the figure of the Deity is (carved) in a piece of wood, generally of a jack tree Pipal, sandle wood etc., For Abhisheka purposes (pouring over of offerings etc.) generally a seperate stone image side by the wood image is seen set up.

(3) ಲೌಹೀ—Made of Metal—Generally Gold, Copper, brass, or their composites – Pancha-loha—Images are of two kinds movable and immovable the former to be taken out in procession, the latter installed in the temple for worship.

(4) ಲೇಪ್ಯಾ—Made of earth, sandle paste and the like. Herein also we find two classes, movable and immovable washing a certain spot with cowdung and offering worship there falls in the category.

(5) ಲೇಖ್ಯಾ—Engraved or drawn—Here also there are two classes like those above. The drawing of a lotus and the like comes under this. (Photo worship).

(6) ಸೈಕತೀ—Made of sand—The image worshipped by Sitha at Rameswar by Markandeya and others (ಸೈಕತಲಿಂಗ) are of this nature and immovable, which those worshipped by Gopikas, the cowherdesses on the banks of the Jamna on the occasion of Katyayani Festival were likewise of this sand but movable as they were daily made, worshipped and thrown away.

(7) ಮನೋಮಯೀ—Meditated upon in the mind—There is no visible form outside, but it is the mental image of the Deity that the aspirant meditated upon. Here there are no tangible articles of worship but only mental offerings as in Manasa Puja.

(8) ಮಣಿಮಯೀ-Made of gems—Here are grouped Saligramams Sivalinga and the like. Here there is carving cf the figure of the Deity. They are mainly movable but are at times immovable too.

These are the main kinds of images resorted to by the aspirant. Image worship is considered to be the one of the best aids to realisation. This worship is called Pooja, because in it there is a total resignation of the aspirant towards the Deity as that of a wife ardent and sincere worship has the effect of dissolving the bondage of nature Prakriti which the two powers of shrowing (ಆವರಣ) and manifesting (ವಿಕ್ಷೇಪ) is the real cause for the triple effect viz. Karma Sarira (ಕರ್ಮ ಶರೀರ) of the nature of ignorance, the Sookshma Sarira— subtle body (ಸೂಕ್ಷ್ಮ ಶರೀರ) and stula sarira (ಸ್ಥೂಲ ಶರೀರ) Physical body. This idol worship is enjoined, perhaps it is an easy step for the ignorant to lead their mind to the Lord, or on account of the greater facility of conception of a concrete object than an abstract idea or as demonstrating the all pervading infinite nature of the Lord. It is this Tantric Karma Marga that plays a very great part among the mass of Bharateyas (Hindus)

ಸ್ವರ್ಣಾದಿರಜತೇ ಪೀಠೇ ಪೂಜಾ ಚಕ್ರಂ ಸಮುದ್ಧರೇತ್ ॥
ತಸ್ಮಿನ್ ಸಂಸ್ಥಾಪ್ಯ ದೇವೇಶಂ ಪುಷ್ಪಾದ್ಯೈರಪ ಪೂಜಯೇತ್ ॥

ಎಂದು ಸಿದ್ಧಾಂತ ತಂತ್ರದಲ್ಲಿ ಹೇಳಿದೆ.

ಕಾಮಕ್ರೋಧಾದಿದೋಷಗಳಿಂದ ಜನಿಸಿದ ಸರ್ವದುಃಖಗಳನ್ನೂ ಹೋಗಲಾಡಿಸುವುದರಿಂದ ಯಂತ್ರವೆನ್ನುವರೆಂದೂ ಇಂಥಾ ಪೂಜೆಯಿಂದ ಭಗವಂತನು ಸುಪ್ರೀತನಾಗುವನೆಂದೂ ಗೌತಮೀ ತಂತ್ರದಲ್ಲಿ ಹೇಳಿದೆ.

ಮೊದಲು ಮಾನಸ ಪೂಜೆಯನ್ನು ಮಾಡಿ ನಂತರ ಪೀಠಪೂಜೆಯನ್ನಾಚರಿಸಿ ಪ್ರತಿಮೆಯಲ್ಲಿ ವಿಷ್ಣುಮೂರ್ತಿಯನ್ನು ಆವಾಹನೆಮಾಡಿ ಮಾಂತ್ರಿಕ (ಅರ್ಚಕ)ನು ಅಂತರಂಗಮಾನಸಿಕ ಪೂಜಾನಂತರ ತನ್ನ ಮುಂದಿರುವ ಬಹಿಃಸ್ಥಿತವಾದ ಪೀಠದೇವತಾ ಪೂಜಾ ಕಲಶಪೂಜಾ, ವಿಷ್ಣುಪ್ರತಿಮೆಯಲ್ಲಿ ಸ್ವಬಿಂಬ ಪೂಜಾವನ್ನು ಅಬ್, ಗಂಧ, ಕುಸುಮಾ (ಪುಷ್ಪ) ಮೊದಲಾದವುಗಳಿಂದ ಷೋಡಶೋಪಚಾರ ಪೂಜೆಯನ್ನು ವಿಧ್ಯುಕ್ತ ಪ್ರಕಾರವಾಗಿ ಆಚರಿಸಬೇಕು. ಹೀಗೆ ಒಟ್ಟಿನಲ್ಲಿ ಶಾಸ್ತ್ರೋಕವಿಧಾನದಿಂದ ಸಮಾಚೀನವಾದ ಲಕ್ಷಣಗಳಿಂದ ಕೂಡಿದ—

''ಲೋಹೈರ್ವಾ ಶಿಲಯಾ ದಾರ್ವಾ ಮೃದಾವಾಪಿ
ಯಥಾಕ್ರಮಂ ।

ಎಂಬ ರೀತಿ ಲೋಹ ಅಥವಾ ಶಿಲೆ, ಇಲ್ಲವೇ ದಾರು, ಅಥವಾ ಮಣ್ಣುಗಳಿಂದ ನಿರ್ಮಿಸಲ್ಪಟ್ಟ ೩೨ ಲಕ್ಷಣಗಳಿಂದ ಕೂಡಿದ ಸುಲಕ್ಷಣವಾದ—

ಶಯಾನಾಂ ವಾ ಮುಮುಕ್ಷೂಣಾಂ ವ್ಯಾಚಕ್ಷಾಣಾಂ
ನಿಜಾಂಸ್ಥಿತಿಂ ।

ಪುರುಷಪ್ರಮಾಣ, ಹಸ್ತಪ್ರಮಾಣ, ಪ್ರಾದೇಶಪ್ರಮಾಣವುಳ್ಳ "ಯೋಗ ಆಸೀನಮಥವಾ ಸ್ಥಿತಾಂ" ಎಂದರೆ, ಯೋಗಾಸನದಲ್ಲಿ ಕುಳಿತು ಯೋಗಾಭ್ಯಾಸ ಕ್ರಮವನ್ನು ಪ್ರದರ್ಶಿಸುವ ಲಕ್ಷ್ಮೀನರಸಿಂಹನಾರಾಯಣ ದಕ್ಷಿಣಾಮೂರ್ತಿ ಮೊದಲಾದ ಮೂರ್ತಿಗಳು, ಸ್ಥಿತವಾಗಿರುವ ರಾಮ, ಕೃಷ್ಣ, ವಿಠಲಾದಿ ಮೂರ್ತಿಗಳು, ಮಲಗಿರುವ ರಂಗನಾಥ, ಅನಂತಪದ್ಮನಾಭಾದಿ ವಿಗ್ರಹಗಳು, ಮುಮುಕ್ಷುಗಳಿಗೆ ತಮ್ಮ ನಿಜಸ್ಥಿತಿಯನ್ನು ಎಂದರೆ ಜ್ಞಾನಮುದ್ರೆ, ಅಭಯಮುದ್ರೆ, ವರಮುದ್ರೆಗಳನ್ನೂ ಸೂಚಿಸುವ ಹಯಗ್ರೀವ, ವೇದವ್ಯಾಸ, ವರದರಾಜ, ವೆಂಕಟೇಶಾದಿ ಪ್ರತಿಮೆಗಳನ್ನೂ ಪೂಜಿಸಬೇಕೆಂದು ಹೇಳಿದೆ.

ಶಯಾನಂ ನಾರ್ಚಯೇದ್ಗೇಹೇ ನ ಚ ಮೃದ್ದಾರು ಚಾಂ
ತಥಾ ॥

ಶಯಾನಾದಿ ಪ್ರತಿಮೆಯಂ, ಮಣ್ಣು, ದಾರುಮೊದಲಾದವುಗಳಿಂದ ನಿರ್ಮಿತ ಮೂರ್ತಿಯನ್ನು ಮನೆಯಲ್ಲಿ ಪೂಜಿಸಬಾರದೆಂದು ಉಕ್ತವಾಗಿದೆ. ಆದರೆ ಅಧಿಕಾರಿ ಭೇದದಿಂದ ರಾಜ್ಯಕಾಮಿಯಾದವನು ಮನೆಯಲ್ಲಿ ಅಶ್ವತ್ಥನಿರ್ಮಿತ ಪ್ರತಿಮೆಯನ್ನು ಪೂಜಿಸಬಹುದೆಂದೂ ವಂಶವೃದ್ಧಿಯನ್ನುಂಟುಮಾಡುವುದರಿಂದ ನ್ಯಗ್ರೋಧ ನಿರ್ಮಿತ ಮೂರ್ತಿಯನ್ನೂ ಆರಾಧಿಸಬಹುದೆಂದೂ, ಪ್ಲಕ್ಷ ಮತ್ತು ಜಂಬೀರ ನಿರ್ಮಿತ ದೇವಮೂರ್ತಿಯು ಸಮಾಚೀನ ಫಲಪ್ರದವೆಂದೂ ಅಪವಾದವು ಉಕ್ತವಾ

ಗಿದೆ. ಇವುಗಳಲ್ಲದೆ ಸರ್ವತೋಭದ್ರಮಂಡಲ, ಚಕ್ರಾಬ್ಜಮಂಡಲ, ಲಿಂಗೋದ್ಧಾರ ಪದ್ಮಮಂಡಲ, ಪಂಚವರ್ಣಮಯವಾದ ಹಸೆಯಿಂದ ಕೂಡಿದ ಕೇವಲ ಮಂಡಲ ಅಥವಾ ಚಿತ್ರಗಳಲ್ಲಿ, ಪಠಗಳಲ್ಲಿ, ಶ್ರೀಚಕ್ರಾದಿ ಯಂತ್ರಗಳಲ್ಲಿ, ಕುಂಭ (ಕಲಶ)ಗಳಲ್ಲಿ ಮತ್ತು ಶಾಸ್ತ್ರೋಕ್ತವಾದ ಇತರ ಸ್ಥಾನಗಳಲ್ಲಿ, ದೇವತಾಚಿಹ್ನಾದಿಗಳಲ್ಲಿ ಮಂತ್ರ, ತಂತ್ರಮಾರ್ಗಗಳಿಂದ ಭಗವಂತನು ಆವಾಹಿತನಾಗಿ ಪೂಜಿಸಲ್ಪಡುವನು.

ಅಪ್ರಬುದ್ಧರಿಗೆ ಪ್ರತಿಮೆಯಲ್ಲಿ ಪೂಜೆಯು ಯುಕ್ತವಾಗಿದೆ. ಊರ್ಧ್ವದೃಷ್ಟಿ, ಅಧೋದೃಷ್ಟಿ, ತಿರ್ಯಗ್ (ಅಡ್ಡ) ದೃಷ್ಟಿಯುಳ್ಳ ಮೂರ್ತಿಗಳನ್ನು ಪೂಜಿಸಬಾರದು; ಸುಲಕ್ಷಣಗಳಿಂದ ಕೂಡಿದ ಶಾಸ್ತ್ರೋಕ್ತವಾದ ದ್ವಾತ್ರಿಂಶಲ್ಲಕ್ಷಣ (ಮೂವತ್ತೆರಡು ಲಕ್ಷಣ)ಗಳಿಂದ ಯುಕ್ತವಾದ ಪ್ರತಿಮೆಯನ್ನು ಪೂಜೆಮಾಡುವುದು ಉತ್ತಮ ಫಲಪ್ರದವು-ಪ್ರತಿಮಾನಿರ್ಮಾಣಕ್ರಮ, ಪ್ರತಿಮಾಲಕ್ಷಣ ಪ್ರತಿಮಾಸ್ಥಾಪನಾರ್ಥವಾಗಿ ದೇವಾಲಯ ನಿರ್ಮಾಣ ವಿಧಿ, ಪ್ರತಿಮಾಪ್ರತಿಷ್ಠಾ ಮತ್ತು ದೇವಾಲಯ ಪ್ರತಿಷ್ಠಾ ವಿಧಾನ, "ಅಶುಚಿತ್ವಂ ಯದಾ ಭೂಯಾತ್ ಪುನಃ ಸಂಪ್ರೋಕ್ಷಣಂ ಭವೇತ್" ಎಂಬ ಸ್ಮೃತ್ಯನುಸಾರ ಸಂಪ್ರೋಕ್ಷಣ ವಿಧಿ, ಜೀರ್ಣದೇವಾಲಯೋದ್ಧಾರಾದಿಗಳೂ ಪ್ರತಿಷ್ಠೆಯಾದ ನಂತರ ದೇವಾಲಯ ಮತ್ತು ಗೃಹಾದಿಗಳಲ್ಲಿ ಪೂಜೆಯ ಕ್ರಮ, ಅದರ ಪ್ರಯೋಜನ ಫಲಗಳೂ, ಪ್ರತಿಮಾಲಕ್ಷಣ ಜ್ಞಾನ, ಪ್ರತಿಮಾ ನಿರ್ಮಾಣಯೋಗ್ಯದ್ರವ್ಯಗಳು, ಎಂದರೆ ಸುವರ್ಣ, ರಜತ, ತಾಮ್ರಾದ್ರಿಗಳು ಆಗಮ ಶಾಸ್ತ್ರದಲ್ಲಿ ಸವಿಸ್ತಾರವಾಗಿ ವರ್ಣಿತವಾಗಿವೆ.

ಹಿರಣ್ಮಯ (ಸುವರ್ಣದ) ಪ್ರತಿಮೆಯು ಸರ್ವಸಂಪತ್ಕರಿಯು, ರಜತಮೂರ್ತಿಯು ವಿತ್ತ, ಪಶು, ವಿಜಯ, ವಿಜ್ಞಾನಗಳನ್ನು ಕೊಡುವುದು. ತಾಮ್ರನಿರ್ಮಿತವಿಗ್ರಹದ ಪೂಜೆಯು ಧರ್ಮವೃದ್ಧಿಯನ್ನೂ, ಬಹು ಸೌಖ್ಯವನ್ನೂ ಕೊಡುವುದು. ಶಿಲಾಮೂರ್ತಿಯನ್ನು ಮನೆಯಲ್ಲಿಡುವುದು ಖೇದಪ್ರದವು. ದಾರುನಿರ್ಮಿತವು ತೇಜಸ್ಸನ್ನು ಕೊಡುವುದು. ಹಾಗೆಯೇ ಮೃಣ್ಮಯ (ಮಣ್ಣಿನಿಂದ ನಿರ್ಮಿಸಿದ) ವಿಗ್ರಹವು ಶುಭಪ್ರದವು. ಹಿತ್ತಾಳೆಯ ಪ್ರತಿಮೆಯು ಶತ್ರುನಾಶಕವಾದುದೆಂದು ಹೇಳಿದೆ. ಷಣ್ಣವತ್ಯಂಗುಲ (೯೬ ಅಂಗುಲ) ವುಳ್ಳ ಪ್ರತಿಮೆಯ ಪರಿಮಾಣ, "ಸ್ವಾಂಗುಲ್ಯಾ ಮಧ್ಯರೇಖಾಯಾಃ" ಇತ್ಯಾದಿ ರೀತಿ ಹೇಳಿದ ಪುರುಷಮಾನ, ಹಸ್ತಮಾನ, ಪ್ರಾದೇಶಮಾನ, ಮೂರ್ತಿಗಳ ಪಾದವನ್ನಾರಂಭಿಸಿ ಶಿರಸ್ಸಿನ ಪರಂತ್ಯರ ಆಕಾರದ ಸರ್ವಾವಯವಗಳ ಅಳತೆ ಕ್ರಮವೂ ಹೇಳಲ್ಪಟ್ಟಿದೆ.

ಪ್ರತಿಮಾರ್ಥವಾಗಿ ಶಿಲಾವೃಕ್ಷಾದಿಗಳನ್ನು ತರಬೇಕಾದರೆ ಅದರ ಕ್ರಮ, ಶೋಧನೆ, ಜಪ, ಧ್ಯಾನ, ಉಪವಾಸಾದಿ ದೀಕ್ಷೆ, ಬಲಿದಾನ ಮೊದಲಾದುವುಗಳನ್ನೂ ಹೇಳಿ, ಧ್ವನಿಭೇದದಿಂದ ಪುಂ, ಸ್ತ್ರೀ, ನಪುಂಸಕಾ ಶಿಲೆಯ ಪರೀಕ್ಷೆ, ಪುಂ ಶಿಲೆ ಪ್ರತಿಮೆಗೂ, ಸ್ತ್ರೀ ಶಿಲೆಯು ಪೀಠಕ್ಕೂ, ನಪುಂಸಕ ಶಿಲೆ ಪಿಂಡಿಕಾಕ್ಕೂ ಉಪಯೋಗಿಸುವ ರೀತಿಯು. ಅವುಗಳ ಅಳತೆಯೂ ಅವುಗಳ ನಿರ್ಮಾಣಾನಂತರ, ಹೇಗೆ ಪ್ರತಿಷೆ ಮಾಡಬೇಕೆಂಬುದೂ, ದೇವಾಲಯ ನಿರ್ಮಾಣಸ್ಥಳ, ಭೂಶೋಧನೆ, ಆಲಯ ಕಟ್ಟುವ ಕ್ರಮ, ಗರ್ಭಗೃಹ, ಪ್ರಾಕಾರ, ಗೋಪುರ, ಶಿಖರ, ಧ್ವಜಸ್ತಂಭ ಶಾಲಾದಿಗಳು, ಪಾಕಗೃಹ, ಉಗ್ರಾಣ, ಸಭಾಂಗಣ, ಮುಖಮಂಟಪ, ಕಲ್ಯಾಣಮಂದಿರ ಪರಿವಾರಮೂರ್ತಿಗಳ ಮಂದಿರನಿರ್ಮಾಣ ವಿಮಾನಾದಿಗಳ ವಿವರವೆಲ್ಲವೂ ಸಾಂಗವಾಗಿಯೂ, ಸವಿಸ್ತಾರವಾಗಿಯೂ ಹೇಳಿ ವಾಸ್ತುಪುರುಷ ಪೂಜೆ, ಕಲಶಸ್ಥಾಪನೆ, ಅಂಕುರಾರ್ಪಣೆ, ಪೂಜೆ, ಬಲಿದಾನ, ಹವನಹೋಮ, ಆಹುತಿ, ಹೋಮದ್ರವ್ಯಗಳು, ಮಂತ್ರಜಪ, ಸೂಕ್ತಪಾರಾಯಣ ವೇದಘೋಷ ಜಪ್ಯಮಂತ್ರಸಂಖ್ಯೆ ಪುರಾಣೇತಿಹಾಸ ಶಾಸ್ತ್ರ, ವೇದಪಾರಾಯಣ, ದೇವತಾವಾಹನಾದಿ ದಿನಪಾದ್ಯ ಅರ್ಘ್ಯಸ್ನಾಪನ, ವಸ್ತ್ರಾಭರಣಾದ್ಯಲಂಕಾರ ತುಳಸಿ ಪುಷ್ಪಾರ್ಪಣೆ, ನೈವೇದ್ಯ, ಆರತಿ, ವಾದ್ಯ ವೈಭವ ನೃತ್ಯ, ಗಾನಾದಿಗಳಿಂದ ಪ್ರತಿಷ್ಠೆ, ಸಂಪ್ರೋಕ್ಷಣೆ ಕಾಲಕಾಲದ ಪೂಜೆಗಳೂ, ಉತ್ಸವ, ಸಂತರ್ಪಣೆ, ಪ್ರಸಾದವಿನಿಯೋಗವೂ, ಜಪಾಧ್ಯಾನದೀಕ್ಷಾವಿಧಾನವೂ ಅಸಂಖ್ಯಾಕವಾಗಿ ಅವಭೃಥಾಂತವಾಗಿ ಸವಿಸ್ತಾರವಾಗಿ ಉಕ್ತವಾಗಿದೆ. ಅವುಗಳಲ್ಲಿ ಕರ್ಮ ಪೂರ್ತಿಯಾಗಲು ಎಷ್ಟು ಆವಶ್ಯಕವೋ ಅವೆಲ್ಲವನ್ನೂ ಅನುಷ್ಠಾನಮಾಡಬೇಕೆಂದೂ, ಈ ರೀತಿ ಪೂಜೆ, ಧ್ಯಾನಭಕ್ತಿಯನ್ನೂ ಮಾಡುವುದರಿಂದ ಭಗವಂತನು ಸುಪ್ರೀತನಾಗಿ ಭಕ್ತರನ್ನೂ ಅನುಗ್ರಹಿಸಿ, ಮೋಕ್ಷವನ್ನು ಕೊಡುವನೆಂಬ ಅಂಶವೂ ಪ್ರತಿಪಾದಿತಗಳಾಗಿವೆ.

ಭಗವತ್ಪೂಜಾದಿ ಸರ್ವಕರ್ಮಗಳನ್ನೂ ಭಕ್ತಿಯಿಂದ ಮಾಡಬೇಕು. ಎಲ್ಲದಕ್ಕೂ ಭಕ್ತಿಯೇ ಪರಮ ಮುಖ್ಯವಾದುದು "ಪರಮಸ್ನೇಹಸಂಯುಕ್ತ ಯಥಾರ್ಥ ಜ್ಞಾನ (ತೋಭವೇತ್)"ವೇ ಭಕ್ತಿಯು. ಇದೇ ಭೋಗಮೋಕ್ಷಗಳಿಗೆ ಮುಖ್ಯ ಸಾಧನವು. ಮಹಾತ್ಮ್ಯ ಜ್ಞಾನಪೂರ್ವಕವಾದ ಸರ್ವತೋಧಿಕ ಸುದೃಢಸ್ನೇಹವೆಂಬ ಭಕ್ತಿಯೊಂದೇ ಐಹಿಕಾಮುಷ್ಮಿಕ ಫಲಕ್ಕೆ ಮುಖ ಸಾಧನೆಯು. ಇದೊಂದಿದ್ದರೆ ಸಕಲಾಭೀಷ್ಟಪ್ರದವಾಗುವುದು. ಈ ಭಕ್ತಿಯಿಲ್ಲದ ಸಮಸ್ತ ಜ್ಞಾನಕರ್ಮಗಳು ವ್ಯರ್ಥವಾಗುವುವು. ಧ್ಯಾನ, ಗುರುಶುಶ್ರೂಷೆ, ನಿತ್ಯ ನೈಮಿತ್ತಿಕಕ್ರಿಯೆಗಳು, ತೀರ್ಥದಾನ, ಜಪಾದಿಗಳು, ಅಧ್ಯಯನ, ಪಾಠ, ಪ್ರವಚನಗಳು, ಹರಿಕೀರ್ತನೆ, ದ್ವಾದಸ್ಯಾದಿ ವ್ರತಗಳು, ತುಳಸ್ಯಾದಿ ಅರ್ಚನೆಗಳೆಲ್ಲವೂ ಭಗವದ್ಭಕ್ತ್ಯರ್ಥವಾಗಿ ಹೇಳಿದೆ. ಅಂಥಾ ಭಕ್ತಿಯಿಲ್ಲದ ಸರ್ವವೂ ವ್ಯರ್ಥವೇ ಎಂದು ಉಕ್ತವಾಗಿದೆ. ವಿಷ್ಣು ಭಕ್ತಿಯುಳ್ಳವನು ಮುಕ್ತನಾಗುತ್ತಾನೆ. ಅನ್ಯಥಾ ಯಾವುದೊಂದು ಮಾರ್ಗದಿಂದಲೂ ಅದಾಗಲಾರದು. ಅಪರೋಕ್ಷಜ್ಞಾನಯುಕ್ತಭಕ್ತಿಯೇ ಮೋಕ್ಷಕ್ಕೆ ಸಾಧನವು. ಭಗವದವತಾರಾದಿರೂಪದರ್ಶನವು ದ್ವೇಷಿಗಳಿಗೂ ಉದಾಶೀನರಿಗೂ ಆಗುವುದು. ಆದರೆ ಭಕ್ತಿರಹಿತವಾದುದರಿಂದ ಅಂಥವರಿಗೆ ಮೋಕ್ಷವಿಲ್ಲವು. ಯೋಗ್ಯಾಪರೋಕ್ಷವು ಭಕ್ತಿಯಿಂದ ಲಭಿಸುವುದು. ಅದರಿಂದ ಮೋಕ್ಷವು. ಉಪಾಸನಾಮೂರ್ತಿಯಲ್ಲಿ ಸಚ್ಚಿದಾನಂದರೂಪಿಯಾದ ಭಗವಂತನನ್ನು ಭಕ್ತಿಯಿಂದ ಆರಾಧಿಸಿದರೇ ಮೋಕ್ಷವು ದೊರೆಯುವುದಲ್ಲದೆ, ("ನಚಾಮ್ಮಯಾನಿ ತೀರ್ಥಾನಿ,) ನದೇವಾಮುಚ್ಛಿಲಾಮಯಾಃ" ಎಂಬಂತೆ ಕೇವಲ ಬಾಹ್ಯಮೃಣ್ಮಯ ಶಿಲಾಮಯವಾದ ವಿಗ್ರಹಪೂಜೆಯು ತಾರಕವಾಗಲಾರದು. ಮೌಕ್ತಿಕಾನಂದವನ್ನು ಭಗವಂತನು ಮನುಷ್ಯೋತ್ತಮನನ್ನೂ ಪ್ರಾರಂಭಿಸಿ ಅಧಿಕಾರ್ಯುತ್ತಮನಾದ ಚತರ್ಮುಖ ಬ್ರಹ್ಮನ ಪರ್ಯಂತ, ಅವರವರ ಯೋಗ್ಯತೆ, ತಾರತಮ್ಯ ಉಪಾಸನೆ, ಜ್ಞಾನ, ಭಕ್ತಿಯನ್ನನುಸರಿಸಿ ಕೊಡುವನು. ಸದ್ಗುರುಗಳಿಂದ ಉಪದೇಶವನ್ನು ಪಡೆದು, ಶ್ರವಣ ಮನನ ಧ್ಯಾನಗಳಿಂದ ತತ್ವನಿಶ್ಚಯಮಾಡಿಕೊಂಡು; ಶಾಸ್ತ್ರಾವಮರ್ಶನೆ, ಧ್ಯಾನ, ಸಮಾಧಿ, ಅಖಂಡ ಸ್ಮರಣಾದಿಗಳಿಂದ ಭಗವದಪರೋಕ್ಷ, ನಂತರ ಪರಮಾತ್ಮನ ಪ್ರಸಾದದಿಂದ ಮುಕ್ತಿಯೂ ಲಭಿಸುವುದು. ಧ್ಯಾನ ಪ್ರವಚನಗಳಿಂದ ಭಗವಂತನು ಪೂಜಿಸಲ್ಪಟ್ಟು ಪ್ರಸನ್ನನಾಗುವನು. ಧ್ಯಾನವು ಯಮ, ನಿಯಮ, ಆಸನ, ಪ್ರಾಣಾಯಾಮವೆಂದು ನಾಲ್ಕು ಅಂಗವುಳ್ಳದ್ದು. ಖಂಡ ಸ್ಮೃತಿಯು ಧಾರಣವೆನಿಸುತ್ತದೆ. ಅಖಂಡಸ್ಮರಣೆಯೇ ಧ್ಯಾನವು. ಇಂಥಾ ಅಪ್ರಯತ್ನ ಧ್ಯಾನಧಾರಣೆಯೇ ಸಮಾಧಿಯೆನಿಸುವುದು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯೆ, ಅಪರಿಗ್ರಹಗಳು ಯಮವೆನಿಸುತ್ತದೆ. ತಪಸ್ಸು ತುಷ್ಟಿ (ವಿಷಯಾಲಂಬುದ್ಧಿ) ವೇದಾಧ್ಯಯನ, ಆಚಾರ್ಯಸೇವನೆ, ನಿತ್ಯವೂ ವಿಧ್ಯುಕ್ತಪ್ರಕಾರವಾಗಿ ಶೋಡಶೋಪಚಾರದಿಂದ ಭಗವಂತನ ಪೂಜೆ ತಪಸ್ಸು ಇವು ನಿಯಮವೆನಿಸಿದೆ. ಪದ್ಮಾಸನ, ವೀರಾಸನ. ಸ್ವಸ್ತಿಕಾದಿಗಳು ಆಸನ, ರೇಚಕ, ಪೂರಕ, ಕುಂಭಕಗಳೆನಿಸಿದ ಶ್ವಾಸನಿರೋಧಾದಿಗಳು ಪ್ರಾಣಾಯಾಮವು. ಇವು ಒಂದಕ್ಕಿಂತ ಮತ್ತೊಂದು ಉತ್ತರೋತ್ತರಾಧಿಕ ಗುಣವುಳ್ಳವು. ಇವುಗಳನ್ನು ನಾವು "ಮಕ್ತಿಸಾಧನ ಸುಲಭೋಪಾಯ"ವೆಂಬ ಗ್ರಂಥದಲ್ಲಿ ವಿಸ್ತರಿಸಿರುವೆವು, ಅಲ್ಲಿ ನೋಡಬಹುದು. ಅಧ್ಯಯನ ಭಗವತ್ಪೂಜೆಗಳು ಆವಶ್ಯವಾಗಿ ಸದಾಭಗವದ್ಭಕ್ತರಿಂದ ಆಚರಿಸಲ್ಪಡಬೇಕು. "ಪ್ರತಿಮಾಯಾಂ ತು ಸಾನ್ನಿಧ್ಯಮರ್ಚಕಸ್ಯ ತಪೋಬಲಾತ್" ಎಂದು ಸಾತ್ವಿಕನೂ, ತಪೋನಿಷ್ಠನೂ, ದೀಕ್ಷಾಪರನೂ ಭಗವದನುಗ್ರಹಕ್ಕೆ ಮುಖ್ಯ ಪಾತ್ರನೂ, ವೇದವೇದಾಂತಸಾರಜ್ಞಾನಿಯೂ; ಭಗವದ್ಭಕ್ತಿಯುಕ್ತನೂ, ಸ್ವವರ್ಣಾಶ್ರಮೋಚಿತ ಸತ್ಕರ್ಮಾನುಷ್ಠಾನನಿಷ್ಠಾಪರನೂ, ವಿಹಿತಕರ್ಮಾನುಷ್ಠಾನ ಮಾತ್ರವಲ್ಲದೆ ನಿಷಿದ್ಧಕರ್ಮತ್ಯಾಗಿಯೂ, ದಯಾದಾಕ್ಷಿಣ್ಯ, ವೈರಾಗ್ಯಾದಿಸದ್ಗುಣಭರಿತನೂ ಹರಿಗುರುಪೂಜಾರಕನೂ, ಜಪ, ಧ್ಯಾನ, ಪ್ರವಚನಾದಿಗಳನ್ನು ಮಾಡುತ್ತಾ ಅಂತರ್ಬಹಿಃಪರಮಪರಿಶುದ್ಧನಾದ ಭಾಗವತೋತ್ತಮನಿಂದ ಶಾಸ್ತ್ರೋಕ್ತವಿಧಾನದಿಂದ ಕಲಾಕರ್ಷಣ, ತತ್ವನ್ಯಾಸ, ಮಾತೃಕನ್ಯಾಸಧ್ಯಾನಾದಿಗಳಿಂದ ಪೂಜಿಸಿ, ಪ್ರತಿಷ್ಠಿಸಿ, ಅವಿಚ್ಛಿನ್ನ ಪೂಜೆಮಾಡುತ್ತಾ ಬರುವುದರಿಂದಲೂ, ಅರ್ಚಕರ ತಪೋಬಲವಿಶೇಷದಿಂದಲೂ ಪ್ರತಿಮೆಯಲ್ಲಿ ಭಗವಂತನ ವಿಶೇಷ ಸನ್ನಿಧಾನವುಂಟಾಗುವುದು. ನ್ಯಾಸಮಂತ್ರಗಳು ಪ್ರತಿಮೆಯಲ್ಲಿ ಸನ್ನಿಧಾನವನ್ನೂ ಶಿಷ್ಯನಲ್ಲಿ ಮಾಹಾತ್ಮೆಯನ್ನೂ ಉಂಟುಮಾಡುವುದು.

ಮನೆಗಳಲ್ಲಿ ಮೂರ್ತಿಪೂಜೆ ಮಾಡುವುದು, ಯಜಮಾನನಿಗೂ, ತನಗೂ ತನ್ನ ಕುಟುಂಬ, ಪರಿವಾರ ಬಂಧುವರ್ಗಕ್ಕೂ, ಐಹಿಕಾಮುಷ್ಮಿಕ ಫಲಪ್ರದವೂ, ಮಠಮಂದಿರಗಳಲ್ಲಿ ಪ್ರತಿಮಾದಿಗಳ ಪೂಜೆಯು, ತಮಗೂ, ಶಿಷ್ಯಮಂಡಲಿಗೂ, ರಾಜರು ಮತ್ತು ಪ್ರಜೆಗಳ ಕ್ಷೇಮಕ್ಕೂ ಅಭೀಷ್ಟಪ್ರದವಾಗಲು ಕಾರಣವು—ಆಲಯಗಳಲ್ಲಿ ಭಗವದಾರಾಧನೆಗಳನ್ನು ಮಾಡುವುದು ಸಕಲ ಭಕ್ತರ ಮತ್ತು ಲೋಕದ ಕಲ್ಯಾಣಕ್ಕಾಗಿ—ಆಲಯಗಳು ಸ್ವಯಂಭುವಗಳೆಂದೂ, ಋಷಿಸ್ಥಾಪಿತಗಳೆಂದೂ ದೈತವ, ಬಾಣ ಇತ್ಯಾದಿಗಳಿಂದ ಕೂಡಿ, ಸೃಷ್ಟಿಕಾಲವನ್ನಾರಂಭಿಸಿ ಸುಪ್ರಸಿದ್ಧತೆಯನ್ನು ಪಡೆದಿವೆ. ಇದುವರಿವಿಗೂ ಮಹಾಕ್ಷೇತ್ರಾದಿಗಳು ಯಾವ ನ್ಯೂನತೆಯನ್ನೂ ಹೊಂದದೆ ಪ್ರತ್ಯಕ್ಷವಾಗಿ ಪ್ರಕಾಶಿಸುತ್ತಲಿವೆ ಯಾದುದರಿಂದ ಭಾರತೀಯರ ಪ್ರಾಶಸ್ತ್ಯವು ಹೊಗಳಲ್ಪಡುತ್ತಲಿದೆ. ವೇದಭೂಮಿ, ವೈದಿಕಮತವೆಂದು ಹೇಳಲು ಪ್ರಧಾನಸ್ಥಾನವಾಗಿವೆ. ವೇದಸ್ವರೂಪವಾದ ನಮ್ಮ ಭಾರತೀಯರ ಮತವು ಸರ್ವಮತಗಳಿಗೂ ಮೂಲಾಧಾರವಾಗಿದೆ. ಮಹಮ್ಮದೀಯ, ಕ್ರೈಸ್ತರ ಸಿದ್ಧಾಂತಕ್ಕೂ ಹಿಂದೂಮತದ ಸಿದ್ಧಾಂತಕ್ಕೂ ಭೇದಕಾಣದಿದ್ದರೂ, ದೈವಭಕ್ತಿ, ಅಹಿಂಸೆ, ಸತ್ಯ, ಧರ್ಮ, ಭೂತದಯಾದಿ ಸದ್ಗುಣಗಳು ನಮ್ಮ ಭಾರತೀಯರ ಮತದಲ್ಲಿ ತುಂಬಿರುವುದರಿಂದಲೂ ಅವುಗಳನ್ನು ಸಾಧಿಸಿ, ಆಚರಿಸುವುದರಿಂದಲೂ ಉತ್ಕೃಷ್ಟವಾದ ಮತ್ತು ಸರ್ವಸಮ್ಮತವಾದ ಮತವೆಂದು ಸುಪ್ರಸಿದ್ಧವಾಗಿರುತ್ತದೆ.

ಈ ಮೇಲ್ಕಂಡ ಸದ್ಗುಣಗಳಿಲ್ಲದ ಮತಗಳು ದುರಹಂಕಾರ, ಅಜ್ಞಾನ, ದುಷ್ಕರ್ಮಗಳಿಂದ ಕೂಡಿ ಅವೈದಿಕ, ವೇದಬಾಹ್ಯಗಳೆಂದು ತಿಳಿದುಬರುತ್ತದೆ. ಭಗವದಾರಾಧನೆ, ಭಗವನ್ನಾಮಸ್ಮರಣೆ ಧಾರಣಾದಿ ಭಗವಲ್ಲಕ್ಷಣಾನ್ವಿತರೇ ಭಾರತೀಯರು—ಆರ್ಯರು—ಶಿಖಾ, ಯಜ್ಞೋಪವಿತಧಾರಣೆ, ಲಲಾಟದಲ್ಲಿ ತನ್ನ ಮತಚಿಹ್ನೆಯನ್ನೂ ಧರಿಸಿರುವುದು ಮೊದಲಾದ ನಿಬಂಧನ ಧರ್ಮಗಳೇ ಭಾರತೀಯ ಮತಾಚಾರ ಚಿಹ್ನೆಗಳು. ಇಂತಹ ಧರ್ಮರಕ್ಷಣೆಗೆ ಆಲಯಗಳೂ ಪ್ರಧಾನಚಿಹ್ನೆಗಳಾಗಿ ಆದಿಯಿಂದಲೂ, ದೇವತೆಗಳೂ, ಋಷಿಗಳೂ, ರಾಜರು ಮೊದಲಾದವರೂ ಏರ್ಪಡಿಸಿದ ಸಂಸ್ಥೆಗಳಾಗಿ ಸಪ್ತ ಸಂತಾನಗಳಲ್ಲಿ ಪ್ರಧಾನವಾಗಿ ಶಾಶ್ವತಜನ್ಮರಾಹಿತ್ಯ ಸಾಧನೆಗಳಾಗಿ ಉತ್ತಮಲೋಕಪ್ರಾಪ್ತಿಗೆ ಕಾರಣಭೂತವಾಗಿವೆ. ಜ್ಞಾನಿಗಳೂ, ಧರ್ಮಮಾರ್ಗಪ್ರವರ್ತಕರೂ ಪಂಡಿತರೂ, ಭಗವದ್ಭಕ್ತರೂ ಧರ್ಮಮಾರ್ಗವನ್ನನುಸರಿಸಿ ಭಯವಿನಯಾದಿಗಳಿಂದ ಶಾಸ್ತ್ರಮರ್ಯಾದೆಯನ್ನು ಬಿಡದೆ ಭಗವದಾರಾಧನೆಗಳನ್ನು ಸಂದರ್ಶಿಸಿ ಆನಂದಿಸುವುದು ಪ್ರಾಚೀನಕಾಲದಿಂದ ಸಮೀಚೀನವಾಗಿರುತ್ತದೆ. ಪರಮಾತ್ಮನ ಪೂಜಾದಿರೂಪಕರ್ಮಧ್ಯಾನಪ್ರವಚನಗಳು ಮುಕ್ತಿಗೆ ಮುಖ್ಯಸಾಧನಗಳು. ಶ್ರವಣಾದಿಗಳು ಇವುಗಳಿಗೆ ಅಂಗಸಾಧನೆಯು. ಇಂಥಾ ಶ್ರವಣಾದಿಗಳು ಪೂರ್ವೋಕ್ತ ಸಾಧನಗಳಲ್ಲಿ ಪರಮ ಮುಖ್ಯ ಸಾಧನವೆಂದೂ ಮುಕ್ತಿಯನ್ನು ಸಾಧಿಸಲು ಪರಮ ಪ್ರಧಾನಸಾಧನವೆಂದೂ, ಈ ಶ್ರವಣಾದಿಗಳಲ್ಲೂ ಅವಾಂತರತಾರತಮ್ಯಗಳಿವೆಂದೂ ಹೇಳಿದೆ.

ಶಾಸ್ತ್ರಜ್ಞಾನಶೂನ್ಯರಾದ ಅಜ್ಞಜನರಿಗೆ ಗುರುಗಳಿಂದ ಶಾಸ್ತ್ರಶ್ರವಣವು ಮುಖ್ಯವು. ಯುಕ್ತನುಸಂಧಾನರಹಿತನಿಗೆ ಶ್ರವಣಪ್ರಮೇಯ ದಾರ್ಢ್ಯಾರ್ಥವಾಗಿ ಮನನವು ಶ್ರೇಷ್ಠವು. ಇಂಥಾ ಶ್ರವಣಮನನಗಳಿಂದ ನಿಶ್ಚಿತತತ್ವವುಳ್ಳವನಿಗೆ ಧ್ಯಾನವು. ಇವರಲ್ಲಿ ಒಬ್ಬನಗಿಂತ ಮತ್ತೊಬ್ಬನು ಉತ್ತಮನು. ನಿಶ್ಚಿತಾಪರೋಕ್ಷವುಳ್ಳ ಧ್ಯಾನಾಧಿಕಾರಿಗಿಂತಲೂ ವಿಷ್ಣುಶಾಸ್ತ್ರಾವಮರ್ಶನ ಮಾಡುವ ಅಧಿಕಾರಿಗೆ ದಶಗುಣಾಧಿಕಫಲವು ದೊರೆಯುವುದು. ಶಾಸ್ತ್ರಾವಮರ್ಶನಾಖ್ಯ ಭಗವಂತನ ಬಹುಗುಣಗಳ ಅವಭಾಸಲಾಭವಾಗುವುದು ಎಂದರೆ ಭಗವಚ್ಛಾಸ್ತ್ರಾವಮರ್ಶನದಿಂದ, ವೇದ, ಮಂತ್ರ, ಉಪನಿಷತ್ತು, ಭಾರತ, ಭಾಗವತ ಪುರಾಣೇತಿಹಾಸಾದಿಗಳು ಬ್ರಹ್ಮಸೂತ್ರನ್ಯಾಯಗಳನ್ನು ಪುನಃ ಪುನಃ ವಿಚಾರ ಮಾಡಿ ಅದರ ನೈಶಂತರ್ಯದಿಂದ ಭಗವದುತ್ಕರ್ಷಪರ್ಯವಸಾಯಿಜ್ಞಾನದಿಂದ ಉಂಟಾದ ಬದ್ಧಾದರದಿಂದ ಅವುಗಳಲ್ಲಿ ಉಕ್ತಗಳಾದ ಅನೇಕ ಗುಣಗಳು ಪ್ರತಿಭಾತವಾಗುವುದಾಗಿ ಇದರಿಂದ ದಶಗುಣಾಧಿಕವಾದ ಫಲವೂ ತಾನೊಬ್ಬನೇ ಶಾಸ್ತ್ರಾವಮರ್ಶನ ಮಾಡುವುದಕ್ಕಿಂತಲೂ ಶಿಷ್ಯನೊಬ್ಬನಿಗೆ ಉಕ್ತವಿಧಾನದಿಂದ ಶಾಸ್ತ್ರಾವಮರ್ಶನ ರೂಪವ್ಯಾಖ್ಯಾನ (ಪಾಠ ಹೇಳಿ) ಉಪದೇಶಿಸುವುದರಿಂದ ಶತಗುಣಾಧಿಕ ಫಲವೂ, ವ್ಯಾಖ್ಯಾನರೂಪಅಪರೋಕ್ಷಜ್ಞಾನರೂಪಫಲವೂ, ಸರ್ವಶ್ರೇಷ್ಠವಾದುದಾಗಿ ಲಭಿಸುವುದು. ವ್ಯಾಖ್ಯಾನ ಮಾಡತಕ್ಕವನಕ್ಕಿಂತಲೂ ಪರ

ಮಾತ್ಮನಿಗೆ ಪ್ರಿಯತಮನು ಬೇರೆ ಇಲ್ಲವೆಂದು ಜ್ಞಾನಿ ಪ್ರಶಂಸೆಯನ್ನೂ "ನಾನು ನಿನಗೆ ಪರಮರಹಸ್ಯ (ತತ್ವವನ್ನು) ಶಾಸ್ತ್ರವನ್ನು ಹೇಳಿದ್ದೇನೆ. ನನ್ನಲ್ಲಿ ಪರಭಕ್ತಿಯನ್ನು ಮಾಡು. ನೀನು ನನ್ನನ್ನೇ ಹೊಂದುವಿ. ಸಂಶವಿಲ್ಲ" ಎಂದು ಮುಂತಾಗಿ ಅರ್ಜುನನಿಗೆ ಉಪದೇಶಿಸಿ, ವ್ಯಾಖ್ಯಾನ ಮಾಡತಕ್ಕವನೂ ತನಗೆ ಪ್ರಿಯತಮನೆಂದು ಭಗವಾನ್ ಶ್ರೀಕೃಷ್ಣನು ಸ್ವಪ್ರೀತಿವಿಷಯತ್ವವನ್ನು ಹೇಳಿರುವುದರಿಂದ ವ್ಯಾಖ್ಯಾನಕ್ಕೆ ಉತ್ತಮತ್ವವು ಪ್ರತಿಪಾದಿಸಲ್ಪಟ್ಟಿದೆ. ಇಂಥಾ ಅಧ್ಯಯನಪ್ರವಚನಗಳಿಂದ ಸಾಧನವು ಪೂರ್ವೋಕ್ತ ಆಸನಪ್ರಾಣಾಯಾಮತುಷ್ಟ್ಯಾದಿಗಳೆಲ್ಲಕ್ಕಿಂತಲೂ ಕೋಟಿಗುಣಾಧಿಕಫಲಪ್ರದವು ಎಂದು

ಸ್ವಾಧ್ಯಾಯೋತಃ ಕೋಟಿಗುಣಸ್ತತೋಽನಂತಗುಣಾ ಹರೇಃ ||
ಪೂಜಾ ತಸ್ತ್ರಿಗುಣಂ ಧ್ಯಾನಂ ಇತಿ ಧರ್ಮಕ್ರಮಃ ಸ್ಮೃತಹ ||

ಎಂಬ ಪ್ರಮಾಣಾನುಸಾರ ಈ ಪಾಠಪ್ರವಚನರೂಪಸಾಧನೆಗಿಂತಲೂ ಶ್ರೀಹರಿಯ ಪೂಜೆಯು ಅನಂತಗುಣಾಧಿಕಫಲಪ್ರದವು. ಇಂಥ ಭಗವತ್ಪೂಜೆಗಿಂತಲೂ ಧ್ಯಾನವು ತ್ರಿಗುಣಫಲಾಧಿಕವಾದುದೆಂದು ಧರ್ಮಹೇತುಗಳ ತಾರತಮ್ಯವು ಉಕ್ತವಾಗಿದೆ. ಧ್ಯಾನಾಂತವಾದುದೇ ತಾರತಮ್ಯವು. ಧ್ಯಾನದ ದೆಶೆಯಿಂದ ಶಾಸ್ತ್ರಾವಮರ್ಶನವು ದಶಗುಣಾಧಿಕವಾದುದು. ಅದಕ್ಕಿಂತಲೂ ವ್ಯಾಖ್ಯಾನವು ಅರ್ಥದ್ರಷ್ಟ್ರುವಿಗೆ ಶತಗುಣಾಧಿಕಫಲವು. ಉಪದೇಶಕನಿಗೆ ಕೋಟಿಗುಣಾಧಿಕಫಲವು. ಅನಂತಗುಣಾಧಿಕ್ಯವು ಇವೆಲ್ಲದಕ್ಕೂ ಶ್ರೇಷ್ಠವಾದುದು ಭಗವತ್ಪೂಜೆಯು. ಇಂಥಾ ಪೂಜೆಯನ್ನು "ಇಯದಾಮನನಾ" ಎಂಬ ಸೂತ್ರದಲ್ಲಿ ಸೂಚಿಸಿದಂತೆ ಅಧಿಕಾರಿವರ್ಗದಲ್ಲಿ ಶ್ರೇಷ್ಠನಾದ ಚತುರ್ಮುಖಬ್ರಹ್ಮನೂ ನಂತರ ಇತರ ದೇವತೆಗಳೂ ತಮ್ಮ ಯೋಗ್ಯತೆಯಂತೆ ಮಾಡುವರು. ಜಗನ್ಮಾತೆಯಾದ ಮಹಾಲಕ್ಷ್ಮಿಯು ಅದ್ಭುತ ರೀತಿಯಲ್ಲಿ ಪರಮಾತ್ಮನ ಪೂಜೆಯನ್ನು ಮಾಡುವಳು. "ನಹೀಂದಿರಾರಾಧ್ಯಪದೋ ಮುಕುಂದೋ ದೂರ್ವಾಂಕುರೈರ್ಮಂದ ಧನ್ಯೈರಪೂಜ್ಯಃ" ಭಗವಾನ್ ನಾರಾಯಣನು ಸಕಲ ಸಂಪದಭಿಮಾನಿಯೂ ಜಗಜ್ಜನನಿಯೂ ಆದ ಇಂದಿರಾರಾಧ್ಯಚರಣಾರವಿಂದವುಳ್ಳವನೆಂದು ಬಡವರಿಂದ ಗರಿಕೆ, ಪತ್ರೆ, ತುಳಸೀದಳ ಮತ್ತು ಉದಕದಿಂದ ಪೂಜಿಸಲ್ಪಡಬಾರದೇನು? ಅತ್ಯಗತ್ಯವಾಗಿ ಸರ್ವರೂ ಭಗವಂತನನ್ನು ಪೂಜಿಸಲೇಬೇಕು. ಹಾಗೆ ಭಕ್ತಿಯಿಂದ ಪೂಜಿಸಲ್ಪಡದಿದ್ದರೆ ಚತುರ್ವರ್ಣದಲ್ಲಿಯೂ ಸಹ ಅಂಥವನಿಗೆ ಜನ್ಮವು ದೊರೆಯಲಾರದೆಂದು "ಪೂಜಾಯಾಃ ಅಕೃತೇಶ್ಚೈವ ನ ವರ್ಣೇಷು ಜನಿರ್ಭವೇತ್" ಎಂದು ಹೇಳಿದೆ. ಆದುದರಿಂದ ಸರ್ವ ಭಗವದ್ಭಕ್ತರಾದ ಸಜ್ಜನರೂ ಶ್ರೀಪರಮಾತ್ಮನನ್ನು ತಪ್ಪದೆ ಪೂಜಿಸಿ ಕೃತಾರ್ಥರಾಗಬೇಕು.

ಪ್ರಾಚೀನಕಾಲದಿಂದಲೂ, ದೇವತಾಪರಂಪರೆ ಮತ್ತು ಋಷಿಪರಂಪರೆಗಳಿಂದಲೂ, ಅನೂಚಾನ ಸಂತತಿಗಳಲ್ಲೂ ಮಹಾಪುರುಷರ, ಮಹಾತ್ಮರುಗಳ, ಜ್ಞಾನಿಶ್ರೇಷ್ಠರುಗಳ ಮೂಲಕ ಎಡೆಬಿಡದೆ ಅವಿಚ್ಛಿನ್ನವಾಗಿ ಕ್ರಮವಾಗಿ, ವಿಧ್ಯುಕ್ತಪ್ರಕಾರವಾಗಿ, ಪೂಜಿಸಲ್ಪಡುತ್ತಿರುವ ಮೂರ್ತಿಗಳಲ್ಲೂ, ಆಲಯ, ಮಠ, ಮಂದಿರ, ಸಂಪ್ರದಾಯಾಭಿಜ್ಞರ ಮನೆಗಳಲ್ಲೂ ಮೂರ್ತಿಗಳ, ಪ್ರತಿಮೆಗಳಲ್ಲಿ ಪರಮಾತ್ಮಸನ್ನಿಧಾನವಿಶೇಷವು, ಮಹಿಮೆಗಳೂ ನಡೆದು ಬರುತ್ತಿವೆಯಲ್ಲದೆ ಭಕ್ತರು ಇಷ್ಟಾರ್ಥಸಿದ್ಧಿಗಳನ್ನು ಪಡೆಯುತ್ತಾ ಸುಖಶಾಂತಿಯನ್ನೂ ಅನುಭವಿಸುತ್ತಿರುವುದು ಪ್ರತ್ಯಕ್ಷಸಿದ್ಧವಾಗಿ ಈಗಲೂ ಕಾಣಬರುತ್ತಿವೆ.

ದೇವಾಲಯಗಳ ಪಾಲನೆಯು ಸಾಮಾನ್ಯವಾದುದಲ್ಲ. ಆಲಯಮರ್ಯಾದೆಯನ್ನು ಕಾಪಾಡುತ್ತಾ ಪೂಜೆ, ಸೇವೆಗಳನ್ನು ಮಾಡಲು ದೀಕ್ಷಿತರಾಗಿ ಪವಿತ್ರ ಹೃದಯಾಂತಃಕರಣರಾಗಿ ಗುರೂಪದಿಷ್ಟಮಾರ್ಗಪ್ರವರ್ತನೆಯಿಂದ ಪೂಜಾದಿಗಳನ್ನು ಮಾಡಬೇಕು. ಶಾಸ್ತ್ರವ್ಯತಿರಿಕ್ತಕಾರ್ಯಗಳನ್ನು ಆಲಯದಲ್ಲಿ ಆಚರಿಸಿದರೆ ಮಹಾಪ್ರಾಯಶ್ಚಿತ್ತಾದಿಸಂಪ್ರೋಕ್ಷಣೆಮಾಡಿ ಆಲಯ ಶಾಂತಿಯನ್ನು ಮಾಡಬೇಕು. ಆಲಯದಲ್ಲಿ ಪೂಜಾದಿಗಳು ಪ್ರಪಂಚದ ಶಾಂತಿಗೂ ಲೋಕಕಲ್ಯಾಣಕ್ಕೂ ಏರ್ಪಡಿಸಲ್ಪಟ್ಟಿದೆ. ಮಹಾಮಾರಿ, ಸ್ಫೋಟಕಾದಿ, ದುರ್ಭಿಕ್ಷಗಳು ಬಾರದಂತೆ ಪ್ರಪಂಚಕ್ಕೆ ಮಂಗಳಪ್ರದವಾಗಲು ಆಲಯಗಳಿರುವುವು. ಕ್ಷೇಮಪ್ರದಗಳಾದ ಜ್ಞಾನ ಮತ್ತು ಭಕ್ತಿಮಾರ್ಗವನ್ನು ಬೋಧಿಸಲು ದೇವಾಲಯ ಮತ್ತು ಗುರುಪೀಠಗಳಾದ ಮಠಗಳಲ್ಲಿ ಭಗವಂತನ ಪೂಜಾದಿಗಳು ನಡೆಯುವುದು ಸರ್ವರಿಗೂ ಪ್ರಾಚೀನಾಚಾರವಾಗಿ ಪ್ರಕಾಶಿಸುತ್ತಿವೆ.

ಭಕ್ತರೂ, ಶಿಷ್ಯರೂ ಗುರುಪೀಠಗಳನ್ನೂ ದೇವಾಲಯಗಳನ್ನೂ ಏರ್ಪಡಿಸಿ ಗುರುದಕ್ಷಿಣೆಪೂರ್ವಕವಾಗಿ

ಆಚಾರ್ಯರ ಹಸ್ತದಲ್ಲಿ ಅಂಥಾ ಸಂಸ್ಥೆಗಳನ್ನು ಧಾರಾದತ್ತವಾಗಿ ದಾನಮಾಡಿಕೊಟ್ಟು ವಂಶಾಭಿವೃದ್ಧಿಯಾಗುವಂತೆ ಸಂಕಲ್ಪಿಸಿ ಪಿತೃಗಳಿಗೆ ಉತ್ತಮ ಲೋಕಪ್ರಾಪ್ತಿಯಾಗಲು ಆಶೀರ್ವಾದ ಅನುಗ್ರಹಗಳನ್ನು ಪಡೆದಿರುವರು. ಇಂಥಾ ಧರ್ಮಗಳು ಕರ್ಣಾಟಕ, ಆಂಧ್ರ ದ್ರಾವಿಡಾದಿ ಸರ್ವದೇಶದ ಪ್ರಭುಗಳು ಆಗಮಶಾಸ್ತ್ರ ಸಿದ್ಧಾಂತಗಳನ್ನು ಶಿರಸಾವಹಿಸಿ, ಶೈವ, ವೈಷ್ಣವ ದೇವಾಲಯಗಳನ್ನು ಏರ್ಪಡಿಸಿ ಪರೋಪಕಾರಮಾಡುವುದರಿಂದ ದೇವಾಲಯಗಳು ಸಂಕರವಾಗದೆ, ಶಾಸ್ತ್ರವ್ಯತಿರೇಕವಿಲ್ಲದೆ ದಾತೃಗಳ ಸಂಕಲ್ಪವನ್ನು ನೆರವೇರಿಸುತ್ತಲಿವೆ.

ಲೋಕದಲ್ಲಿ ಉಪದ್ರವಗಳು ರಾಜವಿಡ್ವರಗಳು, ಯುದ್ಧ, ದುರ್ಭಿಕ್ಷಾದಿಗಳು ಸಂಭವಿಸಿ ಪ್ರಜೆಗಳಿಗೆ ತೊಂದರೆಯಾದಾಗ ದೇವಾಲಯಗಳಲ್ಲಿ ನಡೆಯುವ ಮಹಾಶಾಂತಿ, ಹೋಮ, ಪೂಜಾದಿಗಳಿಂದ ಲೋಕಶಾಂತಿಯಾಗಿ ರಾಜಾರಾಷ್ಟ್ರಗಳು ಆನಂದ ಹೊಂದುತ್ತಿರುವುದು ಪ್ರತ್ಯಕ್ಷದರ್ಶನೀಯಗಳಾಗಿವೆ. ತಪೋನಿಲಯಗಳೂ, ದೇವಾಲಯಗಳೂ, ಗುರುಪೀಠಗಳೂ, ಮಠಗಳೂ ಯಾವಾಗಲೂ ಪವಿತ್ರವಾದ ಪ್ರಯುಕ್ತ, ಮಂತ್ರ, ಯಂತ್ರ, ಕ್ರಿಯಾ, ನ್ಯಾಸಾದಿಗಳಿಂದ ನಿರ್ಮಿಸಿರುವುದರಿಂದ ಭಕ್ತರು ಭಯ, ಭಕ್ತಿ, ವಿನಯಪೂರ್ವಕ ಶಿಷ್ಟಾಚಾರ್ಯರ ಪದ್ಧತಿಯನ್ನು ಶಿರಸಾವಹಿಸಿ, ಆಲಯಪ್ರವೇಶ, ಭಗವದ್ದರ್ಶನ, ತೀರ್ಥಪ್ರಸಾದ ಸ್ವೀಕಾರ, ಭಗವಂತನ ಮತ್ತು ಗುರುಗಳ ಆಚಾರ್ಯರ ಅನುಗ್ರಹವನ್ನು ಸಂಪಾದಿಸಬೇಕಲ್ಲದೆ, ಸ್ವೇಚ್ಛಾನುಸಾರ ನಡೆದರೆ ಧರ್ಮವಿರುದ್ಧಪ್ರವರ್ತನೆಯುಳ್ಳವರಾಗಿ ಸಂಪ್ರದಾಯವಿರುದ್ಧಕರ್ಮಾಚರಣೆಯನ್ನು ಮಾಡಿದರೆ ಅವು ಘೋರಪಾತಕಗಳೆಂದು ತಿಳಿಯಬೇಕು. ಅಷ್ಟಾಂಗಯೋಗಗಳಿಗೂ ಮುಕ್ತಿಸಾಧನೆಗೂ ಮೂಲಭೂತವಾದ ಆಲಯಗಳ ವಿಚಾರವನ್ನು ಜಾಗರೂಕತೆಯಿಂದ ಪರಿಪಾಲಿಸಬೇಕೆಂದೂ, ಆಚಾರ, ದೇವತಾ, ಸಾಂಕರ್ಯಗಳಿಗೆ ಅವಕಾಶಕೊಡದೆ ಅಸಿಧಾರಾವ್ರತವಾಗಿ ನಡೆಯಿಸಬೇಕೆಂದೂ ಶಾಸ್ತ್ರಗಳು ಘಂಟಾಘೋಷವಾಗಿ ಉದ್ಘೋಷಿಸುತ್ತಿವೆ.

ಆದುದರಿಂದ ದೇವಾಲಯ ಸಂಸೇವನೆಯ ವಿಷಯದಲ್ಲಿ, ಗರ್ಭಗೃಹ, ಅಂತರಾಳ, ಮುಖಮಂಟಪ, ಮಹಾದ್ವಾರಾದಿ ಸ್ಥಳಗಳಲ್ಲಿ ಯಾವ ಯಾವ ದೀಕ್ಷಾಪರರು ಯಾವ ಯಾವ ರೀತಿ ಇರಬೇಕೆಂಬುದನ್ನು ಪರಿಶೀಲಿಸಿ ಪ್ರಭುಗಳು ಆಯಾ ಅಧಿಕಾರಿಗಳು ಆಯಾ ಧರ್ಮಗಳಿಗೆ ಲೋಪವಿಲ್ಲದಂತೆ ಪ್ರಾಚೀನಪದ್ಧತಿಯನ್ನು ಕಾಪಾಡುವುದರ ಮೂಲಕ ಸನಾತನಧರ್ಮವೂ, ಶಾಸ್ತ್ರಮರ್ಯಾದೆಯೂ ಅಭಿವೃದ್ಧಿಯನ್ನು ಹೊಂದಿ, ಭಗವದ್ಭಕ್ತರು ಸರ್ವವಿಧದಲ್ಲೂ ತಮ್ಮ ಇಷ್ಟಾರ್ಥಗಳನ್ನು ಸಾಧಿಸಿ ಕೃತಕೃತ್ಯರಾಗುವರಲ್ಲದೆ ಲೋಕಕ್ಕೇ ಕಲ್ಯಾಣ, ಸುಖಶಾಂತಿ, ಭಗವತ್ಪ್ರೀತಿ, ಅನುಗ್ರಹವುಂಟಾಗುವುದೆಂದು ಹೇಳಲು ಸಂಶಯ ಲೇಶವಿರುವುದಿಲ್ಲ. ಭಗವತ್ಪೂಜಾದಿ ಸಮಸ್ತಸತ್ಕರ್ಮಾನುಷ್ಠಾನಗಳನ್ನು ಪೂರ್ಣಶಕ್ತಿಯುತನೂ, ಪರಮಶ್ರೇಷ್ಠನೂ, ಸ್ವತಂತ್ರನೂ, ಸರ್ವೋತ್ತಮನೂ ಆದ ಶ್ರೀಹರಿಯಲ್ಲಿ ಶ್ರೀಕೃಷ್ಣಾರ್ಪಣೆಮಾಡಬೇಕು.

— ಇತಿ ಶಂ —

ಶ್ರೀಕೃಷ್ಣಾರ್ಪಣಮಸ್ತು.

ಓಂ

— ಶ್ರೀಶೇಶಾರ್ಪಣಮಸ್ತು —

ರಘುನಾಥಪ್ರಸಾದೇನ ಸೀತಾಕಾಂತಸ್ಯ ತುಷ್ಟಯೇ
ತನ್ನಾಮತೇನ ಗ್ರಂಥೋಯಂ ರಚಿತಃ ಸದ್ಗುರೋರ್ಬಲಾತ್
॥ ೧ ॥

ಶ್ರೀಚೀಮನ್ಹಳ್ಳೀ ಕೃಷ್ಣಾರ್ಯ ಹೃದಬ್ಜಾಮಲಮಂದಿರಃ
ಹಯಗ್ರೀವೋ ರಮಾಕಾಂತಃ ಪ್ರಿಯತಾಂ ಸೇವಯಾನಯಾ
॥ ೨ ॥

॥ ಇತಿ ಶುಭಂ, ಮಂಗಳಂ, ಭದ್ರಂ, ಅಸ್ತು ॥

ಶ್ರೀ ಧರ್ಮಸ್ಥಳ ಕ್ಷೇತ್ರ ಯಾತ್ರೆ

ಲೇ. ಉ. ಮಂಗೇಶರಾವ್ ಪುತ್ತೂರು.

ಧರ್ಮಸ್ಥಳದೀಪವೆಂದರೆ ನಮ್ಮ ಜಿಲ್ಲೆಯಲ್ಲಿ ಒಂದು ದೊಡ್ಡ ಸಮಾರಂಭ. ಪರವೂರುಗಳಿಂದ ನೆರೆಯ ಹಳ್ಳಿಪಳ್ಳಿಗಳಿಂದ ಲಕ್ಷಗಟ್ಟಲೆ ಜನರು ಅಂದು ಧರ್ಮಸ್ಥಳದಲ್ಲಿ ಸೇರುವರು. ಪ್ರತಿವರ್ಷ ಕಾರ್ತಿಕ ಮಾಸದ ಕೃಷ್ಣಪಕ್ಷದ ಏಕಾದಶಿಯಿಂದ ಅಮಾವಾಸ್ಯೆಯ ವರೆಗೆ ಜಿಲ್ಲೆಯ ಎಲ್ಲಾ ಮಾರ್ಗಗಳು ಧರ್ಮಸ್ಥಳದ ಕಡೆಗೆ ಹೋಗುವುವೆನ್ನಬಹುದು. ಎತ್ತಿನ ಗಾಡಿಗಳು, ಸೈಕಲುಗಳು, ಕಾರುಗಳು, ಬಸ್ಸುಗಳು, ನಡೆದು ಹೋಗುವ ಜನಗಳು ಎಲ್ಲರೂ ಹಿಡಿಯುವ ದಾರಿ ಒಂದೆ—ಧರ್ಮಸ್ಥಳ.

ನಾವು ಪ್ರತಿವರ್ಷವೂ ಉತ್ಸವಕ್ಕೆ ಹೋಗತಕ್ಕನರು. ಆದರೆ ಈ ವರ್ಷ ಪೆಟ್ರೋಲ್ ತುಟ್ಟಿಯಿಂದ ಆ ಸಮಯಕ್ಕೆ ಬಿಡುವ ವಿಶೇಷ ಬಸ್ಸುಗಳ ಮಾತು ಹಾಗಿರಲಿ ನಿತ್ಯದ ಬಸ್ಸು ಚಲಾವಣೆಯೂ ಇಲ್ಲದೆ ಪುತ್ತೂರಿಂದ ಧರ್ಮಸ್ಥಳಕ್ಕೆ ಹೋಗುವುದು ಕಷ್ಟ ಸಾಧ್ಯವಾಯಿತು. ನಡೆದು ಹೋಗುವುದೇ? ಪ್ರಾಯ ಭರದಲ್ಲಿ ನಾವು ಅದಕ್ಕೂ ಗಣ್ಯಮಾಡಿದವರಲ್ಲ. ಗುರುವಯ್ಯನಕೆರೆಯಲ್ಲಿ ರಾತ್ರಿ ಒಂದು ಮಜಲು; ಬೆಳಗ್ಗೆ ಅಲ್ಲಿಂದ ಹೊರಟರೆ ಹನ್ನೊಂದು ಘಂಟೆಯೊಳಗೆ ಧರ್ಮಸ್ಥಳ. ಆದರೆ ಈಗ ಪ್ರಾಯವಾಯಿತು; ನಡೆಯುವ ಧೈರ್ಯವಿಲ್ಲ.

ಮಂಗಳೂರಿಂದ ಚಾರ್ಮಾಡಿ ಕಡೆಗೆ ಹೋಗುವ ನಿತ್ಯದ ಬಸ್ಸಿನಲ್ಲಿ ಟಿಕೆಟು ಸಿಕ್ಕುವುದು ದುರ್ಲಭ. ಆದರೂ ಮಂಗಳೂರಿಂದ ಉಜ್ರೆಗೆ ಹೋಗಿ, ಅಲ್ಲಿಂದ ಧರ್ಮಸ್ಥಳಕ್ಕೆ ನಡೆದುಕೊಂಡು ಹೋಗುವುದೆಂದು ನಾವು ನಿಶ್ಚಯಿಸಿದೆವು. ಅಮಮಾ! ಅಂದಿನ ಟಿಕೆಟು ಗಲಾಟೆಯೆ! ಆ ಬಸ್ಸಿಗೆ ಟಿಕೆಟು ಎರಡು ದಿವಸ ಮುಂಚಿತವೇ ಬಂದಾಗಿದೆ! ಕಡೂರಿಗೆ ಹೋಗುವ ಬಸ್ಸಿನಲ್ಲಿ ಕೆಲವು ಟಿಕೆಟು ಉಳಿದಿದ್ದುವು. ಕಡೂರಿಗೆ ಪಯಣ ಬೆಳಸುವವರಿಗೆ, ಗಡಿಯ ವರೆಗಾದರೂ ಹೋಗುವವರಿಗೆ ಟಿಕೇಟಾಗಿ ಉಳಿದರಲ್ಲವೆ ನಮಗೆ? ಇದರ ಎಡೆಯಲ್ಲಿ ಧರ್ಮಸ್ಥಳದ ಯಾತ್ರಿಕರು ಎರಡು ದಿವಸದಿಂದ ಅಲ್ಲಿ ಕಾದುಕೊಂಡು ಇದ್ದವರು ಬೇರೆ ಇದ್ದಾರೆ! ಶ್ರೀ ಮಂಜುನಾಥನ ಪ್ರೇರಣೆಯಿಂದೆಂಬಂತೆ ನಮಗೆ ಒಂದು ಆಲೋಚನೆ ಹೊಳೆಯಿತು. ಎರಡು ಟಿಕೇಟು ಮೂಡಿಗೆರೆಗೆ ಕೇಳಿದೆವು. ಏಜಂಟರಿಗೆ ನಮ್ಮ ಪ್ರಯಾಣದ ಗುರಿ ಗೊತ್ತಿದ್ದರೂ ಮುಗುಳುನಗುತ್ತ ನಮಗೆ ಮಾರಣೆಯ ದಿನದ ಬೆಳಗ್ಗಿನ ಕಡೂರು ಬಸ್ಸಿಗೆ ಎರಡು ಟಿಕೇಟುಗಳನ್ನು ಬರೆದುಕೊಟ್ಟರು.

ಮಾರಣೆಯ ದಿನ ನಸಕಿಗೆ ಹೊರಟ ಬಸ್ಸು ೯ ಘಂಟೆಗೆ ಮೊದಲೇ ಉಜ್ರೆಗೆ ಮುಟ್ಟಿತು. ಒಡನೆ ನಾವು ಇಳಿದು ಧರ್ಮಸ್ಥಳದ ಮಾರ್ಗವನ್ನು ಹಿಡಿದೆವು. ದಾರಿಯುದ್ದಕ್ಕೂ ಯಾತ್ರಿಕರ ಸಂದಣಿ. ಸೈಕಲುಗಳ ಟಿನ್ ಟಿನ್, ಮೋಟರುಗಳ ಪೊಂ ಪೊಂ ವಾದ್ಯದೊಡನೆ ಎಡಬಲಕ್ಕೆ ಸರಿದು ಮುಂದೊತ್ತುವಾಗ ಮಾರ್ಗದ ಗುಳಿಗಳಲ್ಲಿ ನಿಂತ ನೀರಿನಿಂದ ಆದ ಓಕುಳಿಯಾಟವು ನಮಗೆ ಮಂಗಲಯಾನವನ್ನು ಸೂಚಿಸುವುದೆಂದು ಹರ್ಷಚಿತ್ತರಾದೆವು. ಸ್ವಲ್ಪ ಮುಂದೆ ಹೋಗುತ್ತಲೇ ಪರವೂರ ಗೃಹಸ್ಥರೊಬ್ಬರು ನಮ್ಮ ಬಟ್ಟೆಯೆಲ್ಲ ಕೆಸರಾಗಿದೆಯೆಂದು ಕಾಣಿಸಿದರು. ಹೌದು! ಕೆಸರು ಹಾರಿ ಬಟ್ಟೆಯೆಲ್ಲ ಕೊಳಕಾಗಿತ್ತು. ಹೊಳೆಯಲ್ಲಿ ಸ್ನಾನ ಮಾಡಿಯೇ ದೇವರ ದರ್ಶನಕ್ಕೆ ಹೋಗಬೇಕೆಂಬ ನಮ್ಮ ಆಲೊಚನೆಗೆ ಇದರಿಂದ ಪುಷ್ಟಿ ದೊರೆಯಿತು.

ಅಪರಿಚಿತಸ್ಥರೇ ಆದರೂ ದಾರಿ ನಡೆಯುವಾಗ ಒಮ್ಮೆ ನಮ್ಮೊಡನೆ ಮಾತನಾಡಿದರೆಂದರೆ ಏಳು ಹಜ್ಜೆ ಮುಂದು ಹೋಗುವುದರೊಳಗಾಗಿ ಅವರು ಸ್ನೇಹಿತರಾಗುತ್ತಾರೆ. ಅವರು ಆ ಮೊದಲು ಧರ್ಮಸ್ಥಳಕ್ಕೆ ಹೋದವರಲ್ಲ. ನಾವು ಪ್ರತಿವರ್ಷ ಹೋಗತಕ್ಕವರೆಂದು ತಿಳಿದೊಡನೆ ಅವರು, ನಮ್ಮ ಕೂಟಕ್ಕೆ ಸೇರಿದರೆ ಸರ್ವಕ್ಕೂ ಅನುಕೂಲವೆಂದು ನಮ್ಮ ಬೆನ್ನನ್ನು ಬಿಡಲಿಲ್ಲ. ನಮಗೂ ದಾರಿಯುದ್ದಕ್ಕೆ ಮಾತನಾಡುತ್ತ ಹೋಗುವುದಕ್ಕೆ ಒಂದು ಜನ ದೊರೆತುದು ಸಂತೋಷವೇ.

ಹೊಸದಾಗಿ ಬಂದವರಿಗೆ ಕ್ಷೇತ್ರಪರಿಚಯವನ್ನು ಮಾಡಿಸುವುದು ನಮಗೊಂದು ಹೆಮ್ಮೆಯ ಕೆಲಸವೆಂದು ನಾವು ಅವರನ್ನು ನಮ್ಮ ಜತೆಗೆ ಸೇರಿಸಿಕೊಂಡೆವು.

"ಮಾರ್ಗವು ಅಲ್ಲಲ್ಲಿ ಗುಳಿಗಳು ಬಿದ್ದು ಹಾಳಾಗಿದೆ. ಇದನ್ನು ಬೋರ್ಡಿನವರು ಸರಿಪಡಿಸುವುದಿಲ್ಲವೇಕೆ?" ಎಂದು ನಮ್ಮ ಹೊಸ ಸ್ನೇಹಿತರು ಕೇಳಿದರು. ಉಜ್ರೆಯಿಂದ ಧರ್ಮಸ್ಥಳದ ವರೆಗಿನ ಮಾರ್ಗವು ಹೆಗ್ಗಡೆಯವರದು. ಅಲ್ಲಿ ಎಲ್ಲಿಯೂ ಬೇರೆಯವರಿಗೆ ಆಸ್ತಿಯಿಲ್ಲ. ಮಾರ್ಗವನ್ನು ಅವರು ಆಗಾಗ ಸರಿ ಮಾಡಿಸುತ್ತಾರೆ. ಆ ವರ್ಷ ಮಳೆ ಹೆಚ್ಚಾದುದರಿಂದ ಮಾರ್ಗವು ಸ್ವಲ್ಪ ಹೆಚ್ಚು ಕೆಟ್ಟು ಹೋಗಿದೆ ಎಂದು ನಾನು ತಿಳಿಸಿದೆ.

"ಸಿದ್ಧಾಲಯ ದಾರಿಯಲ್ಲಿ ಸಿಕ್ಕುತ್ತದೆ ಎಂದು ಕೇಳಿದ್ದೆ-ಅಲ್ಲಿ ಕಾಣುವುದು ಅದೆಯೋ?" ಎಂದು ಅವರು ಮುಂದು ಹೋಗುತ್ತ ಕೇಳಿದರು. ಅದು ಹೊಸದಾಗಿ ಆದ ಹೈಸ್ಕೂಲ್. ಸ್ವಲ್ಪ ಮುಂದೆ ಸಿದ್ಧಾಲಯವಲ್ಲ ಸಿದ್ಧವನವೆಂಬ ಗುರುಕುಲವಾಸವು ಸಿಕ್ಕುತ್ತದೆ. ಅಲ್ಲಿ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ವಾಸಕ್ಕೆ ಮನೆಗಳಿದ್ದು ಅದೊಂದು ಪೂರ್ವಕ್ರಮದ ವಿದ್ಯಾನಿಲಯವು. ಹೈಸ್ಕೂಲ್ ಹತ್ತು ಜನಸಮಸ್ತರ ಸಂಸ್ಥೆ. ಗುರುಕುಲ ವಾಸವನ್ನು ಹೆಗ್ಗಡೆಯವರೇ ನಡೆಸುತ್ತಾರೆ ಎಂದು ನನ್ನ ಜತೆಗಾರರು ತಿಳಿಸಿದರು.

"ಇದೆಲ್ಲ ದೇವಸ್ಥಾನದ ಆಸ್ತಿ ಎಂದು ನೀವೆನ್ನುತ್ತೀರಿ. ಹೆಗ್ಗಡೆಯವರದೆಂದು ನಾನು ಕೇಳಿದ್ದೆ. ಅದು ಅವರ ಸ್ವಂತ ದೇವಸ್ಥಾನವೆಂದು ಎಂಡೋವ್‌ಮೆಂಟ್ ಕಾನೂನಿಂದ ಅದನ್ನು ಹೊರಪಡಿಸಿದರೆಂದು ಹೇಳುತ್ತಾರೆ." ಎಂದು ಅವರು ಪುನಃ ಮಾತೆತ್ತಿದರು.

"ದೇವಸ್ಥಾನವು ಅವರ ಮನೆತನದ್ದು. ಆಸ್ತಿಯ ಹೆಚ್ಚಿನ ಭಾಗ ಅವರ ಹೆಸರಲ್ಲೇ ಇದೆ. ಹೆಗ್ಗಡೆಯವರು ಜೈನಮತಸ್ಥರಾದರೂ ಶಿವಾಲಯವು ಅಲ್ಲಿ ಹೇಗೆ ಉಂಟಾಯಿತೆಂಬುದಕ್ಕೆ ಒಂದು ಐತಿಹ್ಯವಿದೆ. ಧರ್ಮಸ್ಥಳಕ್ಕೆ ಮೊದಲು ಕುಡುಮ ಪುರವೆಂಬ ಹೆಸರಿತ್ತು. ಸಾವಿರಾರು ವರ್ಷಗಳಿಗೆ ಹಿಂದೆ ಇಬ್ಬರು ಸಿದ್ಧಪುರುಷರು ನಿತ್ಯಸಹಸ್ರಭೋಜನವಾಗುವ ಒಂದು ಪುಣ್ಯಕ್ಷೇತ್ರವನ್ನು ಸ್ಥಾಪಿಸುವ ಉದ್ದೇಶದಿಂದ ಊರೂರು ತಿರುಗಿ ಕೊನೆಗೆ ಆ ಪ್ರಶಾಂತವಾದ ಪ್ರದೇಶಕ್ಕೆ ಬಂದು, ಅಲ್ಲಿಯ ಪ್ರಕೃತಿಸೌಂದರ್ಯಕ್ಕೆ ಮನಸೋತು ಪುಣ್ಯಕ್ಷೇತ್ರಕ್ಕೆ ಅದೇ ಯೋಗ್ಯಸ್ಥಳವೆಂದು ನಿಶ್ಚಯಿಸಿ ಅಲ್ಲೇ ನೆಲಸಿದರು. ಅವರಿಗೆ ಆಗಿನ ಹೆಗ್ಗಡೆಯವರು ತಮ್ಮ ಬೀಡನ್ನು ಬಿಟ್ಟುಕೊಟ್ಟರು. ಅದನ್ನು ನೆಲ್ಯಾಡಿ ಬೀಡೆನ್ನುವರು. ಈಗ ಅದು ತೆರಪಾಗಿದೆ. ಸಿದ್ಧಪುರುಷರು ಈಗಲೂ ಅಲ್ಲಿ ಅದೃಶ್ಯರಾಗಿದ್ದಾರೆಂದು ಜನರು ಹೇಳುತ್ತಾರೆ. ಒಳಗೆ ಮಂಚ ಉಯ್ಯಾಲೆಯನ್ನಿಟ್ಟಿರುವರು. ಶ್ರೀ ಹೆಗ್ಗಡೆಯವರು ದೇವಸ್ಥಾನದ ಜಾತ್ರೆ ಮತ್ತು ಇತರ ವಿಶೇಷ ಉತ್ಸವಕಾಲಗಳಲ್ಲಿ ಈ ಬೀಡಿನಲ್ಲಿಯೇ ಸ್ನಾನ ಮಾಡುವರು. ಸಿದ್ಧಪುರುಷರ ವಾಸದಿಂದ ಆ ಸ್ಥಳಕ್ಕೆ ಒಂದು ಮಹಿಮೆ ಬಂತು. ಆ ಸ್ಥಳದಲ್ಲಿ ನಿತ್ಯಸಹಸ್ರಭೋಜನವಾಗುವಂತೆ, ಸ್ಥಳದ ಮಹಿಮೆಯೇರುವಂತೆ ಹೆಗ್ಗಡೆಯವರಿಗೆ ವಾಕ್‌ಸಿದ್ಧಿಯ ವರಪ್ರಸಾದ ಕೊಟ್ಟರು. ಈಗಲೂ ಹೆಗ್ಗಡೆಯವರು ನಡೆಯಲ್ಲಿ ನಿಂತು ಆಡಿದ ಮಾತನ್ನು ಹುಸಿಯಾಗದಂತೆ ಅವರು ನಡಿಸಿಕೊಡುತ್ತಾರೆ.... ....

"ಈಗಲೂ!" ಎಂದು ನಮ್ಮ ಸ್ನೇಹಿತರು ಸಂಶಯದ ಸ್ವರ ಕಾಣಿಸಿದರು.

"ಹೌದು. ಈಗಲೂ! ಅದಕ್ಕೆ ಸಂಶಯವೇ ಇಲ್ಲ. ಬೇಕಾದಷ್ಟು ನಿದರ್ಶನಗಳನ್ನು ಕೊಡಬಹುದು. ಯಾಕೆ? ಈಚೆಗೆ ಮೈಸೂರು ಮಹಾರಾಜರವರ ಸ್ವಾರಿ ಕ್ಷೇತ್ರಕ್ಕೆ ಚಿತ್ತೈಸಿದಾಗ ಹೆಗ್ಗಡೆಯವರು ಮಹಾರಾಜರ ಸಂತಾನಾಪೇಕ್ಷೆಯನ್ನು ದೇವರು ನಡಿಸಿಕೊಡುತ್ತಾನೆ ಎಂದು ಹರಸಿದ ಒಂದೇ ವರ್ಷದೊಳಗೆ ಮಹಾರಾಜರಿಗೆ ಹೆಣ್ಣು ಮಗು ಹುಟ್ಟಲಿಲ್ಲವೆ?"

ಆ ಮೇಲೇನಾಯಿತೆಂದು ನಮ್ಮ ಸ್ನೇಹಿತರು ಕೇಳಿದರು. ಆ ಮೇಲೆ ದಿನದಿಂದ ದಿನಕ್ಕೆ ಕ್ಷೇತ್ರದ ಪ್ರಸಿದ್ಧಿ ಹೆಚ್ಚಿ ಜನರು ತಂಡೋಪತಂಡವಾಗಿ ಬರಹತ್ತಿದರು. ಆ ಬಂದವರಿಗೆಲ್ಲ ವಸತಿ, ಊಟ ಉಪಚಾರವೆಲ್ಲ ಭಂಡಾರದ ಕಡೆಯಿಂದ ಆಗುವುದು. ಹೆಗ್ಗಡೆಯವರಿಗೆ ಖರ್ಚಿನ ಯೋಚನೆಯೇ ಬೇಡವೆಂದು ಸಿದ್ಧಪುರುಷರ ಅಪ್ಪಣೆಯಾಗಿದೆ. ಕ್ಷೇತ್ರಕ್ಕೆ ಬಂದ ಕಾಣಿಕೆಹರಕೆಹಣಗಳಿಂದಲೇ ಅಲ್ಲಿಯ ಧರ್ಮವು ಶಾಶ್ವತವಾಗಿ ನಡೆಯುವಂತೆ ಅವರು ಅನುಗ್ರಹಮಾಡಿದ್ದಾರೆ. ಭಂಡಾರಕ್ಕೆ ಎಷ್ಟು ಹಣ ಬಂತೆಂಬ ಲೆಕ್ಕ ನೋಡುವ ಹವ್ಯಾಸವು ಕೂಡ ಹೆಗ್ಗಡೆಯವರಿಗೆ ಬೇಡ,

ಯಾವುದಕ್ಕೂ ಕಡಮೆಯಾಗದಂತೆ ಅಲ್ಲಿಯ ಪ್ರಧಾನ ದೈವವಾದ ಅಣ್ಣಪ್ಪನೇ ನೋಡಿಕೊಳ್ಳುವನು ಎಂದೆ.

“ಹೌದು, ಹೌದು, ಅಣ್ಣಪ್ಪದೈವದ ಹೆಸರು ಕೇಳಿದ್ದೇನೆ. ಕದಿರೆಯಿಂದ ಮಂಜುನಾಥನನ್ನು ತಂದು ಇಲ್ಲಿ ಪ್ರತಿಷ್ಠಿಸಿದುದು ಅವನೇ ಅಲ್ಲವೇ? ಹಾಗೆ ಕೇಳಿದ ನೆನಪು.”

ಹೀಗೆ ಮಾತನಾಡುತ್ತ ನಡೆವಾಗ ದಾರಿ ಬೇಗನೇ ಸಾಗಿತು. ನೇತ್ರಾವತಿ ಹೊಳೆಯಲ್ಲಿ ಸ್ನಾನವನ್ನು ಮಾಡಿ ಮಡಿಬಟ್ಟೆಯನ್ನು ಉಟ್ಟು ದೇವಸ್ಥಾನದ ಕಡೆಗೆ ಕಾಲು ಹಾಕಿದೆವು. ಹೋಗುತ್ತಾ ದಾರಿಯಲ್ಲಿ ಈಗಿನ ಹೆಗ್ಗಡೆಯವರು ಮಾಡಿಸಿದ ಹೊಸ ಅಡಿಕೆತೋಟವನ್ನು ಕಾಣಿಸಿದೆ. “ಈ ಹೆಗ್ಗಡೆಯವರ ಕಾಲದಲ್ಲಿ ದೇವಸ್ಥಾನದ ಉತ್ಪತ್ತಿ ಹೆಚ್ಚಿದೆಯಂತಲ್ಲ! ತುಲಾಭಾರಕ್ಕೆ ಅವರು ಹೇಳಿದಷ್ಟು ಭಂಡಾರಕ್ಕೆ ಒಪ್ಪಿಸಬೇಕಂತೆ. ಹೌದೊ?” ಎಂದು ನಮ್ಮ ಸ್ನೇಹಿತರು ಪ್ರಶ್ನಿಸಿದರು.

“ಈ ಹೆಗ್ಗಡೆಯವರ ಕಾಲದಲ್ಲಿ ಸರ್ವತೋಮುಖವಾಗಿ ಉತ್ಪತ್ತಿಯೇರಿದೆ. ಹಾಗೆಯೇ ಖರ್ಚೂ ಏರಿದೆ. ಸರ್ವತೋಭಿವೃದ್ಧಿಯಾಗಿದೆ. ದೇವಸ್ಥಾನದ ವಠಾರದಲ್ಲಿ ಜನರ ವಸತಿ ಬಗ್ಗೆ ಎಷ್ಟೋ ಹೊಸ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಅಲ್ಲಿ ಕೆಳಗೆ ಕಾರಂಜಿಯ ನೀರು ನಿಂತು ಆದ ಚೌಗುಸ್ಥಳವು ಮಲೇರಿಯದ ನುಸಿಗಳಿಗೆ ತವರಾಗಿ ಊರಿನ ಆರೋಗ್ಯವನ್ನು ಕೆಡಿಸುತ್ತಿತ್ತು. ಅದನ್ನು ಸುಂದರವಾದ ಲಲಿತೋದ್ಯಾನವಾಗಿ ಮಾರ್ಪಡಿಸಿ ಅಲ್ಲಿ ರಮಣೀಯವಾದ ದೇವರ ಮಂಟಪವನ್ನು ಕಟ್ಟಿಸಿದ್ದಾರೆ. ಮಂಟಪದ ಮುಂದೆ ಕಿರುಕೆರೆಗಳು; ಕೆರೆಗಳಲ್ಲಿ ಕಾರಂಜಿಗಳು; ಕೆರೆಯ ನೀರಿನಲ್ಲಿ ಈಜಾಡುವ ಹಂಸಗಳು; ಸುತ್ತಲೂ ಹಚ್ಚಗಾದ ಹುಲ್ಲ ಜಮುಖಾನೆ; ಅದರಿಂದಾಚೆ ಬಗೆಬಗೆಯ ಬಣ್ಣದ ಹೂವಿನ ಗಿಡಗಳು—ಇವುಗಳಿಂದ ಲಲಿತೋದ್ಯಾನವೆಂಬ ಹೆಸರು ಅನ್ವರ್ಥವಾಯಿತು. ಆ ಉದ್ಯಾನದ ಸೌಂದರ್ಯದೊಂದಿಗೆ ಊರಿನ ಆರೋಗ್ಯವು ಸುಧಾರಿಸಿದೆ. ಅಲ್ಲಿಯ ಜನರ ಮತ್ತು ಯಾತ್ರಿಕರ ಪ್ರಯೋಜನಾರ್ಥ ಹೆಗ್ಗಡೆಯವರು ಒಂದು ಧರ್ಮ ಆಸ್ಪತ್ರೆಯನ್ನು ನಡೆಸುತ್ತಾರೆ. ದೇವಸ್ಥಾನದ ಒಳಗೂ ಸರಹದ್ದಿನಲ್ಲೂ ವಿದ್ಯುದ್ದೀಪಗಳ ಏರ್ಪಾಟು ಮಾಡಿದ್ದಾರೆ. ಈ ಹೆಗ್ಗಡೆಯವರ ಕೀರ್ತಿ ಚಿರಸ್ಥಾಯಿ ಆಯಿತು, ಸ್ವಾಮಿ. ಇಷ್ಟೆಲ್ಲಾ ಮಾಡಿದರೂ ತಾನು ನಿಗರ್ವಿ, ವಿದ್ಯಾವಂತರು, ಕಲಾವಂತರು, ಆದರೂ ವಿನಯವಂತರು; ಮಹಾಕರುಣಾಶಾಲಿ. ಉದಾರ ಹೃದಯ ಅವರದು. ಅವರು ಮಾಡಿದ ದಾನಕ್ಕೆ ಲೆಕ್ಕವಿಲ್ಲ. ಅಂತಹವರ ವಿಷಯ ತಾವು ಹೇಳುವುದೇನು? ಯಾತ್ರಿಕರಿಂದ ಹೆಚ್ಚು ಹಣ ಬಡಿದು ಹಾಕುತ್ತಾರೆ! ತುಲಾಭಾರಕ್ಕೆ ತುಂಬ ಕೇಳುತ್ತಾರೆ! ಯಾರು ಹೇಳಿದರು ಇದನ್ನು ನಿಮಗೆ? ರಾಮ, ರಾಮ! ಆ ಧರ್ಮಾವತಾರರ ಮೇಲೆ ಈ ಅಪರಾಧವೇ?............ ...

ಸ್ನೇಹಿತರು ನನ್ನನ್ನು ಎಡೆಯಲ್ಲಿ ತಡೆದು, “ಒಬ್ಬರಿಬ್ಬರು ಹಾಗೆ ಹೇಳುವುದನ್ನು ಕೇಳಿದ್ದೆ, ತಪ್ಪಾಯಿತು ಸ್ವಾಮಿ; ನಾನು ಅದನ್ನು ಕೇಳಬಾರದಿತ್ತು” ಎಂದರು.

“ಕೇಳಿದುದರಿಂದ ತಪ್ಪೇನು? ಅದರ ಸಂಗತಿ ಹೀಗೆ:—ತುಲಾಭಾರದ ಕ್ರಮ ಈ ದೇವಸ್ಥಾನದಲ್ಲಿ ಹಿಂದಿನಿಂದಲೂ ಹಾಗೆಯೇ. ಸಕ್ಕರೆಯೋ ತೆಂಗಿನಕಾಯೋ ಹಾಕಿ ತೂಗಿದ ಮೇಲೆ—ತೂಗಿಸಿಕೊಂಡವರು ನಡೆಯಲ್ಲಿ ದೇವರಿಗೆ ಮೂರು ಸಾರಿ ಅಡ್ಡಬೀಳಬೇಕು. ಅವರು ಏಳುವಾಗ ಒಂದು ಸಂಖ್ಯೆಯನ್ನು ಹೆಗ್ಗಡೆಯವರು ಹೇಳುತ್ತಾರೆ. ಮೂರನೆಯ ಸಾರಿ ಹೇಳಿದ ಸಂಖ್ಯೆಯಷ್ಟು ಮೊಬಲಗನ್ನು ಭಂಡಾರಕ್ಕೆ ಒಪ್ಪಿಸಬೇಕು. ದೇವರೇ ನುಡಿಯುವುದೆಂದು ಅದರ ಅರ್ಥ. ಯಾಕೆ? ಸ್ವಾಮಿ, ಕೆಲವು ವರ್ಷಗಳಿಗೆ ಹಿಂದೆ ಘಟ್ಟದ ಮೇಲಿನಿಂದ ಬಂದ ಒಬ್ಬ ದೊಡ್ಡ ಮನುಷ್ಯರು ತುಲಾಭಾರ ಮಾಡಿಸಿ ಹೆಗ್ಗಡೆಯವರು ೨೦೦ ರೂ. ಹೇಳಿದಾಗ, ತಾನು ೫೦೦ ಸಂಕಲ್ಪ ಮಾಡಿದ್ದೆ ಎಂದರು. ಅದಕ್ಕೆ ಹೆಗ್ಗಡೆಯವರು ದೇವರ ಇಚ್ಛೆಯಲ್ಲಿ ಇನ್ನೂರೇ ಉಂಟು; ಅಷ್ಟೆ ಸಾಕು ಎಂದು ಉತ್ತರ ಕೊಟ್ಟರು! ಅದೆಲ್ಲ ಇಲ್ಲಿಯ ಕ್ರಮ ತಿಳಿಯದವರು ಆಡುವ ಮಾತು. ಅಂತಹ ಮಾತಿಗೆಲ್ಲ ಬೆಲೆ ಇಲ್ಲ. ನುಡಿಗಟ್ಟಿನ ಸಮಯದಲ್ಲಿ ಭೂತ ಕೇಳುವ ಪ್ರಶ್ನೆ ಒಂದೇ—ಹೆಗ್ಗಡೆ, ಧರ್ಮ ಸರಿಯಾಗಿ ನಡೆಯುತ್ತದೋ? ಧರ್ಮಕ್ಕೆ ಚ್ಯುತಿಬಾರದ ಹಾಗೆ ನಡೆಸುತ್ತಾ ಇರು. ಹೆಚ್ಚುಕಡಮೆಯಾದರೆ—ಕಡಿದ ಸ್ವರ ಕೇಳಲಿಕ್ಕಿಲ್ಲ, ಮರ ಬಿದ್ದದ್ದೇ ಗೊತ್ತಾದೀತು, ಜೋಕೆ!”

“ತುಂಬಾ ಧರ್ಮಾತ್ಮರು, ನಾನು ಕೇಳಿದ್ದೇನೆ. ಬಹು ವರ್ಷಗಳಿಂದ ಇಲ್ಲಿ ಧರ್ಮಸಮ್ಮೇಳನ ನಡೆಯು

ತ್ತದೆ ಎಂದು ಕೇಳಿದ್ದೇನೆ. ಆ ಸಭೆ ಕೂಡುವುದೆಲ್ಲಿ? ಯಾವಾಗ?"

"ಅದು ಮೂರು ಮೂರುವರೆ ಘಂಟೆಗೆ ಪ್ರಾರಂಭ ವಾಗುವುದು. ಶಾಲೆಯ ಗುಡ್ಡೆಯಲ್ಲಿ ಅದಕ್ಕೆ ಪ್ರತ್ಯೇಕ ಹಜಾರ ಕಟ್ಟಿಸಿದ್ದಾರೆ. ಕ್ಷೇತ್ರಕ್ಕೆ ಬಂದ ಯಾತ್ರಿಕರು ಸರ್ವಧರ್ಮಸಾರದ ಲಾಭವನ್ನು ಪಡೆಯುತ್ತಾರೆ. ಸಮ್ಮೇಳನವು ಬಹು ಯಶಸ್ವಿಯಾಗಿ ಹಲವು ವರ್ಷಗ ಳಿಂದ ನಡೆಯುತ್ತಾ ಇದೆ. ಇದು ಈ ಕ್ಷೇತ್ರದ ವಿಶೇಷ ಲಕ್ಷಣಕ್ಕೆ ತಕ್ಕಂತೆ ಇದೆ. ನೋಡಿರಿ, ಇಲ್ಲಿಯ ದೇವರು ಈಶ್ವರನು ಶ್ರೀ ಮಂಜುನಾಥಸ್ವಾಮಿ; ಅರ್ಚಕರು ಮಧ್ವಮತಾವಲಂಬಿಗಳಾದ ವೈಷ್ಣವರು; ವ್ಯವಸ್ಥಾಪ ಕರು ಶ್ರೀ ಹೆಗ್ಗಡೆಯರು ಜೈನಮತಸ್ಥರು. ಈ ಕಾರಣ ದಿಂದ ಸರ್ವಮತಗಳ ಸಮನ್ವಯಯತ್ನಕ್ಕೆ ಈ ಕ್ಷೇತ್ರವು ಅರ್ಹವಾದುದು. ಆದುದರಿಂದಲೇ ಶ್ರೀ ಮಂಜಯ್ಯ ಹೆಗ್ಗಡೆಯವರು ವಿಶಾಲದೃಷ್ಟಿಯಿಂದ ಈ ಸಂಸ್ಥೆಯನ್ನು ಏರ್ಪಡಿಸಿದರು. ನಾವು ಊಟ ತೀರಿಸಿದ ಮೇಲೆ ಇವತ್ತಿನ ಸಭೆಗೆ ಹೋಗೋಣ. ಸಮ್ಮೇಳನ ಎರಡು ದಿವಸ ನಡೆಯುತ್ತದೆ."

ನಾವು ದೇವಸ್ಥಾನಕ್ಕೆ ಮುಟ್ಟುವಾಗ ಘಂಟೆ ಹನ್ನೆರಡು ಆಯಿತು. ಹೆಗ್ಗಡೆಯವರು ದೇವಸ್ಥಾನದ ಒಳಗೆ ಹೋಗಿ ಆಗಿದೆ. ಹರಕೆ ಒಪ್ಪಿಸೋಣ ಆಗು ತ್ತಿತ್ತು. ನಾವು ದೇವರ ದರ್ಶನಮಾಡಿಕೊಂಡು ಹಣ್ಣು ಕಾಯನ್ನು ಒಪ್ಪಿಸಿ ತೀರ್ಥಪ್ರಸಾದಗಳನ್ನು ತೆಗೆದು ಕೊಂಡೆವು. ಅನಂತರ ಹೆಗ್ಗಡಯವರ ದರ್ಶನಮಾಡಿ ಕೊಂಡು, ಹೊಸ ಸ್ನೇಹಿತರ ಪರಿಚಯವನ್ನು ಅವರಿಗೆ ಮಾಡಿಸಿ ಅವರ ಬಳಿಯಲ್ಲಿ ಜಗಲಿಯಲ್ಲಿ ಹರಕೆ ಕ್ರಮ ವನ್ನು ನೋಡುತ್ತ ಕುಳಿತೆವು. ಗಳಿಗೆಗೊಂದು ಸಾರಿ ಹರಿ ವಾಣ ತುಂಬ ಹಣಕಾಸು ನೋಟುಗಳು ಭಂಡಾರ ಜಗಲಿ ಯಲ್ಲಿ ಸುರಿಯುತ್ತಿದ್ದರು. ಅವನ್ನು ತರುವಾರು ವಿಂಗಡಿಸಿ ಭಂಡಾರದಲ್ಲಿ ಅವನ್ನು ಅಳವಡಿಸಿ ತುಂಬು ತ್ತಿದ್ದರು. ನಮ್ಮ ಸ್ನೇಹಿತರು ಅದನ್ನೆಲ್ಲ ಅವಾಕ್ಕಾಗಿ ನೋಡುತ್ತಿದ್ದರು.

ಸ್ವಲ್ಪ ಸಮಯದ ಮೇಲೆ ಮಹಾಪೂಜೆ ಆಯಿತು. ನಾವು ಹೆಗ್ಗಡಯವರ ಅಪ್ಪಣೆ ಪಡೆದು ಭೋಜನಶಾಲೆಗೆ ಹೋದೆವು. ಭೋಜನಶಾಲೆಯಲ್ಲಿ ಊಟಕ್ಕೆ ಯೋಗ್ಯ ಏರ್ಪಾಡಾಗಿತ್ತು. ಒಂದು ಕಡೆಯಲ್ಲಿ ಭೂರಿ ಜನರಿಗೆ ಪಡಿಯಳೆದು ಕೊಡುತ್ತಿದ್ದರು. ಅದನ್ನು ಸ್ವಲ್ಪ ಹೊತ್ತು ನೋಡುತ್ತ ನಮ್ಮ ಸ್ನೇಹಿತರು ನಿಂತ ಕಾರಣ ನಾವು ಭೋಜನಶಾಲೆಗೆ ಹೋಗುವಾಗ ತಡವಾಗಿ ನಮಗೆ ಮೊದಲನೆಯ ಸರ್ತಿಗೆ ಸ್ಥಳಸಿಗದೆ ಹೋಯಿತು. ಎರಡ ನೆಯ ಸರ್ತಿಗೆ ಇನ್ನು ಸಮಯವಿದ್ದುದರಿಂದ ನಮ್ಮ ಸ್ನೇಹಿತರಿಗೆ ಹೆಗ್ಗಡೆಯವರ ಬೀಡನ್ನೂ ಅವರೇ ಬರೆದ ಮನೋಹರವಾದ ರಸಚಿತ್ರಗಳನ್ನೂ ಸಮಿಾಪದ ಲಲಿತೋದ್ಯಾನದ ಮಂಟಪವನ್ನು ಕಾಣಿಸಿದೆನು.

"ಪೂಜೆಯಾದ ಮೇಲೂ ಈ ವಾದ್ಯವೇನು ಮುಗಿಯಲಿಲ್ಲ"ವೆಂದು ನಮ್ಮ ಸ್ನೇಹಿತರು ಕೇಳಿದರು.

"ಎಲ್ಲೆಲ್ಲಿಂದಲೂ ನೂರಾರು ವಾದ್ಯದ ಮೇಳಗಳು ಹರಕೆಗಾಗಿ ಬಂದು ಇಲ್ಲಿ ತಮ್ಮ ಸೇವೆ ಸಲ್ಲಿಸುತ್ತಾ ಇದ್ದಾವೆ. ಇವಕ್ಕೆಲ್ಲ ಹಿಂದೆ ಹೋಗುವಾಗ ಒಳ್ಳೆ ಸಂಭಾವನೆಯಾಗುತ್ತದೆ. ಅವರಿಗೆ ಮಾತ್ರವಲ್ಲ, ಬಂದೋ ಬಸ್ತಿಗೆ ಬಂದ ಪೊಲೀಸರಿಗೂ ಸಮ್ಮೇಳನಕ್ಕೆ ಆಮಂತ್ರಿತ ರಾದ ಪಂಡಿತರಿಗೂ ಯೋಗ್ಯ ಸಂಭಾವನೆ ಆಗುತ್ತದೆ. ಆದುದರಿಂದಲೇ ನಾನು ಹಿಂದೆ ಹೇಳಿದುದು—ಉತ್ಪತ್ತಿ ಹೆಚ್ಚುತ್ತಿದ್ದ ಹಾಗೆ ಖರ್ಚೂ ಹೆಚ್ಚುತ್ತಲೇ ಇದೆ. ಈ ದೀಪೋತ್ಸವವಲ್ಲದೆ, ರಥೋತ್ಸವ ಬೇರೆ ಚೈತ್ರಮಾಸ ದಲ್ಲಿದೆ. ನವರಾತ್ರಿಯ ಸಮಯ ವಿಶೇಷ ಪೂಜೆಗಳಿವೆ. ಆಗ ಸುವಾಸಿನಿಯರಿಗೆ ಸೀರೆಗಳನ್ನು ಪ್ರಸಾದವಾಗಿ ಹಂಚುವುದುಂಟು. ಆದರೆ ದೀಪೋತ್ಸವಕ್ಕೆ ಬಂದಷ್ಟು ಜನರು ಆ ಸಮಯದಲ್ಲಿ ಬರುವುದಿಲ್ಲ. ಇದು ಇಲ್ಲಿಯ ಉತ್ಸವಗಳಲ್ಲಿ ಬಹು ವಿಶೇಷವಾದುದು."

"ನನ್ನ ಪುಣ್ಯದಿಂದಲೇ ನೀವು ದಾರಿಯಲ್ಲಿ ನನಗೆ ಸಿಕ್ಕಿದಿರಿ. ಈ ಕ್ಷೇತ್ರದ ಮಹಾತ್ಮ್ಯವನ್ನು ನಿಮ್ಮಿಂದ ಪೂರ್ಣ ತಿಳಿದ ಹಾಗಾಯಿತು. ಒಂದೆರಡು ದಿವಸ ಇಲ್ಲಿ ನಿಂತು ಕೆಲವು ಸೇವೆಗಳನ್ನು ಮಾಡಿಸಿ ನಿಧಾನ ಹೋಗುವ ಆಲೋಚನೆ ಆಗಿದೆ. ತಾವು ಎಷ್ಟು ದಿನ ಇಲ್ಲಿ ಇರುತ್ತೀರಿ?" ಎಂದು ಕೇಳುತ್ತ ನಾವು ಇದ್ದರಾಗ ಬಹುದೆಂಬ ಅವರ ಇಚ್ಛೆ ಕಾಣಿಸಿದರು. ನಾವು ಬೆಳ ಗಾಗಬೇಕಾದರೆ ಪುನಃ ಮಂಗಳೂರಿಗೆ ಹೋಗುವ ಉದ್ದೇಶದಲ್ಲಿದ್ದೇವೆಂದು ಕೇಳಿ ಅವರಿಗೆ ಸ್ವಲ್ಪ ಬೇಸರ ವಾಯಿತು.

ಊಟವಾದ ಮೇಲೆ ಹಳೆ ಕಚೇರಿಯಲ್ಲಿ ಗೊತ್ತಾದ ನಮ್ಮ ಬೀಡಿಗೆ ಹೋದೆವು. ಅಲ್ಲಿ ವಿಶ್ರಾಂತಿಗಾಗಿ ಕಾಲು

ನೀಡಿ ಕುಳಿತುಕೊಂಡೆವು; ಒರಗುವುದಕ್ಕೆ ಸಮಯವಿಲ್ಲ. ಇನ್ನೊಂದು ಅರ್ಧ ಘಂಟೆಯಲ್ಲಿಯೇ ಸಭೆಗೆ ಹೋಗ ಬೇಕು. ಆ ದಿನ ಸಭೆ ನಾಲ್ಕುವರೆ ಘಂಟೆಗೆಂದು ನಿಶ್ಚಯವಾಗಿತ್ತು. ನನಗಾದರೋ ಮುನ್ನಾ ರಾತ್ರಿ ನಿದ್ದೆ ಇರಲಿಲ್ಲ; ನಡೆದುಕೊಂಡು ಬಂದು ಕಾಲು ಬಚ್ಚಿತ್ತು; ಹೊತ್ತು ಕಳೆದು ಊಟ ಮಾಡಿದುದರಿಂದ ಹತ್ತು ಕಡೆ ಯಿಂದಲೂ ನಿದ್ದೆ ಬಂದು ನನ್ನನ್ನು ಆವರಿಸಿಕೊಂಡಿತು. ನನ್ನ ಜತೆಗಾರರಿಗೆ ನಮ್ಮ ಹೊಸ ಗೆಳೆಯರನ್ನು ಸಭೆಗೆ ಕರಕೊಂಡು ಹೋಗುವಂತೆ ಹೇಳಿ ನಾನು ಅಲ್ಲೆ ಒರಗಿದೆನು.

ಸಾಯಂಕಾಲ ಅವರು ಸಭೆಯಾಗಿ ಬರುವಾಗ ನನಗೆ ಎಚ್ಚರಾಗಿತ್ತು; ಆದರೆ ಆಲಸ್ಯದಿಂದ ಕಣ್ಣು ಮುಚ್ಚಿಕೊಂಡು ಮಲಗಿಕೊಂಡಿದ್ದೆನು. ನಮ್ಮ ಗೆಳೆ ಯರು ಒಳಗೆ ಬಂದು "ಏನಯ್ಯ, ಇನ್ನು ಮುಗಿಯ ಲಿಲ್ಲವೇ ನಿಮ್ಮ ನಿದ್ದೆ? ಸಭೆ ಮುಗಿದು ನಾವು ಬಂದಾ ಯಿತು. ಬದುಕಿದೆ! ನನ್ನ ಹಣದ ಪಾಕಿಟು ಅವಸರಕ್ಕೆ ಹೋಗುವಾಗ ಇಲ್ಲೇ ಬಿಟ್ಟು ಹೋಗಿತ್ತು. ಸಭೆಯಲ್ಲಿ ಕೂತಾಗ ನನಗೆ ಅದರದ್ದೇ ಯೋಚನೆ; ಪುಣ್ಯಕ್ಕೆ ಇಲ್ಲೆ ಇದೆ" ಎಂದರು.

"ಹಾಗೇನೂ ಭಯವಿಲ್ಲ. ಧರ್ಮಕ್ಷೇತ್ರವಿದು. ಒಬ್ಬರ ಸೊತ್ತನ್ನು ಒಬ್ಬರು ಎತ್ತಿಕೊಂಡು ಹೋಗುವು ದಿಲ್ಲ. ಮಾತ್ರವಲ್ಲ, ಇವರು ಇಲ್ಲಿ ಮಲಗಿಕೊಂಡಿದ್ದ ರಲ್ಲ!" ಎಂದು ನನ್ನ ಜತೆಗಾರರು ಭರವಸ ಹೇಳಿದರು.

"ಇವರು ಮಲಗಿಕೊಂಡಿದ್ದರು ನಿಜ; ಆದರೆ ಇವ ರನ್ನೇ ಎತ್ತಿಕೊಂಡು ಹೋದರೂ ಇವರಿಗೆ ಗೊತ್ತಾಗು ತ್ತಿರಲಿಲ್ಲ" ಎಂದು ನಮ್ಮ ಗೆಳೆಯರು ನಗಾಡಿದರು.

ಆಗ ಅಲ್ಲಿದ್ದ ಶ್ಯಾನುಭೋಗರು, "ಇಲ್ಲಿ ಕಳವಿನ ಭಯವಿಲ್ಲ. ಅಂತಹದ್ದೇನಾದರೂ ಆದರೆ ಕ್ಷೇತ್ರರಕ್ಷಕ ನಾದ ಅಣ್ಣಪ್ಪನು ತೀವ್ರ ಪತ್ತೆಮಾಡಿಕೊಡುತ್ತಾನೆ. ಕೆಲವು ವರ್ಷಗಳಿಗೆ ಹಿಂದೆ ದೇವಸ್ಥಾನದೊಳಗೇ ಒಂದು ಕಳುವಾದ ಸಂಗತಿ ನೀವು ಕೇಳಿದ್ದೀರೊ?........."

ನಾವು ಒಮ್ಮೆಗೆ, "ಏನೇನು? ದೇವಸ್ಥಾನದ ಒಳಗೆ! ಹಾಗಾದರೆ ಇನ್ನೇನು ಉಳಿಯಿತು ಏನು ಕಳವಾಯಿತು?" ಎಂದು ಕುತೂಹಲಪಟ್ಟೆವು.

ಶ್ಯಾನುಭಾಗರು:—"ಬಹಳ ವಿಚಿತ್ರ ಸಂಗತಿ ಅದು. ಇಲ್ಲಿಯ ಪದ್ಧತಿಪ್ರಕಾರ ದೇವಸ್ಥಾನಕ್ಕೆ ಬೀಗಮುದ್ರೆ ಮಾಡುವ ಮೊದಲು ಒಳಸುತ್ತಿನಲ್ಲಿ ಇಬ್ಬರು ಪ್ರದಕ್ಷಿ ಣೆಯಾಗಿ ಇಬ್ಬರು ಅಪ್ರದಕ್ಷಿಣೆಯಾಗಿ ಕೂ ಹಾಕುತ್ತಾ ಒಳಗೆ ಯಾರೂ ಉಳಕೊಂಡಿಲ್ಲವೆಂದು ಸಮಾಧಾನ ಮಾಡಿಕೊಂಡು ಆ ಮೇಲೆ ಬಾಗಿಲು ಭದ್ರಮಾಡುವ ಕ್ರಮ. ಒಂದು ದಿನ ಪಾಲಕಿಉತ್ಸವವಾಗಿ ಒಳಜಗಲಿ ಯಲ್ಲಿ ಸಿಂಗರಿಸಿದ ಪಾಲಕಿ ಇಟ್ಟು ಕ್ರಮಪ್ರಕಾರ ಬೀಗ ಹಾಕಿ ಎಲ್ಲರೂ ಮನೆಗೆ ಹೋದರು. ಮಾರಣೆಯ ದಿನ ಬಾಗಿಲು ತೆರೆದು ಒಳಗೆ ಹೋಗಿ ನಿತ್ಯಕ್ರಮವಾಗುತ್ತಿರು ವಾಗ ಒಬ್ಬರ ದೃಷ್ಟಿ ಪಾಲಕಿ ಕಡೆ ಹೋಯಿತು. ಪಾಲ ಕಿಯ ಕೊಂಬಿಗೆ ಸಿಂಗರಿಸಿದ ಚಿನ್ನದ ಗೊಂಡೆಗಳೊಂದೂ ಇಲ್ಲ! ಬೀಗ ಹಾಕುವುದಕ್ಕೆ ಮೊದಲು ಅದನ್ನು ಒಳಗೆ ತೆಗೆದಿಟ್ಟದ್ದಾರೆಯೋ ಎಂದು ಕೇಳಿಯಾಯಿತು. ಯಾರೂ ತೆಗೆದಿಡಲಿಲ್ಲ. ಎಲ್ಲರಿಗೂ ಎದೆಗುದಿ ಪ್ರಾರಂಭವಾಯಿತು. ಅರ್ಚಕರು ಓಡಿಹೋಗಿ ಹೆಗ್ಗಡೆಯವರಿಗೆ ತಿಳಿಸಿದರು. ಹೆಗ್ಗಡೆಯವರು ಬಂದು ನೋಡಿದರು. ಶೋಧನೆ ನಡಿಸಿ ದುದು ಯಾರು? ಬಾಗಿಲು ಹಾಕಿದ್ದುದು ಯಾರು? ಮೊದಲು ಕಳವು ತಿಳಿದುದು ಯಾರಿಗೆ! ಮುಂತಾಗಿ ಪ್ರಶ್ನೆಮಾಡಿದರು, ಸಿಬ್ಬಂದಿಯವರನ್ನೆಲ್ಲ ಸಾಲಾಗಿ ನಿಲ್ಲಿಸಿ ಒಬ್ಬೊಬ್ಬರನ್ನೇ ಕೇಳಿದರು. ಪ್ರತಿಯೊಬ್ಬನು ದೇವ ರಿಗೂ ಹೆಗ್ಗಡೆಯವರಿಗೂ ಅಡ್ಡಬಿದ್ದು ನಾನು ನಿರಪರಾಧಿ, ತನಗೆ ಏನೂ ತಿಳಿದಿಲ್ಲವೆಂದು ಪ್ರಮಾಣಪೂರ್ವಕ ಹೇಳಿದನು. ಅಂದ ಮೇಲೆ ಒಳಗಿನ ಸೊತ್ತು ಇಲ್ಲ ವಾಗುವುದು ಹೇಗೆ? ಹೆಗ್ಗಡೆಯವರಿಗೆ ಆಶ್ಚರ್ಯವಾಗಿ ಏನೂ ತೋಚದೇ ಹೋಯಿತು. ಅವರ ಬುದ್ಧಿಗೆ ಏನೋ ತೋರಿ ಫಕ್ಕನೆ, "ಈ ಕಳವು ನಮ್ಮಿಂದ ಪತ್ತೆ ಯಾಗುವ ಹಾಗಿಲ್ಲ. ಅಣ್ಣಪ್ಪನೆ ಇದರ ಪತ್ತೆಮಾಡಲಿ." ಎಂದು ಹೇಳಿ ಕೆಳಗಿಳಿದು ಬೀಡಿಗೆ ಹೋದರು.

"ಕಳವಾದ ಸೊತ್ತು ಪತ್ತೆಯಾಯಿತೆ?" ಎಂದು ನಾನು ಕೇಳಿದೆ.

ಶ್ಯಾನುಭಾಗರು, "ಆಗದೇ ಹೋದೀತೆ, ಸ್ವಾಮಿ? ಕೇಳಿರಿ, ಮಾರಣೆಯ ದಿನ ಮಂಗಳೂರಿನಿಂದ ಶೀಘ್ರ ವರ್ತಮಾನ ಬಂತು,—ಒಬ್ಬ ಹುಡುಗ ಪ್ರಾಯದವನು ಬಂದರದ ಒಂದು ಚಿನಿವಾರಕಟ್ಟೆಗೆ ಹೋಗಿ ಅಲ್ಲಿ ಅದನ್ನು ವಿಕ್ರಯಿಸುವುದಕ್ಕೆ ಹೊರತೆಗೆದನು. ಆಗ ಆ ಕಟ್ಟೆಯಲ್ಲಿ ಅಣ್ಣಪ್ಪನೆಂಬೊಬ್ಬ ರಿಟಾಯರ್ಡ್ ಹೆಡ್ ಕಾನ್‌ಸ್ಟಿಬಿಲನು ಕೂತಿದ್ದನು. ಅವನ ಪೊಲಿಸ್ ಕಣ್ಣಿಗೆ

ಆ ವ್ಯಾಲು ನೋಡಿದೊಡನೆ ಕಳವಿನದಿರಬೇಕೆಂದು ಸಂಶಯವಾಯಿತು. ಒಡನೆ ಗದರಿಸಿ ಹುಡುಗನನ್ನು ಕೇಳಿದನು. ಅವನು ಹೆದರಿ ಎಲ್ಲಾ ಸಂಗತಿ ತಿಳಿಸಿದನು. 'ಅವನನ್ನು ಹಿಡಿದು ಕೋಣೆಯೊಳಗೆ ಹಾಕಿದ್ದಾರೆ. ದೇವಸ್ಥಾನದ ಸೊತ್ತನ್ನುತೆಗೆದುಕೊಂಡು ಹೋಗುವುದಕ್ಕೆ ದೇವಸ್ಥಾನದ ಕಡೆಯಿಂದ ಒಬ್ಬರು ಬರಬೇಕು' ಎಂದು ಆ ಅಣ್ಣಪ್ಪನು ಹೇಳಿ ಕಳುಹಿಸಿದನು. ಮಂಗಳೂರಿಗೆ ಹೋಗಿ ಸೊತ್ತನ್ನು ತೆಗೆದುಕೊಂಡು ಬಂದವನು ನಾನೇ. ಇದರಲ್ಲಿ ವಿಶೇಷವೇನೆಂದರೆ ಅದನ್ನು ಪತ್ತೆಮಾಡಿದವನು ಹೆಸರಿನಿಂದ ಅಣ್ಣಪ್ಪನೇ!"

ನಾನು, "ಆಶ್ಚರ್ಯ! ಆಶ್ಚರ್ಯ! ಅದಿರಲಿ; ಆ ಹುಡುಗನು ಯಾರು? ಅವನು ಕಳವು ಮಾಡಿದುದು ಹೇಗೆ?" ಎಂದು ನಾನು ವಿಚಾರಿಸಿದೆನು.

ಶ್ಯಾನುಭಾಗರು, "ಹುಡುಗ, ಬೀಡಿನಲ್ಲೇ ಕೆಲಸಕ್ಕಿದ್ದನು, ಆತ ಕೂ ಹಾಕುವ ಸಮಯಕ್ಕೆ ಮೂಲೆಯ ಮಾಳಿಗೆಯಲ್ಲಿ ಅಡಗಿದ್ದನಂತೆ. ರಾತ್ರಿಯಲ್ಲಿ ಕೆಳಗಿಳಿದು ಚಿನ್ನದ ಗೊಂಡೆಗಳನ್ನು ಕಳವು ಮಾಡಿ ಮಾಳಿಗೆಯಿಂದ ರಥ ಎಳೆಯುವ ಹಗ್ಗ ಕೆಳಗಿಳಿಯಬಿಟ್ಟು ಅದನ್ನು ಹಿಡಿದು ಕೆಳಗೆ ಬಂದನಂತೆ. ಹಗ್ಗವನ್ನು ಎಲ್ಲಿಯೋ ಅಡಗಿಸಿಟ್ಟು ಪರಾರಿಯಾದನು. ತಾನು ಕೆಲವು ದಿವಸಗಳ ಮಟ್ಟಿಗೆ ಮನೆಗೆ ಹೋಗುತ್ತೇನೆಂತ ಹೆಗ್ಗಡೆಯವರ ಅಪ್ಪಣೆ ಅವನು ಮೊದಲೇ ಪಡೆದಿದ್ದುದರಿಂದ ಯಾರಿಗೂ ಅವನ ಮೇಲೆ ಎಳ್ಳಷ್ಟೂ ಸಂಶಯವಾಗಲಿಲ್ಲ. ವ್ಯಾಲು ಸಿಕ್ಕಿದುದರಿಂದ ಆ ಹುಡುಗನನ್ನು ಸುಲಭದಲ್ಲಿ ತೀರಿಸಿದರು".

ಈ ಕಥೆಯಿಂದ ಅಣ್ಣಪ್ಪ ದೈವದ ಮೇಲಿನ ನಮ್ಮ ಅಭಿಮಾನವು ಹೆಚ್ಚಿತು. ಅಣ್ಣಪ್ಪನ ಆ ಮಹಿಮೆಗಾಗಿಯೇ ಪರಿವಾರದೇವತೆಗಳಲ್ಲಿ ಪ್ರಥಮ ಸ್ಥಾನ ಕೊಟ್ಟು ಎಲ್ಲೂ ಇಲ್ಲದ ಮರ್ಯಾದೆಯನ್ನು ಆತನಿಗೆ ಇಲ್ಲಿ ಸಲ್ಲಿಸಿರುವರು.

ಆ ಇಡಿ ದಿನ ಮಳೆ ಇರಲಿಲ್ಲ. ರಾತ್ರಿಯ ಉತ್ಸವವು ಬಹು ಸಾಂಗವಾಗಿ ನೆರವೇರಿತು. ಉತ್ಸವ ಮೂರ್ತಿಯ ಮುಂದೆ ಸಿಂಗರಿಸಿದ ದೇವಸ್ಥಾನದ ಆನೆ ಹೋಗುವುದರಿಂದ ದೇವರ ಮುಂದೆ ತೆರವಾಗಿರುತ್ತದೆ. ಬೆಳ್ಳಿ ಚಿನ್ನಗಳಿಂದ ಮಡಾಯಿಸಿದ ಲಾಲಕಿಗೆ ಸಾಧಾರಣದವರು ಸೇವೆಗೆ ಹೆಗಲು ಕೊಡಲು ಸಾಧ್ಯವಿಲ್ಲ. ಆ ಸೇವೆಗೆ ಮೊದಲೇ ಗೊತ್ತಾದ ಜನಗಳಿರುತ್ತಾರೆ. ಸ್ವಯಂಸೇವಕರು ಅಲ್ಲಲ್ಲಿ ಕಟ್ಟೆಗೆ ಕೋಲನ್ನು ಹಿಡಕೊಂಡು ಜನಸಂದಣಿಯನ್ನು ಸುವ್ಯವಸ್ಥೆಯಿಂದ ದೇವರ ಹಿಂದೆ ನಡೆಯಿಸುತ್ತಾರೆ. ದೇವಸ್ಥಾನದ ಪರಿಚಾರಕರು, ಸೇವಕರು ಶ್ರದ್ಧೆಯಿಂದ ತಂತಮ್ಮ ಕೆಲಸಗಳನ್ನು ಕ್ರಮವಾಗಿ ಮಾಡುತ್ತಿರುವುದರಿಂದ ಒಂದು ಕಟ್ಟೆಯಿಂದ ಇನ್ನೊಂದು ಕಟ್ಟೆಗೆ ದೇವರು ಹೋಗುವಾಗ ಸರ್ವವೂ ಸಜ್ಜುಗೊಂಡಿರುತ್ತದೆ. ಎವೆ ಹಳಚುವುದರೊಳಗಾಗಿ ಪ್ರಮುಖ ಅತಿಥಿಗಳ ಬಗ್ಗೆ ಕುರ್ಚಿಗಳು ತಯಾರಾಗುವುವು. ಧರ್ಮಸ್ಥಳದಲ್ಲಿ ಕಟ್ಟೆಯ ಪೂಜೆಯು ಅಷ್ಟ ವಿಧಾನ ಕ್ರಮದಲ್ಲಿ ಒಂದು ವಿಶೇಷವಿದೆ. ಒಂದೊಂದು ವಿಧಾನದ ಸೇವೆ ದೇವರ ಮುಂದೆ ಆಗುತ್ತಿರುವಾಗ ಇಕ್ಕೆಲದಲ್ಲಿ ನಿಂತ ಕಟ್ಟೆಗೆಕೋಲ ಹೊಗಳುಭಟರು ದೇವರ ಚಿತ್ರಕ್ಕೆ ಅದನ್ನು ಮಧ್ಯೆ ಮಧ್ಯೆ ಒಪ್ಪಿಸುತ್ತಾರೆ. ಅಷ್ಟ ಸೇವೆಯಲ್ಲಿ ವ್ಯಾಖ್ಯಾನವೂ ಒಂದಾಗಿರುತ್ತದೆ.

ಕೊನೆಯ ಕಟ್ಟೆಯ ಪೂಜೆಯಾಗಿ ಅಲ್ಲಿಂದ ದೇವರು ಹೊರಟರು ಎನ್ನುವಾಗ ಅವಸರದ ಜನಗಳೆಲ್ಲ ಮರುಪಯಣಕ್ಕೆ ಕಾಲು ತೆಗೆದಾಯಿತು. ಬೆಳಗಾಗಬೇಕಾದರೆ ಮುಕ್ಕಾಲುಪಾಲು ಜನ ಹರಿದಾಯಿತು. ಕೆಲವು ವರ್ಷಗಳ ಹಿಂದಾದರೆ ಎಲ್ಲಾ ಕಂಪೆನಿಯ ಬಸ್ಸುಗಳೂ ಎಲ್ಲಾ ಲಾಯ್ನಿನ ಬಸ್ಸುಗಳೂ ಮೂವತ್ತು ನಾಲ್ವತ್ತು ಹಿಂತಿರುಗುವ ಜನರ ಸೌಕರ್ಯಕ್ಕಾಗಿ ಸಾಲಾಗಿ ನಿಂತಿರುತ್ತಿದ್ದುವು. ಈಗ ಕೆಲವು ಕಾರುಗಳೂ ಟೆಕ್ಸಿಗಳೂ ನಿಲ್ಲುತ್ತವೆ. ನಮ್ಮ ಸ್ನೇಹಿತರಂತೂ ನಮ್ಮ ಜತೆಗೆ ಬರುವರಲ್ಲವೆಂದಿದ್ದರು. ನಮಗಿಬ್ಬರಿಗೆ ಒಬ್ಬ ಸ್ನೇಹಿತರ ಟೆಕ್ಸಿಯಲ್ಲಿ ಸ್ಥಳ ದೊರೆದಿತ್ತು. ಕೊನೆಯ ಕಟ್ಟೆಯಲ್ಲಿ ಹೆಗ್ಗಡೆಯವರ ಅಪ್ಪಣೆ ಪಡೆದು ನಾವು ಹೊರಡುವುದಕ್ಕೆ ಸಿದ್ಧರಾಗಿದ್ದೆವು. ಬರುವ ವರ್ಷವೂ ಶ್ರೀಮಂಜುನಾಥನ ದರ್ಶನಲಾಭವಾಗಲೆಂದು ಪ್ರಾರ್ಥಿಸಿ ದೇವರ ಅಪ್ಪಣೆಯನ್ನು ಪಡೆದು ನಾವು ಟೆಕ್ಸಿಯನ್ನು ಹತ್ತಿದೆವು. ಬೆಳಗಾಗ ಬೇಕಾದರೆ ಮಂಗಳೂರಿಗೆ ಮುಟ್ಟಿ ಅಲ್ಲಿ ಅನುಕೂಲದ ಬಸ್ಸು ಹಿಡಿದು ಹನ್ನೆರಡು ಘಂಟೆಯೊಳಗೆ ಮನೆಗೆ ಬಂದೆವು. ಅಂತೂ ಸುಖಮಯವಾಗಿ ನಮ್ಮ ಧರ್ಮಸ್ಥಳ ಯಾತ್ರೆ ಮುಗಿಯಿತು.

ಧರ್ಮಸ್ಥಳದ ಶಿವಲಿಂಗಕ್ಕೆ ಮಂಜುನಾಥ ಎಂಬ ಹೆಸರು ಹೇಗೆ ಬಂತು?

ಶ್ರೀ ಯಂ. ಗೋವಿಂದ ಪೈ, ಮಂಜೇಶ್ವರ.

ಶ್ರೀಮನ್ಮಧ್ವಾಚಾರ್ಯರು ಉಡುಪಿಯಲ್ಲಿ ಸ್ಥಾಪಿಸಿದ ಅಷ್ಟಮಠಗಳಲ್ಲಿ ಒಂದಾದ ಸೋದೆಯ ಮಠದ ಯತಿವರ್ಯರಾದ ಶ್ರೀ ವಾದಿರಾಜ ತೀರ್ಥರವರು (ಕ್ರಿ. ಶ. ೧೪೮೦—೧೬೦೧) ಯಾವೊಮ್ಮೆ ಪಯಣಗತಿಯಿಂದ ಬರುತ್ತಿದ್ದ ದಾರಿಯಲ್ಲಿ, ಆಗ್ಗೆ ಕುಡಮ ಎಂದು ಹೆಸರಿದ್ದ ಧರ್ಮಸ್ಥಳಕ್ಕೆ ಮುಟ್ಟಿದಾಗ, ಯಾವೊಂದೂ ದೇವಾಲಯವಿಲ್ಲದ ಊರಿನಲ್ಲಿ ತಾವು ತಂಗೆವೆಂದೂ ಭಿಕ್ಷೆ ಮಾಡೆವೆಂದೂ ಅಲ್ಲಿಂದ ಅವರು ಕಾಲು ತೆಗೆಯುತ್ತಲೆ, ಅಲ್ಲಿ ಯಾವ ಹಿಂದಿನಿಂದೇನೋ ನೆಲಸಿದ್ದು ಈಗ ಹೇಗೋ ಆಗಲೂ ಹಾಗೆ ಗ್ರಾಮದೇವತೆ ಎಂದು ಮನ್ನಿಸಲ್ಪಡುತ್ತಿದ್ದ ಅಣ್ಣಪ್ಪ ಎಂಬ ಭೂತವು ತಾನು ಕ್ಷಣಮಾತ್ರದಲ್ಲಿ ಒಂದು ಶಿವಲಿಂಗವನ್ನು ತರುವೆನೆಂದು ಮಂಗಳೂರಿನ ನೆರೆಹೊರೆಯ ಕದರಿ ಎಂಬಲ್ಲಿಗೆ ನೆಗೆದು ಅಲ್ಲಿಯ ದೇವಾಲಯದಲ್ಲಿರುವ ಮಂಜುನಾಥ ಎಂಬ ಶಿವಲಿಂಗದ ಮೇಲ್ಭಾಗವನ್ನು ಹಿಡಕೊಂಡು ಧರ್ಮಸ್ಥಳಕ್ಕೆ ಬಂದಿತೆಂದೂ, ಶ್ರೀಪಾದಂಗಳವರು ಅದನ್ನಲ್ಲಿ ಪ್ರತಿಷ್ಠಿಸಿ ಕೆಲವೊತ್ತು ಅಲ್ಲಿ ತಳುಗಿಕೊಂಡು ಮುಂದುವರಿದರೆಂದೂ* ಬಹಳ ಹಿಂದಿನಿಂದ ನಂಬಿಬರುವ ಜನಜನಿತವಾದೊಂದು ಐತಿಹ್ಯವಿದೆ. ಆ ಮೇರೆಗೆ ಧರ್ಮಸ್ಥಳದ ಶಿವಲಿಂಗವು ಕ್ರಿಸ್ತಶಕದ (ಕ್ರಿ. ಶ.) ೧೬ನೆಯ ಶತಕದಲ್ಲಿ, ಅಂದರೆ ಇಂದಿಗೆ ೪೦೦ ವರ್ಷಗಳ ಹಿಂದಾದರೂ ಅಲ್ಲಿ ಪ್ರತಿಷ್ಠಿಸಲ್ಪಟ್ಟಿರಬೇಕು. ಈ ಲೋಕವಾದದ ಸಾರಾಸಾರ ವಿಚಾರ ಹೇಗೂ ಇರಲಿ, ಇದರಿಂದ ಇಷ್ಟೊಂದಾದರೂ ಸಿದ್ಧವಾಗುತ್ತದೆ, ಧರ್ಮಸ್ಥಳದ ಮಂಜುನಾಥ ಲಿಂಗವು ಕದರಿಯ ಮಂಜುನಾಥ ಲಿಂಗಕ್ಕಿಂತ ಸಾಕಷ್ಟು ಅರ್ವಾಚೀನವೆಂದು, ಅಂದರೆ ಮಂಜುನಾಥ ಎಂಬ ಹೆಸರು ಮೂಲತಃ ಕದರಿಯ ಶಿವಲಿಂಗಕ್ಕೆ ತಾನೆ ಇದ್ದು, ಆ ಲಿಂಗದಿಂದಲೆ, ಅತಏವ ಅದರ ಎಷ್ಟೋ ಬಳಿಕಲೆ, ಧರ್ಮಸ್ಥಳದ ಲಿಂಗಕ್ಕೆ ಬಂದಿರಬೇಕೆಂದು. ಹಾಗಾದರೆ ಧರ್ಮಸ್ಥಳದ ಶಿವಲಿಂಗಕ್ಕಿರುವ ಮಂಜುನಾಥ ಎಂಬ ಹೆಸರು ಹೇಗೆ ಬಂತು? ಎಂದು ವಿಚಾರಿಸುವಲ್ಲಿ ಕದರಿಯ ಶಿವಲಿಂಗಕ್ಕೆ ಆ ಹೆಸರು ಹೇಗೆ ಬಂತೆಂದು ಕಂಡುಹಿಡಿದರೆ, ಧರ್ಮಸ್ಥಳದ ಲಿಂಗಕ್ಕೂ ಇರುವ ಅದೇ ಹೆಸರು ಹೇಗೆ ಬಂತೆಂದು ಅರುಂಧತೀಪ್ರದರ್ಶನ ನ್ಯಾಯದಿಂದ ಸ್ವಯಮೇವ ವೇದ್ಯವಾಗುತ್ತದೆ.

ಮಂಗಳೂರಿನ ಉಪಕಂಠವಾಗಿರುವ ಕದರಿಯ ದೇವಾಲಯದಲ್ಲಿರುವ ಶಿವಲಿಂಗದ ಹೆಸರು ಮಂಜುನಾಥ ಎಂದು ತುಳುನಾಡಿನವರೇ ಅಲ್ಲ, ಪ್ರಾಯಶಃ ಕರ್ಣಾಟಕದಲ್ಲಿ ಕೂಡ ಎಲ್ಲರೆಂಬಂತೆ ಬಲ್ಲರು. ಆ ಲಿಂಗಕ್ಕೆ ಈ ಹೆಸರು ಕನಿಷ್ಠ ಪಕ್ಷಕ್ಕೆ ಇಂದಿಗೆ ೬೦೦ ವರ್ಷಗಳ ಹಿಂದಿನಿಂದಾದರೂ ಇದ್ದಿರುವಂತೆ ಆ ದೇವಾಲಯದಲ್ಲೇ ಇರುವ ಈ ಶಾಸನಗಳಿಂದ ಗೊತ್ತಾಗುತ್ತದೆ—

(೧) ಶಾಲಿವಾಹನ ಶಕ ವರ್ಷ (ಶಾ. ಶ.) ೧೩೧೧ ಪ್ರಮೋದ ಸಂ। ಪುಷ್ಯ ಬಹುಳ ೧೧ ಬೃಹಸ್ಪತಿವಾರ ಮಕರ ಸಂಕ್ರಾಂತಿ=ಕ್ರಿ. ಶ. ೧೩೮೮ ದಶಂಬರ ೨೪ನೆಯ ತಾರೀಕು ಗುರುವಾರ ಮಕರ ಸಂಕ್ರಮಣದಂದಿನ ಶಿಲಾಶಾಸನದಲ್ಲಿ[೧] 'ಮಂಜಿನಾಥ ದೇವರ' (ಪಂಕ್ತಿ ೨೭; ೩೦). ಇಲ್ಲಿ ಹೇಳಿರುವ ಸಂವತ್ಸರ ಮಾತ್ರ ಪ್ರಮೋದ (ಕ್ರಿ. ಶ. ೧೩೯೦-೯೧) ಅಲ್ಲ, ವಿಭವ (ಕ್ರಿ. ಶ. ೧೩೮೯-೮೯).

(೨) ಶಾ. ಶ. ೧೩೦೮ ಕ್ಷಯ ಸಂ।....(ಸಂ)ಕ್ರಾಂತಿ=ಕ್ರಿ. ಶ. ೧೩೮೬-೮೭ರ ಮತ್ತೊಂದು ಶಿಲಾಶಾಸನದಲ್ಲಿ[೨] 'ಶ್ರೀ ಮಂಜಿನಾಥ' (ಪಂ. ೫), 'ಮಂಜಿನಾಥ ದೇವರ' (ಪಂ. ೨೩; ೨೬; ೨೮; ೩೧), 'ಮಂಜೇಸ್ವರ ದೇವರ' (ಪಂ. ೩೦).

---

*ಅಥವಾ ಆಮುಂಚೆಯೇ ಕದರಿಯಿಂದ ತಂದು ಆಗ ಕುಡುಮ ಎಂದಿದ್ದ ಧರ್ಮಸ್ಥಳದಲ್ಲಿ ಪ್ರತಿಷ್ಠಿಸಿದ್ದ ಮಂಜುನಾಥ ಎಂಬ ಆ ಶಿವಲಿಂಗಕ್ಕೆ ವಾದಿರಾಜ ಸ್ವಾಮಿಯವರು ಪುನಃ ಸಶಾಸ್ತ್ರೀಯವಾಗಿ ಬ್ರಹ್ಮಕಲಶ-ಪ್ರತಿಷ್ಠೆ ಮುಂತಾದುದನ್ನು ಮಾಡಿದರೆಂದೂ ಪ್ರತೀತಿ ಇದೆ.

೧ South Indian Inscriptions *(SII) VII*, ನಂ. ೧೯೦, ಪು. ೮೬.

೨ ಅದೇ, ನಂ ೧೮೯, ಪು. ೮೪-೮೫.

ಇವೆರಡೂ ಶಾಸನಗಳಲ್ಲಿ ಆ ಶಿವಲಿಂಗದ ಹೆಸರು ಮಂಜುನಾಥ ಎಂದಿಲ್ಲದೆ ಮಂಜಿನಾಥ ಎಂದಿರುವುದನ್ನೂ, ೨ನೆಯಧರಲ್ಲಿ ಅದರ ಮಂಜು+ನಾಥ ಎಂಬ ಸಮಸ್ತನಾಮದ ಪರಪದವಾದ ನಾಥ ಎಂಬುದರ ಬದಲಾಗಿ ಅದರ ಪರ್ಯಾಯಪದವಾದ ಈಸ್ವ(ಶ್ವ)ರ ಎಂಬುದನ್ನು ಆ ಸಮಸ್ತಪದದಲ್ಲಿ ಕೂಡಿಸಿಡುವಲ್ಲಿ ಆ ಸಮಸ್ತನಾಮವನ್ನು ಮಂಜೇಸ್ವರ ಎಂದಿರುವುದನ್ನೂ ಗಮನಿಸಬಹುದು.

ಇವಲ್ಲದೆ ತುಳುನಾಡಿನಲ್ಲಿ ಇತರತ್ರವೂ ಒಂದೆರಡು ಶಾಸನಗಳಲ್ಲಿ 'ಮಂಜುನಾಥ ದೇವರ' ಹೆಸರು ಕಂಡು ಬರುತ್ತದೆ—

(೧) ಮೂಡಬಿದರೆಯ ನೆರೆಯ 'ಪ್ರಾಂತ' ಎಂಬ ತ್ರಣ ಗೌರೀ ದೇವಾಲಯದಲ್ಲಿರುವ ಶಾ. ಶ. ೧೩೧೮ ಸಂದು ವರ್ತಮಾನ ಈಶ್ವರ ಸಂ। ದ ಸಿಂಹಮಾಸ (ದಿನ) ೨ ಆದಿತ್ಯವಾರ=ಕ್ರಿ. ಶ. ೧೪೭೬ನೆಯ ಜುಲಾಯಿ ೩೦ನೆಯ ತಾರೀಕು ಆದಿತ್ಯವಾರದ ಶಿಲಾಶಾಸನದಲ್ಲಿ[೩] 'ಶ್ರೀ ಮಂಜುನಾಥ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕರಪ್ಪ' (ಪಂ. ೪-೫). ಇಲ್ಲಿ ಹೇಳಿರುವ ಸಂವತ್ಸರವಾದರೆ ಈಶ್ವರವಲ್ಲ (ಕ್ರಿ. ಶ. ೧೪೭೭-೭೮), ಧಾತೃ (ಕ್ರಿ. ಶ. ೧೪೭೬-೭೭).

(೨) ಮೂಡಬಿದರೆಯ ಗುರುಗಳ ಬಸ್ತಿಯಲ್ಲಿಯ ಹೊಯಿಸಳ ವೀರನಾರಸಿಂಹನ ಮಗನಾದ ವೀರ ಬಲ್ಲಾಳನ ಆಳಿಕೆಯ (ಕ್ರಿ. ಶ. ೧೧೭೩-೧೨೨೦) ವಿಸು (=ವೃಷ) ಸಂ। ಮಕರಮಾಸ (ದಿನ) ೧೫ ಗುರುವಾರ= ಕ್ರಿ. ಶ. ೧೨೨೦ ಜನವರಿ ೯ನೆಯ ತಾರೀಕು ಗುರುವಾರದ ಶಿಲಾಶಾಸನದಲ್ಲೂ[೪] 'ಶ್ರೀ ಮಂಜುನಾಥ ದೇವರ ದಿಬ್ಯ ಶ್ರೀಪಾದ ಪದ್ಮಾರಾಧಕಂ' (ಪಂ. ೩-೪). ಇದರಲ್ಲಿ ಹೇಳಿದ ಸಂವತ್ಸರವೂ ವೃಷವಲ್ಲ (ಕ್ರಿ. ಶ. ೧೨೨೧-೨೨), ಪ್ರಮಾಥಿ (ಕ್ರಿ. ಶ. ೧೨೧೯-೨೦).

ಈ ನಾಲ್ಕೂ ಶಾಸನಗಳಲ್ಲಿ ಮೊದಲಿನದಾದ ಮೂಡಬಿದರೆಯ ಹಾಗೂ ಕೊನೆಯದಾದ ಪ್ರಾಂತದ ಶಿಲಾಶಾಸನಗಳಲ್ಲಿ ಆ ಶಿವಲಿಂಗವನ್ನು ನೇರಾಗಿ ಮಂಜುನಾಥ ಎಂದಿರುವುದರಿಂದ, ಕದರಿಯ ಶಾಸನಗಳಲ್ಲಿರುವ ಮಂಜಿನಾಥ ಎಂಬ ರೂಪಾಂತರವಾದರೊ ಆ ಹೆಸರಿನ ಕೇವಲ ಗ್ರಾಮ್ಯರೂಪವೊ ಅಥವಾ ಆ ಶಾಸನಗಳನ್ನು ಒಕ್ಕಣಿಸಿದವರ ಎಡವಟ್ಟೊ, ಕೆತ್ತಿದವರ ಎಡಹೊ (ಇಲ್ಲವೆ ಓದಿದವರ ತಪ್ಪೊ) ಆಗಿರಬೇಕೆಂದು ಊಹಿಸಬಹುದು.

ಆದರೆ ಮಂಜುನಾಥ ಎಂಬ ಹೆಸರು ಶಿವನಿಗೆ ಇದ್ದಿರುವಂತೆ ಯಾವ ಕೋಶದಲ್ಲಿಯೂ ಕಾಣುವುದಿಲ್ಲ, ಯಾವ ಪ್ರಾಚೀನ ಶಿವಸಹಸ್ರನಾಮದಲ್ಲಿಯೂ ಇದ್ದೀತೆಂದು ನಾನು ಭಾವಿಸುವುದಿಲ್ಲ. ಅಥವಾ ಶಿವನಿಗೇ ಏಕೆ? ಸನಾತನ ಧರ್ಮದ ಯಾವ ದೇವತೆಗೂ ಮಂಜುನಾಥ ಎಂದು ಹೆಸರಿಲ್ಲ. ಇಡೀ ಭಾರತವರ್ಷದಲ್ಲಿ (ಧರ್ಮಸ್ಥಳದ ಶಿವಲಿಂಗವಾದರೊ ಕದರಿಯ ಲಿಂಗದ ಪ್ರತೀಕ ತಾನೆ ಎಂದು ಕಂಡಿರುವುದರಿಂದ, ಅವೆರಡನ್ನೂ ಸಮೀಕರಿಸಿ) ಆ ಹೆಸರು ಕದರಿಯ ಶಿವಲಿಂಗಕ್ಕೆ ಮಾತ್ರ ಸಲುತ್ತದೆ. ಪ್ರಾಸಂಗಿಕವಾಗಿ ಹೇಳುವುದಾದರೆ, ತುಳುನಾಡಿನಲ್ಲಿ ಶಾನೆ ಹಿಂದಣ ಕಾಲದಿಂದ ನೆಲಸಿರುವ ಜೈನಧರ್ಮದ ಯಾವ ದೇವತೆಗಾದರೂ ಮಂಜುನಾಥ ಎಂದು ಹೆಸರಿಲ್ಲ.

ಹಾಗಾದರೆ ಕದರಿಯ ಶಿವಲಿಂಗಕ್ಕೆ ಮಂಜುನಾಥ ಎಂಬ ಹೆಸರು ಹೇಗೆ ಬಂತು? ಎಂದು ಪರಿಮಾರ್ಗಿಸಿದರೆ, ಸರ್ವಸಾಮಾನ್ಯವಾಗಿ ಮಂಜುಶ್ರೀಯೂ ಮಂಜುಘೋಷನೂ ಎಂದು ವ್ಯವಹೃತನಾಗಿರುವ ಬೌದ್ಧಧರ್ಮದ ಬೋಧಿಸತ್ತ್ವನೊಬ್ಬನಿಗೆ ಮಾತ್ರ ಮಂಜುನಾಥ ಎಂದೂ ಹೆಸರಿರುವಂತೆ ಆ ಧರ್ಮದ ಮಹಾಯಾನಶಾಖೆಯ ಗ್ರಂಥಗಳಿಂದ ತಿಳಿಯುತ್ತದೆ; ಉದಾ. ನೇಪಾಳದ (Nepal) ಬೌದ್ಧಕವಿ ಅಮೃತಾನಂದನ '(ನೈಪಾಲೀಯ ದೇವತಾ) ಕಲ್ಯಾಣ ಪಂಚವಿಂಶತಿಕಾ' ಎಂಬ ಸ್ತೋತ್ರದ ೨೪ನೆಯ ಸ್ರಗ್ಧರೆಯಲ್ಲಿ—[೫]

ಶೀರ್ಷಾತ್ ಪ್ರಾಗತ್ಯ ಯೋಽಸೌ ಸಹಿತಪರಿಜನ
ಶ್ಚಂದ್ರಹಾಸಾಸಿನಾದ್ರಿಂ
ಛಿತ್ವಾ ಶೋಷೈಃ ಹ್ರದೆ ಽಸ್ಮಿನ್ ಪುರವರಮಕರೋ
ಲ್ಲೋಕವಾಸಾಯ ರಮ್ಯಮ್ ।
ಸ್ವಸ್ತೀಭೂತಾಬ್ಜಸಂಸ್ಥಂ ಸಕಲ ಜಿನವರಂ ಪ್ರಾಭಜನ್
ಮಂಜುನಾಥಃ
ಕಲ್ಯಾಣಂ ವಃ ಕ್ರಿಯಾತ್ಸ ಕ್ವಚಿದಪಿ ಸರತಾಂ
ತಿಷ್ಠತಾಂ ಸೌಖ್ಯಹಂ ತಮ್ ॥ ೨೪ ॥

೩ ಅದೇ, ಸಂ. ೨೨೧, ಪು. ೧೧೧.

೪ ಅದೇ ಸಂ. ೨೧೩, ಪು. ೧೦೮-೧೦೯.

೫. ಅಶ್ವಘೋಷನ ಸಂಸ್ಕೃತ 'ಬುದ್ಧಚರಿತ'ಕ್ಕೆ ಶ್ರೀ ಈ. ಬಿ. ಕವೆಲ್ಲರು (E. B. Cowell) ಬರೆದ ಮುನ್ನುಡಿ (Oxford University Press, 1893. ಪು. ix)

ಅಂದರೆ, ಯಾವಾತನು ತನ್ನ ಪರಿಜನರಿಂದ ಒಡಗೂಡಿ ಶೀರ್ಷ (ಎಂಬ ಪರ್ವತ)ದಿಂದ ಬಂದು ತನ್ನ ಚಂದ್ರಹಾಸ (=ಖಡ್ಗ)ದಿಂದ ಪರ್ವತವನ್ನು ಛೇದಿಸಿ, ಬತ್ತಿಹೋದ ಸರೋವರದಲ್ಲಿ ಜನರು ವಾಸಿಸತಕ್ಕಂತೆ ರಮ್ಯವಾದ ಉತ್ತಮ ಪಟ್ಟಣವನ್ನು ನಿರ್ಮಿಸಿ, ತನಗೆ ತಾನೇ ಆಧಾರವಾಗಿರುವ ಕಮಲದಲ್ಲಿ ಮಂಡಿಸಿರುವ (ಹಾಗೂ) ಜಿನ (=ಬುದ್ಧ)ರೆಲ್ಲರಲ್ಲಿ ಶ್ರೇಷ್ಠನಾಗಿರುವನನ್ನು ಪೂಜಿಸಿದನೊ ಆ ಮಂಜುನಾಥನು (ಅಂದರೆ ಮಂಜುಶ್ರೀ ಅಥವಾ ಮಂಜುಘೋಷ ಎಂಬ ಬೋಧಿಸತ್ತ್ವನು) ನೀವು ಎತ್ತ ಸರಿಯುತ್ತಿದ್ದರೂ ಎಲ್ಲಿ ನಿಂತಿದ್ದರೂ ನಿಮಗೆ ಕಲ್ಯಾಣವನ್ನು ಮಾಡಲಿ! (ಎಂದು) ನಾನು ಆತನನ್ನು ವಂದಿಸುತ್ತೇನೆ.

ಅತಏವ ಈಗ ಶಿವಾಲಯವಾಗಿರುವ ಕದರಿಯ ದೇವಾಲಯ ಯಾವೊಮ್ಮೆ ಬಹಳ ಹಿಂದಣ ಕಾಲದಲ್ಲಿ ಬೌದ್ಧವಿಹಾರವಾಗಿದ್ದು ಅದು ಮಂಜುನಾಥನೂ ಎಂಬ ಮಂಜುಶ್ರೀ ಅಥವಾ ಮಂಜುಘೋಷನೆಂಬ೬ ಬೌದ್ಧ ಬೋಧಿಸತ್ತ್ವನ ಮಂದಿರವಾಗಿದ್ದಿರಬೇಕು, ಅಲ್ಲಿಂದ ಹಲಗಾಲದ ಮೇಲೆ ತಾನೆ ಅಲ್ಲಿ ಅದೇ ಹೆಸರಿನ ಶಿವಲಿಂಗ ಪ್ರತಿಷ್ಠಿಸಲ್ಪಟ್ಟಂದಿನಿಂದ ಅದು ಈಗಣಂತೆ ಶಿವಾಲಯವಾಗಿರಬೇಕು ಎಂದು ಬೇಕಾದಷ್ಟು ಕಂಡಿತವಾಗುತ್ತದೆ.

ಮೌರ್ಯ ಚಕ್ರವರ್ತಿಯಾದ ಪ್ರಿಯದರ್ಶಿ ಎಂಬ ಅಶೋಕ ಮಹಾರಾಯನ (ಕ್ರಿ. ಪೂ. ಸು. ೨೭೫-೨೩೮) ೨ನೆಯ ಶಿಲಾಲೇಖದಲ್ಲಿ (Rock Edict II) ಹೀಗದೆ—

......ದೇವಾನಂ ಪ್ರಿಯಸ ಪ್ರಿಯದಸಿನೋ ರಾಞೋ ಏವಮಪಿ ಪ್ರಚಂತೇಸು ಯಥಾ ಚೋಡಾ ಪಾಡಾ ಸತಿಯಪುತೊ ಕೇತಲಪುತೊ ಆ ತಂಬಪಂಣೀ ಅಂತಿಯಕೊ ಯೋನರಾಜಾ ಯೇ ವಾಪಿ ತಸ ಅಂತಿಯಕಸ ಸಾಮಿಪಂ ರಾಜಾನೊ ಸರ್ವತ್ರ ದೇವಾನಂ ಪ್ರಿಯಸ ಪ್ರಿಯದಸಿನೊ ರಾಞೊ ದ್ವೇ ಚಿಕೀಛ ಕತಾ ಮನುಸಚಿಕೀಛಾ ಪಸುಚಿಕೀಛಾ ಚ । ಓಸುಢಾನಿ ಚ ಯಾನಿ ಮನುಸೋಪಗಾನಿ ಚ ಪಸೋಪಗಾನಿ ಚ ಯತ ಯತ ನಾಸ್ತಿ ಸರ್ವತ ಹಾರಾಪಿತಾನಿ ಚ ರೋಪಾಪಿತಾನಿ ಚ । ಮೂಲಾನಿ ಚ ಫಲಾನಿ ಚ ಯತ ಯತ ನಾಸ್ತಿ ಸರ್ವತ ಹಾರಾಪಿತಾನಿ ಚ ರೋಪಾಪಿತಾನಿ ಚ । ಪಂಥೇಸು ಕೂಪಾ ಚ ಖಾನಾಪಿತಾ ವ್ರಛಾ ಚ ರೋಪಾಪಿತಾ ಪರಿಭೋಗಾಯ ಪಸುಮನುಸಾನಂ ॥

ಅಂದರೆ ದೇವತೆಗಳಿಗೆ ಪ್ರಿಯನಾದ ಪ್ರಿಯದರ್ಶಿ ಎಂಬ ಅಶೋಕರಾಜನು ತನ್ನ ರಾಜ್ಯದಲ್ಲಿಯೂ, ತನ್ನ ನೆರೆ ರಾಜ್ಯಗಳಾದ (ಹಾಗೂ ಭಾರತವರ್ಷದಲ್ಲಿ ತನ್ನ ಸಾಮ್ರಾಜ್ಯದಲ್ಲಿ ಒಳಪಟ್ಟಿಲ್ಲದ) ಚೋಳ ದೇಶದಲ್ಲೂ ಪಾಂಡ್ಯ ದೇಶದಲ್ಲೂ ಸತಿಯ ಪುತ್ರರ ದೇಶದಲ್ಲೂ (ಅಂದರೆ ತುಳುನಾಡಿನಲ್ಲೂ) ತಾಮ್ರಪರ್ಣೀ (ನದಿಯ) ವರೆಗಣ ಕೇರಳ ದೇಶದಲ್ಲೂ (ಹಾಗೆಯೇ ಭಾರತವರ್ಷದಿಂದ ಶಾನೆ ದೂರದಲ್ಲಿಯ) ಅಂತಿಯೊಕ (Antiochos) ಎಂಬ ಗ್ರೀಕ (Greek) ಅಥವಾ ಯವನ ಅರಸನ (ಕ್ರಿ. ಪೂ. ೨೬೧—೨೪೬) ರಾಜ್ಯವಾದ ಸುರಿಯ (Syria) ದೇಶದಲ್ಲೂ ಆತನ ನೆರೆಯರಸರ ರಾಜ್ಯಗಳಲ್ಲೂ ಮನುಷ್ಯರ ಹಾಗೂ ಪಶುಗಳ ಚಿಕಿತ್ಸೆಯ ಏರ್ಪಾಡನ್ನು ಮಾಡಿರುತ್ತಾನೆ; ಎಲ್ಲೆಲ್ಲಿ ಮನುಷ್ಯೋಪಯೋಗಿಯೂ ಪಶೂಪಯೋಗಿಯೂ ಆದ ಔಷಧಿಗಳು ಇದ್ದಿಲ್ಲವೂ ಅಲ್ಲಲ್ಲಿ ಅವನ್ನು ತರಿಸಿ ಹಚ್ಚಿಸಿರುತ್ತಾನೆ; ಎಲ್ಲಲ್ಲಿ ಫಲಮೂಲಗಳು ಇದ್ದಿಲ್ಲವೂ ಅಲ್ಲಲ್ಲಿ ಅವನ್ನು ತರಿಸಿ ಹಚ್ಚಿಸಿರುತ್ತಾನೆ; ಹಾದಿಗಳಲ್ಲಿ ಪಶುಮನುಷ್ಯರ ಉಪಭೋಗಕ್ಕಾಗಿ ಬಾವಿಗಳನ್ನು ತೋಡಿಸಿರುತ್ತಾನೆ, ಮರಗಳನ್ನು ನಾಟಿಸಿರುತ್ತಾನೆ. ಇವುಗಳಲ್ಲಿ ಸತಿಯಪುತ್ರರ ದೇಶ ಎಂದರೆ ನಮ್ಮ ತುಳುನಾಡು ಎಂದು ನಾನು ಅನ್ಯತ್ರ ಸಾಧಾರವೂ ಸಕಾರಣವೂ ಆಗಿ ಪ್ರತಿಪಾದಿಸಿರುತ್ತೇನೆ.೭ ತಾಮ್ರಪರ್ಣಿ ಎಂದರೆ ಪಾಂಡ್ಯದೇಶಕ್ಕೂ ಕೇರಳ ದೇಶಕ್ಕೂ ನಡುಗಡಿಯಾಗಿ ತಿರುನೆಲ್ವೇಲಿ ಜಿಲ್ಲೆಯಲ್ಲಿ ಹರಿಯುತ್ತಿರುವ ಹಾಗೂ ಈಗಲೂ ತಾಮ್ರಪರ್ಣಿ ಎಂದು ಕರೆಯಲ್ಪಡುವ ನದಿ ಎಂದು ಪ್ರತ್ಯಕ್ಷವಿದೆ.

ಹೀಗೆ ಅವೆಲ್ಲಾ ದೇಶಗಳಲ್ಲಿ ಮನುಷ್ಯರಿಗೂ ಪಶುಗಳಿಗೂ ಉಪಯೋಗಿಯಾದ ಚಿಕಿತ್ಸಾಲಯಗಳನ್ನು ನಿರ್ಮಿಸಿದಾತನು, ಔಷಧಿಗಳು ಇಲ್ಲದಲ್ಲಿ ಅವನ್ನು ಎಲ್ಲಲ್ಲಿಂದ ತರಿಸಿ ಹಚ್ಚಿಸಿದಾತನು, ದಾರಿಗರ ಬಗ್ಗೆ ಬಾವಿಗಳನ್ನು ತೋಡಿಸಿದಾತನು ತಾನು ಕೈಕೊಂಡ ಬೌದ್ಧ ಧರ್ಮವನ್ನು ಆ ದೇಶಗಳಲ್ಲಿ ಸಾರಲಿಕ್ಕೆ ಕಳಿಸಿದನೆಂಬ

೬. ಈ ಬೋಧಿಸತ್ತ್ವನಿಗೆ ಮತ್ತೂ ಈ ಕೆಲವು ಹೆಸರುಗಳಿವೆ—ಮಂಜುಶ್ರೀರ್ಜ್ಞಾನದರ್ಪಣಃ । ಮಂಜುವಕ್ತ್ರೋ ಅಥವಾ ಮಂಜುಚಕ್ರೋ ಅಥವಾ ಮಂಜುಭದ್ರೋ) ಮಂಜುಘೋಷಃ ಕುಮಾರೋಽಷ್ಟಾರಚಕ್ರವಾನ್ ॥ ೩೩. (ತ್ರಿಕಾಂಡಶೇಷ, ಶ್ಲೋ. ೨೮-೨೩)

೭. ತೆಂಕನಾಡು, ಪು. ೭–೧೩.

ಆ ಧರ್ಮಬೋಧಕರನ್ನು ಪ್ರಾಯಶಃ ಆ ಮುಂಚೆಯೇ ಅಲ್ಲಲ್ಲಿಗೆ ಅಯ್ಯಿಸಿರಬೇಕು, ಅರ್ಥಾತ್ ಆ ದೇಶಗಳಲ್ಲಿ ಆತನು ಬೌದ್ಧಧರ್ಮವನ್ನು ಸಾರಿಸುತ್ತಿದ್ದ ಕಾರಣವೇ ಅಲ್ಲಿಯ ಮಂದಿಯ ಸೌಕರ್ಯದ ಬಗ್ಗೆ ಆ ಚಿಕಿತ್ಸಾಲಯಗಳನ್ನು ಇತ್ಯಾದಿ ಅಲ್ಲಲ್ಲಿ ಮಾಡಿಸಿರಬೇಕು ಎಂದು ತರ್ಕಿಸಲಾಗುತ್ತದೆ. ಇದಲ್ಲದೆ ಅಶೋಕನು ದಕ್ಷಿಣ ಭಾರತದ ಆಯಾ ದೇಶಗಳಲ್ಲಿ ಬೌದ್ಧಧರ್ಮವನ್ನು ಪ್ರಚಾರಿಸುವ ಬಗ್ಗೆ ಥೇರ (=ಸಂಸ್ಕೃತಿ 'ಸ್ಥವಿರ')ರೆಂಬ ಧರ್ಮೋಪದೇಶಕರನ್ನು ಕಳಿಸಿದನೆಂದು ಸಿಂಹಲ ದ್ವೀಪದ (Ceylon) ಮಹಾವಂಸ (=ಸಂ. 'ಮಹಾವಂಶ') ಎಂಬ ಪಾಲಿ ಭಾಷೆಯ ಪ್ರಾಚೀನ ಐತಿಹಾಸಿಕ ಕಾವ್ಯದಲ್ಲಿಯೂ (XII) ಹೇಳಿದೆ—

ಆಪೇಸಯಿ ಮಹಾದೇವತ್ಥೇರಂ ಮಹಿಸಮಂಡಲಂ ॥ ೩ ॥
ವನವಾಸಿಂ ಆಪೇಸೇಸಿ ಥೇರಂ ರಕ್ಖಿತ ನಾಮಕಂ ।
ತಥಾಪರಾಂತಕಂ ಯೋನ ಧಮ್ಮರಕ್ಖಿತ ನಾಮಕಂ ॥ ೪ ॥

ಅಂದರೆ ಮಹಾದೇವ ಎಂಬ ಧರ್ಮದೇಶಕನನ್ನು ಮಹಿಷಮಂಡಲ (=ಮೈಸೂರು ದೇಶ)ಕ್ಕೂ, ರಕ್ಷಿತ ಎಂಬವನನ್ನು (ಉತ್ತರ ಕನ್ನಡ ಜಿಲ್ಲೆಯ) ಬನವಾಸಿ ದೇಶಕ್ಕೂ, ಯವನನಾದ (ಅಂದರೆ ಜಾತಿಯಿಂದ ಗ್ರೀಕನಾದ, (Greek) ಧರ್ಮರಕ್ಷಿತ ಎಂಬವನನ್ನು (ಮುಂಬಯಿ ಆಧಿಪತ್ಯದ ಠಾಣಾ ಜಿಲ್ಲೆಯಿಂದ ರತ್ನಗಿರಿ ಜಿಲ್ಲೆಯ ಅಥವಾ ಗೋವೆಯ ವರೆಗಣ ಪಶ್ಚಿಮ ಕರಾವಳಿಯ) ಅಪರಾಂತ ಎಂಬ ದೇಶಕ್ಕೂ ಆತನು ಕಳಿಸಿದನು. ಹೀಗೆ ಅಶೋಕನ ಬೌದ್ಧಧರ್ಮ ಬೋಧಕರು ಸತಿಯಪುತ್ರ ಎಂಬ ತುಳುನಾಡಿನಲ್ಲೇ ಅಲ್ಲ, ಅದರ ತಕ್ಕಷ್ಟು ನಿಕಟವರ್ತಿಯಾದ ದೇಶಗಳಲ್ಲೂ ಆ ಧರ್ಮವನ್ನು ಹರಡತೊಡಗಿದರೆಂದರೆ, ಆ ಧರ್ಮವು ಈ ತುಳುನಾಡಿನಲ್ಲಿ ಆತನ ಆಳಿಕೆಯ ಕ್ರಿ. ಪೂ. ೩ನೆಯ ಶತಕದಿಂದ ಕ್ರಿ. ಶ. ೧ನೆಯ ಶತಮಾನದೊಳಗೆ ಎನ್ನೋಣ, ಹಲವೊ ಕೆಲವೊ ಎಡೆಗಳಲ್ಲಿ ಹಬ್ಬಿಯೂ ಹಬ್ಬುತ್ತಲೂ ಇದ್ದು, ಅಲ್ಲಲ್ಲಿ ಬೌದ್ಧರೂ ಬೌದ್ಧಭಿಕ್ಷುಗಳೂ ಅವರ ಆವಾಸಸ್ಥಾನಗಳಾದ ವಿಹಾರಗಳೆಂಬ ಅವರ ದೇವತಾ ಮಂದಿರಗಳೂ ಇದ್ದಿರಬೇಕು.

ಹೆಚ್ಚು-ಕಡಿಮೆ ಕ್ರಿ. ಶ. ೧ನೆಯ ಶತಮಾನದಲ್ಲಿ ಬೌದ್ಧಧರ್ಮವು ಭಿನ್ನವಾಗಿ ಮಹಾಯಾನವೆಂದೂ ಹೀನಯಾನವೆಂದೂ ಎರಡು ಶಾಖೆಗಳಾದುವು.೮ ಮಹಾಯಾನವು ಸನಾತನ ಧರ್ಮದ ಭಗವದ್ಗೀತೆಗೂ, ಅದಕ್ಕಿಂತ ಹೆಚ್ಚಾಗಿ ಶೈವಧರ್ಮಕ್ಕೂ ಋಣಿಯಾಗಿದ್ದು ಅದರಲ್ಲಿ ಸನಾತನ ಧರ್ಮದೋಪಾದಿಯಲ್ಲಿ ಭಕ್ತಿಮಾರ್ಗಕ್ಕೆ ತುಂಬ ಪ್ರಾಧಾನ್ಯವಿದೆ.೯ ಅದೀಗ ತಿಬೇಟ, ಚೀನ, ಜಪಾನ ಮೊದಲಾದ ದೇಶಗಳಲ್ಲಿದೆ. ಹೀನಯಾನವು ಭಾರತದಲ್ಲಿ ಪಸರಿಸಲಾರದೆ, ಸಿಂಹಳ, ಬ್ರಹ್ಮದೇಶ (Burma) ಶ್ಯಾಮದೇಶ (Siam) ಮುಂತಾದವಲ್ಲಿ ನೆಲಸಿತಾದರೆ, ಮಹಾಯಾನವು ಭಾರತದಲ್ಲಿ ಅಲ್ಲಲ್ಲಿ ಹಬ್ಬಿತು. ಮಹಾಯಾನದಲ್ಲಿ ಬೋಧಿಸತ್ತ್ವರಿಗೆ ಬುದ್ಧನಿಗಿಂತ ಹೆಚ್ಚಿಗೆ ಅಲ್ಲವಾದರೆ, ಬೌದ್ಧರಷ್ಟೇ ಆದರೂ ಪ್ರಾಶಸ್ತ್ಯವಿದೆ. ಬೌದ್ಧಧರ್ಮದಲ್ಲಿ ಬುದ್ಧನು ಒಬ್ಬನೇ ಅಲ್ಲ, ಆಯಾ ಕಾಲದಲ್ಲಿ ಆಯಾ ಬುದ್ಧನು ಆಗಿ ಹೋಗುವನು. ಹೀಗಾಗಿ ಎಷ್ಟೋ ಬುದ್ಧರು ಈ ವರೆಗೆ ಆಗಿದ್ದಾರೆ, ಎಷ್ಟೋ ಇನ್ನೂ ಆಗಲಿದ್ದಾರೆ. ಬೋಧಿಸತ್ತ್ವರೆಂದರೆ ಬುದ್ಧರಾಗಿರುವ ಅಥವಾ ಬುದ್ಧರಾಗಿ ಹೋದ ವ್ಯಕ್ತಿಗಳಲ್ಲ, ಇನ್ನು ಮುಂದೆ ಬುದ್ಧರಾಗಲಿಕ್ಕಿರುವ ಹಾಗೂ ಈಗಲೂ ಜೀವಂತರಾಗಿರುವ ದೇವತಾಕಲ್ಪರಾದ ವ್ಯಕ್ತಿಗಳು. ಅವರೂ ಎಷ್ಟೋ ಮಂದಿ ಇದ್ದಾರೆ. ಅವರಲ್ಲಿ ಪ್ರಸಿದ್ಧರಾಗಿರುವವರಾದರೆ ಈ ಮೂವರು, (೧) ಮೈತ್ರೇಯ (ಈತನು ಈಮುಂದೆಯೇ ಬುದ್ಧನಾಗಲಿಕ್ಕೆ ಇರುವಾತನು), (೨) ಅವಲೋಕಿತೇಶ್ವರ ಅಥವಾ ಲೋಕೇಶ್ವರ, ಮತ್ತು (೩) ಮಂಜುಶ್ರೀ, ಮಂಜುಘೋಷ ಅಥವಾ ಮಂಜುನಾಥ.

ಕ್ರಿ. ಶ. ೭೧೨ರಲ್ಲಿ ಅರಬರು (Arabs) ಸಿಂಧು ದೇಶವನ್ನು (Sindh) ಗೆದ್ದುಕೊಳ್ಳುವ ಕೊಂಚ ಹಿಂದಿನಿಂದಲೆ ಪಶ್ಚಿಮ ಭಾರತದಲ್ಲಿ ಗ್ಲಾನವಾಗುತ್ತಲಿದ್ದ ಮಹಾಯಾನವು ಆ ಮೇಲೆ ಬೇಗಬೇಗನೆ ಸಮಗ್ರ ಭಾರತದಿಂದ ನಷ್ಟವಾಯಿತು.೧೦ ಅತಏವ ಕದರಿಯಲ್ಲಿಯ ಮಂಜುಶ್ರೀ ಬೋಧಿಸತ್ತ್ವನ ವಿಹಾರವು ಕ್ರಿ. ಶ. ೧ನೆಯ ಶತಮಾನದಿಂದ ಸು. ೬–೭ನೆಯ ಶತಮಾನದೊಳಗೆ ಯಾವಂದೊ ನಿರ್ಮಿತವಾಗಿದ್ದು, ಹೆಚ್ಚು

---

೮. Kern: Manual of Indian Buddhism (*K.I.B.*), ಪು. ೧೨೪

೯. ಅದೇ, ಪು. ೧೨೨; ೧೨೪.

೧೦. ಅದೇ, ಪು. ೧೩೨.

ಕಡಿಮೆ ಕ್ರಿ. ಶ. ೮ನೆಯ ಶತಕದಿಂದ ಕ್ರಮೇಣ ಈಚೆ ತುಳುನಾಡಿನಲ್ಲೂ ಬೌದ್ಧಧರ್ಮವು ನಿಶ್ಶೇಷವಾಗಿ ಅಳಿದು ಹೋಗುತ್ತಲೆ, ಪ್ರಾಯಶಃ ಆ ವಿಹಾರ ಹಾಳು ಬಿದ್ದೇನೋ ಅದರಲ್ಲಿ ಮಂಜುಶ್ರೀಯ ವಿಗ್ರಹವಿದ್ದ ಎಡೆಯಲ್ಲಿ, ಮುಂದೆ ತಿಳಿವಂತೆ, ಬೌದ್ಧರ ಪ್ರತ್ಯನಂತರದವರು ಶಿವಲಿಂಗವನ್ನು ಪ್ರತಿಷ್ಠಿಸಿರಬೇಕು. ಹಾಗೂ ಅಂಥಾ ಸಂದರ್ಭಗಳಲ್ಲಿ ಹೆಚ್ಚಾಗಿ ಮೂಲದೇವತೆಯ ಹೆಸರನ್ನು ಅಳಿಯಗೊಡದೆ ಅದನ್ನೇ ಹೊಸ ದೇವತೆಗೂ ಕೊಟ್ಟು ಊರ್ಜಿಸುವ ಆಗಣ ಸಂಪ್ರದಾಯಕ್ಕೆ ಸರಿಯಾಗಿ೧೧ ಮಂಜುಶ್ರೀ ಅಥವಾ ಮಂಜುಘೋಷ ಎಂದು ಲೋಕ ಪ್ರಸಿದ್ಧವಾದ ಆ ಬೋಧಿಸತ್ತ್ವನ ಹೆಸರನ್ನು ಆ ಶಿವಲಿಂಗಕ್ಕೆ ಇಕ್ಕುವಲ್ಲಿ 'ಶ್ರೀ' ಹಾಗೂ 'ಘೋಷ' ಎಂಬ ಪರಪದಗಳುಳ್ಳ ಆ ಹೆಸರುಗಳು ಶಿವನಾಮಧೇಯ ಆಗಸಲ್ಲದೆ ಅಥವಾ ಅವನ್ನು ಶಿವನಾಮಧೇಯ ಆಗತಕ್ಕಂತೆ ಯೋಜಿಸಿಕೊಳ್ಳಲಾರದ, 'ನಾಥ' ಎಂಬ ಪರಪದ ಉಳ್ಳ ಹೆಸರಾದರೆ ಶಿವನಿಗೆ ಬೇಕಾದಷ್ಟು ಇದ್ದು (ಉದಾ. ವಿಶ್ವನಾಥ, ಕೇದಾರನಾಥ, ಸೋಮನಾಥ, ನಾಗನಾಥ, ವೈದ್ಯನಾಥ ಇ॰) ಮಂಜುಶ್ರೀಯ ಮಂಜುನಾಥ ಎಂಬ ಹೆಸರು ಆ ಕಾರಣ ಉಭಯಥಾ ಅಷ್ಟು ಕೂಡುಕಟ್ಟಾಗಿ ಹವಣಿಸುವ ಕಾರಣವೊ, ಅಥವಾ ಶಿವನ ಹೆಸರುಗಳಲ್ಲಿ ದಕ್ಷಿಣ ಭಾರತದಲ್ಲಿ ಸಾರ್ವತ್ರಿಕವಾಗಿ ಇರುವ 'ಈಶ್ವರ' ಎಂಬ ಪರಪದವನ್ನು (ಉದಾ. ರಾಮೇಶ್ವರ, ಜಂಬುಕೇಶ್ವರ, ಏಕಾಮ್ರೇಶ್ವರ, ಮಹಾಲಿಂಗೇಶ್ವರ, ತ್ರಿಶೂಲೀಶ್ವರ ಇ॰) ಮಂಜುಶ್ರೀ-ಮಂಜುಘೋಷನ ಹೆಸರಿನ 'ಮಂಜು' ಎಂಬ ಪೂರ್ವಪದಕ್ಕೆ ಜೋಡಿಸಿದರೆ ಮಂಜು+ಈಶ್ವರ=ಮಂಜ್ವೀಶ್ವರ ಎಂದಾಗಿ ಉಚ್ಚಾರಕ್ಕೆ ತೀರ ಕರ್ಕಶವೂ ದುಃಶ್ರಾವವೂ ಆಗುವ ಕಾರಣವೊ ಆ ಶಿವಲಿಂಗವನ್ನು ಮಂಜುನಾಥ ಎಂದು ಕರೆದಿರಬೇಕು. ಮತ್ತೂ ನೋಡೋಣ.

ಪಡುಮೊಗವಾಗಿರುವ ಕದರಿಯ ಶ್ರೀಮಂಜುನಾಥ ದೇವಾಲಯವನ್ನು ಒಳಹೋಗುವಾಗ ಎಡಗಡೆಯಲ್ಲಿ ಮೂಡುಮೊಗವಾಗಿ ಇರಿಸಿರುವ, ಎತ್ತರದಲ್ಲಿ ೨ ಮೊಳಗಳಷ್ಟರ, ೩ ಮೋರೆಗಳೂ ೬ ಕೈಯ್ಗಳೂ ಉಳ್ಳ, ಪದ್ಮಾಸನದಲ್ಲಿ ಮಂಡಿಸಿರುವ ಬಹಳ ಸುಂದರವಾದೊಂದು ಕಂಚಿನ ವಿಗ್ರಹವಿದೆ. ಅಲ್ಲಿಯ ಅರ್ಚಕರು ಅದನ್ನು ಬ್ರಹ್ಮ ಎನ್ನುತ್ತಾರೆ. ಅದರ ವಕ್ಷಃಸ್ಥಲದಲ್ಲಿಯೂ ತೋಳುಗಳಲ್ಲಿಯೂ ಮಣಿಕಟ್ಟುಗಳಲ್ಲಿಯೂ ಬಗೆಬಗೆಯ ಅನೇಕ ಆಭರಣಗಳೂ ಇವೆ, ಕೊರಳಲ್ಲಿ ಯಜ್ಞೋಪವೀತವೂ ಇದೆ, ಹಣೆಯಲ್ಲಿ ತಿಲಕವೂ ಇದೆ. ಅದರ ಮೇಲ್ಗಡೆಯ ೨ ಕೈಯ್ಗಳಲ್ಲಿ ತಾವರೆಯ ಮೊಗ್ಗುಗಳಿವೆ; ಕೆಳಗಡೆಯ ಬಲಗೈಯ್ಯನ್ನು ವರದ ಮುದ್ರೆಯಲ್ಲಿ ಬಲ ಮೊಳಕಾಲಲ್ಲಿ ಮಡಗಿದೆ, ಎಡಗೈ ವ್ಯಾಖ್ಯಾನ ಮುದ್ರೆಯನ್ನು ಪ್ರದರ್ಶಿಸುತ್ತದೆ; ನಡುಗಡೆಯ ೨ ಕೈಯ್ಗಳಾದರೊ ಏನೋ ಹಿಡಿದುಕೊಳ್ಳಲಿಕ್ಕೆ ಎಂಬಂತೆ ಎತ್ತಿವೆ, ಆದರೆ ಅವಲ್ಲಿ ಆ ಒಡವೆಗಳಿಲ್ಲ. ತಲೆಯಲ್ಲಿ ಜಡೆ ಇದ್ದು ಅದನ್ನು ತ್ರಿವಳಿಯಾಗಿ ಮಕುಟದಂತೆ ಕಟ್ಟಿದೆ. ಆ ವಿಗ್ರಹದ ಹೆಗಲಿನ ಹಿಂಗಡೆಯ ಪ್ರಭಾವಳಿ ಅದರ ತಲೆಗಳನ್ನು ಬಳಸಿ ಜಡೆಯನ್ನು ಒತ್ತಿ ಅದರ ಮೇಲಿಂದ ಬರುತ್ತದೆ. ಆ ಪ್ರಭಾವಳಿಯ ಒಂದು ಪಕ್ಕದಲ್ಲಿ ಗಂಡು ಮತ್ತೊಂದು ಪಕ್ಕದಲ್ಲಿ ಹೆಣ್ಣು, ಹೀಗ ೨ ಮೂರ್ತಿಗಳು ನಿಂತಿವೆ; ಆ ಪ್ರಧಾನ ಮೂರ್ತಿಗಿಂತ ಶಾನೆ ಚಿಕ್ಕವಾಗಿರುವ ಇವು ಅದರ ಅನುಚರರಾಗಿರಬೇಕು. ವಿಶೇಷವೇನೆಂದರೆ, ಆ ಮೂಲವಿಗ್ರಹದ ಜಟಾಮಕುಟದಲ್ಲೂ ಪ್ರಭಾವಳಿಯಲ್ಲೂ ಜನಿವಾರ ತೊಟ್ಟು, ಪದ್ಮಾಸನವನ್ನು ಕಟ್ಟಿ, ಕೈಯ್ಗಳನ್ನು ಮಡಿಲಲ್ಲಿ ಒಂದರ ಮೇಲೆ ಒಂದಿಟ್ಟು ಧ್ಯಾನಾಸಕ್ತನಾಗಿ ಕುಳಿತಿರುವ ಒಬ್ಬನೇ ಯೋಗಿಯ ಅನ್ಯಾನ್ಯ ೨ ಬಲು ಚಿಕ್ಕ ಮೂರ್ತಿಗಳಿವೆ. ಅವುಗಳಲ್ಲಿ ಪ್ರಭಾವಳಿಯ ಚಿಕ್ಕ ಮೂರ್ತಿ ತಕ್ಕಷ್ಟಾದರೂ ವಿಶದವಾಗಿದೆ, ಜಟೆಯಲ್ಲಿಯದಾದರೊ ತೀರ ಸಣ್ಣದಾಗಿದೆ.

ಆ ಪ್ರತಿಮೆಯ ಪೀಠದಲ್ಲಿ ಗ್ರಂಥಾಕ್ಷರಗಳಲ್ಲಿ ಕೆತ್ತಿರುವ ೯ ಶ್ಲೋಕಗಳುಳ್ಳ ೪ ಪಂಕ್ತಿಯದೊಂದು ಸಂಸ್ಕೃತ ಶಾಸನವಿದೆ.೧೨ ಅದರ ೬ನೆಯ ಹಾಗೂ ಕೊನೆಯ ೯ನೆಯ ಶ್ಲೋಕಗಳಿಂದ ಚಂದ್ರಮೌಳೀಶ್ವರ

---

೧೧. ಉದಾ: ಉಡುಪಿಯಲ್ಲಿ ಶ್ರೀ ಕೃಷ್ಣಮಠದ ಮಗ್ಗುಲಲ್ಲಿರುವ ಈಗ ಅನಂತೇಶ್ವರ ಎಂಬ ದೇವಸ್ಥಾನವು ಬಹಳ ಹಿಂದೆ ಯಾವೊವ್ಮೊ ಜೈನರ ೧೪ನೆಯ ತೀರ್ಥಂಕರನಾದ ಅನಂತನಾಥನ ಬಸ್ತಿಯೂ, ಅದರ ಪಕ್ಕದಲ್ಲಿಯ ಈಗ ಚಂದ್ರಮೌಳೀಶ್ವರ ಎಂಬ ದೇವಸ್ಥಾನವು ಅವರ ೮ನೆಯ ತೀರ್ಥಂಕರನಾದ ಚಂದ್ರನಾಥನ ಬಸ್ತಿಯೂ ಆಗಿದ್ದುವು (ತೆಂಕುನಾಡು, ಪು. ೨೬). ಆವೆರಡೂ ಲಿಂಗಗಳಿಗೆ ಆಯಾ ಮೂಲದೇವತೆಗಳ ಹೆಸರುಗಳನ್ನೇ ಅಳವಡಿಸಿಕೊಂಡವೆ.

೧೨. *SII, VII*: ನಂ. ೧೯೧, ಪು. ೮೬.

ನಾದ ಶ್ರೀ ಶಿವನ ಭಕ್ತನಾದ ಕುಂದವರ್ಮನೆಂಬ ಆಳುಪ ವಂಶೀಯ ಅರಸನು ಲೋಕೇಶ್ವರನೆಂಬ ದೇವನ ಆ ಮೂರ್ತಿಯನ್ನು ಕದರಿ ಎಂಬ, ಅಥವಾ ಕದರಿ ಎಂಬಲ್ಲಿಯ, ಮನೋಹರವಾದ ವಿಹಾರದಲ್ಲಿ ಪ್ರತಿಷ್ಠಿಸಿದನೆಂದು ವ್ಯಕ್ತವಾಗುತ್ತದೆ—

ಶ್ರೀ ಕುಂದವರ್ಮ ಗುಣವಾನಾಳುಪೇಂದ್ರೋ ಮಹೀಪತಿಃ ।
ಪಾದಾರವಿಂದಭ್ರಮರೋ ಬಾಲಚಂದ್ರ ಶಿಖಾಮಣೇಃ ॥ ೬ ॥
ಲೋಕೇಶ್ವರಸ್ಯ ದೇವಸ್ಯ ಪ್ರತಿಷ್ಠಾಮಕರೋತ್ಪ್ರಭುಃ ।
ಶ್ರೀಮತ್ ಕದರಿಕಾ ನಾಮ್ನಿ ವಿಹಾರೇ ಸುಮನೋಹರೇ ॥೯॥

ಅದರ ಪ್ರತಿಷ್ಠಾಕಾಲವನ್ನು ಕುರಿತು ಆ ಶಾಸನದಲ್ಲಿ ಹೀಗದೆ—

ಕಲೌ ವರ್ಷ ಸಹಸ್ರಾಣಾಮತಿಕ್ರಾಂತೇ ಚತುಷ್ಟಯೇ ।
ಪುನರಬ್ದ ಗತೇ ಚೈವಾಷ್ಟ ಷಷ್ಟ್ಯಾ ಸಮನ್ವಿತೇ ॥ ೭ ॥
ಗತೇಷು ನವ ಮಾಸೇಷು ಕನ್ಯಾಯಾಂ ಸಂಸ್ಥಿತೇ ಗುರೌ ।
ಪಶ್ಚಿಮೇಹನಿ ರೋಹಿಣ್ಯಾಂ ಮುಹೂರ್ತೇ
ಶುಭಲಕ್ಷಣೇ ॥ ೮ ॥

ಅಂದರೆ ಕಲಿಯುಗದ ೪೦೬೮ ವರ್ಷಗಳು ಕಳೆದು ೪೦೬೯ನೆಯ ವರ್ಷ ನಡೆಯುತ್ತಿದ್ದಾಗ, ಗುರು ಕನ್ಯಾರಾಶಿಯಲ್ಲಿ ಇದ್ದಾಗ, ೯ ತಿಂಗಳು ಮುಗಿದು ೧೦ನೆಯ ತಿಂಗಳು ಸಲುತ್ತಿರುವಾಗ, ರೋಹಿಣೀ ನಕ್ಷತ್ರದಂದಿನ ಸಾಯಂಕಾಲದ ಹೊತ್ತಿನಲ್ಲಿ ಆ ವಿಗ್ರಹದ ಪ್ರತಿಷ್ಠೆಯಾಯಿತು.

ಆದರೆ ಕಲಿಯುಗದ ೪೦೬೮ ವರ್ಷಗಳು ಸಂದು ೪೦೬೯ನೆಯ ವರ್ಷವಾದ ಕ್ರಿ. ಶ. ೯೬೭–೯೬೮ರಲ್ಲಿ, ೯೬೭ನೆಯ ಮೇ ತಿಂಗಳಿಂದ ೯೬೮ರ ಮೇ ತಿಂಗಳ ವರೆಗೆ ಗುರು ಕನ್ಯಾರಾಶಿಯಲ್ಲಿ ಇದ್ದಿರಲಿಲ್ಲ, ಅಲ್ಲಿಂದ ೭ ರಾಶಿಗೆ ಮುಂದೆ ಮೇಷರಾಶಿಯಲ್ಲಿ ಇದ್ದುದರಿಂದ ಆ ಪ್ರತಿಷ್ಠೆಯಾದ ವರ್ಷ ಆ ಶಾಸನದಲ್ಲಿ ಈಗ ಓದ ಬರುವಂತೆ ಕಲಿಯುಗದಲ್ಲಿ ನಡೆಯುತ್ತಿರುವ ೪೦೬೯ನೆಯ ವರ್ಷ ಸರ್ವಥಾ ಅಲ್ಲ. ಅತಏವ ಅದರ ಆ ಮಟ್ಟಿನ ಒಕ್ಕಣೆಯಲ್ಲಿ ನಿಶ್ಚಯವಾಗಿ ಎಲ್ಲಿಯೊ ತಪ್ಪಿರಬೇಕು. ಈಗ ಆವಂದಿನ ಬಹಳ ಹಳೆಯ ಗ್ರಂಥಾಕ್ಷರದಲ್ಲಿ ಗ–ಕಾರಕ್ಕೂ ಶ–ಕಾರಕ್ಕೂ ಅತ್ಯಂತ ನಿಕಟವಾದ ರೂಪ ಸಾಮ್ಯವಿರುವುದರಿಂದ, ಮೇಲಣ ೭ನೆಯ ಶ್ಲೋಕದಲ್ಲಿ

ಪುನರಬ್ದ ಗತೇ ಚೈವಾಷ್ಟ ಷಷ್ಟ್ಯಾ ಸಮನ್ವಿತೇ ॥ ೭ ॥

ಎಂಬಲ್ಲಿಯ 'ಗತೇ' ಎಂಬುದನ್ನು ಪ್ರಾಯಶಃ 'ಶತೇ' ಎಂಬುದರ ಬದಲಾಗಿ ಎಡಹಿ ಕೊರೆದಿರಬೇಕೆಂದು ಸಾಹಜಿಕವಾಗಿ ಹೊಳೆಯುತ್ತದೆ. ಆ ಮೇರೆಗೆ ಆ ಗ–ಕಾರವನ್ನು ಶ–ಕಾರವಾಗಿ ಮಾರ್ಪಡಿಸುತ್ತಲೆ,

ಪುನರಬ್ದ ಶತೇ ಚೈವ ಅಷ್ಟಷಷ್ಟ್ಯಾ[೧೩] ಸಮನ್ವಿತೇ ॥ ೭ ॥

ಎಂದಾಗಿ, ಆ ಪ್ರತಿಷ್ಠೆ ಕಲಿಯುಗದ (೪೦೬೮ ವರ್ಷಗಳಲ್ಲ, ಮತ್ತೂ ೧೦೦ ವರ್ಷಗಳ ಬಳಿಕ ಅಂದರೆ) ೪೧೬೮ ವರ್ಷಗಳು ಕಳೆದ ಮೇಲಣ ೪೧೬೯ನೆಯ ವರ್ಷದಲ್ಲಿ=ಕ್ರಿ. ಶ. ೧೦೬೭–೧೦೬೮ರಲ್ಲಿ ಆಯಿತೆಂದು ವ್ಯಕ್ತವಾಗುತ್ತದೆ. ಕ್ರಿ. ಶ. ೧೦೬೭ರ ಆಗೋಸ್ತಿನಿಂದ ೧೦೬೮ರ ಅಗೋಸ್ತಿನ ವರೆಗೆ ಗುರು ಕನ್ಯಾರಾಶಿಯಲ್ಲಿ ಇದ್ದುದರಿಂದ, ಆ ವರ್ಷದ ೧೦ನೆಯ ತಿಂಗಳಲ್ಲಿ ಅಂದರೆ (ತುಳುನಾಡಿನ ಆಳುಪ ಅಥವಾ ಅಲೂಪರೆಂಬ ಅರಸರ ಶಾಸನಗಳನ್ನು ವಾಡಿಕೆಯಾಗಿ ಚೈತ್ರಾದಿ ಚಾಂದ್ರಮಾಸಗಳಲ್ಲಿ ಅಲ್ಲ, ಮೇಷಾದಿ ಸೌರಮಾಸಗಳಲ್ಲಿ ತೇದಿಸಿರುವ ಮೇರೆಗೆ[೧೪]) ಸೌರ ಮಕರಮಾಸದಲ್ಲಿ (=ಚಾಂದ್ರ ಮಾಘಮಾಸದಲ್ಲಿ) ರೋಹಿಣೀ ನಕ್ಷತ್ರವಿದ್ದಂದು ಆದ ಆ ಪ್ರತಿಷ್ಠೆ ಕ್ರಿ. ಶ. ೧೦೬೮ನೆಯ ಜನವರಿ ೧೬ನೆಯ ತಾರೀಕು (ಮಾಘ ಶುದ್ಧ ೯) ಬುಧವಾರ ಆಯಿತೆಂದು ನಿಷ್ಪನ್ನವಾಗುತ್ತದೆ.

ಈ ಶಾಸನದಲ್ಲಿ ಆ ವಿಗ್ರಹವನ್ನು ಲೋಕೇಶ್ವರ ದೇವ ಎಂದು ಹೇಳಿದೆಯಲ್ಲ? ಲೋಕೇಶ್ವರನೆಂದರೆ ಯಾರು? ಲೋಕೇಶ್ವರ ಎಂದು ಸನಾತನ ಧರ್ಮದ ಬ್ರಹ್ಮ, ವಿಷ್ಣು ಹಾಗೂ ಶಿವ, ಇವರಲ್ಲಿಯ ಪ್ರತ್ಯೇಕ ದೇವನಿಗೆ ಹೆಸರಿದ್ದರೂ, ಈ ಪ್ರತಿಮೆಯಲ್ಲಿ ರೂಪಿತವಾದ ದೇವತೆಯಾದರೊ ಬ್ರಹ್ಮನೂ ಅಲ್ಲ, ವಿಷ್ಣುವೂ ಅಲ್ಲ, ಶಿವನೂ ಅಲ್ಲ, ಆ ಮೂವರ ಸಮಸ್ತಮೂರ್ತಿಯಾದ ತ್ರಿಮೂರ್ತಿಯೂ ಅಲ್ಲ. ಏಕೆಂದರೆ ಬ್ರಹ್ಮನಾದರೆ ಇದಕ್ಕೆ ನಾಲ್ಕು ಮೋರೆ ಇರಬೇಕಿತ್ತು, ವಿಷ್ಣುವಾದರೆ ಮೋರೆಯೊಂದೇ ಇದ್ದು ಕೈ ನಾಲ್ಕು ಇರುತ್ತಿತ್ತು, ಶಿವನಾದರೆ ಒಂದೊ ಐದೊ ಮೋರೆಗಳು ಇರಬೇಕಾಗಿತ್ತು, ಹಾಗೂ ಇದು ತ್ರಿಮೂರ್ತಿಯಾಗಿದ್ದ ಪಕ್ಷದಲ್ಲಿ ನಾಲ್ಕು

---

೧೩. 'ಚೈವಾಷ್ಟ ಷಷ್ಟ್ಯಾ' ಎಂದಿದ್ದರೆ ಆ ಚರಣದ ಪ್ರಸ್ತಾರದಲ್ಲಿ ಒಂದು ಅಕ್ಷರ ಕಡಿಮೆಯಾಗುವುದರಿಂದ, 'ಚೈವಾಷ್ಟ'ದ ಸಂಧಿ ಬಿಡಿಸಿ ಅದನ್ನು 'ಚೈವ ಅಷ್ಟ' ಎಂದು ವಿಂಗಡಿಸಬೇಕು.

೧೪. ಉದಾ: *SII VII*. ನಂ. ೧೭೭; ೧೭೮; ೧೮೦; ೧೮೫; ೨೨೧; ೨೨೩; ೨೩೭; ೨೭೪; ೩೦೮, ೫೫.

ಕೈಗಳಿದ್ದು ಅವಲ್ಲಿ ಆಯಾ ದೇವತೆಯ ಒಂದೊಂದಾದರೂ ಲಾಂಛನದಂತೆ, ಉದಾ. ಒಂದರಲ್ಲಿ ಬ್ರಹ್ಮನ ಅಕ್ಷ ಮಾಲೆಯೂ, ಮತ್ತೊಂದರಲ್ಲಿ ವಿಷ್ಣುವಿನ ಚಕ್ರವೂ, ಇನ್ನೊಂದರಲ್ಲಿ ಶಿವನ ತ್ರಿಶೂಲವೂ ಇರುತಿತ್ತು. ಇದಕ್ಕಾದರೊ ಹಾಗೇನೂ ಇಲ್ಲದೆ, ಚಂದ್ರಲೇಖೆ ಇಲ್ಲದ ಜಟಾಮುಕುಟವೂ ಇದೆ, ಆರು ಕೈಗಳೂ ಇವೆ, ಅವಲ್ಲಿಯ ಎರಡು ಕೈಗಳು ಕಮಲದ ಮುಗುಳುಗಳನ್ನು ಹಿಡಕೊಂಡಿವೆ, ಮತ್ತೆರಡರಲ್ಲಿ ಒಂದು ಕೈ ಬೌದ್ಧ ದೇವತೆಗಳಂತೆ ವ್ಯಾಖ್ಯಾನ ಮುದ್ರೆಯಲ್ಲಿದೆ.

ಆದರೆ ಇದು ಬುದ್ಧನ ವಿಗ್ರಹವೂ ಅಲ್ಲ. ಏಕೆಂದರೆ ಬುದ್ಧನ ಯಾವ ಮೂರ್ತಿಯಲ್ಲೂ ಒಂದಕ್ಕಿಂತ ಹೆಚ್ಚು ಮುಖಗಳೂ ಇಲ್ಲ, ಎರಡಕ್ಕಿಂತ ಹೆಚ್ಚು ಕೈಯ್ಗಳೂ ಇಲ್ಲ, ಮೆಯ್ಯಲ್ಲಿ ಒಂದೇ ಒಂದಾದರೂ ಆಭರಣವೂ ಇಲ್ಲ, ಅದರ ಕೇಶರಚನೆಯೂ ಈ ವಿಧವಾಗಿ ಮಕುಟಾಕೃತಿಯಾಗಿಲ್ಲ. ಇದೆಲ್ಲಕ್ಕಿಂತ ಮೇಲಾಗಿ ತ್ರಿಮೂರ್ತಿಯ ಸಮಸ್ತಮೂರ್ತಿಯಲ್ಲಾಗಲಿ, ಅದರ ಪ್ರತ್ಯೇಕ ಯಾವ ದೇವತೆಯ ಮೂರ್ತಿಯಲ್ಲಾಗಲಿ, ಹಾಗೆಯೇ ಬುದ್ಧನ ಯಾವ ಮೂರ್ತಿಯಲ್ಲಾಗಲಿ ಈ ವಿಗ್ರಹದ ಜಡೆಯಲ್ಲೂ ಪ್ರಭಾವಳಿಯಲ್ಲೂ ಇರುವಂಥಾ ಆ ಪದ್ಮಾಸೀನನಾದ ಯೋಗಿಯ ಚಿಕ್ಕ ಮೂರ್ತಿಯೋಪಾದಿಯ ಮೂರ್ತಿಯೂ ಸರ್ವಥಾ ಇಲ್ಲ, ಇರಲೂ ಸಲ್ಲ. ಈ ಲೋಕೇಶ್ವರನ ವಿಗ್ರಹವಿರುವ ಕೋಣೆಯಲ್ಲೇ ಒಳ ಹೊಗುವಾಗ ಬಲಗಡೆಯಲ್ಲಿ ಅಲ್ಲಿಯ ಅರ್ಚಕರು ವ್ಯಾಸನದೆಂಬ ಪ್ರಭಾವಳಿ ಇಲ್ಲದಿರುವ ಕಂಚಿನದೇ ಮತ್ತೊಂದು ಸೊಗಸಾದ ವಿಗ್ರಹವಿದೆ. ಅದರ ಕೇಶ ರಚನೆ ಲೋಕೇಶ್ವರನ ವಿಗ್ರಹದ ಜಟಾರಚನೆಯಂತೆ ಇರದೆ ಬುದ್ಧನ ವಿಗ್ರಹಗಳಲ್ಲಿ ತೋರುವುದಕ್ಕೆ ಅಗದಿ ಸವಿಧವಾಗಿದೆ. ಅದರ ಮೆಯ್ಯಲ್ಲಿ ಒಂದೂ ಆಭರಣವಿಲ್ಲ. ಅದರ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿದೆ, ಎಡಗೆಯ್ಯನ್ನು ಪದ್ಮಾಸನ ಕಟ್ಟಿಕೊಂಡಿರುವ ಕಾಲುಗಳಲ್ಲಿ ಮಡಗಿದೆ. ಅದರ ಜಡೆಯಲ್ಲಾದರೆ ಲೋಕೇಶ್ವರನ ಜಡೆಯಲ್ಲಿ (ಹಾಗೂ ಪ್ರಭಾವಳಿಯಲ್ಲಿ) ಇರುವ ಮೇರೆಯ ಆ ಚಿಕ್ಕ ಮೂರ್ತಿ ಇಲ್ಲ, ಏಕೆಂದರೆ ಬುದ್ಧನ ವಿಗ್ರಹದ ಜಡೆಯಲ್ಲಾಗಲಿ ಪ್ರಭಾವಳಿಯಲ್ಲಾಗಲಿ ಆ ಬಗೆಯ ಚಿಕ್ಕ ಮೂರ್ತಿ ಸರ್ವಥಾ ಇರಸಲ್ಲ. ಅತಏವ ಒಂದೇ ಮಾತಿನಲ್ಲಿ ಹೇಳುವುದಾದರೆ, ಪ್ರತ್ಯಕ್ಷವಾಗಿ ಬುದ್ಧನ ಮೂರ್ತಿಯಂತಿರುವ ಆ ವ್ಯಾಸನದೆಂಬ ವಿಗ್ರಹವಾದರೊ ಸಾಕ್ಷಾತ್ ಬುದ್ಧನ ವಿಗ್ರಹ ತಾನೆ ಎಂಬಲ್ಲಿ ರವಷ್ಟೂ ಸಂಶಯವಿಲ್ಲ.

ಬೌದ್ಧ ಧರ್ಮದ ಮಹಾಯಾನದಲ್ಲಿ ಮುಂದೆ ಬುದ್ಧರಾಗಲಿಕ್ಕಿರುವ ದೇವತಾಕಲ್ಪರಾದ ಬೋಧಿಸತ್ತ್ವರ ಆರಾಧನೆ ಇದೆ ಎಂದೂ, ಆ ಹಲವರಲ್ಲಿ (೧) ಮೈತ್ರೇಯ, (೨) ಅವಲೋಕಿತೇಶ್ವರ ಅಥವಾ ಲೋಕೇಶ್ವರ, ಮತ್ತು (೩) ಮಂಜುಶ್ರೀ ಅಥವಾ ಮಂಜುಘೋಷ ಹಾಗೂ ಮಂಜುನಾಥ ಎಂಬ ಮೂವರು ಸುಪ್ರಸಿದ್ಧರೆಂದೂ ಮೇಲೆ ಕಂಡಿರುತ್ತೇವೆ. ಕದರಿಯ ಲೋಕೇಶ್ವರನ ವಿಗ್ರಹವಾದರೊ ಆ ಮೂವರಲ್ಲಿ ನಿಶ್ಚಯವಾಗಿಯೂ ಲೋಕೇಶ್ವರನೂ ಎಂಬ ಅವಲೋಕಿತೇಶ್ವರನದೇ೧೫ ವಿಗ್ರಹವಾಗಿರಬೇಕು. ಏಕೆಂದರೆ ಕದರಿಯ ವಿಗ್ರಹಕ್ಕೆ ಆತನ ಲೋಕೇಶ್ವರನೆಂಬ ಹೆಸರು ಮಾತ್ರವಲ್ಲ, ಅವಲೋಕಿತೇಶ್ವರನ ಮೂರ್ತಿಗೆ೧೬ ಹೇಗೋ ಹಾಗೆಯೇ ಇದಕ್ಕೂ ಮೆಯ್ಯಲ್ಲಿ ಕೆಯ್ಯಲ್ಲಿ ವಿವಿಧ ಆಭರಣಗಳಿವೆ, ಜನಿವಾರವಿದೆ, ಎರಡರ ಜಟಾಮಕುಟಗಳೂ ಏಕ ಪ್ರಕಾರವಾಗಿವೆ. ಅವಲೋಕಿತೇಶ್ವರನ ಮೂರ್ತಿ 'ವರದಂ ದಕ್ಷಿಣೇ ಹಸ್ತೇ'೧೭ ಹೇಗೋ ಹಾಗೆಯೇ ಕದರಿಯ ಲೋಕೇಶ್ವರ ಮೂರ್ತಿಯೂ ಬಲಗೈಯಿಂದ ವರದಮುದ್ರೆಯನ್ನು ತೋರಿಸುತ್ತದೆ. ಎರಡು ಕೈಗಳುಳ್ಳ ಅವಲೋಕಿತೇಶ್ವರನ ಮೂರ್ತಿಯ ಎಡಗೆಯ್ಯಲ್ಲಿ ಪದ್ಮವಿದೆಯಾದರೆ—'ವಾಮೇ ಪದ್ಮಧರಮ್'೧೮ ಎರಡೇ ಅಲ್ಲ, ಅನೇಕ ಕೆಯ್ಗಳೂ ಉಳ್ಳ ಅವಲೋಕಿತೇಶ್ವರ=ಲೋಕೇಶ್ವರನ ಮೂರ್ತಿಗಳೂ ಇರುವುದರಿಂದ,೧೯ ಆರು ಕೆಯ್ಗಳುಳ್ಳ ಕದರಿಯ ಲೋಕೇಶ್ವರ ಮೂರ್ತಿಯ ಎರಡು ಕೈಗಳಲ್ಲಿ ಪದ್ಮಗಳಿವೆ. ಹಾಗೂ ಬೋಧಿಸತ್ತ್ವ ಅವಲೋಕಿತೇಶ್ವರನ

---

೧೫. ಅವಲೋಕಿತೇಶ್ವರನಿಗೆ ಮತ್ತೂ ಕೆಲವು ಹೆಸರಿವೆ—ಲೋಕೇಶ್ವರ, ಕೃಪಾದ್ವೈತ, ಪದ್ಮಪಾಣಿ, ಖಸರ್ಪಣ, ಜಟಾಧರ, ಇ಼ಇ಼ (ತ್ರಿಕಾಂಡಶೇಷ, ಶ್ಲೋ. ೧೪-೧೬)

೧೬. Catalogue of the Museum of Archeoalogy at Sarnath (1914), ಪು. ೧೧೪; ೧೨೧; ೧೭೯ ಇ. ಹಾಗೂ ಅದರಲ್ಲಿಯ ಚಿತ್ರಪಟ *XII*(b) ಯನ್ನು ನೋಡುವುದು.

೧೭. ಅದೇ, ಪು. ೧೧೮; ೧೨೨ ಇ.

೧೮. ಅದೇ, ಪು. ೧೧೮; ೧೨೨, ಇ.

೧೯. *K.I.B.* ಪು. ೯೬.

ಮೂರ್ತಿ ಇರಬೇಕಾದಂತೆ ಕದರಿಯ ಮೂರ್ತಿಯೂ ಧ್ಯಾನಮುದ್ರೆಯಲ್ಲಿದೆ. ಇದೆಲ್ಲಕ್ಕಿಂತ ಮಿಗಿಲಾಗಿ, ಬೌದ್ಧರ ಪ್ರತಿಮಾಶಾಸ್ತ್ರದ ಮೇರೆಗೆ ಬುದ್ಧನ ವಿಗ್ರಹದ ಜಡೆಯಲ್ಲಿ ಹಾಗೂ ಪ್ರಭಾವಳಿಯಲ್ಲಿ ಮಾತ್ರ ಸರ್ವಥಾ ಇರಬಾರದಲ್ಲದೆ ಪ್ರತ್ಯೇಕ ಬೋಧಿಸತ್ತ್ವನ ಜಡೆಯಲ್ಲೂ ಪ್ರಭಾವಳಿಯಲ್ಲೂ ಅವನ ಆಧ್ಯಾತ್ಮಿಕ ಗುರುವಾದ ಧ್ಯಾನಿಬುದ್ಧನ೩೦ ಚಿಕ್ಕ ಮೂರ್ತಿ ಆವಶ್ಯಕವಾಗಿ ರೂಪಿಸಿರಲೇ ಬೇಕಾದಂತೆ, ಅವಲೋಕಿತೇಶ್ವರನ ಜಡೆಯಲ್ಲೂ ಪ್ರಭಾವಳಿಯಲ್ಲೂ ಹೇಗೆ ಆತನ ಧ್ಯಾನಿಬುದ್ಧನಾದ ಅಮಿತಾಭ ಬುದ್ಧನ ಚಿಕ್ಕ ಮೂರ್ತಿ ಅವಿಯೋಜ್ಯವಾಗಿ ಇದೆಯೊ, ಹಾಗೆಯೇ ಅದೇ ಮಾದರಿಯ, ಅದೇ ರೀತಿಯಲ್ಲಿ ಪದ್ಮಾಸನಸ್ಥವಾಗಿ ಕೈಗಳನ್ನು ಒಂದರ ಮೇಲೆ ಒಂದಿಟ್ಟುಕೊಂಡು ಧ್ಯಾನಾವಸ್ಥೆಯಲ್ಲಿರುವ ಚಿಕ್ಕ ಮೂರ್ತಿ ಕದರಿಯ ಲೋಕೇಶ್ವರನ ಜಡೆಯಲ್ಲೂ ಇದೆ, ಪ್ರಭಾವಳಿಯಲ್ಲೂ ಇದೆ. ಅತಏವ ಕದರಿಯ ಲೋಕೇಶ್ವರನ ವಿಗ್ರಹ ಬೌದ್ಧರ ಬೋಧಿಸತ್ತ್ವನಾದ ಅವಲೋಕಿತೇಶ್ವರನೆಂಬ ಲೋಕೇಶ್ವರನ ವಿಗ್ರಹವೇ ಸರಿ ಎಂಬುದಕ್ಕೆ ಇದೊಂದೇಸಾಕ್ಷ್ಯ ಸಾಕು, ಬೇರೆ ಪ್ರಮಾಣಗಳನ್ನು ಹುಡುಕಬೇಕೆಂದಿಲ್ಲ. ಮೇಲೆ ಕಂಡಿರುವಂತೆ ಆ ವಿಗ್ರಹದ ಪೀಠದಲ್ಲಿಯ ಶಾಸನದಲ್ಲಿ ಅದನ್ನು ಪ್ರತಿಷ್ಠಿಸಿದ ಮಂದಿರವನ್ನು ಕೇವಲ ಬೌದ್ಧ ಪರಿಭಾಷೆಯಲ್ಲಿ ವಿಹಾರ ಎಂದೂ ಹೇಳಿದೆ—

ಶ್ರೀಮತ್ ಕದರಿಕಾ ನಾಮ್ನಿ ವಿಹಾರೇ ಸುಮನೋಹರೇ ॥೯॥

ವಿಹಾರವೆಂದು ಬೌದ್ಧದೇವತಾ ಮಂದಿರಗಳಿಗೂ ಬೌದ ಭಿಕ್ಷುಗಳ ಮಠಗಳಿಗೂ ವಿನಾ ಬೇರೆ ಯಾವ ಧರ್ಮದ ದೇವಾಲಯಗಳಿಗೂ ಮಠಗಳಿಗೂ ಆ ಹೆಸರಿಲ್ಲ, ಅತಏವ ಕದರಿಯ ಶಿವಾಲಯವು ಲೋಕೇಶ್ವರನ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಿಸುವುದಕ್ಕೆ ಸಾಕಷ್ಟು ಹಿಂದಿನಿಂದಲೇ ಯಾವೊಮ್ಮೆ ಮಂಜುನಾಥ ಎಂಬ ಬೋಧಿಸತ್ತ್ವ ಮಂಜುಶ್ರೀಯದೇ ವಿಗ್ರಹವಿದ್ದ ವಿಹಾರವಾಗಿದ್ದಿರಬೇಕು. ಏಕೆಂದರೆ ಕ್ರಿ. ಶ. ೧೦೬೮ರಲ್ಲಿ ಲೋಕೇಶ್ವರನ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಿಸುವಾಗಲೇ ಅದನ್ನು ವಿಹಾರ ಎಂದಿರುವುದರಿಂದ, ಅದು ಆ ಮುಂಚಿನಿಂದಲೇ ಆ ಹೆಸರಿನಿಂದ ವ್ಯವಹೃತವಾಗಿದ್ದಿರಬೇಕು; ಹಾಗೆಯೇ ಈಗ ಅಲ್ಲಿರುವ ಆ ಲೋಕೇಶ್ವರನ ಮೂರ್ತಿಯೂ ಬೌದ್ಧ ವಿಗ್ರಹವೂ ಸರಿ, ಹಾಗೂ ಅದು ಮತ್ತೊಬ್ಬ ಬೋಧಿಸತ್ತ್ವನಾದ ಅವಲೋಕಿತೇಶ್ವರ=ಲೋಕೇಶ್ವರನ ಪ್ರತಿಮೆಯೂ ಸರಿ ಎಂದು ನಿಸ್ಸಂದೇಹವಾಗಿ ಸಿದ್ಧವಾಗುತ್ತದೆ. ಇದರೊಂದಿಗೆ ಕದರಿಯ ಗುಡ್ಡದಲ್ಲಿ ಪಂಚಪಾಂಡವರ ಗುಹೆಗಳೆಂಬ ಗವಿಗಳಿವೆ ಎಂಬುದನ್ನೂ ನೆನವರಿಸಬಹುದು. ಅವು ಆ ಸುತ್ತಣ ನೆರೆಕರೆಯಲ್ಲಿ ಯಾವೊಮ್ಮೆ ಬೌದ್ಧ ಭಿಕ್ಷುಗಳು ವಾಸಿಸುತ್ತಿದ್ದರೆಂಬುದಕ್ಕೆ ಅಮೋಘವಾದ ನಿದರ್ಶನವಾಗಿವೆ.

ಹಾಗಾದರೆ ಆ ಲೋಕೇಶ್ವರನ ಮೂರ್ತಿಯನ್ನು ಕದರಿಯಲ್ಲಿ ಪ್ರತಿಷ್ಠಿಸಿದ ಆಳುಪ ವಂಶದ ಅರಸನಾದ ಕುಂದವರ್ಮನನ್ನು ಅದರ ಪೀಠದಲ್ಲಿಯ ಶಾಸನದಲ್ಲಿ—


ಪಾದಾರವಿಂದ ಭ್ರಮರೋ ಬಾಲಚಂದ್ರ ಶಿಖಾಮಣೇಃ ॥ ೬ ॥

ಮಹಾ ಶಿವಭಕ್ತನೆಂದು ಹೇಳಿದೆಯಷ್ಟೇ. ಆತನು ಬೋಧಿಸತ್ತ್ವನ ವಿಗ್ರಹವನ್ನು ಪ್ರತಿಷ್ಠಿಸಲಿಕ್ಕೆ ಕಾರಣವೇನು?

ಬೌದ್ಧಧರ್ಮವು ಬಹಳ ಹಿಂದೊಮ್ಮೆ ಕದರಿಯಲ್ಲಿ ನೆಲಸಿತ್ತೆಂದೂ, ಅದು ಕ್ರಿ. ಶ. ೭–ಅನೆಯ ಶತಮಾನದೊಳಗೆ ತುಳುನಾಡಿಂದ ತೀರ ಲುಪ್ತವಾಯಿತೆಂದೂ ಹಿಂದೆ ಕಂಡಿರುವೆವಷ್ಟೆ. ಆದಕಾರಣ ಕ್ರಿ. ಶ. ೧೧ನೆಯ ಶತಮಾನದಲ್ಲಿ ಕದರಿಯಲ್ಲಿ ಪ್ರತಿಷ್ಠಿತವಾದ ಲೋಕೇಶ್ವರನ ವಿಗ್ರಹವು ಸ್ವಯಂ ಬೌದ್ಧ ಧರ್ಮದವರಿಂದ ಅಲ್ಲ, ಆ ಧರ್ಮದ ಪ್ರಭಾವಕ್ಕೆ ಶಾನೆ ಈಡಾದ ಉತ್ತರ ಭಾರತದ ಬೇರೆಯೇ ಯಾವುದೊಂದು ಬೌದ್ಧೇತರ ಪಂಥದವರಿಂದ, ಅತಏವ ಹಿಂದೂಧರ್ಮದ ಯಾವೊಂದು ಪಂಥದವರಿಂದ ನಿರ್ಮಿಸಲ್ಪಟ್ಟುದಾಗಿರಬೇಕು. ಆ ಪಂಥವೆಂದರೆ ಬೇರೆ ಯಾವುದೂ ಅಲ್ಲ, ಈಗಲೂ ಕದರಿಯ ಗುಡ್ಡದಲ್ಲಿ ಮಠಮಾಡಿಕೊಂಡಿರುವ ಜೋಗಿಗಳೆಂಬವರ ಶೈವ ಧರ್ಮದ ನಾಥಪಂಥ ತಾನೆ. ಈ ನಿರ್ಣಯವನ್ನು ಸಮರ್ಥಿಸಲಿಕ್ಕೆ ಬೌದ್ಧರ ಪ್ರತ್ಯೇಕ ಬೋಧಿಸತ್ತ್ವನ ಜಡೆಯಲ್ಲಿ ಆವಶ್ಯಕವಾಗಿ ಇರಬೇಕಾದಂತೆ (ಹಾಗೂ ಸನಾತನ ಧರ್ಮದ ಯಾವೊಂದು

---

೩೦. ಮಹಾಯಾನದ ಧ್ಯಾನಿಬುದ್ಧರು ಇವರೈವರು— (೧) ವೈರೋಚನ, (೨) ಅಕ್ಶೋಭ್ಯ, (೩) ರತ್ನಸಂಭವ, (೪) ಅಮಿತಾಭ, ಮತ್ತು (೫) ಅಮೋಘ ಸಿದ್ಧಿ. ಇವರೆಲ್ಲರೂ ಶಾಶ್ವತರು, ಮತ್ತು ಇವರು ಯಾವಾಗಲೂ ಬೋಧಿಸತ್ತ್ವರಾಗಿರಲಿಲ್ಲ (*K.I.B.* ಪು. ೬೪).



ಶ್ರೀ ಲೋಕೇಶ್ವರ ಮೂರ್ತಿ

ಮೂರ್ತಿಯ ಜಡೆಯಲ್ಲಿ ಇರಬಾರದಂತೆ) ಕದರಿಯ ದೇವಾಲಯದಲ್ಲಿರುವ ಲೋಕೇಶ್ವರ ಮೂರ್ತಿಯ ಜಡೆಯಲ್ಲಿರುವ ಮಾದರಿಯಲ್ಲೇ ಆ ದೇವಾಲಯದ ಮೇಲಣ ಕದರಿಯ ಗುಡ್ಡದಲ್ಲಿರುವ ಜೋಗಿಮಠದ ಹೊರಗಡೆಯ ಆ ೩ ಗುಡಿಗಳಲ್ಲಿಯ ನಡುವಣ ಗುಡಿಯಲ್ಲಿರುವ ಮತ್ಸ್ಯೇಂದ್ರನಾಥನ ಮಾನುಷ ವಿಗ್ರಹದ ಜಡೆಯಲ್ಲಿರುವ ಆ ಚಿಕ್ಕ ಮೂರ್ತಿಯೊಂದೇ ಸಾಕು. ಮತ್ತೂ ಬೇಕಾದರೆ ನಾಥಪಂಥದವರ ಹಳಗಾಲದ ಯೋಗಿಗಳ ಪ್ರತ್ಯೇಕ ವಿಗ್ರಹದ ಜಡೆಯಲ್ಲಿ ಅಂತಹದೇ ಚಿಕ್ಕ ಮೂರ್ತಿ ಅವಿಯುಕ್ತವಾಗಿ ಇದೆ ಎಂದೂ ಮನವರಿಸಿಕೊಳ್ಳಬಹುದು.

ನಾಥಪಂಥವು ಬೌದ್ಧಧರ್ಮದ ಮಹಾಯಾನ ಶಾಖೆಯ ವಜ್ರಯಾನ ಎಂಬ ಪಂಗಡದಿಂದ ಉತ್ಪನ್ನವಾಯಿತು. ಅತಏವ ಅದು ತಾಂತ್ರಿಕ ಶೈವಮಾರ್ಗವಾಗಿ ಪರಿಣಮಿಸುವ ಮುಂಚೆ ತಾಂತ್ರಿಕ ಬೌದ್ಧ ಮಾರ್ಗದ ಪ್ರಕಾರವಾಗಿದ್ದ ಕಾರಣ, ಅದಕ್ಕೆ ಬೌದ್ಧವೂ ಬ್ರಾಹ್ಮಣವೂ, ಹೀಗೆ ಅವೆರಡೂ ಧರ್ಮಗಳ ತಂತ್ರಗಳು ಹೊಂದಿಕೆಯಾಗಿವೆ. ನಾಥಪಂಥವು ಬೌದ್ಧಧರ್ಮದಿಂದ ಶೈವಧರ್ಮಕ್ಕೆ ಮಾರ್ಪಟ್ಟ ವಿಧಾನದಲ್ಲಿ ಅದು ಕೆಲಮಟ್ಟಿಗೆ ಬೌದ್ಧ ಪರಿಭಾಷೆಯನ್ನು ಬಳಸಿಕೊಂಡಿತಷ್ಟೇ ಅಲ್ಲ, ಬೌದ್ಧವೂ ಶೈವವೂ ಧರ್ಮಗಳ ಆಚಾರಗಳನ್ನೂ ಸಿದ್ಧಾಂತಗಳನ್ನೂ ಸಹಜವಾಗಿ ಒಳಕೊಂಡಿತು.[೨೧] ಹೀಗಾಗಿ ನಾಥಪಂಥದ ಆದ್ಯ ಗುರುಗಳೂ ವಜ್ರಯಾನದ ದೇವತೆಗಳ ಹಾಗೂ ಗುರುಗಳೊಂದಿಗೆ ಸಮೀಕರಿಸಲ್ಪಟ್ಟರು. ಟಿಬೇಟದಲ್ಲೂ ನೇಪಾಳದಲ್ಲೂ ನಾಥಪಂಥದ ಆದ್ಯ ಪ್ರವರ್ತಕನಾದ ಮತ್ಸ್ಯೇಂದ್ರನಾಥನು ಮಹಾಯಾನದ ದೇವತೆಯಾದ ಅವಲೋಕಿತೇಶ್ವರನೆಂಬ ಲೋಕೇಶ್ವರನೊಂದಿಗೆ ಸಮೀಕೃತನಾಗಿ ದೇವತೆಯಾದನು.[೨೨] ಹಾಗೂ ಸ್ವಯಂ ಮತ್ಸ್ಯೇಂದ್ರನಾಥನೂ, ಮೊದಲು ವಜ್ರಯಾನದವನಾಗಿದ್ದು ಆ ಮೇಲೆ ಮತ್ಸ್ಯೇಂದ್ರನಾಥನ ನಿಜಶಿಷ್ಯನಾಗಿ ಶೈವನಾದ ಗೋರಕ್ಷನಾಥನೂ ಬಂಗಾಳದಲ್ಲಿ ಬೌದ್ಧ ಸಂತರೆಂದು ಭಾವಿಸಲ್ಪಟ್ಟರು.

ಹೀಗೆ ಕದರಿಯ ದೇವಾಲಯದಲ್ಲಿರುವ ಆ ಲೋಕೇಶ್ವರನ ವಿಗ್ರಹ ಬೌದ್ಧಧರ್ಮದ ದೇವತೆಯಾದ ಲೋಕೇಶ್ವರನೊಡನೆ ಸಮೀಕೃತನಾದ, ಶೈವಧರ್ಮದ ಸಂತನಾದ ಮತ್ಸ್ಯೇಂದ್ರನಾಥನ ದೇವತಾಮೂರ್ತಿ, ಅಂದರೆ ದೇವೀಭೂತನಾದ (deified) ಮತ್ಸ್ಯೇಂದ್ರನಾಥನ ಮೂರ್ತಿ ಎಂದು ಸ್ಪಷ್ಟನಾಗುತ್ತದಷ್ಟೆ. ಹಾಗಾದರೆ ಬೌದ್ಧ ಬೋಧಿಸತ್ತ್ವನಾದ ಅವಲೋಕಿತೇಶ್ವರ=ಲೋಕೇಶ್ವರನ ವಿಗ್ರಹದ ಜಡೆಯಲ್ಲಿ ಹಾಗೂ ಪ್ರಭಾವಳಿಯಲ್ಲಿ ಆತನ ಧ್ಯಾನಿಬುದ್ಧನಾದ ಅಮಿತಾಭನ ಚಿಕ್ಕ ಮೂರ್ತಿ ಇರುವಂತೆ ಆತನಲ್ಲಿ ಸಮೀಕರಿಸಲ್ಪಟ್ಟ ಮತ್ಸ್ಯೇಂದ್ರನಾಥನ ಈ ವಿಗ್ರಹದ ಜಡೆಯಲ್ಲೂ ಪ್ರಭಾವಳಿಯಲ್ಲೂ ತೋರುವ ಈ ಚಿಕ್ಕ ಮೂರ್ತಿಗಳು ಯಾರವು? ಎಂದು ಸ್ವಾಭಾವಿಕವಾಗಿ ಪೃಚ್ಛಿಸಬಹುದು. ಅದರ ಪ್ರತ್ಯುತ್ತರ ಹೀಗಿದೆ—

ಅವಲೋಕಿತೇಶ್ವರನ ಜಡೆಯಲ್ಲಿ ರೂಪಿತನಾದ ಅಮಿತಾಭನು ಹೇಗೆ ಆತನ ಆಧ್ಯಾತ್ಮಿಕ ಗುರುವಾದ ಧ್ಯಾನಿಬುದ್ಧನೊ, ಹಾಗೂ ಧ್ಯಾನಿಬುದ್ಧರೆಲ್ಲರೂ ಶಾಶ್ವತರೆಂಬ ಕಾರಣ ತಾನೂ ಶಾಶ್ವತನೊ,[೨೩] ಹಾಗೆಯೇ ಆ ಲೋಕೇಶ್ವರನೊಂದಿಗೆ ಸಮೀಕೃತನಾದ ಮತ್ಸ್ಯೇಂದ್ರನಾಥನ ಈ ಕದರಿಯ ಮೂರ್ತಿಯ ಜಡೆಯಲ್ಲೂ ಪ್ರಭಾವಳಿಯಲ್ಲೂ ತೋರುವ ಆ ಚಿಕ್ಕ ಮೂರ್ತಿಯಾದರೂ ಆ ಮತ್ಸ್ಯೇಂದ್ರನಾಥನ ಆಧ್ಯಾತ್ಮಿಕ ಗುರುವೂ ಶಾಶ್ವತನೂ ಆದ ಯಾವನೊಬ್ಬ ಮಹಾವ್ಯಕ್ತಿಯ, ಮಹಾದೇವತೆಯ ಮೂರ್ತಿಯಾಗಿರಬೇಕೆಂದು ಸಹಸಾ ಸಿದ್ಧವಾಗುತ್ತದೆ. ಆ ಶಾಶ್ವತನಾದ ಗುರುವಾದರೆ ಯಾರು?

ಹೀಗೊಂದು ಕಥೆ ಇದೆ[೨೪]—ಒಮ್ಮೆ ಆದಿನಾಥನಾದ ಶಿವನು[೨೫] ಪಾರ್ವತಿಗೆ ಯೋಗವನ್ನು ಉಪದೇಶಿ

೨೧. *Oriental Literary Digest, I.* 2. (ಆಗೋಸ್ತು ೧೯೩೭), ಕಲಂ ೩—೪.

೨೨. ನೇಪಾಳದ ಒಂದು ಶಾಸನದಲ್ಲಿ ಮತ್ಸ್ಯೇಂದ್ರನಾಥನನ್ನು ಕುರಿತು ಹೀಗಿದೆ—
ಮತ್ಸ್ಯೇಂದ್ರಂ ಯೋಗಿನಾಂ ಮುಖ್ಯಾಃ ಶಾಕ್ತಾಃ ಶಕ್ತಿಂ ವದಂತಿ ಯಮ್ । ಬೌದ್ಧಾಲೋಕೇಶ್ವರಂ ತಸ್ಮೈ ನಮೋ ಬ್ರಹ್ಮಸ್ವರೂಪಿಣೇ ॥ (*Indian Antiquary, IX, 1880*, ಪು. ೧೯೨).

೨೩. *K.I.B.* ಪು ೬೪.

೨೪. *Briggs! Gorakhanath and the Kanphata Yogis (B.G.K.)* ಪು. ೨೩೯.

೨೫. ಇತಿ ಮುದ್ರಾ ದಶ ಪ್ರೋಕ್ತಾ ಆದಿನಾಥೇನ ಶಂಭುನಾ॥ (ಹಠಯೋಗ ಪ್ರದೀಪಿಕಾ, III ೧೨೦).

ಸುತ್ತಿರುವಾಗ ಮತ್ಸ್ಯೇಂದ್ರನಾಥನು ಒಂದು ಮೀನಿನ ರೂಪದಿಂದಲೊ ಅಥವಾ ಮೀನಿನ ಹೊಟ್ಟೆಯಲ್ಲಿಯೊ ಅಲ್ಲಿದ್ದು ಅದನ್ನು ಕೇಳಿ ಗ್ರಹಿಸಿಕೊಂಡನು. ಆ ಕಾರಣ ಅನಾದ್ಯನಂತನಾಗಿ ಶಾಶ್ವತನಾಗಿ ಇರುವ ಆದಿನಾಥನೆಂಬ ಯೋಗೇಶ್ವರನಾದ ಶ್ರೀ ಶಿವನೇ ಮತ್ಸ್ಯೇಂದ್ರನಾಥನಿಗೆ ಯೋಗವನ್ನು ಉಪದೇಶಿಸಿದ ಗುರು, ಅತಏವ ಆತನ ಆಧ್ಯಾತ್ಮಿಕ ಗುರು ಎಂದು ವ್ಯಕ್ತವಾಗುವುದರಿಂದ, ಕದರಿಯ ದೇವಾಲಯದಲ್ಲಿರುವ ಲೋಕೇಶ್ವರ-ಮತ್ಸ್ಯೇಂದ್ರನಾಥನ ಜಡೆಯಲ್ಲೂ ಪ್ರಭಾವಳಿಯಲ್ಲೂ, ಹಾಗೂ ಕದರಿಯ ಗುಡ್ಡದಲ್ಲಿರುವ ಜೋಗಿಮಠದ ಹೊರಗಡೆಯ ನಡುವಣ ಗುಡಿಯಲ್ಲಿರುವ ಮತ್ಸ್ಯೇಂದ್ರನಾಥನ ಆ ಮಾನುಷ ವಿಗ್ರಹದ ಜಡೆಯಲ್ಲೂ ಇರುವ ಆ ಚಿಕ್ಕ ಮೂರ್ತಿಗಳಲ್ಲಿ ರೂಪಿತನಾದ ವ್ಯಕ್ತಿ ಅಂದರೆ ಯೋಗೀಶ್ವರನಾದ, ಆದಿನಾಥನಾದ ಹಾಗೂ ಸನಾತನ ಧರ್ಮದ ಪ್ರಧಾನ ದೇವತೆಗಳಲ್ಲಿ ಒಬ್ಬನಾದ ಶ್ರೀ ಶಿವನೇ ವಿನಾ ಬೇರೆ ಯಾರೂ ಅಲ್ಲ. ಆದಕಾರಣ ಶಿವಭಕ್ತನಾದ ಕುಂದವರ್ಮನು ಕದರಿಯಲ್ಲಿ ಪ್ರತಿಷ್ಠಿಸಿದ್ದ ಲೋಕೇಶ್ವರನ ವಿಗ್ರಹವಾದರೊ ಆ ಹೆಸರಿನ ಬೌದ್ಧ ಬೋಧಿಸತ್ತ್ವನ ವಿಗ್ರಹವಲ್ಲ, ಪರಶಿವನ ಆಧ್ಯಾತ್ಮಿಕ ಪುತ್ರನಾದ ಹಾಗೂ ದೇವೀಭೂತನಾದ ಮತ್ಸ್ಯೇಂದ್ರನಾಥನ ವಿಗ್ರಹ. ಅದರಲ್ಲಿ ಮತ್ಸ್ಯೇಂದ್ರನಾಥನು ಲೋಕೇಶ್ವರನಲ್ಲಿ ಐಕ್ಯನಾಗಿದ್ದ ಕಾರಣ, ಅದಕ್ಕಿನ್ನು ಮತ್ಸ್ಯೇಂದ್ರನಾಥ ಎಂದಲ್ಲ, ಲೋಕೇಶ್ವರ ಎಂದೇ ಹೆಸರು. ಆ ಹೆಸರಿನ ಈಶ್ವರ ಎಂಬ ಪರಪದದಿಂದ ಅದು ಈಶ್ವರನಂತೆಯೇ ಪೂಜಾರ್ಹ, ಅಥವಾ ಸಾಕ್ಷಾತ್ ಈಶ್ವರನ ವಿಗ್ರಹ ತಾನೆ.

ಕದರಿಯ ದೇವಾಲಯದಲ್ಲೇ ದಕ್ಷಿಣಮುಖವಾಗಿ ಪದ್ಮಾಸನ ಕಟ್ಟಿ ಕುಳಿತಿರುವ ನಾಥಪಂಥದ ಮೂಲಪುರುಷನಾಗಿರುವ ಮತ್ಸ್ಯೇಂದ್ರನಾಥನದೇ ಪ್ರತ್ಯಂಗುಲವೂ ತೀರ ಮಾನುಷಾಕೃತಿಯ ಹಾಗೂ ಪ್ರತ್ಯವಯವದಲ್ಲೂ ಆತನ ಯಥಾಪ್ರತಿಯಾದ ಬೇರೊಂದು ಶಿಲಾಮೂರ್ತಿಯೂ* ಇದೆ. ಅದರ ಪೀಠದಲ್ಲಿ ದೊಡ್ಡದೊಂದು ಮೀನನ್ನು ಕೆತ್ತಿರುವುದರಿಂದ ಅದು ಮತ್ಸ್ಯೇಂದ್ರನಾಥನ (ಮತ್ಸ=ಮೀನು) ವಿಗ್ರಹ ತಾನೆ ಎಂಬಲ್ಲಿ ಎದುರು ಮಾತಿಲ್ಲ. ಅದಕ್ಕೆ ಒಂದೇ ಮೊಗ, ಎರಡೇ ಕೈಗಳು, ಕೊರಳಲ್ಲಿ ಜನಿವಾರವಿದೆ, ಮೆಯ್ಯಲ್ಲಿ ಒಂದೂ ಆಭರಣವಿಲ್ಲ, ತಲೆಯಲ್ಲಿ ರುದ್ರಾಕ್ಷಿ ಸರ ವೇಷ್ಟಿಸಿರುವ ಜಡೆಯಿದೆ, ಹಾಗೂ ಪ್ರಭಾವಳಿಯಲ್ಲಿ ಕೀರ್ತಿಮುಖ ಮಾತ್ರವಲ್ಲದೆ, ಜಡೆಯಲ್ಲಾಗಲಿ ಪ್ರಭಾವಳಿಯಲ್ಲಾಗಲಿ ಧ್ಯಾನಾಸಕ್ತನಾದ ಆ ಯೋಗಿಯ ಚಿಕ್ಕ ಮೂರ್ತಿಯೂ ಇಲ್ಲ, ಜನಿವಾರದಲ್ಲಿ ಸಿಂಗನಾದವೂ ಇಲ್ಲ. ಈಗ ಸಿಂಗನಾದ ಎಂದರೇನು? ಸಿಂಗನಾದ (=ಶೃಂಗನಾದ) ಎಂದರೆ ಕೃಷ್ಣಮೃಗದಾಗಲಿ, ಎರಳೆಯದಾಗಲಿ, ಖಡ್ಗಮೃಗದಾಗಲಿ ಕೊಂಬಿನಿಂದ ಮಾಡಿದ ಸೀಟಿ (Whistle). ಅದು ನಾಥಪಂಥದ ಪ್ರತ್ಯೇಕ ಯೋಗಿಯ ಜನಿವಾರಕ್ಕೆ ಕಟ್ಟಿರಲೂ ಬೇಕು, ಅದನ್ನಾತನು ದಿನಾಲೂ ಆಯಾ ಹೊತ್ತಿಗೆ ಸರಿಯಾಗಿ ಅಷ್ಟು ಬಾರಿ ಊದಲೂ ಬೇಕು.[೨೬] ಇದಾತನ ಅನುಲ್ಲಂಘನೀಯವಾದ ದೈನಿಕ ಕರ್ತವ್ಯ. ಕದರಿಯ ಗುಡ್ಡದಲ್ಲಿರುವ ಮತ್ಸ್ಯೇಂದ್ರನಾಥನ ವಿಗ್ರಹದ ಜಡೆಯಲ್ಲಿ ಧ್ಯಾನಾಸಕ್ತನಾದ ಯೋಗಿಯ ಆ ಚಿಕ್ಕ ಮೂರ್ತಿಯೇ ಅಲ್ಲ, ಜನಿವಾರದಲ್ಲಿ ಸಿಂಗನಾದವೂ ಇದೆ. ಅತಏವ ಜನಿವಾರದಲ್ಲಿ ಸಿಂಗನಾದವನ್ನು ತೊಟ್ಟುಕೊಳ್ಳುವ ಹಾಗೂ ಅದನ್ನು ದಿನಾಗಲೂ ಆಗಾಗ್ಗೆ ಊದುತ್ತಿರುವ ಸಂಪ್ರದಾಯವು ಪ್ರತ್ಯಕ್ಷಮೇವ ಮತ್ಸ್ಯೇಂದ್ರನಾಥನಿಂದಲೇ ಅಥವಾ ಆತನ ಕಾಲದಲ್ಲೇ ತೊಡಗಿರದೆ ಆತನ ತರುವಾಯ ನಾಥಪಂಥದಲ್ಲಿ ತೊಡಗಿರಬೇಕು; ಇಲ್ಲವಾದರೆ ಕದರಿಯ ದೇವಾಲಯದಲ್ಲಿರುವ ಆತನ ದಕ್ಷಿಣಾಭಿಮುಖವಾದ ಮೂರ್ತಿಯ ಜನಿವಾರದಲ್ಲೂ ಸಿಂಗನಾದ ಇರುತ್ತಿತ್ತಲ್ಲವೆ? ಆದಕಾರಣ ಆ ಪದ್ಧತಿ ಬಹಳ ಪ್ರಾಕ್ಕಾಲೀನವಾದರೂ ಮತ್ಸ್ಯೇಂದ್ರನಾಥನಿಂದ ಹೆಚ್ಚಾದರೆ ಒಂದೆರಡು ತಲೆಮಾರಿನಷ್ಟು ಈಚೆಗೇನೋ ನಾಥಪಂಥದಲ್ಲಿ ಹುಟ್ಟಿರಬಹುದೆಂದು ವಿತರ್ಕಮಾತ್ರವಾಗಿ ಒಪ್ಪಿಕೊಂಡರೆ, ಕದರಿಯ ದೇವಾಲಯದಲ್ಲಿಯ ಆತನ ನಖಶಿಖಾಂತ ಪ್ರತಿಚ್ಛಂದವಾದ ಮಾನುಷವಿಗ್ರಹ ಹೇಗೂ ಆತನು ಲೋಕೇಶ್ವರನಲ್ಲಿ ಸಮೀಕೃತನಾಗಿ ದೇವೀಭೂತನಾಗುವುದಕ್ಕಿಂತ ಮುಂಚಿನದೆಂದು ಮಾತ್ರವಲ್ಲ,

* ಈ ವಿಗ್ರಹದ ಚಿತ್ರದ ಬಗ್ಗೆ Madras Epigraphical Report for 1921ರಲ್ಲಿ ೨ನೆಯ ಚಿತ್ರಪಠದಲ್ಲಿ ೫ನೆಯ ಚಿತ್ರವನ್ನೂ (Plate II, No. 5), ಶ್ರೀ ಶ್ರೀ ಗಣಪತಿ ಅಯ್ಯಗಳರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ದ ೭೪ನೆಯ ಪುಟದಲ್ಲಿಯ ಚಿತ್ರವನ್ನು ನೋಡುವುದು.

೨೬. *B.G.K.* ಪು ೧೧—೧೨.

ಪ್ರಾಯಶಃ ಆತನ ಸಮಕಾಲಿಕವೊ ಇಲ್ಲವೆ ಅತನು ಮುಕ್ತನಾದ ಕೊಂಚವೇ ಈಚೆಯದೊ ಆಗಿರಬೇಕೆಂದು ಅನುಮೇಯಿಸಬಹುದು. ಆ ದೇವಾಲಯದಲ್ಲಿರುವ ಲೋಕೇಶ್ವರನ ವಿಗ್ರಹವಾದರೊ ಆ ಬೌದ್ಧ ದೇವತೆಯೊಂದಿಗೆ ಸಮಿಾಕರಿಸಲ್ಪಟ್ಟ ಮತ್ಸ್ಯೇಂದ್ರನಾಥನ ವಿಗ್ರಹವೆಂಬುದರಿಂದ ಅದು ಸ್ವಾಭಾವಿಕವಾಗಿ ಆತನ ದೇವತ್ವಕ್ಕಿಂತ ಈಚೆಯದಾಗಿರಬೇಕು. ಆ ಲೋಕೇಶ್ವರನ ಮೂರ್ತಿ ಕ್ರಿ. ಶ. ೧೦೬೮ರಲ್ಲಿ ಪ್ರತಿಷ್ಠಿತವಾದ ಕಾರಣ, ಮತ್ಸ್ಯೇಂದ್ರನಾಥನು ಕ್ರಿ. ಶ. ೧೦೬೮ರ ಹಿಂದೆಯೇ ಕಾಲವಶನಾಗಿಯೇ ಅಲ್ಲ, ದೇವೀಭೂತನಾಗಿರಲೂಬೇಕು. ಭಾರತವರ್ಷದಲ್ಲಿ ಆಗಿ ಹೋದ ಧರ್ಮದೇಶಕರಾದ ಮಹಾಪುರುಷರು ದಿವಂಗತರಾದ ಹೆಚ್ಚಾದರೆ ೫೦ ವರ್ಷಗಳೊಳಗೆ ಎನ್ನೋಣ, ದೇವತ್ವ ಹೊಂದಿರುವ ವಾಡಿಕೆಯ ಮೇರೆಗೆ ಮತ್ಸ್ಯೇಂದ್ರನಾಥನೂ ತನ್ನ ಕಾಲಾನಂತರ ಹೆಚ್ಚುಕಡಿಮೆ ೫೦ ವರ್ಷಗಳಲ್ಲಿ ದೇವೀಭೂತನಾಗಿರಬೇಕೆಂದೂ, ಹಾಗೂ ಉತ್ತರಭಾರತದಲ್ಲಿ ಆತನು ಹೊಂದಿದ ಆ ದೇವತ್ವದ ವಿಷಯವು ಅಲ್ಲಿಂದ ಎಷ್ಟೋ ದೂರದ ತುಳುನಾಡಿನಲ್ಲಿ ತಿಳಿದು ಬರುವರೆ ಮತ್ತೂ ಸುಮಾರು ೫೦ ವರ್ಷಗಳು ಸಂದಿರಬೇಕೆಂದೂ ಯಥಾಯುಕ್ತವಾಗಿ ಊಹಿಸಲಾಗುವುದರಿಂದ, ಆತನು ಕನಿಷ್ಠಪಕ್ಷಕ್ಕೆ ಕ್ರಿ. ಶ. ೯೫೦ರಿಂದ ಆಚೆಯೇ ಇದ್ದಿರಬೇಕಲ್ಲದೆ ಈಚೆಗಲ್ಲ. ಆತನೂ ಆತನ ನಿಜ ಶಿಷ್ಯನಾದ ಗೋರಕ್ಷನಾಥನೂ ಕ್ರಿ. ಶ. ೮ನೆಯ ಶತಮಾನದ ಉತ್ತರಾರ್ಧದಲ್ಲೋ ೯ನೆಯ ಶತಮಾನದ ಪೂರ್ವಾರ್ಧದಲ್ಲೊ ಆಗಿ ಹೋಗಿರಬೇಕೆಂದು ನಾನು ಅನ್ಯತ್ರ[೨೭] ನಿರ್ಣಯಿಸಿರುತ್ತೇನೆ.


ಮಹಾಯಾನವು ಕ್ರಿ. ಶ. ೧ನೆಯ ಶತಕದಿಂದ ೬-೭ನೆಯ ಶತಕಗಳ ವರೆಗೆ ಭಾರತವರ್ಷದಲ್ಲೆಲ್ಲ ಉಚ್ಛ್ರಾಯದಲ್ಲಿದ್ದು ಕೊನೆಗೆ ೮ನೆಯ ಶತಕದಿಂದ ಕ್ರಮೇಣ ಇಳತರವಾಗಿ ಇಲ್ಲಿಂದ ಬಿದ್ದು ಹೋಯಿತೆಂದು ಮೇಲೆ ಹೇಳಿದೆ. ಒಮ್ಮೆ ಅದು ಎಲ್ಲೆಲ್ಲಿ ನೆಲಸಿದ್ದಿತೊ ಪ್ರಾಯಃ ಅಲ್ಲಲ್ಲಿ ಈಗ ನಾಥಪಂಥದ ನೆಲೆವೀಡುಗಳು ಕಾಣಿಸುತ್ತವೆ. ಕಾರಣವೇನೆಂದರೆ, ಅದು ನೆಲಸಿದ್ದಲ್ಲೆಲ್ಲ ಕ್ಷೀಣದಶೆಗೆ ಬರುತ್ತಲೆ, ಅದರಿಂದಲೆ ಹುಟ್ಟಿದ ನಾಥಪಂಥವು ಅಲ್ಲಲ್ಲಿ ಹೊಕ್ಕು ಮನೆಮಾಡಿಕೊಂಡಿರಬೇಕು. ಮತ್ಸ್ಯೇಂದ್ರನಾಥನು ತನ್ನ ಶಿಷ್ಯರನ್ನು ಒಡಗೂಡಿ ಮಂಗಳೂರಿಗೆ ಬಂದಿದ್ದು, ಆಗ ಕಗ್ಗಾಡಾಗಿದ್ದ ಅಲ್ಲಿಯ ಕದರಿಯಲ್ಲಿ ಒಂದು ಮಠವನ್ನು ಸ್ಥಾಪಿಸಿ ಉತ್ತರಾಪಥಕ್ಕೆ ಮರಳಿದನೆಂದು ಒಂದು ಐತಿಹ್ಯವಿದೆ.[೨೮] ಹಾಗಾದರೆ ಆತನ ಸಮಕಾಲಿಕವೊ ಇಲ್ಲವೆ ಆತನಿಂದ ಕೊಂಚ ಈಚೆಯದೊ ಎಂದು ಮೇಲೆ ಕಂಡಿರುವ ಕದರಿಯ ದೇವಾಲಯದಲ್ಲಿ ದಕ್ಷಿಣಾಭಿಮುಖವಾಗಿರುವ ಆತನ ಯಥಾತಥ ಪ್ರತೀಕವಾದ ಆ ಶಿಲಾಮೂರ್ತಿ ಆತನು ಮಂಗಳೂರಿಗೆ ಬಂದುಹೋದ ಕೆಲಕಾಲದಲ್ಲೇ ಆತನು ಅಲ್ಲಿಯ ತನ್ನ ಮಠದದಲ್ಲಿ ಇರಿಸಿ ಹೋದ ಶಿಷ್ಯರಿಂದಲೊ ಅಥವಾ ಅಷ್ಟರಲ್ಲಿ ಅಲ್ಲಿ ಬೆಳೆದ ಆತನ ನಾಥಪಂಥದ ಅನುಯಾಯಿಗಳಿಂದಲೊ ತಮ್ಮ ದೈನಂದಿನದ ಗುರುಪೂಜೆಗಾಗಿ ಮಾಡಿಸಲ್ಪಟ್ಟಿರಬೇಕು, ಹಾಗೂ ಅದು ಆತನನ್ನು ಕಣ್ಣಾರೆ ಕಂಡವನಿಂದಲೂ ಮಾಡಲ್ಪಟ್ಟಿರಬೇಕು. ಹೇಗೂ ಆ ಮೂರ್ತಿ ಆತನ ದೇವತ್ವಕ್ಕೆ ಮುಂಚೆ ನಿರ್ಮಿಸಲ್ಪಟ್ಟಿರಬೇಕು. ಏವಂಚ ಆತನು ಕ್ರಿ. ಶ. ೮-೯ನೆಯ ಶತಮಾನದಲ್ಲಿ ಮಂಗಳೂರಿಗೆ ಬಂದ ಮೊದಲೆ ಕದರಿಯಲ್ಲಿ ಮಹಾಯಾನದ ಬೌದ್ಧವಿಹಾರವಿದ್ದು, ಅದು ಪ್ರಾಯಶಃ ಹೀನಾವಸ್ಥೆಗೆ ಇಳಿತಂದೊ ಇಲ್ಲವೆ ತೀರ ಹಾಳುಬಿದ್ದೊ ಇದ್ದುದನ್ನು ಆತನು ಅಲ್ಲಿ ಬಂದಾಗ ಕಂಡು ತಾನೆ ತನ್ನ ನಾಥಪಂಥದ ಮಠವನ್ನು ಅಲ್ಲಿ ಸ್ಥಾಪಿಸಿರಬೇಕು. ಹಾಗೆಯೇ ಅದಕ್ಕೆ ಬಹುಕಾಲ ಮುಂಚಿನಿಂದಲೆ ವಿಹಾರವೆಂದು ಪರಿಕೀರ್ತಿತವಾಗಿದ್ದ ಆ ಬೌದ್ಧ ಪೂಜಾಲಯವು ಆ ಬಳಿಕಲೂ, ಹೇಗೂ ಅಲ್ಲಿ ಲೋಕೇಶ್ವರನ ಮೂರ್ತಿ ಪ್ರತಿಷ್ಠಿತವಾದ ಕ್ರಿ. ಶ. ೧೦೬೮ರಲ್ಲೊ, ವಿಹಾರವೆಂದು ಜನಜನಿತವಾಗಿ ಕರೆಯಲ್ಪಟ್ಟಿರಬೇಕು. ಆ ಬೌದ್ಧ ವಿಹಾರವಾದರೊ ಪ್ರಥಮತಃ ಮಂಜುಶ್ರೀಯೂ ಮಂಜುನಾಥನೂ ಎಂಬ ಬೋಧಿಸತ್ತ್ವನದೇ ಎಂದೂ, ಅತಏವ ಬೌದ್ಧಧರ್ಮದ ದೇವತೆಗಳಿಗೆ ಮೂರ್ತಿಯನ್ನೇ ಏರ್ಪಡಿಸುವುದಲ್ಲದೆ ಸರ್ವಥಾ ಲಿಂಗವನ್ನಲ್ಲ-ಅಥವಾ

೨೭. *New Indian Antiquary, VIII,* ಸಂ. ೪—೬ (ಎಪ್ರಿಲ್—ಜೂನ್ ೧೯೪೬), ಪು. ೫೭-೬೬.

೨೮. Satistical Appendix together with a Supplement to the two District Manuals of South Kanara District, ಪು. ೩೮೧—೩೮೨.

ಬೌದ್ಧ ದೇವತೆಗಳಿಗೇ ಏಕೆ? ಸನಾತನ ಧರ್ಮದ ದೇವತೆಗಳಲ್ಲೂ ಒಬ್ಬ ಶಿವನನ್ನು ಹೊರತು ಮಿಕ್ಕ ಯಾವ ದೇವತೆಯನ್ನಾದರೂ ಲಿಂಗರೂಪದಲ್ಲಿ ಪೂಜಿಸುವುದಿಲ್ಲ–ಎಂಬುದರಿಂದ, ಆ ಹಳೆಯ ಹಿಂಗಾಲದಲ್ಲಿ ಕದರಿಯ ವಿಹಾರದಲ್ಲಿ ಮಂಜುಶ್ರೀ=ಮಂಜುನಾಥನ ಅರ್ಚಾ ಮೂರ್ತಿ ತಾನೇ ಇದ್ದಿರಬೇಕೆಂದೂ ಬೇರೆ ಹೇಳಬೇಕೆಂದಿಲ್ಲವಷ್ಟೆ.

ಕ್ರಿ. ಶ. ೧೦೬೮ರಲ್ಲಿ ಕದರಿಯ ವಿಹಾರದಲ್ಲಿ ಲೋಕೇಶ್ವರನ ಕಂಚಿನ ವಿಗ್ರಹವನ್ನು ಪ್ರತಿಷ್ಠಿಸುವಂದು ಅಥವಾ ಅದಕ್ಕೂ ಹಿಂದೆ ಕ್ರಿ. ಶ. ೮–೯ನೆಯ ಶತಕದಲ್ಲಿ ಮತ್ಸ್ಯೇಂದ್ರನಾಥನು ಕದರಿಗೆ ಬಂದಂದು ಅಲ್ಲಿಯ ವಿಹಾರದಲ್ಲಿ ಆ ಬೋಧಿಸತ್ತ್ವ ಮಂಜುಶ್ರೀ==ಮಂಜುನಾಥನ ಮೂರ್ತಿ ಆಗ್ಗೆಯೂ ಇತ್ತೊ ಎಂದು ನಿಷ್ಕೃಷ್ಟವಾಗಿ ಹೇಳಬರುವುದಿಲ್ಲ. ಆದರೂ ತತ್ಕಾಲಕ್ಕೆ ಸ್ಥೂಲದೃಷ್ಟಿಗೆ ತೋರುವ ಮೇರೆಗೆ ಹೇಳುವುದಾದರೆ, ಕ್ರಿ. ಶ. ೧೦೬೮ರಲ್ಲಿ ಲೋಕೇಶ್ವರನ ವಿಗ್ರಹವನ್ನು ಅಲ್ಲಿವುದರಿಂದ, ಆ ಲೋಕೇಶ್ವರನ ವಿಗ್ರಹವನ್ನು ಪ್ರತಿಷ್ಠಿಸಿದ ವಿಹಾರದಲ್ಲಿ, ಅಂದರೆ ಈಗಣ ಕದರಿಯ ಶಿವಾಲಯದಲ್ಲಿ, ಇಂದು ಹೇಗೋ ಅಂದೂ, ಅತಏವ ಪ್ರಾಯಶಃ ಆ ಲೋಕೇಶ್ವರನ ಪ್ರತಿಷ್ಠೆಯ ಮೊದಲೂ ಹಾಗೆಯೇ ಮಂಜುನಾಥ ಎಂಬ ಹೆಸರಿನ ಶಿವಲಿಂಗವೇ ಮೂಲ ಪ್ರತಿಷ್ಠಿಸಿದ ಆಳುಪೇಂದ್ರನಾದ ಕುಂದವರ್ಮನು ತನ್ನನ್ನು ಮಹಾ ಶಿವಭಕ್ತನೆಂದು, ಅತಏವ ಪ್ರತ್ಯಕ್ಷವಾಗಿ ಬೌದ್ಧಧರ್ಮಕ್ಕೆ ಬಾಹ್ಯನೆಂದು, ಹೇಳಿಕೊಂಡಿರುಸ್ಥಾನದಲ್ಲಿ ಇದ್ದಿರಬೇಕೆಂದು ಯಥೋಚಿತವಾಗಿ ಅನುಮೇಯಿಸಲಾಗುತ್ತದೆ. ಹಾಗಾದರೆ ಮೇಲೆ ಹೇಳಿರುವಂತೆ, ಅದಕ್ಕೂ ಹಿಂದೆ ಕದರಿಯಲ್ಲಿದ್ದ ಬೋಧಿಸತ್ತ್ವ ಮಂಜುನಾಥನ ವಿಹಾರವು ಯಾವೊಮ್ಮೆಯೊ ಹಾಳು ಬಿದ್ದಿದ್ದು, ಕ್ರಿ. ಶ. ಸು. ೯ನೆಯ ಶತಮಾನದಲ್ಲಿ ಅಲ್ಲಿಗಯ್ದಿದ ಮತ್ಸ್ಯೇಂದ್ರನಾಥನು ಅದನ್ನು ಕಂಡು, ಮಂಜುನಾಥ ಎಂಬ ಹೆಸರು ಶಿವನಿಗೆ ಸರ್ವಥಾ ಇಲ್ಲವಾದರೂ, ಮಹಾಯಾನವೂ ಶೈವಧರ್ಮವೂ ಸಮ್ಮಿಳಿತವಾದ ತನ್ನ ನಾಥಪಂಥದ ಧೋರಣೆಗೆ ಅನುರೂಪವಾಗಿ ಆ ಬೋಧಿಸತ್ತ್ವನ ಬಿದ್ದುಹೋದ ಮಂಜುನಾಥ ಎಂಬ ಹೆಸರನ್ನು ಊರ್ಜಿಸುವ ಬಗ್ಗೆ ಆತನ ಮೂರ್ತಿ ಇದ್ದ ಆ ವಿಹಾರದ ಗರ್ಭಗೃಹದಲ್ಲಿ ಅದೇ ಮಂಜುನಾಥ ಎಂಬ ಹೆಸರಿನ ಶಿವಲಿಂಗವನ್ನು ಪ್ರತಿಷ್ಠಿಸಿರಬೇಕು.



ಶ್ರೀ ಮಚ್ಛೀಂದ್ರನಾಥ

ಅತಏವ ಕದರಿಯ ಶಿವಲಿಂಗದ ಮಂಜುನಾಥ ಎಂಬ ಹೆಸರು ಸುತರಾಂ ಮೂಲತಃ ಶಿವನದಲ್ಲ, ಅಲ್ಲಿ ಈಗ ಆ ಲಿಂಗವಿರುವ ಸ್ಥಾನದಲ್ಲಿ ಯಾವೊಮ್ಮೆ ಇದ್ದ ಬೌದ್ಧಧರ್ಮದ ಮಂಜುಶ್ರೀ=ಮಂಜುನಾಥ ಎಂಬ ಬೋಧಿಸತ್ತ್ವನ ಹೆಸರು ತಾನೆ, ಹಾಗೂ ಮೇಲೆ ಹೇಳಿದ ಮೇರೆಗೆ ಅದೇ ಆ ಶಿವಲಿಂಗಕ್ಕೆ ಬಂದಿತು ಎಂಬಲ್ಲಿ ಯಾವ ಸಂದೇಹವೂ ಇಲ್ಲ. ಧರ್ಮಸ್ಥಳದ ಅದೇ ಹೆಸರಿನ ಶಿವಲಿಂಗವಾದರೊ, ಮೇಲೆ ಕಂಡಿರುವಂತೆ ಕದರಿಯ ಶಿವಲಿಂಗದ ಶಕಲ ತಾನೆ ಎಂಬ ಕಾರಣ, ಬೀಜಾಂಕುರ ನ್ಯಾಯದಿಂದ ಅದಕ್ಕೂ ಆನುಷಂಗಿಕವಾಗಿ ಮಂಜುನಾಥ ಎಂದು ಅದೇ ಹೆಸರಾಯಿತು.

ಇಸ್ಲಾಮು ಧರ್ಮ

ಮೌಲ್ವಿ ಸೈಯ್ಯದ್ ಕಾಶಿಮು.

ಇಸ್ಲಾಮು ವಿಶ್ವಧರ್ಮವು. ಇಸ್ಲಾಮು ಎಂದರೆ ಶಾಂತಿ. ಈ ವಿಶ್ವವು ದೈವನೇಮುಗಳ ಅನುಸರಣೆಯಲ್ಲಿ ಶಾಂತಿಯಿಂದ ಸಾಗುವುದು. ಹಾಗೆಯೆ ದೈವನೇಮುಗಳ ಅನುಸರಣೆಯಿಂದ ನರನು ಸಹ ಇಹಪರದಲ್ಲಿ ಶಾಂತಿ ಹೊಂದುವನು. ಆದುದರಿಂದ 'ಅಲ್ಲಾಃನಲ್ಲಿ ಶಾಂತಿಯೇ ವಾಸ್ತವಿಕವಾಗಿ ಧರ್ಮವು.' (ಕು. ಅ ೩:೧೯) ಜಗದಾದಿಯಲ್ಲಿ 'ನರರೆಲ್ಲರೂ ಒಂದೆ ಪಂಗಡವಿದ್ದರು. ಆದುದರಿಂದ ಅಲ್ಲಾಃ ಪ್ರವಾದಿಗಳನ್ನು ಸುವಾರ್ತಕರನ್ನಾಗಿ ಮತ್ತು ಎಚ್ಚರಿಸುವವರನ್ನಾಗಿ ಎಬ್ಬಿಸಿದನು ಮತ್ತು ಅವರೊಂದಿಗೆ ನಿಜತ್ವ ಸಹಿತ ಗ್ರಂಥವನ್ನು ಅವತೀರ್ಣಿಸಿದನು.' (ಕು. ಅ ೨:೨೧೩) ಮತ್ತು 'ನಿಮ್ಮಲ್ಲಿ ಸರ್ವರಿಗೆ (ಜನಾಂಗಗಳಿಗೆ) ಶಾಸ್ತ್ರ ಮತ್ತು ಆಚಾರ ಉಂಟುಮಾಡಿದೆವು' (ಕು. ಅ ೫:೪೮) ಮತ್ತು 'ಅಲ್ಲಾಃನ ಸಾಕ್ಷಿ! ನಿಜವಾಗಿ ನಿನ್ನ (ಶ್ರೀ ಮೊಹಮ್ಮದ ಪ್ರವಾದಿಗಳ) ಪೂರ್ವದಲ್ಲಿ (ಸರ್ವ) ಪಂಗಡಗಳಿಗೆ ನಾವು ಸಂದೇಶ ಕಳುಹಿಸಿದೆವು. ಆದರೆ ಶನಿಯು ಅವರ ಕರ್ಮಗಳನ್ನು ಅವರಿಗೆ ರಮ್ಯಗೊಳಿಸಿದನು.' (ಕು. ಅ ೧೬:೬೩). ಆದಿಯಿಂದಲೂ ಇಸ್ಲಾಮುಧರ್ಮವೆ ಕಾಲಕಾಲದಲ್ಲಿ ಸರ್ವಜನಾಂಗಗಳಿಗೆ ಅವರವರ ಭಾಷೆಗಳಲ್ಲಿ ಅವರವರ ಪ್ರವಾದಿಗಳ ಮೂಲಕ ಭಿನ್ನಭಿನ್ನವಾಗಿ ಅವತೀರ್ಣಿಸಲ್ಪಟ್ಟಿತು. ಆದರೆ ಕಾಲಕ್ರಮೇಣ ಅದು ನರಹಸ್ತಗಳಿಗೆ ಸಿಲ್ಕಿ ಮನುಷ್ಯಾಭಿಪ್ರಾಯ ಮಿಶ್ರಣದಿಂದ ವ್ಯತ್ಯಾಸ ಹೊಂದಿ, ತನ್ನ ನಿಜತ್ವವನ್ನು ಕಳೆದುಕೊಂಡಿತು. ತದನಂತರ 'ಮತ್ತು ಅವರು ವೈಮನಸ್ಕರಾಗಿರುವುದರಲ್ಲಿ ಅವರಿಗೆ ನೀನು ಸ್ಪಷ್ಟಪಡಿಸಬೇಕೆಂದಲ್ಲದೆ (ಈ) ಗ್ರಂಥವನ್ನು (ಕುರಆನನ್ನು) ನಿನ್ನ ಮೇಲೆ ನಾವು ಅವತೀರ್ಣಿಸಿಲ್ಲ ಮತ್ತು ನಂಬುವ ಜನರಿಗೆ (ಇದು) ಸನ್ಮಾರ್ಗ ಮತ್ತು ದಯೆಯು' (ಕು. ಅ ೧೬:೬೪) ಮತ್ತು ಹಾಗೆಯೆ 'ಈ ದಿವಸ ನಿಮಗಾಗಿ (ನರರಿಗಾಗಿ) ನಿಮ್ಮ ಧರ್ಮವನ್ನು ಪರಿಪೂರ್ಣಗೊಳಿಸಿರುವೆನು. ಮತ್ತು ನಿಮಗಾಗಿ ನನ್ನ ಅನುಗ್ರಹವನ್ನು ಪೂರೈಸಿರುವೆನು. ಮತ್ತು ನಿಮಗಾಗಿ ಶಾಂತಿ (ಇಸ್ಲಾಮು) ಯನ್ನು ಧರ್ಮವಾಗಿ ಒಪ್ಪಿರುವೆನು' (ಕು. ಅ ೫:೩). 'ಮತ್ತು ಶಾಂತಿಗೆ ಅನ್ಯವಾದ ಧರ್ಮ ಬಯಸುವವನು! ಪರಂತು ಅವನಿಂದ ಅದು ಅಂಗೀಕರಿಸಲ್ಪಡದು ಮತ್ತು ಪರದಲ್ಲಿ ಅವನ ಹಾನಿಹೊಂದಿದವರಲ್ಲಿಯೆ!' (ಕು. ಅ ೩:೮೫) ಎಂಬ ಶಬ್ದ ಪ್ರಮಾಣಗಳಲ್ಲಿ ವ್ಯಕ್ತವಾಗಿರುವಂತೆ, ಆ ಆದಿ ಧರ್ಮವೆ ಅಂತ್ಯದಲ್ಲಿ ಶ್ರೀ ಮೊಹಮ್ಮದ ಪ್ರವಾದಿಗಳ ಮೇಲೆ ಪೂರ್ಣವಾಗಿ ಅವತೀರ್ಣಿಸಲ್ಪಟ್ಟಿತು. ಹಾಗೆಯೇ ಅವರಿಂದ ವಿವರಿಸಲ್ಪಟ್ಟಿತು. ಮತ್ತು ಆಚರಿಸಲ್ಪಟ್ಟು ಸ್ಥಾಪಿಸಲ್ಪಟ್ಟಿತು.

ವಿಶ್ವ ಮತ್ತು ಆದರ ಉದ್ದೇಶ.

'ಆಕಾಶಗಳು ಮತ್ತು ಭೂಮಿ ಉಭಯವೂ ಕೂಡಿಕೊಂಡಿದ್ದವೆಂದು, ನಿರಾಕರಿಸಿದವರು ಕಾಣರೊ? ಪರಂತು ಅವರೆಡನ್ನೂ ನಾವು ಇಬ್ಬಗೆ ಮಾಡಿದೆವು.' (ಕು. ಅ ೨೧:೩೦) 'ಅಲ್ಲಾಃ! ಆತನೆ ಆಕಾಶಗಳನ್ನು ಮತ್ತು ಭೂಮಿಯನ್ನು ಮತ್ತು ಅವೆರಡರ ಮಧ್ಯದಲ್ಲಿರುವುದನ್ನು ಆರು ಕಾಲಗಳಲ್ಲಿ ಸೃಷ್ಟಿಸಿದನು' (ಕು. ಅ ೩೨:೪) 'ಮತ್ತು ಆಕಾಶ ಮತ್ತು ಭೂಮಿ ಮತ್ತು ಅವೆರಡರ ಮಧ್ಯದಲ್ಲಿರುವುದನ್ನು ಸರಸವಾಗಿ ನಾವು ಸೃಷ್ಟಿಸಿಲ್ಲ.' (ಕು. ಅ ೨೧:೧೬) 'ಮತ್ತು ....ನಿರರ್ಥವಾಗಿ ನಾವು ಸೃಷ್ಟಿಸಿಲ್ಲ.' (ಕು. ಅ ೩೮:೨೭) 'ಮತ್ತು ಆಕಾಶಗಳನ್ನು ಮತ್ತು ಭೂಮಿಯನ್ನು ಆತನು ನಿಜತ್ವ ಸಹಿತ ಸೃಷ್ಟಿಸಿರುವನು' (ಕು. ಅ ೬೪:೩) 'ಭೂಮಿಯಲ್ಲಿರುವ ವಿಶಿಷ್ಟವನ್ನೂ ಆತನೆ ನಿಮಗಾಗಿ (ನರರಿಗಾಗಿ) ಸೃಷ್ಟಿಸಿರುವವನು'. (ಕು. ಅ ೨:೨೯) ಹಾಗೆಯೇ 'ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ವಿಶಿಷ್ಟವನ್ನೂ ಆತನು ನಿಮಗೆ (ನರರಿಗೆ) ವಶವರ್ತಿ ಮಾಡಿರುವನು'. (ಕು. ಅ ೪೫:೧೩) ವಿಶ್ವಕರ್ತನು ಶೂನ್ಯದಿಂದ ವಿಶ್ವವನ್ನು ಉಂಟುಮಾಡಿ, ಅದರಲ್ಲಿ ಕ್ರಮವಾಗಿ ಪಂಚಭೂತಗಳನ್ನೂ ಹಾಗೆಯೇ ಧಾತುವರ್ಗ, ಸಸ್ಯವರ್ಗ ಮತ್ತು ಪ್ರಾಣಿವರ್ಗವನ್ನು ಸೃಷ್ಟಿಸಿ, ಅಂತ್ಯದಲ್ಲಿ ಮನುಷ್ಯನನ್ನು ಉಂಟುಮಾಡಿರುವನು. ವಿಶ್ವ ಮನುಷ್ಯ ಸೇವೆಗಾಗಿ ಉತ್ಪನ್ನವಾಗಿರು

ವುದು. ಅವನ ಸೇವೆಯಲ್ಲಿಯೆ ವಿಶ್ವದ ಉದ್ದೇಶ ಪರಿಪೂರ್ಣವಾಗುವುದು.

ವಿಶ್ವದಲ್ಲಿ ನರನ ಸ್ಥಾನ ಮತ್ತು ಉದ್ದೇಶ.

'ವಾಸ್ತವಿಕವಾಗಿ ಪುರುಷನನ್ನು ಮೃತ್ತಿಕೆಯಿಂದ ನಾನು (ಅಲ್ಲಾಃ) ಸೃಷ್ಟಿಸಲಿರುವೆನು. ಪರಂತು ಅವನನ್ನು ಪರಿಪೂರ್ಣ ಮಾಡಿ ಮತ್ತು ನನ್ನ ಆತ್ಮದಿಂದ ಅವನಲ್ಲಿ ತುಂಬಿದಾಗ, ಪರಂತು ನೀವು (ದೇವದೂತರು) ಅವನಿಗೆ ಸಾಷ್ಟಾಂಗವೆರಗಿರಿ' (ಕು. ಅ ೩೮:೭೧, ೭೨) ಮತ್ತು 'ವಾಸ್ತವಿಕವಾಗಿ ಭೂಮಿಯಲ್ಲಿ ಉತ್ತರಾಧಿಕಾರಿಯನ್ನು (ನರನನ್ನು) ನಾನು (ಅಲ್ಲಾಃ) ಉಂಟುಮಾಡಲಿರುವೆನು.' (ಕು. ಅ ೨:೩೦) ಮನುಷ್ಯನು ವಿಶ್ವದಲ್ಲಿ ಅಂತ್ಯಜೀವಿಯಾಗಿ ಹುಟ್ಟಿ ವಿಶ್ವಕ್ಕೆಲ್ಲಾ ಅಧಿಕಾರಿಯಾಗಿರುವನು. ಹಾಗೆಯೇ ತನ್ನ ಮಹಿಮಾವಿಶೇಷ ಪ್ರಕಾಶ ಪಡಲೆಂದು ವಿಶ್ವಕರ್ತನು ಅವನನ್ನು ತನ್ನ ಪ್ರತಿನಿಧಿ ಮಾಡಿ ವಿಶ್ವದಲ್ಲಿ ಉತ್ಪನ್ನ ಮಾಡಿರುವನು. ಆದುದರಿಂದ 'ಮತ್ತು ಆತನು ನಿಮ್ಮನ್ನು ರೂಪಿಸಿದನು, ಪರಂತು ನಿಮ್ಮ ರೂಪನ್ನು ಅತ್ಯುತ್ತಮ ಮಾಡಿದನು ಮತ್ತು ನೆಲೆಯು ಆತನಲ್ಲಿಯೆ (ಕು. ಅ ೬೪:೩) 'ಅವರು ನನಗೆ ಸೇವೆ ಸಲ್ಲಿಸಲೆಂದಲ್ಲದೆ ಜಿನ್ನ ಮತ್ತು ನರರನ್ನು ನಾನು ಸೃಷ್ಟಿಸಿಲ್ಲ' (ಕು. ಅ ೫೧:೫೬) ಮತ್ತು 'ನಿಮ್ಮನ್ನು (ನರರನ್ನು) ನಿರರ್ಥವಾಗಿ ನಾವು ಸೃಷ್ಟಿಸಿರುವೆವೆಂದೂ ಮತ್ತು ನಮ್ಮಲ್ಲಿಗೆ ನೀವು ಮರಳಿಸಲ್ಪಡದಿರುವಿರೆಂದೂ ನೀವು ಭಾವಿಸಿರುವಿರೊ?' (ಕು. ಅ ೨೩:೧೧೫) ಪರಂತು ನರನು ಅಲ್ಲಾಃನ ಸೇವೆಗಾಗಿ ಉತ್ಪನ್ನನಾಗಿರುವನು. ಆತನ ಸೇವೆಯಿಂದ ನರನ ಜೀವಭಾವನೆ ಕಳೆದು ಹೋಗಿ ಆತನ ಮಹಿಮೆಯೆ ಅವನಿಂದ ಬಹಿರಂಗವಾಗುವುದು.

ನರನಿಗೆ ಸನ್ಮಾರ್ಗದ ಆವಶ್ಯಕತೆ.

ತನ್ನಲ್ಲಿ ಅಂತರ್ಗತವಾಗಿರುವ ಜಗದಧಿಕಾರ ಚೈತನ್ಯವನ್ನು ಸದುಪಯೋಗ ಪಡಿಸಿಕೊಂಡು, ಅಲ್ಲಾಃನ ಸೇವೆ ಸಲ್ಲಿಸಬೇಕಾದರೆ, ಮನುಷ್ಯನಿಗೆ ಅದರ ಸರಿಯಾದ ಜ್ಞಾನ ಅವಶ್ಯಕವು. ಇದರ ಹೊರತು ಅದರ ಸದುಪಯೋಗದ ಸಂಭವವಿರದು. ಅವನಿಗೆ ಸ್ಥೂಲರಕ್ಷಣೆಯ ಸಾಧನ ಒದಗಿಸಿರುವ ಅವನ ಕರ್ತನೆ ಅವನ ಸೂಕ್ಷ್ಮರಕ್ಷಣೆಗೆ ಸನ್ನಾಹ ಒದಗಿಸಬೇಕಾಗುವುದು. ಆದುದರಿಂದ 'ವಾಸ್ತವಿಕವಾಗಿ ಸನ್ಮಾರ್ಗಪ್ರದಾನ ನಮಗೆ ಸಲ್ಲುವುದು' (ಕು. ೯೨:೧೨) 'ನುಡಿ! 'ವಾಸ್ತವಿಕವಾಗಿ ಅಲ್ಲಾಃನ ಮಾರ್ಗವು! ಅದೇ ಸನ್ಮಾರ್ಗವು.' (ಕು. ೬:೭೧) ಮತ್ತು 'ವಾಸ್ತವಿಕವಾಗಿ ಅವನಿಗೆ (ನರನಿಗೆ) ನಾವು ಮಾರ್ಗ ತೋರಿರುವೆವು. ಬೇಕಾದರೆ ಉಪಕಾರ ಸ್ಮರಿಸಬಹುದು ಮತ್ತು ಬೇಕಾದರೆ ನಿರಾಕರಿಸಬಹುದು.' (ಕು. ಅ ೭೬:೩) ಹಾಗೆಯೆ 'ಪರಂತು ನಿಮ್ಮಲ್ಲಿಗೆ (ನರರಲ್ಲಿಗೆ) ನನ್ನಿಂದ ಸನ್ಮಾರ್ಗ ಬಂದಾಗ, ಪರಂತು ನನ್ನ ಮಾರ್ಗ ಅನುಸರಿಸುವವನು ಪರಂತು ಮಾರ್ಗ ತಪ್ಪನು ಮತ್ತು ಕಷ್ಟಕ್ಕೊಳಗಾಗನು.' (ಕು. ಅ ೨೦:೧೨೩) ಹೀಗೆ ವಿಶ್ವಕರ್ತನು ತನ್ನ ಶ್ರುತಿಯ ಮೂಲಕ ಕಾಲಕಾಲಕ್ಕೆ ಸನ್ಮಾರ್ಗ ತೋರುತ್ತ ಬಂದು, ಅಂತ್ಯದಲ್ಲಿ ಅದನ್ನು ಇಸ್ಲಾಮ ಧರ್ಮದ ರೂಪದಲ್ಲಿ ಪರಿಪೂರ್ಣಗೊಳಿಸಿರುವನು.

ಇಸ್ಲಾಮ ಸರ್ವಮಾನ್ಯ ಧರ್ಮ.

ಇಸ್ಲಾಮ ಎಂದರೆ ಶಾಂತಿ; 'ಶಾಂತಿಯೆ ಅಲ್ಲಾಃನಲ್ಲಿ ವಾಸ್ತವಿಕವಾಗಿ ಧರ್ಮವು.' (ಕು. ಅ ೩:೧೯) ಜಗತ್ತಿನ ಧರ್ಮಗಳಿಗೆ ವ್ಯಕ್ತಿ, ಗ್ರಂಥ ಮತ್ತು ದೇಶ ಸೂಚಕವಾದ ಹೆಸರುಗಳು ಬಂದಿರುವವು. ಇದರ ನಿದರ್ಶನವಾಗಿ ಶ್ರೀ ಏಸುಕ್ರಿಸ್ತ, ಮೂಸ, ಜೊರೋಷ್ಟರ, ಕನಫ್ಯೂಷಸ ಮುಂತಾದವರ ಹೆಸರುಗಳಿಂದ ಕ್ರಮವಾಗಿವಾಗಿ ಕ್ರೈಸ್ತಧರ್ಮ, ಮೂಸಾಯಿಧರ್ಮ, ಜೊರೋಷ್ಟರಧರ್ಮ, ಕನಫ್ಯೂಷಸಧರ್ಮವೆಂದೂ, ಶಿವ, ವಿಷ್ಣು ಮತ್ತು ಬುದ್ಧನ ತರುವಾಯ ಕ್ರಮವಾಗಿ ಶೈವಮತ ವೈಷ್ಣವಮತ ಮತ್ತು ಬೌದ್ಧಮತವೆಂದೂ, ಹಿಂದೂ ದೇಶದಿಂದ ಹಿಂದೂಧರ್ಮವೆಂದೂ, ಆಯಾಯ ಧರ್ಮಗಳಿಗೆ ಆಯಾಯ ಹೆಸರುಗಳು ಬಂದಿರುವವು. ಈ ಹೆಸರುಗಳಲ್ಲಿ ವ್ಯಕ್ತಿ, ಗ್ರಂಥ ಮತ್ತು ದೇಶ ಸಂಬಂಧವಾದ ಅಭಿಮಾನ ತೋರುವುದು. ಆದರೆ ಶ್ರೀ ಮೊಹಮ್ಮದ ಪ್ರವಾದಿಗಳ ಮೂಲಕ ಬಂದ ಧರ್ಮವು ಮೊಹಮ್ಮದೀಯಧರ್ಮ, ಕುರಆನಧರ್ಮ, ಅರಬಧರ್ಮ ಎಂದು ಕರೆಯಲ್ಪಡದೆ ಶಾಂತಿ ಎಂದು ಕರೆಯಲ್ಪಟ್ಟಿರುವುದು. ಜಗತ್ತಿನಲ್ಲಿ ಸರ್ವರೂ ಶಾಂತಿಯನ್ನೆ ಬಯಸುವುದರಿಂದ ಈ ಹೆಸರು ಸರ್ವಮಾನ್ಯವಾಗಿರುವುದು.

ಪ್ರಥಮ ಸೂತ್ರ.

'ಸರ್ವಸ್ತೋತ್ರವೂ ಅಲ್ಲಾಃಗೆ ಸಲ್ಲುವುದು. ಸರ್ವಲೋಕಗಳ ಪ್ರಭುವು, ಪರಮ ದಯಾಳುವು, ದಾಕ್ಷಿಣ್ಯಮಯನು, ಧರ್ಮದ ದಿನದ ಒಡೆಯನು.'

(ಕು. ಅ ೧:೧–೩) 'ನುಡಿ! ಆತನಿಗೆ ಅಲ್ಲಾಃ, ಅದ್ವಯನು, ಅಲ್ಲಾಃ ಸರ್ವಾಧಾರನು; ಆತನು ಜನಕನಲ್ಲ ಮತ್ತು ಜನಿತನಲ್ಲ; ಮತ್ತು ಆತನಿಗೆ ಓರ್ವನೂ ಸಮಾನನಿಲ್ಲ.' (ಕು. ಅ ೧೧೨) ಅಲ್ಲಾಃ ಓರ್ವನು. ಅತನೆ ಸೃಷ್ಟಿಕರ್ತನು. ರಕ್ಷಣ ಮತ್ತು ಲಯಕರ್ತನು. ಆತನೆ ಆದಿ ಮತ್ತು ಅಂತ್ಯನು. ಆತನೆ ಆಂತರ್ಯ ಮತ್ತು ಬಾಹ್ಯ ಬಲ್ಲವನು. ಆತನೆ ಜೀವರ ಜೀವನು. ಚೈತನ್ಯಗಳ ಚೈತನ್ಯನು. ವಿಕಾರರಹಿತನು. ನಿರಾಕಾರನು. ನಿರಂಜನನು. ಕಾಯ, ವಾಚ, ಮಾನಸ ಮತ್ತು ಭಾವಗಳಿಗೆ ಅತೀತನು. ಶಾಶ್ವತನು, ಕಿವಿಯಿಲ್ಲದೆ ಕೇಳುವವನು, ಕಣ್ಣಿಲ್ಲದೆ ನೋಡುವವನು. ನಾಲಿಗೆಯಿಲ್ಲದೆ ತನ್ನ ಭಕ್ತರಿಗೆ ತನ್ನ ಪ್ರಣವದಿಂದ ತನ್ನ ಪರಿಚಯ ಕೊಡುವವನು. ಹೀಗೆ ಸಹಸ್ರಾರು ಚೈತನ್ಯಗಳಿಂದ ಅಲಂಕೃತನಾದ ಅಲ್ಲಾಃ ಅದ್ವಯನು. ಇದೆ ಇಸ್ಲಾಮಧರ್ಮ ಬೋಧಿಸಿರುವ ದೈವಭಾವನೆಯು. 'ಆತನಿಗೆ ಪೂಜ್ಯಭಾಗಿಯಿಲ್ಲ. ಪರಂತು ಇದನ್ನೆ ನಾನು ವಿಧಿಸಲ್ಪಟ್ಟಿರುವೆನು. ಪರಂತು ಶಾಂತಿಧಾರಕರಲ್ಲಿ ನಾನೆ ಆದ್ಯನು.' (ಕು. ಅ ೬:೧೬೪) ಎಂದು ಸಾರಿ, ಆಕಾರವಿಲ್ಲದವನಿಗೆ ಆಕಾರಗಳನ್ನು ಕಲ್ಪಿಸುವುದರಿಂದ ಜಗತ್ತಿನ ಶಾಂತಿಗೆ ಭಂಗವುಂಟಾಗುವುದು; ಆದುದರಿಂದ ಆಕಾರಗಳ ಜಗಳಗಳು ನಿರಾಕಾರದಲ್ಲಿ ಲಯ ಹೊಂದಬೇಕು, ಇದರ ಹೊರತು ಜಗತ್ತಿನಲ್ಲಿ ಶಾಂತಿಯಿಲ್ಲವೆಂಬುದನ್ನು ಶ್ರೀ ಮೊಹಮ್ಮದ ಪ್ರವಾದಿಗಳು ಕಾರ್ಯತಃ ದೃಢೀಕರಿಸಿರುವರು. ಇದೇ ಇಸ್ಲಾಮಧರ್ಮದ ಪ್ರಥಮ ಸೂತ್ರವು.

ದ್ವಿತೀಯ ಸೂತ್ರ.

'ನಿಜವಾಗಿ ಪ್ರತಿ ಪಂಗಡದಲ್ಲಿಯೂ ಓರ್ವ ಸಂದೇಶಿಯನ್ನು ನಾವು ಎಬ್ಬಿಸಿರುವೆವು' (ಕು. ಅ ೧೬:೩೬) ಮತ್ತು ಅವರಲ್ಲಿ ಓರ್ವ ಎಚ್ಚರಿಸುವವನು ಬಂದ ಹೊರತು ಪಂಗಡದಲ್ಲಿ ಒಂದೂ ಇಲ್ಲ' (ಕು. ಅ ೩೫:೨೪) 'ಮತ್ತು ಅವರಿಗೆ ಆತನು ಸ್ಪಷ್ಟಪಡಿಸಲೆಂದು ಆತನ ಜನಾಂಗದ ಭಾಷೆಯಲ್ಲಿ ಹೊರತು ಸಂದೇಶಿಯಲ್ಲಿ ಓರ್ವನನ್ನೂ ನಾವು ಕಳುಹಿಸಿಲ್ಲ.' (ಕು. ಅ ೧೪:೪) ಆದುದರಿಂದ 'ನುಡಿ! ಅಲ್ಲಾಃನಲ್ಲಿ ಮತ್ತು ನಮಗೆ ಅವತೀರ್ಣಸಲ್ಪಟ್ಟಿರುವುದರಲ್ಲಿ ನಾವು ನಂಬಿರುವೆವು ಮತ್ತು ಇಬ್ರಾಹೀಮ ಮತ್ತು ಇಸ್ಮಾಯಿೂಲ ಮತ್ತು ಇಸಹಾಕ ಮತ್ತು ಯಾಕೂಬ ಮತ್ತು ಆಪಣಗಳಿಗೆ ಅವತೀರ್ಣಸಲ್ಪಟ್ಟಿರುವುದರಲ್ಲಿ ಸಹ ನಾವು ನಂಬಿರುವೆವು ಮತ್ತು ಮೂಸಾ ಮತ್ತು ಈಸಾ ಮತ್ತು ಅವರ ಪ್ರಭುವಿನಿಂದ ಸರ್ವ ಪ್ರವಾದಿಗಳಿಗೆ ಕೊಡಲ್ಪಟ್ಟಿರುವುದರಲ್ಲಿಯೂ ನಾವು ನಂಬಿರುವೆವು. ಅವರಲ್ಲಿ ಓರ್ವರಲ್ಲಿಯೂ ನಾವು ಭೇದವೆಣಿಸೆವು. ಮತ್ತು ನಾವೆ ಆತನಿಗಾಗಿ ಶಾಂತಿಧಾರಕರು'. (ಕು. ಅ ೩:೮೩) ಈ ರೀತಿ ಸರ್ವ ಜನಾಂಗಗಳಿಗೆ ದೈವ ಸಂದೇಶಿಗಳು ಬಂದಿರುವುದನ್ನು ದೃಢೀಕರಿಸಿ, ಮುಸ್ಲಿಮರು ಅವರೆಲ್ಲರನ್ನೂ ಭೇದವೆಣಿಸದೆ ನಂಬಬೇಕಂಬುದನ್ನು ವಿಧಿಸಿರುವುದು. ಹಾಗೆಯೇ 'ಸರ್ವರೂ (ಪ್ರವಾದಿಗಳು) ವಿಹಿತಶೀಲರಲ್ಲಿರುವರು.' (ಕು. ಅ ೬:೮೬) ಮತ್ತು 'ವಾಸ್ತವಿಕವಾಗಿ ಅವರು (ಪ್ರವಾದಿಗಳು) ನಮ್ಮ ಸನ್ನಿಧಿಯಲ್ಲಿ ಅಗತ್ಯವಾಗಿ ಆರಿಸಲ್ಪಟ್ಟವರು, ಉತ್ತಮರು.' (ಕು. ೩೮:೪೭) ಎಂದು ಸಾರಿ, ಜಗತ್ತಿನ ಸರ್ವಧರ್ಮಬೋಧಕರೂ ಪರಿಶುದ್ಧರು ಮತ್ತು ಉತ್ತಮರು ಎಂದು ಪ್ರತಿಪಾದಿಸಿ, ಅಜ್ಞಾನದಿಂದ ಜನರು ಅವರ ಮೇಲೆ ಆರೋಪಿಸುವ ದೋಷಗಳನ್ನು ಖಂಡಿಸಿ, ಅವರ ಸತ್ಯಸಂಧತೆಯನ್ನು ದೃಢೀಕರಿಸುವುದು. ಪರಂತು ಸರ್ವಧರ್ಮಸ್ಥಾಪಕರನ್ನು ವಿಶ್ವಾಸದಿಂದ ನಂಬಿ ಕಾರ್ಯತಃ ದೃಢೀಕರಿಸುವುದೇ ಜಗತ್ತಿನ ಶಾಂತಿಗೆ ತಳಹದಿ ಎಂದು ಸಾಧಿಸುವುದು.

ತೃತೀಯ ಸೂತ್ರ.

'ನಿಮ್ಮಲ್ಲಿ ಸರ್ವರಿಗೂ ಶಾಸ್ತ್ರ ಮತ್ತು ಆಚಾರವನ್ನು ನಾವು ಉಂಟು ಮಾಡಿರುವೆವು.' (ಕು. ಅ ೫:೪೮) ಮತ್ತು 'ಈ ಗ್ರಂಥ (ಕುರಆನ) ನಿಸ್ಸಂದೇಹವಾದುದು ಇದರಲ್ಲಿ ನೇಮಶೀಲರಿಗೆ ಸನ್ಮಾರ್ಗವು........ನಿನ್ನ (ಶ್ರೀ ಮೊಹಮ್ಮದರ) ಮೇಲೆ ಅವತೀರ್ಣಸಲ್ಪಟ್ಟಿರುವುದನ್ನು ಮತ್ತು ನಿನ್ನ ಪೂರ್ವದಲ್ಲಿ ಅವತೀರ್ಣಸಲ್ಪಟ್ಟಿರುವುದನ್ನು ಅವರು (ನೇಮಶೀಲರು) ನಂಬುವವರು........' (ಕು. ಅ ೨:೨–೪) ಹೀಗೆ ಮುಸ್ಲಿಮರು ಸರ್ವಧರ್ಮ ಗ್ರಂಥಗಳನ್ನು ನಂಬಬೇಕೆಂದು ವಿಧಿಸಲ್ಪಟ್ಟಿರುವುದು. ಶ್ರೀ ಮೊಹಮ್ಮದರು 'ಅಲ್ಲಾಃನಿಂದ ಸಂದೇಶಿಗಳು;

ಅವರು ಪರಿಶುದ್ಧ ಪ್ರತಿಗಳನ್ನು (ಕುರಆನಿನ ಅಧ್ಯಾಯಗಳನ್ನು) ಪಠಿಸುವರು. ಅವುಗಳಲ್ಲಿ ಸರ್ವಗ್ರಂಥಗಳೂ ಸ್ಥಾಯಿಯಾಗಿರುವವು.' (ಕು. ಅ ೯೮:೨-೩) ಎಂದು ಉಲ್ಲೇಖಿಸಿ, ಕುರಆನಿನಲ್ಲಿ ಸರ್ವಧರ್ಮಗ್ರಂಥಗಳು ಸೇರಿರುವವು, ಆದುದರಿಂದ ಮುಸ್ಲಿಮರು ಅವುಗಳನ್ನು ವಿಶ್ವಾಸದಿಂದ ಕಾಣಬೇಕೆಂದು ಪ್ರತಿಪಾದಿಸುವುದು. ಇದೇ ಜಗತ್ತಿನ ಶಾಂತಿಗೆ ಇಸ್ಲಾಮಧರ್ಮ ವಿಧಿಸಿರುವ ತೃತೀಯ ಸೂತ್ರವು.

ಚತುರ್ಥ ಸೂತ್ರ

'ಪ್ರಾರ್ಥನೆಗಳನ್ನು ರಕ್ಷಿಸಿಕೊಳ್ಳಿರಿ ಮತ್ತು ಕೇಂದ್ರ ಪ್ರಾರ್ಥನೆಯನ್ನು ಸಹ ಮತ್ತು ಅಲ್ಲಾಃಗೆ ವಿಧೇಯರಾಗಿ ನಿಲ್ಲಿರಿ' (ಕು. ಅ ೨:೨೩೮) ಇಸ್ಲಾಮ ಪ್ರಾರ್ಥನಾವಿಧಾನ ಸರ್ವಧರ್ಮಪ್ರಾರ್ಥನಾವಿಧಾನಗಳನ್ನು ತನ್ನಲ್ಲಿ ಒಳಗೊಳ್ಳುವುದು. ಆದುದರಿಂದ ಇದು ಕೇಂದ್ರಪ್ರಾರ್ಥನೆ ಎಂದು ಕರೆಯಲ್ಪಡುವುದು. ಪ್ರಪಂಚದಲ್ಲಿ ಕೆಲವರು ತಾರಕಪ್ರಾರ್ಥನೆ ಮಾಡುವರು. ಇಸ್ಲಾಮಧರ್ಮದಲ್ಲಿ ಅದು ಕಿಯಾಮ ಎಂದು ಕರೆಯಲ್ಪಡುವುದು. ಕೆಲವರು ಅರ್ಧಚಂದ್ರಕ ಪ್ರಾರ್ಥನೆ ಮಾಡುವರು. ಅದು 'ರುಕು' ಎಂದು ಕರೆಯಲ್ಪಡುವುದು. ಕೆಲವರು ದಂಡಪ್ರಾರ್ಥನೆ ಮಾಡುವರು. ಅದು 'ಸಿಜ್ದಾ' ಎಂದು ಕರೆಯಲ್ಪಡುವುದು. ಕೆಲವರು ಕುಂಡಲಾಕರ ಪ್ರಾರ್ಥನೆ ಮಾಡುವರು. ಅದು 'ಕಾಯಿದ' ಎಂದು ಕರೆಯಲ್ಪಡುವುದು. ಕೆಲವರು ಬಿಂದುಪ್ರಾರ್ಥನೆ ಮಾಡುವರು. ಇಸ್ಲಾಮಧರ್ಮದಲ್ಲಿ ಅದು 'ಮೊರಾಕಿಬ' ಎಂದು ಕರೆಯಲ್ಪಡುವುದು. ಹೀಗೆ ಇಸ್ಲಾಮಧರ್ಮ ಮುಸ್ಲಿಮರಿಗೆ ವಿಧಿಸಿರುವ ಪ್ರಾರ್ಥನಾವಿಧಾನವು ಜಗತ್ತಿನ ಶಾಂತಿಗೆ ತಳಹದಿಯಾಗಿರುವುದು.

ಪಂಚಮ ಸೂತ್ರ

'ಎಲೈ ನರರೆ! ವಾಸ್ತವಿಕವಾಗಿ ನಾವು ನಿಮ್ಮನ್ನು ಒಂದು ಗಂಡು ಮತ್ತು ಒಂದು ಹೆಣ್ಣಿನಿಂದ ಸೃಷ್ಟಿಸಿರುವೆವು ಮತ್ತು ನಿಮ್ಮನ್ನು ಪಂಗಡಗಳು ಮತ್ತು ಪಣಗಳು ಮಾಡಿರುವೆವು. ಇದರಿಂದ ನೀವು ಪರಸ್ಪರ ಪರಿಚಯ ಹೊಂದುವಿರಿ. ವಾಸ್ತವಿಕವಾಗಿ ನಿಮ್ಮಲ್ಲಿ ಹೆಚ್ಚಿನ ನೇಮಶೀಲನೆ ಅಲ್ಲಾಃನ ಬಳಿ ನಿಮ್ಮಲ್ಲಿ ಹೆಚ್ಚು ಮಾನ್ಯನು. ವಾಸ್ತವಿಕವಾಗಿ ಅಲ್ಲಾಃ ಬಲ್ಲವನು, ಅರಿತವನು.' (ಕು. ಅ ೪೯:೧೩) ಊಚ ನೀಚತ್ವವೆಣಿಸುತ್ತಿದ್ದವರು ಇಸ್ಲಾಮಧರ್ಮದ ಈ ಪ್ರಣವಘೋಷ ಕೇಳಿದ ಕೂಡಲೆ ಚಕಿತರಾದರು. ಆದರೂ ಇಸ್ಲಾಮಧರ್ಮ ಊಚನೀಚತ್ವದ ಭೇದವನ್ನು ಒಮ್ಮೊಗವಾಗಿ ನಿಲ್ಲಿಸಿತು. ಇದರಲ್ಲಿ ಗುಣಕ್ಕೆ ಪ್ರಾಧಾನ್ಯ ಉಂಟೆ ವಿನಹ ಕುಲಕ್ಕಲ್ಲ. ಶ್ರೀ ಮೊಹಮ್ಮದ ಪ್ರವಾದಿಗಳು ಇದನ್ನು ಕಾರ್ಯತಃ ದೃಢೀಕರಿಸಿರುವರು. ನೀಚ ಜನಾಂಗಕ್ಕೆ ಸೇರಿದ 'ಜಯಿದ' ಎಂಬ ವಿಕ್ರಯಿಸಲ್ಪಟ್ಟ ಒರ್ವ ಸೇವಕನನ್ನು ಸದಾಚಾರಿಯನ್ನಾಗಿ ಮಾಡಿ ಮಕ್ಕಾ ನಗರದ ಆಚಾರ್ಯರ ಮನೆತನದ 'ಜೈನಬ' ಎಂಬಾಕೆಯನ್ನು ಆತನಿಗೆ ವಿವಾಹ ಮಾಡಿಸಿದರು. ಹಾಗೆಯೇ ತಾವು ಸಹ ಓರ್ವ ಸೇವಕಿಯನ್ನು ವರಿಸಿ ಊಚು ಮನೆತನದ ತಮ್ಮ ಪತ್ನಿಯರೊಂದಿಗೆ ಆಕೆಯನ್ನೂ ಸಮಭಾವದಿಂದ ಕಂಡಿರುವರು. ಬಹು ಹಿಂದಿನಿಂದಲೂ ವಾಡಿಕೆಯಲ್ಲಿದ್ದ ದಾಸ್ಯ ಪದ್ಧತಿಯನ್ನು ಮುಟ್ಟಮೊದಲು ನಿರ್ಮೂಲ ಮಾಡಿದವರು ಶ್ರೀ ಮೊಹಮ್ಮದ ಪ್ರವಾದಿಗಳು. ಹೀಗೆ ಇಸ್ಲಾಮಧರ್ಮ ಸೇವಕ ಸ್ವತಂತ್ರರ ಮತ್ತು ಕಪ್ಪು ಬಿಳುಪಿನ ತಪ್ಪು ಭಾವನೆಯನ್ನು ಸಮೂಲವಾಗಿ ತೆಗೆದು ಹಾಕಿರುವುದು. ಸರ್ವರಿಗೂ ಒಂದೇ ವಿಧವಾದ ಸಾಮಾಜಿಕ ಗೌರವವಿತ್ತು ರಕ್ಷಿಸಿರುವುದು. ರಾಜ, ಪ್ರಜೆ, ಒಡೆಯ, ಸೇವಕ, ಬಡವ, ಬಲಾಢ್ಯ, ಸ್ತ್ರೀ ಮತ್ತು ಪುರುಷ ಇವರೆಲ್ಲರೂ ಅಲ್ಲಾಃನ ದೃಷ್ಟಿಯಲ್ಲಿ ಸಮಾನರೆಂದು ಘೋಷಿಸಿರುವುದು. ಇಸ್ಲಾಮಧರ್ಮದ ಪೂರ್ವದಲ್ಲಿ ಸ್ತ್ರೀಯರ ಸ್ಥಾನ ಬಹು ಶೋಚನೀಯವಾಗಿದ್ದಿತು. ಸ್ತ್ರೀಯೂ ಪುರುಷನಂತೆ ಸ್ವತಂತ್ರಳೆಂದು ಮೊದಲು ಸಾರಿದುದೆ ಇಸ್ಲಾಮ ಧರ್ಮವು. 'ಮಾತೆಯವರ ಅಡಿದಾವರೆಯಲ್ಲಿ ಮಕ್ಕಳಿಗೆ ಸ್ವರ್ಗವು.' ಅಬಲೆಯರಲ್ಲಿ 'ಪ್ರೀತಿಯಿಂದ ವರ್ತಿಸಿರಿ' ಮತ್ತು 'ಉತ್ತಮ ಗುಣವುಳ್ಳ ಪತ್ನಿ, ಪತಿಯ ಅಮೂಲ್ಯ ಭಂಡಾರ'ವೆಂದು ಶ್ರೀ ಮೊಹಮ್ಮದ ಪ್ರವಾದಿಗಳು ಸಾರಿರುವರು. ಪಿತ್ರಾರ್ಜಿತವಾದ ಐಶ್ವರ್ಯ

ರ್ಯ ಮತ್ತು ಆಸ್ತಿಗಳಿಗೆ ಇಸ್ಲಾಮಧರ್ಮದಲ್ಲಿ ಸ್ತ್ರೀಯರು ಸಹಭಾಗಿಗಳು. ತಮ್ಮ ಆಸ್ತಿಗಳನ್ನು ತಾವೆ ಯಥೇಚ್ಛೆಯಿಂದ ಬಳಸಬಹುದಾದ ಸ್ವಾತಂತ್ರ್ಯ ಅವರಿಗೆ ಸಲ್ಲುವುದು. ಹೀಗೆ ಇಸ್ಲಾಮಧರ್ಮ ಸರ್ವಸಮನ್ವಯವಾದ ವಿಶ್ವಬಂಧುತ್ವವನ್ನು ಸ್ಥಾಪಿಸಿ ಜಗತ್ತಿನ ಶಾಂತಿಗೆ ಭದ್ರವಾದ ತಳಹದಿ ಹಾಕಿರುವುದು.

ಕಡೆ ನುಡಿ

ಅಹಿಂಸಾಪ್ರಿಯ ಶಾಂತಮೂರ್ತಿ ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರು ತಮ್ಮ ಪವಿತ್ರ ಕ್ಷೇತ್ರದಲ್ಲಿ ಪ್ರತಿ ವರುಷ ಜರಗುವ ಉತ್ಸವಕಾಲದಲ್ಲಿ ಕಲಾವಿದರನ್ನು, ಸಾಹಿತಿಗಳನ್ನು ಸಂಗ್ರಹಿಸಿ ಅವರವರ ಪ್ರೌಢಿಮೆಯನ್ನು ಪ್ರದರ್ಶಿಸುವ ಅವಕಾಶ ಕಲ್ಪಿಸಿಕೊಟ್ಟು ಅವರನ್ನು ಪ್ರೋತ್ಸಾಹಿಸಿ ಮಾನಿಸುವುದೂ, ಹಾಗೆಯೆ ಧರ್ಮಭೂಮಿಯಾದ ಧರ್ಮಸ್ಥಳದಲ್ಲಿ ಸರ್ವಧರ್ಮಸಮ್ಮೇಳನವನ್ನು ಪ್ರತಿ ವರುಷ ಬರಮಾಡಿ ಸರ್ವಧರ್ಮವಿದರಿಗೆ ತಮ್ಮ ತಮ್ಮ ಧರ್ಮತತ್ವಗಳನ್ನು ಪ್ರತಿಪಾದಿಸುವ ಸೌಕರ್ಯ ಒದಗಿಸಿ, ಸರ್ವಧರ್ಮಸಮನ್ವಯದ ಬುನಾದಿಯನ್ನು ಕಂಡು ಹಿಡಿಯುವ ಅವಕಾಶ ಕಲ್ಪಿಸಿರುವುದೂ ಅವರ ಸರ್ವಧರ್ಮಸಹಿಷ್ಣುತೆ ಮತ್ತು ಸಹಾನುಭವದ, ಸರ್ವ ಕಲಾ ಮತ್ತು ಸಾಹಿತ್ಯಪ್ರೇಮದ ಒಂದು ಮಹಾ ಪ್ರದರ್ಶನವಾಗಿರುವುದು. ಇಂಥ ಉದಾರಮೂರ್ತಿಗಳು ಲೋಕಸೇವೆಗಾಗಿ ಚಿರಕಾಲವಿರಲೆಂದು ಮನಃಪೂರ್ವಕವಾಗಿ ವಿಶ್ವಕರ್ತನಲ್ಲಿ ಪ್ರಾರ್ಥಿಸುವೆನು.

ಕರ್ಣಾಟಕವೂ ದಾಸಸಾಹಿತ್ಯವೂ

ಶ್ರೀ ಯಂ. ರಾಮರಾವ್.

ಭರತಖಂಡವನ್ನು ಭಕ್ತಭಾಗವತರ ತೌರುಮನೆ ಯೆನ್ನಬಹುದು. ಪ್ರಾಯಶಃ ಪ್ರಪಂಚದ ಮತ್ತಾವ ದೇಶದಲ್ಲೂ ಇಷ್ಟು ಮಂದಿ ಭಗವದ್ಭಕ್ತರೂ ಸಾಧು ಸಂತರೂ ಜನ್ಮವೆತ್ತಿರಲಿಕ್ಕಿಲ್ಲ! ಭಾರತದೇಶದ ಬಂಗಾಳಾ, ಮಹಾರಾಷ್ಟ್ರ, ಉತ್ತರಭಾರತ, ದಕ್ಷಿಣಭಾರತ ಹೀಗೆ ಒಂದೊಂದು ಪ್ರಾಂತದಲ್ಲೂ ಅನೇಕಾನೇಕ ಮಂದಿ ಭಗವದ್ಭಕ್ತರು ಜನ್ಮವೆತ್ತಿ ತಮ್ಮ ತಾಯ್ನಾಡನ್ನು ಪಾವನ ಗೊಳಿಸಿರುತ್ತಾರೆ. ಚೈತನ್ಯಪ್ರಭು, ಶ್ರೀ ರಾಮಕೃಷ್ಣ ಪರಮಹಂಸರು, ರಾಮಾನಂದ ಸ್ವಾಮಿಗಳು, ಗೋಸ್ವಾಮಿ ತುಲಸೀದಾಸರು, ಕಬೀರದಾಸರು, ಸೂರದಾಸರು, ಮೀರಾಬಾಯಿ ಮುಂತಾದ ಹರಿಭಕ್ತರು ಬಂಗಾಳಾ ಮತ್ತು ಉತ್ತರಭಾರತದಲ್ಲೂ, ನಾಮದೇವ, ಜ್ಞಾನದೇವ, ತುಕಾರಾಂ, ಸಖೂಬಾಯಿ ಮುಂತಾದ ಶ್ರೀ ವಿಠ್ಠಲಭಕ್ತರು ಮಹಾರಾಷ್ಟ್ರ ಪ್ರಾಂತದಲ್ಲೂ ಅವತರಿಸಿ ಭಕ್ತಿಪಂಥವನ್ನು ಬೆಳೆಸಿದ್ದಾರೆ. ದಕ್ಷಿಣಭಾರತ ದಲ್ಲಿ ಶ್ರೀ ವ್ಯಾಸರಾಯಸ್ವಾಮಿಗಳವರ ನೇತೃತ್ವದಲ್ಲಿ, ಶ್ರೀ ಪುರಂದರದಾಸರು, ಶ್ರೀ ಕನಕದಾಸರು, ಶ್ರೀ ವಾದಿರಾಜರು ಮುಂತಾದ ಭಕ್ತವರೇಣ್ಯರಿಂದ ಸ್ಥಾಪಿತವಾಗಿ ಬೆಳೆದ ದಾಸಕೂಟವು, ಅಗಾಧ ಕಾರ್ಯ ಮಾಡಿ ಅನುಪಮ ಗ್ರಂಥರಾಶಿಯನ್ನು ಸೃಷ್ಟಿಸಿ ಲೋಕೋಪಕಾರ ಮಾಡಿತು. ತಮಿಳು ನಾಡಿನಲ್ಲೂ ಹೀಗೆಯೇ! ಶ್ರೀ ತ್ಯಾಗರಾಜರು ರಾಮಭಕ್ತಾಗ್ರೇಸರರಾಗಿ ಗಾನಕಲಾರ್ಚನೆ ಯಿಂದ ಭಗವದ್ಭಕ್ತಿತರಂಗಿಣಿಯನ್ನು ಹರಿಸಿದರು. ಅಲ್ಲದೆ ಅನೇಕಾನೇಕ ಮಂದಿ ಆಳ್ವಾರುಗಳು ವಿಷ್ಣುಭಕ್ತಿ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಪ್ರಕೃತ, ಕರ್ಣಾಟಕವು ಶ್ರೀ ಪುರಂದರದಾಸರೇ ಮುಂತಾದ ಹರಿದಾಸ ವರ್ಗಕ್ಕೆ ಜನ್ಮಭೂಮಿಯಾಗಿ ಅವರ ಕಾರ್ಯಕ್ಷೇತ್ರ ವಾಗಿ ಕಳೆಗೊಂಡುದರಿಂದ, ಕರ್ಣಾಟಕದಲ್ಲಿ ದಾಸ ಸಾಹಿತ್ಯವು ಹುಟ್ಟಿ ಬೆಳೆದು ಮಾಡಿದ ಮಹಾಸಾಹಿತ್ಯ ಸೇವಾಕಾರ್ಯವನ್ನು ಕುರಿತು, ಈ ಲೇಖನದಲ್ಲಿ ಕೆಲವಂಶಗಳನ್ನು ವಿಜ್ಞಾಪಿಸಲು ಪ್ರಯತ್ನಿಸುತ್ತೇನೆ.

ಭಾರತದೇಶದ ಇತರ ಭಾಗಗಳಲ್ಲಿ ಹೇಗೇ ಇರಲಿ, ಕರ್ಣಾಟಕದಲ್ಲಿ ಹುಟ್ಟಿ ಬೆಳೆದು ಪ್ರಸಿದ್ಧರಾದ ಅನೇಕ ಮಂದಿ ಸಾಧುಸಂತರು 'ದಾಸರು' ಎಂಬ ಹೆಸರಿನಿಂದ ಕರೆಯಲ್ಪಟ್ಟಿದ್ದಾರೆ–ಅಲ್ಲ; ಕರೆದುಕೊಂಡಿದ್ದಾರೆ. ಕರ್ಣಾಟಕದ ಈ ಸಾಧುಸಂತರು ಜನ್ಮಸಾರ್ಥಕ್ಯಕ್ಕೆ ಇತರ ಎಲ್ಲ ಸಾಧನೆಗಳಿಗಿಂತಲೂ ಭಕ್ತಿಪಂಥವನ್ನೇ ಶ್ರೇಷ್ಠವಾದುದೆಂದೂ, ಸುಗಮವಾದುದೆಂದೂ ಅಂಗೀಕರಿಸಿ, ತಮ್ಮ ಆತ್ಮೋದ್ಧಾರಕ್ಕೆ ಮಾತ್ರವಲ್ಲ, ಮಾನವ ಕೋಟಿಯ ಉದ್ಧಾರಕ್ಕೂ ಅದೇ ಸರ್ವೋತ್ತಮ ಸಾಧನ ವೆಂದು ಭುಜವೆತ್ತಿ ಸಾರಿದರು. ಆದುದರಿಂದಲೇ ಭಕ್ತಿ ಸೋಪಾನವೆಂದು ಸುಪ್ರಸಿದ್ಧವಾದ

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ॥
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ॥

ಎಂಬೀ ನವವಿಧಭಕ್ತಿಯ ಸೋಪಾನವನ್ನು ಹತ್ತಿಯೇ ಭಕ್ತನು ತನ್ನ ಇಷ್ಟದೈವದ ಸಾನ್ನಿಧ್ಯವನ್ನೂ ಪರಮಾನುಗ್ರಹವನ್ನೂ ಹೊಂದಲು ಪ್ರಯತ್ನಿಸಬೇಕಾಯಿತು. ಇವುಗಳಲ್ಲಿ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ. ಅರ್ಚನ, ವಂದನ ಈ ಸಾಧನೆಗಳಲ್ಲಿ ತೊಡಗಿರತಕ್ಕವರೆಲ್ಲ ಭಕ್ತರೇ ಆದರೂ, ದಾಸ್ಯಭಕ್ತಿಸಾಧನೆಯಲ್ಲಿ ತೊಡಗಿದ ಸಾಧಕನಿಗೆ ಕಾಮಕ್ರೋಧಮದಮಾತ್ಸರ್ಯಾದಿಗಳೂ ಲೋಭಮೋಹಗಳೂ ಬಹು ಮಟ್ಟಿಗೆ ಶಮನವಾಗಿರಬೇಕಾಗಿದೆ. ಅಹಂಕಾರಮಮಕಾರಾದಿಭಾವಗಳು ನಿರ್ನಾಮವಾದಲ್ಲದೆ, 'ದಾಸ' ಭಾವವನ್ನು ವಹಿಸಲು ಮನುಷ್ಯನ ಮನಸ್ಸು ಒಗ್ಗದು. ಬಲಿತು ಕೊಬ್ಬಿದ ಹೋರಿಯಂತೆ ವಿಜೃಂಭಿಸುತ್ತಾ ಲೌಕಿಕಕಾರ್ಯಕಲಾಪಗಳಿಗೆ ಹುರುಪಿನಿಂದ ನುಗ್ಗುತ್ತಿರುವ ರಾಜಸಮನಸ್ಸು, ಭಗವನ್ನಾಮಸಂಕೀರ್ತನೆ, ಸಾಧುಸಜ್ಜನರಲ್ಲಿ ನಯವಿನಯಗಳನ್ನು ತೋರಿಸುವಿಕೆ ಮುಂತಾದುವುಗಳಿಗೆ ಪಳಗಿ 'ದಾಸ' ಭಾವವನ್ನು ವಹಿಸಲು ಹದಗೊಳ್ಳಬೇಕಾದರೆ, ಈ ಸಾಧನೆಯೇನೂ ಒಂದೆರಡು ದಿನಗಳಲ್ಲಿ ಲಭ್ಯವಾಗ ತಕ್ಕುದಲ್ಲ. ಇದನ್ನು ಹೇಗೆ ಸಾಧಿಸಬಹುದೆಂಬ ವಿಚಾ

ರವನ್ನು ಹರಿದಾಸಕುಲಸಾರ್ವಭೌಮರಾದ ಶ್ರೀ ಪುರಂದಾಸಾರ್ಯರು ತಮ್ಮದೊಂದು ಕೀರ್ತನೆಯಲ್ಲಿ, ದಾಸನಾಗಲೆಣಿಸಿದವನು ತನ್ನ ಹೃದಯಕ್ಷೇತ್ರದ ವ್ಯವಸಾಯದಲ್ಲಿ ತೊಡಗಬೇಕೆಂದು ಬಹು ಸಮಂಜಸ ರೀತಿಯಲ್ಲಿ ನಿರೂಪಿಸಿದ್ದಾರೆ.—

'ಹೃದಯ ಹೊಲವ ಮಾಡಿ, ಮನವ ನೇಗಿಲ ಮಾಡಿ,
ಶ್ವಾಸೋಚ್ಛ್ವಾಸ ಎರಡೆತ್ತು ಮಾಡಿ।
ಜ್ಞಾನವೆಂಬ ಹಗ್ಗ ಕಣ್ಣಿಯ ಮಾಡಿ, ನಿರ್ಮಮವೆಂಬ
ಗುಂಟಿಲಿ ಹರನಿರಯ್ಯ' ॥
'ಮದಮತ್ಸರವೆಂಬ ಮರಗಳನೇ ತರಿದು, ಕಾಮ
ಕ್ರೋಧಗಳೆಂಬ ಕಳೆಯ ಕಿತ್ತಿ।
ಪಂಚೇಂದ್ರಿಯವೆಂಬ ಮಂಚಿಕೆಯನೆ ಹಾಕಿ,
ಚಂಚಲವೆಂಬ ಹಕ್ಕಿಯ ಹೊಡೆಯಿರಯ್ಯ ॥

ಹೀಗೆ ಸಾಧನೆ ಮಾಡಿದರಲ್ಲದೆ ಹೃದಯಕ್ಷೇತ್ರದಲ್ಲಿ ಮೆದುವು ಹುಟ್ಟದು. ಹೃದಯವು ಹೀಗೆ ಮೃದುವಾದಲ್ಲದೆ ಅದರಲ್ಲಿ ಭಗವನ್ನಾಮವೆಂಬ ಪವಿತ್ರಬೀಜವು ಊರಿ ಮೊಳಕೆಗೊಳ್ಳಲರಿಯದು. ಹಾಗಾಗದಿದ್ದರೆ ಜನ್ಮಸಾರ್ಥಕವಾಗುವ ಮಾರ್ಗ ಬೇರೇನಿದೆ? ಹೀಗೆಂದು ದಾಸರಾಯರು ಭಕ್ತಿಪಂಥವನ್ನು ಸಮರ್ಥಿಸಿದ್ದಾರೆ.

ಶ್ರೀ ಪುರಂದರದಾಸರೇ ಮೊದಲಾದ ಕರ್ಣಾಟಕದ ಸಾಧುಸಂತರೆಲ್ಲ, ಅಂದು ಕರ್ಣಾಟಕದಲ್ಲೇ ವಳಿತವಾಗಿದ್ದ ಪಂಢರಪುರದ ಶ್ರೀ ಪಾಂಡುರಂಗ ವಿಠ್ಠಲ ಸ್ವಾಮಿಯನ್ನೇ ಕೇಂದ್ರವನ್ನಾಗಿಟ್ಟುಕೊಂಡು ತಮ್ಮ ಪಂಥವನ್ನು ಬೆಳೆಸಿದ್ದಾರೆ. ಈ ಎಲ್ಲ ದಾಸವರ್ಯರಿಗೂ ಅಂಕಿತ ಕೊಡುವಾಗ ಅವರವರ ಗುರುಗಳು 'ವಿಠ್ಠಲ' ಎಂಬ ಈ ಆರಾಧ್ಯದೈವವನ್ನೇ ಅವಲಂಬಿಸಿ ಪುರಂದರವಿಠ್ಠಲ, ವಿಜಯವಿಠ್ಠಲ, ಜಗನ್ನಾಥವಿಠ್ಠಲ ಗೋಪಾಲವಿಠ್ಠಲ ಮುಂತಾಗಿ ಅವರವರ ಉಪಾಸನ ದೈವವನ್ನು ನಿರ್ದೇಶಿಸಿ ಪದರಚನೆ ಮಾಡುವಂತೆ ನಿರೂಪಿಸಿದ್ದಾರೆ. ವಿಠಲ ಅಥವಾ ಪಾಂಡುರಂಗ ವಿಠ್ಠಲನು ವಿಷ್ಣುಮೂರ್ತಿಯೇ ಆದುದರಿಂದ ಈ ದಾಸವರ್ಯರೆಲ್ಲರೂ ಈ ವಿಸ್ತಾರದೇಶದಲ್ಲಿ ಅಲ್ಲಲ್ಲಿ ನೆಲೆಸಿರುವ ವೈಷ್ಣವಕ್ಷೇತ್ರಗಳನ್ನು ಸಂದರ್ಶಿಸಿದಾಗಲೆಲ್ಲ ಅಲ್ಲಲ್ಲಿಯ ದೇವರುಗಳನ್ನುದ್ದೇಶಿಸಿ ರಚಿಸಿರುವ ಪದಗಳನ್ನೆಲ್ಲ ಆ ತಮ್ಮ ಆರಾಧ್ಯಮೂರ್ತಿಯ ಅಂಕಿತದಿಂದಲೇ ಸಂಬೋಧಿಸಿ ಕೀರ್ತಿಸಿದ್ದಾರೆ. 'ದಾಸ' ಎಂಬ ಪದವು ಎಷ್ಟು ವ್ಯಾಪಕವಾದುದೆಂದು ಶ್ರೀ ದಾಸರಾಯರು ನಿರೂಪಿಸಿರುವುದು ಭಕ್ತಿಪಂಥಾವಲಂಬಿಗಳಿಗೆ ಎಷ್ಟು ಅಪ್ಯಾಯಮಾನವೆನ್ನಿಸಿ ಭಗವದ್ಭಕ್ತಿ ನಿರ್ಭರರಾಗುವಂತೆ ಪ್ರೇರಿಸಲುಳ್ಳುದೆಂದು ಪ್ರಾಜ್ಞರು ಪರಿಭಾವಿಸಬೇಕು. ಶ್ರೀ ಗೋಪಾಲದಾಸರು ತಮ್ಮದೊಂದು ಸುಳಾದಿಯಲ್ಲಿ 'ಈಶನು ನೀನೊಬ್ಬನೇ! ಲೋಕದಲ್ಲಿ ನಿನ್ನಿಂದ ಅನ್ಯರಾದ ರಮಾಬ್ರಹ್ಮಾದಿಸಕಲರೂ ದಾಸರೇ! ಅಂತಹ ನಿನ್ನ ದಾಸರದಾಸರ ದಾಸ್ಯವ ದಯಪಾಲಿಸಿ ನನ್ನನ್ನುದ್ಧರಿಸು ಪ್ರಭುವೇ!" ಎಂದು ಪ್ರಾರ್ಥಿಸಿದ್ದಾರೆ.

ಲೋಕವು ಮಹಾತ್ಮಾಜೀ ಅವರು ಪ್ರತಿಪಾದಿಸಿದ 'ಅಹಿಂಸೆ'ಯನ್ನು ಅಶಕ್ತನ ಅವಲಂಬನೆಯೆಂದು ಅರ್ಥ ಮಾಡಿಕೊಂಡಂತೆ, ಶ್ರೀ ದಾಸರಾಯರು ನಿರೂಪಿಸಿದ ಈ 'ದಾಸ'ತ್ವವನ್ನೂ ನಿರ್ಗತಿಕನ ಹೇಡಿತನದ ಚಿನ್ಹೆಯೆಂದು ಅಪಾರ್ಥ ಮಾಡಿಕೊಳ್ಳುವ ಸಂಭವವುಂಟು. ಪ್ರಾಪಂಚಿಕವಾದ ಐಶ್ವರ್ಯಅಧಿಕಾರ ಕೀರ್ತಿಪ್ರತಿಷ್ಠೆಗಳನ್ನು ಗಳಿಸಲು ಹಲಕೆಲವು ರಾಜಸ ಗುಣಗಳು ಹೇಗೆ ಆವಶ್ಯಕವಾಗಿವೆಯೋ, ಹಾಗೆಯೇ ಜ್ಞಾನಭಕ್ತಿವೈರಾಗ್ಯಾದಿಗಳು ಮುಂತಾದ ಪಾರತ್ರಿಕವಾದ ಸಂಪತ್ತುಸೌಭಾಗ್ಯಗಳನ್ನು ಗಳಿಸಲಿಕ್ಕೂ ವಿನಯ, ನಮ್ರತೆ, ನಂಬಿಕೆ, ತಾನು ನಂಬಿದ ವಸ್ತುವಿದ್ದು ಅದ್ವಿತೀಯವಾದುದೆಂದು ತಿಳಿದು ಆರಾಧಿಸುವ ಅನನ್ಯಶರಣ್ಯಭಾವ ಮುಂತಾದ ಕೆಲಕೆಲವು ಗುಣಗಳು ಇರಬೇಕಾದುದು ಅವಶ್ಯಕ. ಆದುದರಿಂದ ಲೌಕಿಕವನ್ನು ಸಾಕುಮಾಡಿ, ಪಾರತ್ರಿಕವನ್ನು ಗಳಿಸಲು ಅಪೇಕ್ಷಿಸುವ ಚೇತನನು ಭಗವತ್ಪ್ರಾಪ್ತಿಗಾಗಿ ಈಶನಲ್ಲಿ ತನ್ನ ದಾಸತ್ವವನ್ನು ತೋರದಿದ್ದರೆ—ಮುಂದೆ ಮಾರ್ಗವೇನಿದೆ?

ಹೀಗೆ ಹರಿದಾಸಪಂಥದವರು ಕರ್ಣಾಟಕವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಕೈಕೊಂಡು ಜನಾಂಗಕ್ಕೆ ತಮ್ಮಿಂದ ಸಾಧ್ಯವಿದ್ದಷ್ಟು ಸೇವೆಯನ್ನು ಸಲ್ಲಿಸಿದ್ದಾರೆ: ಪುರಂದರದಾಸರ ಜನ್ಮಸ್ಥಳವಾದ ಪುರಂದರಘಡವೂ ಅವರು ತರುವಾಯ ನಿಂತು ವಾಸಿಸಿದ ಆನೆಗೊಂದಿ, ಪಂಢರಾಪುರಗಳೂ ಅಂದು ಎಂದರೆ ವಿಜಯನಗರ ಸಾಮ್ರಾಜ್ಯದ ಪ್ರಾದುರ್ಭಾವದ ದಿನಗಳಲ್ಲಿ ಕರ್ಣಾಟಕಕ್ಕೇ ವಳಿತವಾಗಿ, ಅಲ್ಲೆಲ್ಲ ಕನ್ನಡ ಭಾಷೆಯೇ ಪ್ರಚಾರಗೊಂಡಿದ್ದುದರಿಂದ ಶ್ರೀ ಪುರಂದರದಾಸರೂ

ಅವರ ಅನುಯಾಯಿಗಳೂ ಹರಿದಾಸವಾಙ್ಮಯವನ್ನು ಬೆಳೆಸಿ ಕನ್ನಡನಾಡನ್ನು ಪಾವನಗೊಳಿಸಲು ಸಾಧ್ಯವಾಯಿತು.

ಶ್ರೀ ಪುರಂದರದಾಸರು, ಶ್ರೀ ಕೃಷ್ಣದೇವರಾಯನು ವಿಜಯನಗರಸಾಮ್ರಾಜ್ಯದಲ್ಲಿ ಕರ್ಣಾಟಕ ರಮಾರಮಣನಾಗಿ ಆಧಿಪತ್ಯ ಮಾಡಿಕೊಂಡಿದ್ದ ಕಾಲದಲ್ಲಿ ತಮ್ಮ ಈ ವಾಙ್ಮಯವ್ಯವಸಾಯವನ್ನು ಪ್ರಾರಂಭಿಸಿದಂತೆ ತಿಳಿದುಬರುತ್ತದೆ. ಇವರ ಸಮಕಾಲೀನರಾಗಿದ್ದವರಲ್ಲಿ ಮುಖ್ಯರಾದವರು, ಶ್ರೀ ಕನಕದಾಸರು ಮತ್ತು ಸೋದೆಯ ಶ್ರೀ ವಾದಿರಾಜಸ್ವಾಮಿಗಳು; ಅಲ್ಲದೆ ಪುರಂದರದಾಸರಿಗೆ ಅಂಕಿತಪ್ರದಾನ ಮಾಡಿದ ಶ್ರೀ ವ್ಯಾಸರಾಯಸ್ವಾಮಿಗಳೂ, ಅವರ ಗುರುಗಳಾದ ಮುಳುಬಾಗಿಲು ಕ್ಷೇತ್ರದ ಶ್ರೀ ಶ್ರೀಪಾದರಾಯಸ್ವಾಮಿಗಳೂ, ಶ್ರೀ ವಾದಿರಾಜರೂ ಯತ್ಯಾಶ್ರಮಿಗಳೇ ಆದರೂ, ದೇಶಭಾಷೆಯಾದ ಕನ್ನಡದಲ್ಲಿ ಶಾಸ್ತ್ರವಿಚಾರಗಳನ್ನೂ, ಜ್ಞಾನಭಕ್ತಿವೈರಾಗ್ಯಾದಿ ವಿಚಾರಗಳನ್ನೂ ತಿಳಿಸಿ, ತನ್ಮೂಲಕ ಲೋಕಜಾಗೃತಿಯನ್ನುಂಟುಮಾಡಬೇಕಾದುದರ ಆವಶ್ಯಕತೆಯನ್ನರಿತು, ತಮ್ಮ ಸಂಸ್ಕೃತಪಾಂಡಿತ್ಯಕ್ಕೂ ಆ ದೇವಭಾಷೆಯ ಮೋಹಕ್ಕೂ ಒಳಗಾಗದೆ, ದೀನಜನತೆಯ ಮೇಲಿನ ಅಪಾರ ಕರುಣೆಯಿಂದ, ವೇದೋಪನಿಷತ್ತುಗಳು, ಪುರಾಣಾದಿಗಳು, ಧರ್ಮಶಾಸ್ತ್ರಾದಿಗಳು ಮುಂತಾದುವುಗಳ ಸಾರವನ್ನೆಲ್ಲ ಮೃದುಮಧುರವಾದ ತಿಳಿಗನ್ನಡ ಭಾಷೆಯಲ್ಲಿ, ಪದ, ಸುಳಾದಿ, ಉಗಾಭೋಗಗಳೆಂಬ ರಾಗತಾಳಲಯಬದ್ಧವಾದ ಉಚ್ಚವಾಙ್ಮಯಶೈಲಿಯಲ್ಲಿ ರಚಿಸಿಕೊಟ್ಟು ಲೋಕಕ್ಕೆ ಮಹೋಪಕಾರ ಮಾಡಿದರು.

ಈ ನಮ್ಮ ಕನ್ನಡನಾಡಿನಲ್ಲಿ ಮೇಲೆ ಹೇಳಿದಂತೆ ಶ್ರೀ ಹರಿದಾಸರು ಅವತರಿಸಿ ವೈಷ್ಣವಪಂಥವನ್ನು ಬೆಳೆಸಿದಂತೆಯೇ ಇತರ ಅನೇಕ ಮಂದಿ ಸಾಧುಸಂತರೂ ಅವತರಿಸಿ ಶೈವಪಂಥವನ್ನೂ ಬೆಳೆಸಿದ್ದಾರೆ. ಶಿವಶರಣರು ಶಕ್ತಿವಿಶಿಷ್ಟಾದ್ವೈತಮತತತ್ವಗಳನ್ನು ಅನುಸರಿಸಿ ವಚನವಾಙ್ಮಯವನ್ನು ಬೆಳೆಸಿದ್ದರೆ, ಹರಿದಾಸರುಗಳು ದ್ವೈತಮತತತ್ವಗಳನ್ನನುಸರಿಸಿ ದಾಸವಾಙ್ಮಯವನ್ನು ಬೆಳೆಸಿದರು. ಒಟ್ಟಿನಲ್ಲಿ ಈ ವಾಙ್ಮಯಗಳು ಧಾರ್ಮಿಕ ಹಿನ್ನಲೆಯಿಂದಲೇ ರಚಿತವಾಗಿ ಕನ್ನಡನಾಡಿನ ಶೈವ ಮತ್ತು ವೈಷ್ಣವ ಈ ಎರಡು ಪಂಗಡಗಳ ಜನತೆಗೂ ಸನ್ಮಾರ್ಗದರ್ಶಕವಾದುವು. ಉತ್ತರ ಭಾರತದ ತುಲಸೀದಾಸ್, ಮೀರಾಬಾಯಿ, ಕಬೀರದಾಸ್ ಮುಂತಾದವರೂ, ನಾಮದೇವ, ತುಕಾರಾಮ್ ಮುಂತಾದವರೂ ವಿಷ್ಣುಸ್ತೋತ್ರಪರ ಕೀರ್ತನೆಗಳನ್ನೇ ಹಾಡಿ ಪಾಡಿರುವರಾದರೂ, ದಾಸಕೂಟದವರು ರಚಿಸಿದ ವಾಙ್ಮಯವು ಶ್ರೀಮದುಡುಪೀ ಮಹಾಕ್ಷೇತ್ರದಲ್ಲವತರಿಸಿದ ಶ್ರೀಮನ್ಮಧ್ವಾಚಾರ್ಯರು ಸ್ಥಾಪಿಸಿದ ದ್ವೈತಸಿದ್ಧಾಂತವನ್ನೇ ಅವಲಂಬಿಸಿ, ಪ್ರತಿಪಾದಿಸುತ್ತಿದೆಯೆಂದು ಹೇಳಬಹುದು. ಹಾಗೆಂದ ಮಾತ್ರಕ್ಕೆ ಅದು ಇತರ ಯಾವ ಧರ್ಮಕ್ಕೂ ವಿರೋಧಿಯಲ್ಲ. ಯಾವ ಧರ್ಮವನ್ನೂ ಕುಂದೆನಿಸಿಲ್ಲ. ವಿಷ್ಣುಮೂರ್ತಿಯ ಸರ್ವೋತ್ತಮತ್ವ, ಸಕಲಕಲ್ಯಾಣಗುಣಪೂರ್ಣತ್ವ, ನಿರ್ದೋಷಿತ್ವ, ಜಗಜ್ಜನ್ಮಾದಿಕಾರಣತ್ವ ಮುಂತಾದ ಮಹೋನ್ನತ ವಿಚಾರಗಳನ್ನು ಪ್ರತಿಪಾದಿಸುತ್ತ, ಹರಿಭಕ್ತವೃಂದವು ತಮ್ಮ ಆರಾಧ್ಯದೈವವನ್ನು ಸರ್ವೋತ್ತಮ, ಸರ್ವಶಕ್ತ, ಸರ್ವಾಂತರ್ಯಾಮಿ ಎಂಬೀ ದೃಢನಂಬಿಕೆಯಿಂದಲೂ, ಭಕ್ತಿಶ್ರದ್ಧೆಗಳಿಂದಲೂ ಪೂಜಿಸಿ, ಸೇವಿಸಿ, ಆರಾಧಿಸಿ ತಮ್ಮ ಸಕಲಾಭೀಷ್ಟಗಳನ್ನೂ ಪಡೆದು ಸುಖಿಸಲು ಆವಶ್ಯಕವೆನ್ನಿಸುವ ಸಕಲ ಸಾಧನಗಳನ್ನೂ ಈ ವಾಙ್ಮಯದ ಮೂಲಕ ಒದಗಿಸಿ ಕೊಟ್ಟರು.

ಮೇಲೆ ಹೇಳಿದಂತೆ ದಾಸಕೂಟವು ಹದಿನಾರನೆಯ ಶತಮಾನದಲ್ಲಿ ಪ್ರಾರಂಭವಾಗಿ, ಅಂದಿನಿಂದಲೇ ದಾಸಸಾಹಿತ್ಯದ ಬೆಳವಣಿಗೆ ಪ್ರಚಾರಾದಿಗಳು ಕಂಡುಬರುತ್ತಿದ್ದರೂ, ದಾಸಸಾಹಿತ್ಯದ ಉದಯವೇನೋ ಬಹು ಪ್ರಾಚೀನಕಾಲದಲ್ಲೇ ಆಯಿತೆಂದು ಇತಿಹಾಸವು ಹೇಳುತ್ತಿದೆ. ೯ನೆಯ ಶತಮಾನದಲ್ಲೇ, ಅಚಲಾನಂದ ದಾಸರೆಂಬ ಸಾಧುವರ್ಯರೊಬ್ಬರು ಮಾಡಿದ ಕೀರ್ತನೆ*ಯೊಂ

---

*ಪಾತಕರೊಳಗೆಲ್ಲ ನಾನೆವೆಗ್ಗಳನಯ್ಯ
ಪ್ರಾಯಶ್ಚಿತ್ತಕ್ಕೆ ನಿನ್ನ ನಾಮವೆ ಘನವಯ್ಯ ॥ ಪ ॥

* * * * *

ಸುಖವಾದರೆ ತನ್ನಿಂದಾಯಿತೆಂಬೋರೊ
ದುಃಖವಾದರೆ ದೈವ ಮಾಡಿತೆಂಬೋರೊ
ಸುಖಕೆ ತಾನ್ಯಾರೊ ದುಃಖಕ್ಕೆ ತಾನ್ಯಾರೊ
ಸುಖದುಃಖವೆರಡೂ ಹರಿಯೆ ನಿನ್ನಾಧೀನ
ರುಕುಮಿಣಿಪತಿ ಅಚಲಾನಂದ ವಿಠಲ ॥ ೨ ॥

ಸಿರಿ ನಿನಗುಂಟೆಂದು ಗರ್ವಿಸಲಿ ಬೇಡ
ಸಿರಿ ಎನಗಿಲ್ಲೆಂದು ಮುನಿದು ನೋಡಲು ಬೇಡ
ಹರಿಯೆ ನಿನ್ನಂಥ ಒಡೆಯರು ಎನಗುಂಟು
ಅರುಹೊ ನಿನ್ನೊಡೆಯರ ಅಚಲಾನಂದ ವಿಠಲ ॥ ೩ ॥

ದನ್ನು ಉದಹರಿಸಿ, ಕೀರ್ತನಾಚಾರ್ಯ (ದಿವಂಗತ) ಶ್ರೀ ಬೇಲೂರು ಕೇಶವ ದಾಸರು ತಮ್ಮಿಂದ ರಚಿತವಾದ 'ಕರ್ಣಾಟಕ ಭಕ್ತವಿಜಯ' ಮಹಾಗ್ರಂಥದಲ್ಲಿ ದಾಸ ಸಾಹಿತ್ಯದ ಪ್ರಾಚೀನತೆಯನ್ನು ಪ್ರತಿಪಾದಿಸಿರುತ್ತಾರೆ. ತರುವಾಯ ಹದಿಮೂರನೆಯ ಶತಮಾನದಲ್ಲಿ—ಶ್ರೀಮನ್ಮಧ್ವಾಚಾರ್ಯರ ಶಿಷ್ಯೋತ್ತಮರಲ್ಲೊಬ್ಬರಾದ ಶ್ರೀ ನರಹರಿತೀರ್ಥರು ಸಂನ್ಯಾಸವನ್ನು ಸ್ವೀಕರಿಸಿದ್ದಾದರೂ, ಸಂಸ್ಕೃತಭಾಷಾಪಾಂಡಿತ್ಯಬಲದಿಂದ ಧರ್ಮಪ್ರಚಾರ ಮಾಡುತಿದ್ದುದರೊಂದಿಗೇ ಕನ್ನಡ ದೇವರ ನಾಮಗಳನ್ನು ರಚಿಸಿಯೂ ಜನರಿಗೆ ಧರ್ಮನೀತಿಗಳ ಉಪದೇಶ ಮಾಡುತಿದ್ದರೆಂದು ದಾಸವಾಙ್ಮಯಚರಿತ್ರೆಯು ಹೇಳುತ್ತದೆ.

ತರುವಾಯ, ಹದಿನೈದನೆಯ ಶತಮಾನದಲ್ಲಿ, ಮೈಸೂರು ಸಂಸ್ಥಾನದ ಕೋಲಾರ ಜಿಲ್ಲಾ ಮುಳುಬಾಗಿಲಿನ ಮಠಕ್ಕೆ ಅಧಿಪತಿಗಳಾಗಿ ಆಶ್ರಮಸ್ವೀಕಾರ ಮಾಡಿದ ಶ್ರೀ ಶ್ರೀಪಾದರಾಜಸ್ವಾಮಿಗಳವರ ಕಾಲದಿಂದಲೇ ದಾಸವಾಙ್ಮಯದ ಬೆಳೆವಣಿಗೆಯು ಒಂದು ಸ್ಥಿರರೂಪವನ್ನು ಹೊಂದಿತೆನ್ನಬಹುದು. ಈ ಮಹಾನುಭಾವರು ಅಗಾಧಸಂಸ್ಕೃತಪಂಡಿತರಾದರೂ, ಕನ್ನಡದ ಮೃದುಮಧುರಶೈಲಿಯಲ್ಲಿ ಅನೇಕಾನೇಕ ದೇವರ ನಾಮಗಳನ್ನು ಹಾಡಿ ಪಾಡಿ ಪಾಮರ ಜನತೆಗೆ ಮಾರ್ಗದರ್ಶಕರಾದರು. ಭಗವಂತನ ಮೇಲೆ ಭಕ್ತನ ಅವಲಂಬನೆಯು ಎಷ್ಟು ಗಾಢವಾದುದೆಂಬುದನ್ನು ವಿವರಿಸುವ ಇವರ ಒಂದು ಪದವನ್ನು ಅವರ ಲಲಿತಪದಶೈಲಿ ಮತ್ತು ಭಾವನಿರೂಪಣೆಗಾಗಿ ಈ ಕೆಳಗೆ ಕೊಡಬಯಸುತ್ತೇವೆ.

ಮಧ್ಯಮಾವತಿ—ಛಾಪು ತಾಳ.

ದುರಿತಗಜ ಪಂಚಾನನ। ನರ। ಹರಿಯೆ ದೇವರ ದೇವ ಕಾಯೊ ಗೋವಿಂದ ॥ ಪ ॥ ಮುನ್ನ ಮಾಡಿದ ಕರ್ಮ ಬೆನ್ನ ಬಿಡದಿದ್ದರೆ॥ ನಿನ್ನ ಮೊರೆಯು ಹೊಗಲ್ಯಾಕೊ ಗೋವಿಂದ ॥ ೧ ॥ ಹೆತ್ತ ಮಕ್ಕಳು ಹುಚ್ಚರಾದರೆ ತಾಯ್ತಂದೆ ॥ ಎತ್ತದೆ ನೆಲಕೆ ಬಿಸುಡುವರೆ ಗೋವಿಂದ ॥ ೨ ॥ ಒಂದು ಮೊಲಕ್ಕೆ ಆರು ಹುಲಿ ಬಂದು ಕಾದಿವೆ ॥ ಬಂಧನ ಬಿಡಿಸೆನ್ನ ತಂದೆ ಗೋವಿಂದ ॥ ೩ ॥ ಹೆಸರುಳ್ಳ ನದಿಗಳ ಒಳಕೊಂಬ ಸಮುದ್ರನು ॥ ಬಿಸುಡುವನೆ ಕಾಲು ಹೊಳೆಯು ಗೋವಿಂದ ॥ ೪ ॥ ಆಪತ್ತು ತಾಪತ್ರಯ ಬಿಡದಿದ್ದರೆ। ಶ್ರೀಪತಿ ಶರಣೆನ್ನಲ್ಯಾಕೊ ಗೋವಿಂದ ॥ ೫ ॥ ಅರಸು ಮುಟ್ಟಲು ದಾಸಿ ರಂಭೆಯಾದಳು ದೇವ। ಪರಶು ಮುಟ್ಟಲು ಲೋಹಸ್ವರ್ಣ ಗೋವಿಂದ ॥ ೬ ॥ ಮಾನಾಭಿಮಾನದೊಡೆಯ ರಂಗವಿಠ್ಠಲ। ಜ್ಞಾನಿಗಳರಸ ನೀ ಕಾಯೊ ಗೋವಿಂದ ॥ ೭ ॥

ಈ ಶ್ರೀಪಾದರಾಯರ ಶಿಷ್ಯರೇ ಶ್ರೀ ವ್ಯಾಸರಾಯಸ್ವಾಮಿಗಳು. ಈ ಮಹಾನುಭಾವರು ವಿಜಯನಗರದ ಉನ್ನತಿಯ ಪರಮಾವಧಿಗೆ ಮುಖ್ಯಕಾರಣಕರ್ತರಾಗಿ, ಆ ಮಹಾಸಂಸ್ಥಾನವನ್ನಾಳಿದ ನಾಲ್ಕೈದು ಮಂದಿ ರಾಜರಿಗೆ ಗುರುಗಳಾಗಿದ್ದರು. ಕರ್ಣಾಟಕದ ಸೌರ್ವಭೌಮ ಶ್ರೀ ಕೃಷ್ಣದೇವರಾಯನಿಗೆ ಪ್ರಾಪ್ತವಾಗಿದ್ದ ದುರಂತ ಕುಹುಯೋಗವೆಂಬ ಆಪತ್ತನ್ನು ನಿವಾರಣೆ ಮಾಡಲು ಸಿಂಹಾಸನಾರೋಹಣ ಮಾಡಿ ತಮ್ಮ ಅಪೂರ್ವಯೋಗ ಮಹಿಮೆಯನ್ನು ಪ್ರದರ್ಶಿಸಿದರು. ಪರಮಸಂತುಷ್ಟನಾದ ಆ ರಾಜ್ಯವರೇಣ್ಯರು, ಆ ಮಹಾಮಹಿಮರಿಗೆ ರತ್ನಾಭಿಷೇಕ ಮಾಡಿ ತನ್ನ ಶ್ರದ್ಧಾಭಕ್ತಿಗಳನ್ನು ಸಮರ್ಪಿಸಿದರು. ಅಖಿಲಭಾರತದಲ್ಲಿ ಹಲವು ದಿಗ್ದಂತಿಪಂಡಿತರನ್ನು ಗೆದ್ದು ಜಯಪತ್ರಿಕೆಗಳನ್ನು ಗಳಿಸಿ, ನ್ಯಾಯಾಮೃತ, ತರ್ಕತಾಂಡವ, ಚಂದ್ರಿಕೆ ಮುಂತಾದ ಅತಿ ಪ್ರೌಢಗ್ರಂಥಗಳನ್ನು ರಚಿಸಿದ ಅವರು ನೂರಾರು ಕನ್ನಡ ದೇವರ ನಾಮ ಸುಳಾದಿಗಳನ್ನೂ ರಚಿಸಿ ಕನ್ನಡ ಮಾತೆಯನ್ನು ಸೇವಿಸಿದ್ದಾರೆ.

ಇವರ ಕವಿತೆಯು ಲಲಿತಪದಪುಂಜರಂಜಿತವಾಗಿ, ಮನೋಹರವಾದ ಅರ್ಥಭಾವಗಳಿಂದೊಡಗೂಡಿ ಭಕ್ತಜನಮನೋಹ್ಲಾದಕವಾಗಿದೆ. ಉದಾಹರಣೆಗಾಗಿ ಅವರ ಒಂದೆರಡು ಪದಗಳನ್ನು ಈ ಕೆಳಗೆ ಕೊಡಬಯಸುತ್ತೇವೆ.

ಮೋಹನ—ಆದಿತಾಳ.

ಕೊಳಲನೂದುವ ಚದುರನ್ಯಾರೆ ಪೇಳಮ್ಮಯ್ಯ
ತಳಿರಂದದಿ ತಾ ಪೊಳೆವ ಕರದಿ ಪಿಡಿದು ॥ ಪ ॥

ನಾದದಿ ತುಂಬಿತು ಗೋವರ್ಧನಗಿರಿ
ಯಾದವ ಕುಲಘನ ಒರೆದಿತು ಖಗಕುಲ
ಸಾಧಿಸಿ ನೋಡಲು ಕೃಷ್ಣನು ಈಗಲೆ
ಸಾಧ್ಯವೇನೇ ಬೃಂದಾವನದೊಳು ॥ ೧ ॥

ಮೇವ ಮರೆತವು ಗೋವುಗಳೆಲ್ಲ
ಸಾವಧಾನದಲಿ ಹರಿದಳು ಯಮುನಾ
ಆವ ಕಾವುತಲಿ ಗೋವಳರೆಲ್ಲರ
ಹಾವಭಾವದಲಿ ಬೃಂದಾವನದೊಳು ॥ ೨ ॥

ಸುರರು ಸುರಿದರಾಕಾಶದಿ ಸುಮಗಳ
ಸರಿದು ಪೋಗಿ ನೋಡೆ ಬೃಂದಾವನದೊಳು
ಸಾರಿ ಸಾರಿ ಶ್ರೀಕೃಷ್ಣನು ಈಗಲೆ
ತುರುಗಳ ಕಾಯ್ವ ಕದಂಬವನದೊಳು. ॥ ೩ ॥

ನಿನ್ನ ನಾಮಸ್ಮರಣೆಯನ್ನು ನನಗೇಕೆ ಕರುಣಿಸಲಾರೆ ಎಂದು ಭಗವಂತನನ್ನು ಕೇಳಿಕೊಳ್ಳುವ ಸಂದ

ರ್ಭದಲ್ಲಿ ಅವರು ಒಂದು ಪದದಲ್ಲಿ ಹೀಗೆ ಪ್ರಾರ್ಥಿಸಿದ್ದಾರೆ.

ಹರಿ ನಿನ್ನ ನಾಮಕಾಮಧೇನುವಿಗೆ, ದುರಿತದೊಟ್ಟಿಲು ಮೇವು ಭವಾಂಬುಧಿಯು ಆರಸಿ ಕುಡಿವ ನೀರು । ಇವೆರಡೂ ಎನ್ನಲ್ಲಿ ಭರಿತವಾಗಿರೆ, ಒಲಿದು (ನಿನ್ನ ನಾಮಕಾಮಧೇನುವನು) ಎನ್ನೊಳ್ಯಾಕಿರಿಸೆ? ॥

ಮುನಿಗಳ ಮನದ ಮೊನೆಯಾದ ಕೊನೆಯಲ್ಲಿ
ಘನಭಕ್ತಿ ಪಾಶದಿ ಶಿಲುಕಲ್ಯಾಕೆ!
ಎನ್ನ ಚಿತ್ತ ಚಂಚಲದುಯ್ಯಾಲೆಯಲಿ
ನಿನ್ನ ಮನ ಬಂದಂತೆ ಓಡ್ಯಾಡಲಾಗದೆ?

ಇದರಲ್ಲಿ ತಮ್ಮ ಆರಾಧ್ಯದೈವವಾದ ಶ್ರೀಕೃಷ್ಣಸ್ವಾಮಿಯನ್ನು ಒಂದು ಕಲ್ಪತರುವಿಗೆ ಹೋಲಿಸಿ, ಆ ಕಲ್ಪವೃಕ್ಷಕ್ಕೆ ಸಹಜವೆನ್ನಿಸುವ ಶಾಖೆ, ಪರ್ಣಪಲ್ಲವ, ಕುಸುಮ ಮುಂತಾದ ಸಕಲ ವಸ್ತುಗಳನ್ನೂ ಆ ಸ್ವಾಮಿಯಲ್ಲಿ ತೋರಿಸಿ ವರ್ಣಿಸಿರುವ ಖಂಡ ಸುಳಾದಿಯಿದು—

ಕಾಮಿತ ಫಲವೀವ ಬಹು ಶಾಖೆಗಳಿಂ, ಕೋಮಲಕರಚರಣಯುಗಗಳ ಪಲ್ಲವದಿಂ, ಶ್ರೀನಾಭಿಕುಸುಮದಿಂದಾದ ಮಕರಂದದಿಂ । ಶ್ರೀಸತಿ ತನು ಕಲ್ಪಲತಾವಿಲಾಸಂಗಳಿಂ । ಶ್ರೀಶುಕಮುಖ್ಯ ದ್ವಿಜಗಣದಿಂದ ಸೊಗಸಿಪ್ಪ । ಶ್ರೀಕೃಷ್ಣಕಲ್ಪತರುವಾ ಸಾರಿದೆನಯ್ಯ ॥

ಮತ್ತೆ, ತಮ್ಮ ಆರಾಧ್ಯಮೂರ್ತಿಯನ್ನು ಒಂದು ಸರೋವರಕ್ಕೆ ಹೋಲಿಸಿದ ಸೊಬಗು ಹೀಗಿದೆ:—

ಕರುಣಾಜಲದಿಂ, ಚರಣಾಬ್ಜಗಳಿಂ, ವರನಾಭಿಸುಳಿಯಿಂ, ಪರಮಹಂಸಕುಲದಿಂ, ಮೆರೆವ ಆಗಾಧ ಸಿರಿಕೃಷ್ಣಸರೋವರದಿ ಮುಳುಗಿ ಕಳೆದೆನೋ ಭವತಾಪವ

ಶ್ರೀ ವ್ಯಾಸರಾಯಸ್ವಾಮಿಗಳವರು ಕರ್ಣಾಟಕಕ್ಕೆ ಮಾಡಿದ ಮಹದುಪಕಾರವೆಂದರೆ ಪುರಂದರಗಡದ ಚಿನಿವಾರ ಶ್ರೀನಿವಾಸಪ್ಪನಾಯಕರಿಗೆ ಅಂಕಿತ ಕೊಟ್ಟು ಪುರಂದರದಾಸರೆಂದು ಸಂಬೋಧಿಸಿ, ಅದರ ಮೂಲಕ ದಾಸಕೂಟವನ್ನು ಸ್ಥಾಪಿಸಿದ್ದು. ಶ್ರೀ ಪುರಂದರದಾಸರ ಅಗಾಧ ವೈರಾಗ್ಯ, ಜ್ಞಾನಭಕ್ತಿಗಳನ್ನು ಕಂಡು, ಪರಮ ಸಂತುಷ್ಟರಾಗಿ ಹರಿದಾಸತ್ವಕ್ಕೆ ಆವಶ್ಯಕವೆನ್ನಿಸುವ ಸಕಲ ಗುಣಗಳೂ ಅವರಲ್ಲಿ ಹೇಗೆ ಮೂರ್ತಿಗೊಂಡಂತೆ ಇದ್ದುವೆಂಬುದನ್ನು ಮನಗಂಡು—,

'ದಾಸರೆಂದರೆ ಪುರಂದರದಾಸರಯ್ಯ' ಎಂದು ಗುರುಗಳಾದ ತಾವು ತಮ್ಮ ಆ ಶಿಷ್ಯರನ್ನೇ ಪ್ರಶಂಸಿಸಿ —'ಗೀತನರ್ತನದಿಂದ ಕೃಷ್ಣನ್ನ ಪೂಜಿಸುವ ಪೂತಾತ್ಮ ಪುರಂದರದಾಸರಿವರಯ್ಯ ।' ಎಂದು ವರ್ಣಿಸಿ, ಅವರ ಮೂಲಕ ದಾಸಕೂಟವೆಂಬ ಮಹಾಸಂಸ್ಥೆಯನ್ನು ರಚಿಸಿದರು. ಶ್ರೀ ಪುರಂದರದಾಸರು, ದಾಸವೃಂದದಲ್ಲಿ ಶಿರೋಮಣಿಪ್ರಾಯರು. ಈ ವರೆಗೆ ಒಬ್ಬರಿಬ್ಬರು ನಾಲ್ಕಾರು ದೇವರನಾಮಗಳನ್ನು ನುಡಿದಿರಬಹುದು. ಆದರೆ ಇವರ ಕಾಲದಲ್ಲಿ 'ದಾಸಸಾಹಿತ್ಯ'ವೆಂಬ ಒಂದು ವಾಙ್ಮಯಶಾಖೆಯೇ ನಿರ್ಮಿತವಾಗಿ ಆಸ್ತಿಕ ಜನತೆಗೊಂದು ಕಲ್ಪವೃಕ್ಷವೇ ದೊರಿತಂತಾಯಿತು.

ದಾಸಸಾಹಿತ್ಯವು ಕರ್ಣಾಟಕ ಕಲೆಸಾಹಿತ್ಯಗಳ ಅಭಿವೃದ್ಧಿಗೆ ಏನುಪಕಾರ ಮಾಡಿದೆ ಎಂಬ ಪ್ರಶ್ನೆ ಬಂದರೆ, ಆ ಸಂದರ್ಭದಲ್ಲಿ ಹೇಳಬೇಕಾದ ಮಾತುಗಳು ಒಂದೆರಡುಂಟು. ಸಾಹಿತ್ಯಾಭಿಮಾನಿಗಳು ಕೆಲವರು, ದಾಸರು ನುಡಿದ ಹತ್ತು ದೇವರನಾಮ ಸುಳಾದಿ ಉಗಾಭೋಗಗಳು ಸಾಹಿತ್ಯವಾಗಬಲ್ಲುವೆ? ಇದನ್ನು ಸಾಹಿತ್ಯಸೇವೆ ಎನ್ನಲಾದೀತೆ? ಎನ್ನಬಹುದು; ಸಂಗೀತ ಕಲಾನಿಪುಣರು ಕೆಲವರು, ದೇವರನಾಮ ಸುಳಾದಿಗಳು ಸಂಗೀತಕಲೆಯ ಮಟ್ಟಕ್ಕೆ ಏರಬಲ್ಲುವೆ? ಎಂದು ಪರಿಹಾಸ ಮಾಡಬಹುದು. ಆದರೆ ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶಿಸುವವರಿಗೆ ಮಾತ್ರ, ದಾಸರಾಯರು ರಚಿಸಿ ಕೊಟ್ಟ ಈ ವಾಙ್ಮಯವು ಹೇಗೆ ಉತ್ತಮವಾದ ಸಾಹಿತ್ಯವಾಗಿಯೂ ಕಲೆಯಾಗಿಯೂ ಜನತೆಯ ಉದ್ಧಾರಕ್ಕೆ ಕಾರಣವಾಯಿತು ಎಂಬ ವಿಚಾರ ಗೋಚರವಾದೀತು!

ಜನಾಂಗದಲ್ಲಿ ರಾಗದ್ವೇಷಗಳನ್ನೂ ಕಾಮಮೋಹ ಮದಮಾತ್ಸರ್ಯಾದಿಗಳನ್ನೂ ಬೆಳೆಸುವ ಪುಸ್ತಕ ರಾಶಿಗಳನ್ನು ಬೆಳೆಸಿದರೆ ಅದನ್ನು ಸಾಹಿತ್ಯಸೇವೆ ಎನ್ನಬಹುದೆ? ದಾಸಕೂಟದವರು ರಚಿಸಿದ ಈ ವಾಙ್ಮಯವಾದರೋ, ಜನಾಂಗದಲ್ಲಿ ಸ್ನೇಹಪ್ರೇಮಐಕ್ಯಮತ್ಯ ಇವುಗಳನ್ನು ಬೆಳೆಸಲು ಸಾಧಕವಾದ ನೀತಿಧರ್ಮಗಳ ಆಧಾರವನ್ನೊಳಗೊಂಡು, ಭಕ್ತಿಜ್ಞಾನವೈರಾಗ್ಯವರ್ಧಕವಾದ ಫಲಪುಷ್ಪಗಳ ಅಮೂಲ್ಯ ಕಲ್ಪವೃಕ್ಷಗಳನ್ನೇ ಬೆಳೆಸಿ ಪೋಷಿಸಿತು. ಸಾಹಿತಿಗಳೆಂದು ಬೀಗುವ ಹಲವು ಮಂದಿ, ಈಚಲು, ಜಾಲಿ, ಬೂರಗ, ಬಸಲೆ ಮುಂತಾದ ನಿಷ್ಫಲ ನೀರಸವೃಕ್ಷಗಳನ್ನು ಬೆಳೆಸಿ, ಸಾಹಿತ್ಯಕ್ಷೇತ್ರವನ್ನು ದುರ್ಗಮವೆನ್ನಿಸಿದ್ದಾರೆ. ದಾಸರಾಯರು ಅದೇ ಕ್ಷೇತ್ರದಲ್ಲಿ ಮಾವು, ಹಲಸು, ತೆಂಗು,

ಬಾಳೆ, ನೇರಳೆ–ಸಂಪಗೆ, ಪಾದರಿ ಮುಂತಾದ ಮಧುರ ಫಲ-ಪುಷ್ಪಗಳ ವೃಕ್ಷಗಳನ್ನು ಬೆಳೆಸಿ ಜನಾಂಗಕ್ಕೆ ಇಹ ಪರಸಾಧಕಗಳಾದ ಪುಷ್ಟಿತುಷ್ಟಿಗಳನ್ನು ಗಳಿಸಿಕೊಟ್ಟರು.

ಸಂಗೀತಕಲಾ ವಿಷಯದಲ್ಲಂತೂ ಪುರಂದರ ದಾಸರಾಯರ ಸೇವೆ ಅಮೂಲ್ಯವಾದುದು; ಅಗಾಧವಾದುದು. ಕರ್ಣಾಟಕ ಸಂಗೀತಪದ್ಧತಿಗೆ ಶ್ರೀ ಪುರಂದರ ದಾಸರೇ ಜನಕರೆಂದು ಸುಪ್ರಸಿದ್ಧರಾಗಿದ್ದಾರೆ. ದಕ್ಷಿಣ ಭಾರತದಲ್ಲಿ ಪ್ರಚಾರದಲ್ಲಿರುವ ಗಾನವೆಲ್ಲ, ಅದು ತಮಿಳಾಗಲಿ, ತೆಲುಗು ಭಾಷೆಯಲ್ಲಿರಲಿ ಅದನ್ನು ಕರ್ಣಾಟಕ ಸಂಗೀತವೆಂದು ಕರೆಯುವುದೇ ರೂಢಿಯಾಗಿದೆ. ಈ ಮಹಾನುಭಾವರು, 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೊ । ಹರಿಯ ಕರುಣದೊಳಾದ ಭಾಗ್ಯವ ಹರಿಸಮರ್ಪಣೆ ಮಾಡಿ ಬದುಕಿರೊ' ಎಂಬೀ ಸ್ವರಾವಳಿಗಳಿಂದ ಪ್ರಾರಂಭಿಸಿ, ಅನೇಕ ಗಹನ ರಾಗಗಳನ್ನೂ ಬಹು ತಾಳಗತಿಗಳಿಂದ ಗಂಭೀರವಾದ ಸುಳಾದಿಗಳನ್ನೂ ರಚಿಸಿದ್ದಾರೆ. ಮದರಾಸಿನ "ಮ್ಯೂಸಿಕ್ ಅಕ್ಯಾಡೆಮಿ"ಯವರು ೧೯೪೨ನೆಯ ಸಂ।ರದ ತಮ್ಮದೊಂದು ತ್ರೈಮಾಸಿಕದಲ್ಲಿ ಶ್ರೀ ಪುರಂದರದಾಸರ ಸಂಗೀತ ಮತ್ತು ಸಾಹಿತ್ಯಸೇವೆಗಳನ್ನು ಪ್ರಶಂಸೆ ಮಾಡಿ ಬರೆದಿರುವ ಕೆಲ ವಿಚಾರಗಳನ್ನು ಪ್ರಾಜ್ಞರು ಪರಿಭಾವಿಸಬೇಕು.

The personality of Sri Purandara Das is the greatest that a Combination of spirituality, art and culture has produced. In the realm of Music his services are beyond estimate. He is the father of the Karnataka system of music, which stands unparalled as most evolved system of music in the world. His compositions range from the simplest swaravalis and gitas to the eloborate and comple suladis. His language is poetic beyond description adorned with rich imaginary and pithy sayings. His parables and allegorical utterances have all the facination and depth of the scriptures. As a teacher of mankind inculcating the greatest truths of Hindu Dharma he is second to none.

ಎಂಬುದಾಗಿ ಅವರ ಸಂಗೀತಸಾಹಿತ್ಯಗಳ ಮಹೌನ್ನತ್ಯ ಸ್ಥಾನವನ್ನು ವರ್ಣಿಸಿ, ಕೊನೆಯಲ್ಲಿ ಅವರನ್ನು ಕರ್ಣಾಟಕಸಂಗೀತಪದ್ಧತಿಗೆ ಜನಕರೆಂಬ ಲೋಕವಾರ್ತೆಯನ್ನು ದೃಢಪಡಿಸಿದ್ದಾರೆ—

Purandara Das has been justly termed as the father of Carnatic Music. He was not merely a composer but a Lakshanakara of the highest calibre. The system of South Indian music as we now have it is entirely his gift.

ಎಂದು ಒತ್ತಿ ಹೇಳಿದ್ದಾರೆ. ಹೀಗೆ ಶ್ರೀ ಪುರಂದರದಾಸರ ಕಾಲದಿಂದೀಚೆಗೇ ಕರ್ಣಾಟಕಗಾನಕಲೆಯು ಒಂದು ವ್ಯವಸ್ಥಿತ ವಿಶ್ವಮಾನ್ಯಮಾರ್ಗವನ್ನನುಸರಿಸಿ ಪ್ರಸಿದ್ಧಿಗೆ ಬಂದಿತೆಂಬುದು, ಕೇವಲ ಅಭಿಮಾನಿಗಳು ಹೇಳಿಕೊಳ್ಳುವ ರೂಢಿಯ ಮಾತಲ್ಲ—ವಿದ್ವಾಂಸರಿಂದ ಒಪ್ಪಿತವಾಗಿ ಮನ್ನಿಸಲ್ಪಟ್ಟ ವಿಚಾರವಾಗಿದೆ.

ಶ್ರೀ ಪುರಂದರದಾಸರಾಯರೂ, ತರುವಾಯ ಬಂದ ಇತರ ಅನೇಕ ಮಂದಿ ದಾಸರುಗಳೂ ಲೋಕಕ್ಕೆ ಮಾಡಿದ ಮಹೋಪಕಾರವನ್ನು ಬಾಯಿಂದ ಹೇಳಿ ಮುಗಿಸುವಂತಿಲ್ಲ. ಲೌಕಿಕಭೋಗಭಾಗ್ಯಗಳ ಸಂಪಾದನೆ, ಅದಕ್ಕಾಗಿ ಕಾಮಕ್ರೋಧಾದಿಗಳ ಬೆಳೆವಣಿಗೆ ಅಲ್ಲದೆ ನಿರಂತರದ ಜೀವನಸಂಗ್ರಾಮ ಈ ಹೋರಾಟದಲ್ಲಿ ಬಳಲಿ ಬೆಂಡಾಗಿ, ಮರುಭೂಮಿಯಂತಾಗಿದ್ದ ಮನುಷ್ಯನ ಹೃದಯಕ್ಷೇತ್ರವನ್ನು ಮೃದುಗೊಳಿಸಿ ಫಲವತ್ತಾಗಿಸಿ ಅದರಲ್ಲಿ ಭಗವನ್ನಾಮಬೀಜಗಳನ್ನು ಬಿತ್ತಿ ತನ್ಮೂಲಕ ಮನುಷ್ಯಪ್ರಾಣಿಯು ಧರ್ಮ ಮತ್ತು ಮೋಕ್ಷಗಳನ್ನು ಗಳಿಸಿಕೊಳ್ಳಲು ಸಾಧನಗಳನ್ನು ಕಲ್ಪಿಸಿಕೊಟ್ಟ ಈ ಮಹಾನುಭಾವರ ಉಪಕಾರವನ್ನು ಎಷ್ಟೆಂದು ಹೊಗಳಬಹುದು! ಯಾವ ರೀತಿಯಿಂದ ತೀರಿಸಲು ಸಾಧ್ಯವುಂಟು?

ಮನುಷ್ಯನು ಗಳಿಸಬಹುದಾದ ಭಾಗ್ಯಗಳೊಳಗೆಲ್ಲ, ಭಗವಂತನ ಅನುಗ್ರಹವನ್ನು ಗಳಿಸುವಿಕೆಯೇ ಪರಮಭಾಗ್ಯವೆಂಬುದನ್ನು 'ಇದು ಭಾಗ್ಯ ಇದು

ಭಾಗ್ಯ ಇದು ಭಾಗ್ಯವಯ್ಯಾ । ಪದುಮನಾಭನ ಪಾದ ಭಜನೆ ಸುಖವಯ್ಯಾ ।' ಎಂದು ನುಡಿದು ತೋರಿಸಿದ್ದಾರೆ.

ಪುಣ್ಯಸಾಧನೆಗೂ, ಸದ್ಗತಿಯ ಪ್ರಾಪ್ತಿಗೂ ಮಾನವಜನ್ಮವೇ ಶ್ರೇಷ್ಠವಾದುದೆಂದು,—'ಮಾನವ ಜನ್ಮ ದೊಡ್ಡದು; ಇದ ಹಾನಿಮಾಡಲಿ ಬೇಡಿ ಹುಚ್ಚಪ್ಪಗಳಿರಾ' ಎಂಬೊಂದು ಪದದಲ್ಲಿ ಬೋಧಿಸಿದ್ದಾರೆ.

'ಸತ್ಯವೆಂಬುದೆ ಸ್ನಾನ, ಉಪವಾಸ, ಜಪನೇಮ । ಅಸತ್ಯದಲಿ ಮಾಡುವ ಕರ್ಮ ವ್ಯರ್ಥ' ಎಂಬುದಾಗಿ ನುಡಿದು, ದೇಹಶುದ್ಧಿ ಮಾತ್ರವೇ ಸ್ನಾನವಲ್ಲ; ಸತ್ಯ ಶೌಚಾದಿಗಳಿಂದ ಶುದ್ಧಿಗೊಂಡ ಆತ್ಮಶುದ್ಧಿಯೇ ನಿಜವಾದ ಸ್ನಾನ ಎಂಬುದನ್ನು ತಿಳಿಯ ಹೇಳಿದ್ದಾರೆ.

ಹೀಗೆಯೇ, ಮಡಿ ಎಂದರೇನು, ವೈರಾಗ್ಯವೆಂಬುದನ್ನು ಹೇಗೆ ಆಚರಿಸಬೇಕು ಎಂಬುದನ್ನೂ, ಸಾತ್ವಿಕ ಜೀವನವನ್ನು ಬೆಳೆಸಲು, ಮನುಷ್ಯನು ಸಂಸಾರವನ್ನು ಬಿಟ್ಟು ಓಡಿ ಹೋಗಬೇಕಾಗಿಲ್ಲ, ಸಂಸಾರದಲ್ಲಿದ್ದೇ, 'ತಾಮರಸ ಜಲದಂತೆ ಪ್ರೇಮವಿಟ್ಟು ಭವದೊಳು' 'ಈಸಬೇಕು ಇದ್ದು ಜೈಸಬೇಕು' ಎಂದರು. ಮತ್ತು 'ಗೇರು ಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ, ಈಸಬೇಕು ಇದ್ದು ಜೈಸಬೇಕು' ಎಂದು ಬೋಧಿಸಿದರು.

ವಿಷಯನಿರಾಕಣೆಯ ವಿಚಾರವನ್ನು ಹೇಳುತ್ತ ಶ್ರೀ ಪುರಂದರದಾಸರು, 'ವಿಷಯದ ವಿಚಾರ ಬಿಡು' ವಿಹಿತಕರ್ಮವ ಮಾಡು, ವೈರಾಗ್ಯಭಾಗ್ಯ ಬೇಡು" ಎಂಬ ಪದದಲ್ಲಿ ಸೂತ್ರರೂಪವಾಗಿ ಅನೇಕ ವಿಚಾರಗಳನ್ನು ಬೋಧಿಸಿದ್ದಾರೆ. ಈ ವಿಷಯವನ್ನು ಕುರಿತೇ ವಿವರಿಸುತ್ತ ಶ್ರೀ ಗೋಪಾಲದಾಸರು, 'ಇಂದ್ರಿಯಂಗಳನಿತ್ತೆ, ಆದರೆ ವಿಷಯಂಗಳಿತ್ತೆ । ಒಂದರ ಸಾಧನ ಒಂದಕ್ಕಾಗಿದೆಯಯ್ಯ!' ಎಂದು ಹೇಳುತ್ತ ನಿನ್ನ ದರ್ಶನಕ್ಕೆಂದು ನಿನ್ನ ಚರಿತ್ರಶ್ರವಣಕ್ಕೆಂದು, ನಿನ್ನ ಕೀರ್ತನೆಗೆಂದು, ನಿನ್ನ ಸೇವೆಗೆಂದು ಉಪಯೋಗಿಸಬೇಕಾದ ಕಣ್ಣುಗಳು, ಕಿವಿಗಳು, ನಾಲಗೆ ಕೈಕಾಲುಗಳನ್ನು ಸ್ವಾರ್ಥವನ್ನು ಹೆಚ್ಚಿಸಿಕೊಳ್ಳಲಿಕ್ಕೂ, ನರಸ್ತುತಿ ಪರಸೇವೆ ಮುಂತಾದುವುಗಳಿಗೂ ಉಪಯೋಗಿಸಿ ವ್ಯರ್ಥ ಮಾಡಿಕೊಂಡೆನಲ್ಲಾ ಎಂದು ವಿಷಾದವನ್ನು ಸೂಚಿಸುತ್ತ ಹೀಗೆ 'ಮದುವೆಯಾಗುವುದಕ್ಕೆ ಮಾಡಿದ ಸಾಧನ । ವಧೆಯ ನಂತರ ಉತ್ತರ ಕ್ರಿಯಕ್ಕಾದಂತೆ' ನನಗೆ (ಮನುಷ್ಯ ಪ್ರಾಣಿಗೆ) ಸತ್ಸಾಧನೆ ಮಾಡಿಕೊಂಡು ಸದ್ಗತಿ ಹೊಂದಲಿ ಎಂದು ದಯಮಾಡಿ ಕೊಟ್ಟ ಕರಚರಣಾದಿಗಳೂ ಪಂಚೇಂದ್ರಿಯಗಳೂ ದುರುಪಯೋಗಗೊಳಿಸಲ್ಪಟ್ಟು ದುರ್ಗತಿ ಹೊಂದಲು ಸಹಕಾರಿಗಳಾದುವಲ್ಲಾ ಎಂದು ಮರುಗಿದ್ದಾರೆ.

ಇಂತಹ ಸರ್ವಶ್ರೇಷ್ಠವಾದ ಮಾನವಜನ್ಮವನ್ನು ಪಡೆದಿದ್ದಾಗ ಪರಸಾಧನ ಮಾಡಿಕೊಳ್ಳದೆ, ಇತರ ಜನ್ಮಗಳಲ್ಲಿ ಸಾಧ್ಯವಿಲ್ಲವೆಂಬುದನ್ನು ತಮ್ಮದೊಂದು ಉಗಾಭೋಗದಲ್ಲಿ—

'ಕ್ರಿಮಿಕೀಟನಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ,
ಹರಿಹರಣನಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ,
ಕತ್ತೆ ಕರಡಿಯಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ,
ಹಂದಿ ಶುನಕನಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ,
ಮರೆತೀಯೆ ಮಾನವ, ನಿನ್ನ ಹಿಂದಿನ ಭವಗಳನೊಂದು
ಮಾನವಜನ್ಮ ಬಂದಿತೊ ನಿನಗೀಗ, ಬೇಗ ನೆನೆಯೆಲೊ
ಪುರಂದರ ವಿಠಲ ರಾಯನ.'

ಶ್ರೀ ಪುರಂದರದಾಸರು ಹೊಲೆಯ-ಹೊಲತಿ ಈ ವಿಷಯವನ್ನು ಕುರಿತು ಹೇಳುತ್ತ ಜಾತಿಹೊಲೆಯನಿಗಿಂತ ನೀತಿಹೊಲೆಯನೇ ಕನಿಷ್ಠನು ಎಂಬುದನ್ನು ಸಮರ್ಥಿಸಲು 'ಹೊಲೆಯ ಹೊರಗಿಹನೆ, ಊರೊಳಗಿಲ್ಲವೆ?' ಎಂಬ ಪದವನ್ನು ಹಾಡಿ, ಅದರಲ್ಲಿ ಮನಸ್ಸಿನ ಹೊಲೆತನವೇ ಬಹು ನೀಚವಾದುದೆಂದು ಅಪ್ಪಣೆ ಕೊಡಿಸಿದ್ದಾರೆ—ಮತ್ತು ಮನಶ್ಶುದ್ಧಿಯ ಆವಶ್ಯಕತೆಯನ್ನು ಒತ್ತಿ ಹೇಳುತ್ತ

'ಬೇವಿನ ಬೀಜ ತಂದು, ಬೆಲ್ಲದ ಕಟ್ಟೆಯ ಕಟ್ಟಿ,
ಜೇನು ಮಳೆಗರೆದರೆ ವಿಷ ಹೋಗುವುದೇನಯ್ಯ,
ಏನು ಓದಿದರೇನು, ಏನು ಕೇಳಿದರೇನು
ಮನದೊಳಗಿನ ತಾಮಸ ಬಿಡುವದನಕ—ಕೊಳಲದನಿಗೆ
ಸರ್ಪ ತಲೆದೂಗುವಂದದಲಿ, ಎನ್ನೊಡೆಯ ಕೇಳು
ಪುರಂದರವಿಠಲ ॥'

ಎಂಬುದಾಗಿ ಒಂದು ಉಗಾಭೋಗದಲ್ಲಿ ಅಪ್ಪಣೆ ಕೊಡಿಸಿದ್ದಾರೆ.

ಶ್ರೀ ಕನಕದಾಸರ ಕವಿತಾಶೈಲಿಯೂ ಸುಮನೋಹರವಾದುದು; ಮಾತ್ರವಲ್ಲ, ಗಹನವಾದುದು; ಅರ್ಥಪೂರ್ಣವಾದುದು. ಭಗವಂತನು ಹೇಗೆ ವಿಶ್ವವ್ಯಾಪಿಯಾಗಿದ್ದಾನೆಂಬುದನ್ನು ಅವರು ವರ್ಣಿಸುತ್ತಾ, ಆತನ ಮಾಯೆಯು ಎಷ್ಟು ಗಹನವಾದುದು, ಮನಸ್ಸಿನಿಂದ

ಭಾವಿಸುವುದಕ್ಕೂ ಅಸಾಧ್ಯವಾದುದು ಎಂಬುದನ್ನು 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ । ನೀದೇಹದೊಳಗೊ ನಿನ್ನೊಳು ದೇಹವೋ' । ಎಂಬೊಂದು ಪದದಲ್ಲಿ ಬಹು ಚಮತ್ಕಾರವಾಗಿ ವರ್ಣಿಸಿದ್ದಾರೆ.

''ಬಯಲು ಆಲಯದೊಳಗೊ, ಆಲಯವು ಬಯಲೊಳಗೊ
ಬಯಲು ಆಲಯವೆರಡು, ನಯನದೊಳಗೊ ।'
''ಸವಿಯು ಸಕ್ಕರೆಯೊಳಗೊ, ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ರಸನೆಯೊಳಗೋ''
''ಕುಸುಮದೊಳು ಗಂಧವೋ, ಗಂಧದೊಳು ಕುಸುಮವೋ,
ಕುಸುಮಗಂಧಗಳೆರಡು ಘ್ರಾಣದೊಳಗೊ'

ಈ ವಿಚಾರವು ಒಂದು ಒಗಟಿನಂತಿದ್ದು ಎಷ್ಟು ಯೋಚಿಸಿದರೂ ಬಗೆಹರಿಯದಂತೆ, ಭಗವಂತನ ಮಾಯೆಯು ಜಗತ್ತನ್ನು ಹೇಗೆ ವ್ಯಾಪಿಸಿದೆ ಎಂಬುದನ್ನು ತಿಳಿಸುತ್ತದೆ.

"ಎಲ್ಲಿಂದ ಬಂದೆ ಮುಂದೆತ್ತ ಪೈಣ । ಇಲ್ಲಿ ನಿನಗೆಷ್ಟು ದಿನವಾಲಸ್ಯ ಮರುಳೆ ।" ಎಂಬೀ ಕೃತಿಯಲ್ಲಿ ಮನುಷ್ಯಜನ್ಮದ ಅಸ್ಥಿರತೆ ಮುಂತಾದುವುಗಳನ್ನು ಮನಮುಟ್ಟುವಂತೆ ವರ್ಣಿಸುತ್ತಾರೆ. ಇವರಿಂದ ರಚಿತವಾಗಿರುವ 'ಹರಿಭಕ್ತಿಸಾರ' ಎಂಬ ಭಾಮಿನೀಷಟ್ಪದಿಯ ಶತಕವು, ಬಹುಕಾಲದ ವರೆಗೆ ನಮ್ಮ ನಾಡಿನಲ್ಲಿ ಬಾಲಕರು ಬಾಯಿಪಾಠ ಮಾಡಿ ಶ್ರದ್ಧಾಭಕ್ತಿಗಳನ್ನು ಗಳಿಸಿಕೊಳ್ಳಲು ಸಾಧನವಾಗಿತ್ತು.

''ಗೋಪುರದ ಭಾರವನು ಗಾರೆಯು । ರೂಪು ತೋರಿದ ಪ್ರತಿಮೆಯಂದದಿ । ಈ ಪರಿಯು ಸಂಸಾರಭಾರವನಾರು ತಾಳುವರು!' ''ಬೀಜವೃಕ್ಷದೊಳಾಯ್ತು ವೃಕ್ಷಕೆ । ಬೀಜವಾರಿಂದಾಯ್ತು ಲೋಕದಿ । ಬೀಜವೃಕ್ಷನ್ಯಾಯವಿದ ಭೇದಿಸುವರ್ಯಾರಿನ್ನು''

ಎಂಬೀ ಬಗೆಯ ಹಲವು ಗಹನತತ್ವಗಳನ್ನು ಈ ಶತಕದಲ್ಲಿ ನಿರೂಪಿಸಿದ್ದಾರೆ.

ಶ್ರೀ ಪುರಂದರದಾಸರು ವಿಜಯನಗರಸಾಮ್ರಾಜ್ಯವು ತಾಳೀಕೋಟೆಯ ದುರಂತ ಯುದ್ಧದಲ್ಲಿ ನಿರ್ನಾಮವಾಗುವುದಕ್ಕೆ ಒಂದು ವರ್ಷಕ್ಕೆ ಹಿಂದೆ, ಎಂದರೆ ೧೫೬೪ನೆಯ ಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆಯ ದಿನ ವೈಕುಂಠವಾಸಿಗಳಾದರೆಂದು ದಾಸಸಾಹಿತ್ಯಚರಿತ್ರೆಯಲ್ಲಿ ಉಲ್ಲೇಖವಿದೆ. ಇವರ ತರುವಾಯ ೧೫೦ ವರ್ಷಗಳ ಮೇಲೆ ಶ್ರೀ ವಿಜಯದಾಸರೆಂಬ ಮಹಾನುಭಾವರು ಜನ್ಮಗೊಂಡು, ಇವರಂತೆಯೇ ಸುಲಲಿತಪದಪುಂಜರಂಜಿತವಾದ ಅನೇಕಾನೇಕ ಪದಸುಳಾದಿಉಗಾಭೋಗಗಳನ್ನು ರಚಿಸಿ ದಾಸಸಾಹಿತ್ಯಭಂಡಾರವನ್ನು ಬೆಳಗಿಸಿದರು. ಇವರ ಶಿಷ್ಯಪ್ರಶಿಷ್ಯರು ಹಲವು ಮಂದಿ ಕರ್ಣಾಟಕದಲ್ಲಿ ಈ ಧಾರ್ಮಿಕವಾಙ್ಮಯವನ್ನು ಬೆಳೆಸಿ ಜನತೆಯಲ್ಲಿ ಆಸ್ತಿಕಭಾವವನ್ನು ನೆಲೆಗೊಳಿಸಿದರು.

ಪುಣ್ಯಶೀಲರಾದ ಈ ದಾಸವರ್ಯರು ನಡೆಯಿಸಿದ ಈ ಪವಿತ್ರವಾಙ್ಮಯಸೇವೆಯು ನಶಿಸಿ ಹೋಗದಂತೆ, ಕನ್ನಡಿಗರು ಅವುಗಳನ್ನು ಶ್ರದ್ಧಾಪೂರ್ವಕ ಸಂಗ್ರಹಿಸಿ, ಪ್ರಕಟಿಸಿ ತನ್ಮೂಲಕ ಈ ವಾಙ್ಮಯನಿಧಿಯು ನಮ್ಮ ನಾಡಿನಲ್ಲಿ ಉದಯಿಸುವ ಹಲವು ತಲಾಂತರಗಳವರ ಲೌಕಿಕಪಾರಲೌಕಿಕಜೀವಿತಗಳನ್ನು ಸಾರ್ಥಕಗೊಳಿಸಲೂ, ನೀತಿಧರ್ಮಜ್ಞಾನಭಕ್ತಿವೈರಾಗ್ಯಗಳ ದಿವ್ಯಜ್ಞಾನತರಂಗಿಣಿಯನ್ನು ಪ್ರವಹಿಸುವಂತೆ ಮಾಡಲೂ ಭಾಷಾಭಿಮಾನಿಗಳು ಶ್ರಮಿಸತಕ್ಕದು ಕರ್ತವ್ಯವಲ್ಲವೆ ಎಂದು ನಮ್ರತೆಯಿಂದ ವಿಜ್ಞಾಪಿಸಿ, ಈ ಚಿಕ್ಕ ಲೇಖನವನ್ನು ಸಮಾಪ್ತಗೊಳಿಸುತ್ತೇನೆ.



ಜೈನ ವಾಸ್ತು ಮತ್ತು ಮೂರ್ತಿ ಕಲೆ

ವಿದ್ಯಾಭೂಷಣ ಕೆ. ಭುಜಬಲಿ ಶಾಸ್ತ್ರಿ, ಮೂಡಬಿದ್ರಿ.

ಯಾವ ಗುಣ ಅಥವಾ ಕೌಶಲದಿಂದ ಯಾವುದಾದರೊಂದು ವಸ್ತುವಿನಲ್ಲಿ ಉಪಯೋಗಿತೆ ಮತ್ತು ಸೌಂದರ್ಯವು ಬರುವುದೋ ಅದಕ್ಕೆ ಕಲೆಯೆಂದು ಹೆಸರು. ಕಲೆಯ ಭೇದಗಳು ಎರಡು, ಒಂದು ಉಪಯೋಗಿಕಲೆ, ಇನ್ನೊಂದು ಲಲಿತಕಲೆ. ಉಪಯೋಗಿಕಲೆಯಲ್ಲಿ ಬಡಗಿ, ಅಕ್ಕಸಾಲಿಗ, ಕಮ್ಮಾರ, ಕುಂಬಾರ ಮತ್ತು ಸಾಲಿಗ ಮೊದಲಾದವರ ವ್ಯವಸಾಯವೂ, ಲಲಿತಕಲೆಯಲ್ಲಿ ವಾಸ್ತುಕಲೆ, ಮೂರ್ತಿಕಲೆ, ಚಿತ್ರಕಲೆ, ಸಂಗೀತಕಲೆ ಮತ್ತು ಕಾವ್ಯಕಲೆ ಇವು ಐದೂ ಅಂತರ್ಗತವಾಗಿವೆ. ಉಪಯೋಗಿಕಲೆಗಳ ಮೂಲಕ ಮನುಷ್ಯನ ಆವಶ್ಯಕತೆಗಳ ಪೂರ್ತಿಯೂ ಲಲಿತಕಲೆಗಳ ಮೂಲಕ ಅವನ ಅಲೌಕಿಕಆನಂದದ ಸಿದ್ಧಿಯೂ ಆಗುವುದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಇವೆರಡೂ ಮನುಷ್ಯನ ಉನ್ನತಿ ಮತ್ತು ವಿಕಾಸದ ದ್ಯೋತಕಗಳು. ಒಂದು ಮಾತು; ಇವುಗಳಲ್ಲಿ ಒಂದರ ಸಂಬಂಧವು ಮನುಷ್ಯನ ಶಾರೀರಿಕ ಹಾಗೂ ಆರ್ಥಿಕ ಉನ್ನತಿಯೊಡನೆಯೂ ಇನ್ನೊಂದರದು ಅವನ ಮಾನಸಿಕ ವಿಕಾಸದೊಡನೆಯೂ ಇರುವುದು.

ಲಲಿತಕಲೆಗಳು ಎರಡು ಮುಖ್ಯ ಭಾಗಗಳಲ್ಲಿ ವಿಭಾಗಿಸಲ್ಪಡಬಲ್ಲುವು. ಇವುಗಳಲ್ಲಿ ಒಂದು ನೇತ್ರಗಳ ಮೂಲಕ ಮಾನಸಿಕ ತೃಪ್ತಿಯನ್ನೂ ಇನ್ನೊಂದು ಕರ್ಣಗಳ ಮೂಲಕ ಆ ತೃಪ್ತಿಗೆ ಸಹಾಯವನ್ನೂ ಉಂಟುಮಾಡುವುದು. ಹೀಗೆ ವಾಸ್ತು, ಮೂರ್ತಿ ಮತ್ತು ಚಿತ್ರಕಲೆಗಳು ನೇತ್ರಗಳ ಮೂಲಕವಾಗಿಯೂ ಸಂಗೀತ ಮತ್ತು ಶ್ರವ್ಯಕಾವ್ಯಗಳು ಕರ್ಣಗಳ ಮೂಲಕವಾಗಿಯೂ ತೃಪ್ತಿಯನ್ನು ಕೊಡುತ್ತವೆ. ಮೊದಲನೆಯ ಕಲೆಗೆ ಯಾವುದಾದರೊಂದು ಮೂರ್ತ ಆಧಾರವೂ ಬೇಕು. ಆದರೆ ಎರಡನೆಯ ಕಲೆಗೆ ಅದು ಅಷ್ಟೊಂದು ಅಗತ್ಯವಿಲ್ಲ. ಈ ಮೂರ್ತ ಆಧಾರದ ಮಾತ್ರೆಯನನುಸರಿಸಿಯೇ ಲಲಿತಕಲೆಗಳ ಶ್ರೇಣಿಗಳು ಉತ್ತಮ ಮತ್ತು ಮಧ್ಯಮ ಹೀಗೆ ಸ್ಥಿರಮಾಡಲ್ಪಟ್ಟುವು. ಯಾವ ಕಲೆಯಲ್ಲಿ ಮೂರ್ತ ಆಧಾರವು ಎಷ್ಟು ಕಡಿಮೆಯಾಗಿರುತ್ತದೆಯೋ ಅದು ಅಷ್ಟೇ ಉಚ್ಚ ಕೋಟಿಯ ಕಲೆಯಲ್ಲಿ ಪರಿಗಣಿಸಲ್ಪಡುವುದು. ಆದುದರಿಂದ ಕಾವ್ಯಕಲೆಗೆ ಸರ್ವೋಚ್ಚಸ್ಥಾನವು ಪ್ರಾಪ್ತವಾಗಿದೆ. ಏಕೆಂದರೆ ಅದರಲ್ಲಿ ಮೂರ್ತ ಆಧಾರವು ಒಂದು ಪ್ರಕಾರದಲ್ಲಿ ಇಲ್ಲವೇ ಇಲ್ಲ. ಈ ನಿಯಮದಂತೆ ವಾಸ್ತುಕಲೆಗೆ ಎಲ್ಲವಕ್ಕಿಂತ ನಿಮ್ನ ಸ್ಥಾನವು ಸಿಕ್ಕಿದೆ. ಮೂರ್ತ ಆಧಾರದ ವೈಶಿಷ್ಟ್ಯದ ಹೊರತು ಇದರ ಅಸ್ತಿತ್ವವೇ ಅಸಂಭವವಾಗಿದೆ.

ಅನಂತರ ಎರಡನೆಯ ಸ್ಥಾನವು ಮೂರ್ತಿಕಲೆಗೆ ದೊರೆತಿದೆ. ಅದರ ಆಧಾರವೂ ಮೂರ್ತವೇ ಆಗಿದೆ. ಆದರೆ ಮೂರ್ತಿಕಾರನು ಯಾವುದಾದರೊಂದು ಧಾತು ಅಥವಾ ಶಿಲೆಯ ಖಂಡಕ್ಕೆ ಈ ಆಧಾರದಿಂದ ಸಂಪೂರ್ಣ ಭಿನ್ನವಾದ ಬೇರೊಂದು ರೂಪವನ್ನೇ ಕೊಡುತ್ತಾನೆ. ಅವನು ಈ ಧಾತು ಅಥವಾ ಶಿಲೆಯ ಖಂಡದಲ್ಲಿ ಸಜೀವತ್ವದ ಅನುರೂಪತ್ವವನ್ನು ತರುತ್ತಾನೆ. ಆದುದರಿಂದ ವಾಸ್ತುಕಾರನಿಂದ ಮೂರ್ತಿಕಾರನ ಸ್ಥಿತಿಯು ಅಧಿಕ ಮಹತ್ವವುಳ್ಳದ್ದಾಗಿದೆ. ಅವನಲ್ಲಿ ಮಾನಸಿಕ ಭಾವಗಳ ಪ್ರದರ್ಶನವು ವಾಸ್ತುಕಾರನ ಕೃತಿಯ ಅಪೇಕ್ಷೆಯಿಂದ ಅತ್ಯಧಿಕವಾಗಬಲ್ಲುದು. ಮೂರ್ತಿಕಾರನು ತನ್ನ ಧಾತು ಅಥವಾ ಶಿಲೆಯ ಖಂಡದಲ್ಲಿ ಜೀವಧಾರಿಗಳ ಪ್ರತಿಚ್ಛಾಯೆಯನ್ನು ಬಹಳ ಸುಲಭವಾಗಿ ಮೂಡಿಸಬಲ್ಲನು."[೧]

ಜೈನ ವಾಸ್ತು ಅಥವಾ ಮಂದಿರಗಳಲ್ಲಿ ಕಲೆಯ ದೃಷ್ಟಿಯಿಂದ ಸಿರೋಹೀ ರಾಜ್ಯಾಂತರ್ಗತ ಆಬೂ ದೇಲವಾಡೆಯ ವಿಮಲಶಾಹ ಮತ್ತು ತೇಜಪಾಲ ಇವರಿಂದ ನಿರ್ಮಾಪಿಸಲ್ಪಟ್ಟ ಜೈನ ದೇವಾಲಯಗಳು ಎಲ್ಲವಕ್ಕಿಂತ ಶ್ರೇಷ್ಠವಾಗಿವೆ. ವಿಮಲಶಾಹನ ಆದಿನಾಥ ದೇವಾಲಯದ ಸಂಬಂಧದಲ್ಲಿ ಕರ್ನಲ್ ಟಾಡ್ ಇವರು "ಈ ದೇವಾಲಯವು ಭಾರತದ ಸಂಪೂರ್ಣ ದೇವಾ

೧. 'ಸಾಹಿತ್ಯಾಲೋಚನ' ಪುಟ ೨—೫

ಲಯಗಳಲ್ಲಿ ಸುಂದರವಾಗಿದ್ದು ಆಗ್ರಾದ ತಾಜಮಹಲನ್ನು ಬಿಟ್ಟು ಬೇರೆ ಯಾವ ಕಟ್ಟಡವೂ ಇದಕ್ಕೆ ಸರಿ ಹೋಲಲಾರದು" ಎಂದು ಬರೆದಿರುತ್ತಾರೆ. ಈ ಆದಿನಾಥದೇವಾಲಯದ ಪಕ್ಕದಲ್ಲಿಯೇ ವಸ್ತುಪಾಲನ ತಮ್ಮನಾದ ತೇಜಪಾಲನ ಮೂಲಕ ತನ್ನ ಮಗ ಮತ್ತು ಹೆಂಡತಿಯ ಕಲ್ಯಾಣಾರ್ಥವಾಗಿ ನಿರ್ಮಾಪಿಸಲ್ಪಟ್ಟ ನೇಮಿನಾಥದೇವಾಲಯವು ಇದೆ. ಉಲ್ಲಿಖಿತ ಶಿಲ್ಪಕಲೆಯಲ್ಲಿ ಆದಿನಾಥದೇವಾಲಯಕ್ಕೆ ಸರಿಹೋಲತಕ್ಕ ದೇವಾಲಯ ಇದೊಂದೇ ಆಗಿದೆ. ಇದರ ಸಂಬಂಧದಲ್ಲಿ ಭಾರತೀಯ ಭವನಕಲೆಯ ವಿಶೇಷಜ್ಞರಾದ ಫರ್ಗ್ಯುಸನ್ ಸಾಹೇಬರು ಈ ಪ್ರಕಾರವಾಗಿ ಬರೆದಿರುತ್ತಾರೆ—"ಶ್ವೇತಶಿಲೆಯಿಂದ ನಿರ್ಮಿಸಲ್ಪಟ್ಟ ಈ ದೇವಾಲಯದಲ್ಲಿ ಅತ್ಯಧಿಕ ಶ್ರಮುವನ್ನು ಸಹಿಸತಕ್ಕ ಹಿಂದುಗಳ ಧೀಣದಿಂದ ಬಹಳ ಸೂಕ್ಷ್ಮವಾಗಿ ತಯಾರುಮಾಡಲ್ಪಟ್ಟ ಚಿತ್ತಾಕರ್ಷಕ ಆಕೃತಿಗಳ ನಕಲನ್ನು ಎಷ್ಟೋ ಕಾಲ ಹಾಗೂ ಶ್ರಮುವನ್ನು ವಹಿಸಿಯೂ ನಾನು ಕಾಗದದಲ್ಲಿ ತಯಾರುಮಾಡಿಕೊಳ್ಳಲು ಅಸಮರ್ಥನಾದೆ." ಇದೇ ದೇವಾಲಯದ ಶಿಖರದ ನಿರ್ಮಾಣಕಲೆಯ ಸಂಬಂಧದಲ್ಲಿ ಕರ್ನ್‌ಲ್ ಟಾಡ್ ಇವರು "ಇದರ ಚಿತ್ರವನ್ನು ತಯಾರು ಮಾಡುವಾಗ ತೂಲಿಕೆ (Brush)ಯು ಆಯಾಸ ಪಡುತ್ತದೆ. ಅತ್ಯಂತ ಪರಿಶ್ರಮಿ ಚಿತ್ರಕಾರನ ತೂಲಿಕೆಗೂ ಬಹಳ ಶ್ರಮವಾಗುತ್ತದೆ" ಎಂದು ಬರೆದಿರುತ್ತಾರೆ.

ಇಲ್ಲಿಯ ದೇವಾಲಯಗಳಲ್ಲಿ ರಚನೆಯ ಕೆಲಸ ಬಹಳ ನಿಪುಣತೆಯಿಂದ ಮಾಡಲ್ಪಟ್ಟಿದೆ. ಅಲ್ಪಸ್ವಲ್ಪವಾದರೂ ಶಿಲ್ಪಕೌಶಲವನ್ನು ತೋರಿಸದಿರುವ ಸ್ಥಳವೂ ಇವುಗಳಲ್ಲಿಲ್ಲ. 'ಯಾವ ಕಾಲದಲ್ಲಿ ಆಬೂ ಪರ್ವತದ ಮೇಲೆ ಹತ್ತುವುದಕ್ಕೆ ಯೋಗ್ಯವಾದ ಯಾವುದಾದರೊಂದು ಉತ್ತಮ ಮತ್ತು ನಿರಾಪದ ಮಾರ್ಗವೇ ಇರಲಿಲ್ಲವೋ, ಯಾವುದರ ಮೂಲಕ ದೊಡ್ಡ ದೊಡ್ಡ ಕಲ್ಲುಗಳನ್ನು ಇಷ್ಟೊಂದು ಎತ್ತರಕ್ಕೆ ಸುರಕ್ಷಿತವಾಗಿ ಒಯ್ಯತಕ್ಕ ಯಾವ ಯಂತ್ರವೂ ಇರಲಿಲ್ಲವೋ ಆ ಕಾಲದಲ್ಲಿ ಆಬೂ ಪರ್ವತದಿಂದ ಸುಮಾರು ೨೦೦ ಮೈಲಿಗಳ ದೂರದಲ್ಲಿರುವ ಮಕರಾನಾ ಎಂಬ ಸ್ಥಳದಿಂದ ಇಷ್ಟು ದೊಡ್ಡ ದೊಡ್ಡ ಶ್ವೇತಶಿಲೆಗಳನ್ನು ತರುವುದು ನಿರ್ಮಾಪಕರ ಅಪೂರ್ವಸಾಹಸವನ್ನು ವ್ಯಕ್ತಮಾಡುವುದು'×

ವಸ್ತುತಃ ಈ ದೇವಾಲಯಗಳಲ್ಲಿ ಶ್ವೇತಕೃಷ್ಣಶಿಲೆಗಳಿಂದ ಯಾವ ಪ್ರಕಾರವಾದ ರಚನೆ ಹಾಗೂ ಲತಾಪುಷ್ಪಗಳ ಕೆಲಸ ಮಾಡಲ್ಪಟ್ಟಿದೆಯೋ ಅಂತಹ ಕೆಲಸ ಭಾರತವರ್ಷದ ಯಾವ ಸ್ಥಾನದಲ್ಲಿಯೂ ಕಂಡು ಬರುವುದಿಲ್ಲ. ದೇಲವಾಡೆಯ ದೇವಾಲಯಗಳ ಸಂಬಂಧದಲ್ಲಿ ಒರ್ವ ವಿದ್ವಾಂಸರು ಹೀಗೆ ಬರೆದಿರುತ್ತಾರೆ—"ಈ ದೇವಾಲಯಗಳ ರಚನೆ ಮತ್ತು ಲತಾಪುಷ್ಪಗಳ ಆಶ್ಚರ್ಯಕಾರಿ ಕೆಲಸವನ್ನು ನೋಡಿ ಇವನ್ನು ನಿರ್ಮಿಸಿದ ಶಿಲ್ಪಿಯ ಕೈಯನ್ನು ಒಂದಾವರ್ತಿ ಮುದ್ದಿಸುವ ಇಚ್ಛೆಯು ಸಹಸಾ ಉಂಟಾಗುವುದು. ಈ ದೇವಾಲಯಗಳ ಗರ್ಭಾಲಯದ ಸುತ್ತಲೂ ಶ್ವೇತಶಿಲೆಯಿಂದ ನಿರ್ಮಿಸಲ್ಪಟ್ಟ ಎರಡೆರಡು 'ಓರಡಿ'ಗಳಿರುವುವು. ಇವುಗಳ ಜಾಲಿ ಮತ್ತು ಲತಾಪುಷ್ಪಗಳ ಕೆಲಸವು ಸರ್ವಥಾ ದರ್ಶನೀಯವಾಗಿದೆ. ಗಜಾಲಯದ ಮುಂದಿರುವ ಜಾಲಿಯಂತಹ ಜಾಲಿಯು ತಾಜಮಹಲಿನಲ್ಲಿಯೂ ನಮಗೆ ನೋಡುವುದಕ್ಕೆ ಸಿಗಲಾರದು."× ಜೈಸಲಮೇರ್ ದುರ್ಗದಲ್ಲಿರುವ ಜೈನ ದೇವಾಲಯಗಳೂ ಬಹಳ ಸುಸಂಘಟಿತವಾಗಿದ್ದು ಶ್ರೇಷ್ಠ ಆದರ್ಶಕ್ಕೆ ಉತ್ತಮ ಉದಾಹರಣೆಗಳಾಗಿವೆ.

ಈಗ ಛತ್ರಪುರ ರಾಜ್ಯದಲ್ಲಿರುವ ಖಜರಾಹೊ ಎಂಬಲ್ಲಿರುವ ದೇವಾಲಯಗಳನ್ನು ತೆಗೆದುಕೊಳ್ಳೋಣ. ಇಲ್ಲಿ ಘಂಟಾಯಿ ದೇವಾಲಯದ ರಚನೆಯು ಎಲ್ಲವಕ್ಕಿಂತ ಸೂಕ್ಷ್ಮವಾಗಿದೆ. ಈ ದೇವಾಲಯವು ಏಳನೆಯ ಅಥವಾ ಎಂಟನೆಯ ಶತಮಾನದಲ್ಲಿನ ಭಾರತದ ಸರ್ವೋತ್ಕೃಷ್ಟ ರಚನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಇಲ್ಲಿಯ ಪಾರ್ಶ್ವನಾಥದೇವಾಲಯವೂ ಕಲೆಯ ದೃಷ್ಟಿಯಿಂದ ಸರ್ವೋತ್ತಮವಾಗಿದೆ. ಇದರ ತ್ರಿಕೋಣಾಕಾರದಲ್ಲಿರುವ ಮೂಲೆಯ ಶೋಭೆಯನ್ನು ಯಥಾರ್ಥವಾಗಿ ನೋಡಲೇಬೇಕು. ಈ ದೇವಾಲಯಗಳಲ್ಲಿ ಪ್ರತಿಯೊಂದು ಇಂಚು ಸ್ಥಳದಲ್ಲಿ ಶಿಲ್ಪಿಗಳು ತಮ್ಮ ಅಪೂರ್ವವಾದ ಶಿಲ್ಪಚಾತುರ್ಯವನ್ನು ತೋರಿಸಿರುತ್ತಾರೆ. ಮೇಲೆ ಹೇಳಿದ ದೇವಾಲಯಗಳಲ್ಲಿ ಎಷ್ಟೋ ಲಕ್ಷ ರೂಪಾಯಿಗಳ ವ್ಯಯದಿಂದ ಮಾಡಲ್ಪಟ್ಟ ಶಿಲ್ಪಕಾರ್ಯವು ಪ್ರಾಚೀನ ಶಿಲ್ಪವಿದ್ಯೆಯ ಮಹಿಮೆಯನ್ನು ಪ್ರಕಟಮಾಡುವುದು. ಇವುಗಳಲ್ಲಿ ಯಾವ ಸ್ಥಳದಲ್ಲಿಯೂ ಸುಣ್ಣವನ್ನು ಉಪಯೋಗಿಸದೆ ಕೇವಲ ಕಲ್ಲಿನಿಂದಲೇ ಜೋಡಿಸುವ ಕೆಲಸ

×'ಮಾಧುರೀ' ವರ್ಷ ೬, ಖಂಡ ೧

×'ಪರವಾರಬಂಧು' ವರ್ಷ ೬, ಅಂಕ ೧.

ವನ್ನು ಮಾಡಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ.

ಝಾಂಸಿ ಜಿಲ್ಲೆಯಲ್ಲಿರುವ ದೇವಗಡ್ ಎಂಬಲ್ಲಿರುವ ಜೈನ ದೇವಾಲಯಗಳೂ ನೋಡತಕ್ಕವು. ಸ್ಮಿತ್ ಮಹಾಶಯರ ಹೇಳಿಕೆಯಂತೆ ಇವು ಗುಪ್ತಕಾಲೀನ ದೇವಾಲಯಗಳಲ್ಲಿ ಸರ್ವೋತ್ತಮವಾದುವು. ಗೋಡೆಗಳಲ್ಲಿ ಅಂಕಿತವಾದ ಇಲ್ಲಿಯ ಕಲೆಯು ಭಾರತೀಯ ಶಿಲ್ಪಕಲೆಯ ಉತ್ತಮ ಉದಾಹರಣೆಗಳಲ್ಲಿ ಒಂದಾಗಿದೆ. ಇದೇ ಪ್ರಕಾರ ಗ್ವಾಲಿಯರ್ ರಾಜ್ಯಾಂತರ್ಗತ ಚಂದೇರಿ, ಜಯಪುರ ರಾಜ್ಯಾಂತರ್ಗತ ಸಾಂಗನೇರ್ ಮೊದಲಾದ ಇನ್ನೂ ಹಲವು ಸ್ಥಾನಗಳ ಜೈನ ದೇವಾಲಯಗಳೂ ಕಲೆಯ ದೃಷ್ಟಿಯಿಂದ ಬಹಳ ಸುಂದರವಾಗಿವೆ.

ಇನ್ನು ವಿಜ್ಞಪಾಠಕರು ದಕ್ಷಿಣ ಭಾರತದ ಕಡೆಗೆ ದೃಷ್ಟಿಯನ್ನೋಡಿಸಬೇಕು. ಇಲ್ಲಿ ಶ್ರವಣಬೆಳ್ಗೊಳ, ಹಳೆಬೀಡು, ಮೂಡಬಿದ್ರಿ, ಕಾರ್ಕಳ ಮತ್ತು ವೇಣೂರು ಮೊದಲಾದ ಸ್ಥಳಗಳ ಜೈನ ದೇವಾಲಯಗಳು ದ್ರಾವಿಡ ಮತ್ತು ಚಾಲುಕ್ಯಕಲೆಯ ಅನುಪಮರತ್ನಗಳು. ಹಳೆಬೀಡು ದೇವಾಲಯಗಳ ಸಂಬಂಧದಲ್ಲಿ ಸ್ಮಿತ್ ಮಹಾಶಯರು "ಈ ದೇವಾಲಯಗಳು ಧರ್ಮಶೀಲ ಮಾನವ ಜಾತಿಯ ಪರಿಶ್ರಮಕ್ಕೆ ಆಶ್ಚರ್ಯಜನಕವಾದ ಉದಾಹರಣೆಗಳಾಗಿವೆ. ಇವುಗಳ ಕಲಾಕೌಶಲವನ್ನು ನೋಡಿ ಕಣ್ಣುಗಳು ತೃಪ್ತಿಹೊಂದುವುದಿಲ್ಲ" ಎಂದು ಹೇಳಿರುವುದು ಯಥಾರ್ಥವಾಗಿದೆ. ಬೇಲೂರಿನ ಭಾರತ ವಿಖ್ಯಾತ ವಿಷ್ಣುದೇವಾಲಯವೂ ಮೂಲದಲ್ಲಿ ಜೈನ ದೇವಾಲಯವೇ ಆಗಿತ್ತೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಮೂಡಬಿದ್ರೆಯ ಹೊಸಬಸದಿ ಮತ್ತು ಗುರುಬಸದಿ ಕಾರ್ಕಳದ ಚತುರ್ಮುಖಬಸದಿ ಮತ್ತು ನೇಮಿನಾಥಬಸದಿ ವೇಣೂರಿನ ಶಾಂತೀಶ್ವರಬಸದಿ ಇವು ಕಲೆಯ ದೃಷ್ಟಿಯಿಂದ ಬಹಳ ಚೆನ್ನಾಗಿವೆ. ವೇಣೂರಿನ ಶಾಂತೀಶ್ವರ ಬಸದಿಯಲ್ಲಿ ಕೆತ್ತಲ್ಪಟ್ಟ ಚಿತ್ರಗಳಲ್ಲಿ ಕೆತ್ತನೆಯ ಕೆಲಸದಲ್ಲಿ ಕಾಣುವ ಸೂಕ್ಷ್ಮತ್ವವು ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಯಾವ ದೇವಾಲಯದ ಕೆತ್ತನೆಯಲ್ಲಿಯೂ ಕಂಡು ಬರುದಿಲ್ಲವೆಂದು ಕಲಾಮರ್ಮಜ್ಞರ ಅಭಿಪ್ರಾಯವಾಗಿದೆ.× ಮೂಡಬಿದ್ರಿಯ ಹೊಸಬಸದಿ ಮತ್ತು ಕಾರ್ಕಳದ ಚತುರ್ಮುಖಬಸದಿ ಇವುಗಳ ನಿರ್ಮಾಣಕಲೆಯು ಮಹತ್ತ್ವಪೂರ್ಣವಾಗಿರುವುದು. ಈ ದೇವಾಲಯಗಳ ಶಿಲಾಮಯ ಭಿತ್ತಿಗಳಲ್ಲಿ ಕೊರೆಯಲ್ಪಟ್ಟ ಬೇರೆ ಬೇರೆ ಪಶುಪಕ್ಷಿಗಳ ಹಾಗೂ ಪುಷ್ಪಲತೆಗಳ ಚಿತ್ರಗಳು ದರ್ಶನೀಯವಾಗಿವೆ. ಈ ಮೇಲಿನ ದೇವಾಲಯಗಳ ಹೊರತು ವಿಜಯನಗರ, ಭಟ್ಕಲ, ಗೇರುಸೊಪ್ಪೆ, ಹೊಂಬುಚ್ಚ ಮೊದಲಾದ ಸ್ಥಾನಗಳಲ್ಲಿಯೂ ಅನೇಕ ಪ್ರಾಚೀನ ಸುಂದರ ಜೈನ ದೇವಾಲಯಗಳಿವೆ.

ಇನ್ನು ಗುಫಾಮಂದಿರಗಳನ್ನು ತೆಗೆದುಕೊಳ್ಳೋಣ. "ಉತ್ಕಲದ ಭುವನೇಶ್ವರದ ಸಮೀಪದಲ್ಲಿರುವ ಖಂಡಗಿರಿ ಮತ್ತು ಉದಯಗಿರಿಯ ಗುಫೆಗಳೇ ಸರ್ವಪ್ರಾಚೀನ ಜೈನ ಗುಫೆಗಳು. ಬಿಜಾಪುರ ಜಿಲ್ಲೆಯಲ್ಲಿರುವ ಬಾದಾಮಿ, ನಾಸಿಕ ಜಿಲ್ಲೆಯಲ್ಲಿರುವ ಮಾಂಗಿತುಂಗಿ ಮತ್ತು ನಿಜಾಮ್ ರಾಜ್ಯದಲ್ಲಿರುವ ಎಲೋರಾದ ಗುಫೆಗಳು ಖಂಡಗಿರಿಯಿಂದ ಸುಮಾರು ಎಂಟು ಶತಮಾನಗಳ ಹಿಂದಿನವು. ಖಂಡಗಿರಿಯ ಗುಫೆಗಳಲ್ಲಿ ರಾನೀನೂರ್ ಗುಫೆಯನ್ನು ಮಹಾರಾಜ ಖಾರವೇಲನು ಮಾಡಿಸಿದನು. ಅದು ಕ್ರಿ. ಪೂ. ಎರಡನೆಯ ಶತಮಾನಕ್ಕಿಂತ ಪೂರ್ವದ್ದು. ನಿರ್ಮಾಣಕಲೆಯ ದೃಷ್ಟಿಯಿಂದ ಎಲೋರಾದ ಜೈನ ದೇವಾಲಯಗಳು ಬಹಳ ಚೆನ್ನಾಗಿವೆ. ಇವುಗಳ ಶಿಲ್ಪಕಲೆಯು ಉತ್ತಮವಾಗಿದೆ. ದಕ್ಷಿಣದಲ್ಲಿ ಸತ್ಪುಡಾ ಪರ್ವತದಿಂದ ಮಧುರೆಯ ಅಸಪುಲಯಿ ಪರ್ವತದ ವರೆಗೆ ಅನೇಕ ಜೈನ ಗುಫೆಗಳಿರುವುವು. ಮಾಂಗಿತುಂಗಿಯ ಗುಫೆಗಳು ಹನ್ನೆರಡು ಅಥವಾ ಹದಿಮೂರನೆಯ ಶತಮಾನದವುಗಳು. ಬೆಳಗಾಂವ, ಧಾರವಾಡ್, ಉತ್ತರಕನ್ನಡ, ಹಾಸನ, ಬಳ್ಳಾರಿ ಜಿಲ್ಲೆಗಳಲ್ಲಿಯೂ ಅನೇಕ ಜೈನ ಗುಫೆಗಳಿರುವುವು. ಇವುಗಳಲ್ಲಿ ಎಲೋರಾ× ಮತ್ತು ಬಾದಾಮಿ+ಯ ಗುಫೆಗಳೇ ಸರ್ವೋತ್ತಮವಾಗಿವೆ.'†

ಇನ್ನು ಜೈನ ಮೂರ್ತಿಕಲೆಯ ಸಂಬಂಧದಲ್ಲಿ

+'ಜೈನ-ಸಿದ್ಧಾಂತ-ಭಾಸ್ಕರ' ಭಾಗ ೫, ಪುಟ ೨೩೪ರಲ್ಲಿ ಪ್ರಕಟವಾಗಿರುವ ನನ್ನ 'ವೇಣೂರು' ಶೀರ್ಷಕ ಲೇಖವನ್ನು ನೋಡಿ.

×'ವೀರವಾಣಿ' ವರ್ಷ ೮, ಅಂಕ ೯ರಲ್ಲಿ ಪ್ರಕಟವಾಗಿರುವ ನನ್ನ 'ಎಲೋರಾ' ಲೇಖವನ್ನು ನೋಡಿ.

+'ಜೈನ-ಸಿದ್ಧಾಂತ-ಭಾಸ್ಕರ' ಭಾಗ ೮, ಪುಟ ೧೧೮ರಲ್ಲಿ ಪ್ರಕಟವಾಗಿರುವ ನನ್ನ 'ಬಾದಾಮಿ' ಶೀರ್ಷಕ ಲೇಖವನ್ನು ನೋಡಿ.

†'ಮೊಡರ್ನ್ ರಿವ್ಯು' ಜುಲೈ ೧೯೩೮.

ಸ್ವಲ್ಪ ವಿಚಾರ ಮಾಡೋಣ. ಜೈನ ಮೂರ್ತಿಗಳ ವಿಷಯದಲ್ಲಿ ಮೊದಲು ಈ ಕಲೆಯ ಮರ್ಮಜ್ಞರಾದ ಶ್ರೀ ನಾನಾಲಾಲ್ ಚಮನಲಾಲ್ ಮೆಹತಾ ಐ.ಸಿ.ಎಸ್. ಇವರ ಅಭಿಪ್ರಾಯವನ್ನು ಸ್ವಲ್ಪ ಕೇಳಿ! "ನಂದ ವಂಶದ ರಾಜ್ಯಕಾಲದಿಂದ ಮೊದಲ್ಗೊಂಡು ಹದಿನೈದನೆಯ ಶತಮಾನದ ವರೆಗಿನ ನಮ್ಮ ಶಿಲ್ಪಕಲೆಯ ಉದಾಹರಣೆಗಳು ಸಿಗುವುವು. ಅವು ಲಲಿತಕಲೆಯಲ್ಲಿ ಮುಖ್ಯವಾಗಿ ಸ್ಥಾಪತ್ಯ ಮತ್ತು ಪ್ರತಿಮಾನಿರ್ಮಾಣ ಇವುಗಳ ಕಲೆಗಳು ಇತಿಹಾಸದಲ್ಲಿ ವಿಶೇಷ ಮಹತ್ತ್ವಪೂರ್ಣವಾದುವು. ಇವುಗಳಲ್ಲಿಯೂ ಮೂರ್ತಿವಿಧಾನವಾದರೂ ನಮ್ಮ ಸಭ್ಯತೆ, ಧರ್ಮಭಾವನೆ ಮತ್ತು ವಿಚಾರ-ಪರಂಪರೆ ಇವುಗಳ ಮೂರ್ತಸ್ವರೂಪವೇ ಆಗಿದೆ. ಆರಂಭಕಾಲದಿಂದ ಮೊದಲ್ಗೊಂಡು ಮಧ್ಯಯುಗದ ಕೊನೆವರೆಗೆ ನಮ್ಮ ಶಿಲ್ಪಕಾರರು ತಮ್ಮ ಧಾರ್ಮಿಕ ಮತ್ತು ಪೌರಾಣಿಕ ಕಲ್ಪನೆಯ ಮತ್ತು ಹೃದಯದ ಪ್ರಾಕೃತಭಾವನೆಯ ದಿಗ್ದರ್ಶನವನ್ನು ಇವುಗಳ ಮೂಲಕವೇ ಮಾಡಿಕೊಟ್ಟಿರುತ್ತಾರೆ.

ಕ್ರಿ. ಶಕದ ಪ್ರಾರಂಭದ ಕುಶಾಣ ರಾಜ್ಯಕಾಲದ ಜೈನ ಮೂರ್ತಿಗಳಲ್ಲಿಯೂ ನೂರಾರು ವರ್ಷಗಳ ಹಿಂದಿನ ಜೈನ ಮೂರ್ತಿಗಳಲ್ಲಿಯೂ ಬಾಹ್ಯದೃಷ್ಟಿಯಿಂದ ವಿಶೇಷ ಭೇದವು ಕಂಡುಬರುವುದಿಲ್ಲ. ಜೈನ ಲಲಿತಕಲೆಯ ಇತಿಹಾಸದಲ್ಲಿ ಪರಿವರ್ತನೆಯೇ ಆಗದಿರುವುದರಿಂದ ಜೈನ ವಿಧಾನದಲ್ಲಿಯೂ ವಿವಿಧತೆಯು ಬರಲಿಲ್ಲ. ದೇವಾಲಯಗಳ ಹಾಗೂ ಮೂರ್ತಿಗಳ ಸಂಖ್ಯೆಯು ಬೆಳೆದರೂ ಅವುಗಳ ಗಂಭೀರತೆಯಲ್ಲಿ ಯಾವ ಭೇದವೂ ತೋರಿ ಬರುವುದಿಲ್ಲ. ಮೂರ್ತಿಗಳ ಲಾಕ್ಷಣಿಕ ಅಂಗಗಳು ಸುಮಾರು ಎರಡು ಸಾವಿರ ವರ್ಷಗಳ ವರೆಗೂ ಒಂದೇ ರೂಪದಲ್ಲಿದ್ದುವು. ಅಂದರೆ ಜೈನ ಕೇವಲಿಗಳ ಕಾಯೋತ್ಸರ್ಗ ಅಥವಾ ಪರ್ಯಂಕಾಸನ ಸಂಬಂಧಿ ಮೂರ್ತಿಗಳಲ್ಲಿ ದೀರ್ಘಕಾಲದ ಅಂತರಾಲದಲ್ಲಿಯೂ ವಿಶೇಷ ರೂಪಭೇದವು ಬರಲಿಲ್ಲ. ಜೈನ ತೀರ್ಥಂಕರರ ಮೂರ್ತಿಯು ಶಾಂತವೂ ಪ್ರಸನ್ನವೂ ವಿರಕ್ತವೂ ಆಗಿರಬೇಕು. ಇದರಲ್ಲಿ ಮಾನವಹೃದಯದ ಅಸ್ಥಾಯಿವಾಸನೆಗಳಿಗೆ ಸ್ಥಾನವೇ ಇಲ್ಲ. ಜೈನ ವಿಗ್ರಹವನ್ನು ನಾವು ನಿರ್ಗುಣವೆಂದು ಕರೆದರೂ ಅನುಚಿತವಾಗಲಾರದು. ಹಸ್ತಮುದ್ರೆಯನ್ನು ಬಿಟ್ಟು ಶೇಷ ಎಲ್ಲ ಮಾತುಗಳಲ್ಲಿ ಅವು ಪ್ರಾಯಃ ಬೌದ್ಧ ಮೂರ್ತಿಗಳಂತೆ ಕಾಣುವುವು. ಮಧ್ಯ-ಕಾಲೀನ ಜೈನ ಮೂರ್ತಿಗಳ ಮಸ್ತಕಗಳಲ್ಲಿ ಉಷ್ಣೀಷವನ್ನು ನಿರ್ಮಿಸುವ ಬೌದ್ಧಪದ್ಧತಿಯು ಪ್ರಾರಂಭವಾಯಿತು. ವಕ್ಷಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯೂ ನಿರ್ಮಿಸಲ್ಪಟ್ಟಿತು. ಆದರೆ ಇವೆಲ್ಲ ಸಾಮಾನ್ಯ ಪರಿವರ್ತನೆಗಳು. ಅಂತು ಜೈನ ಮೂರ್ತಿಗಳ ಲಾಕ್ಷಣಿಕ ರಚನೆಯಲ್ಲಿ ಯಾವ ಭೇದವೂ ಬರಲಿಲ್ಲ. ಶ್ರವಣಬೆಳ್ಗೊಳದ ಬಾಹುಬಲಿಯಂತಹ ಅನುಪಮ ವಿಗ್ರಹವನ್ನು ನಿರ್ಮಿಸಿ ಶಿಲ್ಪಿಯು ರಸಾತ್ಮಕರನ್ನು ಸಂತುಷ್ಟಪಡಿಸಿದ್ದಾನೆ. ತೀರ್ಥಂಕರರ ಮೂರ್ತಿಗಳ ಆವಾಸಗೃಹಗಳನ್ನು ಅಲಂಕರಿಸುವುದರಲ್ಲಿ ಕೇವಲ ಜೈನರೇ ಅಲ್ಲ, ಜೈನಾಶ್ರಿತ ಕಲೆಗಳೂ ತುಂಬಾ ದುಡಿದಿರುವುವು. ಭಾರತವರ್ಷದ ಎಲ್ಲ ಭಾಗಗಳಲ್ಲಿ ಜೈನ ದೇವಾಲಯಗಳ ಅದ್ವಿತೀಯ ಕಟ್ಟಡಗಳು ಇಂದೂ ದೃಷ್ಟಿಗೋಚರವಾಗುವುವು. ಮೈಸೂರು ರಾಜ್ಯದ ಹಾಸನ ಜಿಲ್ಲೆಯಲ್ಲಿರುವ ಬೇಲೂರಿನ ದೇವಾಲಯವು ಮಧ್ಯಕಾಲೀನ ಜೈನವೈಭವಕ್ಕೆ ಉಜ್ವಲ ಸಾಕ್ಷಿಯಾಗಿದೆ. ಆಬೂವಿನ ದೇವಾಲಯಗಳ ವಿಷಯದಲ್ಲಂತು ವಿಶೇಷ ಬರೆಯಬೇಕಾದ ಅಗತ್ಯವೇ ಇಲ್ಲ. ಮಧ್ಯಕಾಲೀನ ಯುಗದಲ್ಲಿ ವಾಮಮಾರ್ಗದ ದೆಸೆಯಿಂದ ಬ್ರಾಹ್ಮಣ ಮೂರ್ತಿಗಳಲ್ಲಿ ಅತಿ ಅಶ್ಲೀಲತ್ವವು ಸ್ಥಾನ ಪಡೆದರೂ ಜೈನ ದೇವಾಲಯಗಳಲ್ಲಿ ಶುದ್ಧ ಸಾತ್ವಿಕ ಮತ್ತು ಪವಿತ್ರ ಭಾವನಾಮಯಿ ಸುಂದರ ಮೂರ್ತಿ-ಕಲೆಗೆನೇ ಆಶ್ರಯವು ಸಿಕ್ಕಿತ್ತು. ಖಜರಾಹೊ ಮತ್ತು ಮೈಸೂರು ರಾಜ್ಯದ ಬೇಲೂರಿನ ದೇವಾಲಯಗಳನ್ನು ಕಂಡೊಡನೆಯೇ ಜೈನ ದೇವಾಲಯಗಳ ಪವಿತ್ರಭಾವನೆಯು ತತ್‌ಕ್ಷಣವೇ ದೃಷ್ಟಿಗತವಾಗುವುದು. ಸ್ವಚ್ಛಂದತೆ ಮತ್ತು ಅನಿಯಂತ್ರಿತ ವಿಲಾಸಿತೆ ಇವುಗಳಿಗೆ ದೇವಮೂರ್ತಿಗಳ ನೆಪದಿಂದಲೂ ಇವುಗಳಲ್ಲಿ ಸ್ಥಾನ ದೊರೆಯಲಿಲ್ಲ. ಸೌಂದರ್ಯದ ದೃಷ್ಟಿಯಿಂದ ಜೈನ ದೇವಾಲಯಗಳ ಪ್ರಧಾನಮೂರ್ತಿಗಳು ಅಷ್ಟೊಂದು ಮಹತ್ತ್ವಪೂರ್ಣವಾಗಿ ತೋರುವುದಿಲ್ಲ. ಆದರೆ ದೇವಾಲಯಗಳ ಹೊರಗಿನ ಗೋಡೆಗಳಲ್ಲಿ ಆಭರಣದ ರೂಪದಲ್ಲಿ ನಿರ್ಮಿಸಲ್ಪಟ್ಟ ಅನ್ಯದೇವತೆಗಳ ಮೂರ್ತಿಗಳು ವಿಶೇಷ ಆಕರ್ಷಕವಾಗಿರುವುವು. ತೀರ್ಥಂಕರರ ಮೂರ್ತಿ

ಗಳಲ್ಲಿ ಒಂದು ಪ್ರಕಾರವಾದ ನಿರ್ದ್ವಂದತ್ವ ಮತ್ತು ಭವ್ಯತ್ವವು ಒಡೆದು ಕಾಣುವುವು."*

ಕಲೆಯ ದೃಷ್ಟಿಯಿಂದ ಜೈನ ಮೂರ್ತಿಗಳಲ್ಲಿ ಶ್ರವಣಬೆಳ್ಗೊಳದ ಬಾಹುಬಲಿಯ ಮೂರ್ತಿಯ ಎಲ್ಲವಕ್ಕಿಂತ ಉಲ್ಲೇಖನೀಯ ಮೂರ್ತಿಯಾಗಿದೆ. ಉತ್ತರಾಭಿಮುಖವಾಗಿ ನಿಂತಿರುವ ಈ ದಿಗಂಬರ ಮೂರ್ತಿಯು ಇಡೀ ಸಂಸಾರದಲ್ಲಿ ಕುತೂಹಲವನ್ನುಂಟುಮಾಡುವ ಒಂದು ವಸ್ತುವಾಗಿದೆ. ತಲೆಯ ಕೂದಲುಗಳು ಉಂಗುರದಂತ್ತಿದ್ದು ಕಿವಿಗಳು ದೊಡ್ಡವೂ ಉದ್ದವೂ ಆಗಿವೆ. ಎದೆಯು ಅಗಲವಾಗಿದ್ದು ದೀರ್ಘ ಭುಜಗಳು ಕೆಳಗೆ ಜೋತಾಡುತ್ತಿದ್ದು ಕಟಿಯು ಸ್ವಲ್ಪ ಸೂಕ್ಷ್ಮವಾಗಿದೆ. ಮುಖದಲ್ಲಿ ಅಲೌಕಿಕ ಕಾಂತಿ ಮತ್ತು ಶಾಂತಿಯ ಸಾಮ್ರಾಜ್ಯವಿದೆ. ಪಾದಗಳಿಂದ ಸ್ವಲ್ಪ ಮೇಲಿನ ವರೆಗೆ ಹುತ್ತಗಳು ಕಾಣುತ್ತಿದ್ದು ಅವುಗಳಲ್ಲಿ ಭಯಂಕರ ಸರ್ಪಗಳು ದೃಷ್ಟಿಗೋಚರವಾಗುತ್ತಿವೆ. ಎರಡು ಕಾಲುಗಳು ಮತ್ತು ಬಾಹುಗಳನ್ನು ಮಾಧವಿಲತೆಯು ಸುತ್ತಿರುತ್ತದೆ. ಆದರೂ ಧ್ಯಾನಮುದ್ರೆಯ ಸ್ಥಿರತೆಯು ದರ್ಶನೀಯವಾಗಿದೆ. ಹೆಚ್ಚೇನು, ಮೂರ್ತಿಯು ತಪಸ್ಸಿನ ಒಂದು ಜೀವಿತ ವಿಲಕ್ಷಣ ನಿದರ್ಶನವೇ ಆಗಿದೆ. ದೃಶ್ಯವು ಬಹಳ ಹೃದಯಗ್ರಾಹಿಯಾಗಿದೆ. ದೊಡ್ಡ ದೊಡ್ಡ ಪಾಶ್ಚಾತ್ಯ ವಿದ್ವಾಂಸರ ಮಸ್ತಿಷ್ಕವೂ ಈ ಮೂರ್ತಿಯ ನಿರ್ಮಾಣಕಲೆಯನ್ನು ನೋಡಿ ಬೆರಗಾಗಿದೆ. ನಿಜವಾಗಿ ಶಿಲ್ಪಿಯು ತನ್ನ ಅಪೂರ್ವಪ್ರಯತ್ನದಲ್ಲಿ ಅಭೂತಪೂರ್ವ ಮತ್ತು ಆಶಾತೀತ ಸಫಲತೆಯನ್ನು ಪಡೆದಿರುವನು. ಸಂಸಾರದಲ್ಲಿ ಮಿಶ್ರದೇಶವು ಮೂರ್ತಿಕಲೆಗೆ ಮಾರ್ಗ-ದರ್ಶಕವಾಗಿದೆ. ಆದರೂ ಈ ಮೂರ್ತಿಯ ಕಲೆಯ ಮುಂದೆ ಅದು ನತಮಸ್ತಕವಾಗಿರುವುದೆಂದು ಸ್ಥಾಪತ್ಯಕಲೆಯ ಮರ್ಮಜ್ಞರ ಅಭಿಪ್ರಾಯವಾಗಿದೆ. ಇಷ್ಟು ವಿಶಾಲ ಹಾಗೂ ಗುರುತರ ಪಾಷಾಣದಲ್ಲಿ ಸಿದ್ಧಹಸ್ತ ಶಿಲ್ಪಿಯು ಯಾವ ನೈಪುಣ್ಯದಿಂದ ತನ್ನ ಛೇಣವನ್ನು ಪ್ರಯೋಗಿಸಿರುವನೋ ಅದರಿಂದ ಭಾರತೀಯ ಮೂರ್ತಿಕಾರರ ಮಸ್ತಕವು ಸದೈವಗರ್ವದಿಂದ ಉನ್ನತವಾಗಿರುವುದು. ನೆಟ್ಟಗೆ ನಿಂತಿರುವ ಒಂದು ಕಠಿನತಮ ಬೃಹದಾಕಾರಪಾಷಾಣವನ್ನು ನಾಲ್ಕು ಕಡೆಗಳಿಂದ ಕತ್ತರಿಸುತ್ತ ಇದೇ ನಿಂತಿರುವ ಅವಸ್ಥೆಯಲ್ಲಿ ಶಾಸ್ತ್ರೋಕ್ತಪ್ರಮಾಣದಲ್ಲಿ ಐವತ್ತೇಳು ಅಡಿ ಎತ್ತರದ ಇಷ್ಟು ಸುಂದರವಾದ ವಿಶಾಲಕಾಯ ಪ್ರತಿಮೆಯನ್ನು ನಿರ್ಮಿಸುವುದು ದೊಡ್ಡ ಸಾಹಸದ ಕೆಲಸ. ಇದರ ಅನುಭವವನ್ನು ಒಬ್ಬ ಭುಕ್ತಭೋಗಿಯೇ ತಿಳಿಯಬಲ್ಲ.[೧]

ಬಾಹುಬಲಿ ಅಥವಾ ಗೊಮ್ಮಟೇಶ್ವರನ ಉಲ್ಲೇಖನೀಯ ಮೂರ್ತಿಗಳು ಇನ್ನೂ ಎರಡಿವೆ. ಒಂದು ಕಾರ್ಕಳದಲ್ಲಿ[೨] ಇನ್ನೊಂದು ವೇಣೂರಲ್ಲಿ.[೩] ಇವೆರಡೂ ಮೂರ್ತಿಗಳು ಮೇಲೆ ಹೇಳಿದ ಶ್ರವಣಬೆಳ್ಗೊಳದ ಮೂರ್ತಿಯಿಂದ ಸಣ್ಣವು. ಕಲೆಯ ದೃಷ್ಟಿಯಿಂದ ಇವೂ ಮಹತ್ತ್ವಪೂರ್ಣವಾದುವು. ಹಾಗೆ ಸಣ್ಣ ದೊಡ್ಡ ಮೂರ್ತಿಗಳಲ್ಲಿ ದಕ್ಷಿಣ ಮತ್ತು ಉತ್ತರಭಾರತದ ನೂರಾರು ಸ್ಥಳಗಳಲ್ಲಿ ಇಂತಹ ಸುಂದರ ಮೂರ್ತಿಗಳು ಸಾವಿರಾರು ಇವೆ. ಅವುಗಳ ವರ್ಣನೆಯನ್ನು ಈ ಚಿಕ್ಕ ಲೇಖದಲ್ಲಿ ಮಾಡಲು ಸಾಧ್ಯವಿಲ್ಲ. ದೇವಗಢದಲ್ಲಿರುವ ಮೂರ್ತಿಗಳು, ಹಿಂದು ಶಿಲ್ಪವಿದ್ಯೆಯು ಉನ್ನತಿಯ ಉಚ್ಚತಮಶಿಖರದಲ್ಲಿರುವಾಗ ನಿರ್ಮಿಸಲ್ಪಟ್ಟಿದ್ದುವೆಂದು ಸ್ಮಿತ್ ಮಹಾಶಯರ ಅಭಿಪ್ರಾಯವಾಗಿದೆ. ವಸ್ತುತಃ ದೇವಗಢದ ಮೂರ್ತಿಗಳು ಕಲೆಯ ದೃಷ್ಟಿಯಿಂದ ಬಹಳ ಸುಂದರವಾಗಿವೆ.[೪]

ಜೈನ ಮೂರ್ತಿಗಳಲ್ಲಿ ೧೯೩೭ರಲ್ಲಿ ಪಾಟ್ನಾ ನಗರದ ಲೋಹನೀಪುರ ಮೊಹಲ್ಲೆಯಲ್ಲಿ ಸಿಕ್ಕಿರುವ ಎರಡು ದಿಗಂಬರ ಜೈನ ಮೂರ್ತಿಗಳೇ ಸರ್ವಪ್ರಾಚೀನವಾಗಿವೆ. ಪುರಾತತ್ತ್ವದ ಅನನ್ಯಮರ್ಮಜ್ಞರಾದ ವಿದ್ಯಾಮಹೋದಧಿ, ಸ್ವರ್ಗೀಯ ಕಾಶೀಪ್ರಸಾದರ ಮತದಂತೆ ಈ ಮೂರ್ತಿಗಳು ಕ್ರಿ. ಪೂರ್ವ ಮೂರನೆಯ ಶತಮಾನದವುಗಳು. ಇಷ್ಟು ಪ್ರಾಚೀನ ಮೂರ್ತಿಗಳು ಇದುವರೆಗೆ ಹಿಂದುಗಳ ಮೂರ್ತಿಗಳೇ ಆಗಲಿ, ಬೌದ್ಧರಮೂರ್ತಿಗಳೇ ಆಗಲಿ ಸಿಕ್ಕಿಲ್ಲವೆಂದು ಅವರ ಅಭಿಪ್ರಾಯವಾಗಿದೆ.[೫]

*'ಮಾಧುರೀ' ವರ್ಷ ೬, ಖಂಡ ೨, ಸಂ. ೩.

೧. 'ಜೈನ-ಸಿದ್ಧಾಂತ-ಭಾಸ್ಕರ.' ಭಾಗ ೬, ಪುಟ ೨೦೫ರಲ್ಲಿ ಪ್ರಕಟವಾಗಿರುವ ನನ್ನ ಲೇಖವನ್ನು ನೋಡಿ.

೨. 'ಜೈನ-ಸಿದ್ಧಾಂತ-ಭಾಸ್ಕರ.' ಭಾಗ ೫. ಪುಟ ೯೨ರಲ್ಲಿ ಪ್ರಕಟವಾಗಿರುವ ನನ್ನ ಲೇಖವನ್ನು ನೋಡಿ.

೩. ಜೈನ-ಸಿದ್ಧಾಂತ-ಭಾಸ್ಕರ.' ಭಾಗ ೫. ಪುಟ ೨೩೪

೪. 'ಜೈನ-ಸಿದ್ಧಾಂತ-ಭಾಸ್ಕರ.' ಭಾಗ ೮, ಪುಟ ೬೭ರಲ್ಲಿ ಪ್ರಕಟವಾಗಿರುವ ನನ್ನ ಲೇಖವನ್ನು ನೋಡಿ.

೫. 'ಜೈನ ಎಂಟಿಕ್ವೇರಿ.' ಭಾಗ ೩. ಅಂಕ ೧.

ಸಂಸ್ಕೃತ ಕವಯಿತ್ರಿಯರು

ಆರ್. ಕಲ್ಯಾಣಮ್ಮ—ಸಂಪಾದಕಿ "ಸರಸ್ವತಿ" ಬೆಂಗಳೂರು.

"ಮಾತೃದೇವೋಭವ" ಎಂದು ಶ್ರುತಿಗಳು ಸಾರಿ ಮಹಿಳೆಯರಿಗೆ ಕೊಟ್ಟಿರುವ ಅತ್ಯುನ್ನತಸ್ಥಾನ ದಿಂದಲೇ ಆರ್ಯಸಂಸ್ಕೃತಿಯ ಹಿರಿಮೆಯು ಕಂಡುಬರುತ್ತಿದೆ. ಅದು ಇತ್ತೀಚೆಗೆ ಮರೆಯಾಗಿರುವುದು ಪರಕೀಯರ ಹಾವಳಿಯಿಂದೆಂಬುದು ಎಲ್ಲರೂ ಅರಿತ ವಿಷಯೆವೇ ಆಗಿದೆ. ಉದಾಹರಣೆಗೆ ವಿಧವೆಯರ ವಿರೂಪಗೊಳಿಸುವ ಪದ್ಧತಿಯು ಮುಸಲ್ಮಾನರ ಕಾಲದಲ್ಲಿ ಬಂದಂತೆ ಮತಾಂತರಗೊಳಿಸುವ ನೀತಿಯುಳ್ಳ ಬ್ರಿಟಿಷರ ಹಾವಳಿಯಿಂದ ಸ್ತ್ರೀಯರು ಹೊರಗೇ ಬಾರದಂತೆ ಸಮಾಜವು ಕಟ್ಟುಮಾಡಬೇಕಾಯಿತು. ಇಂತಹ ಹಲವಾರು ಕಾರಣಗಳಿಂದ ಸ್ತ್ರೀಯು ಅಂಧಕಾರದಲ್ಲಿ ಬೀಳಲು ದಾಸ್ಯವೇ ಕಾರಣ. ಹೀಗೆಲ್ಲಾ ಆಗುವ ಮೊದಲು ನಮ್ಮ ಮಹಿಳೆಯರು ವಿದ್ಯಾಪಾರಂಗತರಾಗಿದ್ದರೆನ್ನುವುದಕ್ಕೆ ಎಷ್ಟೋ ನಿದರ್ಶನಗಳಿವೆ. ವೀರರಮಣಿಯರೂ, ವಿಧವಿಧವಾದ ಸಾಹಿತ್ಯಗಳಲ್ಲಿ, ಕಲೆಗಳಲ್ಲಿ ನುರಿತ ರಮಣಿಯರೂ ನಮ್ಮ ಪವಿತ್ರ ಭಾರತದಲ್ಲಿ ಜನಿಸಿ ಭಾರತದ ಕೀರ್ತಿಯನ್ನು ದಶದಿಕ್ಕುಗಳಲ್ಲೂ ಹರಡಿದ್ದಾರೆ:—ಜ್ಞಾನಜ್ಯೋತಿಯನ್ನು ಬೆಳಗಿದ್ದಾರೆ. ಅವರ ಆಶೀರ್ವಾದವೇ—ಅವರ ಆದರ್ಶವೇ-ಅವರ ಸ್ಫೂರ್ತಿಯೇ ನಮ್ಮನ್ನಿಂದು ಇಂತಹ ಸ್ಥಿತಿಯಲ್ಲಿ ಇಷ್ಟರ ಮಟ್ಟಿಗಾದರೂ ಇಟ್ಟಿದೆಯೆನ್ನುವುದನ್ನು ನಾವೆಂದೂ ಮರೆಯಲಾಗುವುದಿಲ್ಲ. ಸಂಸ್ಕೃತ ಸಾಹಿತ್ಯದಲ್ಲಿ ಅರಿತ ನುರಿತ ಸಾಹಿತಿಗಳ ವಿಷಯವನ್ನು ಈ ಸಣ್ಣ ಲೇಖನದಲ್ಲಿ ವಾಚಕರ ಮುಂದಿಡಬೇಕೆಂದು ಪ್ರಯತ್ನಿಸಿದ್ದೇನೆ.

ನಮ್ಮ ಭಾರತಭೂಮಿಯು ಅನಾದಿಕಾಲದಿಂದಲೂ ವಿದ್ಯೆಗೆ ವಾಸಸ್ಥಾನ, ಏಕೆ, ಇದು 'ಸರಸ್ವತೀದೇವಿ'ಯ ವಾಸಸ್ಥಾನವೆಂದರೂ ಸಲ್ಲುವುದು. ಸಂಸ್ಕೃತ ಭಾಷೆಯು ಉನ್ನತಸ್ಥಿತಿಯಲ್ಲಿದ್ದು ಅಂದಿನ ಪ್ರಜೆಗಳು ಭಾಷಾಭ್ಯಾಸ ಹೊಂದಿ ಕೀರ್ತಿಪಡೆದಿದ್ದ ಕಾಲದಲ್ಲಿ ಅನೇಕ ಮಹಿಳಾಮಣಿಯರು ಸಂಸ್ಕೃತ ಭಾಷೆಯನ್ನು ಅಭ್ಯಾಸಮಾಡಿ ಶ್ರೇಷ್ಠರಾದ ಕವಿಯಿತ್ರಿಯರೆನಿಸಿ ರಾರಾಜಿಸುತ್ತಿದ್ದರೆನ್ನುವುದಕ್ಕೆ ಸಾಕಾದಷ್ಟು ಆಧಾರವಿದೆ. ಆದರೆ ಕ್ರಮೇಣ ಬೇರೆ ಬೇರೆ ಮತದವರು ಆಗಾಗ್ಯೆ ನಮ್ಮ ದೇಶದ ಮೇಲೆ ದಂಡೆತ್ತಿ ಬಂದು ಸಂಸ್ಕೃತಿ ನಾಗರಿಕತೆಗಳೆಲ್ಲವನ್ನೂ ನಾಶಮಾಡಿದಾಗ ದೇಶದಲ್ಲಿ ಪ್ರಚಾರದಲ್ಲಿದ್ದ ಭಾಷೆ-ಸಾಹಿತ್ಯಗಳಿಗೂ ಸಾಕಾದಷ್ಟು ನಷ್ಟವೊದಗಿತು. ಆ ಘೋರಸಂಭವಗಳು ನಡೆದಾಗಲೂ ಕೂಡ ಮೇಘಗಳ ಮಧ್ಯೆ ಪ್ರಕಾಶಿಸುವ ನಕ್ಷತ್ರಗಳಂತೆ ಅನೇಕ ಮಂದಿ ವಿದುಷಿಯರು ಬೆಳಗಿದ್ದಾರೆ. ಅವರಲ್ಲಿ ಕೆಲವರ ಪರಿಚಯವನ್ನು ಮಾತ್ರ ಈ ಲೇಖನದಲ್ಲಿ ಕೊಡಲಾಗಿದೆ.

"ಆಯಿಚ್ಚಾಂಬಾ"—ಈಕೆಯೊಬ್ಬ ಸಂಸ್ಕೃತಭಾಷಾಪಾರಂಗತಳೆನಿಸಿದ ಮಹಿಳಾಮಣಿ. "ಸ್ವಯಂಭೂದೇವ" ಎಂಬುವರು ಆ ಕಾಲದಲ್ಲಿ ಪ್ರಸಿದ್ಧಿಹೊಂದಿದ್ದ ಅಪಭ್ರಂಶಭಾಷಾಕವಿಯಾಗಿದ್ದರು. ಆತನಿಗೆ "ಕವಿರಾಜಚಕ್ರವರ್ತಿ—ಚಂದ್ರಚೂಡಾಮಣಿ" ಎಂಬೆರಡು ಬಿರುದುಗಳಿದ್ದುವು. ಆತನ ಪತ್ನಿಯೇ ಮೇಲೆ ಸೂಚಿಸಿರುವ "ಆಯಿಚ್ಚಾಂಬಾ" ಎಂಬ ಮಹಿಳೆ. ಈಕೆಯು ಕವಿತೆಗಳನ್ನು ರಚಿಸುವುದರಲ್ಲಿ ನಿಸ್ಸೀಮಳು. ಜೈನರಲ್ಲೊ ರಾಮಾಯಣ ಮಹಾಕಾವ್ಯವು ಬಳಕೆಯಲ್ಲಿದೆ. ಆದರೆ ಅದು ಕೆಲವು ಬದಲಾವಣೆಯಿಂದ ಕೂಡಿ "ಪದ್ಮಚರಿತ್ರ"ವೆಂಬ ಹೆಸರಿನಿಂದ ಪ್ರಚಾರದಲ್ಲಿದೆ. ಅಪಭ್ರಂಶದಲ್ಲಿ ಇದು "ಭೌಮಚರ್ಯೆ" ಎಂದು ರೂಪಾಂತರ ಹೊಂದಿದೆ. ಇದನ್ನು ರಚಿಸಿದವರು "ಸ್ವಯಂಭೂ." ಇದರಲ್ಲಿ ೪೨ನೆಯ ಸಂಧಿಯಲ್ಲಿ ಅಯೋಧ್ಯಾಕಾಂಡ ಸಂಪೂರ್ಣವಾಗುತ್ತದೆ. ಮುಗಿಸುವಾಗ ಅಯೋಧ್ಯಾಕಾಂಡ ಪೂರ್ತಿ ತನ್ನ ಪತ್ನಿಯಾದ ಆಯಿಚ್ಚಾಂಬಳೇ ಬರೆದಿರುವಳೆಂದು ಸ್ವಯಂಭೂವೇ ಸ್ವತಃ ಹೇಳಿರುವರು. ಈ 'ಸ್ವಯಂಭೂ' ಎಂಟನೆಯ ಶತಮಾನದಿಂದ ಹತ್ತನೆಯ ಶತಮಾನದೊಳಗಿದ್ದವರು.

"ಪೀನಬಾಯಿ"—ಯಾದವ ರಾಜವಂಶವನ್ನು ಸೇರಿದ "ಪುಂಡಲಿಕ"ನೆಂಬ ಅರಸನಿಗೆ "ಪೀನ

"ಬಾಯಿ" ಎಂಬ ಸಕಲವಿದ್ಯಾಪಾರಂಗತಳಾದ ಮಗಳೊಬ್ಬಳಿದ್ದಳು. ಅವಳನ್ನು ಮದುವೆಯಾಗುವ ಭಾಗ್ಯ "ಹರಸಿಂಹ"ನೆಂಬ ಅರಸನಿಗೊದಗಿತು. ಆ ಪೀನಬಾಯಿ ಹದಿನೆಂಟು ಪುರಾಣಗಳನ್ನೂ, ವೇದಗಳನ್ನೂ, ಸಕಲ ಸ್ಮೃತಿಶಾಸ್ತ್ರಗಳನ್ನೂ ಅಭ್ಯಾಸಮಾಡಿದ್ದಳು. ಈಶ್ವರ ಪೂಜೆ—ದಾನಧರ್ಮ-ಭಜನೆ—ಪುರಾಣಪುಣ್ಯ ಕಥೆಗಳಲ್ಲೇ ಸದಾ ಕಾಲಕಳೆಯುತಿದ್ದಳು. ಸಕಲ ಆತ್ಮಗಳೂ ಉದ್ಧಾರವಾಗಲು ಸಹಾಯವಾಗುವಂತಹ 'ದ್ವಾರಕಾಪತ್ತನಂ' ಎಂಬ ರಾಮಾನುಜಮತದ ಗ್ರಂಥವೊಂದನ್ನು ರಚಿಸಿರುವಳು. ಈ ಗ್ರಂಥದ ಹಸ್ತಪ್ರತಿಯು ಒಂದೇ ಒಂದು ಮಾತ್ರ ಇರುವುದೆಂದು ಹೇಳಲ್ಪಡುತ್ತಿದೆ. ಈ ಗ್ರಂಥವನ್ನು ಬರೆದ ಕಾಲವು ೧೫೦೪ನೇ ಇಸವಿ ಅಂದರೆ ಕ್ರಿಸ್ತಪೂರ್ವ ೧೫೧೦ನೆಯ ವರ್ಷ—ಇದರಿಂದ ಪೀನಬಾಯಿ ಹದಿನೈದನೇ ಶತಮಾನದ ಆದಿಭಾಗದಲ್ಲಿ ಇದ್ದಿರಬೇಕೆಂದು ತಿಳಿದು ಬರುತ್ತದೆ.

"ಲಕ್ಕಿಮಾ ದೇವಿ"—ಕ್ರಿಸ್ತಪೂರ್ವ ಹದಿನೈದನೇ ಶತಮಾನದ ಮಧ್ಯಭಾಗದಲ್ಲಿ ಮಿಥಿಲಾನಗರದಲ್ಲಿ ಕಾಮೇಶ್ವರವಂಶಕ್ಕೆ ಸೇರಿದ "ಚಂದ್ರಸಿಂಹ"ನೆಂಬ ಅರಸನು ಆಳುತ್ತಿದ್ದನು. ಆತನ ತಂದೆಯ ಹೆಸರು "ದರ್ಭನಾರಾಯಣ"ನೆಂದು. ತಾಯಿ "ಧೀರಮತಿ". ಆ ಧೀರಮತಿ ರಾಣಿಯು ರಚಿಸಿರುವ "ಮತದಾನವಾಶಾವಳಿ"ಯೆಂಬ ಸ್ಮೃತಿಗ್ರಂಥವು ಈಗಲೂ ಪ್ರಚಾರದಲ್ಲಿರುವುದು. ಈ ಗ್ರಂಥವನ್ನು ರಚಿಸುವಂತೆ ಪ್ರೇರೇಪಿಸಿ, ಸಲಹೆ ಉತ್ತೇಜನ ಮೊದಲಾದುವುಗಳನ್ನು ಮಾತ್ರ ಇವಳು ಮಾಡಿದ್ದೇ ಹೊರತು ಅದನ್ನು ನಿಜವಾಗಿಯೂ ಬರೆದವರು "ವಿದ್ಯಾಪತಿ" ಎಂಬ ಪಂಡಿತೋತ್ತಮರೇ ಆದರೂ ಈ ರಾಣಿಗೆ ಪಂಡಿತರನ್ನಾದರಿಸಿ ಗ್ರಂಥಗಳನ್ನು ರಚಿಸುವಂತೆ ಪ್ರೋತ್ಸಾಹಿಸುವ ಮತ್ತು ಸಲಹೆಕೊಡುವಷ್ಟು ಹೃದಯವೈಶಾಲ್ಯವೂ ಅಪಾರವಾದ ಬುದ್ಧಿಶಕ್ತಿಯೂ ಇದ್ದದ್ದು ನಿಜವಾಗಿಯೂ ಮೆಚ್ಚತಕ್ಕದ್ದು. ಅದರಲ್ಲೂ ಸ್ಮೃತಿಯಲ್ಲಿ ಕಾವ್ಯರಚನ ಮಾಡಲು ಅವಳು ಊರುಗೋಲಾಗಿದ್ದುದು ಅಭಿನಂದನಾರ್ಹವಾದುದೇ. ಈ ಧೀರಮತಿಗೂ ಇಬ್ಬರು ಗಂಡು ಮಕ್ಕಳು. ಅವರ ಹೆಸರು "ಚಂದ್ರಸಿಂಹ ಮತ್ತು ಭೈರವೇಂದ್ರ"ನೆಂದು. ಇವರಿಬ್ಬರಿಗೂ ಪತ್ನಿಯರಾಗಿ ಬಂದ ರಮಣಿಯರಿಬ್ಬರೂ ಅತ್ತೆಯಂತೆಯೇ ಕಲೆ, ಸಾಹಿತ್ಯಗಳಿಗೆ ಉತ್ತೇಜನಕೊಡುವ ಮನಸ್ಸುಳ್ಳವರಾಗಿದ್ದರು. "ಭೈರವೇಂದ್ರ"ನ ಪತ್ನಿಯ ಹೆಸರು "ಜೆಯ" ಎಂದು. ಅವಳ ಹೆಸರಿನಲ್ಲಿ "ದ್ವೈತನಿರ್ಣಯ"ವೆಂಬುದೊಂದು ಸ್ಮೃತಿಗ್ರಂಥವು ಪ್ರಚಾರದಲ್ಲಿರುವುದು. ಈ ಗ್ರಂಥದ ಕರ್ತೃಯೆಂದು ಹೇಳುವುದು ಈ "ಜೆಯ"ಳನ್ನೇ. ಆದರೂ ಇದನ್ನು ನಿಜವಾಗಿ ಬರೆದವರು ಅವಳನ್ನಾಶ್ರಯಿಸಿದ್ದ ವಿದ್ವಾಂಸರಲ್ಲೊಬ್ಬರಾದ "ವಾಚಸ್ಪತಿ"ಯೆನ್ನುವವರು. ಜೆಯಳ ಓರಗಿತ್ತಿಯಾದ ಚಂದ್ರಸಿಂಹನ ಪತ್ನಿ "ಲಕ್ಷ್ಮಿ" ಅಥವಾ "ಲಕ್ಕಿಮಾದೇವಿ", "ಲಕ್ಕಿಮಾ ಠಾಕೂರಾಣಿ"—ಎಂಬವಳಿಂದ ಆದರಿಸಲ್ಪಟ್ಟ ಮತ್ತು ಉತ್ತೇಜನಕೊಡಲ್ಪಟ್ಟ "ಮಿಶ್ರೂಮಿಶ್ರನ್" ಎಂಬ ಪಂಡಿತರೂ ಒಬ್ಬರಿದ್ದರು. ಅವರು ಲಕ್ಕಿಮಾದೇವಿಯಿಂದ ಪ್ರೇರೇಪಿಸಲ್ಪಟ್ಟವರಾಗಿಯೇ ತಮ್ಮ ನ್ಯಾಯವೈಶೇಷಿಕ ಶಾಸ್ತ್ರಗ್ರಂಥವಾದ "ಪದಾರ್ಥಚಂದ್ರಿಕೆ"ಯನ್ನೂ, ಸ್ಮೃತಿಯಲ್ಲಿನ ವ್ಯವಹಾರಭಾಗದಲ್ಲಿರುವ ವಿಷಯವನ್ನು ವ್ಯಕ್ತಗೊಳಿಸುವ "ವಿವಾದಚಂದ್ರ"ವೆಂಬ ಗ್ರಂಥವನ್ನೂ ರಚಿಸಿದರು.

ಈ ಲಕ್ಕಿಮಾದೇವಿ ಮಹಾ ಪಂಡಿತಳು—ಅವಳ ಬುದ್ಧಿಯನ್ನೂ ಕವಿತಾಶಕ್ತಿಯನ್ನು ಕುರಿತು ದಂತಕಥೆಗಳೀಗೆಷ್ಟೋ ಮಿಥಿಲಾನಗರದಲ್ಲಿ ಇಂದೂ ಹೇಳಲ್ಪಡುತ್ತಿವೆ. ಅವಳು ತನ್ನ ಮಗಳನ್ನೊಬ್ಬ ಪಂಡಿತನಿಗೆ ಕೊಟ್ಟು ಮದುವೆ ಮಾಡಿದ್ದಳಂತೆ. ತನ್ನ ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ ತನ್ನ ಅಳಿಯನಿಗೆ ಒಂದು ಶ್ಲೋಕ ಬರೆದು ಕಳುಹಿಸಿದಳು:-ಆ ಶ್ಲೋಕದಲ್ಲಡಕವಾಗಿದ್ದ ವಿಷಯವೇನೋ ಅಷ್ಟೊಂದು ದೊಡ್ಡದಲ್ಲ. ಹೆಣ್ಣುಗಂಡುಗಳ ವಿಷಯ ಹೇಳಿ ಹೆಣ್ಣುಗಂಡು ಒಂದಾಗಿ ಸೇರುವ ಕಾಲವೊದಗಿದ್ದರಿಂದ ರಸಿಕಶಿಖಾಮಣಿಯಾದ ಗಂಡನು ಅವಳನ್ನು ಆನಂದಗೊಳಿಸಬೇಕೆಂದು ಹೇಳಿದ್ದಳು. ಆದರೆ ಈ ವಿಷಯಗಳ ಪರಸ್ಪರ ಜೋಡಣೆಗೆ ಅವಳು ಅತಿ ಚಾತುರ್ಯದಿಂದ ಒಗಟು ಹೇಳುವಂತೆ ಇರುವ ಪದಗಳನ್ನು ಸೇರಿಸಿದ್ದಳು. ಹನ್ನೆರಡು ರಾಶಿಗಳನ್ನು ಶ್ಲೇಷೆಯಾಗಿ ಹೊಂದಿಸಿಕೊಂಡಿರುವ ಈ ಶ್ಲೋಕವು ಎಲ್ಲ ರಸಿಕರನ್ನೂ ಮುಗ್ಧಗೊಳಿಸುವಂತಿರುವುದು.

ಸ್ತ್ರೀಯರು ಅಬಲೆಯರೆಂದೂ, ಅಜ್ಞಾನಿಗಳೆಂದೂ

ಸ್ಥಿರಮಾಡಲ್ಪಟ್ಟಿರುವಾಗ ಅವರು ಪಂಡಿತೆಯರಾಗಿ ಕೀರ್ತಿಗಳಿಸಿದರೆನ್ನುವುದನ್ನು ಸುಲಭವಾಗಿ ಒಪ್ಪಿಕೊಳ್ಳುವರೇ? ಇವಳೂ ಯಾರ ಸಹಾಯದಿಂದಲೋ ಕವಿತೆಗಳನ್ನು ರಚಿಸಿರುವಳೆಂದು ಅಸೂಯಾಪರರಾದ ಅನೇಕ ವಿದ್ವಾಂಸರು ಭಾವಿಸಿ ಅವಳನ್ನು ಪರೀಕ್ಷೆ ಮಾಡಿಯೇ ತೀರಬೇಕೆಂದು ತೀರ್ಮಾನಿಸಿ ಈ ಕಾರ್ಯವನ್ನು ಸಾಧಿಸಲು ತಮ್ಮ ಗುಂಪಿನವನೊಬ್ಬನನ್ನು ಗೊತ್ತುಮಾಡಿದರು. ಪರೀಕ್ಷೆ ಮಾಡಲು ಆ ಪಂಡಿತನು ಅರಮನೆಗೆ ಬರುವನೆಂಬ ಸುದ್ದಿಯನ್ನರಿತ ಲಕ್ಕಿಮಾದೇವಿ, ಬಾವಿಗೆ ನೀರು ತರಲು ಹೋಗುವಾಗ ಧರಿಸುವಂತಹ ಉಡುಪನ್ನು ಧರಿಸಿ ಬಿಂದಿಗೆಯನ್ನು ಕಂಕುಳಲ್ಲಿಟ್ಟುಕೊಂಡು ಬರುತಿದ್ದಳು. ಅದೇ ದಾರಿಯಲ್ಲಿಯೇ ಪರೀಕ್ಷಿಸಲು ಹೊರಟಿದ್ದ ಪಂಡಿತನೂ ಬರುತಿದ್ದನು. ಲಕ್ಕಿಮಾದೇವಿ ಆತನ ಕಡೆ ಒಂದೆರಡು ಸಲ ದೃಷ್ಟಿಸಿ ನೋಡಿ ಹೊರಟು ಹೋದಳು. ಇದನ್ನರಿತ ಪಂಡಿತನು ಹೋಗುತಿದ್ದವಳನ್ನು ಕರೆದು ಹೀಗೆ ಹೇಳಿದನು:—"ಸೊಂಟದಲ್ಲಿ ಬಿಂದಿಗೆಯನ್ನಿಟ್ಟುಕೊಂಡು ನಿಂತು ವಕ್ರದೃಷ್ಟಿಯಿಂದ ನನ್ನನ್ನೇ ಏಕೆ ನೋಡುತ್ತಿರುವೆ? ನಿನ್ನನ್ನು ಕೂಡಲು ತಕ್ಕವನಾದವನು ಬೇರಾವನಾದರೂ ಇದ್ದರೆ ಅವನನ್ನೀರೀತಿ ನೋಡು, ಹೋಗು. ನೀರಿನ ಬಿಂದಿಗೆ ಹೊತ್ತುಕೊಂಡು ಹೋಗುವವಳನ್ನು ನಾನು ಕೈಯಿಂದ ಕೂಡ ಮುಟ್ಟಲಾರೆನು." ಇದಕ್ಕುತ್ತರವಾಗಿ ಲಕ್ಕಿಮಾದೇವಿ, "ಮಾರನ ಅಸ್ತ್ರಗಳ ಶಕ್ತಿಯನ್ನರಿಯದ ಪಂಡಿತನೇ! ನಿಜವಾಗಿ ಹೇಳುತ್ತೇನೆ. ನಾನು ನಿನ್ನನ್ನು ಹೊಂದಬೇಕೆಂದೆಣಿಸಿ ನಿನ್ನ ಕಡೆ ನೋಡಲಿಲ್ಲ. ನಿನ್ನಂತೆಯೇ ಇದ್ದ ನಮ್ಮ ತೋಟದ ಮಾಲಿ ಅದೆಲ್ಲೋ ಹೋದವನು ಬರಲಿಲ್ಲ; ಅವನೇನೋ ಎಂದು ನಿನ್ನನ್ನೇ ದೃಷ್ಟಿಸಿ ನೋಡುತಿದ್ದೆ" ಅಂದಳು.

ಮಿಥಿಲಾನಗರದಲ್ಲಿ ಕೆಲವು ಮಂದಿ ಕೀಳ್ಜಾತಿಯವರು ತಮ್ಮ ಹೆಣ್ಣುಮಕ್ಕಳನ್ನು ತಮಗಿಂತಲೂ ಕೀಳಾದ ಜಾತಿಯವರಿಗೆ ಮಾರುವ ಪದ್ಧತಿಯಿತ್ತಂತೆ. ಈ ರೀತಿಯಾಗಿ ಹೆಣ್ಣುಮಕ್ಕಳನ್ನು ಮಾರುವ ಜಾತಿಯವರಿಗೆ "ಪಿಗೌಯಾ" ಎಂದು ಹೆಸರು. ಒಂದು ಸಲ ತನ್ನ ಸಹೋದರಿಯೊಬ್ಬಳನ್ನು ಮಾರಿ ಹಣ ತೆಗೆದುಕೊಂಡು ಅವಸರಅವಸರವಾಗಿ ಹೋಗುತಿದ್ದ "ಪಿಗೌಯಾ" ಒಬ್ಬನನ್ನು ಕಂಡು ಜಿಗುಪ್ಸೆಪಟ್ಟು ಆ ಹೀನಜಾತಿಯವರಲ್ಲಿರುವ ದುಷ್ಟಪದ್ಧತಿಯನ್ನು ಬಿಟ್ಟು ಬಿಡುವಂತೆ ಕೇಳಿಕೊಂಡು ಒಂದು ಶ್ಲೋಕವನ್ನೇ ರಚಿಸಿರುವಳು.

"ಶಾರದ"—ವಿಜಯನಗರದ ಅರಸನಾದ ಸಾಳ್ವ ನರಸಿಂಹನ ಹೆಸರಿನಲ್ಲಿ "ಮುಶ್ಯಂಡ್ರಂ" ಕವಿಗಳ ಗುಂಪಿಗೆ ಸೇರಿದ "ಶೋಣಾದ್ರಿ (ಅರುಣಗಿರಿ) ನಾದನ್" ಎಂಬ ಮಹಾಕವಿಯು "ರಾಮಾಭ್ಯುದಯ"ವೆಂಬ ಮಹಾಕಾವ್ಯವನ್ನು ರಚಿಸಿರುವನು. ಈ ಕಾವ್ಯದ ಪ್ರಾರಂಭದಲ್ಲಿಯೇ ಇತರ ಕವಿಗಳನ್ನು ವರ್ಣಿಸುವಾಗ "ಶಾರದ" ಎಂಬೊಬ್ಬ ಕವಿಯಿತ್ರಿಯ ವಿಷಯವಾಗಿ ಈ ರೀತಿ ಹೇಳಿರುವನು:—"ವಚನದಲ್ಲಿಯೂ ವ್ಯಕ್ತದಲ್ಲಿಯೂ ಅನೇಕ ಕಾವ್ಯಗಳನ್ನೂ, ಹದಿನೆಂಟು ನಾಟಕಗಳನ್ನೂ ಕವಿಯಿತ್ರಿ ಶಾರದಾದೇವಿ ರಚಿಸಿರುವಳು".

"ವೈಜಯಂತಿ"—ಬಂಗಾಳದ ಫರೀದ್‌ಪೂರ್ ಜಿಲ್ಲೆಯಲ್ಲಿ "ತನುಕ" ಗ್ರಾಮದಲ್ಲಿ "ಮೂರಭಟ್ಟ"ನೆಂಬ ಹೆಸರಿನ ಪಂಡಿತರಿಗೆ "ವೈಜಯಂತಿ" (ಜಯಂತಿ) ಎಂಬ ಹೆಸರಿನ ಮಗಳೊಬ್ಬಳಿದ್ದಳು. "ಕೊಟಲಿಪದಂ ದುರ್ಗಾದಾಸ" ತರ್ಕವಾಗಿ ಶರಪುತ್ರನಾದ "ಕೃಷ್ಣನಾಥ"ನೆಂಬವನೊಡನೆ ಅವಳ ವಿವಾಹವಾಯಿತು. ಅವಳಿದ್ದುದು ಕ್ರಿಸ್ತಪೂರ್ವ ಹದಿನೇಳನೇ ಶತಮಾನದ ಮಧ್ಯಭಾಗದಲ್ಲಿ; ತನ್ನ ತಂದೆಯ ಬಳಿ ಸಂಸ್ಕೃತಾಭ್ಯಾಸ ಮಾಡಿ ಮೀಮಾಂಸಶಾಸ್ತ್ರದಲ್ಲಿ ಬಹಳ ಪಾಂಡಿತ್ಯವನ್ನು ಗಳಿಸಿದ್ದಳು. ತನ್ನ ಪತಿಯು ಪಾಠ ಹೇಳಿಕೊಡುತಿದ್ದಾಗ ಮಾಡಿದ ಒಂದು ತಪ್ಪನ್ನು ಈಕೆಯು ತಿದ್ದಿದ್ದಳೆಂಬುದಾಗಿ ಪ್ರತೀತಿ ಇದೆ. ಈಕೆಯು ಬಹಳ ಇಂಪಾಗಿ ಕವಿತೆಗಳನ್ನು ಹಾಡಬಲ್ಲಳು. ಆದರೆ ಈಕೆಯು ರಚಿಸಿದ ಕವಿತೆಗಳೆಲ್ಲವೂ "ಆನಂದಲತಿಕಾ" ಎಂಬ ಚಂಪುಕಾವ್ಯದಲ್ಲಿದೆ. ಈ ಗ್ರಂಥವನ್ನು ಈಕೆಯೂ ಈಕೆಯ ಪತಿಯಾದ ಕೃಷ್ಣನಾಥನೂ ಕೂಡಿಯೇ ಬರೆದಿರುವುದಾಗಿ ಉಲ್ಲೇಖಿಸಲ್ಪಟ್ಟಿರುವುದರಿಂದ ಯಾರ್ಯಾರು ಯಾವ ಯಾವ ಕವಿತೆಗಳನ್ನು ರಚಿಸಿರುವರೆಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

"ಲಕ್ಷ್ಮಿ"—ಕ್ರಿಸ್ತಪೂರ್ವ ಹದಿನೇಳನೇ ಶತಮಾನದ ಕೊನೆಯಲ್ಲೂ ಹದಿನೆಂಟನೆಯ ಶತಮಾನದ ಮೊದಲಿನಲ್ಲೂ ಸಕಲಶಾಸ್ತ್ರಪಾರಂಗತರಾಗಿಯೂ ವಿಶೇಷವಾಗಿ ವ್ಯಾಕರಣಶಾಸ್ತ್ರದಲ್ಲಿ ಹೆಚ್ಚು ಪ್ರವೀಣತೆಯನ್ನು

ಪಡೆದವರಾಗಿಯೂ ಇದ್ದ "ನಾಗೋಜಿ ಭಟ್ಟ"ರೆಂಬುವರಿಗೆ "ವೈದ್ಯನಾಥಪಾಯಕುಂಡ" ಎಂಬ ಹೆಸರಿನ ದಕ್ಷಿಣ ದೇಶದ ಬ್ರಾಹ್ಮಣರೊಬ್ಬರು ಶಿಷ್ಯರಾಗಿದ್ದರು. ಈತನೂ ಕೂಡ ಸಂಸ್ಕೃತ ಮತ್ತು ವ್ಯಾಕರಣಶಾಸ್ತ್ರದಲ್ಲಿ ನಿಪುಣನಾಗಿದ್ದನು. ಈತನಿಗೆ "ಲಕ್ಷ್ಮೀ" ಎಂಬ ಹೆಸರಿನ ಸತಿಯಿದ್ದಳು. ಇವರ ಕುಮಾರನಾದ "ಬಾಲಕೃಷ್ಣನು" (ಬಾಲಭಟ್ಟನು) ಸ್ಮೃತಿಯಲ್ಲಿ ಬಹಳ ಪ್ರವೀಣನಾಗಿದ್ದನು. "ಲಕ್ಷ್ಮೀ" ಮುದ್ಗಲ ಗೋತ್ರದವರಾದ "ಮಹದೇವ"ರೆಂಬುವವರ ಕುಮಾರಿ.

ಯಾಜ್ಞ್ಯವಲ್ಕಿ ಸ್ಮೃತಿಗೆ ವಿಜ್ಞೇಶ್ವರರು ಬರೆದ "ಮಿತಾಕ್ಷರೆ" ಎಂಬ ವ್ಯಾಖ್ಯಾನದ ಮೇಲೆ "ಲಕ್ಷ್ಮೀ ವ್ಯಾಖ್ಯಾನ"ವೆಂಬುದೊಂದು ಉಪರಿ ವ್ಯಾಖ್ಯಾನವು ಪ್ರಚಾರದಲ್ಲಿರುವುದು. ಇದರಂತೆಯೇ ಮಾಧವರ ಕಾಲನಿರ್ಣಯಕ್ಕೆ "ಲಕ್ಷ್ಮೀ"ವ್ಯಾಖ್ಯಾನ ಎಂಬ ವ್ಯಾಖ್ಯಾನ ಗ್ರಂಥವೊಂದಿದೆ. ಈ ಎರಡು ಲಕ್ಷ್ಮೀವ್ಯಾಖ್ಯಾನಗಳಿಂದ ಸ್ಮೃತಿಗ್ರಂಥಗಳು ಮೇಲೆ ಹೇಳಿದ ವೈದ್ಯನಾಥರ ಪತ್ನಿ "ಲಕ್ಷ್ಮೀ" ಬರೆದಿರುವಳೆಂದು ಈ ಗ್ರಂಥಗಳಲ್ಲಿ ಕಂಡು ಬರುತ್ತಿದೆ.

ಆದರೆ ಇವುಗಳೆಲ್ಲವೂ ಲಕ್ಷ್ಮೀಬಾಯಿಯಿಂದಲೇ ಬರೆಯಲ್ಪಟ್ಟವುಗಳೇ ಎಂದು ವಿಮರ್ಶೆಮಾಡಿ ನೋಡಿದಾಗ ಇವು ಆಕೆಯ ಪುತ್ರನಾದ "ಬಾಲಂಭಟ್ಟ"ರಿಂದ ಬರೆಯಲ್ಪಟ್ಟು ತಾಯಿಯ ಹೆಸರಿನಲ್ಲಿ ಪ್ರಚುರಿಸಲ್ಪಟ್ಟಿತೆಂಬುದು ಚೆನ್ನಾಗಿ ವ್ಯಕ್ತವಾಗುವುದು. ಇವುಗಳಲ್ಲಿ "ಮಿತಾಕ್ಷರೆ"ಯ ವ್ಯಾಖ್ಯಾನದಲ್ಲಿ ಮಾತ್ರ ಸ್ತ್ರೀಯೊಬ್ಬಳ ಕೈವಾಡವಿರುವುದು ಚೆನ್ನಾಗಿ ಕಂಡು ಬರುವುದು. ಒಂದುವೇಳೆ ವಿದ್ಯಾವತಿಯಾದ ಲಕ್ಷ್ಮೀ ಸ್ತ್ರೀಯರ ಸಂಬಂಧವಾಗಿ ಸ್ಮೃತಿಯಲ್ಲಿರುವ ವಿಷಯಗಳಲ್ಲಿ ಧೈರ್ಯದಿಂದ ನೂತನಾಭಿಪ್ರಾಯಗಳನ್ನು ಹೊಂದಿದವಳಾಗಿ ತನ್ನ ಮಗನಿಗೆ ಹಾಗೆಯೇ ಬರೆಯಬೇಕೆಂದು ಕಟ್ಟಳೆ ಮಾಡಿರಬಹುದು. ತನ್ನ ತಾಯಿಯ ಅಭಿಪ್ರಾಯಗಳು ತನ್ನ ಮನಸ್ಸಿಗೂ ಸರಿಯಾದುದೆಂದು ತಿಳಿದು ಬಾಲಂಭಟ್ಟರು ಅವುಗಳನ್ನು ಧೈರ್ಯವಾಗಿ ಬರೆದಿರಬಹುದು. "ಬಾಲಂಭಟ್ಟ–ಲಕ್ಷ್ಮೀ" ಎಂಬಿಬ್ಬರ ಹೆಸರಿನಿಂದಲೂ ಸೂಚಿಸಲ್ಪಡುವ "ಮಿತಾಕ್ಷರೆ"ಯ ವ್ಯಾಖ್ಯಾನದಲ್ಲಿ ಸ್ತ್ರೀಯರ ಅನುಕೂಲಕ್ಕಾಗಿ ಸರಳವಾದ ಅರ್ಥವು ಬರೆಯಲ್ಪಟ್ಟಿರುವುದು. ಮಗನಿಗೆ ಆಸ್ತಿಯಲ್ಲಿ ಹಕ್ಕಿರುವಂತೆಯೇ ಮಗಳಿಗೂ ಹಕ್ಕಿದೆಯೆನ್ನುವುದು "ಬಾಲಂಭಟ್ಟ"ನ ಅಭಿಪ್ರಾಯ. ಮಗ–ಮಗಳು–ಸೋದರ-ಸೋದರಿ. ಇವರಲ್ಲಿ ಯಾವ ಭೇದವೂ ಇಲ್ಲವೆಂಬುದು ಆತನ ವಾದ. ಸಹೋದರನ ಮಕ್ಕಳೂ ವಾರಸುದಾರರಾಗಿ ಕರೆಯಲ್ಪಡುವಾಗ ಸಹೋದರರ ಮಕ್ಕಳು ವಾರಸುದಾರರೆಂದು "ಬಾಲಂಭಟ್ಟಿ"ಯಲ್ಲಿ ಸೂಚಿತವಾಗಿದೆ. "ಬಾಲಂಭಟ್ಟಿ"ಯೆಂಬ ಗ್ರಂಥವು ಆಧಾರಗ್ರಂಥವಾಗಿ ಬೊಂಬಾಯಿಯಲ್ಲಿ ಪರಿಗಣಿಸಲ್ಪಟ್ಟಿಲ್ಲ. ಆದರೆ ಕಾಶಿಯಲ್ಲಿ ಅದೊಂದು ಆಧಾರ ಗ್ರಂಥವಾಗಿ ಪರಿಗಣಿಸಲ್ಪಟ್ಟರೂ ದತ್ತುಸ್ವೀಕಾರ ವಿಷಯದಲ್ಲಿ ಮಾತ್ರ ಈ ಗ್ರಂಥವು ನಂದ ಪಂಡಿತರ ಗ್ರಂಥಕ್ಕಿಂತ ಎರಡನೆಯದಾದ ಆಧಾರವೇ—ದತ್ತುಸ್ವೀಕಾರ ಮಾಡಿಕೊಳ್ಳಲು ಸ್ತ್ರೀಯು ತನ್ನ ಪತಿಯ ಅಪ್ಪಣೆಯನ್ನು ಪಡೆಯಬೇಕೆಂಬುದು ನಂದ ಪಂಡಿತರ ಅಭಿಪ್ರಾಯ. ಇದನ್ನೇ ಇಂದೂ ಆಧಾರವಾಗಿ ಸ್ವೀಕರಿಸಲಾಗಿದೆ. "ಬಾಲಂಭಟ್ಟಿ"ಯೋ ಎಂದರೆ ಪತಿಯ ಅಪ್ಪಣೆಯಿಲ್ಲದಿದ್ದಾಗ್ಯೂ ದತ್ತುಸ್ವೀಕಾರಮಾಡಿಕೊಳ್ಳಬಹುದೆಂದು ಹೇಳುವುದು. ಇದರಂತೆಯೇ ಒಬ್ಬರ ನೇರ ವಾರಸುಗಳಲ್ಲಿ ಸೊಸೆಯೂ ಸೇರಿರುವಳೆಂಬುದು "ಬಾಲಂಭಟ್ಟಿ"ಯ ಅಭಿಪ್ರಾಯ. ಈ ಅಭಿಪ್ರಾಯಗಳು, ಸ್ತ್ರೀಯೊಬ್ಬಳು ಈ ಗ್ರಂಥವನ್ನು ರಚಿಸುವುದರಲ್ಲಿ ಸೇರಿರುವಳೆಂದೋ, ತನ್ನ ಅಭಿಪ್ರಾಯವನ್ನು ಹೊರಗೆಡಹಬೇಕೆಂದು ಮಗನ ಕೈಯಲ್ಲಿ ಹೇಳಿ ಬರೆಸಿರುವಳೆಂದೋ ಸೂಚಿಸುವುವು.

"ತ್ರಿವೇಣಿ"—. . . . ಕಳೆದ ಹತ್ತೊಂಭತ್ತನೆಯ ಶತಮಾನದಲ್ಲಿ "ಉದಯೇಂದ್ರಪುರಂ ಅನಂತಾಚಾರ್" ಎಂಬೊಬ್ಬ ಕವಿಗಳಿದ್ದರು. ಇವರು "ಯಾದವ ರಾಘವ ಪಾಂಡವೀಯ" ಎಂದು ಮೂರು ಅರ್ಥಗಳನ್ನು ಕೊಡುವ ಶ್ಲೇಷ ಕಾವ್ಯವೊಂದನ್ನು ರಚಿಸಿದರು. ಪ್ರತಿಯೊಂದು ಶ್ಲೋಕದಲ್ಲೂ ಮೂರು ಕಥೆಗಳು ರೂಪಾಂತರಗೊಳಿಸಲ್ಪಟ್ಟಿವೆ. ಈ ಗ್ರಂಥದಲ್ಲಿ ಕೃಷ್ಣನ ಕಥೆ–ರಾಮನ ಕಥೆ–ಪಂಚಪಾಂಡವರ ಕಥೆ–ಇವು ಮೂರು, ಗಂಗೆ—ಯಮುನೆ–ಸರಸ್ವತಿಯೆಂಬ ಮೂರು ನದಿಗಳೂ ತ್ರಿವೇಣಿಯಲ್ಲಿ ಒಂದುಗೂಡುನಂತಿರುವುವು. ಆದುದರಿಂದ ಇಂತಹ ಮೂರು ಅರ್ಥಕೊಡುವ ಕಾವ್ಯಗಳನ್ನು ತ್ರಿವೇಣಿಗೆ ಹೋಲಿಸುವುದು ಸೂಕ್ತವಾಗಿದೆ. ಶ್ರೀ ಅನಂತಾಚಾರ್ಯರು ಈ ತ್ರಿವೇಣಿಕಾವ್ಯವನ್ನು ರಚಿಸಿ ಪೂರ್ತಿ

ಮಾಡಿದ ಕೂಡಲೇ ಇವರಿಗೊಬ್ಬಳು ಮಗಳು ಹುಟ್ಟಿದಳು. ಹುಟ್ಟಿದ ಕಾಲವನ್ನನುಸರಿಸಿ ಮಗಳಿಗೆ "ತ್ರಿವೇಣಿ"ಯೆಂದೇ ನಾಮಕರಣಮಾಡಿದರು.

ತ್ರಿವೇಣಿ ಅನಂತರ ಶ್ರೀಪೆರಂಬದೂರ್ ಪ್ರತಿವಾದಿ ಭಯಂಕರ ವೆಂಕೋಬಾಚಾರ್ಯರೆಂಬುವರನ್ನು ಮದುವೆಯಾದಳು. ತ್ರಿವೇಣಿ ಜೀವಿಸಿದ್ದ ಕಾಲ ಕ್ರಿಸ್ತಪೂರ್ವ ಸಾವಿರದೆಂಟುನೂರ ಹದಿನೇಳು ಸಾವಿರದೆಂಟುನೂರ ಎಂಭತ್ತಮೂರು; ಮದುವೆಗೆ ಮೊದಲೇ ವಿದ್ಯಾವಂತಳಾಗಿ ಕವಿತಾಪ್ರೌಢಿಮೆಯನ್ನು ಪಡೆದು ಕವಿತೆಗಳನ್ನು ರಚಿಸಿದಳು. ಆ ನಂತರ ಪತಿಯ ಬಳಿ ಶಾಸ್ತ್ರಗ್ರಂಥಗಳನ್ನು ಅಭ್ಯಾಸಮಾಡಿದಳು. ಇವಳಿಗೆ ಒಬ್ಬನೆ ಮಗ. ಅವನೂ ಅವಳ ಪತಿಯೂ ಮರಣಹೊಂದಿದರು. ವಿಧವೆಯಾದ ಬಳಿಕ ಇವಳಿಗೆ ಮನೆಯ ಹಿಂಭಾಗದಲ್ಲಿದ್ದ ತೋಟದಲ್ಲಿ ಕೆಲವು ದೇವರ ವಿಗ್ರಹಗಳು ದೊರೆತವು. ಇವಳು ರಚಿಸಿದ "ಹಾರತಿಪಂಚಕ"ವೆಂಬ ಕವಿತೆಯನ್ನು ಕೇಳಿ ತೃಪ್ತಿಹೊಂದಿದ ಆ ಊರಿನ ಜಿಲ್ಲಾಧಿಕಾರಿ ಮನೆಗೆ ಬಂದು ವಿಗ್ರಹಗಳನ್ನೆಲ್ಲಾ ಪರೀಕ್ಷಿಸಿ ನೋಡಿ ಅವನ್ನೆಲ್ಲಾ ಅವಳಿಗೇ ಕೊಟ್ಟುಬಿಟ್ಟನು. ಈ ಮೂರ್ತಿಗಳಿಗೆ ಆಲಯ ನಿರ್ಮಿಸುವ ಉದ್ದೇಶದಿಂದ ಆಕೆಯು, ತಿರುವಾಂಕೂರು, ಮೈಸೂರು ಸಂಸ್ಥಾನಗಳಿಗೂ ಹೋಗಿದ್ದಳು. ಆಗ ಮೈಸೂರು ಸಂಸ್ಥಾನದ ದಿವಾನರಾಗಿದ್ದ ದಿವಾನ್ ರಂಗಾಚಾರ್ಯರ ಸಹಾಯವನ್ನು ಪಡೆದು ದೇವಾಲಯವನ್ನು ಕಟ್ಟಿ ಮುಗಿಸಿದಳು.

ಸಮಸ್ಯಾಪೂರ್ತಿಯೆಂದರೆ ಹಳೆಯ ಶ್ಲೋಕಗಳಲ್ಲಿ ಒಂದು ಸಾಲನ್ನು ಕೊಟ್ಟರೆ ಉಳಿದ ಮೂರು ಸಾಲುಗಳನ್ನೂ ರಚಿಸಿ ಪೂರ್ತಿಗೊಳಿಸುವುದೆಂದರ್ಥ. ಈ ಕಲೆಯಲ್ಲಿ ತ್ರಿವೇಣಿ ಅತಿ ಚತುರಳು. ಇವಳು ಅನೇಕ ಗ್ರಂಥಗಳನ್ನು ರಚಿಸಿರುವಳು. ಈಕೆಯು ಬರೆದಿರುವ ಅನೇಕ ಸ್ತೋತ್ರಗಳಲ್ಲಿ "ಲಕ್ಷ್ಮೀಸಹಸ್ರನಾಮ—ಮತ್ತು—ರಂಗನಾಥಸಹಸ್ರನಾಮ" ಇವೆರಡೂ ಅತಿ ಮುಖ್ಯವಾದವುಗಳು. ಇವಳ ಮಹಾಕಾವ್ಯಗಳಲ್ಲೆರಡು "ರಂಗಾಭ್ಯುದಯ ಮತ್ತು ಸಂಪತ್ಕುಮಾರವಿಜಯ" ಬಹಳ ಮೆಚ್ಚಿಗೆಯನ್ನು ಪಡೆದವುಗಳು. ಮಹಾಕವಿ ಕಾಳಿದಾಸನ ಬೆಲೆಯಿಲ್ಲದ ರತ್ನವಾದ "ಮೇಘಸಂದೇಶ"ವೆಂಬ ಸಣ್ಣ ಕಾವ್ಯವನ್ನನುಸರಿಸಿ ಎಷ್ಟೋ ಮಂದಿ ಕವಿಗಳು ತಮ್ಮ ತಮ್ಮ ಸಂದೇಶಗಳನ್ನು ರಚಿಸಿರುವರು. ಸಂದೇಶಕಾವ್ಯವೆಂದರೆ ದೂತರ ಮೂಲಕ ಸುದ್ದಿ ಕಳುಹಿಸುವುದೆಂದರ್ಥ. ಈ ಮಾದರಿಯಲ್ಲಿ ತ್ರಿವೇಣಿ "ಶುಕ (ಗಿಳಿ) ಸಂದೇಶ," "ಭೃಂಗ (ದುಂಬಿ) ಸಂದೇಶ" ಎಂಬೆರಡು ಕಾವ್ಯಗಳನ್ನು ರಚಿಸಿರುವಳು. ತ್ರಿವೇಣಿ ಬರೆದಿರುವ ಅನೇಕ ಗ್ರಂಥಗಳಲ್ಲಿ ಎರಡು ನಾಟಕಗಳೂ ಇವೆ. ಅವುಗಳ ಹೆಸರು "ರಂಗರಾಕ್ಷಸಮುದಯಂ" ಮತ್ತು "ತತ್ವಮುದ್ರಾವಕ್ರೋದಯಂ" ಎಂದು. "ತತ್ವಮುದ್ರಾವಕ್ರೋದಯಂ" ಎಂಬುದು ವೇದಾಂತದಿಂದ ಕೂಡಿದ ನಾಟಕ. ಇದು ಕೃಷ್ಣಮಿಶ್ರರ "ಪ್ರಬೋಧಚಂದ್ರೋದಯ" ವೇದಾಂತದೇಶಿಕರ "ಸಂಕಲ್ಪಸೂರ್ಯೋದಯ" ಮೊದಲಾದ ಶಾಂತರಸದ ನಾಟಕಗಳನ್ನನುಸರಿಸಿ ಬರೆಯಲ್ಪಟ್ಟಿವೆ.

"ಮನೋರಮಾ"—ಕೇರಳ ದೇಶಕ್ಕೆ ಸೇರಿದ "ಕೋಳಿಗೋಡು" ಎಂಬ ಊರಿನಲ್ಲಿ "ಮನೋರಮೆ"ಯೆಂಬ ಹೆಸರಿನ ಪಂಡಿತಳೊಬ್ಬಳಿದ್ದಳೆಂದು ಹೇಳುವರು. ಅವಳಿಂದ ರಚಿಸಲ್ಪಟ್ಟ ಗ್ರಂಥಗಳು ಒಂದೂ ದೊರಿತಿಲ್ಲ. ಅವಳು ಬರೆದ ಬಿಡಿ ಶ್ಲೋಕಗಳಾದರೂ ಸಿಗಬಹುದೇನೋ ಎಂದು ನೋಡಲು ಅವೂ ಸಿಗಲಿಲ್ಲ. ಅವಳ ವಿಷಯವಾಗೊಂದು ವಿಷಯವನ್ನು ಮಾತ್ರ ಎಲ್ಲರೂ ಹೇಳುತ್ತಿರುವುದನ್ನು ಕೇಳಲಾಗಿದೆ. ಅವಳು ವ್ಯಾಕರಣದಲ್ಲಿ ಮಹಾಪಂಡಿತೆ. ಎಷ್ಟೋ ಮಂದಿ ಪುರುಷರು ಕೂಡ ವ್ಯಾಕರಣ ಕಲಿಯಲು ಅವಳ ಬಳಿ ಬರುತಿದ್ದರಂತೆ. ಯುವಕನೊಬ್ಬನು ಅವಳ ಬಳಿ "ಮನೋರಮಾ" ಎಂಬ ಹೆಸರಿನ ಗ್ರಂಥವನ್ನು ಕಲಿಯುತಿದ್ದನು. ಒಂದು ದಿನ "ಮನೋರಮೆ"ಯಲ್ಲಿ ತನ್ನ ಮನಸ್ಸು ಲೀನವಾಗಿದೆ ಎಂದು ಎರಡು ವಿಧವಾದ ಅರ್ಥಕೊಡುವ ಹಾಗೆ ಮಾತನಾಡಲು ಆಕೆಯು ಅಂದೇ ಅವನನ್ನು ಪಾಠಕ್ಕೆ ಬರಬೇಡವೆಂದು ಕಳುಹಿಸಿ ಬಿಟ್ಟಳಂತೆ.

"ಲಕ್ಷ್ಮೀರಾಣಿ"—ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಉತ್ತರಾರ್ಧದಲ್ಲಿ ಎಂಭತ್ತೊಂಭತ್ತನೆಯ ಅಧ್ಯಾಯದಲ್ಲಿ ಸಣ್ಣದಾದ ಆದರೆ ಅತಿ ಸ್ವಾರಸವಾದ ಕಥೆಯೊಂದಿದೆ. ದ್ವಾರಕಾನಗರದಲ್ಲಿದ್ದ ಬ್ರಾಹ್ಮಣನೊಬ್ಬನ ಮಕ್ಕಳು ಒಬ್ಬರಾದ ಮೇಲೊಬ್ಬರು ಅಲ್ಪಾಯುಸ್ಸಿನಿಂದ

ಮರಣ ಹೊಂದುತ್ತಿರಲು ಆ ಬ್ರಾಹ್ಮಣನು ಶ್ರೀಕೃಷ್ಣನ ಅರಮನೆಗೆ ಬಂದು, "ರಾಜ್ಯದಲ್ಲಿ ಅಧರ್ಮವು ಹೆಚ್ಚಿರುವುದರಿಂದಲೇ ಈ ರೀತಿಯಾಗಿ ಅಕಾಲಮೃತ್ಯುವು ತಾಂಡವವಾಡುತ್ತಿದೆ" ಎಂದು ಗೋಳಾಡಿದನು. ಈತನ ಗೋಳನ್ನು ಕೇಳಿ ಅಲ್ಲೇ ಸಮೀಪದಲ್ಲಿ ಕುಳಿತಿದ್ದ ಅರ್ಜುನನು ತನ್ನ ಗಾಂಡೀವದ ಶಕ್ತಿಯ ಬಲದ ನಂಬಿಕೆಯಿಂದ ಬ್ರಾಹ್ಮಣನನ್ನು ಸಮಾಧಾನಗೊಳಿಸಿ ಮೃತ್ಯುವು ಬಾರದಂತೆ ತಾನು ತಡೆಯುತ್ತೇನೆ ಎನ್ನುತ್ತಾ ಬಿಲ್ಲನ್ನು ತೆಗೆದುಕೊಂಡು ಬ್ರಾಹ್ಮಣನ ಮನೆಗೆ ಬಂದು ಅಲ್ಲಿ ಮಗುವು ಮಲಗಿರುವ ಕೊಠಡಿಯನ್ನು ಶರಪಂಜರದಿಂದ ಮರೆಮಾಡಿದನು. ಆದರೂ ಮೃತ್ಯುದೇವತೆಯು ಆ ಕೊಠಡಿಯ ಒಳಹೊಕ್ಕು ಮಗುವಿನ ಪ್ರಾಣವನ್ನು ಕೊಂಡೇ ಹೋಯಿತು. ಇದನ್ನು ಕಂಡ ಅರ್ಜುನನು ಕೋಪಗೊಂಡು ತನ್ನ ರಥವನ್ನೇರಿ ಯಮನನ್ನಟ್ಟಿಕೊಂಡು ಹೋಗಿಯೂ ಪ್ರಯೋಜನವಾಗಲಿಲ್ಲ. ಲಜ್ಜೆಯಿಂದ ತಲೆಬಾಗಿದವನಾಗಿ ಹಿಂತಿರುಗಿದನು. ಶ್ರೀಕೃಷ್ಣಪರಮಾತ್ಮನ ಸುದರ್ಶನ ಚಕ್ರದ ಮಹತ್ವದಿಂದ ಬ್ರಾಹ್ಮಣನ ಮಕ್ಕಳೆಲ್ಲರೂ ಮತ್ತೆ ಜೀವಿಸಿದರು. ಈ ಅದ್ಭುತವನ್ನು ಕಂಡ ಫಲ್ಗುಣನು "ಮನುಷ್ಯನಿಗೆ ಯಾವುದಾದರೂ ಶಕ್ತಿಯುಂಟಾಗುವಂತಿದ್ದರೆ ಅದು ಪರಮಾತ್ಮನ ಅನುಗ್ರಹದಿಂದಲೇ" ಎಂಬ ತೀರ್ಮಾನಕ್ಕೆ ಬಂದವನಾಗಿ ತನ್ನಲ್ಲಿದ್ದ ಅಹಂಭಾವವನ್ನು ಬಿಟ್ಟುಬಿಟ್ಟನು.

ಮೇಲಿನ ಕಥೆಯನ್ನು ಮೂರು ಸರ್ಗಗಳಿಂದ ಕೂಡಿದ ಒಂದು ಸಣ್ಣ ಗ್ರಂಥವಾಗಿ ಒಬ್ಬ ಮಹಿಳೆಯು ಬರೆದಿರುವಳು. ಈ ಗ್ರಂಥಕ್ಕೆ "ಸಂತಾನಗೋಪಾಲ ಕಾವ್ಯ"ವೆಂದು ಹೆಸರು. ಇದನ್ನು ಬರೆದವಳು ಕೇರಳ ದೇಶಕ್ಕೆ ಸೇರಿದ–ಕಡತ್ತನಾಡು–ಇಹವಳಂ-ಕೋವಿಲಹಂ–ಎಂಬ ಊರಿನವಳಾದ "ಲಕ್ಷ್ಮೀರಾಣಿ"ಯೆಂಬ ರಾಜಮನೆತನದ ಸ್ತ್ರೀ; ಈ ಗ್ರಂಥದ ಮೂರನೆಯ ಸರ್ಗ ಯಮಾಲಂಕಾರದಲ್ಲಿ ಸೂಚಿತವಾಗಿದೆ. ಈ ಕಾವ್ಯವು ತಿರುಚೂರಿನಲ್ಲಿ ಅಚ್ಚಾಗಿದ್ದರೂ ಪ್ರತಿಗಳು ದೊರೆಯುವುದೇ ದುರ್ಲಭವಾಗಿದೆ. ಎಲ್ಲೋ ಪ್ರತಿಗಳಿವೆಯೆಂದು ಮಾತ್ರ ಅವರಿವರು ಹೇಳುತ್ತಿರುವರು. "ಲಕ್ಷ್ಮೀರಾಣಿ" ರಾಜಾರಾಮವರ್ಮನ ತಾಯಿ.

"ಸುಂದರವಲ್ಲಿ"—ಸುಮಾರು ಮೂವತ್ತೈದು ವರ್ಷಗಳ ಹಿಂದೆ ಮೈಸೂರಿನಲ್ಲಿ "ಸುಂದರವಲ್ಲಿ" ಎಂಬ ಮಹಿಳೆಯು ಸಂಸ್ಕೃತದಲ್ಲಿ ಉತ್ತಮ ಕವಿತಾಶಕ್ತಿಯನ್ನು ಹೊಂದಿದವಳಾಗಿದ್ದಳು. ಆಕೆಯ ತಂದೆಯ ಹೆಸರು "ನರಸಿಂಹಯ್ಯಂಗಾರ್" ಎಂದು; ಈಕೆಯು ಶ್ರೀಮಾನ್ ಕಸ್ತೂರಿ ರಂಗಾಚಾರ್ಯರ ಶಿಷ್ಯಳು. ರಾಮಾಯಣ ಮಹಾಕಾವ್ಯವನ್ನು ಗದ್ಯಪದ್ಯರೂಪವಾದ ಚಂಪೂಕಾವ್ಯರೀತಿಯಲ್ಲಿ ಆರು ಸರ್ಗಗಳಲ್ಲಿ "ರಾಮಾಯಣಚಂಪೂ" ಎಂಬ ಹೆಸರಿನಿಂದ ಬರೆದು ಅದು ಬೆಂಗಳೂರಿನಲ್ಲಿ ಅಚ್ಚಾಗಿರುವುದಾಗಿ ತಿಳಿದು ಬರುವುದು.

"ಜ್ಞಾನಸುಂದರಿ"–ಮೂವತ್ತು ವರ್ಷಗಳ ಹಿಂದೆ ಕುಂಭಕೋಣದಲ್ಲಿ "ಜ್ಞಾನಸುಂದರಿ"ಯೆಂಬ ಹೆಸರಿನ ದೇವದಾಸಿಯೊಬ್ಬಳಿದ್ದಳು. ಆಕೆಯು ಅತ್ಯುತ್ತಮ ಕವಿತಾಶಕ್ತಿಯನ್ನು ಪಡೆದಿದ್ದಳು. ಈಕೆಯು ಕವಿಶ್ರೇಷ್ಠರಾದ "ಶ್ರೀಕುಪ್ಪಸಾಮಿ ಶಾಸ್ತ್ರಿ"ಗಳ ಮಗಳೂ ಶಿಷ್ಯಳೂ ಆಗಿದ್ದಳೆಂದು ಹೇಳುವರು. ಈಕೆಯು ಅನೇಕ ಗ್ರಂಥಗಳನ್ನು ರಚಿಸಿರುವಳು. ಈಕೆಯ ಕಲೆ, ಕವಿತೆ, ಪ್ರೌಢಿಮೆಗಳ ವಿಷಯ ಹಿರಿಯರನೇಕರಿಗೆ ತಿಳಿದಿರಬಹುದು. ಕಥೆ-ಹಾಡು-ನೃತ್ಯ ಮೊದಲಾದುವುಗಳಲ್ಲೂ ಈಕೆ ಪ್ರಸಿದ್ಧಿ ಹೊಂದಿದ್ದಳಂತೆ. ಮಧುರೆಯಲ್ಲಿದ್ದ ಶ್ರೀಯುತ ಆರ್. ಫಿಷರ್ ಎಂಬೊಬ್ಬ ಕ್ರೈಸ್ತ ವಕೀಲರು ಇವಳ ವಿದ್ವತ್ತನ್ನು ಕಂಡು ಮೆಚ್ಚಿ ಈಕೆಗೆ ಸಹಾಯ ಮಾಡಿದ ಅನೇಕ ಮಹನೀಯರಲ್ಲೊಬ್ಬರು. ಮೈಸೂರು ದೇಶಕ್ಕೆ ಹೋಗಿ ಅಲ್ಲಿನ ವಿದ್ವಾಂಸರಿಂದ "ಕವಿರತ್ನ"ವೆಂಬ ಪ್ರಶಸ್ತಿಯನ್ನು ಪಡೆದಳು. ಈಕೆಯು ಬರೆದಿರುವ ಕಾವ್ಯಗಳಲ್ಲಿ "ಹಾಲಾಸ್ಯಚಂಪೂ" ಎಂಬ ಹೆಸರಿನ ಗ್ರಂಥವೇ ಹೆಚ್ಚಾಗಿ ಪ್ರಸಿದ್ಧಿಗೆ ಬಂದಿರುವುದು. ಇದು ಆರು ಸರ್ಗಗಳಿಂದ ಕೂಡಿ ಮಧುರಾಕ್ಷೇತ್ರದ ಇತಿಹಾಸವನ್ನು ಚಂಪೂಶೈಲಿಯಲ್ಲಿ ವರ್ಣಿಸಿರುವ ಗ್ರಂಥ.

"ಕಾಮಾಕ್ಷಿ ಅಮ್ಮ"—ತಂಜಾವೂರು ಜಿಲ್ಲೆಯ "ಮಾಯವರಂ" ಪಟ್ಟಣದಲ್ಲಿ "ದುಬಾಷ್ ಅಗ್ರಹಾರ"ವನ್ನು ಕಟ್ಟಿ ದಾನಮಾಡಿದ "ದುಬಾಷ್ ರಾಮಸ್ವಾಮಿ ಅಯ್ಯರ್" ಎಂಬ ಹೆಸರಿನಿಂದ ಸುಮಾರು ನೂರು ವರ್ಷಗಳ ಹಿಂದೆ ಹೆಸರುವಾಸಿಯಾಗಿದ್ದ ಆಂಧ್ರ ಬ್ರಾಹ್ಮಣರೊಬ್ಬರ ಸಂತತಿಯಲ್ಲಿ ಸಮೀಪ ಕಾಲದಲ್ಲಿ "ಕಾಮಾಕ್ಷಿಯಮ್ಮ" ಎಂಬ ಹೆಸರಿನ ವಿದುಷಿಯೊಬ್ಬಳಿ

ದ್ದಳು. ಈಕೆಯು ಮೊದಲು ತೆಲುಗು ಭಾಷೆಯನ್ನೇ ಅಭ್ಯಾಸ ಮಾಡಿದ್ದಳು. ಸಾವಿರದೆಂಟುನೂರು ಎಪ್ಪತ್ತೊಂದನೆಯ ವರ್ಷದಲ್ಲಿ ಮದುವೆಯಾಗಿ ಕೆಲವು ವರ್ಷಗಳ ಅನಂತರ ಪತಿಯಾದ "ಶ್ರೀ ಯೆನಮಂತ್ರಂ ರಾಮಲಿಂಗಯ್ಯ" ಎಂಬುವರು ಮರಣ ಹೊಂದಲು ಅನಂತರ ವಿದ್ಯೆಯನ್ನು ಕಲಿಯುವ ಮನಸ್ಸುಳ್ಳವಳಾಗಿ ಸಂಸ್ಕೃತವನ್ನು ಕಲಿಯಲಾರಂಭಿಸಿ ಕೆಲವು ದಿನಗಳಲ್ಲೇ ತರ್ಕ-ಅದ್ವೈತ, ವೇದಾಂತವೆಂಬ ದೊಡ್ಡದೊಡ್ಡ ಗ್ರಂಥಗಳನ್ನೂಚೆನ್ನಾಗಿ ಅಭ್ಯಾಸ ಮಾಡಿದಳು. ಈಕೆಯು ತರ್ಕಶಾಸ್ತ್ರದಲ್ಲೊಂದು ಗ್ರಂಥವನ್ನೂ ಅದ್ವೈತವೇದಾಂತದಲ್ಲೆರಡು ಗ್ರಂಥಗಳನ್ನೂ ರಚಿಸಿರುವಳು. ಈಗ ಆ ಗ್ರಂಥಗಳು ಅಚ್ಚಾಗುತ್ತಿವೆಯಂತೆ. ಅವುಗಳ ಹೆಸರುಗಳು "ನ್ಯಾಯಬೋಧಿನೀ ನೀಲಕಂಠೀಯ ವಿಷಯಮಾಲಾ", "ಅದ್ವೈತದೀಪಿಕೆ-ಶೃತಿರತ್ನಪ್ರಕಾಶಿಕೆ"-ಎಂದು. ಇವುಗಳು ಮಹಾಕ್ಷೇತ್ರವಾದ ಕುಂಭಕೋಣದಲ್ಲಿರುವ "ಶ್ರೀನಿವಾಸ ಮುದ್ರಣಾಲಯ"ದ ಮೂಲಕ ಪ್ರಕಾಶಿಸಲ್ಪಟ್ಟವು; ಬೇರೆಬೇರೆ ದೇಶಗಳಲ್ಲಿರುವ ದೊಡ್ಡದೊಡ್ಡ ವಿದ್ವಾಂಸರು ಈ ಗ್ರಂಥಗಳನ್ನೋದಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿರುವರು. ಬಹಳ ಕಷ್ಟವಾದುದೆನಿಸಿದ "ಅದ್ವೈತಸಿದ್ಧಿ ಬ್ರಹ್ಮಾನಂಧಿ" ಮೊದಲಾದ ಅದ್ವೈತಗ್ರಂಥಗಳಲ್ಲಿ ಈ ಮಹಿಳೆಯು ಪಡೆದಿರುವ ಪಾಂಡಿತ್ಯವನ್ನು ನೋಡಿ ಮಹಾಮಹೋಪಾಧ್ಯಾಯ ಚಂದ್ರಶೇಖರ ಶಾಸ್ತ್ರಿಗಳು, ದ್ರಾವಿಡ ಲಕ್ಷ್ಮಣ ಶಾಸ್ತ್ರಿಗಳು, ವಾಸುದೇವ ಬ್ರಹ್ಮೇಂದ್ರ ಸರಸ್ವತಿಯೆಂಬ ಸನ್ಯಾಸಿಗಳೇ ಮೊದಲಾದವರು ಆಶ್ಚರ್ಯಪಟ್ಟು ಹೊಗಳಿರುವರು. ಮೇಲೆ ಹೇಳಿದ ಗ್ರಂಥಗಳಲ್ಲಿ ಈಕೆಯು ಬರೆದಿರುವ ಕವಿತೆಗಳಲ್ಲಿ ಕೆಲವು ಬಹಳ ಸ್ವಾರಸ್ಯವಾಗಿವೆ.

ಮೇಲೆ ಹೇಳಿದ ಕಾಮಾಕ್ಷಿಯಮ್ಮನಂತೆ ಇನ್ನೂ ಮೂರು ಮಂದಿ ವಿದುಷಿಯರ ವಿಷಯವಾಗಿ ಇಲ್ಲಿ ಹೇಳಬಹುದಾಗಿದೆ. "ಮಧ್ಯಾರ್ಜುನ"ನೆಂಬ "ತಿರುವಿಡಮರವಿದೂರ್" ಎಂಬ ಊರಿನಲ್ಲಿ "ಅಂಬಮ್ಮ"ನೆಂಬ ಹೆಸರಿನ ವಿದುಷಿಯೊಬ್ಬಳು ಸಮೀಪಕಾಲದಲ್ಲಿದ್ದಳೆಂದೂ ಅನೇಕ ನಾಟಕಗಳನ್ನು ರಚಿಸಿರುವಳೆಂದೂ ಹೇಳುವರು. "ತಿರುವೈಯಾರ್" ಎಂಬ ಪಂಚಾಕ್ಷರಕ್ಷೇತ್ರದಲ್ಲಿ "ಕುಟ್ಟಿಯಮ್ಮ" ಎಂಬ ಹೆಸರಿನ ವಿದುಷಿಯೊಬ್ಬಳಿದ್ದಳೆಂದು ಹೇಳುವರು. ಈಕೆಯು ಶ್ರೀಮಂತ ಕುಟುಂಬದಲ್ಲಿ ಜನಿಸಿ ವಿವಾಹವಾದ ಕೆಲವೇ ದಿನಗಳಲ್ಲಿ ಪತಿಯನ್ನು ಕಳೆದುಕೊಂಡು, ತಾಯಿಯೊಡನೆ ಅನೇಕ ಯಾತ್ರಾಸ್ಥಳಗಳಿಗೆ ಹೋಗಿ ದೇವದರ್ಶನದೊಡನೆ ಸಂಸ್ಕೃತಭಾಷೆಯನ್ನೂ ಅಭ್ಯಾಸಮಾಡಿ ಅನೇಕ ಗ್ರಂಥಗಳನ್ನು ರಚಿಸಿ ಉಪಕಾರ ಮಾಡಿರುವಳು. "ಸುಂದರಿಯಮ್ಮ"ನೆಂಬ ಮತ್ತೊಬ್ಬ ಮಹಿಳೆಯೂ ತಂಜಾವೂರಿನವಳೇ. ಈಕೆಯು ಹೆಂಗಸರು ಮನೆಯಲ್ಲಿ ಹಾಡಲು ಯೋಗ್ಯವಾದ ಅನೇಕ ಹಾಡುಗಳನ್ನೂ ಕೆಲವು ಸಂಸ್ಕೃತ ಕವಿತೆಗಳನ್ನೂ ರಚಿಸಿರುವಳಂತೆ. ಹೀಗೆಯೇ ನಾವು ಅರಸುತ್ತಾ ಹೋದಲ್ಲಿ ಇನ್ನೂ ಎಷ್ಟೋ ಮಂದಿ ಶಿಕ್ಷಿತ ಮಹಿಳೆಯರ ಪರಿಚಯವನ್ನು ಹೊಂದಬಹುದು.

ಪ್ರಾಚೀನ ಶಿಲ್ಪಕಲೆಗಳನ್ನು ಸಂಗ್ರಹಿಸಿ ಸುರಕ್ಷಿತವಾಗಿಡುವುದಕ್ಕೆಂದು ಒಂದು ಸಂಸ್ಥೆಯಿದೆ. ಭೂಮಿಯಲ್ಲಿರತಕ್ಕ ಲೋಹಗಳು-ರತ್ನಗಳು ಇವುಗಳ ಸಂಗ್ರಹಕ್ಕೆಂದು ಒಂದು ಸಂಸ್ಥೆಯನ್ನೇರ್ಪಡಿಸಿಕೊಂಡು ಕೆಲಸ ಮಾಡುತ್ತಿರುವರು. ಮೃಗಗಳ ರಕ್ಷಣೆಗೆಂದು ಸಂಸ್ಥೆಯಿದೆ. ಅದರಂತೆಯೇ ಪ್ರಾಚೀನಕವಯಿತ್ರಿಯರ ವಿಷಯಸಂಗ್ರಹಕ್ಕಾಗಿಯೇ ಒಂದು ಸಂಸ್ಥೆಯನ್ನೇರ್ಪಡಿಸಿಕೊಂಡು ವಿಷಯಗಳನ್ನು ಸಂಗ್ರಹಿಸಿ ಅವುಗಳನ್ನು ಮುದ್ರಿಸಿ ಇಂದಿನ ಬಾಲಕಿಯರಿಗೆ ಪಠ್ಯಪುಸ್ತಕವಾಗಿಟ್ಟರೆ ನಮ್ಮ ಬಾಲಕಿಯರು ನಮ್ಮ ಹಿಂದಿನ ಮಹಿಳೆಯರ ವಿದ್ಯಾ ಪ್ರೌಢಿಮೆಯನ್ನರಿತು ತಾವೂ ಅವರನ್ನು ಅನುಸರಿಸಲು ಮನಸ್ಸು ಮಾಡಲಾರರೇ ಎಂಬಾಸೆಯೇ ನನ್ನನ್ನೀ ಸಂಗ್ರಹಮಾಡುವಂತೆ ಮುಂದೂಡಿತೆನ್ನಬಹುದು. ನಮ್ಮ ಪ್ರಾಚೀನ ಮಹಿಳೆಯರ ದಕ್ಷತೆಯನ್ನರಿತು ನಮ್ಮ ಮಹಿಳೆಯರೂ ಅವರಂತಾಗಲಿ, ಅವರಂತೆ ಕೀರ್ತಿವಂತರಾಗಲಿ, ಜ್ಯೋತಿಯನ್ನು ದೇಶವಿದೇಶದಲ್ಲಿ ಹರಡಲಿ. ಭಾರತಮಾತೆಯು ಈ ಶಕ್ತಿಯನ್ನೂ ಅವಕಾಶವನ್ನೂ ಅವರಿಗೆ ಕೊಡಲಿ! ಇದೇ ಹೆಬ್ಬಯಕೆ!

"ಜೈ ಹಿಂದ್"

ದಾನ

ದಿವಾಣ ಬಾಹದ್ದೂರ ಅಂಣಾರಾವ ಚೌಗುಲೆ, ಬಿ. ಎ., ಎಲ್‌ಎಲ್. ಬಿ., ಬೆಳಗಾಂವ.

ಆದ್ಯೋ ಜಿನೋ ನೃಪಃ ಶ್ರೇಯಾನ್ ವ್ರತ
ದಾನಾದಿ ಪೂರುಷೇ ॥
ಏತದನ್ಯೋನ್ಯಸಂಬಂಧೇ ಧರ್ಮಸ್ಥಿತಿರಭೂದಿಹ ॥ ೧ ॥
(ಪದ್ಮನಂದಿ ಶ್ರಾವಕಾಚಾರ ಶ್ಲೋಕ ೧)

ಆದಿತೀರ್ಥಂಕರರು ಮೊದಲನೆಯ ವ್ರತಿಕರು; ಶ್ರೇಯಾಂಸರಾಜನು ಆ ತೀರ್ಥಂಕರರಿಗೆ ಮೊದಲು ಆಹಾರದಾನವನಿತ್ತು ಮೊದಲನೆಯ ದಾತೃವೆಂಬ ಪದವಿಯನ್ನು ಪಡೆದವನು. ಈ ದಾನ ಮತ್ತು ದಾನಿ ಇವುಗಳ ಪರಸ್ಪರ ಸಂಬಂಧದಿಂದ ಈ ಲೋಕದಲ್ಲಿ ಧರ್ಮವು ಸ್ಥಿರಗೊಂಡಿತು. ಅಂದರೆ ಗೃಹಸ್ಥರು ಮುನಿಗಳಿಗೆ ಆಹಾರಾದಿ ದಾನಗಳನ್ನಿತ್ತು ಅವರಿಂದ ಧರ್ಮೋಪದೇಶವನ್ನು ಪಡೆಯತಕ್ಕದ್ದು; ಪರಂಪರೆಯಿಂದ ಈ ಕ್ರಮವು ನಡೆದು ಬಂದಿರುವುದರಿಂದ ಧರ್ಮವು ಸ್ಥಿರವಾಗಿ ನೆಲೆಗೊಂಡಿತು ಎಂಬುದು ಈ ಶ್ಲೋಕದ ಆಶಯ.

ದಾನ ಸಂದರ್ಭದಲ್ಲಿ ದಾತೃ, ಪಾತ್ರ, ದಾನ ಮತ್ತು ಫಲ ಈ ವಿಷಯಗಳು ಈ ಚಿಕ್ಕ ಲೇಖನದಲ್ಲಿ ಚರ್ಚಿಸಲಾಗಿದೆ.

ಜೈನಾಗಮದಲ್ಲಿ ದಾನಕ್ಕೆ ಮಹತ್ವದ ಸ್ಥಾನವು ಕೊಡಲ್ಪಟ್ಟಿದೆ. ದಾನವು ಲೌಕಿಕ ಮತ್ತು ಪಾರಮಾರ್ಥಿಕ ಎಂದು ಎರಡು ವಿಧ. ಲೌಕಿಕ-ದಾನದಲ್ಲಿ— ಸಕಲದತ್ತಿ, ಸಮಾನದತ್ತಿ ಮತ್ತು ದಯಾದತ್ತಿ ಎಂಬ ಮೂರು ಒಳಭೇದಗಳುಂಟು.

(೧) ಆತ್ಮಾನ್ವಯಸ್ಥೈರ್ಯಕ್ಕಾಗಿ ತನ್ನ ಮಗನಿಗೆ ಸಂಪೂರ್ಣವಾಗಿ ತನ್ನ ಆಸ್ತಿಯನ್ನು ಬಿಟ್ಟು ಬಿಡುವದಕ್ಕೆ 'ಸಕಲದತ್ತಿ' ಎಂಬ ಹೆಸರು.

(ಜಿನಸೇನಾಚಾರ್ಯ ಪೂ. ಪುರಾಣ, ಪರ್ವ ೩೮, ಶ್ಲೋಕ ೪೦)

(೨) 'ಸಮಾನದತ್ತಿ'ಯಂದರೆ ತನಗೆ ಸಮಾನನಾಗಿರುವ ಶ್ರಾವಕನಿಗೆ ಶ್ರದ್ಧೆಯಿಂದ ತನ್ನ ಆಸ್ತಿಯನ್ನು ಕೊಡುವುದು.

(ಜಿನಸೇನಾಚಾರ್ಯ ಪೂರ್ವಪುರಾಣ ಪರ್ವ ೩೮, ಶ್ಲೋಕ ೩೯)

(೩) 'ದಯಾದತ್ತಿ'ಯಂದರೆ ಬಾಲ, ವೃದ್ಧ, ಮೂಕ, ಅಂಧ, ಬಧಿರ, ವ್ಯಾಧಿಪೀಡಿತ ಜೀವಗಳಿಗೆ ಯಥೋಚಿತ ವಸ್ತುಗಳನ್ನು ಕೊಡುವುದು. ಕಾರುಣ್ಯ ದಾನವೆಂಬುದು

(ಜಿನಸೇನಾಚಾರ್ಯ ಪೂರ್ವಪುರಾಣ ಪರ್ವ ೩೮, ಶ್ಲೋಕ ೩೬)

ಪಾರಮಾರ್ಥಿಕ ದಾನಕ್ಕೆ ಪಾತ್ರದತ್ತಿಯೆಂಬ ಹೆಸರು. ಪಾತ್ರ ಶಬ್ದದಿಂದ ಉತ್ತಮ, ಮಧ್ಯಮ, ಜಘನ್ಯ ಮತ್ತು ಕುಪಾತ್ರ ಎಂಬ ನಾಲ್ಕು ಭೇದಗಳು ಆಗುತ್ತವೆ. ಉತ್ತಮ ಪಾತ್ರವೆಂದರೆ ದಿಗಂಬರ ಮುನಿಯು ವ್ರತಿ-ಶ್ರಾವಕನು ಮಧ್ಯಮ ಪಾತ್ರನು; ಅವ್ರತಿ-ಶ್ರಾವಕನು ಜಘನ್ಯ ಪಾತ್ರನು ಮತ್ತು ಈ ಮೂರು ರಕ್ಷೆಯ ಹೊರಗಿದ್ದವರು ಕುಪಾತ್ರರು.

ಮುನಿಗಳಿಗೆ ಆಹಾರಾದಿ ದಾನವನ್ನು ಕೊಡುವ ರೀತಿ, ಆಹಾರದ ಪ್ರಕಾರ, ದಾತೃವಿನ ಗುಣಗಳು, ದಾನದ ಫಲ, ದಾನಾಂತರಾಯ ಇತ್ಯಾದಿ ಸಂಗತಿಗಳ ಬಗ್ಗೆ ಜೈನಾಚಾರ್ಯರು ವಿಶದವಾಗಿ ವರ್ಣನೆಮಾಡಿ ಮಾಡಿದ್ದಾರೆ—

ಶ್ರದ್ಧಾ ಭಕ್ತಿರಲೋಭತ್ವಂ ಶಕ್ತಿರ್ಜ್ಞಾನಂ ದಯಾಕ್ಷಮಾ ।
ಇತಿ-ಶ್ರದ್ಧಾದಯಸ್ಸಪ್ತ ಗುಣಾಶ್ಚ ಗೃಹಮೇಧಿನಾಂ ॥
ಪ್ರತಿಗ್ರಹೋಚ್ಚಸ್ಥಾನೇ ಚ ಪಾದಪ್ರಕ್ಷಾಲನಾರ್ಚನಂ ।
ಪ್ರಣಾಮೋ ಯೋಗಶುದ್ಧಿಶ್ಚೈಷಣಶುದ್ಧಿಶ್ಚತೇ ನವ ॥

(ಅಜಿತ ತೀ॥ ಪು. ಆಶ್ವಾಸ ೭. ೧ನೆಯ ಶ್ಲೋಕದ ಮುಂದಿನ ಸಂಸ್ಕೃತ ಶ್ಲೋಕಗಳು.)

ಮುನಿಗಳು ಭಿಕ್ಷೆಯ ಸಲುವಾಗಿ ತಮ್ಮ ಬಲಗೈಯೆತ್ತಿ ಈರ್ಯಾಪಥದಿಂದ ಗ್ರಾಮಗಳಲ್ಲಿ ಬರುವಾಗ ಅವರನ್ನು ಇದಿರುಗೊಳ್ಳುವುದು, ಉನ್ನತಸ್ಥಾನದಲ್ಲಿ ಕುಳ್ಳಿರಿಸುವುದು, ಪಾದಪ್ರಕ್ಷಾಲನೆ ಮಾಡುವುದು, ಅಷ್ಟವಿಧಾರ್ಚನೆಯಿಂದ ಅರ್ಚಿಸುವುದು, ನಿರ್ಭರಭಕ್ತಿಯಿಂದ ನಮಸ್ಕರಿಸುವುದು, ಮನಶ್ಶುದ್ಧಿ, ವಾಕ್ಶುದ್ಧಿ, ಕಾಯಶುದ್ಧಿ ಮತ್ತು ದ್ರವ್ಯಶುದ್ಧಿ ಇವುಗಳನ್ನು ಕೂಡಿಕೊಂಡು ನವವಿಧಭಕ್ತಿಯಿಂದ ಶ್ರಾವಕನು ದಾನ ಮಾಡತಕ್ಕದ್ದು. ಅವನಲ್ಲಿ ಶ್ರದ್ಧಾ, ಭಕ್ತಿ, ಅಲೋಭತ್ವ, ಶಕ್ತಿ, ಜ್ಞಾನ, ದಯಾ ಮತ್ತು ಕ್ಷಮಾ ಈ ಗುಣಗಳು ಇರಲೇಬೇಕು.

ಆಹಾರವು ಶುದ್ಧವಾಗಿಯೂ, ಪ್ರಾಸುಕವಾಗಿಯೂ ಇದ್ದು ಅದನ್ನು ಮುನಿಗಳು ತಮ್ಮ ಪಾಣಿಪಾತ್ರದಿಂದ ಸ್ವೀಕರಿಸತಕ್ಕದ್ದು. ಆಹಾರವು ಮುನಿಗಳ ಸಲುವಾಗಿಯೇ ಸಿದ್ಧಮಾಡಿದ್ದು ಇರಕೂಡದು. ಗೃಹಸ್ಥನು ತನ್ನ ಮತ್ತು ತನ್ನ ಕುಟುಂಬದವರ ಸಲುವಾಗಿ ಸಿದ್ಧಪಡಿಸಿದ ಆಹಾರದಿಂದಲೇ ಮುನಿಗಳನ್ನು ತರ್ಪಿಸತಕ್ಕದ್ದು ಮತ್ತು ಅಂಥ ಆಹಾರವನ್ನು ದಾತೃವಿನ ಮನೆಯ ಎಡಬಲದ ಕೆಲವು ಮನೆಗಳಿಂದ ಆ ಆ ಮನೆಗಳ ಗೃಹಸ್ಥರು ಭಿಕ್ಷೆಯ ಕಾಲದಲ್ಲಿ ತಂದು ಕೊಡಬಹುದು.

ಆಹಾರದ ವಿಧಿ ಮುಗಿದ ಅನಂತರ ಮುನಿಗಳು ದಾತೃವನ್ನು "ಅಕ್ಷಯ ದಾನವಾಗಲಿ" ಎಂದು ಹರಸಿ ತಪೋವನಕ್ಕೆ ಹೋಗುವುದು. ಮುನಿಗಳಿಗೆ ಸಮ್ಯಗ್ದೃಷ್ಟಿಗಳು ಮತ್ತು ಮಿಥ್ಯಾದೃಷ್ಟಿಗಳು ನಾನಾ ಭಕ್ತಿಯಿಂದ ಆಹಾರದಾನ ಮಾಡಲಿಕ್ಕೆ ಪಾತ್ರರಾಗುತಾ ರೆ.

(೧) ನ್ಯಂಗ್ಮಧ್ಯೋತ್ತಮ ಕುತ್ಸ್ಯಭೋಗ ಜಗತೀ ಭುಕ್ತಾವಶೇಷಾದ್ವೃಷಾತ್ತಾದೃಕ್ಪಾತ್ರ ವಿತೀರ್ಣ ಭುಕ್ತಿರಸುದೃಗ್ದೇವೋ ಯಥಾ ಸ್ವಂ ಭವೇತ್ । ಸದ್ದೃಷ್ಟಿಸ್ತು ಸುಪಾತ್ರದಾನ ಸುಕೃತೋದ್ರೇಕಾತ್ಸುಭುಕ್ತೋತ್ತಮ ಸ್ವರ್ಭೂರ್ಮತ್ಯ೯ಪದೋಽಶ್ನುತೆ ಶಿವಪದಂ ವ್ಯರ್ಥ ಸ್ತ್ವಪಾತ್ರೇವ್ಯಯಃ ॥
(ಆಶಾಧರ ಸಾಗಾರಧರ್ಮಾಮೃತ ಮು. ದಿ. ಗ್ರ ೨,
ಪುಟ ೫೬)

ಅರ್ಥ:—ಮಿಥ್ಯಾದೃಷ್ಟಿಯು ಉತ್ತಮ, ಮಧ್ಯಮ ಜಘನ್ಯ ಪಾತ್ರರುಗಳಿಗೆ ದಾನವನ್ನಿತ್ತು ಅನುಕ್ರಮವಾಗಿ ಉತ್ತಮ, ಮಧ್ಯಮ, ಜಘನ್ಯ ಭೋಗಭೂಮಿಗಳಲ್ಲಿ ಹುಟ್ಟಿ ಅಲ್ಲಿಯ ಸುಖವನ್ನನುಭವಿಸಿ ದೇವಲೋಕದಲ್ಲಿ ಹುಟ್ಟುತ್ತಾನೆ. ಆದರೆ ಸಮ್ಯಗ್ದೃಷ್ಟಿಯು ಸುಪಾತ್ರದಾನದ ಪುಣ್ಯದ ಉದ್ರೇಕದಿಂದ ಉತ್ತಮ ಭೋಗಭೂಮಿಯ ಸುಖವನ್ನನುಭವಿಸಿ ಉತ್ತಮ ದೇವನಾಗಿ ಅನಂತರ ಚಕ್ರವರ್ತ್ಯಾದಿ ಮರ್ತ್ಯನಾಗಿ ಹುಟ್ಟಿ ಮೋಕ್ಷವನ್ನು ಹೊಂದುತ್ತಾನೆ. ಅಪಾತ್ರರಿಗೆ ದಾನವನ್ನೀಯುವದು ವ್ಯರ್ಥವು. [ಅಸುದೃತ್=ಮಿಥ್ಯಾದೃಷ್ಟಿ]

(೨) ಯತ್ಸ್ವತ್ತ್ರಂ ಗೃಹಿಣಾತ್ಮನೇ ಕೃತಮಪೇತೈಕಾಕ್ಷಜೀವಂ ತ್ರಸೈರ್ನಿರ್ಜೀವೈರಪಿ ವರ್ಜಿತಂ ತದಶನಾದ್ಯಾತ್ಮಾರ್ಥಸಿದ್ಧ್ಯೈಯತಿ । ಯುಂಜನ್ನುದ್ಧರತಿ ಸ್ವಮೇವ ನಪರಂ ಕಿಂ ತರ್ಹಿ ಸಮ್ಯಗ್ದೃಶಂ ದಾತಾರಂ ದ್ಯುಶಿವ ಶ್ರಿಯಾಚಸಚತೆ ಭೋಗೈಶ್ಚ ಮಿಥ್ಯಾದೃಶಂ ॥ ೬೬ ॥

(ಆಶಾಧರವಿರಚಿತ ಅನಗಾರ ಧರ್ಮಾಮೃತಪೃಷ್ಠ ೩೬೯)
ಮು, ದಿ. ಗ್ರ, ೧೪ ಮುಂಬಯಿ ೧೯೧೯ ವಿ. ಸಂ. ೧೯೭೬.

ಅರ್ಥ:—ಗೃಹಸ್ಥರು ಯತಿಗಳಿಗೆ ನಿರ್ಜಂತುಕ (ಪ್ರಾಸುಕ) ಶುದ್ಧವಾದ ಆಹಾರದಾನವನ್ನು ಮಾಡಿ ಆ ಯತಿಗಳ ತಪಶ್ಚರ್ಯಕ್ಕೆ ಮತ್ತು ಆತ್ಮಕಲ್ಯಾಣಕ್ಕೆ ಕಾಯಸ್ಥಿತಿಯ ಅನುಕೂಲತೆಯನ್ನು ಉಂಟುಮಾಡುವದಲ್ಲದೆ ಆ ದಾನದಿಂದ ಗೃಹಸ್ಥರು ಸ್ವರ್ಗಮೋಕ್ಷಾದಿಗಳಿಗೆ ಪಾತ್ರರಾಗುತ್ತಾರೆ. ಮಿಥ್ಯಾದೃಷ್ಟಿಗಳು ಅಂಥ ದಾನದಿಂದುಂಟಾದ ಪುಣ್ಯದಿಂದ ಭೋಗಿಗಳಾಗುತ್ತಾರೆ.

ವಸುನಂದಿ ಆಚಾರ್ಯರೂ ಸಹ ಮಿಥ್ಯಾದೃಷ್ಟಿಗಳು ಮುನಿಗಳಿಗೆ ಆಹಾರದಾನವನ್ನು ಮಾಡಬಹುದೆಂದು ಈ ಕೆಳಗೆ ಬರೆದ ಗಾಥೆಯಲ್ಲಿ ಹೇಳಿದ್ದಾರೆ:—

ಮಿಚ್ಛಾದಿಠ್ಠೀ ಭದ್ದೋ ದಾಣಂ ಜೋದೇಇ
ಉತ್ತಮೇ ಪತ್ತೇ ॥
ತಸ್ಸಫಳೇಣುವವಜ್ಜ ಇಸೋ ಉತ್ತಮ ಭೋಯ
ಭೂಮೀಸು ॥ ೨೪೫ ॥
ಮಿಥ್ಯಾದೃಷ್ಟಿರ್ಭದ್ರೋ ದಾನಂ ಯೋ ದದಾತ್ಯುತ್ತಮೇ
ಪಾತ್ರೇ ॥
ತಸ್ಯಫಲೇನಾನುವ್ರಜತಿ ಸಉತ್ತಮ ಭೋಗ
ಭೂಮಿಷು ॥ ೨೪೫ ॥

ಪದ್ಮನಂದ್ಯಾಚಾರ್ಯರು ಪಂಚವಿಂಶತಿಯಲ್ಲಿ ದಾನಾಷ್ಟಕ ಪ್ರಕರಣದಲ್ಲಿ ೩೩ನೇ ಶ್ಲೋಕದಿಂದ ಇದೇ ಸಂಗತಿಯನ್ನು ಪುಷ್ಟೀಕರಿಸಿದ್ದಾರೆ:—

ಮಿಥ್ಯಾದೃಶೋಽಪಿ ರುಚಿರೇವ ಮುನೀಂದ್ರದಾನೆ
ದದ್ಯಾತ್ಪಶೋರಪಿ ಹಿ ಜನ್ಮ ಸುಭೋಗಭೂಮೌ ॥
ಕಲ್ಪಾಂಘ್ರಿಪಾ ದದತಿ ಯತ್ರ ಸದೇಪ್ಸಿತಾನಿ
ಸರ್ವಾಣಿ ತತ್ರ ವಿದಧಾತಿ ನಕಿಂ ಸುದೃಷ್ಟೇಃ ॥ ೩೩ ॥

ಹರಿವಂಶ ಪುರಾಣದಲ್ಲಿ ೧೫ನೇ ಸರ್ಗದಲ್ಲಿ ಜಿನಸೇನಾಚಾರ್ಯರು "ಸುಮುಖವನಮಾಲಾ" ಇವರ ಕಥೆಯನ್ನು ಹೇಳಿ ವನಮಾಲೆಯು ವಿವಾಹಿತ ಸ್ತ್ರೀ ಇದ್ದು ಅವಳ ಪೂರ್ವಪತಿಯಿಂದ ಅವಳನ್ನು ಸುಮುಖನು ಅಪಹರಿಸಿ ತನ್ನ ಪಟ್ಟದ ಮಹಾದೇವಿಯನ್ನು ಮಾಡಿಕೊಂಡನು ಮತ್ತು ಅವಳ ಕೂಡ ಪತಿಯಾಗಿ ಕಾಲಕ್ರಮಣ ಮಾಡುತ್ತಿರಲು ದಿಗಂಬರ ಮುನಿಗಳು ಅವನ ರಾಜಾಂಗಣದಲ್ಲಿ ಚರ್ಯೆಯಗೋಸ್ಕರ ಬಂದಾಗ್ಗೆ ಅವರಿಗೆ ತಾನೂ ವನಮಾಲೆಯೂ ಕೂಡಿಕೊಂಡು ಸುದಾನವನ್ನಿತ್ತು ಪುಣ್ಯವನ್ನು ಪಡೆದುಕೊಂಡರು.
(ಶ್ಲೋಕ ೧೩)

ಪೂರ್ವಪುರಾಣವನ್ನು ರಚಿಸಿದ ಜಿನಸೇನಾಚಾರ್ಯರು ಆ ಪುರಾಣದ ೩೮ನೆ ಪರ್ವದಲ್ಲಿ ಗರ್ಭಾನ್ವಯ ಕ್ರಿಯೆಗಳನ್ನು ಹೇಳುವಾಗ್ಗೆ ಶೂದ್ರನಿಗೂ ಜೈನದೀಕ್ಷೆಯನ್ನು (ಶ್ರಾವಕ ದೀಕ್ಷೆಯನ್ನು) ಕೊಡುವ ಕ್ರಮವನ್ನು ಹೇಳಿದ್ದಾರೆ. ಆಶಾಧರ ಪಂಡಿತನು ತನ್ನ "ಸಾಗಾರ ಧರ್ಮಾಮೃತ"ದಲ್ಲಿ ಇದೇ ಸಂಗತಿಯ ಸಮರ್ಥನೆಯನ್ನು ಮಾಡಿರುತ್ತಾನೆ.

(ಸಾಗಾರ ಧರ್ಮಾಮೃತ ಶ್ಲೋಕ ೨೨)

ಪಂಚೇಂದ್ರಿಯತಿರ್ಯಂಚಗಳೂ ಸಹ ದಾನಾನುಮೋದನವನ್ನು ಮಾಡಬಹುದು.

ಈ ಯಾವತ್ತು ಸಂಗತಿಗಳಿಂದ ಹೊರಡುವ ಮಥಿತಾರ್ಥವೇನೆಂದರೆ ಸಮ್ಯಗ್ದೃಷ್ಟಿಯಾಗಲಿ, ಮಿಥ್ಯಾದೃಷ್ಟಿಯಾಗಲಿ, ಶೂದ್ರನೇ ಆಗಲಿ ಅಥವಾ ದ್ವಿಜನಾಗಲಿ ನವಧಾಭಕ್ತಿಯಿಂದ ವಿಧಿಪೂರ್ವಕ ಮುನಿಗಳಿಗೆ ಪ್ರಾಸುಕ ಮತ್ತು ದೋಷರಹಿತ ಆಹಾರವನ್ನಿತ್ತರೆ ಅವರು ಅದನ್ನು ಸ್ವೀಕರಿಸಬಹುದು. ಮೇಲೆ ಹೇಳಿದ ಸುಮುಖನು ಪರವಿವಾಹಿತಸ್ತ್ರೀಯನ್ನು ತನ್ನ ಪಟ್ಟದ ಮಹಾದೇವಿಯನ್ನು ಮಾಡಿದ್ದರಿಂದ ಅವನೂ ಅವಳೂ ಪುನರ್ವಿವಾಹಿತರೆಂದು ಸಹಜವಾಗಿ ತಜ್ಞರು ಕಂಡು ಹಿಡಿಯಬಹುದು. ಅದಕ್ಕೋಸ್ಕರ ಮೊದಲಿನಿಂದ ನಡೆದು ಬಂದ ಶಾಸ್ತ್ರದ ಪದ್ಧತಿಗೂ ಈಗಿನ ರೂಢಿಗೂ ವ್ಯತ್ಯಾಸ ಕಂಡುಬರುತ್ತದೆ. ಆದರೆ ಆಗಮಕ್ಕೆ ವಿರುದ್ಧವಾದ ರೂಢಿಯು "ಹೇಯ"ವೆಂದೇ ಹೇಳಬಹುದು.

ರವಿಷೇಣಾಚಾರ್ಯರು ಪದ್ಮಪುರಾಣದಲ್ಲಿಯೂ (ಪರ್ವ ೧೦೫, ಶ್ಲೋಕ ೨೩೯–೪೦) ಸಿಂಹನಂದ್ಯಾಚಾರ್ಯರು ತಮ್ಮ ವರಾಂಗಚರಿತದಲ್ಲಿಯೂ ಮುನಿಗಳಿಗೆ ಆಹಾರದಾನ ಮಾಡಲಿಕ್ಕೆ ಮಿಥ್ಯಾದೃಷ್ಟಿಗಳಿಗೆ ಅಧಿಕಾರ ಉಂಟೆಂದು ಹೇಳಿದ್ದಾರೆ. ಇದರಿಂದ ಜೈನ ಧರ್ಮದ ಔದಾರ್ಯವು ಪ್ರಕಟವಾಗುತ್ತದೆ.

ವಟ್ಟಕೇರಾಚಾರ್ಯರು ತಮ್ಮ ಮೂಲಾಚಾರ ಗ್ರಂಥದಲ್ಲಿ ದಾತೃವಿನ ದೋಷಗಳನ್ನೂ, ಅಂತರಾಯಗಳನ್ನೂ ಅಭೋಜ್ಯಗೃಹಾದಿಗಳನ್ನೂ ವರ್ಣಿಸಿದ್ದಾರೆ. ಅದರಲ್ಲಿ ಮಿಥ್ಯಾದೃಷ್ಟಿಯ ಅಥವಾ ಶೂದ್ರಾದಿಗಳ ಅಂತರ್ಭಾವವಿಲ್ಲ. ಮಾತ್ರ ಚಾಂಡಾಲಾದಿ ಅಸ್ಪೃಶ್ಯ ಜನರು ದಾನವನ್ನು ಮಾಡಲಿಕ್ಕೆ ಅಯೋಗ್ಯರೆಂದು ಹೇಳಿದ್ದಾರೆ. ವಾಚಕರು ಆ ಗ್ರಂಥದೊಳಗಿನ 'ಪಿಂಡ ಶುದ್ಧಿ'ಯೆಂಬ ಆರನೆಯ ಅಧಿಕಾರದಿಂದ ಮೇಲಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಮುನಿಗಳಿಗೆ ಆಹಾರದ ಯೋಗ್ಯ ಕಾಲವು ಯಾವುದು ಎಂಬುವ ಬಗ್ಗೆ ವಟ್ಟಕೇರಾಚಾರ್ಯರು ಮೂಲಾಚಾರದಲ್ಲಿ (ಪ್ರಥಮ ಖಂಡ ಪುಟ ೪೫) ೩೫ನೆಯ ಸೂತ್ರದಲ್ಲಿ ಹೀಗೆ ಹೇಳಿದ್ದಾರೆ:—"ಸೂರ್ಯೋದಯ ಮತ್ತು ಸೂರ್ಯಾಸ್ತಮನ ಇವುಗಳಿಂದ ಕ್ರಮವಾಗಿ ಅನಂತರ ಮತ್ತು ಮೊದಲು ಮೂರು ಮೂರು ಗಳಿಗೆಗಳನ್ನು ವರ್ಜಿಸಲು ಉಳಿದ ಕಾಲವು ಅಶನಕ್ಕೆ ಯೋಗ್ಯ ಮತ್ತು "ಸೂರ್ಯೋದಯದ ಅನಂತರ ಮೂರು ಗಳಿಗೆ ಕಾಲ ಕಳೆದ ಮೇಲೆ ಮೊದಲನೆಯ ಮುಹೂರ್ತ ಆಹಾರಸ್ವೀಕಾರಕ್ಕೆ ಜಘನ್ಯ ಕಾಲವು, ಎರಡನೆಯ ಮುಹೂರ್ತ ಮಧ್ಯಮ ಕಾಲವು, ಮೂರನೆಯ ಮುಹೂರ್ತ ಉತ್ತಮ ಕಾಲವು." ಅಭಯ, ಶಾಸ್ತ್ರ ಮತ್ತು ಔಷಧ ಇವುಗಳ ಸಂಬಂಧವಾಗಿ ವಿಶೇಷ ಹೇಳುವ ಕಾರಣವಿಲ್ಲ. ಪೂರ್ವಕಾಲದಲ್ಲಿ ಅರಸರೂ, ಧನಾಢ್ಯರೂ ಜಿನಮಂದಿರಕ್ಕೆ ಹೊಂದಿ ಛತ್ರವೃಂದವು ವಿದ್ಯಾರ್ಜನೆಯನ್ನು ಪಡೆದುಕೊಳ್ಳಲಿಕ್ಕೆ ವಸ್ತಿತಾಗೃಹಗಳ ದಾನವನ್ನು ಮಾಡುತ್ತಿದ್ದರು. ಅವುಗಳಲ್ಲಿ ಮುನಿಗಳು ಆ ಬಾಲಕರಿಗೆ ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳ ಶಿಕ್ಷಣವನ್ನು ಕೊಟ್ಟು ಅವರನ್ನು ಒಳ್ಳೇ ನಾಗರಿಕರನ್ನಾಗಿ ಮಾಡುತ್ತಿದ್ದರು. ಮತ್ತು ಆ ಛಾತ್ರದಿಂದಲೂ ಬೇರೆ ಲೇಖಕರಿಂದಲೂ ಅರಸರೂ ಧನಾಢ್ಯರೂ ಗ್ರಂಥಗಳನ್ನು ಬರೆಯಿಸಿ ಮುನಿಗಳಿಗೆ ಅರ್ಪಣ ಮಾಡುತ್ತಿದ್ದರು.

ದಾನದ ಫಲವು ಬಹಳ ದೊಡ್ಡದಾಗಿದೆ. ಕರ್ನಾಟಕದ ಅದ್ವಿತೀಯ ಕವಿಯಾದ ಪಂಪನು ತನ್ನ ಆದಿಪುರಾಣ ೧೦ನೆಯ ಆಶ್ವಾಸದಲ್ಲಿ ಶ್ಲೋಕ ೯ರಿಂದ ೧೧ರ ವರೆಗೆ ದಾನದ ಮತ್ತು ಅದರಿಂದುಂಟಾಗುವ ಫಲದ ವಿಷಯವಾಗಿ ಸಾರಾಂಶರೂಪದಿಂದ ಮನೋಹರವಾಗಿ ವರ್ಣನೆಮಾಡಿದ್ದಾನೆ. ಅವುಗಳನ್ನು ಈ ಕೆಳಗೆ ಉದ್ಧರಿಸಿದ್ದೇವೆ:—

ವ॥ "ಕುಡುವುದು ಮಹಾರಾಭಯ ಭೈಸಜ್ಯ

ಶಾಸ್ತ್ರದಾನದಿಂ ಚತುರ್ವಿಧಮಕ್ಕುಂ, ಪಾತ್ರಮುತ್ತಮ ಮಧ್ಯಮಜಘನ್ಯಭೇದದಿಂ ತ್ರಿವಿಧಮಕ್ಕುಂ, ಅಲ್ಲದರ್ಶನವಿಶುದ್ಧನುಂ, ಶೀಲಸಂಪನ್ನನುಮಪ್ಪ ಸಂಯತನುತ್ತಮ ಪಾತ್ರಂ; ಶ್ರೀಸಮ್ಯಗ್ದರ್ಶನವಿಶುದ್ಧನುಮಣುವ್ರತಧಾರಿಯುಮಪ್ಪಶ್ರಾವಕಂ ಮಧ್ಯಮಪಾತ್ರಂ; ದರ್ಶನವಿಶುದ್ಧನಾಗಿಯುಂ ಶೀಲವ್ರತಭಾವನಾರಹಿತ ನಸಂಯತಂ ಜಘನ್ಯಪಾತ್ರಂ; ಮಿಥ್ಯಾದೃಷ್ಟಿಯಪ್ಪಂ ತನ್ನನೆಂತುಂ ಸಮರಿ ನೆಗಳ್ದೊಡಮಾತನ ಪಾತ್ರಮೆ.

ಫಳಮುಂ ಸುಪಾತ್ರದಾನದ
ಫಳಮೆ ದಲುತ್ಕೃಷ್ಟ ಭೋಗಭೂಮಿಯೊಳಮನಾ ।
ಕುಳಕಲ್ಪಾಮರಲೋಕಂ
ಗಳೊಳಂ ಪುಟ್ಟಿಸುಗುಮಪ್ಪ ಕಾರಣದಿಂದಂ ॥ ೧೦ ॥

ವ॥ ಉಳಿದ ಮಧ್ಯಮ ಜಘನ್ಯ ಪಾತ್ರದಾನಂಗಳ್ ಮಧ್ಯಮ ಜಘನ್ಯ ಭೋಗಭೂಮಿ ಭೋಗಾನುಭವಮನೀಗುಂ, ಅಪಾತ್ರದಾನಂ ಭೋಗಭೂಮಿಗಳೊಳಂ ಭೋಗಭೂಮಿ ಪ್ರವಿಭಾಗದ್ವೀಪಂಗಳೊಳ್ ತಿರ್ಯಗ್ಜಾತಿತ್ವಮುಮಂ ಅಂತರ್ದ್ವೀಪಂಗಳೊಳ್ ಕುಮಾನುಷತ್ವಮುಮಂ ಮಾಡುಗುಂ; ಇದಾಹಾರ ದಾನ ಫಲಂ.

ಅಭಯಂ ನಿರೋಗರುಂ ಶ್ರುತ ।
ವಿಭವಸಮನ್ವಿತರು ಮಪ್ಪರೆಂಬುದು ಪಿರಿದ ॥
ಲ್ತ ಭವಾಂಬುಧಿಯುಮನೀಸುವ ।
ರಭಯೌಷಧ ಶಾಸ್ತ್ರದಾನ ಫಳವಿಳಸನದಿಂ" ॥ ೧೧ ॥

ಶ್ರೀವಸುನಂದ್ಯಾಚಾರ್ಯರು ತಮ್ಮ ಶ್ರಾವಕಾಚಾರದಲ್ಲಿ ಶ್ಲೋಕ ೨೨೦ರಿಂದ ೨೫೦ರ ವರೆಗೆ "ದಾನ, ದಾನಿ, ಪಾತ್ರ, ದಾನಭೇದ ಮತ್ತು ದಾನಫಲ" ಇವುಗಳನ್ನು ವಿಸ್ತಾರವಾಗಿ ವಿಶದ ಮತ್ತು ರಮಣೀಯವಾದ ಪದ್ಯಗಳಿಂದ ವರ್ಣಿಸಿದ್ದಾರೆ. ಈ ಲೇಖ ವಿಸ್ತಾರವನ್ನು ತಪ್ಪಿಸಲು ಆ ಪದಗಳನ್ನು ಇಲ್ಲಿ ಉದ್ಧರಿಸಿಲ್ಲ. ವಾಚಕರು ಅವುಗಳನ್ನು ನೋಡಿಕೊಳ್ಳಬಹುದು.



ಊಟ

(ರಾತ್ರಿ ಭೋಜನ ತ್ಯಾಗ.)

ಪ್ರೊ. ಕೆ. ಜಿ. ಕುಂದಣಗಾರ.

ಚಿಕ್ಕ ಮಕ್ಕಳು ಕೈಗೆ ಸಿಕ್ಕ ಪದಾರ್ಥಗಳನ್ನೆಲ್ಲ ಬಾಯಿಗೆ ಇಟ್ಟುಕೊಳ್ಳುತ್ತವೆ. ಆ ಪದಾರ್ಥಗಳು ತಿನ್ನಲು ಯೋಗ್ಯವೋ ಅಯೋಗ್ಯವೋ ಎಂಬ ತಾರತಮ್ಯಜ್ಞಾನ ಅವುಗಳಿಗಿರುವುದಿಲ್ಲ. ಅದರಿಂದ ಹಿರಿಯರಾದವರು ಅವುಗಳನ್ನು ನೋಡಿಕೊಳ್ಳುತ್ತಿರಬೇಕಾಗುತ್ತದೆ. ಮಕ್ಕಳ ಮೇಲೆ ಕಣ್ಣಿಟ್ಟ ಕಾರಣ ಯಾವ ಪದಾರ್ಥವೂ ಅವುಗಳ ಕೈಗೆ ಸಿಗದಿದ್ದರೆ ಮುಷ್ಟಿಯನ್ನೋ ಬೆರಳನ್ನೋ ಬಾಯಿಯಲ್ಲಿ ಇಟ್ಟುಕೊಳ್ಳುತ್ತವೆ ಅವು. ಅವುಗಳ ಈ ಕ್ರಿಯೆಯು ಅರ್ಥವಿಷ್ಟೇ—ಅವುಗಳ ಶರೀರದ ಬೆಳವಣಿಗೆಗೆ ಆಹಾರ ಬಹಳೇ ಆವಶ್ಯಕವಾಗಿರುತ್ತದೆ. ಅದಕ್ಕಾಗಿ ಅವು ಹಾಗೆ ಮಾಡುತ್ತವೆ. ಬರಬರುತ್ತ ಅವುಗಳ ಈ ವೃತ್ತಿ ಕುಗ್ಗಿ ಹಸಿವೆಯಾದಾಗ ಮಾತ್ರ ಆಹಾರಬೇಕೆಂದೆನಿಸಹತ್ತುತ್ತದೆ. ಆದರೆ ರುಚಿಕಟ್ಟಾದ ತಿನ್ನುವ ಪದಾರ್ಥಗಳನ್ನು ಕಂಡಾಗ ಅವರ ಬಾಯಿಯಲ್ಲಿ ನೀರೂರಿ ಆ ವಸ್ತು ತಮಗೆ ತಿನ್ನಲು ಬೇಕೆಂದು ಹಟ ಹಿಡಿಯುತ್ತಾರೆ. ಈ ಸ್ಥಿತಿ ದೊಡ್ಡವರಲ್ಲಿಯೂ ಕಂಡುಬರುತ್ತದೆ. ಒಂದು ಉದಾಹರಣೆ ಕೊಡಬಹುದು:—ನಾಗಸ್ವರವನ್ನು ಬಾರಿಸುವವರ ಮುಂದೆ ಚಿಕ್ಕ ಮಕ್ಕಳು ಹೋಗಿ ನಿಲ್ಲುತ್ತಾರೆ. ಹಾಗೆ ಮಾಡುವುದು ಅವರಿಗೆ ಸ್ವಾಭಾವಿಕ. ಆಗ ಅವರು ಕೈಯಲ್ಲಿ ಹುಣಸಿಯನ್ನಿಟ್ಟುಕೊಂಡು ಅಥವಾ ಬೆಲ್ಲವನ್ನಿಟ್ಟುಕೊಂಡು ತಿನ್ನುತ್ತಿದ್ದರೆ ನಾಗಸ್ವರವನ್ನು ಬಾರಿಸುವವರ ಬಾಯಲ್ಲಿ ನೀರೂರಿ ಅದು ನಾಗಸ್ವರದ ಜೀವಾಳದಲ್ಲಿ ಸೇರಿ ಸ್ವರವನ್ನು ಕಟ್ಟುಮಾಡುತ್ತದೆ. ಅದೊಂದು ವಿನೋದದ ದೃಶ್ಯ. ಬಾರಿಸುವವರು ಆ ಸಂದರ್ಭದಲ್ಲಿ ಪೆಚ್ಚರಾಗಿ ಮಕ್ಕಳನ್ನು ಹೆದರಿಸುತ್ತಾರೆ. ಪಾಪ! ಹೀಗಾಗುವುದೆಂದು ಆ ಮಕ್ಕಳಿಗೆ ಹೇಗೆ ತಿಳಿಯಬೇಕು? ಆದುದರಿಂದ ರುಚಿಕಟ್ಟಾದ ಪದಾರ್ಥದ ಮೇಲೆ ಪ್ರತಿಯೊಬ್ಬನಿಗೆ ಆಸೆಯುಂಟಾಗುವುದು ಸ್ವಾಭಾವಿಕವಾಗಿದೆ. ಈ ಆಸೆಯೇ ಊಟದ ಸೊಗಸುಗಾರಿಕೆಗೆ ಮತ್ತು ಜಿಹ್ವಾಲೌಲ್ಯಕ್ಕೆ ಕಾರಣವಾಗಿದೆ: ನಮ್ಮ ಕವಿಗಳು ಇದನ್ನು ಗಮನಿಸಿ ಊಟದ ಸೊಗಸನ್ನು ಮನೋಹರವಾಗಿ ವರ್ಣಿಸಿದ್ದಾರೆ. ಉದಾ:

ದೊನ್ನೆಗಳ ಹರಹಿ ಬಾಳೆಲೆ ಹಾಳೆಯಂ ಹಾಕಿ
ಬಿನ್ನಣದಿ ಮಾಡಿದಾಚಮ್ರಕದೆಡೆಗಳ ಮುಂದೆ
ಜನ್ನಿವಾರಮಂ ಮೇಲೆತ್ತಿ ತಲೆಸುತ್ತುಮಂ ತೆಗೆದು
ಸಡಿಲಿಸಿ ಧೋತ್ರಮಂ ‖
ಚೆನ್ನಾಗಿ ಯಾಪೋಷಣಮನೆತ್ತಿ ಕುಳ್ಳಿರ್ದು
ಭಿನ್ನರುಚಿ ಮಾಡಿ ಹರುಷದಿ ಗಡ್ಡಮೀಸೆಗಳು—
ಮಂ ನೀವಿಕೊಳುತ ತದ್ಭೋಜನಮನಿಂತು
ಮಾಡುತ್ತಿರ್ದರಾ ಪಾರ್ವರು ‖ ೨೩ ‖

ಸಣ್ಣಕ್ಕಿಯೋಗರಂ ಹೆಸರ ತೊಯೆ ಹೊಚ್ಚಹೊಸ
ಬೆಣ್ಣೆಕಾಸಿದ ತುಪ್ಪ ಹಪ್ಪಳಂ ನಸುನಿಂಬೆ—
ವಣ್ಣನಿಕ್ಕಿದ ಹಲವು ಪರಿಯ ಹೋರಕಂ ಶಾಕಬಾಳು
ಕಾವಳೆಯ ಪಳಿದ್ಯ ‖
ಬಣ್ಣಿಸಿ ಸುಪಾಕಮಾಡಿದ ಪಿಟ್ಟು ಪಾಯಸಂ
ತಣ್ಣನೆಯ ಕಳಲು ಹಸಿಯಲ್ಲಮಂ ಬಡ್ಡಿಸ—
ಲ್ಪಣ್ಣೆಪಣ್ಣೆಯೊಳು ಕುಳ್ಳಿರ್ದು ಪಂತಿಯ ಕೊಳ್ಳು
ತಿರ್ದರಾ ಭೂಸುರಾಳಿ ‖ ೨೪ ‖

ವಡೆಯೊಟ್ಟಿಲುಂಡಲಿಗೆಗಳ ರಾಶಿ ಹೂರಿಗೆಗ—
ಳಿಡುಗಡ್ಡೆ ಸಣ್ಣಸೇವಗೆಯ ಮೊದೆಯೆರೆಯುಪ್ಪ
ದಡಕಲಿಡ್ಡಲಿಗೆಗಳ ಬೋನ ದೋಸೆಯ ಲಗ್ಗೆ
ಬೆಲ್ಲಗಾರಿಗೆಯ ಬಣಬೆ ‖
ತಡೆತಡೆಯೆ ಪಾಯಸವ ಕಟ್ಟಿಯನೊಡೆವ ತುಪ್ಪ
ವೆಡೆಮಾಡಿದೆಡೆಯ ಮುಂದೊಪ್ಪದಿಂ ಕುಳ್ಳಿರ್ದು
ಸಡಗರಂಗೊಂಡು ಗಂಟಲ್ಮುಟ್ಟುವಲ್ಲಿಪರಿಯಂತ
ಮೃಣುತಿರ್ದರಾಗ ‖ ೨೫ ‖

ಓಗರವ ತಾ ತೊಯೆಯನಿಕ್ಕು ಹಸನಾಯ್ತು ಮೇ-
ಲೋಗರವ ಬಡಿಸು ದೊನ್ನೆಗಳು ಹಿಡಿವಂತೆ ಮಂ-
ಟಾಗಿ ಹೆರೆದುಪ್ಪವೆರೆಯಾ ಪಳಿದ್ಯಮನಟ್ಟು
ಕಲಸುವೋಗರವ ತೋರು ‖
ಬೇಗದಿಂದೆಡೆಮಾಡಿದಿಡ್ಡಲಿಗೆ ದೋಸೆಗಳ
ಮೇಗೆ ಸಕ್ಕರೆ-ಬಟ್ಟವಾಲ ಹೊಯ್ಯೆನುತುಮಾ—
ರೋಗಣೆಯನಾ ಹೊಟ್ಟೆಯೊಡೆವ ಮರ್ಯಾದೆಯೊಳ
ಗುಂಡು ತೇಂಕುತಿರ್ದರು ‖ ೨೬ ‖

ಪಾಯಸದ ಪರಿಮಳಂ ನೋಡಿ, ಪಂಡಿತರೆ. ಸವಿ-
ಯಾಯಿತೇ? ಆಯ್ತುಪಾಧ್ಯಾಯರೇ. ಕರಜಿಗೆಯ
ಕಾಯಿ-ದೋಸೆಗಳ ಹಸನಂ ಪುರೋಹಿತರೆ, ಚೆನ್ನಾಗಿ
ಸವಿಸವಿದು ನೋಡಿ ‖

ಈಯೆಣ್ಣೆಹೂರಗೆಯ ವೃದುತರಕೆ ಸರಿಯುಂಟೆ?
ಜೋಯಿಸರೆ, ಕೇಳಿ. ಸಕ್ಕರೆಬುರುಡೆಗಳ್ನವ್ಮ
ಬಾಯ ಬರನಂ ಬಿಡಿಸುತಿವೆ, ದೀಕ್ಷಿತರೆಯೆಂದು
ಕೊಂಡಾಡಿ ಉಣುತಿರ್ದರು ॥

ಸಜ್ಜಿಗೆಯ ಪಾಯಸವ ಸುರಿದು, ಕಣಿಕದ ಸೆವೆದ
ಕಜ್ಜಾಯವಂ ಮೆದ್ದು, ಕಚರಿಬದನೆಯ ಕಾಯ
ಬಜ್ಜಿಗಳ ಲೇಹ್ಯವಂ ವಾಡಿ, ವೂಲಂಗಿವಾಗುಳಿ
ಯೆಳೆಯ ಕಾರಗೆಣಸು ॥

ಕಜ್ಜರಿಯ ಪಣ್ಣನಂ ಸವಿದು, ಪನಸಿವ್ಮಾವ್ರ
ಕಜ್ಜುರದ ಪಣ್ಗಳ ರಸಾಯನವನೀಂಟಿ, ತೆಳು-
ಮಜ್ಜಿಗೆಯ ಕೊಂಡು, ನೀರ್ಗುಡಿದು ಹೊಟ್ಟೆಯ
ತಡಹುದೆಳ್ದು ಕಯ್ದೊಳೆದರಾಗ ॥ ೩೮ ॥

(ಮಂಗರಸನ ಸಮ್ಯಕ್ತ್ವಕೌಮುದಿ ಸಂಧಿ ೭.)

ಇಂತಹ ಸವಿಗಾರಿಕೆ ಬ್ರಾಹ್ಮಣರಲ್ಲಿ ಹೆಚ್ಚಾಗಿ ಕಂಡುಬರುತ್ತಿರುವುದರಿಂದ 'ಬ್ರಾಹ್ಮಣೋ ಭೋಜನ ಪ್ರಿಯಃ', 'ಹಾರುವ ಮಾಡಿದ ಪಿಂಡಕ್ಕೆ' ಮುಂತಾದ ಲೋಕೋಕ್ತಿಗಳು ರೂಢವಾಗಿವೆ. ಊಟದ ಸವಿಗಾರರ ವೃತ್ತಿಯೆಂದರೆ 'ಜೀವನಕ್ಕೆ ಊಟವಲ್ಲ; ಊಟಕ್ಕೇ ಜೀವನ.' ಚಾರ್ವಾಕರು ಪರಲೋಕವನ್ನು ನಂಬದಿರುವುದರಿಂದ ಇಹಲೋಕದ ಸೊಗಸುಗಾರಿಕೆ-ಸವಿಗಾರಿಕೆಗಳಿಗೆ ಪ್ರಾಧಾನ್ಯವಿತ್ತು 'ಋಣಂ ಕೃತ್ವಾ ಘೃತಂ ಪಿಬೇತ್' ಎಂಬಭಿಪ್ರಾಯವುಳ್ಳವರಾಗಿದ್ದರು.

ಹಿಂದುಸ್ಥಾನದ ಜನರು ಪ್ರತಿಯೊಂದು ಕ್ರಿಯೆಯಲ್ಲಿ ಲೌಕಿಕಪಾರಮಾರ್ಥಗಳನ್ನು ಕಾಣುತ್ತಾರೆ. ಪಾಶ್ಚಿಮಾತ್ಯರು ಲೌಕಿಕಕ್ಕೆ ಪ್ರಾಧಾನ್ಯವಿತ್ತು ಸ್ವಾರ್ಥವನ್ನು ವಿಶಾಲಗೊಳಿಸಿ ಅದನ್ನು ರಾಷ್ಟ್ರೀಯತೆಯಲ್ಲಿ ನಿಲ್ಲಿಸುತ್ತಾರೆ. ಅವರ ಈ ವೃತ್ತಿಯು ಪರರಾಷ್ಟ್ರಗಳ ಮೇಲೆ ಅವರು ಮಾಡುವ ದಬ್ಬಾಳಿಕೆಗೆ ಕಾರಣವಾಗುತ್ತದೆ. ಅದನ್ನು ಸಹಿಸದೆ ರಸ್ಕಿನ್, ಟಾಲಸ್ಟಾಯಿಯಂತಹರು ಅವರನ್ನು ಧಿಕ್ಕರಿಸಿದ್ದಾರೆ. ಹಿಂದುಸ್ಥಾನದ ಜನರು ಕಾಣುವ ಲೌಕಿಕಪಾರಮಾರ್ಥಿಕ ವೃತ್ತಿ ಊಟದಲ್ಲಿಯೂ ಕಂಡುಬರುತ್ತದೆ. ನಿತ್ಯವೂ ಅವರು ಮಾಡುವ ಊಟ ಲೌಕಿಕವಾಗಿದ್ದರೂ ಅನ್ನದಾನವು ಪಾರಮಾರ್ಥಿಕವೆಂದು ಅವರ ಭಾವನೆ. ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಅವರು ಮಾಡುವ ಭೋಜನ ಸಮಾರಂಭ ಲೌಕಿಕವು. ಅತಿಥಿಗಳಿಗೆ ಮಾಡುವ ಆದರಾತಿಥ್ಯ—ಊಟಉಪಚಾರಗಳು ಲೌಕಿಕ. ದೇವರು ತಮ್ಮಂತೆಯೇ ದೇಹಧಾರಿಯೆಂಬ ಭಾವನೆಯಿಂದ ಆತನಿಗೆ ಷೋಡಶೋಪಚಾರ ಪೂಜೆಮಾಡಿ, ನೈವೇದ್ಯವನ್ನರ್ಪಿಸಿ, 'ತ್ವಮೇವ ಮಾತಾ ಪಿತಾ ತ್ವಮೇವ' ಎಂದು ಮುಂತಾಗಿ ಸ್ತುತಿಸಿ 'ಪಾಹಿಮಾಂ ಕೃಪಯಾ, ದೇವ' ಎಂದು ಬೇಡಿಕೊಳ್ಳುವುದೂ ಲೌಕಿಕವೇ.

ಲೌಕಿಕವಾದ ಆಹಾರಸೇವನೆಗೆ ಯೋಗ್ಯವಾದ ಕಾಲ ಮತ್ತು ಮರ್ಯಾದೆ ಇರುವುದು ಆವಶ್ಯಕ. ಪ್ರಾಣಿಮಾತ್ರಗಳಿಗೆ ಆಹಾರವು ಆವಶ್ಯಕವೆಂಬುದೇನೋ ನಿಜ. ಮನುಷ್ಯೇತರ ಪ್ರಾಣಿಗಳು ಆಹಾರಕಾಲವನ್ನು ಅನುಸರಿಸುವುದಿಲ್ಲವೆಂದು ಮನುಷ್ಯನೂ ಹಾಗೆ ಮಾಡುವುದು ಯೋಗ್ಯವಲ್ಲ. ಆ ಕಾರಣದಿಂದ ಮಧ್ಯಾಹ್ನ ಸಂಜೆ ಇವೆರಡು ಸಮಯಗಳಲ್ಲಿ ಆಹಾರ ತೆಗೆದುಕೊಳ್ಳಬೇಕೆಂದು ಇಟ್ಟುಕೊಂಡಿದ್ದಾರೆ. ಪಾಶ್ಚಾತ್ಯರಲ್ಲಿ ಮುಂಜಾನೆ "ಬ್ರೆಕ್‌ಫಾಸ್ಟ", ಮಧ್ಯಾಹ್ನ "ಲಂಚ್," ಇಳಿಹೊತ್ತಿನಲ್ಲಿ "ಟೀ", ಸಂಜೆ "ಡಿನರ್" ಮತ್ತು "ಸಪರ್" ಎಂದು ನಾಲ್ಕೈದು ಸಲ ಊಟ ಮಾಡುವ ಪದ್ಧತಿಯಿದೆ. ಇದು ಕೂಳಬಕ್ಕತನವೆಂದು ಕೆಲವರು ಹೇಳಬಹುದು. ಯಾಕೆಂದರೆ ಇವರ ಮೂಲವೇ ಬೇರೆ. 'ಒಪ್ಪೊತ್ತು ಉಣ್ಣುವವನು ಯೋಗಿ, ಎರಡು ಹೊತ್ತು ಉಣ್ಣುವವನು ಭೋಗಿ, ಮೂರು ಹೊತ್ತು ಉಣ್ಣುವವನನ್ನು ಹೊತ್ತುಕೊಂಡು ಹೋಗಿ' ಎಂದೆನ್ನುವ ತತ್ವದ ಮಾತು ಅವರದು. ಸಾಮಾನ್ಯವಾಗಿ ಗೃಹಸ್ಥನು ಎರಡು ಸಲ ಊಟಮಾಡಬೇಕೆಂಬ ತತ್ತ್ವವನ್ನು ಅವರು ಅನುಸರಿಸುವರು. ಅದು ಅವರ ಆರೋಗ್ಯಕ್ಕೆ ಹಿತಕರ. ಆದರೆ ಊಟದ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಹಿಂದುಗಳು ಮಧ್ಯಾಹ್ನ ಮತ್ತು ರಾತ್ರಿ ಎಂದಿಟ್ಟುಕೊಂಡಿದ್ದಾರೆ. ರಾತ್ರಿಯ ಊಟದ ಕಾಲ ಆರೋಗ್ಯಕ್ಕೆ ಅನುಕೂಲವಲ್ಲ. ಜೈನರು ಮಾತ್ರ ಈ ಸಂದರ್ಭದಲ್ಲಿ ಅರೋಗ್ಯದ ನಿಯಮಗಳನ್ನು ಪಾಲಿಸುತ್ತಿರುವುದು ಕಂಡುಬರುತ್ತದೆ. ಅವರ ಶಾಸ್ತ್ರದ ಮೇರೆಗೆ ಊಟದ ಕಾಲಗಳು ಹೀಗೆ:

ಉದಯಾತ್ಥಮಣೀ ಕಾಲೇ ಣಾಲೀತಿಯವಜ್ಜಿಯಮ್ಹಿ
ಮಜ್ಝಮ್ಹಿ ।
ಏಕಮ್ಹಿ ದುಕಿ ಅಏ ವಾ ಮುಹುತ್ತಕಾಲೇ
ಯ ಭುತ್ತಂ ತು ॥ ೩೫ ॥ ಪು. ೪೫.

ಶ್ರೀ ಮದ್ವಟ್ಟಕೇರಾಚಾರ್ಯ ವಿರಚಿತ— ಮೂಲಾಚಾರ.
ಪ್ರಥಮಖಂಡ (ಮುಂಬಯಿ ವಿ. ಸಂ. ೧೯೭೭.)

(ಉದಯಾಸ್ತಮಾನಯೋಃ ಕಾಲಯೋಃ ನಾಡೀತ್ರಿಕ
ವರ್ಜಿತೇ ಮಧ್ಯೇ ।

ಏಕಸ್ಮಿನ್ ದ್ವಯೋಃ ತ್ರಿಷು ವಾ ಮುಹೂರ್ತಕಾಲೇ
ಏಕಭುಕ್ತಂ ತು ॥

(ಸೂರ್ಯೋದಯಾನಂತರ ಮತ್ತು ಸೂರ್ಯಾಸ್ತಮಾನಕ್ಕೆ ಮೊದಲು ಮೂರು ನಾಡಿಗಳನ್ನು (ಗಳಿಗೆಗಳನ್ನು) ಬಿಟ್ಟು ಕ್ರಮವಾಗಿ ಎರಡು ನಾಲ್ಕು ಅಥವಾ ಆರು ಗಳಿಗೆಗಳ ತರುವಾಯ (ಮುಂಜುವಿನಲ್ಲಿ) ಅಥವಾ ಮೊದಲು (ಸಂಜೆಯ ಮುಂದೆ) ಮುನಿಯಾದವನು ಒಂದು ಸಲ ಆಹಾರ ತೆಗೆದುಕೊಳ್ಳಬೇಕು.) ಗೃಹಸ್ಥನು ಇವೆರಡೂ ಕಾಲಗಳಲ್ಲಿ ಊಟಮಾಡಬಹುದು. ಸೂರ್ಯಾಸ್ತಪೂರ್ವದಲ್ಲಿ ಮೂರು ನಾಡಿ(ಗಳಿಗೆ) ಬಿಟ್ಟು ಎರಡು, ನಾಲ್ಕು ಅಥವಾ ಆರು ಗಳಿಗೆ ಮೊದಲು ಊಟಮಾಡುವುದನ್ನು ಅವರು ಹೋಸ ಅಥವಾ ಅಹೋಸ್ ಎನ್ನುತ್ತಾರೆ. ಹೋಸ ಮಾಡುವುದು ಆರೋಗ್ಯದೃಷ್ಟಿಯಿಂದ ಹಿತಕರವಾಗಿದೆ. ರಾತ್ರಿ ಊಟ ಮಾಡುವವರು ಊಟವಾದ ಕೂಡಲೆ ಮಲಗಿಬಿಡುತ್ತಾರೆ. ಅದರಿಂದ ಅವರಿಗೆ ಗಾಢನಿದ್ರೆ ಹತ್ತುವುದಿಲ್ಲ. ಅವರು ಕನಸು ಕಾಣುತ್ತಾರೆ. ಅದು ಅಪಚನಕ್ಕೂ ಕಾರಣವಾಗುತ್ತದೆ. ಹೋಸ ಮಾಡುವುದರಿಂದ ಮಲಗುವ ಮೊದಲು ಪಚನ-ಕ್ರಿಯೆಗೆ ಸಾಕಷ್ಟು ಅವಕಾಶ ದೊರೆಯುತ್ತದೆ. ಅದರ ಫಲವಾಗಿ ಅವರ ನಿದ್ರೆ ಗಾಢವಾಗಿರುತ್ತದೆ. ಅಪಚನಕ್ಕೆ ಕಾರಣವೇ ಅಲ್ಲಿ ಉಳಿಯುವುದಿಲ್ಲ. ಈ ನಿಯಮವನ್ನು ಪಾಲಿಸುವುದು ಹಿತಕರವೆಂದು ಬೇರೆ ಹೇಳುವ ಕಾರಣವಿಲ್ಲ.

ಒಂದೊಂದು ಸಲ ಹೋಸ ಮಾಡಿದವರು ರಾತ್ರಿ ಹಸಿವೆಯಾಯಿತೆಂದು ಹಾಲಿನೊಳಗೆ ಬೇಯಿಸಿದ ಪದಾರ್ಥಗಳನ್ನು ಸೇವಿಸುತ್ತಾರೆ. ಇಲ್ಲವೆ ಹಾಲು ಕುಡಿಯುತ್ತಾರೆ. ಅದು ಹೋಸದ ಅತಿಕ್ರಮ.

ಜೈನರು ರಾತ್ರಿ ಭೋಜನದ ವಿಷಯದಲ್ಲಿ ಆರೋಗ್ಯಶಾಸ್ತ್ರವನ್ನು ಅನುಸರಿಸುತ್ತಿರುವುದನ್ನು ವಸುನಂದ್ಯಾಚಾರ್ಯರು ತಮ್ಮ ಶ್ರಾವಕಾಚಾರದಲ್ಲಿ ಹೀಗೆ ಹೇಳಿದ್ದಾರೆ:

ಚಮ್ಮಟ್ಠಿ ಕೀದ-ಉಂದುರು ಭುಯಂಗ-ಕೆಸಾ-ಇಅಸಣ
ಮಜ್ಝಮ್ಮಿ ।
ಪಡಿಯಂಣ ಕಿಂಪಿ ಪಸ್ಸಇ ಭುಂಜಇ ಸವ್ವಂಪಿ
ಣಿಸಿಸಮಏ ॥ ೩೧೫ ॥

(ರಾತ್ರಿಯಲ್ಲಿ ಚರ್ಮ, ಎಲುಬು, ಹುಳು, ಇಲಿ, ಹಾವು ಮುಂತಾದವುಗಳ ಕೂದಲು ಮೊದಲಾದುವು ತಿನ್ನುವ ಪದಾರ್ಥಗಳಲ್ಲಿ ಬಿದ್ದರೆ ಕಾಣಿಸುವುದಿಲ್ಲ. ಕಾರಣ ಭೋಜನಪಾತ್ರೆಯಲ್ಲಿ ಬಿದ್ದ ಎಲ್ಲ ಪದಾರ್ಥಗಳನ್ನು ತಿಂದು ಬಿಡುತ್ತಾನೆ.)

ದಿವ್ವಜ್ಜೋಈ ಕುಣಇ ತಹ ವಿ ಚಉರಿಂದಿಯಾ
ಅಪರಿಮಾಣಾ ।
ಣಿವಡಂತಿ ದಿಠ್ಠಿರಾಏಣ ಮೋಹಿಯಾ ಅಸಣಮಜ್ಝಮ್ಮಿ
॥ ೩೧೬ ॥

(ದೀವಿಗೆಯನ್ನು ಹಚ್ಚಿ ಬೆಳಕನ್ನುಂಟುಮಾಡಿದರೂ ಆ ದೀವಿಗೆಯ ಕಾಂತಿಗಾಗಿ ಅಗಣಿತ ಚತುರಿಂದ್ರಿಯ ಜೀವಗಳು ಅದರ ಹತ್ತಿರ ಬರುತ್ತವೆ. ಮತ್ತು ಊಟ ಮಾಡುವ ಪದಾರ್ಥಗಳಲ್ಲಿ ಬೀಳುತ್ತವೆ.)

ಇಯ ಏರಿಸಮಾಹಾರಂ ಭುಂಜಂತೋ ಆದಣಾಸಮಿಹ
ಲೋಏ ।
ಪಾಉಣಇ ಪರಭವಮ್ಮಿ ಚಉಗಇಸಂಸಾರದುಕ್ಖಾಇಂ
॥ ೩೧೭ ॥

(ಈ ಪ್ರಕಾರ ದುಷ್ಟ ಆಹಾರವನ್ನು ಸೇವಿಸುವ ಮನುಷ್ಯನಿಗೆ ಅನೇಕ ರೋಗಗಳು ತಟ್ಟುವುದರಿಂದ ಅವನು ಈ ಲೋಕದಲ್ಲಿ ಆತ್ಮಘಾತ ಮಾಡಿಕೊಳ್ಳುತ್ತಾನೆ; ಮತ್ತು ಜೀವದಯೆಯಿಲ್ಲದ ಪಾಪದಿಂದ ಪರಲೋಕದಲ್ಲಿ ಚತುರ್ಗತಿಯೆಂಬ ಸಂಸಾರದಲ್ಲಿಯ ಅನಂತದುಃಖಗಳನ್ನು ಭೋಗಿಸುತ್ತಾನೆ.)

ಇದು ಜೈನರ ಊಟದ ವಿಷಯಕವಾದ ಲೌಕಿಕ ವಿಚಾರ. ಇನ್ನು ಅವರ ಪಾರಮಾರ್ಥಿಕ ವಿಚಾರಗಳನ್ನು ವಿಚಾರಿಸುವಾ:

ಏವಂ ಬಹುಪ್ಪಯಾರಂ ದೋಸಂ ಣಿಸಿಭೋಯಣಮ್ಮಿ
ಣಾಊಣ ।
ತಿವಿಹೇಣ ರಾಇಭುತ್ತೀ ಪರಿಹರಿಯವ್ವಾ ಹವೇ
ತಮ್ಹಾ ॥ ೩೧೮ ॥

(ರಾತ್ರಿ ಭೋಜನ ಮಾಡುವುದರಲ್ಲಿ ಅನೇಕ ಪಾಪಗಳಿರುತ್ತವೆ. ಆದುದರಿಂದ ಮನವಚನಕಾಯಗಳಿಂದ ರಾತ್ರಿಭೋಜನವನ್ನು ತ್ಯಜಿಸಬೇಕು.)

ವಸುನಂದ್ಯಾಚಾರ್ಯರು ಮತ್ತೂ ಹೀಗೆ ಹೇಳಿದ್ದಾರೆ:

ಏಯಾದಸೇಸು ಪಢಗಂ ವಿ ಜದೋ ಣಿಸಿಭೋಯಣಂ
ಕುಣಂತಸ್ಸ ।
ಠಾಣಂ ಣ ಠಾಇ ತಮ್ಹಾ ಣಿಸಿಭುತ್ತಂ ಪರಿಹರೇ
ಣಿಯಮಾ ॥ ೩೧೯ ॥

(ಹನ್ನೊಂದು ನೆಲೆಗಳಲ್ಲಿ ಯಾವದೊಂದು ನೆಲೆಯ ಶ್ರಾವಕನು ರಾತ್ರಿಯಲ್ಲಿ ಊಟ ಮಾಡಿದರೆ ಅವನ ಮೊದಲನೆಯ ನೆಲೆ ಸಹ ಉಳಿಯುವುದಿಲ್ಲ. ಆದ

ಕಾರಣ ರಾತ್ರಿಯಲ್ಲಿ ಎಂದೂ ಊಟಮಾಡಬಾರದು.)

ಸಾಮಾನ್ಯವಾಗಿ ರಾತ್ರಿ ಊಟ ಮಾಡುವಲ್ಲಿ ಹಿಂಸೆಯಾಗುತ್ತಿರುವುದರಿಂದ ಅದನ್ನು ನಿಲ್ಲಿಸಬೇಕೆಂಬುದೇ ಜೈನತತ್ತ್ವವು. ಅದನ್ನು ಮಾಘಣಂದ್ಯಾಚಾರ್ಯರು ತಮ್ಮ ಶಾಸ್ತ್ರಸಾರಸಮುಚ್ಚಯದಲ್ಲಿ ಹೀಗೆ ಸ್ಪಷ್ಟಪಡಿಸಿದ್ದಾರೆ;

ಹೋಸಂ ಮಾಡದವಂಗ-
ಪ್ರಾಸುಕಮಂ ಕೊಳ್ವಗೆ ಪರಸಮಯಿದಳಾ ।
ನಾಸದೊಳಿಪ್ಪಂಗರ್ಹ-
ತ್ಯಾಸನದೊಳ್ಪೇಳ್ದ ಮುಟ್ಟುಪದಂ ನಡೆದಪುದೇ ॥ ೧೩೦ ॥

(ಈ ಪದ್ಯದಲ್ಲಿ ಛಂದೋಭಂಗವಾಗಿದೆ. ಅದನ್ನು ತಿದ್ದದೆ ಇದ್ದಕ್ಕಿದ್ದಂತೆಯೇ ಉದಾಹರಿಸಲಾಗಿದೆ.)

ಅಹಿಂಸಾವ್ರತರಕ್ಷಾರ್ಥಂ ಮೂಲವ್ರತವಿಶುದ್ಧಯೇ
ನಿಶಾಯಾಂ ವರ್ಜಯೇದ್ಭುಕ್ತಿ ಮಿಹಾಮುತ್ರ ಚ
ದುಃಖದಾ ॥ ೧೫ ॥

ಆರನೆಯ ಅಣುವ್ರತಮೆನಿಸಿದ ಹೋಸಮನುಳ್ಳವನಲ್ಲದೆ ವ್ರತೀಕನಲ್ಲೆಂಬುದರ್ಥವು. ಇಲ್ಲಿಗೆ ಪ್ರಸ್ತುತ ಶ್ಲೋಕಂಗಳು—

ಪಿಪಿಲೀಕಾದಯೋ ಜೀವಾ ಭಕ್ಷಂ ತದ್ದೀಪಿಕಾನಿಶಿ ।
ಗಿಲ್ಯಂತೇ ಭೋಕ್ತೃಭಿಃ ಪುಂಭಿಸ್ತೇ ಪುನಃ ಕಬಲೈಃ
ಸಮಃ ॥ ೧೫ ॥
ಸ್ಫುಟಿತಾಂಘ್ರಿಕರಾದೀನಾಂ ವಿಕಾಷ್ಟ ತೃಣವಾಹಕಃ ।
ಕುಚೇಲಾ ದುಷ್ಕುಲಾಃ ಸಂತಿ ತೇ ರಾತ್ರ್ಯಾ
ಹಾರಸೇವನಾಲ್ ॥ ೧೬ ॥
ನಿಜಕುಲೈಕಮಂಡನಂ ತ್ರಿಜಗದಧೀಶಸಂಪದಂ ।
ಭಜತಿ ಯಃ ಸ್ವಭಾವತಸ್ತ್ಯಜತಿ ನಕ್ತಭೋಜನಂ ॥ ೧೭ ॥

ಚರಣಾನುಯೋಗ ಸೂತ್ರ—೨೧ ಶಾಸ್ತ್ರಸಾರಸಮುಚ್ಚಯ ಬೆಳಗಾವಿ ೧೯೧೬.

ಇವು ರಾಜಸಮ್ಮಿತ ಮತ್ತು ಮಿತ್ರಸಮ್ಮಿತ ವಚನಗಳು. ಇಲ್ಲಿ ರಾತ್ರಿಭೋಜನ ದೋಷದಿಂದುಂಟಾಗುವ ಭವದುಃಖಗಳು ಹೇಳಲಾಗಿವೆ; ಮತ್ತು ಅವುಗಳಿಂದ ಮನಕ್ಕೆ ಅಂಜಿಕೆ ತೋರಿಸಲಾಗಿದೆ.

ಈ ಮುಂದೆ ಕಾಂತಾಸಮ್ಮಿತ ವಚನಗಳನ್ನು ಪರಿಶೀಲಿಸಬಹುದು.

ಪರಮಂ ದುಃಖಿತಂ ಸೋಽಪಿ ಧನದತ್ತೋಽಧ್ವಖೇರಿತಃ ।
ಅನ್ಯದಾಸ್ತಂಗತೇ ಭಾಸೌ ಶ್ರವಣಾಶ್ರಮಮಾಗಮತ್ ॥೩೦॥
ತತ್ರಸಾಧೂನಭಾವಿಷ್ಟ ತೃಷಿತೋಽಪ್ಯುದಕಂ ಮಮ ।
ಪ್ರಾಯಚ್ಛತ ಸುಖಿನ್ನಸ್ಯ ಯೂಯಂ ಸುಕೃತ
ಪ್ರಿಯಾಃ ॥ ೩೧ ॥
ತತ್ರೈಕಃ ಶ್ರಮಣೋಽವೋಚನ್ಮಧುರಂ ಪರಿಸಾಂತ್ವಯನ್ ।
ರಾತ್ರಾವಪ್ಯಮೃತಂ ಯುಕ್ತಂ ನ ಪಾತುಂ ಕಿಂ
ಪುನರ್ಜಲಂ ॥ ೩೨ ॥
ಚಕ್ಷುರ್ವ್ಯಾಪಾರನಿರ್ಮುಕ್ತೇ ಕಾಲೇ ಪಾಪೈಕದಾರುಣೇ ।
ಅದೃಷ್ಟ ಸೂಕ್ಷ್ಮಜಂತ್ವಾಢ್ಯೇ ಮಾಶೀರ್ವತ್ಸ
ವಿಭಾವಕಾ ॥ ೩೩ ॥
ಆತುರೇಣಾಪಿ ಭೋಕ್ತವ್ಯಂ ವಿಕಾಲೇ ಭದ್ರನತ್ವಯಾ ।
ಮಾ ಪ್ರಾಪ್ತೋ ವ್ಯಸನೋದಾರಸಲಿಲೇ ಭವಸಾಗರೇ ॥೩೪॥
ಉಪಶಾಂತಸ್ತತಃ ಪುಣ್ಯಕಥಾಭಿಃ ಸೋಽಲ್ಪಶಕ್ತಿಕಃ ।
ಅಣುವ್ರತಧರೋ ಜಾತೋ ದಯಾಲಿಂಗಿತ
ಮಾನಸಃ ॥ ೩೫ ॥
ಕಾಲಧರ್ಮಂ ಚ ಸಂಪ್ರಾಪ್ಯ ಸೌಧರ್ಮೇ ಸತ್ಸುರೋ
ಭವತ್ ॥ ೩೬ ॥

ರವಿಷೇಣಾಚಾರ್ಯರ ಪದ್ಮಪುರಾಣ ಪರ್ವ ೧೦೬.

ಶ್ರಮಣೋಪದೇಶದಿಂದ ರಾತ್ರಿ ನೀರು ಕುಡಿಯದೆ ಅಣುವ್ರತಧಾರಣಮಾಡಿದ ಧನದತ್ತಶ್ರೇಷ್ಠಿ ಸೌಧರ್ಮ ಕಲ್ಪದಲ್ಲಿ ಸುರನಾಗಿ ಹುಟ್ಟಿದನು. ಆದುದರಿಂದ ರಾತ್ರಿ ಭೋಜನತ್ಯಾಗದಿಂದ ಉತ್ತಮಗತಿಯಾಗುತ್ತದೆಂದು ಮನೋರಂಜಕವಾಗಿ ಹೇಳಲಾಗಿದೆ.

ಆಶಾಧರಾಚಾರ್ಯರ ಸಾಗಾರ ಧರ್ಮಾಮೃತದಲ್ಲಿ ಸಹ ಇದರಂತೆಯೇ ಹೇಳಲಾಗಿದೆ ನೋಡಿ.

ಅಥ ನಿಶಾಭೋಜನಾಗಾಲಿತ ಜಲೋಪಯೋಗಯೋರ್ಮದ್ಯಾದ್ಯುಪಯೋಗ ವದ್ದೋಷಮಯತ್ವಾತ್ಪರಿಹಾರಮಾಹಃ

ರಾಗಜೀವವಧಾಪಾಯಭೂಯಸ್ತ್ವಾತ್ತದ್ವದುತ್ಸೃಜೇತ್ ।
ರಾತ್ರಿಭುಕ್ತಂ ತಥಾಯುಂಜ್ಯಾನ್ನ
ಪಾನೀಯಮಗಾಲಿತವರ್ ॥ ೧೪ ॥

ದ್ವಿತೀಯೋಽಧ್ಯಾಯಃ ಸಾಗಾರ ಧರ್ಮಾಮೃತಂ
ಕೊಲ್ಹಾಪುರ ೧೯೧೫

(ಕಸ್ಮಾತ್ ರಾಗೇತ್ಯಾದಿ । ರಾಗಶ್ಚ ಜೀವವಧಶ್ಚ ಅಪಾಯಶ್ಚ ಜಲೋದರಾದಯಸ್ತೇ ಭೂಯಾಂಸೋ ದಿನಭೋಜನಾದತಿಶಯೇನ ಬಹವೋ ಯಗ್ರ ತದ್ರಾಗಜೀವವಧಾಪಾಯಭೂಯಸ್ತಸ್ಯ ಭಾವಸ್ತತ್ತ್ವಂ ತಸ್ಮಾತ್ ।)

(ರಾತ್ರಿಭೋಜನ ಮತ್ತು ಅಗಾಲಿತ ಜಲಪಾನ ಮಾಡುವುದರಿಂದ ರಾಗ (ಭಾವಹಿಂಸೆ), ಜೀವವಧ (ದ್ರವ್ಯಹಿಂಸೆ) ಮತ್ತು ಅಪಾಯ ಅಂದರೆ ಜಲೋದರ ಮುಂತಾದ ರೋಗಗಳು ಸಂಭವಿಸುತ್ತವೆ.)

(ರಾಗ ಅಂದರೆ ಪ್ರೀತಿ. ಹಗಲು ಊಟ ಮಾಡುವುದಕ್ಕಿಂತ ರಾತ್ರಿಯ ಊಟದ ಮೇಲೆ ಪ್ರೀತಿ ಹೆಚ್ಚು ಪ್ರೀತಿ ಭಾವಹಿಂಸೆಗೆ ಕಾರಣ.)

ಸಾಂಪ್ರತಮನಸ್ತಮಿತಭೋಜಿನಃ ಸತ್ಫಲಂ ಕಿಂಚಿದ್ದೃಷ್ಟಾಂತೇನ ಮುಗ್ಧಜನಪ್ರಚೋದನಾರ್ಥಂ ಪ್ರಕಟಯತಿ:—

ಚಿತ್ರಕೂಟೇತ್ರ ಮಾತಂಗೀ ಯಾಮಾನಸ್ತಮಿತ ವ್ರತಾತ್ ।
ಸ್ವಭರ್ತ್ರಾ ಮಾರಿತಾ ಜಾತಾ ನಾಗಶ್ರೀಃ
ಸಾಗರಾಂಗಜಾ ॥ ೧೫ ॥

(ಮಾಲವ ದೇಶದ ಉತ್ತರಕ್ಕೆ ಚಿತ್ರಕೂಟ ಪರ್ವತದ ಮೇಲೆ ವಾಸಿಸುತಿದ್ದ ಮಾತಂಗೀ (ಪಂಚಮ ಸ್ತ್ರೀ)ಯನ್ನು ಅವಳ ಗಂಡನು ಕೊಂದನು. ಅವಳು ಸೂರ್ಯಾಸ್ತಪೂರ್ವ ಒಂದು ಪ್ರಹರದ ಮೊದಲು ಊಟಮಾಡುತ್ತ ರಾತ್ರಿ ಭೋಜನತ್ಯಾಗದ ವ್ರತಪಾಲಿಸಿದ ಪುಣ್ಯದಿಂದ ಸಾಗರದತ್ತ ಸೆಟ್ಟಿಯ ಮಗಳು ನಾಗಶ್ರೀಯಾಗಿ ಹುಟ್ಟಿದಳು. ಅಂದರೆ ಸಿರಿವಂತರ ಮನೆಯಲ್ಲಿ ಅವಳ ಜನ್ಮವಾಯಿತು. ಪಂಚಮಶ್ತ್ರೀಯೆಲ್ಲಿ! ಸಿರಿವಂತರ ಮಗಳೆಲ್ಲಿ!)

ಅಜ್ಞಜನರ ಗಮನವನ್ನು ಸೆಳೆಯಲು ರಾತ್ರಿ ಭೋಜನತ್ಯಾಗದ ಫಲವನ್ನು ಕಾಂತಾಸಮ್ಮಿತ ಗ್ರಂಥಗಳು ಈ ರೀತಿ ಉದಾಹರಿಸುತ್ತವೆ. ಇತ್ಯರ್ಥವೇನೆಂದರೆ ಹಿತವಾದ ಮಿತವಾದ ಆಹಾರವನ್ನು ಪ್ರಕಾಶವಿರುವಾಗಲೇ ಸೇವಿಸುವುದು ಹಿತಕರ. ಜೈನರು ಇಷ್ಟಕ್ಕೆ ನಿಲ್ಲದೆ ಇನ್ನೂ ಮುಂದೆ ಹೋಗುತ್ತಾರೆ. ಅಷ್ಟಮಿ ಚತುರ್ದಶಿಗಳಲ್ಲಿ ಅವರಿಗೆ ಉಪವಾಸ. ಅದನ್ನು ಅವರು ತಪ್ಪದೆ ಆಚರಿಸುತ್ತಾರೆ. ಹಿಂದುಗಳಿಗೆ ಏಕಾದಶಿಯ ಉಪವಾಸವಿದೆ. ಅದನ್ನು ಆಚರಿಸುವವರಿಗಿಂತ ಮುರಿಯುವವರೇ ಹೆಚ್ಚು. ಈಗಂತೂ ಆಹಾರಧಾನ್ಯದ ಕೊರತೆಯಿದೆ. ತಿಂಗಳಲ್ಲಿ ಹಿಂದುಗಳಂತೆ ಎರಡು ಏಕಾದಶಿಯ ಉಪವಾಸಗಳನ್ನು ಅಥವಾ ಜೈನರಂತೆ ಅಷ್ಟಮಿ ಚತುರ್ದಶಿಯ ನಾಲ್ಕು ಉಪವಾಸಗಳನ್ನು ಎಲ್ಲರೂ ಆಚರಿಸುವುದಾದರೆ ಆಹಾರದ ಕೊರತೆಯ ಪ್ರಮಾಣ ಕಡಿಮೆಯಾಗುವಲ್ಲಿ ಯಾವ ಸಂಶಯವಿಲ್ಲ; ಮತ್ತು ಆ ಉಪವಾಸಗಳು ಜನರ ಆರೋಗ್ಯಕ್ಕೆ ಕಾರಣವಾಗುತ್ತವೆ. ಇದೂ ಅಲ್ಲದೆ ಅಪ್ರತ್ಯಕ್ಷವಾಗಿ ನಮ್ಮ ರಾಷ್ಟ್ರೀಯ ಸರಕಾರದ ಚಿಂತೆಯನ್ನು ಕೆಲಮಟ್ಟಿಗಾದರೂ ದೂರಮಾಡಿದಂತಾಗುತ್ತದೆ. ಇದಕ್ಕೆ ಪ್ರತಿಯಾಗಿ ತಮಗೆ ದಿನಾಲು ಹೊಟ್ಟೆತುಂಬ ಉತ್ತಮ ಆಹಾರ ದೊರೆಯಬೇಕೆಂದು ಅಂತಹ ಆಹಾರ ಧಾನ್ಯಗಳನ್ನು ಕಳ್ಳಪೇಟೆಯಿಂದ ಕೊಂಡುತಂದು ಶೇಖರಿಸಿಟ್ಟುಕೊಳ್ಳುವುದು ಮನುಷ್ಯನ ಸ್ವಾರ್ಥೀ ಸ್ವಭಾವಕ್ಕೆ ಅನುಗುಣವೇ ಆಗಿದೆ. ಹೀಗೆ ನಡೆದರೆ ಕಳ್ಳಪೇಟೆಯಲ್ಲಿ ವ್ಯವಹರಿಸಿದುದು ಮೊದಲನೆಯ ತಪ್ಪು; ಕಳ್ಳಪೇಟೆಯಲ್ಲಿ ವ್ಯವಹರಿಸುವ ವರ್ತಕರಿಗೆ ಸಹಾಯಮಾಡಿದುದು ಎರಡನೆಯ ತಪ್ಪು; ಆ ಪದಾರ್ಥಗಳು (ಸ್ವಾರ್ಥಮೂಲವಾಗಿ) ಎರಡನೆಯವರಿಗೆ ಸಿಗದಂತೆ ಮಾಡಿದುದು ಮೂರನೆಯ ತಪ್ಪು; ವರ್ತಕರು ಕಳ್ಳಪೇಟೆಗಾಗಿ ಕಳ್ಳತನದಿಂದ ಆಹಾರಧಾನ್ಯಗಳನ್ನು ಶೇಖರಿಸುತ್ತಿರುವುದರಿಂದ ಸರಕಾರದ ಆಹಾರ ವಿಷಯಕವಾದ ಸಮಸ್ಯೆಗಳು ಮತ್ತೂ ಜಟಿಲವಾಗುತ್ತವೆ. ಆ ಕಾರಣ ಅದು ನಾಲ್ಕನೆಯ ಅತಿ ದೊಡ್ಡ ತಪ್ಪು. ಇದಲ್ಲದೆ ಈ ಆಹಾರಧಾನ್ಯ ಶೇಖರಿಸುವ ಸಂದರ್ಭದಲ್ಲಿ ಮನುಷ್ಯನು ತಾನು ಅಪ್ರಮಾಣಿಕನಾಗುವುದಲ್ಲದೆ ಜನರನ್ನೂ ಅಪ್ರಮಾಣಿಕರನ್ನಾಗಿ ಮಾಡಿ ಕೊನೆಗೆ ಆ ಕುಂದನ್ನು ರಾಷ್ಟ್ರಕ್ಕೆ ತಂದು ಒಡ್ಡುತ್ತಾನೆ. ಇದರಲ್ಲಿ ಆರಂಭದಲ್ಲಿ ತಪ್ಪು ತೀರ ಸಣ್ಣದೆಂದು ತೋರಿಬಂದರೂ ಅದರ ಪರಿಣಾಮ ಬಹು ದೂರಗಾಮಿಯಾಗಿದೆ. ತನ್ನ ಹೊಟ್ಟೆಯ ದೆಶೆಯಿಂದ ಇಡಿಯ ರಾಷ್ಟ್ರಕ್ಕೆ ದೋಷ ತರುವುದು ಎಲ್ಲಿಯ ನ್ಯಾಯ? ಈ ಕಲ್ಪನೆಯಿಂದಲೇ ಜೈನರಂತೆ ತಿಂಗಳಲ್ಲಿ ನಾಲ್ಕು ಉಪವಾಸಗಳಲ್ಲದಿದ್ದರೂ ಹಿಂದುಗಳಂತೆ ಎರಡಲ್ಲದಿದ್ದರೂ ಒಂದು ಉಪವಾಸವನ್ನಾದರೂ ಆಚರಿಸಬೇಕೆಂದು ಮಹಾತ್ಮಾಜಿಯವರು ಬೋಧಿಸಿದರು; ಮತ್ತು ಅದರಿಂದ ಸರಕಾರಕ್ಕೆ ಎಲ್ಲರೂ ಹೇಗೆ ಸಹಾಯಮಾಡಬಹುದೆಂಬುದನ್ನು ತೋರಿಸಿಕೊಟ್ಟರು. ಅದರಂತೆ ನಾವು ಆಚರಿಸಲಾರೆವೇ!

ಮಾನವತೆಯ ಪ್ರಗತಿ

ಸಿದ್ದಯ್ಯ ಪುರಾಣಿಕ, ಬಿ. ಎ.

"ಮಾನವಜೀವನದ ಮಹತಿಯ ಹೃದಯವೇ ಪ್ರಗತಿ; ಬೃಹತ್ತರವಾದ ಹಾಗೂ ಶ್ರೀಮದೂರ್ಜಿತವಾದ ಇರವನ್ನು ನಮಗೊದಗಿಸುವ ಉತ್ಕ್ರಾಂತಿತತ್ವವೇ ಅದು" ಎಂದು ಯೋಗೀಶ್ವರ ಶ್ರೀ ಅರವಿಂದರು ಅಪ್ಪಣೆ ಕೊಡಿಸಿದ್ದಾರೆ.

"The human mind is so constituted that it must believe in progress. Progress of some kind there must be" ಎಂಬುದಾಗಿ ಅನೇಕ ವಿಜ್ಞಾನಿಗಳು ತತ್ತ್ವಜ್ಞಾನಿಗಳು ನಂಬುತ್ತಾರೆ.

ಗತಶತಮಾನದ ಕೊನೆಯ ಭಾಗದಲ್ಲೂ ಈ ಶತಮಾನದ ಆರಂಭಕಾಲದಲ್ಲೂ ಉತ್ಕ್ರಾಂತಿತತ್ತ್ವವು, ವಿಕಾಸವಾದವು 'ಧರೆಯನೆಲ್ಲವನೊಂದೆ ಕೊಡೆಯಿಂದ ಲಾಳುತ್ತಿದ್ದಿತು. ಅನೇಕ ವಿಧವಾದ ವಿಕಾಸವಾದಗಳು ಉದ್ಭವಿಸಿದುವು. (Inorganic, Cosmic, Astral, Geologic, Atomic ಇತ್ಯಾದಿ.) ಸಾಮಾಜಿಕ ವಿಕಾಸವಾದವು ಮೊಗದೋರಿದ್ದಿತು. ಈ ಹೊಸ ಸಿದ್ಧಾಂತವನ್ನೂ ಭಾಷೆ, ವಿಚಾರ, ವಿಶ್ವಾಸ, ಕುಟುಂಬ, ಧರ್ಮ, ರಾಜ್ಯ, ಸಾಮಾಜಿಕ ರಾಜಕೀಯ ಆರ್ಥಿಕ ಸಂಸ್ಥೆಗಳ ಬೆಳವಣಿಗೆಗಳಿಗೂ ಅನ್ವಯಿಸುವ ಪ್ರಬಲ ಪ್ರಯತ್ನಗಳೂ ನಡೆದಿದ್ದುವು. ಹರ್ಬರ್ಟ ಸ್ಪೆನ್ಸರನು ತನ್ನ "Survival of the fittest" ಸಿದ್ಧಾಂತದಿಂದ ವಿಕಾಸವಾದಕ್ಕೂ ಪ್ರಗತಿಗೂ ತಳುಕು ಹಾಕಿ ಎರಡೂ ಒಂದೇ ಎಂದು ಸಾಧಿಸಿದನು. ಡಾರ್ವಿನ್ನನ 'Natural Selection' ಸಿದ್ಧಾಂತದ ಪ್ರಕಾರ ನಿಸರ್ಗವು ಮೇಲು ಮೇಲು ತರಗತಿಯ ಜೀವಸೃಷ್ಟಿಯನ್ನು ಸೃಜಿಸುವುದರಲ್ಲಿ ನಿಮಗ್ನವಾಗಿದೆಯೆಂದು ನಂಬಲಾಯಿತು. ಕಾಲ ಕಳೆದಂತೆಲ್ಲ ಮಾನವಜನಾಂಗವು ಉನ್ನತೋನ್ನತ ಸ್ಥಿತಿಯ ಕಡೆಗೆ ಸಹಜವಾಗಿಯೇ ಸ್ವಾಭಾವಿಕವಾಗಿಯೇ ವಿಕಾಸಹೊಂದುತ್ತ ನಡೆದಿದೆ; ಮೊದಲಿದ್ದುದಕ್ಕಿಂತ ಈಗಿದ್ದುದು ಮೇಲುಮಟ್ಟದ್ದಾಗಿದೆ; ಈಗಿದ್ದುದಕ್ಕಿಂತ ಮುಂಬರುವುದು ಉಚ್ಚತರವಾದುದೇ ಆಗುವುದು—ಎಂದು ಉತ್ಸಾಹಿತವಾಗಿದ್ದಿತು ಮನುಜ ಲೋಕವೆಲ್ಲ.

ಈ ಆಶಾವಾದಕ್ಕೆ ಆಧಾರವಿಲ್ಲದಿರಲಿಲ್ಲ. ಫ್ರಾನ್ಸಿನ ಮಹಾಕ್ರಾಂತಿ, ಅಮೇರಿಕೆಯ ಸ್ವಾತಂತ್ರ್ಯಸಂಗ್ರಾಮ, ಯಾಂತ್ರಿಕಯುಗದ ಅದ್ಭುತ ಉತ್ಪಾದನಶಕ್ತಿ, ಔದ್ಯೋಗಿಕಕ್ರಾಂತಿಯ ತರುವಾಯ ವಿಜ್ಞಾನವು ಸಾಧಿಸಿದ ಕಲ್ಪನಾತೀತಪ್ರಗತಿ, ರಷ್ಯಾದ ರಾಜ್ಯಕ್ರಾಂತಿ, ಅಂತರರಾಷ್ಟ್ರೀಯ ವ್ಯಾಪಾರಾಭಿವೃದ್ಧಿ—ಇವೆಲ್ಲ, ಒಂದರ ಹಿಂದೊಂದಾಗಿ ತ್ವರಿತಗತಿಯಿಂದ ತಲೆದೋರಿ ಮಾನವತೆಯ ಅವಿಚ್ಛಿನ್ನಪ್ರಗತಿ ಹಾಗೂ ಅನಂತವಿಕಾಸಗಳಲ್ಲಿ ವಿಶ್ವಾಸವನ್ನು ಹೆಚ್ಚಿಸಿದ್ದುವು. ಪ್ರವಾಸ, ನಿವಾಸ, ವಿಲಾಸ ಮೊದಲಾದ ಜೀವನಸೌಕರ್ಯಗಳಲ್ಲಿ ಮಾನವನು ಪಡೆದ ಅಪೂರ್ವಯಶಸ್ಸು ಹಾಗೂ ನೆಲನೀರುಗಾಳಿಗಳ ಮೇಲೆ ಅವನು ದೊರಕಿಸಿದ ದಂಗುಗೊಳಿಸುವ ವಿಜಯಗಳು ಅವನ ಆತ್ಮವಿಶ್ವಾಸವನ್ನು ಇನ್ನೂ ಹೆಚ್ಚಿಸಿದುವು. ಜಗತ್ತು ಪೂರ್ವದ ಸುವರ್ಣಯುಗದಿಂದ ಲೋಹಯುಗದ ಕಡೆಗೆ, ಕಲುಷಿತ ಕಲಿಯುಗದ ಕಡೆಗೆ ಧಾವಿಸುತ್ತಲಿದೆಯೆಂದು ಇನ್ನೂ ವಾದಿಸುತ್ತಲಿದ್ದ ಪರಂಪರಾಪ್ರಿಯರೂ ಸನಾತನಿಗಳೂ ಇನ್ನೂ ಅಲ್ಲಲ್ಲಿ ಇದ್ದರೂ, ಅವರ ಆಕ್ರೋಶವು ಅರ್ಥಶೂನ್ಯ ಅರಣ್ಯರೋದನವಾಗಿ ಪರಿಣಮಿಸಿತು. ಪೌರುಷವಾದದ ವಿಜಯೋತ್ಸಾಹದಲ್ಲಿ, ಮಾನವನ ವಿಜಿಗೀಷುಮತಿಗೆ ಮಹಾಪೂರ ಬಂದ ಈ ಪ್ರಗತಿಯುಗದಲ್ಲಿ ದೇವರು, ಧರ್ಮ, ದೈವವಾದಗಳೆಲ್ಲ ಕೊಚ್ಚಿಹೋದುವು.

ಆದರೆ ಇತ್ತೀಚೆಗೆ ೧೯ನೆಯ ಶತಮಾನದ ಈ ಉಕ್ಕುವ ಉತ್ಸಾಹವು ಮೆಲ್ಲಮೆಲ್ಲನೆ ಮಾಯವಾಗತೊಡಗಿದೆ. ಶತಶತಮಾನಗಳಲ್ಲಿ ಸಾಧಿಸಿದುದೆಲ್ಲ ಎರಡು ಮಹಾಯುದ್ಧಗಳಲ್ಲಿ ಭಸ್ಮವಾಗಿ ಎತ್ತೆತ್ತ ನೋಡಿದೊಡೆ ಅತ್ತತ್ತ ಹಾಹಾಕಾರ ಹಬ್ಬಿದೆ. ಇನ್ನೂ ಯುದ್ಧ ಮುಗಿದಿಲ್ಲ; ಆಯುಧ ಒಗೆದಿಲ್ಲ; ಶವಗಳ ಹುಗಿದಿಲ್ಲ; ವೈರತ್ವದ ಬೇರುಗಳನ್ನು ಅಗಿದು ಸುಟ್ಟಿಲ್ಲ; ಶಾಶ್ವತಶಾಂತಿಯ ಬೀಜಗಳನ್ನು ನೆಟ್ಟಿಲ್ಲ; ಸರ್ವರಿಗೂ ಸ್ವಾತಂತ್ರ್ಯ

ಕೊಟ್ಟಿಲ್ಲ; ದಾಸ್ಯದಾರಿದ್ರ್ಯಗಳ ಬೇತಾಳ ಬೆನ್ನುಬಿಟ್ಟಿಲ್ಲ; ಮಾನವಜೀವನವಿನ್ನೂ ದುರಂತನಾಟಕವಾಗಿಯೇ ಉಳಿದಿದೆ.

ಹೀಗಾಗಿ ಪ್ರಗತಿವಾದದ ಅಡಿಗಲ್ಲು ಸಡಲಿದೆ. ವಿಕಾಸವಾದದ ಅಬ್ಬರ ತಗ್ಗಿದೆ. ನಾವು ವಿಕಾಸವೆಂದು ನಂಬಿದುದು ಕೇವಲ ಪರಿವರ್ತನ ಮಾತ್ರ. ಜಗತ್ತು ಪರಿವರ್ತನಶೀಲವಾದುದು; ಸಮಾಜವೂ ಪರಿವರ್ತನಶೀಲವಾದುದು ನಿಜ. ಆದರೆ ಅದರ ಪರಿವರ್ತನೆಗಳೆಲ್ಲ ಪ್ರಗತಿಪರವಾದವುಗಳೆಂದು ಹೇಳಲಾಗುವುದಿಲ್ಲ. ಒಮ್ಮೊಮ್ಮೆ ಈ ಪರಿವರ್ತನೆಗಳು ಆಕಸ್ಮಿಕವೂ ಅನರ್ಥಕಾರಕವೂ ಆಗಿರುವುದುಂಟು. ಯುಗಯುಗಗಳ ಇತಿಹಾಸವನ್ನು ಅವಲೋಕಿಸಿದರೆ ಕಂಡುಬರುವುದಾದರೂ ಏನು? ಮನುಷ್ಯನು ಯಾತರಲ್ಲಿ ಪ್ರಗತಿ ಪಡೆದಿದ್ದಾನೆ?

"In history every step in advance has also been a step backward" ಎಂದು ಪ್ರಸಿದ್ಧ ಇತಿಹಾಸಕಾರನಾದ ಫ್ರೀಮನ್ ಸಾರಿದ್ದಾನೆ, ನಿಜ. ಇತಿಹಾಸದಲ್ಲೇನಿದೆ? ಕಟ್ಟುವ ಕೆಡಿಸುವ ಗೊಂಬೆ-ಗುಡಿಯಾಟ, ವಿಲ್ ಡ್ಯೂರಂಟರಿದನ್ನು ಮನೋಜ್ಞವಾಗಿ ಬಣ್ಣಿಸಿದ್ದಾರೆ:—History, like Napoleon's God, is on the side of big Bertha; it laughs at artists and philosophers, destroys their work in a moment of patriotism, and gives its honours, its statues and its pages to Mars. Egypt builds and Persia destroys it; Persia builds and Greece destroys it; Greece builds and Rome destroys it; Islam builds and Spain destroys it; Spain builds and England destroys it; Europe builds and Europe destroys it." ಮೊದಮೊದಲು ಮಾನವನು ಮುಷ್ಟಿಯಿಂದ, ಕಟ್ಟಿಗೆ ಕಲ್ಲುಗಳ ಆಯುಧಗಳಿಂದ ಕೊಲ್ಲುತ್ತಾನೆ; ಆ ಮೇಲೆ ಬಿಲ್ಲು ಬಾಣ ಭಾಲೆಗಳಿಂದ ಕೊಲ್ಲುತ್ತಾನೆ; ನಂತರ ಗಜಹಯಪದಾತಿಗಳಿಂದ ಸಂಹಾರಯಾತ್ರೆಯನ್ನು ಮುಂದುವರಿಸುತ್ತಾನೆ; ತದನಂತರ ತೋಪು ಕೋವಿ ಸಿಡಿಮದ್ದು ಅಣು ಬಾಂಬುಗಳಿಂದ! ಕಾರ್ಯವೊಂದೇ. ಅದರ ಪರಿಮಾಣ ಪರಿಣಾಮ ಹೆಚ್ಚಿವೆ ಅಷ್ಟೆ. ಹೀಗೆ ಮಾನವನ ವಿಧಾಯಕತೆಯು ಅವನ ವಿಧ್ವಂಸಕತೆಗಿಂತ ಎಳ್ಳಷ್ಟೂ ಹೆಚ್ಚುಗೆಯನ್ನು ಹೊಂದಿಲ್ಲ. ಹಿಂದುಳಿದಿದೆಯೆಂದೇ ಹೇಳಬೇಕು. ಜಾರ್ಜ ಬರ್ನಾರ್ಡ ಷಾರು ಹೇಳುವಂತೆ ಶಾಂತಿಯ ಕಲೆಗಳಲ್ಲಿ ಮಾನವನು ಹೇಳಿಕೊಳ್ಳುವಂತಹ ಪ್ರಗತಿಯನ್ನೇನೂ ಸಾಧಿಸಿಲ್ಲ; ಆದರೆ ಯುದ್ಧಕಲೆಗಳಲ್ಲಿ ಮಾತ್ರ ಅವನು ನಿಸರ್ಗಕ್ಷೋಭೆಗಳಾದ ಭೂಕಂಪ, ಬರಗಾಲ, ರೋಗರುಜಿನಗಳಿಗಿಂತಲೂ ಬಹು ಮುಂದೆ ಹೋಗಿದ್ದಾನೆ.

ಜ್ಞಾನವಿಜ್ಞಾನಗಳಲ್ಲಿ ಇಂದಿನ ಮಾನವನು ಹಿಂದಿನ ಮಾನವನಿಗಿಂತ ಪ್ರಚಂಡವಾದ ಪ್ರಗತಿಯನ್ನು ಪಡೆದಿದ್ದಾನೆಂದು ಹೇಳಲಾಗುತ್ತದೆ. ಆದರೆ ಅರಿಸ್ಟಾಟಲನ ಮಾತನ್ನು ನಂಬುವುದಾದರೆ ಮನುಜಸೃಷ್ಟಿಯಾದಂದಿನಿಂದ ಎಲ್ಲ ವಿದ್ಯೆ, ವಿಜ್ಞಾನ, ವಿಚಾರಗಳೂ ಎಷ್ಟೋ ಸಲ ಕಂಡು ಹಿಡಿಯಲ್ಪಟ್ಟು ಎಷ್ಟೋ ಸಲ ಮತ್ತೆ ಮರೆಯಲ್ಪಟ್ಟಿವೆ. ಪೃಥ್ವಿಯಲ್ಲಿ ಹೊಸದೆಂಬುದೇನೂ ಇಲ್ಲ. ಯಾಂತ್ರಿಕ (Technological) ಪ್ರಗತಿಯನ್ನೂ ಸದ್ಯಕ್ಕೆ ಬದಿಗಿರಿಸಿ ಶುದ್ಧ ವಿಜ್ಞಾನದ ವಿಚಾರಧಾರೆಯನ್ನು ವಿಮರ್ಶಿಸಿ ನೋಡಿದರೆ ಅದರಲ್ಲೂ ನಿಶ್ಚಿತತೆಯೆಂಬುದಿಲ್ಲ. ಅಲ್ಲಿಯೂ ಸಂಶಯವೇ ಸುಳಿದಾಡುತ್ತಿದೆ. ಯೂಕ್ಲಿಡನ ಭೂಮಿತಿ, ನ್ಯೂಟನನ ಭೌತಶಾಸ್ತ್ರ, ಡಾರ್ವಿನ್ನನ ವಿಕಾಸವಾದಗಳೂ ಈಗ ಸಾಶಂಕದೃಷ್ಟಿಯಿಂದ ನೋಡಲ್ಪಡತೊಡಗಿವೆ. ಮೊದಲಿನ 'Determinism'ಕ್ಕೂ ಪ್ರತಿಯಾಗಿ ಈಗ 'Heisenbergನ Principle of Indeterminacy' ತನ್ನ ಸ್ವಾಮಿತ್ವವನ್ನು ಸ್ಥಾಪಿಸತೊಡಗಿದೆ. ಜಗತ್ತಿನ ಬಗ್ಗೆ ಸರ್ ಜೇಮ್ಸ ಜೀನ್ಸರಂಥ ವಿಖ್ಯಾತ ವಿಜ್ಞಾನಿಗಳ ತೀರ್ಪು ಇದು:—

"Perhaps to-day is the first time in the history of science when the universe has really become mysterious ....That the universe is now so mysterious is due, it appears, to the way we think about things. But it may well be that we shall never hit on a way of thinking about things that will abolish that mystery."

ಇನ್ನು ವಿಜ್ಞಾನದ ಪ್ರತ್ಯಕ್ಷಪ್ರಯೋಜನಗಳ ಮೌಲ್ಯಮಾಪನವನ್ನಿಷ್ಟು ಮಾಡೋಣ. ವಿಜ್ಞಾನದ ವಿನಾಶಕಶಕ್ತಿಯು ಯುದ್ಧಸಾಮಗ್ರಿಗಳ ವಿಪುಲತೆ ಹಾಗೂ ಭಯಂಕರವಾದ ಸಂಹಾರಕತೆಗಳಲ್ಲಿ ವ್ಯಕ್ತವಾಗಿದೆ. ಇದಕ್ಕೆ ಮಾನವತೆಯ ಪ್ರಗತಿಯೆಂದು ಯಾರೂ ಒಪ್ಪಲಾರರು. ಮಾನವತೆಯ ದುರ್ಗತಿಯದು. ಇನ್ನುಳಿದುವು ಸಮಯಶ್ರಮಗಳ ಉಳಿತಾಯಕ್ಕೆ ಕಾರಣವಾದ (Time saving and labour-saving devices) ಸಾಮಗ್ರಿಗಳು. ಇವುಗಳಿಂದ ಹೆಚ್ಚುತ್ತಲಿರುವ ನಿರುದ್ಯೋಗಸಮಸ್ಯೆಯೊತ್ತಟ್ಟಿಗಿರಲಿ. ಇವುಗಳ ನಿಜವಾದ ಪ್ರಯೋಜನಗಳಾದರೂ ಆವುವು? ವಿರಾಮಕಾಲವನ್ನು (Leisure) ಮಾನವತೆಯ ಪ್ರಗತಿಗಾಗಿ ಹೇಂತು ಉಪಯೋಗಿಸಿಕೊಳ್ಳಬೇಕೆಂಬ ಅರಿವು ತಲೆದೋರದನ್ನಕ್ಕ ವಿರಾಮಕಾಲವನ್ನು ಹೆಚ್ಚಿಸುವ ಸಮಯ ಉಳಿಸುವ ಯಾಂತ್ರಿಕಸಾಧನಗಳಿಂದೇನುಪಯೋಗ? ಯಾಂತ್ರಿಕಸಾಧನಗಳು ಉಳಿಸುವ ಶರೀರಶ್ರಮದಿಂದ ಜೀವನವನ್ನು ಉದಾತ್ತಗೊಳಿಸುವುದೆಂತು ಎಂಬುದನ್ನರಿತುಕೊಳ್ಳದಿದ್ದರೆ ಆ ಯಾಂತ್ರಿಕ ಸಾಧನಗಳಿಂದೇನುಪಯೋಗ? ನಾವು ನೋಡುತ್ತಲಿರುವ ತ್ವರಿತ ಸ್ಥಳಾಂತರ ಸಾಧನಗಳೇ ನಮ್ಮ ಪ್ರಗತಿಯ ಲಕ್ಷಣವೆಂದು ಹೇಳಬೇಕೆ? ಆದರೆ ಬರ್ಟರಂಡ್ ರಸೆಲ್ಲರು ಹೇಳುವಂತೆ ತ್ವರಿತ ಸ್ಥಳಾಂತರ (Locomotion)ವೇ ಒಂದು ಸದ್ಗುಣವೇನಲ್ಲ. ನರಕದಿಂದ ಸ್ವರ್ಗಕ್ಕೇರಲು ಬೇಕಾಗುವ ಕಾಲಶ್ರಮಗಳಿಗಿಂತ ಬಹು ಕಡಮೆ ಕಾಲಶ್ರಮಗಳಿಂದ ನಾವು ಸ್ವರ್ಗದಿಂದ ನರಕಕ್ಕೆ ನೆಗೆಯಲು ಕಲಿತರೆ ಅದು ಪ್ರಗತಿಯೆ?—ಎಂದು ಅವರು ಕೇಳುತ್ತಾರೆ. ಇನ್ನುಳಿದುವು ನಮ್ಮ ಆಕಾಶವಾಣಿ ಮೊದಲಾದ ಪ್ರಚಾರ ಸಾಧನಗಳು. ಸತ್ಯಕ್ಕಿಂತ ಅಸತ್ಯವನ್ನೇ ಹೆಚ್ಚಾಗಿ ಹರಡುವ ಈ ಪ್ರಚಾರಕ್ಕೆ ಪ್ರಗತಿಯೆಂದು ಕರೆಯಬಹುದೆ? ರೋಗರುಜಿನಗಳನ್ನು ನಿರ್ನಾಮಮಾಡಿ ಮಾನವನ ಆರೋಗ್ಯಭಾಗ್ಯವನ್ನು ಹೆಚ್ಚಿಸುವಲ್ಲೇನಾದರೂ ಮಾನವನು ಪ್ರಗತಿ ಸಾಧಿಸಿದ್ದಾನಯೆ?—ಎಂದು ವಿಚಾರಿಸಿದರೆ ತೋರಿಕೆಗೆ ಪ್ರಗತಿ ಕಂಡುಬಂದರೂ ಸೂಕ್ಷ್ಮ ನಿರೀಕ್ಷಣೆಗೆ ತದ್ವಿರುದ್ಧ ಪರಿಣಾಮವೇ ಕಂಡುಬರುತ್ತದೆ. "It is possible that our method of combating disease by protecting us from infective agencies may have the effect of weakening our resistence to disease. As Todd says, a pasteurized and senitized society is not necessarily progrossive or dynamic."

ಪ್ರಗತಿಗೆ ಪ್ರತಿಯಾಗಿ ಜನಾಂಗಪತನದ ಎಲ್ಲ ಲಕ್ಷಣಗಳನ್ನೂ ನಾವಿಂದು ಕಣ್ಣೆದುರಿಗೆ ಕಾಣುತ್ತಲಿದ್ದೇವೆ. ನಮ್ಮ ಶರೀರದ ಗಾತ್ರ, ಬಲ, ಆಯುಃಪ್ರಮಾಣ, ಜೀವಶಕ್ತಿ (Elan Vital)—ಎಲ್ಲ ನಮ್ಮ ಪೂರ್ವಜರಿಗಿಂತ ಹ್ರಾಸವಾಗುತ್ತ ನಡೆದಿದೆ. ಬುದ್ಧಿಶಕ್ತಿಯಲ್ಲಿಯೂ ನಾವು ಸಾಕ್ರೆಟೀಸ್, ಪ್ಲೇಟೋ, ಅರಿಸ್ಟಾಟಲ್, ಪಿಥೊಗೊರಾಸ್, ಕನ್‌ಫ್ಯೂಶಿಯಸ್, ಉಪನಿಷದ್ರುಷಿಗಳು, ಶಂಕರಾಚಾರ್ಯ, ಉತ್ಪಲಾಚಾರ್ಯ, ಕೌಟಿಲ್ಯ, ಮನು ಮೊದಲಾದವರಿಗಿಂತ ಮುಂದೆ ಹೋಗಿಲ್ಲ. ಕನ್ನಡನಾಡಿನ ಉದಾಹರಣೆಯನ್ನೇ ತೆಗೆದುಕೊಂಡರೆ ಬಸವ ವಿದ್ಯಾರಣ್ಯರಂಥ ಆಚಾರ್ಯಪುರುಷರೂ, ಭಾಸ್ಕರ ಸಾಯಣರಂಥ ಶಾಸ್ತ್ರಕೋವಿದರೂ, ಅಲ್ಲಮ ನಿಜಗುಣರತ್ನಾಕರವರ್ಣಿಯಂಥ ಅನುಭಾವಿಗಳೂ, ಪಂಪ ರನ್ನ ಹರಿಹರ ರಾಘವಾಂಕ ಕುಮಾರವ್ಯಾಸರಂಥ ಕವಿಗಳೂ ಮತ್ತೆ ಹುಟ್ಟಿಲ್ಲ. ಇಂದಿನ ಔದ್ಯೋಗಿಕ ಸಂಸ್ಕೃತಿ (Industrial civilization) ಯಲ್ಲಿ ಅದರ ಆಶೆಯೂ ಇಲ್ಲ. ಬೌದ್ಧಿಕ ನೈತಿಕ ದೃಷ್ಟಿಯಿಂದ ಮೇಲ್ವರ್ಗದಲ್ಲಿರುವ ಮಾನವನ ಮಾದರಿಗಳನ್ನು (Human types) ರಕ್ಷಿಸಿ ಅವುಗಳನ್ನು ವಿಸ್ತರಿಸುವುದೇ ಪ್ರಗತಿಯ ಲಕ್ಷಣವೆಂಬುದನ್ನು ಒಪ್ಪಿದರೆ ಇಂದಿನ ನವನಾಗರಿಕತೆ ಅದರ ವಿರುದ್ಧ ದಿಕ್ಕಿನಲ್ಲಿ ಸಾಗಿದೆಯೆಂದು ಯಾರಾದರೂ ಹೇಳಬಹುದು. ಮೇಲೆ ವಿವರಿಸಿದಂಥ ಮೇಲ್ವರ್ಗಗಳ ಸಂತತಿಯನ್ನು ಪ್ರತಿಬಂಧಿಸಿ ಅಥವಾ ಸೀಮಿತಗೊಳಿಸಿ ಇಂದಿನ ಯಾಂತ್ರಿಕನಾಗರಿಕತೆಯು (Mechanical urban civilization) ಅನಾರೋಗ್ಯಕರ ಕಾರಖಾನೆಗಳಲ್ಲಿ ದುಡಿದು ಅದಕ್ಕೂ ಅನಾರೋಗ್ಯಕರವಾದ ಓಣಿಗಳಲ್ಲಿ ವಾಸಿಸಿ ದಾಸ್ಯದಾರಿದ್ರ್ಯಅಜ್ಞಾನಗಳ ಶರಪಂಜರದಲ್ಲಿ ಅರ್ಧ ಮೃತರಾಗಿ ಬದುಕುವ ಕೂಲಿಕಾರರ, ಬಡಶ್ರಮಿಕರ, ಕೃಷಿಕರ ಸಂತಾನವೃದ್ಧಿಗೈಯುತ್ತಲಿದೆ. ಅಲ್ಲಲ್ಲಿ ಆರ್ಥಿಕ ಪ್ರಗತಿಯಾಗಿದ್ದರೆ ಅದು ಜನಾಂಗ ಪ್ರಗತಿಗೆ ವಿರೋಧಿಯಾಗಿಯೇ ಪರಿಣಮಿಸಿದೆ. (Economic success is quite the opposite of

biological success) ಹೀಗಾಗಿ ಹರ್ಬರ್ಟ ಸ್ಪೆನ್ಸರನ "Survival of the fittest" ತತ್ವಕ್ಕೆ ವಾಸ್ತವಿಕ ಜಗತ್ತಿನಲ್ಲಿ ಎಡೆಯಿಲ್ಲದಾಗಿದೆ. "It does not mean that those individuals who are absolutely the fittest—that is the best survive, but those whose qualities best fit their possessions to the immediate environment." ಅಮೇರಿಕೆಯು ನಡೆಸಿದ ಅಣುಬಾಂಬಿನ ಪ್ರಯೋಗದಲ್ಲಿ ಬೃಹದಾಕಾರವಾದ ಜಲಚರಪ್ರಾಣಿಗಳು ನಾಶವಾಗಿ 'ಕ್ಷುದ್ರ ಜಂತುಗಳು ಹೇಗೋ ಬದುಕಿದಂತೆ ಈ ಜೀವನಸಂಗ್ರಾಮದಲ್ಲಿಯೂ ಉತ್ತಮೋತ್ತಮ ಜೀವಿಗಳೇ ಮಾಯವಾಗಿ ಕ್ಷುದ್ರರೂ ಸಕಲಸುಜನೋಪದ್ರವಜೀವಿಗಳೂ' ಹೆಚ್ಚಾಗಿ ಉಳಿಯುವ ಸಂಭವವೇ ಹೆಚ್ಚಾಗಿದೆ.

ಹಾಗಾದರೆ ಮಾನವತೆಯ ಪ್ರಗತಿಯೆಂಬುದು ಬರಿಯ ಭ್ರಮೆಯೆ? ಅಂತವಿಲ್ಲದ ಅಧಃಪಾತವೆ ಮಾನವತೆಯ ಇತಿಹಾಸದ ಅಂತರಾರ್ಥವೆ? ಮಾನವತೆಯ ಪ್ರಗತಿದುರ್ಗತಿಗಳ (Progression and retrogression) ರೀತಿ ನೀತಿ ನಿಯತಿಗಳೇನಾದರೂ ಉಂಟೆ? ಯಾವ ನಿಯಮಕ್ಕನುಸರಿಸಿ ಜನಾಂಗಗಳು ಉನ್ನತಅವನತ ಸ್ಥಿತಿಯನ್ನೈದುವುವು ಎಂಬಂಶವನ್ನು ಯಾರಾದರೂ ಕಂಡು ಹಿಡಿದಿರುವರೆ? ಕಂಡು ಹಿಡಿಯುವುದು ಸಾಧ್ಯವೆ? ಇಲ್ಲವೆ ಮಾನವನ ಜೀವನವೇ ಅಪಾರಕಾಲಪ್ರವಾಹದಲ್ಲಿ ಸುಮ್ಮನೆ ಎದ್ದು ಕ್ಷಣಕಾಲವಿದ್ದು ಒಡೆದುಹೋಗುವ ಗುರುಳೆಯೆ? ಹಾಗಾದರೆ "ಓಂ ದೇವಾಯ ಜನ್ಮನೆ" ಎಂದು ತಪವನ್ನಾಚರಿಸುತ್ತಲಿರುವ ಯೋಗೀಶ್ವರ ಅರವಿಂದರಂಥ ತತ್ತ್ವದರ್ಶಿಗಳ ಹಾಗೂ

"This is my loftiest greatness
To have been born so low
Greater than thou the ungrowing
Am I that forever grow.
... ...
From glory to rise unto glory
Is mine, who have risen from gloom
I doubt if Thou Knewest at my making
How near to Thy throne I should climb
O'er mountainous slopes of the ages
And the conquered peaks of time."

ಎಂದು ಹಾಡುವ ವಾಟ್ಸನ್ನನಂಥ ಕವಿಕ್ರಾಂತದರ್ಶಿಗಳ ಗತಿಯೇನು?

ಇಂದಿನ ಜಾಗತಿಕ ಅನರ್ಥಪರಂಪರೆಗಳ ನೆಲೆಗಳಲ್ಲಿ? ನಮ್ಮಲ್ಲಿಯೇ. ಮಾನವನು ಕಟ್ಟಿದ ಮಹಾಮನೆಯೇ ಮನುಜಲೋಕ. ಅದನ್ನು ಕೆಡಿಸಿದವರೂ ನಾವೇ—ಸಂಪತ್ತಿನ ಉತ್ಪಾದನವಿತರಣೆಗಳಲ್ಲಿ ಮಗ್ನರಾಗಿರುವ ಆರ್ಥಿಕ ಮಾನವರು ಸಂಪತ್ತೇ ಇಹಜೀವನದ ಇತಿಶ್ರೀಯಲ್ಲವೆಂಬಂಶವನ್ನು ಮರೆತಿದ್ದಾರೆ. ಎನ್. ಸ್ವಾಯನನಂಥ ವಿಖ್ಯಾತವಿಜ್ಞಾನಿಯೂ ಸಹ ಈ ಮಾತನ್ನು ಒತ್ತಿ ಹೇಳಿದ್ದಾನೆ.

"I am absolutely convinced that no wealth in the world can help humanity forward, even in the hands of the most devoted workers in the cause. The example of great and pure characters is the only thing that can produce fine ideas and noble deeds. Money only appeals to selfishness and always tempts its owners irresistibly to abuse it."

ಶಕ್ತಿಯ ಉಪಾಸನೆಯಲ್ಲಿ ಮಗ್ನರಾಗಿರುವ ವೈಜ್ಞಾನಿಕ ಮಾನವರು ಶಕ್ತಿಯು ಸಾಧ್ಯವಲ್ಲ, ಸಾಧನವೆಂಬಂಶವನ್ನು ಮರೆತಿದ್ದಾರೆ. ರಸೆಲ್ಲರು ಹೇಳುವಂತೆ ಜ್ಞಾನೋಪಾಸನೆಯ ಪ್ರೇಮದಿಂದ ಪ್ರಚೋದಿತರಾಗಿ ವೈಜ್ಞಾನಿಕಶೋಧದಲ್ಲಿ ನಿರತನಾದ ವಿಜ್ಞಾನಿ ವಿಜ್ಞಾನವೀವ ಶಕ್ತಿಯಿಂದ ಮತ್ತನಾಗಿ ತನ್ನ ವೈಜ್ಞಾನಿಕ ಸಂಶೋಧನೆಗೆ ಮೂಲಕಾರಣವಾದ ಪ್ರೇಮವನ್ನೇ ಕಡೆಗಣಿಸಿಬಿಟ್ಟಿದ್ದಾನೆ. ಕಾರಣ ಅವನು ಗಳಿಸಿದ ಶಕ್ತಿಯು ಶಿವಮಯವಾಗಿರದೆ ಅಶುಭಕರವಾಗಿ ಪರಿಣಮಿಸಿದೆ. ಪ್ರಪಂಚನಾಯಕರಾದ ಪಂಡಿತ ಜವಾಹರಲಾಲರಿದನ್ನೂ ಮಾರ್ಮಿಕವಾಗಿ ವಿವೇಚಿಸಿದ್ದಾರೆ.

"It is not lack of power that we suffer from, but a misuse of power we possess or not a proper application of it. Science gives as power but remains impersonal, purposeless and almost unconcerned with our application of the knowledge it puts at

our disposal. It may continue its truimphs and yet, if it ignores too much, nature may play a subtle revenge upon it. While life seems to grow in outward stature, it may ebb away inside for lack of something yet undiscovered by science."

ರಾಜಕೀಯ ಮಾನವನು ತನ್ನ ಬಲೋಪಾಸಕ ರಾಜಕಾರಣ (Power Politics) ದಲ್ಲಿ ನ್ಯಾಯವಾದುದನ್ನು ಶಕ್ತಿಪೂರ್ಣವಾದುದನ್ನಾಗಿಯೂ ಶಕ್ತಿಯನ್ನು ನ್ಯಾಯಪೂರ್ಣವಾದುದನ್ನಾಗಿಯೂ ಮಾಡುವುದೇ ಎಲ್ಲ ರಾಜನೀತಿಶಾಸ್ತ್ರದ ಮೂಲೋದ್ದೇಶವೆಂಬ ಪ್ಯಾಸ್ಕಲನ ತತ್ತ್ವವನ್ನು ಉಪೇಕ್ಷಿಸಿಬಿಟ್ಟಿದ್ದಾನೆ. ಕಾರಣ ಜಗತ್ತು ಇಂದು ಮಾನವನ ಸ್ವಾರ್ಥದುರಾಶೆದುರುದ್ದೇಶಗಳಿಗೀಡಾಗಿ ತುಂಡುತುಂಡಾಗಿ ಬಿಟ್ಟಿದೆ. ಎಚ್. ಜಿ. ವೆಲ್ಸರ ಮಾತಿನಲ್ಲಿ ಇದು ವಿಛಿನ್ನವಿಚ್ಛಿದ್ರತೆಯ ಯುಗ. (An age of fragmentation in the management of its affairs, fragmentation politically among separate sovereign states and economically among unrestricted business organizations competing for profit).

ಇವೆಲ್ಲ ಜಾಗತಿಕ ಅವ್ಯವಸ್ಥೆಗಳಿಗೆ ಮುಖ್ಯಕಾರಣವಿದು–ಮಾನವನ ಬುದ್ಧಿಯ ಬೆಳವಳಿಗೆ ಹಾಗೂ ಹೃದಯದ ಬೆಳವಣಿಗೆಗಳಲ್ಲಿ ತಾಳಮೇಳವಿಲ್ಲ. ಅವನ ಬೌದ್ಧಿಕವಿಕಾಸಕ್ಕೆ ತಕ್ಕಂತೆ ಅವನ ಹೃದಯವಿಕಾಸ ನೈತಿಕಪ್ರಗತಿಯಾಗಿಲ್ಲ. ಅವನ ಬಾಹ್ಯಪ್ರಗತಿ ಅಂತರಂಗಪ್ರಗತಿಗಳು ಸಮಾನಂತರ ರೇಖೆಗಳಂತೆ ಜತೆಜತೆಯಾಗಿ ಸಾಗಿಲ್ಲ. ಅವನ ಆದಿಭೌತಿಕ ಪ್ರಗತಿಯೊಡನೆ ಆಧ್ಯಾತ್ಮಿಕ ಪ್ರಗತಿಯೂ ಮುಂದುವರಿದಿಲ್ಲ. ಅವನ ಸಾಂಪತ್ತಿಕ ವೈಜ್ಞಾನಿಕ ರಾಜಕೀಯ ಪ್ರಗತಿಯೊಡನೆ ಅವನ ಸಾಂಸ್ಕೃತಿಕ, ಆತ್ಮಿಕ, ಕಲಾತ್ಮಕ (aesthetic) ಹಾಗೂ ನೈತಿಕಪ್ರಗತಿಯಾಗಿಲ್ಲ. ರಸೆಲ್ಲರು ಇದನ್ನು ನೈತಿಕ ದಿವಾಳಿಯೆಂದೂ (Moral bankruptcy) ಡೀನ್ ಇಂಜರು ನೈತಿಕ ಇಳಿಕೆ (Moral mataise) ಯೆಂದೂ ಮಹಾತ್ಮಾಗಾಂಧಿಯವರು ಆತ್ಮಶಕ್ತಿಯ ಅಧಃಪತನವೆಂದೂ ಕರೆದಿದ್ದಾರೆ. ಹೊರಗಿನ ಜೀವನದಲ್ಲಿ ಸಮನ್ವಯವನ್ನೂ ಸಮ್ಮಿಳನವನ್ನೂ ಅರಸುತ್ತಲಿರುವ ನಾವು ನಮ್ಮ ಅಂತರಂಗದಲ್ಲಿಯೇ ಈ ಮಧುರ ಸಹಕಾರವಿದೆಯೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಬಾರದೆ? ನಮ್ಮೊಳಗೇ ಸುರಾಸುರ ಯುದ್ಧ ನಡೆದಿರುವಾಗ ಹೊರಗೆ ಜಗತ್ತಿನಲ್ಲಿ ಸ್ವಾತಂತ್ರ್ಯ, ಸೋದರತೆ, ಸಮಾನತೆ, ಸುಖಶಾಂತಿಗಳ ತಳಹದಿಯ ಮೇಲೆ ಹೊಸ ಜಗತ್ತನ್ನೆಂತು ಕಟ್ಟಬಲ್ಲೆವು ನಾವು? ನಮ್ಮ ಬುದ್ಧಿಯೊಂದನ್ನು ಹೇಳುತ್ತಿದೆ; ನಮ್ಮ ಹೃದಯವಿನ್ನೊಂದನ್ನು ನಂಬುತ್ತದೆ; ನಮ್ಮ ಮನಸ್ಸು ಮತ್ತೊಂದು ಕಡೆಗೆ ಹರಿದಾಡುತ್ತದೆ; ನಮ್ಮ ಅಹಂಕಾರ ಬೇರೊಂದಕ್ಕೆ ಆಸೆಪಡುತ್ತದೆ; ಕೃತಿಯಲ್ಲಿ ನಾವು ಇವೆಲ್ಲವನ್ನೂ ಬಿಟ್ಟು ಸ್ವಾರ್ಥಕ್ಕಾಗಿಯೋ, ಸಾನುಕೂಲತೆಯ ದೃಷ್ಟಿಯಿಂದಲೋ (Expediency, diplomacy, convenience ಇತ್ಯಾದಿ) ನೈತಿಕಧೈರ್ಯದ ಅಭಾವದಿಂದಲೋ ಮತ್ತೊಂದನ್ನೇ ಮಾಡಿ ಬಿಡುತ್ತಲಿದ್ದೇವೆ. ನಮ್ಮ ಇಚ್ಛಾಜ್ಞಾನಕ್ರಿಯಾಶಕ್ತಿಗಳಲ್ಲಿ ಸ್ವರಮೇಳವಿಲ್ಲ. ಯಾಕೆಂದರೆ ಅವುಗಳಿಗೆ ಆವುದೊಂದು ಗುರಿಯಿಲ್ಲ. ಹೀಗಾಗಿ ವ್ಯಕ್ತಿಯ ಅಂತರಂಗದ ತಲಮಲವೇ ಸಮಾಜದ ಬಹಿರಂಗಜೀವನದ ಕೋಲಾಹಲದಲ್ಲಿ ಕೊನೆಗಾಣುತ್ತಲಿದೆ. ನಮ್ಮ ಜಾಗತಿಕ ಜೀವನದ ಅಪಸ್ವರಗಳು ನಮ್ಮ ವೈಯಕ್ತಿಕಜೀವನದ ಅಪಸ್ವರಗಳ ಪ್ರತಿಧ್ವನಿಗಳು. ವ್ಯಕ್ತಿಯ ಮಾನಸಿಕ ತುಮುಲ ಯುದ್ಧವೇ ಜಗತ್ತಿನ ಸಾಂಘಿಕ ಸಾಮೂಹಿಕ ಮಹಾಯುದ್ಧಕ್ಕೆ ಮೂಲಕಾರಣ. ರಾಷ್ಟ್ರೀಯ ಅಂತರರಾಷ್ಟ್ರೀಯ ಪರಿಮಿತಿಯ ಮೇರೆಗೆ ನಾವು ವ್ಯರ್ಥವಾಗಿ ಹೊಸೆಯುತ್ತಲಿರುವ ಸಾಂಘಿಕ ಸಾಮೂಹಿಕ ಯೋಜನೆ, ಆರ್ಥಿಕ ರಾಜಕೀಯ ವಾದವಿವಾದಗಳ ತಿರುಗಣಿಯಲ್ಲಿ ನಾವು ವ್ಯಕ್ತಿಯನ್ನೇ ಉಪೇಕ್ಷಿಸಿ ನೂಕಿ ಬಿಟ್ಟಿದ್ದೇವೆ. ವ್ಯಕ್ತಿಯ ವಿಕಾಸವೇ ವಿಶ್ವದ ವಿಕಾಸದ ಅಡಿಗಲ್ಲೆಂಬ ಅಂಶವನ್ನೇ ಮರೆತಿದ್ದೇವೆ; ವೈಯಕ್ತಿಕ ಪ್ರಗತಿಯೇ ಮಾನವತೆಯ ಪ್ರಗತಿಗೆ ಮೂಲಾಧಾರವೆಂಬುದನ್ನು ಮರೆತ ಕಾರಣ ಇಂದು ಪಕ್ಷ, ಪಂಥ, ವಾದ, ರಾಷ್ಟ್ರ, ಮತ, ವರ್ಣ, ವಂಶ, ಭಾಷೆ, ಗುಂಪು, ಕೂಟಗಳ ಜೇಡರ ಜಾಲದಲ್ಲಿ ಜೀವಿಯು ಸಿಕ್ಕಿ ಉದ್ಧರಿಸುವರಿಲ್ಲದೆ ಒದ್ದಾಡುತಲಿದ್ದಾನೆ. ಅವನನ್ನು ಈ ಜಾಲದಿಂದ

ಮುಕ್ತನನ್ನಾಗಿ ಮಾಡಿ ಅವನಿಗೆ ಸಂಪೂರ್ಣ ಸ್ವಾತಂತ್ರ್ಯದೊಡನೆ ತನ್ನ ಆತ್ಮವಿಕಾಸ ಅಂತರಂಗದ ಪ್ರಕಾಶಗಳಿಗೆ ಅವಕಾಶ ಕಲ್ಪಿಸಿಕೊಡದಿದ್ದರೆ ಅವನ ಬದುಕು ವ್ಯರ್ಥ. ಇಂಥ ಸ್ವಪ್ರಕಾಶಹೀನ, ಸೃಜನಶೂನ್ಯ, ಸ್ವಾತ್ಮೋನ್ನತಿ ವಿವಂಚಿತ ವ್ಯಕ್ತಿಗಳ ಸಮೂಹ ಅದೆಂಥ ಮಾನವ ಸಮಾಜವಾಗಬಹುದು?

ಮಾನವತೆಯ ಪ್ರಗತಿಗೆ ಸಾಧಕ ಸಹಾಯಕವಾಗಬಲ್ಲ ಜಾಗತಿಕಯೋಜನೆ, ತತ್ತ್ವ, ವಾದ, ಪಂಥಗಳನ್ನು ಆರೂ ಎದೆತಟ್ಟಿ ಒರೆಯಲಾರರು. ಯಾರಾದರೂ ಹಾಗೆ ವಾದಿಸಿದರೆ ಅದು ಅವರ ಸೀಮಿತ ಜ್ಞಾನದ ಸಹಜ ಫಲ. ಷಾನು ಎಂಬಂತೆ 'The only golden rule is that there is no golden rule.' ದೇಶ, ಕಾಲ, ಪರಿಸ್ಥಿತಿ, ಭೌಗೋಲಿಕ ವೈಶೇಷ್ಯ, ಜನಾಂಗ ವೈಶಿಷ್ಟ್ಯ ಹಾಗೂ ವೈಲಕ್ಷಣ್ಯಗಳು, ಭಾಷೆ, ಮತ, ಶೈಕ್ಷಣಿಕ ಸಾಂಪತ್ತಿಕ ಸ್ಥಿತಿಗತಿ, ಭೂಸಮೃದ್ಧಿ ಹಾಗೂ ಅದರ ಫಲಪ್ರದತೆ, ವಾಯುಜಲಗುಣಗಳು, ಜನಸಂಖ್ಯೆ, ದೇಹ-ಬುದ್ಧಿ-ಹೃದಯಬಲಗಳಲ್ಲಿರುವ ವ್ಯತ್ಯಾಸವೈಪರೀತ್ಯಗಳು ಇತ್ಯಾದಿ ಅನಂತ ಕಾರಣಗಳನ್ನವಲಂಬಿಸಿ ಆಯಾ ದೇಶದ ಆಯಾ ಜನಾಂಗದ ಪ್ರಗತಿಯ ಪರಿಮಿತಿ. ಇದನ್ನು ನೆನೆದಾಗ ಎಲ್ಲ ದೇಶಗಳಿಗೂ, ಎಲ್ಲ ಜನಗಳಿಗೂ ಎಲ್ಲ ಕಾಲಗಳಲ್ಲಿ ಸಮಾನವಾಗಿ ಅನ್ವಯಿಸಬಹುದಾದ ಸಾಮೂಹಿಕ ಪ್ರಗತಿಯ ಸಿದ್ಧಾಂತವನ್ನು ಹೆಣೆಯ ಹೋಗುವುದು ಹುಚ್ಚರ ಹವ್ಯಾಸವೆಂದೇ ಮನವರಿಕೆಯಾಗುವುದು. ಆದರೆ ವ್ಯಕ್ತಿಯ ವಿಕಾಸ, ವ್ಯಕ್ತಿಯ ಪ್ರಗತಿಗಳ ಮುಖ್ಯನಿಯಮಗಳನ್ನು ನಿರ್ಧರಿಸಬಹುದು; ಹಿಂದೆ ಅನೇಕ ಧರ್ಮಸಂಸ್ಥಾಪಕರೂ ಕವಿಪ್ರವಾದಿ ತತ್ತ್ವದರ್ಶಿಗಳೂ ನಿರ್ಧರಿಸಿದ್ದಾರೆ: ಇಂದು ಮಹಾತ್ಮಾ ಗಾಂಧಿಯವರಂತೂ ತಮ್ಮ ಸಮಗ್ರಜೀವನದ ಸಾಧನೆಯ ಸಾರಸರ್ವಸ್ವವನ್ನೇ ನಮಗೆ ದಾರಿದೀಪವಾಗಿ ಬಿಟ್ಟುಹೋಗಿದ್ದಾರೆ. ಅದರಂತೆ ಆಚರಿಸಲು ಎಲ್ಲರಿಗೆ ಸ್ವಾತಂತ್ರ್ಯವಿದೆ; ಎಲ್ಲರಿಗೂ ಮುಕ್ತದ್ವಾರವಿದೆ. "Lo here are wings, there the sky and freedom for everyone to soar." ಅದನ್ನು ಅರಿತು ಅದರಂತೆ ಆಚರಿಸಿ ಎಲ್ಲರೂ ತಂತಮ್ಮ ವೈಯಕ್ತಿಕಪ್ರಗತಿಯನ್ನು ಸಾಧಿಸಿಕೊಂಡರೆ ಮಾನವತೆಯ ಪ್ರಗತಿ ತನ್ನಿಂದ ತಾನೇ ಸಾಧಿಸುವುದು.

ಕಾರಣ ನಮ್ಮ ಇಂದಿನ ಎಲ್ಲ ಯೋಚನೆ, ಯೋಜನೆ, ಯತ್ನಗಳ ಗುರಿಗಮ್ಯ ಒಂದೇ—ನರನೊಳಗಿನ ನರೋತ್ತಮನ ಆವಿರ್ಭಾವ, ಪ್ರತಿ ವ್ಯಕ್ತಿಯಲ್ಲಿ ಅಡಗಿರುವ ಶಿವಶಕ್ತಿಯರ ಸಾಕ್ಷಾತ್ಕಾರ! ಸಮ್ಯಕ್‌ಜ್ಞಾನ, ಶಿವಜ್ಞಾನ ಹಾಗೂ ಇಚ್ಛಾಜ್ಞಾನಕ್ರಿಯಾಶಕ್ತಿಗಳ ಫಲಸ್ವರೂಪವಾದ ಸತ್ಕ್ರಿಯೆಗಳ ಉಗಮ ಸ್ಥಾನವೂ ಸಂಗಮಸ್ಥಾನವೂ ವ್ಯಕ್ತಿಯ ಅಂತರಂಗದಲ್ಲಿಯೇ ಅವಿತಿವೆ. ಅವೆರಡೂ ಸಮ್ಮಿಲಿತವಾಗಿ ಗಂಗೆಯಮುನೆಯರ ಸಂಗಮಿತಪ್ರವಾಹವಾಗಿ ಹರಿದರೆ ಪ್ರಗತಿ; ಇಲ್ಲದಿರೆ ಅಧೋಗತಿ. ಶ್ರೀ ಅರವಿಂದರ ಅಮೃತವಾಣಿಯನ್ನಾಲಿಸಿ:—"The individual is indeed the key of the evolutionary movement; for it is the individual who finds himself, who becomes conscious of the Reality. The movement of the collectivity is a largely subconscious mass movement; it has to formulate and express itself through the individuals to become conscious; its general mass consciousness is always less evolved than the consciousness of its most developed individuals, and it progresses in so far as it accepts their impress or develops what they develop."

ಪ್ರತಿ ವ್ಯಕ್ತಿಗೂ ಪೂರ್ಣವಿಕಾಸದ ಅವಕಾಶ ಸಿಕ್ಕು ಎಲ್ಲರೂ ತಮ್ಮ ಉತ್ತಮಸ್ವದ ವಿಕಾಸದಲ್ಲಿ ಶ್ರದ್ಧೆಯಿಂದ ಸಮುದ್ಯುಕ್ತರಾದಾಗ ಅವರ ಮಧ್ಯದಲ್ಲಿಯೇ ಮನುಕುಲಕ್ಕೇ ಮಾರ್ಗದರ್ಶಕರಾಗಬಲ್ಲ ಮಹಾಪುರುಷರು ಉದ್ಭವಿಸಿ ತಮ್ಮ ಜೀವನದ ಪ್ರತ್ಯಕ್ಷಪ್ರಮಾಣದಿಂದ ಮಾನವತೆಯ ಪ್ರಗತಿಯನ್ನು ಮುಂದೂಡುತ್ತಾರೆ. ಇದನ್ನೇ ಪ್ರೊ. ಐನ್‌ಸ್ಟಾಯನರು 'The example of great and pure characters' ಎಂದು ಕರೆದಿರುವರು. ಮಾನವತೆಯ ಪ್ರಗತಿರಥಕ್ಕೆ ಇದೇ ರಾಜಪಥ. ಸಾಹಿತ್ಯದ ಕಾರ್ಯವೂ ಇದೇ–ಪ್ರತಿಭೆಯ

ಸಹಾಯದಿಂದ ಪೂರ್ಣದ ಮಾದರಿಗಳನ್ನು ನಿರ್ಮಿಸಿ ಮಾನವನ ಪ್ರಗತಿಗೆ ಸಹಾಯಕವಾಗುವಂತೆ ಮುಂಡಿಸುವುದು.

ಎಂತಲೇ ಪ್ರಾಚೀನ ಅರ್ವಾಚೀನಪ್ರಗತಿಪಂಥಗಳನ್ನೆಲ್ಲ ಖಂಡಿಸಿದ ಡೀನ್ ಇಂಜರೂ ವೈಯಕ್ತಿಕ ಪ್ರಗತಿಯ ಸಾಧ್ಯತೆಯನ್ನು ಒಪ್ಪಿದ್ದಾರೆ. "For individuals, then, the path of progress is always open; but, as Hesiod told us long before the Sermons on the mount, it is a narrow path, steep and difficult. especially at first."

ಈ ದುರ್ಗಮವಾದ ದಾರಿಯನ್ನು ಸುಲಭಮಾಡಿ ಕೊಟ್ಟಿದ್ದಾರೆ ನಮ್ಮ ಬಾಪೂಜಿ ನಮಗೆ. ಸತ್ಯಪ್ರೇಮಗಳ ದಾರಿಯೇ ಅದು. ಸತ್ಯವು ಜೀವನದ ಗಮ್ಯ, ಪ್ರೇಮಸಾಧನಮಾರ್ಗ. ಇದುವೇ ವ್ಯಕ್ತಿವಿಕಾಸದ ತನ್ಮೂಲಕ ಮಾನವತೆಯ ಪ್ರಗತಿಯ ರಾಜಮಾರ್ಗವೂ ಅಹುದು. ಜಗತ್ತಿನ ಜೀವಿಗಳೆಲ್ಲ ಈ ಸತ್ಯಪ್ರೇಮಪಥದ ವೀರಪಥಿಕರಾದರೆ ಸುವರ್ಣಯುಗ ದೂರಿಲ್ಲ, ಸತ್ಯಯುಗ ಬೇರಿಲ್ಲ. ಕೊನೆಗೆ ಸಮಸ್ತ ಭಾರತೀಯರಾದರೂ ಈ ವೀರವ್ರತಧಾರಿಗಳಾಗಿ ಉಳಿದ ರಾಷ್ಟ್ರಗಳಿಗೆ ದಾರಿತೋರುವ ಧ್ರುವತಾರೆಗಳೂ ದೀಪಸ್ತಂಭಗಳೂ, ದಿಕ್ಸೂಚಿಗಳೂ ಆಗುವಂತೆ ಈ ನಾಡಿನ ಅಣುರೇಣುತೃಣಕಾಷ್ಟಗಳಲ್ಲೆಲ್ಲ ಅದೃಶ್ಯವಾಗಿ ವ್ಯಾಪಿಸಿನಿಂತಿರುವ ಆ ಮಹಾಆತ್ಮವು ನಮ್ಮೆಲ್ಲರನ್ನು ಸದಾ ಪ್ರೇರಿಸುತ್ತಿರಲಿ! ಮತ್ತೆ ಭಾರತಿಜಗದ ಬೆಳಕಾಗುವ ಭಾಗ್ಯದ ದಿನಗಳು ಬೇಗ ಬರಲಿ!

ಶಿವಮಸ್ತು ಸರ್ವಜಗತಾಂ!

"ಥೇರೀಗಾಥಾ"

(ಹಿಂದೀ ಭಾಷಾಂತರ)

ಶ್ರೀ ಪದ್ಮನಾಭ, ಯಸ್. ಜೈನಿ, ಅಹಮ್ಮದಾಬಾದು.

"ಥೇರೀಗಾಥಾ":—(ಭಿಕ್ಷುಣಿಯರ ಹಾಡು) ಇದು ಬೌದ್ಧಧರ್ಮದ ಪ್ರಾಚೀನಗ್ರಂಥಗಳಲ್ಲಿ ಒಂದು ಸಂಘದಲ್ಲಿದ್ದ ಭಿಕ್ಷುಣಿಯರು (ಥೇರೀ) ಮುಕ್ತಕಂಠದಿಂದ ತಮ್ಮ ಜೀವನದ ಸ್ಥಿತಿಗತಿಗಳನ್ನು ಆ ಗಾಥೆಗಳಲ್ಲಿ ಚಿತ್ರಿಸಿದ್ದಾರೆ. ಆ ಸಂಗ್ರಹಕ್ಕೇ "ಥೇರೀಗಾಥೆ" ಯೆಂದು ಹೆಸರು. ಸುಮಾರು ೨ ಸಾವಿರ ವರ್ಷಗಳ ಮೊದಲು ಭಾರತೀಯ ನಾರಿಯರಿಗೆ ಸಮಾಜದಲ್ಲಿ ಯಾವ ಸ್ಥಾನವಿತ್ತು? ಆ ಕಾಲದಲ್ಲಿ ಸಾಮಾಜಿಕ ವ್ಯವಸ್ಥೆ ಹೇಗಿತ್ತು? ಸ್ತ್ರೀ ಸಮಾಜದ ದುಃಖಕರವಾದ ಸಂಗತಿಗಳು ಯಾವುವು? ಆ ದುಃಖದಿಂದ ಬಿಡುಗಡೆಯಾಗುವ ಬಗೆ ಹೇಗೆ ಅವರಿಗೆ ದೊರೆಕಿತ್ತು? ಅವುಗಳನ್ನೆಲ್ಲಾ ತಿಳಿಯಲು "ಥೇರೀಗಾಥೆ"ಯ ಹೊರತು ಅನ್ಯಸಾಧನ-ಸಾಮುಗ್ರಿಗಳು ನಮ್ಮ ಹತ್ತಿರವಿರುವುದಿಲ್ಲ. ಈ ದೃಷ್ಟಿಯಿಂದ "ಥೇರೀಗಾಥೆ"ಯನ್ನು ನೋಡಲು ಯತ್ನಿಸಿದ್ದೇನೆ.

ಭಾರತೀಯ ಸಮಾಜದಲ್ಲಿ ಅನೇಕ ಉತ್ತಮ ಮಹಿಳೆಯರು ಹುಟ್ಟಿದ್ದಾರೆ. ಋಗ್ವೇದವು ಭಾರತೀಯ ಸಾಹಿತ್ಯದ ಮೊತ್ತಮೊದಲಿನ ಗ್ರಂಥ. ಅದರಲ್ಲಿ ಅನೇಕ ಮಹತ್ವದ ಸೂಕ್ತಿಗಳು ಕಾಣುತ್ತವೆ. ಅವೆಲ್ಲಾ ಒಬ್ಬಳಿಂದ ರಚಿತವಾದದ್ದು. ಅವಳ ಪ್ರತಿಭೆಯ ಕಾರಣವೇ ಅದು ಚಿರಂಜೀವಿಯಾಗಿದೆ. "ಆಂಭ್ರಣ" ಋಷಿಯ ಪುತ್ರಿ "ವಾಗ್ದೇವಿ"ಯು ಬ್ರಹ್ಮವಾದಿನಿ (ಆಧ್ಯಾತ್ಮವಾದಿ)ಯಾಗಿದ್ದಳು. ಅವಳು ತನ್ನ ಕಾವ್ಯದಲ್ಲಿ ಬಹಳ ಉನ್ನತ ವಿಚಾರವನ್ನು ಪ್ರಕಟಿಸಿದ್ದಾಳೆ. ಅದರಲ್ಲಿ ಉನ್ನತ ವೇದಾಂತತತ್ವದ ಬೀಜ (ವಿಚಾರ)ಗಳು ಕಾಣುತ್ತವೆ. ಅದರ ನಂತರ ಉಪನಿಷತ್ತಿನಲ್ಲಿ "ಗಾರ್ಗಿ" ಮತ್ತು "ಮೈತ್ರೇಯಿ" ಈ ಮಹಾತ್ಮರ ದರ್ಶನವಾಗುವುದು. ತನ್ನ ಗಂಡ ಯಾಜ್ಞವಲ್ಕ್ಯನೊಡನೆ ಅಮೃತತ್ವದ ಶೋಧನೆಗಾಗಿ ಸನ್ಯಾಸಿನಿಯಾದ (ಅನಾಗಾರ) ಮೈತ್ರೇಯಿಯು ಈ ಜಗತ್ತಿನ ಅಂತಿಮತತ್ವವನ್ನು ತಿಳಿಯಬೇಕೆಂಬ ಜಿಜ್ಞಾಸದಿಂದ ಭಾರತದ ಋಷಿಗಳೊಡನೆ ಸೇರಿರುವುದರಿಂದ ಭಾರತೀಯ ಸ್ತ್ರೀಯರೂ ಎಲ್ಲಿಯ ವರೆಗೆ ಮುಂದರಿದು ಹೋಗಿದ್ದಾರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಭಗವಾನ್ ಬುದ್ಧನ ಕಾಲದಲ್ಲಿ ಭಾರತೀಯ ಸ್ತ್ರೀಜೀವನದಲ್ಲಿ ಅದ್ಭುತಕ್ರಾಂತಿಯುಂಟಾಯಿತು. ಅದೇ ವಿಚಾರ 'ಥೇರೀಗಾಥೆ'ಯಲ್ಲಿದೆ:—ಒಂದೆರಡು ಐದಾರು ಮಾತ್ರವಲ್ಲ; ಹೆಚ್ಚುಕಡಿಮೆ ೭೦ ಭಿಕ್ಷುಣಿ (ಥೇರೀ) ಯರ ಗಾಥೆಗಳು ತುಂಬಿವೆ. ೨ ಸಾವಿರ ವರ್ಷಗಳಲ್ಲಿ ೨-೪ ಜಾಗೃತನಾರಿಯರ ಸಾಹಿತ್ಯಸೇವೆ ಮತ್ತು ಬುದ್ಧನ ಕಾಲದ ಸುಮಾರು ಎಪ್ಪತ್ತು ಸಾಧ್ವಿಯರ ಸ್ವಾನುಭವದ ಮಾತುಗಳನ್ನು ಪರಿಶೀಲಿಸುವುದರಿಂದ ಬುದ್ಧನ ಜೀವನದ ಸರ್ವಾಕರ್ಷಕತೆ, ಅವನ ಉಪದೇಶದ ಮಹತ್ವ, ಸಂಘದ ಪವಿತ್ರತೆ ಮತ್ತು ಆ ಕಾಲದ ಜನರ ಮನೋಭಾವನೆ, ವಾತಾವರಣದ ಸ್ಥಿತಿಗತಿ ಇವೆಲ್ಲಾ ಗೊತ್ತಾಗುವುದು.

ನಾರಿಯರ ಆಧ್ಯಾತ್ಮಿಕ ವಿಕಾಸಕ್ಕಾಗಿ ಅವರ ಸ್ವತಂತ್ರಸಂಘದ ನಿರ್ಮಾಣವನ್ನು ಲೋಕದ ಇತಿಹಾಸದಲ್ಲಿ ನಾವು ಭಾರತದಲ್ಲಿಯೇ ಮೊತ್ತಮೊದಲು ನೋಡುತ್ತೇವೆ; ಅದು ಕೂಡಾ ಜೈನಪರಂಪರೆಯಲ್ಲಿ ಅನೇಕ ಪ್ರಮಾಣಗಳಿಂದ ಮಹಾವೀರನ ಮೊದಲು ಕೂಡಾ ಸಾಧ್ವಿಯರ ಸಂಘವಿತ್ತೆಂದು ಗೊತ್ತಾಗುತ್ತದೆ. ಉಪನಿಷತ್ತಿನಲ್ಲಿ ಮೈತ್ರೇಯ ಮತ್ತು ಯಾಜ್ಞವಲ್ಕ್ಯನ ಸಂವಾದವು ಸಿಗುತ್ತದೆ. ಯಾಜ್ಞವಲ್ಕ್ಯನು ಅಮೃತತ್ವದ ಪ್ರಾಪ್ತಿಗಾಗಿ ಮೊತ್ತಮೊದಲು ಅನಾಗಾರ (ಯೋಗಿ) ಮಾರ್ಗವನ್ನು ಸ್ವೀಕರಿಸಿದನೆಂದು ಅದರಿಂದ ಗೊತ್ತಾಗುತ್ತದೆ. ಯಜ್ಞಪ್ರಧಾನ ಸಂಸ್ಕೃತಿಯಿಂದ ತಪಃಪ್ರಧಾನ ಸಂಸ್ಕೃತಿಗೆ ಪರಿವರ್ತನೆಯಾಗುವ ದೃಶ್ಯವನ್ನು ನಾವಿಲ್ಲಿ ನೋಡುತ್ತೇವೆ. ಇದರಿಂದ ಯಾಜ್ಞವಲ್ಕ್ಯನೇ ಮೊತ್ತಮೊದಲು ಶ್ರಮಣಪರಂಪರೆಯ ಪರಿಚಯ ಮಾಡಿಕೊಟ್ಟನೆಂದು ಗೊತ್ತಾಗುತ್ತದೆ.

ಮೊದಲು ಕೂಡಾ ಶ್ರಮಣಪರಂಪರೆಯಿತ್ತೆಂಬುದು ನಿರ್ವಿವಾದ. ಆದರೆ ಬ್ರಾಹ್ಮಣಪರಂಪರೆಗೆ ಶ್ರಮಣಪರಂಪರೆಯ ಪ್ರಥಮಪರಿಚಯವು ಮೈತ್ರೇಯಿ ಯಾಜ್ಞವಲ್ಕ್ಯರ ಅನಾಗಾರವ್ರತದಿಂದಲೇ ಉಂಟಾಗಿದೆ. ಜೈನಸಮಾಜದಲ್ಲಿ ಸ್ತ್ರೀಸಂಘವು ಮೊದಲೇ ಇತ್ತು. ಅದರ ವಿಕಾಸವನ್ನು ಭಗವಾನ್ ಮಹಾವೀರನು ಮಾಡಿದ್ದನು. ಭಗವಾನ್ ಬುದ್ಧನು ಸ್ತ್ರೀಯರನ್ನು ತನ್ನ ಸಂಘದಲ್ಲಿ ಮೊದಲು ಸೇರಿಸಲು ವಿರೋಧಿಸಿದನು. ಆದರೆ ಕಟ್ಟಕಡೆಗೆ ಆತನಿಗೇ ಸಮ್ಮತಿ ಕೊಡುವ ಸಂದರ್ಭವೊದಗಿತು (೧೦೯) ನೂರಾರು ಸ್ತ್ರೀಯರು ಭಿಕ್ಷುಣಿಯರಾಗಿ ಅವನ ಸಂಘಕ್ಕೆ ಸೇರಿದರು. ತಪಃಪ್ರಧಾನ ಮತ್ತು ದಯಾಪ್ರಧಾನ ಶ್ರಮಣಪರಂಪರೆಯೇ ಸ್ತ್ರೀಸಂಘದ ಪೋಷಣೆಯನ್ನು ಮಾಡುತಿತ್ತು. ಜಗತ್ತಿನ ಸ್ತ್ರೀಸಮಾಜಕ್ಕೆ ಶ್ರಮಣಪರಂಪರೆಯಿಂದ ದೊರೆತಿರುವ ದೊಡ್ಡ ಸನ್ಮಾನವಿದು.

ಅನೇಕ ಶತಮಾನಗಳಿಂದ ಬಂಧನದಲ್ಲಿ ಬಂಧಿಸಲ್ಪಟ್ಟಿರುವ ನಾರಿಯರ ಕಣ್ಣುಗಳು ತೆರೆಯಲ್ಪಟ್ಟುವು. ಭಗವಾನ್ ಬುದ್ಧನ ಕೃಪೆಯಿಂದ ಮತ್ತು ಸಾಂಸಾರಿಕ ಸುಖದಿಂದ ಅಧಿಕಸುಖವನ್ನು ನಾರಿಯರು ಅದರಲ್ಲಿ ಪಡೆಯುತ್ತಿದ್ದರು. ಆದರೆ, ಅವರನ್ನು ಸಾಮಾಜಿಕ ಕೌಟುಂಬಿಕ ಬಂಧನಗಳು ಬಂಧನದಲ್ಲಿಟ್ಟಿದ್ದುವು. ಬುದ್ಧನು ಆ ಬಂಧನಗಳನ್ನು ಶಿಥಿಲಮಾಡಿದನು. ಈ ರೀತಿ ಮೂಲಬಂಧನಗಳಿಂದ ಬಿಡಿಸಿ ಉನ್ನತಜೀವನ ಯಾತ್ರೆಯಲ್ಲಿ ಕೂಡುವಂತೆ ಅವರನ್ನು ಆಹ್ವಾನಿಸಿದನು. ಅವರ ಚಿತ್‌ಶಕ್ತಿಯನ್ನು ಉದ್ರೇಕಗೊಳಿಸಿ, ಕಾರುಣ್ಯ ಬುದ್ಧಿಯಿಂದ ಅವರಿಗೂ ಅಮೃತತ್ವದ ಮಾರ್ಗವನ್ನು ತೋರಿಸಿಕೊಟ್ಟನು.

ಅವರ ದುಃಖ ಮತ್ತು ವೇದನೆಗಳು ಯಾವುವು? ಆ ದುಃಖಜೀವಿಗಳಿಗೆ ಯಾವ ರೀತಿಯ ಪ್ರಕಾಶವು ದೊರಕಿತು? ಎಂಬ ವಿಚಾರವನ್ನು ನಾವಿಲ್ಲಿ ಪರಿಶೀಲಿಸಿ ನೋಡಬೇಕಾಗಿದೆ.

ಭಗವಾನ್ ಮಹಾವೀರನ ಮತ್ತು ಬುದ್ಧನ ಕಾಲದಲ್ಲಿ ಶ್ರಮಣಸಂಸ್ಕೃತಿಯ ಪೂರ್ಣಪ್ರತಿಷ್ಠೆಯಾಗಿತ್ತು. ಕೌಟುಂಬಿಕ ಬಂಧನಗಳನ್ನು ಹರಿದು ಆಧ್ಯಾತ್ಮಿಕ ಜೀವನದಲ್ಲಿ ಪ್ರವೇಶಮಾಡುವುದು ಒಂದು ದೊಡ್ಡ ಪುರುಷಾರ್ಥವೆಂದು ತಿಳಿಯಲಾಗಿತ್ತು. ಆದುದರಿಂದಲೇ ಬುದ್ಧನ ಸಂಘದಲ್ಲಿ ಸ್ತ್ರೀಯರು ಭಿಕ್ಷುಣಿಯರಾಗಿ ಪ್ರವೇಶಮಾಡಿದರು. ಈ ಮಾರ್ಗದಿಂದಲೇ ಸ್ತ್ರೀಯರು ತಮ್ಮ ದುಃಖಗಳನ್ನು ಮರೆಯುತ್ತಿದ್ದರು. ಈ 'ಅನಾಗಾರಿ'ತ್ವ ನಾರಿಯರ ಮಹಿಮೆಯು ವಿಶೇಷವಾಗಿತ್ತು. ಅವರು ತಾವು ಕಳೆದುಕೊಂಡಿರುವ ಸಾಮರ್ಥ್ಯವನ್ನು ಪಡೆಯುತ್ತಿದ್ದರು. ಬುದ್ಧನ ಸಂದೇಶವೂ ಅದೇ ಪ್ರಕಾರವಾಗಿತ್ತು. "ದುಃಖವೇನು?" 'ಅದರ ಕಾರಣ ಯಾವುದು?' ಎಂಬುದನ್ನು ತಿಳಿಯಿರಿ; ಮತ್ತು "ದುಃಖನಿವಾರಣೆಯ ಮಾರ್ಗ:—ನಾನು ತೋರಿಸಿರುವುದನ್ನು ನೀವು ಆಚರಣೆಯಲ್ಲಿ ತನ್ನಿರಿ." ಅದೊಂದೇ ಅವನ ಮುಖ್ಯ ಸಂದೇಶವಾಗಿತ್ತು. ಸಾಧ್ವಿಯರಾಗುವುದೇ ಅದರ ಮಾರ್ಗವಾಗಿತ್ತು.

"ಥೇರೀಗಾಥೆ"ಯಲ್ಲಿ ನಮಗೆ ಅನೇಕ ಸಾಧ್ವಿಯರ ಉಲ್ಲೇಖನಗಳು ಸಿಗುತ್ತವೆ. ಅವುಗಳ ವಿಭಾಜನೆ ಈ ರೀತಿ ಮಾಡಬೇಕಾಗುತ್ತದೆ:—ಅವರಲ್ಲಿ ಅನೇಕರು ಕುಮಾರೀ ಅವಸ್ಥೆಯಲ್ಲೇ ದೀಕ್ಷಿತರಾಗಿದ್ದರು. ೨ನೇ ವರ್ಗದಲ್ಲಿ ವಿವಾಹಿತನಾರಿಯರು ದೀಕ್ಷೆ ತೆಗೆದುಕೊಂಡಿದ್ದರು. ಹೆಚ್ಚಿನ ಸಂಖ್ಯೆ ವಿವಾಹಿತಸ್ತ್ರೀಯರದು. ೩ನೇ ವರ್ಗದಲ್ಲಿ ವೇಶ್ಯೆಯರು ತಮ್ಮ ಜೀವನದ ಉತ್ತರ ಕಾಲದಲ್ಲಿ ಬುದ್ಧನಿಗೆ ಶರಣುಹೊಂದಿ ದೀಕ್ಷೆಪಡೆದಿದ್ದರು. ೪ನೇ ವರ್ಗದ ವೃದ್ಧಸ್ತ್ರೀಯರು ಸಾಂಸಾರಿಕ ಕಾರ್ಯಗಳನ್ನು ಸಮಾಪ್ತಿಮಾಡಿಕೊಂಡು ಬುದ್ಧನಿಗೆ ಶರಣುಹೊಂದಿದರು. ಈ ರೀತಿಯಾಗಿ ಕುಮಾರಿಯರು, ವಿವಾಹಿತರು ಮತ್ತು ವೃದ್ಧಸ್ತ್ರೀಯರು ವೇಶ್ಯೆಯರ ಜೀವನದಲ್ಲಿ ಕೂಡಾ ಬಹಳ ಪರಿವರ್ತನೆ ಉಂಟಾಗಿರುವುದನ್ನು ನಾವು "ಥೇರೀಗಾಥೆ"ಯಲ್ಲಿ ಕಾಣುತ್ತೇವೆ. ಕುಮಾರಿ ಸಾಧ್ವಿಯರಲ್ಲಿ ಅನೋಪಮೆಯ ವೃತ್ತಾಂತವು ಬಹಳ ಸುಂದರವಾಗಿದೆ. ಅವಳು ಉಚ್ಚಕುಲದ ಶ್ರೀಮಂತ ತಂದೆಯ ಮಗಳು. ಅವಳ ಸಹಜ–ಸ್ವಾಭಾವಿಕಸೌಂದರ್ಯ, ಕುಲಶೀಲಕ್ಕೆ ಮೆಚ್ಚಿ ಅನೇಕ ರಾಜಪುತ್ರರು ಮತ್ತು ಸಾಹುಕಾರರ ಮಕ್ಕಳು (ಶ್ರೇಷ್ಠೀಪುತ್ರರು) ಅವಳೊಡನೆ ಮದುವೆಯಾಗಲು ಬಯಸಿದರು. ಅನೋಪಮೆಯ ಭಾರಕ್ಕಿಂತಲೂ ಆ ಪಾನಲಿಷ್ಟು ಸುವರ್ಣಕೊಡಲು ಅವರು ಒಪ್ಪಿದರು. ಆದರೆ ಅನೋಪಮೆಯು ಬುದ್ಧನ ಉಪದೇಶದಿಂದ ಪ್ರಭಾವಿತಳಾಗಿದ್ದಳು. ಬುದ್ಧನಿಂದ ದೀಕ್ಷೆಯನ್ನು ಪಡೆ

ದಳು. ಅವಳ ಬಾಯಿಂದಲೇ ದೀಕ್ಷೆಯ ವರ್ಣನೆಯನ್ನು (ಪ್ರವ್ರಜ್ಯವ್ರತ) ಕೇಳಿರಿಃ

'ತತೋಃಕೇಃಸಾನಿ ಛೇಃತ್ವಾನ ಪಬ್ಬಜಿಂ ಅನಗಾರಿಯಂ ।
ಸಾಜ್ಜವೋಃ ಸತ್ತನೋಃರತ್ತೀಃಯತೋಃ ತಣ್ಹಾ ವಿಸೋಃಸಿತಾ ॥',

ಅನೋಪಮೆ ದೀಕ್ಷೆ ತೆಗೆದುಕೊಂಡು ೭ ದಿನಗಳಾದುವು. ಅಷ್ಟರಲ್ಲಿಯೇ ತಾನು ತೃಷ್ಣೆಯನ್ನು ತ್ಯಾಗ ಮಾಡಿದೆನೆಂದು ಅವಳು ಹೇಳುತ್ತಾಳೆ.

* * * *

೨ನೇ ಕುಮಾರಿ ಸಾಧ್ವಿಯು ಒಬ್ಬಳು ರಾಜಕುವರಿ. ಮಂತಾವತೀ ನಗರದ ರಾಜನ ಮಗಳು. ಅವಳ ಹೆಸರು "ಸುಮೇಧಾ" ಎಂದು. ಜನ್ಮದಿಂದಲೇ ಅವಳು ಅತ್ಯಂತ ಸಂಯಮಿಯೂ ಧರ್ಮಪ್ರೇಮಿಯೂ ಆಗಿದ್ದಳು. ಬುದ್ಧನ ಉಪದೇಶವು ಅವಳ ಮೇಲೆ ಚೆನ್ನಾಗಿ ಬಿದ್ದಿತ್ತು. ಒಂದು ಸಾರಿ ಸುಮೇಧೆ ತನ್ನ ತಾಯಿ ತಂದೆಗಳೊಡನೆ ದೀಕ್ಷೆ ತೆಕ್ಕೊಳ್ಳಲು ಅನುಮತಿ ಕೇಳುತ್ತಾಳೆ. ಈ ಸಂದರ್ಭದಲ್ಲಿ ತಂದೆ ಅನೇಕಸಾರಿ ಸಮಾಧಾನ ಮಾಡಿದರೂ ಕೂಡ ಅವಳ ಉತ್ತರ ಹೀಗಿದೆ:—

ಕಿಂ ಭಗವತೇನ ಅಭಿನಂದಿತೇಃನ
ಕಾಯಕಾಲಿನ ಅಸಾವೇಃನ ॥
ಭವತಣ್ಹಾಯ ನಿರೋಃಧಾ ।
ಅನುಜಾನಾಥ ಪಬ್ಬಜಿಸ್ಸಾಮಿ ॥

ಶರೀರದ ಸುಖ ಮತ್ತು ಭವತೃಷ್ಣೆಯು ಅವಳನ್ನು ತಡೆಯಲು ಅಸಮರ್ಥವಾಯಿತು.

ಈ ಇಬ್ಬರು ಕುಮಾರಿಯರ ಸಾಹಸವನ್ನು ನೋಡುವಾಗ ಅವರನ್ನು ಅಬಲೆಯರೆಂದು ಯಾರು ಹೇಳಬಲ್ಲರು? ಈ ಮುಗ್ಧಾವಸ್ಥೆಯಲ್ಲಿ ಪ್ರತಿಯೊಬ್ಬಳು ಕುಮಾರಿಯು ತನ್ನ ಸೌಭಾಗ್ಯದ ಮಧುಮಯ ಸಾಂಸಾರಿಕಭೋಗದ ಚಿತ್ರಿಕೆಯಲ್ಲಿ ಆನಂದಪಡುತ್ತಿರುವಾಗ ಈ ಕೋಮಲ ವಯಸ್ಸಿನಲ್ಲಿ ತಮ್ಮ ಕೇಶಭಾರವನ್ನು ಕಿತ್ತು ತೆಗೆಯುವ ಸಾಹಸವು ಸಾಮಾನ್ಯರಿಗೆ ಬಂದೀತೇ? ಬುದ್ಧನನ್ನು ಶರಣುಹೊಂದಿ ಅಮೃತತ್ವದ ಪ್ರಾಪ್ತಿಗಾಗಿ ಮನೆಯನ್ನು ತ್ಯಾಗಮಾಡಿರುವ ಸ್ತ್ರೀಯರ ಜೀವನವು ಎಷ್ಟು ಸಾಹಸಪೂರ್ಣ ಮತ್ತು ಧೈರ್ಯಯುಕ್ತವಾಗಿದೆ?

"ನ ವಿಷಯ ಭೋಃಗೋಃಭಾಗ್ಯಂ
ಭಾಗ್ಯ ವಿಷಯೋಃಷು ವೈರಾಗ್ಯಂ ॥"

ಈ ಸರ್ವಧರ್ಮದ ಮಹಾಮಂತ್ರವನ್ನು ತಮ್ಮ ಕೋಮಲ ವಯಸ್ಸಿನಲ್ಲಿ ಸ್ವೀಕರಿಸಿದ್ದಾರೆ. ಅವರ ಆತ್ಮೋನ್ನತಿ ಮತ್ತು ಪರಿಣಾಮದ ವಿಶುದ್ಧಿಯು ನಿಜವಾಗಿಯೂ ಅಪೂರ್ವವಾಗಿದೆ.

ಈ ಕುಮಾರಿಯರ ದೀಕ್ಷೆಯಲ್ಲಿ ಕೋಮಲತೆಯಿದೆ. ವಿವಾಹಿತಸ್ತ್ರೀಯರ "ಪ್ರವ್ರಜ್ಯ" ದೀಕ್ಷೆಯ ಹಿಂದೆ ದೊಡ್ಡ ಸಂಘರ್ಷವಿದೆ. ಈ ಸಂಘರ್ಷಣೆಯು ಎರಡು ಸಾವಿರ ವರ್ಷಗಳ ಮೊದಲೂ ಇತ್ತು. ಇವತ್ತೂ ಅಂತೇ ಇದೆ. ಸ್ತ್ರೀಜೀವನದ ಸಂಘರ್ಷಣೆಯು ಕಾಲ ಸಂದರ್ಭಾನುಸಾರವಾಗಿತ್ತು. ದೇಶಕೃತವಾಗಿಲ್ಲ. ಮನುಷ್ಯನ ಮೂಲಭೂತಪ್ರವೃತ್ತಿಗಳಲ್ಲಿ ಹೇಗೆ ಕ್ರಿಯಾ-ಪ್ರತಿಕ್ರಿಯೆಗಳು ಆಗುತ್ತಿವೆ? ಇದರ ದರ್ಶನವು ನಮಗೆ ಸ್ತ್ರೀಜೀವನದ ಚರಿತ್ರೆಯಿಂದ ಗೊತ್ತಾಗುತ್ತದೆ. ವಿವಾಹಿತಸ್ತ್ರೀಯರಲ್ಲಿ ಅನೇಕರು ದಾರಿದ್ರ್ಯದ ಕಾರಣವೇ ಮನೆ ಬಿಟ್ಟು ಸಂಘದಲ್ಲಿ ಸೇರಿದ್ದರು. ಅದನ್ನು ಉಚ್ಚತಮ ತ್ಯಾಗವೆಂದು ಹೇಳಲಾಗುವುದಿಲ್ಲ. ಆದಾಗ್ಯೂ ತ್ಯಾಗದಲ್ಲಿ ಪವಿತ್ರತೆಯ ಭಾವನೆ ತುಂಬಿದೆ.

ದಾರಿದ್ರ್ಯದ ನಂತರ ದುಃಖದ ಎರಡನೆಯ ಕಾರಣವು ಸ್ವಜನರ ವಿಯೋಗ. 'ಥೇರೀಗಾಥೆ'ಯ ಅನೇಕ ಪದ್ಯಗಳು ಇದರಿಂದ ಸಂಬಂಧವಿಟ್ಟುಕೊಂಡಿವೆ. ಒಬ್ಬಳಿಗೆ ತನ್ನ ತಂದೆಯ ಮತ್ತು ಗಂಡನ ಮೃತ್ಯುವೇ ವೈರಾಗ್ಯಕ್ಕೆ ಕಾರಣವಾಯಿತು.

ಇದರಲ್ಲಿ ಅತ್ಯಂತ ಕರುಣಾಪೂರ್ಣವಾದ ಆತ್ಮನಿವೇದನೆ "ಕಿಸಾಗೌತಮಿ"ಯ ಕಥೆಯಲ್ಲಿದೆ. ಕಿಸಾಗೌತಮಿಯು ಒಂದು ಶ್ರೀಮಂತ ಕುಟುಂಬದ ಸುಂದರಿಯಾದ ಕನ್ಯೆ. ಕುಮಾರಿಯಾಗಿರುವಾಗಲೇ ಅವಳು ಒಬ್ಬ ಬೇಡರವನಲ್ಲಿ ಮೋಹಿತಳಾಗಿ ತನ್ನ ತಾಯಿತಂದೆಗಳನ್ನು ಬಿಟ್ಟು ಅವನೊಡನೆ ವನಕ್ಕೆ ಹೋದಳು. ಕೆಲವು ವರ್ಷಗಳ ನಂತರ ಅವಳು ಗರ್ಭವತಿಯಾದಳು. ಪ್ರಸವವೇದನೆಯನ್ನು ಸಹಿಸಲಾರದೆ ಅವಳು ತನ್ನ ತಾಯಿತಂದೆಗಳ ಮನೆಯ ಆಶ್ರಯ ಪಡೆಯಲು ಬಯಸಿದಳು. ಗಂಡನು ಇದಕ್ಕೊಪ್ಪಲಿಲ್ಲ. ಅವನು ಗೌತಮಿಯನ್ನು ಅರ್ಧ ಮಾರ್ಗದಿಂದಲೇ ಹಿಂದಕ್ಕೆ ಕರೆದುಕೊಂಡು ಬಂದನು. ಮಾರಣೆಯ ವರ್ಷ ಗೌತಮಿ ಪುನಃ ಗರ್ಭವತಿಯಾದಳು. ಅವಳ ಪ್ರಸವವೇದನೆಯು ಅತ್ಯಂತ ದುಃಖದಾಯಕವಾಗಿತ್ತು. ಆಗ ಪುನಃ ಅವಳು

ತನ್ನ ತಂದೆತಾಯಿಗಳ ಮನೆಯ ಕಡೆ ಹೊರಟಳು. ಭಯಂಕರ ಮಳೆ ಮತ್ತು ಕಗ್ಗತ್ತಲೆಯ ದಟ್ಟವಾದ ಕಾಡಿನಲ್ಲಿ ಒಂದು ಮರದ ಕೆಳಗೆ ಒಂದು ಮಗುವನ್ನು ಬೆನ್ನ ಮೇಲೆ ಕಟ್ಟಿಕೊಂಡು ಆ ಸ್ತ್ರೀ ಮೃತ್ಯುವಿನೊಡನೆ ಕಾದಾಡುತ್ತಾ ತನ್ನ ಗರ್ಭದ ಶಿಶುವನ್ನು ಹೆತ್ತಳು. ಅಷ್ಟರಲ್ಲಿ ಅವಳ ಗಂಡನು ಅಲ್ಲಿಗೆ ಬಂದನು. ಗೌತಮಿಗಾಗಿ ಶಯನಸ್ಥಾನವನ್ನು ಹುಡುಕುತ್ತಿರುವ ಅವನಿಗೆ ಒಂದು ಸರ್ಪವು ಕಚ್ಚಿ ಅವನು ಮರಣಹೊಂದಿದನು. ಗೌತಮಿ ಬೆಳಗಾಗುತ್ತಲೇ ತನ್ನೆರಡು ಮಕ್ಕಳನ್ನು ಒಂದು ಕೆರೆಯ ಬದಿಯಲ್ಲಿ ಮಲಗಿಸಿ ಸ್ನಾನಮಾಡಲು ಕೊಳಕ್ಕೆ ಇಳಿದಳು. ಆಗ ತಾನೇ ಹುಟ್ಟಿದ ಮಗುವು ಅಕಸ್ಮಾತ್ತಾಗಿ ಸತ್ತುಹೋಯಿತು. ಮೊದಲಿನ ಮಗುವು ಕೆರೆಯಲ್ಲಿ ಮುಳುಗಿ ಸತ್ತುಹೋಯಿತು. ಗೌತಮಿ ಈ ಪ್ರಸವವೇದನೆ, ಪತಿಯ ಮರಣ, ಎರಡು ಮಕ್ಕಳ ಕರುಣಾಪೂರಿತ ಅವಸಾನ ಇವುಗಳನ್ನು ನೋಡಿ ಬಹಳ ದುಃಖಿತಳಾದಳು; ಅಸಹಾಯಳಾಗಿ ಹುಚ್ಚಿಯಾದಳು. ಅಸ್ತವ್ಯಸ್ತಕೇಶಪಾಶಗಳಿಂದ ಕೂಡಿ ಅವಳು ತನ್ನ ಊರಿಗೆ ಹೋದಳು. ಅಲ್ಲಿ ಅವಳು ತನ್ನ ತಂದೆಯ ಮನೆ ಸುಡುತ್ತಿರುವುದನ್ನೂ ಅದೇ ಬೆಂಕಿಯಲ್ಲಿ ತನ್ನ ತಂದೆತಾಯಿಗಳು ಸುಟ್ಟು ಭಸ್ಮವಾಗುವುದನ್ನೂ ನೋಡಿದಳು. ಆಗ ಗೌತಮಿಯ ದುಃಖಕ್ಕೆ ಪಾರವೇ ಇಲ್ಲದಂತಾಯಿತು. ಅವಳು—

"ದುಃಖೋ ಇತ್ಥಿಭಾವೋ":—"ಸ್ತ್ರೀಯಾಗಿ ಜನಿಸುವುದು ದುಃಖದ ಕಾರಣದಿಂದಲೇ" ಈ ರೀತಿ ಬಹಳವಾಗಿ ಗೋಳಾಡಿದಳು. ಆ ಸಮಯದಲ್ಲೇ ಆಹಾರಕ್ಕಾಗಿ ಬರುತ್ತಿರುವ ಬುದ್ಧನ ಚರಣಗಳ ಮೇಲೆ ಅವಳು ಬಿದ್ದಳು. ಭಗವಾನ್ ಬುದ್ಧನು ಅವಳನ್ನು ಮೇಲಕ್ಕೆತ್ತಿ, ಅವಳ ಕಣ್ಣೀರನ್ನು ಒರಸಿ, ಅವಳಿಗೆ ಧರ್ಮೋಪದೇಶ ಮಾಡಿದನು. ಆ ಉಪದೇಶದಿಂದ ಸಂತೋಷಪಡೆದು ಅವಳು ತನ್ನ ಕಳೆದು ಹೋದ ಶಾಂತಿಯನ್ನು ಮರಳಿ ಪಡೆದಳು. ಅವಳು ದುಃಖದ ವೇದನೆಯಲ್ಲಿ:—

"ದ್ವೇ ಪುತ್ತಾ ಕಾಲಂಕತತಾಪಥಿಚ ।
ಪಂಥೇಮತೋ ಕಪಣಿಕಾಯಾ ॥
ಮಾತಾಪಿತಾಚ ಭ್ರಾತಾಚ ।
ಊಹಂತಿ ಏಕಚಿತ ಕಾಯಂ ॥"

ಅರ್ಥ:—ನನ್ನ ಇಬ್ಬರು ಪುತ್ರರೂ ಗಂಡನೂ ಮಾರ್ಗದಲ್ಲಿ ಸತ್ತುಹೋದರು; ತಾಯಿ, ತಂದೆ ಮತ್ತು ಸಹೋದರರು ಒಂದು ಚಿತೆಯಲ್ಲಿ ಸುಟ್ಟುಹೋದರು. ಈ ರೀತಿ ದುಃಖ ಮಾಡುತ್ತಿರುವ ಗೌತಮಿಯೆಲ್ಲಿ? ಮತ್ತು:—

"ಅಹಮುಷ್ಣಿ ಕಂತಸಲ್ಲಾ ಓಹಿತಭಾರಾ ।
ಕಂತಮೋಕರಣೀಯಂ ॥

ಅಂದರೆ:—ನಾನೀಗ ಶಲ್ಯರಹಿತಳಾಗಿದ್ದೇನೆ ಮತ್ತು ತನ್ನ ಸಂಪೂರ್ಣ ಭಾರವನ್ನು ಕಳೆದುಕೊಂಡಿದ್ದೇನೆಂದು ಹೇಳುವ ಗೌತಮಿಯೆಲ್ಲಿ?—

* * * *

ಪುತ್ರಿಶೋಕದಿಂದ ಪೀಡಿತಳಾದ "ಉಬ್ಬಿರಿ" ಎಂಬ ಹೆಸರಿನ ನಾರಿಯ ಗಾಥೆಯೂ ಇದೇ ರೀತಿಯಿದೆ; ಕರುಣಾಭರಿತವಾಗಿದೆ. "ಜೀವಾ" ಎಂಬ ಹೆಸರಿನ ತನ್ನ ಪುತ್ರಿಯ ಶೋಕದಿಂದ ಆಳುತ್ತಿರುವ ಕನಿಕರ ಮನಸ್ಸಿನ ಉಬ್ಬಿರಿಗೆ ಬುದ್ಧನು ಈ ರೀತಿ ಹೇಳುತ್ತಾನೆ:—

"ಅಮ್ಮಾ ಜೀವಾನಿ ಕಂದಸಿ ಅತ್ತಾನಂ ಅಧಿಗಚ್ಛ
ಉಬ್ಬಿರಿ
ಚೂಳಾಸೀತಿಸಹಸ್ರಾಣೀ ಸಬ್ಬಾಜೀವಾ ಸನಾಮಿಕಾ ।
ಏತಮ್ಹಾಲಾವನೇ ದಡ್ಢಾ ತಾಸಂಕಂ ಅನೋ
ಸೋಚಸೀ:" ॥

ಭಾವಾರ್ಥ:—"ಹೇ ಉಬ್ಬಿರಿ! ಜೀವಾ, ಜೀವಾ, ಎಂದು ಈ ಸ್ಮಶಾನದಲ್ಲಿ ಯಾರಿಗೋಸ್ಕರ ಆಳುತಿದ್ದೀಯೇ? ನೀನು ತನ್ನನ್ನು ತಿಳಿದುಕೊಳ್ಳು, ಇಷ್ಟರವರೆಗೆ ಸಾವಿರಾರು ಜೀವಗಳು ಸ್ಮಶಾನದಲ್ಲಿ ಸುಡಲ್ಪಟ್ಟಿವೆ. ಅವುಗಳಲ್ಲಿ ಯಾವ ಜೀವಕ್ಕೋಸ್ಕರ ನೀನು ಅಳುತ್ತೀ?"

ಬುದ್ಧನ ಈ ಪ್ರಶ್ನೆಯು ಎಷ್ಟು ವಿಚಾರಪೂರ್ಣವಾಗಿದೆ? "ದುಃಖಿಗಳಿಗೆ ವಿವೇಕ ಬರುವಂತೆ ಮಾಡುವುದು, ಅವರನ್ನು ಸಮಾಧಾನ ಪಡಿಸುವುದು" ಇದಕ್ಕಿಂತಲೂ ದೊಡ್ಡ ಉಪಕಾರ ಇನ್ನ್ಯಾವುದು? ಈ ಉಪಕಾರಕ್ಕಾಗಿ ಉಬ್ಬಿರಿ ಹೀಗೆ ಹೇಳುತ್ತಾಳೆ:—

"ಬುದ್ಧಂ ಧಮ್ಮಂಚ ಸಂಘಂಚ ಉಪೇಮಿ
ಸರಣಂ ಮುನಿಂ" ॥

ಆದರೆ ಬುದ್ಧನ ಕಲ್ಯಾಣಕರಸಂದೇಶವು ವಿವಾಹಿತರು ಮತ್ತು ಕುಮಾರಿಯರಿಗೆ ಮಾತ್ರವಲ್ಲ; ಸಮಾಜದಲ್ಲಿ ಬಹಳ ದುರವಸ್ಥೆಯಲ್ಲಿರುವ ವೇಶ್ಯೆಯರ ವರೆಗೂ ಮುಟ್ಟಿತ್ತು. ರಾಜಗೃಹದ ವೇಶ್ಯೆಯಾದ "ಆಮ್ರಪಾಲಿ"ಯ ಹೆಸರು ಬಹಳ ಪ್ರಖ್ಯಾತವಾಗಿತ್ತು. ಆದರೆ ಅವ

ಳಿಗಿಂತಲೂ ಹೆಚ್ಚು ಪ್ರಸಿದ್ಧಿಹೊಂದಿದ ನಾರಿಯು— ಎರಡನೆಯ ವೇಶ್ಯೆಯು "ವಿಮಲೆ"ಯಾಗಿದ್ದಳು. ಅವಳ ವೃತ್ತಾಂತವನ್ನು ಅವಳ ಮುಖದಿಂದಲೇ ಕೇಳಿ:—

''ಮತ್ತಾವಣ್ಣೇನ ರೂಪೇನ ಸೋಭಾಗ್ಯೇನಯಸೇನಚ ॥
ಆಟ್ಮಾಸಿ ವೇಸಿದ್ವಾರವ್ಹಿಲ ದ್ಧೋಪಾಸಾವಿ ಬಡ್ಡಿಯಾ ॥

ರೂಪ ಮತ್ತು ವರ್ಣದಿಂದ ಮದೋನ್ಮತ್ತಳಾಗಿ ಭವನದ ಎದುರು ಬಾಗಿಲಿನಲ್ಲಿ ಹಾಸಿಗೆ ಹಾಕಿ ನಾನು ಕುಳಿತುಕೊಳ್ಳುತ್ತಿದ್ದೆ. ಈ ರೀತಿ ಹೇಳುವ ವಿಮಲೆ ಯೆಲ್ಲಿ? ಮತ್ತು—

ಸಾಜ್ಜಪಿಂಡಂ ಚರಿತ್ವಾನ್ ಮುಂಡಾ ಸಂಘಾರಿ ಪಾರುತಾ ।
ನಿಸಿಣ್ಣಾರುಕ್ಖ ಮೂಲಮ್ಹಿ, ಅವಿತಕ್ಕಸ್ಸಲಾಭಿನೀ ॥

ಭಿಕ್ಷಾಟನೆ ಮಾಡುತ್ತಾ ಕೇಶಪಾಶ ಕಳಚಿ ಮರದ ಕೆಳಗೆ ನಿಶ್ಚಲವಾದ ಸಮಾಧಿಯಲ್ಲಿರುತ್ತೇನೆ— ಈಗ ಹೀಗೆ ಹೇಳುವ ವೇಶ್ಯೆಯೆಲ್ಲಿ?

ಈ ರೀತಿಯ ಉದಾಹರಣೆಗಳಿಂದ ಸ್ತ್ರೀಯರ ಅನಾ ಗಾರಿತ್ವದ ವಿಚಾರದಲ್ಲಿ ಬಹಳ ಭಕ್ತಿ, ಶ್ರದ್ಧೆಗಳನ್ನು ಇಡು ತ್ತಿದ್ದರೆಂದು ಗೊತ್ತಾಗುತ್ತದೆ. ಜ್ಞಾನಪ್ರಾಪ್ತಿಯಿಂದ ಉಂಟಾದ ವೈರಾಗ್ಯದ ಉದಾಹರಣೆಗಳು ಇಲ್ಲ.

ಸಮೃದ್ಧವಾದ ಕುಟುಂಬದಲ್ಲಿ ಜನ್ಮಹೊಂದಿದ "ಶುಭೆ"ಯ ಜಾನಪೂರ್ಣವೈರಾಗ್ಯವು ಬಹಳ ಮಹ ತ್ವದ್ದು. ಐಶ್ವರ್ಯ ಮತ್ತು ವೈಭವಗಳನ್ನು ಪ್ರಾಣಕ್ಕಿಂ ತಲೂ ಹೆಚ್ಚಾಗಿ ತಿಳಿಯುವವರು ಇದ್ದರೂ ದೀಕ್ಷೆಯಿಂ ದಾಗಿ ಅವೆಲ್ಲವನ್ನೂ ತಿರಸ್ಕಾರದಿಂದ ಬಿಟ್ಟುಬಿಟ್ಟರು.

''ರಜತಂ ಜಾತರೂಪಂಚ ನಬೋಧಾಯನ ಸಂತಯೇ ।
ನೇತಂಸಮಣಸಾರೂಪ್ಯಂ ನೇತಂ ಅರಿಯಂಧನಂ ॥

"ಬೆಳ್ಳಿ ಮತ್ತು ಬಂಗಾರದಿಂದ ಶಾಂತಿ ಪ್ರಾಪ್ತ ವಾಗುವುದಿಲ್ಲ." ಸಾಧ್ವಿಯರಿಗೆ ಇದು ನಿಜವಾದ ಐಶ್ವ ರ್ಯವೂ ಅಲ್ಲ; ಶ್ರಮಣರಿಗಿದು ನಿರರ್ಥಕವಾಗಿದೆ. ಈ ಗಂಭೀರ ವಿಚಾರವು:—

"ಅಮೃತತ್ವಸ್ಯನಾಶಾಸ್ತಿವಿತ್ತೇನ"— ಹೀಗೆ ಕರು ಣಾದ್ರಹೃದಯಳಾಗಿ ಅಳುವವಳೊಬ್ಬಳು "ಗೌತಮಿ" ಹೆಂಗಸು. ಅವಳು ತನ್ನೊಬ್ಬನೇ ಪುತ್ರ "ವಡ್ಡ"ನೆಂಬ ವನನ್ನು ಕಳೆದುಕೊಂಡು ಬುದ್ಧನ ಚರಣದಲ್ಲಿ ಅರ್ಪಿಸಿ "ಮಾಪುತ್ತಕಾಪುನಃ ಪುನಂ ಅಹುದುಖ್ಖಸ್ಸಭಾಗಿಭಾ।"

* * * *

ಹೀಗೆ ಆಶೀರ್ವಾದ ಕೊಡುವ ನಾರಿಯು ವಡ್ಢ ಮಾತೆಯು:—"ನನ್ನ ಪುತ್ರನ ಶರೀರವು ಪುಷ್ಟವಾಗಲಿ, ಅವನಿಗೆ ಸುಂದರಿಯಾದವಳೊಬ್ಬಳು ಪತ್ನಿ ಸಿಗಲಿ ಅವನ ಸಂಪತ್ತಿಯು ಅಭಿವೃದ್ಧಿ ಹೊಂದಲಿ."—ಈ ರೀತಿಯ ಆಕಾಂಕ್ಷೆಯನ್ನು ಮಾಡುವ ತಾಯಿಯರು ಬಹಳ; ಆದರೆ "ನನ್ನ ಪುತ್ರನು ಸಂಸಾರದಿಂದ ಮುಕ್ತಿ ಹೊಂದಲಿ" "ಅಮೃತತ್ವವನ್ನು ಹುಡುಕಿ ಪಡೆಯಲಿ" ಎಂಬ ಈ ಭಾವನೆಯೆಷ್ಟು ಪವಿತ್ರವಾಗಿದೆ! ಈ ರೀತಿಯ ಭಾವನೆಯವಳನ್ನೇ ನಿಜವಾದ ತಾಯಿಯೆಂದು ನಾವು ಕರೆಯಬೇಕು. ಇವೆಲ್ಲ ವಿಚಾರವನ್ನು ನೋಡುವುದ ರಿಂದ ಸ್ತ್ರೀಪುರುಷರ ಚೈತನ್ಯವು ಸಮಾನವಾಗಿದೆ ಎಂಬ ವಿಚಾರವು ಸ್ಪಷ್ಟವಾಗಿದೆ. ಸ್ತ್ರೀಯರ ಇಚ್ಛಾಶಕ್ತಿ, ಅವರ ಸಂಯಮ, ಅವರ ಧ್ಯೇಯವಾದ ವಿವೇಕ ಮತ್ತು ಸಾಹಸವು ಪುರುಷರಿಗಿಂತ ಸ್ವಲ್ಪವೂ ಕಡಿಮೆ ಯಿಲ್ಲ. ಈ ರೀತಿಯ ಆತ್ಮವಿಶ್ವಾಸವು ಬೌದ್ಧಸಂಘದ ಸಾಧ್ವಿಯರಲ್ಲಿ ಉಂಟಾಗಿತ್ತು. "ಸೋಮಾ" ಎಂಬ ಹೆಸರಿನ ಒಬ್ಬಾಕೆ ಸಾಧ್ವಿಯೊಡನೆ ಒಬ್ಬನು ಪ್ರಶ್ನೆ ಮಾಡಿದ್ದ—"ಸೋಮಾ ನೀನು ನಾರಿಯಲ್ಲವೇ? ಅರ್ಹ ತ್ವದವನ್ನು ಹೇಗೆ ದೊರಕಿಸಿಕೊಳ್ಳುವೆ?"—ಅದಕ್ಕವಳು ಈ ರೀತಿ ಉತ್ತರ ಕೊಟ್ಟಳು; ಅವಳಿಗೆಷ್ಟು ಆತ್ಮ ವಿಶ್ವಾಸವಿದೆ ಎಂದು ಅದರಿಂದ ಗೊತ್ತಾಗುವುದು—

''ಇತ್ಥಿ ಭಾವೇ ಕಿಂಕಾಯಿರಾ ।
ಚಿತ್ತಮ್ಹಿ ಸುಸಮಾಹಿತೇ ॥

ಸ್ತ್ರೀಭಾವಕ್ಕೂ ಅರ್ಹತ್ವದಕ್ಕೂ ಏನು ಸಂಬಂಧ? ಸ್ಥಿರವಾದ ಚಿತ್ತವುಳ್ಳವನಿಗೆ ಜ್ಞಾನದ ಪ್ರಾಪ್ತಿಯಾಗು ವುದು ಖಂಡಿತ. "ದುಃಖೊ ಇತ್ಥಿಭಾವೋ"—ಇದು ಕಿಸಾ ಗೌತಮಿಯ ಕರುಣೆಯ ರೋದನ ಮತ್ತು "ಇತ್ಥಿ ಭಾವೆ ಕಿಂ ಕಾಯಿರಾ। ಚಿತ್ತಮ್ಹಿ ಸುಸಮಾಹಿತೇ" ॥ ಇದು ಸೋಮೆಯ ಆತ್ಮವಿಶ್ವಾಸದ ಪೂರ್ಣಸ್ವರವಾ ಗಿದೆ. ಈ ಎರಡು ವಾಕ್ಯಗಳಲ್ಲಿ ಸ್ತ್ರೀಸಮಾಜದ ಸಂಪೂ ರ್ಣವಾದ ಇತಿಹಾಸವು ತುಂಬಿರುತ್ತದೆ. ಈ ಆತ್ಮವಿ ಶ್ವಾಸವು ನಮ್ಮ ಅಕ್ಕತಂಗಿಯರಲ್ಲುಂಟಾದರೆ—ಬುದ್ಧ ಮತ್ತು ಮಹಾವೀರನ ಸಂದೇಶವನ್ನು ಕೇಳಿದ್ದಕ್ಕೆ ಸಾರ್ಥಕವಾಗುವುದೆಂದು ನಾನು ತಿಳಿಯುತ್ತೇನೆ.

ಯಾವುದು ಕಲೆ?

ಶ್ರೀ ಶಿವರಾಮ ಕಾರಂತ, ಪುತ್ತೂರು.

ಗುಡಿಯೊಂದರ ಗೋಡೆಯಲ್ಲಿ ಅಂಗುಲಂಗುಲವೂ ನಾಜೂಕಿನ ಕೆತ್ತನೆಕೆಲಸಗಳನ್ನು ಕಾಣುತ್ತೇವೆ. ಅದರಲ್ಲೊಂದು—ಇನ್ನಷ್ಟು ಸೂಕ್ಷ್ಮವಾದದ್ದು; ಬೆಡಗುಗಾತಿಯೊಬ್ಬಳು ನಿಂತಿದ್ದಾಳೆ, ಕೈಯ ಮೇಲೊಂದು ಗಿಳಿಯಿದೆ. ಗಿಳಿಯ ಬಾಯಲ್ಲೊಂದು ಹಣ್ಣಿದೆ. ಅದರ ಮೇಲೊಂದು ಸೊಳ್ಳೆ ಕುಳಿತಂತೆ ಕಾಣುತ್ತದೆ. ಮೈಯ ಆಭರಣಗಳಲ್ಲಿ ಕುಸುರು ಕೆಲಸಗಳೆಷ್ಟು! ಹೆರಳಿನ ಪ್ರತಿಯೊಂದು ಕೂದಲೂ ಬೇರೆಬೇರೆಯೆ ಆಗಿ ಕಾಣುತ್ತದೆ. ಅದನ್ನು ನೋಡಿ ಆಶ್ಚರ್ಯವಾಗದೆ?

ಪದ್ಯ ಸಂಗ್ರಹವೊಂದನ್ನು ಓದುತ್ತಿದ್ದೇವೆ. ಕವಿ ಉಪಯೋಗಿಸಿದ ಅಪೂರ್ವದ ಶಬ್ದಗಳು, ಪ್ರಾಸಗಳು, ಅಲಂಕಾರಗಳು, ಅನೇಕಾನೇಕ ಹೋಲುವೆಗಳು ಅವನ ಪಾಂಡಿತ್ಯವನ್ನು ಕುರಿತು ಬೆರಗುಹುಟ್ಟಿಸುತ್ತವೆ.

ಹಾಡುಗಾರನೊಬ್ಬ, ಮುಕ್ತ ಕಂಠದಿಂದ ಮೂರು ತಾಸಿಗೂ ಮಿಕ್ಕಿ ಹಾಡಿದ್ದಾನೆ, ಇನ್ನೂ ಹಾಡುತ್ತಿದ್ದಾನೆ. ಒಂದೇ ರಾಗದಲ್ಲಿ ಏನೇನು ಕೆಲಸಗಳು! ಮೃದಂಗ ವಾದಕನನ್ನು ಇಷ್ಟಿಷ್ಟೂ ಬಿಟ್ಟುಕೊಡುವುದಿಲ್ಲ. ರಾಗಾಲಾಪಗಳು ಯಾವ್ಯಾವ ಬಗೆಯ ಸಂಚಾರಗಳನ್ನು ಮಾಡಬಹುದೋ, ಅವೆಲ್ಲವನ್ನು ಮಾಡುತ್ತಿವೆ. ತಾರಕದಲ್ಲಿ ಎಷ್ಟು ಸುಖವಾಗಿ ಹಾಡಬಲ್ಲನೋ ಮಂದ್ರದಲ್ಲಿ ಅಷ್ಟೇ ಸುಖವಾಗಿ ಹಾಡಬಲ್ಲ ಶಾರೀರ. ದಣಿವೆಂಬುದು ಇಷ್ಟೂ ಇಲ್ಲ. ವಿಸ್ಮಯ ಹುಟ್ಟುತ್ತಿದೆ—ಕೇಳುವವರಲ್ಲಿ.

ಮೇಲೆ ಮೂರು ಉದಾಹರಣೆಗಳನ್ನು ಹೇಳಿದೆ. ಈ ಮೂರೂ ಉದಾಹರಣೆಗಳಲ್ಲಿ, ನಡೆದ ಪ್ರದರ್ಶನಗಳಲ್ಲಿ, ಪ್ರೇಕ್ಷಕ ವಿಸ್ಮಿತನಾಗಿದ್ದಾನೆ, ಬೆರಗುಗೊಂಡಿದ್ದಾನೆ; ಆಶ್ಚರ್ಯ ತಾಳಿದ್ದಾನೆ. ಆದರೆ ಆ ಮೂರೂ ಪ್ರದರ್ಶನಗಳಿಗೆ ಕಾರಣರಾದ ವ್ಯಕ್ತಿಗಳು ಕಲಾವಿದರೇ? ಆ ಪ್ರದರ್ಶನ ಕಲೆಯೇ ಎಂದು ಕೇಳಿದರೆ, 'ಅಲ್ಲ' ಎನ್ನಬೇಕಾಗುತ್ತದೆ. ಕೇಳುವ, ಕಾಣುವ, ಓದುವ ವ್ಯಕ್ತಿಯಲ್ಲಿ ಪ್ರದರ್ಶಕವಸ್ತು ಬೆರಗುಹುಟ್ಟಿಸತಕ್ಕದ್ದು ಕಲೆಯ ಮುಖ್ಯಗುಣವಲ್ಲ. "ಇವನೆಂತಹ ಪಂಡಿತನಪ್ಪ! ಎಷ್ಟೆಲ್ಲ ತಿಳಿದಿರಬಹುದು? ಎಷ್ಟೆಲ್ಲ ಅಭ್ಯಾಸ ಮಾಡಿರಬಹುದು? ಏನೇನೆಲ್ಲ ಚಮತ್ಕಾರ ಸಾಧಿಸುತ್ತಿದ್ದಾನೆ" ಎಂಬುದು ಕಲೆಯ ಅಳತೆಯಲ್ಲ. ಕಲಾವಿದನ ಕೃತಿಯ ಮುಂದೆ, ಪ್ರೇಕ್ಷಕ ಮೈಮರೆತು ಪ್ರದರ್ಶಿತ ವಸ್ತುವಿನಲ್ಲಿ ಒಂದಾಗಿದ್ದಾನೆಯೇ? ಕಲಾವಿದನ ಮನೋಭಾವವನ್ನು ಅದರ ಮೂಲಕ ಅರಿತಿದ್ದಾನೆಯೇ? ಅರಿತು, ಅದರಿಂದ ಭಾವವಶನಾಗಿದ್ದಾನೆಯೇ—ಎಂಬುದು ಮಾತ್ರ ಕಲೆಗೆ ಸಂಬಂಧಪಟ್ಟ ವಿಷಯಗಳು. ಚಮತ್ಕಾರದ ವಸ್ತುವನ್ನು ನೋಡಿದರೆ ಬೆರಗುಗೊಳ್ಳುತ್ತೇವೆ. ನಮ್ಮಿಂದಾಗದ ಎಲ್ಲ ಸಾಹಸ ಕೃತ್ಯಗಳನ್ನು ಕಂಡು ಆಶ್ಚರ್ಯಪಡುತ್ತೇವೆ. ಎವರೆಸ್ಟ್ ಶಿಖರ ಹತ್ತಲೆತ್ನಿಸಿದರು. ದಕ್ಷಿಣ ಧ್ರುವದಲ್ಲಿ ಸಂಚಾರ ಮಾಡಿದರು. 'ಎಟಂ' ಬಾಂಬಿನ ಶಕ್ತಿ ಪ್ರಯೋಗಿಸಿದರು—ಇವೆಲ್ಲ ಬೆರಗುಗೊಳಿಸುವ ವಸ್ತುಗಳೇ. ಒಂದು ರೇಡಿಯೋ ಪೆಟ್ಟಿಗೆ ತೆರೆದು ಒಳಗೆ ನೋಡಿದರೆ, ಗುಂಡಿಗಾತ್ರದ ವಾಚನ್ನು ತೆರೆದು ನೋಡಿದರೆ, ಎಂಥವನನ್ನೂ ಬೆರಗುಗೊಳಿಸುವ ವಸ್ತುಗಳ ಜೋಡಣೆಯು ಅಲ್ಲಿ ಕಾಣುತ್ತದೆ. ಅದನ್ನು ನಿರ್ಮಿಸಿದಾತ ಸಾಹಸಿ, ಬುದ್ಧಿಶಾಲಿ, ಕುಶಲಕೈವಾರಿ ಎಂದು ತಿಳಿಯುತ್ತದೆ. ಅಷ್ಟೂ ಬೇಡ. ಬರಿಯ ಸೊಳ್ಳೆಯೊಂದನ್ನು ಹಿಡಿದು, ಅದನ್ನು ಸೀಳಿ, ಸೂಕ್ಷ್ಮದರ್ಶಿಯಲ್ಲಿ ನೋಡಿದರೆ—ಅದರ ಶರೀರದೊಳಗೆ ಸೋಜಿಗದ ಸಾಮ್ರಾಜ್ಯವೇ ಕಾಣಿಸುತ್ತದೆ. ಆದರೆ, ಈ ಎಲ್ಲ ಉದಾಹರಣೆಗಳು ಕಲಾಕೃತ್ಯಗಳೇ—ಎಂದು ಪ್ರಶ್ನಿಸಿದಲ್ಲಿ 'ಅಲ್ಲ' ಎಂದೂ ಆಗಬೇಕಿಲ್ಲ ಎಂಬುದೇ ಉತ್ತರ. ಕಲೆ ಅದ್ಭುತವನ್ನು ಹೇಳುವುದಲ್ಲ, ಚಮತ್ಕಾರ ತೋರಿಸುವುದಲ್ಲ. ಪಾಂಡಿತ್ಯ ಪ್ರದರ್ಶನವಲ್ಲ. ಅದು ಇನ್ನೇನನ್ನೋ ಹೇಳಲಿರಬೇಕು. ಆ ಇನ್ನೇನು ಯಾವುದು—ಎಂಬುದೇ ಕಲೆಯ ರಹಸ್ಯ.

ಕಲೆಯ ನಿರ್ಮಾಣಕ್ಕೆ ಬೇಕಾದುವು—ಮೂರು ವಸ್ತುಗಳು. ಮೊದಲನೆಯದು ಕಲಾವಿದ. ಎರಡನೆಯದು ಅವನು ಬಳಸುವ ಸಾಧನ. ಮೂರನೆಯದು ಪ್ರೇಕ್ಷಕ ಇಲ್ಲವೆ ಶ್ರೋತಾರ ಸಾಮಾನ್ಯವಾಗಿ ಅಥವಾ

ಬಹುವಾಗಿ ಅವನ ಸಾಧನ ಮಾತ್ರ ನಮಗೆ ದೊರೆಯುತ್ತದೆ. ಕಲಾನಿರ್ಮಾಣ ಕಾಲದಲ್ಲಿ ಕಲಾವಿದ ನಮಗೆ ಕಾಣಿಸುವುದಿಲ್ಲ. ಕಾಣಿಸಬೇಕಾಗಿಯೂ ಇಲ್ಲ. ಇಂಥಲ್ಲಿ ಪ್ರೇಕ್ಷಕ ಇಲ್ಲವೆ ಶ್ರೋತಾರ ಅವನು ಬಳಸಿದ ಸಾಧನದಿಂದಲೇ, ಕಲಾವಿದನನ್ನು ಗುರುತಿಸಬೇಕಾಗುತ್ತದೆ. ಆ ಸಾಧನವೆಂದರೆ ಗಾನ, ಚಿತ್ರಕಲೆ, ನೃತ್ಯ, ಕಾವ್ಯ, ಶಿಲ್ಪ ಇವುಗಳಲ್ಲಿ ಯಾವುದೂ ಇರಬಹುದು. ಇವುಗಳ ಮೂಲಕವಾಗಿಯೇ ಕಲೆಯೇನು, ಆ ಕೃತಿಯನ್ನು ಹುಟ್ಟಿಸಿದ ಕಲಾವಿದನೆಂಥವನು—ಎಂಬುದು ನಮಗೆ ಪರಿಚಯವಾಗಬೇಕು. ಆ ಕೃತಿ ಏತಕ್ಕೆ ಇಲ್ಲವೆ ಹೇಗೆ ಉಂಟಾಯಿತು ಎಂಬುದರ ಪರಿಚಯ ನಮಗಾದರೆ ಕಲಾವಿದನ ಪರಿಚಯವಾದಂತೆಯೇ. ಈ ಪ್ರಶ್ನೆಗಳನ್ನು ಅವು ಉತ್ತರಿಸದೆ ಹೋದರೆ, ಒಂದೊ ನಾವು ದಡ್ಡರು ಎಂದರ್ಥ ಇಲ್ಲವೆ ನಮಗೆ ತಿಳಿಯುವ ಶಕ್ತಿಯಿದ್ದೂ, ತಿಳಿಸುವ ಶಕ್ತಿ—ಅವನ ಕೃತಿಯಲ್ಲಿ ಕಾಣುತ್ತಲಿಲ್ಲ ಎಂಬುದು ಇನ್ನೊಂದರ್ಥ. ನಾವು ತಿಳಿಯುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ ನಿಜ. ನಮ್ಮ ಮುಂದಿರುವ ಕಲೆಯ ಸಾಧನದ ಪರಿಚಯ ಸ್ವಲ್ಪವಾದರೂ ಇರಬೇಕು. ಹಾಡಿಗೆ ಸಂಗೀತದ ಪರಿಚಯ; ಚಿತ್ರಕ್ಕೆ ಅದರ ಲಕ್ಷಣ ಪರಿಚಯ, ಶಿಲ್ಪಕ್ಕೂ ಹಾಗೆ, ಕಾವ್ಯಕ್ಕೂ ಹಾಗೆ; ಈ ಪರಿಚಯವಿಲ್ಲದೆ ಅವನ ಕೃತಿಯ ಅರ್ಥ ಮಾಡಿಕೊಳ್ಳುವುದು ಕಷ್ಟ. ಇಷ್ಟು ಮೂಲ ವಸ್ತುಗಳು ತಿಳಿದಿದ್ದರೆ ಅರ್ಥವಾಗಬೇಕು ಎಂಬುದು ನಮ್ಮ ಆಸೆ. ಇಂದು ಕನ್ನಡ ಬಲ್ಲವರೆಲ್ಲರಿಗೂ ಕನ್ನಡ ಭಾಷೆಯಲ್ಲಿ ಬರೆದ ಕಾವ್ಯವೊಂದರ ಪರಿಚಯ ಆಗುತ್ತದೆಯೇ? ಆಗಲೇಬೇಕೆಂದಿದೆಯೇ ಎಂದರೆ ಆಗಲೇ ಬೇಕು, ಆದೀತು, ಎಂದು ಹೇಳುವ ಹಾಗಿಲ್ಲ. ಇನ್ನಾವುದೋ ತೀರ್ಮಾನ ನಮ್ಮಲ್ಲಿ ಸೇರಿಕೊಂಡಿದ್ದರೆ ನಮಗೆ ಕವಿಯ ಇಲ್ಲವೆ ಕಲಾವಿದನ ಭಾಷೆ ತಿಳಿದಿದ್ದರೂ ಅರ್ಥವಾಗಲಾರದು. ಅರ್ಥವಾದರೂ ಮನಸ್ಸನ್ನು ಸೆರೆ ಹಿಡಿಯಲಾರದು.

ಆದರೆ ಶ್ರೋತಾರನ ಕಡೆಗೇನೆ ಪ್ರೇಕ್ಷಕರ ಕಡೆಗೇನೆ ಈ ಕೊರತೆ ತುಂಬಿರಬೇಕಾದ್ದಿಲ್ಲ. ಹೇಳುವವನಿಗೇ—ತನ್ನ ಮನಸ್ಸೇ ಏನೆಂದು ಗೊತ್ತಿಲ್ಲದೆ ಹೋದರೆ ಹೇಳುವ ವಿಷಯ ಕೇಳುವವರಿಗೆ ವ್ಯಕ್ತವಾಗುತ್ತದೆಯೇ? ಎಂದೂ ಶಕ್ಯವಿಲ್ಲ.

ಹೇಳುವ ವಿಷಯವೇ ಕಲೆಯ ಜೀವಾಳ. ಅದು ಎಂಥದನ್ನೂ ಹೇಳಬಹುದು. 'ಈ ವಿಷಯ ಹೇಳಬೇಕು, ಇದನ್ನು ಹೇಳಬಾರದು' ಎಂಬ ನಿಯಮವಿಲ್ಲ. ಒಂದೊಂದು ಜೀವ ತನ್ನ ಅನುಭವದಲ್ಲಿ ಕಂಡದ್ದನ್ನು ಹೇಳುತ್ತದೆ. ಹೇಳಬೇಕೆನಿಸಿದ್ದನ್ನು ಹೇಳುತ್ತದೆ. ನಮಗೆ ಒಪ್ಪಿಗೆಯಿದ್ದರೆ, ಕೇಳುತ್ತೇವೆ; ಇಲ್ಲವಾದರೆ ಬಿಡುತ್ತೇವೆ. ಆದರೆ ಹೇಳುವಾತ ತನ್ನ ಅನುಭವ ಹೇಳಬೇಕಾದ್ದು ತೀರ ಮುಖ್ಯ. ಯಾವುದರಿಂದ ತನ್ನ ಮನಸ್ಸು ವಿಶೇಷವಾಗಿ ಕುಲುಕಿತೋ ಅದನ್ನು ಹೇಳುತ್ತಾನೆ. ಕಲಾವಿದನ ಈ ಮನಸ್ಸು ದೊಡ್ಡದಾಗಿರಬೇಕು, ತಿಳಿಯಾಗಿರಬೇಕು, ಉದಾರವಾಗಿರಬೇಕು. ಈ ಮನ, ಜೀವನದ ಒಂದೊಂದು ಅಂಗವನ್ನು, ಒಂದೊಂದು ಗಳಿಗೆಯನ್ನು ಒಂದೊಂದು ಘಟನೆಯನ್ನು ಎಷ್ಟೆಷ್ಟು ಒಳ ಹೊಕ್ಕು ನೋಡುತ್ತದೋ, ಅಷ್ಟಷ್ಟು ಹೆಚ್ಚು ವಿಸ್ತಾರಗೊಳ್ಳಬಲ್ಲುದು, ಸ್ಫೂರ್ತಿಗೊಳ್ಳಬಲ್ಲುದು, ಅನುತಾಪಗೊಳ್ಳಬಹುದು. ಒಂದೊಂದು ನೋಟವನ್ನು ಕಂಡು, ಅದು ಇನ್ನೊಂದರಿಂದ ಭಿನ್ನವೆಂದು ತಿಳಿದು, ಅದರ ಹೊಳಪು ನೆರಳುಗಳಿಗೆ ಮನ ಕುಲುಕಬೇಕು. ಒಂದೊಂದು ವ್ಯಕ್ತಿಯನ್ನೋ ಪ್ರಾಣಿಯನ್ನೋ ಕಂಡು ಅದರ ನೋವು ನರಳುವಿಕೆಗೆ ಅನುಕಂಪಗೊಳ್ಳಬೇಕು. ಅದರ ನಗು, ಉಲ್ಲಾಸಗಳಿಗೆ, ತಾನು ಉಲ್ಲಾಸ ತಾಳಬೇಕು. ಬಾಳ್ವೆಯ ಸೊಗಸನ್ನು ಕಂಡು ಹಿಗ್ಗಿ ಮನ ಕುಣಿದಾಡಬೇಕು. ಈ ಸೊಗವನ್ನು ಅಪಹರಿಸುವ ವಿರಹ, ವೇದನೆ, ನರಳುವಿಕೆಗಳಿಗಾಗಿ ಮನಬೇಯಬೇಕು. ಜೀವನದ ತುಮುಲದಲ್ಲಿ, ಸುಖದುಃಖಗಳ ಕಲಸುಮೇಲೋಗರಗಳಲ್ಲಿ ಅವುಗಳಲ್ಲಿ ಅವುಗಳ ಹಿನ್ನೆಲೆಗೆ ಕಾರಣವಾದ ಶಕ್ತಿಗಳನ್ನು ಅಳೆದು ನೋಡಬೇಕು. ಭಾವನೆ ಎಂಬುದು—ಪ್ರತಿಯೊಂದು ವಿಲಕ್ಷಣವಾದ ಗಳಿಗೆಯಿಂದಲೂ, ದೃಶ್ಯದಿಂದಲೂ ಧ್ವನಿಯಿಂದಲೂ ಪ್ರತಿಫಲನಗೊಳ್ಳಬೇಕು. ಜೀವನವು ಸಾವಿರಾರು ಅನುಭವಗಳಿಂದ ತುಂಬಿರುವಲ್ಲಿ ಅವುಗಳಲ್ಲಿ ಹಿಂದಾದುವನ್ನು, ದಾರುಣವಾದುವನ್ನು, ಸತ್ಯವಾದುವನ್ನು, ಸುಂದರವಾದುವನ್ನು ಅರಸಿ ಆರಿಸಿ, ತನ್ನ ಸ್ಮೃತಿಯಲ್ಲಿರಿಸಿಕೊಳ್ಳುವ ಶಕ್ತಿಬೇಕು; ಸಮಯ ಒದಗಿದಾಗ, ಬಯಸಿದ ಅನುಭವ ತನ್ನ ಸಂಪೂರ್ಣ ಅಲಂಕಾರದೊಡನೆ, ಸಶರೀರವಾಗಿ ಕಲಾಕೃತಿಯಲ್ಲಿ ಜೀವ ತಾಳಬೇಕು. ಹೀಗೆ

ಅನುಭವಕ್ಕೆ ಜೀವಕೊಡಬಲ್ಲ ವ್ಯಕ್ತಿ ಮಾತ್ರ, ಕಲಾವಿದನಾಗಬಲ್ಲ, ಉಳಿದವರು ಆಗಲಾರರು.

ಇದಕ್ಕೆ ಅನುಭವ ವೈಶಾಲ್ಯ ಕಲಾವಿದನಲ್ಲಿರಬೇಕಾದುದು ತೀರ ಅವಶ್ಯ. ಅನುಭವಗಳಿಂದ ಪ್ರೇರಿತವಾಗಿ ಬರುವ ಮಾನಸಿಕ ಅಸಂತೃಪ್ತಿ, ತೃಪ್ತಿ, 'ಅನುಭಾವ' ಇಲ್ಲವೆ 'ದರ್ಶನ' ಎನಿಸುತ್ತದೆ. ಅನುಭವ ಬರತಕ್ಕುದು ನಮ್ಮ ಪಂಚೇಂದ್ರಿಯಗಳಿಂದ. ಕಣ್ಣು ವಿವಿಧ ರೇಖೆ, ಬಣ್ಣ, ಗತಿ, ತೇಜಸ್ಸು, ತಮಸ್ಸುಗಳು ತಮ್ಮದೇ ಆದ ಭಾವಗಳನ್ನು ಅವು ಪ್ರೇರಿಸುತ್ತದೆ. ನಿಸರ್ಗದ ಸಾವಿರಾರು ನೋಟಗಳು, ಬೆಳಕು, ರಾತ್ರಿಗಳ ವಿವಿಧ ಚೆಲ್ಲಾಟಗಳು, ನದಿ, ಕೀಟ, ಗಾಳಿ, ನೀರು ಮುಗಿಲು ಪಶುಪ್ರಾಣಿಗಳ ಚಲನವಲನಗಳು—ಇವೆಲ್ಲ ನಾನಾ ಬಗೆಯಿಂದ ಮನಸ್ಸಿನಲ್ಲಿ ನೂರಾರು ಭಾವಗಳನ್ನು ಪ್ರೇರಿಸುತ್ತವೆ. ಅವನ್ನು ಕಂಡು, ಸುಖ, ದುಃಖ, ಉಕ್ಕು ಸೊಕ್ಕುಗಳೆಲ್ಲ ನಮಗುಂಟಾಗುತ್ತವೆ. ಒಂದೊಂದು ಆಕಾರ ಬಣ್ಣ, ಚಲನಕ್ಕೆ ಒಂದೊಂದು ಬಗೆಯ ಅನುಭವವನ್ನು ಕೊಡುವಂತೆ ಕಾಣುತ್ತದೆ. ನಾದದ ರಾಜ್ಯವೂ ಅಷ್ಟೇ ವಿಚಿತ್ರವಾದ್ದು. ನಿಸರ್ಗದ ಉಲಿಗಳೆಷ್ಟು ವಿವಿಧವಾಗಿಲ್ಲ! ಇನಿದನಿ; ಇಂಚರ, ಕಲರವ, ಘರ್ಜನೆ, ಘೂಂಕಾರ, ಆರ್ಭಟೆ, ಆರ್ತನಾದ—ಎಂದು ಹತ್ತೆಂಟು ಶಬ್ದಗಳಲ್ಲಿ ಮಾತು ಮುಗಿಯುತ್ತದಾದರೂ ಅನುಭವ ಅದನ್ನು ಮುಗಿಸಲಾರದು. ಒಂದೊಂದು ಧ್ವನಿಯಲ್ಲಿಯೂ ಸಾವಿರ ಬಗೆಗಳಿವೆ. ಒಂದೊಂದರಿಂದುಂಟಾಗುವ ಮಾನಸಿಕ ಪರಿಣಾಮ ಅಷ್ಟೇ ವಿವಿಧ ಪಂಚೇಂದ್ರಿಯಗಳು ತರುವ ಇಂಥೆಲ್ಲ ಅನುಭವಗಳನ್ನು ಚಿತ್ರಿಸುವಲ್ಲಿ, ಮಾತುಗಳ ಪಟ್ಟಿ ಬಹಳ ದುರ್ಬಲವಾಗಿ ಕಾಣುತ್ತದೆ. ಸಾಸಿರ ಬಗೆಯ ಗಮನ ಚಿತ್ರಿಸಲು ನೂರು ಶಬ್ದಗಳು ಸಿಗಬಹುದೋ ಏನೊ. ದಶಸಾಸಿರ ಬಣ್ಣಗಳ ಹೆಸರು ಹೇಳಲು ನೂರೆಂಟು ಶಬ್ದಗಳು ಇರಬಹುದು. ಮಾತೇ ದುರ್ಬಲ, ಅಶಕ್ತ—ಎನ್ನುವಷ್ಟು ನಮಗೆ ಕಾಣಿಸಬೇಕು. ಆದರೂ ಅದನ್ನನುಭವಿಸುವ ಮನಸ್ಸು, ತನ್ನ ಸ್ಮರಣಭಂಡಾರದಲ್ಲಿ ಎಲ್ಲವನ್ನೂ ಅಂಕಿತಮಾಡಿಕೊಳ್ಳಬಲ್ಲುದು. ಒಂದು ಅನುಭವವನ್ನು ಇನ್ನೊಂದರೊಡನೆ ಜೋಡಿಸಿ 'ಇದರಂತೆ—ಅದರಂತೆ' ಎಂದು ಅನುಭವದಿಂದ ಅನುಭವಕ್ಕೆ ಸಂಬಂಧ ಕಲ್ಪಿಸಿ, ಭಾವನೆಗಳನ್ನು ಕೂಡಿಸಿ ಕುಣಿಸಬಲ್ಲುದು. ಜೀವನದ ವಿಸ್ತಾರ ಅನುಭವ ಸಾಗರದಲ್ಲಿ ಪಂಚೇಂದ್ರಿಯಗಳು ಗ್ರಹಿಸಬಲ್ಲ ಸ್ಪರ್ಶ, ಶ್ರವಣ, ವಾಸನೆ, ಆಸ್ವಾದನ, ಈಕ್ಷಣ ಶಕ್ತಿಗಳಿಂದ ಅಳೆದು ಸ್ಮರಣೆಯಲ್ಲಿರಿಸಿಕೊಳ್ಳಬಹುದಾದ ಘಟನೆಗಳ ಸಂಖ್ಯೆಯೇ ಕೋಟ್ಯಾಂತರವಾಗಿರುತ್ತವೆ. 'ದೊಡ್ಡವು,' 'ಸಣ್ಣವು' ಎಂಬುದರ ನಡುವೆ—ಇರಿಸಬಹುದಾದ ತೂಕ, ಅಳತೆ ಅಷ್ಟೇ ವಿಶಾಲವಾಗಿರುತ್ತದೆ. ಇವೆಲ್ಲವನ್ನೂ ಮನಸಂಗ್ರಹಿಸಿಡುವಾಗ ತನಗೆ 'ಮುಖ್ಯ' 'ಅಮುಖ್ಯ' ವಾಗಿ ಕಾಣಿಸುವ ವ್ಯವಸ್ಥೆಯಿಂದ ಇರಿಸಿಕೊಳ್ಳುತ್ತದೆ. ಹಿಂದುಮುಂದಿನ ಹಿನ್ನೆಲೆಯನ್ನು ಕಳೆದುಕೊಂಡ ಪುಟ್ಟ ಒಂದು ಘಟನೆ ಅಮುಖ್ಯವೆನಿಸಬಹುದು. ಆ ಗಳಿಗೆಗೆ 'ಆದಿ ಅಂತ್ಯ' ಬದ್ಧವಾದ ಒಂದು ಘಟನೆ ಮುಖ್ಯವೆನಿಸಬಹುದು. ಒಂದು ಗಳಿಗೆಗೆ ಇವೆಲ್ಲವೂ ಅನುಭವಿಸಿದ ವ್ಯಕ್ತಿಯ ಮನದಲ್ಲಿ ತುಂಬಿಕೊಳ್ಳುತ್ತವೆ. ಆಯಾಯ ಗಳಿಗೆಯ ಹಿಗ್ಗುತಗ್ಗುಗಳನ್ನುಂಟು ಮಾಡುತ್ತವೆ. ಆದರೆ ಸ್ಮರಣೆಯ ಉಗ್ರಾಣದಲ್ಲಿ ಒಂದೊಂದೇ ಅನುಭವ ಬಂದು ಕೂಡುವಾಗ, ಒಂದು ಕಾಲಕ್ಕೆ ಅಮುಖ್ಯವಾಗಿ ಕಂಡ ಗುಣ, ವಸ್ತು, ತನಗೆ ಒಪ್ಪಿದ ಇತರ ಅನುಭವಗಳನ್ನು ಸೇರಿಕೊಳ್ಳುವಾಗ, ಇನ್ನೊಂದು ದಿನ ತೀರ ಮುಖ್ಯವೆಂದು ಕಂಡು ಅದು ಮನಸ್ಸಿನ ಶಾಂತಿಯನ್ನೇ ಕೆಡಿಸಬಹುದು. ಹಿಂದೊಮ್ಮೆ ಮುಖ್ಯವೆಂದು ಕಂಡ ವಸ್ತು ಅದಕ್ಕಿಂತ ಸುಂದರವಾದ ವಸ್ತುಗಳ ಜತೆಯಲ್ಲಿ ಬಿದ್ದಾಗ, ತನ್ನ ಶೋಭೆಯನ್ನು ಕಳಚಿಕೊಂಡೀತು. ಅನುಭವದ ಉಗ್ರಾಣ ಎಷ್ಟೆಷ್ಟು ಬೆಳೆಯುತ್ತದೋ, ಅನುಭವಿಸುವ ಶಕ್ತಿ ಎಷ್ಟೆಷ್ಟು ಸೂಕ್ಷ್ಮವಾಗುತ್ತದೆಯೋ, ಆಯ್ಕೆಯ ಗುಣ ಅಷ್ಟಷ್ಟು ಚೆನ್ನಾಗಿ ಬೆಳೆಯುತ್ತದೆ.

ಪ್ರತಿಯೊಂದು ದೃಶ್ಯವನ್ನು ಕಂಡು ಸ್ಫೂರ್ತಿಗೊಳ್ಳುವ ಮನಸ್ಸು, ಹಿಗ್ಗುವ ತಗ್ಗುವ ಮನಸ್ಸು, ತನ್ನಲ್ಲಿ ಕಲೆತ ಪರಸ್ಪರ ಹೊಂದಿಕೆಯುಳ್ಳ ನೂರಾರು ಅನುಭವಗಳನ್ನು, ತನ್ನಂತೆಯೇ ಆರಿಸಿ, ಪೋಣಿಸಿಕೊಂಡಂತೆ ಅದರ ಹಿಗ್ಗುತಗ್ಗು ಮೇರೆ ಮೀರುವಂತಹದ್ದಾಗುತ್ತದೆ. ಒಂದು ನೋವು ಇನ್ನೊಂದು ನೋವನ್ನು ನೆನವರಿಸುತ್ತದೆ. ಆ ಇನ್ನೊಂದು ಮತ್ತೊಂದನ್ನು ಒಂದು ನಗು

ಇನ್ನೊಂದು ನಗುವನ್ನು ಕೂಡಿಕೊಳ್ಳುತ್ತದೆ. ಇನ್ನೊಂದರಿಂದ ಮತ್ತೊಂದು, ಹಾಗೆಯೇ ಅಪಾರ ಸಂತೋಷದ ಉಗಮ. ಕ್ರೋಧ, ಈರ್ಷೆ ಮೊದಲಾದ ಮನೋಭಾವಗಳು ಕಾಲಾನುಭವದ ಸ್ಮರಣೆಗಳಿಂದ ಪುಷ್ಟಿಗೊಂಡು ಇನ್ನಷ್ಟು ಬಲವಾಗುತ್ತವೆ. ಅಸಹ್ಯವನ್ನು ಕಂಡು ಉದ್ರೇಕಗೊಳ್ಳುವ ಮನವಾಗುತ್ತದೆ. ಅನಿವಾರ್ಯತೆಯ ತಿಳಿವಿನಿಂದ ಸಹನೆ ಉಂಟಾಗುತ್ತದೆ. ಬೆಳೆದು ಬಂದ ಅತೃಪ್ತಿಗಳಿಂದ–ಸಂತೃಪ್ತನಾಗುವ ಬಯಕೆ ತಲೆದೋರುತ್ತದೆ. ಒಟ್ಟಿನಲ್ಲಿ ಮನಸ್ಸು–ತನ್ನ ಅನುಭವ ಸಾಮ್ರಾಜ್ಯದಿಂದ, ಸಹ್ಯವಾದುದನ್ನು ಸಹಿಸಲೆತ್ನಿಸುತ್ತದೆ. ಅಸಹ್ಯವಾದುದನ್ನು ತೊಡೆಯಬೇಕೆಂದು ಹಟ ತೊಡುತ್ತದೆ. ಅನಿವಾರ್ಯ ದುಃಖವನ್ನು ಅರ್ಥ ಮಾಡಿಕೊಂಡು ಶಾಂತಿ ತಾಳಲೆತ್ನಿಸುತ್ತದೆ. ಕ್ಷಣಿಕವಾದ ಸುಖವನ್ನು ಬದುಕಿಸಿ, ಹಿಗ್ಗಿಸಿ, ಅನಂತವೂ, ಅಮಿತವೂ ಆಗಿ ಮಾಡಲೆತ್ನಿಸುತ್ತದೆ. ಮನದ ಕತ್ತಲೆಯನ್ನು ಅರ್ಥಾತ್ ಜೀವನದ ಅನುಭವಗಳಲ್ಲಿ ಉಂಟಾದ ಕತ್ತಲೆಯನ್ನು, ಸುಂದರವಾದ ಸನ್ನಿವೇಶಗಳ ಜತೆಗೆ ಹೋಲಿಸಿ ಅವುಗಳ ಬೆಳಕಿಂದ ಕತ್ತರಿಸಬೇಕು ಎಂದು ಮನವಾಗುತ್ತದೆ. ಬಾಳಿಗೆ ಸುಖಬೇಕು, ಸಂತೋಷಬೇಕು, ನಗುಬೇಕು. ಜೀವಿಯ ಪ್ರಯತ್ನವೆಲ್ಲ ಅದರ ಕಡೆಗಿದ್ದಂತೆ ಕಾಣುತ್ತದೆ. ಮನಸ್ಸಿನಲ್ಲಿ ಬೆಳಕು ಕತ್ತಲುಗಳ ಹೋರಾಟ ನಿತ್ಯವೂ ಆಗುತ್ತಿರುತ್ತದೆ. ಅನೇಕ ಮನಸ್ಸುಗಳು ಕತ್ತಲನ್ನು ಅದುಮಿ ಬೆಳಕನ್ನು ಕಾಣುವ ಹಂಬಲದಿಂದ ಪ್ರೇರಿತವಾಗುತ್ತವೆ. ಯಾವುದು ಚಿರ, ಯಾವುದು ಅಚಿರ, ಯಾವುದು ಸತ್ಯ, ಯಾವುದು ಅಸತ್ಯ, ಯಾವುದು ಸುಂದರ, ಯಾವುದು ಹೇಯ–ಎಂಬುದನ್ನು ಹುಡುಕಿ, ತಿಳಿದು ಹಿಗ್ಗಿ ತೇಲಲು ಪ್ರಯತ್ನಿಸುತ್ತವೆ. ಇನ್ನೆಷ್ಟೋ ಮನಸ್ಸುಗಳು—ಕತ್ತಲು ಬೆಳಕುಗಳ ತೂಕ ಮಾಡಿ, ಅಳತೆ ನೋಡಿ, ಕ್ಷಣಿಕ ಜೀವನವನ್ನು ಕಂಡು, ಅವನ್ನು ಸಹಿಸಿ, ಅಮುಖ್ಯವಾಗಿ ಎಣಿಸಿ, ಅವನ್ನು ದಾಟಿ ಮನಸ್ಸಿಗೆ ಶಾಂತಿ ತಂದುಕೊಳ್ಳಲೆತ್ನಿಸುತ್ತವೆ. ಅಂಥವರ ಪಾಲಿಗೆ—ಸುಖ, ಸಂತೋಷವನ್ನು ನಿಲ್ಲಿಸುವುದಕ್ಕಿಂತ ಹೆಚ್ಚಾಗಿ ಸುಖ ದುಃಖಗಳನ್ನು ತೂಗಿ ಅವುಗಳ ಇತಿಮಿತಿ ತಿಳಿದು, ಅರ್ಥವನ್ನರಿತು 'ತನ್ನ'ನ್ನು ಕಟ್ಟಿದ ಬಂಧನಹರಿದು, ಆತ್ಮತೃಪ್ತಿ ತಂದುಕೊಳ್ಳುವ ಆಸೆ ಮುಖ್ಯವಾಗುತ್ತದೆ. ಅದು, ಸತ್ಯವಿರಲಿ, ಅಸತ್ಯವಿರಲಿ,—ಅದನ್ನು ತಿಳಿಯುವುದೇ ಈ ಬಗೆಯ ಜನಕ್ಕೆ ಆನಂದ. ಅದೇನೆ ನೋವು ಪರಿಹರಿಸುವ ಮಾರ್ಗ. ಆದುದರಿಂದ ಅವರಿಗೆ 'ಸತ್ಯವೇ ಸೌಂದರ್ಯ'. ಮೋಹಕವಾದ ವಸ್ತುವನ್ನು ಅವರು 'ಸುಂದರ'ವೆಂದು ತಿಳಿಯುವುದಿಲ್ಲ. ಬದಲು ನಿಜ ಹೇಳುವ ಅನುಭವವನ್ನು 'ಸುಂದರ'ವೆಂದು ತಿಳಿಯುತ್ತಾರೆ.

ಇಂಥೆಲ್ಲ ಮನೋಗುಣಗಳಿಂದ ವ್ಯಕ್ತವಾಗುವ ಸೃಷ್ಟಿ—'ಕಲೆ' ಎಂಬುದು. ಹೀಗಾಗಿ ಬಲ್ಲವರು ಕಲೆಯ ಗುಣವನ್ನು ಹೇಳುವಾಗ "ಮಾನವನನ್ನು ತಾನು ಇದ್ದ ಸ್ಥಿತಿಗತಿಗಿಂತ ಉನ್ನತವಾಗಿ ಎತ್ತುವ ಕೃತಿಯೇ ಕಲೆ" ಎಂದಿದ್ದಾರೆ. ತನ್ನನ್ನು ಆಸೆ ಮೋಹಗಳಲ್ಲಿ ಹಿಡಿದ ಸ್ವಾರ್ಥದ ಯಾವತ್ತು ಅನುಭವಗಳಿಂದ ಸೆಳೆದು ತೆಗೆದು, ಎತ್ತರದಲ್ಲಿ ನಿಲ್ಲಿಸಿ, ತನ್ನ ಮತ್ತು ಪರರ ಅನುಭವಗಳನ್ನು ಸಮತೋಲವಾಗಿ ಅಳೆಯಬಲ್ಲ ದೃಷ್ಟಿಯನ್ನು ಕೊಡಬೇಕಾದುದು ಅವರ ಹಿರಿಮೆ. ಆಗ ಕಲೆ ಸಂತೋಷಕೊಡುವುದಕ್ಕಿಂತ, ಬರಿದೆ ಮನ ಒಲಿಸುವುದಕ್ಕಿಂತ, ಒಂದು ಹೆಜ್ಜೆ ಮುಂದೆ ಹೋಗಿ ಕೆಲಸ ಮಾಡುತ್ತದೆ. 'ನಿಜವನ್ನರಿತೆನು' ಎಂಬ 'ಆನಂದ' ಕೊಡುತ್ತದೆ.

'ಸಣ್ಣದು ದೊಡ್ಡದು' ಎಂಬ ವಸ್ತುಗಳ ನಡುವೆ ಎಷ್ಟು ಸಾವಿರ ನಡುವಣ ಗಾತ್ರದ ವಸ್ತುಗಳಿರಲು ಶಕ್ಯವಿಲ್ಲ! ಹಾಗೆಯೇ 'ಸುಖ, ಆನಂದ'ಗಳ ನಡುವೆ ನೂರಾರು ಅಂತರ, ಆಯಗಳಿರಲೂ ಶಕ್ಯ. ಕಲೆಯ ಅಳತೆ ಆ ಎಲ್ಲ ಅಂತರಗಳ ಮನ್ನಣೆಗೂ ಆಕರ್ಷಣೆಗೂ ತಕ್ಕುದೇ.

ನಾವು ನಮ್ಮ ಅಳತೆಗೆ ತಕ್ಕ ಸೊಲ್ಲನ್ನು ನುಡಿಯಬಲ್ಲೆವು. ಕಲೆಯ ಹಿರಿಮೆ ಕಿರಿತನಗಳೆಲ್ಲ ಕಲಾವಿದನ ಅನುಭವ ವೈಶಾಲ್ಯವನ್ನು ಸೂಕ್ಷ್ಮತೆಯನ್ನು ಹೊಂದಿವೆ. ತನ್ನ ಅಂತರಾಳದ ಅನುಭವದಲ್ಲಿ ಕಂಡುದನ್ನು ಹೇಳುವುದೇ ಅವನ ಕಲೆಯ ಉದ್ದೇಶ. ಅವನ ನಿಲುಮೆ ಎಷ್ಟು ದೊಡ್ಡದೋ, ಅಷ್ಟೇ ಅವನ ಕಲೆ ದೊಡ್ಡದಾಗಬಲ್ಲುದು. ಹೀಗಾಗಿ ಒಂದು ಕಲಾವಸ್ತುವನ್ನು ಇನ್ನೊಂದು ಕಲಾವಸ್ತುವಿನೊಂದಿಗೆ ಹೋಲಿಸುವ ಪ್ರಯತ್ನ ಅವವುಗಳ ಸೃಷ್ಟಿಕರ್ತರನ್ನು ಹೋಲಿಸಿದಂತೆ

ಕಾಣುತ್ತದೆ. ಅವರವರ ಬಾಳು ಅವರವರಿಗೆ. ಪ್ರತಿಯೊಬ್ಬನಿಗೂ ಬಾಳುವ ಹಕ್ಕಿದೆ—ಬಾಳಿನಲ್ಲಿ ಅನುಭವಿಸಿದ್ದನ್ನು ಹೇಳುತ್ತಾರೆ ಅವರು. ಅದು 'ಸಣ್ಣ'ದೇ ಇರಲಿ, 'ದೊಡ್ಡ'ದೇ ಇರಲಿ, ಹೇಳಬೇಕಾದುದು ಅವರವರ ಕರ್ತವ್ಯ. ತನ್ನಲ್ಲಿ ತುಂಬಿ ಬಂದ ಭಾವವನ್ನು ಹೊರಹೊಮ್ಮುವುದು ಮಾನವನ ಸ್ವಭಾವ. ಇಂಥದನ್ನು 'ಹೇಳಬೇಡ' ಎನ್ನುವವರಾರು? ಜನ ಒಪ್ಪಿದ್ದನ್ನು ಸ್ವೀಕರಿಸುತ್ತಾರೆ, ಒಪ್ಪದ್ದನ್ನು ಬಿಡುತ್ತಾರೆ. ಕಲಾವಿದ ತನ್ನ ಬಾಳಿಗೆ ಪ್ರಮಾಣಿಕನಾಗಿ ವರ್ತಿಸಿದರೆ, ಅವನ ಕೆಲಸವಾಯಿತೆಂದು ತಿಳಿಯಬೇಕು. ಪ್ರಮಾಣಿಕತೆ ಕಲೆಯ ಮುಖ್ಯ ಶೀಲ, ಅದೇ 'ಸರ್ವಸ್ವ'ವೆಂದು ನಾವು ತಿಳಿಯಬೇಕಾಗಿಲ್ಲ. ತಪ್ಪು ಒಪ್ಪುಗಳೆರಡರ ವಿಷಯದಲ್ಲಿಯೂ, ಪ್ರಮಾಣಿಕತೆ ಬೆಳೆದು ಬರಬಹುದು. ಅದಕ್ಕೆ ಬೇರೆ ಮದ್ದಿಲ್ಲ. ಕಲಾವಿದ ಪ್ರಮಾಣಿಕನಾಗಿ, ಆದಷ್ಟು ನಿಷ್ಪಕ್ಷಪಾತ ದೃಷ್ಟಿಯಿಂದ ತನ್ನ ಅನುಭವಗಳ ಕಡೆಗೆ ನೋಡಿ, ಹೇಳಬೇಕಾಗುತ್ತದೆ. ಅವನೇನು ಸರ್ವಜ್ಞನಲ್ಲ. ತನ್ನ ತಪ್ಪುಒಪ್ಪನ್ನು ಕಾಣುವ ಜಗತ್ತು ಇದ್ದೇ ಇದೆ; ಅವನ್ನು ಹೇಳುವವರೂ ಇದ್ದಾರೆ. ಅವನದೇ ಹೊಸ ಅನುಭವ, ಹಿಂದೆ ಹೇಳಿದುದು ತಪ್ಪೆಂದು ಅವನಿಗೆ ಹೇಳಬಹುದು. ಆಗ ಅವನ ಕೃತಿಯ ರೂಪ ಮಾರ್ಪಡಬಹುದು.

ಎಲ್ಲ ಬಗೆಯ ಅನುಭವಗಳನ್ನು ಕಲಾವಿದನಾಗಲೀ, ಇನ್ನಾರಾಗಲೀ, ಹೇಳುತ್ತಾರೆಯೇ? ಹೇಳಲೇಬೇಕೇ—ಇದು ಒಬ್ಬೊಬ್ಬರ ಶೀಲಸ್ವಭಾವಗಳನ್ನು ಹೊಂದಿದೆ. ಹೇಳದೆ ಅನುಭವಿಸುವವರು ಕೆಲವರು. ಅನುಭವಿಸಿದ್ದನ್ನು ಹೇಳಬೇಕೆಂದು ಬಯಸುವವರು ಕೆಲವರು. ಕೆಲವರು ಹಾಗೆ ಹೇಳುವುದರಲ್ಲಿ ಶಕ್ತರಾಗುತ್ತಾರೆ, ಹಲವರು ಹೇಳಲು ಅಸಮರ್ಥರಾಗುತ್ತಾರೆ. ಆದರೆ ಹೇಳಬಯಸುವವನಿಗೆ 'ಹೇಳಬೇಕೆ'ಂಬ ಮನೋಭಾವದ ಒತ್ತಡ ಉಂಟಾಗಬೇಕು. ಎಷ್ಟೋ ವಸ್ತುಗಳನ್ನು ನೋಡುತ್ತೇವೆ. ಸಂಗತಿಗಳನ್ನು ಕಾಣುತ್ತೇವೆ. ಅಲ್ಲಲ್ಲಿಯೇ ಅವುಗಳ ವಿಷಯವಾಗಿ ನಮ್ಮ ಕೋಪತಾಪ ಸಂತೋಷಗಳನ್ನು ವ್ಯಕ್ತಮಾಡುತ್ತೇವೆ. ಇಂಥ ಘಟನೆಗಳಿಗೆ ಅಲ್ಲಲ್ಲೆ ಭಾವಪ್ರಕಾಶವನ್ನು ಕೊಡುವ ಕೆಲಸವು ನಡೆದಾಗ, ಕಲೆ ಉಂಟಾಗುವುದಿಲ್ಲ. ಈ ಬಗೆಯ ತಾತ್ಕಾಲಿಕ ಭಾವ ಪ್ರಕಟಣೆಯಿಂದ ಸಮಾಧಾನ ಹೊಂದಲಾರದಷ್ಟು, ನಮ್ಮ ಅನುಭವದ ಆಳ ಹೆಚ್ಚಾಗಬೇಕು. ಅದು ಕಾಲಕಾಲಕ್ಕೆ ನಮ್ಮಲ್ಲಿ ತುಂಬಿಕೊಂಡು, ಹಿನ್ನೆಲೆಯ ಇತರ ಅನುಭವಗಳಿಂದ ಪಕ್ವವಾಗಿ, ಒಳಗೆ ಬಚ್ಚಿಟ್ಟುಕೊಳ್ಳಲಾರದಂತಹ ಆವೇಶವನ್ನು, ಒತ್ತಡವನ್ನು ಒಂದಲ್ಲ ಒಂದು ದಿನ ಪಡೆಯಬೇಕು. ತನ್ನ ಬಲದಿಂದಲೇ ಚಿಲುಮೆ, ಕಾರಂಜಿಗಳ ನೀರಿನಂತೆ, ಸ್ಫುರಿಸಬಲ್ಲ ಶಕ್ತಿಯನ್ನು ಅವುಗಳು ಗಳಿಸಿಕೊಂಡ ಮೇಲೆಯೇ ಅವಕ್ಕೆ ಕಲೆಯ ರೂಪ ಬರವಂಥದು. ಆಗ ಅವು ಸಹಜವೂ, ಸುಂದರವೂ ಆಗಿ ಚಿತ್ರಿತವಾಗಬಲ್ಲುವು. ಬರಿಯ ಜಾಣ್ಮೆಯಿಂದ, ಮಿದುಳಿನ ಯೋಜನೆಯಿಂದ, ಪ್ರಚಾರದ ಬಲವಂತದಿಂದ, ಪಾಂಡಿತ್ಯ ಪ್ರದರ್ಶನದ ಹುಚ್ಚಿನಿಂದ, ಜಗತ್ತನ್ನುದ್ಧರಿಸಬೇಕೆಂಬ ಲವಲವಿಕೆಯಿಂದ, ಕಲೆ ಮೈಯೊಡೆಯಲಾರದು, ಮುಖ ತಾಳಲಾರದು. ಹಾಗೆ ತಾಳಿದಲ್ಲಿ ಅದಕ್ಕೆ ಕಲಾಸ್ವರೂಪವೂ ಬರಲಾರದು. ಹೊರಗಿನ ಯಾವ ಉದ್ದೇಶವೂ ಕಲಾಕೃತಿಗಳನ್ನು ಹುಟ್ಟಿಸುವುದಿಲ್ಲ. ಬಚ್ಚಿಟ್ಟುಕೊಳ್ಳಲಾರದ ಅದುಮಿ, ಹಿಡಿಯಲಾರದ, ಅನುಭವಗಳ ಆಂತರಿಕ, ಆವೇಶ ಒತ್ತಡಗಳೇ—ಅದಕ್ಕೆ ಜೀವಕೊಡಬೇಕು. 'ಕಲೆಗಾಗಿ ಕಲೆ' ಎಂಬ ಮಾತಿನ ಅರ್ಥ ಇದು. ಗುಲಾಬಿ, ಸೇವಂತಿಗೆ ಗಿಡಗಳು ಹೂವನ್ನೇಕೆ ಬಿಡುತ್ತವೆ—ಎಂದರೆ 'ದೇವರ ಪೂಜೆಗಾಗಿ' 'ನಾರಿಯರ ಮುಡಿಯನ್ನೇರುವುದಕ್ಕೆ' 'ಮೇಜಿನ ಮೇಲೆ ಹೂದಾನಿಯಲ್ಲಿರುವುದಕ್ಕೆ—' ಎಂಬುದು ಉತ್ತರಗಳಲ್ಲ. ಅದು ಹೂವನ್ನು ಬಳಸುವವರ ದಾರಿ. ಗಿಡದ ದಾರಿಯಲ್ಲ. ಗುಲಾಬಿ, ಸೇವಂತಿಗೆಗಳಿಗೆ ಹೂಬಿಡುವುದು ಸ್ವಭಾವ. ತಮ್ಮಲ್ಲಿನ ಸಾರಸರ್ವಸ್ವವನ್ನು ಹೀಗೆ ವ್ಯಕ್ತಮಾಡಿ ಅನುಭವ ಚಿರಂತನತೆಯನ್ನು ಅವು ಉಂಟುಮಾಡುತ್ತವೆ. ಒಂದೊಂದು ಬಗೆಯ ಗಿಡ ಒಂದೊಂದು ಬಗೆಯ ಹೂ ಬಿಡುವಂತೆ ಒಂದೊಂದು ಬಗೆಯ ಬಾಳು ತನ್ನ ಅನುಭವದಿಂದ ಪ್ರೇರಣೆಗೊಂಡ ಒಂದೊಂದು ಹೂವನ್ನು ಅರಳಿಸೀತು.

ಅರಳುವುದಕ್ಕೂ ಒಂದು ಗಳಿಗೆಯಿದೆ. ಕಾಲವಿದೆ. ಅದು ಕಲಾವಿದನ ಜೀವನವನ್ನು ಹೊಂದಿಕೊಂಡದ್ದು. ನದಿಯನ್ನು ಕಂಡಾಗಲೇ ಕವನ ಹುಟ್ಟಬೇಕೆಂದಿಲ್ಲ. ಲಾವಣ್ಯ ಕಂಡಾಗಲೇ ಕಾವ್ಯ ಜನಿಸ

ಬೇಕೆಂದಿಲ್ಲ. ಒಳಗೆ ತುಂಬಿದ ಅನುಭವ ನಿಜವಾದರೂ, ಬಲವಾದರೂ, ಅನುಕೂಲ ಆವರಣ ದೊರಕಿದಾಗ ಅನುಕೂಲ ಮಾನಸಿಕ ಹಿಗ್ಗು ಉದ್ರೇಕ ಉಂಟಾದಾಗ ಮಾತ್ರ—ಕಲಾವಿದ ಕುಚ್ಚು ಹಿಡಿಯುತ್ತಾನೆ. ಲೇಖನಿ ಓಡಿಸುತ್ತಾನೆ. ಆವೆ ಮಣ್ಣನ್ನು ತೀಡುತ್ತಾನೆ. ರಾಗ ಲಹರಿ ಹೊರಡಿಸುತ್ತಾನೆ.

ಹೀಗೆ ತನ್ನಲ್ಲಾದ ಭಾವನೆಗಳಿಗೆ ಬಿಂಬಸ್ವರೂಪ ಕೊಡಲು ಯಾವ ದಾರಿ ಒಳಿತು–ಎಂಬುದು ಕಲಾವಿದ ನಿಗೆ ತನ್ನಂತೆಯೇ ಸೂಚಿಸಬಹುದು. ಇಲ್ಲವೆ ಅಭ್ಯಾಸ ಬಲದಿಂದ ಬರಬಹುದು. ಕೆಲವರ ಪಾಲಿಗೆ ಬರವಣಿಗೆ ದಾರಿಯಾಗುತ್ತದೆ; ಭಾಷೆ ಸಾಧನವಾಗುತ್ತದೆ. ಕೆಲವರಿಗೆ ಗಾನವೋ ಇನ್ನು ಕೆಲವರಿಗೆ ಚಿತ್ರಕಲೆ, ಶಿಲ್ಪಗಳೋ ತಕ್ಕ ಸಾಧನವಾಗಿ ತೋರಬಹುದು. ಒಬ್ಬೊಬ್ಬ ಒಂದೊಂದು ದಾರಿಯನ್ನು ಹಿಡಿಯುತ್ತಾನೆ. ಅದರಲ್ಲೇ ತನ್ನ ಭಾವನೆಗಳನ್ನು ವ್ಯಕ್ತಮಾಡಲು ಅಭ್ಯಸಿಸಿ ಮುಂದುವರಿಯಬಹುದು. ಒಂದು ಭಾವನೆಗೆ, ಇಂಥ ದಾರಿ ತಕ್ಕುದಲ್ಲ, ಇಂಥದು ತಕ್ಕುದು–ಎಂದು ಸಾಧನವನ್ನು ಬದಲಿಸಬಹುದು. ಯಾವುದು ತಕ್ಕದು ಯಾವುದು ತಕ್ಕುದಲ್ಲವೆಂದು ಅವನ ಅನುಭವ ತಿದ್ದಿ ಹೇಳಬಲ್ಲುದು. ವಿಷಯ ಭಾವನೆಗಳನ್ನು ಹೊಂದಿರುತ್ತದೆ. ಸಾಧನ ಭಾವನೆಗಳನ್ನು ಹೊಂದಿರಬೇಕು. ಗೀತಕ್ಕೊಲಿಯುವ ಭಾವಗಳುಂಟು, ಚಿತ್ರಕ್ಕೊಪ್ಪುವ ಭಾವಗಳುಂಟು, ಕಾವ್ಯಕ್ಕೊಪ್ಪುವವುಂಟು. ಈಗಿರುವ ಸಾಧನಗಳನ್ನೆಲ್ಲ ಅಲ್ಲಗಳೆದು ತನ್ನದೇ ಆದ ನವೀನ ದಾರಿಯನ್ನು ಕಂಡು ಹಿಡಿಯುವ ಮನಸ್ಸುಗಳೂ ಉಂಟು. ಎಲ್ಲ ಸಾಧನ ಮಾನವ ನಿರ್ಮಿತವಷ್ಟೆ. ವಾಲ್ಟ್‌ಡಿಸ್ನಿ ತನ್ನದೇ ಆದ ಹೊಸ ದಾರಿಯನ್ನೇ ಚಿತ್ರಪಟಲದಲ್ಲಿ ಕಂಡುಕೊಂಡ. ಹಾಗೆ ಇನ್ನೊಬ್ಬ ಇನ್ನೊಂದೇ ಹೊಸ ದಾರಿ ಕಂಡು ಹಿಡಿಯಬಹುದು. ಅದರ ಔಚಿತ್ಯ ಎಲ್ಲಿ? ಯಾವುದು?

ಈ ಪ್ರಶ್ನೆಗಳು ಸೃಷ್ಟಿಯಾಗಲಿರುವ ಕೃತಿಯನ್ನೇ ಹೊಂದಿದೆ. ಕೃತಿಯನ್ನು ಬಿಟ್ಟು, ಅದಕ್ಕೆ ಸಂಪೂರ್ಣ ವ್ಯಕ್ತರೂಪ ಕೊಡುವ ಧರ್ಮವನ್ನು ಬಿಟ್ಟು, ಪ್ರತಿಯಾದ 'ಧರ್ಮ' ಸಾಧನಕ್ಕಿಲ್ಲ. ಚಮತ್ಕಾರ ಪ್ರದರ್ಶನಕ್ಕೋ ನಡುಕು ಉಂಟುಮಾಡುವುದಕ್ಕೊ (to Shock) ಪಾಂಡಿತ್ಯ ಪ್ರದರ್ಶನಕ್ಕೋ, ವ್ಯಾಕರಣ ವಿಸ್ಮರಣೆಗೋ ಯಾವ ಕಲಾಸಾಧನವೂ ನಿಂತಿಲ್ಲ. ಅವು ಕಲಾನಿಯಮಕ್ಕೆ ಬಾಹ್ಯದಾರಿಗಳು. ಭಾವಕ್ಕೊಪ್ಪದ ಬಿಂಬ–ಕಲೆಯಲ್ಲ; ಅದು ಎಂದೂ ಸುಂದರವೆನಿಸಿಕೊಳ್ಳುವುದಿಲ್ಲ. ಕಲಾಸಾಧನಕ್ಕೆ ಸ್ವತಂತ್ರವಾದ ಸೌಂದರ್ಯವೆಂಬುದಿಲ್ಲ. ಮನಸ್ಸನ್ನು ಪ್ರಕಟಿಸುವ ಮುಖ ಅದಕ್ಕೆ ಬೇಕು. ಒಳಗಿನ ಮನವನ್ನು ಬಿಚ್ಚಿ ಹೇಳಲಾರದ ಮುಖ–ಅಸಂಗತ. ಅಂಥ ದಾರಿಯು ನಿಂದ್ಯ, ಅಸುಂದರ. ಆದುದರಿಂದ ಕಲೆಯಲ್ಲಿ ಮುಪ್ಪಿನ ಚಿತ್ರವೂ, ಬೇನೆಯ ಚಿತ್ರವೂ, ಸಾವಿನ ಚಿತ್ರವೂ, ತಾರುಣ್ಯ ಯೌವನ ಸುಖ ಸಂತೋಷದ ಚಿತ್ರಗಳಷ್ಟೇ ಚೆನ್ನಾಗಿರಬಲ್ಲುವು. ಹೇಳುವ 'ವಸ್ತು'ವಿಗೆ ತಕ್ಕ ರೂಪವೇ ಸುಂದರವಾದದ್ದು. ಬೇನೆ ಬಿದ್ದ ಬಡ ಜೀವನವನ್ನು ಬಣ್ಣಿಸುವಲ್ಲಿ, ಆ ಚಿತ್ರ ಕೊಡಬಲ್ಲ ಮಾತೇ, ಬಣ್ಣವೇ ಅನುತಾಪ ಹುಟ್ಟಿಸಬಲ್ಲ ರೇಖೆ ಲಾವಣ್ಯಗಳೇ 'ಸೌಂದರ್ಯ'ವೆನಿಸುತ್ತದೆ. ಬದಲು ವೈಯಕ್ತಿಕ ಸೌಂದರ್ಯವನ್ನು ಬಣ್ಣಿಸಿ, ಅದರ ಭರದಲ್ಲಿ ಬೇನೆ ಬಿದ್ದವನ ನೋವನ್ನು ಮರೆಯಿಸುವ ದಾರಿ, ಅವನ ವಿಷಯದಲ್ಲಿ ಮರುಕಹುಟ್ಟಿಸುವ ಕೆಲಸವನ್ನು ಅಡಗಿಸುವ ಅಥವಾ ವಿಷಯ ಮರೆಯಾಗುವಂತೆ ಮಾಡುವ ಕೃತಿಕಾರನ ಜಾಣ್ಮೆಯನ್ನು ಮೆರೆಯಿಸುವಂತೆ ಮಾಡುವ ಯಾವತ್ತು ದಾರಿಗಳು 'ಸುಂದರ'ವಲ್ಲದುವು. ಕಲೆಯ ಪಾಲಿಗೆ ಅವು ನಿಂದ್ಯವಾದುವು. ಸಂಗೀತ ಶಾಸ್ತ್ರ, ಚಿತ್ರಶಾಸ್ತ್ರ, ವ್ಯಾಕರಣ ಅಲಂಕಾರಗಳು ಇವೆಲ್ಲ ಸ್ವತಂತ್ರವಾದ ವಸ್ತುಗಳಲ್ಲ. ಉದ್ದೇಶಕ್ಕೆ ಅನುವರ್ತಿಯಾದ ಆಳುಗಳು. ಉದ್ದೇಶವನ್ನು 'ಮೆರೆಯಿಸು'ವುದು ಅವುಗಳ ಕೆಲಸವೇ ಹೊರತು, 'ಮರೆಯಿಸು'ವುದಲ್ಲ.

ಕಲೆಗೆ ಸಂಬಂಧಿಸಿದ ಮೂರು ಅಂಗಗಳಲ್ಲಿ ವಸ್ತು ಮತ್ತು ಸಾಧನ ಎಂಬ ಎರಡನ್ನು ಕುರಿತು ಹೇಳಿದ್ದಾಯಿತು. ಇನ್ನು ಮೂರನೆಯ ಅಂಗ-ಪ್ರೇಕ್ಷಕನ ವಿಚಾರ ತಿಳಿಯುವ.

ಕಲಾಭಾವ ತನ್ನಲ್ಲಿ ಒತ್ತಿ ಹಿಡಿಯಲಾರದ ಶಕ್ತಿಯೆಂದೂ ಸ್ವತೃಪ್ತಿಗಾಗಿ ಅದನ್ನು ವ್ಯಕ್ತಮಾಡುವುದೇ ಕಲಾವಿದನ ಶೀಲವೆಂದೂ ಹೇಳಿದ್ದಾಯಿತು. ಆದರೆ ಕಲಾವಿದ ಸಾಮಾಜಿಕ ಜೀವಿ ಎಂಬುದನ್ನು ನಾವು

ಮರೆಯಬಾರದು. ಕೇಳುವವರಿಲ್ಲದೆ ಹೋದರೆ ಹೇಳಬೇಕೆಂಬ ಶೀಲ ಮನಸ್ಸಿನಲ್ಲಿಯೇ ಉಂಟಾಗುತ್ತಿರಲಿಲ್ಲ. ತನ್ನ ಭಾವನೆ ಯೋಚನೆಗಳನ್ನು ಹೆರರೊಡನೆ ಹಂಚಿ ಉಣ್ಣುವುದು ಮನುಷ್ಯನಿಗೆ ಸ್ವಭಾವವಾಗಿ ಬಂದಿದೆ. ಅಂತಹ ಸಮಾಜದಲ್ಲಿ ಬೆಳೆದ ಮನುಷ್ಯ ತನ್ನ ಯಾವತ್ತು ಅನುಭವಗಳನ್ನು ತನ್ನ ಸುತ್ತಲಿನ ಜನಕ್ಕೆ ಹೇಳಬಯಸುವುದು ಸ್ವಭಾವ. ಜನ ಕೇಳಲಿ, ಕೇಳದಿರಲಿ—ಆತ ಹೇಳದೆ ಉಳಿಯಲಾರ. ಜನ ಅವನ ಹೇಳಿಕೆಗಳನ್ನು ಕೇಳಿ ತೃಪ್ತಿಗೊಂಡರೆ ತಾನು ಇನ್ನಷ್ಟು ಕೃತಕೃತ್ಯನೆಂದು ತಿಳಿಯುತ್ತಾನೆ. ಅವನ ಅನುಭವಗಳಿಂದ ಜನಜೀವನ ಇನ್ನಷ್ಟು ಸೊಗಯಿಸುವುದು ಆಗ ಸಾಧ್ಯ. ಇಲ್ಲದೆ ಹೋದರೆ—ಅವರೇ ಬಡವರು; ಅವನಲ್ಲ.

ಹೇಳುವ ವಿಚಾರ ಜನಕ್ಕೆ ತಿಳಿಯಬೇಕಾದರೆ—ಅವನು ಬಳಸುವ ಸಾಧನ ಎಷ್ಟೆಷ್ಟು ಜನ ಪರಿಚಿತವಾದದ್ದಿರುತ್ತದೋ ಅಷ್ಟಷ್ಟು ಸುಲಭವಾಗುತ್ತದೆ. ಇಲ್ಲದೆ ಹೋದರೆ ಇಲ್ಲ. ಕಾವ್ಯದಲ್ಲಿ ಆಡುವ ಭಾಷೆಯೂ, ಅದರ ಲಕ್ಷಣಗಳೂ, ಶಿಲ್ಪಶಾಸ್ತ್ರ, ಚಿತ್ರಶಾಸ್ತ್ರ, ಸಂಗೀತಶಾಸ್ತ್ರ ಎಲ್ಲವೂ ಪರಂಪರೆಯಿಂದ ಬಂದಿದ್ದು ಜನ ಒಪ್ಪಿದ ರೂಢಿಯನ್ನನುಸರಿಸಿಕೊಂಡಿದ್ದು, ಜನ ಪರಿಚಯಕ್ಕೆ ಸಾಧ್ಯವಾಗುತ್ತದೆ. ಹೀಗಾಗಿ ಕಲೆ ಸಾಧನಗಳ ಮೇಲೆ ಸಂಪ್ರದಾಯದ ಮುದ್ರೆ ಬಲವಾಗಿರುತ್ತದೆ. ಸಂಪ್ರದಾಯ ಪಾಲಿಸಿಕೊಂಡಿರುವುದು ರೂಢಿಯಿಂದ ತಿಳುವಳಿಕೆ ಬರಲು. ಜನಸಮುದಾಯಕ್ಕೆ ಅದರ ಪರಿಚಯ ಸುಲಭವಾಗಲು. ಆದುದರಿಂದ ಸಂಪ್ರದಾಯ ಬದ್ಧವಾದ ಶೈಲಿಗಳಿಗೆ ಹೆಚ್ಚಿನ ಪ್ರಾಶಸ್ತ್ಯಕೊಡುತ್ತಾರೆ. ಹಾಗೆ ಕೊಡುವುದೊಂದು ತಪ್ಪಲ್ಲ. ಆದರೆ ಜನಜೀವನದ ಪ್ರಗತಿಪರ ಪ್ರವಾಹಕ್ಕೆ, ಕೇವಲ ಸಂಪ್ರದಾಯವೇ ಸಹಾಯವಾಗುವುದಿಲ್ಲ. ಅನೇಕ ವೇಳೆ ಅದು ತಡೆಯಾಗಲೂ ಬಹುದು. ಸಂಪ್ರದಾಯ, ಅತಿ ಮನ್ನಣೆಗಳಿಂದ, ಅಂಧಶ್ರದ್ಧೆಯಿಂದ—ಶೃಂಖಲೆಯಾಗುವುದುಂಟು. ಹಾವು ಕಾಲಕ್ಕೆ ತಕ್ಕಂತೆ ಹಳೆಯ ಪರೆ ಕಳಚಿ, ಹೊಸ ಪರೆ ತೊಡುವಂತೆ, ಸಂಪ್ರದಾಯವಾದರೂ ಕಾಲಕ್ಕೆ ತಕ್ಕ ಪರೆ ತೊಡಬೇಕಾಗುತ್ತದೆ. ಇದು ಎಂಥ ಬದಲಾವಣೆ, ಹೇಗಿರಬೇಕು ಎಂದು ಹೊರಿಸುವವರಾರು? ವಿಧಿಸುವವರಾರು?

ಆ ಕೆಲಸ ಮಾಡಬಲ್ಲವರು ಕಲೆಯಿಂದ ದೂರವಾಗಿ ನಿಲ್ಲಬಲ್ಲ ಶಾಸ್ತ್ರಕಾರರಲ್ಲ. ತನ್ನ ವಿಷಯಕ್ಕೆ ಭಾವಕ್ಕೆ ಯಾವ ಮೈರೂಪಬೇಕು ಎಂದು ನಿರ್ಣಯಿಸುವ ಯೋಗ್ಯತೆ ಮೂರನೆಯವರಿಗೆ ಬರಲಾರದು. ಅದು ಅನುಭವಿಸಿ ಹೇಳಬಲ್ಲ ಕಲಾವಿದನ ಕೆಲಸ. ಸಂಪ್ರದಾಯ ಬದಲಿಸಬೇಕೇ? ಹೊಸತೇ ಆದ ಸಂಪ್ರದಾಯ ತೊಡಗಬೇಕೇ? ಸಂಪ್ರದಾಯಕ ದಾರಿಯಲ್ಲಿ ಇರುವ ಅನುಕೂಲತೆಗಳಾವುವು? ಬರುವ ತೊಡಕುಗಳಾವುವು—ಎಂಬುದನ್ನು ಯೋಚಿಸಿ ನಿರ್ಣಯಿಸಲು ಯೋಗ್ಯನಾದವನು, ಕಲಾವಿದನಲ್ಲದೆ ಅನ್ಯರಲ್ಲ. ಆತ ತನ್ನ ಭಾವನೆಗಳಿಗೆ—ಕಾಲಕ್ಕೂ, ವಿಷಯಕ್ಕೂ ತಕ್ಕ ರೂಪ ಕೊಟ್ಟಾನು. ಜನ ತಿಳಿಯಬೇಕೆಂದು ಅವನಿಗೂ ಆಸೆ. ತಿಳುವಳಿಕೆಗೆ ಎಟಕದ ದಾರಿಯನ್ನು ಅವನು ಹಿಡಿದರೆ ಅವನಿಗೇನೇ ತೊಡಕು. ಕೆಲವೊಂದು ಹೊಸ ಮಾರ್ಗಗಳಿಂದ ಕೆಲಸ ಸುಲಭ ಸಾಧ್ಯವಾಗುವುದಾದರೆ, ಆತ ಅದಕ್ಕೆ ಮುಂದುವರಿಯುತ್ತಾನೆ. ಅದರಲ್ಲಿ ಒಳಗಿನ ತಿರುಳು ಬಲವಾಗಿದ್ದರೆ, ಹೊಸ ಅಂಗಿ ಧರಿಸಿದಾಗಲೂ, ಅದರ ಪರಿಚಿತಿ ಸಾಲದಾಗಲೂ, ಜನ ಅದನ್ನು ತಿಳಿಯುತ್ತಾರೆ. ರೂಢಿಯಿಂದ ಹೊಸ ಮಾರ್ಗ ಹಳೆಯ ಮಾರ್ಗದಷ್ಟೇ ಪರಿಚಿತವಾಗುತ್ತದೆ. ಅದನ್ನು ಮೀರಿಯೂ—ಜನ ತಿಳಿಯದೆ ಹೋದರೆ 'ತಿಳಿಯುವ ಕಾಲ ಒಂದು ಬಂದೀತು' ಎಂದು ಕಲಾವಿದನು ಆಸೆ ಮಾಡಬೇಕಾಗುತ್ತದೆ.

ಹೇಳುವ ದಾರಿ ಹೊಸತಾದರೆ, ತಿಳಿಯಲು ಕಷ್ಟವಾಗುವಂತೆಯೇ ಹೇಳಿದ ವಿಷಯ ಹೊಸ ಅನುಭವವಾದರೆ ಜನಕ್ಕೆ ಅದು ರುಚಿಸದೆ ಹೋಗಬಹುದು. ಜನ ಮೆಚ್ಚಬೇಕೆಂಬುದು ಕಲಾವಿದನ ಆಸೆಯಾದರೂ 'ಮೆಚ್ಚಿಸುವ ಉದ್ಯೋಗ'ಕ್ಕೆ ತನ್ನ ಸತ್ಯಾನುಭವಗಳನ್ನು ಬಳಸುವ ಮೂರ್ಖ ಅವನಾಗಬಾರದು. ಡೊಂಬರಾಟದಿಂದ ಜನ ಮೆಚ್ಚುತ್ತಾರೆ. ಅಶ್ಲೀಲ ಶೃಂಗಾರವನ್ನು ಜನ ಮೆಚ್ಚುತ್ತಾರೆ; ಅದರ ಮಟ್ಟಕ್ಕೆ ಕಲಾವಿದ ಇಳಿಯುವುದಲ್ಲ, ತನ್ನ ಮಟ್ಟಕ್ಕೆ ಅವರನ್ನು ಎಳೆದು ತರಲು ಪ್ರಯತ್ನಿಸಬೇಕು.

'ಎಲ್ಲ' ಕಲೆಗಳನ್ನೂ 'ಎಲ್ಲ' ಜನಗಳು ತಿಳಿಯ

ಬಲ್ಲರೇ? 'ಎಲ್ಲ' ಎಂಬ ಮಾತೇ ಅಸ್ಪಷ್ಟವಾದುದು. ಅದನ್ನು ಬಳಸುವಾಗ—'ನಮಗೆ ತಿಳಿದ ಎಲ್ಲ' ಎಂಬದೇ ಅದರ ಅರ್ಥ. ನಾವು ಕಂಡ ಪ್ರಪಂಚ ಆ ಮಿತಿಯನ್ನುಂಟು ಮಾಡುತ್ತದೆ. ನಾವು ಕಂಡ ಅನುಭವ—ಅದರ ಮಿತಿ, ಅದರ ಪರಿಚಿತಿಗಳು ಪ್ರೇಕ್ಷಕ, ಶ್ರೋತಾರ ವರ್ಗದ 'ಎಲ್ಲ' ಎಂಬ ಅರ್ಥವನ್ನೂ ನಿರ್ಣಯಿಸಬೇಕಾಗುತ್ತದೆ. ಈ ಎಲ್ಲ 'ಸಣ್ಣ'ದು. ಕಲಾಭಾವ ಎಷ್ಟು ಎಷ್ಟು ದೊಡ್ಡದಾಗುತ್ತದೋ, ಅದನ್ನು ಪ್ರೇರಿಸುವ ಅನುಭವ ಎಷ್ಟು ಎಷ್ಟು ಅಪೂರ್ವವಾಗುತ್ತದೋ—'ಎಲ್ಲ' ಎಂಬ ಮಾತು, ಅದನ್ನು ತಿಳಿಯಬಲ್ಲ 'ಸ್ವಲ್ಪ' ಜನವನ್ನೇ ಸೂಚಿಸುತ್ತದೆ. ಕಲಾವಿದ 'ಎಲ್ಲ' ಎಂಬುದನ್ನು ಸಂಖ್ಯೆ, ಗಾತ್ರಗಳಿಂದ ಎಣಿಸಬಾರದು. ತೂಕ, ಗುಣ, ತೀಕ್ಷ್ಣತೆಗಳಿಂದ ಎಣಿಸಬೇಕು.

ಜಗತ್ ವಿಖ್ಯಾತನಾದ ಕಾಳಿದಾಸನ ನಿಕಟ ಪರಿಚಯ—ಯಾವಾವ ಕಾಲಗಳಲ್ಲಿ ಯಾವಾವ ದೇಶಗಳಲ್ಲಿ—ಎಷ್ಟೆಷ್ಟು ಜನಕ್ಕೆ ಆಗಿದೆ ಎಂಬುದನ್ನು—ಜನಸಂಖ್ಯೆಯ ಮಾನದಿಂದ ಅಳೆದು ನೋಡುತ್ತೀರಾ!



ಭಾರತೀಯ ಧರ್ಮದ ಮಹತ್ವ ಮತ್ತು ರಹಸ್ಯ

(ದರ್ಶನಗಳು ಮತ್ತು ವಿಶೇಷರೂಪದಲ್ಲಿ ವೇದಾಂತಶಾಸ್ತ್ರಗಳು
ಇವುಗಳ ವಿಮರ್ಶೆಯೇ ಈ ಲೇಖನದ ಆಧಾರ.)

ಎಚ್. ಎಸ್. ರಾಘವೇಂದ್ರಾಚಾರ್, ಘಟಪ್ರಭ

I. ಭಾರತೀಯ ಧರ್ಮ ಮತ್ತು ಅದರ ಮಹತ್ವ:—

ಭಾರತಖಂಡದ ನಾಗರಿಕತೆಯು ಅದಕ್ಕೆ ಅಸಾಧಾರಣವಾದ ಮಹತ್ವವುಳ್ಳದ್ದು. ಈ ನಾಗರಿಕತೆಗೆ ಸಂಬಂಧಪಟ್ಟುದು ಭಾರತೀಯವೆನಿಸುವುದು. ಭಾರತೀಯ ಧರ್ಮವೆಂದರೆ ಭರತಖಂಡದ ಅಸಾಧಾರಣ ನಾಗರಿಕತೆಗೆ ಆಧಾರವಾದ ಧರ್ಮ.

ಧರ್ಮಎಂಬುದು ಸಂಸ್ಕೃತಪದ. ಧಾರಕತ್ವಾತ್ ಧರ್ಮ: ಎಂದು ಅದರ ವ್ಯುತ್ಪತ್ತಿ. ಜೀವನವನ್ನು ಧರಿಸುವುದು ಯಾವುದೋ ಅದು ಧರ್ಮವೆಂದು ಇದರ ಅಭಿಪ್ರಾಯ. ಜೀವನವನ್ನು ಧರಿಸುವುದೆಂದರೆ ಜೀವನಕ್ಕೆ ಪ್ರವರ್ತಕವಾಗಿ ಅದರ ಸ್ಥಿತಿಗೆ ಕಾರಣವಾಗಿರುವುದು. ಜೀವನ ಎಂದರೆ ಪ್ರಕೃತ ಮಾನುಷ ಜೀವನ. ಮಾನುಷ ಎಂಬುದು 'ಮಜ್ ಅವಬೋಧನೆ' ಎಂಬ ವ್ಯುತ್ಪತ್ತಿಯುಳ್ಳದಾಗಿ ಜ್ಞಾನದ ಸಂಬಂಧವನ್ನು ತೋರಿಸುವುದು. ಮಾನುಷಜೀವನವೆಂದರೆ ಜ್ಞಾನಕ್ಕೆ ಸಂಬಂಧಪಟ್ಟ ಜೀವನ. ಪ್ರಕೃತ ಜ್ಞಾನವೆಂದರೆ ತತ್ತ್ವಜ್ಞಾನ. ಇದಕ್ಕೆ ಸಾಧನ ತತ್ತ್ವವಿಚಾರ ಒಂದೇ. ಇದರ ಪ್ರಭಾವದಿಂದಲೇ ಎಂದರೆ ಇದು ಜೀವನದಲ್ಲಿ ಸಾಧ್ಯವಾಗಿ ಸಾಧನವಾಗಿ ನಾನಾ ರೂಪದಲ್ಲಿ ಅಡಗಿರುವುದರಿಂದಲೇ ಮನುಷ್ಯನು ಮನುಷ್ಯನೆನಿಸಿದುದು. ಉಚ್ಚಾವಸ್ಥೆಯಲ್ಲಿ ಇದೇ ಮನುಷ್ಯರಲ್ಲಿರುವ ದೈವೀ ಸಂಪತ್ತು. ಇದೇ ಸೃಷ್ಟಿಯಲ್ಲಿ ಮನುಷ್ಯನಿಗಿರುವ ಪಾವಿತ್ರ್ಯ. ಒಟ್ಟಿನಲ್ಲಿ ಮನುಷ್ಯಜೀವನ ಜ್ಞಾನಜೀವನ. ಇದಕ್ಕೆ ಪ್ರವರ್ತಕವಾಗಿ ಪ್ರತಿಷ್ಠಾಪಕವಾಗಿರುವುದೇ ಧರ್ಮ. ಬಾದರಾಯಣರು 'ಹೃದ್ಯಪ್ರೇಕ್ಷಯಂತು ಮನುಷ್ಯಾಧಿಕಾರತ್ವಾತ್' ಎಂಬ ಬ್ರಹ್ಮಸೂತ್ರದಲ್ಲಿ ಬ್ರಹ್ಮವಿದ್ಯೆಯು ಮನುಷ್ಯಾಧಿಕಾರಿಕ ಎಂದರೆ ಬ್ರಹ್ಮವಿದ್ಯೆಗೆ ಮನುಷ್ಯನೇ ಅಧಿಕಾರಿ ಎಂದು ಸಮರ್ಥಿಸಿ ದೇವತೆಗಳೇ ಪರ್ಯಾವಸಾನದಲ್ಲಿ ಮನುಷ್ಯಶಬ್ದಾರ್ಥವೆಂದು ನಿರೂಪಿಸಿರುವರು. ಈ ಸಂದರ್ಭದಲ್ಲಿ ದೇವತೆ ಎಂದರೆ ಒಂದು ವಿಶಿಷ್ಟಾರ್ಥವಿರುವುದು. ಜ್ಞಾನಿತ್ವವೇ ದೇವತ್ವ. ಜ್ಞಾನಪ್ರವರ್ತಕರು ಮತ್ತು ಜ್ಞಾನನಿಷ್ಠರೇ ದೇವತೆಗಳು. ತತ್ತ್ವಜ್ಞಾನವಿಲ್ಲದೆ ಪ್ರಕೃತವಾದ ದೇವತೆಯು ಜ್ಞಾನನಿಷ್ಠ ಮತ್ತೂ ಜ್ಞಾನಪ್ರವರ್ತಕ ಎಂಬ ಅನುಸಂಧಾನವಿಲ್ಲದ ಕಾಲದಲ್ಲಿ ನಾವು ಮಾಡುವ ದೇವತಾಪೂಜೆ ನಿರರ್ಥಕ ಮತ್ತು ಸ್ವಾರ್ಥಪರತೆಯ ಹೆಗ್ಗುರುತು.

ಈ ವಿಚಾರಗಳು ಯಾವತ್ತೂ ಜೀವನಕ್ಕೆ ಪ್ರವರ್ತಕ ಮತ್ತು ಅದರ ಸ್ಥಿತಿ ಸಂಪಾದಕವಾದುದು. ಜ್ಞಾನ ಎಂದರೆ ತತ್ತ್ವಜ್ಞಾನವೆಂಬ ಭಾವವನ್ನು ಸೂಚಿಸುವುದು. ಇದರಿಂದ ತತ್ತ್ವಜ್ಞಾನವೇ ಧರ್ಮವೆಂದು ಸಿದ್ಧಿಸುವುದು. ಈ ಅಂಶವು ಸ್ವಲ್ಪ ವಿವರಣೆಯನ್ನಪೇಕ್ಷಿಸಬಹುದು. ಆಧುನಿಕವಾದ ಸಾಮಾನ್ಯ ಜನಜೀವನದಲ್ಲಿ ಧರ್ಮವೆಂದರೆ ತತ್ತ್ವಜ್ಞಾನವೆಂದು ಅರ್ಥ ಹೇಳಿದರೆ ಅದಕ್ಕೆ ಮನ್ನಣೆ ಬರುವುದು ಕಷ್ಟ. ಸಾಮಾನ್ಯವಾಗಿ ಧರ್ಮವೆಂದರೆ ಅನೇಕ ಅರ್ಥಗಳು ಪ್ರಸಕ್ತವಾಗುವುವು. ಈ ಅರ್ಥಗಳೇ ಜ್ಞಾನವೇ ಧರ್ಮ ಎಂದು ಗ್ರಹಿಸುವುದಕ್ಕೆ ಪ್ರತಿಬಂಧಕ. ಈ ಅರ್ಥಗಳಲ್ಲಿ ಕೆಲವನ್ನು ವಿಚಾರ ಮಾಡೋಣ.

ಅನ್ನ, ತುಪ್ಪ, ಛತ್ರ ಮುಂತಾದ ಬಾಹ್ಯವಸ್ತುಗಳು ಧರ್ಮವೆಂಬ ಪದದ ಅರ್ಥವಾಗಿ ಪ್ರಸಿದ್ಧಿಗೆ ಬಂದಿರುವುವು. ಇದರಂತೆಯೇ ಈ ಅನ್ನ, ತುಪ್ಪ ಅಥವಾ ಛತ್ರ ಇವರ ಧರ್ಮ, ಅವರ ಧರ್ಮ ಎಂದು ಮುಂತಾಗಿ ವ್ಯವಹಾರವಿರುವುದು. ಧಾರ್ಮಿಕ ವಸ್ತುಗಳನ್ನು ದಾನ ಮಾಡುವ ಮನುಷ್ಯನ ದಾನವೆಂಬ ಕ್ರಿಯೆ ಧರ್ಮವೆಂಬ ಪ್ರಸಿದ್ಧಿಯನ್ನು ಹೊಂದಿರುವುದು. ಇವನು ಧರ್ಮಾತ್ಮ, ಈ ಅನ್ನದಾನ ಮಾಡಿದವನು ಎಂಬೀ ಮುಂತಾದ ವ್ಯವಹಾರಕ್ಕೆ ಈ ಪ್ರಸಿದ್ಧಿಯೇ ಕಾರಣ. ಧರ್ಮಕಾರ್ಯ ಮಾಡಿದುದರಿಂದ ಉಂಟಾದುದೆಂಬ ಭಾವನೆಗೆ ವಿಷಯವಾದ ಪುಣ್ಯವೆಂಬ ಕಲ್ಪನೆಯು ಧರ್ಮ ಎಂಬುದರ ಅರ್ಥವಾಗಿ ಪ್ರಸಿದ್ಧಿಗೆ ಬಂದಿರುವುದು. ಈ ಪುಣ್ಯವೆಂಬುದು ಧರ್ಮಕಾರ್ಯ

ದಿಂದ ಉತ್ಪನ್ನನವಾಗಿ ತನ್ನ ಫಲ ಕೊಡುವ ವರೆಗೂ ಧರ್ಮ ಮಾಡಿದವನ ಆತ್ಮವನ್ನು ಹೊಂದಿರುವುದೆಂದು ಸಾಮಾನ್ಯ ಭಾವನೆ. ಇದನ್ನನುಸರಿಸಿ ಜೀವನದಲ್ಲಿ ಒಳ್ಳೆಯ ಫಲವನ್ನು ಹೊಂದಿದವನಿಗೆ ಪುಣ್ಯಾತ್ಮ, ಪುಣ್ಯವಂತ ಎಂಬೀ ಮುಂತಾದ ವ್ಯವಹಾರವಿರುವುದು. ಧರ್ಮಕಾರ್ಯ ಮಾಡುವ ಮನುಷ್ಯನ ಮನಸ್ಸಿನ ಸಂಕಲ್ಪ ಅಥವಾ ಅಭಿಸಂಧಿಯೂ ಧರ್ಮ ಎಂಬ ಪ್ರಸಿದ್ಧಿಯನ್ನು ಹೊಂದಿರುವುದು. ಇದರಂತೆ ಫಲವೇನೆ ಇರಲಿ, ಉದ್ದೇಶ ಒಳ್ಳೆಯದಾದ ಮಾನವನನ್ನೂ ಧರ್ಮಾತ್ಮನೆಂಬ ಕರೆಯುವ ಪದ್ಧತಿಯೂ ಇರುವುದು.

ಈ ಅರ್ಥಗಳು ಒಂದೊಂದಾಗಿ ಯಾವುದಾದರೂ ಒಂದು ಪ್ರಧಾನವಾಗಿ ಅಥವಾ ಸಮುದಿತವಾಗಿ ನಮ್ಮ ಸಾಮಾನ್ಯ ವ್ಯವಹಾರಕ್ಕೆ ಪ್ರವರ್ತಕವಾಗಿರುವುವು. ಇವು ಪ್ರಸಕ್ತವಾದ ರೀತಿ ಏನಿರಬಹುದೆಂದು ವಿಚಾರ ಮಾಡೋಣ. ಜ್ಞಾನವು ಸ್ವಾರ್ಥರಹಿತೆಯ ಗುರುತು. ಜ್ಞಾನ ಆತ್ಮತಂತ್ರವಲ್ಲ. ಎಂದರೆ ಅದು ಮನುಷ್ಯನ ಇಚ್ಛೆಯಂತೆ ಹುಟ್ಟುವುದಲ್ಲ. ಜ್ಞಾನಕ್ಕೆ ಸಾಧನವಾದ ಸನ್ನಿವೇಶವಿದ್ದರೆ ಸಾಕು. ಅದು ಹುಟ್ಟುವುದು. ಇಂದ್ರಿಯ ವಿಷಯಗಳ ಸನ್ನಿಧಾನದಲ್ಲಿ ಪ್ರತಿಬಂಧಕವಿಲ್ಲದಿರಲು ಜ್ಞಾನತೃಪ್ತಿಯು ನಿಯತ ಹುಟ್ಟಿದ ಜ್ಞಾನವು ನಿಯಮವಾಗಿ ತನ್ನ ಧರ್ಮಿಯಾಗಿ ಜ್ಞಾತೃ ಎಂದರೆ ತಿಳಿಯುವವನನ್ನು ಮತ್ತು ತನ್ನ ವಿಷಯವಾದ ಒಂದು ಜ್ಞೇಯ ವಸ್ತುವನ್ನು ಸೂಚಿಸುವುದು. ಅದು ಜ್ಞಾತೃಜ್ಞೇಯರಹಿತವಾದರೆ ಜ್ಞಾನವೆನಿಸುವುದಿಲ್ಲ. ಜ್ಞಾತೃಜ್ಞೇಯರಹಿತವಾದ ಜ್ಞಾನ ಒಂದುಂಟೆಂದು ದರ್ಶನಶಾಸ್ತ್ರಗಳಲ್ಲಿ ಕೆಲವಾದ ವಿಜ್ಞಾನವಾದ ಸಾಂಖ್ಯ ಮತ್ತು ಅದ್ವೈತ ವೇದಾಂತ ಇವು ಪ್ರತಿಪಾದಿಸುವುವು. ವಿಜ್ಞಾನವಾದದಲ್ಲಿ ವಿಜ್ಞಾನ ನನ್ನಿಂದ ಭಿನ್ನವಾದ ಜ್ಞಾತೃಜ್ಞೇಯರಹಿತವಾದ ಜ್ಞಾನ ಇದೇ ತತ್ತ್ವ. ಸಾಂಖ್ಯದಲ್ಲಿ ಈ ಜ್ಞಾತೃಜ್ಞೇಯರಹಿತವಾದ ಜ್ಞಾನವು ಚೈತನ್ಯ ಎಂಬ ಹೆಸರನ್ನು ಹೊಂದಿ ಪುರುಷ ಎಂಬ ತತ್ತ್ವದ ಸ್ವರೂಪವಾಗಿರುವುದು. ಅದ್ವೈತದಲ್ಲಿ ಇಂತಹ ಜ್ಞಾನವನ್ನು ಚಿತ್ ಸ್ವಯಂಜ್ಯೋತಿ, ಅಖಂಡ ಎಂಬೀ ಮುಂತಾದ ಶಬ್ದಗಳಿಂದ ದ್ಯೋತಿತವಾಗಿ ಬ್ರಹ್ಮವಸ್ತುವೆನಿಸುವುದು. ಜ್ಞಾನವನ್ನು ಮೊದಲು ಜ್ಞಾತೃಜ್ಞೇಯ ಶೂನ್ಯವನ್ನಾಗಿ ಮಾಡುವ ಪರ್ಯವಸಾನದಲ್ಲಿ ಅದು ಅಖಂಡ ಎಂಬೀ ಮುಂತಾದ ರೂಪದಲ್ಲಿ ಸಾಧಿಸುವ ಯುಕ್ತಿ ವಿಶೇಷಗಳು ಈ ದರ್ಶನಗಳಲ್ಲಿ ಹೇರಳವಾಗಿರುವುದು. ಏನೇ ಆಗಲಿ, ಇನ್ನು ಹೆಚ್ಚಿನ ರೀತಿಯಲ್ಲಿ ವಿಚಾರವನ್ನು ಮುಂದಕ್ಕೆ ಸಾಗಿಸಿದರೆ—ವಿಜ್ಞಾನವಾದದ 'ವಿಜ್ಞಾನ'—ಸಾಂಖ್ಯದ 'ಪುರುಷ' ಅದ್ವೈತದ 'ಅಖಂಡ' ಎಂಬ ಜ್ಞಾನವೇ ವಾಸ್ತವವಾದರೂ ಅಜ್ಞಾನವು ತನ್ನನ್ನೇ ತಾನು ತೋರಿಸಿಕೊಳ್ಳದಿರಲು ಅದಿದ್ದರೂ ವ್ಯರ್ಥವಾಗುವುದು. ಇದು ವಿಜ್ಞಾನ ಎಂಬೀ ಮುಂತಾಗಿ ಪ್ರತಿಪಾದಿಸುವುದೇ ಸಾಧ್ಯವಿಲ್ಲದೆ ಹೋಗುವುದು. ತನ್ನನ್ನು ತಾನು ತೋರಿಸಿಕೊಳ್ಳುವುದಾದರೆ ತಾನೇ ಜ್ಞಾತೃವೂ ಜ್ಞೇಯವೂ ಎರಡೂ ಆಗಬೇಕಾಯಿತು. ಈ ಸಂದರ್ಭದಲ್ಲಿ ಅದು ಜ್ಞಾತೃಜ್ಞೇಯು ಶೂನ್ಯವಾಗಲಿಲ್ಲ. ಜ್ಞಾತೃಜ್ಞೇಯ ಶೂನ್ಯವೆಂಬ ಪಾರಿಭಾಷಿಕವಾದ ಅರ್ಥವನ್ನು ಕೊಡುವ 'ವಿಜ್ಞಾನ'ವೂ ಅಲ್ಲ, 'ಪುರುಷ'ನೂ ಅಲ್ಲ, 'ಅಖಂಡ'ವೂ ಅಲ್ಲ. ಜ್ಞಾನವು ಜ್ಞಾತೃಜ್ಞೇಯುವುಳ್ಳದಾದರೆ ಜ್ಞಾತ್ರವು ಜ್ಞಾನದಿಂದ ಭಿನ್ನವಾಗಿ ಜ್ಞಾನವೆಂಬ ಧರ್ಮವುಳ್ಳದಾಗಬಹುದು. ಅಥವಾ ಜ್ಞಾನವು ಜ್ಞಾತೃವಿನ ಸ್ವರೂಪ ಧರ್ಮವಾಗಬಹುದು. ಎಂದರೆ ಜ್ಞಾತೃವಿನಿಂದ ಅಭೇದವುಳ್ಳದಾಗಬಹುದು. ಇದರಂತೆಯೆ ಜ್ಞೇಯುವು ಜ್ಞಾನ ತಾನೇ ಆಗಬಹುದು, ಅದರಿಂದ ಭಿನ್ನವಾದ ವಸ್ತುವೇ ಆಗಬಹುದು. ಜ್ಞಾನವು ಸ್ವಪ್ರಕಾಶವಾದಾಗ ಎಂದರೆ ತನ್ನನ್ನು ತಾನು ತೋರಿಸಿಕೊಳ್ಳುವಾಗ ಜ್ಞಾತೃಜ್ಞೇಯ ಭಾವವುಳ್ಳದಾಗುವುದು. ಬಾಹ್ಯ ವಸ್ತುವನ್ನೂ ಪ್ರಕಾಶಪಡಿಸುವಾಗ ಅದು ಜ್ಞಾತೃ ಎಂಬದರ ಸ್ವರೂಪ ಧರ್ಮವಾಗಿ ತನ್ನಿಂದ ಭಿನ್ನವಾದ ವಸ್ತು ಘಟಪಟಾದಿಜ್ಞೇಯವುಳ್ಳದಾಗಬಹುದು. ಈ ಎಲ್ಲ ಕಲ್ಪದಲ್ಲಿಯೂ ಅದರ ಸ್ವಭಾವದಲ್ಲಿ ಎರಡು ಪ್ರಕಾರಗಳು ಪ್ರಸಕ್ತವಾಗುವುವು. ಅದು ಜ್ಞಾತೃವಿನ ಕಡೆ ಸೋಲಬಹುದು. ಅಥವಾ ಜ್ಞೇಯಪರವಾಗಬಹುದು. ಜ್ಞಾತೃವಿನ ಕಡೆ ಸೋತ ಜ್ಞಾನಕ್ಕೆ ವಿಷಯ ಪರತೆಯು ಕಮ್ಮಿಯಾಗುವುದು. ಈ ಸಂದರ್ಭದಲ್ಲಿ ಅದು ಪ್ರಮಾಣವೆನಿಸುವುದು ದುರ್ಲಭ. ಪ್ರಮಾಣವಾಗಬೇಕಾದರೆ ಜ್ಞಾನವು ನಿಯಮವಾಗಿ ವಿಷಯಪರವಾಗಬೇಕು. ವಿಷಯಪರತೆಯಲ್ಲಿನ ಆಳವೇ ಜ್ಞಾನ ಪ್ರಾಮಾಣ್ಯದ ಆಳ. ಪೂರ್ಣ ವಿಷಯ ಪರತೆಯುಳ್ಳ ಜ್ಞಾನಪೂರ್ಣ

ವಾಗಿ ಪ್ರಮಾಣ; ಇದೇ ಅರ್ಥವನ್ನೆ ಪ್ರಮಾಣವಾದ ಜ್ಞಾನದ ಸ್ವರೂಪವನ್ನು ಶಾಸ್ತ್ರವು 'ಯಥಾರ್ಥಂ ಪ್ರಮಾಣಂ' ಅರ್ಥವನ್ನು ಎಂದರೆ ಜ್ಞೇಯುವನ್ನು ಅತಿಕ್ರಮಿಸದೆ ಎಂದರೆ ಅದಿರುವಂತೇ ತಿಳಿಯುವುದೇ ಪ್ರಮಾಣ ಎಂಬೀ ಮುಂತಾದ ರೀತಿಯಲ್ಲಿ ಪ್ರತಿಪಾದಿಸಬೇಕಾಯಿತು. ಅರ್ಥವೆಂದರೇನು? ಅದಿರುವಂತೆ ಎಂದರೇನು? ಅದರ ನಿರ್ಣಯ ಹೇಗೆ? ಎಂಬೀ ಮುಂತಾದ ಪ್ರಶ್ನೆಗಳು ಈ ಸಂದರ್ಭದಲ್ಲಿ ಪ್ರಸಕ್ತವಾಗುವುವು. ಪ್ರಕೃತ ವಿಷಯಕ್ಕೆ ಅಸಾಧಾರಣವಾದ ಅಂಶವನ್ನು ನಿರೂಪಿಸುವ ಸಲುವಾಗಿ ಈ ವಿಚಾರವನ್ನು ಉಪರಮ ಮಾಡಬಹುದು.

ಒಟ್ಟಿನ ಮೇಲೆ ವಸ್ತುವನ್ನು ಅದಿರುವಂತೆ ತಿಳಿಯೋಣ ಯಥಾರ್ಥ ಜ್ಞಾನವೆನಿಸುವುದು. ವಸ್ತುವಿಗೆ ಯಾವುದಾದರೂ ಒಂದಂಶದಲ್ಲಿ ಸಂಬಂಧ ಪಡದಿದ್ದರೂ ಜ್ಞಾನವು ಅಯಥಾರ್ಥವೆನಿಸುವುದು. ಅಯಥಾರ್ಥ ಜ್ಞಾನಕ್ಕೆ ಭ್ರಾಂತಿವಾದವೆಂದು ಹೆಸರು. ಭ್ರಾಂತಿಗೆ ಕಾರಣ ಜ್ಞಾತೃವಿನ ರಾಗ ದ್ವೇಷ ಮುಂತಾದ್ದು. ಈ ದೋಷದಿಂದ ಪುರುಷನು ವಸ್ತುವಿನ ಕಡೆ ಗಮನರಹಿತನಾಗುತ್ತಾನೆ. ವಸ್ತುವನ್ನು ತಿಳಿಯುವ ಸಂದರ್ಭದಲ್ಲಿ ತನ್ನ ಭಾವವನ್ನು ಎಂದರೆ ವಸ್ತುವಿಗೆ ಸಂಬಂಧ ಪಡದೆ ತನ್ನಲ್ಲಿಯೇ ಇನ್ನೇನೊ ಕಾರಣದಿಂದ ಸಿದ್ಧವಾದ ಭಾವವನ್ನು ಜ್ಞಾನಾಕಾರ ಮಾಡಿಕೊಳ್ಳುತ್ತಾನೆ. ಇದು ವಸ್ತುವನ್ನೂ ಅತಿಕ್ರಮಿಸಿದ ಜ್ಞಾನ, ಅಯಥಾರ್ಥ, ಜ್ಞಾನ, ಇದಕ್ಕೆ ಭ್ರಾಂತಿ ಎಂದು ಹೆಸರು. ಇದಕ್ಕೆ ಕಾರಣವೇ ರಾಗ, ದ್ವೇಷ ಮುಂತಾದ ಹೆಸರು. ಇದೇ ಜ್ಞಾತೃವಿಗೆ ಒಂದು ವಸ್ತುವಿನಲ್ಲಿರುವ ಅಭಿಮಾನ. ಇದು ನಾನು ನನ್ನದು ಎಂಬ ಆಧಾರವುಳ್ಳುದು. ಇದೇ ವೈರಾಗ್ಯದ ಅಭಾವ. ಯಾವುದೇ ಜ್ಞಾನವಾಗಲಿ, ಅದು ನಿಯಮವಾಗಿ ಕಾರ್ಯದಲ್ಲಿ ಪರ್ಯವಸಾನ ಹೊಂದುವುದು. ಭಯಭ್ರಾಂತಿ ಇರುವವನು ಕಿರುಚುವನು. ಸುಖಭ್ರಾಂತಿ ಇರುವವನು ನಗುವನು. ಇದರಂತೆಯೇ ರಾಗದ್ವೇಷ ಮೂಲಕವಾದ ಜ್ಞಾನ ರಾಗದ್ವೇಷ ಮೂಲಕವಾದ ಕಾರ್ಯದಲ್ಲಿ ಪರ್ಯವಸಾನ ಹೊಂದುವುದು. ಏವಂಚ ಅವೈರಾಗ್ಯ ಮೂಲಕವಾದ ಜ್ಞಾನಕ್ಕೆ ಅವೈರಾಗ್ಯ ಕಾರ್ಯವೇ ಫಲ. ನಾವು ಇದನ್ನು ಗಮನಿಸಿದರೆ ನಮ್ಮ ಕರ್ತವ್ಯದ ವಿಷಯದಲ್ಲಿ ಒಂದಂಶವು ಹೊರಪಡುವುದು, ಸಾಮಾನ್ಯವಾಗಿ ಜನರು ವೈರಾಗ್ಯ ಗುಣವೆಂದು ಭಾವಿಸುವರು. ಇದನ್ನು ಸಾಧಿಸಲು ಆಹಾರ ವಿಹಾರಗಳಲ್ಲಿ ನಿಯಮನ ಮಾಡುವರು. ಅವರು ನಿಯಮನದಲ್ಲಿ ಜಯಶೀಲರಾಗಬಹುದು. ವೈರಾಗ್ಯ ಸಾಧಿತವಾಯಿತೇ? ಉತ್ತರ ಸಾಧ್ಯವಲ್ಲ. ಅವರಿಗೆ ಕೆಲವು ನಿಯಮಗಳು ಪ್ರಾಪ್ತವಾಗಿರಬಹುದು. ಆ ನಿಮಿತ್ತವಾದ ಅಹಂಕಾರ ಮಮಕಾರಗಳೂ ಪ್ರಾಪ್ತವಾಗಿರಬಹುದು. ಹೀಗೆ ನಿಯಮದಿಂದ ಅವೈರಾಗ್ಯ ವೃದ್ಧಿಯನ್ನು ಹೊಂದಿದರೂ ಆಶ್ಚರ್ಯವಿಲ್ಲ.

ಅವೈರಾಗ್ಯ ನಿವಾರಣೆಗೆ ಒಂದೇ ದಾರಿ. ಅದು ಅವೈರಾಗ್ಯಕ್ಕೆ ಮೂಲಕಾರಣವಾದ ಅಜ್ಞಾನ ಪರಿಹಾರ. ಅಜ್ಞಾನ ಪರಿಹಾರ ಜ್ಞಾನದಿಂದ. ಅಜ್ಞಾನ ಅವೈರಾಗ್ಯಕ್ಕೆ ಕಾರಣವಾಗಿರುವುದು. ಜ್ಞಾನವು ವೈರಾಗ್ಯಕ್ಕೆ ಕಾರಣವಾದ ಮಹಿಮೆಯಿಂದ ಖಚಿತವಾದ ನಿರ್ಣಯ ಮಾಡುವುದಾದರೆ ಅಜ್ಞಾನ ಜ್ಞಾನವಿರೋಧಿ. ಅದು ಜ್ಞಾನವಲ್ಲ; ಅದರಿಂದ ಉತ್ಪನ್ನವಾದ ಭ್ರಾಂತಿಯು ಜ್ಞಾನವಲ್ಲ. ಭ್ರಾಂತಿಜ್ಞಾನವೆಂದು ಅಜ್ಞಲೋಕ ಪ್ರಸಿದ್ಧಿಯನ್ನು ಅನುಸರಿಸಿ ಬಂದ ವ್ಯವಹಾರ.

ಪ್ರಮಾಣವಾದ ಜ್ಞಾನವು ಶುದ್ಧವಾಗಿ ವಿಷಯಾಭಿಮುಖ್ಯವನ್ನು ಹೊಂದುವುದು. ಜ್ಞಾತೃಧರ್ಮಗಳಿಂದ ಸಂಕ್ರಾಂತವಾಗದಿರುವುದು. ಜ್ಞಾತೃವು ಜ್ಞಾನೋತ್ಪತ್ತಿಗೆ ಎಷ್ಟರ ಮಟ್ಟಿಗೆ ಕಾರಣವಾಗಬಹುದೋ ಅದೇ ಇಯತ್ತೆಯಲ್ಲಿ ಜ್ಞಾನಕ್ಕೆ ಧರ್ಮಿಯಾಗಿ ಸಿದ್ಧಿಸುವನು. ಜ್ಞಾನಕ್ಕೆ ಸಾಕ್ಷಾತ್ತಾಗಿ ಕಾರಣವಲ್ಲದ ಅವನ ಇತರ ಧರ್ಮಗಳು ಜ್ಞಾನೋತ್ಪತ್ತಿ ಪ್ರಸಂಗದಲ್ಲಿ ಉಪಯೋಗಿಸುವುದಿಲ್ಲ. ಪ್ರಮಾಣಜ್ಞಾನಕ್ಕೆ ನಿಯತಕಾರಣವಾದ ಸಂಸ್ಕಾರ ಸಚಿವನಾದ ಜ್ಞಾತೃ ಜ್ಞಾನಸಾಮಗ್ರಿ. ಜ್ಞಾತೃವಿನ ರಾಗದ್ವೇಷ ಮೊದಲಾದ ಇತರ ಧರ್ಮಗಳು ಜ್ಞಾನ ಕಾರಣವಲ್ಲ. ಇಂತಹ ಧರ್ಮಗಳನ್ನು ಬೆರಸದೆ ಶುದ್ಧವಾದ ವಿಷಯಾಭಿಮುಖ್ಯಕ್ಕೆ ಅವಕಾಶ ಕೊಟ್ಟು ತನ್ಮೂಲಕವಾದ ವಿಷಯ ಜ್ಞಾನವನ್ನು ಸಂಪಾದಿಸುವ ಸಾಮರ್ಥ್ಯಕ್ಕೆ ವೈರಾಗ್ಯವೆಂದು ಹೆಸರು. ಈ ಒಂದು ಸಾಮರ್ಥ್ಯ ಬಂದರೆ ಸಾಕು. ಅಂತಹ ಜ್ಞಾತೃವಿನಲ್ಲಿ ರಾಗದ್ವೇಷ ಮೂಲಕವಾದ ವ್ಯಾಪಾರ ಎಂದರೆ ಅವೈರಾಗ್ಯ ಮೂಲಕವಾದ ವ್ಯಾಪಾರ ಅಸಂಭವಿತ. ಜ್ಞಾನವು ವೈರಾಗ್ಯ ಮೂಲಕವಾದುದುರಿಂದ ಅವನ ಕರ್ಮವೂ

ವೈರಾಗ್ಯ ಮೂಲಕ. 'ಜ್ಞಾನವಿದೆ ಅನುಷ್ಠಾನವಿಲ್ಲ' ಎಂದು ಸಾಮಾನ್ಯ ವ್ಯವಹಾರವಿರುವುದು. ಇದು ಅಜ್ಞ ಪ್ರಸಿದ್ಧಿ. ಯಾವುದೇ ಭ್ರಾಂತಿ ಅಥವಾ ಪ್ರತಾರಣ ಮಾನವನನ್ನು ಜ್ಞಾನವೆಂದು ಭಾವಿಸಿದುದರಿಂದ ಈ ಪ್ರಸಿದ್ಧಿಯುಂಟಾಗುವುದು. "ಜ್ಞಾನವಿಲ್ಲದವನಿಗೆ ಕರ್ಮವಿಲ್ಲ. ಜ್ಞಾನವೇ ಕರ್ಮಮೂಲ. ಕರ್ಮ ಜ್ಞಾನದ ಮೂಲ" ಎಂಬ ತತ್ವವೇ ಈ ವಿಷಯದಲ್ಲಿ ಪ್ರಮಾಣ.

ವಸ್ತೂತತ್ತಾ ಹೀಗಿರುವಾಗ ಪ್ರತ್ಯೇಕವಾಗಿ ಜ್ಞಾನಕ್ಕೆ ಸಮವಾದುದು ಕರ್ಮವೆಂದು ವಾದಿಸುವುದೂ, ಕರ್ಮ ಪ್ರಧಾನವಾಗಿ ಜ್ಞಾನವನ್ನು ನೋಡುವುದೂ, ಕರ್ಮ ಜ್ಞಾನಸಾಧನವೆನ್ನುವುದೂ ಜ್ಞಾನರಹಿತವಾದ ಕರ್ಮವುಂಟೆಂದು ವಾದಿಸುವುದೂ ಜ್ಞಾನತತ್ತ್ವವನ್ನು ವಿಚಾರ ಮಾಡದಿರುವ ಅಪರಾಧ. ಈ ದೋಷವು ಪೂರ್ವ ಮೀಮಾಂಸ ಶಾಸ್ತ್ರಕ್ಕೆ ಹಿಂಬದಿಯಲ್ಲಿರುವ ತತ್ತ್ವವಿಚಾರದಲ್ಲಿ ಪೂರ್ಣತೆಯನ್ನು ಹೊಂದಿರುವುದು. ಜ್ಞಾನಜ್ಞೇಯು ಪ್ರಪಂಚಕ್ಕೆ ಕರ್ಮವೇ ಪರ್ಯವಸಾನದಲ್ಲಿ ಕಾರಣವೆಂದು ಈ ವಾದದ ದೃಷ್ಟಿ.

ಲೋಕ ವ್ಯವಹಾರದಲ್ಲಿ ಹಿಂದೆಯೇ ನಿರೂಪಿತವಾದಂತೆ ಜ್ಞಾನ ಸಂಬಂಧವಿಲ್ಲದ ಕರ್ಮವಿಶೇಷಗಳನ್ನು ಧರ್ಮವೆಂದು ಕರೆಯುವ ಪದ್ಧತಿ. ಇದು ಅಜ್ಞಪ್ರಸಿದ್ಧಿಯೆಂದು ಒತ್ತಿಹೇಳಬೇಕಾದುದಿಲ್ಲ. ಇದಕ್ಕೆ ಕಾರಣ ನಾನಾ ರೂಪವಾದ ಉಪದೇಶ ಮೊದಲಾದುವುಗಳಿಂದ ವೃದ್ಧಿಗೆ ಬಂದ ಸ್ವಾರ್ಥಪರತೆ. ಮನುಷ್ಯನು ಇಹ ಲೋಕದಲ್ಲಿ ಸುಖವಾಗಿರಬೇಕೆಂಬ ಅಭಿಲಾಷೆಯಿಂದ ದಾನಧರ್ಮ ಮಾಡುತ್ತಾನೆ; ಜಪತಪಗಳನ್ನು ಆಚರಿಸುತ್ತಾನೆ. ಅವನು ಇಹಲೋಕದಲ್ಲಿ ಸುಖದಿಂದ ಜೀವನ ಯಾತ್ರೆ ಮಾಡಿದರೆ ಸಾಲದು. ಪರಲೋಕದಲ್ಲಿಯೂ ಎಂದರೆ ಮೃತಿ ಹೊಂದಿದ ಮೇಲೆಯೂ ಸುಖವಾಗಿರಬೇಕು. ಇದೇ ಅವನ ಪ್ರಧಾನ ಆಶೆ. ಆ ಮೇಲೆ ಸುಖವಾಗಿರುವುದು ಹೇಗೊ? ಅದಕ್ಕೆ ಸಾಧನವೇನೊ? ಯಾವುದನ್ನೂ ವಿಚಾರಿಸುವುದಿಲ್ಲ. ಈ ಆಶೆ ಮಾತ್ರ ಪ್ರಬಲವಾಗಿರುತ್ತೆ. ಇದಕ್ಕೆ ಅಧೀನನಾಗಿ ಪರಲೋಕ ವಿಷಯದಲ್ಲಿ ಮನೋರಂಜಕವಾಗಿ ಯಾರು ಏನು ಹೇಳಿದರೂ ಗೌರವಿಸುತ್ತಾನೆ. ಅವನ ಆಶೆಗೆ ಅನುಗುಣವಾದ ಕಾರ್ಯಗಳನ್ನು ಮಾಡಲು ಉಪಕ್ರಮಿಸುತ್ತಾನೆ. ಆಶೆ ಪೂರ್ಣವಾಯಿತೆಂದೇ ಭಾವಿಸುತ್ತಾನೆ. ತಾನು ಮಾಡಿಕೊಳ್ಳುವ ಸಾಧನವೆಲ್ಲ ಪೂರ್ತಿಯಾಯಿತು, ಇನ್ನು ಅನಿಶ್ಚಿತವಾದುದಿಲ್ಲವೆಂದು ಹೆಮ್ಮೆ ಪಡುತ್ತಾನೆ. ಅಹಂಕಾರ ಮಮಕಾರ ಪೂರ್ಣವಾದ ಜೀವನವುಳ್ಳವನಾಗುತ್ತಾನೆ. ಧರ್ಮವೆಂದು ತಿಳಿದ ಅವನ ಕಾರ್ಯದ ಮಹತ್ವವನ್ನೂ ಜನರು ಹೇಗೆ ತಿಳಿಯುತ್ತಾರೋ ಆ ಮಟ್ಟಕ್ಕನುಸಾರವಾದುದು ಅವನ ಸ್ವಾಭಿಮಾನ. ಹೀಗೆ ಜ್ಞಾನರಹಿತವಾದ ಕರ್ಮ ತಾಮಸ, ಅದು ಅಜ್ಞಾನ ಮೂಲ, ಭ್ರಾಂತಿ ಮತ್ತು ಅಪಾತರಮಯ. ಹೀಗೆ ಅದು ಲೌಕಿಕ-ತಾತ್ತ್ವಿಕವಲ್ಲ.

ಲೌಕಿಕ ಧರ್ಮವು ವಿಚಾರಕ್ಕೆ ಗೋಚರಿಸುವುದಿಲ್ಲ. ಅದು ಕರ್ತೃವಾದ ಆತ್ಮನನ್ನು ಅಪೇಕ್ಷಿಸುವುದು. ಆದರೆ ಆತ್ಮ ಕರ್ತೃವೆಂದು ಸಾಧಿಸುವುದು ಸಾಧ್ಯವಲ್ಲ. ಆತ್ಮನ ಇಂದ್ರಿಯಮೊದಲಾದ ಕರಣಗಳನ್ನು ಅಪೇಕ್ಷಿಸುವುದು. ಆದರೆ ಆತ್ಮನಿಗೆ ಅವುಗಳ ಮೇಲೆ ನಿಯಮ ತತ್ವವಿದೆ ಎಂಬುದು ಸಿದ್ಧಿಸುವುದಿಲ್ಲ. ಲೌಕಿಕಧರ್ಮ ಒಂದು ಫಲವುಳ್ಳದೆಂದು ಪ್ರತೀತವಾಗಿರುವುದು. ಆದರೆ ಫಲಕ್ಕೂ ಧರ್ಮಕ್ಕೂ ಸಾಧ್ಯ ಸಾಧನ ಭಾವವನ್ನೂ ನಿರ್ಣಯಿಸಲು ಸಾಧ್ಯವಲ್ಲ. ಲೌಕಿಕ ಧರ್ಮ ವರ್ತಮಾನಕಾಲೀನವಾದುದು. ಫಲವಾದರೆ ಭಾವಿಯಾದುದು. ಇವೆರಡರ ಸಂಬಂಧ ಹೇಗೋ? ಪುಣ್ಯ, ಅದೃಷ್ಟ, ಅಪೂರ್ವ ಎಂಬೀ ಮುಂತಾಗಿ ಕಲ್ಪನೆಯೇನೋ ಸುಲಭ. ಅದರ ಪ್ರಾಮಾಣ್ಯ ಮಾತ್ರ ದುರ್ಲಭ. ಹೀಗೆ ಲೌಕಿಕ ಧರ್ಮವೆಂಬ ಭಾವವೇ ಅನಂತದೋಷ ದುಷ್ಟವಾಗಿರುವುದು. ಸಾಂಘಿಕವಾದ ಯೋಗಕ್ಷೇಮಕ್ಕೆ ಸಾಧನವಾದುದೆಲ್ಲ ಧರ್ಮವೆಂಬ ವಾದ ಪಾಶ್ಚಾತ್ಯರಲ್ಲಿ ಕಂಡು ಬರುವುದು. ಈ ಭಾವವು ಅನೇಕರಾದ ತತ್ತ್ವವಾದಿಗಳ ಮನೋಧರ್ಮದ ಮೇಲೆ ತನ್ನ ಪ್ರಭಾವವನ್ನು ಬೀರುವಷ್ಟು ಪ್ರಬಲವಾಗಿರುವುದು. ಆದರೆ ಸಂಘಸ್ವರೂಪ ನಿರ್ಣಯ ಮಾತ್ರ ಕಷ್ಟಸಾಧ್ಯ. ಈ ವಿಷಯದಲ್ಲಿ ಮಾಡಬಹುದಾದ ಕಲ್ಪನೆ ಯಾವತ್ತು ಒಂದು ಜಾತೀಯ ಸುಖದ ಮೇಲಿನ ಅಭಿಲಾಷೆ ಮೂಲಕವಾಗುವುದು. ಪರ್ಯವಸಾನದಲ್ಲಿ ಅದೊಂದು ಸ್ವಾರ್ಥಪರತೆಯ ಗುರುತಾಗುವುದು. ಇಂತಹ ಸಂದರ್ಭದಲ್ಲಿ ಮಾಡಿದ ತತ್ವವಿಚಾರವು ಬುದ್ಧಿ ಪ್ರಾಬಲ್ಯವನ್ನು ತೋರಿಸಬಹುದೇ ಹೊರತು ಅದು ಶ್ರೇಯಸ್ಸಾಧನವಾಗುವುದಿಲ್ಲ.

ಒಟ್ಟಿನ ಮೇಲೆ ಮನುಷ್ಯನ ಶ್ರೇಯಸ್ಸೆಂದರೆ

ಜ್ಞಾನ. ಅದೇ ವೈರಾಗ್ಯದ ಗುರುತು. ಅದು ತತ್ತ್ವ ಜ್ಞಾನ. ವಸ್ತುವನ್ನು ಯಥಾರ್ಥವಾಗಿ ಗ್ರಹಿಸುವ ಸ್ವಭಾವವುಳ್ಳುದು. ಅದು ಪೂರ್ತಿ ವಸ್ತು ತಂತ್ರ. ಯಾವ ಸ್ವಾರ್ಥವೂ ಅದಕ್ಕೆ ನಿಯಾಮಕವಾದುದಲ್ಲ. ಅದು ಸಾರ್ವಜನಿಕ, ಸಾರ್ವದೇಶಿಕ, ಸಾರ್ವಕಾಲಿಕ ಮತ್ತು ಸರ್ವ ಸನ್ನಿವೇಶಕ್ಕೂ ಅನ್ವಯಿಸುವುದು. ಅದಕ್ಕೆ ವಿನಾಯತಿ ಇಲ್ಲ. ಅದರಿಂದ ಹುಟ್ಟುವ ಆತ್ಮಧರ್ಮವೇ ಸದ್ಗುಣ. ಅದರ ಕಾರ್ಯವೇ ಧರ್ಮ. ಇದನ್ನುಳಿದು ಮತ್ತೊಂದು ಸದ್ಗುಣವಿಲ್ಲ, ಧರ್ಮವಿಲ್ಲ, ಸಂಘವಿಲ್ಲ ಮತ್ತು ನಿಯಾಮಕ ಭಾವವಿಲ್ಲ.

ಈ ಅಪೂರ್ವ ತತ್ತ್ವವನ್ನು ಇದು ಮೊದಲು ಎಂದು ಹೇಳುವುದಕ್ಕೇ ಸಾಧ್ಯವಲ್ಲದ ಅತಿ ಪ್ರಾಚೀನ ಕಾಲದಲ್ಲಿ, ಇತರ ಜನಾಂಗಗಳೇ ಇನ್ನೂ ಪ್ರಸಕ್ತಿಗೇ ಬಾರದಿರುವ ಕಾಲದಲ್ಲಿ ಕಂಡು ಹಿಡಿದು ಅದನ್ನು ಶೋಧಿಸಿ ಅದರ ಪೂರ್ಣತೆಗೆ ದಾರಿ ಮಾಡಿದುದೇ ಭಾರತೀಯ ಧರ್ಮದ ಮಹತ್ವ. ಇದನ್ನು ಮರೆತಿರುವುದೇ ನಾನಾ ಧರ್ಮಗಳ, ಮತಗಳ, ತತ್ತ್ವಗಳ ಪ್ರವೃತ್ತಿಗೆ ಕಾರಣ. ಇತರ ಜನಾಂಗದವರು ತಮ್ಮ ಮಹತ್ವವನ್ನು ಭಾರತೀಯರ ಮೇಲೆ ಹೊರಿಸಲೂ ಇದೇ ಕಾರಣ.

ಒಟ್ಟಿನ ಮೇಲೆ ಭಾರತೀಯ ಧರ್ಮದ ಮಹತ್ವ ಯಥಾರ್ಥಜ್ಞಾನಪರತೆ. ಇದೇ ವೈರಾಗ್ಯ ಮತ್ತು ತತ್ತ್ವನಿಷ್ಠೆ ಎಂಬುದು.

II. ಭಾರತೀಯ ಧರ್ಮದ ರಹಸ್ಯ:—

ಇದು ವರೆಗೆ ಭಾರತೀಯ ಧರ್ಮದ ಮಹತ್ವವನ್ನು ಕಿಂಚಿತ ಪ್ರಸ್ತಾಪಿಸಿದುದಾಯಿತು. ಅದರ ರಹಸ್ಯವೇನೆಂದು ವಿಚಾರೋಪಕ್ರಮ ಮಾಡೋಣ.

ಎಷ್ಟೇ ಮಹತ್ತ್ವವುಳ್ಳ ಬುದ್ಧಿಯಿರಲಿ. ಯಥಾರ್ಥ ಜ್ಞಾನವೆಂಬಲ್ಲಿ ಯಥಾರ್ಥವೆಂಬುದು ಬರಿಯ ಮಾತಾಗುವುದೇ ಹೊರತು ಅದರ ಸ್ವರೂಪ ನಿರ್ಣಯ ಕಷ್ಟಸಾಧ್ಯ. ಅರ್ಥಕ್ಕನುಗುಣವಾದ ಜ್ಞಾನ ಯಥಾರ್ಥ ಎಂದರೆ ಜ್ಞಾನವನ್ನು ತಿಳಿಯುವ ಮೊದಲು ಅರ್ಥವನ್ನು ತಿಳಿಯಬೇಕಾಯಿತು. ಇದು ಅಯುಕ್ತವಾದ ಮಾತು. ಜ್ಞಾನಕ್ಕನುಗುಣವಾಗಿ ಅರ್ಥವನ್ನು ಏರ್ಪಡಿಸಬೇಕಾದರೆ ಯಥಾರ್ಥ ಮತ್ತು ಅಯಥಾರ್ಥ ಎಂಬ ಜ್ಞಾನ ವಿಭಾಗವು ಅಯುಕ್ತವಾಯಿತು. ಏವಂಚ ಅರ್ಥಸಂಬಂಧವಿಲ್ಲದೆ ಜ್ಞಾನದಲ್ಲಿ ಪ್ರಮಾಣಾ ಪ್ರಮಾಣ ವಿಭಾಗವನ್ನು ನಿರ್ವಹಿಸಬೇಕಾಯಿತು. ಈ ವಿಭಾಗಕ್ಕೆ ಜ್ಞಾನವಲ್ಲದ ಮತ್ತೊಂದು ವಸ್ತು ನಿರ್ವಾಹಕವಾದರೆ ಅಂತಹ ವಸ್ತು ಜ್ಞಾನ ಬಾಹ್ಯವಾದ ನಿಮಿತ್ತ ಅರ್ಥವೇ ಆಯಿತು. ಅದನ್ನು ತಿಳಿದ ಹೊರತು ಪ್ರಕೃತ ಜ್ಞಾನ ಸ್ವರೂಪವನ್ನು ತಿಳಿಯುವುದು ಕಷ್ಟವಾಯಿತು. ಇತರ ಜ್ಞಾನ ಅಥವಾ ಜ್ಞಾನ ಪ್ರವಾಹಕ್ಕೆ ಸಂಗತವಾದ ಜ್ಞಾನಪ್ರಮಾಣ, ಅಸಂಗತವಾದ ಜ್ಞಾನ ಅಪ್ರಮಾಣ ಎಂದು ಹೇಳುವ ಅವಕಾಶವಿದೆ. ಆದರೆ ಸಂಗತ ಅಸಂಗತ ಎಂಬ ಭಾವ ಪ್ರಕೃತ ಜ್ಞಾನದಿಂದ ಭಿನ್ನ. ಈ ಕಾರಣ ಅದೇ ಅರ್ಥಸದೃಶವಾಯಿತು. ಅದನ್ನು ತಿಳಿಯುವುದು ದುಸ್ಸಾಧ್ಯವಾಯಿತು. ಉಪಯೋಗಕ್ಕೆ ಬಂದ ಜ್ಞಾನ ಪ್ರಮಾಣ, ಅದಲ್ಲದುದು ಅಪ್ರಮಾಣ ಎಂದು ತೋರಬಹುದು. ಆದರೆ ಉಪಯೋಗ, ಅನುಪಯೋಗ ಎಂಬ ಭಾವಗಳು ಹೊಸದು, ಪ್ರಕೃತ ಜ್ಞಾನದಿಂದ ಬಾಹ್ಯ. ಈ ಕಾರಣ ಅದನ್ನು ತಿಳಿಯುವುದು ದುಸ್ಸಾಧ್ಯ. ಏವಂಚ ಯಾವ ಕಲ್ಪವೂ ಸರಿಹೋಗದ ಮೇಲೆ ಜ್ಞಾನ ಪ್ರಮಾಣವು ಅಥವಾ ಅಪ್ರಮಾಣವಾದರೆ ಆ ರೂಪದಲ್ಲಿ ಅದನ್ನು ಅದೇ ನಿರ್ವಹಿಸಿಕೊಳ್ಳಬೇಕೆಂಬ ಒಂದು ಕಲ್ಪ ಮಾತ್ರ ಅವಶಿಷ್ಟವಾಗಿರುವುದು. ಒಂದು ವೇಳೆ ಪ್ರಕೃತವಾದ ಜ್ಞಾನವು ಅಪ್ರಮಾಣ ಎಂದು ಅಜ್ಞಾನದಿಂದಲೇ ಏರ್ಪಡುವುದಾದರೆ ಅದು ಹುಟ್ಟಲು ಕಾರಣವೇ ಇಲ್ಲ. ಆದರೆ ಅಪ್ರಮಾಣ ಜ್ಞಾನವಿದೆಂದು ಹೇಳುವುದು, ನಿರ್ವಹಿಸುವುದು ಕಷ್ಟವಾದರೂ ಅಂತಹ ಜ್ಞಾನವೊಂದಿದೆ ಎಂಬ ವಿಷಯ ಮಾತ್ರ ತಿರಸ್ಕಾರಾರ್ಹವಲ್ಲ. ಆದರೆ ಅಂತಹ ಜ್ಞಾನ ಅಪ್ರಮಾಣ ಎಂದು ಅದರಿಂದಲೇ ಏರ್ಪಟ್ಟರೆ ಅದು ಹುಟ್ಟುವ ಸಂಭವವೇ ಇಲ್ಲ. ಅಂತಹ ಜ್ಞಾನವನ್ನು ಬುದ್ಧಿ ಪೂರ್ವಕವಾಗಿ ಕಲ್ಪಿಸಬಹುದೇ ಹೊರತು ಅದು ಹುಟ್ಟಲು ಕಾರಣವಿಲ್ಲ ಎಂದರೆ ಅದು ಕಲ್ಪಿತವಾಗಬಹುದೇ ಹೊರತು ಗ್ರಹಣವಾಗುವುದಿಲ್ಲ. ಈ ನಿಮಿತ್ತದಿಂದ ಅಪ್ರಮಾಣ ಜ್ಞಾನವು ಅಪ್ರಮಾಣವೆಂದು ಆ ಜ್ಞಾನದಿಂದ ಬಾಹ್ಯವಾದ ಸಾಮಗ್ರಿಯಿಂದ ಏರ್ಪಡುವುದು.

ಪ್ರಮಾಣಜ್ಞಾನವು ಪ್ರಮಾಣವೆಂದು ಏರ್ಪಡುವ ಕ್ರಮವನ್ನು ಚಿಂತಿಸೋಣ. ಅಪ್ರಮಾಣ ಜ್ಞಾನದಂತೆಯೇ ಅದೂ ತನ್ನಿಂದ ಭಿನ್ನವಾದ ಸಾಮಗ್ರಿಯಿಂದ ಸಿದ್ಧವಾಗುವುದಾದರೆ ಆ ಸಾಮಗ್ರಿಯು ಜ್ಞಾನ

ಪ್ರಮಾಣವೆಂದು ಸಿದ್ಧಿಸುವುದು ಹೇಗೆ ಎಂಬ ವಿಚಾರವು ಹುಟ್ಟುವುದು. ಅದು ಮತ್ತೊಂದು ಸಾಮುಗ್ರಿಯಿಂದ ಎಂದರೆ ಅದರ ವಿಷಯದಲ್ಲಿಯೂ ಇದೇ ವಿಚಾರ ಹುಟ್ಟಿ ಇಂತಹ ವಿಚಾರಕ್ಕೆ ಪರ್ಯವಸಾನವೇ ಇಲ್ಲದೆ ಯಾವ ನಿರ್ಧರಕ್ಕೂ ಸಾಧಕವಲ್ಲದ ಅನವಸ್ಥೆಯು ಪ್ರಾಪ್ತವಾಗುವುದು. ಅಥವಾ ವಿಚಾರ ಕ್ರಮದಲ್ಲಿ ಕಲ್ಪಿತವಾದ ಒಂದು ಜ್ಞಾನವನ್ನು ಸ್ವತಃ ಪ್ರಮಾಣ ಎಂದರೆ ತಾನು ಪ್ರಮಾಣವೆಂದು ತನ್ನಿಂದಲೇ ಸಿದ್ಧವಾದ ಸ್ವಭಾವವುಳ್ಳದು ಎಂದು ಕಲ್ಪಿಸಿದರೆ ಪ್ರಕೃತವಾದ ಜ್ಞಾನವೆಂದರೆ ಯಾವ ಜ್ಞಾನಪ್ರಮಾಣವೆಂದು ವಿಚಾರ ಮಾಡುತ್ತಿದ್ದೇವೆಯೋ ಅದೇ ಸ್ವತಃ ಪ್ರಮಾಣವೆಂದು ತಿಳಿಯುವುದರಲ್ಲಿ ಬಾಧಕವೇನು? ಹಾಗೆ ಬಾಧಕವಿರುವುದಾದರೆ ಬಾಧಕವಾದ ಜ್ಞಾನವಾದರೂ ಸ್ವತಃ ಪ್ರಮಾಣವಾಗಬಹುದಲ್ಲ! ಹೀಗೆ ಜ್ಞಾನವು ಸ್ವತಃ ಪ್ರಮಾಣವಾಗುವುದಾದರೇ ಜ್ಞಾನತತ್ತ್ವವು ಸಿದ್ಧಿಸುವುದು.

ಜೀವನದಲ್ಲಿ ಜ್ಞಾನದ ಸರ್ವೋತ್ತಮ ಸ್ಥಾನವನ್ನು ತಿಳಿದಿರುವುದೇ ಭಾರತೀಯ ಧರ್ಮದ ಮಹತ್ವ. ಅದು ಸ್ವತಃ ಪ್ರಮಾಣವೆಂದು ಗ್ರಹಿಸುವುದು ಈ ಧರ್ಮದ ರಹಸ್ಯದ ಒಂದು ಆಕಾರ. ಸ್ವತಃ ಪ್ರಮಾಣವಾದ ಜ್ಞಾನದ ಸ್ವರೂಪವೇನೆಂದು ಗ್ರಹಿಸೋಣ:—

ಸ್ವತಃ ಪ್ರಮಾಣವಾಗಬೇಕಾದರೆ ಜ್ಞಾನವು ಒಂದು ವಿಶಿಷ್ಟ ವಸ್ತುವಾಗಬೇಕು. ಎಂದರೆ 'ಇದು ಜ್ಞಾನ' ಎಂಬ ಭಾವದಲ್ಲಿಯೇ ಅದು ಸ್ವತಃ ಪ್ರಮಾಣವೆಂಬ ಭಾವ ಅಡಗಿರಬೇಕು. ಅದು ಸ್ವತಃ ಪ್ರಮಾಣವೆಂಬ ಭಾವದಲ್ಲಿ ಆ ಭಾವಕ್ಕೆ ನಿರ್ವಾಹಕವಾದ ಸಮಸ್ತ ವಿಚಾರವೂ ಅಡಗಿರಬೇಕು. ಈ ವಿಚಾರದಲ್ಲಿ ಆ ಜ್ಞಾನ ಪ್ರಮಾಣವೆನ್ನಲು ಬಾಧಕವಾಗಬಹುದಾದ ನಿಶ್ಚಯ ಅಥವಾ ಶಂಕೆ-ಪರಿಹೃತವಾಗಿರಬೇಕು. ಇಷ್ಟು ವಿಷಯಗಳನ್ನೊಳಗೊಂಡ ಜ್ಞಾನ ಸ್ವತಃ ಪ್ರಮಾಣವಾಗುವುದು.

ಸ್ವತಃ ಪ್ರಮಾಣವಾದ ಜ್ಞಾನವು ಇತರ ಸ್ವತಃ ಪ್ರಮಾಣವಾದ ಜ್ಞಾನ ವಿಶೇಷಗಳಿಗೆ ಸ್ವಾಭಾವಿಕವಾಗಿಯೇ ಸಂಗತವಾಗಿರುವುದು. ಇತರ ಜ್ಞಾನ ಪ್ರವಾಹಕ್ಕೆ ಸಂಗತವಾದ ಜ್ಞಾನವು ಪ್ರಮಾಣವೆಂದು ಭಾರತೀಯರಲ್ಲಿ ನ್ಯಾಯ ವೈಶೇಷಿಕ ಮೊದಲಾದ ದರ್ಶನಗಳು ಪ್ರತೀಚ್ಯರಲ್ಲಿ ಇದಕ್ಕೆ ಸಜಾತೀಯವಾದ ವಾದವನ್ನು (coherence view) ಆಶ್ರಯಿಸಿದವರ ಅಭಿಪ್ರಾಯ.

ಸ್ವತಃ ಪ್ರಮಾಣವಾದ ಜ್ಞಾನದ ಆಕಾರಕ್ಕನುಗುಣವಾಗಿ ವಸ್ತುವಿನ ಆಕಾರವಿರುವುದು. ಇದನ್ನನುಸರಿಸಿಯೇ ಅರ್ಥಕ್ಕೆ ಸದೃಶವಾದ ಜ್ಞಾನ ಪ್ರಮಾಣವೆಂದು ಬೌದ್ಧೈತ ದೇಶಿಗಳೂ ಲಾಕ (Locke) ಮೊದಲಾದ ಪ್ರತೀಚ್ಯವಾದಿಗಳೂ ವಾದಿಸುವರು.

ಸ್ವತಃ ಪ್ರಮಾಣವಾದ ಜ್ಞಾನವು ಜ್ಞಾನ ಪ್ರಪಂಚಕ್ಕೆ ಸಂಗತವಾದುದರಿಂದಲೇ ಅದಕ್ಕೆ ತೃಪ್ತವಾದ ಕಾರ್ಯ (function) ಅಥವಾ ಕಾರ್ಯಕಾರಿತ್ವವಿರುವುದು. ಇದನ್ನನುಸರಿಸಿಯೇ ನ್ಯಾಯವೈಶೇಷಿಕ ಮೊದಲಾದ ದರ್ಶನಗಳು ಜೇಮ್ಸ್ (James) ಮೊದಲಾದ ಪ್ರತೀಚ್ಯವಾದಿಗಳು ವಾದಿಸುವರು.

ಈ ವಾದಗಳು ಜ್ಞಾನ ಸ್ವರೂಪಕ್ಕೆ ಅನುಗುಣವಾಗಿದ್ದರೂ ಜ್ಞಾನಪ್ರಾಮಾಣ್ಯ ನಿಶ್ಚಯವನ್ನು ಅಪೇಕ್ಷಿಸುವುವು ಎಂದರೆ ಜ್ಞಾನವು ಸ್ವತಃ ಪ್ರಮಾಣವಾಗಿ ಸಿದ್ಧಿಸಿದ ಮೇಲೆಯೇ ಈ ವಾದಗಳಿಗೆ ಪ್ರವೃತ್ತಿ. ಈ ನಿಮಿತ್ತ ಇವು ಎಷ್ಟೋ ಪ್ರಬಲವಾಗಿ ನಿರೂಪಿತವಾದರೂ ಜ್ಞಾನ ಪ್ರಮಾಣ ಹೇಗೆ ಎಂಬ ವಿಚಾರಕ್ಕೆ ಸಮರ್ಪಕವಾದ ಉತ್ತರವಾಗುವುದಿಲ್ಲ. ಈ ಉತ್ತರ ಜ್ಞಾನ ಸ್ವತಃ ಪ್ರಮಾಣ ಎಂಬ ಭಾವದಲ್ಲಿ ಮಾತ್ರ ಅಡಗಿರುವುದು. ಜ್ಞಾನ ಪ್ರಮಾಣವೆಂಬಲ್ಲಿ ಆ ಜ್ಞಾನವೇ ಅದರ ಆಧಾರ ಅಥವಾ ಪ್ರಮಾಣ ಎಂದು ಜ್ಞಾನವು ಸ್ವತಃ ಪ್ರಮಾಣ ಎಂಬುದರ ಅರ್ಥ.

ತಾನು ಪ್ರಮಾಣ ಎಂಬುದಕ್ಕೆ ಸಾಧಕವಾದ ವಿಚಾರ ಯಾವತ್ತು ಜ್ಞಾನದಲ್ಲಿ ಅಡಗಿದ ಮೇಲೆ ಅದು ವಿಚಾರಾತ್ಮಕವಾಯಿತು. ಇದೇ ಅರ್ಥದಲ್ಲಿಯೇ ಜ್ಞಾನವು ಯುಕ್ತಿರೂಪವೆಂದು ಜಿಜ್ಞಾಸಾರೂಪವೆಂದು ಶಾಸ್ತ್ರೀಯ ವ್ಯವಹಾರ. ಇದು ಜ್ಞಾನಸ್ವಪ್ರಮಾಣವೆಂಬುದರಿಂದ ಏರ್ಪಟ್ಟ ಭಾರತೀಯ ಧರ್ಮಮಹತ್ವದ ಮತ್ತೊಂದು ರಹಸ್ಯ.

ಜ್ಞಾನವು ಯುಕ್ತಿ ಅಥವಾ ಜಿಜ್ಞಾಸಾರೂಪವೆಂಬುದನ್ನು ಗ್ರಹಿಸಿದ ಮೇಲೆ ಅದು ಸಾಮಾನ್ಯವಾಗಿ ನಾವು ತಿಳಿದಂತೆ ಒಂದು ತಿಳಿವಳಿಕೆ ವಿಶೇಷವೆಂದು ಗ್ರಹಿಸುವುದು ಸಾಧ್ಯವಲ್ಲ. ಮತ್ತೂ ಬೌದ್ಧ ಮೊದಲಾದ ವಾದವನ್ನು ಅನುಸರಿಸಿ ಅದು ನಿರ್ವಿಶೇಷ,

ಅಖಂಡ ಮುಂತಾದ ರೂಪದಲ್ಲಿ ಗ್ರಹಿಸುವುದೂ ಸಾಧ್ಯ ವಲ್ಲ. ನಮ್ಮ ಸಾಮಾನ್ಯ ತಿಳಿವಳಿಕೆಯು ಜ್ಞಾನತತ್ತ್ವ ವನ್ನು ವಿಚಾರ ಮಾಡದಿರುವುದರಿಂದ ಪ್ರಾಪ್ತವಾ ದುದು. ಬೌದ್ಧ ಮೊದಲಾದ ವಾದವು ಇಷ್ಟ ಬಂದ ಯಾವುದೋ ಹಿಂದು ತತ್ತ್ವವನ್ನು ಸಾಧಿಸಬೇಕೆಂಬ ಆಗ್ರಹದಿಂದ ಪ್ರಾಪ್ತವಾದುದು. ಇವು ಜ್ಞಾನಸ್ವರೂ ಪಕ್ಕೆ ಅತಿ ದೂರ.

ಜ್ಞಾನವು ವಿಚಾರಾತ್ಮಕ ಅಥವಾ ಜಿಜ್ಞಾಸಾರೂಪ ವೆಂಬಲ್ಲಿ ವಿಚಾರ ಅಥವಾ ಜಿಜ್ಞಾಸಾ ಎಂಬುದರ ಅರ್ಥ ವಿಶೇಷವನ್ನು ಗಮನಿಸೋಣ. ಪ್ರತಿ ವಿಚಾರ ಅಥವಾ ಜಿಜ್ಞಾಸೆಯಲ್ಲಿ ಪೂರ್ವಪಕ್ಷ, ಉತ್ತರಪಕ್ಷ ಮತ್ತು ಸಿದ್ಧಾಂತ ಅಡಗಿರುವುವು. ಜ್ಞಾನವು ಪ್ರವಾಹವೇ ಹೊರತು ಈ ಪ್ರವಾಹದಲ್ಲಿ ಇದು ಮೊದಲು ಎಂಬು ದಿಲ್ಲ. ಈ ಪ್ರವಾಹ ಅನಾದಿ ಮತ್ತು ಅನಂತ ಪ್ರತಿ ಜ್ಞಾನ ವ್ಯಕ್ತಿಗೂ ಪೂರ್ವರಂಗವಿರುವುದು. ಅದು ಪೂರ್ವ ಜ್ಞಾನವನ್ನನುಸರಿಸಿಯೆ ಸಂಭವಿಸುವುದು. ಹೀಗೆ ಒಂದು ಜ್ಞಾನ ವ್ಯಕ್ತಿಗೆ ಪೂರ್ವರಂಗವಾದ ಜ್ಞಾನವ್ಯಕ್ತಿಗಳನ್ನು ವಿಚಾರ ಮಾಡಿದರೆ ಆ ಪ್ರವಾಹಕ್ಕೆ ಇದು ಮೊದಲು ಎಂದು ನಿಷ್ಕರ್ಷಿಸುವುದು ಸಾಧ್ಯವಲ್ಲ. ಹೀಗೆಯೇ ಪ್ರಸಕ್ತವಾದ ಪ್ರತಿಜ್ಞಾನವು ತನ್ನಿಂದ ಅನಂ ತರ ಸಂಭವಿಸುವ ಜ್ಞಾನಕ್ಕೆ ಪೂರ್ವರಂಗವಾಗುವುದು. ಈ ಕ್ರಮವನ್ನನುಸರಿಸಿ ಜ್ಞಾನಪ್ರವಾಹವು ಅನಂತ ವೆಂದು ಸಿದ್ಧಿಸುವುದು.

ಯಾವ ಜ್ಞಾನ ವ್ಯಕ್ತಿಯನ್ನು ಉದಾಹರಣೆಗೆ ತೆಗೆದುಕೊಂಡರೂ ವ್ಯಕ್ತವಾಗಿಯೊ ಸೂಕ್ಷ್ಮರೂಪದ ಲ್ಲಿಯೊ ಅದಕ್ಕೆ ಅನ್ಯನಹಿತ ಪೂರ್ವರಂಗವಾದ ಜ್ಞಾನ ದಿಂದ ಸಿದ್ಧವಾದ ವಿಷಯದ ಮೇಲಿನ ಆಕ್ಷೇಪವೂ ಈ ಅಕ್ಷೇಪ ಪರಿಹಾರಕವಾದ ಪಕ್ಷವೂ ಇವೆರಡರ ಔಚಿತ್ಯ ವಿಚಾರ ಮೂಲಕವಾಗಿ ಆಕ್ಷೇಪಭಾವದಲ್ಲಿ ಅಡಗಿರುವ ತತ್ವಭಾಗ ಮತ್ತು ಆಕ್ಷೇಪ ಪರಿಹಾರಕವಾದ ತತ್ವ ಇವು ಗಳ ಸಮನ್ವಯದಿಂದ ಏರ್ಪಟ್ಟ ಸಿದ್ಧಾಂತವೂ ಅಡ ಗಿರುವುದು. ಈ ಆಕ್ಷೇಪವೇ ಪೂರ್ವಪಕ್ಷ. ಆಕ್ಷೇಪ ಪರಿಹಾರಿಕವಾದ ಪಕ್ಷವೇ ಉತ್ತರ ಪಕ್ಷ. ಇವುಗಳ ಸಮನ್ವಯವೇ ಸಿದ್ಧಾಂತ.

ನಮ್ಮ ಸಾಮಾನ್ಯ ವ್ಯವಹಾರದಲ್ಲಿ ಒಂದು ನಿಯ ಮಕ್ಕೊಳಪಟ್ಟ ವಾದದಲ್ಲಿ ಪೂರ್ವಪಕ್ಷ, ಉತ್ತರಪಕ್ಷ ಮತ್ತು ಸಿದ್ಧಾಂತಗಳ ವ್ಯಾಪಾರವು ಕಂಡು ಬರುವುದು. ಆದರೂ ಅಂತಹ ವಾದದಲ್ಲಿ ಅನೇಕ ಜ್ಞಾನವ್ಯಕ್ತಿಗಳ ಪ್ರಸಕ್ತಿ ಇರುವುದು. ಪ್ರಕೃತ ನಾವು ಗಮನಿಸುತ್ತಿರು ವುದು ಒಂದೇ ಜ್ಞಾನವ್ಯಕ್ತಿಯಲ್ಲಿನ ವಿಶೇಷಾಂಶಗಳು ಇದನ್ನು ಸೋದಾಹರಣವಾಗಿ ನಿರೂಪಿಸಲು "ಇದು ಘಟ" ಎಂಬ ಜ್ಞಾನವನ್ನು ಪರೀಕ್ಷಿಸೋಣ. ಇದೊಂದು ಪ್ರತ್ಯಕ್ಷ ಜ್ಞಾನವೆಂದು ಭಾವಿಸೋಣ. ಈ ಜ್ಞಾನದಲ್ಲಿ 'ಇದು' ಎಂಬ ಅಂಶದಿಂದ ನಿರೂಪಿತವಾದ ದೇಶಕಾಲ ಮುಂತಾದ ಸಂಬಂಧವೂ 'ಘಟ' ಎಂಬ ಅಂಶದಿಂದ ನಿರೂಪಿತವಾದ ನಾಮ ಉಪಯೋಗ ಮುಂತಾದುವು ಗಳ ಪ್ರಸಕ್ತಿಯೂ ಈ ಪ್ರತ್ಯಕ್ಷ ಜ್ಞಾನಕ್ಕೆ ಒಂದು ನಿಯಮಿತವಾದ ಪೂರ್ವರಂಗವಿದೆ ಎಂಬುದನ್ನು ಸೂಚಿ ಸುವುದು. ಹಾಗೆ ಪೂರ್ವರಂಗವಿಲ್ಲದಿರಲು 'ಇದು' ಎಂದು ದೇಶಕಾಲ ಮುಂತಾದ ಸಂಬಂಧವನ್ನಾಗಲಿ 'ಘಟ' ಎಂಬುದರಿಂದ ನಾಮ ಉಪಯೋಗ ಮುಂತಾದ ಪ್ರಕೃತ ವಿಷಯಕ್ಕೆ ಸಂಬಂಧಪಟ್ಟ ಅಂಶಗಳನ್ನಾಗಲಿ ಗ್ರಹಿಸುವ ಸಂಭವವಿಲ್ಲ. ಏವಂಚ 'ಇದು ಘಟ' ಎಂಬ ಪ್ರತ್ಯಕ್ಷ ಜ್ಞಾನವು ಅನಾದಿ ಪೂರ್ವರಂಗವನ್ನ ಪೇಕ್ಷಿಸುವುದು. ಇದರಂತೆಯೇ ಇದು ಭಾವಿಯಾದ ಸಮಸ್ತ ಜ್ಞಾನ ವ್ಯಕ್ತಿಯನ್ನೂ ಒಂದು ವಿಧದಲ್ಲಿ ವಿಧಾನ ಮಾಡುವುದು. ಈ ನಿಮಿತ್ತ ಅನಂತವಾದ ಜ್ಞಾನ ಪ್ರವಾಹಕ್ಕೆ ಪೂರ್ವರಂಗವಾಗುವುದು.

ಈಗ ಈ ಪ್ರತ್ಯಕ್ಷಾತ್ಮಕವಾದ ಜ್ಞಾನವು ಯುಕ್ತಿ, ವಿಚಾರ, ಅಥವಾ ಜಿಜ್ಞಾಸಾರೂಪವಾಗಿರುವುದು ಹೇ ಗೆಂಬುದನ್ನು ಗಮನಿಸೋಣ. ಪ್ರತ್ಯಕ್ಷವೆಂದು ನಾವು ಕರೆಯುವ ಸಾಮಾನ್ಯ ಜ್ಞಾನದಲ್ಲಿ ಎಷ್ಟು ಇಯತ್ತೆಗಳು (stages) ಇವೆಯೆಂಬುದನ್ನು ದರ್ಶನಗಳು ನಾನಾ ಪ್ರಕಾರವಾಗಿ ವಿವರಿಸಿರುವುವು. ಉತ್ಪತ್ತಿ ಕ್ರಮದಲ್ಲಿ ಪ್ರತ್ಯಕ್ಷ ಜ್ಞಾನವು ಮೊದಲು ನಿರ್ವಿಕಲ್ಪಕವಾಗಿರುವುದು ಎಂದರೆ ದ್ರವ್ಯ, ಗುಣ, ಕರ್ಮ ಮೊದಲಾದ ಯಾವ ಕಲ್ಪ ನೆಗೂ ಒಳಗಾಗದಿರುವ ಭಾವವುಳ್ಳುದೆಂದು. ಅನಂತರ ಈ ಕಲ್ಪನೆಗಳು ಪೂರ್ವ ಸಂಸ್ಕಾರ ಮಹಿಮೆಯಿಂದ ಇದು ದ್ರವ್ಯ ಎಂಬೀ ಮುಂತಾಗಿ ವ್ಯವಹೃತವಾಗಿ ಸವಿ ಕಲ್ಪವೆನಿಸುವುದು ಎಂದು ಬೌದ್ಧ ಕಲ್ಪನೆ. ನಿರ್ವಿಕಲ್ಪ ಭಾವದಲ್ಲಿಯೇ ಸವಿಕಲ್ಪಾವಸ್ಥೆಯನ್ನು ಜೈನದರ್ಶನ ನೋಡುವುದು. ಇದಕ್ಕೆ ಉಪಪಾದಕವಾಗಿ ಅದರಲ್ಲಿಯೇ

ನಾನಾ ಕಲ್ಪನೆಗಳಿಗೆ ಅವಕಾಶಕೊಡುವ ಸ್ಥಾನವಿಶೇಷ ಗಳನ್ನೂ ಅವಗ್ರಹ, ಈಹಾ ಅವಾಯು, ಧಾರಣ ಎಂಬೀ ನಾಮುಗಳಿಂದ ಪ್ರತ್ಯೇಕಿಸುವುದು. ಇದೊಂದು ವಸ್ತು ಎಂದು ಅವಗ್ರಹ, ಇದು ಘಟವಾಗಿರಬಹುದು ಎಂದು ಈಹಾ. ಇದು ಘಟವೇ ಸರಿ ಎಂದು ಅವಾಯು. ಅನಂತರ ಇದು ಘಟವೆಂದು ಅನಂತರ ಕಾಲೀನವಾದ ನಿಶ್ಚಯಕ್ಕೆ ಸಾಧಕವಾದ ಜ್ಞಾನ ಧಾರಣೆ ಎಂಬೀ ವಿಶೇಷಗಳನ್ನು ಸ್ಪಷ್ಟಪಡಿಸುವುದು. ಈ ಎರಡು ದರ್ಶನಗಳ ವಿಚಾರಗಳು ಅನಂತರ ಪ್ರಸಕ್ತವಾದ ದರ್ಶನಗಳಲ್ಲಿ ನಾನಾ ಪ್ರಕಾರವಾದ ಪರೀಕ್ಷೆಗೆ ಅವಕಾಶವನ್ನೂ ಕಲ್ಪಿಸಿಕೊಟ್ಟಿರುವುವು. ಸಂಗ್ರಹವೇ ಧ್ಯೇಯವಾಗಿ ಉಳ್ಳ ಈ ಲೇಖನದಲ್ಲಿ ಅವನ್ನೂ ಪ್ರಸ್ತಾಪಿಸುವುದಿಲ್ಲ.

ಒಟ್ಟಿನ ಮೇಲೆ ಮೇಲ್ಕಂಡ ವಿಚಾರಗಳಿಂದ ಜ್ಞಾನವು ಯಾವಾಗಲೂ ಶುದ್ಧ ನಿರ್ವಿಕಲ್ಪವಾಗಲಾರದು ಎಂದು ಗ್ರಹಿಸೋಣ. ಜ್ಞಾನದಲ್ಲಿನ ಅವಗ್ರಹ ಮುಂತಾದ ಭಾಗ ವಿಶೇಷಗಳನ್ನು ತರ್ಕಿಸೋಣ. ಜ್ಞಾನವು ಮೊದಲು ಅವಗ್ರಹಾವಸ್ಥೆಯನ್ನು ಹೊಂದಲಿ. ಅದು ಈಹಾ ಎಂಬ ಅವಸ್ಥೆಗೆ ಬರಲು ಜಿಜ್ಞಾಸೆಯೇ ಕಾರಣವಾಗಬೇಕಲ್ಲದೆ ಬೇರೆ ಕಾರಣವಿಲ್ಲ. ಈ ಜಿಜ್ಞಾಸೆಯಿಂದ 'ಇದೊಂದು ವಸ್ತು' ಎಂಬ ಪ್ರತ್ಯಕ್ಷ ಜ್ಞಾನವು ಇದು. ಘಟವೊ ಘಟವಲ್ಲವೊ ಎಂಬ ವಿಚಾರಕ್ಕೆ ಅವಕಾಶ ಕೊಡದಿದ್ದ ಮೇಲೆ 'ಇದು ಘಟವಿರಬಹುದು' ಎಂಬ ಈಹಾ ಅವಸ್ಥೆಯನ್ನು ಹೊಂದಲು ಕಾರಣವಿಲ್ಲ. ಘಟವೊ ಘಟವಲ್ಲವೊ ಎಂಬ ಜಿಜ್ಞಾಸೆಯಲ್ಲಿ ಪೂರ್ವಪಕ್ಷ ಉತ್ತರ ಪಕ್ಷಗಳ ತಿಕ್ಕಾಟವಿರುವುದು. ಅನಂತರ ಆ ಸ್ಥಾನಕ್ಕೆ ಯೋಗ್ಯವಾದ ಉತ್ತರಪಕ್ಷವಾದ ಸಿದ್ಧಾಂತವು ಪೂರ್ವಪಕ್ಷತ್ಯಾಗ ಅಥವಾ ನಿರಾಕರಣಪೂರ್ವಕವಾಗಿ ಏರ್ಪಡುವುದು. ಈ ತತ್ತ್ವವನ್ನು ನಾವು ಗ್ರಹಿಸಿದುದೇ ವಾಸ್ತವವಾದರೆ ಅವಗ್ರಹಾವಸ್ಥೆಯನ್ನು ಹೊಂದಿದ ಜ್ಞಾನದಲ್ಲಿಯೇ ಪೂರ್ವ ಉತ್ತರಪಕ್ಷ ಮತ್ತು ಸಿದ್ಧಾಂತ ಭಾಗಗಳನ್ನು ವಿಮರ್ಶಿಸಬಹುದು. ಹೀಗೆ ಜ್ಞಾನವು ಪ್ರತ್ಯಂಶದಲ್ಲಿಯೂ ಜಿಜ್ಞಾಸಾರೂಪವೆಂದು ಸಿದ್ಧವಾಗುವುದು. ನಮ್ಮ ಸಾಮಾನ್ಯ ತಿಳುವಳಿಕೆಯು ಅಜ್ಞಾನ ಮೂಲಕವಾದುದು. ಪ್ರಸಕ್ತವಾದ ಜ್ಞಾನದಲ್ಲಿ ಅನಂತ ಅಂಶಗಳಿದ್ದರೂ ಅವನ್ನು ಗಮನಿಸದೆ ಪ್ರಸಕ್ತವಾಗುವುದು. ಜಿಜ್ಞಾಸೆಗೆ ಆರಂಭಮಾಡಿದರೆ ಈ ವಿಷಯಗಳು ಹೊರಬೀಳುವುವು.

ಹೀಗೆ ಪ್ರತ್ಯಕ್ಷ ಜ್ಞಾನವೇ ಜಿಜ್ಞಾಸಾತ್ಮಕವಾದ ಮೇಲೆ ಅನುಮಾನ ಮೊದಲಾದ ಪ್ರಮಾಣಗಳಿಂದ ಉತ್ಪನ್ನವಾದ ಜ್ಞಾನ ವಿಚಾರವಂತೂ ಹೇಳಬೇಕಾಗಿಲ್ಲ. ಈ ರೀತಿಯಲ್ಲಿ ಜ್ಞಾನ ಸಾಮಾನ್ಯವೂ ಜಿಜ್ಞಾಸಾರೂಪವೆಂದು ಧರ್ಮಗಳಲ್ಲಿ ಶ್ರೇಷ್ಠವಾದ ಜ್ಞಾನತತ್ತ್ವದಲ್ಲಿ ಅಡಗಿರುವ ಮತ್ತೊಂದು ರಹಸ್ಯ.

ತತ್ತ್ವಜಿಜ್ಞಾಸೆಗೆ ಅಧೀನವಾದ ಜ್ಞಾನಸ್ವರೂಪವೇನೆಂಬುದನ್ನು ಈಗ ವಿಚಾರ ಮಾಡೋಣ. ಸಾಮಾನ್ಯವಾಗಿ ನಾವು ಜ್ಞಾನವು ಉತ್ಪನ್ನವಾಗುವ ಮೂರು ನಿಮಿತ್ತಗಳನ್ನು ತಿಳಿದಿರುವೆವು—ಇವು ಪ್ರತ್ಯಕ್ಷ ಅನುಮಾನ ಮತ್ತು ಆಗಮ ಎಂದು. ಪ್ರತ್ಯಕ್ಷವು ಇಂದ್ರಿಯಜನ್ಯ ಜ್ಞಾನ. ಒಂದು ವಸ್ತುವಿನ ದರ್ಶನದಿಂದ ಮತ್ತೊಂದು ವಸ್ತುವಿನ ಜ್ಞಾನವೇ ಅನುಮಾನದಿಂದ ಹುಟ್ಟಿದ ಜ್ಞಾನ. ಶಬ್ದದಿಂದ ಹುಟ್ಟಿದ ಜ್ಞಾನವೇ ಆಗಮದಿಂದ ಹುಟ್ಟಿದ ಜ್ಞಾನ. ಈ ಮೂರು ಜ್ಞಾನಕ್ಕೆ ಸಾಧನವಾದ ನಿಮಿತ್ತದಿಂದ ಪ್ರಮಾಣವೆನಿಸುವುವು. ಇವುಗಳಲ್ಲಿ ಪ್ರತ್ಯಕ್ಷವನ್ನನುಸರಿಸಿ ಅನುಮಾನ ಮತ್ತು ಆಗಮ ಪ್ರಮಾಣಗಳ ಪ್ರವೃತ್ತಿ. ಈ ಕಾರಣ ಪ್ರತ್ಯಕ್ಷವೇ ಸರ್ವ ಜ್ಯೇಷ್ಠ. ಪ್ರತ್ಯಕ್ಷ ಜ್ಞಾನವು ಬಾಹ್ಯೇಂದ್ರಿಯಜನ್ಯವೆಂದು ಸಾಮಾನ್ಯ ಪ್ರಸಿದ್ಧಿ. ಬಾಹ್ಯೇಂದ್ರಿಯಗಳು ಚಕ್ಷುಸ, ಶ್ರೋತ್ರ, ಘ್ರಾಣ, ರಸನ, ತ್ವಕ್ ಎಂದು ಐದು. ಜ್ಞಾತೃವಿನ ಶರೀರದ ಒಳಭಾಗದಲ್ಲಿ ಮತ್ತೊಂದು ಇಂದ್ರಿಯ ಮನಸ್ಸೆಂಬುದು ಸುಖ ದುಃಖ ಮೊದಲಾದ ಆತ್ಮಧರ್ಮಗಳನ್ನು ಗ್ರಹಿಸುವುದಾಗಿಯೂ ಆತ್ಮ ಮತ್ತು ಬಾಹ್ಯೇಂದ್ರಿಯಗಳಿಗೆ ಸಂಬಂಧ ಘಟಕವಾಗಿಯೂ ಇರುವುದೆಂದು ಕೆಲವು ದರ್ಶನಗಳ ಕಲ್ಪನೆ. ವಿಚಾರ ಮಾಡಿದರೆ ಈ ಎಲ್ಲ ರೀತಿಯ ಜ್ಞಾನವೂ ಜ್ಞಾತೃವಿನ ಸಾಕ್ಷಿಯಿಂದ ಸಿದ್ಧವಾಗಬೇಕು. ಹಾಗಲ್ಲದಿದ್ದರೆ ಅವು ವಿಷಯವನ್ನು ತಿಳಿಸುವ ಸಂಭವವೇ ಇಲ್ಲ. ಸಾಕ್ಷಿಯು ಸ್ವಪ್ರಕಾಶಜ್ಞಾನ, ಅದು ನಾನು ಎಂಬ ಆಕಾರವುಳ್ಳುದು. ಇದು ಇತರ ಇಂದ್ರಿಯಗಳಿಂದ ಹುಟ್ಟಿದ ಜ್ಞಾನ ವ್ಯಕ್ತಿಗಳಿಗೆ ಪರಸ್ಪರ ಸಂಬಂಧವನ್ನು ಮತ್ತು ಸಂಬದ್ಧವಾದ ಜ್ಞಾನಕ್ಕೆ ಆತ್ಮಸಂಬಂಧವನ್ನು

ಉಂಟು ಮಾಡುವುದು. ಈ ಅಂಶಗಳನ್ನು ನಾವು ಗಮನಿಸಿದರೆ ಪ್ರತ್ಯಕ್ಷ ಜ್ಞಾನದಲ್ಲಿ ಸಾಕ್ಷಿಜ್ಞಾನ ಶ್ರೇಷ್ಠ ವಾಯಿತು. ಅದು ಜ್ಞಾನವೆನಿಸಲು ಜಿಜ್ಞಾಸೆಯ ನಿಮಿತ್ತವೆಂದು ಹಿಂದಿನ ವಿಚಾರಗಳಿಂದ ಸಿದ್ಧವಾಗಿರುವುದು. ಸಾಕ್ಷಿ ಜ್ಞಾನವನ್ನೂ ಸ್ಪಷ್ಟವಾಗಿ ಗ್ರಹಿಸುವುದು ಒಂದು ಸಿದ್ಧಿ. ಅದು ಒಂದು ಕರ್ಮದ ಕೆಲಸ.

ಹೀಗೆ ಜ್ಞಾನಕ್ಕೆ ಜ್ಞಾನತ್ವ ನಿಯಾಮಕವಾದ ಜಿಜ್ಞಾಸೆಯ ಸ್ವರೂಪವೇನೆಂಬುದನ್ನು ಗ್ರಹಿಸೋಣ. ಮೊದಲನೆಯದಾಗಿ ಅದು ಶಬ್ದದಿಂದ ನಿರೂಪಿತವಾಗುವ ಸ್ವಭಾವವುಳ್ಳದಾಗಿರಬೇಕು. ಜಿಜ್ಞಾಸೆಯಿಂದ ಜ್ಞಾನ ಮತ್ತು ಜ್ಞಾನಕ್ಕೆ ನಿಯತ ವಿಷಯ. ಇದು ಸಿದ್ಧವಾದ ಮೇಲೆ ಶಬ್ದವು ಜಿಜ್ಞಾಸಾಪರವಾಗಿ ಜ್ಞಾನವನ್ನು ನಿರ್ವಹಿಸುವುದಾಗಿರುವ ನಿಮಿತ್ತದಿಂದ ಅದಕ್ಕೆ ಎಂದರೆ ಶಬ್ದಕ್ಕೂ ವಿಷಯಕ್ಕೂ ಸ್ವಾಭಾವಿಕವಾದ ಸಂಬಂಧವಿದೆ ಎಂದು ವ್ಯಕ್ತವಾಗುವುದು. ನಾವು ತಿಳಿಯಲಿ ತಿಳಿಯದಿರಲಿ ಅರ್ಥವು ಹೇಗೆ ಕ್ಲಪ್ತವೊ ಎಂದರೆ ಅದಿರುವ ರೀತಿಯಲ್ಲಿರುವುದೇ ಹಾಗೆ ಅದಕ್ಕೆ ವಾಚಕವಾದ ಶಬ್ದವೂ ನಾವು ಆ ಅರ್ಥದಲ್ಲಿ ಅದನ್ನು ಉಪಯೋಗಿಸಲಿ ಬಿಡಲಿ ಕ್ಲಪ್ತವಾಗಿರುವುದು. ಈ ಅರ್ಥದಲ್ಲಿ ಅದು ನಿತ್ಯ. ಅಂತಹ ಶಬ್ದವನ್ನು ಅದರ ಅರ್ಥದಿಂದ ಅಥವಾ ಅದರಿಂದ ಉತ್ಪಾದ್ಯಮಾನವಾದ ಜ್ಞಾನದಿಂದ ಬಿಡಿಸಬಹುದಾದ ಯಾವ ಸನ್ನಿವೇಶವೂ ಇರಬಾರದು. ಹಾಗಿರಲು ಅದು ನಿತ್ಯವಾಗುವುದಿಲ್ಲ. ಈ ಕಾರಣದಿಂದ ನಿತ್ಯವಾದ ಶಬ್ದವು ನಿರ್ದೋಷವೂ ಆಗಿರಬೇಕು. ನಿತ್ಯ ಮತ್ತು ನಿರ್ದೋಷವಾದ ಶಬ್ದವೂ ಪುರುಷನ ಬುದ್ಧಿಯಿಂದಲೂ ಕಲ್ಪಿತವಲ್ಲ. ಈ ಕಾರಣ ಅದು ಪುರುಷ ದೋಷವಾದ ಅಜ್ಞಾನ, ಮಿಥ್ಯಾಜ್ಞಾನ, ಅಪೂರ್ಣತೆಯಿಂದ ರಹಿತವಾಗಿರುವುದು. ಈ ಅರ್ಥದಲ್ಲಿ ಅದು ಅಪೌರುಷೇಯವೆನಿಸುವುದು. ಹೀಗೆ ಅದು ಅಪೌರುಷೇಯವಾದ ಅಥವಾ ಲೌಕಿಕವಾದ ಶಬ್ದದಿಂದ ವಿಲಕ್ಷಣವಾದುದು. ಅದು ಅಲೌಕಿಕ—ಅದು ಪ್ರಮಾಣವೆನ್ನಲು ಯಾವ ಲೌಕಿಕ ಸನ್ನಿವೇಶವೂ ಸಹಾಯ ಮಾಡಲಾರದು. ಹಾಗೆ ಲೌಕಿಕವಾದ ಪ್ರಮಾಣದಿಂದ ಅದು ಪ್ರಮಾಣವೆಂದು ಸಿದ್ಧಿಸುವುದಾದರೆ ಅದು ನಿತ್ಯ, ನಿರ್ದೋಷ, ಅಪೌರುಷೇಯವಾಗುವುದು ಸಾಧ್ಯವಲ್ಲ. ಹೀಗೆ ಅದು ಸ್ವತಃ ಪ್ರಮಾಣ. ಅದರಿಂದ ಹುಟ್ಟಿದ ಜ್ಞಾನವೇ ಜ್ಞಾನ, ಇತರ ಜ್ಞಾನಗಳು ಆಭಾಸ. ಇದಕ್ಕೆ ವೇದಶ್ರುತಿ ಮುಂತಾದ ಹೆಸರು. ಇದನ್ನು ಗ್ರಹಿಸುವ ಶಕ್ತಿ ಬಂದ ಮೇಲೆ ಪ್ರತ್ಯಕ್ಷವು ಅಜ್ಞಾನದಿಂದೇರ್ಪಟ್ಟ ಹಿಂದಿನ ಅನುಭವಕ್ಕಧೀನವಾದುದರಿಂದ ವೇದವೇ ಸರ್ವೋತ್ತಮ ಪ್ರಮಾಣವೆಂದೇರ್ಪಡುವುದು.

ಹೀಗೆ ವೇದ ಸಿದ್ಧಿಯು ಹಿಂದೂಧರ್ಮದಲ್ಲಿ ಅಡಗಿರುವ ಮಹಾರಹಸ್ಯ. ಇದನ್ನು ಗ್ರಹಿಸಿದ ನಮಗೆ ವೇದಪ್ರಮಾಣವು ವ್ಯಾಪಾರ ಮಾಡುವ ವಿಧಾನವು ತಿಳಿಯಬೇಕಾಯಿತು. ಈ ವಿಧಾನಕ್ಕೆ ಜಿಜ್ಞಾಸೆ ಎಂದು ಹೆಸರು. ಇದುವರೆಗೆ ನಡೆದ ವಿಚಾರ ಯಾವತ್ತು ಜಿಜ್ಞಾಸಾರೂಪವೇ ಆದರೂ ಈಗ ಪ್ರಕೃತವಾದ ಜಿಜ್ಞಾಸೆಯು ವಿಲಕ್ಷಣವಾದುದು. ಈ ಜಿಜ್ಞಾಸೆಯೇ ಇದುವರೆಗಿನ ಜಿಜ್ಞಾಸೆಯ ಫಲ.

ಪ್ರಕೃತವಾದ ಜಿಜ್ಞಾಸೆಯು ವೇದ ಜಿಜ್ಞಾಸೆ ಮತ್ತು ವೇದಮೂಲಕ ವೇದಾರ್ಥ ಜಿಜ್ಞಾಸೆ. ವೇದ ಜಿಜ್ಞಾಸೆ ಎಂದರೆ ವೇದವೆಂದು ಪ್ರಸಕ್ತವಾದ ವಾಕ್ಯವು ನಿತ್ಯವೇ ನಿರ್ದೋಷವೇ, ಅಪೌರುಷೇಯವೇ ಮತ್ತು ಸ್ವತಃ ಪ್ರಮಾಣವೇ ಎಂದು ಪರೀಕ್ಷಿಸಿ ಪ್ರತಿಪಕ್ಷಕ್ಕವಕಾಶವಿಲ್ಲದ ರೀತಿಯಲ್ಲಿ ಸಿದ್ಧಾಂತಿಸುವುದು. ಹೀಗೆ ವೇದ ಸಿದ್ಧಿ ಆಗುವುದು ಅದರ ಅರ್ಥ ಜ್ಞಾನವನ್ನೊಳಗೊಂಡಿರುವುದು ಮತ್ತು ಮತ್ತೊಂದು ವೇದವಾಕ್ಯಕ್ಕೆ ಅವಿರುದ್ಧವಾಗಿರುವುದು. ಇಂತಹ ಸಿದ್ಧಿಯುಳ್ಳ ಪುರುಷಗೆ ವೇದವಾಕ್ಯಗಳಿಗೆ ಆಪಾತತಃ ವಿರೋಧ ಕಂಡುಬಂದರೂ ಅವಕ್ಕೆಲ್ಲ ಒಂದೇ ಅರ್ಥವೆಂದು ವಿಚಾರಪೂರ್ವಕವಾಗಿ ತಿಳಿಯುವುದು. ವೇದವಾಕ್ಯಗಳಿಗೆ ಅವಿರೋಧವನ್ನು ನೋಡುವುದಕ್ಕೆ ಸಮನ್ವಯವೆಂದು ಹೆಸರು. ವೇದವಾಕ್ಯ ಸಮನ್ವಯದಿಂದ ಸಿದ್ಧವಾಗುವ ಇಡೀ ವೇದದ ಅರ್ಥ ಸರ್ವ ರೀತಿಯಲ್ಲಿಯೂ ಪೂರ್ಣ. ಇದಕ್ಕೆ ವೇದಭಾಷೆಯಲ್ಲಿ ಬ್ರಹ್ಮ, ಪರಬ್ರಹ್ಮ, ವಿಷ್ಣು, ನಾರಾಯಣ ಮುಂತಾದ ಹೆಸರು. ಇಂತಹ ಅರ್ಥವು ಗುಣಪೂರ್ಣವಾಗಿರುವುದು. ಪ್ರತಿಗುಣಪೂರ್ಣತೆಯೇ ಅದಾಗಿರುವುದು. ಅದು ಯಾವ ವಿಧವಾದ ಅಪೂರ್ಣತೆಗೂ ಅವಕಾಶ ಕೊಡುವುದಿಲ್ಲ. ನಿರ್ದೋಷವಾಗಿರುವುದು. ಅದನ್ನುಳಿದು ಜ್ಞೇಯವಾದ ವಸ್ತುವಿಲ್ಲ; ಅದೇ ಜ್ಞೇಯ. ಅದರ ಪ್ರಾಪ್ತಿ ಹೊರತು ಮತ್ತೊಂದು ಗಮ್ಯ ವಸ್ತುವಿಲ್ಲ. ಅದೇ ಗಮ್ಯ. ಹೀಗೆ ಗುಣಪೂರ್ಣ,

ನಿರ್ದೋಷ ಜ್ಞೇಯ ಮತ್ತು ಗಮ್ಯ ಎಂಬುದು ನಿರರ್ಗಳವಾಗಿ ಸಿದ್ಧವಾದರೇ ಅದು ಬ್ರಹ್ಮ ವೇದಾರ್ಥ. ಅಂತಹ ಅರ್ಥವನ್ನೂ ತಿಳಿಸುವ ಭಾಷೆಯೇ ಎಂದರೆ ಅಂತಹ ಅರ್ಥವನ್ನು ತಿಳಿಸುವ ಆಕಾರದಲ್ಲಿಯೇ ವೇದವು ವೇದ, ಹೀಗೆ ವೇದವಾಕ್ಯ ಜಿಜ್ಞಾಸೆ ಮೂಲಕವಾದ ಸಮನ್ವಯದಿಂದ ವೇದ ಮತ್ತು ಬ್ರಹ್ಮ ಒಟ್ಟಿಗೆ ಸಿದ್ಧಿಸುವುದು. ಸಂದರ್ಭಾನುಸಾರ ಈ ಸಿದ್ಧಿಯುಂಟಾಗದಿದ್ದರೆ ಅದು ಬುದ್ಧಿದೋಷ. ಈ ಸಿದ್ಧಿಯೇ ವೇದಸಿದ್ಧಿ ಮತ್ತು ಬ್ರಹ್ಮಸಿದ್ಧಿ. ಇದು ಭಾರತೀಯ ಧರ್ಮವಾದ ತತ್ತ್ವಜ್ಞಾನದಲ್ಲಿನ ಪರಮ ರಹಸ್ಯ.

ಪೂರ್ಣವಾದ ಬ್ರಹ್ಮನನ್ನು ತಿಳಿಸುವ ವೇದವನ್ನು ವೇದಾರ್ಥವಾದ ಪೂರ್ಣಬ್ರಹ್ಮನನ್ನು ತಿಳಿದವರು ಯಾರು? ಅವನು ಜೀವನಾದರೆ ಅಪೂರ್ಣನಾದ ಜೀವನು ಪೂರ್ಣಪ್ರಮಾಣವಾದ ವೇದವನ್ನು ಪೂರ್ಣವಾದ ಪ್ರಮೇಯವನ್ನು ತಿಳಿವುದು ಹೇಗೆ? ಇದಕ್ಕುತ್ತರವಾಗಿ ವೇದಾಂತ ವಾಕ್ಯಗಳು ಹೇಗೆ ಸಿದ್ಧಾಂತಿಸುವುವು. ಸರ್ವ ಪ್ರವರ್ತಕವಾದ ಬ್ರಹ್ಮನು ಜ್ಞಾನ ಪ್ರವರ್ತಕ. ಅವನು ಪ್ರಮಾಣ ಪ್ರವರ್ತಕ ಮತ್ತು ಪ್ರಮಾಣ ಜನ್ಯ ಜ್ಞಾನಪ್ರವರ್ತಕ. ಜಿಜ್ಞಾಸೆಯೆ ಅವನ ಜ್ಞಾನದಲ್ಲಿ ಸಾಧನ. ಅವನೇ ಜಿಜ್ಞಾಸಾಪ್ರವರ್ತ.

ಈ ನಿಮಿತ್ತ ಬ್ರಹ್ಮ ಜಿಜ್ಞಾಸೆಯು ಪರಬ್ರಹ್ಮನು ತನ್ನನ್ನು ತಾನು ತಿಳಿಯುವ ಕ್ರಮ. ಅವನನ್ನು ತಿಳಿದವನು ಅವನೇ. ಈ ಕಳೆಯು ಬ್ರಹ್ಮಜಿಜ್ಞಾಸಾದಲ್ಲಿ ಸಿದ್ಧವಾದರೆ ಜಿಜ್ಞಾಸಾಸಿದ್ಧಿಯಾಯಿತು. ಇದೇ ಬ್ರಹ್ಮಜ್ಞಾನ. ಇದೇ ಬ್ರಹ್ಮಪೂರ್ಣತ್ವ ದರ್ಶನ. ಈ ದರ್ಶನವುಳ್ಳವನೇ ಬ್ರಹ್ಮಜ್ಞಾನಿ. ಈ ಬ್ರಹ್ಮಜ್ಞಾನವೇ ಭಾರತೀಯ ಧರ್ಮದ ಮಹತ್ವದಲ್ಲಿ ಅಡಗಿರುವ ಪರಮಮಹತ್ತರವಾದ ರಹಸ್ಯ. ಈ ಪ್ರಮೇಯವನ್ನೇ 'ತಮೇವ ವಿದ್ವಾನ್ ಅಮೃತ ಇಹ ಭವತಿನಾನ್ಯಃ ಪರಿಥಾ ಅಯನಾಯ ವಿದ್ಯತೆ' ಎಂದು ಶ್ರುತಿಯು 'ನಹಿಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ' ಎಂದು ಸ್ಮೃತಿಯೂ ವಿದ್ಯೆ ಯೇವತು ನಿರ್ಧಾರಣಾತ' ಎಂಬ ನಿರ್ಣಾಯಕ ಸೂತ್ರವೂ ಪೂರ್ವೋತ್ತರ ಪಕ್ಷಗಳನ್ನೊದಗಿಸಿ ಸಿದ್ಧಾಂತಕ್ಕೆ ಅನುಕೂಲವಮಾಡಿಕೊಡುವ ಸಮಸ್ತ ದರ್ಶನ ಶಾಸ್ತ್ರಗಳೂ ಘೋಷಿಸುವುವು.

ಒಟ್ಟಿನ ಮೇಲೆ ಭಾರತೀಯ ಸಂಸ್ಕೃತಿಗೆ ತತ್ತ್ವಜ್ಞಾನ ಧರ್ಮಶ್ರೇಷ್ಠ 'ಬ್ರಹ್ಮಜ್ಞಾನ ತತ್ತ್ವಜ್ಞಾನದಲ್ಲಿನ ರಹಸ್ಯ, ಇದಕ್ಕನುಗುಣವಾದ ವ್ಯಾಪಾರವೆಲ್ಲ ಧರ್ಮ ಇಂತಹ ಧರ್ಮಸಾಧನೆಗೆ ತಮ್ಮ ಜೀವನವನ್ನು ಧಾರೆ ಎರೆದಿರುವುದು ಶ್ರೀಮಾನ್ ಹೆಗ್ಗಡೆಯವರ ವೈಯಕ್ತಿಕ ವೈಶಿಷ್ಟ್ಯ.

ಅದ್ವೈತ ಮತ

ಆಯುರ್ವೇದ ಭೂಷಣ, ಯಂ. ವಿ. ಶಾಸ್ತ್ರೀ, ಮಂಗಳೂರು.

ಪ್ರಸ್ತಾವನೆ

೧. ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ* ೨. ಪ್ರಾಣೈಷಣೆ, ಧನೈಷಣೆ, ಪರಲೋಕೈಷಣೆ+—ತ್ರಿವರ್ಗ. ೩. ಧರ್ಮ, ಅರ್ಥ, ಕಾಮ—ತ್ರಿವರ್ಗವು.× ಈ ಮೇಲೆ ಹೇಳಿದ ತ್ರಿವರ್ಗವು ಮೋಕ್ಷೈಷಣೆಯಿಂದ ಸೇರಿದರೆ§ ಚತುರ್ವರ್ಗವೆನಿಸುತ್ತದೆ.

ಸರ್ವ ಮಾನವವಂಶದ ಜೀವನದ ಕ್ರಮ ಮತ್ತು ಅದರ ಮನೋರಥದ ಪ್ರವಾಹವನ್ನು ನಿತ್ಯಜೀವನದ ಹೋರಾಟದಿಂದ ಗ್ರಹಿಸಿ ನಿರ್ಣೈಸಿದ ಬೇರೆ ಬೇರೆ ಸಾಧರ್ಮ್ಯವುಳ್ಳ ವಿಭಾಗಗಳು ವರ್ಗಗಳಾಗಿರುತ್ತವೆ. ಪೌನಃ ಪುನ್ಯ ಮತ್ತು ಅನಾರತದಿಂದ ಇಚ್ಛಿಸಲ್ಪಡುವ ಸಂಕಲ್ಪಕ್ಕೆ ಏಷಣೆ ಎಂದೂ ಅರ್ಥವೆಂದೂ, ತಾತ್ಪರ್ಯ. ಆರ್ಷಗ್ರಂಥಗಳಲ್ಲಿ ಹೇಳುವ ಏಷಣೆಯೂ ಅನಾರ್ಷಗಳಲ್ಲಿ ಹೇಳುವ ಅರ್ಥವೂ ಸಮಾನವಾದ ಅಭಿಪ್ರಾಯ ಉಳ್ಳದ್ದೆಂದು ತಾತ್ಪರ್ಯ.

ಚರಕದಲ್ಲಿ ಹೇಳುವ ಪ್ರಾಣೈಷಣೆ, ಬೃ. ಆರಣ್ಯಕದಲ್ಲಿ ಹೇಳುವ ಪುತ್ರೈಷಣೆ, ಅನಾರ್ಷದಲ್ಲಿ ಹೇಳುವ ಕಾಮವು, ಬೃ. ಆರಣ್ಯಕದಲ್ಲಿ ಹೇಳುವ ಲೋಕೈಷಣೆ, ಚರಕನು ಹೇಳುವ ಪರಲೋಕೈಷಣೆ, ಅನಾರ್ಷದಲ್ಲಿ ಹೇಳುವ ಧರ್ಮವೂ, ಬೃ. ಆರಣ್ಯಕದಲ್ಲಿ ಹೇಳುವ ವಿತ್ತೈಷಣೆ, ಚರಕನು ಹೇಳುವ ಧನೈಷಣೆ, ಅನಾರ್ಷದಲ್ಲಿ ಹೇಳುವ ಅರ್ಥವೂ ಸ್ವಲ್ಪ ವ್ಯತ್ಯಾಸದಿಂದ ಸಾಮಾನಾಧಿಕರಣ್ಯ, ಉಳ್ಳವುಗಳಾಗಿವೆ. ವರ್ಗದ ನಾಲ್ಕನೇ ಭಾಗವಾದ ಮೋಕ್ಷವು ಕೂಡಾ ಆರ್ಷ ಮತ್ತು ಅನಾರ್ಷದಲ್ಲಿ ಸಮಾನವಾದ ಅರ್ಥವುಳ್ಳವುಗಳೆಂದು ತಿಳಿದುಕೊಳ್ಳಬೇಕು.

ಧರ್ಮಜಿಜ್ಞಾಸು ಮತ್ತು ತದರ್ಥಿಗಳಿಗೆ ಪೂರ್ವಮೀಮಾಂಸಾ ಮತ್ತು ಮನ್ವಾದಿಸ್ಮೃತಿಗಳೂ, ಅರ್ಥಜಿಜ್ಞಾಸು ಮತ್ತು ಅರ್ಥಾರ್ಥಿಗಳಿಗೆ ಕೌಟಿಲ್ಯ, ಕಾಮಂದಕೀಯ ಮೊದಲಾದ ಗ್ರಂಥಗಳೂ, ಕಾಮ ಜಿಜ್ಞಾಸು ಮತ್ತು ಕಾಮಾರ್ಥಿಗಳಿಗೆ ವಾತ್ಸ್ಯಾಯನ ತಂತ್ರಾದಿಗಳೂ ಪ್ರಮಾಣಗ್ರಂಥಗಳಾಗಿವೆ. ವೈದಿಕ ಮತ್ತು ಅವೈದಿಕ; ಮುಮುಕ್ಷು ಮತ್ತು ಮೋಕ್ಷಾರ್ಥಿಗಳಿಗೆ ಅನುಕ್ರಮವಾಗಿ ವೈದಿಕ ವೇದಾಂತ ಗ್ರಂಥಗಳೂ, ಅವೈದಿಕ ವೇದಾಂತ ಗ್ರಂಥಗಳೂ ಪ್ರಮಾಣಗಳು. ಮೇಲೆ ಹೇಳಿದ ನಾಲ್ಕು ವಿಭಾಗಗಳನ್ನು ಗೀತೆ ಮತ್ತು ಉಪನಿಷತ್ತುಗಳಲ್ಲಿ ಮುಂದೆ ಹೇಳುವ ರೀತಿಯಲ್ಲಿ ಎರಡು ವರ್ಗವನ್ನಾಗಿ ಮಾಡಿದ್ದಾರೆ.

ಕಠೋಪನಿಷತ್ತಿನಲ್ಲಿ ಶ್ರೇಯಸ್ಸು ಅಂದರೆ ಬೇರೆ, ಪ್ರೇಯಸ್ಸು ಅಂದರೆ ಬೇರೆ. ಬೇರೆ ಬೇರೆ ಅರ್ಥವುಳ್ಳ ಈ ಎರಡು ಮಾರ್ಗಗಳು ಪುರುಷನನ್ನು ಬಂಧಿಸುತ್ತವೆ—ಎಂದು ಹೇಳಿದೆ. ಅಂದರೆ ೧. ಶ್ರೇಯಸ್ಕಾಮರು ೨. ಪ್ರೇಯಸ್ಕಾಮರು ಎಂದು ಎರಡು ವರ್ಗದವರು.† ಗೀತೆಯಲ್ಲಿ ದೈವ ಮತ್ತು ಅಸುರ ಎಂದು ಈ ಲೋಕದಲ್ಲಿ ಎರಡು ಭೂತಸೃಷ್ಟಿಗಳಿವೆಯೆಂದು ಹೇಳಿದೆ.*

ಈ ಧರ್ಮ, ಅರ್ಥ, ಕಾಮ, ಮೋಕ್ಷಗಳು ಸಂಸಾರದಲ್ಲಿ ಸ್ವಸಮಾನಗುಣವುಳ್ಳ ಜನರನ್ನು ತಮ್ಮ ತಮ್ಮ ಕಡೆಗೆ ಎಳೆದು ವರ್ಗೀಕರಣವನ್ನು ಮಾಡುತ್ತವೆ. ಧರ್ಮವು ಧರ್ಮ ಜಿಜ್ಞಾಸು ಮತ್ತು ಧರ್ಮಾರ್ಥಿಗಳನ್ನು ಧಾರ್ಮಿಕರನ್ನಾಗಿಯೂ, ಅರ್ಥವು ಅರ್ಥ ಜಿಜ್ಞಾಸು ಮತ್ತು ಅರ್ಥಾರ್ಥಿಗಳನ್ನು ಆರ್ಥಿಕರನ್ನಾಗಿಯೂ, ಕಾಮವು ಕಾಮಜಿಜ್ಞಾಸು ಮತ್ತು ಕಾಮಾರ್ಥಿಗಳನ್ನು ಕಾಮುಕರನ್ನಾಗಿಯೂ, ಮೋಕ್ಷವು ಮುಮುಕ್ಷು ಮತ್ತು ಮೋಕ್ಷಾರ್ಥಿಗಳನ್ನು ಮುಕ್ತರನ್ನಾಗಿಯೂ ಮಾಡುತ್ತವೆ. ಈ ಮೇಲಿನ ವರ್ಗೀಕರಣದಿಂದ ಮೋಕ್ಷಶಾಸ್ತ್ರಕ್ಕೆ ಯಾರು ಅಧಿಕಾರಿಗಳಾಗಿರಬಹುದೆಂದು ವಾಚಕರ ಮನಸ್ಸಿಗೆ ಹೋಗಬಹುದು?

ಧರ್ಮಾದ್ಯನೇಕ ಅರ್ಥಿಗಳಿಂದ ವರ್ಗಗಳು ಸಾಂಕರ್ಯವನ್ನು ಹೊಂದುವುದೂ ಉಂಟು. ಮುಮುಕ್ಷು ಮತ್ತು ಮೋಕ್ಷಾರ್ಥಿಗಳ ಹಿತಕ್ಕಾಗಿ ಅನೇಕ ಮಹಾಪುರುಷರು ಶ್ರೀ ಶಂಕರಾಚಾರ್ಯರ

*ಬೃ. ಆ. ಅ. ೩. ಬ್ರಾ. ೫. ವ ೧.

+ಚ. ಸೂ. ಅ. ೧೧. ಸೂ. ೧.

×, §ತ್ರಿವರ್ಗೋ ಧರ್ಮ ಕಾಮಾರ್ಥೈಶ್ಚತುರ್ವರ್ಗಃ ಸಮೋಕ್ಷಕೈಃ । ಅ. ಕಾ. ೩. ಬ್ರ. ವರ್ಗ. ಶ್ಲೋ. ೫೭.

†ಕ. ಅ. ೨. ವಲ್ಲಿ ೨. ಮಂ. ೧.

*ಗೀ. ಅ. ೧೬. ಶ್ಲೋ. ೬.

ಜನ್ಮಕ್ಕಿಂತ ಪೂರ್ವದಲ್ಲಿಯೇ ಅನೇಕ ಗ್ರಂಥಗಳನ್ನು ಬರೆದಿದ್ದಾರೆ—ಎಂಬುದು ಶಂಕರಾಚಾರ್ಯರ ಹೇಳಿಕೆಯಿಂದಲೇ ತಿಳಿಯುತ್ತದೆ. ಶ್ರೀ ಶಂಕರಾಚಾರ್ಯರ ಜನ್ಮ ಮತ್ತು ಅವರಿಗಿಂತ ಪೂರ್ವಕಾಲದಲ್ಲಿ ಪ್ರಾಕೃತರು ಮತ್ತು ಲೋಕಾಯತಿಕರು ಚೈತನ್ಯವಿಶಿಷ್ಟವಾದ ಶರೀರವೇ ಆತ್ಮನೆಂದು ತಿಳಿದುಕೊಂಡಿದ್ದರು. ಇತರರು ಚೇತನಗಳಾದ ಇಂದ್ರಿಯಗಳೇ ಆತ್ಮನೆಂದು ತಿಳಿದುಕೊಂಡಿದ್ದರು. ಮನಸ್ಸೇ ಆತ್ಮನೆಂದು ಇನ್ನೂ ಕೆಲವರು ನಂಬಿಕೊಂಡಿದ್ದರು. ಕ್ಷಣಿಕ ವಿಜ್ಞಾನವೇ ಆತ್ಮನೆಂದು ಕೆಲವರ ಸಿದ್ಧಾಂತವಾಗಿತ್ತು. ಶೂನ್ಯವೇ ಆತ್ಮನೆಂದು ಕೆಲವರ ನಿಶ್ಚಯವಾಗಿತ್ತು. ಇನ್ನೂ ಕೆಲವರು ದೇಹಾದಿಗಳಿಂದ ವ್ಯತಿರಿಕ್ತನಾದ ಕರ್ತನೂ ಭೋಕ್ತನೂ ಆದ ಸಂಸಾರಿಯು ಆತ್ಮನೆಂದು ಹೇಳುತ್ತಿದ್ದರು. ಆತ್ಮನು ಭೋಕ್ತನೇ—ಕರ್ತನಲ್ಲ—ಎಂದು ಕೆಲವರು ತಿಳಿದುಕೊಂಡಿದ್ದರು. ಇಲ್ಲಿ ಹೇಳುವ ಆತ್ಮನಿಗಿಂತ ವ್ಯತಿರಿಕ್ತನಾದ ಈಶ್ವರನಿದ್ದಾನೆ. ಯಾವನು ಸರ್ವಜ್ಞ ಮತ್ತು ಸರ್ವಶಕ್ತನೋ ಎಂದು ಹೇಳುತ್ತಾರೆ. ಈ ರೀತಿ ಯುಕ್ತಿವಾದ ಮತ್ತು ಅದರಂತಿರುವ ಮಾತುಗಳನ್ನು ಆಶ್ರಯಿಸಿಕೊಂಡಿರುವ ಬಹು ವಿರುದ್ಧ ತಿಳುವಳಿಕೆಗಳು ಇವೆ—ಎಂದು ಶ್ರೀ ಶಂಕರಾಚಾರ್ಯರು ಹೇಳಿದ್ದಾರೆ.+

ಇರಲಿ. ಕಪಿಲ, ಆದಿನಾಥ, ಗೌತಮ ಬುದ್ಧ, ಕಣಾದ, ಗೌತಮ ಮತ್ತು ಶಾಂಡಿಲ್ಯ ಮೊದಲಾದ ಮಹಾಪುರುಷರು ಶ್ರೇಷ್ಠತರವಾದ ಅನೇಕ ಮೋಕ್ಷ ಗ್ರಂಥಗಳನ್ನು ಬರೆದಿಟ್ಟಿದ್ದಾರಲ್ಲವೇ? ಮತ್ತು ಶ್ರೀ ಶಂಕರಾಚಾರ್ಯರ ವೇದಾಂತಪ್ರವಚನಕ್ಕೆ ಅವಕಾಶವು ಹೇಗೆ ಬಂತು? ಎಂಬ ಪ್ರಶ್ನೆಗೆ-ಯಾವುದಾದರೊಂದನ್ನು ವಿಚಾರಿಸದೆ, ಒಪ್ಪಲ್ಪಡತಕ್ಕವನು ನಿಃಶ್ರೇಯಸದಿಂದ ನಾಶವಾಗಲ್ಪಡುವವನು. ಅನರ್ಥವನ್ನು ಹೊಂದುವನು. ಆದ್ದರಿಂದ ಬ್ರಹ್ಮಜಿಜ್ಞಾಸೆಯ ಪ್ರವಚನದ್ವಾರಾ ವೇದಾಂತ ವಾಕ್ಯಗಳಿಗೆ ಅವಿರೋಧಗಳಾದ ತರ್ಕಾದಿ ಸಾಧನಗಳುಳ್ಳ ವೇದಾಂತವಾಕ್ಯಗಳ ತಿಳುವಳಿಕೆಯ ಇಚ್ಛೆಯು ನಿಃಶ್ರೇಯಸವೇ ಪ್ರಯೋಜನ ಉಳ್ಳಂಥಾದ್ದಾಗುವುದು.× ಹೌದಯ್ಯ! ಮುಮುಕ್ಷುಗಳಿಗೆ ಮೋಕ್ಷ ಸಾಧನಕ್ಕಾಗಿ ಸಮ್ಯಗ್ದರ್ಶನವನ್ನು ನಿರೂಪಣೆ ಮಾಡುವುದಕೋಸ್ಕರ ಕೇವಲ ಸ್ವಪಕ್ಷವನ್ನೇ ಸ್ಥಾಪನೆ ಮಾಡುವುದು ಉಚಿತ. ಅಲ್ಲದೆ ಪರದ್ವೇಷವನ್ನು ಮಾಡುವ ಪರಪಕ್ಷ ನಿರಾಕರಣದಿಂದ ಏನು ಪ್ರಯೋಜನ? ಎಂಬ ಮಾತಿಗೆ—ಹೌದು ಒಳ್ಳೇದು, ಮಹಾಜನರಿಂದ ಸ್ವೀಕೃತಗಳಾದ ಸಾಂಖ್ಯಾದಿ ಮಹಾಶಾಸ್ತ್ರಗಳು ಸಮ್ಯಗ್ಜ್ಞಾನದ ವ್ಯಾಜದಿಂದ ಪ್ರವೃತ್ತಗಳಾಗಲ್ಪಟ್ಟಿವೆ. ಅವುಗಳನ್ನು ಹೊಂದಿ ಕೆಲವು ಮಂದಮತಿಗಳಿಗೆ ಈ ಶಾಸ್ತ್ರಗಳು ಕೂಡಾ ಸಮ್ಯಗ್‌ಜ್ಞಾನಕ್ಕೋಸ್ಕರ ಗ್ರಾಹ್ಯಗಳಾಗಿವೆ ಎಂದು ಅಪೇಕ್ಷೆ ಉಂಟಾದೀತು. ಹಾಗೇನೇ ಗಾಢವಾದ ಯುಕ್ತಿಯ ಸಂಭವದಿಂದಲೂ, ಸರ್ವಜ್ಞರ ಭಾಷಿತವಾಗಿರುವುದರಿಂದಲೂ ಅವುಗಳಲ್ಲಿ ಆದರವು ಉಂಟಾಗಿದೆ.

ಹೀಗಿರುವುದರಿಂದ ಅಂಥಾ ಸಾಂಖ್ಯಾದಿ ತಂತ್ರಗಳಲ್ಲಿ ಅಸಾರತೆಯನ್ನು ಉಪಪಾದನೆ ಮಾಡುವುದಕ್ಕೋಸ್ಕರ ಪ್ರಯತ್ನಿಸಲ್ಪಡುತ್ತದೆ.*—ಎಂದು ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಹೇಳಿದ್ದಾರೆ. ಈ ಅವರ ಹೇಳಿಕೆಯಿಂದ ಆಚಾರ್ಯರ ಉದ್ದೇಶವು ಸ್ಫುಟವಾಗಿ ತಿಳಿಯಲ್ಪಡುವುದು. ಶ್ರೀ ಶಂಕರಾಚಾರ್ಯರ ಜನ್ಮೋದಯ ಕಾಲದಲ್ಲಿ ವೈದಿಕ ಮತವು ಹಲವು ಕಾರಣಗಳಿಂದ ಅದರ ಅನುಯಾಯಿಗಳಲ್ಲಿ ಅಪ್ರೀತಿಯನ್ನು ಉಂಟುಮಾಡಿ, ಅವರ ಸಹಾನುಭೂತಿಯನ್ನು ಕಳೆದುಕೊಂಡಿತ್ತು. ಮಾತ್ರವಲ್ಲ; ವೈದಿಕಮತವು ಅತ್ಯಂತ ಹೀನ ಅಂದರೆ ಶೋಚನೀಯ ಸ್ಥಿತಿಗೆ ಇಳಿದಿತ್ತು. ಸಹಜವಾಗಿ ಆ ಕಾಲದ ಲಕ್ಷಗಟ್ಲೆ ಜನರು ಕೆಲವು ಭಾರತೀಯ ಮಹಾಪುರುಷರಿಂದಲೂ, ಕೆಲವು ವೈದೇಶಿಕ ಧರ್ಮಪ್ರಚಾರಕರಿಂದಲೂ (ಕ್ರಿಶ್ಚಿಯನ್ ಮತ್ತು ಮಹಮ್ಮದೀಯರಿಂದ)+ ಪ್ರಚಾರಿಸಿ ಸ್ಥಾಪಿಸಲ್ಪಟ್ಟ ಮತಗಳಲ್ಲಿ ಸೇರುತ್ತಿದ್ದರು. ಇದನ್ನು ನೋಡಿ ಶ್ರೀ ಶಂಕರಾಚಾರ್ಯರ ಮನಸ್ಸು ಬಹಳ ಕೊರಗುತಿತ್ತು. ಸ್ವಭಾ

+ಬ್ರಹ್ಮಸೂತ್ರ ಶಾಂಕರಭಾಷ್ಯ. ಅ. ೧. ಪಾದ ೧. ಅಧಿ ೧. ಸೂತ್ರ ೧.

×ಬ್ರಹ್ಮಸೂತ್ರ ಶಾಂಕರಭಾಷ್ಯ ಅ ೧. ಪಾದ ೧ ಅಧಿ ೧ ಸೂ. ೧.

*ಶಾಂಕರಭಾಷ್ಯ ಅ. ೨. ಪಾ ೨ ಸೂ ೧.

+ಏವಮನ್ಯಾಸ್ವಪಿವೇದಬಾಹ್ಯಾಸ್ವೀಶ್ವರ ಕಲ್ಪನಾಸು ಯಥಾಸಂಭವಮಸಾಮಂಜಸ್ಯಂ ಯೋಜಯಿತವ್ಯಂ ಅ ೨. ಪಾ. ೨. ಸೂ. ೩೮.

ವತಃ ಆಚಾರ್ಯರು ಸತ್ಯ ಮತ್ತು ಸಮ್ಯಗ್ ಜ್ಞಾನದಲ್ಲಿ ತುಂಬಾ ಆಸಕ್ತಿ ಉಳ್ಳವರಾಗಿದ್ದರು. ಆದ್ದರಿಂದ ಈ ಮೇಲೆ ಪ್ರತಿಪಾದಿಸಿದ ಮತಗಳಿಗೆ ವಿರೋಧವಾಗಿ ತಾವೊಂದು ಬೇರೆ ಮಾರ್ಗವನ್ನು ಜನರಿಗೆ ತೋರಿಸುವುದಕ್ಕೆ ಬಲಾತ್ಕರಿಸಲಿಲ್ಲ. ಅಪ್ಪರ ತನಕ ಪ್ರಚಾರದಲ್ಲಿರುತ್ತಿದ್ದ ಸರ್ವ ಮತಗಳ ತತ್ವವನ್ನು ಮೊಟ್ಟ ಮೊದಲು ತಿಳಿದುಕೊಂಡರು. ತೃಪ್ತಿಯಾಗಲಿಲ್ಲ–ಎಂಬುದನ್ನು ಅವರ ಬ್ರಹ್ಮಸೂತ್ರ ಭಾಷ್ಯವನ್ನು ನೋಡಿದರೆ ಗೊತ್ತಾಗುವುದು. ಪುನಃ ಶ್ರುತಿ, ಸ್ಮೃತಿ, ಪುರಾಣ ಮತ್ತು ಇತಿಹಾಸಾದಿಗಳ ಕಡೆ ತಿರುಗಿ ಅದನ್ನು ಚೆನ್ನಾಗಿ ವಿಮರ್ಶಿಸಿದರು. ಅದರಲ್ಲಿ ಗೀತಾ ಉಪನಿಷತ್ತು ಮತ್ತು ಬ್ರಹ್ಮಸೂತ್ರಗಳನ್ನು ಚುನಾಯಿಸಿದರು. ಈ ಮೂರು ಸಾಹಿತ್ಯಗಳಲ್ಲಿ ಕಂಡಷ್ಟು ಸತ್ಯ, ಸಮ್ಯಗ್ ಜ್ಞಾನ ಮತ್ತು ಸಕಾರಣವನ್ನು ಬೇರೆ ಯಾವ ಸಾಹಿತ್ಯಗಳಲ್ಲಿಯೂ ಕಾಣಲಿಲ್ಲ. ಈ ಮೂರು ಸಾಹಿತ್ಯವನ್ನು ಪ್ರಸ್ಥಾನತ್ರಯವೆಂಬ ಹೆಸರಿನಿಂದ ಕರೆದು ಇದಕ್ಕೆ ಭಾಷ್ಯಗಳನ್ನು ಬರೆದರು. ಇದನ್ನು ಆಧರಿಸಿ ಜನಪ್ರೀತವಾಗುವಂತೆ, ಸತ್ಯ, ಸಮ್ಯಗ್ ಜ್ಞಾನ ಮತ್ತು ಸಕಾರಣವಾದ ಅದ್ವೈತಮತವನ್ನು ಪ್ರಚಾರಿಸಿ, ವೈದಿಕ ಮತವನ್ನು ಪುನರುದ್ಧಾರ ಮಾಡಿದರು.

ಅದ್ವೈತ

ಅದ್ವಯ—ಅದ್ವಯವಾದಿ—ಅದ್ವೈತ—ಅದ್ವೈತವಾದಿ ಅದ್ವಯವೆಂದರೆ ಬುದ್ಧ–ವ–ಅವನ ತತ್ವ–ಹೇಮಾದ್ರಿ ನಿಘಂಟು. ಅದ್ವಯವಾದಿ ಗೌತಮಬುದ್ಧ—ಅಮರಲಿಂಗಾನುಶಾಸನ. ಅದ್ವೈತ–ದ್ವಿತೀಯರಹಿತಃ ಅದ್ವೈತವಾದೀ—ಅದ್ವೈತದ ಅನುಯಾಯಿಗಳು–ಶಬ್ದಕಲ್ಪದ್ರುಮ. ಮೇಲೆ ಹೇಳಿದ ಏಕಾಭಿಪ್ರಾಯವುಳ್ಳ ನಾಲ್ಕು ಶಬ್ದಗಳೊಳಗೆ ಪ್ರಕೃತದ ಪ್ರಬಂಧಕ್ಕೆ ಅದ್ವೈತ ಶಬ್ದವು ಸಂಬಂಧಿಸಿದೆ. ಆದ್ದರಿಂದ ಅದರ ಶಬ್ದಾರ್ಥ ವ್ಯುತ್ಪತ್ತಿಯನ್ನು ಸ್ವಲ್ಪವಾಗಿ ತೋರಿಸುವುದು ಅನುಚಿತವಾಗಲಿಕ್ಕಿಲ್ಲ. **ಅದ್ವೈತ**

ಶಬ್ದವ್ಯುತ್ಪತ್ತಿ:—ದ್ವಿ–ಇಣ್–ದ್ವೇ–ಇತೆ. ದ್ವೀತೇ–ದ್ವೀತೇ–ಏವ–ದ್ವೈತಂ. ನ–ದ್ವೈತಂ–ಅದ್ವೈತಂ. ಪ್ರಮಾಣಗಳು—ಮಲ್ಲಿನಾಥ, ಶಬ್ದಕಲ್ಪದ್ರುಮ, ಸಂಕಲ್ಪ.

ಅರ್ಥವ್ಯುತ್ಪತ್ತಿ:-ಈ ಶಬ್ದವು ಗರುಡ ಪುರಾಣ, ಶ್ರೀ ಚೈತನ್ಯ ಚರಿತಾಮೃತ, ಗೌರಗಣೋದ್ದೇಶದೀಪಿಕಾ ಮತ್ತು ಮಾಂಡೂಕ್ಯ ಉಪನಿಷತ್, ಶಿವ ವಿಷ್ಣು ಪುರಾಣಗಳಲ್ಲಿ ಶಿವ, ವಿಷ್ಣು ಮತ್ತು ಆತ್ಮವಾಚಕಗಳಾಗಿ ಕಂಡು ಬರುತ್ತದೆ. ಮಾಂಡೂಕ್ಯ ಉಪನಿಷತ್ತಿನ ೭ ಮತ್ತು ೧೨ನೇ ಮಂತ್ರದಲ್ಲಿ ಕಂಡು ಬರುವ ಆತ್ಮವಾಚಕ ಅದ್ವೈತ ಪದಕ್ಕೆ* ಶ್ರೀ ಮಧ್ವಾಚಾರ್ಯರು ಅದ್ವೈತಂ–ದ್ವಿತೀನ ಅಂದರೆ ವಸ್ತು ತತ್ವಾಪೇಕ್ಷೆಯಿಂದ ಬೇರೆ ಆತ್ಮಾದಿರೂಪ ದ್ವಿತೀಯ ರೀತಿಯಿಂದ ತಿಳಿಯಲ್ಪಟ್ಟ ವಸ್ತು. ದ್ವೀತಃ ಅದಕ್ಕೆ ಸಂಬಂಧಪಟ್ಟದ್ದು ದ್ವೈತಂ. ದ್ವೈತವೆಂದರೆ ಮಿಥ್ಯಾಜ್ಞಾನ. ಮಿಥ್ಯಾಜ್ಞಾನ ಇಲ್ಲದಿರುವುದೇ ಅದ್ವೈತ ಎಂದು ವಿಷ್ಣುಪರವಾಗಿ ಅರ್ಥಮಾಡಿದ್ದಾರೆ. ತಾನು ಮಾಡಿದ ಅರ್ಥಕ್ಕೆ ಪ್ರತ್ಯಯ–ಪ್ರತ್ಯಾಹಾರ–ಕೌಷಾರವ ಶ್ರುತಿ—ಮಹೋಪನಿಷತ್—ಬ್ರಹ್ಮತರ್ಕ–ಪ್ರಕಟಿಶ್ರುತಿ ಮತ್ತು ಪ್ರಕಾಶಿಕ ಎಂಬ ಗ್ರಂಥಗಳನ್ನು ಉದಾಹರಿಸಿದ್ದಾರೆ. ಶ್ರೀ ಶಂಕರಾಚಾರ್ಯರು ಬ್ರಹ್ಮಪರವಾಗಿ ಅರ್ಥವನ್ನು ಮಾಡಿದ್ದಾರೆ. ಈ ಪ್ರಬಂಧಕ್ಕೆ ಶಂಕರಾಚಾರ್ಯರ ಅರ್ಥವನ್ನು ತೆಗೆದುಕೊಂಡಿದ್ದೇನೆ.

ಅದ್ವೈತದಲ್ಲಿ ಪ್ರತಿಪಾದಿಸಿರುವ ಜಗತ್—ಜೀವ ಮತ್ತು ಈಶ್ವರ (ಬ್ರಹ್ಮ) ವಿಷಯವನ್ನು ಮುಂದಟ್ಟಾಗಿ ತಿಳಿದುಕೊಳ್ಳಲಿಕ್ಕೆ ಅದ್ವೈತಕ್ಕಿಂತ ಬೇರೆ ಕೆಲವು ಗ್ರಂಥಗಳಲ್ಲಿ ಹೇಳಿರುವ ಆ ಮೂರು ವಿಷಯಗಳನ್ನು ಯತ್ಕಿಂಚಿತ್ತಾಗಿ ತಿಳಿದುಕೊಳ್ಳುವುದು ಅಕಾರಣವಾಗಲಿಕ್ಕಿಲ್ಲ. ಈ ಮೂರು ವಿಷಯಗಳಲ್ಲಿ ಬೇರೆ ಕೆಲವು ಗ್ರಂಥಗಳ ಅಭಿಪ್ರಾಯ.

ಜಗತ್—ಜೀವ—ಈಶ್ವರ

ಜಗತ್

ಋಗ್ವೇದದ ನಾಸದೀಯ ಸೂಕ್ತ, ಪುರುಷ ಸೂಕ್ತ ಮತ್ತು ಅನ್ಯತ್ರ ಬಹು ಸಂದರ್ಭಗಳಲ್ಲಿ ಜಗತ್ತಿನ ಸೃಷ್ಟಿ ಮತ್ತು ಲಯವು ವರ್ಣಿಸಲ್ಪಟ್ಟಿದೆ. ಅಂದರೆ ವಿಶ್ವವು ಅಶಾಶ್ವತ ಎಂದು ಹೇಳಿದೆ. ಅದೇ ರೀತಿ

1*ಅಪೇಕ್ಷ್ಯವಸ್ತುಯಥಾರ್ಥಂ ದ್ವಿತ್ವಮನ್ಯಸ್ವರೂಪತಾ । ಇಣ ತಾವಿತಿಧಾತೋಶ್ಚ ತಜ್ಞಾನಂ ದ್ವೈತಮುಚ್ಯತೇ । ಇತಿ ಸಂಕಲ್ಪೇ.

ಅದಕ್ಕೆ ವಿರುದ್ಧ ದ್ಯುಲೋಕವು ಶಾಶ್ವತ. ಪೃಥಿವೀಯು ಶಾಶ್ವತ. ಈ ಪರ್ವತಗಳು ಶಾಶ್ವತ. ಈ ಸರ್ವ ವಿಶ್ವವು ಶಾಶ್ವತ ಎಂದು ಹೇಳಿದೆ.* ಗೀತೆಯಲ್ಲಿ+ ಹಗಲಿನಲ್ಲಿ (ಬ್ರಹ್ಮನ) ಭೂತಗ್ರಾಮವು ಹುಟ್ಟುತ್ತದೆ. ಅಂದರೆ ವ್ಯಕ್ತವಾಗುತ್ತದೆ. ರಾತ್ರಿಯಲ್ಲಿ ಸಾಯುತ್ತದೆ. ಅಂದರೆ ಅವ್ಯಕ್ತವಾಗುತ್ತದೆ—ಎಂದು ಹೇಳಿಯೂ ಅದೇ ಗೀತೆಯಲ್ಲಿ ಆಸುರಸರ್ಗವನ್ನು ವಿವರಿಸುವಾಗ್ಯೆ ಅಸುರರು ಜಗತ್ತನ್ನು ಅಸತ್ಯವೆಂತಲೂ, ಅನೀಶ್ವರ (ಈಶ್ವರನುಳ್ಳದ್ದು ಅಲ್ಲ) ಎಂತಲೂ, ಅಶಾಶ್ವತವೆಂತಲೂ ಹೇಳುತ್ತಾರೆ. ಅಲ್ಲದೆ ಈ ಸರ್ಗವು ಪಂಚಭೂತಗಳ ಮತ್ತು ಸ್ತ್ರೀಪುರುಷರ ಸಂಯೋಗ ವಿಶೇಷದಿಂದ ಉಂಟಾಗಿದೆ ಎಂದು ಹೇಳುತ್ತಾರೆ—ಎಂದು ಹೇಳಿದೆ.× ಗೀ. ಅ. ೯ರಲ್ಲಿ§ ಅನಿತ್ಯ ಮತ್ತು ಸುಖವಿಲ್ಲದಿರುವ ಈ ಲೋಕವನ್ನು ಹೊಂದಿ ನೀನು ನನ್ನನ್ನು ಸೇವಿಸು (ನನ್ನ ಸೇವನೆಯ ಹೊರತು ಈ ಪರಿಸ್ಥಿತಿಯಲ್ಲಿ ನಿನಗೆ ಬೇರೆ ಉಪಾಯವಿಲ್ಲವೆಂದು ಸೂಚನೆ) ಎಂದು ಹೇಳಿದೆ.

ಜೀವ

ಕಠೋಪನಿಷತ್ತಿನಲ್ಲಿ ಸತ್ತ ಮನುಷ್ಯನ ವಿಷಯದಲ್ಲಿ ಕೆಲವರು ಇದ್ದಾನೆ—ಎಂತ, ಕೆಲವರು ಇಲ್ಲವೆಂತ ಹೇಳುವ ಯಾವ ಈ ಸಂಶಯವು—ಎಂಬ ಪ್ರಸ್ತಾವನೆ ಇದೆ.* ಪೂರ್ವದಲ್ಲಿ ವಿದ್ವಾಂಸರಿಂದ ಅಥವಾ ದೇವತೆಗಳಿಂದ ಕೂಡಾ ಈ ವಿಷಯದಲ್ಲಿ ಸಂಶಯ ಮಾಡಲ್ಪಟ್ಟಿತು. ಇದು ಸುಲಭವಾಗಿ ತಿಳಿಯತಕ್ಕದ್ದಲ್ಲ. ಈ ವಿಷಯವು ಅತ್ಯಂತ ಸೂಕ್ಷ್ಮವಾಗಿದೆ ಎಂದು ಕೂಡಾ ಹೇಳಿದೆ.+

ಬೃ. ಆರಣ್ಯಕದಲ್ಲಿ ಜಾರತ್ಕಾರವ, ಆರ್ತಭಾಗ ಎಂಬ ಋಷಿಯು ಯಾಜ್ಞವಲ್ಕ್ಯನನ್ನು ಕೇಳುತ್ತಾನೆ. "ಯಾಜ್ಞವಲ್ಕ್ಯನೇ! ಯಾವಾಗ್ಯೆ ಈ ಪುರುಷನು ಸಾಯುತ್ತಾನೋ ಆವಾಗ್ಯೆ ಈ ದೇಹದಿಂದ ಪ್ರಾಣಗಳು ಮೇಲಕ್ಕೆ ಹಾರುತ್ತವೋ? ಇಲ್ಲವೋ?" ಎಂದು ಕೇಳಿದ್ದಕ್ಕೆ "ಪ್ರಾಣಗಳು ಮೇಲಕ್ಕೆ ಹಾರುವುದಿಲ್ಲ. ಇಲ್ಲಿಯೇನೇ ಲೀನವಾಗುತ್ತವೆ. ಸಾಯುವವನು ಊರ್ಧ್ವಶ್ವಾಸ ತೆಗೆಯುತ್ತಾನೆ. ಉಬ್ಬರಿಸುತ್ತಾನೆ. ಉಬ್ಬರಿಸಲ್ಪಟ್ಟವನು ಸಾಯುತ್ತಾನೆ. ಸತ್ತು ಬಿದ್ದಿರುತ್ತಾನೆ."× ಎಂದು ಉತ್ತರವನ್ನು ಕೊಟ್ಟನು.

§ಬೃ. ಆರಣ್ಯಕದಲ್ಲಿ ಅಭ್ಯಾಹಿತವಾದ ಹಸಿ ಕಟ್ಟಿಗೆಯ ಅಗ್ನಿಯಿಂದ ಧೂಮವು ಪೃಥಕ್ಕಾಗಿ ಯಾವ ರೀತಿ ಹೊರಡುತ್ತದೋ, ಅದೇ ರೀತಿ ಋಗ್ವೇದ ಮೊದಲ್ಗೊಂಡು ಸರ್ವಪ್ರಾಣ್ಯಂತ ವಸ್ತುಗಳೂ ಪರಬ್ರಹ್ಮನ ನಿಶ್ವಸಿತಗಳಾಗಿವೆ ಎಂದು ಇದೆ. ಯಾವ ರೀತಿಯಿಂದ ಚಿಕ್ಕ ಚಿಕ್ಕ ಅಗ್ನಿಕಣಗಳು ಅಗ್ನಿಯಿಂದ ಹೊರಡುತ್ತವೋ ಇದೇ ರೀತಿಯಲ್ಲಿ ಪರಬ್ರಹ್ಮನಿಂದ ಸರ್ವ ಪ್ರಾಣಾದಿ ಸರ್ವ ಭೂತಾಂಶ ವಸ್ತುಗಳು ಹೊರಡುತ್ತವೆ. ಗೀತೆಯಲ್ಲಿ ಜೀವಲೋಕದಲ್ಲಿರುವ ಸನಾತನಗಳಾದ ಜೀವಭೂತಗಳು ನನ್ನದೇ ಅಂಶಗಳಾಗಿವೆ ಎಂದು ಹೇಳಿದೆ.*

ತೃತೀಯ ಮುಂಡಕದ ಪ್ರಥಮ ಖಂಡದ ೧–೨ ಮಂತ್ರಗಳಲ್ಲಿ ಹೇಳುವ ಪಿಪ್ಪಲಾದ ಸುವರ್ಣಪುರುಷನು—ಗೀ-ಅ. ೧೫. ಶ್ಲೋ. ೧೬. ಕೂಟಸ್ಥ ಅಕ್ಷರ ಪುರುಷನು-ಎಂದು ಹೇಳುವುದೂ ಹಿಂದಿನ ಜೀವವಿಷಯಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಯಾರು ಯಾರು ಈ ಪ್ರಾಣಿಯ ಮಕ್ಕಳು, ಅಣ್ಣತಮ್ಮಂದಿಯರು, ಮಿತ್ರರು ಈ ಕರ್ಮ ಭೂಮಿಯಿಂದ ಅನ್ಯ ಲೋಕಕ್ಕೆ ಪ್ರೇತರಾಗಿ ಹೋಗುತ್ತಾರೋ ಅವರು ಇವನ ಹೃದಯಾಕಾಶದಲ್ಲಿ ನೋಡುವುದಕ್ಕೋಸ್ಕರ ಸಿಕ್ಕುವುದಿಲ್ಲ. ಇನ್ನೊಂದೇನೆಂದರೆ, ಯಾರು ತಾನೇ ಈ ಪ್ರಾಣಿಯ ಜೀವಿತ ಬಂಧುಗಳು, ಯಾರು ತಾನೇ ಪ್ರೇತಾವಸ್ಥೆಯಲ್ಲಿರುವ ಬಂಧುಗಳು, ಅಥವಾ ಇನ್ನೂ ಬೇರೆ ಇಚ್ಛಿತ ವಸ್ತುಗಳು ಹೊರಗಿನಿಂದ ಸಿಕ್ಕುವುದಿಲ್ಲವೋ ಆ ಎಲ್ಲವನ್ನೂ ಈ ಹೃದಯಾಕಾಶದೊಳಗೆ ಹೋಗಿ ಹೊಂದುತ್ತಾನೆ-+ ಎಂದು ಹೇಳಿದೆ. ಅಲ್ಲದೆ ವೇದಾಂತಿಗಳು ಹೇಳುವ ಲಿಂಗ ಶರೀರ, ಗೀತೆಯಲ್ಲಿ ಹೇಳುವ ಅಪರಾಪ್ರಕೃತಿ,

---

*ಋ. ಮಂ. ೧೦. ಅ. ೧೨. ಸೂ. ೧೬೩. ಮಂ. ೪.

+ಗೀ. ಅ. ೮. ಶ್ಲೋ. ೧೮.

×ಗೀ. ಅ. ೧೬. ಶ್ಲೋ. ೮

§ಗೀ. ಅ ೯. ಶ್ಲೋ. ೩೩

*ಯೇಯಂ ಪ್ರೇತೇ ವಿಚಿಕಿತ್ಸಾ ಕಠ. ಅ. ೧. ವಲ್ಲಿ. ೧. ಮಂ. ೧೯.

+ದೇವೈರತ್ರಾಪಿ ವಿಚಿಕಿತ್ಸಂಪುರಾ ಕಠ. ಅ. ೧. ಮಂ. ೧. ಮಂ. ॥ ೨೧ ॥

×ಬೃ. ಆ. ಅ. ೩. ಬ್ರಾ. ೨. ಮಂ. ೧೧.

§ಬೃ. ಆ. ಅ. ೪. ಬ್ರಾ, ೫. ಮಂ. ೧೧.

*ಗೀ. ಅ. ೧೫. ಶ್ಲೋ. ೭.

+ಛಾಂ. ಅಧ್ಯಾ ೮. ಖ. ೩. ಮಂ ೧–೨.

ಸವಿಕೃತಕ್ಷೇತ್ರ ಮತ್ತು ಬೃ. ಆರಣ್ಯಕ ಅ. ೨. ಬ್ರಾ ೩. ಮಂ. ೫ರಲ್ಲಿ ಹೇಳುವ ಆಧ್ಯಾತ್ಮಿಕ ಪುರುಷನು ಜೀವನಿಗೆ ಸಂಬಂಧಪಟ್ಟವುಗಳಾಗಿವೆ. ಋ. ಮಂ. ೧೦. ಅ೪. ಸೂ ೯೩. ಮಂ. ೦—೪ರಲ್ಲಿಯೂ ಜೀವಗಳ ವಿಷಯವಿದೆ.

ಈಶ್ವರ

ಋಗ್ವೇದದ ನಾಸದೀಯ ಸೂಕ್ತದಲ್ಲಿ ಈಶ್ವರನ ಅಸ್ತಿತ್ವದಲ್ಲಿ ಸಂಶಯದ ಮಾತುಗಳಿವೆ. ×ಕಠೋಪನಿಷತ್ತಿನಲ್ಲಿ ಆತ್ಮನು ಮನಸ್ಸಿನಿಂದ ಪ್ರತ್ಯಕ್ಷೀಕರಿಸಲಿಕ್ಕೆ ಶಕ್ಯನಲ್ಲ. ಮಾತಿನಿಂದ ವರ್ಣಿಸಲಿಕ್ಕೆ ಶಕ್ಯನಲ್ಲ. ಕಣ್ಣಿನಿಂದ ನೋಡಿ ಹೊಂದಲಿಕ್ಕೆ ಶಕ್ಯನಲ್ಲ. ಇದ್ದಾನೆ ಎಂದು ಹೇಳುವವನಿಗಿಂತ ಹೊರತು ಬೇರೆ ಎಲ್ಲಿ (ಅವನು) ಪ್ರಾಪ್ತವಾಗಲ್ಪಡುವನು. ಇದ್ದಾನೆ ಎಂಬದಾಗಿಯೇ ಪ್ರಾಪ್ತವಾಗಲ್ಪಡತಕ್ಕವನಾಗಿದ್ದಾನೆ ಎಂದು ಹೇಳಿದೆ.

§ಕೇನ-ವ-ತಲವಕಾರ ಉಪನಿಷತ್ತಿನಲ್ಲಿ "ಬ್ರಹ್ಮನ ಸ್ವರೂಪವನ್ನು ಚೆನ್ನಾಗಿ ತಿಳಿದಿದ್ದೇನೆ ಎಂದು ತಿಳಿಯುತ್ತೀಯಾದರೆ, ಈ ಬ್ರಹ್ಮನ ಯಾವ ರೂಪವು ನಿನ್ನಲ್ಲಿ ಅಥವಾ ಯಾವ ರೂಪವು ದೇವತೆಗಳಲ್ಲಿ ತಿಳಿಯಲ್ಪಟ್ಟದ್ದೋ ಅದು ನಿನಗೆ ತಿಳಿಯುವ ಇಚ್ಛೆಗೆ ಯೋಗ್ಯವಾಗಿದೆ—ಎಂದು ತಿಳಿದುಕೊಳ್ಳುತ್ತೇನೆ. ನಾನು ಆ ರೂಪವನ್ನು ಚೆನ್ನಾಗಿ ತಿಳಿದಿದ್ದೇನೋ ಅಥವಾ ಏನೂ ತಿಳಿಯಲಿಲ್ಲವೋ ಎಂದು ನಂಬುವುದಿಲ್ಲ. ಹಾ! ಸ್ವಲ್ಪ ತಿಳಿದಿದ್ದೇನೆ; ನಮ್ಮೊಳಗೆ ಯಾರು ಬ್ರಹ್ಮರೂಪವನ್ನು ತಿಳಿದಿದ್ದೇನೆ ಎಂದು ಹೇಳುತ್ತಾನೋ ಅವನು ತಿಳಿಯಲಿಲ್ಲ. ಯಾರು ತಿಳಿಯಲ್ಲಿಲ್ಲ ಎಂದು ಹೇಳುತ್ತಾನೋ ಅವನು ಸ್ವಲ್ಪ ತಿಳಿದಿದ್ದಾನೆ"—ಎಂದು ಇದೆ.

ಆತ್ಮ ಅಥವಾ ಬ್ರಹ್ಮನ ಕೆಲವು ಪರಿಚಯುಗಳು.

ಒಂದಾಗಿರುವುದು; ಅಕಂಪಿತ ಮತ್ತು ಅದೀಪ್ತವಾಗಿರುವುದು, ಮನಸ್ಸಿಗಿಂತಲೂ ವೇಗ ಉಳ್ಳದ್ದು. ಅದು ಅತಿ ವೇಗ ಅಂದರೆ ಓಡತಕ್ಕ ಇತರ ವಿಷಯಗಳನ್ನು ಅತಿಕ್ರಮಿಸಿ ಓಡುವುದು. ಅಕಂಪಿತವಾಗಿ ನಿಂತಿರುವಾಗ್ಯೆ ಅದರಲ್ಲಿ ವಾಯುವು ಜಲಾಂಶವನ್ನು ಧಾರಣೆ ಮಾಡುವುದು. ಅದು ಕಂಪಿಸುತ್ತದೆ. ಅದು ಕಂಪಿಸುವುದಿಲ್ಲ. ಅದು ಪ್ರಕಾಶಿಸುತ್ತದೆ. ಅದು ಪ್ರಕಾಶಿಸುವುದಿಲ್ಲ. ಅದು ದೂರದಲ್ಲಿಯೂ ಸಮಿಾಪದಲ್ಲಿಯೂ ಇದೆ. ಅದು ವಿಶ್ವದ ಒಳಗೂ, ಹೊರಗೂ ಇದೆ.*

ಕಶ್ಮಲರಹಿತವಾದ ಪ್ರಕಾಶಾತ್ಮಕ ಶುಭ್ರವಸ್ತುವಾಗಿದೆ. ಕಾಯರಹಿತ (ನಿರವಯವ)ವಾಗಿದೆ. ಅಕಲಂಕವಾಗಿದೆ. ವೃದ್ಧಾದಿ ವಯೋರಹಿತವಾಗಿದೆ. ಪರಿಶುದ್ಧ ಮತ್ತು ಪಾಪದಿಂದ (ತ್ರಿಗುಣಗಳಿಂದ) ಅಸ್ಪರ್ಶಿತವಾಗಿದೆ. ಜ್ಞಾನವಿಜ್ಞಾನ ಸ್ವರೂಪವಾಗಿದೆ. ಸ್ವತಂತ್ರವಾಗಿ ವಿಶ್ವವೆಲ್ಲವನ್ನು ವ್ಯಾಪಿಸಿದೆ.+

ಹಿಡಿಯಲಿಕ್ಕೆ ಅಶಕ್ಯನು. ಹಿಡಿಯಲ್ಪಡುವುದಿಲ್ಲ. ಸೀಳಲ್ಪಡಲಿಕ್ಕೆ ಅಶಕ್ಯನು. ಸೀಳಲ್ಪಡುವುದಿಲ್ಲ. ಅಂಟಿಲ್ಲದವನು. ಅಂಟಲ್ಪಡುವುದಿಲ್ಲ. ಕಟ್ಟಲ್ಪಡಲಿಕ್ಕೆ ಅಶಕ್ಯನು. ಕಟ್ಟಲ್ಪಡುವುದಿಲ್ಲ. ದುಃಖಿಸುವುದಿಲ್ಲ. ಹಿಂಸೆಯನ್ನು ಹೊಂದುವುದಿಲ್ಲ.×

ಅಕ್ಷರವಾಗಿದೆ. ಅದು ಸ್ಥೂಲವೂ ಅಲ್ಲ. ಅಣು (ಅತಿ ಚಿಕ್ಕದು)ವೂ ಅಲ್ಲ. ಉದ್ದವೂ ಅಲ್ಲ. ಗಿಡ್ಡವೂ ಅಲ್ಲ. ಆದು ವರ್ಣ ಉಳ್ಳದ್ದಲ್ಲ. ಸ್ನೇಹ ಉಳ್ಳದ್ದೂ ಅಲ್ಲ. ಛಾಯಾರಹಿತವಾದದ್ದು. ಅಂಧಕಾರ ಉಳ್ಳದ್ದಲ್ಲ. ವಾಯುವಿನಿಂದಲೂ ಆಕಾಶದಿಂದಲೂ ರಹಿತವಾದದ್ದು. ಅಂಟು ಉಳ್ಳದ್ದಲ್ಲ (ಸಂಗ ಉಳ್ಳದ್ದಲ್ಲ) ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳುಳ್ಳದ್ದಲ್ಲ. ವಾಙ್ಮನಸ್ಸುಳ್ಳದ್ದಲ್ಲ. ಮುಖ, ಪ್ರಾಣ, ಮತ್ತು ತೇಜಸ್ಸು ಉಳ್ಳದ್ದು ಅಲ್ಲ. ಪರಿಮಿತಿ ಉಳ್ಳದ್ದಲ್ಲ. ಒಳಗಿರುವುದೂ ಅಲ್ಲ. ಹೊರಗಿರುವುದೂ ಅಲ್ಲ. ಅದು ಯಾರನ್ನೂ ತಿನ್ನುವುದಿಲ್ಲ. ಅದನ್ನು ಯಾರೂ ತಿನ್ನುವುದಿಲ್ಲ. §ಬೃ.*ಆ.ರಲ್ಲಿ ಯಾಜ್ಞವಲ್ಕ್ಯನನ್ನು ಕುರಿತು ಉದ್ದಾಲಕ ಆರುಣಿಯು ಬ್ರಹ್ಮನ ಅಂತರ್ಯಾಮಿತ್ವ ವಿಷಯವನ್ನು ಕೇಳಿದ್ದಕ್ಕೆ ಯಾಜ್ಞವಲ್ಕ್ಯನು ಮೂರನೇ ಅಧ್ಯಾಯದ ೭ನೇ ಬ್ರಾಹ್ಮಣದಲ್ಲಿ ಹೇಳಿರುವ ಭೂತಭೌತಿಕಗಳಲ್ಲಿರುವ ಅಂತರ್ಯಾಮಿತ್ವವನ್ನು ಕೂಡಾ ಇಲ್ಲಿ ಅನುಸಂಧಾನ ಮಾಡಿ

×ಕಠ. ಅ. ೨. ವಲ್ಲೀ. ೬. ಮಂ. ೧೨.—೧೩.
§ಕೇ. ಖಂ. ೨. ಮಂ. ೧—೨.

* ಈಶ. ಉ. ೪—೫.
\+ ಈಶ. ಮಂ ॥ ೮ ॥
× ಬೃ. ಆ. ಅ ೩. ಬ್ರಾ ೯. ಮಂ. ೨೬. ಬೃ. ಆ. ಅ. ೪. ಬ್ರಾ ೨. ಶ್ಲೋ ೪.
§ ಬೃ. ಆ. ಅ ೩. ಬ್ರಾ ೮. ಮಂ ೮.
* ಬೃ. ಆ. ಅ ೩. ಬ್ರಾ. ೭.

ಕೊಳ್ಳತಕ್ಕದ್ದು. ಇನ್ನೂ ಹೆಚ್ಚಿನ ಬ್ರಹ್ಮಪರಿಚಯವನ್ನು ವೇದ, ಉಪನಿಷತ್, ಗೀತಾ ಮೊದಲಾದ ಗ್ರಂಥಗಳಲ್ಲಿ ನೋಡಬಹುದು.

ಮೇಲೆ ಸೂಚಿಸಿರುವ ಪ್ರಮಾಣಗಳಿಂದ ಜಗತ್, ಜೀವ, ಈಶ್ವರ ಈ ಮೂರು ವಿಷಯಗಳಲ್ಲಿ ತತ್ವಶೋಧನೆಯ ಅಭಿಪ್ರಾಯ ಮತ್ತು ಭಿನ್ನಾಭಿಪ್ರಾಯಗಳು ಬಹು ಪ್ರಾಚೀನ ಕಾಲದಿಂದಲೇ ನಡೆದುಕೊಂಡು ಬಂದಿರುತ್ತವೆಯೆಂದು ತಿಳಿದುಕೊಳ್ಳಬಹುದು.

ಪ್ರಕೃತ ಅದ್ವೈತದ ವಿಚಾರಕ್ಕೆ ಹೆಜ್ಜೆ ಇಡುವಾಗ್ಯೆ ಮೊಟ್ಟಮೊದಲು ಅದ್ವೈತದರ್ಶನದ ಆವಶ್ಯಕತೆಯು ಯಾಕೆ ಬಂತು? ಎಂಬ ಪ್ರಶ್ನೆಯು ಹೊರಡುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಕೊಡಬೇಕಿದ್ದರೆ, ಸೃಷ್ಟಿಯ ವಿಷಯದಲ್ಲಿ ಬೇರೆ ಬೇರೆ ಕೆಲವು ಮತದವರ ಅಭಿಪ್ರಾಯವನ್ನು ಸೂಚಿಸಬೇಕಾಗುತ್ತದೆ.

ಅಸುರರು, ನಾಸ್ತಿಕರು, ಚಾರ್ವಾಕರು, ಲೋಕಾಯತಿಕರು—ಮೊದಲಾದವರ ಅಭಿಪ್ರಾಯ:—ಪ್ರಪಂಚವು ನಿತ್ಯ. ಇದು ಯಾರಿಂದಲೂ ನಿರ್ಮಿಸಲ್ಪಟ್ಟದ್ದಲ್ಲ. ಸ್ವಪ್ರಕಾಶಿತವಾಗಿದೆ. ಇದಕ್ಕೆ ಪ್ರಮಾಣ:—ಜಾತಿ ಪರಂಪರೆಯಿಂದ ಅವಿಚ್ಛಿನ್ನವಾಗಿ ಬಂದುಕೊಂಡಿರುವ ಪ್ರತ್ಯಕ್ಷವೇ ಪ್ರಮಾಣ. ಈ ಪ್ರಪಂಚದ ಹುಟ್ಟುವಿಕೆಯನ್ನಾಗಲೀ ನಾಶವನ್ನಾಗಲೀ ಕಂಡವರಿಲ್ಲ. ಪ್ರಪಂಚವು ಹುಟ್ಟುತ್ತದೆ. ನಾಶವಾಗುತ್ತದೆ—ಎಂದು ಹೇಳುವವರ ಬುದ್ಧಿಯ ಕಲ್ಪನೆ ಅಲ್ಲದೆ ಸಮ್ಯಗ್‌ಜ್ಞಾನದ ಸತ್ಯಗ್ರಹಿಕೆಯು ಸಿಕ್ಕುವುದಿಲ್ಲ. ಈಶ್ವರನು ಸರ್ವಜ್ಞನು. ಸರ್ವಭೂತಗಳ ಸುಹೃತ್ (ಮಿತ್ರನು), ಸರ್ವಭೂತಗಳ ಹೃದಯದಲ್ಲಿ ನಿಂತಿದ್ದಾನೆ—ಎಂದು ಹೇಳುತ್ತಾರೆ. ಸರ್ವಜ್ಞನಾದ ಪರಮೇಶ್ವರನು ಅನಾಂತಾನಂತ ಕಲ್ಪಗಳಿಂದ ಅಸರ್ವಜ್ಞ ಅಂದರೆ ಅಜ್ಞಗಳಾದ ಅನಂತ, ಜೀವಜ, ಅಂಡಜ, ಉದ್ಭಿಜ್ಜ ಪ್ರಜೆಯನ್ನು ಹುಟ್ಟಿಸುತ್ತಿದ್ದಿಲ್ಲ. ಅವನು ಹುಟ್ಟಿಸುವ ಸಾಮರ್ಥ್ಯದಿಂದ ಹುಟ್ಟಿಸಿದನು ಎಂದು ಹೇಳಿದರೆ, ಹಾ! ಹುಟ್ಟಿಸಲಿ. ಅವನು ಹುಟ್ಟಿಸಿದ್ದು ಹೌದಾದರೆ ಅವನ ಸರ್ವಜ್ಞತ್ವವು ಬುಡದಿಂದಲೇ ನಾಶವಾಗುವುದು. ಅವನು ಸರ್ವಭೂತಗಳ ಸುಹೃತ್ ಎಂದು ಹೇಳಿದೆ. ಇಲ್ಲಿ ಅನಾದಿಕಾಲದಿಂದ ಬಂದಿರುವ ವೈರಿದ್ವಂದ್ವಗಳಲ್ಲಿ ಅಂದರೆ ಸುರಾಸುರರಲ್ಲಿ ಈಶ್ವರನು ಯಾರ ಮಿತ್ರ? ಗೋ ವ್ಯಾಘ್ರ, ಕೇರೆ, ಕಪ್ಪೆ, ಹಾವು ಮುಂಗಸಿ, ದುರ್ಬಲ ಪ್ರಬಲರು, ಹಿಂಸ್ಯಹಿಂಸಕರು—ಇವೇ ಮೊದಲಾದ ಪ್ರಕರಣಗಳಲ್ಲಿ ಈಶ್ವರನು ಯಾರ ಸುಹೃತ್? ಈಶ್ವರನು ಸರ್ವ ಭೂತಗಳ ಹೃದಯದಲ್ಲಿ ನಿಂತಿದ್ದಾನೆ ಎಂದು ಹೇಳಿದೆ. ಹಾಗಿದ್ದರೆ ಸರ್ವಪ್ರಾಣಿಗಳ ಮನೋರಥವು ಅವುಗಳ ಸಂಕಲ್ಪದಂತೆ ನಿರ್ವಿಘ್ನವಾಗಿ ಸಿದ್ಧಿಸಬೇಕಾಗಿತ್ತು. ಅದು ಯಾಕೆ ಸಿದ್ಧಿಸುವುದಿಲ್ಲ? ಸಿದ್ಧಿಸದಿರುವುದಕ್ಕೆ ಅವರ ಕರ್ಮವೇ ಕಾರಣವೆಂತ ಹೇಳಬಹುದು. ಹಾಗಾದರೆ ಭೂತಸಂಬಂಧವಾದ ಕರ್ಮವನ್ನು ಹೋಗಲಾಡಿಸಿ, ಭೂತಗಳ ಮನೋರಥವನ್ನು ಸಾಧಿಸಿಕೊಡದಿರುವ ಈಶ್ವರನು ಹೃದಯದಲ್ಲಿ ನಿಂತುಕೊಂಡು ದೇಹಕ್ಕೆ ಭಾರಾಧಿಕವನ್ನು ಮಾಡುವ ಪ್ರಸಂಗವಲ್ಲವೇ? ಈ ಕಾರಣಗಳಿಂದ ಈಶ್ವರನು ಈ ಅತ್ಯಂತ ದಾರುಣ ದುಃಖಮಯವಾದ* ಪ್ರಪಂಚವನ್ನು ಸೃಷ್ಟಿಸಿದನು ಎಂದು ಹೇಳುವುದು ಪಾರಮಾರ್ಥಿಕವಲ್ಲ. ಪಾರಮಾರ್ಥಿಕವಾಗಿ ಜೀವನೂ ಇಲ್ಲ. ಈಶ್ವರನೂ ಇಲ್ಲ. ಪ್ರಪಂಚವು ಸ್ವಸಿದ್ಧವಾದ ಪರಸ್ಪರ ಯೋಗದಿಂದ (ಮದ್ಯದಿಂದ ಮದಶಕ್ತಿಯಂತೆ) ಜನ್ಯವಾದ ಸ್ವಶಕ್ತಿಯಿಂದ ನಡೆಯುವುದು ಎಂದು ಹೇಳುತ್ತಾರೆ.

ಸೃಷ್ಟಿಯು ಕರ್ತನೆಂದು ಸಂಭಾವಿಸುವ ಈಶ್ವರನ ಕರ್ಮವಲ್ಲ. ಸೃಷ್ಟಿಯು ಅನಿತ್ಯವೆಂದೂ, ಆರಂಭದಲ್ಲಿ ಅದು ಅದರ ಸಂಪತ್ತಿಲ್ಲದೆ, ಈಶ್ವರಾರ್ಪಿತ ಸಂಪತ್ತಿನಿಂದ ಅದು ಜನ್ಮವೆತ್ತಿತೆಂದು ಹೇಳುವುದೂ, ಸತ್ಪ್ರಮಾಣಗಳಿಂದ ಸಿದ್ಧವಾದರೆ, ಅದಕ್ಕೆ ಒಬ್ಬ ಕರ್ತನು ಬೇಕಾಗುವನು. ಈ ವರೆಗೆ ಯಾರೂ ಅಂಥ ಪ್ರಮಾಣಗಳಿಂದ ಸಾಧಿಸಲಿಲ್ಲ. ಕಾರಣ, ಸೃಷ್ಟಿಗೆ ಕರ್ತನಿಲ್ಲ. ಸ್ವಸಂಪತ್ತಿನ ಮಹಿಮೆಯಿಂದ ಆದ್ಯಂತವಿಲ್ಲದಿರುವ ಸ್ಥಾಯಿಧರ್ಮದ ವಸ್ತುವಾಗಿದೆ. ಅದರ ಸಂಪತ್ತಿನ ಮಹಿಮೆಯಿಂದಲೇ ಸರ್ವ ಪ್ರಾಪಂಚಿಕ ವ್ಯವಹಾರಗಳು ನಡೆಯುತ್ತವೆಂದು ನಮ್ಮ ತಿಳುವಳಿಕೆ. ಈಶ್ವರವಾದಿಗಳು ಲೌಕಿಕ ವ್ಯವಹಾರದ ಅನುಭವದಿಂದ ಕಾರ್ಯಕಾರಣಕ್ಕೆ ನಿತ್ಯಸಂಬಂಧವನ್ನು ಗಂಟು ಹಾಕಿಕೊಂಡು ಕಾರ್ಯ ಸಾಮಾನ್ಯಕ್ಕೆ ಕಾರಣ ಸಾಮಾನ್ಯವು ಅನಿವಾರ್ಯ ವಿಷಯವೆಂಬ ಸಿದ್ಧಾಂತವನ್ನು ಮಾಡಿಕೊಂಡು ಕಾರ್ಯರೂಪವಾದ ಪ್ರಪಂಚಕ್ಕೆ ಕಾರಣನೊಬ್ಬನು ಬೇಕು. ಅಂಥಾ ಮಹಾಶಕ್ತಿಯುಕ್ತ

---

*ಅಸುಖಂ ಲೋಕಮಿಮಂ ಪ್ರಾಪ್ಯ-ಗೀ, ಅ. ೯. ಶ್ಲೋ ೩೩.

ನಾದ ಅಪ್ರತಿಮ ಕಾರಣನೊಬ್ಬನು ದೇವಮನುಷ್ಯ ಭೂತಾದಿಗಳಲ್ಲಿಲ್ಲ. ಅವರಿಂದ ಪ್ರತ್ಯೇಕನಾಗಿರುವವನು ಒಬ್ಬನು ಬೇಕು. ಅವನೇ ಈಶ್ವರನು ಎಂದು ಹೇಳುತ್ತಾರೆ. ಈ ಹೇಳಿಕೆಯು ನ್ಯಾಯವಲ್ಲ. ಯಾವ ಯುಕ್ತಿಯಿಂದ ಕಾರ್ಯಕಾರಣದ ನಿರ್ಣಯವು ಸಾಧಿಸಲ್ಪಟ್ಟಿದೆಯೋ ಮತ್ತು ಯಾವ ಯುಕ್ತಿಯಿಂದ ಕಾರ್ಯಕಾರಣದ ಉದ್ದೇಶ ಮತ್ತು ಅದರ ಪ್ರಯೋಜನವು ಹೇಳಲ್ಪಟ್ಟಿದೆಯೋ ಆ ಯುಕ್ತಿಯಿಂದಲೇ ಈಶ್ವರನೂ ಕಾರ್ಯನಾಗುತ್ತಾನೆ. ಅವನ ಜನ್ಮಕ್ಕೂ ಒಂದು ಕಾರಣ. ಆ ಕಾರಣಕ್ಕೆ ಮತ್ತೊಂದು ಕಾರಣ—ಎಂದು ಕಾರ್ಯಕಾರಣಗಳ ಪ್ರವಾಹವೂ ಹಿಂದಕ್ಕೆ ತಳ್ಳಿದಷ್ಟು ಮತ್ತೂ ದೂರಕ್ಕೆ ಹೋಗುತ್ತದೆ. ಇದರಿಂದ ವ್ಯವಸ್ಥೆಯು ದುಸ್ಸಾಧ್ಯವಾಗಿ ಕೊನೆಗೆ ಒಂದು ಕಡೆಯಲ್ಲಿ ನಿಲ್ಲಬೇಕಾಗುವುದು. ಅದಕ್ಕಿಂತ ಅಧಿಷ್ಠಾನ ಕರ್ತಾ, ನಾನಾವಿಧ ಕರಣಗಳು, ನಾನಾ ಕಾರ್ಯೋತ್ಪತ್ತಿಗೆ ಬೇಕಾಗುವ ಬಹುವಿಧ ಚೇಷ್ಟೆಗಳು ಇವುಗಳೆಲ್ಲವನ್ನೂ ಕರ್ಮ, ಕರ್ಮಗಳ ಫಲ ಇವುಗಳೊಂದಿಗೆ ಅನ್ಯೋನ್ಯಯೋಗದಿಂದ ಉತ್ಪನ್ನವಾಗುವ ಪಂಚಭೂತಗಳ ಶಕ್ತಿಯ ಮೇಲೆಯೇ ಹೊರಿಸುವುದು ಸುಕರ ಮತ್ತು ಸುಖಸಾಧ್ಯವಲ್ಲವೇ? ಈ ಹೇಳಿಕೆಯಿಂದ ಈಶ್ವರವಾದಿಗಳು ಕೈಕೊಂಡ ಯುಕ್ತಿಯಿಂದಲೇ ಸೃಷ್ಟಿಯ ಕರ್ತನಾದ ಈಶ್ವರನೂ, ಫಲವನ್ನು ಭೋಗಿಸುವ ಜೀವಗಳೂ, ಸಂಬಂಧಿಸಿರುವ ಮುಕ್ತಿ, ಸ್ವರ್ಗ, ನರಕಗಳೂ ಇಲ್ಲವೆಂದು ಸಿದ್ಧವಾಗುತ್ತದಲ್ಲವೇ? ಈ ತತ್ವದ ತಿರುಳನ್ನು ಅರಿತ ಶ್ರೀಕೃಷ್ಣನು ಗೀತೆಯಲ್ಲಿ ಪ್ರಭುವು ಕರ್ತೃತ್ವವನ್ನೂ, ಕರ್ಮಗಳನ್ನೂ, ಕರ್ಮಫಲ ಸಂಯೋಗವನ್ನೂ ಲೋಕಕ್ಕೋಸ್ಕರ ಸೃಷ್ಟಿ ಮಾಡಲಿಲ್ಲ. ಇವುಗಳಲ್ಲಿ ಸ್ವಭಾವವೇ ಪ್ರವರ್ತಿಸುತ್ತದೆ. ಒಬ್ಬನ ಪಾಪವನ್ನಾಗಲೀ ಪುಣ್ಯವನ್ನಾಗಲೀ ವಿಭುವು ಗ್ರಹಿಸುವುದೂ ಇಲ್ಲ. ಕೊಡುವುದೂ ಇಲ್ಲ. ಪ್ರಾಣಿಗಳ ಜ್ಞಾನವು ಅಜ್ಞಾನದಿಂದ ಮುಚ್ಚಲ್ಪಟ್ಟಿದೆ. ಆದ ಕಾರಣ ಅವರು ಮೋಹಯುಕ್ತರಾಗಿದ್ದಾರೆ—ಎಂದು ಹೇಳಿದ್ದಾನೆ.*

ಈಶ್ವರನು ಪೂರ್ಣನಾದರೆ, ಅವನಿಗೆ ಸೃಷ್ಟಿಯಿಂದ ಅಪೂರ್ಣತ್ವ.

ಈಶ್ವರನು ಪೂರ್ಣನು (ಪರಿಪೂರ್ಣನು) ಎಂಬ ಬಿರುದಿನಿಂದ ಕರೆಯಲ್ಪಡುತ್ತಾನೆ. ಪೂರ್ಣನೆಂದರೆ ರಾಗದ್ವೇಷಗಳಿಂದ ವಿರಹಿತನೆಂದರ್ಥ. ಸೃಷ್ಟಿ ಮಾಡಿದ್ದು ಈಶ್ವರನೆಂತಾದರೆ, ಯಾರಿಗೋಸ್ಕರ ಏನು ಉದ್ದೇಶದಿಂದ ಮಾಡಿದ? ಎಂಬ ಪ್ರಶ್ನೆಗಳು ಬರುತ್ತವೆ. ಅಲ್ಲದೆ ತಾನು ಮಾಡಿದ ಸೃಷ್ಟಿಯಲ್ಲಿ ಕೆಲವರನ್ನು ದುಃಖಿಗಳಾಗಿಯೂ, ಇನ್ನೂ ಕೆಲವರನ್ನು ಸುಖಿಗಳಾಗಿಯೂ ಯಾಕೆ ಸೃಷ್ಟಿಸಿದ? ಈ ಗೊಂದಲಕ್ಕಿಂತ ದೂರವಿರುತ್ತಿದ್ದರೆ, ಅವನ ಪೂರ್ಣತ್ವಕ್ಕೆ ಹಾನಿ ಬರುತ್ತಿದ್ದಿಲ್ಲವಲ್ಲವೇ? ಸೃಷ್ಟಿಯನ್ನು ಮಾಡಿದ ಮಾತ್ರದಿಂದ ಈಶ್ವರನ ಪೂರ್ಣತ್ವಕ್ಕೆ ಹಾನಿ ಏನು? ಸೃಷ್ಟಿ ಮಾಡಿದ್ದರಿಂದ ಅವನ ಪೂರ್ಣತ್ವವು ಇನ್ನೂ ಮೆರೆದಂತೆ ಆಗುವುದಿಲ್ಲವೇ? ಈಶ್ವರನು ಫಲಾಪೇಕ್ಷೆಯಿಲ್ಲದೆ ಕರ್ಮಗಳಲ್ಲಿ ಉದಾಸೀನನಾಗಿಯೂ, ಅಸಕ್ತನಾಗಿಯೂ* ಸೃಷ್ಟಿ ಮಾಡಿದರೆ ಅವನಿಗೆ ಕರ್ಮಗಳು ಅಂಟುವುದಿಲ್ಲ. ಆದುದರಿಂದ ನಿರಪವಾದನಾದ ಅವನ ಪೂರ್ಣತ್ವಕ್ಕೆ ಹಾನಿ ಬರುವುದಿಲ್ಲವೆಂದು ಹೇಳುವುದು ನ್ಯಾಯವಲ್ಲ. ಶ್ರೀ ಕೃಷ್ಣನು ಗೀತೆಯಲ್ಲಿ ಯಜ್ಞ ಮತ್ತು ತಪಸ್ಸುಗಳ ಭೋಕ್ತೃವಾದ ನನ್ನನ್ನು ಎಂದೂ, ನಾನು ತಾನೇ ಸರ್ವಯಜ್ಞಗಳ ಭೋಕ್ತೃವೂ ಪ್ರಭುವೂ ಆಗಿದ್ದೇನೆ ಎಂದೂ+ ಯಾವಾತನು ಭಕ್ತಿಯಿಂದ ಪತ್ರ, ಪುಷ್ಪ, ಫಲ ಅಥವಾ ನೀರನ್ನು ಕೊಡುತ್ತಾನೋ ಭಕ್ತಿಯಿಂದ ಉಪಹರಿಸಲ್ಪಟ್ಟ ಪವಿತ್ರಾತ್ಮನ ಆ ವಸ್ತುಗಳನ್ನು ತಿನ್ನುತ್ತೇನೆ ಎಂದೂ ಹೇಳಿದ್ದಾನೆ.× ಹಾಗಾದರೆ ಅವನಲ್ಲಿ ಕರ್ಮಫಲದ ಅಸಕ್ತತೆಯು ಎಲ್ಲಿ ಉಂಟು? ಇನ್ನೊಂದು ಮಾತು. ಪ್ರಲಯಾಂತದಲ್ಲಿ ಸೃಷ್ಟಿಯು ಹೇಗಾಯಿತು? ವಿಚಾರವಿಲ್ಲದೆ, ಸಂಕಲ್ಪವಿಲ್ಲದೆ ಸೃಷ್ಟಿಯಾಯಿತೇ? ಪ್ರಲಯಾಂತದಲ್ಲಿ ಆತ್ಮನು§ ಲೋಕಗಳನ್ನು ಸೃಷ್ಟಿಸುವೆನೆಂದು ನೋಡಿದ, ವಿಚಾರಿಸಿದ ಎಂದು ಉಂಟು. ಇದರಿಂದ ಈಶ್ವರನು ಸಂಕಲ್ಪ ಮತ್ತು ವಿಚಾರಪೂರ್ವಕವಾಗಿಯೇ ಸೃಷ್ಟಿಸಿದ. ಏನನ್ನು ಸೃಷ್ಟಿಸಿದ? ಅಸುಖ ಅಂದರೆ ಅತ್ಯಂತ ದಾರುಣ ದುಃಖಮಯವಾದ

*ಗೀ. ಅ. ೫. ಶ್ಲೋಕ ೧೪-೧೫.

*ನಚಮಾಂತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।
ಉದಾಸೀನವದಾಸೀನಮಸಕ್ತಂತೇಷು ಕರ್ಮಸು ।
ಗೀ. ಅ ೯. ಶ್ಲೋ.

+ಗೀತಾ. ಅ. ೬ ಶ್ಲೋ. ೨೯.-ಗೀತಾ. ಅ. ೯. ಶ್ಲೋ. ೨೪-

×ಗೀತಾ. ಅ. ೯. ಶ್ಲೋ. ೨೬.

§ಐತರೇಯ. ಖಂ. ೧. ಮಂ. ೧.

ಪ್ರಪಂಚವನ್ನು ಸೃಷ್ಟಿಸಿದ. ಸೃಷ್ಟಿಸಿದ ನಂತರ ನಾನು ಕರ್ಮದಲ್ಲಿ ಅಸಕ್ತನಾಗಿ ಫಲಾಪೇಕ್ಷೆಯಿಲ್ಲದೆ ದುಃಖ ಮಯವಾದ ಸೃಷ್ಟಿಯನ್ನು ಸೃಷ್ಟಿಸಿದೆ ಅಂದರೆ ಈಶ್ವರನು ಅಪರಾಧರಹಿತನಾಗುವುದು ಹೇಗೆ? ಲೋಕದಲ್ಲಿ ಒಂದು ಕಡೆ ಯಾವುದೋ ಒಂದು ವಸ್ತು ವಿಷಯದಲ್ಲಿ ಎರಡು ಪಕ್ಷದವರಿಗೆ ಪ್ರಬಲವಾದ ಕಲಹವಾಗಿ ಒಂದು ಪಕ್ಷ ದವರು ಇನ್ನೊಂದು ಪಕ್ಷದ ಕೆಲವರನ್ನು ಕೊಂದು ಹಾಕಿದರು—ಎಂದು ಅನ್ನುವ. ಅವರ ಮೇಲೆ ಕೋರ್ಟಿ ನಲ್ಲಿ ಅಭಿಯೋಗ ನಡೆದು; ಇಂಥವರು ಆಪಾದಿತರೆಂದು ಸಾಕ್ಷ್ಯಾದಿ ಸಾಧನಗಳಿಂದ ನಿಶ್ಚಯವಾಯಿತೆನ್ನುವ. ಆ ಸಮಯದಲ್ಲಿ ಆಪಾದಿತರು ನಾವು ಫಲಾಪೇಕ್ಷೆಯಿ ಲ್ಲದೆ ಹತ್ಯಕರ್ಮದಲ್ಲಿ ಅನಾಸಕ್ತರಾಗಿ ಹತ್ಯವನ್ನು ಮಾಡಿ ದ್ದೇವೆ. ಆದ್ದರಿಂದ ಆ ಮರಣಕರ್ಮವು ನಮ್ಮನ್ನು ಅಂಟಿಸುವುದಿಲ್ಲವೆಂದರೆ ಆಪಾದಿತರು ಶಿಕ್ಷೆಯಿಂದ ಮುಕ್ತರಾಗಲ್ಪಡುವರೇ? ಒಂದು ವೇಳೆ ಮುಕ್ತರಾದರೂ ಆ ಕರ್ಮದ ಕರ್ತೃತ್ವವು ಅವರನ್ನು ಬಿಟ್ಟು ಹೋ ದೀತೇ? ಅಲ್ಲದೆ ನೈಷ್ಕಾಮ್ಯ ಮತ್ತು ನೈಷ್ಕರ್ಮ್ಯ ನ್ಯಾಯಗಳು ಅಪೂರ್ಣ ಜೀವಗಳಿಗೆ ಸಂಬಂಧಿಸಿರು ವುವು. ಅಲ್ಲದೆ ದಿಗ್ದೇಶ ಕಾಲಗಳನ್ನು ಅತೀತನಾಗಿ ಅನಾದ್ಯಂತನಾಗಿ ಪೂರ್ಣನೆಂದು ಖ್ಯಾಪಿಸಿಕೊಳ್ಳುವ ಈಶ್ವರನಿಗೆ ಆ ನ್ಯಾಯಗಳೇ ಅಂಟುವುದಿಲ್ಲ. ಅಂಟು ತ್ತದೆಂದು ಹೇಳುವದು ಪ್ರಮಾಣವಿರೋಧ.

ಈಶ್ವರನು ತನ್ನ ಈಶ್ವರತ್ವವನ್ನು ಖ್ಯಾಪಿಸುವ ಫಲೋದ್ದೇಶದಿಂದ ಸೃಷ್ಟಿಯನ್ನು ಮಾಡಿರಬೇಕು. ಇದಕ್ಕೆ ಕೃಷ್ಣನು ಗೀತೆಯ ೧೦–೧೧ ಅಧ್ಯಾಯಗಳಲ್ಲಿ ಹೇಳಿರುವ ವಿಭೂತಿಗಳೂ, ಮಹಾತ್ಮ್ಯೆಗಳೂ ಸಾಕ್ಷಿ ಗಳಾಗಿವೆ. ಅಲ್ಲದೆ ಅರ್ಜುನನೇ, ನನ್ನಿಂದ ಪರತರ ವಾದ ವಸ್ತು ಬೇರೊಂದು ಯಾವುದೂ ಇಲ್ಲ* ಎಂದು ಗೀತೆಯಲ್ಲಿ ಹೇಳಿದ ಮಾತು ಇನ್ನಷ್ಟು ಬಿಗುತರವಾದ ಸಾಕ್ಷಿಯಾಗಿದೆ.

ಈ ವರೆಗಿನ ಮಾತುಗಳಿಂದ ಈಶ್ವರನು ಸೃಷ್ಟಿ ಕರ್ತನೆಂದು ಹೇಳುವುದು ಪ್ರಾಮಾಣಿಕವಲ್ಲ. ಒಂದು ವೇಳೆ ಸೃಷ್ಟಿಯನ್ನು ಅವನೇ ಸೃಷ್ಟಿಸಿದನೆಂದು ಒಪ್ಪಿ ಕೊಳ್ಳೋಣ. ಹಾಗಾದರೆ ಅವನು ಸೃಷ್ಟಿಯನ್ನು ಯಾರಿ ಗೋಸ್ಕರ ಮಾಡಿದ? ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಅವನು ಅವನ ಸಂತತಿಗಳಾದ ನಮಗೋಸ್ಕರ ಮಾಡಿದ ನೆಂದು ಹೇಳಬೇಕಾಗುತ್ತದೆ. ಹಾಗಾದರೆ ಸಂತತಿಯ ಮನೋರಥವನ್ನು ಪೂರೈಸುವಷ್ಟು ಸೃಷ್ಟಿಯನ್ನು ಪೂರ್ಣವಾಗಿ ಯಾಕೆ ಮಾಡಲಿಲ್ಲ?

ಇನ್ನೊಂದು ಕೊನೆಯ ಸಾಕ್ಷಿ. ಫಲಾಪೇಕ್ಷೆಯಿ ಲ್ಲದೆ ಅಸಕ್ತನಾಗಿ ಕರ್ತವ್ಯಕರ್ಮಗಳನ್ನು ಮಾಡು ವುದೇ ಸ್ವಭಾವವಿರೋಧವಾಗಿ ಕಂಡುಬರುತ್ತದೆ. ಸೃಷ್ಟಿನಿಯಮಕ್ಕೂ ವಿಪರೀತವಾಗಿ ಕಂಡುಬರುತ್ತದೆ. ಅಲ್ಲದೆ ಈ ವೇದವು ಈಶ್ವರಜ್ಞಾನವೆಂದು ಅನಾದಿ ಕಾಲದಿಂದ ನಂಬಿಕೊಂಡು ಬರುತ್ತೀರಷ್ಟೆ. ಅಂಥಾ ವೇದಗಳ ಅಭಿಪ್ರಾಯಕ್ಕೂ ವಿರೋಧ ಫಲೋದ್ದೇಶಗ ಳನ್ನು ಇಟ್ಟುಕೊಂಡು ಸಕ್ತರಾಗಿ ಕರ್ತವ್ಯಕರ್ಮಗಳನ್ನು ಮಾಡಿಕೊಂಡು ಬರುವ ರೂಢಿಗೆ ಪ್ರಮಾಣಗಳು ವೇದ ಗಳಲ್ಲಿ ಅನೇಕ ಕಡೆ ಕಂಡುಬರುತ್ತದೆ. ಸಾಕ್ಷಿಗೋಸ್ಕರ ಒಂದೆರಡು ಮಂತ್ರಗಳು ಉದಾಹರಿಸಲ್ಪಟ್ಟಿವೆ.+

ಸೃಷ್ಟಿಯು ಈಶ್ವರನ ಸಂತತಿಯ ಮನೋ ರಥದ ದೃಷ್ಟಿಯಿಂದ ಅಪೂರ್ಣ.

ನಮ್ಮ ಮನೋರಥದ ದೃಷ್ಟಿಯಿಂದ ಸೃಷ್ಟಿಯು ಅಪೂರ್ಣವಾಗಿದೆ. ಮೂರು ಲೋಕಗಳೊಳಗೆ ಒಂದು ಭೂಲೋಕವನ್ನು ಮಾತ್ರ ಆಧರಿಸಿ ಅಪೂರ್ಣತ್ವವನ್ನು ವಿಚಾರಿಸೋಣ. ಜೀವಜ, ಅಂಡಜ, ಉದ್ಭಿಜ್ಜ ಜೀವಿಗ ಳೊಳಗೆ ತಾವು ತಾವು ಅನುಭವಿಸುವ ಸುಖದುಃಖಗ ಳನ್ನೂ ಪರಸ್ಪರ ತಿಳಕೊಳ್ಳುವಂತೆ ತಕ್ಕದಾದ ಜ್ಞಾನ ಮತ್ತು ಭಾಷೆಯನ್ನು ತಯಾರಿಸಿಕೊಡಲಿಲ್ಲ. ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗಿ ಬರುವಂಥಾ ಪ್ರಯಾಣಸೌಕರ್ಯಗಳನ್ನು ಒದಗಿಸಿ ಕೊಡಲಿಲ್ಲ. ಒಂದು ಇನ್ನೊಂದನ್ನು ಭಕ್ಷಣೆ ಮಾಡಿಕೊಂಡು, ಜೀವಿ ತವನ್ನು ಸಾಗಿಸುವ ಮಾರ್ಗವನ್ನು ತೋರಿಸಿದ್ದಾನಲ್ಲದೆ, ಯಾರೂ ಯಾರನ್ನೂ ಹಿಂಸೆಮಾಡದೆ, ಜೀವನ ಮಾಡಿ ಕೊಳ್ಳಲಿಕ್ಕೆ ಬೇಕಾದ ಆಹಾರವಸ್ತುಗಳನ್ನು ಕಲ್ಪಿಸಿ ಕೊಡಲಿಲ್ಲ. ಸಾಯುವವರು ಎಲ್ಲಿಗೆ ಹೋಗುತ್ತಾರೆ? ಹುಟ್ಟುವವರು ಎಲ್ಲಿಂದ ಬರುತ್ತಾರೆ? ಎಂಬುವ ವಿದ್ಯೆ ಯನ್ನು ಸತ್ತು ಹುಟ್ಟುವ ಎಲ್ಲರಿಗೂ ಹೇಳಿಕೊಡಲಿಲ್ಲ. ಯಾರಿಗೂ ಹೇಳಿಕೊಡಲಿಲ್ಲ. ಮೂರು ಲೋಕದಲ್ಲಿರುವ ಲೌಕಿಕ ಜೀವಿಗಳಿಗೆ, ಅನ್ಯೋನ್ಯ ವ್ಯವಹಾರವನ್ನು

+ಋ. ಮಂ. ೧ ಅ. ೧. ಮಂ ೯ । ಋ. ಮಂ. ೧೦. ಅ. ೮. ಸೂ. ೯೦. ಮಂ. ೧೬.

ಮಾಡಿಕೊಳ್ಳಲಿಕ್ಕೆ ಯಾವುದೊಂದು ವ್ಯವಸ್ಥೆಯನ್ನೂ ಮಾಡಿಕೊಡಲಿಲ್ಲ. ಈಶ್ವರನಿಗಿಂತ ಅಧಿಕ ಈಗಿನ ವೈಜ್ಞಾನಿಕರು ನಮ್ಮ ಎಷ್ಟೋ ಪ್ರತಿಕೂಲತೆಗಳನ್ನು ಹೋಗಲಾಡಿಸಿ, ಭೂಲೋಕದ ಬೇರೆ ಬೇರೆ ದ್ವೀಪ, ದೇಶ, ಪ್ರದೇಶಗಳಲ್ಲಿ ವಸತಿಯನ್ನು ಮಾಡಿಕೊಂಡಿರುವ ನಮ್ಮೊಳಗೆ ಸುಖದುಃಖಗಳನ್ನು ಅರಿತುಕೊಂಡು, ಸುಖವನ್ನು ಅನುಭವಿಸುವ, ದುಃಖವನ್ನು ಹೋಗಲಾಡಿಸುವ ಉದ್ದೇಶದಿಂದ ಅನುಕೂಲಗಳಾದ ಸಾಧನಗಳನ್ನು ಒದಗಿಸಲಿಲ್ಲವೇ? ಉದಾಹರಣೆಗಾಗಿ–*1. ಮುದ್ರಣಯಂತ್ರ, 2. ಘಡಿಯಾರ, 3. ದೂರದರ್ಶಿಯಂತ್ರ, 4. ಉಗಿನಾವೆ, 5. ಉಗಿಬಂಡಿ, 6. ವಿದ್ಯುಚ್ಛಕ್ತಿ, 7. ವಾರ್ತಾತಂತ್ರೀ, 8. ಶಬ್ದಗ್ರಾಹೀಯಂತ್ರ, 9. ರಶ್ಮಿಕ್ಷೇಪ, 10. ವಿನಾತಂತ್ರೀ, 11. ವಾಯು ವಿಮಾನ, 12. ವ್ಯೋಮಯಾನ, ಮತ್ತು 13. ವಿಶ್ವದರ್ಶಿ ಮೊದಲಾದ ಯಂತ್ರಗಳನ್ನು ಒದಗಿಸಿ ಕೊಟ್ಟಿದ್ದಾರೆ. ಪ್ರಕೃತ ಇವುಗಳಿಂದ ನಮ್ಮ ಜೀವನ ಕ್ರಮವು ಎಷ್ಟು ಅಭಿವೃದ್ಧಿಯಾಗುತ್ತಾಇದೆ ಎಂಬುದನ್ನು ನಾವು ಅನುಭವಿಸುತ್ತೇವೆ.

ಈಶ್ವರನು ಸೃಷ್ಟಿಗೆ ಕರ್ತನಾಗುತ್ತಿದ್ದರೆ, ಈ ಚಟುವಟಿಕೆಗಳೆಲ್ಲಾ ಈಶ್ವರನಿಂದ ಸಾಕ್ಷಾತ್ ಬರಬೇಕಿತ್ತು. ಇವೆಲ್ಲಾ ಇರಲಿ. ಈಶ್ವರನು ಸ್ವಯಂಪ್ರಕಾಶಕನು, ಸೃಷ್ಟಿಕರ್ತಾ, ಮಹಾ ಸಮರ್ಥ, ಸರ್ವ ಭೂತಗಳ ಸ್ನೇಹಿತ ಎಂತ ಆದ ಮೇಲೆ, ಅವನ ಸರ್ವ ಸಂತತಿಗಳಿಗೆ ಯಾಕೆ ಕಾಣಿಸಿಕೊಳ್ಳುವುದಿಲ್ಲ? ಕಾಣಿಸಿಕೊಳ್ಳಲಿಕ್ಕೆ ಅವನಿಗೆ ನಾಚಿಕೆಯೋ? ಭಯವೋ? ಅಥವಾ ಸ್ವಾರ್ಥವೋ ಹೇಗೂ ಇರಲಿ. ಸೃಷ್ಟಿಯು ಅಪೂರ್ಣವಾಗಿ ಅನುಭವಿಸಲ್ಪಡುವುದರಿಂದ ಈಶ್ವರನು ಈ ಸೃಷ್ಟಿಯನ್ನು ಮಾಡಿದ್ದಾನೆಂದು ಹೇಳುವವರು ನಿರಪರಾಧಿ. ಈಶ್ವರನ ಮೇಲೆ ಒಂದು ದೊಡ್ಡ ಅಪವಾದವನ್ನು ಹೊರಿಸುವುದಷ್ಟೇ ಪ್ರಯೋಜನ ನಮಗೆ ಕಾಣುತ್ತದೆ.

ಬ್ರಹ್ಮೇಶ್ವರರು

ಈ ಮೊದಲು ಬ್ರಹ್ಮೇಶ್ವರವಾದಿಗಳ ಪಕ್ಷವೆಂದು ಹೇಳಿದೆಯಷ್ಟೇ. ಇಲ್ಲಿ ಬ್ರಹ್ಮವೆಂದರೆ ವೇದಾಂತದಲ್ಲಿ ಸಚ್ಚಿದಾನಂದ, ಅನಂತ, ಅದ್ವಯವೆಂಬ ಪದಗಳಿಂದ ನಿರೂಪಿತವಾದ ಆತ್ಮನೆಂಬ ಅರ್ಥವು. ಈಶ್ವರನೆಂದರೆ* ಪುರುಷ ಅಥವಾ ಈಶ್ವರನೆಂಬ ಅರ್ಥ. ಇಲ್ಲಿ ಬ್ರಹ್ಮವಾದಿಗಳು ಹೇಳುವ ಸೃಷ್ಟಿಯ ಕ್ರಮವನ್ನು ಅದ್ವೈತದ ವಿಚಾರ ಕಾಲದಲ್ಲಿ ಸೂಚಿಸುವೆನು.

ಈಶ್ವರ ಅಥವಾ ಜೀವವಾದಿಗಳು ಏನನ್ನು ಹೇಳುತ್ತಾರೆಂಬುದನ್ನು ಈ ಮೊದಲು ಪ್ರತಿಪಕ್ಷದವರು ಎಬ್ಬಿಸಿದ ಆಕ್ಷೇಪವಚನಗಳಲ್ಲಿ ನಿರ್ವಾಚಿಸಿದ್ದೇನೆ. ಕ್ರಮದಿಂದ ಪ್ರಾಪ್ತವಾದ ಸಂದರ್ಭವನ್ನು ಅನುಸರಿಸಿ, ಸ್ವಲ್ಪಾಂಶವನ್ನು ಇಲ್ಲಿಯೂ ಹೇಳುವೆನು. ಜೀವಗಳು ಪರಮಾತ್ಮನ ಅಂಶಗಳು+ ಹೇಗೆ ಅಗ್ನಿಯಿಂದ ಕ್ಷುದ್ರಗಳಾದ ಅಗ್ನಿಯ ಕಣಗಳು ಉತ್ಪನ್ನವಾಗುತ್ತವೋ ಹಾಗೆಯೇ ಪರಮಾತ್ಮನಿಂದ ತದಂಶಗಳಾದ ಜೀವಕಣಗಳು ಹುಟ್ಟುತ್ತವೆ§—ಎಂದು ಕೆಲವು ಜೀವವಾದಿಗಳು ಅನ್ನುತ್ತಾರೆ.

ಇನ್ನೂ ಕೆಲವರು ಜೀವಗಳು—ಅನಾದಿಗಳು, ಅನಂತಗಳು, ಅಸಂಖ್ಯಾತಗಳು, ಚೇತನಾತ್ಮಕಗಳು, ಅಣುಪರಿಮಾಣುಗಳು, ಸುಖದುಃಖಭೋಗಿಗಳು, ಕರ್ಮಬದ್ಧಗಳು, ಈಶ್ವರನ (ಅಂದರೆ ಸೃಷ್ಟಿಕರ್ತನ) ಅಧೀನಗಳು, ಹೀನ ಮತ್ತು ಉತ್ತಮ ಕರ್ಮಗಳ ಫಲಕ್ಕೆ ಅನುಸಾರವಾಗಿ ಅತಿ ಸೂಕ್ಷ್ಮವಾಗಿ ಅದೃಶ್ಯಗಳಾಗಿರುವ ಕ್ರಿಮಿಯಿಂದ ಮೊದಲ್ಗೊಂಡು ಸ್ತಂಬಪರ್ಯಂತದ ಅದಲುಬದಲಿನ ಜನ್ಮ ಉಳ್ಳವುಗಳು, ಸ್ತ್ರೀಪುರುಷ ಪ್ರತ್ಯಯವಿಲ್ಲದವುಗಳು—ಇವೇ ಮೊದ

---

*1. Printing (Inventor: caxton of England—1472), 2. Clock (Inventor: Galico—1583), 3. Telescope (Inventor: Golileo—1609), 4. Steamer (1802), 5. Railway (Stephenson-1814), 6. Electric Force (Inventor: Faraday—1831), 7. Telegram 1844), 8. Phonograph (Inventor: Edison—1877), 9. X-ray (Inventor: Rontgen—1895). 10. Wireless(Inventor: Marconi—1895), 11. Motor Car (Inventor: Deimler—1885), 12. Aeroplane (Inventor: Wright—1903), 13. Television (Inventor: Mr. Baird—1925).

*ಉಪದ್ರಷ್ಟಾನುಮಂತಾಚ ಭರ್ತಾ ಭೋಕ್ತಾ ಮಹೇಶ್ವರಃ ಪರಮಾತ್ಮೇತಿ ಚಾಪ್ಯುಕ್ತೋ ದೇಹೇಸ್ಮಿನ್ ಪುರುಷಃ ಪರಃ । ಗೀ. ಅ. ೧೩. ಶ್ಲೋ ೨೨.

+ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ॥ ಗೀ. ಅ, ೧೫. ಶ್ಲೋ. ೭ ॥

§ಬೃ. ಆ. ಅ. ೨. ಮಂ. ೨೦.

-ಲಾದ ಧರ್ಮಗಳುಳ್ಳವುಗಳು. ಅಲ್ಲದೆ, ಈ ಜೀವಗಳಲ್ಲಿ ಈ ರೀತಿ ಹೇಳುವವರೂ, ಇದನ್ನು ಕೇಳುವವರೂ ಸೇರಿದ್ದಾರೆ. ಇವರಲ್ಲಿ ಕೆಲವರು ಜೀವನು ಅಣುಪರಿಮಾಣನಲ್ಲ. ಬ್ರಹ್ಮನನ್ನು ಬ್ರಹ್ಮವಾದಿಗಳು ಹೇಳುವಂತೆ ವಿಭು ಅಂದರೆ ಸರ್ವವ್ಯಾಪಕನು—ಎಂದು ಹೇಳುವವರಿದ್ದಾರೆ.

ಇನ್ನು ಕೆಲವರು ಜೀವಗಳು ಮಧ್ಯಮಪರಿಮಾಣಗಳು ಎಂದೂ ಹೇಳುತ್ತಾರೆ. ಜೀವವಾದಿಗಳಲ್ಲಿ ಕೆಲವರು ಜಗತ್ತಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ, ನಿತ್ಯ ಸ್ಥಿರವಾದ ಕಾರ್ಯವು ಎಂದು ಹೇಳುತ್ತಾರೆ. ಇನ್ನೊಂದು ಪಕ್ಷದವರು ಸೃಷ್ಟಿಯು ಈಶ್ವರನಿಂದ ರಚಿಸಲ್ಪಟ್ಟಿದೆ ಎಂದು ಹೇಳುತ್ತಾರೆ. ಕೆಲವರು, ಸೃಷ್ಟಿಯು ಈಶ್ವರನಿಂದ ರಚಿಸಲ್ಪಟ್ಟರೂ, ಈಶ್ವರನು ಸೃಷ್ಟಿಗೆ ಉಪಾದಾನ ಅಂದರೆ ಸಮವಾಯಿಕಾರಣನಲ್ಲ. ಆದರೆ ನಿಮಿತ್ತಕಾರಣನಾಗಿದ್ದಾನೆ ಎಂದು ಹೇಳುತ್ತಾರೆ. ನಿಮಿತ್ತಕಾರಣನೆಂದರೆ, ಕಾರ್ಯೋತ್ಪತ್ತಿಯ ಅವ್ಯವಹಿತ ಪೂರ್ವಕ್ಷಣದಲ್ಲಿದ್ದು, ಕಾರ್ಯೋತ್ಪತ್ತಿಯನ್ನು ನಿರ್ವಹಿಸುವ ಆವಶ್ಯಕ ಕರ್ತೃಕಾರಣಾದಿಗಳು.

ಉಪಾದಾನ ಕಾರಣವು ಸ್ವತಃ ಅವ್ಯಕ್ತ ನಿರವಯವವಾದ ವಸ್ತುವೇ ವ್ಯಕ್ತ ಸಾವಯವವಾಗಿ ಇಂದ್ರಿಯಗಳ ಗೋಚರಕ್ಕೆ ಒದಗುವುದು ಅಂದರೆ ವಸ್ತುವು ಸ್ವಾವಯವ ಅಥವಾ ವಿಶೇಷಾಕಾರದಿಂದ ಬೃಹತ್ತರ ಅಥವಾ ಬೃಹತ್ತಮವಾಗುವುದು. ನಿಮಿತ್ತಕಾರಣದಿಂದ ಕಾರ್ಯೋತ್ಪತ್ತಿಯ ದೃಷ್ಟಾಂತದಲ್ಲಿ ದಿಕ್, ದೇಶ, ಕಾಲಗಳು ಹೆಚ್ಚುಕಡಿಮೆ ಸಹಕಾರಿ ಕಾರಣಗಳಾಗುತ್ತವೆ. ಅಂದರೆ ಸಾಧನಸಾಮಗ್ರಿಗಳಿಂದ ಕಾರ್ಯೋತ್ಪತ್ತಿ ಮಾಡುವವನಿಗೆ ಒಂದು ದೇಶ ಬೇಕು. ಒಂದು ದಿಕ್ಕು ಬೇಕು. ಒಂದು ಸಮಯ ಬೇಕು. ಈ ದಿಕ್ಕು, ದೇಶ, ಕಾಲಗಳು ಹುಟ್ಟುವುದಕ್ಕಿಂತ ಮೊದಲೆ ಇರತಕ್ಕ ಈಶ್ವರನು ಕಾರಣವಾದಿಗಳು ಹೇಳುವಂತೆ, ಜಗತ್ ಕಾರ್ಯಕ್ಕೆ (ಸೃಷ್ಟಿಗೆ) ನಿಮಿತ್ತ ಕಾರಣನಾಗುವುದು ಹೇಗೆ?

ಅದ್ವೈತ ದರ್ಶನದಲ್ಲಿ

೧. ಜಗತ್, ೨. ಜೀವ, ೩. ಬ್ರಹ್ಮ

೧. ಜಗತ್

ಶಬ್ದವ್ಯುತ್ಪತ್ತಿ:—ಗಚ್ಛತಿ, ಗಮ್ಲೃ ಗತೌ (ಭ್ವಾ. ಪ. ಉ.) ಪೃಷದ್ಬೃಹನ್ಮಹಜ್ಜಗತ್ (ಉ. ೩–೪೮) ಎಂಬ ಸೂತ್ರ ನಿಯಮದಂತೆ ನಿಪಾತಿತವಾದ ಶಬ್ದ. ಇನ್ನೊಂದು ಕ್ರಮದಿಂದ ದ್ಯುತಿಗಮಿ ಜುಹೋತೀನಾಂ ದ್ವೇಚ (ವಾ ೩–೨–೧೭೮) ಇತಿ ಕ್ವಿಪ್ ಗಮಃ ಕ್ವೌ. (೬–೪–೪೦ ಇತಿಮಲೋಪಃ ತುಕ್ (೬–೧–೭೧).

ಅರ್ಥವ್ಯುತ್ಪತ್ತಿ:—ವಿಷ್ಟಪ, ವಾಯು, ಜಂಗಮ ಐದು ಮಹಾಭೂತಗಳೊಳಗಿನ ೫ನೇ ಮಹಾಭೂತವು ಪೃಥ್ವೀ ಎನ್ನಲ್ಪಡುತ್ತದೆ. ಪಂಚಮಹಾಭೂತ ಇಂದ್ರಿಯವಿಷಯಾತ್ಮಕವಾದ ವಸ್ತುವು ಜಗತ್ ಎನ್ನಿಸಲ್ಪಡುತ್ತದೆ. ಅ. ಕಾಂಡ ೨. ವರ್ಗ ೧೦ ಶ್ಲೋಕ ೬.

ಶಾಸ್ತ್ರದೃಷ್ಟ್ಯಾ ಜಗತ್ ಎಂದರೆ ಭೂಲೋಕ, ಅಂತರಿಕ್ಷ ಮತ್ತು ದ್ಯುಲೋಕಗಳಿಗೂ ತ್ರೈಲೋಕ್ಯ ವಿಷಯಗಳಿಗೂ ವಾಚಕವಾದ ಹೆಸರು. ಅದ್ವೈತ ವೇದಾಂತದಲ್ಲಿ ಛಾಂದೋಗ್ಯ ಅಧ್ಯಾಯ–೬ ಖಂ. ೨ ಮತ್ತು ೩ರಲ್ಲಿ ಹೇಳಿರುವ ಸೃಷ್ಟಿ ಕ್ರಮವನ್ನು ಬಿಟ್ಟು ತೈತ್ತಿರೀಯದಲ್ಲಿ ಅ. ೧. ವಲ್ಲಿ ೨ರಲ್ಲಿ ಹೇಳಿದ ಕ್ರಮವನ್ನು ತೆಗೆದುಕೊಂಡು* ಸಂಪ್ರದಾಯ ಅಥವಾ ಪುರಾಣ ಪ್ರಮಾಣದಿಂದ ಸಿದ್ಧವಾದ ಪಂಚೀಕರಣ ವಿಧಾನವನ್ನು ಸಂಯೋಗಿಸಿದ್ದಾರೆ. ಛಾಂದೋಗ್ಯವು ಪ್ರಾಕೃತ ಪ್ರಲಯದ ಅನಂತರದ ಸೃಷ್ಟಿಯನ್ನು ಆಧರಿಸಿ ತ್ರಿವೃತ್ಕರಣವನ್ನು ನಿರೂಪಿಸಿದೆ—ಎಂದು ಕೆಲವರ ಅಭಿಪ್ರಾಯ.

ವ್ಯಕ್ತವನ್ನು ತಿಳಿಯುವುದಕ್ಕೋಸ್ಕರ ವರ್ಣನೀಯವು ಇಲ್ಲಿ ಎರಡಾಗಿ ವಿಭಾಗಿಸಲ್ಪಟ್ಟಿದೆ. ಒಂದನೇಯದು ವಸ್ತು. ಎರಡನೇಯದು ಅವಸ್ತು. ಸತ್, ಚಿತ್, ಆನಂದ, ಅನಂತ, ಅದ್ವಯವೆಂಬ ಬ್ರಹ್ಮವು ಇಲ್ಲಿ ವಸ್ತು. ಅಜ್ಞಾನವೇ ಮೊದಲಾದ ಅನೇಕ ಜಡವಸ್ತುಗಳು ಅವಸ್ತು. ವ್ಯವಹಾರದಲ್ಲಿ ಒಬ್ಬನಿಗೆ ಹಾವಿನ ಅನುಭವವೂ, ಹಗ್ಗದ ಅನುಭವವೂ ಇದೆ. ಅಂಥವನಿಗೆ ಒಂದು ಸಂದರ್ಭದಲ್ಲಿ ದೂರದಲ್ಲಿರುವ (ಅಂದರೆ ಅವನಿಗೆ ಭ್ರಾಂತಿಯನ್ನು ಉಂಟು ಮಾಡಲಿಕ್ಕೆ ಯೋಗ್ಯವಾದ ಸ್ಥಳ ಮತ್ತು ಕಾಲದಲ್ಲಿ) ಹಗ್ಗದಲ್ಲಿ ಅವಿಚಾರ ಸ್ಫುರಣೆಯಿಂದ ಹಾವು ಎಂಬ ತಿಳುವಳಿಕೆಯು ಉಂಟಾಗುತ್ತದೆ. ಕ್ರಮೇಣ ವಿಚಾರಣೆ ಧೋರಣೆಯಿಂದ ಇದು ಹಗ್ಗ—ಹಾವಲ್ಲವೆಂಬ ನಿಶ್ಚಿತ ತಿಳುವಳಿಕೆಯು ಉಂಟಾಗುತ್ತದೆ. ಈ ಎರಡು ತಿಳುವಳಿಕೆಗಳೊಳಗೆ ಹಗ್ಗದಲ್ಲಿ ಸರ್ಪವೆಂಬ ಯಾವ ಪ್ರಥಮ ತಿಳುವಳಿಕೆಯೋ, ಯಾವ

*ಸಂಪ್ರದಾಯಾಧ್ವನಾ ಪಂಚೀಕರಣಂ ಯದ್ಯಪಿಸ್ಥಿತಂ ।

ತಿಳುವಳಿಕೆಯಿಂದ ಹಗ್ಗದಲ್ಲಿ ಸರ್ಪಾರೋಪವನ್ನು ಮಾಡುತ್ತಾನೋ, ಅದೇ ಕ್ರಮದಲ್ಲಿ ವಸ್ತುವಿನಲ್ಲಿ ಅಂದರೆ ಬ್ರಹ್ಮನಲ್ಲಿ ಅವಸ್ತು ಅಂದರೆ ಅಜ್ಞಾನಾದಿ ಸಕಲ ಜಡವಸ್ತುಗಳನ್ನು ಆರೋಪಿಸುವುದು ಅಂದರೆ ಬ್ರಹ್ಮನು ಅಜ್ಞಾನಾದಿ ಸಕಲ ಜಡವಸ್ತು ಎಂದು ತಿಳುವಳಿಕೆಯನ್ನು ಹುಟ್ಟಿಸಿಕೊಳ್ಳುವುದು. ಈ ವ್ಯಾಪಾರಕ್ಕೆ ಶಾಸ್ತ್ರದಲ್ಲಿ ಅಧ್ಯಾಸ-ವ-ಆರೋಪವೆಂದು ಹೇಳುತ್ತಾರೆ. ಇಲ್ಲಿ ಅವಸ್ತು ಎಂದು ಹೇಳಲ್ಪಟ್ಟ ಅಜ್ಞಾನವು ನಮ್ಮ ನಿತ್ಯ ಜೀವನಲ್ಲಿ ತಿಳಿದುಕೊಂಡಿರುವ ಮಂಕುಬುದ್ಧಿಯಲ್ಲ. ಇದೊಂದು ಅನಿರ್ವಚನೀಯವಾದ ಭಾವ ಪದಾರ್ಥ. ಸತ್ ಮತ್ತು ಅಸತ್‌ಗಳಿಂದ ಅನಿರ್ವಚನೀಯವಾದ ಸತ್ವ, ರಜಃ ತಮಃ ಎಂಬ ತ್ರಿಗುಣಾತ್ಮಕವಾದ ಜ್ಞಾನಕ್ಕೆ ವಿರೋಧಿಯಾದ ಯಾವುದೋ ಒಂದು ಭಾವರೂಪವೆಂದು ಹೇಳುತ್ತಾರೆ. ಇದಕ್ಕೆ ಪ್ರಮಾಣವಿದೆ.*

ಈ ಅಜ್ಞಾನದಿಂದ ಸೃಷ್ಟಿಯು ಉದ್ಭಾವಿಸಲ್ಪಡುತ್ತದೆ. ಈ ಮೇಲೆ ಹೇಳಿದ ಅಜ್ಞಾನದ ಲಕ್ಷಣವನ್ನು ಮರೆಯಬಾರದು. ಅಜ್ಞಾನವು ಒಂದು ಮತ್ತು ಹಲವು ಎಂದು ಎರಡಾಗಿ ವಿಭಾಗಿಸಲ್ಪಟ್ಟಿದೆ. ಒಂದನ್ನು ಸಮಷ್ಟಿ ಎಂತಲೂ, ಹಲವನ್ನು ವ್ಯಷ್ಟಿ ಎಂತಲೂ ಶಾಸ್ತ್ರದಲ್ಲಿ ವ್ಯವಹರಿಸುತ್ತಾರೆ. ಹೇಗೆ ಅನೇಕ ವೃಕ್ಷ ಲತಾ ಗುಲ್ಮತೃಣಾದಿಗಳುಳ್ಳ ಪ್ರದೇಶವನ್ನು ಏಕತ್ವ ವ್ಯಪದೇಶದಿಂದ ಕಾಡು ಎಂದು ಹೇಳುತ್ತೇವೆಯೊ—ಹೇಗೆ ವಿಭಕ್ತ ಅನೇಕ ಜಲಗಳನ್ನು ಏಕತ್ವ ಬುದ್ಧಿಯಿಂದ ನೀರಾಶ್ರಯವೆಂದು ಕರೆಯುತ್ತೇವೋ—ಹಾಗೆಯೇ ನಾನಾತ್ವದಿಂದ ಪ್ರತಿಭಾಸಮಾನಗಳಾದ ಜೀವಗತಗಳಾದ ಅನೇಕ ಅಜ್ಞಾನಗಳಿಗೆ ಏಕತ್ವ ಅಭಿಪ್ರಾಯದಿಂದ ಸಮಷ್ಟಿ ಎಂದು ಹೇಳುತ್ತೇವೆ. ಈ ಸಮಷ್ಟಿಯು ಉಚ್ಚ ಉಪಾಧಿತ್ವದಿಂದ ವಿಶುದ್ಧ ಸತ್ವ ಪ್ರಧಾನವುಳ್ಳದ್ದಾಗಿದೆ. ಈ ಸಮಷ್ಟಿಯಿಂದ ಉಪಹಿತವಾದ ಚೈತನ್ಯವು ಸರ್ವಜ್ಞತ್ವ, ಸರ್ವೇಶ್ವರತ್ವ, ಸರ್ವನಿಯಾಮಕತ್ವವೇ ಮೊದಲಾದ ಗುಣಗಳುಳ್ಳದ್ದು. ಇದೇ ಅವ್ಯಕ್ತ, ಅಂತರ್ಯಾಮಿ, ಈಶ್ವರ, ಜಗತ್ಕಾರಣವೆಂತಲೂ ವ್ಯಪದೇಶಿಸಲ್ಪಡುತ್ತದೆ. ಈ ಸಮಷ್ಟಿಗೆ ಸರ್ವಜ್ಞತ್ವವು ಅಖಿಲ ಅಜ್ಞಾನಗಳ ಅವಭಾಸಕತ್ವದಿಂದ ಬಂದಿರುತ್ತದೆ. ಈಶ್ವರನ ಈ ಸಮಷ್ಟಿಯು ಅಖಿಲ ಕಾರಣತ್ವದಿಂದ ಕಾರಣಶರೀರವಾಗಿದೆ. ಆನಂದ ಪ್ರಚುರತ್ವದಿಂದ ಕೋಶದೋಪಾದಿ ಆಚ್ಛಾದಕತ್ವದಿಂದಲೂ ಸರ್ವೋಪರಮತ್ವದಿಂದಲೂ ಸುಷುಪ್ತಿ ಎನ್ನಲ್ಪಡುತ್ತದೆ. ಈ ಮೇಲಿನ ಕಾರಣಗಳಿಂದ ಸ್ಥೂಲ ಸೂಕ್ಷ್ಮಪ್ರಪಂಚಗಳ ಲಯಸ್ಥಾನವೆಂತಲೂ ಹೇಳಲ್ಪಡುತ್ತದೆ. ಸಮಷ್ಟಿಯನ್ನು ವಿವರಿಸಿ ಈಗ ವ್ಯಷ್ಟಿಯನ್ನು ನಿರೂಪಿಸುತ್ತಾನೆ. ಅನೇಕತ್ವ ಅಭಿಪ್ರಾಯದಿಂದ ಕಾಡಿಗೆ ಮರಗಳು ಎಂದೂ, ವ್ಯಷ್ಟಿ ಎಂದೂ ವ್ಯಪದೇಶವೋ ಹಾಗೆಯೇ ಜಲಾಶಯಕ್ಕೆ ಅನೇಕತ್ವ ಅಭಿಪ್ರಾಯದಿಂದ ಜಲಗಳು ಎಂದು ವ್ಯಷ್ಟಿತ್ವ ವ್ಯಪದೇಶವೋ ಅದೇ ರೀತಿ ಅಜ್ಞಾನಕ್ಕೆ ಅನೇಕತ್ವ ಅಭಿಪ್ರಾಯದಿಂದ ವ್ಯಷ್ಟಿತ್ವ ವ್ಯಪದೇಶ. ಇಲ್ಲಿ ವ್ಯಸ್ತ ಮತ್ತು ಸಮಸ್ತಗಳಲ್ಲಿ ವ್ಯಾಪಿಸಿಕೊಂಡಿರುವುದರಿಂದ ವ್ಯಷ್ಟಿ ಮತ್ತು ಸಮಷ್ಟಿ ಎಂಬದಾಗಿ ವ್ಯವಪದೇಶಿಸಲ್ಪಡುತ್ತದೆ. ಈ ವ್ಯಷ್ಟಿಯು ಹೀನ ಉಪಾಧಿತ್ವದಿಂದ ಮಲಿನಸತ್ವಪ್ರಧಾನವಾಗಿದೆ. ಈ ವ್ಯಷ್ಟಿಯಿಂದ ಉಪಹಿತವಾದ ಚೈತನ್ಯವು ಅಲ್ಪಜ್ಞತ್ವ, ಅನೀಶ್ವರತ್ವ ಇವೇ ಮೊದಲಾದ ನಿಕೃಷ್ಟ ಗುಣಗಳುಳ್ಳದ್ದು. ಒಂದು ಅಜ್ಞಾನದ ಅವಭಾಸಕತ್ವದಿಂದ ಇದು ಪ್ರಾಜ್ಞವೆಂದು ಹೇಳಲ್ಪಡುತ್ತದೆ. ಇದರ ಪ್ರಾಜ್ಞತ್ವವು ಅಸ್ಪಷ್ಟ ಉಪಾಧಿಯಿಂದ ಸಂಪಾದಿಸಿದ ಅಲ್ಪ ಪ್ರಕಾಶತ್ವದಿಂದಾಗಿರುತ್ತದೆ. ಈ ವ್ಯಷ್ಟಿಗೂ ಅಹಂಕಾರಾದಿಗಳ ಕಾರಣತ್ವವು ಇರುವುದರಿಂದ ಕಾರಣಶರೀರ ಆನಂದ ಪ್ರಚುರತ್ವ ಕೋಶೋಪಾದಿ ಆಚ್ಛಾದಕವಾಗಿರುವುದರಿಂದ ಆನಂದಮಯಕೋಶ ಸರ್ವ ಉಪರಮತ್ವದಿಂದ ಸುಷುಪ್ತಿ ಎನ್ನಲ್ಪಡುತ್ತದೆ. ಆದಕಾರಣದಿಂದಲೇ ಸೂಕ್ಷ್ಮಸ್ಥೂಲ ಶರೀರ ಪ್ರಪಂಚಗಳ ಲಯಸ್ಥಾನವೆಂದು ಹೇಳಲ್ಪಡುತ್ತದೆ. ಸುಷುಪ್ತಿ ಕಾಲದಲ್ಲಿ ಈಶ್ವರ ಮತ್ತು ಪ್ರಾಜ್ಞನು ಚೈತನ್ಯದಿಂದ ಉರಿಸಲ್ಪಟ್ಟ ಅತಿ ಸೂಕ್ಷ್ಮಗಳಾದ ಅಜ್ಞಾನ ವೃತ್ತಿಗಳಿಂದ ಆನಂದವನ್ನು ಅನುಭವಿಸುತ್ತಾರೆ.

ಈ ಸಮಷ್ಟಿ, ವ್ಯಷ್ಟಿಗಳೊಳಗೆ—ವನವೃಕ್ಷಗಳೊಳಗೂ ಜಲಾಶಯ ಜಲಗಳೊಳಗೂ ಇರುವಂತೆ ಅಭೇದವು ಇರುವುದು. ಇವುಗಳಿಂದ ಉಪಹಿತಗಳಾದ ಈಶ್ವರ

*ಅಜ್ಞಾನಂತು ಸದಸದ್ಭ್ಯಾಮನಿರ್ವಚನೀಯಂ ತ್ರಿಗುಣಾತ್ಮಕಂ ಜ್ಞಾನವಿರೋಧಿ ಭಾವರೂಪಂ ಯತ್ಕಿಂಚಿದಿತಿ ವಂದತಿ ಅಹಮಜ್ಞಃ ಇತ್ಯನುಭವಾತ್—ವೇದಾಂತಸಾರ.

ಪ್ರಾಜ್ಞರಲ್ಲಿಯೂ ವನ ಮತ್ತು ವೃಕ್ಷಗಳಲ್ಲಿ ಅವಿಚ್ಛಿನ್ನ ಧರ್ಮದಿಂದಿರುವ ಆಕಾಶಗಳ ಹಾಗೂ, ಜಲಾಶಯ ಮತ್ತು ಜಲಗಳಲ್ಲಿ ಅವಿಚ್ಛಿನ್ನ ಧರ್ಮದಿಂದಿರುವ ಆಕಾಶಗಳ ಹಾಗೂ, ಅಭೇದವಿರುವುದು. ವನವೃಕ್ಷ ಮತ್ತು ತದವಚ್ಛಿನ್ನ ಆಕಾಶಗಳಿಗೆ, ಜಲಾಶಯ ಮತ್ತು ಜಲತದ್ಗತ ಆಕಾಶಗಳಿಗೆ ಆಧಾರಭೂತವಾದ ಯಾವ ಆಕಾಶವೋ ಅದರೋಪಾದಿಯಲ್ಲಿ ವ್ಯಷ್ಟಿಸಮಷ್ಟಿರೂಪದಲ್ಲಿರುವ ಅಜ್ಞಾನಗಳಿಗೂ ಉಪಾಧಿಯಿಂದ ಉಪಹಿತಗಳಾದ ಚೈತನ್ಯಗಳಿಗೂ ಆಧಾರಭೂತವಾದ ಅನುಪಹಿತವಾದ ಯಾವ ಚೈತನ್ಯವು ಅದು ತುರೀಯ ಎಂದು ಹೇಳಲ್ಪಡುತ್ತದೆ. ಈ ತುರೀಯ ಶುದ್ಧ ಚೈತನ್ಯವು ಅಜ್ಞಾನಾದಿ ತದುಪಹಿತ ಚೈತನ್ಯಗಳಿಂದ ಕಾಯಲ್ಪಟ್ಟ ಕಬ್ಬಿಣದ ಗುಂಡಿನಂತೆ ಅವಿವಿಕ್ತವಾಗಿ ಮುಂದೇಳುವ ಮಹಾವಾಕ್ಯದ ವಾಚ್ಯವಾಗುವುದು. ಇದೇ ವಿವಿಕ್ತ ಮತ್ತು ಸಲ್ಲಕ್ಷ್ಯವೆಂಬದಾಗಿಯೂ ಹೇಳಲ್ಪಡುತ್ತದೆ. ಹಿಂದೆ ಹೇಳಿದ ಅಜ್ಞಾನಕ್ಕೆ ಆವರಣ ಮತ್ತು ವಿಕ್ಷೇಪಕಗಳೆಂಬ ಎರಡು ಶಕ್ತಿಗಳಿವೆ. ಅಜ್ಞಾನದ ಆವರಣಶಕ್ತಿಯು ಅಲ್ಪ. ಹಾಗಿದ್ದರೂ ಮೋಡವು ಅನೇಕ ಯೋಜನ ವಿಶಾಲವುಳ್ಳ ಆದಿತ್ಯಮಂಡಲವನ್ನು ನೋಡುವವರ ಕಣ್ಣಿಗೆ ಮುಚ್ಚಳಿಕೆಯಂತೆ ಆಚ್ಛಾದನವನ್ನು ಮಾಡುತ್ತದೋ ಅದೇ ರೀತಿ ಅಜ್ಞಾನವು ಪರಿಚ್ಛಿನ್ನವಾದರೂ ಅಪರಿಚ್ಛಿನ್ನ ಮತ್ತು ಅಸಂಸಾರಿಯಾದ ಆತ್ಮನನ್ನು ನೋಡುವವರ ಬುದ್ಧಿಯನ್ನು ಮುಚ್ಚಳಿಕೆಯಂತೆ ಆಚ್ಛಾದಿಸುತ್ತದೆ. ಪರಿಚ್ಛಿನ್ನವಾದ ಅಜ್ಞಾನಕ್ಕೆ ಅಷ್ಟು ಸಾಮರ್ಥ್ಯವಿದೆ.

ಈ ಆವರಣ ಶಕ್ತಿಯಿಂದ ಅವಿಚ್ಛಿನ್ನವಾದ ಆತ್ಮನಿಗೆ ಕರ್ತೃತ್ವ, ಭೋಕ್ತೃತ್ವ, ಸುಖ, ದುಃಖ, ಮೋಹಾತ್ಮಕಗಳಿಂದ ತುಚ್ಛ ಸಂಸಾರ ಭಾವನೆಗಳು ಸಂಭಾವಿಸಲ್ಪಡುತ್ತವೆ. ಹೇಗೆ ತನ್ನ ಅಜ್ಞಾನದಿಂದ ಆವೃತವಾದ ಹಗ್ಗದಲ್ಲಿ ಸರ್ಪತ್ವ ಸಂಭಾವನೆಯು ಆಗುತ್ತದೋ, ವಿಕ್ಷೇಪ ಶಕ್ತಿಯು ರಜ್ಜ್ವಜ್ಞಾನವು ತನ್ನಿಂದ ಆವೃತವಾದ ರಜ್ಜುವಿನಲ್ಲಿ ಸ್ವಶಕ್ತಿಯಿಂದ ಸರ್ಪಾದಿ ಬುದ್ಧಿಯನ್ನು ಹೇಗೆ ಹುಟ್ಟಿಸುತ್ತದೋ ಹಾಗೆಯೇ ಅಜ್ಞಾನವು ತನ್ನಿಂದ ಆವೃತವಾದ ಆತ್ಮನಲ್ಲಿ ವಿಕ್ಷೇಪಶಕ್ತಿಯಿಂದ ಆಕಾಶಾದಿ ಪ್ರಪಂಚವನ್ನು ಹುಟ್ಟಿಸುತ್ತದೆ–ಯಾ–ಉದ್ಭಾವಿಸುತ್ತದೆ. ಅಂಥಾ ಸಾಮರ್ಥ್ಯವು ಅಜ್ಞಾನದ ವಿಕ್ಷೇಪ ಶಕ್ತಿಗೆ ಇದೆ.

ಈ ವಿಕ್ಷೇಪ ಶಕ್ತಿಯೇ ಲಿಂಗಶರೀರ ಮೊದಲ್ಗೊಂಡು ಬ್ರಹ್ಮಾಂಡಾಂಶ ಜಗತ್ತನ್ನು ಸೃಷ್ಟಿಸುವುದು. ಜಗತ್ತಿಗೆ ಬ್ರಹ್ಮನು ನಿಮಿತ್ತ ಕಾರಣನೂ ಹೌದು. ಉಪಾದಾನ ಕಾರಣನೂ ಹೌದು. ಹೇಗೆ ಜೇಡರ ಹುಳವು ತನ್ನಿಂದ ಉತ್ಪತ್ತಿಯಾಗುವ ತಂತು ಕಾರ್ಯವನ್ನು ಕುರಿತು ಸ್ವಪ್ರಧಾನತೆಯಿಂದ ನಿಮಿತ್ತ ಕಾರಣವಾಗುತ್ತದೋ ಸ್ವಶರೀರ ಪ್ರಧಾನತೆಯಿಂದ ಉಪಾದಾನ ಕಾರಣವಾಗುತ್ತದೋ ಹಾಗೆಯೇ ಉಭಯಶಕ್ತಿಯುಳ್ಳ ಅಜ್ಞಾನದಿಂದ ಉಪಹಿತವಾದ ಚೈತನ್ಯವು ಜಗತ್ಸೃಷ್ಟಿಯನ್ನು ಕುರಿತು ಸ್ವಪ್ರಧಾನತೆಯಿಂದ ನಿಮಿತ್ತಕಾರಣವೂ ತನ್ನ ಉಪಾಧಿಪ್ರಧಾನತೆಯಿಂದ ಉಪಾದಾನ ಕಾರಣವೂ ಆಗುತ್ತದೆ.

ತಮಃ ಪ್ರಧಾನ ವಿಕ್ಷೇಪ ಶಕ್ತಿಯುಳ್ಳ ಅಜ್ಞಾನದಿಂದ ಉಪಹಿತವಾದ ಚೈತನ್ಯದಿಂದ ಆಕಾಶವೂ, ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲವೂ, ಜಲದಿಂದ ಪೃಥ್ವಿಯೂ ಹುಟ್ಟುತ್ತದೆ. ಸೃಷ್ಟಿಕಾಲದಲ್ಲಿ ಸತ್ವ ರಜಃ ತಮಃ ಎಂಬ ಗುಣಗಳು ಕಾರಣಗುಣಪ್ರಕ್ರಮದಿಂದ ಆ ಆಕಾಶಾದಿಭೂತಗಳಲ್ಲಿ ಹುಟ್ಟುತ್ತವೆ. ಇವುಗಳೇನೇ ಸೂಕ್ಷ್ಮ ಭೂತಗಳೆಂತಲೂ, ತನ್ಮಾತ್ರಗಳೆಂತಲೂ, ಅಪಂಚೀಕೃತಗಳೆಂತಲೂ ಹೇಳಲ್ಪಡುತ್ತದೆ. ಇವುಗಳಿಂದ ಸೂಕ್ಷ್ಮಶರೀರಗಳೂ ಸ್ಥೂಲ ಭೂತಗಳೂ ಹುಟ್ಟುತ್ತವೆ. ಸೂಕ್ಷ್ಮಶರೀರವೆಂದರೆ ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯ, ಐದು ಪ್ರಾಣಾದಿ ವಾಯುಗಳು, ಬುದ್ಧಿ ಮತ್ತು ಮನಸ್ಸು ಕೂಡಿ, ಹದಿನೇಳು ತತ್ವಗಳಿಂದ ಕೂಡಿದ ಶರೀರ. ಇದನ್ನು ಲಿಂಗಶರೀರವೆಂತಲೂ ಹೇಳುತ್ತಾರೆ. ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು–ಈ ಐದು ಜ್ಞಾನೇಂದ್ರಿಯಗಳು. ಇವುಗಳು ಆಕಾಶಾದಿಗಳ ಸಾತ್ವಿಕ ಅಂಶಗಳಿಂದ ವ್ಯಸ್ತಗಳಾದ ಬೇರೆ ಬೇರೆ ಭೂತಗಳಿಂದ ಅನುಕ್ರಮವಾಗಿ ಹುಟ್ಟುತ್ತವೆ. ಬುದ್ಧಿ ಎಂದರೆ ನಿಶ್ಚಯಾತ್ಮಿಕವಾದ ಅಂತಃಕರಣ ವೃತ್ತಿಯು. ಮನಸ್ಸು ಅಂದರೆ ಸಂಕಲ್ಪವಿಕಲ್ಪಾತ್ಮಕವಾದ ಅಂತಃಕರಣ ವೃತ್ತಿಯು. ಚಿತ್ತ ಮತ್ತು ಅಹಂಕಾರವು ಇದರಲ್ಲಿಯೇ ಅಡಕವಾಗುತ್ತದೆ. ಅಂತಃಕರಣಗಳು ಮಿಲಿತಗಳಾದ ಆಕಾಶಾದಿಗಳಲ್ಲಿರುವ ಸಾತ್ವಿಕ ಅಂಶಗಳಿಂದ ಅನುಕ್ರಮವಾಗಿ ಹುಟ್ಟುತ್ತವೆ. ಈ ಬುದ್ಧಿಯು ಜ್ಞಾನೇಂದ್ರಿಯಗಳಿಂದ ಸಹಿತವಾಗಿ ವಿಜ್ಞಾನಮಯ ಕೋಶವಾಗುತ್ತದೆ. ಇದು

ಕರ್ತೃತ್ವ, ಭೋಕ್ತೃತ್ವ, ಸುಖಿತ್ವ, ದುಃಖಿತ್ವಾದಿ ಅಭಿಮಾನತ್ವದಿಂದ ಇಹಪರ ಲೋಕಗಳಲ್ಲಿ ಸಂಚಾರಶೀಲ ಉಳ್ಳದ್ದಾಗಿ ವ್ಯಾವಹಾರಿಕಜೀವ ಎಂದು ಹೇಳಲ್ಪಡುತ್ತದೆ. ಜ್ಞಾನೇಂದ್ರಿಯಗಳಿಂದ ಸಹಿತವಾದ ಮನಸ್ಸಿನಿಂದ ಮನೋಮಯ ಕೋಶವಾಗುತ್ತದೆ. ವಾಕ್, ಕೈ, ಕಾಲು, ಗುದ ಮತ್ತು ಉಪಸ್ಥಗಳು ಕರ್ಮೇಂದ್ರಿಯಗಳೆಂದು ಹೇಳಲ್ಪಡುತ್ತವೆ. ಈ ಕರ್ಮೇಂದ್ರಿಯಗಳು ಆಕಾಶಾದಿಗಳಲ್ಲಿರುವ ರಜೋ ಅಂಶಗಳಿಂದ ಒಂದೊಂದು ಭೂತಗಳಿಂದ ಅನುಕ್ರಮವಾಗಿ ಹುಟ್ಟುತ್ತವೆ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳೆಂದು ಐದು ವಾಯುಗಳು. ಈ ಪ್ರಾಣಾದಿ ಪಂಚಕವು ಮಿಲಿತಗಳಾದ ಆಕಾಶಾದಿಗಳಲ್ಲಿರುವ ರಜೋ ಅಂಶಗಳಿಂದ ಹುಟ್ಟುತ್ತವೆ. ಪ್ರಾಣಾದಿ ಪಂಚಕವು ಕರ್ಮೇಂದ್ರಿಯಗಳೊಡನೆ ಸೇರಿ ಪ್ರಾಣಮಯಕೋಶವಾಗುತ್ತದೆ.

ಈ ಕೋಶಗಳ ಮಧ್ಯದಲ್ಲಿ ಜ್ಞಾನ ಮತ್ತು ಶಕ್ತಿ ಉಳ್ಳಂಥಾ ವಿಜ್ಞಾನಮಯಕೋಶವು ಕರ್ತೃರೂಪವಾಗಿದೆ. ಇಚ್ಛಾಶಕ್ತಿ ಉಳ್ಳಂಥಾ ಮನೋಮಯಕೋಶವು ಕರಣರೂಪವಾಗಿದೆ. ಕ್ರಿಯಾಶಕ್ತಿ ಉಳ್ಳಂಥಾ ಪ್ರಾಣಮಯಕೋಶವು ಕಾರ್ಯರೂಪವಾಗಿದೆ. ಈ ಕೋಶಗಳು ಒಟ್ಟಿಗೆ ಸೇರಿ ಸೂಕ್ಷ್ಮಶರೀರವೆಂದು ಹೇಳಲ್ಪಡುತ್ತದೆ. ಈ ಸೂಕ್ಷ್ಮಶರೀರಗಳಲ್ಲಿಯೂ ಕೂಡಾ ಸಕಲ ಸೂಕ್ಷ್ಮಶರೀರಗಳು ಏಕಬುದ್ಧಿ ವಿಷಯತೆಯಿಂದ ಹಿಂದೆ ಹೇಳಿದ ಕಾಡು ಮತ್ತು ನಿರಾಶಯದಂತೆ, ಸಮಷ್ಟಿ ಎನ್ನಲ್ಪಡುತ್ತದೆ. ಅನೇಕ ಬುದ್ಧಿ ವಿಷಯತೆಯಿಂದ ಮರಗಳು ಮತ್ತು ನೀರುಗಳಂತೆ ವ್ಯಷ್ಟಿ ಎಂದು ಹೇಳಲ್ಪಡುತ್ತದೆ. ಈ ಸಮಷ್ಟಿಯಿಂದ ಉಪಹಿತವಾದ ಚೈತನ್ಯವು ಸೂತ್ರಾತ್ಮಾ, ಹಿರಣ್ಯಗರ್ಭ ಅಥವಾ ಪ್ರಾಣ ಎಂದು ಕರೆಯಲ್ಪಡುತ್ತದೆ. ಇದರ ಈ ಸಮಷ್ಟಿಯು ಸ್ಥೂಲ ಪ್ರಪಂಚದ ಅಪೇಕ್ಷೆಯಿಂದ ವಿಜ್ಞಾನಮಯಾದಿ ಕೋಶತ್ರಯವುಳ್ಳ ಸೂಕ್ಷ್ಮಶರೀರವು ಸೂಕ್ಷ್ಮತ್ವದ ಕಾರಣದಿಂದ ಜಾಗ್ರದ್ವಾಸನಾಮಯತ್ವ ಹೇತುವಿನಿಂದ ಸ್ವಪ್ನ ಎನ್ನಲ್ಪಡುತ್ತದೆ. ಇದು ಸ್ಥೂಲ ಪ್ರಪಂಚದ ಲಯಸ್ಥಾನವು ಆಗಿದೆ.

ವ್ಯಷ್ಟ್ಯುಪಹಿತವಾದ ಚೈತನ್ಯವು ತೇಜೋಮಯ ಅಂತಃಕರಣಗಳಿಂದ ಉಪಹಿತವಾದ್ದರಿಂದ ತೈಜಸ ಎನ್ನಲ್ಪಡುತ್ತದೆ. ಇದು ಸ್ಥೂಲ ಶರೀರದ ಲಯಸ್ಥಾನವೆಂದೂ ಹೇಳಲ್ಪಡುತ್ತದೆ. ಈ ಸೂತ್ರಾತ್ಮಾ (ಹಿರಣ್ಯಗರ್ಭ) ಮತ್ತು ತೈಜಸವು ನಿದ್ರಾಕಾಲದಲ್ಲಿ ಮನೋವೃತ್ತಿಗಳಿಂದ ಸೂಕ್ಷ್ಮವಿಷಯಗಳನ್ನು ಅನುಭವಿಸುತ್ತವೆ. ಇಲ್ಲಿಯೂ ಕೂಡಾ ಸಮಷ್ಟಿ, ವ್ಯಷ್ಟಿಗಳಲ್ಲಿ ಅವುಗಳಿಂದ ಉಪಹಿತಗಳಾದ ಸೂತ್ರಾತ್ಮಾ ತೈಜಸಗಳಲ್ಲಿಯೂ ವನವೃಕ್ಷದೋಪಾದಿ ತದವಚ್ಛಿನ್ನ ಆಕಾಶದ ಹಾಗೂ, ನೀರಾಶಯ ಮತ್ತು ನೀರುಗಳೋಪಾದಿ ತದ್ಗತ ಪ್ರತಿಬಿಂಬ ಆಕಾಶದ ಹಾಗೂ ಅಭೇದ. ಸೂಕ್ಷ್ಮಶರೀರಗಳ ಉತ್ಪತ್ತಿಯು ಈ ಮೇಲೆ ಹೇಳಿದಂತೆ ಆಗಿರುತ್ತದೆ.

ಪಂಚೀಕೃತ ಆಕಾಶಾದಿ ಭೂತಗಳಿಂದ ಆಕಾಶಾದಿ ಸ್ಥೂಲ ಭೂತಗಳು ಆಗುತ್ತವೆ. ಪಂಚೀಕರಣವೆಂದರೆ ಮೂಲಪಂಚಭೂತಗಳಲ್ಲಿ ಒಂದೊಂದನ್ನು ಎರಡಾಗಿ ಸಮಭಾಗ ಮಾಡಬೇಕು. ಆಗ ಹತ್ತು ತುಂಡುಗಳಾಗುತ್ತವೆ. ಆ ಹತ್ತು ತುಂಡುಗಳಲ್ಲಿ ಮೊದಲನೆಯ ಐದು ತುಂಡನ್ನು ಪುನಃ ಒಂದೊಂದನ್ನು ಸಮವಾಗಿ ನಾಲ್ಕು ತುಂಡು ಮಾಡಬೇಕು. ಒಂದೊಂದರ ನಾಲ್ಕು ತುಂಡುಗಳನ್ನು ಇತರ ತುಂಡುಗಳಲ್ಲಿ ಸೇರಿಸಬೇಕು. ಉದಾಹರಣೆಗಾಗಿ ಮೊದಲು ಆಕಾಶವನ್ನು ಎರಡು ವಿಭಾಗ ಮಾಡುವುದು. ಅನಂತರ ಎರಡು ವಿಭಾಗಗಳಲ್ಲಿ ಒಂದನ್ನು ತಿರುಗಿ ನಾಲ್ಕು ವಿಭಾಗ ಮಾಡುವುದು. ಆ ನಾಲ್ಕು ವಿಭಾಗಗಳಲ್ಲಿ ವಾಯು, ಅಗ್ನಿ, ಜಲ, ಪೃಥ್ವೀಗಳಲ್ಲಿ ಕ್ರಮವಾಗಿ ಒಂದೊಂದು ಭಾಗವನ್ನು ಸೇರಿಸುವುದು. ಈ ರೀತಿ ಇತರ ಭೂತಗಳನ್ನೂ ಮಾಡುವುದು. ಸ್ವಸ್ವಭೂತಾಂಶಗಳ ಆಧಿಕ್ಯದಿಂದ ಇವುಗಳಿಗೆ ಆಕಾಶಾದಿ ವ್ಯಪದೇಶವಾಗುವುದು. ಪಂಚೀಕರಣದ ಕಾಲದಲ್ಲಿ ಆಕಾಶದಲ್ಲಿ–ಶಬ್ದ; ವಾಯುವಿನಲ್ಲಿ–ಶಬ್ದ–ಸ್ಪರ್ಶ; ಅಗ್ನಿಯಲ್ಲಿ–ಶಬ್ದ–ಸ್ಪರ್ಶ–ರೂಪ; ನೀರಿನಲ್ಲಿ–ಶಬ್ದ–ಸ್ಪರ್ಶ-ರೂಪ-ರಸ; ಪೃಥ್ವೀಯಲ್ಲಿ-ಶಬ್ದ–ಸ್ಪರ್ಶ–ರೂಪ–ರಸ–ಗಂಧಗಳು ಅಭಿವ್ಯಕ್ತವಾಗಲ್ಪಡುತ್ತವೆ.

ಈ ಪಂಚೀಕೃತ ಭೂತಗಳಿಂದ ವೈದಿಕರು ಮತ್ತು ಪೌರಾಣಿಕರು ನಿರ್ದೇಶಿಸಿದ ಎಲ್ಲಾ ಲೋಕಗಳೂ, ಬ್ರಹ್ಮಾಂಡ ಮತ್ತು ಅದರೊಳಗಿರುವ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜಗಳೆಂಬ ಚತುರ್ವಿಧ ಸ್ಥೂಲ ಶರೀರಗಳು ಅದಕ್ಕೆ ಉಚಿತಗಳಾದ ಅನ್ನಪಾನಾದಿಗಳ ಉತ್ಪತ್ತಿಯು ಕೂಡಾ ಆಗುತ್ತದೆ. ಇಲ್ಲಿಯೂ ಕೂಡಾ ಚತುರ್ವಿಧ ಸ್ಥೂಲ ಶರೀರವು ಏಕತ್ವ ಮತ್ತು ಅನೇಕತ್ವದ ಬುದ್ಧಿಯ ವಿಷಯತೆಯಿಂದ ಕಾಡು

ಮತ್ತು ಜಲಾಶಯದೋಪಾದಿ ಸಮಷ್ಟಿ ಎನ್ನಲ್ಪಡುತ್ತದೆ. ವೃಕ್ಷಗಳೋಪಾದಿ–ಯಾ–ಜಲಗಳೋಪಾದಿ ವ್ಯಷ್ಟಿ ಎನ್ನಲ್ಪಡುತ್ತದೆ. ಈ ಸಮಷ್ಟಿಯಿಂದ ಉಪಹಿತವಾದ ಚೈತನ್ಯವು ವೈಶ್ವಾನರ ಮತ್ತು ವಿರಾಟ್ ಎಂದು ಹೇಳಲ್ಪಡುತ್ತದೆ. ಇದರ ಈ ಸಮಷ್ಟಿಯೇ ಸ್ಥೂಲಶರೀರವು. ಅನ್ನವಿಕಾರತ್ವದಿಂದ ಅನ್ನಮಯ ಕೋಶವೆಂದೂ, ದೊಡ್ಡ ಭೋಗಾಯತನವಾದ್ದರಿಂದ ಸ್ಥೂಲಶರೀರವೆಂದೂ ಜಾಗ್ರಚ್ಛರೀರವೆಂದೂ ಹೇಳಲ್ಪಡುತ್ತದೆ. ಈ ವ್ಯಷ್ಟಿಯಿಂದ ಉಪಹಿತವಾದ ಚೈತನ್ಯವು ಇಲ್ಲಿ ವಿಶ್ವವೆಂದು ಹೇಳಲ್ಪಡುತ್ತದೆ. ಸೂಕ್ಷ್ಮಶರೀರದ ಅಭಿಮಾನವನ್ನು ಬಿಡದೆ ಸ್ಥೂಲ ಶರೀರಾದಿಗಳನ್ನು ಪ್ರವೇಶಿಸುವುದರಿಂದ ಇದು ಈ ಹೆಸರಿನಿಂದ ಕರೆಯಲ್ಪಡುತ್ತದೆ. ಇದರ ಸಂಬಂಧಿ ಈ ವ್ಯಷ್ಟಿಯು ಸ್ಥೂಲಶರೀರ ಅನ್ನವಿಕಾರತ್ವದಿಂದ ಅನ್ನಮಯ ಕೋಶ ಮತ್ತು ಜಾಗ್ರಚ್ಛರೀರವೆಂಬದಾಗಿಯೂ ಹೇಳಲ್ಪಡುತ್ತದೆ. ಜಾಗ್ರದ್ದಶೆಯಲ್ಲಿ ಈ ವಿಶ್ವ ಮತ್ತು ವೈಶ್ವಾನರರು ದಿಕ್ಕು, ವಾಯು, ಸೂರ್ಯ, ವರುಣ ಮತ್ತು ಅಶ್ವಿಗಳಿಂದ ಕ್ರಮವಾಗಿ ನಿಯಂತ್ರಿಸಲ್ಪಟ್ಟ ಶ್ರೋತ್ರಾದಿ ಇಂದ್ರಿಯಪಂಚಕದಿಂದ ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳನ್ನು ಅನುಭವಿಸುತ್ತಾರೆ. ಅಗ್ನಿ, ಇಂದ್ರ, ಉಪೇಂದ್ರ, ಯಮ, ಪ್ರಜಾಪತಿಗಳಿಂದ ಕ್ರಮದಂತೆ ನಿಯಂತ್ರಿಸಲ್ಪಟ್ಟ ವಾಗಾದಿ ಇಂದ್ರಿಯ ಪಂಚಕದಿಂದ ಅನುಕ್ರಮವಾಗಿ, ಮಾತಾಡುವುದು, ತೆಕ್ಕೊಳ್ಳುವುದು, ನಡೆಯುವುದು, ಮಲಾದಿಗಳನ್ನು ವಿಸರ್ಜಿಸುವುದು, ಆನಂದವನ್ನು ಕೂಡಾ ಅನುಭವಿಸುತ್ತಾರೆ. ಚಂದ್ರ, ಚತುರ್ಮುಖ, ಶಂಕರ ಮತ್ತು ಅಚ್ಯುತ ಇವರಿಂದ ಕ್ರಮಶಃ ನಿಯಂತ್ರಿಸಲ್ಪಟ್ಟ ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತ ಎಂಬ ಇಂದ್ರಿಯ ಚತುಷ್ಕದಿಂದ ಅನುಕ್ರಮವಾಗಿ ಸಂಕಲ್ಪ, ನಿಶ್ಚಯ, ಅಹಂಕಾರ್ಯ ಮತ್ತು ಚೈತ್ತ (ಚಿತ್ತವೃತ್ತಿ) ಮೊದಲಾದ ಸ್ಥೂಲವಿಷಯಗಳನ್ನು ಅನುಭವಿಸುತ್ತಾರೆ. ಶ್ರುತಿಗಳಲ್ಲಿ ವಿಶ್ವ ಮತ್ತು ವೈಶ್ವಾನರರು ಜಾಗರಿತ ಸ್ಥಾನವು ಬಹಿಃಪ್ರಜ್ಞರೆಂದು ಹೇಳಲ್ಪಡುತ್ತಾರೆ. ಇಲ್ಲಿಯೂ ಕೂಡಾ ಸ್ಥೂಲ ವ್ಯಷ್ಟಿ ಮತ್ತು ಸಮಷ್ಟಿಗಳಿಗೆ ಮತ್ತು ಅವುಗಳಿಂದ ಉಪಹಿತಗಳಾದ ವಿಶ್ವವೈಶ್ವಾನರರಿಗೂ ವನವೃಕ್ಷಗಳಂತೆಯೂ, ತದವಚ್ಛಿನ್ನ ಆಕಾಶಗಳಂತೆಯೂ, ಜಲಾಶಯ ಮತ್ತು ಜಲಗಳು ಅವುಗಳಲ್ಲಿ ಪ್ರತಿಬಿಂಬಿತವಾದ ಆಕಾಶದಂತೆಯೂ ಹಿಂದಿನ ಪ್ರಸಕ್ತಿಗಳಲ್ಲಿ ಹೇಳಿದಂತೆ ಅಭೇದವಾಗಿರುತ್ತದೆ.

ಮೇಲೆ ತೋರಿಸಿದ ಸ್ಥೂಲ ಸೂಕ್ಷ್ಮಕಾರಣಗಳ ಪ್ರಪಂಚಗಳ ಸಮಷ್ಟಿಯು ಒಂದು ಮಹಾಪ್ರಪಂಚವಾಗುತ್ತದೆ. ಹೇಗೆ ಬಹುವನಗಳ ಸಮಷ್ಟಿಯಿಂದ ಒಂದು ದೊಡ್ಡ ಮಲೆಯಾಗುತ್ತದೋ–ಹೇಗೆ ಬಹು ಜಲಗಳ ಸಮಷ್ಟಿಯಿಂದ ಮಹಾಸಾಗರವಾಗುತ್ತದೋ ಹಾಗೆ.

ಈ ವ್ಯಷ್ಟಿ ಸಮಷ್ಟಿಗಳಿಂದ ಉಪಹಿತಗಳಾದ ವೈಶ್ವಾನರಾದಿ ಈಶ್ವರ ವರೆಗಿನ ಚೈತನ್ಯವು ಕೂಡಾ ಮಹಾವನಾವಚ್ಛಿನ್ನ ಆಕಾಶ ಮತ್ತು ಮಹಾಸಾಗರದಲ್ಲಿ ಪ್ರತಿಬಿಂಬಿತವಾದ ಆಕಾಶದಂತೆ ಒಂದೇ ಆಗಿರುತ್ತದೆ. ಈ ಮಹಾಪ್ರಪಂಚ, ಅದರಿಂದ ಉಪಹಿತವಾದ ಚೈತನ್ಯವು, ಸರ್ವವು ಬ್ರಹ್ಮವೇ ಎಂದು ಹೇಳಲ್ಪಡುವ ವಾಕ್ಯಕ್ಕೆ ವಾಚ್ಯಭೂತವಾಗಿರುತ್ತದೆ. ಇದೇ ವಿವಿಕ್ತ ಎಂತಲೂ ಸಲ್ಲಕ್ಷ್ಯವೆಂತಲೂ ಕರೆಯಲ್ಪಡುತ್ತದೆ.

ಈ ಮೇಲೆ ಹೇಳಿದಂತೆ ವಸ್ತುವಿನಲ್ಲಿ ಅವಸ್ತುವಿನ ಆರೋಪವು. ಇದಕ್ಕೆ ಅಧ್ಯಾಸ ಅಥವಾ ಆರೋಪವೆಂದು ಹೇಳುತ್ತಾರೆ. ಸೃಷ್ಟಿಯಲ್ಲಿ ಆತ್ಮನಿಗೆ ಪಂಚಭೂತ ತನ್ಮಾತ್ರಗಳ ಉತ್ಪತ್ತಿಯಲ್ಲಿ ಹದಿನೇಳು ಅವಯವಗಳಿಂದ ಯುಕ್ತವಾದ ಲಿಂಗಶರೀರದ ಉತ್ಪತ್ತಿಯಲ್ಲಿ ಹಿರಣ್ಯಗರ್ಭನ ಸ್ಥೂಲಶರೀರದ ಉತ್ಪತ್ತಿಯಲ್ಲಿಯೂ ಸಾಕ್ಷಾತ್ಕರ್ತೃತ್ವವೂ ಇತರ ನಿಖಿಲ ಪ್ರಪಂಚ ವಿಷಯದಲ್ಲಿ ಹಿರಣ್ಯಗರ್ಭಾದಿದ್ವಾರಾ ಕರ್ತೃತ್ವವು ಇರುವುದು. ಹಿರಣ್ಯಗರ್ಭನೆಂದರೆ ಮೂರ್ತಿತ್ರಯದಿಂದ ಅನ್ಯನಾದ ಮೊದಲನೇ ಜೀವನಾಗಿರುತ್ತಾನೆ.

ಅಪವಾದ.

ರಜ್ಜು ವಿವರ್ತವಾದ ಸರ್ಪಕ್ಕೆ ರಜ್ಜು ಮಾತ್ರತ್ವದೋಪಾದಿಯಲ್ಲಿ ವಸ್ತು ವಿವರ್ತವಾದ ಅವಸ್ತು ಅಜ್ಞಾನಾದಿ ಪ್ರಪಂಚಕ್ಕೆ ವಸ್ತು ಮಾತ್ರತ್ವವು ಇರುವುದು. ಈ ನ್ಯಾಯವನ್ನು ಆಶ್ರಯಿಸಿ ಪ್ರಲಯಕಾಲದಲ್ಲಿ ಭೋಗಾಯತನಗಳಾದ ಸಮಸ್ತ ಚತುರ್ವಿಧ ಸ್ಥೂಲ ಶರೀರಗಳು ಭೋಗ್ಯಗಳಾದ ಅನ್ನಪಾನಾದಿಗಳು. ಇವುಗಳಿಗೆ ಆಯತನಗಳಾದ ಸಮಸ್ತ ಲೋಕಗಳು. ಇವುಗಳಿಗೂ ಆಯತನಭೂತವಾದ ಬ್ರಹ್ಮಾಂಡವು ಕೂಡಾ ಇವುಗಳ ಉತ್ಪತ್ತಿಗೆ ಕಾರಣಭೂತವಾದ ಪಂಚೀಕೃತಭೂತ ಮಾತ್ರ

ಗಳಾಗುತ್ತವೆ. ಶಬ್ದಾದಿ ಸಹಿತಗಳಾದ ಪಂಚೀಕೃತ ಭೂತಗಳು ಮತ್ತು ಸೂಕ್ಷ್ಮ ಶರೀರಗಳು ಕೂಡಾ ಇವುಗಳಿಗೆ ಕಾರಣ ಭೂತಗಳಾದ ಅಪಂಚೀಕೃತ ಭೂತ ಮಾತ್ರಗಳಾಗುತ್ತವೆ. ಸತ್ವಾದಿಗುಣಗಳಿಂದ ಸಹಿತ ಗಳಾದ ಅಪಂಚೀಕೃತ ಭೂತಗಳೂ ಉತ್ಪತ್ತಿಯ ಉರುಟಿ ಕ್ರಮದಿಂದ ಇವುಗಳಿಗೆ ಕಾರಣಭೂತವಾದ ಅಜ್ಞಾನ ದಿಂದ ಉಪಹಿತವಾದ ಚೈತನ್ಯ ಮಾತ್ರವಾಗುತ್ತದೆ. ಈ ಅಜ್ಞಾನ ಮತ್ತು ಇದರಿಂದ ಉಪಹಿತವಾದ ಚೈತನ್ಯ, ಈಶ್ವರಾದಿಗಳು ಕೂಡಾ ಇವೆಲ್ಲಕ್ಕೆ ಅಧಾರಭೂತವಾದ ಅನುಪಹಿತ ಚೈತನ್ಯರೂಪವಾಗುತ್ತದೆ. ಇದೇ ಕೊನೆಯದು ಬ್ರಹ್ಮಮಾತ್ರವಾಗಿರುತ್ತದೆ. ಈ ರೀತಿಯ ಪ್ರಲಯ ವ್ಯಾಪಾರವೇ ಅಪವಾದ ಎನ್ನಿಸಲ್ಪಡುತ್ತದೆ.

ಈ ರೀತಿ ಅದ್ವೈತ ಮತದ ಅಭಿಪ್ರಾಯದಂತೆ ಜಗತ್ತಿನ ಉತ್ಪತ್ತಿ, ಪ್ರಲಯ ಮತ್ತು ಜಗತ್ತಿಗೂ ಆತ್ಮನಿಗೂ ಇರುವ ಕಾರ್ಯಕಾರಣ ಎಂಬ ಸಂಬಂಧವು ಸ್ವಲ್ಪಾಂಶದಿಂದ ತೋರಿಸಲ್ಪಟ್ಟಿತು.

೨. ಜೀವ.

ಬುದ್ಧಿ, ಮನಸ್ಸು, ಚಿತ್ತ ಮತ್ತು ಅಹಂಕಾರಗಳು ಆಕಾಶಾದಿಗಳಲ್ಲಿರುವ ಮಿಲಿತಗಳಾದ ಸಾತ್ವಿಕ ಅಂಶ ಗಳಿಂದ ಉತ್ಪನ್ನವಾಗುತ್ತವೆ. ಇವುಗಳಿಗೆ ಪ್ರಕಾಶಾತ್ಮಕತ್ವದಿಂದ ಸಾತ್ವಿಕಾಂಶ ಕಾರ್ಯತ್ವವು ಇರುತ್ತದೆ. ಇಲ್ಲಿ ಜ್ಞಾನೇಂದ್ರಿಯಗಳಿಂದ ಸಹಿತವಾದ ಬುದ್ಧಿಯಿಂದ ವಿಜ್ಞಾನಮಯ ಕೋಶವಾಗುತ್ತದೆ. ಇವುಗಳಿಂದ ಯುಕ್ತವಾದ ಈ ಕೋಶವು ಕರ್ತೃತ್ವ, ಭೋಕ್ತೃತ್ವ, ಸುಖಿತ್ವ, ದುಃಖಿತ್ವ ಮೊದಲಾದ ಅಭಿಮಾನದಿಂದ ಈ ಲೋಕ ಪರಲೋಕ ಮೊದಲಾದುವುಗಳಲ್ಲಿ ಗಮನಶೀಲ ಉಳ್ಳದ್ದಾಗಿ ವ್ಯಾವಹಾರಿಕ ಜೀವ ಎಂದು ಹೇಳಲ್ಪಡುತ್ತದೆ.

ವಿಜ್ಞಾನಮಯ, ಮನೋಮಯ ಮತ್ತು ಪ್ರಾಣ ಮಯಗಳೆಂಬ ಮೂರು ಕೋಶಗಳು ಸೇರಿದರೆ ಸೂಕ್ಷ್ಮ ಶರೀರವೆಂದು ಹೇಳಲ್ಪಡುತ್ತದೆ. ಬುದ್ಧಿ—ಯಾ—ಜ್ಞಾನ ಶಕ್ತಿಯುಳ್ಳ ಕೋಶವು ಕರ್ತೃರೂಪವಾಗಿಯೂ, ಇಚ್ಛಾ ಶಕ್ತಿಯುಳ್ಳ ಮನೋಮಯ ಕೋಶವು ಕರಣರೂಪ ವಾಗಿಯೂ, ಕ್ರಿಯಾಶಕ್ತಿಯುಳ್ಳ ಪ್ರಾಣಮಯ ಕೋಶವು ಕಾರ್ಯರೂಪವಾಗಿಯೂ ಇರುತ್ತದೆ.

೩. ಬ್ರಹ್ಮ.

ಇದರ ಹೆಚ್ಚಿನ ಪರಿಚಯವನ್ನು ಹಿಂದೆ ಹೇಳಿದೆ. ಆದರೂ ಕ್ರಮದಿಂದ ಬಂದಿರುವ ಭಾಗವನ್ನು ಸ್ವಲ್ಪ ಇಲ್ಲಿ ಹೇಳುತ್ತೇನೆ. ಆತ್ಮನು ನಿತ್ಯನು, ಎಂದೆಂದಿಗೂ ಯಾವ ರೂಪದಲ್ಲಿಯೂ ನಾಶವಿಲ್ಲದವನು. ಶುದ್ಧನು. ಸರ್ವಪ್ರಕಾರದಲ್ಲಿಯೂ ನಿರ್ಮಲನು. ಬುದ್ಧನು. ಯಾವುದರಲ್ಲಿಯೂ ಶೇಷವಿಲ್ಲದೆಯೂ, ಭ್ರಮಪ್ರಮಾದಾದಿಗಳಿಲ್ಲದೆಯೂ, ಸರ್ವ ವಿಷಯಗಳನ್ನು ಸಂಪೂರ್ಣ ವಾಗಿ ತಿಳಿದವನು. ಮುಕ್ತ. ಯಾವ ವಿಧವಾದ ಬಂಧನೆಗೂ ಒಳಪಡದೆ ಸದಾ ಸ್ವತಂತ್ರ ಬಿಡುಗಡೆ ಉಳ್ಳವನು. ಸತ್ಯಸ್ವಭಾವನು. ಅಂದರೆ ಸತ್ಯಮಯನು. ಆನಂದರೂಪ—ಯಾ—ಆನಂದಮಯನು. ಸಮಸ್ತ ರೀತಿಯ ಪರಿಮಾಣಗಳಿಂದ ಅತೀತನಾದವನು ಮತ್ತು ಸರ್ವಥಾ ಅದ್ವಿತೀಯನು. ಬ್ರಹ್ಮನ ಇರುವಿಕೆಗೆ ಶ್ರುತಿ ಗಳೂ, ಬ್ರಹ್ಮಸಾಕ್ಷಾತ್ಕಾರ ಮಾಡಿರುವ ಮಹಾ ಪುರುಷರೂ ಪ್ರಮಾಣ.

ಇಲ್ಲಿ ಜಗತ್, ಜೀವ ಮತ್ತು ಬ್ರಹ್ಮ ವಿಷಯ ಗಳಲ್ಲಿ ಅದ್ವೈತ ಮತಕ್ಕಿಂತ ಇತರ ಕೆಲವು ಮತದವರ ಅಭಿಪ್ರಾಯದೊಂದಿಗೆ ಅದ್ವೈತ ಮತದ ಅಭಿಪ್ರಾಯ ವನ್ನು ತುಲನಾತ್ಮಕತೆಯಿಂದ ತಿಳಿಯುವುದಕ್ಕೆ ಅನು ಕೂಲವಾಗುವಂತೆ ಬರೆದಿದ್ದೇನೆ.

ಕೆಲವು ಅದ್ವೈತಕ್ಕೆ ಸಂಬಂಧಪಟ್ಟ ವಿಷಯಗಳು

ಮೇಲೆ ಸೂಚಿಸಿದ ಅಧ್ಯಾರೋಪ ಮತ್ತು ಅಪವಾದಗಳಿಂದ ತತ್ವಂ ಎಂಬ ಪದಾರ್ಥದ ಶೋಧನೆಯು ಕೂಡಾ ಸಿದ್ಧವಾಗುತ್ತದೆ. ಹೇಗೆಂದರೆ, ಅಜ್ಞಾನಾದಿ ಸಮಷ್ಟಿ ಮತ್ತು ಇದರಿಂದ ಉಪಹಿತವಾದ ಸರ್ವಜ್ಞತ್ವಾದಿ ವಿಶಿಷ್ಟ ಚೈತನ್ಯ, ಇದರಿಂದ ಅನುಪಹಿತವಾದ ಚೈತನ್ಯ ಈ ಮೂರು ಕಾದ ಕಬ್ಬಿಣದಗುಂಡಿನಂತೆ ಏಕತ್ವದಿಂದ ಅವಭಾಸಮಾನವಾಗಿರುವುದು. ಇದು ತತ್ಪದದ ವಾಚ್ಯಾರ್ಥವಾಗಿದೆ. ಈ ಉಪಾಧಿಯ ಉಪಹಿತಕ್ಕೆ ಆಧಾರಭೂತವಾದ ಅನುಪಹಿತ ಚೈತನ್ಯವು ತತ್ಪದದ ಲಕ್ಷ್ಯಾರ್ಥವಾಗುತ್ತದೆ. ಅಜ್ಞಾನಾದಿ ವ್ಯಷ್ಟಿ, ಇದರಿಂದ ಉಪಹಿತವಾದ ಅಲ್ಪಜ್ಞತ್ವಾದಿ ವಿಶಿಷ್ಟ ಚೈತನ್ಯ, ಇದರಿಂದ ಅನುಪಹಿತವಾದ ಚೈತನ್ಯ ಈ ಮೂರು ಕಾದ ಕಬ್ಬಿಣದಗುಂಡಿನಂತೆ ಏಕತ್ವದಿಂದ ಅವಭಾಸಮಾನ ವಾಗಿ ತ್ವಂ ಪದದ ವಾಚ್ಯಾರ್ಥವಾಗುತ್ತದೆ. ಈ ಉಪಾ

ಧಿಯಿಂದ ಉಪಹಿತಾಧಾರಭೂತವು ಅನುಪಹಿತವಾದ ಪ್ರತ್ಯಗಾನಂದರೂಪವು ಕೊನೆಯ ಚೈತನ್ಯವು ತ್ವಂ ಪದದ ಲಕ್ಷ್ಯಾರ್ಥವಾಗುತ್ತದೆ.

ಮಹಾವಾಕ್ಯಾರ್ಥ

ಛಾಂದೋಗ್ಯದಲ್ಲಿ ಹೇಳಿರುವ ತತ್ವಮಸಿ ಎಂಬ ವಾಕ್ಯವು* ಮೂರು ಸಂಬಂಧದಿಂದ ಅಖಂಡಾರ್ಥ ಬೋಧಕವಾಗುತ್ತದೆ. ಇವುಗಳಲ್ಲಿ ಪದಗಳಿಗೆ ಸಾಮಾನಾಧಿಕರಣ್ಯವು ೧ನೆ ಸಂಬಂಧ. ಪದ ಮತ್ತು ಅರ್ಥಕ್ಕೆ ವಿಶೇಷಣ ವಿಶೇಷ್ಯಭಾವವು ೨ನೇ ಸಂಬಂಧ. ಪ್ರತ್ಯಗಾತ್ಮ ಮತ್ತು ಲಕ್ಷಣಗಳಿಗೆ ಲಕ್ಷ್ಯ—ಲಕ್ಷಣಭಾವವು ೩ನೇ ಸಂಬಂಧವು. ಇದು ಮಹಾ ವಾಕ್ಯ ಎಂದು ಹೇಳಲ್ಪಡುತ್ತದೆ.

ಅಹಂ ಬ್ರಹ್ಮಾಸ್ಮಿ ಎಂಬ ಅನುಭವದ ವಾಕ್ಯಾರ್ಥ

ಅಹಂ ಬ್ರಹ್ಮಾಸ್ಮಿ ಸೋಹಮಸ್ಮಿ ಬೃ. ಆ* ಮತ್ತು ಈಶ+ ಉಪನಿಷತ್ತುಗಳಲ್ಲಿ ಹೇಳಿರುವ ವಾಕ್ಯಗಳಿಗೆ ಅನುಭವ ವಾಕ್ಯಾರ್ಥವು ಹೇಳಲ್ಪಡುತ್ತದೆ.

ಗುರುವಿನಿಂದ ಅಧ್ಯಾರೋಪ ಮತ್ತು ಅಪವಾದ ಪೂರ್ವಕ ತತ್ಪದಾರ್ಥ ಮತ್ತು ತ್ವಂ ಪದಾರ್ಥಗಳನ್ನು ಶೋಧಿಸಿ ಶಿಷ್ಯನಿಗೆ, ವಾಕ್ಯದಿಂದ ಅಖಂಡಾರ್ಥವು ತಿಳಿಸಲಾಗಿ, ನಾನು ನಿತ್ಯ ಶುದ್ಧ ಬುದ್ಧ ಮತ್ತು ಸತ್ಯ ಸ್ವಭಾವ ಪರಮಾನಂದ ಅನಂತ ಅದ್ವಿತೀಯನಾದ ಬ್ರಹ್ಮನಾಗಿದ್ದೇನೆ–ಎಂದು ಅಖಂಡಾಕಾರಾಕಾರಿತ ಚಿತ್ತವೃತ್ತಿಯು ಉದಯವಾಗುತ್ತದೆ. ಅದು ಚಿತ್ಪ್ರತಿ ಬಿಂಬ ಸಹಿತವಾಗಿ ಪ್ರತ್ಯಗಭಿನ್ನನಾದ ಪರಬ್ರಹ್ಮನನ್ನು ವಿಷಯಿಯನ್ನಾಗಿ ಮಾಡಿ, ತದ್ಗತವಾದ ಅಜ್ಞಾನವನ್ನು ಬಾಧಿಸುತ್ತದೆ. ಆ ಅವಸ್ಥೆಯಲ್ಲಿ ವಸ್ತ್ರಕ್ಕೆ ಕಾರಣವಾದ ತಂತುಗಳು ಸುಟ್ಟು ಹೋದರೆ ವಸ್ತ್ರ ಹೇಗೆ ಸುಟ್ಟು ಹೋಗುತ್ತದೋ ಅಖಿಲ ಅನರ್ಥಕ್ಕೆ ಕಾರಣವಾದ ಅಜ್ಞಾನವು ಬಾಧಿತವಾಗುತ್ತಿರಲಾಗಿ ಅದರಿಂದ ಉತ್ಪನ್ನವಾದ ಸಮಸ್ತ ಕಾರ್ಯಗಳಿಗೆ ಬಾಧಿತತ್ವದಿಂದ ತದಂತರ್ಭೂತವಾದ ಅಖಂಡಾಕಾರಾಕಾರಿತ ಚಿತ್ತವೃತ್ತಿಯು ಕೂಡಾ ಬಾಧಿತವಾಗುತ್ತದೆ. ಅದರಲ್ಲಿ ಪ್ರತಿಬಿಂಬಿತವಾದ ಚೈತನ್ಯವು ಕೂಡಾ ಯಾವ ರೀತಿಯಲ್ಲಿ ದೀಪಪ್ರಭೆಯು ಆದಿತ್ಯಪ್ರಭೆಯನ್ನು ಅವಭಾಸಿಸಲಿಕ್ಕೆ ಅಸಮರ್ಥವಾಗಿ ಆದಿತ್ಯಪ್ರಭೆಯಿಂದ ತಿರಸ್ಕರಿಸಲ್ಪಡುತ್ತದೋ ಅದೇ ರೀತಿ ಸ್ವಯಂ ಪ್ರಕಾಶಮಾನವಾದ ಪ್ರತ್ಯಗಭಿನ್ನ ಪರಮಾತ್ಮನನ್ನು ಅವಭಾಸಿಸಲಿಕ್ಕೆ ಅನರ್ಹತೆಯಿಂದ ಪರಮಾತ್ಮನ ಪ್ರಭೆಯಿಂದ ತಿರಸ್ಕರಿಸಿ, ತನ್ನ ಉಪಾಧಿಭೂತವಾದ ಅಖಂಡ ವೃತ್ತಿಯಿಂದ ಬಾಧಿಸಲ್ಪಡುವುದರಿಂದ ಕನ್ನಡಿಯ ಅಭಾವದಲ್ಲಿ ಮುಖ ಪ್ರತಿಬಿಂಬಕ್ಕೆ ಮುಖಮಾತ್ರದೋಪಾದಿ ಪ್ರತ್ಯಗಭಿನ್ನ ಪರಮಾತ್ಮನು ಮಾತ್ರ ಇರುತ್ತಾನೆ.

ಪ್ರಯೋಜನ—ಸುಖ—ಮೋಕ್ಷ

ತತ್ವ ದರ್ಶನದಿಂದ ಪ್ರಯೋಜನ

ಯಾವ ಸುಖಾದಿಯು ಸುಖಾದಿರೂಪ ಪ್ರವೃತ್ತಿತ್ವದಿಂದ ತಿಳಿಯಲ್ಪಡುತ್ತದೋ ಅಂದರೆ ನನಗೆ ಇದು ಸುಖ ಎಂದು ಸ್ವಸಂಬಂಧಿತ್ವದಿಂದ ತಿಳಿಯಲ್ಪಡುವುದೋ ತಿಳಿಯಲ್ಪಟ್ಟದ್ದನ್ನು ಅದೇ ರೀತಿ ಸುಖಾದಿಗಳು ನನಗಾಗಲಿ ಎಂದು ಸುಖತ್ವಾದಿರೂಪ ಪ್ರವೃತ್ತಿತ್ವದಿಂದ ಅಪೇಕ್ಷಿಸಲ್ಪಡುವುದು. ಅಂದರೆ ಸುಖತ್ವಾದಿ ರೂಪದಿಂದ ಸುಖಾದಿಗಳನ್ನು ಅನುಭವಿಸುವುದು–ಅದೇ ಪ್ರಯೋಜನವು.

ಸುಖ

ಸುಖವು ಸಾತಿಶಯ ಮತ್ತು ನಿರತಿಶಯವೆಂದು ಎರಡು ವಿಧ. ವಿಷಯಗಳ ಅನುಷಂಗದಿಂದ ಉತ್ಪನ್ನವಾದ ಅಂತಃಕರಣವೃತ್ತಿಯ ತಾರತಮ್ಯದಿಂದ ಮಾಡಲ್ಪಟ್ಟ ಲೇಶಾನಂದದಿಂದ ಆಗುವ ಆವಿರ್ಭಾವ ವಿಶೇಷವು ಸಾತಿಶಯ ಸುಖವೆನ್ನಲ್ಪಡುತ್ತದೆ. ವಿಜ್ಞಾನ ಅಥವಾ ಆನಂದ ಬ್ರಹ್ಮ ಸ್ವರೂಪವು ನಿರತಿಶಯ ಸುಖವೆನ್ನಲ್ಪಡುತ್ತದೆ.

ಮೋಕ್ಷ

(ಮೋಕ್ಷವೆಂದರೆ) ಅಭೇದ ಸರ್ವಸ್ವದಿಂದ ಆನಂದರೂಪ ಬ್ರಹ್ಮನಾಗಿ ದುಃಖತ್ರಯದಿಂದ ನಿರಂತರ ನಿವೃತ್ತನಾಗುವುದೇ ಮೋಕ್ಷ.

ಜೀವನ್ಮುಕ್ತಿಃ

ಸ್ವಸ್ವರೂಪ ಅಖಂಡ ಬ್ರಹ್ಮಜ್ಞಾನದಿಂದ ಅಜ್ಞಾ

---

*ಛಾ. ಅ. ೬. ಖಂ. ೮—೯—೧೦—೧೧—೧೨—೧೩—೧೪—೧೫—೧೬ ರಲ್ಲಿ ಭಿನ್ನ ಭಿನ್ನ ದೃಷ್ಟಾಂತಗಳನ್ನು ಕೊಟ್ಟು ಕೊನೆಗೆ, ಸ ಆತ್ಮಾ ತತ್ವಮಸಿ ಶ್ವೇತಕೇತೋ ಎಂದು ಆರುಣಿ ಉದ್ದಾಲಕನು ತನ್ನ ಮಗನಾದ ಶ್ವೇತಕೇತುವಿಗೆ ಹೇಳುತ್ತಾನೆ.

*ಬೃ. ಅ. ೧—೪

+ಈಶ ಮಂ. ೧೬.

ನವು ಬಾಧಿಸಲ್ಪಡುತ್ತದೆ (ನಾಶವಾಗುತ್ತದೆ). ಅದರಿಂದ ಅಖಂಡ ಬ್ರಹ್ಮನ ಸಾಕ್ಷಾತ್ಕಾರವಾಗುತ್ತದೆ. ಸಾಕ್ಷಾತ್ಕಾರದ ಪ್ರಭಾವದಿಂದ ಅಜ್ಞಾನ, ಅಜ್ಞಾನದ ಕಾರ್ಯ, ಸಂಚಿತ ಕರ್ಮ, ಸಂಶಯ ಮತ್ತು ವಿಪರ್ಯಯಗಳೂ ನಾಶವಾಗುತ್ತವೆ. ಆ ದಶೆಯಲ್ಲಿ ಸರ್ವಬಂಧಗಳಿಂದ ರಹಿತನಾಗಿ ಬ್ರಹ್ಮನಾಗುತ್ತಾನೆ. ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ವಿಷಯಗಳನ್ನು ಸಿದ್ಧಾಂತಗ್ರಂಥಗಳಿಂದ ತಿಳಕೊಳ್ಳುವುದು.

ಸಗುಣ ಬ್ರಹ್ಮ ಉಪಾಸಕರಿಗೆ ಮುಕ್ತಿ

ಶ್ರುತಿಗಳೊಳಗೆ ಬಹಳ ಸಂದರ್ಭಗಳಲ್ಲಿ ಸಗುಣ ಬ್ರಹ್ಮನ ಕಥನವು ಕಾಣುತ್ತದೆ. ಆ ವಾಕ್ಯಗಳನ್ನು ಪ್ರಮಾಣವಾಗಿಟ್ಟುಕೊಂಡು ಬ್ರಹ್ಮೋಪಾಸನ ಮಾಡುವವರ ಗತಿ ಏನು ಎಂಬ ವಿಚಾರ ಇಲ್ಲಿ ಶ್ರುತಿಯು ಹೇಳುತ್ತದೆ. ಸಗುಣ ಬ್ರಹ್ಮ ಉಪಾಸನೆಯಿಂದ ನಿಗೃಹೀತ ಮನಸ್ಸು ಉಳ್ಳವರಿಗೆ ನಿರುಪಾಧಿಕ ಬ್ರಹ್ಮಧ್ಯಾನದಿಂದ ಬ್ರಹ್ಮ ಸಾಕ್ಷಾತ್ಕಾರವಾಗಿ ತನ್ಮೂಲಕ ಪ್ರಾರಬ್ಧ ಕರ್ಮಗಳು ನಾಶವಾಗುತ್ತವೆ. ಅನಂತರ ಉಪಾಸಕರಿಗೆ ಕಾರ್ಯ ಬ್ರಹ್ಮನೊಂದಿಗೆ ಮುಕ್ತಿಯಾಗುತ್ತದೆ. ಈ ಸಂದರ್ಭವನ್ನು ಕಳಕೊಂಡ ಅಂದರೆ ಬ್ರಹ್ಮ ವಿಚಾರವನ್ನು ಮಾಡದಿರುವ ಸಗುಣ ಉಪಾಸನೆಯಿಂದ ಅರ್ಚಿರಾದಿ ಮಾರ್ಗದಿಂದ ಬ್ರಹ್ಮ ಲೋಕವನ್ನು ಹೊಂದಿದ ಸಗುಣ ಉಪಾಸಕರಿಗೆ ಅಲ್ಲಿಯೇ ಶ್ರವಣಾದಿ ಸಾಧನಗಳಿಂದ ಸಾಕ್ಷಾತ್ಕೃತ ಬ್ರಹ್ಮ ಭಾವನಯಿಂದ ಕಾರ್ಯ ಬ್ರಹ್ಮನೊಂದಿಗೆ ಮುಕ್ತಿಯಾಗುತ್ತದೆ.

ಮಾಯಾ

ಮಾಯೆಯು ಜಗತ್ತಿಗೆ ಸಂಬಂಧಿಸಿರುವುದರಿಂದ ಮಾಯೆಯನ್ನು ಸ್ವಲ್ಪ ವಿಚಾರಿಸುವ. ಅನೇಕರು— "ವೇದಾಂತ ದರ್ಶನದೊಳಗೆ ಮಾಯೆಯನ್ನು ಹೊಗಿಸಿದವರು. ಶ್ರೀ ಶಂಕರಾಚಾರ್ಯರು ಇದಕ್ಕೆ ಪ್ರಮಾಣ ಬಲವಿಲ್ಲ. ಶ್ರೀ ಶಂಕಾರಾಚಾರ್ಯರ ಕಪೋಲ ಕಲ್ಪಿತ ವಸ್ತು"—ಎಂದು ಅಭಿಪ್ರಾಯ ಪಡುತ್ತಾರೆ. ನನಗೆ ಹಾಗೆ ಕಾಣುವುದಿಲ್ಲ. ಮಾಯಾ ಶಬ್ದವು ವೈದಿಕ ಶಬ್ದ. ವೇದದಲ್ಲಿಯೂ ಪ್ರಸ್ಥಾನತ್ರಯಗಳೊಳಗೆ ಒಂದಾದ ಗೀತೆಯಲ್ಲಿಯೂ ಅನೇಕ ಸಂದರ್ಭಗಳಲ್ಲಿ ಕಂಡು ಬರುತ್ತದೆ. ಉದಾಹರಣೆಗಾಗಿ ಋ. ಮಂ. ೧೦ ಸೂ. ೧೭೭ ಮಂತ್ರ ೧ರಲ್ಲಿ ವಿದ್ವಾಂಸರು ಹೃದ್ಗತ ಮನಸ್ಸಿನಿಂದ ಬ್ರಹ್ಮನ ಮಾಯೆಯಿಂದ ಆಚ್ಛನ್ನವಾದ ಜೀವನನ್ನು ನೋಡುತ್ತಾರೆ* ಎಂದು ಹೇಳಿದೆ. ಇನ್ನೂ ಋಗ್ವೇದದಲ್ಲಿ ಕೆಲವು ಕಡೆ ಇಂದ್ರಜಾಲಾರ್ಥದಲ್ಲಿ ಉಪಯೋಗಿಸಿದ ಮಾಯಾ ಶಬ್ದವನ್ನು ನೋಡಬಹುದು.+ ಅಜನಾಗಿ, ಅವ್ಯಯಾತ್ಮನಾಗಿ ಮತ್ತು ಭೂತೇಶ್ವರನಾಗಿ ಇದ್ದರೂ ಸ್ವಪ್ರಕೃತಿಯನ್ನು ಆಧರಿಸಿ ಆತ್ಮ ಮಾಯೆಯಿಂದಲೇ ಹುಟ್ಟುತ್ತೇನೆ ಎಂದು ಗೀತೆಯಲ್ಲಿ ಶ್ರೀ ಕೃಷ್ಣನು ಹೇಳುತ್ತಾನೆ. ಇನ್ನೊಂದು ಕಡೆಯಲ್ಲಿ ಗುಣಮಯವಾದ ಈ ನನ್ನ ದೈವೀ ಮಾಯೆಯು ಪಾರವಾಗಲಿಕ್ಕೆ ಅಸಾಧ್ಯವಾಗಿರುವುದು. ಯಾರು ನನ್ನನ್ನೇ ಹೊಂದುತ್ತಾರೋ ಅವರು ಈ ಮಾಯೆಯನ್ನು ದಾಟುತ್ತಾರೆ. ಮಾಯೆಯಿಂದ ಅಪಹೃತ ಜ್ಞಾನವುಳ್ಳ ಅಸುರ ಭಾವವನ್ನು ಹೊಂದಿರತಕ್ಕ ಮೂಢರಾದ ಮತ್ತು ದುರಾಚಾರಿಗಳಾದ ಅಧಮ ಮನುಷ್ಯರು ನನ್ನನ್ನು ಹೊಂದುವುದಿಲ್ಲ—ಎಂದು ಕೃಷ್ಣನು ಹೇಳಿದ್ದಾನೆ.*

ಶ್ರೀ ಮಧ್ವಾಚಾರ್ಯರು ಅನಾದಿ ಮಾಯಯಾ ಸುಪ್ತಃ ಯದಾಜೀವಃ ಪ್ರಬುಧ್ಯತೇ ॥ ಮಾ. ಉ. ಮಂ. ॥೮॥ ಮಾಯಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ಮಾ. ಉ. ಮಂ. ॥೯॥ ಮಂತ್ರಗಳಿಗೆ ಪ್ರಕಾಶಿಕೆ ಎಂಬ ಗ್ರಂಥಪ್ರಮಾಣದಿಂದ ಅದ್ವೈತಿಗಳು ಹೇಳುವಂತೆಯೇ ಮಾಯಾಶಬ್ದಕ್ಕೆ ವ್ಯಾಖ್ಯಾನವನ್ನು ಮಾಡಿದ್ದಾರೆ. ಇಂದ್ರೋ ಮಾಯಾಭಿಃ ಪುರುರೂಪ ಈಯತೇ ಬೃ. ಅ. ೨-೫-೧೯ರಲ್ಲಿ ಮಾಯಾ ಶಬ್ದವು ಕಾಣುತ್ತದೆ. ಈ ಕಾರಣಗಳಿಂದ ಮಾಯಾ ವಿಷಯವು ಶ್ರೀ ಶಂಕರಾಚಾರ್ಯರಿಂದ ಪ್ರಸ್ತಾವಿಸಲ್ಪಟ್ಟದ್ದೆಂದು ಹೇಳುವುದು ಅಸತ್ಯವೆಂದು ಕಂಡುಬರುತ್ತದೆ.

ಸಾಧನ ಚತುಷ್ಟಯ.

ಯಾಜ್ಞವಲ್ಕ್ಯನು ತನ್ನ ಭಾರ್ಯೆ ಮೈತ್ರೇಯಿಯನ್ನು ಕುರಿತು ಹೇಳುತ್ತಾನೆ:—ಆತನಾದರೋ ನೋಡಲಿಕ್ಕೆ, ಕೇಳಲಿಕ್ಕೆ, ತಿಳಿದುಕೊಳ್ಳಲಿಕ್ಕೆ, ನಿದಿಧ್ಯಾಸಿಸಲಿಕ್ಕೆ

*ಪತಂಗಮಕ್ತಮಸುರಸ್ಯ ಮಾಯಯಾ ಹೃದಾ ಪಶ್ಯಂತಿ ಮನಸಾ ॥ ವಿಪಶ್ಚಿತ. ಋ. ಮಂ. ೧೦. ಸೂಕ್ತ ೧೭೭. ಮಂ. ೧.

+ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮ ಮಾಯಯಾ ಗೀ. ಅ. ೪—ಶ್ಲೋ—೬.

*ಗೀ. ಅ. ೭. ಶ್ಲೋ. ೧೪-೧೫.

ತಕ್ಕದಾದವನು. ಹೇ ಮೈತ್ರೇಯಿ, ಆತ್ಮನು ನೋಡಲ್ಪಟ್ಟರೆ, ಕೇಳಲ್ಪಟ್ಟರೆ, ತಿಳಿಯಲ್ಪಟ್ಟರೆ, ನಿದಿಧ್ಯಾಸಿಸಲ್ಪಟ್ಟರೆ ಎಲ್ಲವೂ ತಿಳಿಯಲ್ಪಡುವುದು ಎಂದು ಹೇಳುತ್ತಾನೆ.+ ಈ ಆಧಾರದಿಂದ ಅದ್ವೈತ ದರ್ಶನವು ಜೀವಬ್ರಹ್ಮರ ಏಕತ್ವವನ್ನು ಸಾಕ್ಷಾತ್ಕರಿಸಲಿಕ್ಕೆ ಬೇಕಾದ ಉಪಾಯಗಳನ್ನು ಸಂಗ್ರಹಿಸಿಕೊಡುತ್ತದೆ. ಈ ರೀತಿಯ ಅದ್ವೈತದರ್ಶನದಲ್ಲಿ ಪ್ರವೇಶಿಸಲಿಕ್ಕೆ ಇಚ್ಛಿಸುವ ಅರ್ಥಿಗಳು ಮೊದಲಾಗಿ ೧. ನಿತ್ಯ ಮತ್ತು ಅನಿತ್ಯ ವಸ್ತುಗಳ ವಿವೇಕ, ೨. ಐಹಿಕ ಮತ್ತು ಆಮುಷ್ಮಿಕ ವಿಷಯ ಭೋಗಗಳಲ್ಲಿ ವೈರಾಗ್ಯ, ೩. ಶಮದಮಾದಿ ಸಾಧನ ಸಂಪತ್, ೪. ಮುಮುಕ್ಷತ್ವಗಳೆಂಬ ನಾಲ್ಕು ಸಾಧನಗಳಿಂದ ಸಂಪನ್ನರಾಗಿರಬೇಕಾಗುತ್ತದೆ.

ನಿ ರ್ಧಾ ರ.

ಶ್ರೀ ಶಂಕರಾಚಾರ್ಯರ ಜನ್ಮಕ್ಕಿಂತ ಪೂರ್ವದಲ್ಲಿಯೇ, ವೇದ, ಪುರಾಣ, ಇತಿಹಾಸಗಳಲ್ಲಿಯೂ, ಅದ್ವೈತ ತತ್ವದ ಬೀಜಗಳೂ, ಅನ್ವೇಷಕರ ವಂಶದ ಹೆಸರುಗಳೂ, ಅನೇಕ ಋಷಿಗಳ ಹೆಸರುಗಳೂ ಕಂಡು ಬರುತ್ತವೆ. ಅನಂತರ ಬಾದರಾಯಣ, ವ್ಯಾಸ, ಶುಕ, ಜನಕ, ಯಾಜ್ಞವಲ್ಕ್ಯ, ಗೌಡಪಾದ, ಗೋವಿಂದಯೋಗಿ ಮೊದಲಾದವರು ಸ್ವಲ್ಪಾಂಶದಿಂದ ಅದ್ವೈತ ತತ್ವವನ್ನು ಪ್ರಚಾರಿಸಿದ್ದರು. ಆದರೆ ಆ ಕಾಲದಲ್ಲಿ ಇತರ ಆಸ್ತಿಕ ನಾಸ್ತಿಕ ಮತಗಳ ಪ್ರಾಬಲ್ಯದಿಂದಲೂ, ಸಮಾಜದ ದುಃಸ್ಥಿತಿಯಿಂದಲೂ, ತತ್ವಪ್ರಚಾರವು ಯಶಸ್ವಿಯಾಗಿ ನಡೆಯಲಿಲ್ಲ. ಆ ಸಮಯದಲ್ಲಿ ಶ್ರೀ ಗೋವಿಂದ ಭಗವತ್ಪಾದರ ಪ್ರಮುಖ ಶಿಷ್ಯ ಶ್ರೀ ಶಂಕಚಾರ್ಯರು ಈ ಕಾಲದ ಶ್ರೀ ರಾಮಕೃಷ್ಣ ಪರಮಹಂಸರ ಪರಮ ಶಿಷ್ಯ ಶ್ರೀ ವಿವೇಕನಂದ ಸ್ವಾಮಿಗಳಂತೆ ಅದ್ವೈತ ತತ್ವವನ್ನು ಯಶಸ್ವಿಯಾಗಿ ಪ್ರಚಾರಿಸಿ, ವೈದಿಕ–ಯಾ–ಹಿಂದೂ ಸಮಾಜವನ್ನು ಉದ್ಧರಿಸಿ ರಕ್ಷಿಸಿದರು.

ಸಾಧನಭೂತವಾದ ಅಂತಃಕರಣಗಳ ಪ್ರಯೋಗ ವಿಧಾನದಿಂದ ಜೀವಾತ್ಮೈಕ ತತ್ವದ ಸಾಕ್ಷಾತ್ಕಾರ ಮಾಡಿ

ಅದ್ವೈತ ತತ್ವದ ಮುಖ್ಯ ಉದ್ದೇಶ

ಆತ್ಮ ಮತ್ತು ಆನಂದಮಯನಾಗುವುದೇ ಇದರ ಮುಖ್ಯ ಉದ್ದೇಶ. ಅದ್ವೈತ ತತ್ವವು ಈಗಿನ ಕಾಲದ ಪ್ರಯೋಗಮಯ ಪುರುಷಾರ್ಥದಿಂದ ರಸಾಯನಾದಿ ತಂತ್ರಗಳನ್ನು ನಿರ್ಣೈಸಿದ ಶಾಸ್ತ್ರದಂತೆ, ಪರಮ ಪುರುಷಾರ್ಥಗಳಾದ ಅಂತಃಕರಣಗಳ ಸಮ್ಯಗ್ ಜ್ಞಾನ ಪ್ರಯೋಗದಿಂದ ನಿರ್ಣೈಸಲ್ಪಟ್ಟ ಕೇವಲ ಸತ್ಯಮಯವಾದ ಆಧ್ಯಾತ್ಮಿಕ ಶಾಸ್ತ್ರವಾಗಿದೆ. ಇದಕ್ಕೆ ಸಾಕ್ಷ್ಯವಾಗಿ ಗೀ. ಅ. ೫. ಶ್ಲೋ. ೨೦–೨೧–೨೪–೨೫ ಮತ್ತು ಗೀ. ಅ. ೧೩. ಶ್ಲೋಕ ೨೪-೨೫ನ್ನು ಸಾವಧಾನದಿಂದ ವಿಮರ್ಶಿಸಿದರೆ ತಿಳಿಯುವುದು. ಈ ಕಾರಣಗಳಿಂದ ಅದ್ವೈತ ತತ್ವವನ್ನು ಭೌತಿಕ ವಿಜ್ಞಾನ ಶಾಸ್ತ್ರಗಳಿಗಿಂತಲೂ ಹೆಚ್ಚಿನ ಆದರದಿಂದ ಆಧ್ಯಾತ್ಮಿಕ ಪ್ರತ್ಯಕ್ಷ ಶಾಸ್ತ್ರವನ್ನಾಗಿ ತಕ್ಕೊಳ್ಳುವುದು ನ್ಯಾಯವೆಂದು ನನ್ನ ಅಭಿಪ್ರಾಯ. ಗೀತೆಯನ್ನು ಪ್ರಮಾಣವಾಗಿಟ್ಟುಕೊಂಡು, ಶ್ರೀಯುತ ಬಾಲಗಂಗಾಧರ ತಿಲಕರು ಮತ್ತು ಶ್ರೀಯುತ ಮೋಹನದಾಸ ಕರಮಚಂದ ಗಾಂಧಿಯವರು ತಮ್ಮ ತಮ್ಮ ಅಭಿಪ್ರಾಯಕ್ಕೆ ಅನುಗುಣ್ಯವಾಗಿ ನೈಷ್ಕಾಮ್ಯ ಮತ್ತು ನೈಷ್ಕರ್ಮ್ಯಪೂರ್ವಕ ಸಮತ್ವದಿಂದ ಮಾಡುವ ಸಮಾಜಸೇವೆಯೇ ಮುಖ್ಯವೆಂಬ ತತ್ವವನ್ನು ಪ್ರಕಾಶಿಸಿರುವರು. ಪರಂತು ಬ್ರಹ್ಮಸಾಕ್ಷಾತ್ಕಾರ ವಿಷಯವನ್ನು ಉಪೇಕ್ಷಿಸಿರುವರು. ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಶ್ರೀ ಅರವಿಂದ ಘೋಷರು ಬ್ರಹ್ಮ ಸಾಕ್ಷಾತ್ಕಾರದಿಂದ ಅದ್ವೈತ ದರ್ಶನವು ಪ್ರತ್ಯಕ್ಷ ಶಾಸ್ತ್ರವೆಂಬದಾಗಿ ಪ್ರಮಾಣೀಕರಿಸಿದರು. ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಶ್ರೀ ವಿವೇಕಾನಂದ ಸ್ವಾಮಿಗಳು ಒಂದು ಕಡೆಯಿಂದ ಅದ್ವೈತ ದರ್ಶನವು ಪ್ರತ್ಯಕ್ಷ ಶಾಸ್ತ್ರವೆಂಬದಾಗಿಯೂ, ಇನ್ನೊಂದುಕಡೆ ಸಾಮಾಜಿಕಾದಿ ವಿಷಯಗಳು ವ್ಯಾವಹಾರಿಕ ಸತ್ಯಗಳೆಂದೂ ರುಜು ಪಡಿಸಿದರು.

ಅದ್ವೈತ ಮತದಿಂದ ಹಿಂದೂಧರ್ಮಕ್ಕೆ ಲೇಶ ಮಾತ್ರ ಹಾನಿಯೂ ಉಂಟಾಗಲಿಲ್ಲ. ಮಾತ್ರವಲ್ಲ; ಹಿಂದೂ ಧರ್ಮದ ಪುನರುಜ್ಜೀವನ-ವ-ಉದ್ಧಾರವು ಅದ್ವೈತ ಮತದಿಂದಲೇ ಲಬ್ಧವಾಗಿ ಈ ವರೆಗೂ ಹಿಂದೂಮತವು ಜೀವಿಸಿಕೊಂಡಿದೆ. ಆದರೆ ಭರತಖಂಡದಲ್ಲಿ ಆ ಕಾಲದಲ್ಲಿದ್ದ ಅನೇಕ ಅವೈದಿಕ ಪ್ರಬಲ ಮತಗಳಿಗೆ ಅಪರಿಹಾರ್ಯವಾದ ಹಾನಿಯು ಉಂಟಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಅದ್ವೈತ ತತ್ವದ ಸಂಸ್ಕೃತಿಯು ಈಗಿನ ಅಭಿನವ ಸಂಸ್ಕೃತಿಗೆ ಅನುಕೂಲವಿಲ್ಲವೆಂದು ಕೆಲವರು ಹೇಳಬಹುದು. ಆದರೆ ನಮ್ಮ ಭರತಖಂಡಲ್ಲಿ ಅತ್ಯಂತ

+ಬೃ. ಆ. ಅ. ೪. ಬ್ರಾ ೫.

ಪೂರ್ವಕಾಲದಿಂದಲೂ ಉಭಯ ಸಂಸ್ಕೃತಿಗಳು ಒಂದರೊಂದಿಗೆ ಇನ್ನೊಂದು ನಡಕೊಂಡು ಬರುತ್ತವೆ. ಇವುಗಳಲ್ಲಿ ಮೊದಲನೆಯದು ಆಧಿಭೌತಿಕ ಸಂಸ್ಕೃತಿ, ಎರಡನೇದು ಆಧ್ಯಾತ್ಮಿಕ ಸಂಸ್ಕೃತಿ. ಆಧಿಭೌತಿಕ ಸಂಸ್ಕೃತಿ ಎಂದರೆ, ಇಂದ್ರಿಯಗಳ ತೃಷ್ಣತೆಯಿಂದ ಆಧಿಭೌತಿಕಗಳಾದ ವಿಷಯಭೋಗಗಳನ್ನು ನ್ಯಾಯವಾದ ದಾರಿಯಿಂದಲೋ ಅನ್ಯಾಯವಾದ ದಾರಿಯಿಂದಲೋ ಭೋಗಿಸುವುದು. ಆಧ್ಯಾತ್ಮಿಕ ಸಂಸ್ಕೃತಿ ಎಂದರೆ ಲಘು ಸಂತೋಷ ಅಥವಾ ಆನಂದಕ್ಕೆ ದಾಸರಾಗದೆ (ಇಲ್ಲಿ ಗೀತೆ)* ನಿತ್ಯನಿರತಿಶಯವಾದ ಆತ್ಮಸಾಕ್ಷ್ಯಾತ್ಕಾರದ ಅಖಂಡಾನಂದವನ್ನು ಅನುಭವಿಸುವ ದೃಷ್ಟಿಯಿಂದ ಐಹಿಕ, ಆಮುಷ್ಮಿಕ ಸುಖಗಳನ್ನು ತೃಣೀಕರಿಸಿ, ಅತ್ಯಂತ ವಿರಕ್ತನಾಗಿ ಆತ್ಮಾನಂದ ರೂಪಿಯಾಗಲಿಕ್ಕೆ ಪರಮ ಪುರುಷಾರ್ಥವನ್ನು ಉಪಯೋಗಿಸುವುದು. ಇಲ್ಲಿ ಅನ್ಯೋನ್ಯ ಸಂಸ್ಕೃತಿಯು ಅನ್ಯೋನ್ಯರಿಗೆ ರುಚಿಸದೆ ಇರಬಹುದು. ಅಷ್ಟು ಮಾತ್ರದಿಂದಲೇ ಆಧ್ಯಾತ್ಮಿಕ ಸಂಸ್ಕೃತಿಯು ಸಂಸ್ಕೃತಿಯಲ್ಲವೆಂದು ಹೇಳುವುದು ಅಜ್ಞಾನದಿಂದ ಉತ್ಪನ್ನವಾದ ಪಕ್ಷಪಾತದ ಮಹಿಮೆಯಲ್ಲದೆ ಬೇರೊಂದಲ್ಲ. ವಿಮರ್ಶಾಪೂರ್ವಕವಾಗಿ ನೋಡಿದರೆ, ಆಧ್ಯಾತ್ಮಿಕ ಸಂಸ್ಕೃತಿಯನ್ನೇ ಅತ್ಯುಚ್ಚವಾದ ಶಾಸ್ತ್ರೀಯ ಸಂಸ್ಕೃತಿಯೆಂದು ಹೇಳಬಹುದು.

*ಗೀತಾ. ಅ. ೫. ಶ್ಲೋಕ. ೨೧—೨೨.

ಸಮಾಜೋದ್ಧಾರದ ದೃಷ್ಟಿಯಿಂದ ನೋಡಿದರೂ, ವ್ಯವಹಾರಲ್ಲಿ ಭೌತಿಕರೂಪದಿಂದ ಬೇರೆ ಬೇರೆ ದೇಶ, ಭಾಷೆ, ವೇಷ, ಆಹಾರ ಮತ್ತು ಸಂಪ್ರದಾಯವೇ ಮೊದಲಾದವುಗಳಿಂದ ಭಿನ್ನಭಿನ್ನವಾದ ಜನಾಂಗಗಳಲ್ಲಿ ಸಾಂಘಿಕ ಯುಕ್ತಿಯಿಂದ ಐಕ್ಯವನ್ನು ಸ್ಥಾಪಿಸುವುದಕ್ಕಿಂತಲೂ, ಮನುಷ್ಯರಲ್ಲಿ ಮಾತ್ರವಲ್ಲ, ಸಮಸ್ತ ಜಡ ಮತ್ತು ಚೇತನಗಳಲ್ಲಿ ಒಳಗಡೆ ಅಂತರ್ಯಾಮಿಯಾದ ಮತ್ತು ಸಕಲ ಭೌತಿಕಗಳಿಗೆ ಕಾರಣನಾದ ಆತ್ಮನೂ ಒಂದೇ. ಅವನೇ ನೀನು. ಅವನೇ ನಾನು.—ಎಂಬ ಅಭೇದ ತತ್ವ ಮೂಲಕ ಜನಾಂಗಗಳಲ್ಲಿ ಏಕತ್ವವನ್ನು ಉದ್ಭಾವಿಸುವುದು ಪರಮ ಉತ್ಕೃಷ್ಟ ಉಪಾಯವಲ್ಲವೇ? ಈ ಮರ್ಮವನ್ನು ಅರಿತ ಶ್ರೀ ಶಂಕರಾಚಾರ್ಯರು ಹಿಂದೂ ಜನಾಂಗಗಳಲ್ಲಿ ಶಾಶ್ವತವಾದ ಏಕತ್ವವನ್ನು ಸ್ಥಾಪಿಸಲಿಕ್ಕೆ ಅದ್ವೈತ ಮತವನ್ನು ಪ್ರಚಾರಕ್ಕೆ ತಂದರು. ಮಾಡುವುದೇನು? ಕೆಲವು ಅಂತರ್ಮತಗಳ ಭಿನ್ನಾಭಿಪ್ರಾಯ ಮತ್ತು ವಿರುದ್ಧ ವ್ಯವಸಾಯದಿಂದ ಅದ್ವೈತ ಮತದ ಪ್ರಯೋಜನವು ನಮಗೆ ದೊರಕದೆ ಹೋದದ್ದು ನಮ್ಮ ದೌರ್ಭಾಗ್ಯವೆಂದು ನನ್ನ ಅಭಿಪ್ರಾಯ. ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆಯಿಂದ ಅವರು ಆಧ್ಯಾತ್ಮಿಕ ಮತ್ತು ಆಧಿಭೌತಿಕಗಳಲ್ಲಿ ಅದ್ಭುತ ಶೋಧಕರು (Inventor) ಮತ್ತು ಅಸದೃಶ ಪರ್ಯಾವರ್ತಕರೆಂದು (Revolutionist) ತಿಳಿದು ಬರುತ್ತದೆ.

ಅದ್ವೈತ ಮತ್ತು ಬೌದ್ಧಮತಗಳ ಸಾಮರಸ್ಯ

ಶ್ರೀ ವಿದ್ಯಾಮಾನ್ಯತೀರ್ಥ ಶ್ರೀ ಭಂಡಾರಕೇರಿ ಮಠ, ಬಾರಕೂರು.

ಪ್ರಪಂಚದಲ್ಲಿ ಹಲವಾರು ಮತಗಳು ಜಾತಿಗಳು ತುಂಬಿವೆ. ಇವುಗಳಲ್ಲಿ ಪರಸ್ಪರ ಮಾತ್ಸರ್ಯಗಳು ಬೆಳೆಯುತ್ತಾ ಬಂದು ವಿಶ್ವದಲ್ಲಿ ಅಶಾಂತಿಯು ಹಬ್ಬಿರುವುದು. ಇವುಗಳ ಐಕಮತ್ಯವು ಉಂಟಾಗದೆ ಶಾಂತಿಯ ಆಶೆಯೂ ಪೂರ್ಣವಾಗದು. ಐಕಮತ್ಯಕ್ಕೆ ಜಾತೀಯತೆಯು ವಿರೋಧಿ ಎಂದು ನಿರ್ಣಯಿಸಿದ ಆಧುನಿಕ ಸುಧಾರಕರು ಹಿಂದುಸ್ಥಾನದ ಅನೇಕ ಮತ ಪಂಥಗಳ ನಿರ್ಮೂಲತೆಯ ಆವಶ್ಯಕತೆಯನ್ನು ಒಪ್ಪದಿರಲಾರರು. ಆದುದರಿಂದಲೇ ಮಹಾತ್ಮರೂ ತಮ್ಮ ನಿತ್ಯ ಪ್ರಾರ್ಥನೆಯಲ್ಲಿ ಖುರಾನ್, ಗೀತೆ ಮೊದಲಾದ ಎಲ್ಲಾ ಮತಗ್ರಂಥಗಳ ಪ್ರಾರ್ಥನೆಯ ಪದ್ಯಗಳನ್ನುಪಯೋಗಿಸುತ್ತಾ ಎಲ್ಲಾ ಮತಗಳ ಐಕ್ಯವನ್ನು ಜನತೆಗೆ ಬೋಧಿಸುತ್ತಾ ಜಗತ್ತಿನ ಶಾಂತಿಗಾಗಿ ದುಡಿದರು. ಪ್ರಕೃತ ಹಿಂದುಸ್ಥಾನದಲ್ಲಿ ಅಧಿಕ ಪ್ರಚಾರದಲ್ಲಿರುವ ಅದ್ವೈತ ಮತಕ್ಕೂ ಬೌದ್ಧ ಮತಕ್ಕೂ ಅತ್ಯಂತ ಸಾಮರಸ್ಯವಿದೆ. ಜನರು ಮಾತ್ರ ಅದನ್ನು ತಿಳಿದಿಲ್ಲ. ಪರಸ್ಪರ ದ್ವೇಷಾಸೂಯೆಗಳನ್ನು ಬೆಳೆಯಗೊಡುತ್ತಾ ಜಗತ್ತಿನ ಶಾಂತಿ ಭಂಗಕ್ಕೆ ಕಾರಣರಾಗಿರುವರು. ಈ ಸಂದರ್ಭದಲ್ಲಿ ಈ ಎರಡು ಮತಗಳ ವಾಸ್ತವಿಕ ಸಾಮರಸ್ಯವನ್ನು ತಿಳಿಯಗೊಡಿಸಿದಲ್ಲಿ ಈ ಎರಡು ಪಂಗಡದ ಜನರಲ್ಲೂ ಐಕ್ಯಮತ್ಯವು ಬೆಳೆದು ಬಂದು ಜಗತ್ತಿನಲ್ಲಿ ಶಾಂತಿಯುಂಟಾದೀತೆಂದು ಭಾವಿಸಿ ಈ ಲೇಖನ ಕಾರ್ಯದಲ್ಲಿ ಉದ್ಯುಕ್ತರಾಗಿದ್ದೇವೆ.

ಪ್ರಥಮತಃ ಈ ಎರಡು ಮತಗಳ ಮೂಲ ತತ್ವಗಳೆಡೆಗೆ ದೃಷ್ಟಿ ಹರಿಯಿಸೋಣ.

ಅದ್ವೈತಮತದ ತತ್ವಗಳು

ಬ್ರಹ್ಮನು ಸತ್ಯ, ಜ್ಞಾನ, ಆನಂದರೂಪನು, ನಿರ್ವಿಶೇಷನು, ಅಜ್ಞೇಯನು ಮತ್ತು ಅವಾಚ್ಯನು. ವೇದ ದೇವತೆಗಳು, ಯಜ್ಞ, ಗಂಗಾದಿ ತೀರ್ಥಗಳು, ಬ್ರಾಹ್ಮಣಾದಿ ವರ್ಣಗಳು, ಬ್ರಹ್ಮಚರ್ಯಾದ್ಯಾಶ್ರಮಗಳು ಮತ್ತು ಪರಲೋಕ ಮುಂತಾದ ಜಗತ್ತು ಅಸತ್ಯವಾದದ್ದು. ಬ್ರಹ್ಮನೊಬ್ಬನೆ ಪಾರಮಾರ್ಥಿಕನು.

ಜೀವನು ಅಹಂಬ್ರಹ್ಮ ಎಂದು ಉಪಾಸನೆ ಮಾಡಿ ಬ್ರಹ್ಮಾತ್ಮೈಕ್ಯ ಸಾಕ್ಷಾತ್ಕಾರವನ್ನು ಹೊಂದಿ ಬ್ರಹ್ಮಭೂತನಾಗುವನು.

ಶೂನ್ಯವಾದಿ ಬೌದ್ಧರ ತತ್ವಗಳು

ಶೂನ್ಯವು ಸತ್ಯಜ್ಞಾನಾನಂದ ರೂಪವು, ಅಜ್ಞೇಯವು ಅವಾಚ್ಯವು ಮತ್ತು ನಿರ್ವಿಶೇಷವು.

ವೇದ, ದೇವತೆಗಳು, ಯಜ್ಞ, ಗಂಗಾದಿತೀರ್ಥ, ಬ್ರಾಹ್ಮಣಾದಿ ವರ್ಣ, ಬ್ರಹ್ಮಚರ್ಯಾದ್ಯಾಶ್ರಮ, ಪರಲೋಕ ಮುಂತಾದ ಜಗತ್ತು ಅಸತ್ಯವಾದದ್ದು ಶೂನ್ಯವೊಂದೇ ಸತ್ಯವಾದದ್ದು.

ಜೀವನು ಅಹಂ ಶೂನ್ಯಂ ಎಂದು ಉಪಾಸನೆ ಮಾಡಿ ಶೂನ್ಯೈಕ್ಯಸಾಕ್ಷಾತ್ಕಾರವನ್ನು ಹೊಂದಿ ಶೂನ್ಯಭಾವವನ್ನು ಹೊಂದುವನು.

ಈ ರೀತಿ ಎರಡು ಮತತತ್ವಗಳು ಒಂದೇ ತೆರನಾಗಿವೆ. ಶಂಕರಾಚಾರ್ಯರ ಸಮಕಾಲೀನರಾದ ಭಾಸ್ಕರಾಚಾರ್ಯರು ಮತ್ತು ವಿಜ್ಞಾನ ಭಿಕ್ಷುಗಳು ಪಾರ್ಥಸಾರಥಿಮಿಶ್ರರು ಮುಂತಾದ ಅನೇಕ ಮಹಾಪಂಡಿತರೂ ತಮ್ಮ ಗ್ರಂಥಗಳಲ್ಲಿ ಅದ್ವೈತಮತವೂ ಬೌದ್ಧಮತವೂ ಒಂದೇ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಪಾದ್ಮ ಪುರಾಣದಲ್ಲಿ ಶ್ರೀ ವೇದವ್ಯಾಸರು ಈ ಎರಡು ಮತಗಳೂ ಒಂದೇ ಎಂದು ಉಲ್ಲೇಖಿಸಿದ್ದಾರೆ. ಶ್ರೀ ಮಧ್ವಾಚಾರ್ಯರೂ ಈ ವಿಷಯವನ್ನು ತಮ್ಮ ಗ್ರಂಥಗಳಲ್ಲಿ ಉಪಪಾದನೆ ಮಾಡಿ ತೋರಿಸಿದ್ದಾರೆ. ಸ್ವಾಮಿ ವಿವೇಕಾನಂದರೂ ಈ ವಿಷಯಕ್ಕೆ ಸಮ್ಮತಿಪಟ್ಟಿದ್ದಾರೆ. ಆದರೂ ಆಧುನಿಕರಾದ ಕೆಲ ಜನರು ಶಂಕರಾಚಾರ್ಯರು ಬೌದ್ಧ ಮತವನ್ನು ಖಂಡಿಸಿದ್ದಾರೆಂದು ತಿಳಿದುಕೊಂಡು ಆ ಎರಡು ಮತಗಳಿಗೂ ಭೇದವನ್ನು ಕಲ್ಪಿಸಿ ವೃಥಾ ದ್ವೇಷಾಸೂಯೆಗಳನ್ನು ಬೆಳೆಯಗೊಡುತ್ತಿದ್ದಾರೆ. ಇವರು ಆನಂದಗಿರಿ ಶಂಕರವಿಜಯದಲ್ಲಿ ಬರೆದ ಇತಿಹಾಸವನ್ನು ಪರಾಮರ್ಶಿಸಲಿ. ಶಂಕರವಿಜಯದಲ್ಲಿನ

ಇತಿಹಾಸವಿಂತಿದೆ. "ಕುಮಾರಿಲ ಭಟ್ಟರು ಉತ್ತರ ದೇಶದಿಂದ ಬಂದು ಬೌದ್ಧರೊಡನೆ ವಾದ ಹೂಡಿದರು. ಶಾಸ್ತ್ರೀಯ ವಿಚಾರಗಳು ನಡೆದು ಕುಮಾರಿಲ ಭಟ್ಟರು ಬೌದ್ಧರನ್ನೆಲ್ಲಾ ಸೋಲಿಸಿದರು. ಅಲ್ಲದೆ ಆಗಿನ ರಾಜರ ಸಹಾಯದಿಂದ ಬೌದ್ಧರ ತಲೆಗಳನ್ನು ಕೊಡಲಿಯಿಂದ ಕಡಿಸಿದರು. ಒರಲುಗಳಲ್ಲಿ ಅವರ ಶಿರಸ್ಸನ್ನು ಚೂರ್ಣ ಮಾಡಿಸಿ, ನಿರ್ಭಯರಾಗಿ ಮೆರೆದರು. ಇವರ ಈ ಅದ್ಭುತ ಕೃತ್ಯವನ್ನು ಕೇಳಿದ ಶಂಕರಾಚಾರ್ಯರು ಶಿಷ್ಯ ವೃಂದದೊಂದಿಗೆ ಕುಮಾರಿಲ ಭಟ್ಟರು ವಾಸಮಾಡುತ್ತಿದ್ದ ರುದ್ಧವೆಂಬ ನಗರಕ್ಕೆ ಬಂದರು. ಅಲ್ಲಿ ಕುಮಾರಿಲ ಭಟ್ಟರ ವಿಜಯಘೋಷವು ದಶದಿಗಂತಗಳಲ್ಲೂ ಪ್ರತಿಧ್ವನಿತವಾಗುತ್ತಿತ್ತು. ಶಂಕರಾಚಾರ್ಯರು ಬಂದವರೇ ಭಟ್ಟರನ್ನು ವಾದಕ್ಕಾಗಿ ಕರೆದರು. ಆ ಸಮಯ ಕುಮಾರಿಲ ಭಟ್ಟ ತನ್ನಿಂದ ಜರಗಿದ ಯಾವುದೋ ಒಂದು ಕೃತ್ಯದ ಸಲುವಾಗಿ ತನ್ನ ಶರೀರವನ್ನು ತಾವೇ ಸುಟ್ಟು ಕೊಳ್ಳುತ್ತಿದ್ದರು. ಶಂಕರಾಚಾರ್ಯರ ಕರೆಗೆ ಅವರು ಕೊಟ್ಟ ಉತ್ತರವಿದು:—"ಎಲೈ ನೂತನನಾದ ಬೌದ್ಧ ಶ್ರೇಷ್ಠನೇ! ನೀನು ಕರೆಯ ಬಂದ ಕಾಲವು ಅನುಕೂಲ ವಾಗಿಲ್ಲ. ನಾನು ಜಾಗೃತನಾಗಿರುವಾಗ ಬಂದಿದ್ದರೆ ನೋಡುತ್ತಿದ್ದೆ. ಈಗ ಮೊಣಕಾಲ ಪರ್ಯಂತವಾಗಿ ದೇಹವು ಸುಟ್ಟು ಹೋಗಿರುವುದು" ಎಂದು.

ಈ ಇತಿಹಾಸದಿಂದ ಕುಮಾರಿಲ ಭಟ್ಟರು ಬೌದ್ಧರಿಗೆ ವಿರೋಧಿಗಳಾಗಿದ್ದರೆಂದು ಅರಿವಾಗುವುದು. ಇವರೊಡನೆ ಶಂಕರಾಚಾರ್ಯರು ಪ್ರತಿವಾದಕ್ಕಾಗಿ ಬಂದಿರುವುದಲ್ಲದೆ ಶಂಕರಾಚಾರ್ಯರಿಗೆ ನೂತನ ಬೌದ್ಧ ಶ್ರೇಷ್ಠನೆಂದು ಕುಮಾರಿಲ ಭಟ್ಟರ ಸಂಬೋಧನೆಯಿದೆ. ಆದ್ದರಿಂದ ಶಂಕರಾಚಾರ್ಯರ ಅದ್ವೈತ ಮತವೂ ಬೌದ್ಧ ಮತವೂ ಒಂದೇ ಎಂದು ಸ್ಪಷ್ಟವಾಗುವುದು.

ಇನ್ನು ವಿದ್ಯಾರಣ್ಯರ ಶಂಕರವಿಜಯವನ್ನು ಪರಾಮರ್ಶಿಸೋಣ. ಅದರಲ್ಲಿ ಕುಮಾರಿಲ ಭಟ್ಟರು ಸುಧನ್ವನೆಂಬ ರಾಜನ ಆಶ್ರಯದಿಂದ ಆಸೇತುಹಿಮಾಚಲ ಪರ್ಯಂತ ಹಬ್ಬಿದ್ದ ಬೌದ್ಧರನ್ನು ಮಕ್ಕಳು ಮುದುಕರು, ಹೆಂಗಸರೆಂಬೀ ಭೇದವನ್ನು ಪರಿಗಣಿಸದೆ ನಾಶ ಮಾಡಿಸಿರುವುದಲ್ಲದೆ ಅವರನ್ನು ಕೊಲ್ಲಲೊಪ್ಪದ ಇತರರನ್ನೂ ಕೊಲೆ ಮಾಡಿಸಿರುವನೆಂದಿದೆ. ಈ ರೀತಿ ಮಿಲಿಟರಿ ಕಾಯಿದೆಯಿಂದ ಭಾರತದಿಂದ ನಿಶ್ಶೇಷವಾಗಿ ಬೌದ್ಧರನ್ನು ಓಡಿಸಿ, ವೇದಯಜ್ಞ ಮಾರ್ಗವನ್ನು ಸರ್ವತ್ರ ಪ್ರಚಾರಮಾಡಿಸಿರುವನೆಂದೂ ಇತಿಹಾಸವಿದೆ. ಈ ಸಂದರ್ಭದಲ್ಲಿ ಶಂಕರಾಚಾರ್ಯರು ಕುಮಾರಿಲ ಭಟ್ಟರಲ್ಲಿ ವಾದಕ್ಕೆ ತೆರಳಿದರು. ಶಂಕರಾಚಾರ್ಯರು ಆಗ ವಾದಕ್ಕೆ ಹೋಗಬೇಕಾದರೆ ಅವರ ಪ್ರಾಯ ಕನಿಷ್ಠ ಪಕ್ಷ 20 ವರುಷವಾದರೂ ಆಗಿರಬೇಕು. ಅವರ ಆಯುರ್ಮಾನವೇ ಮೂವತ್ತೆರಡು ವರುಷವೆಂದು ಸರ್ವ ವಿದಿತವಿದೆ. ಆದ್ದರಿಂದ ಶಂಕರಾಚಾರ್ಯರ ಕಾಲದಲ್ಲಿ ಬೌದ್ಧ ಮತವು ನಿಶ್ಶೇಷವಾಗಿ ನಾಶ ಹೊಂದಿದ್ದು ಪುನರುಜ್ಜೀವನ ತಾಳಿತ್ತೆಂದರೆ ಯಾರೂ ಒಪ್ಪಲಾರರು ಹೀಗಿರುವಾಗ ಶಂಕರಾಚಾರ್ಯರಿಗೆ ಅದನ್ನು ಖಂಡಿಸುವ ಪ್ರಸಕ್ತಿಯೇ ಬರಲಿಲ್ಲವೆಂದೂ, ಶಂಕರಾಚಾರ್ಯರು ಆ ಬೌದ್ಧ ಮತಕ್ಕೇನೆ ರೂಪಾಂತರ ನಾಮಾಂತರವನ್ನು ಕೊಟ್ಟು ಪ್ರಚಾರಕ್ಕೆ ತಂದರೆನ್ನಲು ತುಂಬಾ ಅವಕಾಶವಿದೆ. ಆದುದರಿಂದ ಆಗಿನ ಪಂಡಿತರು ಶಂಕರಾಚಾರ್ಯರನ್ನು ಪ್ರಚ್ಛನ್ನ ಬೌದ್ಧನೆಂದೆಂದುದೂ ಇದೆ.

ಅದ್ವೈತಮತದಲ್ಲಿ ವೇದಪ್ರಾಮಾಣ್ಯವನ್ನೊಪ್ಪಿದೆ. ವೇದೋಕ್ತ ಬ್ರಾಹ್ಮಣಾದಿವರ್ಣ, ಬ್ರಹ್ಮಚರ್ಯಾದ್ಯಾಶ್ರಮ, ಸ್ನಾನ, ಸಂಧ್ಯಾ, ಭಗವತ್ಪೂಜ, ಯಜ್ಞ, ದಾನ, ವೇದಾಧ್ಯಯನ, ಶ್ರವಣ, ಮನನ, ಧ್ಯಾನ, ವೇದಾಂತ ಜನ್ಯ ಬ್ರಹ್ಮಸಾಕ್ಷಾತ್ಕಾರ, ಬ್ರಹ್ಮ ಭಾವರೂಪ ಮೋಕ್ಷ ಮುಂತಾದ್ದನ್ನು ಅಂಗೀಕರಿಸಿದೆ. ಆದುದರಿಂದ ಆಸ್ತಿಕವಾದ ಅದ್ವೈತ ಮತಕ್ಕೂ, ಇವಾವವನ್ನೂ ಅಂಗೀಕರಿಸದ ನಾಸ್ತಿಕ ಬೌದ್ಧ ಮತಕ್ಕೂ ಸರ್ವಥಾ ಸಾಮರಸ್ಯವು ಕೂಡುವುದಿಲ್ಲವೆಂದು ಕೆಲವರ ಅಭಿಪ್ರಾಯವಿದೆ. ಆದರೆ ಈ ಅಭಿಪ್ರಾಯವು ಸರಿಯಾದುದಲ್ಲವೆಂದು ಅದ್ವೈತ ಮತದ ಪ್ರಮೇಯಗಳನ್ನು ಚೆನ್ನಾಗಿ ಅರಿತುಕೊಂಡವರಿಗೆ ತಿಳಿಯದಿರದು. ಬ್ರಹ್ಮಸತ್ಯಂ, ಜಗತ್ ಮಿಥ್ಯಾ ಎನ್ನುವ ಅದ್ವೈತಮತದಲ್ಲಿ ಜಗದಂತರ್ಗತ ವೇದ ಇರದು ಎಂದ ಮೇಲೆ ಅದರ ಪ್ರಾಮಾಣ್ಯ, ಅದರಲ್ಲಿ ಪ್ರೋಕ್ತಗಳಾದ ಕರ್ಮಗಳು, ಅವುಗಳ ಯಾಥಾರ್ಥ್ಯ ಇವೆಲ್ಲ ಎಲ್ಲಿಂದ ಬರಬೇಕು? ಕೇವಲ ಸ್ವಪ್ನದಲ್ಲಿ ನೋಡುವ ಪದಾರ್ಥಗಳಂತೆ ಮಿಥ್ಯೆಯೇ ಆಗಬೇಕು. ಇದೇ ಆಶಯದ ವಿವೇಚನೆಯನ್ನು "ಸಿದ್ಧಾಂತಲೇಶಸಂಗ್ರಹ" ಮೊದಲಾದ ಅದ್ವೈತ ಗ್ರಂಥಗಳಲ್ಲೇ ಕಾಣಬಹುದು. ಮತ್ತು ಕಲ್ಕತ್ತಾದಲ್ಲಿ ಅದ್ವೈತಿಗಳಿಂದಲೇ ಮುದ್ರಿತವಾದ "ನ್ಯಾಯಾಮೃತ ಅದ್ವೈತಸಿದ್ಧಿ" ಎಂಬ ಗ್ರಂಥದ 234ನೇ ಪುಟದಲ್ಲಿ

"ಅದ್ವೈತಿ ಸಿದ್ಧಿ" ವ್ಯಾಖ್ಯಾನಕಾರನು, ಶೂನ್ಯವಾದಿ ಬೌದ್ಧ ಮತಕ್ಕೂ ಅದ್ವೈತ ಮತಕ್ಕೂ ಬ್ರಹ್ಮ ಒಂದನ್ನುಳಿದು ಎಲ್ಲಾ ಅಂಶದಲ್ಲೂ ಸಾಮ್ಯವನ್ನು ಅದ್ವೈತಿಗಳೇ ಅಂಗೀಕರಿಸುವರೆಂದು ವಿವರಿಸಿರುವನು.

ಆದುದರಿಂದ "ಮಗನಿದ್ದರೆ ಲಗ್ನ ಮಾಡಬೇಕು." ಮಗನೇ ಇಲ್ಲದೆ ಹೋದರೆ ಮಗನ ಮದುವೆಯ ಚಿಂತೆಯೆಂತು ಕೂಡೀತು? ಅಂತೆಯೇ ಎಲ್ಲಕ್ಕೂ ಮೂಲವಾದ ವೇದವೇ ಬಿಸಿಲ ಕುದುರೆಯಂತೆ ಮಿಥ್ಯ ಎಂದ ಮೇಲೆ ವೇದಪ್ರಾಮಾಣ್ಯ, ವೇದೋಕ್ತ ಕರ್ಮಾನುಷ್ಠಾನ, ಇವೆಲ್ಲಾ ಸುಸಂಗತಗಳಾಗುವ ಬಗೆ ಹೇಗೆ? ಹೀಗಿದ್ದರೂ ಸಂಗತಗಳಾಗುವವೆನ್ನುವ ಸಾಹಸವಾದರೆ, ಬಂಜೆಯ ಮಗನು ಮೃಗಜಲದಲ್ಲಿ ಸ್ನಾನಮಾಡಿ, ಆಕಾಶ ಕುಸುಮದಿಂದ ಅಲಂಕೃತನಾಗಿ, ಮೊಲದ ಕೋಡಿನಿಂದ ಮಾಡಿದ ಧನುಸ್ಸನ್ನು ಧರಿಸಿಕೊಂಡು ಹೋಗುವನೆಂದರೂ ಅಸಂಗತವೇಕಾಗಬೇಕು?

"ಅದ್ವೈತಿಗಳು ಬ್ರಹ್ಮನನ್ನು ಸತ್ಯ ಎನ್ನುವರು. ಬೌದ್ಧರು—ಶೂನ್ಯವನ್ನು ಸತ್ಯವೆನ್ನುವರು. ಶೂನ್ಯಕ್ಕೂ ಬ್ರಹ್ಮಕ್ಕೂ ಅಜಗಜಾಂತರವಿರುವಾಗ ಈ ಎರಡು ಮತೀಯರಲ್ಲಿ ಸಾಮರಸ್ಯವು ಕೂಡುವುದು ಹೇಗೆ?" ಎನ್ನುವರು ಕೆಲವರು. ಆದರೆ ಈ ಆಶಯವು ಅದ್ವೈತ ಮತ ಪ್ರವರ್ತಕರಾದ ಶಂಕರಾಚಾರ್ಯರಿಗೂ ಸಮ್ಮತವಲ್ಲ. ಅಲ್ಲದೆ ವಿರುದ್ಧವೂ ಆಗಿರುವುದು. ಶಂಕರಾಚಾರ್ಯರು ತಾವು ಮಾಡಿದ ಸಹಸ್ರನಾಮಭಾಷ್ಯದಲ್ಲಿ "ಶೂನ್ಯದಿಂದ ಬ್ರಹ್ಮನಿಗೆ ಯಾವ ವಿಶೇಷವೂ ಇಲ್ಲ; ಆದುದರಿಂದ ಬ್ರಹ್ಮನಿಗೆ ಶೂನ್ಯ ಎಂಬ ಹೆಸರು ಬಂದಿರುವುದು." ಎಂದು ಬರೆದಿರುವರು. ಆದುದರಿಂದ ಅದ್ವೈತ ಮತದ ರಹಸ್ಯವನು ತಿಳಿಯದೆ ಇದ್ದವರು ಶೂನ್ಯ ಬ್ರಹ್ಮರಿಗೆ ಭೇದವನ್ನು ಕಲ್ಪಿಸಬಹುದಲ್ಲದೆ ಬಲ್ಲವರು ಸರ್ವಥಾ ಒಡಂಬಡುವಂತಿಲ್ಲ.

"ಬೌದ್ಧ ಮತದಲ್ಲಿ ಶೂನ್ಯ ಒಂದನ್ನುಳಿದು ಉಳಿದುದೆಲ್ಲಾ ಅಸತ್ಯವೆಂದು ವರ್ಣಿತವಾಗಿರುವುದು. ಅದ್ವೈತ ಮತದಲ್ಲಿ ಪರಬ್ರಹ್ಮವ್ಯತಿರಿಕ್ತಪ್ರಪಂಚವನ್ನು ವ್ಯಾವಹಾರಿಕ ಸತ್ಯವೆಂದೇ ಪರಿಗಣಿಸಿರುವುದು. ಆದುದರಿಂದ ಈ ಎರಡು ಮತಗಳ ವೈಷಮ್ಯವು ಅಂಗೀಕಾರಾಹವೇ" ಎಂದೆನ್ನಲು ಬರುವಂತಿಲ್ಲ.

ಕುಮಾರಿಲ ಭಟ್ಟರು ಬೌದ್ಧರನ್ನು ಖಂಡಿಸುವುದಕ್ಕಾಗಿ ಮಾಡಿದ "ತಂತ್ರವಾರ್ತಿಕ"ವೆಂಬ ಗ್ರಂಥದಲ್ಲಿ "ನ ಸತ್ಯದ್ವಯ ಕಲ್ಪನಾ" "ಸತ್ಯತ್ವಂ ನಹಿ ಸಾಮಾನ್ಯಂ ಮೃಷಾರ್ಥಪರಮಾರ್ಥಯೋ" ಎಂದಿದೆ. ಸತ್ಯದಲ್ಲಿ ವ್ಯಾವಹಾರಿಕ, ಪಾರಮಾರ್ಥಿಕವೆಂಬ ಭೇದವಿಲ್ಲವೆಂದು ಹೇಳಿ ಬೌದ್ಧರನ್ನು ಇಲ್ಲಿ ಖಂಡಿಸಿದ್ದಾರೆ. ಈ ರೀತಿ ಖಂಡಿಸಬೇಕಾಗಿದ್ದರೆ ಬೌದ್ಧರು ಕೂಡಾ ಜಗತ್ತು ವ್ಯಾವಹಾರಿಕ ಸತ್ಯ, ಶೂನ್ಯ ಪಾರಮಾರ್ಥಿಕ ಸತ್ಯ ಎಂದೇ ಹೇಳುವರೆಂದು ಸ್ಪಷ್ಟವಾಗಿ ತಿಳಿದು ಬರುವುದು. ಇನ್ನು ಶಂಕರಾಚಾರ್ಯರು ಕೂಡಾ ಬ್ರಹ್ಮಸೂತ್ರ ಭಾಷ್ಯದಲ್ಲಿ ಬೌದ್ಧ ಮತವನ್ನು ಖಂಡಿಸಿರುವರಲ್ಲಾ! ಎಂದರೆ ಅದಕ್ಕುತ್ತರವಿಷ್ಟೆ:—

ಶಂಕರಾಚಾರ್ಯರು ಸೂತ್ರಕಾರರ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರಲ್ಲದೆ ತಮ್ಮ ಆಶಯವನ್ನಲ್ಲ. ಅವರ ಮತಾನುಯಾಯಿಗಳಾದ ಭಾಮತಿಕಾರರೂ ಸಾಂಖ್ಯ, ನ್ಯಾಯ ಮುಂತಾದ ಮತಗಳ ಗ್ರಂಥವ್ಯಾಖ್ಯಾನಾವಸರದಲ್ಲಿ ತಮ್ಮ ನಿಜವಾದ ಅಭಿಪ್ರಾಯವನ್ನು ಬದಿಗಿರಿಸಿ ದ್ವೈತಮತಕ್ಕೆ ಸಂಬಂಧಪಟ್ಟ ಮೂಲಗಾರರ ಅಭಿಪ್ರಾಯವನ್ನೆ ವಿವರಿಸುವರು. ಅದುಕಾರಣ ಶಂಕರಾಚಾರ್ಯರೂ ಇಲ್ಲಿ ತಮ್ಮ ಅಭಿಪ್ರಾಯವೆಂದೂ ಖಂಡಿಸಿದ್ದಲ್ಲವೆಂದೇ ಹೇಳಬಹುದು.

ಕೆಲವು ಗ್ರಂಥಗಳಲ್ಲಿ ಶಂಕರಾಚಾರ್ಯರು ತಮ್ಮ ಮತವು ಬೌದ್ಧಮತವಲ್ಲವೆಂದು ಹೇಳಿದ್ದುಂಟು. ಅದರ ಅಭಿಪ್ರಾಯವನ್ನು ಹೀಗೆ ಊಹಿಸಬಹುದು; ಮಗುವಿಗೆ ಮದ್ದು ಕೊಡುವ ಮುಂಚೆ ತುಸು ಬೆಲ್ಲವನ್ನು ಕೊಟ್ಟು ಮದ್ದು ಸಿಹಿಯಿರಬಹುದೆಂದು ಭ್ರಾಂತಿ ಹುಟ್ಟಿಸುವುದು ತಾಯಂದಿರ ಪದ್ಧತಿಯಾಗಿದೆ. ಅಂತೆಯೇ ಕುಮಾರಿಲ ಭಟ್ಟರಿಂದ ನಿರಾಕೃತವಾದ ಬೌದ್ಧಮತವನ್ನೆ ತಾನು ನಿರೂಪಿಸುವೆನೆಂದರೆ ಜನಾನುರಾಗವು ಲಭಿಸದೆಂದು ಭಾವಿಸಿ ತಮ್ಮ ಮತವು ಬೌದ್ಧಮತವಲ್ಲವೆಂದು ಹೇಳುತ್ತಲೇ ಶೂನ್ಯ ಸ್ಥಾನದಲ್ಲಿ ನಿರ್ಗುಣ, ನಿರಾಕಾರ ಬ್ರಹ್ಮನಿಗೂ, ಸಂವೃತಿಯ ಸ್ಥಾನದಲ್ಲಿ ಅವಿದ್ಯೆಗೂ ಪಟ್ಟಾಭಿಷೇಕ ಮಾಡಿ ಬೌದ್ಧಮತವನ್ನೆ ನಾಮಾಂತರದಿಂದ ಪುನರುಜ್ಜೀವನಗೊಳಿಸಿದ್ದಾರೆ. ಆದುದರಿಂದ ಆ ಎರಡು ಮತದವರೂ ಪರಸ್ಪರ ದ್ವೇಷಾಸೂಯೆಗಳನ್ನು ಬಿಟ್ಟು ಐಕಮತ್ಯದಿಂದ ಜಗತ್ತಿನ ಶಾಂತಿ ಮತ್ತು ಕಲ್ಯಾಣಕ್ಕೆ ಕಾರಣರಾಗಲೆಂದು ಆಶಿಸುತ್ತೇನೆ.

ಆದರ್ಶ ಹಿಂದೂಧರ್ಮವನ್ನು ಸಂಸ್ಕರಿಸಿದ ಮಹಾಶಕ್ತಿ ಮಹರ್ಷಿ ದಯಾನಂದ ಸರಸ್ವತಿಯವರು

ಶ್ರೀ ಕೆ. ರಾಮಸ್ವಾಮೈಯ್ಯ, ಬಿ. ಎ., ಮೈಸೂರು.

ಅತಿ ಆರ್ಷೇಯವಾದ ಸಂಸ್ಕೃತಿಯಿಂದ ಕೂಡಿ, ದರ್ಶನ, ತತ್ವಶಾಸ್ತ್ರ, ಸಾಹಿತ್ಯ, ಸಂಗೀತ, ಕಲೆ, ಕುಶಲ ವಿದ್ಯೆ, ವಾಣಿಜ್ಯವೇ ಮೊದಲಾದ ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳಲ್ಲಿ ತನ್ನ ಮುಂದಾಳುತ್ವದಿಂದ ನಾಗರಿಕತೆಯ ಗಂಧವಿಲ್ಲದೆ, ಕಾರ್ಗತ್ತಲಲ್ಲಿ ಮುಗ್ಗುರಿಸುತ್ತಿದ್ದ ಪ್ರಪಂಚದ ನಾನಾ ದೇಶಗಳಿಗೆ ತನ್ನದೇ ಆದ ಆತ್ಮತೇಜಸ್ಸಿನಿಂದ ದಾರಿ ತೋರಿಸುತ್ತಿದ್ದ ನಮ್ಮ ಈ ಭರತಖಂಡದಲ್ಲಿ, ನಾನಾ ಕಾರಣಗಳಿಂದ ಅಜ್ಞಾನಾಂಧಕಾರವು ಸರ್ವತ್ರ ಹರಡಿ, ಮತ ಮತಾಂತರಗಳ ಗೊಂದಲವೆದ್ದು, ಸತ್ಕರ್ಮಾಚರಣೆಗೆ ಲೋಪ ಬಂದು, ಬ್ರಾಹ್ಮಣ್ಯವು ಕಾಡುಪಾಲಾಗಿ, ಕ್ಷಾತ್ರಧರ್ಮವು ತಿರೋಹಿತವಾಗಿ, ಕ್ಷೋಭೆ, ಸಂಕಟ ಮತ್ತು ಅಶಾಂತಿಗಳು ಹುಟ್ಟಿಕೊಂಡು, ದೇಶವು ಗುರುವಿಲ್ಲದ ಮಠವಾಗಿ, ಯಜಮಾನನಿಲ್ಲದ ಮನೆಯಾಗಿ, ಪರಾಂಕುಶಕ್ಕೊಳಗಾಯಿತು. ರಾಜಕೀಯ ಪರತಂತ್ರದ ಪರಿಣಾಮವಾಗಿ ಹಿಂದೂ ಸಮಾಜವೇ ಅವನತಿ ಹೊಂದಿತು. ವಿಶ್ವಾಮಿತ್ರ, ವಶಿಷ್ಠ, ಪರಶುರಾಮ, ಬಲೀಂದ್ರ ಬಾಹುಬಲಿಗಳ ಸಂತಾನಗಳೆನಿಸಿದ ಭಾರತೀಯ ಪುರುಷರು ನಿರ್ವೀರ್ಯರಾಗುತ್ತಿದ್ದರು. ಸೀತಾ, ದ್ರೌಪದೀ, ಅಹಲ್ಯಾದೇವಿಯರ ಕುವರಿಯರಾದ ಮಹಿಳೆಯರು ಪರಾನುಕರಣಪರಾಯಣೆಯರಾಗಿ ಸತ್ವಹೀನರಾಗುತ್ತಿದ್ದರು. ವರ್ಣಾಶ್ರಮಧರ್ಮಗಳು ನಶಿಸಿ ಕುಲ ಕೋಟಿಗಳು ಬೆಳೆಯುತ್ತಿದ್ದವು. ಹಿಂದೂಧರ್ಮರಹಸ್ಯದ ಕೇಂದ್ರಗಳಾದ ದೇವಸ್ಥಾನಗಳು ಪಾಪಕೂಪಗಳಾದವು. ಪುರುಷಾರ್ಥ ಸಾಧನೆಗೆ ಸೋಪಾನಗಳಂತಿದ್ದ ವಿದ್ಯಾನಿಲಯಗಳು ನಶಿಸಿ ಹೋಗಿ, ಅವುಗಳ ಸ್ಥಾನದಲ್ಲಿ ಮುತ್ಸದ್ದಿಗಳನ್ನು ತಯಾರಿಸುವಂಥ ವಿಶ್ವವಿದ್ಯಾನಿಲಯಗಳು ಹುಟ್ಟಿಕೊಂಡವು. ಕೀಳು ಮೇಲೆಂಬ ಭಾವನೆಗಳು ಹರಡುತ್ತಾ, ಪರಸ್ಪರ ಕಲಹಗಳು ಹೆಚ್ಚಿ, ದೇಶದ ಐಶ್ವರ್ಯವು ಪರದೇಶಕ್ಕೆ ಹರಿಯಲಾರಂಭಿಸಿತು. ಸ್ವಧರ್ಮದಲ್ಲಿ ತಿರಸ್ಕಾರವೂ ಪರಧರ್ಮಾನುಕರಣವೂ ಪ್ರಬಲಿಸಿ, ತಮ್ಮ ಧರ್ಮದ ಅರಿವಿಲ್ಲದೆ, ತಮ್ಮನ್ನು ತಾವೇ ಮರೆತವರಾಗಿ, ಬಳಲಿ, ಬೆಂಡಾಗಿ, ಕಂಗೆಡುತ್ತಿದ್ದ ದೇಶೀಯರನ್ನು, ರಾಜಕಾರಣದ ಮೂಲೋದ್ದೇಶದಿಂದ ಧರ್ಮಚ್ಯುತರನ್ನಾಗಿ ಮಾಡುತ್ತಿದ್ದರು ಪರಕೀಯ ರಾಜರು! ದೇಶೀಯರಲ್ಲೇ ಕೆಲವು ಸ್ವಾರ್ಥಿಗಳು ಪರದೇಶೀ ಪ್ರಭುಗಳನ್ನಾಶ್ರಯಿಸಿ, ಸ್ವದೇಶೀಯರ ಗಂಟಲನ್ನೊತ್ತುತ್ತಿದ್ದರು. ಆರ್ಷೇಯಧರ್ಮವು ಅಧಿಕ ರೀತಿಯಲ್ಲಿ ಅವನತಿ ಹೊಂದುತ್ತಾ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಚಾರಗಳು ಭೀಕರ ಸ್ಥಿತಿಯನ್ನು ಹೊಂದುತ್ತಿದ್ದವು. ಮಾತೃದೇಶಕ್ಕೆ ಪ್ರಾಪ್ತವಾದ ಅನಿಷ್ಟವನ್ನು ತೊಲಗಿಸಿ, ಜನಾಂಗದ ಭವಿಷ್ಯವನ್ನು ಉತ್ತಮಗೊಳಿಸಿ, ವರ್ತಮಾನ ಕಾಲದ ಜನರ ಮನಗಳನ್ನು ತಿದ್ದಿ, ಸಂಕೀರ್ಣವಾದ ಹಿಂದೂ ಧರ್ಮವನ್ನು ಸಂಸ್ಕರಿಸುವಂಥ ಮಹಾವಿಭೂತಿಗಳನ್ನು ಎದುರು ನೋಡುತ್ತಿತ್ತು ಈ ಭರತಖಂಡ.

ಇಂಥ ಸಮಯಕ್ಕೆ ಸರಿಯಾಗಿ ಶ್ರೀಮದ್ದಯಾನಂದರು ಉದ್ಭವಿಸಿ, ಉಚ್ಚವಾದ ಬ್ರಹ್ಮಚರ್ಯೆಯನ್ನು ಕೈಗೊಂಡು, ವೇದ, ವೇದಾಂಗ ಮತ್ತು ಆರ್ಷೇಯಗಳನ್ನು ಸ್ವಾಧ್ಯಾಯ ಮಾಡಿ, ಭೂತಕಾಲದ ಚರಿತ್ರೆಯ ಅನುಭವವನ್ನು ಪಡೆದು, ಆರ್ಯ ಸಂಸ್ಕೃತಿಯ ಅವನತಿಗೆ ಕಾರಣಗಳನ್ನು ಕಂಡು ಹಿಡಿದು ಮಾನವನ ಇತಿಹಾಸದಲ್ಲೇ ಹಿರಿದಾದ ಹಿಂದೂಧರ್ಮವು, ಹಿಂದು ಬೀಳದೆ, ಹಿರಿಯರ ಹಾದಿಯಲ್ಲೇ ಮುಂದುವರಿಯಲು ಅನುವಾಗುವ ಆಧುನಿಕ ಉಪಕರಣಗಳನ್ನು ಜೀವನದಲ್ಲಿ ಅಡಕಗೊಳಿಸಿ, ಏಕೇಶ್ವರ ಸ್ತುತಿ, ಪ್ರಾರ್ಥನೋಪಾಸನಾದಿಗಳ ದ್ವಾರಾ ವಿಶ್ವಭ್ರಾತೃತ್ವವನ್ನು ಸ್ಥಾಪಿಸಲು ಹೊಂದಿಸುವಂಥ ಸಂವಿಧಾನವನ್ನು ಸಿದ್ಧಗೊಳಿಸಿ, ಒಂದು ಹಸ್ತದಲ್ಲಿ "ಓಂ" ಧ್ವಜವನ್ನೂ ಮತ್ತೊಂದರಲ್ಲಿ ಜೀವನ ಭಂಡಾರಗಳಾದ ವೇದಗಳನ್ನೂ ಹಿಡಿದು ದೇಶದ ನಾನಾ ಭಾಗಗಳಲ್ಲಿ ಸಂಚರಿಸುತ್ತಾ "ವೇದ

ಗಳ ಕಡೆಗೆ ತಿರುಗಿರಿ ಎಂದು ಸಿಂಹನಾದ ಮಾಡುತ್ತಾ ಶತಮಾನಗಳ ಅಂಧಕಾರದಲ್ಲಿ ನಿದ್ದೆಗೈಯ್ಯುತ್ತಿದ್ದ ಅಕರ್ಮಣ್ಯರಾದ ಭಾರತೀಯರನ್ನು ಎಚ್ಚರಗೊಳಿಸಿದರು.

ಪರಮಪಿತನಾದ ಪರಮಾತ್ಮನ ಪ್ರಜೆಗಳಾದ ಮನುಷ್ಯ ಜಾತಿಯನ್ನು, ಆತನ ಸಹಜವಾದ ಸುತರಾಗಲು ಪ್ರೇರಿಸುವಂಥ ಸಲಕರಣೆಗಳಿಂದ ಕೂಡಿದ "ಆರ್ಯಸಮಾಜ"ವೆಂಬ ಸಂಸ್ಥೆಯನ್ನು ಸ್ಥಾಪಿಸಿ, ಅದನ್ನು ದಶನಿಯಮಗಳಿಂದ ಬಂಧಿಸಿ, ಸಮಾಜದಲ್ಲಿ ತಲೆದೋರಿದ್ದ ಅಸ್ಪೃಶ್ಯತೆ, ಗೋಹತ್ಯೆ, ಬಾಲ್ಯವಿವಾಹ, ವಿಧವಾವಿವಾಹನಿರೋಧ, ಸಮುದ್ರಯಾನ ನಿಷೇಧ, ಇತ್ಯಾದಿ ರೋಗಗಳಿಗೆ ಮದ್ದನ್ನು ತಯಾರಿಸಿ ಪ್ರಚಾರ ಮಾಡಲು ಸಹಾಯಕವಾಗುವಂಥ, "ಸತ್ಯಾರ್ಥ ಪ್ರಕಾಶ"ವೆಂಬ ಕೈಪಿಡಿಯನ್ನು ಒದಗಿಸಿಕೊಟ್ಟು, ತನ್ಮೂಲಕ ನಶಿಸುತ್ತಿದ್ದ ಆರ್ಯಸಂಸ್ಕೃತಿಯನ್ನು ರಕ್ಷಿಸಿದರು. ವೇದಗಳಿಲ್ಲದೆ ಆರ್ಯಸಂಸ್ಕೃತಿಯಿಲ್ಲವೆಂದು ಬೋಧಿಸುತ್ತಾ ಗೂಡುಗಳಲ್ಲಿ ಪೂಜಿಸಲ್ಪಡುತ್ತಿದ್ದ ವೈದಿಕ ಸಾಹಿತ್ಯದ ಸ್ವಾಧ್ಯಾಯವನ್ನು ಪುನರುಜ್ಜೀವನಗೊಳಿಸಿದರು. ಸ್ವಧರ್ಮವನ್ನು ಬದಿಗೊತ್ತಿ, ಪರಧರ್ಮವನ್ನು ರೂಢಿಗೆ ತರಲು ವ್ಯವಸ್ಥೆಗೊಳಿಸಿದ್ದಂಥ ವಿದ್ಯಾಭ್ಯಾಸ ಕ್ರಮಗಳನ್ನು ಕಟು ಟೀಕೆಗೊಳಪಡಿಸಿ, ಸ್ವಾಭಾವಿಕವಾದ ತೇಜಸ್ಸನ್ನು ವೃದ್ಧಿಗೊಳಿಸಲು ಅನುವಾಗುವ "ಗುರುಕುಲ" ವಿದ್ಯಾಭ್ಯಾಸ ಕ್ರಮಗಳನ್ನು ರೂಢಿಗೆ ತಂದರು. ವಿದೇಶೀ ಭಾಷಾಪ್ರಚಾರವನ್ನು ತಡೆಗಟ್ಟಿ, ದೇಶಭಾಷೆಗೆ ಉತ್ತೇಜನ ಕೊಟ್ಟು, ಹಿಂದೀ ಭಾಷೆಯನ್ನೇ ರಾಜಭಾಷೆಯನ್ನಾಗಿ ಮಾಡಬೇಕೆಂದು ಮೊದಲು ಚಳವಳಿ ಹೂಡಿದರು. ಹದ್ದು, ಅಂಕೆಯಿಲ್ಲದೆ ಬೆಳೆಯುತ್ತಿದ್ದ ಜಾತಿಭೇದಗಳ ರಹಸ್ಯವನ್ನು ಪರಿಶೋಧಿಸಿ ವರ್ಣವ್ಯವಸ್ಥೆಯನ್ನು ನವಯುಗಕ್ಕೆ ಹೊಂದಿಸಿದರು. ಮಹಮ್ಮದೀಯ ಮತ್ತೂ ಕ್ರೈಸ್ತಪಾದ್ರಿಗಳ ಬಗೆಬಗೆಯ ಸಂಧಾನಸನ್ನಾಹಗಳಲ್ಲಿ ಸಿಕ್ಕಿಕೊಂಡಿದ್ದ ಹಿಂದೀಯರನ್ನು ಮತ್ತೆ ಚೈತನ್ಯ ಹೊಂದಿದ ಆರ್ಯರನ್ನಾಗಿ ಮಾಡಿದರು.

ಜಗತ್ಪ್ರಸಿದ್ಧವಾದ ಆರ್ಯಸಂಸ್ಕೃತಿಯ ರಹಸ್ಯವನ್ನು ಜನಸಾಮಾನ್ಯಕ್ಕೆಲ್ಲಾ ತಿಳಿಯುವಂತೆ ಆದಿ ವೃಷ್ಟಿಯ ಆರ್ಯಸಮಾಜದ ಆದರ್ಶಗಳನ್ನು ಮುಂದಿಟ್ಟು, ಆ ಪವಿತ್ರನಾಮವನ್ನು ಪ್ರಚಾರಗೊಳಿಸಲು ಅದೇ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ, ಈ ಸಂಧಿಕಾಲದಲ್ಲಿ ಋಷಿ ದಯಾನಂದರು ಕೈಗೊಂಡು ನಡೆಯಿಸಿದ ನಾನಾ ಕಾರ್ಯಗಳಿಂದ ಭಾರತೀಯರ ಜೀವನವೇ ಮಾರ್ಪಾಡನ್ನು ಹೊಂದಿತು. ಅಂಧಶ್ರದ್ಧೆಯ ಮತ್ತು ಮೂಢನಂಬಿಕೆಯ ಗಾಢನಿದ್ರೆಯಲ್ಲಿದ್ದ ಇವರು ಎಚ್ಚರಗೊಂಡರು. ತಾವಾರು? ತಮ್ಮ ಧರ್ಮಗಳೇನು? ಮತ್ತು ಎತ್ತ ಕಡೆಗೆ ಸಾಗುತ್ತಿದ್ದೇವೆಂದು ಶಂಕಿಸತೊಡಗಿ, ತಮ್ಮ ವೈಶಿಷ್ಟ್ಯ, ಕೀರ್ತಿ ಮತ್ತು ಪ್ರತಿಷ್ಠೆಗಳಿಗೆ ಪ್ರತಿಬಂಧಕಗಳೇನಂಬುದನ್ನು ಶೋಧಿಸ ತೊಡಗಿದರು. ಬಂಧವಿಮೋಚನೆಯಿಲ್ಲದೆ ಸುಖವಿಲ್ಲ; ಸುಖವಿಲ್ಲದೆ ಶಾಂತಿಯಿಲ್ಲ; ಶಾಂತಿಯಿಲ್ಲದೆ ಮೋಕ್ಷವಿಲ್ಲ ಎಂಬುಧನ್ನು ಮನಗಂಡರು. "ಸ್ವರಾಜ್ಯ ಸ್ಥಾಪನೆಯಿಂದಲೇ ಸ್ವಧರ್ಮಪ್ರಾಪ್ತಿ" ಎಂಬ ತತ್ವವನ್ನು ಅನುಷ್ಠಾನಕ್ಕೆ ತಂದು ಈಗ ನಾವು ಅನುಭವಿಸುತ್ತಿರುವ ಸ್ವತಂತ್ರ ವಾತಾವರಣಕ್ಕೆ ಅಸ್ತಿಭಾರ ಹಾಕಿದರು ಶ್ರೀ ದಯಾನಂದ ಸರಸ್ವತಿಯವರು. ಸ್ವಧರ್ಮೀಯರಲ್ಲಿದ್ದ ವೈಧರ್ಮ್ಯವನ್ನು ಹೊರದೂಡಿಸಿ, ಸ್ವಾತಂತ್ರವನ್ನು ಸಿದ್ಧಿಗೊಳಿಸಲು ಶಾಶ್ವತವಾದ ಸೋಪಾನಗಳನ್ನು ಒದಗಿಸಿ ಕೊಟ್ಟು, ಅವರನ್ನು ಸ್ವಧರ್ಮನಿರತರನ್ನಾಗಿ ಮಾಡಿದ ಆದರ್ಶಆರ್ಯ ಶ್ರೀ ದಯಾನಂದ ಸರಸ್ವತಿಯವರ ಕೀರ್ತಿಯು ಸದಾ ಬೆಳಗಲಿ!

ಓಂ ಶಾಂತಿಃ ಶಾಂತಿಃ ಶಾಂತಿಃ

ಶ್ರೀ ಧರ್ಮಸ್ಥಳ ಕ್ಷೇತ್ರದ ಇತಿಹಾಸ

ಶ್ರೀ ವಿ. ಶ್ರೀನಿವಾಸ ಸೂರಿತ್ತಾಯ, ಪ್ರಧಾನ ಅಧ್ಯಾಪಕ ಧರ್ಮಸ್ಥಳ, ಪ್ರಾಥಮಿಕ ಶಾಲಾ.

ಶ್ರೀ ಧರ್ಮಸ್ಥಳ ಕ್ಷೇತ್ರ ಎಲ್ಲಿದೆ?

ದಕ್ಷಿಣ ಭಾರತದ ಪ್ರಸಿದ್ಧವಾದ ಕ್ಷೇತ್ರಗಳಲ್ಲಿ ಒಂದಾದ ಶ್ರೀ ಧರ್ಮಸ್ಥಳ ಕ್ಷೇತ್ರವು ಆಸ್ತಿಕರಿಗೆಲ್ಲ ಪರಿಚಯವುಳ್ಳ ಕ್ಷೇತ್ರವಾಗಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಶ್ರೀ ಧರ್ಮಸ್ಥಳ ಎಂಬ ಗ್ರಾಮದಲ್ಲಿ ಇರುವುದು. ಚಾರ್ಮಾಡಿ–ಮಂಗಳೂರು ರಸ್ತೆಯಲ್ಲಿ ಮಂಗಳೂರಿನಿಂದ 40 ಮೈಲು ಮತ್ತು ಚಾರ್ಮಾಡಿಯಿಂದ 20 ಮೈಲುಗಳ ಅಂತರದಲ್ಲಿ ಉಜಿರೆ ಎಂಬ ಊರು ಇದೆ. ಉಜಿರೆಯಿಂದ ಧರ್ಮಸ್ಥಳಕ್ಕೆ ಕವಲಾಗಿ ಹೊರಡುವ ರಸ್ತೆಯಲ್ಲಿ 5½ ಮೈಲುಗಳ ದೂರದಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರವು ಇರುವುದು. ಮೈಸೂರು ಸೀಮೆಯಿಂದ ಬರುವವರು ಮೂಡಿಗೆರೆಗಾಗಿ ಚಾರ್ಮಾಡಿ ಘಾಟಿ ರಸ್ತೆಯಿಂದಲೂ, ಆಗುಂಬೆ ಘಾಟಿಯಿಂದ ಸೋಮೇಶ್ವರ–ಕಾರ್ಕಳ ರಸ್ತೆಯಿಂದಲೂ, ಕುಂದಾಪುರದಿಂದ ಬರುವವರು ಉಡುಪಿ-ಕಾರ್ಕಳ ರಸ್ತೆಯಿಂದಲೂ, ಸಕಲೇಶಪುರದಿಂದ ಶಿರಾಡಿ ಘಾಟಿ ದಾಟಿ ಉಪ್ಪಿನಂಗಡಿಗಾಗಿ ಉಜಿರೆಗೆ ಬರುವ ರಸ್ತೆಯಿಂದಲೂ ಬರುತ್ತಾರೆ. ಕೊಡಗಿನವರು ಮಡಿಕೇರಿ, ಪುತ್ತೂರು, ಉಪ್ಪಿಂಗಡಿಗಾಗಿ ಬರುವ ರಸ್ತೆಯಿಂದಲೂ ಬರುತ್ತಾರೆ. ಉಜಿರೆಯಿಂದ 3½ ಮೈಲು ದೂರದಲ್ಲಿ ನೇತ್ರಾವತಿ ನದಿಯು ಹರಿಯುತ್ತದೆ. ಪಶ್ಚಿಮ ಘಟ್ಟದ ಕುದುರೆಮುಖವೆಂಬ ಪರ್ವತಶಿಖರದಲ್ಲಿ ಹುಟ್ಟಿ ಹರಿಯುವ ಈ ನದಿಯು ಉಪ್ಪಿನಂಗಡಿ-ಪಾಣೆಮಂಗಳೂರಿಗಾಗಿ ಮಂಗಳೂರಿನಲ್ಲಿ ಸಮುದ್ರವನ್ನು ಸೇರುತ್ತದೆ. ಈ ನದಿಯ ನೀರು ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ತೀರ್ಥವಾಗಿ ಉಪಯೋಗಿಸಲ್ಪಡುವುದರಿಂದ ಯಾತ್ರಿಕರೆಲ್ಲರೂ ಇಲ್ಲಿ ಮಿಂದು ಕ್ಷೇತ್ರವನ್ನು ಸೇರುತ್ತಾರೆ. ನದಿಯಿಂದ 2 ಮೈಲು ದೂರದಲ್ಲಿ ಕ್ಷೇತ್ರವಿದೆ. ಈ ನದಿಯು ಕ್ಷೇತ್ರದ ಉತ್ತರ ಭಾಗದಲ್ಲಿದೆ. ಹೀಗೆ ಉಳಿದ 3 ದಿಕ್ಕುಗಳಲ್ಲಿಯೂ ಸಣ್ಣ ದೊಡ್ಡ ಹೊಳೆಗಳು ಹರಿಯುತ್ತವೆ. ನದಿ ದುರ್ಗದಿಂದ ರಕ್ಷಿಸಲ್ಪಡುವ ಚಿಕ್ಕ ಊರು ಶ್ರೀ ಧರ್ಮಸ್ಥಳವಾಗಿರುತ್ತದೆ. 1941ನೇ ಖಾನೇಶುಮಾರಿಯ ಪ್ರಕಾರ ಈ ಗ್ರಾಮದ ಜನಸಂಖ್ಯೆ 1000, ಮನೆಗಳು 200. ಇವರಲ್ಲಿ ಸುಮಾರು 600-700 ಜನರು ಕ್ಷೇತ್ರದ ಬಳಿಯಲ್ಲಿಯೇ ಮನೆ ಮಾಡಿಕೊಂಡಿದ್ದಾರೆ. ಇವರಲ್ಲಿ ಶೇಕಡಾ 40 ಮಂದಿ ಅಕ್ಷರಸ್ಥರಾಗಿದ್ದಾರೆ. ಇಲ್ಲಿನ ಹವಾಗುಣವು ಬೇಸಿಗೆಯಲ್ಲಿ ಅತಿ ಉಷ್ಣ— ಛಳಿಗಾಲದಲ್ಲಿ ಅತೀ ಶೀತವಾಗಿಯೂ, ಮಳೆಗಾಲದಲ್ಲಿ ಸಮಶೀತೋಷ್ಣವಾಗಿ ಹಿತಕರವಾಗಿಯೂ ಇರುವುದು. ಕ್ಷೇತ್ರದ ಬಳಿಯಲ್ಲಿ ಸಣ್ಣ ಸಣ್ಣ ಬಯಲುಗಳೂ, ಗುಡ್ಡಬೆಟ್ಟಗಳೂ, ಅಡಿಕೆ-ತೆಂಗಿನ ತೋಟಗಳೂ ಕಾಣುತ್ತವೆ. ಸ್ವಲ್ಪ ದೂರದಲ್ಲೇ ಎತ್ತರವಾದ ಗೋಪುರಗಳಂತೆ ಕಾಣುವ ಬೆಟ್ಟಗಳೂ, ಒತ್ತೊತ್ತಾಗಿ ಬೆಳೆದಿರುವ ವನಶ್ರೀಯೂ, ನೋಟಕರನ್ನು ಮುಗ್ಧಗೊಳಿಸುತ್ತವೆ. ಕ್ಷೇತ್ರದ ಬಳಿಯಲ್ಲಿಯೇ ಜಯಕೀರ್ತಿಬೆಟ್ಟ ಅಥವಾ ಶಿವರಾತ್ರಿಬೆಟ್ಟ, ಅಣ್ಣಪ್ಪನ ಬೆಟ್ಟ, ಶಾಲೆಯ ಬೆಟ್ಟಗಳನ್ನು ಕಾಣಬಹುದು.

ಕ್ಷೇತ್ರದ ಆರಂಭ ಕಾಲ.

ಈಗ ಧರ್ಮಸ್ಥಳ ಎಂದು ಕರೆಯುವ ಸ್ಥಳವನ್ನೇ ಮೊದಲು 'ಕುಡುಮ' ಎನ್ನುತ್ತಿದ್ದರು. ಈ ಊರಿಗೆ ಮಲ್ಲರಮಾಡಿ ಎಂದು ಕರೆಯುತ್ತಿದ್ದರು. ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಈಗ ನೆಲ್ಯಾಡಿ ಬೀಡು ಎಂದು ಕರೆಯುವ ಬೀಡಿನಲ್ಲಿ ಬಿರ್ಮಣ್ಣ ಹೆಗ್ಗಡೆ ಎಂಬವರು ಪತ್ನಿ ದೇವಿ ಬಲ್ಲಾಳತಿಯರೊಂದಿಗೆ ವಾಸಮಾಡಿಕೊಂಡಿದ್ದರು. ಬಳಿಯಲ್ಲಿಯೇ ಈಗ ಇರುವ ಚಂದ್ರನಾಥನ ಬಸ್ತಿಯೂ ಇದ್ದಿತು. ಒಂದು ದಿನ ಧರ್ಮದೇವತೆಗಳು ಮನುಷ್ಯರೂಪನ್ನು ತಾಳಿ ಆನೆ-ಕುದುರೆಗಳ ಮೇಲೆ ಕುಳಿತುಕೊಂಡು, ಪರಿವಾರ ಸಮೇತರಾಗಿ ರಾಜವೈಭವದಿಂದಲೂ, ದೈವಿಕವಾದ ತೇಜಸ್ಸಿನಿಂದಲೂ ಕೂಡಿದವರಾಗಿ ನೆಲ್ಯಾಡಿ ಬೀಡಿಗೆ ಬಂದು ಹೊಕ್ಕರು. ಆಗ ಹೆಗ್ಗಡೆಯವರು ಪ್ರೀತಿಯಿಂದಲೂ ಗೌರವದಿಂದಲೂ ಅವರನ್ನು ಉಪಚರಿಸಿದರು. ಅವರ ಉಪಚಾರಕ್ಕೆ

ಮೆಚ್ಚಿ ಧರ್ಮದೇವತೆಗಳು "ಎಲೋ ಹೆಗ್ಗಡೆ! ನಿನ್ನ ಈ ವಾಸದ ಮನೆಯನ್ನು ನಮಗೆ ಬಿಟ್ಟು, ನೀನು ಬೇರೆ ಮನೆಯನ್ನು ಕಟ್ಟಿ ವಾಸಮಾಡು. ಇದರಲ್ಲಿ ನಮಗೆ ಉಯ್ಯಾಲೆಯನ್ನು ಹಾಕಿ, ಕಾಲಕಾಲಕ್ಕೆ ಪರ್ವ ನಡಾವಳಿಗಳನ್ನು ನಡೆಯಿಸಬೇಕು. ಕಾಳರಾಹು, ಕಳರ್ಕಾಯಿ, ಕುಮಾರಸ್ವಾಮಿ, ಕನ್ಯಾಕುಮಾರಿ ಎಂದು ನಾವು 4 ಜನರು ಇರುವೆವು. ನಮಗೆ ನಾವು ತೋರುವ ಸ್ಥಳದಲ್ಲಿ ಬೇರೆ ಬೇರೆ ಗುಡಿಗಳನ್ನು ಕಟ್ಟಿಸಬೇಕು. ನಮಗೆ ಉತ್ತಮ ಕುಲದವರಾದ ಇಬ್ಬರನ್ನು ಪಾತ್ರಿಗಳಾಗಿ ನೇಮಿಸಬೇಕು. ನಮ್ಮ ಅಭಿಪ್ರಾಯವನ್ನು ಅವರ ಮೂಲಕ ನಿನಗೆ ತಿಳಿಸುವೆವು. ನಮ್ಮ ದೂತ ಅಣ್ಣಪ್ಪನಿಂದ ಎಲ್ಲಾ ಕಾರ್ಯವನ್ನೂ ನಿರ್ವಹಿಸುವೆವು. ಆಯಾ ಕಾಲದಲ್ಲಿ ನಡೆಯುವ ಕಾರ್ಯಗಳಿಗೆ ಲೋಪವಾಗದಂತೆ ಕಾರ್ಯನಿರ್ವಹಣ ಮಾಡುವುದಕ್ಕಾಗಿ ಯೋಗ್ಯರಾದ ನಾಲ್ಕು ಮಂದಿಯನ್ನು ನೀನು ನೇಮಿಸಿ ನಿನ್ನ ಸಹಕಾರಕ್ಕಾಗಿ ಇಟ್ಟುಕೊಳ್ಳಬೇಕು. ನೀನು ಭಕ್ತಿ-ಶ್ರದ್ಧೆಗಳಿಂದ ನಮ್ಮನ್ನು ಆರಾಧಿಸಿಕೊಂಡು ಬಂದರೆ ನಿನ್ನ ಕುಟುಂಬ-ಸಂಪತ್ತು-ಆಯುರಾರೋಗ್ಯಗಳನ್ನು ವೃದ್ಧಿಪಡಿಸಿಕೊಡುವೆವು. ದೇಶದೇಶಾಂತರಗಳಲ್ಲಿ ನಮ್ಮ ಪ್ರಭಾವವನ್ನು ಬೀರಿ ಧಾರಾಳವಾಗಿ ಹರಿಕೆ-ಕಾಣಿಕೆಗಳನ್ನು ತರಿಸಿ ಕೊಡುವೆವು. ಅದರಿಂದ ಸರ್ವರಿಗೂ ಏಕಪ್ರಕಾರವಾದ ದಾನಧರ್ಮಗಳು ಸದಾ ಕಾಲವೂ ನಡೆಯುತ್ತಿರಬೇಕು. ನಿನ್ನ ಮಾತನ್ನು ನಿಜಮಾಡಿಕೊಟ್ಟು ನಿನ್ನ ಬಯಕೆಗಳಿಗೆ ಬೆಂಬಲಿಗರಾಗಿ, ನಿನ್ನ ಸರ್ವಕಾರ್ಯಗಳಿಗೂ ಜಯವನ್ನು ಕೊಡಿಸುವೆವು. ಇದಕ್ಕೆ ವಿರೋಧವಾಗಿ ನಡೆದರೆ ನಿನಗೆ ಅಶುಭ ಉಂಟಾಗುವುದು" ಎಂದು ಹೇಳಿ ಅಂತರ್ಧಾನರಾದರು. ತೇಜಸ್ವಿಗಳಾಗಿ, ವೈಭವಯುಕ್ತರಾಗಿ ಬಂದು ಹೇಳಿದ ಅವರ ರೂಪ, ಗುಣಾತಿಶಯಗಳನ್ನೂ ಮಾತುಗಳನ್ನೂ ಗ್ರಹಿಸಿ, ಬಿರ್ಮಣ್ಣ ಹೆಗ್ಗಡೆಯವರು ಆನಂದಾತಿರೇಕದಿಂದ ಪತ್ನಿಯೊಡನೆ ಮನಸ್ಸಿನ ವಿಕಾರಗಳನ್ನೆಲ್ಲಾ ವಿವರಿಸಿದರು. ಆ ದಿನ ರಾತ್ರಿ ಸ್ವಪ್ನದಲ್ಲಿ ದೇವತೆಗಳು ತಿರುಗಿ ಕಾಣಿಸಿಕೊಂಡು "ನಾವು ಇಲ್ಲೇ ವಾಸವಾಗಿರುವೆವು. ನಮ್ಮ ಮಾತಿನಂತೆ ನಮಗೆ ಇದನ್ನು ಬಿಟ್ಟು, ನೀನು ಬೇರೆ ಬೀಡನ್ನು ಕಟ್ಟಿಕೊಳ್ಳಬೇಕು. ನಮ್ಮ ಎಲ್ಲಾ ಮಾತನ್ನೂ ತಪ್ಪದೆ ನಡೆಸಬೇಕು" ಎಂದು ಎಚ್ಚರಿಸಿದರು. ಆ ಮೇಲೆ ಹೆಗ್ಗಡೆಯವರು ಬೇರೆ ಬೀಡನ್ನು ಕಟ್ಟಿ, ತನ್ನ ಬೀಡಿನಲ್ಲಿ ಉಯ್ಯಾಲೆ ಹಾಕಿಸಿ, ಬಿಟ್ಟುಕೊಟ್ಟರು.

ದೇವತೆಗಳ ಸಂಕಲ್ಪದಂತೆ ಬೇರೆ ಬೇರೆ ಗುಡಿಗಳನ್ನು ಆಯಾ ಸ್ಥಳಗಳಲ್ಲಿ ಕಟ್ಟಿಸಿಕೊಟ್ಟರು. ಆಯಾ ಕಾಲದಲ್ಲಿ ಪರ್ವ-ನಡಾವಳಿಗಳನ್ನು ನಡೆಸಲು ಪ್ರಾರಂಭಿಸಿದರು. ದಾನಧರ್ಮಗಳನ್ನು ಮಾಡುವದಕ್ಕಾಗಿ ಬ್ರಾಹ್ಮಣ ಸಂತರ್ಪಣೆ ಮಾಡಬೇಕೆಂದು ಹೆಗ್ಗಡೆಯವರು ಬ್ರಾಹ್ಮಣರನ್ನು ಕರೆಯಿಸಿದರು. ಆಗ ಬ್ರಾಹ್ಮಣರು "ದೇವರ ಆರಾಧನೆ ಇರುವ ದೇವಾಲಯವಿಲ್ಲದ ಕಡೆ ನಾವು ಸಂತರ್ಪಣೆಗೆ ಬರುವದು ಸರಿಯಲ್ಲ" ಎಂದು ಹೇಳಿದರು. ಆಗ ಹೆಗ್ಗಡೆಯವರು ತನ್ನ ಬಯಕೆ ಕೈಗೂಡಲಿಲ್ಲವೆಂದು ಚಿಂತಾಕ್ರಾಂತರಾದಾಗ, ಧರ್ಮದೇವತೆಗಳು ದೂತನಾದ ಅಣ್ಣಪ್ಪನನ್ನು ಕಳುಹಿಸಿ, ಕಾಶಿಯಿಂದ ಕದಿರೆಗೆ ಬಂದಿದ್ದ ಶಿವಲಿಂಗವನ್ನು ತರಿಸಿ, ಈಗ ದೇವಾಲಯವಿರುವ ಸ್ಥಳದಲ್ಲಿಯೇ ಇಡಿಸಿದರು. ಕದಿರೆಯಿಂದ ತಂದ ಲಿಂಗವಾದ್ದರಿಂದ "ಶ್ರೀ ಮಂಜುನಾಥ" ಎಂಬ ಹೆಸರೇ ಈ ಲಿಂಗಕ್ಕೂ ಪ್ರಸಿದ್ಧವಾಯಿತು. ಆ ಮೇಲೆ ಹೆಗ್ಗಡೆಯವರು ಅಲ್ಲಿ ದೇವಾಲಯವನ್ನು ಕಟ್ಟಿಸಿದರು. ಆ ವರಿಗೆ ಆ ಸ್ಥಳದಲ್ಲಿ ಈಗ ಇರುವ ಅಮ್ಮನವರ ಗುಡಿಯು ಅದೇ ಸ್ಥಳದಲ್ಲಿ ಇದ್ದಿತು. ಹೆಗ್ಗಡೆಯವರು ನಿತ್ಯಪೂಜೆ, ಉತ್ಸವ, ಕಲಶ, ವಾಸ್ತು, ಹೋಮ, ಸಂತರ್ಪಣೆಗಳನ್ನೆಲ್ಲಾ ಒಂದೊಂದಾಗಿ ಮಾಡಿಸುತ್ತಾ ಬಂದರು. ತನ್ನ ಸ್ವಂತ ಭೂಮಿಯ ಒಂದು ಭಾಗವನ್ನು ದೇವಾಲಯದ ವಿನಿಯೋಗಕ್ಕಾಗಿ ಉಂಬಳಿ ಬಿಟ್ಟರು. ಭಕ್ತಾದಿಗಳು ಬಂದು ಹರಿಕೆ ಕಾಣಿಕೆಗಳನ್ನು ಒಪ್ಪಿಸುವುದಕ್ಕೆ ಪ್ರಾರಂಭವಾಯಿತು. ಇವರ ಕಾಲದ ನಂತರ ಕೆಲವು ಮಂದಿ ಹೆಗ್ಗಯವರು ಆಡಳಿತೆ ಮಾಡಿದರು.

ಆ ಮೇಲೆ ಪದ್ಮಯ್ಯ ಹೆಗ್ಗಡೆಯವರು ಅಧಿಕಾರ ವಹಿಸಿದರು. ಕುಡುಮದ ಹತ್ತಿರವಿರುವ 'ಕಲ್ಲೇರಿ' ಎಂಬಲ್ಲಿ ಒಂದು ಬ್ರಾಹ್ಮಣರ ಮನೆ ಇತ್ತು. ಆ ಬ್ರಾಹ್ಮಣನ ಮಗನು ದುರ್ನಡತೆಯವನಾಗಿದ್ದು ದುರ್ಮರಣಕ್ಕೆ ತುತ್ತಾಗಿ, ಬ್ರಹ್ಮರಾಕ್ಷಸನಾಗಿ ದಾರಿ ಹೋಕರಿಗೂ, ಊರವರಿಗೂ ಬಾಧೆ ಕೊಡುತ್ತಿದ್ದನು. ಆಗ ಬ್ರಾಹ್ಮಣನು ಹೆಗ್ಗಡೆಯವರಿಗೆ ಬಂದು ತನ್ನ ಕಷ್ಟಪರಿ

ಹರಿಸಬೇಕಾಗಿ ಕೇಳಿಕೊಂಡನು. ಹೆಗ್ಗಡೆಯವರು ಶ್ರೀ ಸ್ವಾಮಿಯನ್ನು ಪ್ರಾರ್ಥಿಸಿ, ದೇವಾಲಯದ ಉತ್ತರ ಭಾಗದಲ್ಲಿ ಪೌಳಿ ಮಾಡಿಸಿ, ಪ್ರತಿ ತಿಂಗಳೂ ಪರ್ವ ಕೊಡುವದಾಗಿ ನಿಶ್ಚೈಸಿ, ಅಣ್ಣಪ್ಪನೊಂದಿಗೆ ಸೇರಿಕೊಂಡಿರುವಂತೆ ವ್ಯವಸ್ಥೆ ಮಾಡಿದರು. ಆ ಮೇಲೆ ಆ ಬಾಧೆಯು ನಿಂತು ಹೋಯಿತು. ಅಣ್ಣಪ್ಪನ ಸಹವಾಸದಿಂದ ದುಷ್ಟ ಸ್ವಭಾವವು ನಿಂತು ಊರಿಗೇ ಕ್ಷೇಮವಾಯಿತು. ಆ ದೇವತೆಗೆ ಆ ಮೇಲೆ 'ಕಲ್ಲೇರಿತ್ತಾಯಿ' ಎಂದು ಕರೆದರು. ಈಗಲೂ ಅದೇ ಸ್ಥಳದಲ್ಲಿ ಪ್ರತಿ ತಿಂಗಳೂ ಪರ್ವ ಸಲ್ಲುತ್ತದೆ. ಪದ್ಮಯ್ಯ ಹೆಗ್ಗಡೆಯವರಿಗೆ ಮಕ್ಕಳಿರಲಿಲ್ಲ. ಇವರು ಶಾ. ಶ. 1354 ಅಂದರೆ ಕ್ರಿ. ಶ. 1432ರಲ್ಲಿ ದಿವಂಗತರಾದರು. ಆ ಮೇಲೆ ಇವರ ತಂಗಿ ಗುಮ್ಮಕ್ಕನ ಮಗನಾದ ಚಂದಯ್ಯ ಎಂಬವರನ್ನು ದತ್ತ ಮಾಡಿದರು.

ಚಂದಯ್ಯ ಹೆಗ್ಗಡೆಯವರು ಅಧಿಕಾರ ವಹಿಸಿದ ಮೇಲೆ ಶ್ರೀ ಸ್ವಾಮಿಯಲ್ಲಿ ಭಕ್ತಿ ಶ್ರದ್ಧೆಗಳನ್ನಿಟ್ಟು ನಡೆಸುತ್ತಾ ಬಂದರು. ಅವರಿಗೆ ಆಗಾಗ ಅಸೌಖ್ಯ ಉಂಟಾಗುತಿತ್ತು. ಅವರ ಭಕ್ತಿಗೆ ಮೆಚ್ಚಿ ಶ್ರೀ ಸ್ವಾಮಿಯು ಅವರ ಕಾಹಿಲೆಯನ್ನು ಪರಿಹರಿಸಿದರು. ಅದಕ್ಕಾಗಿ ಶಾ. ಶ. 1402 ಅಂದರೆ ಕ್ರಿ. ಶ. 1480ನೇ ವಿಕೃತು ಸಂವತ್ಸರದ ಮೇಷ ಮಾಸದಲ್ಲಿ ನಾಗಾಭರಣವನ್ನು ಮಾಡಿಸಿ ಶ್ರೀ ಸ್ವಾಮಿಗೆ ಅರ್ಪಿಸಿದರು. ಇವರು ಶಾ. ಶಕ. 1425 ಅಂದರೆ ಕ್ರಿ. ಶ. 1503ಕ್ಕೆ ದಿವಂಗತರಾದರು. ಇವರ ತಂಗಿ ಮಗನಾದ ದೇವರಾಜ ಹೆಗ್ಗಡೆಯವರು ಅಧಿಕಾರಕ್ಕೆ ಬಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ

ದೇವರಾಜ ಹೆಗ್ಗಡೆಯವರ ಕಾಲದಲ್ಲಿ ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಸೋದೆ ಮಠದ ವಾದಿರಾಜ ಸ್ವಾಮಿಗಳು ಕ್ಷೇತ್ರಕ್ಕೆ ಬಂದರು. ಹೆಗ್ಗಡೆಯವರು ಅವರನ್ನು ಸತ್ಕರಿಸಿ "ಭಿಕ್ಷೆ ಸ್ವೀಕರಿಸಬೇಕು" ಎಂದರು. "ದೈವಗಳು ತಂದು ಪ್ರತಿಷ್ಠಿಸಿದ ಲಿಂಗವಿರುವ ಸ್ಥಳದಲ್ಲಿ ಭಿಕ್ಷೆ ಸ್ವೀಕರಿಸುವುದಿಲ್ಲ" ಎಂದರು. ಆಗ ಹೆಗ್ಗಡೆಯವರು ಅವರನ್ನೇ ಕೇಳಿ, ಅವರು ಹೇಳಿದ ಸರ್ವಸನ್ನಾಹಗಳನ್ನು ಒದಗಿಸಿ ಕೊಟ್ಟು ಅವರ ಕೈಯಿಂದಲೇ ಕಲಶ, ಪ್ರಾಣ ಪ್ರತಿಷ್ಠೆಗಳನ್ನು ಮಾಡಿಸಿದರು. ಆಗ ಶ್ರೀ ವಾದಿರಾಜ ಸ್ವಾಮಿಯವರು ಸಂತೋಷಪಟ್ಟು, ಆಗಲೇ ಸ್ಥಳದಲ್ಲಿ ನಡೆಯುತ್ತಿದ್ದ ದಾನಧರ್ಮಗಳನ್ನು ಕಂಡು "ಧರ್ಮಸ್ಥಳ" ಎಂಬ ಹೆಸರಿಟ್ಟರು. ದೇವರಾಜ ಹೆಗ್ಗಡೆಯವರು ದಿವಂಗತರಾದ ಮೇಲೆ ಮಂಜಯ್ಯ ಹೆಗ್ಗಡೆಯವರು ಅಧಿಕಾರ ವಹಿಸಿದರು.

ಮಂಜಯ್ಯ ಹೆಗ್ಗಡೆಯವರು 33 ವರ್ಷ ಕಾಲ ಆಡಳಿತೆ ಮಾಡಿ ಮೃತರಾದ ಮೇಲೆ ಕ್ರಮವಾಗಿ, ಜಿನ್ನಪ್ಪ ಹೆಗ್ಗಡೆ, ಚಂದಯ್ಯ ಹೆಗ್ಗಡೆ, ದೇವಪ್ಪರಾಜ ಹೆಗ್ಗಡೆ, ಅನಂತಯ್ಯ ಹೆಗ್ಗಡೆ, ವೃಷಭಯ್ಯ ಹೆಗ್ಗಡೆ, ಗುಮ್ಮಣ್ಣ ಹೆಗ್ಗಡೆ, ವರದಯ್ಯ ಹೆಗ್ಗಡೆ, ಚಂದಯ್ಯ ಹೆಗ್ಗಡೆ ಎಂಬವರು ಒಬ್ಬರ ನಂತರ ಒಬ್ಬರಾಗಿ ಅಧಿಕಾರ ನಿರ್ವಹಿಸಿದರು. ಕೊನೆಯವರಾದ ಚಂದಯ್ಯ ಹೆಗ್ಗಡೆಯವರು 27 ವರ್ಷಗಳ ಕಾಲ ಆಡಳಿತೆ ಮಾಡಿದರು. ಇವರಿಗೆ ಮಕ್ಕಳಿಲ್ಲದೆ ಮಂಗಳೂರಿನಿಂದ ಉತ್ತರಕ್ಕಿರುವ ಕೂಳೂರು ಬೀಡಿನಲ್ಲಿದ್ದ ಕುಮಾರಯ್ಯ ಎಂಬವರನ್ನು ದತ್ತ ಮಾಡಿಕೊಂಡರು. ಕೂಳೂರು ಬೀಡಿಗೆ ಬೇರೆ ಯಜಮಾನರಿಲ್ಲವಾದ್ದರಿಂದ, ಇವರ ತಂಗಿಯ ಗಂಡನಾದ ಮೂಡಬಿದ್ರಿ ಭದ್ರಯ ಶೆಟ್ರನ್ನು ಕೂಳೂರು ಬೀಡಿನಲ್ಲಿ ನಿಲ್ಲಿಸಿ, ಅಲ್ಲಿನ ಮತ್ತು ಕ್ಷೇತ್ರದ ಅಧಿಕಾರವನ್ನು ಕುಮಾರಯ್ಯ ಹೆಗ್ಗಡೆಯವರೇ ನಿರ್ವಹಿಸಿದರು. ಅವರ ಕಾಲದ ನಂತರ ಕೂಳೂರು ಬೀಡಿನವರಿಗೂ ಇಲ್ಲಿನವರಿಗೂ ವಿವಾದ ಉಂಟಾಗಿ ಭೂಮಿಯನ್ನು ವಿಂಗಡಿಸಿಕೊಂಡರು. ಕೂಳೂರಿನಲ್ಲಿ ಇಲ್ಲಿಗೆ ಈಗಲೂ ಭೂಮಿಯಿದೆ.

ಕುಮಾರಯ್ಯ ಹೆಗ್ಗಡೆಯವರು ಮಹಾಪ್ರತಾಪಿಗಳು. ಇವರು ಕ್ರಿ. ಶ. 1785ರಿಂದ 1830ರ ವರೆಗೆ ಇದ್ದರು. ಇವರು ವೀರರಾದುದರಿಂದ ಇವರೊಂದಿಗೆ ಹಲವು ಯೋಧರಿದ್ದರು. 'ದಶಾವತಾರ' ಎಂಬ ಬಯಲಾಟವನ್ನು ಇವರು ಪ್ರಾರಂಭಿಸಿದರು. ಆಗ ಮೈಸೂರಿನಲ್ಲಿ ಕೃಷ್ಣರಾಜ ಒಡೆಯರವರು ಅಧಿಕಾರ ನಿರ್ವಹಿಸುತ್ತಿದ್ದರು. ಇವರು ಮೈಸೂರಿಗೆ ಹೋಗಿ ಅರಸರ ವಿಶೇಷವಾದ ಸತ್ಕಾರವನ್ನು ಹೊಂದಿದ್ದರು. ತನ್ನೊಂದಿಗೆ ಬಂದ ಬಯಲಾಟದವರನ್ನು ಅರಸರ ಅಭಿಪ್ರಾಯದಂತೆ ಅಲ್ಲೇ ನಿಲ್ಲಿಸಿದರು. ಅರಸರು ಬಯಲಾಟದವರಿಗೆ ಬಿಡಾರ ಕೊಟ್ಟರು. ಅವರನ್ನು 'ಬಿಡಾರದವರು' ಎಂದು ಈಗಲೂ ಕರೆಯುತ್ತಾರೆ. ಹೆಗ್ಗಡೆಯವರು ಅರಸರ ಭೇಟಿ ಪಡೆದ ನೆನಪಿಗಾಗಿ ಅರಸರು "ಕಬ್ಬಾಳು" ಎಂಬ ಗ್ರಾಮವನ್ನು ಶ್ರವಣಬೆಳಗುಳದ ಮಠಕ್ಕೆ

ಉಂಬಳಿಯಾಗಿ ಬಿಟ್ಟರು. ಅಲ್ಲಿಂದ ಹೆಗ್ಗಡೆಯವರು ಕೊಡಗಿಗೆ ಬಂದು, ಆಗ ಅಲ್ಲಿದ್ದ ವೀರರಾಜೇಂದ್ರ ಅರಸನ ಅತಿಥಿಗಳಾಗಿ, ಉತ್ತಮವಾದ ಆಯುಧಗಳನ್ನು ಉಚಿತವಾಗಿ ಪಡೆದು ಊರಿಗೆ ಮರಳಿದರು.

ಇವರು ಊರಿಗೆ ಬಂದ ಮೇಲೆ ವೀರರಾಜೇಂದ್ರ ಅರಸರೂ ಧರ್ಮಸ್ಥಳಕ್ಕೆ ಬಂದು ಯೋಗ್ಯವಾದ ಸತ್ಕಾರವನ್ನು ಹೊಂದಿ ತೆರಳಿದರು. ಉಜ್ರೆಗೆ ಸಮೀಪವಿರುವ ಜಮಾಲಾಬಾದು ಎಂಬ ಎತ್ತರವಾದ ಬೆಟ್ಟದ ಮೇಲೆ ಇರುವ ಕೋಟೆಯು ಆಗ ಟಿಪ್ಪು ಸುಲ್ತಾನನ ಅಧೀನದಲ್ಲಿದ್ದಿತು. ಈಸ್ಟ್ ಇಂಡಿಯಾ ಕಂಪೆನಿಯವರಿಗೂ ಆತನಿಗೂ ಆಗಾಗ ವಿರೋಧಗಳುಂಟಾಗುತ್ತಿತ್ತು. ಸುಬ್ರಾಯನ ಗುಲ್ಲು ನಾಲ್ಕು ಕಡೆಯೂ ಕೇಳಿಬರುತ್ತಿತ್ತು. ಸುಬ್ರಾಯನ ಗುಲ್ಲನ್ನು ಇದಿರಿಸಿ, ಇಂಗ್ಲಿಷರ ಪಕ್ಷದಿಂದ ಟಿಪ್ಪುವನ್ನು ಇದಿರಿಸಿದರು. ಕೊನೆಗೆ ಕೋಟೆಯು ಇಂಗ್ಲಿಷರ ಸ್ವಾಧೀನಕ್ಕೆ ಬಂತು. ಇವರು ಕರ್ನಾಟಕದಲ್ಲೆಲ್ಲಾ ಸಂಚರಿಸಿ ಸ್ಥಳದ ಕೀರ್ತಿಯನ್ನು ಹೆಚ್ಚಿಸಿದರು. ಇವರು ಕ್ರಿ. ಶ. 1830ನೇ ಸಪ್ಟಂಬರದಲ್ಲಿ ಮೃತರಾದರು. ಇವರಿಗೆ ಮಕ್ಕಳಿಲ್ಲದೆ ಚಂದಯ್ಯ, ಮಂಜಯ್ಯ ಎಂಬ ಇಬ್ಬರನ್ನು ದತ್ತಮಾಡಿಕೊಂಡರು.

ಚಂದಯ್ಯ ಹೆಗ್ಗಡೆಯವರು ಪಟ್ಟಕ್ಕೆ ಬಂದು, ದೇವಾಲಯದ ಒಳಗಿನ ಭಾಗವನ್ನು ಸುಧಾರಣೆ ಮಾಡಿ ಕಟ್ಟಿಸಿದರು. ದಾನ ಧರ್ಮಗಳನ್ನು ಹೆಚ್ಚಿಸಿ ಸ್ಥಳದ ಕೀರ್ತಿಯನ್ನು ಹರಡಿದರು. ಇವರು ಕ್ರಿ. ಶ. 1849ಕ್ಕೆ ದಿವಂಗತರಾದರು. ಇವರ ನಂತರ ಮಂಜಯ್ಯ ಹೆಗ್ಗಡೆಯವರು ಅಧಿಕಾರಕ್ಕೆ ಬಂದರು. ಚಂದಯ್ಯ ಹೆಗ್ಗಡೆಯವರಿಗೆ 2 ಮಕ್ಕಳಿದ್ದರೂ, 2ನೇ ದತ್ತದ ಅಧಿಕಾರಿ ಮಂಜಯ್ಯ ಹೆಗ್ಗಡೆಯವರೇ ಅಧಿಕಾರ ವಹಿಸಿದರು. ಇವರು ಬ್ರಾಹ್ಮಣರ ಛತ್ರವನ್ನೂ, ದೇವಾಲಯದ ಹೊರಸುತ್ತಿನ ಪ್ರಾಕಾರವನ್ನೂ, ಎದುರಿಗೆ ಎತ್ತರವಾದ ಗೋಪುರವನ್ನೂ, ಜಮಾ ಉಗ್ರಾಣವನ್ನೂ ಕಟ್ಟಿಸಿದರು. ಮರದ ರಥವನ್ನು ಮಾಡಿಸಿ, ಚಿನ್ನ ಬೆಳ್ಳಿಗಳ ಆಭರಣಗಳನ್ನೂ, ಲಾಲಕಿ-ಪಾಲಕಿಗಳನ್ನೂ ಮಾಡಿಸಿದರು. ಬಸ್ತಿಯ ಕಟ್ಟಡವನ್ನು ಜೀರ್ಣೋದ್ಧಾರಗೊಳಿಸಿದರು. ಕ್ಷೇತ್ರದ ಶುದ್ಧಿಗಾಗಿ ಕಲಶ, ವಾಸ್ತು, ಹೋಮಗಳನ್ನೂ ಮಾಡಿಸಿದರು. ದೈವಗಳಿಗೆ ಮೂರು ಮಹಾಧರ್ಮ ನಡಾವಳಿಗಳನ್ನು ಕೊಟ್ಟರು. ಪೂಜೆ ಉತ್ಸವಗಳನ್ನು ಹೆಚ್ಚಿಸಿದರು. 45 ವರ್ಷಗಳ ಕಾಲ ಇದ್ದು ಕ್ರಿ. ಶ. 1895ಕ್ಕೆ ಮೃತರಾದರು. ಇವರಿಗೆ ಮಕ್ಕಳಿರಲಿಲ್ಲ. ಮೊದಲಿನ ಚಂದಯ್ಯ ಹೆಗ್ಗಡೆಯವರ ಮಗ ಕುಮಾರಯ್ಯ ಹೆಗ್ಗಡೆ ಮತ್ತು ಪತ್ನಿ ಲಕ್ಷ್ಮೀಮತಿ ಅಮ್ಮ ಇವರಿಗೆ ಧರ್ಮಪಾಲ ಎಂಬ ಮಗನಿದ್ದನು. ಇವರಿಗೆ ಪಟ್ಟವಾಯಿತು. ಇವರ ಕಾಲದಲ್ಲಿ ಧಾರಾಳವಾಗಿ ಹರಿಕೆ-ಕಾಣಿಕೆಗಳು ಬಂದವು. ಇವರು ಒಂದೂವರೆ ವರ್ಷಗಳಲ್ಲಿಯೇ ಅಂದರೆ ಕ್ರಿ. ಶ. 1896ನೇ ಕಾರ್ತಿಕ ಮಾಸದಲ್ಲಿ ಮೃತರಾದರು. ಇವರಿಗೆ ಮಕ್ಕಳಿರಲಿಲ್ಲ. ಇವರು ವಿಟ್ಲ ಚಿಕ್ಕಿತ್ತಡಿ ಅಣ್ಣಿ ಯಾನೆ ಪದ್ಮಶೆಟ್ಟರ ಅಳಿಯ 13 ವರ್ಷ ಪ್ರಾಯದ ಚಂದಪ್ಪ ಮತ್ತು ಪದ್ಮಶೆಟ್ಟರ ಮಗ 7 ವರ್ಷ ಪ್ರಾಯದ ಮಂಜಪ್ಪ ಎಂಬ ಇಬ್ಬರನ್ನು ದತ್ತ ಮಾಡಿದರು. ಆ ದತ್ತಪತ್ರದ ಪ್ರಕಾರ ಮೊದಲಿನವರಾದ ಚಂದಯ್ಯ ಹೆಗ್ಗಡೆಯವರು ಪಟ್ಟಕ್ಕೆ ಬಂದರು. ಇವರು ಅಪ್ರಾಯಸ್ಥರಾದುದರಿಂದ ಸುಮಾರು 6 ವರ್ಷಗಳ ಕಾಲದಲ್ಲಿ ಗುಂಡಿ ಪದ್ಮನಾಭ ಭಟ್ಟರು ಮತ್ತು ಅಣ್ಣಿ ಯಾನೆ ಪದ್ಮಶೆಟ್ಟರು ಆಡಳಿತೆದಾರರಾಗಿ ಕಾರ್ಯ ನಿರ್ವಹಿಸಿದರು. ಆಡಳಿತೆದಾರರ ಕಾಲದಲ್ಲಿ ದೈವಗಳ ಗುಡಿಯನ್ನು ಹೊಸತಾಗಿ ಕಟ್ಟಿಸಿದರು; ಯಾತ್ರಿಕರಿಗೆ ವಸತಿಗಾಗಿ ಧರ್ಮ ಛತ್ರವನ್ನು ಕಟ್ಟಿಸಿದರು. ಆ ಮೇಲೆ ಚಂದಯ್ಯ ಹೆಗ್ಗಡೆಯವರು ಅಧಿಕಾರ ವಹಿಸಿದರು. ಇವರು ಬಸ್ತಿಗೆ ಪಂಚಕಲ್ಯಾಣ ಮಾಡಿಸಿದರು; ದೈವಗಳಿಗೆ ನಡಾವಳಿ ಕೊಟ್ಟರು; ಜಮಾ ಉಗ್ರಾಣದ ಕೆಳಗಿನ ಭಾಗವನ್ನು ಕಲ್ಲಿನಿಂದ ಕಟ್ಟಿಸಿದರು; ನಲ್ಲಿ ನೀರನ್ನು ಒದಗಿಸಿದರು. ಇವರು 1918ನೇ ಅಕ್ಟೋಬರದಲ್ಲಿ ಮೃತರಾದರು. ಆ ಮೇಲೆ ಈಗಿನ ಮಂಜಯ್ಯ ಹೆಗ್ಗಡೆಯವರಿಗೆ ಪಟ್ಟವಾಯಿತು. ಇವರ ಕಾಲದಲ್ಲಿ ಕ್ಷೇತ್ರದ ಬಹುಮುಖವಾದ ಕಾರ್ಯಕಲಾಪಗಳು ವೃದ್ಧಿಯಾದವು. ಸಮಾಜದ ವಿವಿಧರಂಗಗಳಲ್ಲಿ ಭಾಗವಹಿಸಿ, ಜನರ ಪ್ರೀತಿಯನ್ನು ಗಳಿಸಿದರು. ಶ್ರೀ ಸ್ವಾಮಿಯನ್ನು ಅಚಲವಾದ ಭಕ್ತಿಯಿಂದ ನಂಬಿ ಕ್ಷೇತ್ರದ ಸರ್ವಕಾರ್ಯಗಳಲ್ಲಿಯೂ ಆಸಕ್ತಿ ವಹಿಸಿ ಸದಾಕಾಲವೂ ನಡೆಸುತ್ತಾ ಬಂದರು. ಇವರ ಜೀವನದ ಪರಿಚಯವನ್ನು ವಿವರವಾಗಿ ಬೇರೆ ಕಡೆ ಕೊಟ್ಟಿರುವುದರಿಂದ ಇಲ್ಲಿ ವಿವರಿಸುವ ಅವಶ್ಯವಿಲ್ಲ.

"ಭಾರತೀಯ ಜೀವನ ದರ್ಶನ"

ಶ್ರೀ ಮೋಕ್ಷಗುಂಡಂ ಲಕ್ಷ್ಮೀ ನಾರಾಯಣ ಶರ್ಮಾ, "ಹಿಂದೀ ಸಾಹಿತ್ಯ ವಿಶಾರದ" ಬೆಂಗಳೂರು ನಗರ.

ನಮ್ಮ ದೇಶದ ಸ್ಥಿತಿ

ನಾವು ಭಾರತೀಯರು. ನಮ್ಮ ದೇಶ ಭಾರತ. ನಮ್ಮ ದರ್ಶನಗಳು ಭಾರತೀಯ ದರ್ಶನಗಳು. ಭಾರತ ದೇಶದಲ್ಲಿ ವೈದಿಕಯುಗದಿಂದಲೂ ದಾರ್ಶನಿಕ ಮನೋಭಾವ ಬೆಳೆದು ಬಂದಿದೆ. ವಿಶ್ವದ ಅನ್ಯ ಪ್ರಾಂತಗಳಲ್ಲಿ ಸಭ್ಯತೆಯ ಮತ್ತು ಸಂಸ್ಕೃತಿಯ ಗಂಧವಿಲ್ಲದೆ ಜನತೆ ಅಜ್ಞಾನದಿಂದ ಆವೃತರಾಗಿ ಪಾಶವೀ ಜೀವನವನ್ನು ನಡೆಸುತಿದ್ದಾಗ ನಮ್ಮ ಪವಿತ್ರ ಭಾರತ ದೇಶದಲ್ಲಿನ ಗಂಗಾ ಯಮುನಾ ಮುಂತಾದ ಪವಿತ್ರ ನದಿಗಳ ದಂಡೆಗಳಲ್ಲಿ ಕುಳಿತು ನಮ್ಮ ಪ್ರಾಕ್ತನ ಮಹರ್ಷಿಗಳು ಆಮುಷ್ಮಿಕ ಚಿಂತನ ಮಾಡುತ್ತಾ "ಕೃಣ್ವತಾ ವಿಶ್ವಮಾಯತಂ" ಎಂಬ ಸಿದ್ಧಾಂತಕ್ಕನುಗುಣವಾಗಿ ವಿಶ್ವವನ್ನೇ ಆರ್ಯರನ್ನಾಗಿ ಮಾಡಲು ಬಯಸಿ, ವಿಶ್ವಕ್ಕೇ ಆರ್ಯಸಂಸ್ಕೃತಿಯ, ಸನಾತನ ಧರ್ಮದ, ಶಾಂತಿ ಸೌಹಾರ್ದ ತತ್ತ್ವಗಳನ್ನು ಬೋಧಿಸುತ್ತಿದ್ದರು. ಈ ತತ್ತ್ವಗಳೆಲ್ಲ ನಮ್ಮ ದಾರ್ಶನಿಕ ಗ್ರಂಥಗಳಲ್ಲಡಗಿವೆ. ಪ್ರಕೃತ ಲೇಖನದಲ್ಲಿ ನಾವು ಆ ವಿಷಯವನ್ನು ಸ್ವಲ್ಪ ವಿಚಾರಿಸುವ.

ಪರತತ್ತ್ವವನ್ನು, ಜೀವಾತ್ಮತತ್ತ್ವವನ್ನು, ಹಾರ್ದಿಕವಾದ ಅಂತಃಕರಣದ ಪ್ರವೃತ್ತಿಯನ್ನು, ವ್ಯಾವಹಾರಿಕ ಜೀವನದ ಸೂಕ್ಷ್ಮ ವಸ್ತುಗಳನ್ನು ಅರಿಯಲು ನಾವು ಬಯಸಿದರೆ ನಮ್ಮಲ್ಲಿ ಒಂದು ರೀತಿಯ ಅಂತರ್ದೃಷ್ಟಿ ಬೆಳೆಯ ಬೇಕಾಗಿದೆ. ನಮ್ಮ ನಿತ್ಯಜೀವನ ನಿರ್ವಾಹಕ್ಕೆ ಬೇಕಾಗುವ ಕೆಲಸಗಳ ಹೊರತು ಇನ್ನೆಲ್ಲ ಕ್ರಿಯೆಗಳಿಂದ ಇಂದ್ರಿಯಗಳನ್ನು ಅಂತಃಕರಣಗಳನ್ನು ದೂರೀಕರಿಸಿ ಪರತತ್ತ್ವ ಚಿಂತನದಲ್ಲಿ ಮನಸ್ಸನ್ನು ನಿಲ್ಲಿಸಬೇಕು. ಪ್ರಾಕೃತಿಕ ನಿಯಮಗಳಿಗನುಗುಣವಾಗಿ ಇಹಪರಗಳಲ್ಲಿ ಶಾಶ್ವತವಾದ ಆನಂದವನ್ನು ಹೊಂದಲು ಸನ್ಮಾರ್ಗದಿಂದ ಜೀವನ ನಡೆಸುವುದೇ ದಾರ್ಶನಿಕ ಜೀವನ. ಮಾನವ ಜೀವನ ಮತ್ತು ದರ್ಶನ ಇವೆರಡರ ಗುರಿಯೂ ಒಂದೇ. ಆದುದರಿಂದ ಇವೆರಡೂ ಒಂದೇ ವಸ್ತುವಿನ ಎರಡು ಭಾಗಗಳೆಂದು ನಾವು ಕರೆಯಬಹುದು. ದರ್ಶನದ ಪ್ರತಿಬಿಂಬವೇ ಜೀವನವೆಂದರೆ ತಪ್ಪಾಗಲಾರದು. ಜ್ಞಾನಿಗಳ ನಿಯಮಪೂರ್ವಕವಾದ ಜೀವನವನ್ನೇ ನಾವು ಸ್ವಲ್ಪ ದೂರದ ವರೆಗೆ ದಾರ್ಶನಿಕ ಜೀವನವೆಂದು ಕರೆಯಬಹುದು.

ಭೌಗೋಲಿಕ ಸ್ಥಿತಿ

ಭಾರತ ದೇಶದ ಸಮಶೀತೋಷ್ಣವಾದ ಭೌಗೋಲಿಕ ಸ್ಥಿತಿ, ನಿಬಿಡವಾದ ಅರಣ್ಯಗಳ ವಿಶಾಲ ಛಾಯಾ ವೃಕ್ಷಗಳ ಸೊಬಗು, ಇಲ್ಲಿನ ಮನೋಜ್ಞ ಪ್ರಾಕೃತಿಕ ಸೌಂದರ್ಯ, ಗಂಗಾ ಯಮುನಾ ನದಿಗಳ ದಂಡೆಗಳಲ್ಲಿನ ಫಲವತ್ತಾದ ಜಮೀನುಗಳಲ್ಲಿ ಸ್ವಲ್ಪ ಪರಿಶ್ರಮದಿಂದಲೇ ಪ್ರಾಪ್ತವಾಗುವ ಧಾನ್ಯಸಂಪತ್ತಿ ಇಲ್ಲಿನ ಜನತೆಯನ್ನು ಶಾಂತರನ್ನಾಗಿ ವಿಶ್ವಭ್ರಾತೃಭಾವನಾವಂತರನ್ನಾಗಿಸಿವೆ. ಇದೇ ಕಾರಣದಿಂದಲೇ ಇಲ್ಲಿನ ಜನ ಗಹನವಾದ ಸಮಸ್ಯೆಗಳನ್ನು ಬಗೆಹರಿಸಲು, ಮೃತ್ಯುವಿನ ರಹಸ್ಯವನ್ನು, ಆಧ್ಯಾತ್ಮಿಕ ಮತ್ತು ದೈವಿಕ ತತ್ತ್ವವನ್ನು ಅರಿತು, ಅಜ್ಞಜನಕ್ಕೆ ಅರಿಯುವಂತೆ ಉಪದೇಶಿಸಲು ಪ್ರಯತ್ನಿಸಬಲ್ಲವರಾದರು. ಆದ್ದರಿಂದ ಭಾರತೀಯರ ಪ್ರತಿಯೊಂದು ಕೆಲಸದಲ್ಲಿಯೂ ದಾರ್ಶನಿಕ ಭಾವನೆಗಳು ಪರಿಪೂರ್ಣವಾಗಿವೆ. ಭಾರತೀಯರ ಜೀವನದಲ್ಲಿ ಬೆರೆತಿರುವ ದಾರ್ಶನಿಕ ಭಾವನೆಗಳನ್ನು ಬೇರೆ ಮಾಡಲು ಸಾಧ್ಯವಿಲ್ಲ. ಜೀವನ ದರ್ಶನಗಳೆರಡಕ್ಕೂ ಎಡೆಬಿಡದೆ [ಅವಿನಾಭಾವ] ಸಂಬಂಧ ಬೆಳೆದಿದೆ. ಭಾರತೀಯ ಜೀವನ ಸರಳತೆ, ಸತ್ಯಪ್ರೇಮ, ದೈವೀಶಕ್ತಿಯಲ್ಲಿ ಶ್ರದ್ಧೆ, ಭಕ್ತಿ ಮತ್ತು ಆತ್ಮನಿವೇದನೆ, ಜೀವನ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿನ ಆಸಕ್ತಿ, ಪರತತ್ತ್ವಪ್ರಾಪ್ತಿಯಲ್ಲಿ ಔತ್ಸುಕ್ಯ ಪ್ರತಿಯೊಬ್ಬ ಭಾರತೀಯನ ಪ್ರತಿ ಕೆಲಸದಲ್ಲಿಯೂ ಕಂಡುಬರುತ್ತವೆ. ಭಾರತೀಯರು ಅಂದಿನಿಂದಲೂ ಜೀವನ ಸಮಸ್ಯೆಗಳನ್ನು ಬದಿಗೊತ್ತಿ, ಸತ್ಯಾಸತ್ಯಗಳ, ಶ್ರೇಯಃಪ್ರೇಯಗಳ, ನಿಶ್ರೇಯಸ ಅಭ್ಯುದಯಗಳ, ಪ್ರಿಯಾಪ್ರಿಯಗಳ, ಸುಖ-ದುಃಖಾದಿಗಳ ತತ್ತ್ವಾನ್ವೇಷಣದಲ್ಲಿ ತಮ್ಮ ಶಕ್ತಿಯನ್ನೆಲ್ಲ ಸಮರ್ಪಿಸಿದ್ದಾರೆ. ಆದ್ದರಿಂದ ಅನಾದಿಕಾಲದಿಂದಲೂ ನಮ್ಮ ನಾಡಿನಲ್ಲಿ ದಾರ್ಶನಿಕ ವಿಚಾರಧಾರೆಯ ಮಂಜುಳಪ್ರವಾಹ ಹರಿದುಕೊಂಡು ಬರುತ್ತಿವೆ.

ಈ ದಾರ್ಶನಿಕ ಭಾವನೆಯ ಪ್ರಭಾವ ಸಮಗ್ರ ಭಾರತೀಯರ ಮೇಲೆ ಪ್ರಸೃತವಾಯಿತು. ಆದರೂ ಇದರ ಲಾಭವನ್ನು ಎಲ್ಲರೂ ಪಡೆಯಲಾಗಲಿಲ್ಲ. ಇದಕ್ಕೆ ಕಾರಣವಿಷ್ಟೇ. ಯಾವುದೇ ವಿಷಯವನ್ನು ಗ್ರಹಿಸಬೇಕಾದರೂ ಗ್ರಹಣಶಕ್ತಿಯಿರಬೇಕು. ಸೂರ್ಯನ ಕಿರಣಗಳ ಪ್ರಕಾಶ ಮಣಿಯ ಮೇಲಿನಷ್ಟು ಪ್ರಖರವಾಗಿ ಮಣ್ಣಿನ ಮೇಲೆ ಬೀಳುವುದಿಲ್ಲವಷ್ಟೇ! ಅಂತೆಯೇ ಈ ವಿಶ್ವರಂಗದಲ್ಲಿದ್ದುಕೊಂಡೇ ಅಂತಃಕರಣ ವೃತ್ತಿಗನುಗುಣವಾಗಿ ಮಾನವ ತನ್ನ ಜೀವನದ ಗುರಿಯನ್ನು ಮುಟ್ಟಲು ಮುಂದರಿಯುತ್ತಾನೆ. ಈ ಕಾರಣದಿಂದಲೇ ಒಬ್ಬ ಸುಖಿಯಾಗಿ ಇನ್ನೊಬ್ಬ ದುಃಖಿಯಾಗಿ, ಒಬ್ಬ ಶ್ರೀಮಂತನಾಗಿ ಇನ್ನೊಬ್ಬ ಕಡು ಬಡವನಾಗಿ, ಓರ್ವ ಜ್ಞಾನಿ ಮತ್ತೊಬ್ಬ ಅಜ್ಞಾನಿಯಾಗಿ ಕಂಡುಬರುತ್ತಾನೆ. ಇದಕ್ಕೆ ನಾವು "ಕರ್ಮವಾದ"ವನ್ನು ನಂಬಬೇಕಾಗುತ್ತದೆ. ಇದು ಕೇವಲ ನಂಬುಗೆ ಮಾತ್ರವಲ್ಲ. ವಾಸ್ತವಿಕ ಜೀವನದ ಅನುಭವ.

ದರ್ಶನ ಎಂದರೇನು?

ದರ್ಶನ ಶಬ್ದವನ್ನು ಕುರಿತು ಸ್ವಲ್ಪ ವಿಚಾರಿಸುವ. ದೃಶಿರ್-ಪ್ರೇಕ್ಷಣೆ—ಕಾಣುವುದು ಎಂಬರ್ಥದ ಧಾತುವಿನಿಂದ ಈ ಶಬ್ದ ಉಗಮಿಸಿದೆ. ದರ್ಶನ ಶಬ್ದದ ಅರ್ಥ ಯಾವುದರಿಂದ ನೋಡಲಾಗುವುದೋ ಎಂದು. ಇಲ್ಲಿ ಕಾಣಲಾಗುವುದೋ ಎಂಬ ಪದಕ್ಕೆ ಜ್ಞಾನಪ್ರಾಪ್ತಿಯಾಗುವುದೋ ಎಂಬರ್ಥ ಆಗುವುದೋ ಇಲ್ಲವೋ ವಿಚಾರಿಸುವ. ಜ್ಞಾನಪ್ರಾಪ್ತಿಗೆ ಅನೇಕ ಉಪಾಯಗಳುಂಟು. ಅವುಗಳಲ್ಲೆಲ್ಲ ಪ್ರತ್ಯಕ್ಷಕ್ಕೇ ಪ್ರಾಶಸ್ತ್ಯ. ಇಂದ್ರಿಯ ಭೇದದಿಂದ ಪ್ರತ್ಯಕ್ಷವೂ ಐದು ವಿಧ. ಇವುಗಳಲ್ಲಿ ಚಕ್ಷುರಿಂದ್ರಿಯದಿಂದ ಪ್ರಾಪ್ತವಾಗುವ ಜ್ಞಾನ ಎಲ್ಲಕ್ಕೂ ಪ್ರಾಮಾಣಿಕವಾಗಿರುತ್ತದೆ. ಆದ್ದರಿಂದ ಜ್ಞಾನ ಪ್ರಾಮಾಣ್ಯವನ್ನು ಒತ್ತಿ ಹೇಳಬೇಕಾದಾಗಲ್ಲೆಲ್ಲ "ದರ್ಶನ" ಶಬ್ದಪ್ರಯುಕ್ತವಾಗುತ್ತದೆ.

ಕೆಲವು ಮಂದಿ "ಆಧ್ಯಾತ್ಮಿಕ ತತ್ತ್ವಗಳು ಅತಿ ಸೂಕ್ಷ್ಮವಾಗಿರುತ್ತವೆ. ಅವುಗಳನ್ನು ಕಂಗಳಿಂದ ಕಾಣುವುದಸಂಭವ. ಆದ್ದರಿಂದ 'ದರ್ಶನ' ಶಬ್ದಕ್ಕೆ ಕೇವಲ ಜ್ಞಾನಪ್ರಾಪ್ತಿಯೆಂಬರ್ಥವೇ ಸರಿ"ಯೆಂದು ವಾದಿಸುತ್ತಾರೆ. ನಿಜ; ಸ್ವಲ್ಪ ದೂರದ ವರೆಗೆ ಇದು ಸರಿಯೆಂದೇ ತೋರುತ್ತದೆ. ವಸ್ತುತಃ ವಿಚಾರ ಮಾಡಿದರೆ ಸ್ಥೂಲತತ್ತ್ವಗಳನ್ನು ಕಾಣಲು, ಅರಿಯಲು, ದರ್ಶನ ಶಾಸ್ತ್ರಗಳ ಆವಶ್ಯಕವಿಲ್ಲ. ಸ್ಥೂಲಚಕ್ಷುವಿನಿಂದ ಸೂಕ್ಷ್ಮ ಪದಾರ್ಥಗಳನ್ನು ಕಾಣಲು ಆಗುವುದೂ ಇಲ್ಲ. ಆದರೆ ಪ್ರತಿ ಮನುಷ್ಯನಲ್ಲಿಯೂ ಆ ಸೂಕ್ಷ್ಮವಸ್ತುಗಳನ್ನು ಕಾಣಲು ಒಂದು ಸೂಕ್ಷ್ಮವಾದ ಕಣ್ಣು ಇರುತ್ತದೆ. ಅದನ್ನು ತೃತೀಯ ನೇತ್ರವೆನ್ನುತ್ತಾರೆ. ಅನೇಕ ಸಾಧನಗಳಿಂದ ಇದು ತೆರೆಯಲ್ಪಡುತ್ತವೆ. ಪ್ರಜ್ಞಾಚಕ್ಷು ತೆರೆದ ನಂತರ ಅವನಿಗೆ ಅಂಗೈಯಲ್ಲಿನ ಆಮಲಕದಂತೆ ಸೂಕ್ಷ್ಮವಸ್ತುಗಳಲ್ಲಿ ಕಣ್ಣಿಗೆ ಬರುತ್ತದೆ. ಯಾವ ನೇತ್ರರೋಗವೂ ಇದನ್ನು ಬಂಧಿಸಲಾರದು. ಯಾವ ಪರೆಯೂ ಇದನ್ನು ತಡೆಗಟ್ಟಲಾರದು. ದರ್ಶನಗಳ ಅರಿವಿಗೆ ಎರಡೂ ನೇತ್ರಗಳು ಅತ್ಯಾವಶ್ಯಕ. ಮುಖ್ಯವಾಗಿ ನಾವು ಯಾವುದೇ ತತ್ತ್ವಜ್ಞಾನವನ್ನು ಬಯಸಿದರೂ ದರ್ಶನ ಶಾಸ್ತ್ರಗಳು ನಮಗೀಯುತ್ತವೆ.

ನಮ್ಮ ದೈವಿಕ ಪ್ರಪಂಚದಲ್ಲಿ ಅನೇಕ ವಸ್ತುಗಳು ಕಂಗಳಿಗೆ ಗೋಚರವಾಗುತ್ತವೆ. ಆದರೂ ಅಸಾಧಾರಣ ವಸ್ತುವನ್ನು ಕಾಣಲು ನಮ್ಮ ದೃಷ್ಟಿ ಆಕೃಷ್ಟವಾಗುತ್ತದೆ. ಅಂತೆಯೇ ಇಲ್ಲಿಯೂ ಅಸಾಧಾರಣ ಪದಾರ್ಥವೇ ಇಲ್ಲಿಗೂ ಲಕ್ಷ್ಯ. ವ್ಯಾವಹಾರಿಕ ರಂಗದಲ್ಲಿ ನಮ್ಮ ಸವಿಗನುಗುಣವಾಗಿ ವಸ್ತು ಅಸಾಧಾರಣವೇ ಆದರೂ ಎಲ್ಲರಿಗೂ ಅದು ಪ್ರಿಯವಾಗುವುದಿಲ್ಲ. ಆದರೆ ದಾರ್ಶನಿಕರಂಗ ಹಾಗಿರುವುದಿಲ್ಲ. ಜೀವನ ದರ್ಶನಗಳ ಸಂಬಂಧ ಅತ್ಯಂತ ಘನಿಷ್ಠವಾದ್ದು. ಇವೆರಡೂ ಒಂದೇ ಮಾರ್ಗದ ಆಜೀವ ಗೆಳೆಯರು. ಇವೆರಡರ ಅಸ್ತಿತ್ವ ಒಂದೇ ಕಾರಣದ ಮೇಲೆ ನಿರ್ಭರವಾಗಿದೆ. ಇದೇ ಕಾರಣದಿಂದಲೇ ಜೀವನದ ವಿಷಯದಲ್ಲಿನ ಎಲ್ಲ ಮಾತುಗಳೂ ದಾರ್ಶನಿಕ ವಿಷಯದಲ್ಲಿಯೂ ಸಮನ್ವಯವಾಗುತ್ತವೆ. ಪ್ರತಿ ಕೆಲಸಕ್ಕೂ ನಿಯಮಿತವಾದ ಒಂದು ಗುರಿಯಿರುವಂತೆ, ಆ ಗುರಿಯನ್ನು ಮುಟ್ಟಲು ನಾವು ಕೆಲಸ ಮಾಡುವಂತೆ ನಮ್ಮ ಜೀವನದ ಮುಂದೆಯೂ ಒಂದು ಲಕ್ಷ್ಯವಿದೆ, ಗುರಿಯಿದೆ. ನಮ್ಮ ಕೆಲಸಗಳೆಲ್ಲ ಅದೇ ಗುರಿಯನ್ನು ಸೇರುವುದೇ ಆಗಿರುತ್ತದೆ.

ವಿಶ್ವವಿಧಾತನ ಸೃಷ್ಟಿಯಲ್ಲಿನ ಪ್ರತಿಯೊಂದು ಪ್ರಾಣಿಯೂ ತನ್ನ ಕರ್ಮಕ್ಕನುಸಾರ ಮಾತೃಗರ್ಭದಲ್ಲಿ ಪ್ರವೇಶಿಸುತ್ತದೆ. ಪ್ರವೇಶಿಸುತ್ತಲೇ ತೃತೀಯ ನೇತ್ರಕ್ಕೇ

ನಾಮಾಂತರ "ಸುಖಂ ಮೇ ಭೂಯಾತ್" "ದುಃಖಂ ದೂರಂ ಯಾಯಾತ್" ಎಂಬ ಪ್ರವೃತ್ತಿಯುಂಟಾಗುತ್ತವೆ. ಜೀವ ತನಗೆ ಮಿಗಿಲಾದ ಆನಂದ ದೊರೆಯುವ ಕೆಲಸವನ್ನೇ ಎಸಗುತ್ತದೆ. ಆನಂದ ಹೊಂದಲೇ ಹಾತೊರೆಯುತ್ತದೆ. ಜಿಜ್ಞಾಸು ಒಬ್ಬ ರೋಗಿಯಂತೆ. ರೋಗಿ ತನ್ನ ರೋಗನಿವೃತ್ತಿಗೇ ಬೇಕಾದ ಔಷಧಿಯನ್ನೇ ಸೇವಿಸುತ್ತಾನೆ. ಇದೇ ರೀತಿಯಾಗಿ ಜೀವಮಾತ್ರನೂ ದುಃಖದಿಂದ ಬಿಡುಗಡೆ ಹೊಂದಿ ಆನಂದವನ್ನು ಪಡೆಯಲು ಸದಾಸರ್ವದಾ ತೊಳಲಾಡುತ್ತಿರುತ್ತಾನೆ. ದುಃಖದಿಂದ ಬಿಡುಗಡೆಯಾಗುವ ವರೆಗೆ, ಶಾಶ್ವತವಾದ ಪರಮಾನಂದ ಪ್ರಾಪ್ತಿಯಾಗುವ ವರೆಗೆ ಈ ಭವಚಕ್ರದಲ್ಲಿ ಸಿಲುಕಿ ತೊಳಲಾಡುತ್ತಲೇ ಇರುತ್ತಾನೆ. ಇದನ್ನೇ ಆಚಾರ್ಯರು

"ಪುನರಪಿ ಮರಣಂ ಪುನರಪಿ ಜನನಂ
ಪುನರಪಿ ಜನನೀ ಜಠರೇ ಶಯನಂ
ಇಹಸಂಸಾರೇ ಬಹುದುಸ್ತಾರೇ ಕೃಪಯಾ
ಪಾರೇ ಪಾಹಿ ಮುರಾರೇ"

ಎಂದಿದ್ದಾರೆ.

ಈ ಮಾತೇ ದರ್ಶನ ಶಾಸ್ತ್ರಗಳಿಗೂ ಸಮನ್ವಯವಾಗುತ್ತದೆ. ದರ್ಶನ ಶಾಸ್ತ್ರಕ್ಕನುಗುಣವಾಗಿ ಜೀವ ಪ್ರತಿಯೊಂದು ದರ್ಶನ ಶಾಸ್ತ್ರದ ತತ್ತ್ವವನ್ನೂ ಅರಿಯಲು ಪರಮಾನಂದವನ್ನೂ ಹೊಂದಲು ಹುಡುಕುತ್ತಲೇ ಇರುತ್ತದೆ. ಯಾವ ದರ್ಶನದಲ್ಲಿ ತತ್ತ್ವಜ್ಞಾನವುಂಟಾಗಿ ಪರಮಾನಂದ ಪ್ರಾಪ್ತಿಯುಂಟಾಗುತ್ತದೆಯೋ ಅಲ್ಲಿಯೇ ನೆಲೆಸಿ ಬಿಡುತ್ತದೆ. ಜೀವಿ ಆನಂದಮಯನಾಗುತ್ತಾನೆ. ಇದೇ ಜೀವ ಪರಮಾತ್ಮದ ತಾದಾತ್ಮ್ಯ. ನದಿಯಲ್ಲಿ ನೀರು ತುಂಬುವಾಗ ಘಟದಲ್ಲಿ ನೀರು ಬೇರೆ ಕಾಣುತ್ತದೆ. ಘಟ ಒಡೆದರೆ ನೀರೆಲ್ಲ ಒಂದೇ ಆಗುವುದಷ್ಟೆ. ಮನೆಯ ನಾಲ್ಕು ಗೋಡೆಗಳೂ ಕುಸಿದಾಗ ಮನೆಯ ಆಕಾಶ ಮನೆಯ ಹೊರ ಆಕಾಶದಲ್ಲಿ ಲೀನವಾಗುವಂತೆ ಜೀವ ಪರಮಾತ್ಮರೊಂದಾಗುತ್ತಾರೆ. ಆಗ ವಿಶ್ವದಲ್ಲೆಲ್ಲ ಪೂರ್ಣ ಚೈತನ್ಯವೇ ಕಾಣುತ್ತದೆ. ಇಂತು ಜೀವನ ದರ್ಶನಗಳ ಗುರಿ ದುಃಖನಿವೃತ್ತಿ ಮತ್ತು ಪರಮಾನಂದಪ್ರಾಪ್ತಿ. ಇದುಕಾರಣವೇ ಸೃಷ್ಟಿ ಸ್ಥಿತಿ ಲಯ. ಇದನ್ನೇ ಪರಮಾತ್ಮ, ಪರಬ್ರಹ್ಮ, ಬ್ರಹ್ಮವೆಂದು ಕರೆಯುತ್ತಾರೆ,

ಆದ್ದರಿಂದ ಜಿಜ್ಞಾಸು ಜ್ಞಾನಿಯೆಡೆಗೆ ಪ್ರಣಿಪಾತನಾಗಿ ಪ್ರಶ್ನಿಸಿದಾಗ ಆತ್ಮವನ್ನು ಕಾಣುವಂತೆ ಹೇಳಿ ಆತ್ಮಪ್ರಾಪ್ತಿಗೆ ಶ್ರವಣ, ಮನನ, ನಿಧಿಧ್ಯಾಸನವೆಂಬ ಉಪಾಯಗಳನ್ನು ಆತನು ಬೋಧಿಸುತ್ತಾನೆ. ಶ್ರುತಿ ವಾಕ್ಯಗಳಿಂದ ಜಾನಿಯ ಮೂಲಕ ಆತ್ಮ ವಿಷಯದ ಎಲ್ಲ ಮಾತುಗಳನ್ನೂ ಆಲಿಸಬೇಕು; ಆಲಿಸಿದ ವಿಷಯಗಳ ತಾರ್ಕಿಕ ಯುಕ್ತಿಗಳಿಂದ ಮನನ ಮಾಡಬೇಕು. ಶ್ರವಣ ಮನನಗಳೆರಡರಿಂದ ಒಂದೇ ಸಿದ್ಧಾಂತದ ಅರಿವುಂಟಾದರೆ ಜ್ಞಾನಿಯ ಉಪದೇಶದಲ್ಲಿ ಹೆಚ್ಚು ನಂಬುಗೆಯುಂಟಾಗುತ್ತದೆ. ಪ್ರಮಾಣಗಳಿಗೆ ತರ್ಕ ಸಹಾಯಕವಾಗುತ್ತದೆ. ಶ್ರವಣಮನನದಿಂದ ಸಿದ್ಧವಾದ ಸಿದ್ಧಾಂತವನ್ನು ನಿಧಿಧ್ಯಾಸನ ಮಾಡಬೇಕು. ಅರ್ಥಾತ್ ಅದನ್ನು ಸೂಕ್ಷ್ಮವಾಗಿ ಕಾಣಲು ಯತ್ನಿಸಬೇಕು. ಈ ಮೂರರಿಂದಲೂ ಒಂದೇ ತತ್ತ್ವಬೋಧೆಯಾದರೆ ಅದನ್ನೇ ಪ್ರಾಮಾಣಿಕವೆಂದೊಪ್ಪಬೇಕು. ಆನಂದ ಜೀವಿಗೆ ಜನ್ಮದಿಂದ ಮರಣದ ವರೆಗೆ ದೊರಕಿಯೇ ದೊರಕುತ್ತದೆ. ಅದನ್ನು ಸ್ಥಿರವಾಗಿಟ್ಟುಕೊಳ್ಳುವ ಸಾಮರ್ಥ್ಯವಿರುವುದಿಲ್ಲ.

ಭಾರತೀಯ ದರ್ಶನಶಾಸ್ತ್ರ ನಮ್ಮನ್ನು ಸಂಸಾರದ ದುಃಖಮಯಜೀವನದಿಂದ ವಿರಕ್ತರನ್ನಾಗಿ ಮಾಡಿ ಭವಿಷ್ಯದ ಮಂಗಳಮಯ ಪ್ರಕಾಶದಲ್ಲಿ ಪರಮಾನಂದ ಪಥದಲ್ಲಿ ಪ್ರೇರಿಸುತ್ತದೆ. ಆ ಪಥದಲ್ಲಿ ಮುಂದುವರಿದಂತೆ ನಮ್ಮ ಮಾನಸಿಕ ಕಳಂಕವೆಲ್ಲ ದೂರವಾಗಿ ಜ್ಞಾನ ವಿಕಸಿತವಾಗುತ್ತದೆ. ಇದನ್ನರಿತೇ ಜ್ಞಾನಿಗಳು ಮರಣವನ್ನು ಮಂಗಳವೆಂದು ಭಾವಿಸುತ್ತಾರೆ. ಸಾಮಾನ್ಯ ಜನರೂ, ಈ ಜನ್ಮದಲ್ಲಿ ಆದುದಾಯಿತು, ಮುಂದಿನ ಜನ್ಮದಲ್ಲಿ ಇದಕ್ಕಿಂತ ಮಿಗಿಲಾದ ಸುಖವನ್ನು ಅನುಭವಿಸುವ ಎಂದು ನಂಬುತ್ತಾರೆ. ಇವರಿಗೂ ಸಾವಿನ ಹೆದರಿಕೆಯಿಲ್ಲ. ಸಂಸಾರದಿಂದ ವಿರಕ್ತಿಯುಂಟಾದ ಮಾತ್ರಕ್ಕೇ ಗುರಿಯನ್ನು ಮುಟ್ಟಲಾಗುವುದಿಲ್ಲ. ಇಂದ್ರಿಯ ವೃತ್ತಿಗಳನ್ನು ಸಂಸಾರದಿಂದ ದೂರಸರಿಸಿ ಶ್ರವಣ ಮನನ ನಿದಿಧ್ಯಾಸನದ ಮೂಲಕ ಪರಮಾತ್ಮನಲ್ಲಿ ನಿಲ್ಲಿಸಿ ಜ್ಞಾನಮಾರ್ಗದಲ್ಲಿ ಮುಂದುವರಿಯಬೇಕು. ಇದೇ ಜಿಜ್ಞಾಸುವಿನ ಕರ್ತವ್ಯ. ಸಂಸಾರ ನಶ್ವರ ದುಃಖಮಯ. ಈ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲ. ಆದರೆ ದರ್ಶನಶಾಸ್ತ್ರದ ಮಾರ್ಗದಲ್ಲಿ ನಾವು ನಡೆದು ಹೋದರೆ ನಮ್ಮ ಭವಿಷ್ಯ ಉಜ್ವಲ

ವಾಗಿ ಆನಂದಮಯವಾಗುವದರಲ್ಲಿ ಸಂಶಯವಿಲ್ಲ. ಈ ಮಾರ್ಗದಲ್ಲಿ ನಿರಾಶೆಗೆಡೆಯಿಲ್ಲ. ಸಾಧನೆಯಿಂದ ಗಳಿಸಿದ ಜೀವನ ಜ್ಞಾನ, ಸಾವಿನಿಂದ ಅಳಿಯುವುದಿಲ್ಲ. ಅದು ಜೀವಾತ್ಮನೊಡನೆಯೇ ಇನ್ನೊಂದು ಶರೀರದಲ್ಲಿ ಪ್ರವೇಶಿಸುತ್ತದೆ. ಇನ್ನೊಂದು ಜನ್ಮದಲ್ಲಿ ಈ ಜ್ಞಾನದ ಮೂಲಕ ಇನ್ನೂ ಮುಂದುವರಿದು ಹೋಗುತ್ತದೆ. ಜ್ಞಾನಿಗಳಿಗೆ ಈ ವಿಷಯ ಅನುಭವಗಮ್ಯವೇ. ಗೀತಾಚಾರ್ಯನೂ ಇದನ್ನೇ ಘೋಷಿಸಿದ್ದಾನೆ.

"ನಹಿಕಲ್ಯಾಣಕೃತ್ ಕಶ್ಚಿದ್ದುರ್ಗತಿಂತಾತಗಚ್ಛತೀ"
"ತತ್ರತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಂ
ಯತತೇಚ ತತೋಭೂಯಃ ಸಂಸಿದ್ಧೌ ಕುರುನಂದನ"

ಭಾರತೀಯ ದರ್ಶನದಲ್ಲಿ ಮೂಢವಾದ ನಂಬಿಕೆ (Blind-belief) ಯಿದೆಯೆಂದೂ, ಭಾರತೀಯ ದಾರ್ಶನಿಕರು ಕಣ್ಣುಮುಚ್ಚಿಕೊಂಡು ವೇದೋಪನಿಷತ್ತುಗಳಲ್ಲಿ ನುಡಿದುದನ್ನೇ ಸರಿಯೆಂದೂ ಒಪ್ಪಿಬಿಡುತ್ತಾರೆ. ಇದು ಸರಿಯಲ್ಲವೆಂದೂ ಕೆಲವರು ಪ್ರತಿಭಟಿಸುತ್ತಾರೆ. ಇದು ಯುಕ್ತಿ ಯಕ್ತವಲ್ಲವೆಂದು ನಾವು ಒತ್ತಿ ಹೇಳುತ್ತೇವೆ. ದಾರ್ಶನಿಕ ತತ್ತ್ವಗಳನ್ನರಿಯುವ ಉಪಾಯಗಳಲ್ಲಿ ಎರಡನೆಯದೇ ಮನನ. ಮನನದ ಕ್ಷೇತ್ರ ಸಂಕುಚಿತವಾಗುವುದೇ? ಎಂದಿಗೂ ಇಲ್ಲ. ಶೃತಿಗಳು ಮತ್ತು ಜ್ಞಾನಿಗಳು ತಾರ್ಕಿಕಯುಕ್ತಿಗಳಿಂದ ನಿರ್ಣಯಿಸದೇ ಯಾವ ಸಿದ್ಧಾಂತವನ್ನೂ ಅಂಗೀಕರಿಸಕೂಡದೆಂದು ಘೋಷಿಸಿದ್ದಾರೆ.

ವೇದಗಳು, ಸ್ಮೃತಿಗಳು, ಮತ್ತು ಶಾಸ್ತ್ರಗಳು ಭಾರತೀಯ ಜ್ಞಾನದ ನಿಧಿಗಳು. ವಾತಾಂಬುಪರ್ಣಾಹಾರಿಗಳಾದ ನಮ್ಮ ಋಷಿಗಳು ಚಿರಕಾಲದ ತಪಸ್ಸಿನ ಫಲವಾಗಿ ಅಲೌಕಿಕ ಶಕ್ತಿಯಿಂದ ಕಂಡ ತತ್ತ್ವಗಳನ್ನು ಜಿಜ್ಞಾಸುಗಳ ಉಪಕಾರಕ್ಕಾಗಿ ಶಾಸ್ತ್ರಗಳ ರೂಪದಲ್ಲಿ ರಚಿಸಿದರು. ಆದ್ದರಿಂದ ಇವುಗಳನ್ನು ಪ್ರಮಾಣವೆಂದು ಒಪ್ಪಿ, ನಾವು ನಡೆದರೆ ಲಾಭವುಂಟು. ಜಿಜ್ಞಾಸುವಿಗೆ ಇದರಿಂದ ಸ್ವಲ್ಪ ದೂರದ ವರೆಗೆ ಆಸರೆ ಸಿಗುವುದು. ಆದರೆ ಇಷ್ಟು ಮಾತ್ರ ನಿಶ್ಚಯ—ಋಷಿಗಳ ಸಿದ್ಧಾಂತಗಳು ನಮಗೆ ದಾರಿಗಾಣಿಸುತ್ತವೆ. ಆ ಮಾರ್ಗದಲ್ಲಿ ನಡೆದು ಪರಮಾನಂದದ ಅನುಭವ ನಾವು ಪಡೆದಂದು ಜ್ಞಾನಪ್ರಾಪ್ತಿಯಾಗುವುದು. ಶೃತಿಗಳಲ್ಲಿ 'ಆತ್ಮ' ವ್ಯಾಪಕವೆಂದೂ ನಿತ್ಯಚಿತ್ ಮತ್ತು ಆನಂದವೆಂದೂ ಹೇಳಲ್ಪಟ್ಟಿದೆ. ಜಿಜ್ಞಾಸು ಇದನ್ನು ಸತ್ಯವೆಂದು ಭಾವಿಸಿದರೆ ಮಾತ್ರ ಅವನಿಗೆ ವಾಸ್ತವಿಕ ಲಾಭವುಂಟಾಗಲಾರದು. ಅವನು ತನ್ನ ದಿವ್ಯದೃಷ್ಟಿಯಿಂದ ಇದನ್ನು ಕಾಣಬೇಕು. ಆಗ ಮಾತ್ರ ಸಾಧ್ಯ. ಸಿದ್ಧಾಂತಗಳನ್ನಂಗೀಕರಿಸಿ ತತ್ತ್ವಾನ್ವೇಷಣೆಗೆ ಹೊರಟರೆ ಅವನಿಗೆ ತಾನು ಸರಿಯಾದ ಮಾರ್ಗದಲ್ಲಿರುವೆನೋ ಇಲ್ಲವೋ ಎಲ್ಲಿನ ವರೆಗೆ ಬಂದಿದ್ದೇನೆಂಬರಿವುಂಟಾಗುತ್ತದೆ. ಇಲ್ಲವಾದರೆ ಗಾಢಾಂಧಕಾರದಲ್ಲಿ ದಾರಿಗಾಣದೆ ತೊಳಲಾಡಬೇಕಾದೀತು. ಇಂತು ಭಾರತೀಯ ದರ್ಶನ ಪ್ರಗತೀಶಿಲವಾದ್ದು. ಇದರಲ್ಲಿ ಯಾವ ಸಂಶಯಕ್ಕೂ ಎಡೆಯಿಲ್ಲ.

ದಾರ್ಶನಿಕ ಮನೋಭಾವ

ಭಾರತೀಯ ಜೀವನದರ್ಶನಗಳ ಒಂದು ರೂಪನ್ನು ಓದುಗರ ಮುಂದೆ ಇಟ್ಟಿದ್ದೇವೆ. ಇನ್ನೊಂದು ರೂಪನ್ನು ಸೂಕ್ಷ್ಮವಾಗಿ ಇಟ್ಟರೆ ಅಸಂಗತವಾಗಲಾರದು.

ತತ್ತ್ವವನ್ನು ಕಂಡುಹಿಡಿಯಬೇಕೆಂಬ ಮನೋಭಾವ ನಮ್ಮ ಭಾರತ ದೇಶದಲ್ಲಿ ಅತಿ ಪ್ರಾಚೀನವಾದ ವೈದಿಕಯುಗದಿಂದಲೂ ಬೆಳೆದುಕೊಂಡು ಬಂದಿದೆ. ಭಾರತೀಯರ ಜೀವನ ತಾತ್ತ್ವಿಕಮಯ ಮತ್ತು ದಾರ್ಶನಿಕ. ಅಂದಿನ ಆ ತಾತ್ತ್ವಿಕ ಮತ್ತು ದಾರ್ಶನಿಕ ಮನೋಭಾವನೆಯು ನಮ್ಮಿಂದ ದೂರ ಸರಿದುಹೋದುದರಿಂದಲೇ ಇಂದು ನಮಗೆ ಈ ಸ್ಥಿತಿ ಬಂದಿದೆ. ದಾರ್ಶನಿಕ ಗ್ರಂಥಗಳ ಮೇಲಿನ ಅನಾದರಭಾವನೇ ನಮ್ಮನ್ನು ಇಂದು ಈ ಸ್ಥಿತಿಗೆ ತಂದಿದೆ. ಅಸ್ತು!

ಭಾರತೀಯರಾದ ನಮ್ಮ ತಾತ್ತ್ವಿಕ ಚಿಂತನದಲ್ಲಿ ಎರಡು ರೀತಿಯ ಪ್ರವೃತ್ತಿಗಳು, ಎರಡು ಲಕ್ಷ್ಯಗಳು ಕಂಡುಬರುತ್ತವೆ. ಮೊದಲನೆಯ ಪ್ರವೃತ್ತಿ ಪ್ರತಿಭೆಯ ಮೂಲಕವಾದ್ದು, ಎರಡನೆಯದು ತಾರ್ಕಿಕವಾದ್ದು. ಮೊದಲನೆಯದಾದ ಪ್ರತಿಭೆ ಪ್ರಜ್ಞೆಯ ಬಲದಿಂದ ತತ್ತ್ವವಿವೇಚನೆಯಲ್ಲಿ ಸಫಲವಾಗುತ್ತದೆ. ಪ್ರತಿಪಾದನೆಯ ಶಕ್ತಿಯಿಂದ ತಾತ್ತ್ವಿಕ ಸವಿಾಕ್ಷೆಯಿಂದ ಎರಡನೆಯ ಪ್ರವೃತ್ತಿ ಕೃತಕೃತ್ಯವಾಗುತ್ತದೆ. ಇವೆರಡನ್ನೂ ನಾವು ಕ್ರಮವಾಗಿ Intuitionanic and Rationalistic ಎಂದು ಕರೆಯಬಹುದು. ಪ್ರಧಾನ ಲಕ್ಷ್ಯಗಳಲ್ಲಿ ಒಂದು ಧರ್ಮಸಂಗ್ರಹ; ಇನ್ನೊಂದು ಬ್ರಹ್ಮಸಾಕ್ಷಾತ್ಕಾರ. ಋಗ್ವೇದದ ಋಷಿಗಳೋರ್ವರು ಪ್ರತಿಭಾಶಕ್ತಿಯ

ಪ್ರಭಾವದಿಂದ ವಿಶ್ವದ ಮೂಲತತ್ತ್ವವನ್ನು ವಿವೇಚಿಸುತ್ತಾ ಅದ್ವೈತತತ್ತ್ವದ ಅನ್ವೇಷಣದಿಂದ ಸಮರ್ಥರಾಗುವಂತೆ ಹೇಳಿದ್ದಾರೆ. [ಅನೀದವಾತಂ ಸ್ವಧಯಾ ತದೇಕಂ ೧೦-೧೨೯-೩] ಆ ಸಮಯದಲ್ಲಿ ಒಂದೇ ವಸ್ತುವಾಯುವಿಲ್ಲದೇ ಉಸಿರೆಳೆದುಕೊಳ್ಳುತ್ತಿತ್ತು. ಅದರ ಹೊರತು ಬೇರೆ ಯಾವುದೂ ಇರಲೇ ಇಲ್ಲವೆಂದು ಒಬ್ಬ ಋಷಿಯೂ, ಅದೇ ಯುಗದ ಇನ್ನೊಬ್ಬ ಋಷಿ ತಾರ್ಕಿಕ ಬುದ್ಧಿಯನ್ನುಪಯೋಗಿಸಿ–"ಸಂಗಚ್ಛಧ್ವಂ ಸಂವದಧ್ವಂ ಸಂವೋಮನಾಂಸಿ ಜಾನತಾಂ" [ಪರಸ್ಪರ ಐಕಮತ್ಯ ಬೆಳೆಸಿ, ವಿಷಯವನ್ನು ಚೆನ್ನಾಗಿ ವಿವೇಚಿಸಿ ಒಬ್ಬರ ಮನಸ್ಸನ್ನು ಇನ್ನೊಬ್ಬರು ಅರಿಯಿರಿ.] ಎಂದು ಜನತೆಯನ್ನು ಪ್ರೋತ್ಸಾಹಿಸುತ್ತಿದ್ದಾನೆ. ಇಂತು ವೈದಿಕ ಯುಗದಲ್ಲಿ ಈ ಎರಡು ರೀತಿಯ ಪ್ರಭಾವಗಳು ಜನತೆಯ ಮೇಲೆ ಬಿದ್ದಿರುವುದು ಸ್ಪಷ್ಟವಾಗಿ ತೋರುತ್ತದೆ. ವೈದಿಕ ಕರ್ಮಕಾಂಡದ ಮೇಲೆ ತಾರ್ಕಿಕ ಪ್ರವೃತ್ತಿಯ ಪ್ರಭಾವ ಪ್ರಸೃತವಾಗಲು ಕರ್ಮಮೀಮಾಂಸೆಯ ಉಗಮವಾಯಿತು. ನಮ್ಮ ಆದಿ ದಾರ್ಶನಿಕರೇ ಮೀಮಾಂಸಕರು. ಇದೇ ಮೊದಲಿನ ದರ್ಶನ. ಈ ದರ್ಶನದಲ್ಲಿ ಯಾಜ್ಞಿಕ ವಿಷಯಗಳನ್ನು ವಿಮರ್ಶಿಸಿ ವ್ಯವಸ್ಥೆ ಮಾಡಿದ್ದಾರೆ. ವೇದಗಳಲ್ಲಿ ಯಾಜ್ಞಿಕ ಪ್ರಕ್ರಿಯೆಗಳನ್ನು ಕಂಡಾಗ ಅನೇಕ ಪರಸ್ಪರ ವಿರುದ್ಧಾಂಶಗಳು ಕಂಡುಬರುತ್ತವೆ. ಇವೆಲ್ಲ ವಿಷಯಗಳನ್ನು ಪರ್ಯಾಲೋಚಿಸಿ ತಾರ್ಕಿಕ ದೃಷ್ಟಿಯಿಂದ ಪೂರ್ವಮೀಮಾಂಸಾ ದರ್ಶನಕ್ಕೆ ಜನ್ಮವಿತ್ತರು. ಇದೇ ಕಾರಣದಿಂದ ಮೀಮಾಂಸಾಸೂತ್ರಗಳನ್ನು ನ್ಯಾಯಗಳೆಂದು ಕರೆದಿದ್ದಾರೆ. ಪ್ರಜ್ಞೆಯ ಮೂಲಕವಾದ ಮತ್ತು ತಾರ್ಕಿಕ ಮೂಲಕವಾದ ಪ್ರವೃತ್ತಿಗಳು ಪರಸ್ಪರ ಬೆರೆತು, ಆತ್ಮವಿಷಯಕವಾದ ಉಪನಿಷತ್ತಿನ ತತ್ತ್ವಜ್ಞಾನಸ್ಪಷ್ಟವಾಗಿ ಬೆಳಕಿಗೆ ಬಂತು. ಆತ್ಮಪರಮಾತ್ಮರ ಐಕ್ಯತೆಯನ್ನು ಸಾಧಿಸಿ ಕೊಡುವ ವೇದಾಂತದಲ್ಲಿ ಉಪನಿಷತ್ತುಗಳ ಅರಿವು ಪರ್ಯವಸಾನವಾಯಿತು.

ಪೂರ್ವ ಮೀಮಾಂಸೆ ತಾರ್ಕಿಕ ಪ್ರವೃತ್ತಿಯನ್ನೂ ಉತ್ತರ ಮೀಮಾಂಸೆ ಪ್ರತಿಭೆಯ ಪ್ರವೃತ್ತಿಯನ್ನೂ ಅವಲಂಬಿಸಿದೆ. ಉಪನಿಷತ್ತಿನ ಯುಗದಲ್ಲಿಯೂ ಶುದ್ಧವಾದ ತಾರ್ಕಿಕ ಪ್ರವೃತ್ತಿಯಿಂದಲೂ ತತ್ತ್ವ ಜಿಜ್ಞಾಸೆಯಾಗುತ್ತಲೇ ಇತ್ತು. ಪ್ರಕೃತಿಪುರುಷ ಪ್ರಧಾನವಾದ ಸಾಂಖ್ಯದರ್ಶನ, ವ್ಯಾವಹಾರಿಕ ಯೋಗ, ಬಹುತ್ವವಾದ ವೈಶೇಷಿಕ, ಸಮಾನತಂತ್ರವಾದ ನ್ಯಾಯದರ್ಶನ ಇತ್ಯಾದಿಗಳ ಉದ್ಗಮವಾಯಿತು. ಮತ್ತು ಕೆಲವು ದಾರ್ಶನಿಕರು ಉಪನಿಷತ್ತಿನ ತತ್ತ್ವಗಳಿಗೆ ಹೆಚ್ಚು ಗಮನ ಕೊಡದೆ ಸ್ವತಂತ್ರವಾದ ದಾರ್ಶನಿಕ ಚಿಂತನ ನಡೆಸಿದರು. ಇದರ ಪರಿಣಾಮಸ್ವರೂಪವಾಗಿ ಜೈನರ ಸ್ಯಾದ್ವಾದ, ಬೌದ್ಧರ ಶೂನ್ಯ ಮತ್ತು ವಿಜ್ಞಾನವಾದಗಳು, ಚಾರ್ವಾಕರ ಭೂತಾತ್ಮವಾದಗಳುಂಟಾದವು. ಆದ್ದರಿಂದ ನಾವು ಭಾರತೀಯ ದರ್ಶನಗಳೆಲ್ಲ ಉಪನಿಷತ್ತುಗಳಿಂದಲೇ ವಿಕಸಿತವಾಗಿದೆಯೆಂದರೆ ತಪ್ಪಾಗಲಾರದು.

ದಾರ್ಶನಿಕ ಮೂಲಸ್ರೋತಸ್ಸು (ಋಗ್ವೇದ) ಸಂಹಿತೆಗಳಲ್ಲಿಯೇ ಕಂಡುಬರುತ್ತದೆ. ಇಂದು ನಮಗೆ ಬೋಧಿಸುತ್ತಿರುವ ದಾರ್ಶನಿಕ ವಿಕಾಸಕ್ರಮ ಸರಿಯಲ್ಲ. ಪಾಶ್ಚಾತ್ಯ ಪಂಡಿತರು ಸಂಹಿತೆಗಳಲ್ಲಿ ಕೇವಲ ಕರ್ಮಕಾಂಡವೇ ಪ್ರತಿಪಾದಿತವಾಗಿದೆಯೆಂದು ವಾದಿಸುತ್ತಾರೆ. ಕರ್ಮಕಾಂಡಕ್ಕೆ ಪ್ರತಿಯಾಗಿ ಜ್ಞಾನಕಾಂಡವು ಉಪನಿಷತ್ ಯುಗದಲ್ಲಿಯೇ ಬೆಳಕಿಗೆ ಬಂತೆಂದು ಅವರ ಅಭಿಪ್ರಾಯ. ಆದರೆ ಉಪನಿಷತ್ತುಗಳನ್ನು ಪರಿಶೀಲಿಸಿದಾಗ ಈ ಭಾವನೆ ತಾನೇ ದೂರವಾಗುತ್ತದೆ.

ವೇದಾಂತದಲ್ಲಿ ನಾಮರೂಪಗಳ ಕಲ್ಪನೆಗೆ ಮಿಗಿಲಾದ ಮಹತ್ತ್ವವಿದೆ. ಬೌದ್ಧ ದರ್ಶನದಲ್ಲಿ ಇದು ಒಂದು ವಿಶಿಷ್ಟವಾದ ರೂಪವನ್ನು ತಾಳಿದೆ. "ಸ್ಕಂಭ" ಪದ ಆತ್ಮತತ್ತ್ವದ ಪರ್ಯಾಯವಾಚಕ. ಶೃತಿಯೂ ಇವನ್ನೇ ಸಾರಿ ಹೇಳುತ್ತಿದೆ.

ಅಕಾಮೋ ಧೀರೋ ಅಮೃತಃ ಸ್ವಯಂಭೂಃ
ರಸೇನತೃಪ್ತೋನ ಕುತಶ್ಚನೋನಃ ।
ತಮೇವ ವಿದ್ವಾನ್ ನ ಬಿಭಾಯ ಮೃತ್ಯೋರಾತ್ಮಾನಂ
ಧೀರಮಜರಂ ಯುವಾನಂ ॥

ಅಥರ್ವ ೧೦–೮–೪೪

ಈ ಪ್ರಮಾಣ ಶೃತಿಗಳಲ್ಲಿನ ವಿಷಯಗಳನ್ನೇ ಉಪನಿಷತ್ತುಗಳು ಪೋಷಿಸುತ್ತಿವೆ. ಆದ್ದರಿಂದ ಜ್ಞಾನಕಾಂಡದ ಅವತಾರ ಉಪನಿಷತ್ತುಗಳಿಂದಲೇ ಎಂಬ ಭಾವನೆಯನ್ನು ಸಾಧ್ಯವಾದಷ್ಟು ಬೇಗ ದೂರಮಾಡುವುದೊಳ್ಳಿತು.

ಉಪನಿಷತ್ತುಗಳ ಹಿರಿಮೆ

ವೈದಿಕ ಯುಗದ ಮಹರ್ಷಿಗಳು ತಮ್ಮ ಅಂತ

ರಿಕ ಚಕ್ಷುಗಳಿಂದ ಕಂಡು ಶಿಷ್ಯರಿಗೆ ಬೋಧಿಸಿದ ಅನು ಭೂತಿಗಳ ಸಮುದಾಯವೇ ಉಪನಿಷತ್ತು. ವೇದ ಪುರುಷನ ಅನುಗ್ರಹದಿಂದ ಪ್ರಾಪ್ತವಾದ ಜ್ಞಾನಿಗಳೆಡೆಗೆ ಜಿಜ್ಞಾಸುಗಳಾದ ಶಿಷ್ಯರು ಪ್ರಣಿಪಾತರಾಗಿ ಸಮಿತ್ಪಾಣಿ ಗಳಾಗಿ ಬಂದು ತಮ್ಮ ಸಂಶಯಗಳನ್ನು ಅವರ ಮುಂದೆ ಇಡುತ್ತಿದ್ದರು. ಅವರು ತರ್ಕವಿತರ್ಕಗಳಿಂದ ಶಿಷ್ಯರ ಎಲ್ಲ ರೀತಿಯ ಸಂಶಯಗಳನ್ನೂ ದೂರ ಮಾಡಿ ವಾಸ್ತ ವಿಕ ತತ್ತ್ವಜ್ಞಾನವನ್ನು ಮಾಡಿ ಕೊಡುತ್ತಿದ್ದರು.

ಶೃಂಖಲಾಬದ್ಧವಾಗಿ

ಉಪನಿಷತ್ಕಾಲದಲ್ಲಿ ಗುರುಶಿಷ್ಯರಿಗೆ (ಜ್ಞಾನಿ ಜಿಜ್ಞಾಸುಗಳಿಗೆ) ಪ್ರಶ್ನೋತ್ತರಗಳು ಒಂದು ಕ್ರಮವಾಗಿ ಆಗುತ್ತಿರಲಿಲ್ಲ. ಆದ್ದರಿಂದಲೇ ಉಪನಿಷತ್ತಿನ ಮುಂ ದಿನ ಸಾಹಿತ್ಯದಲ್ಲಿನಂತೆ ವಿಚಾರಲಹರಿಯು ಕಂಡು ಬರುವುದಿಲ್ಲ. ಎಲ್ಲೆಡೆಗಳಲ್ಲಿಯೂ ಮೂಲತತ್ತ್ವಗಳು ಮಾತ್ರ ಕಂಡುಬರುತ್ತವೆ.

ಉಪನಿಷತ್ತುಗಳು ವೇದಗಳಿಂದುಗಮಿಸಿದ ಆಧ್ಯಾ ತ್ಮಿಕ ಸ್ರೋತಸ್ವಿನಿಗಳು. ಇಲ್ಲಿಂದ ಜ್ಞಾನಸರಿತೆಗಳು ಪ್ರವಹಿಸಿ, ಪವಿತ್ರ ಭಾರತವರ್ಷದಲ್ಲಿನ ಜನತೆಯ ಮಾನಸ ಮಂದಿರಗಳನ್ನು ಪುನೀತಗೊಳಿಸಿ ಸಮಗ್ರ ವಿಶ್ವದಲ್ಲಿ ಪ್ರವಹಿಸುತ್ತಿವೆ. ವಿಶ್ವದ ಪ್ರಸಿದ್ಧ ದಾರ್ಶನಿ ಕರ ಮೇಲೆ ಮಹತ್ತರ ಪ್ರಭಾವ ಬೀರಿದೆ. ಮಹಾ ದಾರ್ಶನಿಕ ಶೋಪೆನ್ ಹಾವೆರ್ ತಮ್ಮ ಗುರುಗಳಲ್ಲಿ ಗುರುವನ್ನಾಗಿ ಭಾವಿಸಿ ಗೌರವಿಸಿದ್ದಾನೆ. ಯುನಾನ್ ದಾರ್ಶನಿಕ ಪಯಿಥೊಗೋರಸ್ ಮತ್ತು ಮಧ್ಯ ಯು ಗದ ನಿಯೋಪ್ಲೇಟೋನಿಜಂ ಮೇಲೂ ಉಪನಿಷತ್ತು ಗಳ ಪ್ರಭಾವ ಪ್ರಸೃತವಾಗದೇ ಇಲ್ಲ. ಬೈಬಲ್ ಕುರಾ ನುಗಳೂ ಇವುಗಳಿಂದ ಪ್ರಭಾವಿತವಾಗಿವೆ. ಉಪನಿ ಷತ್ತತ್ತ್ವಗಳು ಬೈಬಲ್ ತತ್ತ್ವಗಳನ್ನರಿಯಲು ಹಿನ್ನಲೆ ಯಾಗಿವೆ. ನೆರೆಹೊರೆಯವರನ್ನು ಪ್ರೇಮಿಸುವಂತೆ ಬೈಬಲ್ ಬೋಧಿಸುತ್ತದೆ. ಆದರೆ ಏತಕ್ಕೆ ಪ್ರೀತಿಸಬೇ ಕೆಂದು ಕಾರಣ ಕೇಳಿದರೆ ಅದು ಮೌನ ತಾಳುತ್ತದೆ. ಉಪನಿಷತ್ತುಗಳು ಇದಕ್ಕೆ ಸಮಂಜಸವಾಗಿ ಉತ್ತರ ಕೊಡುತ್ತವೆ.

"ವಿಶ್ವದಲ್ಲೆಲ್ಲ ಒಂದು ಪರಾತ್ಪರವಸ್ತು ರಮಿಸು ತ್ತಿದೆ ಎಂದ ಮೇಲೆ ನೆರೆಹೊರೆಯವರಲ್ಲಿ ಆ ಪರಾತ್ಪರ ವಸ್ತುವಿಲ್ಲದೇ ಉಂಟೇ? ನಾವು ನೆರೆಹೊರೆಯವರನ್ನು ದ್ವೇಷಿಸಿದರೆ ಅಪಾರ ವಸ್ತುವನ್ನೂ ದ್ವೇಷಿಸಿದಂತೆಯೇ ಆಗುತ್ತದೆ. ಆದ್ದರಿಂದ ನೆರೆಹೊರೆಯವರನ್ನೆಲ್ಲ ಪ್ರೀತಿ ಸಬೇಕು." ನಾವು ಈ ಮಾತನ್ನು ಆಲಿಸಿದಾಗ ಸ್ವಲ್ಪ ವಿಚಿತ್ರವಾಗಿ ತೋರಿದರೂ ಇದು ಸತ್ಯವಾದುದು. ಇದೇ ರೀತಿಯ ಅನೇಕ ಅಂಶಗಳು ಉಪನಿಷತ್ತುಗಳಲ್ಲಿ ಕಂಡುಬರುತ್ತವೆ. ಆದ್ದರಿಂದ ಪ್ರತಿಯೊಬ್ಬ ದಾರ್ಶ ನಿಕ ಪ್ರೇಮಿಯೂ ಉಪನಿಷತ್ತಿನ ಸಿದ್ಧಾಂತಗಳನ್ನು ಅರಿಯಬೇಕಾದುದು ಆದ್ಯಕರ್ತವ್ಯ. ಪ್ರಸ್ಥಾನತ್ರಯಗ ಳಲ್ಲಿ ಉಪನಿಷತ್ತುಗಳಿಗೇ ಮೊದಲನೆಯ ಪ್ರಸ್ಥಾನ. ಉಪ ನಿಷತ್ಸಾರವನ್ನೇ ಗೀತೆಯೂ ಸ್ಪಷ್ಟಪಡಿಸುವುದರಿಂದ ಇದು ಎರಡನೆಯ ಪ್ರಸ್ಥಾನ. ಮೂರನೆಯದೇ ಬ್ರಹ್ಮ ಸೂತ್ರಗಳು.

ತಾರ್ಕಿಕರ ಪ್ರತಿವಾದಿಗಳು ಹುಟ್ಟಿ ವೇದ ಗಳನ್ನು ಆಕ್ಷೇಪಿಸಿದಾಗ ವೇದಧರ್ಮಕ್ಕೆ ವಿರುದ್ಧವಾಗಿ ಪ್ರಚಾರ ಮಾಡತೊಡಗಿದಾಗ, ವೈದಿಕ ಧರ್ಮರಕ್ಷಣೆ ಗಾಗಿ ಸಮಯಕ್ಕನುಗುಣವಾಗಿ ಉಪನಿಷತ್ತುಗಳ ತತ್ತ್ವ ಗಳನ್ನೇ ಸಂಗ್ರಹಿಸಿ ತರ್ಕ ಮತ್ತು ಇತರ ಆವಶ್ಯಕ ತತ್ತ್ವಗಳ ಪ್ರತಿಪಾದನೆ ನಡೆಸಲು ಬೇರೆ ಬೇರೆ ಸಾಮ ಗ್ರಿಗಳನ್ನು ಅಂದಿನ ಪ್ರಖರಮತಿಗಳು ಒಟ್ಟುಗೂಡಿಸಿ ದರು. ನಾನಾ ದೃಷ್ಟಿಕೋಣಗಳಿಂದ ವಾದವಿವಾದ ನಡೆಸಿ ತತ್ತ್ವವನ್ನು ನಿಷ್ಕರ್ಷೆಮಾಡಲು ಎಲ್ಲ ರೀತಿ ಯಲ್ಲೂ ಪ್ರಯತ್ನಗಳು ನಡೆದವು. ಇದರಿಂದ ಮುಂ ದಿನ ಜಿಜ್ಞಾಸುಗಳಿಗೆ ಅತೀವ ಸೌಕರ್ಯವಾಯಿತು. ದಾರ್ಶನಿಕ ಸೂತ್ರಗಳ ನಿರ್ಮಾಣಕ್ಕೆ ಇದೇ ಮೂಲ ಕಾರಣವಾಯಿತು. ಇದೇ ವಾತಾವರಣದಲ್ಲಿ ದಾರ್ಶ ನಿಕ ವಿಭಾಗವೂ ಆಗಿರಬಹುದೆಂದು ತೋರುತ್ತದೆ.

ಬೌದ್ಧರೊಡನೆ ವಾದವಿವಾದ ನಡೆಸಲು ಗೌತಮ ಮಹರ್ಷಿಗಳು ನ್ಯಾಯಸೂತ್ರಗಳನ್ನೂ, ವೈದಿಕ ಮಂತ್ರ ಗಳ ರಕ್ಷಣೆಗೆ ಜೈಮಿನಿಗಳು ಮೀಮಾಂಸಾ ಸೂತ್ರ ಗಳನ್ನೂ ವೇದಾಂತ ದರ್ಶನ ರಕ್ಷಣೆಗೆ ಬಾದರಾಯಣರು ಬ್ರಹ್ಮಸೂತ್ರಗಳನ್ನೂ ರಚಿಸಿದರು. ಈ ಸೂತ್ರ ಗ್ರಂಥ ಗಳು ನಮ್ಮ ದಾರ್ಶನಿಕಗಳಿಗೆ ಅಭೇದ್ಯ ಕವಚವಾಗಿದೆ.

ದರ್ಶನಗಳ ವಾಸ

ಈಗ ನಮ್ಮ ಮುಂದೆ ಇರುವ ಪ್ರಶ್ನೆ ದರ್ಶನ ಗಳೆಷ್ಟು ವಿಧವಾಗಿ ವಿಭಕ್ತವಾದವು?

ಭಾರತೀಯ ದಾರ್ಶನಿಕ ಗ್ರಂಥಗಳು ವೇದಗಳಲ್ಲಿ

ಅಡಗಿರುವ ಮತ್ತು ವ್ಯಕ್ತವಾಗಿರುವ ಸಿದ್ಧಾಂತಗಳಿಂದ ಉಪನಿಷತ್ತುಗಳಲ್ಲಿ ವಿಕಾಸವಾಗಿ, ಭಗವದ್ಗೀತೆಯಲ್ಲಿ ಭಗವಂತನಿಂದ ಗಾನಮಾಡಲ್ಪಟ್ಟು ಬ್ರಹ್ಮಸೂತ್ರಗಳಲ್ಲಿ ಅಭೇದ್ಯವಾದ ರೂಪನ್ನು ತಾಳಿದೆ.

ಭಾರತೀಯರಿಗೆ ಕಾರ್ಮಿಕ ಸ್ವಾತಂತ್ರವಿಲ್ಲದಿದ್ದರೂ ವಿಚಾರಸ್ವಾತಂತ್ರ್ಯಕ್ಕೆ ಯಾವ ರೀತಿಯ ಕುಂದೂ ಕಂಡುಬರುವುದಿಲ್ಲ. ಇಲ್ಲಿನ ದರ್ಶನಗಳ ಮತಗಳ ಶಾಖೆಗಳು ಈ ವಿಷಯವನ್ನು ಎತ್ತಿ ತೋರುತ್ತಿವೆ. ಇವುಗಳನ್ನೆಲ್ಲ ನಾವು ವಿಚಾರ ಮಾಡಿ ನೋಡಿದರೆ ವಿಧವಿಧ ಶಾಖೆಗಳಿಗೂ ಒಂದು ರೀತಿಯ ಐಕ್ಯತೆಯೆ ತೋರುವುದು. ಐಕ್ಯತೆಯೊಡನೆ ವಿಚಾರ ಭೇದಗಳನ್ನೂ ಮರೆಯಲಾಗದು. ಈ ಭೇದಗಳೆ ಪೂರ್ಣತೆಯ ಮಾರ್ಗ ಕಾಣಿಸುವುದು.

ಭಾರತೀಯ ದರ್ಶನಗಳನ್ನು ಇಷ್ಟೆಂದು ಎಣಿಸಿ ಹೇಳುವುದು ಕಷ್ಟ. ಹಾಗೂ ಅಸಂಭವ. ಭಾರತೀಯ ಮಹಾಪ್ರಾಜ್ಞರು ದಾರ್ಶನಿಕ ಕ್ಷೇತ್ರವನ್ನು ವ್ಯಾಪಕಗೊಳಿಸಲು ಯಾವ ರೀತಿಯಿಂದಲೂ ಹಿಂಜರಿಯಲಿಲ್ಲ. ಅವರು ಪಾಣಿನಿ, ರಸೇಶ್ವರ ದರ್ಶನಗಳೊಂದಿಗೆ ಆಯುರ್ವೇದಕ್ಕೂ ದಾರ್ಶನಿಕರೂಪನ್ನು ಕೊಟ್ಟಿದ್ದಾರೆ. ಆಚಾರ್ಯ ಮಾಧವರು ತಮ್ಮ ಸರ್ವದರ್ಶನಸಂಗ್ರಹದಲ್ಲಿ ೧೬ ದರ್ಶನಗಳನ್ನು ವಿಸ್ತೃತವಾಗಿ ಪರಿಚಯ ಮಾಡಿಸಿಕೊಟ್ಟಿದ್ದಾರೆ. ಈಚೀಚಿನ ಮಹಾಪಂಡಿತರಾದ ಶ್ರೀ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು, "ದರ್ಶನೋಚಯ"ದಲ್ಲಿ ಇನ್ನೂ ಕೆಲವು ದರ್ಶನಗಳನ್ನು ಚೆನ್ನಾಗಿ ಪ್ರಪಂಚಿಸಿದ್ದಾರೆ—ಉಕ್ತ ಪಂಡಿತರೇ "ಹಿಂದೂ ದರ್ಶನಸಾರ" ಗ್ರಂಥವನ್ನು ಬರೆದಿದ್ದಾರೆ. ಮೈಸೂರು ವಿಶ್ವವಿದ್ಯಾಲಯದವರು ಪ್ರಕಾಶಿಸಿದ್ದಾರೆ. ಅಸ್ತು!

ದರ್ಶನಗಳ ವಿಭಾಗ

ಭಾರತೀಯ ದರ್ಶನಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು. ಒಂದು ವೈದಿಕ. ಇನ್ನೊಂದು ಅವೈದಿಕ. ವೇದಪ್ರಾಮಾಣ್ಯವನ್ನು ಒಪ್ಪುವ ದರ್ಶನಗಳು ವೈದಿಕ ವಿಭಾಗದಲ್ಲಿಯೂ, ವೇದಪ್ರಾಮಾಣ್ಯವನ್ನೊಪ್ಪುವ ದರ್ಶನಿಗಳು ಅವೈದಿಕ ವಿಭಾಗದಲ್ಲಿಯೂ ಅಂತರ್ಗತವಾಗುತ್ತವೆ. ಈಶ್ವರನಿಗಿಂತಲೂ ಮಿಗಿಲಾದ ಪ್ರಾಮಾಣ್ಯ ಗೌರವಗಳು ಭಾರತದೇಶದಲ್ಲಿವೆ. ಆದ್ದರಿಂದಲೇ ಈಶ್ವರನ ಅಸ್ತಿತ್ತ್ವವನ್ನೊಪ್ಪದ ಮೀಮಾಂಸಾ ದರ್ಶನವನ್ನೂ ವೈದಿಕ ದರ್ಶನವೆಂದೇ ಪರಿಗಣಿಸಿದ್ದಾರೆ. ಅಂದು ವೇದನಿಂದಕರಿಗೆ ವೇದಗಳನ್ನು ಒಪ್ಪದವರಿಗೆ ನಾಸ್ತಿಕರೆಂಬ ವ್ಯವಹಾರವಿತ್ತು. "ನಾಸ್ತಿಕೋ ವೇದನಿಂದಕಃ" ಸೂಕ್ತಿ ಇದನ್ನೇ ಸೂಚಿಸುತ್ತದೆ.

ಆಸ್ತಿಕ ದರ್ಶನಗಳಾರು. ನಾಸ್ತಿಕ ದರ್ಶನಗಳು ಮುಖ್ಯವಾಗಿ ಮೂರು. ಕ್ರಮವಾಗಿ ಸಾಂಖ್ಯ, ಯೋಗ, ವೈಶೇಷಿಕ, ನ್ಯಾಯಪೂರ್ವ ಮೀಮಾಂಸಾ ಮತ್ತು ಉತ್ತರ ಮೀಮಾಂಸಾ. ದರ್ಶನಗಳು ಆಸ್ತಿಕ ದರ್ಶನಗಳು, ಚಾರ್ವಾಕ, ಬೌದ್ಧ, ಜೈನದರ್ಶನಗಳು ನಾಸ್ತಿಕದರ್ಶನಗಳು. ಈ ದರ್ಶನಗಳೆಲ್ಲ ಭಾರತ ದೇಶದವೇ, ಚಾರ್ವಾಕದರ್ಶನ ಗುವಿಕೇವಲತಾಃಕ ವಿಶ್ವದಲ್ಲಿ ಇನ್ನೊಬ್ಬರಿಗೆ ಸಂಗಕ್ಕೆ ತೊಂದರೆ ಕೊಡದೆ ತನ್ನ ಪಾಡಿಗೆ ತಾನು ಸುಖಸಂತೋಷದಿಂದಿರುವುದೇ. ಜೈನ ಬೌದ್ಧ ದರ್ಶನಗಳು ವೇದಪ್ರಾಮಾಣ್ಯವನ್ನು ಒಪ್ಪದಿದ್ದರೂ ವೇದಗಳ ತತ್ತ್ವಗಳಾದ ಸತ್ಯ, ಅಹಿಂಸೆ ಇತ್ಯಾದಿಗಳನ್ನು ಒಪ್ಪಿಯೇ ಇವೆ. ಆದ್ದರಿಂದ ಅವುಗಳನ್ನೂ ಭಾರತೀಯ ಜೀವನವನ್ನೂ ರೂಪಿಸುವುದರಲ್ಲಿಯೇ ಪ್ರವೃತ್ತವಾಗಿದೆ ಎಂದು ಹೇಳಬಹುದು.

ಭಾರತೀಯ ದರ್ಶನಗಳಲ್ಲಿ ಮೊದಲನೆ ದರ್ಶನವಾವುದೆಂಬುದನ್ನು ನಿರ್ಣಯಿಸಿ ಹೇಳುವುದು ಕಷ್ಟ. ಪ್ರತಿಯೊಂದು ದರ್ಶನದಲ್ಲಿಯೂ ಎಲ್ಲ ದರ್ಶನಗಳ ಪ್ರಮಾಣಗಳ ಖಂಡನೆ ಕಾಣಬರುತ್ತದೆ. ಆದ್ದರಿಂದ ಇವೆಲ್ಲ ದರ್ಶನಗಳ ಪೂರ್ವರೂಪ ವೇದ ಉಪನಿಷತ್ತಿನ ಕಾಲದಲ್ಲೇ ಪ್ರಚಲಿತವಾಗಿದ್ದು ಒಂದು ಸಮಯದಲ್ಲಿ ಏಕಸೂತ್ರದಲ್ಲಿ ಗ್ರಥಿತವಾಗಿರಬಹುದೆಂಬಷ್ಟನ್ನು ಮಾತ್ರ ಊಹಿಸಬಹುದಾಗಿದೆ. ಆ ಸಮಯ ಕ್ರಿ. ಪೂ. ೩-೪ ಶತಮಾನವಾಗಿರಬೇಕೆಂದು "ಮೆಕ್‌ಡಾನಲ್" ಪಂಡಿತರು ಅಭಿಪ್ರಾಯಪಡುತ್ತಾರೆ. ವೇದ ಮತ್ತು ಉಪನಿಷತ್ತುಗಳಲ್ಲಿ ವೇದಾಂತ ವಿಷಯವೇ ಹೆಚ್ಚು ಕಂಡುಬರುವುದರಿಂದ, ಇದೇ ಅತೀವ ಪ್ರಾಚೀನವೆಂದು ಕರೆಯಬಹುದು. ವೇದಗಳಲ್ಲಿನ ದಾರ್ಶನಿಕ ಪರಿಪಾಠಿ ಉಪನಿಷತ್ತುಗಳಲ್ಲಿ ಪರಿಪುಷ್ಟವಾಗಿದೆ.

ಸಾಮಾನ್ಯವಾಗಿ ನಮ್ಮ ದೃಷ್ಟಿ ಮೊತ್ತಮೊದಲು ಸ್ಥೂಲದ ಕಡೆಗೆ ಪ್ರಸರಿಸಿ ಸೂಕ್ಷ್ಮದ ಕಡೆಗೆ ಮುಂದರಿಯುತ್ತದೆ. ಆದ್ದರಿಂದಲೇ ನಮಗೆ ನಾನಾ ರೂಪಗಳಲ್ಲಿ

ತೋರುತ್ತವೆ. ಆದರೆ ನಾವು ಚೆನ್ನಾಗಿ ವಿಶ್ಲೇಷಣ ಮಾಡಿ ನೋಡಿದರೆ ಮನಸ್ಸಿನಲ್ಲಿ ಮನನ ಮಾಡಿದರೆ ಏಕತ್ತ್ವವೇ ಭಾಸವಾಗುತ್ತದೆ.

''ಪರಾಂಚಿಖಾನಿ ವ್ಯತೃಣತ್ಸ್ವಯಂಭೂ
ಸ್ತಸ್ಮಾತ್ . . ನಾಂತರಾತ್ಮನ್
ಕಶ್ಚಿದ್ಧೀರಃ ಪ್ರತ್ಯಗಾತ್ಮಾನ ವೈಕ್ಷದಾ-
ವೃತ್ತ ಚಕ್ಷುರಮೃತತ್ತ್ವಮಿಚ್ಛನ್''

ನಮ್ಮ ದೃಷ್ಟಿಯಲ್ಲಿ ಭಾರತೀಯ ಷಡ್ದರ್ಶನಗಳ ವಿಕಾಸವನ್ನು ಕುರಿತು ವಿಚಾರಿಸುತ್ತೇವೆ. ಉಪನಿಷತ್ತುಗಳ ತತ್ತ್ವಜ್ಞಾನದ ಪರ್ಯವಸಾನ "ತತ್ತ್ವಮಸಿ" ವಾಕ್ಯದಲ್ಲಿಯೇ. ಈ ಮಂತ್ರದಿಂದ ವೈದಿಕ ಋಷಿಗಳು ತತ್-ಮತ್ತುತ್ತ್ವಂ—ಜೀವ ಮತ್ತು ಬ್ರಹ್ಮಗಳ ಐಕ್ಯತೆಯನ್ನು ಘೋಷಿಸಿದ್ದಾರೆ. ಸಮಷ್ಟಿಯಲ್ಲಿನ ತತ್ ವ್ಯಷ್ಟಿಯಲ್ಲಿತ್ವಂ. ನಿಜವಾಗಿಯೂ "ಅದ್ವೈತ ತತ್ತ್ವ" ದಾರ್ಶನಿಕ ಜಗತ್ತಿಗೆ ಧರ್ಮವನ್ನು ಕಣ್ಣಾರ ಕಂಡ ವೈದಿಕ ಋಷಿಗಳ ಅಮರವಾದ ಕಾಣಿಕೆ. ಪ್ರತಿಭೆಯಿಂದ ಸ್ಫುರಿಸಿ ತಾರ್ಕಿಕವಾಗಿ ಅದರ ಪ್ರತಿಷ್ಠೆಯಾಯಿತು. ಈ ತತ್ತ್ವವನ್ನು ಹೃದಯಂಗನನ್ನಾಗಿಸಲು ದರ್ಶನಗಳ ವಿಕಾಸವಾಯಿತು. ಉಪನಿಷತ್ ಯುಗದ ನಂತರ ಜನತೆಯ ಮುಂದೆ ಈ ತಥ್ಯಾಂಶದ ಸಾಕ್ಷಾತ್ಕಾರವೆಂತೆಂಬುದೇ ವಿಷಮ ಸಮಸ್ಯೆಯಾಗುಳಿಯಿತು. ಕೆಲ ದಾರ್ಶನಿಕರು ನಾನಾ ರೀತಿಯ ಗುಣವುಳ್ಳ ಜೀವ ಮತ್ತು ಭೌತಿಕ ವಿಶ್ವಪುರುಷ ಮತ್ತು ಪ್ರಕೃತಿಯ ಗುಣಗಳನ್ನು ಸರಿಯಾಗಿ ಅರಿಯದೇ ಇರುವುದೇ ಈ ಸಂಸಾರವೆಂದು ನುಡಿಯ ತೊಡಗಿದರು. ಅನಾತ್ಮಖ್ಯಾತಿಯಿಂದಲೇ ಭೇದಸಮ್ಯಕ್ ಖ್ಯಾತಿ(ಜ್ಞಾನ)ಯಿಂದ ಅಭೇದ. ಈ ಸಂಪ್ರದಾಯವೇ ಮುಂದೆ ಸಮ್ಯಕ್ ಖ್ಯಾತಿ ಅರ್ಥಾತ್ "ಸಾಂಖ್ಯ"ವೆನಿಸಿತು. ಇದು ಕೇವಲ ಭೌತಿಕ ಸಾಕ್ಷಾತ್ಕಾರ. ಆದರೆ ಇದರಿಂದ ಪ್ರಯೋಜನವಿಲ್ಲದೆ ವ್ಯಾವಹಾರಿಕವಾಗಿ ಪ್ರತ್ಯಕ್ಷ ಕಾಣುವ ಅವಶ್ಯಕತೆಯು ತಲೆದೋರಲು, ಧ್ಯಾನ ಮತ್ತು ಧಾರಣಗಳನ್ನು ವ್ಯವಸ್ಥೆ ಮಾಡುವ "ಯೋಗ ದರ್ಶನ"ಕಾರರು ಇದನ್ನು ದೂರಮಾಡಿದರು. ಸಾಂಖ್ಯ ಯೋಗಗಳೆರಡೂ ಒಂದೇ ತತ್ತ್ವಜ್ಞಾನದ ಎರಡು ಪಕ್ಷಗಳು. ಬೌದ್ಧಿಕ ಪಕ್ಷವೇ "ಸಾಂಖ್ಯ", ವ್ಯಾವಹಾರಿಕ ಪಕ್ಷವೇ "ಯೋಗ"; ಕಾಲಕ್ರಮವಾಗಿ ಜೀವ ಜಗತ್ತಿನಲ್ಲಿ ಯಥಾರ್ಥ ರೂಪವನ್ನು ಕಾಣುವ ಬಯಕೆಯಿಂದ ಅವುಗಳ ಗುಣಗಳನ್ನು ವಿಮರ್ಶಿಸುವ ಪ್ರತೀತಿಯುಂಟಾಯಿತು. ಇಂತು ಆತ್ಮಾ ಮತ್ತು ಅನಾತ್ಮಾಗುಣ ವಿವೇಚನೆಗೆ ಅವುಗಳ ವೈಶಿಷ್ಟ್ಯದ ಅರಿವಿಗೆ "ವೈಶೇಷಿಕ ದರ್ಶನ"ದ ಉತ್ಪತ್ತಿಯಾಯಿತು. ಆದರೆ ಜ್ಞಾನ ಪ್ರಾಪ್ತಿಯ ಪರಿಷ್ಕೃತ ಪದ್ಧತಿಯ ಅಭಾವದ ಕಾರಣ ಈ ವಿವೇಚನೆ ಸುರಸವಾಗಿ ನಡೆಯಲಾರದೇ ಹೋಯಿತು. ಆದ್ದರಿಂದ ಜ್ಞಾನದ ಶಾಸ್ತ್ರೀಯ ಪದ್ಧತಿಯ ಪ್ರತಿಪಾದನೆಗೆ "ನ್ಯಾಯ ದರ್ಶನ" ಜನಿಸಿತು. ನ್ಯಾಯ ಕೇವಲ ಶುಷ್ಕತರ್ಕವಾದ. ಅನೇಕ ವಿದ್ವಾಂಸರ ದೃಷ್ಟಿಯಲ್ಲಿ ಈ ಒಣ ತರ್ಕದಿಂದ ಅಧ್ಯಾತ್ಮಜ್ಞಾನವಾಗಲಾರದೆಂದು ಭಾಸವಾಗಿ ಶ್ರುತಿಯೆಡೆಗೆ ಅವರ ಗಮನ ಆಕೃಷ್ಟವಾಯಿತು. ಫಲತಃ ದಾರ್ಶನಿಕರು ವೇದದ ಪೂರ್ವಕಾಂಡ (ಕರ್ಮಕಾಂಡ)ವನ್ನು ವಿವೇಚಿಸಿ "ಕರ್ಮಮೀಮಾಂಸೆ"ಗೆ ಜನ್ಮವಿತ್ತರು. ಆದರೆ ಕರ್ಮ ಮೀಮಾಂಸಾ ದರ್ಶನದ ವಿಶೇಷ ಪರಿಶೀಲನೆಯಿಂದ ಮಾನವರ ಅಧ್ಯಾತ್ಮಿಕ ಪ್ರವೃತ್ತಿಗಳು ಕೇವಲ ಕರ್ಮದಿಂದ ತೃಪ್ತವಾಗಲಾರದೆಂದು ಸ್ಪಷ್ಟವಾಯಿತು. ಆದ್ದರಿಂದ ಉತ್ತರಕಾಂಡ (ಜ್ಞಾನಕಾಂಡ)ದ ಮೀಮಾಂಸೆ ನಡೆದು ವೇದಾಂತ ದರ್ಶನದಲ್ಲಿ ಪರ್ಯವಸಾನವಾಯಿತು. ಇಂತು ಉಪನಿಷತ್ತಿನ ತತ್ತ್ವಮಸಿ ವಾಕ್ಯವನ್ನು ಯಥಾರ್ಥವಾಗಿ ವ್ಯಾಖ್ಯಾನ ಮಾಡಲು ನಾವು ಹೇಳಿರುವ ಕ್ರಮದಂತೆ ಷಡ್ದರ್ಶನಗಳ ವಿಕಾಸವಾಯಿತು.

ಭಾರತೀಯ ದರ್ಶನಗಳ ವಿಷಯಗಳನ್ನು ಎಷ್ಟು ವಿವರಿಸಿದರೂ ವಿವರಿಸಬಹುದು. ಆದರೆ ಈ ಲೇಖಕನು ಅಲ್ಪಜ್ಞನು, ಪುಟ್ಟ ಲೇಖನದಲ್ಲಿ ಎಷ್ಟು ತಾನೇ ಹೇಳಬಲ್ಲನು? ವೇದಾಂತ ದರ್ಶನದ ಹಿನ್ನಲೆಯಿಂದಲೇ ಶ್ರೀ ಶಂಕರರ ಅದ್ವೈತ, ಶ್ರೀ ರಾಮಾನುಜರ ವಿಶಿಷ್ಟಾದ್ವೈತ, ಶ್ರೀ ಮಧ್ವರ ದ್ವೈತ, ಶ್ರೀ ವಲ್ಲಭಾಚಾರ್ಯರ ಶುದ್ಧಾದ್ವೈತ ದರ್ಶನಗಳು ಬೆಳಕಿಗೆ ಬಂದಿವೆ. ಆಯಾ ದಾರ್ಶನಿಕರ ಅನುಯಾಯಿಗಳು ಅವರವರ ಅಧಿಕಾರ ಅರ್ಹತೆಗಳಿಗನುಗುಣವಾಗಿ ಪರಮ ಕೈವಲ್ಯವನ್ನು ಪಡೆಯುತ್ತಿದ್ದಾರೆ. ಅವುಗಳ ವಿಷಯವನ್ನು ಪ್ರಸ್ತಾವಿಸಿದರೆ ಒಂದೊಂದೂ ಮಹಾಗ್ರಂಥವಾದೀತು. ಆದ್ದರಿಂದ ಮುಖ್ಯವಾಗಿ ಭಾರತೀಯರಾಗಿ ಜನಿಸಿದ ನಾವು ಆಯಾ ದರ್ಶನಗ್ರಂಥಗಳನ್ನು ಗೀರ್ವಾಣ ವಾಣಿ

ಯಲ್ಲಿ ಓದಿ ನಲಿಯುವ ಸೌಭಾಗ್ಯ ನಮಗೆ ಪ್ರಾಪ್ತವಾಗಲೆಂದು ವಿಶ್ವವಿಧಾತನನ್ನು ಪ್ರಾರ್ಥಿಸಿ ಮುಂದುವರಿಯುವ.

ಭಾರತೀಯ ದರ್ಶನಗಳು ಆಶಾವಾದಿಗಳೇ

ಭಾರತೀಯ ದರ್ಶನಗಳ ನಿಜವಾದ ಸ್ವರೂಪದ ವಿಷಯದಲ್ಲಿ ಇಂದೂ ಅನೇಕ ಭ್ರಾಂತಿಮಯ ಭಾವನೆಗಳು ನಮ್ಮ ಹೃದಯಗಳಲ್ಲಿ ನೆಲೆಸಿವೆ. ಇದಕ್ಕೆ ಕಾರಣ ದರ್ಶನ ಗ್ರಂಥಗಳ ಅಜ್ಞಾನವೇ ಕೆಲ ಮಂದಿ ಸ್ವಾರ್ಥಿಗಳು ನಮ್ಮ ದರ್ಶನಗಳನ್ನು ನಿರಾಶಾವಾದಗಳೆಂದು ಕರೆದು ಕಲಂಕಗೊಳಿಸಿದ್ದಾರೆ. ಆದರೆ ಭಾರತೀಯ ದರ್ಶನಗಳಲ್ಲಿ ಒಳಹೊಕ್ಕು ನೋಡಿದರೆ ಆಶಾವಾದದ ಜ್ಯೋತಿಯ ಪ್ರಕಾಶ ಪಸರಿಸಿ ನಿರಾಶಾವಾದವೆಂಬ ಅಂಧಕಾರವನ್ನು ಓಡಿಸುತ್ತದೆ.

ನಮ್ಮ ದೇಶದಲ್ಲಿ ದರ್ಶನಗಳು ದುಃಖ ಜಿಜ್ಞಾಸೆ ಮತ್ತು ದುಃಖಗಳನ್ನು ದೂರ ಮಾಡುವ ಉಪಾಯಗಳನ್ನು ಯೋಚಿಸುವುದಕ್ಕಾಗಿಯೇ ವಿಕಾಸವಾಗಿವೆ. [ದುಃಖತ್ರಯಾಭಿಘಾತಾಜ್ಜಿಜ್ಞಾಸ । ತದೆಪಘಾತಕೇಹೇತೌ–ಸಾಂಖ್ಯ ೧ ಹಾ ೧.] ಈ ಭವಸಾಗರದಲ್ಲಿ ಅಡಿಯಿಟ್ಟ ಪ್ರತಿಯೊಂದು ಜೀವಿಯೂ ಕ್ಲೇಶವೆಂಬ ಅಲೆಗಳ ಆಘಾತಕ್ಕೆ ಸಿಕ್ಕಿ ಪರಿತಪಿಸುತ್ತಾ, ಹೆಜ್ಜೆ ಹೆಜ್ಜೆಗೂ ವಿಪತ್ತಿನ ಪರಂಪರೆಯಿಂದ ಆಕ್ರಾಂತನಾಗುತ್ತಾನೆ. ಆ ಜೀವಿಗೆ ಜೀವನವೇ ಬೇಸರವೆನಿಸಿ ನಿರಾಶೆಯೇ ಸುತ್ತಲೂ ವಿಕರಾಲ ರೂಪದಲ್ಲಿ ಕಾಣುತ್ತದೆ. ಆಗ ಆ ಜೀವಿಗೆ ನಮ್ಮ ನಾಡಿನ ದರ್ಶನಗಳೇ ಆಶ್ವಾಸನ ಕೊಟ್ಟು ಆಚಿನ ದಂಡೆಯನ್ನು ದಾಟಿಸುವ ನೌಕೆಯಂತೆ ಆಶ್ರಯಕೊಟ್ಟು ನಮ್ಮನ್ನು ಕರ್ತವ್ಯಪಥದಲ್ಲಿ ಪ್ರೇರಿಸುತ್ತದೆ. ಪರಮ ಆಶಾವಾದೀ ನಮ್ಮ ದರ್ಶನ. ಮಾನವತೆಗೆ ಎಂದೆಂದೂ ಮುಂದುವರಿಯುವ ಉಪದೇಶ ಕೊಟ್ಟು, "ಯದ್ಗತ್ವಾನ ನ ನಿವರ್ತಂತೆ ತದ್ಧಾಮ ಪರಮಂಮಮ" ಎಂಬ ಗೀತಾಚಾರ್ಯನ ಉಕ್ತಿಯಂತೆ ಪರಮ ಪದಕ್ಕೆ ಕರೆದೊಯ್ಯುತ್ತದೆ. ಈ ಮಾರ್ಗವನ್ನು ಹೊಂದುವುದು ಕಷ್ಟ. ಎಂದ ಮಾತ್ರವೇ ನಿರಾಶಾವಾದವನ್ನು ಸೂಚಿಸುತ್ತದೆಯೇ?

ಉಪನಿಷತ್ತಿನ ನುಡಿಗಳು ನಮ್ಮನ್ನು ಹೊಡೆದು ಎಬ್ಬಿಸುತ್ತಿವೆ.

ಉತ್ತಿಷ್ಠತ, ಜಾಗೃತ ಪ್ರಾಪ್ಯವರಾನ್ನಿ ಬೋಧತ ॥
ಷುರಸ್ಯಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಸ್ತತ್
ಕವಯೋ ವದಂತಿ ॥

ನಮ್ಮ ದರ್ಶನಗಳಲ್ಲಿ ಸ್ವಾನುಭವಕ್ಕೆ ವಿಶೇಷ ಮಹತ್ತ್ವ. ಉಪನಿಷತ್ತಿನ ಉಪಾಯಗಳು [ಶ್ರವಣ, ಮನನ, ನಿದಿಧ್ಯಾಸನ] ಪರಾನುಭೂತಿಯನ್ನು ಸ್ವಾನುಭೂತಿಯಲ್ಲಿ ಪರಿಣತಗೊಳಿಸಲು ಸೋಪಾನಗಳು. ಮಹರ್ಷಿಗಳ ಅನುಭೂತಿಯನ್ನು ಪ್ರದರ್ಶಿಸುವ ಗ್ರಂಥವೇ ವೇದ. ವೇದಗಳ ತತ್ತ್ವಗಳನ್ನು ಆಲಿಸಬೇಕು. ಜ್ಞಾನವನ್ನು ನಿಸ್ಸಂಶಯಗೊಳಿಸಲು ಮನನ ಅತ್ಯಂತ ಆವಶ್ಯಕ. ಯುಕ್ತಿಗಳಿಂದ ಮನನ ಸಾಧ್ಯವಾಗುತ್ತದೆ· ವೇದಪ್ರತಿಪಾದ್ಯ ಸಿದ್ಧಾಂತ ಸಂದೇಹರಹಿತವಾಗಿವೆ. ಇಲ್ಲಿ ಯಾವ ಸಂಶಯಕ್ಕೂ ಎಡೆಯಿಲ್ಲ. ತರ್ಕದ ಒರೆಗಲ್ಲಿನಲ್ಲಿ ಸಾಣೆ ಹಿಡಿದು ನೋಡುವ ವರೆಗೆ ಸತ್ಯದಲ್ಲಿ ಶ್ರದ್ಧೆಯುಂಟಾಗುವುದಿಲ್ಲ. ಅದಕ್ಕೋಸ್ಕರವೇ ಮನನದ ಉಪಾಯವನ್ನು ಹೇಳಿರುತ್ತಾರೆ.

ನಮ್ಮ ದಾರ್ಶನಿಕರು ದರ್ಶನ ಗ್ರಂಥಗಳಲ್ಲಿನ ತತ್ತ್ವಗಳನ್ನು ಕಾರ್ಯರೂಪದಲ್ಲಿ ಪರಿಣತಗೊಳಿಸಬೇಕೆಂಬ ಆದೇಶವನ್ನು ಕೊಡುತ್ತಾರೆ. ನಮ್ಮ ದರ್ಶನಗಳ ವ್ಯಾವಹಾರಿಕತೆಗೆ ಇದೊಂದು ನಿದರ್ಶನ ಸಾಲದೇ ಧರಾತಲದಿಂದ ಮೇಲೆ ಕಲ್ಪನಾಗಗನದಲ್ಲಿ ವಿಹರಿಸುವ ದರ್ಶನಗಳಿಂದ ಮಾನವೀಯತೆಗೆ ಯಾವ ರೀತಿಯಿಂದಲೂ ಲಾಭವುಂಟಾಗಲಾರದು. ಜನ ಸಾಧಾರಣಕ್ಕೂ ಕಷ್ಟದ ಸ್ಥಿತಿಯಲ್ಲಿ ಆಶ್ವಾಸನ ಕೊಟ್ಟು, ವಿಹ್ವಲ ಮನಸ್ಸಿಗೆ ಸಂತೋಷವನ್ನು ಕೊಡುವ, ಸಂತೋಷ ಚಿತ್ತಕ್ಕೆ ನಿಶ್ರೇಯಸ್ಸಿನ ಮಾರ್ಗವನ್ನು ಕಾಣಿಸುವ ದರ್ಶನವೇ ಸರಿಯಾದ್ದು ಮತ್ತು ಸತ್ಯವಾದ್ದು. ಅಭ್ಯುದಯ ನಿಶ್ರೇಯಸ್ಸುಗಳೆರಡೂ ನಮಗೆ ಕಾಣಬೇಕು.

ದರ್ಶನ ಮತ್ತು ಧರ್ಮ

ಯಾವುದರಿಂದ ನಮಗೆ ಅಭ್ಯುದಯ ಮತ್ತು ನಿಶ್ರೇಯಸ್ಸುಗಳುಂಟಾಗುವುದೋ ಅದೇ ಧರ್ಮ. [ಯತೋಽಭ್ಯುದಯ ನಿಶ್ರೇಯಸಸ್ಸ ಧರ್ಮಃ] ದರ್ಶನ ಧರ್ಮದಿಂದ ಸಮನ್ವಯವಾಗಿದೆ. ಆದ್ದರಿಂದ ನಮ್ಮ ಜೀವನ ದಾರ್ಶನಿಕಮಯವಾಗಿದೆ. ಭಾರತೀಯ ದರ್ಶನಗಳು ಚಿರಕಾಲದಿಂದ ಚಿಂತಿತವಾದ ಆಧ್ಯಾತ್ಮಿಕ ತತ್ತ್ವಗಳ ಮೇಲೆ ನಿರ್ಭರವಾಗಿವೆ. ವಿಚಾರದಂತೆ ಆಚಾರವೂ ಇರಬೇಕಾದ್ದು ಅನಿವಾರ್ಯವಷ್ಟೆ! ಧಾರ್ಮಿಕ ಆಚಾರದಿಂದ ಕ್ರಿಯಾಶೀಲವಾಗದ ದರ್ಶನ ನಿಷ್ಫಲ. ಧರ್ಮದ ಪ್ರಾಸಾದವನ್ನು ನಿಲ್ಲಿಸಲು ದರ್ಶನದ ಅಸ್ತಿವಾರ

ಬೇಕು. ದರ್ಶನದ ಹಿನ್ನಲೆಯಿಲ್ಲದೆ ಧರ್ಮಜ್ಞಾನಿಗಳ ಪ್ರೀತಿಗೆ ಪಾತ್ರವಾಗುವುದಿಲ್ಲ. ಭಾರತ ದೇಶದಲ್ಲಿ ದರ್ಶನ ಧರ್ಮಗಳ ಮಧುರ ಸಾಮಂಜಸ್ಯದ ರೂಪು ಸುಂದರವಾಗಿ ಕಂಡು ಬರುತ್ತದೆ. ಧರ್ಮದ ಸಹಕಾರದಿಂದ ಭಾರತೀಯ ದರ್ಶನದ ದೃಷ್ಟಿ ವ್ಯಾವಹಾರಿಕವಾಗಿ ವ್ಯಾಪಕವಾಗಿದೆ. ದರ್ಶನದ ಶಂಕುವಿನ ಮೇಲೆ ಪ್ರತಿಷ್ಠಿತವಾಗಿರುವುದರಿಂದ ಭಾರತೀಯ ಧರ್ಮ ಆಧ್ಯಾತ್ಮಿಕತೆಯಿಂದ ಅನುಪ್ರಾಣಿತವಾಗಿದೆ. ಆದ್ದರಿಂದ ತರ್ಕಹೀನ ವಿಚಾರ ವಿಶ್ವಾಸಗಳಿಂದ ತನ್ನನ್ನು ತಾನು ಕಾಪಾಡಿಕೊಂಡಿದೆ.

ಪುಣ್ಯಭೂಮಿ ಭಾರತವರ್ಷದಲ್ಲಿ ಗಂಗಾ ಯಮುನಾ ನದಿಗಳಂತೆ ಧರ್ಮ ದರ್ಶನಗಳ ಮಧುರ ಸಮ್ಮಿಳನ ಭಾರತೀಯ ಸಂಸ್ಕೃತಿಯ ಸಾಮರಸ್ಯವನ್ನು ಸೂಚಿಸುತ್ತದೆ. ಭಗವತೀ ಶೃತಿಯೇ ಇವೆರಡಕ್ಕೂ ಮೂಲ. ಮೂಲವನ್ನು ತಿರಸ್ಕರಿಸಿದರೆ ಎರಡಕ್ಕೂ ಮುಗ್ಗಟ್ಟುಂಟಾಗುತ್ತದೆ. ಕೇವಲ ತರ್ಕದಿಂದ ಯಾವ ನಿರ್ಣಯವೂ ಆಗಲಾರದು.

ಭರ್ತೃಹರಿಯು ವಾಕ್ಯಪದೀಯದಲ್ಲಿ ಈ ಅಂಶವನ್ನು ಬಹಳ ಸ್ಪಷ್ಟವಾಗಿ ನುಡಿದಿದ್ದಾನೆ.

ಪ್ರಜ್ಞಾವಿವೇಕಂ ಲಭತೇ ಭಿನ್ನೈರಾಗಮದರ್ಶನೈಃ ।
ಕಿಯದ್ವಾ ಶಕ್ಯಮುನ್ನೇತುಂ ಸ್ವತರ್ಕಮನುಧಾವತಾ ॥
ತತ್ತದುತ್ಪ್ರೇಕ್ಷಮಾಣಾನಾಂ ಪುರಾಣೈರಾಗಮೈರ್ವಿನಾ ।
ಅನುಪಾಸಿತ ವೃದ್ಧಾನಾಂ ವಿದ್ಯಾನಾತಿಪ್ರಸೀದತಿ ॥

ಇಂದು ಭಾರತ ದೇಶ ಸ್ವತಂತ್ರವಾಗಿದೆ. ಆದರೆ ಕೇವಲ ರಾಜನೀತಿಕ ದೃಷ್ಟಿಯಲ್ಲಿ. ನಾವು ನಿಜವಾಗಿ ಸ್ವತಂತ್ರರೆನಿಸಲು ನಮ್ಮಲ್ಲಿ ದಾರ್ಶನಿಕ, ಸಾಂಸ್ಕೃತಿಕ, ಮನೋಭಾವ ಬೆಳೆಯಬೇಕಾಗಿವೆ. ಸಾಂಸ್ಕೃತಿಕ ವಿಷಯದಲ್ಲಿ ನಾವು ಮಾತನಾಡುವುದೇ ನಮ್ಮ ಕೆಲಸವಾಗಿದೆ. ನಿಜವಾದ ಸಾಂಸ್ಕೃತಿಕ ತತ್ತ್ವಗಳನ್ನು ಜೀವನದಲ್ಲಿ ಸಮನ್ವಯ ಮಾಡಿಕೊಂಡು ಜೀವನವನ್ನೇ ಆದರ್ಶವನ್ನಾಗಿಸುವ ಪ್ರವೃತ್ತಿ ನಮ್ಮಲ್ಲಿ ಇಲ್ಲವಾಗಿದೆ. ಇದಕ್ಕೆ ಅತೀವ ದುಃಖಿಸಬೇಕಾಗಿದೆ.

ಇಂದು ನಮ್ಮ ದೃಷ್ಟಿ ಕೇವಲ ಅನುಪಯುಕ್ತ ವಿಷಯದಲ್ಲಿ ಪ್ರಕೃತವಾಗಿ ವಾಗಾಡಂಬರದಲ್ಲಿಯೇ ಪರ್ಯವಸಾನವಾಗಿದೆ. ಆದ್ದರಿಂದಲೇ ಅಂದಿನ ದಾರ್ಶನಿಕ ತತ್ತ್ವಗಳಿಂದ ಬಲು ದೂರ ಸರಿದಿದ್ದೇವೆ. ವಾಗಾಡಂಬರದ ಜನತೆಯ ಕೃತಿಗಳು ನಮ್ಮನ್ನು ಭ್ರಾಂತಿಗೊಳಿಸುತ್ತಿವೆ. ಈಗಲೂ ಪ್ರಾಕ್ತನ ದಾರ್ಶನಿಕ ತತ್ತ್ವ ಜಿಜ್ಞಾಸುಗಳು ಹಿಂದಿನಂತೆ ದಾರಿಗಾಣಿಸಲು ಇಂದೂ ಸಿದ್ಧರಾಗಿದ್ದಾರೆ.

ಭಾರತೀಯ ಜೀವನದಲ್ಲಿ ದರ್ಶನ ಮಾನವ ಜೀವನದಲ್ಲಿ ಸಮನ್ವಯವಾಗಿರುವ ಅಂಶ ಇದು ವರೆಗಿನ ಲೇಖನದಲ್ಲಿ ನಿರೂಪಿತವಾಗಿದೆ. ಮಾನವನ ಜ್ಞಾನದಿಂದ ಅವನ ಮಟ್ಟವನ್ನು ಕಂಡುಹಿಡಿಯಬಹುದು. ಜ್ಞಾನ ವಿಕಾಸಕ್ಕೆ ವಯಸ್ಸಿನ ಮಿತಿಯಿಲ್ಲ. ಕೆಲವರು ಬಾಲ್ಯದಲ್ಲಿಯೇ ಜ್ಞಾನಿಗಳಾಗುತ್ತಾರೆ. ಕೆಲವರಿಗೆ ವಾರ್ಧಕ್ಯದಲ್ಲಿ ಅರಿವುಂಟಾಗುವುದೂ ಅಸಂಭವವೇ ಆಗುತ್ತದೆ. ಮಾನವನ ಕರ್ಮದ ಮೇಲೆ ಇದು ನಿರ್ಭರವಾಗಿರುತ್ತದೆ. ಸತ್ಕರ್ಮದಿಂದ ಅಂತಃಕರಣದ ಕೊಳಕು ದೂರವಾಗುತ್ತದೆ. ಅಂತಃಕರಣಶುದ್ಧಿಯಿಂದ ಜ್ಞಾನವಿಕಾಸವಾಗುತ್ತದೆ. ಪರತತ್ತ್ವದ ಸಾಕ್ಷಾತ್ಕಾರವಾಗುತ್ತದೆ. ದರ್ಶನಶಾಸ್ತ್ರಜ್ಞಾನದಿಂದ ಶಾಂತಿಯುಂಟಾಗುತ್ತದೆ. ತನ್ನಲ್ಲಿ ವಿಶ್ವಾಸವುಂಟಾಗಿ ಚಿತ್ತಶುದ್ಧಿಯುಂಟಾಗುತ್ತದೆ. ಜ್ಞಾನವಿಲ್ಲದವ ಪಶುಸಮಾನನಾಗುತ್ತಾನೆ. ಆದರೆ ಜ್ಞಾನ ಶಬ್ದಕ್ಕೆ ಲೌಕಿಕ ಜ್ಞಾನವೆಂದರ್ಥವಲ್ಲ. ಈ ಜ್ಞಾನ ಮನುಷ್ಯನಿಗೆ ಹೊರತು ಬೇರೆ ಪ್ರಾಣಿಗಳಿಗಾಗಲಾರದು. ಆದರೂ ಮನುಷ್ಯ ಇದಕ್ಕಾಗಿ ಪ್ರಯತ್ನಿಸುವುದಿಲ್ಲ. ಅಂಥವರನ್ನುದ್ದೇಶಿಸಿಯೇ ಶಂಕರಭಗವತ್ಪಾದಾಚಾರ್ಯರು—

ಲಬ್ಧ್ವಾ ಕಥಚಿನ್ನರ ಜನ್ಮ ದುರ್ಲಭಂ
ತತ್ರಾಪಿ ಪುಂಸ್ತ್ವಂ ಶೃತಿಪಾದ ದರ್ಶನಂ
ಯಸ್ತ್ವಾತ್ಮ ಮುಕ್ತೌ ನಯತೇತ ಮೂಢಧೀಃ
ಸಹ್ಯಾತ್ಮಹಾ ಸ್ವಂ ವಿನಿಹಂತ್ಯ ಸದ್ಗ್ರಹಾತ್

ಎಂದಿದ್ದಾರೆ.

ದರ್ಶನದ ಪರಮ ಗುರಿಯನ್ನು ಮುಟ್ಟಲು, ಮಾನವ ಜೀವನವನ್ನು ಸಾರ್ಥಕಗೊಳಿಸಲು ವಿಶೇಷವಾಗಿ ಒಂದು ಮಾತನ್ನು ಗಮನದಲ್ಲಿಡಬೇಕು ಈ ಗೂಢ ತತ್ತ್ವಗಳನ್ನರಿಯಲು ಅಧಿಕಾರಿಯಾಗದ ವರೆಗೆ ಅಧಿಕಾರಿಯ ಅಂತಃಕರಣ ಶುದ್ಧಿಯಾಗದ ವರೆಗೆ, ಯಾವ ರೀತಿಯೂ ದುಃಖವಿಮೋಚನೆಯಾಗಲಾರದು, ಶಾಂತಿ ಸಿಗಲಾರದು. ಜ್ಞಾನದ ಮಾತಂತಿರಲಿ, ಅಧಿಕಾರಿಯಾಗಬೇಕಾದುದು ಅಂತಃಕರಣಶುದ್ಧಿಯಾಗಬೇಕಾದುದು ಅತ್ಯವಶ್ಯಕ. ಇದಕ್ಕೆ ಸಾಧಾರಣ ಧರ್ಮ ಮತ್ತು ವರ್ಣಾಶ್ರಮ ಧರ್ಮಗಳನ್ನು ಅನುಸರಿಸಬೇಕು,

ಪ್ರತಿಯೊಬ್ಬನೂ ಈ ಧರ್ಮಗಳನ್ನು ಅನುಸರಿಸುವುದ ಗತ್ಯ–ಸತ್ಯ, ಅಹಿಂಸೆ, ದಯ, ಕಳ್ಳತನ ಮಾಡದಿರುವಿಕೆ, ಶರೀರಶುದ್ಧಿ, ಇಂದ್ರಿಯನಿಗ್ರಹ, ದಾನ, ಅಂತಃಕರಣ ಸಂಯಮ, ಸಹನೆಗಳು ಸಾಧಾರಣ ಧರ್ಮಗಳು. ಶರೀರ ಮತ್ತು ಅಂತಃಕರಣ ಶುದ್ಧಿ ಆಹಾರದಲ್ಲಿ ಶುದ್ಧತೆಯಿಂದಿರಬೇಕು. ಛಾಂದೋಗ್ಯದಲ್ಲಿ "ಆಹಾರ ಶುದ್ಧೌ ಸತ್ವ ಶುದ್ಧಿಃ" ಎಂದು ಆಹಾರದ ವಿಷಯದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ನಮ್ಮ ಶರೀರದ ಅನೇಕ ಅಂಶಗಳು ಅನ್ನ ಜಲ ತೇಜಸ್ಸುಗಳಿಂದ ಆಗಿದೆ. ಆದ್ದರಿಂದ ಎಲ್ಲವನ್ನು ಶುದ್ಧವಾಗಿಟ್ಟುಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಇಲ್ಲವಾದರೆ ಲಾಭಕ್ಕೆ ಬದಲಾಗಿ ಕೇಡಾಗುತ್ತದೆ. ನಮ್ಮ ದೇಶದ ಪ್ರಾಚೀನ ಮಹರ್ಷಿಗಳು ತಮ್ಮ ಅನವರತ ತಪಸ್ಸಿನ ಫಲವಾಗಿ "ಪ್ರಜ್ಞಾಚಕ್ಷು"ವನ್ನು ಪಡೆದು ಪ್ರತಿ ವಸ್ತುವಿನ ಗುಣದೋಷಗಳನ್ನು ನಿಷ್ಕರ್ಷೆ ಮಾಡಿದ್ದಾರೆ. ಅವರ ಸಿದ್ಧಾಂತಗಳನ್ನರಿತು ಲಾಭ ಪಡೆದು ನಾವು ಆಹಾರ ಶುದ್ಧಿಗೆ ಪ್ರಯತ್ನಿಸಿ ನಮ್ಮ ಖಾದ್ಯ ಪದಾರ್ಥಗಳನ್ನು ಪರಿಶುದ್ಧವಾಗಿಡುವುದಷ್ಟೇ ಅಲ್ಲದೇ ಇನ್ನೂ ಕೆಲವು ತತ್ತ್ವಗಳನ್ನೂ ಅನುಸರಿಸಬೇಕು. ಇವೆಲ್ಲ ಬಾಹ್ಯ ಶುದ್ಧಿಯಾಯಿತು. ಇನ್ನು ಆಂತರಿಕ ಶುದ್ಧಿಯ ವಿಷಯವಾಗಿ ಯೋಗದರ್ಶನದಲ್ಲಿನ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ-ಧ್ಯಾನಧಾರಣ ಸಮಾಧಿಗಳು ಮತ್ತು ನಮ್ಮ ನಿತ್ಯನೈಮಿತ್ತಿಕ ಕ್ರಿಯೆಗಳು ಅಂತಶುದ್ಧಿಗೇ ನಿಯಮಿಸಲ್ಪಟ್ಟಿವೆ. ಆದ್ದರಿಂದ ನಮ್ಮ ಜೀವನದ ಸಾರ್ಥಕತೆಗೆ ಶರೀರ ಮತ್ತು ಅಂತಃಕರಣಗಳನ್ನು ಅತ್ಯಂತ ಶುದ್ಧವನ್ನಾಗಿಟ್ಟುಕೊಳ್ಳಬೇಕಾದುದು ದಾರ್ಶನಿಕ ರಹಸ್ಯದ ಅರಿವಿಗೆ, ಅರಿವಿನಿಂದ ಆನಂದಕ್ಕೆ ಕಾರಣವಾಗುತ್ತದೆ.

ಸ್ವತಂತ್ರವನ್ನು ಪಡೆದ ನಾವು ಈ ದಾರ್ಶನಿಕ ತತ್ತ್ವಗಳನ್ನರಿತು ವಿಶ್ವಪ್ರೇಮ ವಿಶ್ವಭ್ರಾತೃತ್ವ ಬೆಳೆಸಿ ವಿಶ್ವಕ್ಕೆ ಆದರ್ಶರಾಗಲು ನಾವೆಲ್ಲ ದರ್ಶನ ಶಾಸ್ತ್ರದ ಶಿಕ್ಷಣ ಪಡೆಯಬೇಕು. ನಮ್ಮ ಮಾಸ ಪತ್ರಿಕೆಗಳು ವಾರ ಪತ್ರಿಕೆಗಳು ವಾರಕೊಮ್ಮೆ ತಿಂಗಳಿಗೊಮ್ಮೆಯಾದರೂ ದಾರ್ಶನಿಕ ಪ್ರಬಂಧಗಳನ್ನೂ ಪ್ರಕಾಶಕ್ಕೆ ತರಬೇಕು. ದಾರ್ಶನಿಕ ಗ್ರಂಥಗಳ ನಿರ್ಮಿತಿಗೆ ಎಲ್ಲರೂ ಎಲ್ಲ ರೀತಿಯಲ್ಲಿಯೂ ಸಹಕರಿಸಬೇಕು.

ದರ್ಶನವೇ ಭಾರತೀಯರ ಜೀವನ. ಧರ್ಮ ಮತ್ತು ಆಚಾರಗಳ ಹಿನ್ನಲೆಯೂ ದರ್ಶನವೇ. ಇನ್ನು ನಾವು ದರ್ಶನ ಧರ್ಮಗಳನ್ನು ಉಪೇಕ್ಷಿಸಲಾಗದು. ಭಾರತೀಯ ದರ್ಶನಗಳ ಭವಿಷ್ಯ ಉಜ್ವಲವಾಗಿದೆ. ಇಂದಿನ ಧಾರ್ಮಿಕ ಕಲಹಗಳಿಗೆ ಬಾಹ್ಯರೂಪಗಳಿಗೆ ನಾವು ಗಮನಕೊಟ್ಟು ಮುಖ್ಯ ತತ್ತ್ವಗಳನ್ನು ಕಡೆಗಣಿಸಿರುವುದೇ ಕಾರಣವಾಗಿದೆ.

ವಿಶ್ವವಿಧಾತನು ಭಾರತೀಯರ ಜೀವನವನ್ನು ದಾರ್ಶನಿಕಮಯವನ್ನಾಗಿಸಲಿ, ನಮ್ಮಲ್ಲಿನ ಅಂತಃಕಲಹಗಳನ್ನು ದೂರ ಮಾಡಲಿ, ನಮ್ಮಲ್ಲಿ ವಿಶ್ವಪ್ರೇಮ ವಿಶ್ವಭ್ರಾತೃತ್ವವನ್ನು ಬೆಳೆಸಲಿ. ಭಾರತ ದೇಶ ನಿಜವಾಗಿಯೂ ಸ್ವತಂತ್ರವೆನಿಸಿ ಭಾರತ ದೇವಿಯು ವಿಶ್ವಕ್ಕೆ ಆದರ್ಶವಾಗಿ ವಿಶ್ವಗುರುವಿಷ್ಟರದಲ್ಲಿ ವಿಶ್ವತೋಮುಖವಾಗಿ ವಿರಾಜಿಸಲಿ

ಸರ್ವಸ್ತರತು ದುರ್ಗಾಣಿ
ಸರ್ವೋಭದ್ರಾಣಿ ಪಶ್ಯತು
ಸರ್ವಃ ಕಾಮಾನವಾಪ್ನೋತು
ಸರ್ವಸ್ಸರ್ವತ್ರನಂದತು

ಓಂ ಶಾಂತಿಃ ಶಾಂತಿಃ ಶಾಂತಿಃ

ಸತ್ಯಮ್ ಶಿವಮ್ ಸುಂದರಂ

ದ್ವೈತ ಸಿದ್ಧಾಂತ

(ಮುದ್ರಾಡಿ ಜನಾರ್ದನಾಚಾರ್ಯ ಶಿರೋಮಣಿ, ಸಂಪಾದಕ 'ಶ್ರೀ ಕೃಷ್ಣ ಸಂದೇಶ' ಮದ್ರಾಸ್.)

'ನಾನು, ನನ್ನದು.' ಎಂದು ಅಹಂಕರಿಸುತ್ತಿರುವುದು ಜೀವಾತ್ಮ. ಆ ಜೀವಾತ್ಮನು 'ದೇವರೇ! ಕಾಪಾಡು' ಎಂದು ಯಾರಿಗೆ ಮೊರೆಯಿಡುತ್ತಿರುವನೋ ಆ ದೇವರು ಪರಮಾತ್ಮ. ಈ ಜೀವ–ಪರಮಾತ್ಮರು ಎಂದೆಂದೂ ಬೇರೆಬೇರೆಯಾಗಿಯೇ ಇರತಕ್ಕವರೆಂದು ಹೇಳುವ ಮತವು ದ್ವೈತಮತ. ಪ್ರಮುಖ ವೇದಾಂತಮಾರ್ಗಗಳಲ್ಲಿ ಇದು ಕೊನೆಯದಾಗಿ ತೋರುವುದರಿಂದ 'ದ್ವೈತಸಿದ್ಧಾಂತ'ವೆಂದೂ ಕರೆಯಲ್ಪಡುತ್ತಿದೆ. ಈ ತತ್ವವು ಆಗಮಗಳಲ್ಲಿ ಮೊದಲೇ ವರ್ಣಿತವಾಗಿದ್ದರೂ ವಿವಿಧ ಭಾಷ್ಯಗಳ ಪ್ರಚಾರದಿಂದ ಮರೆಮಾಡಲ್ಪಟ್ಟಿತ್ತು. ಈಗ್ಯೆ ೭೦೦ ವರ್ಷಗಳ ಹಿಂದೆ ಶ್ರೀ ಮಧ್ವಾಚಾರ್ಯರು ವೇದಾಂತಸೂತ್ರಗಳಿಗೆ ಹೊಸ ಭಾಷ್ಯವನ್ನು ರಚಿಸಿ ಈ ಮಾರ್ಗವನ್ನು ಪುನರುಜ್ಜೀವನಗೊಳಿಸಿದುದರಿಂದ ಇದಕ್ಕೆ 'ಮಧ್ವಸಿದ್ಧಾಂತ'ವೆಂದೂ ಹೇಳುವರು.

ಶ್ರೀ ಮಧ್ವಾಚಾರ್ಯರು ಮತ್ತು ಅವರ ಸಿದ್ಧಾಂತದ ಮುಖ್ಯ ವಿಷಯಗಳನ್ನೂ, ಇಂದಿಗೆ ಆ ತತ್ವಗಳ ಸಾಧುತ್ವವು ಹೇಗೆ ಉಳಿದಿದೆಯೆಂಬುದನ್ನೂ ಸ್ವಲ್ಪದರಲ್ಲಿ ತೋರಿಸುವುದು ದುಃಸಾಧ್ಯವಾದರೂ ಯತ್ನಿಸುತ್ತಿದ್ದೇವೆ.

ವೇದಾಂತಿಗಳಲ್ಲಿ ಶ್ರೀ ಮಧ್ವಾಚಾರ್ಯರ ಸ್ಥಾನವೊಂದು ವಿಶಿಷ್ಟವಾದುದು. ಸಾಮಾನ್ಯ ಜನರು ವೇದಾಂತಿಯ ಸ್ಥಾನ-ಮಾನವನ್ನು ಅರಿಯರು. ಹಲವು ವಿದ್ಯೆಗಳಿಂದ ಕೀರ್ತಿಯನ್ನು ಗಳಿಸಬಹುದು. ಸಂತೆಯನ್ನು ಮೆಚ್ಚಿಸಿ–ನಟ–ವಿಟ–ನರ್ತಕಿಯರೂ ಪ್ರಸಿದ್ಧರಾಗುವರು. ಯಾರು ಪ್ರಸಿದ್ಧರೋ ಅವರನ್ನು ಲೋಕವು ಹೊಗಳುವುದು, ಪುರಸ್ಕರಿಸುವುದು. ಆವುದೋ ಒಂದು ಮಾನಸಿಕ ವೇಗಕ್ಕೊಳಗಾಗಿ ಅವರು ಹೇಳಿದಂತೆ ಕುಣಿಯುವುದು. ಈ ದೃಷ್ಟಿಯಿಂದ ವೇದಾಂತಿಯನ್ನು ಅಳೆಯಬಾರದು. ವೇದಾಂತಿಯ ಅಭ್ಯಾಸವು ಏಕಾಂತದಲ್ಲಿ. ಉಪದೇಶವು ಕಾತರಗೊಂಡು ಬಂದು ಶರಣು ಹೋಗುವವರಲ್ಲಿ. ಅವರಿಗೆ ಧನ—ಕನಕವೂ ಬೇಡ, ಕೀರ್ತಿಯೂ ಬೇಡ. ಆದರೆ, ಇಂದು ಯಾವುದು ಎಲ್ಲೆಲ್ಲೂ ದೊರಕುವುದಿಲ್ಲವೆಂದು ಸಂಶೋಧಕರೂ ನಿರಾಶೆಗೊಳ್ಳುತ್ತಿರುವರೋ ಅಂತಹ ಶಾಂತಿಯ ಬೀಜವನ್ನು ವೇದಾಂತಿಗಳು ಹುಡುಕಿ ಕೃಷಿ ಮಾಡುತ್ತಿರುವರು. ಅವರ ಆರಂಭವೇ ಶಾಂತಿ ಪಾಠದಿಂದ.

ಮನುಷ್ಯನಿಗೆ ಇಹದಲ್ಲೂ ಪರದಲ್ಲೂ ಒಂದು ನಿಶ್ಚಿತವಾದ ಸ್ಥಿತಿ—ಗತಿ, ಅವುಗಳ ಸಾಧನಮಾರ್ಗ ಇವುಗಳನ್ನು ಕಂಡುಹಿಡಿದು ಸಮಾಜದಲ್ಲಿ ಬೇರೂರಿಸಿ ಹೋಗುವ ವೇದಾಂತಿಯ ಸ್ಥಾನವನ್ನು ಎಲ್ಲಾ ಪ್ರಸಿದ್ಧ ಪದವಿಗಳಿಗಿಂತಲೂ ಉಚ್ಚತಮವೆಂದು ನಾವು ತಿಳಿಯಬೇಕು. ಇಂತಹ ವೇದಾಂತಿಗಳಲ್ಲಿ ಶ್ರೀ ಮಧ್ವಾಚಾರ್ಯರು ಪ್ರಮುಖ ಸ್ಥಾನದಲ್ಲಿ ದುಡಿದು ಸಮಾಜಕ್ಕೆ ಸುಲಭವಾದೊಂದು ಶಾಂತಿಯ ಮಾರ್ಗವನ್ನು ಪ್ರಕಾಶಪಡಿಸಿದ್ದರೆಂದು ಅವರ ಚರಿತ್ರೆ ಮತ್ತು ತತ್ವಗಳನ್ನು ಮನನ ಮಾಡುವ ನಮಗೆ ತೋರುತ್ತದೆ.

ಆಚಾರ್ಯರ ಕಾಲವಿಚಾರ

ಶ್ರೀ ಮಧ್ವಾಚಾರ್ಯರು ಶಾ. ಶಕ. ೧೧೬೦ (ಕ್ರಿ. ಶ. ೧೨೩೮) ವಿಳಂಬಿ ಸಂ। ಅಶ್ವಯುಜ ಶುದ್ಧ ೧೦ ಬುಧವಾರ ದಿನ ಮಧ್ಯಾಹ್ನ ಅವತರಿಸಿದರೆಂದು ತಿಳಿದು ಬಂದಿದೆ. ಉಡುಪಿ ಶ್ರೀ ಫಲಿಮಾರು ಮಠದ ಮೂಲ ಗುರುಗಳಾದ ಹೃಷೀಕೇಶತೀರ್ಥರು ಶ್ರೀ ಆಚಾರ್ಯರ ಎಲ್ಲಾ ಗ್ರಂಥಗಳನ್ನೂ ಸ್ವಹಸ್ತದಿಂದ ಬರೆದಿರುವ ಪುಸ್ತಕವು ಈಗಲೂ ಇದೆ. ಅದರಲ್ಲಿ 'ಸಂಪ್ರದಾಯಪದ್ಧತಿ' 'ಅಣುಮಧ್ವವಿಜಯ'ಗಳೆಂಬ ಎರಡು ಅವರ ಸ್ವಕೃತಿಗಳಿವೆ. ಅದರಲ್ಲಿ—

ತ್ರಿಶತಾಬ್ದೋತ್ತರ ಚತುಸ್ಸಹಸ್ರಾಬ್ದೇಭ್ಯ ಉತ್ತರೇ ।
ಏಕೋನಚತ್ವಾರಿಂಶಾಬ್ದೇ ವಿಳಂಬಿ ಪರಿವತ್ಸರೇ ॥

... ...

ಏಕೋನಾಶೀತಿವರ್ಷಾಣಿ ನೀತ್ವಾ ಮಾನುಷದೃಷ್ಟಿಗಃ ।
ಪಿಂಗಲಾಬ್ದೇ ಮಾಘಶುದ್ಧನವಮ್ಯಾಂ ಬದರೀಂ ಗತಃ ॥

ಅಂದರೆ—'ಕಲಿ ೪೩೩೯ ವಿಳಂಬಿ ಸಂವತ್ಸರದಲ್ಲಿ ಶ್ರೀ ಮಧ್ವಾಚಾರ್ಯರು ಹುಟ್ಟಿ, ೭೯ ವರ್ಷಕಾಲ ಶಿಷ್ಯರೊಡನಾಟದಲ್ಲಿದ್ದು, ಪಿಂಗಲ ಸಂ। ಮಾಘ ಶುದ್ಧ ನವಮಿ

ದಿನ ಬದರಿ ಕ್ಷೇತ್ರಕ್ಕೆ ಹೋದರು' ಎಂದು ಹೇಳಿರುತ್ತದೆ. ಆದರೆ–ಆಚಾರ್ಯರು ತಮ್ಮ 'ಭಾರತತಾತ್ಪರ್ಯನಿರ್ಣಯ'ದಲ್ಲಿ—

'ಚತುಸ್ಸಹಸ್ರೇ ತ್ರಿಶತೋತ್ತರೇ ಗತೇ ಸಂವತ್ಸರಾಣಾಂತು ಕಲೌ ಪೃಥಿವ್ಯಾಂ'

ಅಂದರೆ—'ಕಲಿಯುಗದಲ್ಲಿ ೪೩೦೦ ವರ್ಷಗಳು ದಾಟುತ್ತಿರಲು ಭೀಮಸೇನನು ಬ್ರಾಹ್ಮಣನಾಗಿ ಹುಟ್ಟಿ ಹರಿತತ್ವವನ್ನು ಪ್ರಕಾಶಪಡಿಸಿದ'ನೆಂದು ಹೇಳಿಕೊಂಡಿದ್ದಾರೆ. ಇದಕ್ಕೂ ಹಿಂದೆ ಹೇಳಿದ ಕಾಲಕ್ಕೂ ೩೯ ವರ್ಷಗಳ ವ್ಯತ್ಯಾಸವಿದೆಯಾದರೂ—ಆಚಾರ್ಯರು ಶತಮಾನಗಳ ದೃಷ್ಟಿಯಿಂದ ದೊಡ್ಡ ಸಂಖ್ಯೆಯನ್ನು ಮಾತ್ರ ಹೇಳಿರುವರೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಕೊಯಮುತ್ತೂರು ವಕೀಲ್ ಶ್ರೀ ಸಿ. ಎಂ. ಪದ್ಮನಾಭಾಚಾರ್ಯರು ತಮ್ಮ 'ಗೀತಾರ್ಥಪ್ರಕಾಶ'ದಲ್ಲಿ ಆಚಾರ್ಯರ ಕಾಲದ ಕುರಿತು ತುಂಬಾ ವಿಚಾರ ಮಾಡಿದ್ದಾರೆ. ಆಚಾರ್ಯರ ಸಾಕ್ಷಾಚ್ಛಿಷ್ಯರಾದ ನರಹರಿತೀರ್ಥರು ಆಂಧ್ರ ದೇಶದಲ್ಲಿ ೧೨ ವರ್ಷ ರಾಜ್ಯಭಾರವನ್ನು ಮಾಡಿದುದು ಚರಿತ್ರಪ್ರಸಿದ್ಧವಾಗಿದೆ. ಆ ಕಾಲದಲ್ಲಿ ನರಹರಿತೀರ್ಥರು ಶ್ರೀ ಕೂರ್ಮಕ್ಷೇತ್ರದಲ್ಲಿ ಯೋಗ ನರಸಿಂಹ ಪ್ರತಿಷ್ಠೆಯನ್ನು ಮಾಡಿ ಮಂಟಪದ ಕಂಬದಲ್ಲಿ ಆ ಕಾಲವನ್ನು ಶಾಸನ ಮಾಡಿಸಿರುತ್ತಾರೆ. ಅಲ್ಲದೆ, ಅವರು ರಾಜ್ಯವನ್ನು ಬಿಟ್ಟುಬರುವಾಗ ಮೂಲರಾಮ ವಿಗ್ರಹವನ್ನು ತಂದು ಆಚಾರ್ಯರಿಗೆ ಕೊಟ್ಟರೆಂದೂ ಆಚಾರ್ಯರು ಆ ದೇವರನ್ನು ಕೆಲವೇ ದಿನ ಪೂಜಿಸಿ ಪದ್ಮನಾಭತೀರ್ಥರಿಗೆ ಕೊಟ್ಟರೆಂದೂ ತಿಳಿದಿದೆ. ತಿರುವನಂತಪುರದಲ್ಲಿ ಶೃಂಗೇರಿಯ ವಿದ್ಯಾಶಂಕರ ಸ್ವಾಮಿಗಳು ಆಚಾರ್ಯರೊಡನೆ ವಾದಿಸಿದರೆಂಬ ಕಾಲವನ್ನೂ, ಆಚಾರ್ಯರ ದಿಗ್ವಿಜಯಕಾಲಗಳಲ್ಲಿ ಭೇಟಿಯಾದ ಇತರ ಗಣ್ಯವ್ಯಕ್ತಿಗಳ ಕಾಲಗಳನ್ನೂ ವಿಚಾರ ಮಾಡಿದರೆ ಶಕ ೧೧೬೦ ಎಂಬುದೇ ಸರಿಹೋಗುವುದು. ಆಚಾರ್ಯರ ಸಾಕ್ಷಾಚ್ಛಿಷ್ಯರಾದ ಹೃಷಿಕೇಶತೀರ್ಥರ ಪುಸ್ತಕದಲ್ಲಿನ ಕಾಲ ಮತ್ತು ಸಂವತ್ಸರಗಳನ್ನು ನಂಬದಿರಲು ಕಾರಣವಿಲ್ಲ. ಆಚಾರ್ಯರೇ ಕಾಲವನ್ನು ಹೇಳಿರುವಾಗ ಅದನ್ನು ಕಂಡವರು ಸುಳ್ಳಾಗಿ ವ್ಯತ್ಯಾಸವನ್ನು ಮಾಡಬೇಕಾದ ಉದ್ದೇಶವೂ, ಪ್ರಯೋಜನವೂ ಯಾರಿಗೂ ಇರಲಾರದು. ಆದುದರಿಂದ ಆಚಾರ್ಯರ '೪೩೦೦ ಕಳೆಯಲು' ಎಂಬ ಮಾತಿಗೆ ಮೇಲೆ ೩೯ ಆಗಿದೆಯೆಂದೂ ಆ ಚಿಲ್ಲರೆ ವರ್ಷಗಳನ್ನು ಅವಿವಕ್ಷೆಯಿಂದ ಬಿಟ್ಟಿರುವರೆಂದೂ ತಿಳಿಯಭೇಕು.

ಅಲ್ಲದೆ–ಮಹಾತ್ಮರ ವಿಷಯದಲ್ಲಿ ಸ್ವಲ್ಪ ಮಟ್ಟಿನ ಕಾಲ ವ್ಯತ್ಯಾಸವು ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ. ಮುಖ್ಯವಾಗಿ ನಾವು ಗಮನಿಸಬೇಕಾದುವು ಮಹಾತ್ಮರ ಶೀಲ ಮತ್ತು ತತ್ವಗಳೇ.

ಆಚಾರ್ಯರ ವ್ಯಕ್ತಿತ್ವ ಮತ್ತು ಚರಿತ್ರಸಾರ

ಆಚಾರ್ಯರ ವ್ಯಕ್ತಿತ್ವವು ಚಾರಿತ್ರಿಕದೃಷ್ಟಿಯಿಂದಲೂ ಪೌರಾಣಿಕದೃಷ್ಟಿಯಿಂದಲೂ ವಿಮರ್ಶಿಸತಕ್ಕುದಾಗಿದೆ. ಚರಿತ್ರೆಗೆ 'ಸುಮಧ್ವವಿಜಯ' ಕಾವ್ಯವೇ ಮುಖ್ಯವಾದ ಆಧಾರವೆನ್ನಬಹುದು. ಕುಂಬಳೆ ರಾಜ ಜಯಸಿಂಹನ ಆಸ್ಥಾನದಲ್ಲಿ ಆಚಾರ್ಯರೊಡನೆ ೧೫ ದಿನ ವಾದ ಮಾಡಿ ಸೋತ ಉದ್ದಾಮ ಪಂಡಿತ ಕವಿಕುಲತಿಲಕ ತ್ರಿವಿಕ್ರಮ ಪಂಡಿತಾಚಾರ್ಯರ ಮಗ ನಾರಾಯಣ ಪಂಡಿತಾಚಾರ್ಯರು ಈ ಕಾವ್ಯವನ್ನು ಬರೆದರು. ಹೃಷೀಕೇಶತೀರ್ಥರೂ ಕೆಲವು ವಿಷಯಗಳನ್ನು ಹೇಳಿರುವರು.

ಆಚಾರ್ಯರು ಉಡುಪಿಯಿಂದ ೭ ಮೈಲು ದಕ್ಷಿಣಕ್ಕೆ 'ಪಾಜಕ ಕ್ಷೇತ್ರ'ವೆಂಬಲ್ಲಿ ಹುಟ್ಟಿದರು. ಮಧ್ಯಗೇಹ ಭಟ್ಟರು ಮತ್ತು ವೇದವತಿಯರು ಇವರ ಪಿತೃಗಳು. ಈ ದಂಪತಿಗಳು ೧೨ ವರ್ಷಕಾಲ ಉಡುಪಿ ಶ್ರೀ ಅನಂತಾಸನ ದೇವರ ಉಪಾಸನೆಯನ್ನು ಮಾಡಿ ಆಚಾರ್ಯರು ಹುಟ್ಟಿದರಾದುದರಿಂದ ಹುಟ್ಟಿದ ಕೂಡಲೇ ಪಿತೃಗಳು ಶಿಶುವನ್ನು ದೇವರಲ್ಲಿ ಕೊಂಡು ಹೋಗಿ ಕಾಣಿಕೆಯಾಗಿಟ್ಟರು. ಇದರಿಂದಲೋ ಏನೋ, ಅವರು ಮುಂದೆ ದೇವರ ಮಗುವೇ ಆಗಿಬಿಟ್ಟರು. ಇವರ ಬಾಲಲೀಲೆಗಳು ವಿಚಿತ್ರವಾಗಿದ್ದುವು. 'ವಾಸುದೇವ' ಎಂಬ ನಾಮಾಂಕಿತವಾಯಿತು. ತಂದೆಯಿಂದಲೂ, ತೋಟಂತಿಲ್ಲಾಯ ವಂಶದ ಬ್ರಾಹ್ಮಣನಿಂದಲೂ ವಿದ್ಯಾಭ್ಯಾಸವಾರಂಭವಾಯಿತಾದರೂ — ವಾಸುದೇವಾಚಾರ್ಯರು ಸ್ವಪ್ರತಿಭೆಯಿಂದ ಸಮಸ ವೇದವೇದಾಂತ-ಪುರಾಣತತ್ವಗಳನ್ನೆಲ್ಲಾ ಮನನ ಮಾಡಿ ಬಾಲ್ಯದಲ್ಲೇ ವಿದ್ವಾಂಸರನ್ನು ಬೆರಗುಗೊಳಿಸಿದರು. ಮಾತ್ರವಲ್ಲ, ಸ್ವಯಂ ವಿರಕ್ತರಾಗಿ–ಆ ಕಾಲದಲ್ಲಿ ಉಡುಪಿಯಲ್ಲಿ ನೆಲೆಸಿದ್ದ 'ಅಚ್ಯುತಪ್ರೇಕ್ಷಾಚಾರ್ಯ'ರೆಂಬ ಸನ್ಯಾಸಿ

ಗಳಿಂದ ಸಂನ್ಯಾಸಾಶ್ರಮವನ್ನೂ ಸ್ವೀಕರಿಸಿ ಗುರುಸ್ಥಾನದಲ್ಲಿ ಕುಳಿತು ವೈಷ್ಣವಸಿದ್ಧಾಂತವನ್ನು ಸಮರ್ಥಿಸಿ ಉಪದೇಶಿಸ ಹತ್ತಿದರು. 'ಪೂರ್ಣಪ್ರಜ್ಞ', 'ಆನಂದತೀರ್ಥ' ಎಂಬ ಬಿರುದಾಂಕಿತಗಳನ್ನು ಪಡೆದರು.

ಆಗ ಪ್ರಚಾರವಿದ್ದ ಮತಗಳಲ್ಲಿ 'ನಾನೇ ದೇವರು' ಎಂಬಂತಹ ಅಹಂಕಾರವು ಅಡಗಿದ್ದಂತೆ ಇವರಿಗೆ ಅನೇಕ ದೋಷಗಳೇ ತೋರಹತ್ತಿದುವು. ಬ್ರಹ್ಮವಾದವು ಪ್ರಚಾರವಾಗಿದ್ದರೂ—ಕಲಿಕಾಲದಲ್ಲಿ ಸರಿಯಾಗಿ ಅನುಷ್ಠಿಸಲಾರದ ಪಶುಯಜ್ಞಾದಿ ಜಟಿಲವಾದ ಕರ್ಮಮಾರ್ಗವೇ ಮೆರೆಯುತಿತ್ತು. ಆಚಾರ್ಯರಿಗೆ ಐಕ್ಯವಾದವು ಅಸಹ್ಯವೆನಿಸಿತು. ಕರ್ಮಮಾರ್ಗವು ಮಧ್ಯಮವೆನಿಸಿತು. ವೇದೋಕ್ತ ಪರಮಾತ್ಮನು ಮೂಲೆಗೆ ತಳ್ಳಲ್ಪಟ್ಟುದನ್ನು ಕಂಡು ಕಳವಳವಾಯಿತು. ದಾರಿಗಾಣದ ಭಕ್ತರನ್ನು ಕಂಡು ಕರುಣೆ ಹುಟ್ಟಿತು. ಕೂಡಲೇ ಆಚಾರ್ಯರು ಶ್ರೀ ವೇದವ್ಯಾಸರ ವೇದಾಂತಸೂತ್ರ (ಬ್ರಹ್ಮಮೀಮಾಂಸಾ)ಗಳ ಹಿಂದಿನ ಭಾಷ್ಯಗಳನ್ನೆಲ್ಲಾ ವಿಮರ್ಶಿಸಿ ಸರಿ ತೋರದೆ, ಅನೇಕ ಶ್ರುತಿ ಸ್ಮೃತ್ಯಾಧಾರಗಳಿಂದ ಹೊಸ (ದ್ವೈತ) ಭಾಷ್ಯವನ್ನು ರಚಿಸಿ, ಹರಿಸರ್ವೋತ್ತಮಸಿದ್ಧಾಂತ ಹಾಗೂ ಭಕ್ತಿಮಾರ್ಗಗಳನ್ನು ವ್ಯವಹಾರ್ಯವಾಗುವಂತೆ ೩೭ ಗ್ರಂಥಗಳ ಮೂಲಕ ನಿರ್ಣಯಿಸಿ ಶಿಷ್ಯಕೋಟಿಗೆ ಉಪದೇಶಿಸಹತ್ತಿದರು. ಇವರ ಸನ್ಯಾಸದೀಕ್ಷೆಗೆ ಕೆಲವೇ ದಿನಗಳಿಂದ ಹಿಡಿದು, ಆಸೇತುಹಿಮಾಚಲ ಇವರ ದಿಗ್ವಿಜಯಗಳ ಕಾಲಗಳವರೆಗೆ ಬಂದ ಯಾವ ವಿದ್ವಾಂಸನೂ, ಜಟ್ಟಿಯೂ ದೇಹಬಲ–ಬುದ್ಧಿಬಲಗಳಿಂದ ಆಚಾರ್ಯರನ್ನು ಗೆಲ್ಲಲು ಸಮರ್ಥನಾಗಿದ್ದಿಲ್ಲ. ಆಚಾರ್ಯರು ತಮ್ಮ ಸಂಚಾರಗಳಲ್ಲಿ ಅನೇಕ ವಿಚಿತ್ರಗಳನ್ನು ತೋರಿಸಿದ್ದರು. ಅನೇಕರು ಆಚಾರ್ಯರ ಶಿಷ್ಯರಾದರು. ಗಂಗೆಗೆ ಆಚೆ ಮುಸಲ್ಮಾನ ರಾಜನೂ ಇವರ ಮಾತಿಗೆ ಮೆಚ್ಚಿ ಅರ್ಧರಾಜ್ಯವನ್ನೇ ಕೊಡಲು ಆಚಾರ್ಯರು ಸ್ವೀಕರಿಸದೆ ಮುಂದೆ ಹೋದರು. ಶೋಭನಭಟ್ಟರೆಂಬವರು ಆಚಾರ್ಯರ ಶಿಷ್ಯರಾಗಿ ಪದ್ಮನಾಭತೀರ್ಥರೆನಿಸಿ ಮಠತ್ರಯದ ಮೂಲಪುರುಷರಾದರು. ಸ್ಥಳದಲ್ಲೂ ತಮ್ಮ ಸಿದ್ಧಾಂತದ ಪ್ರಚಾರಕ್ಕಾಗಿ ೮ ಮಂದಿ ಬಾಲಯತಿಗಳನ್ನು ನಿಯೋಜಿಸಿದರು. ಶ್ರೀ ಕೃಷ್ಣನ ಪ್ರತಿಷ್ಠೆ ಮಾಡಿದರು. ಎರಡು ಬಾರಿ ಬದರೀ ಯಾತ್ರೆಯನ್ನು ಮಾಡಿದರು. ಬರುವಾಗ ಹಲವು ಸಾಲಿಗ್ರಾಮಗಳನ್ನು ತಂದು ಮಠಗಳಲ್ಲಿರಿಸಿದರು. ಅವರು ತಂದ ಅಸ್ಫೋಟ ಸಂಪುಟ ಅಂದರೆ ಮುಚ್ಚಳವನ್ನು ತೆರೆಯಲು ಬಾರದ ಸಂಪುಟವು ಈಗಲೂ ಸುಬ್ರಹ್ಮಣ್ಯದಲ್ಲಿದೆ. ಆಚಾರ್ಯರ ತಮ್ಮಂದಿರೇ 'ವಿಷ್ಣುತೀರ್ಥ'ರೆಂಬ ಹೆಸರಿನಿಂದ ಸುಬ್ರಹ್ಮಣ್ಯ ಮಠದ ಮೂಲಪುರುಷರಾದರು. ಇವಲ್ಲದೆ, ಕಾವುಮಠ, ಕಟ್ಪತಿಲ, ನಡ್ವಂತಾಡಿ, ರಾಮಕುಂಜ ಮೊದಲಾದ ಸ್ಥಳಗಳೂ ಆಚಾರ್ಯರ ಚರಿತ್ರೆಗೆ ಸಂಬಂಧಿಸಿವೆ. ಮುಖ್ಯವಾಗಿ ಅವರ 'ಗೀತಾಭಾಷ್ಯ', 'ಸೂತ್ರಭಾಷ್ಯ' ಮೊದಲಾದ ೩೭ ಗ್ರಂಥಗಳು ನೂರಾರು ಟೀಕಾಟಿಪ್ಪಣಿಗಳೊಡನೆ ಇಂದಿಗೂ ಬೆಳಗುತ್ತಿವೆ. ಆಚಾರ್ಯರಿಗೆ ಸಂಬಂಧಿಸಿ ಇನ್ನನೇಕ ಕುರುಹುಗಳೂ, ಲಿಖಿತಾಧಾರಗಳೂ ಇರಬಲ್ಲುವು. ಅವೆಲ್ಲ ಸಂಶೋಧಕರನ್ನೆದುರು ನೋಡುತ್ತಿರಬಹುದು.

ಪೌರಾಣಿಕದೃಷ್ಟಿಯು ಇಂದು ಮಂದವಾಗಿದೆಯಾದರೂ ಆಚಾರ್ಯರ ಶಿಷ್ಯಕೋಟಿಯು ಇಂದಿಗೂ ನಿಸ್ಸಂದೇಹವಾಗಿಯೇ ನಂಬುತ್ತಿರುವ ವಿಚಾರವನ್ನು ನಾವಿಲ್ಲಿ ಸೂಚಿಸದಿದ್ದಲ್ಲಿ ಈ ಪರಿಚಯವು ಪೂರ್ಣವೆನಿಸಲಾರದಾದುದರಿಂದ ನಾಲ್ಕು ಮಾತುಗಳನ್ನು ಹೇಳುವೆವು.

ಶ್ರೀಮದಾಚಾರ್ಯರು ವೇದೋಕ್ತಪವಮಾನ (ವಾಯು) ದೇವರ ಅವತಾರವೆಂದು ಕೆಲವು ಮಂತ್ರಗಳಿಂದ ಹಾಗೂ ಆ ಮಂತ್ರಗಳ ವಿವರಣರೂಪವಾದ ಸ್ಮೃತಿ—ಪುರಾಣ—ಭಾರತವಚನಗಳೇ ಮೊದಲಾದ ಆಚಾರ್ಯರಿಗೂ ಹಿಂದಿನ ಆರ್ಷಸಾಹಿತ್ಯಗಳಿಂದ ತಿಳಿದುಬರುತ್ತದೆ.

ಹನುಮದ್ಭೀಮಮಧ್ವಾಖ್ಯಾಸ್ತ್ರಯೋ ವಾಯೋಃ ಸುತಾ ಇಮೇ ।

ಬ್ರಹ್ಮಾಂಡ ಮುಖಕಾಂಡ ಅ. ೨೮.

ವಾಯುಸ್ತು ಯತಿರೂಪೇಣ ಜನಿಷ್ಯತಿ ಕಲೌಯುಗೇ ।
ಸ ದಶಮತಿರ್ಭೂತ್ವಾ ಕಲೌಧರ್ಮಾನ್ ವದಿಷ್ಯತಿ ॥

ಸ್ಕಾಂದ ಅ. ೯.

'ನೈವಾಸ್ತಿ ವಾಯೋಃ ಸದೃಶಃ ಸದ್ಗುರುಶ್ಚ'

ವಾಯುಪುರಾಣ.

ಅಂದರೆ—'ವಾಯುದೇವರಿಗೆ ಹನುಮಂತ, ಭೀಮ, ಮಧ್ವರೆಂದು ಮೂರು ಮಂದಿ ಪುತ್ರರು. ವಾಯುದೇವರು ಕಲಿಯುಗದಲ್ಲಿ ಯತಿಯಾಗಿ ಅವತರಿಸಿ

ಪೂರ್ಣಪ್ರಜ್ಞರೆನಿಸಿ ಧರ್ಮವನ್ನು ಉಪದೇಶಿಸುವರು. 'ವಾಯುವಿಗೆ ಸಮಾನರಾದ ಗುರುವಿಲ್ಲ' ಇತ್ಯಾದಿ ವಚನಗಳಲ್ಲದೆ, ಭವಿಷ್ಯೋತ್ತರಪುರಾಣ, ಸ್ಕಾಂದ ಸಹ್ಯಾದ್ರಿ ಖಂಡ, ವೈಷ್ಣವಖಂಡ, ವಾಸಿಷ್ಠ ರಾಮಾಯಣ ಉತ್ತರಖಂಡ ಮೊದಲಾದುವಲ್ಲಿ ಶ್ರೀ ಮಧ್ವಾಚಾರ್ಯರ ಕುರಿತು ಸಂಗತಿಗಳು ಸಿಗುತ್ತವೆ.

ಭಾಷ್ಯಕಾರರೊಳಗೆಲ್ಲಾ ಸೂತ್ರಕಾರರಾದ ಶ್ರೀ ವೇದವ್ಯಾಸರನ್ನು ಗುರುವಿನಂತೆ ಸೇವಿಸಿ ಅವರ ಆಜ್ಞೆಯಂತೆ ಅವರ ಸಮ್ಮತವಾಗುವಂತೆ ಭಾಷ್ಯವನ್ನು ಬರೆದವರೆಂಬ ಸಂಗತಿಯು ಶ್ರೀ ಮಧ್ವಾಚಾರ್ಯರ ಚರಿತ್ರೆಯಲ್ಲಿ ಮಾತ್ರವೇ. ಪೂರ್ವರೂಪಗಳಲ್ಲಿ ಶ್ರೀ ರಾಮ– ಶ್ರೀ ಕೃಷ್ಣರನ್ನು ಆಶ್ರಯಿಸಿದವರಿಗೆ ಇದು ಯುಕ್ತಿಯುಕ್ತವೂ ಆಗಿದೆ. ಪರಮಾತ್ಮನ ಆಜ್ಞೆಯಂತೆ ಅಜ್ಞಾನವನ್ನು ನೀಗಿ ಸುಜ್ಞಾನವನ್ನು ಬೆಳಗಲು ಮಂತ್ರ ಪ್ರಸಿದ್ಧರಾದ ಮುಖ್ಯಪ್ರಾಣದೇವರೇ ಅವತರಿಸಿರುವರೆಂದು ಇಂದು ಅವರ ಶಿಷ್ಯಕೋಟಿಯು ನಂಬಿ ಆಚಾರ್ಯರನ್ನು ಉಪಾಸಿಸುತ್ತಿದೆ.

ಮುಂದೆ ಅವರ ಶಿಷ್ಯಪೀಳಿಗೆಯಲ್ಲಿ ಬಂದ ಮಹಾ ಮೇಧಾವಿಗಳೂ ತಪಸ್ಸಂಪನ್ನರೂ ಆದ ಶ್ರೀ ವಾದಿರಾಜರು, ಶ್ರೀ ವ್ಯಾಸರಾಯರು ಮೊದಲಾದವರು ತಾವೇ ಒಂದು ಸಿದ್ಧಾಂತವನ್ನು ಸ್ಥಾಪಿಸಲು ಸಮರ್ಥರಾಗಿದ್ದರೂ ಶ್ರೀಮದಾಚಾರ್ಯರ ಮಂತ್ರವರ್ಣಿತ ವ್ಯಕ್ತಿತ್ವವನ್ನೇ ಎತ್ತಿ ಹಿಡಿದು, ಅವರ ತತ್ವಗಳನ್ನೇ ಅನುಸರಿಸಿ, ಅವರ ಗ್ರಂಥಗಳನ್ನೇ ಟೀಕಾ-ಟಿಪ್ಪಣಿಗಳಿಂದ ಲಂಕರಿಸಿ ಗುರುಭಕ್ತಿಯನ್ನು ಪ್ರಚಾರ ಮಾಡಿದುದರಿಂದ-ಶಿಷ್ಯಸಮಾಜಕ್ಕೆ ಶ್ರೀಮದಾಚಾರ್ಯರಲ್ಲಿ ಯೋಗ್ಯತಾ ಮಹತ್ವಬುದ್ಧಿಯು ಹೆಚ್ಚಲಿಕ್ಕೆ ಕಾರಣವಾಯಿತು. ಅಂತೂ, ಎಲ್ಲಕ್ಕೂ ಮಿಗಿಲಾಗಿ–ಗೀತಾದಿ ಸದಾಗಮಗಳನ್ನಾಧರಿಸಿಕೊಂಡೇ ಭಾಷ್ಯಾದಿ ಗ್ರಂಥಗಳಿಂದ ಅವರು ಪ್ರಮೇಯಗಳನ್ನು ಸಾಧಿಸಿರುವ ರೀತಿ, ಅಜ್ಞಾನಗಳ ನಿರಾಕರಣ ಚಾತುರ್ಯ, ತೋರಿಸಿರುವ ತತ್ವನಿಷ್ಠೆ ಇವುಗಳನ್ನು ವಿಮರ್ಶಿಸಿದರೇ ಆಚಾರ್ಯರಿಗೆ ವಿಶಿಷ್ಟವಾದ ಸ್ಥಾನವೊಂದು ಕೊಡಬೇಕಾಗುತ್ತದೆ. ಆಚಾರ್ಯರ ವ್ಯಕ್ತಿತ್ವವನ್ನು ತಿಳಿದುಕೊಂಡ ಮೇಲೆ ಅವರ ತತ್ವಗಳನ್ನು ವಿಚಾರ ಮಾಡುವ.

ಆಚಾರ್ಯರ ಸಿದ್ಧಾಂತದ ಮುಖ್ಯ ತತ್ತ್ವಗಳು

ಶ್ರೀ ಮಧ್ವಾಚಾರ್ಯರ ಸಿದ್ಧಾಂತವನ್ನು ಒಂದೆರಡು ಪುಟಗಳಲ್ಲಿ ಹೇಳುವುದು ಕಷ್ಟವಾದರೂ–ಇತರ ಮತಗಳಿಗಿಂತ ಸುಲಭವಾಗಿ ಹೇಳಬಹುದು. ಒಂದನ್ನೊಂದು ಹೊಂದಿಕೊಂಡು ಕೆಲವೇ ಮುಖ್ಯ ತತ್ವಗಳಿರುವುವು. ಸಕಲ ಶಾಸ್ತ್ರಗಳಲ್ಲಿ ಹೇಳುವ ಹಲವು ದೇವತೆಗಳಲ್ಲಿ 'ಮಹಾವಿಷ್ಣು'ವೇ ಸರ್ವೋತ್ತಮನು. ಆತನನ್ನು ಗುರುಮುಖದಿಂದ ತಿಳಿದುಕೊಂಡು ಸರ್ವಾತ್ಮನಾ ನಂಬಿ ಭಜಿಸುವಂತಹ ಭಕ್ತಿಯೇ ಮುಕ್ತಿಗೆ ಸಾಧನವು. ಇದು ದ್ವೈತಸಿದ್ಧಾಂತದಲ್ಲಿ ಮುಖ್ಯತತ್ವ. ಶ್ರೀ ವೇದವ್ಯಾಸರು ಬ್ರಹ್ಮಮೀಮಾಂಸಾಸೂತ್ರಗಳಲ್ಲಿ–'ನಾರಾಯಣಾಖ್ಯ ಪರಬ್ರಹ್ಮನು ಸಕಲಗುಣಪೂರ್ಣನು, ದೋಷದೂರನು, ಜಗಜ್ಜನ್ಮಾದಿಕಾರಣನು. ಆತನನ್ನೇ ತಿಳಿಯಬೇಕು. ಹೊಂದಬೇಕು.' ಎಂದೇ ಹೇಳಿರುವರು. ಇದನ್ನೇ ಶ್ರೀ ಮಧ್ವಾಚಾರ್ಯರು ಶ್ರುತಿ-ಸ್ಮೃತಿ ಪುರಾಣವಚನಗಳಿಂದಲೂ ಸಮರ್ಥಿಸಿರುವರು. ಸ್ವಕಲ್ಪಿತವೇನೂ ಇಲ್ಲದೆ ಸೂತ್ರಕಾರರ ಇತರ ಸಮ್ಮತಿ ವಚನಗಳಿಂದಲೇ ಸೂತ್ರೋಕ್ತ ಪ್ರಮೇಯಗಳನ್ನು ತೋರಿಸಿರುವುದು ಮಧ್ವಭಾಷ್ಯದ ವೈಶಿಷ್ಟ್ಯ.

'ಏಕೋ ನಾರಾಯಣ ಆಸೀತ್' 'ವಾಸುದೇವೋ ವಾ ಇದಮಗ್ರ ಆಸೀತ್' 'ಅಗ್ನಿರ್ವೈ ದೇವಾನಾಮವಮೋ ವಿಷ್ಣುಃ ಪರಮಃ' 'ತತ್ವಂ ನಾರಾಯಣಃ ಪರಃ'

ಅಂದರೆ—'ನಾರಾಯಣನೊಬ್ಬನೇ ಇದ್ದನು. ವಾಸುದೇವನೇ ಸೃಷ್ಟಿಗೂ ಮೊದಲಿದ್ದನು, ದೇವತೆಗಳಲ್ಲಿ ಅಗ್ನಿಯು ಕಮ್ಮಿ, ವಿಷ್ಣುವೇ ಶ್ರೇಷ್ಠನು, ನಾರಾಯಣನೇ ಮುಖ್ಯ ತತ್ವವು' ಹೀಗೆ ನೂರಾರು ಮಂತ್ರಗಳನ್ನು ತೋರಿಸಿ—

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥
ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ ।
ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ ॥

ಎಂಬೀ ವ್ಯಾಸೋಕ್ತಿಗಳಿಂದ ಮಂತ್ರ—ಸೂತ್ರಾರ್ಥಗಳನ್ನು ವಿವರಿಸಿ ಸಮ್ಮತಿಪಡಿಸಿರುವರು.

ಅಂತಹ ಪರಮಾತ್ಮನು—

ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ ಕೇನಚಿತ್ ।

ಅಂದರೆ—'ವಿಷ್ಣುವು ಭಕ್ತಿಯಿಂದಲೇ ಪ್ರಸನ್ನನಾಗತಕ್ಕವನು, ಬೇರಾವುದರಿಂದಲೂ ಅಲ್ಲ'ವೆಂದು ಸಾಧಿಸಿರುತ್ತಾರೆ. ಶ್ರೀ ವ್ಯಾಸರೂ 'ಓಂ ಅಂಬುವದಗ್ರಣಾತ್ತು ನ ತಥಾತ್ವಂ ಓಂ' ಎಂಬಿತ್ಯಾದಿ ಸೂತ್ರಗಳಿಂದ ಒಂದು ಪಾದವನ್ನೇ ಭಕ್ತಿಯ ವಿವರಣೆಗಾಗಿ ರಚಿಸಿರುತ್ತಾರೆ. ಗೀತೆಯಲ್ಲೂ—'ನಾಹಂ ವೇದೈರ್ನತಪಸಾ......ಭಕ್ತ್ಯಾತ್ವನನ್ಯಯಾ ಶಕ್ಯಃ' ಎಂದು ಮುಂತಾಗಿ ಹೇಳಿ—ಮೋಕ್ಷಸಾಧನ ಸಾಮುಗ್ರಿಗಳಲ್ಲಿ ಭಕ್ತಿಯೇ ದೊಡ್ಡದೆಂದು ಹೇಳಿದೆ. ಉಳಿದ ಸಾಧನಗಳೆಲ್ಲ ಭಕ್ತಿಯನ್ನು ಬಲಪಡಿಸಲಿಕ್ಕೆಂದು ಆಚಾರ್ಯರ ಸಿದ್ಧಾಂತ.

ಹೀಗೆ (೧) ನಾರಾಯಣನೇ ಪರದೈವವೆಂದೂ, (೨) ಭಕ್ತಿಯೇ ಮುಖ್ಯ ಸಾಧನವೆಂದೂ ಸಮರ್ಥಿಸಿದ ಮೇಲೆ ಆಚಾರ್ಯರು ಇವಕ್ಕೆ ಹೊಂದಿಕೊಂಡ ಇತರ ತತ್ವಗಳನ್ನು ಸಮರ್ಥಿಸಿರುವರೆನಬಹುದು. ನಾರಾಯಣನು ಸರ್ವೋತ್ತಮನಾದರೆ ಆ ಸರ್ವವಾವುದು? ಅದುವೇ ಈ ಚರಾಚರ ಜಗತ್ತು, ಧರ್ಮ ಅದೃಷ್ಟಾದಿಗಳು; 'ವಿಶ್ವಂ ಸತ್ಯಂ ಮಘವಾನಾ' 'ಯಚ್ಚಿಕೇತ ಸತ್ಯಮಿತ್' ಇತ್ಯಾದಿ ಶ್ರುತಿಗಳಿಂದಲೂ, ನಾರಾಯಣನ ಸೃಷ್ಟಿಯು ಸತ್ಯವೇ ಆಗಬೇಕೆಂಬುದರಿಂದಲೂ, (೩) ಈ ಜಗತ್ತು ಸತ್ಯವೆಂದು ಸಾಧಿಸಿದರು. (೪) ಜೀವ-ಈಶ್ವರರ ಭೇದವೂ ಸತ್ಯವೇ, ಮುಕ್ತಿಯಲ್ಲೂ ಇರತಕ್ಕದೇ. 'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ' 'ಪರಮಂ ಸಾಮ್ಯಮುಪೈತಿ' 'ಮಮ ಸಾಧರ್ಮ್ಯಮಾಗತಾಃ' ಇತ್ಯಾದಿ ಶ್ರುತಿ—ಗೀತಾದಿಗಳಲ್ಲಿ—ಮುಕ್ತರು ಬ್ರಹ್ಮನಿಂದ ಕೂಡಿಕೊಂಡು ನಾನಾನಂದಗಳನ್ನನುಭವಿಸುತ್ತಿರುವರೆಂದು ಹೇಳುತ್ತದೆ. (೫) ಜೀವರೆಲ್ಲರೂ ಪರಮಾತ್ಮನ ಅನುಚರರು, ಅನಾದಿಕರ್ಮ—ವಾಸನಾ—ಯೋಗ್ಯತಾದಿಗಳು ಭಿನ್ನಭಿನ್ನವಾಗಿರುವುದರಿಂದ (೬) ಜೀವರು ಪರಸ್ಪರ ಭಿನ್ನರೂ ನೀಚೋಚ್ಚಭಾವವುಳ್ಳವರೂ ಆಗಿದ್ದಾರೆ. ಮುಕ್ತಿಯೋಗ್ಯಜೀವರಿಗೆ ಭಕ್ತಿದ್ವಾರಾ ಪರಮಾತ್ಮ ಪ್ರಸಾದವಾಗಿ (೭) ಸ್ವರೂಪಾನಂದವನ್ನನುಭವಿಸುವಿಕೆಯೇ ಮುಕ್ತಿಯು. ಈ ಎಲ್ಲಾ ಪ್ರಮೇಯಗಳಿಗೆ (೮) ಪ್ರತ್ಯಕ್ಷ, ಅನುಮಾನ, ಆಗಮಗಳೆಂಬ ಮೂರು ಪ್ರಮಾಣಗಳು. (೯) ಸಕಲ ಸದಾಗಮಗಳು ಮುಖ್ಯವಾಗಿ ನಾರಾಯಣನನ್ನೆ ಹೇಳುತ್ತಿವೆ. ಇಂತಿರುವ ಒಂಬತ್ತು ಮುಖ್ಯ ತತ್ವಗಳಲ್ಲೇ ಆಚಾರ್ಯರ ಇತರ ಅಭಿಪ್ರಾಯಗಳನ್ನೆಲ್ಲಾ ಸೇರಿಸಬಹುದಾಗಿದೆ. ಅಲ್ಲಲ್ಲಿ ಆಶ್ರಮ ಧರ್ಮ, ನಿತ್ಯಕರ್ಮ, ಸದಾಚಾರಗಳ ಕುರಿತೂ, ವೈಷ್ಣವರ ಬಾಹ್ಯಾಭ್ಯಂತರ ದೀಕ್ಷೆಗಳ ಕುರಿತೂ ಆಚಾರ್ಯರು ಉಪದೇಶಿಸುತ್ತಾರೆ.

ಆಚಾರ್ಯರ ಲೋಕಸಂಗ್ರಹದೃಷ್ಟಿ

ಇಂದಿನ ದೃಷ್ಟಿಯಿಂದ ಹೇಳುವುದಾದರೆ—ಆಚಾರ್ಯರಿಗೆ ಲೋಕಸಂಗ್ರಹದೃಷ್ಟಿಯೂ ಪತಿತೋದ್ಧಾರ ಭಾವನೆಯೂ ಸಹ ಇತ್ತೆಂದು ಹೇಳಬಹುದು. ಕಲಿಕಾಲ, ದೀಕ್ಷಿತನ ನಿಯಮ, ಜ್ಞಾನದ ಪ್ರಾಶಸ್ತ್ಯಗಳನ್ನು ಚಿಂತಿಸಿ ಯಜ್ಞಗಳಲ್ಲಿ ಸಾಕ್ಷಾತ್ ಪಶುವಧೆಯನ್ನು ನಿಷೇಧಿಸಿದರು. ವೈಷ್ಣವನೆನಿಸಿ ಶಿವದ್ವೇಷಿಯಾಗದೆ, ಶೈವನೆನಿಸಿ ವಿಷ್ಣುದ್ವೇಷಿಯಾಗದೆ ಆಚಾರ್ಯರು ವೇದೋಕ್ತ ದೇವತೆಗಳಿಗೆಲ್ಲಾ ತಾರತಮ್ಯಾನುಸಾರವಾಗಿ ಸ್ಥಾನಗಳನ್ನಿತ್ತು ಪರಮಾತ್ಮನ ಪರಿವಾರವೆಂದು ಪೂಜಿಸಬೇಕೆಂದರು. ಜೀವರೆಲ್ಲರಿಗೂ ಒಂದೇ ನಿಷ್ಠೆ ಉಂಟಾಗಲಾರದು. 'ದೇವಾನ್ ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ' ಎಂದು ಗೀತೆಯಲ್ಲೂ ವಿವಿಧೋಪಾಸನೆಯು ಸೂಚಿತವಾಗಿದೆ.

ಹರಿಭಕ್ತಿಗೆ ಎಲ್ಲರೂ ಅಧಿಕಾರಿಗಳೇ, ಜಾತಿ ಚಂಡಾಲ ಕರ್ಮಚಂಡಾಲರಾರೂ ಕೆಟ್ಟೆವೆಂದು ಕಳವಳಿಸಬೇಕಾಗಿಲ್ಲ. 'ನೀನೇ ಗತಿ'ಯೆಂದು ಹರಿಶರಣರಾಗಿ ಭಕ್ತಿಯಿಂದ ನಾಮಭಜನೆಯನ್ನು ಮಾಡುವವರಿಗೆ ಸಕಲದುರಿತಗಳೂ ಪರಿಹಾರವಾಗಿ ಶ್ರೇಯೋಮಾರ್ಗವು ಲಭಿಸುವುದೆಂದು ಬೋಧಿಸಿದರು. ಇದು—'ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ। ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಂ॥ ಎಂಬ ಗೀತಾವಚನಗಳಿಂದ ವರ್ಣಿತವಾಗಿದೆ. ವಿಗ್ರಹಾರಾಧನೆಗೆ ಅರ್ಥವೂ, ಆಧಾರವೂ ಇಲ್ಲವಾಗಿದ್ದಲ್ಲಿ ಆಚಾರ್ಯರು 'ಶ್ರೀ ಕೃಷ್ಣ'ನನ್ನು ಪ್ರತಿಷ್ಠಾಪಿಸುತ್ತಿರಲಿಲ್ಲ. ಏಕಾದಶಿಗೆ ಹೆಚ್ಚು ಮಹತ್ವವನ್ನು ಕೊಟ್ಟುದು ಇಂದು ಆರೋಗ್ಯದೃಷ್ಟಿಯಿಂದಲೂ ಒಳ್ಳೆಯದೆಂದು ವೈದ್ಯರ ಸಮ್ಮತಿಯನ್ನೂ ಪಡೆದಿದೆ. ಮುಖ್ಯವಾಗಿ ಆಚಾರ್ಯರ ವಿಷ್ಣುನಿಷ್ಠೆಯು ದೃಢವೂ ವಿಶ್ವಸನೀಯವೂ ಅನುಕರಣೀಯವೂ ಆಗಿದೆ. ಎಲ್ಲವೂ ಪರಮಾತ್ಮಾಧೀನವೆಂದು ಸಮರ್ಥಿಸಿ, ಮನುಷ್ಯನ ಅಹಂಕಾರವನ್ನು ಖಂಡಿಸಿ, ಅವನವನ ದುಃಖಕೆ—ಯಾರನ್ನೂ

ಬೈದು, ಹಿಂಸಿಸಿ ಪ್ರಯೋಜನವಿಲ್ಲವೆಂದೂ, ಅವನವನ ಕರ್ಮವೇ ಹೊಣೆಯೆಂದೂ ಉಪದೇಶಿಸಿ ಸಮಾಜದಲ್ಲಿ ಪರಸ್ಪರ ದ್ವೇಷವೈಷಮ್ಯಾದಿಗಳು ನೆಲಸದಂತೆ ಉದ್ದೇಶಗೊಂಡಿದ್ದರೆಂದೂ ಹೇಳಬಹುದು. ಹೀಗೆ ವಿಶಾಲ ದೃಷ್ಟಿಯಿಂದ ಸರ್ವಸುಲಭವಾಗಿರುವ ಮಾರ್ಗವೊಂದು ಬೆಳಕಿಗೆ ಬರಲು ಅದು ಗುಜರಾತ್, ಬಂಗಾಳಗಳ ವರೆಗೂ ತನ್ನ ವರ್ಚಸ್ಸನ್ನು ಬೀರಿತೆನಬಹುದು. ಗುಜರಾತಿನ ವಲ್ಲಭಸಂಪ್ರದಾಯ, ಬಂಗಾಳದ ಚೈತನ್ಯ ಪಂಥ ಇವು ಶ್ರೀ ಮಧ್ವಾಚಾರ್ಯರ ಸಿದ್ಧಾಂತದ ಛಾಯೆಗಳೇ.

ಮಧ್ವಸಿದ್ಧಾಂತವೂ, ಭೌತಿಕವಾದವೂ

ಇಂತಹ ಸಿದ್ಧಾಂತವನ್ನು ಭೌತಿಕದೃಷ್ಟಿಯು ವ್ಯತಾಸಪಡಿಸೀತೆ? ಎಂಬುದನ್ನು ನಾಲ್ಕು ಮಾತುಗಳಿಂದ ವಿಚಾರಮಾಡಿ ವಿರಮಿಸುವೆವು. ಮಧ್ವಸಿದ್ಧಾಂತವು ಭೌತವಾದಿಗಳಿಗೆ ಸ್ವಾಗತವೀಯುತ್ತದೆ. ವಿಜ್ಞಾನಕ್ಕೆ ತೋರುವ ಜಗದ್ವಿಚಿತ್ರ ವಸ್ತುಶಕ್ತಿಗಳೆಲ್ಲಾ ಸತ್ಯವೆಂದು ಆಚಾರ್ಯರು ಒಪ್ಪಿದ್ದಾರೆ. ಪ್ರತ್ಯಕ್ಷಕ್ಕೆ ಬಾಧೆಯನ್ನು ಹೇಳುವುದಿಲ್ಲ. ಆಗಮೋಕ್ತ ದೇವರು–ಧರ್ಮಗಳನ್ನು ಪ್ರತ್ಯಕ್ಷ ಮಾತ್ರ ಪ್ರಮಾಣವೆನ್ನುವ ವಿಜ್ಞಾನಿಯು ಖಂಡಿಸಲಾರ. 'ದೇವರು, ಧರ್ಮದ ವಿಷಯ ನಮಗೆ ಗೊತ್ತಿಲ್ಲ'ವೆಂದು ಅವರು ಹೇಳಬಹುದಲ್ಲದೆ ಇಲ್ಲವೆನಲು ಬಾರದು. ಭೌತವಾದಿಯು ಪ್ರಪಂಚದ ಶತಾಂಶವನ್ನೂ ಕಂಡಿಲ್ಲ. ಅನಂತ ಕೋಟಿ ಬ್ರಹ್ಮಾಂಡಗಳಿವೆಯೆಂದೂ ಅವನ್ನೆಲ್ಲಾ ಶ್ರೀಮನ್ನಾರಾಯಣನೇ ನಡೆಸುತ್ತಿರುನೆಂದೂ 'ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ' ಎಂದು ಮಂತ್ರವು ಹೇಳುತ್ತದೆ.

'ಈಶ್ವರನಿದ್ದರೆ ತೋರುತ್ತಿದ್ದನಲ್ಲ' ಎಂದು ಭೌತವಾದಿಯು ಹೇಳಬಾರದು. ನೀರಿನಲ್ಲಿ ಕ್ರಿಮಿ ಇದ್ದರೆ ತೋರುತ್ತಿತ್ತಲ್ಲ! ಸೂರ್ಯನಲ್ಲಿ ಕಲೆ ಇದ್ದರೆ ಚಂದ್ರನಲ್ಲಿ ಗುಡ್ಡವಿದ್ದರೆ ತೋರುತ್ತಿತಲ್ಲ! ಎಂದರೆ—ಬರೀ ಕಣ್ಣಿಗೆ ತೋರಿಸಲಾರದೆ ಸಾಧನಾಂತರಕ್ಕೆ ವಿಜ್ಞಾನಿಯು ಶರಣು ಹೋಗಬೇಕಾಗುವುದು. ಅದರಂತೆ ಈಶ್ವರನೂ ಬರೀ ಈ ಕಣ್ಣಿಗೆ ಕಾಣದೆ ಯೋಗಶಕ್ತಿಗೆ ತೋರತಕ್ಕವನೆಂದು ತಿಳಿಯಬೇಕು. ಕುರುಡನಿಗೆ ಕಾಣದ ಬಣ್ಣವು ಕಣ್ಣುಳ್ಳವನಿಗೆ ತೋರುವುದು. ಕಣ್ಣಿಗೂ ತೋರದ ಗಾಳಿಯು ಮೈಗೆ ತಿಳಿಯುವುದು. ಇಂದ್ರಿಯಗಳಿಗೆ ತೋರದ ತತ್ವವು ಯೋಗಶಕ್ತಿಗೆ ತೋರುವುದು. ಆಗಮಕ್ಕೆ ತೋರುವುದು. ಭೌತವಾದಿಗೆ ಆಗಮವೂ ಇಲ್ಲ; ಯೋಗಶಕ್ತಿಯೂ ಇಲ್ಲ. ತತ್ವವು ಹೇಗೆ ತೋರಿತು?

ಜಡವು ಯಾವ ಕಾರ್ಯವನ್ನೂ ಮಾಡಲಾರದು; ಆಚಾರ್ಯರು—

ವಿಸರ್ಪತ್ತಂಡುಲಂ ದೃಷ್ಟ್ವಾ ಕಲ್ಪ್ಯತತ್ರ ಪಿಪೀಲಿಕಾ ।

ಅಂದರೆ—'ಹರಿಯುತ್ತಿರುವ ಅಕ್ಕಿಯನ್ನು ಕಂಡು ಅಲ್ಲಿ ಇರುವೆಯಿದೆಯೆಂದು ತಿಳಿಯಬೇಕು' ಎಂದು ಹೇಳಿರುವರು. ಹೆಪ್ಪು ಹಾಕಿದರೆ ಹಾಲು ಮೊಸರಾಗುತ್ತದೆ. ಕುರುಡ–ಕುಂಟರು ಸೇರಿದರೆ ತಾನೆ ಪ್ರಯಾಣ ಮಾಡಿಯಾರು! ಜಡಗಳಿಗೆ ಯೋಜಕನೊಬ್ಬನು ಬೇಕು. ಇದನ್ನು ವಿಮರ್ಶಿಸಿಯೇ ಮಂತ್ರವು—'ಆತನ ಭಯದಿಂದ ಗಾಳಿ ಬೀಸುತ್ತಿದೆ. ನೀರು ಹರಿಯುತ್ತಿದೆ' ಎಂದು ಹೇಳುತ್ತಿದೆ. ವಸ್ತುವಿನ ಸ್ವಭಾವವಾದರೂ ಎಲ್ಲಿಂದ ಬಂತು? ಅದರ ಮೂಲವು ಭೌತಿಕವಾದಿಗೆ ತಿಳಿಯಲಾರದು.

ಆಚಾರ್ಯರು—

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥

ಅಂದರೆ—'ಕಾಲ, ವಸ್ತು, ಅದರ ಚಲನೆ, ಸ್ವಭಾವ ಹೆಚ್ಚೇನು ಜೀವನೂ ಕೂಡ ಜಗದೀಶ್ವರನ ಇಚ್ಛೆಯಿಂದಲೇ ಎಲ್ಲಾ ಇವೆ' ಎಂದು ಹೇಳಿರುವರು.

ಭೌತವಾದಿಯು ಜಗತ್ತು ವಿಚಿತ್ರವಾಗಿದೆಯೆನ್ನುತ್ತಾನೆ. ಆಚಾರ್ಯರು ಅಂತಹ ವಿಚಿತ್ರ ಜಗತ್ತನ್ನೂ ಸೃಷ್ಟಿಸುವುದರಿಂದ ಪರಮಾತ್ಮನೇ—'ವಿಚಿತ್ರಶಕ್ತಿಃ ಪುರುಷಃ ಪುರಾಣಃ' ಎಂದು ಹೇಳುತ್ತಾರೆ.

ಕೊನೆಯ ಮಾತು. ವಿದ್ಯುಚ್ಛಕ್ತಿ ಇದೆಯಷ್ಟೆ! ಅದಾವುದು? ತಿರುಗುವ ಚಕ್ರವೇ? ಓಡುವ ಗಾಡಿಯೇ? ಉರಿಯುವ ಬೆಳಕೆ? ಸಿಡಿಲಿನ ಧ್ವನಿಯೆ? ಒಂದೂ ಅಲ್ಲ; ಎಲ್ಲವೂ ಶಕ್ತಿಯ ಕಾರ್ಯಗಳಷ್ಟೆ. ಅದರಂತೆ ಈಶ್ವರನು ತೋರುವ ಪ್ರಪಂಚವಲ್ಲ. ಇದೆಲ್ಲವೂ ಆತನ ಕಾರ್ಯ, ಆತನು ಜ್ಞಾನಾನಂದರೂಪ; ಯೋಗ

ಗಮ್ಯ; ಆದುದರಿಂದ—ಆಗಮಪ್ರಮಾಣದಿಂದಲೂ ಯೋಗಶಕ್ತಿಯಿಂದಲೂ ಕಂಡವರು ಹೇಳುವರು. ನಾವು ನಂಬುವೆವು. ಭೌತವಾದಿಗೆ ಆಗಮ, ವಿಶ್ವಾಸ, ಯೋಗಶಕ್ತಿ ಇವಾವುವೂ ಇಲ್ಲವೆಂದ ಮೇಲೆ 'ನಾನರಿಯೆ'ನೆಂದು ಸುಮ್ಮನಿರಬಹುದಲ್ಲದೆ ಅಥವಾ ತತ್ವಜ್ಞಾನದ ಪ್ರಯೋಜನವನ್ನು ಪಡೆಯದಿರಬಹುದಲ್ಲದೆ 'ತತ್ವವೇ ಇಲ್ಲ; ತತ್ವಶಾಸ್ತ್ರ ಸುಳ್ಳು' ಎಂದು ಹೇಳುವ ಅಧಿಕಾರವಿಲ್ಲ. ಆಚಾರ್ಯರು ಪ್ರತ್ಯಕ್ಷ ವಿರೋಧ ಬರುವಲ್ಲಿ ಆಗಮಕ್ಕೆ ಬೇರೆ ಅರ್ಥವನ್ನು ಹೇಳಬೇಕೆಂದಿದ್ದಾರೆ. ಅಂತೂ ಭೌತವಾದದಿಂದ ಮಧ್ವಸಿದ್ಧಾಂತವು ಶಿಥಿಲವಾಗಲಾರದು.

ಇಂತಹ ಸರ್ವಾದರಣೀಯವೂ, ಸುಲಭವೂ ಆದ ಭಕ್ತಿಮಾರ್ಗವೊಂದನ್ನು ಸಮಾಜದ ಹಿತಕ್ಕಾಗಿ ಭದ್ರಗೊಳಿಸಿದ ಆಚಾರ್ಯರಿಗೆ ಸ್ಮಾರಕವಾಗಿ 'ಸಮಾಧಿ' ಎಂಬುದಿಲ್ಲ. ೭೯ನೆಯ ವಯಸ್ಸಿನಲ್ಲಿ ಮೂರನೆಯ ಬಾರಿ ಒಬ್ಬರೇ ಬದರೀ ಯಾತ್ರೆಗೆಂದು ಹೋದವರು ತಿರುಗಿ ಬರಲಿಲ್ಲ. ಅವರು ಕೊನೆಗೆ–ಶಿಷ್ಯರಿಗೆ ಎಲ್ಲಿ ಪಾಠಪ್ರವಚನವನ್ನು ನಡೆಸುತ್ತಿದ್ದರೋ ಆ ಅನಂತೇಶ್ವರ ದೇವಾಲಯದೊಳಗೆ ಅವರು ಕುಳಿತಿದ್ದ ಸ್ಥಳದಲ್ಲಿ ಚಿಕ್ಕದೊಂದು ಮಂಟಪವನ್ನು ಕಟ್ಟಿಸಿದ್ದು 'ವೃಂದಾವನ' ಎಂದು ಕರೆಯುತ್ತಾ ಶಿಷ್ಯರು ಪುಣ್ಯದಿನಗಳಲ್ಲಿ ಪೂಜಿಸುತ್ತಾ ಬರುತ್ತಾರೆ.



ಭಾರತ ಸಂಸ್ಕೃತಿಯಲ್ಲಿ ಒಂದಾಗಿ ಬೆರೆತ ಧಾರ್ಮಿಕ ಪ್ರವಾಹಗಳು

ಶ್ರೀ ಎಂ. ಯಾಮುನಾಚಾರ್ಯ, ಎಂ. ಎ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಭಾರತದಲ್ಲಿ ಧರ್ಮಸಂಗಮ

ಭರತಖಂಡದ ನಾಗರಿಕತೆ ಅತ್ಯಂತ ಪುರಾತನವಾದುದು. ಇದು ಈಜಿಪ್ಟ್, ಬ್ಯಾಬಿಲಾನ್, ಸುಮೀರಿಯಾ ಮೊದಲಾದ ಪ್ರಾಚೀನ ನಾಗರಿಕತೆಗಳೊಡನೆ ಸರಿಸಮಾನವಾಗಿ ಬೆಳಗಿತು. ಆ ನಾಗರಿಕತೆಗಳು ಎಂದೋ ಅಳಿದು ನಾಮಾವಶೇಷವಾದವು. ಆದರೆ ಅವುಗಳಷ್ಟೇ ಪುರಾತನವಾದ ಭಾರತ ಸಂಸ್ಕೃತಿಯು ಮಾತ್ರ ಅಳಿಯದೆ ಉಳಿದಿದೆ. ಇದು ಅಚ್ಚರಿಗೊಳ್ಳುವಂತಹ ಸಂಗತಿ. ಸಹಸ್ರಾರು ವರ್ಷಗಳಿಂದ ಅವಿಚ್ಛಿನ್ನ ಪರಂಪರೆಯಲ್ಲಿ ತನ್ನ ಸಂಸ್ಕೃತಿಗೆ ಮೂಲಭೂತವಾದ ದರ್ಶನ, ಧರ್ಮ, ಕಲೆ, ಸಂಪ್ರದಾಯ, ಸಮಾಜ ವ್ಯವಸ್ಥೆಗಳನ್ನು ಭಾರತ ಉಳಿಸಿಕೊಂಡು ಬಂದಿದೆ. ಉಳಿಸಿಕೊಂಡು ಬಂದಿದೆ ಎಂದರೆ ಯಾವ ಪರಿಣಾಮವನ್ನೂ ಪಡೆಯದೆ ಬಾಗದೆ ಬಳುಕದೆ ಜಡವಾಗಿ ಉಳಿದಿದೆ ಎಂದು ಅರ್ಥವಲ್ಲ. ಆ ರೀತಿ ಜಡತ್ವ ಅದರ ಲಕ್ಷಣವಾಗಿದ್ದಿದ್ದರೆ ಇತರ ಪುರಾತನ ನಾಗರಿಕತೆಗಳು ಹೋದ ದಾರಿಗೇ ಇದೂ ಹೋಗುತ್ತಿತ್ತು. ಹೊಸ ಸನ್ನಿವೇಶಗಳಿಗೆ ಹೊಂದಿಕೊಂಡು ಹೊಸ ಚೈತನ್ಯದಿಂದ ಹೊರಹೊಮ್ಮಿದ ನವಜೀವನವನ್ನು ವ್ಯಕ್ತಗೊಳಿಸಿದೆ. ಭಾರತ ಸಂಸ್ಕೃತಿಯು ಹಳೆಯದರಲ್ಲಿ ಹೊಸತಾಗಿಯೂ ಹೊಸದರಲ್ಲಿ ಹಳೆಯದಾಗಿಯೂ ಬೆಳಗುತ್ತಾ ಬಂದಿದೆ. "ನವೋ ನವೋ ಭವತಿ ಜಾಯಮಾನಃ" ಎನ್ನುವಂತೆ ಭಾರತ ಸಂಸ್ಕೃತಿ ಪುರಾಣವಾದುದಾದರೂ ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ನವೀನತೆಯನ್ನು ತೋರ್ಪಡಿಸಬಲ್ಲ ಸಂಸ್ಕೃತಿಯಾಗಿದೆ.

ಭಾರತ ಸಂಸ್ಕೃತಿಯ ದೃಷ್ಟಿ ಕೇವಲ ಸಂಕುಚಿತ ರಾಷ್ಟ್ರೀಯ ದೃಷ್ಟಿ ಅಲ್ಲದಿರುವುದೇ ಈ ನವ ಚೈತನ್ಯದ ಮುಖ್ಯ ಕಾರಣ. ಭಾರತ ಸಂಸ್ಕೃತಿಯ ದೃಷ್ಟಿ ವಿಶ್ವದೃಷ್ಟಿ, ಸಮನ್ವಯ ದೃಷ್ಟಿ, ಸಾಮರಸ್ಯದ ದೃಷ್ಟಿ. ಎಂದೆಂದು ಭಾರತ ಸಂಕುಚಿತ ಮನೋಭಾವನೆಗಳಿಗೆ ಎಡೆ ಕೊಟ್ಟಿತೋ ಅಂದೆಲ್ಲಾ ಸೊರಗಿತು. ಆ ಜಾಡ್ಯ ಕಳೆದುಕೊಂಡಂತೆಲ್ಲಾ ಪುಷ್ಟವಾಗಿ ಬೆಳೆಯಿತು. ವಿಚಾರ ಸ್ವಾತಂತ್ರ್ಯಕ್ಕೆ ಭಾರತದಲ್ಲಿ ಅವಕಾಶವಿದ್ದಂತೆ ಇನ್ನಾವ ದೇಶದಲ್ಲಿಯೂ ಇರಲಿಲ್ಲ. ಆದ್ದರಿಂದ ಪರಸ್ಪರ ವಿರೋಧವೆಂದು ತೋರುವ ಅನೇಕ ವಾದಗಳು, ದರ್ಶನಗಳು, ಮತಪಂಥಗಳು, ಆಚಾರ ಅನುಷ್ಠಾನಗಳು ಅಕ್ಕಪಕ್ಕದಲ್ಲಿ ತಮ್ಮ ತಮ್ಮ ಧೋರಣೆಗೆ ಅನುಸಾರವಾಗಿ ಸ್ವೇಚ್ಛೆಯಾಗಿ ಬೆಳೆದುಕೊಂಡು ಬಂದವು. ಕೇವಲ ಸನ್ನಿತಕರ್ಷದ ಸಲುವಾಗಿ ಈ ದರ್ಶನಗಳು, ಮತಪಂಥಗಳು, ಆಚಾರ ಅನುಷ್ಠಾನಗಳು ಅನೇಕ ಸಂಸ್ಕೃತಿಕ ಅಂಶಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡದ್ದು ಆಶ್ಚರ್ಯವಲ್ಲ. ಬಾಳು ಮತ್ತು ಬಾಳಗೊಡಿಸು (Live and let live) ಅನ್ನುವುದು ಭಾರತದ ರಾಜ್ಯಾಂಗ ಮತ್ತು ವಿದೇಶಾಂಗ ನೀತಿಯಾಗಿತ್ತು. ಇದರಿಂದಲೇ ಧರ್ಮದ ಹೆಸರಿನಲ್ಲಿ ಪರದೇಶಗಳ ಮೇಲೆ ಎಂದೂ ಭಾರತ ಧಾಳಿ ನಡೆಸಲಿಲ್ಲ. ಇದರಿಂದಲೇ ಧರ್ಮದ ಹೆಸರಿನಲ್ಲಿ ತಲೆ ಎತ್ತಿದಷ್ಟು ಪ್ರಮಾದ, ಕ್ರೌರ್ಯ, ಅಸಹನೆಗಳು ಈ ದೇಶದಲ್ಲಿ ಕಂಡು ಬರಲಿಲ್ಲ. ಕ್ರೌರ್ಯ ಮತ್ತು ಅಸಹನೆ ಸಂಪೂರ್ಣವಾಗಿ ಕಂಡುಬರಲಿಲ್ಲವೆಂದು ಹೇಳಲು ಆಧಾರವಿಲ್ಲ. ಆದರೆ ಇವು ಕಂಡು ಬಂದ ಸಮಯಗಳಲ್ಲೆಲ್ಲಾ ಭಾರತ ಸಂಸ್ಕೃತಿಯು ಅವನತಿ ಪಡೆದಿದ್ದ ಸಮಯಗಳೆಂದು ಊಹಿಸಲು ಸಾಧ್ಯವಿದೆ. ಆದರೆ ಈ ಕ್ಷುಲ್ಲಕ ಮನೋವೃತ್ತಿ ಪೂರ್ಣ ವಿನಾಶದ ವರೆಗೂ ಭಾರತವನ್ನು ಎಳೆದೊಯ್ಯುವಷ್ಟು ಪ್ರಬಲವಾಗಲು ಅವಕಾಶ ದೊರೆಯಲಿಲ್ಲ. ಎಂದೆಂದು ಇಂತಹ ವಿಪರೀತ ಮತ್ತು ವಿನಾಶಕರ ಪರಿಸ್ಥಿತಿ ಒದಗಿದ್ದಿತೋ ಅಂದೆಲ್ಲಾ ಮಹಾನುಭಾವರ ಅವತಾರದಿಂದ ಮತ್ತು ಅವರ ಉಪದೇಶಗಳಿಂದ ತಾತ್ಕಾಲಿಕವಾಗಿ ಕದಡಿದ ಭಾರತ ಸಂಸ್ಕೃತಿ ಸ್ವಚ್ಛವಾಯಿತು ಮತ್ತು ತನ್ನ ನೈಜವಾದ ಸ್ವರೂಪವನ್ನು ಅರಿತುಕೊಂಡಿತು. ಇಂತಹ ಪರಿಸ್ಥಿತಿಯಲ್ಲಿ ಹುಟ್ಟಿದ ಭಾರತದ ಆಶೆ ಅಕಾಂಕ್ಷೆಗಳು ಭಗವದ್ಗೀತೆಯ "ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ, ಅಭ್ಯುತ್ಥಾನಮ ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ" ಅನ್ನುವ ಶ್ಲೋಕದಲ್ಲಿ ದೃಢವಾದ ಧಾರ್ಮಿಕ ನಂಬಿಕೆಯ ರೂಪವನ್ನು ತಾಳಿದೆ. ಇದು

ಭಾರತ ಧರ್ಮದಲ್ಲಿ ಅಡಗಿರುವ ಅವತಾರ ತತ್ವದ ರಹಸ್ಯ.

ಧರ್ಮಗ್ಲಾನಿ ಧರ್ಮದ ವೇಷವನ್ನು ಧರಿಸಿ ಜನರನ್ನು ಮರುಳುಗೊಳಿಸಿರುವ ಪ್ರಸಂಗಗಳು ಎಲ್ಲ ಮತಗಳಲ್ಲೂ ನಡೆದಿವೆ. ಅಂಥವು ಭರತಖಂಡದ ಲ್ಲಿಯೂ ನಡೆದದ್ದು ಆಶ್ಚರ್ಯವಲ್ಲ. ಇಂತಹ ಧರ್ಮ ಗ್ಲಾನಿಯನ್ನು ತೊಡೆದು ಮತಧರ್ಮವನ್ನು ಕಶ್ಮಲಗ ಳಿಂದ ವಿಮೋಚನಗೊಳಿಸುವ ಕೆಲಸವನ್ನು ಕೈಗೊಂಡ ಮತಧರ್ಮಗಳು ಭಾರತದಲ್ಲಿ ಬಹುರೂಪವಾಗಿವೆ. ಇವುಗಳಲ್ಲಿ ಅನೇಕ ಅನುಭಾವ ಪಂಥಗಳು, ಬೌದ್ಧ ಧರ್ಮ, ಜೈನಧರ್ಮ, ಸಿಖ್‌ಧರ್ಮ ಹೆಸರುವಾಸಿ ಯಾಗಿವೆ. ಕ್ರಿ. ಶ. ಹತ್ತೊಂಬತ್ತನೆಯ ಶತಮಾನದಲ್ಲಿ ಭರತಖಂಡದಲ್ಲಿ ಹುಟ್ಟಿದ ಆರ್ಯಸಮಾಜ, ಬ್ರಹ್ಮ ಸಮಾಜ, ಥಿಯಾಸಫಿ ಪಂಥ, ಶ್ರೀರಾಮಕೃಷ್ಣ-ವಿವೇ ಕಾನಂದರ ವೇದಾಂತ ಪಂಥ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಕಂಡು ಬಂದ ಗಾಂಧೀಜಿಯ ಮಾರ್ಗ, ಅರವಿಂದಾಶ್ರಮದ ಜೀವನದರ್ಶನ ಇವೆಲ್ಲವೂ ಇದೇ ರೀತಿಯ ಸಂಸ್ಕರಣ ಧರ್ಮ ಪಂಥಗಳು, ಬೌದ್ಧ ಧರ್ಮ, ಜೈನ ಧರ್ಮ, ಸಿಖ್ ಪಂಥಗಳು ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕವಾಗುವ ಮೊದಲು ಭಾರತ ಸಂಸ್ಕೃತಿಯಲ್ಲಿ ಒಂದಾಗಿ ಬೆರೆತ ಧಾರ್ಮಿಕ ಪ್ರವಾಹ ಗಳು. ಬಹುಮುಖ ಉಳ್ಳ ಭಾರತ ಸಂಸ್ಕೃತಿ ಭರತ ಖಂಡವನ್ನೆಲ್ಲಾ ವ್ಯಾಪಿಸಿತಲ್ಲದೆ ಇತರ ದೇಶಗಳಿಗೂ ಸಂಚಾರ ಮಾಡಿತು. ಚೀನಾ, ಇಂಡೊನೇಷಿಯಾ, ಮಲಯಾ, ಬರ್ಮಾ, ಸಯಾಮ್, ಸಿಂಹಳ ದ್ವೀಪ ಮೊದಲಾದ ಪ್ರದೇಶಗಳಲ್ಲೆಲ್ಲಾ ಭಾರತ ಸಂಸ್ಕೃತಿಯ ಪ್ರಭಾವ ಹಬ್ಬಿತು. ಭರತ ಖಂಡದಲ್ಲಿ ವಿವಿಧ ಬುಡ ಕಟ್ಟಿಗೆ ಸೇರಿದ ಮತ್ತು ವಿವಿಧ ಉಡುಗೆ ತೊಡಿಗೆ, ನುಡಿ ನೀತಿ ನಂಬಿಕೆಗಳನ್ನುಳ್ಳ ಜನರನ್ನೆಲ್ಲಾ ಒಂದು ಸಂಸ್ಕೃತಿಯ ಚೌಕಟ್ಟಿನಲ್ಲಿ ಅಳವಡಿಸಿಕೊಂಡಿತು. ವೈವಿಧ್ಯದಲ್ಲಿ ಐಕ್ಯತೆಯನ್ನು ಸ್ಥಾಪಿಸಿತು. ಇಂದು ಭಾರತ ಸಂಸ್ಕೃತಿ ಎಂದು ನಾವು ವ್ಯವಹರಿಸುವ ಸಂಸ್ಕೃತಿ ಹಿಂದೂ ಸಂಸ್ಕೃತಿ ಮಾತ್ರವಲ್ಲ. ಇದರಲ್ಲಿ ಬೌದ್ಧ ಜೈನ ಸಿಖ್ ಮುಸಲ್ಮಾನ ಕ್ರೈಸ್ತ ಧಾರ್ಮಿಕ ಪ್ರವಾಹಗಳ ಸಂಗಮವಾಗಿದೆ. ಇವರೆಲ್ಲರ ಆರಾಧ್ಯ ದೇವತೆ ವಿಶಾಲವಾದ ಅರ್ಥದಲ್ಲಿ ಒಬ್ಬ ಕೂಡಲಸಂಗ ಮದೇವ. ಏಕಮೇವಾದ್ವಿತೀಯನಾದವನು. "ರುಚೀ ನಾಂ ವೈಚಿತ್ರ್ಯಾತ್ ಋಜು ಕುಟಿಲ ನಾನಾ ಪಥ ಜುಷಾಂ ನೃಣಾಂ ಏಕೋಗಮ್ಯಃ ತ್ವಮಸಿಪಯಸಾ ಅರ್ಣವ ಇವ" ಎಂದು ಹೇಳಿದೆ. ತಮ್ಮ ತಮ್ಮ ರುಚಿ ಯನ್ನು ಅವಲಂಬಿಸಿ ಮನುಷ್ಯರು ಹೊಕ್ಕಿರುವ ಮಾ ರ್ಗಗಳಿಗೆಲ್ಲಾ ಒಬ್ಬ ಈಶನೇ ಕಟ್ಟಕಡೆಯ ಗುರಿ. ಈ ವಿವಿಧ ಪಂಥಗಳು ಕಡೆಗೆ ಒಂದೇ ಸಮುದ್ರವನ್ನು ಸೇರುವ ನದಿಗಳಂತೆ ಎಂಬುವುದು ಆ ಶ್ಲೋಕದ ತಾತ್ಪರ್ಯ. ಇಂತಹ ಸಮನ್ವಯ ಪದೇ ಪದೇ ಆಗು ತ್ತಿರುವುದನ್ನು ಭಾರತದ ಧಾರ್ಮಿಕ ಚರಿತ್ರೆಯಲ್ಲಿ ಕಾಣು ತ್ತೇವೆ. ವಿಷ್ಣುವರ್ಧನನು ಬೇಲೂರಿನಲ್ಲಿ ಕಟ್ಟಿಸಿದ ಕೇಶವಸ್ವಾಮಿ ದೇವಾಲಯದಲ್ಲಿ ಈ ರೀತಿಯ ಒಂದು ಸರ್ವಧರ್ಮ ಸಮನ್ವಯ ಶಾಸನವಿದೆ. "ಯಂಶೈವಾಸ ಮುಪಾಸತೆ ಶಿವ ಇತಿ ಬ್ರಹ್ಮೇತಿ ವೇದಾಂತಿನೋ; ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾ ಯಿಕಾಃ ಅರ್ಹನ್ನಿತ್ಯಥ ಜೈನ ಶಾಸನ ರತಾಃ ಕರ್ಮೇತಿ ಮೀಮಾಂಸಕಾಃ, ಸೋಯಂವೋ ವಿದಧಾತು ವಾಂ ಛಿತ ಫಲಂ ತ್ರೈಲೋಕ್ಯ ನಾಥೋಹರಿಃ" ಅನ್ನುವುದು ಈ ಶಾಸನದಲ್ಲಿ ಕೆತ್ತಿರುವ ಶ್ಲೋಕ. ಇದರಲ್ಲಿ ಶೈವರು ಉಪಾಸನೆ ಮಾಡುವ ಶಿವನೂ, ವೇದಾಂತಿಗಳು ಉಪಾ ಸನೆ ಮಾಡುವ ಬ್ರಹ್ಮನೂ, ನೈಯಾಯಿಕರು ಚಿಂತಿ ಸುವ ಕರ್ತನೂ, ಜೈನಶಾಸನರತರು ಆರಾಧಿಸುವ ಅ ರ್ಹತನೂ, ಮೀಮಾಂಸಕರು ಅನುಸಂಧಾನ ಮಾ ಡುವ ಕರ್ಮವೂ ಒಂದೇ ಪರವಸ್ತುವನ್ನು ಸಾಕ್ಷಾತ್ಕ ರಿಸಿಕೊಳ್ಳುವ ವಿವಿಧ ಮಾರ್ಗಗಳೆಂಬುವ ಭಾವ ಭಾರ ತದ ಸಮನ್ವಯ ಮಾರ್ಗದ ಸ್ಪಷ್ಟ ಸಂಕೇತವಾಗಿದೆ. ಇದೇ ಮಾರ್ಗವನ್ನು ಅನುಸರಿಸಿ ಕವಿ ರವೀಂದ್ರರು ತಮ್ಮ "ಜನಗಣಮನ ಅಧಿನಾಯಕ ಜಯಹೇ ಭಾರತ ಭಾಗ್ಯವಿಧಾತ" ಅನ್ನುವ ರಾಷ್ಟ್ರಗೀತೆಯಲ್ಲಿ "ಹಿಂದೂ ಬೌದ್ಧ ಸಿಖ ಜೈನ ಪಾರಸಿಕ ಮುಸಲ್ಮಾನ ಕ್ರಿಸ್ತಾನಿ" ಎಂದು ಭರತಖಂಡದಲ್ಲಿ ಇಂದಿನ ವರೆಗೂ ಬೆರೆತ ಧಾರ್ಮಿಕ ಪ್ರವಾಹಗಳ ಹೆಸರುಗಳನ್ನೆಲ್ಲಾ ಒಂದು ನುಡಿಯಲ್ಲಿ ಹೆಣೆದಿದ್ದಾರೆ.

ಭರತ ಖಂಡದಲ್ಲಿಯೇ ಹುಟ್ಟಿದ ಧರ್ಮಗಳು ಹಿಂದು, ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳು. ಪಾರಸಿಕ, ಮುಸಲ್ಮಾನ, ಕ್ರೈಸ್ತ ಧರ್ಮಗಳು ಮಾತ್ರ

ಭರತಖಂಡದಲ್ಲಿ ಹುಟ್ಟಿದವುಗಳಲ್ಲ. ಪಾರಸಿಕರ ಮತ ಜಿರತುಷ್ಟನ ಮತ. ಜಿರತುಷ್ಟ ಪ್ರಾಚೀನ ಇರಾನದ ಮಹಾಜ್ಞಾನಿ; ಜಿರತುಷ್ಟನ ಅನುಯಾಯಿಗಳು ಇಸ್ಲಾಮ್ ಮತದ ಧಾಳಿಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಭಾರತಕ್ಕೆ ಓಡಿ ಬಂದರು; ಭಾರತ ಇವರಿಗೆ ಆಸರೆ ನೀಡಿತು. ಅಂದಿನಿಂದ ಇಂದಿನ ವರೆಗೆ ಇವರು ಪಾರ್ಸಿ ಜನರೆಂದು ಪ್ರಸಿದ್ಧರಾಗಿದ್ದಾರೆ. ಇವರ ಪೂರ್ವಜರು ಆರ್ಯರ ಒಂದು ಪಂಗಡಕ್ಕೆ ಸೇರಿದವರೆಂದೂ, ಇವರ ಪ್ರಾಚೀನ ಭಾಷೆ ಭಾವನೆಗಳು ವೈದಿಕ ಭಾಷೆ ಭಾವನೆಗಳನ್ನು ಬಹು ರೀತಿಯಲ್ಲಿ ಹೋಲುವವೆಂದೂ ಅನೇಕ ವಿದ್ವಾಂಸರು ಭಾಷಾಶಾಸ್ತ್ರದ ಆಧಾರದಿಂದಲೂ ಮತಾಚಾರ ಸಂಪ್ರದಾಯಗಳ ಆಧಾರದಿಂದಲೂ ತೀರ್ಮಾನಕ್ಕೆ ಬಂದಿರುತ್ತಾರೆ. ಮುಸಲ್ಮಾನ ಕ್ರೈಸ್ತಧರ್ಮಗಳು ಹೊರದೇಶಗಳಿಂದ ಭಾರತಕ್ಕೆ ಬಂದರೂ ಅವುಗಳ ಪ್ರಭಾವ ಭಾರತ ಸಂಸ್ಕೃತಿಯ ಮೇಲೆ ಆಗಿರುವುದಲ್ಲದೆ ಭಾರತೀಯ ಧರ್ಮಗಳ ಪ್ರಭಾವ ಅವುಗಳ ಮೇಲೆಯೂ ಆಗಿರುವುದು ಕಂಡುಬರುತ್ತದೆ. ಕಬೀರನ ಪಂಥದಲ್ಲಿ, ಸಿಖ್ ಪಂಥದಲ್ಲಿ ಮತ್ತಿತರ ಸಣ್ಣ ಪುಟ್ಟ ಸಂಪ್ರದಾಯಗಳಲ್ಲಿ ಇಸ್ಲಾಮ್ ಸಂಸ್ಕೃತಿಗೂ ಭಾರತೀಯ ಸಂಸ್ಕೃತಿಗೂ ಆದ ಸಮ್ಮಿಳನವನ್ನು ಕಾಣುತ್ತೇವೆ. ಹಾಗೆಯೇ ಕ್ರೈಸ್ತಧರ್ಮದ ಮೇಲೆ ಭಾರತ ಸಂಸ್ಕೃತಿಯ ಪ್ರಭಾವವನ್ನೂ ಭಾರತ ಸಂಸ್ಕೃತಿಯ ಮೇಲೆ ಕ್ರೈಸ್ತಧರ್ಮದ ಪ್ರಭಾವವನ್ನೂ ಕಾಣುತ್ತೇವೆ. ಇತ್ತೀಚೆಗೆ ಕ್ರೈಸ್ತ ಸಾಧುಗಳು ಮತ್ತು ವಿದ್ವಾಂಸರು ಬರೆದ ಗ್ರಂಥಗಳ ಹೆಸರು ಇದಕ್ಕೆ ಉದಾಹರಣೆಯಾಗಿವೆ. ಕ್ರೈಸ್ತ ಸಾಧುಗಳಾದ ವೆರಿಯರ್ ಎಲ್ವಿನ್ ಅವರು ಬರೆದ "ಕ್ರಿಶ್ಚನ್ ಧ್ಯಾನ" (Christian Dhyana), ಮತ್ತೊಬ್ಬ ಕ್ರೈಸ್ತ ವಿದ್ವಾಂಸರು ಬರೆದ "ಕ್ರಿಶ್ಚಿಯಾನಿಟಿ ಯೇಸ್ ಭಕ್ತಿ ಮಾರ್ಗ" (Christianity as Bhakti Marga) ಅನ್ನುವ ರೀತಿಯ ಗ್ರಂಥಗಳು ಗಾಳಿ ಬೀಸುವ ದಿಕ್ಕು ಯಾವುದೆಂಬುದನ್ನು ವ್ಯಕ್ತಪಡಿಸಿವೆ. ಸಾಧು ಸುಂದರ ಸಿಂಗ್ ಅನ್ನುವ ಕ್ರೈಸ್ತ ಸಾಧುವಿನ ಜೀವನ ಉಪದೇಶಗಳಲ್ಲಿ ಈ ರೀತಿಯ ಪರಸ್ಪರಾನುಕರಣವನ್ನು ನಾವು ನೋಡುತ್ತೇವೆ.

ಆರ್ಯರ ನಾಗರಿಕತೆ ಭಾರತದಲ್ಲಿ ಬೇರು ಬಿಡುವ ಮುನ್ನ ದ್ರಾವಿಡರ ಮತ್ತು ಆದಿವಾಸಿಗಳ ನಾಗರಿಕತೆ ಹಲಕೆಲವು ಪ್ರದೇಶಗಳಲ್ಲಿ ಪ್ರಚಲಿತವಾಗಿದ್ದುವು. ದ್ರಾವಿಡರು ದಕ್ಷಿಣ ಭಾರತದಲ್ಲಿ ತಮ್ಮ ನಾಗರಿಕತೆ ಸಂಸ್ಕೃತಿಗಳನ್ನು ಕಟ್ಟಿದ್ದರು. ಇವರ ನಾಗರಿಕತೆಯ ಪ್ರಭಾವ ಉತ್ತರ ಭಾರತವನ್ನೂ ಮುಟ್ಟದ್ದಿತೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮಹೇಂಜೊದಾರೋ ಮತ್ತು ಹರಪ್ಪ ಎಂಬ ಸಿಂಧು ಕಣಿವೆಯ ನಾಗರಿಕತೆಯ ಮೇಲೆ ದ್ರಾವಿಡ ಸಂಸ್ಕೃತಿಯ ಪ್ರಭಾವವಿರುವುದನ್ನು ಆ ನಾಗರಿಕತೆಯ ಅವಶೇಷಗಳಿಂದ ಫಾದರ್ ಹೀರಾಸ್ ಮೊದಲಾದ ವಿದ್ವಾಂಸರು ತೀರ್ಮಾನ ಮಾಡಲು ತೊಡಗಿದ್ದಾರೆ. ಇದು ಹೇಗಾದರೂ ಇರಲಿ. ಇಷ್ಟು ಮಾತ್ರ ನಿಜ. ಕ್ರಮೇಣ ದ್ರಾವಿಡ ಮತ್ತು ಆರ್ಯ ಸಂಸ್ಕೃತಿಗಳು ಒಂದಾಗಿ ಬೆರೆತು ಭಾರತ ಸಂಸ್ಕೃತಿಯು ಆರ್ಯ-ದ್ರಾವಿಡ ಸಂಸ್ಕೃತಿಯಾಯಿತು. ಈಗ ಭಾರತ ಸಂಸ್ಕೃತಿಯಲ್ಲಿ ಆರ್ಯ ಭಾಗವೆಷ್ಟು ದ್ರಾವಿಡ ಭಾಗವೆಷ್ಟು ಎಂದು ಬೇರ್ಪಡಿಸುವುದು ಸಾಧ್ಯವೂ ಅಲ್ಲ ವಿಹಿತವೂ ಅಲ್ಲ. ಏಕೆಂದರೆ ಯಾವ ಸಂಸ್ಕೃತಿಯೂ ಹೊಸ ಚೈತನ್ಯವನ್ನು ಹೀರಿಕೊಳ್ಳದೇ ಜೀವಂತವಾಗಿ ಉಳಿಯುವುದು ಸಾಧ್ಯವಿಲ್ಲ. ಹೊಸ ಚೈತನ್ಯಕ್ಕೆ ಎಡೆ ಕೊಡುತ್ತಲೇ ಬಂದುದರಿಂದಲೇ ಇಂದಿಗೂ ಭಾರತ ತನ್ನ ಸಾಂಸ್ಕೃತಿಕ ಜೀವನವನ್ನು ಅವಿಚ್ಛಿನ್ನವಾಗಿ ಉಳಿಸಿಕೊಂಡು ಬಂದಿದೆ.

ಆದಿವಾಸಿಗಳ ದೃಷ್ಟಿ

ಭಾರತದ ಧರ್ಮ ಸಂಗಮದಲ್ಲಿ ಪ್ರವೇಶ ಮಾಡಿದ ಆದಿವಾಸಿಗಳ ಸಂಸ್ಕೃತಿ ಅಲ್ಲಗಳೆಯುವಂತಹುದಲ್ಲ. ಆದಿವಾಸಿಗಳ ಸಂಸ್ಕೃತಿಯನ್ನು "ಭಾರತ ಸಂಸ್ಕೃತಿಯ ಗರ್ಭ" (The Matrix of Indian Culture) ಎಂದು ಶ್ರೀ ಡಿ. ಎನ್. ಮುಜುಮ್‌ದಾರ್ ಎಂಬ ಭಾರತದ ಮಾನವ ಶಾಸ್ತ್ರಜ್ಞರೊಬ್ಬರು ಸತ್ಯವಾಗಿ ನುಡಿದಿದ್ದಾರೆ. ಭರತ ಖಂಡದ ಗುಡ್ಡಗಾಡು ಪ್ರದೇಶಗಳಲ್ಲಿ ಇಂದಿನ ನಾಗರಿಕತೆಯ ಸಂಪರ್ಕವಿಲ್ಲದೆ ವಾಸಿಸುತ್ತಿರುವ ಜನರ ಕೆಲವು ತಂಡಗಳಿಗೆ ಆದಿವಾಸಿಗಳೆಂದು ಹೆಸರು. ಇವರಲ್ಲಿ ಸಂತಾಳರು, ಭಿಲ್ಲರು, ಗೊಂಡರು, ಮುಂಡರು, ತೊದವರು, ನಾಗರು ಹೆಸರುವಾಸಿಯಾದವರು. ಮಾನವ ಶಾಸ್ತ್ರದ, ಸಂಶೋಧಕರು ಇವರ ವಿಷಯವಾಗಿ ಹಲಕೆಲವು ಸಂಗತಿಗಳನ್ನು ಸಂಗ್ರಹಿಸಿ ಪ್ರಕಟಿಸಿರುವುದರಿಂದ ಇತರ ಆದಿವಾಸಿಗಳಿಗಿಂತಲೂ ಇವರ ವಿಷಯವನ್ನು ನಾವು ಹೆಚ್ಚಾಗಿ

ತಿಳಿದುಕೊಳ್ಳಬಹುದಾಗಿದೆ. ಇವರಲ್ಲಿ ಕ್ರೈಸ್ತ ಮತ್ತು ಮುಹಮ್ಮದೀಯ ಮತಗಳಿಗೆ ಮಾರು ಹೋಗದೆ ಉಳಿದವರನ್ನು ಹಿಂದೂ ಧರ್ಮೀಯರೆಂದು ಭಾವಿಸುವ ವಾಡಿಕೆ ಇದೆ. ಹೀಗೆಂದು ಭಾವಿಸುವುದು ಅನ್ಯಮತೀಯರಾದ ಕೆಲವರಿಗೆ ಸಮ್ಮತವಿಲ್ಲ. ಆದಿವಾಸಿಗಳಲ್ಲೇ ಕೆಲವರು ಆಧುನಿಕ ಭಾವನೆಗಳಿಗೆ ಸಿಲುಕಿದವರು ತಾವು ಹಿಂದುಗಳಲ್ಲವೆಂದೂ ತಮ್ಮ ಸಂಸ್ಕೃತಿಯೇ ಬೇರೆ ರೀತಿಯದೆಂದೂ ವಾದಿಸತೊಡಗಿದ್ದಾರೆ. ಆದರೆ ಇಷ್ಟು ಮಾತ್ರ ಸತ್ಯ. ಇವರು ಹಿಂದುಗಳು ಎಂದು ಒಪ್ಪಿಕೊಳ್ಳಲು ಹಿಂಜರಿದರೂ ಹಿಂದೂ ಧರ್ಮದ ಅಥವಾ ಪುರಾತನ ಭಾರತ ಸಂಸ್ಕೃತಿಯ ಪ್ರಭಾವಕ್ಕೆ ಬಹುಕಾಲದಿಂದಲೂ ಒಳಪಟ್ಟಿರುವುದು ನಿಜ. ಹಾಗೆಯೇ ಹಿಂದೂ ಧರ್ಮವೂ ಕೂಡ ಆದಿವಾಸಿಗಳ ಸಂಸ್ಕೃತಿಯಿಂದ ಅನೇಕ ಅಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡಿರುವುದೂ ನಿಜವೆ.

ವೈದಿಕ ಕಾಲ

ಹಿಂದೂ ಧರ್ಮದಲ್ಲಿ ಆದಿವಾಸಿಗಳ ಭಾವನೆಗಳು ಮತ್ತು ಸಂಪ್ರದಾಯಗಳು ಹೊಕ್ಕಿರುವ ರೀತಿಯನ್ನು ಅಥರ್ವ ವೇದದಲ್ಲಿ ಕಾಣುತ್ತೇವೆ. ವೇದಗಳಿಗೆ ಮೊದಲು 'ತ್ರಯೀ' ಎಂಬ ಹೆಸರಿದ್ದಿತು. ಇದು ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಮಾತ್ರ ಕುರಿತು ಹೇಳಿದ ಹೆಸರು. ಆದರೆ ಕಡೆಗೆ ನಾಲ್ಕನೆಯ ವೇದ ಒಂದು ಸೇರಬೇಕಾಯಿತು. ಅಥರ್ವ ವೇದವು ಭಾರತ ಸಂಸ್ಕೃತಿಯ ಸಮನ್ವಯ ಶಕ್ತಿಯ ಸಂಕೇತವಾಗಿದೆ. ಭಾರತ ಧರ್ಮಗಳಲ್ಲಿ ಇಂದಿಗೂ ಕಾಣುವ ಮಡಿಮೈಲಿಗೆ, ವ್ರತಉಪವಾಸ, ಮಂತ್ರತಂತ್ರ, ಯಜ್ಞಯಾಗ, ಜಾತಕರ್ಮನಾಮಕರಣ ಮೊದಲಾದ ಸಂಸ್ಕಾರಗಳು, ಅಪರ ಕ್ರಿಯೆ ಶ್ರಾದ್ಧ ಕರ್ಮ ಮೊದಲಾದ ಪೂರ್ವಜರ ಆರಾಧನೆ ಮತ್ತು ಪ್ರೇತ ತೃಪ್ತಿ ಇಂಥವುಗಳಲ್ಲೆಲ್ಲಾ ಆದಿವಾಸಿಗಳ ಸಂಸ್ಕೃತಿಯ ಪ್ರಭಾವವಿದೆಯೆಂದು ಊಹಿಸಬಹುದಾಗಿದೆ. ಇಂದಿನ ಮಾನವ ಶಾಸ್ತ್ರಜ್ಞರು ಬಳಸುವ ಮ್ಯಾನಾ,[1] (Mana), ಟೋಟೆಮ್[2] (totem) ಟಾಬೂ[3] (taboo) ಮೊದಲಾದ ಭಾವನೆಗಳನ್ನು ಆದಿವಾಸಿಗಳಲ್ಲಿ ಕಾಣುತ್ತೇವೆ. ಇವು ಹಿಂದೂಧರ್ಮದಲ್ಲಿ ಪ್ರವೇಶಮಾಡಿರುವುದೂ ಶಾಸ್ತ್ರಜ್ಞರಿಗೆ ಸ್ಪಷ್ಟವಾಗಿದೆ. ಆದರೆ ಈ ಭಾವನೆಗಳು ಹಿಂದೂಧರ್ಮದಲ್ಲಿ ಅಂಗೀಕಾರಪಡೆಯಬೇಕಾದರೆ ನಯವಾದ ರೂಪಗಳನ್ನು ತಾಳಬೇಕಾಯಿತು. ಹೊಸ ಅರ್ಥಗಳನ್ನು ಹೊರಬೇಕಾಯಿತು. ಈ ರೀತಿಯಾದ ನೂತನ ಪರಿಣಾಮಗಳನ್ನು ಹಿಂದೂಧರ್ಮದಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ. ಈ ರೀತಿಯ ಸಮನ್ವಯವು ಜನಸಾಮಾನ್ಯರ ಒಪ್ಪಿಗೆಯನ್ನು ಪಡೆಯಲೋಸುಗ ಹೊಸ ಧಾರ್ಮಿಕ ತತ್ವಗಳು ಅಂಕುರಿಸಿದವು. ಅಧಿಕಾರಿ ಭೇದ ಅನ್ನುವ ತತ್ವ ಇಂತಹುದು. ಅಧಿಕಾರಿ ಭೇದ ಅನ್ನುವ ತತ್ವದ ಸಹಾಯದಿಂದ ಒಂದು ಮಟ್ಟದ ಜನರಿಗೆ ಅನ್ವಯಿಸುವ ವಿಹಿತ ಅಥವಾ ನಿಷಿದ್ಧ ಕರ್ಮಗಳು ಮತ್ತೊಂದು ಮಟ್ಟದ ಜನರಿಗೆ ಅನ್ವಯಿಸುವದಿಲ್ಲವೆಂಬ ಉದಾರ ನೀತಿ ಹಿಂದೂಧರ್ಮದಲ್ಲಿ ಅಂಗೀಕೃತವಾಯಿತು. ಯಜಿನ ಪೂಜನವಿಧಿಗಳಲ್ಲಿ ಸಾತ್ವಿಕ, ರಾಜಸ, ತಾಮಸ ಎಂಬ ವಿಭಾಗ ಅಂಗೀಕೃತವಾಯಿತು. ಭೂತಗಣಗಳನ್ನು ಪೂಜೆ ಮಾಡುವ ತಾಮಸ ಜನರಿಗೆ, ಸಾತ್ವಿಕ ದೇವತೆಗಳನ್ನು ಪೂಜೆ ಮಾಡುವ ಸಾತ್ವಿಕ ಜನರಿಗೆ, ಕಾಮಭೋಗಾರ್ಥಗಳಿಗಾಗಿ ಪೂಜೆ ಪುರಸ್ಕಾರಗಳನು ಕೈಗೊಳ್ಳುವ ರಾಜಸ ಜನರಿಗೆ ಅವರವರಿಗೆ ಯೋಗ್ಯವಾದ ಸ್ಥಾನ ಧರ್ಮದಲ್ಲಿ ಸಂದಿತು. ಆಂತರಿಕ ಪರಿಪಾಕದಿಂದ ಒಂದಲ್ಲ ಒಂದು ದಿನ ಪ್ರತಿ ಮಾನವನೂ ಹಂತದಿಂದ ಹಂತಕ್ಕೆ ಏರಿ ಬರುವನೆಂದೂ ಇದಕ್ಕೆ ಮುಖ್ಯವಾದ ಸತ್ವ ಶುದ್ಧಿಯನ್ನು ಕ್ರಮೇಣ ಪಡೆಯುವನೆಂದೂ, ಆದ್ದರಿಂದ ಇದರ ಸಲುವಾಗಿ ಅನ್ಯರಿಗೆ ಅಸಹ್ಯಪಡಬಾರದೆಂದೂ ಉಪದೇಶಿಸುವ ಧಾರ್ಮಿಕ ತತ್ವಗಳು ಏರ್ಪಟ್ಟವು. ವೇದೋಕ್ತ ಕರ್ಮಗಳನ್ನೂ ಚಾಚೂ ತಪ್ಪದೆ ಮಾಡಿ ಹೃದಯ ಶುದ್ಧಿ ಇಲ್ಲದಿದ್ದರೆ ಅವುಗಳು ಫಲಿಸುವುದಿಲ್ಲವೆಂಬ ವಾಕ್ಯಗಳು ಜನರನ್ನು ಕ್ಷುದ್ರ ದೇವತೆಗಳ ಉಪಾಸನೆಯಿಂದ, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ದುರಾಚಾರಗಳಿಂದ ಮೆಲ್ಲನೆ ಬಿಡಿಸಲು ಪ್ರಯತ್ನಪಟ್ಟವು. "ಆಚಾರ ಹೀನಂ ನ

---

(1) ಮ್ಯಾನಾ:—ಅಂದರೆ ಮಂತ್ರಶಕ್ತಿ; ಕೆಲವರಲ್ಲಿರಬಲ್ಲದು. ಕೆಲವು ವಸ್ತುಗಳಲ್ಲಿ ಅಡಗಿರಬಲ್ಲದು, ಕೆಲವು ಕರ್ಮಗಳಲ್ಲಿ ಉತ್ಪತ್ತಿಯಾಗಬಲ್ಲುದು.

(2) ಟೋಟೆಮ್:—ಅಂದರೆ ಒಂದು ಪ್ರಾಣಿಯನ್ನೋ, ಪಕ್ಷಿಯನ್ನೋ, ನಾಗ, ನಂದಿ, ವಾನರ ಮೊದಲಾದವುಗಳನ್ನೂ ಒಂದು ಕುಲದ ಅಥವಾ ಬುಡಕಟ್ಟಿನ ಲಾಂಛನವನ್ನಾಗಿ ಅಂಗೀಕರಿಸಿದುದು.

(3) ಟಾಬೂ:—ಅಂದರೆ ನಿಷಿದ್ಧನಾದುದು, ಕೆಲವು ಸಮಯಗಳಲ್ಲಿ ಮಡಿಯಾದುದು ಅಥವಾ ಮೈಲಿಗೆಯಾದುದು.

ಪುನಂತಿ ವೇದಾಃ" ಆಚಾರಹೀನನನ್ನು ವೇದಗಳು ಪುನೀತನನ್ನಾಗಿ ಮಾಡವು ಎಂಬ ವಾಕ್ಯ ಬರಿಯ ಅಕ್ಷರಜ್ಞಾನದಿಂದಲೇ ಮೋಕ್ಷವೆಂದು ನಂಬುವ ಜನರಿಗೆ ಎಚ್ಚರಿಕೆ ಕೊಟ್ಟಿತು. ಆಚಾರಹೀನನಾಗಿ ವೇದಾಧ್ಯಯನನಿರತನಾದ ಮಾತ್ರಕ್ಕೆ ಇವನಿಗೆ ಸದ್ಗತಿ ಇಲ್ಲವೆಂಬುದನ್ನು "ಛಾಂದಾಸ್ಸೈನಂ ಮೃತ್ಯುಕಾಲೇ ತ್ಯಜನ್ತಿ ನೀಡಂಶಕುಂತಾ ಇದಜಾತಪಕ್ಷಾಃ" ಅಂದರೆ ಛಾಂದಸ್ಸು ಇಂಥವನನ್ನು ಮೃತ್ಯು ಕಾಲದಲ್ಲಿ ರೆಕ್ಕೆ ಬಂದ ಹಕ್ಕಿಗಳು ಗೂಡನ್ನು ಬಿಟ್ಟು ಹಾರಿಹೋಗುವಂತೆ ಇವನನ್ನೂ ತ್ಯಜಿಸುವುವು ಅನ್ನುವ ವಾಕ್ಯ ವಿಶದಪಡಿಸುವುದು.

ಉಪನಿಷತ್ತುಗಳ ಕಾಲ

ವಿಧ್ಯುಕ್ತವಾದ ಬಾಹ್ಯ ಕರ್ಮಗಳಿಗಿಂತಲೂ ಜ್ಞಾನಕ್ಕೆ ಮತ್ತು ವೈರಾಗ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ಬಂದದ್ದು ಉಪನಿಷತ್ತುಗಳ ಕಾಲದಲ್ಲಿ. ಉಪನಿಷತ್ತುಗಳ ಉಪದೇಶಗಳು ಹಠಾತ್ತಾಗಿ ಭರತ ಖಂಡವನ್ನು ಪ್ರವೇಶಿಸಲಿಲ್ಲ. ಇವುಗಳ ಅಂಕುರಾರ್ಪಣ ವೇದಗಳ ಕಾಲದಲ್ಲೇ ಆಗಿದ್ದಿತು. ಅನೇಕ ದೇವತೆಗಳ ಉಪಾಸನೆಯಲ್ಲಿ ತೊಡಗಿದ್ದ ಆರ್ಯರು 'ಏಕಂ ಸದ್ವಿಪ್ರಾಃ ಬಹುಧಾವದಂತಿ' ಎನ್ನುವ ಏಕದೇವೋಪಾಸನೆಗೆ ಒಲಿದಿದ್ದರು. ಈ ಭಾವನೆಯಲ್ಲಿ ಬಹು ದೇವೋಪಾಸನೆಗೂ ಇವರೆಲ್ಲರಲ್ಲಿಯೂ ಅಂತರ್ಯಾಮಿಯಾಗಿರುವ ಏಕದೇವನ ಉಪಾಸನೆಗೂ ಸೇತು ಬಂಧನವಾಯಿತು. "ದೇಹಿಮೇ ದದಾಮಿತೇ' ಎಂದು ದೇವತೆಗಳೊಡನೆ ನಡೆಸುತ್ತಿದ್ದ ಧಾರ್ಮಿಕ ವ್ಯಾಪಾರದ ಬದಲು ಪ್ರತಿಫಲವನ್ನು ಬಯಸದ ಕರ್ಮಾನುಷ್ಠಾನ ಪ್ರಚಾರಕ್ಕೆ ಬಂತು. "ನ ವಿತ್ತೇನ ತರ್ಪಣೀಯೋ ಮನುಷ್ಯಃ" ಎಂದು ಉಪನಿಷತ್ತೊಂದು ಮಾನವನ ಹೃದಯಾಂತರಾಳದಲ್ಲಿ ಹುದುಗಿದ ಇನ್ನಾವ ಐಹಿಕ ಸುಖದಿಂದಲೂ ತೃಪ್ತಿಗೊಳಿಸಲಾಗದ ಜ್ಞಾನಪಿಪಾಸೆಯನ್ನು ಮುಂದಿಟ್ಟಿತು. ಯಮನು ಎಷ್ಟು ಭೋಗಭಾಗ್ಯಗಳನ್ನೂ ಕೊಡುತ್ತೇನೆಂದರೂ ನಚಿಕೇತ ಒಪ್ಪಲಿಲ್ಲ. ಬ್ರಹ್ಮ ಜ್ಞಾನವನ್ನೇ ಬಯಸಿದ. ಈ ಪರವಸ್ತು ಬರಿಯ ತರ್ಕಕ್ಕೆ ಒಲಿಯುವುದಲ್ಲವೆಂಬ ಭಾವನೆಯನ್ನೂ "ನೈಷಾತರ್ಕೇಣ ಮತಿಮಾಪನೇಯ" ಎನ್ನುವ ವಾಕ್ಯದಲ್ಲಿ ನೋಡುತ್ತೇವೆ. ಇದೇ ಅಭಿಪ್ರಾಯವನ್ನು "ನಾಯಮಾತ್ಮ ಪ್ರವಚನೇನ ಲಭ್ಯೋ ನಮೇಧಯಾ ನ ಬಹುನಾಶ್ರುತೇನ" ಎನ್ನುವ ವಾಕ್ಯ ಸ್ಥಿರ ಪಡಿಸಿತು. ಈ ವಾಕ್ಯಗಳಿಂದ ಜ್ಞಾನವೆಂದರೆ ಬರಿಯ ಪುಸ್ತಕ ಜ್ಞಾನವಲ್ಲವೆಂದು ಸ್ಪಷ್ಟವಾಯಿತು. ಈ ಜ್ಞಾನವನ್ನು ಪಡೆಯುವುದು ಸುಲಭವಲ್ಲವೆಂಬುದನ್ನು "ಪುರಸ್ಯಧಾರಾ ನಿಶಿತಾ ದುರತ್ಯಯಾ" ಕತ್ತಿಯ ಅಲುಗಿನ ಮೇಲೆ ನಡೆದಂತೆ ಎಂದು ವರ್ಣಿಸುವ ಮಾತುಗಳು ಸ್ಪಷ್ಟಪಡಿಸಿವೆ. ಬ್ರಹ್ಮಸಾಧನದಲ್ಲಿ ತೊಡಗಿದವನು ಜೀವನದ ಹಂಗು ತೊರೆದಿರಬೇಕಾದ 'ಧೀರ'ನಾಗಿರಬೇಕು, ಇವನಲ್ಲಿ ಆತ್ಮಶಕ್ತಿ ಪ್ರಜ್ವಲಿಸುತ್ತಿರಬೇಕು ಅನ್ನುವ ಅಭಿಪ್ರಾಯಗಳನ್ನು 'ನಾಯಮಾತ್ಮ ಬಲಹೀನೇನ ಲಭ್ಯೋ' ಅನ್ನುವ ವಾಕ್ಯ ಸ್ಫುಟಪಡಿಸುವುದು. ಬ್ರಹ್ಮ ದರ್ಶನಕ್ಕಾಗಿ ತೊಡಗಿರುವ ಬ್ರಹ್ಮ ಸಾಧಕನ ಜೀವನಕ್ರಮ ತ್ಯಾಗವೆಂಬುದನ್ನೂ ತ್ಯಾಗದಿಂದಲೇ ಇವನು ಸುಖಗಳಿಸಬಲ್ಲವನೆಂದೂ, ಈತನು ನಿಸ್ಪೃಹನೆಂದೂ, ಅನಸೂಯನೆಂದೂ, ಇತರರ ಸ್ವತ್ತಿಗೆ ಆಶೆ ಪಡುವವನಲ್ಲವೆಂದೂ ಮುಂತಾದ ಲಕ್ಷಣಗಳುಳ್ಳ ಜ್ಞಾನಿಯ ಮನೋಭಾವವನ್ನು ಮತ್ತು ದೃಷ್ಟಿಯನ್ನು ಈಶಾವಾಸ್ಯೋಪನಿಷತ್ತಿನ ವಾಕ್ಯಗಳು ಸ್ಪಷ್ಟ ಪಡಿಸುವುವು. 'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜ್ಜಗತ್ಯಾಂ ಜಗತ್, ಕೇನತ್ಯಸ್ತೇನ ಭುಂಜೀಥಾಃ ಮಾಗೃಧಃ ಕಸ್ಸಸ್ವಿದ್ಧನಂ"—ಜಗತ್ತಿನಲ್ಲಿರುವವೆಲ್ಲವೂ ಈಶನಿಂದ ಆವೃತವಾದುದು, ಈಶನದು ನಮ್ಮದಲ್ಲ, ಇದನ್ನು ತಿಳಿದು ತ್ಯಾಗಭಾವದಿಂದ, ಅರ್ಪಿತ ಮನೋಭಾವದಿಂದ ನಿನ್ನ ಬಾಳನ್ನು ಬಾಳು. ಇಲ್ಲಿ ನಿನ್ನದೆಂಬುವುದೇನಿದೆ? ಯಾವುದಕ್ಕೂ ಆಶೆ ಪಡಬೇಡ. 'ಕುರ್ವನ್ನೇದೇಹಕರ್ಮಾಣಿ ಜಿ ಜೀವಿಷೇತ್ ಶತಂ ಸಮಾಃ' ನಿನ್ನ ಪಾಲಿಗೆ ಬಂದ ಕರ್ಮಗಳನ್ನೂ ಮಾಡುತ್ತಲೇ ನೂರು ವರುಷ ಬಾಳು—ಈ ರೀತಿಯ ಉಪದೇಶಗಳು 'ತ್ಯಾಗ' 'ಸನ್ಯಾಸ' 'ವೈರಾಗ್ಯ' ಅನ್ನುವ ಮಾತುಗಳಿಗೆ ಆಳವಾದ ಅರ್ಥವನ್ನು ಕೊಟ್ಟಿವೆ. ತ್ಯಾಗವೆಂದರೆ ದೇಹತ್ಯಾಗವಲ್ಲ, ಲೋಕವನ್ನು ಬಿಟ್ಟು ವಿಮುಖನಾಗಿ ತನ್ನ ಮುಕ್ತಿಯನ್ನು ತಾನು ಸಾಧಿಸಿಕೊಳ್ಳುವುದಲ್ಲ, ಲೋಕದಲ್ಲಿ ಉಳಿದೇ ಮುಕ್ತಿಯನ್ನು ಕರ್ಮಫಲತ್ಯಾಗದಿಂದ ನಿಷ್ಕಾಮ ಕರ್ಮದಿಂದ ಸಾಧಿಸಬೇಕೆಂಬ ಭಗವದ್ಗೀತೆಯ ತತ್ತ್ವೋಪದೇಶಕ್ಕೆ ಈ ಉಪನಿಷದ್ವಾಕ್ಯಗಳು ತಳಹದಿಯಾದವು. ಕರ್ಮದಲ್ಲಿ ಅಕರ್ಮವನ್ನು ಕಾಣುವ

ಮತ್ತು ಅಕರ್ಮದಲ್ಲಿ ಕರ್ಮವನ್ನು ಕಾಣುವ ಒಗಟನ್ನು ಈ ರೀತಿಯ ಉಪದೇಶಗಳು ಬಿಡಿಸುವುವು. ಕರ್ಮ ನಿಷ್ಠೆಗೂ ನೈಷ್ಕರ್ಮ್ಯ ಸಿದ್ಧಿಗೂ ಸಮನ್ವಯವಿದರಲ್ಲಿ ಏರ್ಪಟ್ಟಿತು. ಈ ಶಿವಾಸ್ಯ ಉಪನಿಷತ್ತಿನ ವಾಕ್ಯಗಳನ್ನು ಕುರಿತು ಗಾಂಧೀಜಿ "ಹರಿಜನ" (ಜನವರಿ 30 1937) ಪತ್ರಿಕೆಯಲ್ಲಿ ಈ ರೀತಿ ಬರೆದಿದ್ದಾರೆ:— "ಹಿಂದೂ ಧರ್ಮವನ್ನೆಲ್ಲಾ ಈಶೋಪನಿಷತ್ತಿನ ಮೊದಲ ಪದ್ಯದಲ್ಲಿ ಅಡಗಿಸಬಹುದು. ಮಿಕ್ಕ ಹಿಂದೂ ಧರ್ಮ ಗ್ರಂಥಗಳೆಲ್ಲಾ ಭಸ್ಮವಾಗಿ ಮಾನವರ ನೆನಹಿನಿಂದ ಅಳಿಸಿ ಹೋದರೂ, ಈ ಒಂದು ಶ್ಲೋಕ ಮಾತ್ರ ನಮ್ಮೊಡನೆ ಉಳಿದರೆ, ಅವುಗಳೆಲ್ಲದರ ವಿನಾಶದಿಂದ ನಮಗೇನೂ ನಷ್ಟವಿಲ್ಲ. ಆಗಲೂ ಹಿಂದೂ ಧರ್ಮ ನಮ್ಮೊಡನಿರುವುದು". ಚರಿತ್ರಾರ್ಹವಾದ ಅನೇಕ ವಿಪ್ಲವ ವಿಪತ್ತುಗಳು ಭಾರತವನ್ನು ತಲ್ಲಣಿಸುವಂತೆ ಮಾಡಿದರೂ, ಕಗ್ಗತ್ತಲೆಯ ಕಾರ್ಮೋಡಗಳು ಕವಿದಾಗಲೂ ಇಂತಹ ಉಪನಿಷದ್ವಾಕ್ಯಗಳು ಆಗಾಗ ಹೊಳೆಯುವ ಮಿಂಚಿನಂತೆ ನಮಗೆ ಬೆಳಕು ತರುವವು.

ಜೈನ ಬುದ್ಧ ಯುಗ

ಜೈನ ಬುದ್ಧ ಧರ್ಮಗಳು ಮಾನವನ ಶೀಲಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟವು. ಜ್ಞಾನಿಯಾಗುವುದು ಕಷ್ಟ; ಆದರೆ ಶೀಲವಂತರಾಗುವುದು ಎಲ್ಲ ಮಾನವರಿಗೂ ಸಾಧ್ಯ. ಮಾನವನಿಗೆ ಶೀಲವೇ ಮುಖ್ಯ. ಶೀಲದಿಂದಲೇ ಜೀವನದ ದುಃಖವನ್ನು ನೀಗಬಲ್ಲನು. ಭೂತದಯೆ ಪಶ್ಚಾತ್ತಾಪಗಳೇ ಮಾನವನ ಉತ್ತಾರಕ ತತ್ವಗಳು. ಅಹಿಂಸೆಯೇ ಪರಮ ಧರ್ಮ–ಹೀಗೆಂದು–ಬೋಧಿಸಿದ ಮತಗಳು ಜೈನ ಮತ್ತು ಬೌದ್ಧಮತಗಳು. ಯಜ್ಞ ಯಾಗಗಳಲ್ಲಿ ದೇವತೆಗಳನ್ನು ತೃಪ್ತಿಪಡಿಸುವ ನೆಪದಲ್ಲಿ ನಡೆಯುತ್ತಿದ್ದ ಪಶುವಧೆಯನ್ನು ತಪ್ಪಿಸಿ ನಿಜವಾದ ಮಾನವಧರ್ಮ (Humanism) ವನ್ನು ಎತ್ತಿ ಹಿಡಿದ ಧರ್ಮಗಳೆಂದರೆ ಜೈನ ಮತ್ತು ಬೌದ್ಧ ಧರ್ಮಗಳು. ಉಪನಿಷತ್ತುಗಳಲ್ಲಿ ಒತ್ತಿ ಹೇಳಿದ ಸತ್ವ ಶುದ್ಧಿ ಈ ಧರ್ಮಗಳ ಕೇಂದ್ರ ತತ್ವವಾಯಿತು. ಶುಷ್ಕವಾದ ಮತ್ತು ಯಾವೊಂದು ನಿಷ್ಕೃಷ್ಟವಾದ ತೀರ್ಮಾನಕ್ಕೂ ನಮ್ಮನ್ನು ಒಯ್ಯದ ವಾದಗಳಿಂದ ಮಾನವನು ತನ್ನ ಇಂದಿನ ಮತ್ತು ಇಲ್ಲಿಯ ಕರ್ತವ್ಯದ ಕಡೆ ವಿಮುಖನಾಗಬಾರದೆಂದೂ ಶೀಲವಂತನಾಗಿ ಬಾಳುವುದೇ ಜೀವನದ ಅಂತಿಮ ಗುರಿ ಎಂದೂ ಬೋಧಿಸಿದ ಮತ ಬೌದ್ಧಮತ. ಗೌತಮಬುದ್ಧ ಮತ್ತು ಮಹಾವೀರರು ಕರುಣಾಪೂರ್ಣರಾಗಿದ್ದರು. ಜೀವ ಕಾರುಣ್ಯಕ್ಕಿಂತಲೂ ಬೇರೇ ಧರ್ಮವನ್ನು ಅವರು ಒಪ್ಪಲಿಲ್ಲ. ಇವರ ಆದರ್ಶ ಜೀವನ ಉಪದೇಶಗಳು ಭಾರತ ಸಂಸ್ಕೃತಿಯ ಮೇಲೆ ಯಾರೂ ಅಳಿಸಲಾರದಂತಹ ಮುದ್ರೆ ಒತ್ತಿದೆ.

ಜೈನ ಬುದ್ಧಧರ್ಮಗಳು ಈ ಶೀಲ ತತ್ವವನ್ನೇ ಮುಂದಿಟ್ಟು ಅಷ್ಟರಲ್ಲೇ ತೃಪ್ತವಾಗಿ ಉಳಿಯಲಿಲ್ಲ. ಯಾವ ವಾದಗಳನ್ನು ಶುಷ್ಕವೆಂದೂ ನಿರರ್ಥಕವೆಂದೂ ಬದಿಗಿಟ್ಟಿದ್ದರೋ ಆ ವಾದಗಳೆಲ್ಲಾ ಮತ್ತೆ ನುಸುಳಿ ಬಂದವು. ತಮ್ಮ ಸಿದ್ಧಾಂತವನ್ನು ತಾರ್ಕಿಕವಾಗಿ ಪುಷ್ಟಿಗೊಳಿಸುವ ಭರದಲ್ಲಿ ಪಂಡಿತೋತ್ತಮರು ಅನೇಕ ವಾದಗಳನ್ನು ಮುಂಡಿಸಿದರು. ಈ ವಾದಗಳಿಗೆ ಪ್ರತಿವಾದಗಳು ಹುಟ್ಟಿಕೊಂಡವು. ಜೈನ ಬೌದ್ಧ ಮತಗಳು ಅನೇಕ ಸಿದ್ಧಾಂತ ಶಾಖೆಗಳಾಗಿ ಒಡೆದವು.

ಮತತ್ರಯ

ವೈದಿಕ ಧರ್ಮದ ದೃಷ್ಟಿಯಿಂದ ಈ ವಾದ ಸಿದ್ಧಾಂತಗಳಲ್ಲಿ ದೋಷಗಳನ್ನು ತೋರಿಸಿ ಕೊಡುವ ಸಲುವಾಗಿ ಮತ್ತು ವೈದಿಕ ಧರ್ಮವನ್ನು ಪುಷ್ಟಿಗೊಳಿಸುವ ಸಲುವಾಗಿ ಹುಟ್ಟಿದ ಮತತ್ರಯಗಳು ಅದ್ವೈತ ವಿಶಿಷ್ಟಾದ್ವೈತ ಮತ್ತು ದ್ವೈತವೇದಾಂತಗಳು. ಈ ಮತ ತ್ರಯಗಳು ಬೌದ್ಧ ಮತ್ತು ಜೈನ ಸಿದ್ಧಾಂತಗಳನ್ನು ಪ್ರತಿಭಟಿಸಿದರೂ ಆ ಮತಗಳಲ್ಲಿ ನಿರೂಪಿತವಾದ ಶೀಲ ತತ್ವವನ್ನು ಅಹಿಂಸಾತತ್ವವನ್ನು ಸಂಪೂರ್ಣವಾಗಿ ಒಪ್ಪಿಕೊಂಡವು. ಸಮ್ಯಗ್ದರ್ಶನ, ಸಮ್ಯಗ್ಚಾರಿತ್ರ ಮೊದಲಾದುವುಗಳು ವೇದಾಂತ ಮತಗಳಿಗೂ ಜೈನ ಮತ್ತು ಬೌದ್ಧ ಮತಗಳಿಗೂ ಸಮಾನವಾದ ಅಂಶಗಳಾಗಿದ್ದವು. ಶಮದಯಾದಿ ಗುಣಗಳು, ಸತ್ಯ, ಅಸ್ತೇಯ ಅಪರಿಗ್ರಹ ಮೊದಲಾದ ಸದ್ವರ್ತನೆಯ ಅಂಶಗಳು ವೇದಾಂತ ಮತಗಳಿಗೂ ಜೈನ ಮತ್ತು ಬೌದ್ಧ ಮತಗಳಿಗೂ ಸಮನಾದ ತತ್ವಗಳಾದವು. ವೇದಾಂತ ಮತಗಳ ಮೇಲೆ ಬೌದ್ಧ ಜೈನ ಮತಗಳ ಪ್ರಭಾವ ಮಹತ್ವ ಪೂರಿತವಾದುದು. ಹಾಗೆಯೇ ವೇದಾಂತ ಮತಗಳ ತತ್ವ ಜಿಜ್ಞಾಸೆಯ ಪ್ರಭಾವ ಬೌದ್ಧ ಜೈನ ಮತಗಳ ಮೇಲೆಯೂ ಆಗಿದೆ ಎಂಬುವುದರಲ್ಲಿ ಸಂಶಯವಿಲ್ಲ.

ಮತ ತ್ರಯಗಳಿಗೆ ಮುಖ್ಯವಾದ ಆಧಾರ ಗ್ರಂಥಗಳು ಉಪನಿಷತ್ತು, ಬ್ರಹ್ಮ ಸೂತ್ರ ಮತ್ತು ಭಗವದ್ಗೀತೆ. ಈ ಪ್ರಸ್ಥಾನ ತ್ರಯದಲ್ಲಿ ಅಡಗಿರುವ ತತ್ವಗಳನ್ನು ವಿಶದ ಪಡಿಸುವುದು ಮತ್ತು ಪ್ರತಿಪಾದಿಸುವುದು ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ ಮತ್ತು ಶ್ರೀ ಮಧ್ವಾಚಾರ್ಯರ ಮುಖ್ಯ ಕರ್ತವ್ಯವಾಯಿತು. ವಿದ್ವತ್ಪೂರಿತವಾದ ಉಪನಿಷದ್ಭಾಷ್ಯ, ಬ್ರಹ್ಮಸೂತ್ರ ಭಾಷ್ಯ ಮತ್ತು ಗೀತಾ ಭಾಷ್ಯಗಳು ಒಂದೇ ಗುರಿಯನ್ನು ನಮಗೆ ತೋರಿಸಿ ಕೊಡುವ ಗ್ರಂಥಗಳೆಂಬುದನ್ನು ತಮ್ಮ ವಾದದ ಚಾತುರ್ಯದಿಂದ ಸ್ಥಿರಪಡಿಸಿದರು. ಶ್ರೀ ಶಂಕರಾಚಾರ್ಯರು ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರು. ಶ್ರೀ ರಾಮಾನುಜಾಚಾರ್ಯರು ಮತ್ತು ಶ್ರೀ ಮಧ್ವಾಚಾರ್ಯರು ಭಕ್ತಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರು. ಆದರೆ ಇವರೆಲ್ಲರೂ ಏಕಕಂಠದಿಂದ ಪರಬ್ರಹ್ಮನ ಸಾಕ್ಷಾತ್ಕಾರ ಪಡೆಯಬೇಕಾದರೆ ಸಾಧಕನು ಸತ್ವಶುದ್ಧಿಯನ್ನು ಪಡೆಯಬೇಕೆಂಬುದರ ತತ್ವದಲ್ಲಿ ಒಂದಾದರು.

ಶ್ರೀ ಶಂಕರಾಚಾರ್ಯರು ಷಣ್ಮತ ಸ್ಥಾಪನಾಚಾರ್ಯರೆಂದು ಪ್ರಖ್ಯಾತಿ ಪಡೆದಿದ್ದಾರೆ. ಇವರ ಜೀವನದಲ್ಲಿ ಜ್ಞಾನಭಕ್ತಿಗಳ ಸಾಮರಸ್ಯವನ್ನು ಕಾಣುತ್ತೇವೆ. ಹಾಗೆಯೇ ಭರತ ಖಂಡದಲ್ಲಿ ಪ್ರಚಾರದಲ್ಲಿದ್ದ ಪಾಶುಪತಮತ, ತಾಂತ್ರಿಕ ಮತ ಮೊದಲಾದುವುಗಳನ್ನು ಶುದ್ಧಿಗೊಳಿಸಿ ತಮ್ಮ ಶುದ್ಧವಾದ ವೇದಾಂತಮಾರ್ಗದಲ್ಲಿ ಇವುಗಳಿಗೆ ಯಥೋಚಿತವಾದ ಸ್ಥಾನ ಗಳಿಸಿ ಕೊಟ್ಟಿದ್ದಾರೆ. ವಾಮಮಾರ್ಗಿಗಳನ್ನು ಸರಿಯಾದ ಮಾರ್ಗದಲ್ಲಿ ಅನ್ವಯಗೊಳ್ಳುವಂತೆ ಮಾಡಿದ ಮಹೋಪಕಾರ ಶಂಕರಾಚಾರ್ಯರದು.

ಶ್ರೀ ರಾಮಾನುಜಾಚಾರ್ಯರಿಗೆ ಉಭಯ ವೇದಾಂತ ಪ್ರವರ್ತಕರೆಂದು ಬಿರಿದು ಸಂದಿದೆ. ಈ ಉಭಯ ವೇದಾಂತವಾವುದೆಂದರೆ ಒಂದು ಸಂಸ್ಕೃತ ವೇದಾಂತ ಮತ್ತೊಂದು ದ್ರಾವಿಡ ವೇದಾಂತ. ಋಷಿಪ್ರೋಕ್ತವಾದ ಋಷಿಗಳಿಂದ ಅನುಷ್ಠಿತವಾದ ವೇದಾಂತ ಮಾರ್ಗವೂ ದ್ರಾವಿಡ ನಾಡಿನಲ್ಲಿ ಅವತರಿಸಿದ ಆಳ್ವಾರರ ಮಾರ್ಗವೂ ಒಂದೇ ಮಾರ್ಗದ ಎರಡು ರೂಪಗಳೆಂಬುದನ್ನು ಸ್ಥಿರಪಡಿಸಿದರು. ಆಳ್ವಾರುಗಳ ನಾಲಾಯರ ಪ್ರಬಂಧಗಳು ತಮಿಳಿನಲ್ಲಿ ಹೇಳಿದವುಗಳಾದರೂ ವೇದಗಳಷ್ಟೇ ಪವಿತ್ರವಾದವುಗಳೆಂಬುದನ್ನು ತೋರಿಸಿ ಕೊಟ್ಟರು. ಆರ್ಯ ಸಂಸ್ಕೃತಿಗೂ ದ್ರಾವಿಡ ಸಂಸ್ಕೃತಿಗೂ ಮನೋಹರವಾದ ಸಾಮರಸ್ಯವನ್ನೇರ್ಪಡಿಸಿದರು. ಆಳ್ವಾರುಗಳು ಶೂದ್ರ, ಪರಯ ಮೊದಲಾದ ಜಾತಿಗಳಿಗೆ ಸೇರಿದವರಾದರೂ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಜ್ಞಾನಿಗಳು ಭಕ್ತರುಗಳಂತೆಯೇ ನಮ್ಮ ಆರಾಧನೆಗೆ ಅರ್ಹರೆಂಬ ತಿಳುವಳಿಕೆಯನ್ನೂ ಹರಡಿದರು. ತದನುಸಾರವಾದ ದೇವಾಲಯ ಪ್ರವೇಶ ಮೊದಲಾದ ಧಾರ್ಮಿಕ ಕ್ರಾಂತಿಕಾರಕ ಅಂಶಗಳನ್ನೂ ಹಿಂದೂ ಧರ್ಮದಲ್ಲಿ ಸಮಾವೇಶಗೊಳಿಸಿದರು.

ಶ್ರೀ ಮಧ್ವಾಚಾರ್ಯರ ವೈಷ್ಣವಪಂಥ ದೇಶವೆಲ್ಲಾ ಹರಡಿ ಕನ್ನಡ ಮತ್ತು ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿ ಹುಟ್ಟಿದ ಅನೇಕ ಭಕ್ತಿ ಪಂಥಗಳಿಗೆ ಮೂಲವಾಯಿತು. ಶ್ರೀ ಪುರಂದರದಾಸ, ಶ್ರೀ ಕನಕದಾಸ ಮೊದಲಾದ ಭಕ್ತರು ಸರಳವಾದ ಕನ್ನಡ ನುಡಿಯಲ್ಲಿ ಭಗವದ್ಭಕ್ತಿ, ಜೀವನದ ನೀತಿ ಧರ್ಮಪೂರಿತವಾದ ಉಪದೇಶಗಳನ್ನು ಜನಸಾಮಾನ್ಯರಲ್ಲಿ ಹರಡಿ ಮಹೋಪಕಾರ ಮಾಡಿದರು.

ಹೀಗೆಯೇ ತಮಿಳು ನಾಡಿನ ನಾಯನ್ಮಾರ್ ಎಂಬ ಶಿವಭಕ್ತರು ಮತ್ತು ಕನ್ನಡ ನಾಡಿನ ಶಿವಶರಣರು ತಮ್ಮ ಅನುಭವ ಮಾರ್ಗವನ್ನು ಜನರಲ್ಲಿ ಹರಡಿದರು.

ಅನುಭಾವಿಗಳು

ದಕ್ಷಿಣ ಭಾರತದಲ್ಲಿ ಹುಟ್ಟಿದ ಶೈವ ಮತ್ತು ವೈಷ್ಣವ ಭಕ್ತಿ ಪಂಥಗಳು ಅವುಗಳ ಉಪಾಸನೆಗೆ ವಿಷಯವಾದ ದೇವತೆಗಳು ಬೇರೆಯಾಗಿ ಕಂಡರೂ ಅವುಗಳ ಹೃದಯವನ್ನು ಹೊಕ್ಕು ನೋಡಿದವರಿಗೆ ಇವೆರಡು ಪಂಥಗಳು ಅನುಭಾವಿಗಳ ಪಂಥವಾಗಿ ಒಂದೇ ದಾರಿಯಲ್ಲಿ ದೇವರನ್ನು ಅರಸಲು ಹೊರಟ ಉದ್ಯಮಗಳೆಂದು ಸ್ಪಷ್ಟವಾಗುವುದು. ಅನುಭಾವಿಗಳು ಎಂದೂ ಸ್ನೇಹಪರರು. ಅನುಭವ ಮಾರ್ಗ ಮತಗಳೆಲ್ಲವುಗಳ ಅಂತರಾಳವನ್ನು ತೋರಿಸುವಂಥವು. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಇಂದು ಬೆಳಗುವ ಸಂಸ್ಕೃತಿ

ಯಾವುದೆಂದರೆ ಅನುಭಾವಿಗಳ ಸಂಸ್ಕೃತಿ. ಹರಿದಾಸರು, ಶಿವಶರಣರು, ಚೈತನ್ಯ, ಕಬೀರ್, ಮೀರಾಬಾಯ್ ಮೊದಲಾದವರೆಲ್ಲರೂ ಅನುಭಾವಿಗಳೇ ಆಗಿದ್ದರು. ಈ ದಾರಿಯಲ್ಲೇ ನಡೆದ ಪರಮ ಅನುಭಾವಿಗಳು ಮಹಾತ್ಮಾ ಗಾಂಧಿಯವರು. ಯಾಜ್ಞವಲ್ಕ್ಯನಿಂದ ಹಿಡಿದು ಮಹಾತ್ಮಾ ಗಾಂಧಿಯ ವರೆಗೆ ಅನೂಚಾನವಾಗಿ ಅವಿಚ್ಛಿನ್ನವಾಗಿ ಭಾರತದ ತನುಮನಗಳನ್ನು ತನ್ನ ಸಂಕೋಲೆಯಲ್ಲಿ ಹಿಡಿದಿರುವ ಧರ್ಮವೆಂದರೆ ಅನುಭಾವಿಗಳ ಧರ್ಮ.

ಅನುಭಾವಿಗಳ ಧರ್ಮದಲ್ಲಿ ಭಾರತದಲ್ಲಿ ಉಗಮವಾದ ಧಾರ್ಮಿಕ ಪ್ರವಾಹಗಳೆಲ್ಲಾ ಸೇರಿವೆ. "ಈಶ್ವರ ಅಲ್ಲಾ ತೇರೇ ನಾಮ್ ಸಬ್‌ಕೋ ಸನ್ಮತಿ ದೇ ಭಗವಾನ್" ಎಂದು ಹೇಳಿದ ಧರ್ಮ ಅನುಭಾವಿಗಳ ಧರ್ಮ.

ಸಂಪರ್ಕ—ಸಂಘರ್ಷಣೆ—ಸಂಯೋಗ

ಭಾರತದಲ್ಲಿ ಮಿಳಿತವಾದ ಧರ್ಮಗಳೆಲ್ಲಾ ಸಂಪೂರ್ಣವಾಗಿ ಮಿಳಿತವಾಗುವ ಮೊದಲು ಮೂರು ರೀತಿಯ ಘಟನೆಗಳಿಗೆ ಒಳಪಟ್ಟಿರುವುದನ್ನು ಕಾಣುತ್ತೇವೆ. ಅವುಗಳಾವುವೆಂದರೆ ಸಂಪರ್ಕ–ಸಂಘರ್ಷಣೆ–ಸಂಯೋಗ. ಈ ಮೂರು ಘಟಲಗಳು ಭಾರತ ಸಂಸ್ಕೃತಿಯಲ್ಲಿ ಒಂದಾಗಿ ಬೆರತ ಧಾರ್ಮಿಕ ಪ್ರವಾಹಗಳಿಗೆಲ್ಲಾ ಅನ್ವಯಿಸುವಂತಹುದಾಗಿದೆ.

ಸೌಂದರ್ಯ, ಆನಂದ, ಮುಕ್ತಿ

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್.

[ಉಪನಿಷತ್ ದರ್ಶನ]

ಸೌಂದರ್ಯವು ಸರ್ವಾಕರ್ಷಣೀಯವಾದುದು. ಈ ಕಾರಣದಿಂದಲೇ ಸೌಂದರ್ಯ ತತ್ವಾಭ್ಯಾಸವು ಮನೋರಂಜಕವಾದುದು. ಸೌಂದರ್ಯಾನುಭವವು, ಕಲ್ಪನೆ ಮತ್ತು ಭಾವನೆಗಳ ಒಂದು ಕ್ರಿಯೆ, ಸೌಂದರ್ಯಾನುಭವದಲ್ಲಿ ತಲ್ಲೀನನಾಗುವುದು. ಬರಿಯ ಸೋಮಾರಿತನದ ಒಂದು ಚೇಷ್ಟೆಯಲ್ಲ. ಮಾನವನ ಬಾಳಿನಲ್ಲಿ ಅದಕ್ಕೆ ಪ್ರಮುಖವಾದ ಸ್ಥಾನವುಂಟು. ಜೀವಿಯ ಪೂರ್ಣ ಬೆಳವಣಿಗೆಗೆ ಬುದ್ಧಿಯ ಕಾರ್ಯಗಳೂ ದಿನದಿನದ ಚಟುವಟಿಕೆಗಳೂ ಹೇಗೆ ಆವಶ್ಯಕವೋ ಸೌಂದರ್ಯಾನುಭವವೂ ಅಷ್ಟೇ ಆವಶ್ಯಕ. ಭೌತವಿಜ್ಞಾನ ಮತ್ತು ರಸಾಯನಿಕ ವಿಜ್ಞಾನಗಳು, ಪ್ರಕೃತಿ ವಸ್ತು ಮುಂತಾದುವುಗಳ ಸ್ವಭಾವ ಬದಲಾವಣೆಗಳನ್ನು ವಿವರಿಸುತ್ತವೆ. ಜೀವಶಾಸ್ತ್ರವು ಪ್ರಾಣಿಗಳ ಜೀವನವನ್ನೂ ಮನಶ್ಶಾಸ್ತ್ರವು ಮನಸ್ಸಿನ ಸೂಕ್ಷ್ಮ ವ್ಯಾಪಾರಗಳನ್ನೂ ವಿವರಿಸುತ್ತವೆ. ಕಾವ್ಯಮೀಮಾಂಸೆ, ಅಲಂಕಾರ ಶಾಸ್ತ್ರರಸ, ಕಲಾಶಾಸ್ತ್ರಗಳು, ಸತ್ಯಶಿವ ಸೌಂದರ್ಯಗಳ ಯೋಗ್ಯತೆಯನ್ನೂ ಮಹತ್ವವನ್ನೂ ತೂಕ ಮಾಡುತ್ತವೆ. ಬಾಳಿನ ಪೂರ್ಣಾನುಭವವೇ ವೇದಾಂತದ ವಿಷಯವಾಗುತ್ತದೆ. ಧರ್ಮಶಾಸ್ತ್ರವು ಆತ್ಮನನ್ನೂ ದೇವರೊಂದಿಗೆ ಅದರ ಸಂಬಂಧವನ್ನೂ ನಿರೂಪಿಸುತ್ತವೆ. ಮನುಷ್ಯ, ತನ್ನ ಬಾಳಿನಲ್ಲಿ ಸಂಸ್ಕೃತಿಯನ್ನೂ ಸಮರಸವನ್ನೂ ಉಂಟುಮಾಡಿಕೊಂಡು, ಅಂತ್ಯಗುರಿಯನ್ನೂ ಪರಿಪೂರ್ಣತೆಯನ್ನೂ ಹೊಂದಲು ಮಾಡುವ, ಈ ಅಭ್ಯಾಸ ಸಾಧನೆಯಲ್ಲಿ ಸೌಂದರ್ಯಕ್ಕೂ ಸೌಂದರ್ಯ ತತ್ವಾಭ್ಯಾಸಕ್ಕೂ ಪ್ರಮುಖ ಪಾತ್ರವಿದೆ. ಸೌಂದರ್ಯಾನುಭವ ಸಾಧನೆಗಳಿಗೆ, ತನ್ನದೇ ಆದ ವಿಶಿಷ್ಟವಾದ ಸ್ಥಾನವುಂಟು. ಸೌಂದರ್ಯಾನುಭವವೇ ಸಿದ್ಧಿ, ಸಾಧನೆಗೆ ಮಾರ್ಗವಲ್ಲ ಮಾತ್ರ. ಪ್ರಕೃತಿಯಲ್ಲಿರುವ ಸೊಬಗನ್ನಾಗಲಿ, ಕಾವ್ಯ ಚಿತ್ರ ಶಿಲ್ಪ ಗಾನಗಳ ಸೊಗಸನ್ನಾಗಲಿ ಅನುಭವಿಸುವುದರಿಂದ ನಮ್ಮ ಮನೋಭಾವ ಕಲ್ಮಶರಹಿತವಾಗುವುದು. ಸೌಂದರ್ಯವನ್ನು ಕುರಿತು ಧ್ಯಾನ ಮಾಡುವುದರಿಂದ ನಮ್ಮ ಜೀವನದಲ್ಲಿಯ ಆನಂದ ನೂರ್ಮಡಿಯಾಗುವುದು. ಸೌಂದರ್ಯದ ಭಾಷೆ ಮನುಷ್ಯ ಪ್ರಪಂಚವನ್ನೆಲ್ಲ ಒಂದುಗೂಡಿಸುವ ಸಾಧನ. ಜಗತ್ತಿನ ನಾನಾ ಭಾಗದ ಜನತೆಯಲ್ಲಿ, ಇದರಿಂದ ಪರಸ್ಪರ ಬಾಂಧವ್ಯವೂ ಸೌಹಾರ್ದವೂ ಉಂಟಾಗುತ್ತವೆ. ಕಲೋಪಾಸಕನಾದ ರಸಋಷಿಯೂ ಕವೀಶ್ವರನೂ, ಭಗವಂತನ ಕೃಪೆಗೆ ಪಾತ್ರನಾದ ಸಮಯದಲ್ಲಿ, ಅವನಿಗುಂಟಾದ ದೇವದತ್ತವಾದ ಸ್ಫೂರ್ತಿಯಿಂದ ಕಂಡ ಸೌಂದರ್ಯವನ್ನು, ತನ್ನಲ್ಲಿ ಬಿಂಬಿಸಿಕೊಳ್ಳುತ್ತಾನೆ. ಅನಂತರ ತನ್ನ ಪ್ರತಿಭೆಯ ಮೆರಗನ್ನು ಅದಕ್ಕೆ ಕೊಟ್ಟು, ತಾನು ಕಂಡುದಕ್ಕಿಂತಲೂ ಹೆಚ್ಚು ಉಜ್ವಲವಾಗಿಯೇ ಆ ದೃಶ್ಯಗಳನ್ನು ಹೊರಮೂಡಿಸುವಾಗ ಸೌಂದರ್ಯ ವಸ್ತುಗಳ ನಿರ್ಮಾಣವಾಗುತ್ತದೆ.

ಸೌಂದರ್ಯದ ಸ್ವರೂಪ, ಸ್ವಭಾವ

ಸೌಂದರ್ಯದ ಪ್ರಶ್ನೆ, ಜಗತ್ತಿನ ಆದಿಯಿಂದಲೂ ವೇದಾಂತಿಗಳನ್ನೂ ಕಲಾವಿದರನ್ನೂ ಕೆಣಕುತ್ತಲೇ ಬಂದಿದೆ. ಸೌಂದರ್ಯದ ಲಕ್ಷಣಗಳನ್ನು ಸ್ಪಷ್ಟಪಡಿಸಲು ನಿರ್ದೇಶಿಸಲು ಸಾಧ್ಯವೆ? ಒಂದು ಕೃತಿಯಾಗಲಿ ಗಾನವಾಗಲಿ ಸುಂದರವಾಗಿದೆ ಎಂದು ಹೇಳಿದರೆ ಅರ್ಥವೇನು? ಈ ಸೌಂದರ್ಯದಲ್ಲಿ ತರ ತಮ ಎಂಬ ಮಟ್ಟಗಳಿವೆಯೇ? ಕಲಾಕೃತಿಗಳನ್ನು ಸೌಂದರ್ಯದ ಮಾನದಂಡದಿಂದ ಅಳೆಯಲು ಒಂದು ನಿಖರವಾದ ಮಾನದಂಡವನ್ನು ಸ್ಥಾಪಿಸುವುದು ಸಾಧ್ಯವೆ?—ಈ ಪ್ರಶ್ನೆಗಳಿಗೆ ಜಗತ್ತಿನ ನಾನಾ ಭಾಗದ ಮೇಧಾವಿಗಳು, ವಿಜ್ಞಾನಿಗಳು, ವೇದಾಂತಿಗಳು ಉತ್ತರ ಕೊಟ್ಟಿದ್ದಾರೆ. ಪಾಶ್ಚಾತ್ಯರ ಆ ಉತ್ತರಗಳ ಪೈಕಿ—"ಕಲಾಕೃತಿ ಒಂದು ಅಧ್ಯಾತ್ಮ ಶಕ್ತಿಯ ಕಾರ್ಯ; ಪ್ರತಿಕೃತಿಯೂ ಸ್ವಯಂ ಪರಿಪೂರ್ಣ; ಇಂತಹ ಸೌಂದರ್ಯಾನುಭವಗಳದೇ ಒಂದು ಪ್ರಪಂಚ; ಸೌಂದರ್ಯದ ಸತ್ವವೂ, ಅದರ ಸ್ವಯಮಧಿಕಾರವೂ ಅದನ್ನು ಸಕಾರಣವಾಗಿ ಛಿದ್ರಛಿದ್ರ ಮಾಡಿ ಅದಕ್ಕೆ ಬೆಲೆ ಇಷ್ಟು ಎಂದು ಕಟ್ಟುವುದರಿಂದ, ನಾಶವಾಗುತ್ತದೆ. ಒಂದೊಂದು ಸೌಂದರ್ಯಾನುಭವವೂ ಸ್ವಯಂಪರಿಪೂರ್ಣ, ಪ್ರತಿಯೊಂದು ಕಲಾಕೃತಿಯೂ ತನ್ನದೇ ಆದ ಒಂದು ಗುಂಪಿಗೆ ಸೇರಿದುದು; ಅದು ಅಸದೃಶ, ಹೋಲಿಕೆಗೆ ಮೀರಿದುದು. ಬಾಯಿಂದ ಹೇಳಿ ಇತರರಿಗೆ ತಿಳಿಸಲು ಸಾಧ್ಯವಲ್ಲದುದು. ಅದನ್ನು

ವಿಭಜಿಸಿದರೂ ಅದರ ತಿರುಳು ತಿಳಿಯುವುದಿಲ್ಲ. ಪ್ರಿಯಳ ಕಣ್ಣೀರನ್ನು ವಿಭಜಿಸುವ ವಿಜ್ಞಾನಿಗೆ ಆ ಕಣ್ಣೀರಿನ ಹಿಂದಲ ಜೀವದ ಮನೋವ್ಯಾಪಾರ ಮರೆಯಾಗುತ್ತದೆ. ಸೌಂದರ್ಯಾನುಭವ ದೇಹಕ್ಕೆ ಸಂಬಂಧಪಟ್ಟುದಲ್ಲ. ಅದು ಭಾವಗಳ ಪ್ರಚೋದನೆ."

ಪಾಶ್ಚಾತ್ಯ ದರ್ಶನವಿಜ್ಞಾನಿಗಳೆಲ್ಲ, ಬಾಹ್ಯವಸ್ತುಗಳಿಗೂ ಸೌಂದರ್ಯಾನುಭವಕ್ಕೂ ಹೆಚ್ಚು ಸಂಬಂಧವನ್ನು ಕಲ್ಪಿಸಿರುವಂತೆ ತೋರುತ್ತದೆ. "ಸೌಂದರ್ಯವು ಸೂಕ್ಷ್ಮತೆನಯ ಇವುಗಳಿಂದುಂಟಾಗುವ ಮನೋಭಾವನೆಯಲ್ಲಿದೆ; [ಬರ್ಕ್ Burke] ಸಮತೆ ಮತ್ತು ವರ್ಣಗಳ ಸಮರಸದಲ್ಲಿ ಸೌಂದರ್ಯವಿದೆ [ಸೇಂಟ್ ಆಗಸ್ಟಿನ್]. ಸೌಂದರ್ಯವು, ಕ್ರಮ ಸ್ಪಷ್ಟತೆ ಸಮತೆ ಇವುಗಳ ಮೂಲದಲ್ಲಿದೆ [ಅರಿಸ್ಟೋಟಲ್]. ಜೀವಶಾಸ್ತ್ರ ದೃಷ್ಟಿಯಿಂದ ಯೋಚಿಸುವವರು, ಸೌಂದರ್ಯಕ್ಕೂ ಸ್ತ್ರೀಪುರುಷ ಆಕರ್ಷಣೆಗೂ ಸಂಬಂಧವನ್ನು ಕಲ್ಪಿಸಿ, ಸೌಂದರ್ಯದ ಮೂಲ ಆ ಕ್ರೀಡೆಯಲ್ಲಿದೆ ಎಂದರು. ಡಾರ್ವಿನ್‌ರು, ಮಾನವ ಜನಾಂಗ ಮುಂದುವರಿಯಲು ಸ್ತ್ರೀ ಪುರುಷರ ಆಕರ್ಷಣೆಯೇ ಸೌಂದರ್ಯವೆಂದರು. ಕಲೆಯು ಉತ್ಸಾಹಾಧಿಕ್ಯದ ಆಟ ಎಂದರು ಶಿಲ್ಲರ್; ಟಫ್ಟ್ಸ (Tufts)ರು ಕಲೆಯ ಉತ್ಸಾಹವೂ, ಸೌಂದರ್ಯಾನುಭವವೂ ಲೈಂಗಿಕ ಆವಶ್ಯಕತೆಯ ಭೇದಗಳೆಂದರು. ಫ್ರಾಯಿಡ್‌ರ ಅಭಿಪ್ರಾಯದಲ್ಲಿಯೂ, ಲೈಂಗಿಕಕ್ಕೂ ಸೌಂದರ್ಯಕ್ಕೂ ನಿಕಟಸಂಬಂಧವಿದೆ. ಸಾಂತಾಯನ ಮುಂತಾದವರು ಸೌಂದರ್ಯವು ಕೇವಲ ಜಡ ಪ್ರಕೃತಿಗೆ ಸೇರಿದುದೆಂದೂ, ಜಡ ಪ್ರಕೃತಿ ರಕ್ಕೆಗೊಂಡು ಆನಂದವೀಯುವುದೆಂದೂ ಹೇಳುತ್ತಾರೆ. ಕ್ರೋಸೆ (Croce) ಗ್ರಾಂಟ್ ಆಲೆನ್, ಬೇನ್, ಆಲಿಸನ್ ಮತ್ತು ಜೆಫ್ರಿ, ಸ್ಟಿವರ್ಟ್, ಶಾಫಟ್ಸ್‌ಬರಿ, ಹಚೆಸನ್ (Hutcheson) ಲಿಪ್ಸ್, ಹ್ಯೂಮ್, ಸ್ಪೆನ್ಸರ್, ಲಿಸ್ಟೊವೆಲ್ ಇವರೆಲ್ಲರ ಅಭಿಪ್ರಾಯಗಳೂ ಮೇಲಿನ ಸಾರಾಂಶದಲ್ಲಿ ಅಡಕವಾಗಿದೆ.

ಆದರೆ ಇವಾವುದರಿಂದಲೂ ಸೌಂದರ್ಯದ ಒಳತಿರುಳು ವಿವರಿತವಾಗುವುದಿಲ್ಲ. ಭೌತ ಮತ್ತು ಜೀವಶಾಸ್ತ್ರಗಳ ಮೇಲೆ ಅವಲಂಭಿಸುವ ಸಿದ್ಧಾಂತಗಳು, ಸೌಂದರ್ಯದ ಉನ್ನತ ಆದರ್ಶವನ್ನು ಮರೆಸಿ, ಅದನ್ನು ಅಲ್ಪತೆಗೆ ಎಳೆಯುತ್ತವೆ. ಈ ದೃಷ್ಟಿಯಿಂದ ಪಾಶ್ಚಾತ್ಯ ಜ್ಞಾನಿಗಳ ಸಿದ್ಧಾಂತ ಏಕಮುಖ. ಅದರಲ್ಲಿ ಸೌಂದರ್ಯದ ಪೂರ್ಣ ನೋಟವಿಲ್ಲ. ಸೌಂದರ್ಯವನ್ನೂ ಜೀವಶಾಸ್ತ್ರವನ್ನೂ ಗಂಟುಹಾಕುವ ಪ್ರಯತ್ನ ಏಕೋ ತೃಪ್ತಿಕರವಾಗಿಲ್ಲ. ಆರೋಗ್ಯವೂ ಯೌವನವೂ ಇದ್ದರೂ ಸೌಂದರ್ಯವಿಲ್ಲದ ವಸ್ತುಗಳಿಗೆ ಅಭಾವವಿಲ್ಲ. ಉಪಯುಕ್ತವಾದುದನ್ನು ಸುಂದರವಾದುದೆಂದು ಹೇಳಲೂ ಸಾಧ್ಯವಿಲ್ಲ. ಜೀವಶಾಸ್ತ್ರಜ್ಞರು, ಸೌಂದರ್ಯವು ವಸ್ತುಗಳಲ್ಲಿದೆ ಎಂದರೆ, ಮನಶ್ಶಾಸ್ತ್ರಜ್ಞರು, ಸೌಂದರ್ಯ ನೋಡುವವನ ಮನಸ್ಸಿನಲ್ಲಿದೆ ಎನ್ನುತ್ತಾರೆ. ಸಾಕ್ರಟಿಸನು ಸೌಂದರ್ಯವನ್ನು ಉಪಯುಕ್ತತೆಗೆ ಗಂಟುಹಾಕುತ್ತಾನೆ. ಉಪಯುಕ್ತವಾಗಿರುವುದೇ ಸುಂದರವಾಗಿರುವುದರ ಗುರುತು ಆತನಿಗೆ. ನೀತಿಶಾಸ್ತ್ರಜ್ಞನಿಗೆ ಸೌಂದರ್ಯ ಸುಗುಣಗಳ ಆಕರ. ಸೌಂದರ್ಯವೂ ಸುಗುಣವೂ ಒಂದೇ. ರಸ್ಕಿನ್‌ರು "ಸೌಂದರ್ಯ, ಮನುಷ್ಯನ ನೀತಿಜೀವನವನ್ನು ಪೂರ್ಣಗೊಳಿಸುತ್ತದೆ" ಎನ್ನುತ್ತಾರೆ. ಟಾಲಸ್ಟಾಯ್‌ರವರ ಭಾವನೆಗಳೂ ನೀತಿ ಸಂಬಂಧವಾದುವೇ. "ಎಲ್ಲಾ ವಿಧವಾದ ಕಲೆಗಳಿಗೂ ನೀತಿಯೇ ಮೂಲ. ಸತ್ಯ ಪಾರಿಶುದ್ಧತೆ ನ್ಯಾಯ ಇವೇ ಸೌಂದರ್ಯ. ಸುಂದರವಾದುದನ್ನು ಮಾಡುವವನೇ ಸುಂದರ."

ಗಾಂಧಿಯವರ ತತ್ವ

ಮಹಾತ್ಮ ಗಾಂಧಿಯವರೂ ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ. "ಕಲೆಗೆ ಎರಡು ಮುಖಗಳಿವೆ. ಒಂದು ಬಾಹ್ಯ ಮುಖ ಒಂದು ಅಂತರಂಗ ಮುಖ. ನನ್ನ ಮಟ್ಟಿಗೆ ಯಾವುದು ಹೆಚ್ಚು ಪ್ರಾಮುಖ್ಯ ಎಂಬುದು ಪ್ರಶ್ನೆ. ಅಂತರಂಗದ ಸೌಂದರ್ಯಕ್ಕೆ ಪೋಷಕವಾಗದಿರುವ ಬಾಹ್ಯಸೌಂದರ್ಯದಿಂದ ಪ್ರಯೋಜನವಿಲ್ಲ. ಆದುದರಿಂದ ಎಲ್ಲ ನಿಜವಾದ ಕಲೆಯೂ ಹೀಗೆ ಆತ್ಮನ ಪ್ರಕಾಶನ ಮಾತ್ರ. ಒಳಗಿನ ಸೌಂದರ್ಯವನ್ನು ಎಷ್ಟೆಷ್ಟು ಹೊರರೂಪದಲ್ಲಿ ತೋರಿಸುವುದೋ ಅಷ್ಟೇ ಆ ಕಲೆಗೆ ಬೆಲೆ. ಅಂತಹ ಕಲೆ ನನಗೆ ಇಷ್ಟ. ಆತ್ಮದ ಅಶಾಂತಿಯನ್ನೂ, ಉನ್ನತಿಗಾಗಿ ಸಾಧನೆಯನ್ನೂ ಸ್ವಲ್ಪವೂ ತೋರಿಸದ ಅನೇಕ ಕೃತಿಗಳು ಸಹ ಕಲಾಕೃತಿಗಳೆಂದು ಪರಿಗಣಿತವಾಗಿರುವುದು ನನಗೆ ಗೊತ್ತು. ನಿಜವಾದ ಕಲೆಯು, ಆತ್ಮಜ್ಞಾನಕ್ಕೆ ಸಾಧಕವಾಗಬೇಕು. ಎಷ್ಟರ ಮಟ್ಟಿಗೆ ಅದು ಸಾಧಕವಾಗುತ್ತದೋ ಅಷ್ಟಷ್ಟು ಅದರ ಯೋಗ್ಯತೆ ಹೆಚ್ಚು. ಸತ್ಯ ಮಾತ್ರವೇ ಸುಂದರವಲ್ಲ. ಸತ್ಯವಾದ ಭಾವನೆಗಳು ಸತ್ಯವಂತರ ಮುಖಗಳು ಸತ್ಯ ಪ್ರಚಾರ ಚಿತ್ರಗಳು ಗೀತಗಳು ಎಲ್ಲ ಅತ್ಯಂತ ಸುಂದರ. ಸಾಮಾನ್ಯರು ಸತ್ಯದಲ್ಲಿ ಸೌಂದರ್ಯವನ್ನು ಕಾಣುವುದಿಲ್ಲ, ಸತ್ಯದಲ್ಲಿ ಸೌಂದರ್ಯವನ್ನು ಕಂಡಾಗಲೇ ನಿಜವಾದ ಕಲೆ ಜೀವಂತವಾಗುವುದು. ನಿಜವಾದ ಸ್ಫೂರ್ತಿ ಉಂಟಾ

ದಾಗಲೇ ಸೌಂದರ್ಯದ ಸೃಷ್ಟಿ ಆ ಸ್ಫೂರ್ತಿ, ಬಾಳಿನಲ್ಲಿ ಹೇಗೆ ಅಪರೂಪವೋ ಕಲೆಯಲ್ಲಿಯೂ ಹಾಗೆಯೇ ಅಪರೂಪ. ನಿಜವಾದ ಕಲೆ, ಹೊರಗೆ ಕಾಣುವುದನ್ನು ಮಾತ್ರವೇ ಅಲ್ಲ, ಅದರ ಹಿಂದಿರುವುದನ್ನೂ ಗಮನಿಸಬೇಕು. ಮನುಷ್ಯನನ್ನು ಜೀವಂತನನ್ನಾಗಿ ಮಾಡುವ ಕಲೆ ಇರುವಂತೆ, ಅವನನ್ನು ಕೊಲ್ಲುವ ಕಲೆಯೂ ಇದೆ. ನಿಜವಾದ ಕಲೆ, ಕಲೆಗಾರನ ಸುಖ ತೃಪ್ತಿ ಪರಿಶುದ್ಧ ಜೀವನದ ಗುರುತಾಗಿರಬೇಕು. ಅನೀತಿಜೀವನದೊಂದಿಗೆ ನಿಜವಾದ ಕಲೆ ಸಾಧ್ಯವಿಲ್ಲ. ಪರಿಶುದ್ಧ ಜೀವನವೇ ಅತ್ಯುತ್ತಮ ಕಲಾಕೃತಿ. ಧ್ವನಿಯನ್ನು ಪಳಗಿಸಿಕೊಂಡು ಒಳ್ಳೆಯ ಸಂಗೀತವನ್ನು ಹಾಡುವುದು ಅನೇಕರಿಗೆ ಸಾಧ್ಯ. ಆದರೆ ಪರಿಶುದ್ಧ ಜೀವನದ ಸಮರಸದ ಬಾಳಿನಿಂದ ಧ್ವನಿ ಹೊರಡಿಸುವುದು ಎಲ್ಲಿಯೋ ಒಬ್ಬೊಬ್ಬರಿಗೆ ವಿರಳವಾಗಿ ಸಾಧ್ಯ."

ಆಧುನಿಕರ ಪೈಕಿ, ಸೌಂದರ್ಯಾನುಭವಕ್ಕೂ ನೀತಿಗೂ ಸಂಬಂಧವಿಲ್ಲವೆಂದು ಮೊದಲು ಹೇಳಿದವರು ಕ್ಯಾಂಟ್. "ಸೌಂದರ್ಯಕ್ಕೆ ಉಪಯುಕ್ತತೆ ಬೇಕಿಲ್ಲ. ಅದು ಆನಂದವನ್ನಿತ್ತರೆ ಸಾಕು. ರುಚಿ ಸ್ವಯಂಪರಿಪೂರ್ಣ, ಯಾವ ಉದ್ದೇಶವೂ ಇಲ್ಲದೆ ಆನಂದಪಡಿಸುವುದೇ ಸೌಂದರ್ಯ. ಸೌಂದರ್ಯ ಬರಿಯ ಶಿವವೂ ಅಲ್ಲ, ಸತ್ಯವೂ ಅಲ್ಲ, ಉಪಯುಕ್ತವೂ ಅಲ್ಲ. ಅದೊಂದು ಅಧ್ಯಾತ್ಮ ಅನುಭವ. ಅದೇ ಒಂದು ತೃಪ್ತಿ, ಆನಂದ. ಕಲಾದೃಷ್ಟಿಯಿಂದ ಕೃತಿಪೂರ್ಣವಾಗಿರಬೇಕು. ಆದರೆ ಅದಕ್ಕೆ ಗುರಿ ಇರಬಾರದು. ಆನಂದವನ್ನುಂಟುಮಾಡುವುದೇ ಸೌಂದರ್ಯ. ಅದರಿಂದುಂಟಾಗುವ ಆನಂದವು ಸ್ವಯಂಪರಿಪೂರ್ಣ. ಅದಕ್ಕೆ ಬೇರೆ ಉದ್ದೇಶವಿಲ್ಲ" ಎಂದರು ಕ್ಯಾಂಟ್.

ಸೌಂದರ್ಯವು ಕೃತಿಯ ಗುಣ. ಸತ್ಯ ಶಿವಗಳಂತೆ ಅದೂ ಸ್ವಯಂಪ್ರಭು. ಅದರ ಆನಂದ ಆನಂದಕ್ಕಾಗಿಯೇ ಸೌಂದರ್ಯವು ಪಾಶವೀವೃತ್ತಿಗಳನ್ನು ತಿದ್ದಿ ಅಧ್ಯಾತ್ಮ ಸಮರಸವನ್ನುಂಟುಮಾಡುತ್ತದೆ. ಸೌಂದರ್ಯಾನುಭವವು ಸಕಾರಣವಾದ ಒಂದು ವಾದದ ಫಲವಲ್ಲ. ಅದರ ದಿವ್ಯದರ್ಶನ ನಮಗೆ ಉಂಟಾದಾಗ, ಅದು ನಮ್ಮ ಆತ್ಮವನ್ನು ಉನ್ನತಿಗೇರಿಸಿ ನಮ್ಮನ್ನು ಪವಿತ್ರರನ್ನಾಗಿ ಮಾಡುತ್ತದೆ. ನಮ್ಮ ಪಶುಸ್ವಭಾವವನ್ನೂ ಮನುಷ್ಯ ಸ್ವಭಾವವನ್ನೂ ಪೂರ್ಣವಾಗಿ ಬದಲಾಯಿಸಿ ನಮ್ಮ ನಡತೆಯನ್ನು ಪ್ರೇಮಪೂರ್ಣ ಮಾಡುತ್ತದೆ. ಕಲೆಯು ಮನುಷ್ಯನನ್ನು ಹೆಚ್ಚು ಸುಸಂಸ್ಕೃತನನ್ನಾಗಿ ಮಾಡಿ ಅವನ ದೃಷ್ಟಿಯನ್ನು ಅಧ್ಯಾತ್ಮವಾಗಿಸುತ್ತದೆ. ಇದರಿಂದ ಮನುಷ್ಯ ಇಂದ್ರಿಯ ಶಕ್ತಿಗಳ ಹಿಡಿತದಿಂದ ಪಾರಾಗುತ್ತಾನೆ. ಸೌಂದರ್ಯದಿಂದ ಪ್ರಕೃತಿ ಪುರುಷರಲ್ಲಿ ಸಮರಸವುಂಟಾಗುತ್ತದೆ. ಬುದ್ಧಿಯೂ ಹೃದಯವೂ ಏಕೀಭವಿಸುತ್ತವೆ. ಭೂಮಿಗೂ ಸ್ವರ್ಗಕ್ಕೂ ಸೇತುವೆಯಾಗುತ್ತದೆ.

ಉಪನಿಷತ್ತುಗಳ ದರ್ಶನ

ಪಾಶ್ಚಾತ್ಯ ತತ್ವಜ್ಞಾನಿಗಳ ಪೈಕಿ ಸೌಂದರ್ಯದ ಮೇಲೆ ಸಿದ್ಧಾಂತವನ್ನು ಸ್ಥಾಪಿಸಿದವರಲ್ಲಿ ಪ್ಲೆಟೋ ಮುಖ್ಯರಾದವರು. ಅವರು ಹೀಗೆ ಹೇಳುತ್ತಾರೆ "ಮನುಷ್ಯನು ಪ್ರೇಮಮಾರ್ಗದಲ್ಲಿ ಆಳವಾಗಿ ಪ್ರವೇಶಿಸಿ ಸುಂದರ ವಸ್ತುಗಳನ್ನು ನೋಡುತ್ತಾ ಆ ವಿದ್ಯದಲ್ಲಿ ಪ್ರವೀಣನಾದ ನಂತರ ಇದ್ದಕ್ಕಿದ್ದಂತೆ ಅವನಿಗೆ ಅತ್ಯದ್ಭುತ ಸೌಂದರ್ಯದ ದಿವ್ಯದರ್ಶನವಾಗುತ್ತದೆ. ಹಿಂದಲ ಕಷ್ಟಗಳನ್ನೆಲ್ಲ ಅವನು ಅನುಭವಿಸಿದುದು ಆ ಗಳಿಗೆಗಾಗಿಯೇ. ಆ ಸೌಂದರ್ಯ ಶಾಶ್ವತ ಆದ್ಯಂತರಹಿತ ಜನನ ಮರಣಾತೀತ; ಅದು ಒಂದೆಡೆ ಸುಂದರ ಮತ್ತೊಂದೆಡೆ ಅಸುಂದರ ಎಂಬುದಿಲ್ಲ [ಸರ್ವಸುಂದರ] ಒಂದು ಕಾಲದಲ್ಲಿ ಸುಂದರ ಮತ್ತೊಂದು ಕಾಲದಲ್ಲಿ ಅಸುಂದರ ಎಂಬುದಿಲ್ಲ. ಒಂದು ದೃಷ್ಟಿಯಿಂದ ಸುಂದರ ಮತ್ತೊಂದು ದೃಷ್ಟಿಯಿಂದ ಕುರೂಪಿ ಎಂಬುದಿಲ್ಲ. ಆ ದಿವ್ಯ ಸೌಂದರ್ಯಕ್ಕೆ, ಮುಖ, ಕೈ, ಅಥವ ದೇಹದ ಮತ್ತಾವ ಅವಯವದ ಆಕಾರವೂ ಇಲ್ಲ. ಮಾತಿನಿಂದಲ್ಲಾಗಲಿ ಜ್ಞಾನ ಬೋಧನೆಯಿಂದಲ್ಲಾಗಲಿ ಅದನ್ನು ಪ್ರಕಾಶಪಡಿಸಲು ಸಾಧ್ಯವಿಲ್ಲ. ಭೂಮಿ, ಆಕಾಶ ಸ್ವರ್ಗಗಳಲ್ಲಾಗಲಿ ಇತರ ಯಾವ ವಸ್ತುಗಳಲ್ಲಾಗಲಿ ಅದರ ಇರುವಿಕೆ ಇಲ್ಲ. ಅದು ತನ್ನಷ್ಟಕ್ಕೇ ತಾನಾದ ಎಂದಿಗೂ ಒಂದೇ ಆದ ಸ್ವಯಂಪೂರ್ಣ ಪ್ರಭೆ. ಇತರ ಸುಂದರ ಪದಾರ್ಥಗಳು ಆ ಸ್ವಯಮಧಿಕಾರದ ಸೌಂದರ್ಯದಿಂದ ತಮ್ಮ ದೀವಿಗೆಯನ್ನು ಹಚ್ಚಿಕೊಂಡು ಹೊಳೆಯುತ್ತವೆ, ಬದಲಾಯಿಸುತ್ತವೆ ಅಥವ ಬಾಡುತ್ತವೆ. ಆದರೆ ಆ ಮೂಲ ಪ್ರಭೆಗೆ ಬದಲಾವಣೆ ಇಲ್ಲ. ಆದುದರಿಂದ ಆ ದಿವ್ಯ ಸೌಂದರ್ಯದ ದರ್ಶನವಾಗುವ ವರೆಗೆ, ಯಾವನು ಸೌಂದರ್ಯದ ಏಣಿಯ ಮೆಟ್ಟಲಿನಲ್ಲಿ ಏರಿ ಹೋಗುತ್ತಾನೋ, ಈ ಬಾಳಿನಲ್ಲಿ ಅವನ ಶುಭ ಸಾಧಿಸಿದಂತೆ ಪ್ರೇಮಿಸುವುದಕ್ಕೂ ಪ್ರೇಮಿಸಿಕೊಳ್ಳುವುದಕ್ಕೂ ಇದೇ ನಿಜವಾದ ಶಿಸ್ತಿನ ಮಾರ್ಗ. ಮನುಷ್ಯ ಈ ಪ್ರಪಂಚದ ಸುಂದರ ವಸ್ತುಗಳಿಂದ ಪ್ರಾರಂಭಿಸಿ, ಇತರ ಸುಂದರ ವಸ್ತುಗಳಿಗೆ ಹೋಗಲು ಇವನ್ನೇ ಮೆಟ್ಟಲು

ಗಳಾಗಿ ಮಾಡಿಕೊಂಡು, ಸುಂದರವಾದ ವ್ಯಕ್ತಿಗಳಿಂದ ಸುಂದರವಾದ ಬಾಳಿಗೂ, ಸುಂದರವಾದ ಬಾಳಿನಿಂದ ಸುಂದರಗಳಾದ ಸತ್ಯಕ್ಕೂ, ಸುಂದರ ಸತ್ಯಗಳಿಂದ ಸೌಂದರ್ಯದ ಸಾರಸರ್ವಸ್ವದ ಅರಿವಿಗೂ ಹೋಗಿ ಸೌಂದರ್ಯವೇನೆಂಬುದನ್ನು ಸಿದ್ಧಮಾಡಿಕೊಳ್ಳುತ್ತಾನೆ. ಈ ಪರಮ ಸೌಂದರ್ಯದ ದಿವ್ಯದರ್ಶನವೇ ಮನುಷ್ಯನ ನಿಜವಾದ ಮನೆ—ಈ ಬಾಳಿನಲ್ಲಿ ಮನುಷ್ಯನಿಗೆ ನಿಜವಾದ ಮನೆ ಇದೆ ಎನ್ನುವುದಾದರೆ—”

ಪ್ಲೆಟೊವಿನ ಅಭಿಪ್ರಾಯ ನಮ್ಮ ವೇದಾಂತಿಗಳ ದರ್ಶನವೇ. ಪಾಶ್ಚಾತ್ಯರ ಎಲ್ಲ ತತ್ವಗಳಿಗೂ ಪ್ಲೆಟೊವಿನ ಸ್ಫೂರ್ತಿಯೇ ಮೂಲ. ಸೌಂದರ್ಯಾನುಭವದಲ್ಲಿ ಮೆಟ್ಟಲು ಮೆಟ್ಟಲಾಗಿ ಹೋಗಿ ಪ್ರಪಂಚದ ಸೌಂದರ್ಯದಿಂದ ಸೌಂದರ್ಯ ಪ್ರಪಂಚದಲ್ಲಿ ತಲ್ಲೀನನಾಗುವುದು; ಪ್ರಕೃತಿಯ ಸೌಂದರ್ಯದಿಂದ ಜೀವನದ ಸೌಂದರ್ಯಕ್ಕೆ ಹೋಗಿ, ಅಲ್ಲಿಂದ ಸತ್ಯದ ಸೌಂದರ್ಯವನ್ನು ಮುಟ್ಟಿ, ಇಂದ್ರಿಯಗಳಿಗೂ ಬುದ್ಧಿಗೂ ಮೀರಿದ ಶುದ್ಧ ಸೌಂದರ್ಯಾನುಭವ ಒಂದು ಹೊಸ ದಿವ್ಯ ದರ್ಶನ. ಈ ಜಗತ್ತಿನ ಸುಂದರ ವಸ್ತುಗಳು ಆ ದಿವ್ಯಸೌಂದರ್ಯದ ಹರಕು ಮುರುಕು ನೆರಳುಗಳು ಮಾತ್ರ.

ಭಾರತೀಯ ಸೌಂದರ್ಯ ಶಾಸ್ತ್ರ, ತಿಳಿದುದರಿಂದ ತಿಳಿಯದುದನ್ನು ವಿವರಿಸುವುದೇ ಆಗಿದೆ; ಮನುಷ್ಯ ವ್ಯಕ್ತಿಯ ಮೂಲಕ ಪರಮಾತ್ಮನನ್ನು ಮುಟ್ಟುವುದೇ ಆಗಿದೆ. ವಾಸ್ತವವಾದಿಯು ಪ್ರಕೃತಿಯ ನಕಲನ್ನು ಮಾತ್ರ ಮಾಡುತ್ತಾನೆ. ಆದರ್ಶವಾದಿಯು ತನ್ನ ಊಹನೆಗಳನ್ನು ಕಲಾಕೃತಿಯಾಗಿ ತೋರಿಸುತ್ತಾನೆ. ಭಾರತೀಯ ಕಲೆಗಾರರು ಶಿಲ್ಪ, ಕವಿತೆ ಗಾನ ನರ್ತನಗಳ ಮೂಲಕ ಹೊಸ ಸೌಂದರ್ಯವನ್ನು ಕೃತಿಗಳಿಗೆ ಎರೆದಿದ್ದಾರೆ. ಭಾರತೀಯ ದರ್ಶನಕಾರರು ಕಲೆಯಲ್ಲಿ ಸಿದ್ಧಾಂತಗಳನ್ನೂ ಪ್ರಮಾಣಗಳನ್ನೂ ಒಪ್ಪುವವರಾದರೂ, ಸ್ವಪ್ರೇರಣೆ ಮತ್ತು ಸಾಕ್ಷಾತ್ಕಾರ ಸ್ಫೂರ್ತಿಯ ಆವಶ್ಯಕತೆಗಳನ್ನು ಒತ್ತಿ ಹೇಳಿದ್ದಾರೆ. ನಮ್ಮ ವೇದಾಂತಿಗಳ ದೃಷ್ಟಿಯಿಂದ ಕಲೆಯು ಪರಮಾತ್ಮನನ್ನು ಕುರಿತ ಒಂದು ಸಾಂಕೇತಿಕ ವಿವರಣೆ. ಕಲೆಯ ಭಾಷೆಯಲ್ಲಿ ವಿವರಣೆಗಿಂತ ಸೂಚನೆಯೇ ಹೆಚ್ಚು. ಪ್ರತಿಯೊಂದು ಜೀವಿಯ ಹೃದಯದಲ್ಲಿಯೂ ಸೌಂದರ್ಯವಾಗಿ ನೆಲೆಸಿರುವ ಸಮರಸ ಶಾಂತಿಗಳ ಪ್ರತೀಕವೇ ಈ ಬ್ರಹ್ಮಾಂಡ. ನಮ್ಮ ಶಿಲ್ಪಿಗಳು ಅನಂತವನ್ನು ಕಾಲ ಮತ್ತು ಪ್ರದೇಶ ಸಂಕೇತದಿಂದ ನೋಡುತ್ತಾರೆ. ನಮ್ಮ ಕವಿಗಳು ಕಾವ್ಯವನ್ನು ಧ್ವನಿಪ್ರಧಾನವಾಗಿ ಮಾಡಿ ದಿವ್ಯವಾದ ದರ್ಶನವನ್ನು ಸಾಕ್ಷಾತ್ಕಾರ ಮಾಡಿಕೊಂಡು ಕಣ್ಣಿಗೆ ಕಾಣುವ ಈ ಜಗತ್ತಿನ ಸೌಂದರ್ಯದ ಆಚೆಯ ಸೌಂದರ್ಯವನ್ನು ಸೂಚಿಸುತ್ತಾರೆ. ನಮ್ಮ ಗಾನವೂ ಬರಿಯ ಇಲ್ಲಿಯ ವೀಣೆ ತಂಬೂರಿ ಬಾಯಿ ಹಾಡಿನ ರಾಗ ಪಾಠಗಳಲ್ಲ, ಎಲ್ಲ ಸಂಗೀತದ ಗುರಿಯೂ ಆದ ನಾದ ಬ್ರಹ್ಮದ ದಿವ್ಯಗಾನದ ಪ್ರತಿಧ್ವನಿ.

ಪರಾತ್ಪರ ವಸ್ತುವು ಸುಂದರವಾದುದು ಮತ್ತು ಆನಂದದಾಯಕವಾದುದು ಎಂಬುದು ವೇದಾಂತದ ಒಂದು ತತ್ವ ಮಾತ್ರವಲ್ಲ; ವೇದಾಂತ ಸೌಂದರ್ಯ ದರ್ಶನದ ಗಾಢವಾದ ಸಜೀವವಾದ ನಂಬಿಕೆ ಸಹ. ಈ ನಂಬಿಕೆಗೆ ಉಪನಿಷತ್ತುಗಳೇ ಆಧಾರ. ದಿವ್ಯದರ್ಶನವನ್ನು ಹೊಂದಿ ಪರಾತ್ಪರ ವಸ್ತುವಿನ ಸೌಂದರ್ಯವನ್ನು ಕಂಡು ಅನುಭವಿಸಿದ ಋಷಿಗಳ ಸ್ವಯಂಸ್ಫೂರ್ತಿಯೂ ಇದಕ್ಕೆ ನಿದರ್ಶನ. ಬ್ರಹ್ಮಾಂಡದ ಮೂಲತತ್ವ ಸತ್ ಅಂದರೆ ಅದ್ವಿತೀಯನಾದ ಈಶ್ವರ. ಈತನೇ ಸಮಸ್ತ ಜಗತ್ತಿಗೂ ನಾಥ. ಈತನೇ ಭುವನಸುಂದರ–ಸೌಂದರ್ಯದ ಸಾರಸರ್ವಸ್ವ. ಸತ್‌ದ ಸ್ವಭಾವ ಸುಂದರವೆಂದೂ ಜೀವನದ ಅಂತಿಮ ಗುರಿಯು ಸೌಂದರ್ಯದೊಂದಿಗೆ ಸಮಾವೇಶವಾಗಿ ಅದರ ಆನಂದವನ್ನು ಅನುಭವಿಸುವುದೆಂದೂ ವೇದಾಂತವು ಸಾರುತ್ತದೆ. ಈ ಗುರಿಯನ್ನು ಮುಟ್ಟಲು ಪ್ರೇಮವೇ ಸಾಧನವೆಂಬುದು ವೇದಾಂತದ ಮತ.

ರಾಮಾನುಜಾಚಾರ್ಯರು ತಮ್ಮ ಸಿದ್ಧಾಂತ ಪ್ರತಿಪಾದನೆಗಾಗಿ ಅನುಸರಿಸಿರುವ ಮಾರ್ಗವನ್ನು ಸೌಂದರ್ಯ ತತ್ವ ಮೀಮಾಂಸಾಭ್ಯಾಸದಲ್ಲಿಯೂ ನಾವು ಅನುಸರಿಸಬಹುದು. ಅದು ತತ್ವ, ಹಿತ, ಪುರುಷಾರ್ಥ ಎಂಬ ಮೂರು ಕ್ರಮಗಳಲ್ಲಿ ತತ್ವವೆಂದರೆ ಸೌಂದರ್ಯದರ್ಶನದ ಸತ್ಯದ ಅಂಶ–ಬ್ರಹ್ಮನ ಸ್ವಭಾವವನ್ನು ವಿವರಿಸುತ್ತದೆ. ಬ್ರಹ್ಮ, ಜಗತ್ತು ಮತ್ತು ಮನುಷ್ಯನ ಆತ್ಮದಲ್ಲಿರುವ ಸಮಸ್ತ ಸೌಂದರ್ಯಕ್ಕೂ ಮೂಲ-ಹಿತ ಎಂದರೆ ಈ ಭುವನಸುಂದರ ಬ್ರಹ್ಮನ ಸೌಂದರ್ಯವನ್ನು ಸಿದ್ಧಿಮಾಡಿಕೊಳ್ಳುವ ಮಾರ್ಗ. ಪುರುಷಾರ್ಥವೆಂದರೆ ಬಾಳಿನ ಮುಖ್ಯ ಮತ್ತು ಒಂದೇ ಒಂದಾದ ಗುರಿಯಾದ ಶಾಶ್ವತ ಬ್ರಹ್ಮಾನಂದ ಸಿದ್ಧಿ. ರಾಮಾನುಜಾಚಾರ್ಯರು ಪರಮ ತತ್ವವು ಸೌಂದರ್ಯವಂದು ಸಿದ್ಧಮಾಡಿದ್ದಾರೆ. ಈ ದೃಷ್ಟಿಯಿಂದ ನೋಡುವಾಗ ಸೌಂದರ್ಯತತ್ವವು ಧರ್ಮದಲ್ಲಿ ಸಮಾವೇಶವಾಗುತ್ತದೆ. ಅಧ್ಯಾತ್ಮಶಾಸ್ತ್ರದ ಪರಮ

ವಸ್ತುವೂ, ಧರ್ಮಶಾಸ್ತ್ರದ ದೇವರೂ ಎರಡೂ ಒಂದೆ. ಕಲೆಗಾರ ಇಂದ್ರಿಯ ವ್ಯಾಪಾರ ಕೃತಿಗಳ ಮೂಲಕ ಸೌಂದರ್ಯಾನುಭವವನ್ನು ಹೊಂದುತ್ತಾನೆ. ಆದರೆ ತಾನು ಇಂದ್ರಿಯಗಳ ವಶನಾಗುವುದಿಲ್ಲ. ಅದೇ ರೀತಿ ತನ್ನ ಸೃಷ್ಟಿಕಾರ್ಯದಲ್ಲಿಯೇ ಆನಂದಗೊಳ್ಳುವ ಅದ್ಭುತ ಅದ್ವಿತೀಯ ಕಲೆಗಾರ ದೇವರು. ಜ್ಯೋತಿರ್ಮಯವಾದ ಅಧ್ಯಾತ್ಮರೂಪವನ್ನು ಧರಿಸಿ ತನ್ನ ಸೌಂದರ್ಯದ ಇಚ್ಛೆಯನ್ನು ಪೂರೈಸಿಕೊಂಡು ಜಗತ್ತಿನಲ್ಲಿ ಆ ಸೌಂದರ್ಯದ ಪ್ರತಿರೂಪವನ್ನು ಸೃಷ್ಟಿಸುತ್ತಾನೆ. ಹೀಗೆ ಕಲಾವಿದ ಪರಮಾತ್ಮನ ವ್ಯೂಹದಿಂದ ಅಖಿಲ ಬ್ರಹ್ಮಾಂಡವೇ ಸುಂದರ ಜಗತ್ತು ಆಗುತ್ತದೆ. ಸರ್ವವ್ಯಾಪಿಯಾದ ಸೂರ್ಯಬಿಂಬದಲ್ಲಿ ಹೊಳೆಯುವ ಸೌಂದರ್ಯವೇ ಪ್ರತಿ ವ್ಯಕ್ತಿಯಲ್ಲಿಯೂ ಹೊಳೆಯುವ ಆಂತರಿಕ ಸೊಬಗು. ಬ್ರಹ್ಮನು ಆಕಾರರಹಿತನೆಂಬುದು ನಿಜ. ಆದರೆ ಪ್ರೇಮಪೂರ್ಣನಾದ ಆತ ತನ್ನನ್ನೇ ಅತ್ಯಂತ ಸೌಂದರ್ಯದ ಅಧ್ಯಾತ್ಮಜ್ಯೋತಿರ್ಮಯರೂಪಿನಲ್ಲಿ ಮಾಡಿಕೊಂಡು ಆತ್ಮವನ್ನು ಆಕರ್ಷಿಸಿ, ಆತ್ಮಕ್ಕೂ ಅಂತಹ ಸೌಂದರ್ಯದ ರೂಪವುಂಟಾಗುವಂತೆ ಮಾಡುತ್ತಾನೆ.

ಬ್ರಹ್ಮಾಂಡವು ಸಮರಸ

ರಾಮಾನುಜಾಚಾರ್ಯರ ಅಭಿಪ್ರಾಯದಲ್ಲಿ ಜಗತ್ತು ಬರಿಯ ಮಾಯೆಯಲ್ಲ. ಬ್ರಹ್ಮಾಂಡವು ಸಮರಸವೇ ಹೊರತು ವಿರಸವಲ್ಲ. ಬ್ರಹ್ಮನ ಅತ್ಯದ್ಭುತ ಸೌಂದರ್ಯದ ಸಜೀವ ಪ್ರಕಟನೆಯೇ ಈ ಬ್ರಹ್ಮಾಂಡ. ಸೃಷ್ಟಿಸ್ಥಿತಿಲಯಗಳು ಬ್ರಹ್ಮನ ಲೀಲೆಗಳು. ಅವೇ ಆತನ ಕಲಾಕೌಶಲ್ಯಾನುಭವಗಳು. ದೇವರು ಗಣಿತಶಾಸ್ತ್ರಜ್ಞನೂ ಅಲ್ಲ. ತರ್ಕಶಾಸ್ತ್ರಜ್ಞನೂ ಅಲ್ಲ. ತನ್ನ ಸೃಷ್ಟಿಯನ್ನು ತಾನೇ ಮೆಚ್ಚಿ ತಲೆದೂಗುವ ರಸಿಕ. ಮೇಲು ನೋಟಕ್ಕೆ ಪರಸ್ಪರ ವಿರುದ್ಧವಾಗಿ ತೋರುವ ಸೌಂದರ್ಯದಲ್ಲಿಯೇ ಆತನ ಆನಂದ. ಭಗವಂತನ ಅದ್ಭುತ ಕಲಾಸೃಷ್ಟಿಯೇ ಬ್ರಹ್ಮಾಂಡ. ಭಾಗವತವು ಬ್ರಹ್ಮನನ್ನು ಈಶ್ವರಭುವನಸುಂದರ ಎಂದು ಸಂಬೋಧಿಸುತ್ತದೆ. ಬ್ರಹ್ಮನು ಸೌಂದರ್ಯಸಾರಸರ್ವಸ್ವವಾದ ಒಂದೇ. ಅದು ಬಹುಮುಖವಾಗುವುದರಲ್ಲಿಯೂ ಅದಕ್ಕೆ ಆನಂದ. ಚಿತ್ ಅಚಿತ್‌ಗಳನ್ನು ತನ್ನ ಸೌಂದರ್ಯದ ರೂಪಕ್ಕೆ ಮಾರ್ಪಡಿಸುವುದರಲ್ಲಿ ಬ್ರಹ್ಮ ತನ್ನ ಕಲೆಯನ್ನು ಅನುಭವಿಸುತ್ತಾನೆ. ಕುರೂಪ ಕಾಣುವುದು ನಮ್ಮ ಮನಸ್ಸಿನ ದೋಷದಿಂದ. ಜೀವಾತ್ಮನು ಅವಿದ್ಯಕಾಮಕರ್ಮದಿಂದ ಬಿಡುಗಡೆ ಹೊಂದಿದರೆ, ಪರಮಾತ್ಮನ ಪರಮ ಸೌಂದರ್ಯದ ದರ್ಶನವಾಗುವುದು. ಋಷಿಯ ಕಣ್ಣಿಗೆ ಜಗತ್ತು ಸೌಂದರ್ಯದ ಹಬ್ಬ. ನಿರಾಕಾರನಾದ ಪರಮಾತ್ಮ ನಾಮರೂಪನಾಗಿ ಸುಂದರವಾಗಿ ವ್ಯಕ್ತಗೊಳ್ಳುತ್ತಾನೆ. ಬ್ರಹ್ಮನು ಎಲ್ಲಾ ಸೌಂದರ್ಯ ಮತ್ತು ಆನಂದದ ಮೂಲ. ಭುವನಸುಂದರನೇ ಆನಂದಮಯ. ಸೌಂದರ್ಯವನ್ನೂ ಆನಂದವನ್ನೂ ಒಂದುಗೂಡಿಸುವುದು ಪ್ರೇಮವೇ. ಕಲಾವಿದನಾದ ಪರಮಾತ್ಮ ಜೀವವನ್ನು ಕುಣಿಸಿ ಪ್ರೇಮದ ಕುಲುಮೆಯಲ್ಲಿ ಅದನ್ನು ಕರಗಿಸಿ ತನ್ನ ಆಕೃತಿಗೇ ತಿರುಗಿಸುತ್ತಾನೆ. ವೇದಾಂತವು ವಿಷಯರಾಗವನ್ನು ಪರಮಾತ್ಮರಾಗವಾಗಿ ಪರಿವರ್ತಿಸುವ ಮಾರ್ಗವನ್ನು ತೋರಿಸುತ್ತದೆ. ಮುಕ್ತಿಗೆ ಅಡ್ಡ ಬರುವುದು ಅವಿದ್ಯೆ ಕಾಮ ಕರ್ಮ ಇವು. ಅಧ್ಯಾತ್ಮಜ್ಞಾನ ಸಾಧನೆಯಲ್ಲಿ ಅವಿದ್ಯೆಯನ್ನು ಬ್ರಹ್ಮಜ್ಞಾನದಿಂದ ಗೆಲ್ಲುವಂತೆ ಕರ್ಮದ ಬಂಧನವನ್ನು ನಿಷ್ಕಾಮ ಬ್ರಹ್ಮಾರ್ಪಣ ಕರ್ಮದಿಂದ ಗೆಲ್ಲುವಂತೆ ವೇದಾಂತದ ಸೌಂದರ್ಯ ಶಾಸ್ತ್ರ ಕಾಮವನ್ನು ಭಗವತ್ಕಾಮವಾಗಿಸುವ ಸಾಧನೆಯನ್ನು ಬೋಧಿಸುತ್ತದೆ. ಆಸೆ ಎಂಬುದಕ್ಕೆ ನೀತಿಯೂ ಇಲ್ಲ, ಅನೀತಿಯೂ ಇಲ್ಲ, ಅದನ್ನು ಹೇಗೆ ನಾವು ಉಪಯೋಗಿಸುತ್ತೇವೆಯೋ ಹಾಗೆ ಅದರ ಬೆಲೆ; ವಿಷಯಕಾಮವು ಅವಾಂತರ ಅವ್ಯವಸ್ಥೆ. ಅದರಿಂದ ಮನಸ್ಸು ಇಂದ್ರಿಯಾಕರ್ಷಣೆಯ ಸೌಂದರ್ಯದ ಗುಲಾಮನಾಗಿ ಇಂದ್ರಿಯಾರಾಧನೆಯ ವಕ್ರತೆ, ಕುರೂಪ ಮನಸ್ಸಿಗೆ ಉಂಟಾಗುತ್ತದೆ. ಇಂದ್ರಿಯ ನಿಗ್ರಹದಿಂದ ಜೀವ, ತನ್ನ ಸಾಮ್ರಾಜ್ಯವನ್ನು ತಾನು ಹೊಂದಿ ಸುಂದರವಾಗಿ ಆತ್ಮವಾಗಿ ಅರಳುವುದು. ಮನಸ್ಸಿನ ಪ್ರವೃತ್ತಿಗಳನ್ನು ಅಮುಕ ಕೂಡದು. ಅವುಗಳನ್ನು ತಿದ್ದಿ ಸರಿಯಾದ ಮಾರ್ಗದಲ್ಲಿ ಬಿಡಬೇಕು. ಆಗ ಜೀವಾತ್ಮನಿಗೆ ಪರಮಾತ್ಮನ ಸೌಂದರ್ಯದಲ್ಲಿ ಆಸೆ ಉಂಟಾಗುವುದು. ಕಾಮವು ಸೃಷ್ಟಿಯ ಮನಃಪ್ರವೃತ್ತಿ, ಅದರಿಂದ ಬಂಧನವೂ ಆಗಬಹುದು, ಭಗವಂತನ ಕಡೆಗೂ ಮನಸ್ಸು ತಿರುಗಬಹುದು. ಕಾಮದ ಆಸೆ ಭಗವಂತನ ಅದ್ಭುತ ಸೌಂದರ್ಯದಲ್ಲಿ ಆಸೆಯಾಗಿ ಅದರೊಂದಿಗೆ ಒಂದಾಗುವ ಬಯಕೆಯಿಂದ ಶುದ್ಧವಾಗಬಹುದು.

ಸೌಂದರ್ಯ ತತ್ವಶಾಸ್ತ್ರಜ್ಞನು ಬ್ರಹ್ಮನ ಸೌಂದರ್ಯವನ್ನು ಕುರಿತು ಧ್ಯಾನಿಸಿ ಅದರೊಂದಿಗೆ ಒಂದಾಗುವ ಆನಂದವನ್ನು ಸಾಧಿಸುವಾಗ, ಅಧ್ಯಾತ್ಮಸಾಧಕನೇ ಆಗುತ್ತಾನೆ. “ತತ್ ಕೃತು” ನ್ಯಾಯದಂತೆ ಏನನ್ನು ಕುರಿತು ಯೋಚಿಸುತ್ತಾನೆಯೋ ಅದೇ ಆಗುತ್ತಾನೆ. ಕೊನೆ

ಯಲ್ಲಿ ಅಧ್ಯಾತ್ಮವಾದಿ, ನೀತಿವಾದಿ, ಅತೀಂದ್ರಿಯವಾದಿ ಇವರೆಲ್ಲ—ತಮ್ಮ ಮಾರ್ಗ ಏನೇ ಆಗಿರಲಿ—ಅಂತ್ಯ ಗುರಿಯಾದ ಪರಮಾನಂದವನ್ನು ಮುಟ್ಟುತ್ತಾರೆ. ಇಂದ್ರಿಯಲೋಲುಪತೆ ಎಷ್ಟು ಅಪಾಯವೋ ಇಂದ್ರಿಯ ಪ್ರವೃತ್ತಿಗಳನ್ನು ಅಮುಕುವುದೂ ಅಷ್ಟೇ ಅಪಾಯ. ಇಂದ್ರಿಯ ಪ್ರವೃತ್ತಿಗಳನ್ನು ತಿದ್ದಿ ಅಧ್ಯಾತ್ಮಮಾರ್ಗದಲ್ಲಿ ಬಿಡುವುದೇ ವಿವೇಕ. ದೈವಿಕ ಪ್ರೇಮವನ್ನು ಒಪ್ಪದವರಿಗೂ ಸಹ ಮುಕ್ತಿಯುಂಟೆಂದು ಭಾಗವತ ಹೇಳುತ್ತದೆ. "ಯಾರು ಕಾಮ ಕ್ರೋಧ ಭಯ ಸ್ನೇಹ ಪ್ರೇಮಗಳನ್ನು ಹರಿಯಲ್ಲಿಯೇ ಅರ್ಪಿಸುತ್ತಾರೋ ಅವರು ಹರಿಯಲ್ಲಿ ತನ್ಮಯರಾಗಿ ಸಾಯುಜ್ಯವನ್ನು ಹೊಂದುವರು". ಪ್ರತಿಯೊಂದು ಪಶುಪ್ರವೃತ್ತಿಯೂ ಭಕ್ತಿಮಾರ್ಗವಾಗಿ ಪರಿಣಮಿಸುವುದು. ಎಲ್ಲ ಆಕರ್ಷಣೆಯೂ ಕೃಷ್ಣನೇ ಆಗಿಬಿಡುವುದು.

ವೇದಾಂತದ ದೃಷ್ಟಿಯಿಂದ ಪ್ರೇಮವೆಂದರೇನೆಂಬುದು ಬೃಹದಾರಣ್ಯಕೋಪನಿಷತ್ತಿನ ಯಾಜ್ಞವಲ್ಕ್ಯ ಮೈತ್ರೇಯ ಸಂವಾದದಲ್ಲಿ ವರ್ಣಿತವಾಗಿದೆ. ಯಾಜ್ಞವಲ್ಕ್ಯನು ತನ್ನ ಅರ್ಧ ಆಸ್ತಿಯನ್ನು ಮೈತ್ರೇಯಿಗೆ ಕೊಡಹೋದಾಗ ಆಕೆಯು "ಈ ಜಗತ್ತಿನ ಐಶ್ವರ್ಯವೆಲ್ಲ ದೊರೆತರೂ ಬೇಡ. ನಾನು ಅಮೃತತ್ವದ ದಾರಿಯನ್ನು ಹುಡುಕುತ್ತೇನೆ" ಎನ್ನುತ್ತಾಳೆ. ಆಗ ಯಾಜ್ಞವಲ್ಕ್ಯನು ಆಕೆಗೆ ಹೀಗೆ ಹೇಳುತ್ತಾನೆ. "ಗಂಡ ನಿನಗೆ ಪ್ರಿಯನಾಗಿರುವುದು ಗಂಡನಿಗಾಗಿ ಅಲ್ಲ; ಆತ್ಮನಿಗಾಗಿ, ವಸ್ತುಗಳೂ ಬಂಧುಗಳೂ ಭೂಮಿ ಸ್ವರ್ಗಗಳೂ ನಿನಗೆ ಪ್ರಿಯವಾದುದು ಅವುಗಳಿಗಾಗಿ ಅಲ್ಲ. ಆತ್ಮಕ್ಕಾಗಿ. ಆತ್ಮವೇ ಶಾಶ್ವತ. ಅದನ್ನು ಹೊಂದುವುದರಿಂದ ಮಾತ್ರವೇ ನಿನಗೆ ಅಮೃತತ್ವವುಂಟಾಗುವುದು". ಜೀವಾತ್ಮನಿಗೆ ಬ್ರಹ್ಮನೊಬ್ಬನೇ ಪ್ರಿಯ. ಜೀವಿಗಳ ಪ್ರೇಮವು ಕಾಲದೇಶ ವರ್ತಮಾನ ಸ್ವಭಾವ ಹೆಚ್ಚುಕಡಿಮೆಗಳಿಂದ, ಬಂಧಿತವಾಗಿದೆ. ಅದು ತಾತ್ಕಾಲಿಕವಾದುದು ಮತ್ತು ನಾಶವಾಗತಕ್ಕುದು. ಜಗತ್ತು ನಿರ್ದೋಷವಲ್ಲದಿದ್ದರೂ ಬ್ರಹ್ಮನು ಅದರಲ್ಲಿ ಒಂದಾಗಿ ತನ್ನ ಆನಂದವನ್ನು ಜೀವಾತ್ಮನಲ್ಲಿ ಹರಿಸುತ್ತಾನೆಂಬುದು, ಅವಿದ್ಯೆಯಿಂದ ಬಿಡುಗಡೆ ಹೊಂದಿದ ಆತ್ಮಕ್ಕೆ ಗೊತ್ತು. ಮನುಷ್ಯನ ಪ್ರೇಮ ಬರಿಯ ಕತೆ ಅಥವ ಗೊಂಬೆಯಾಟವಲ್ಲ. ಅದು ಬ್ರಹ್ಮನ ಅಪಾರ ಪ್ರೇಮದ ಒಂದು ತುಣುಕು. ಬ್ರಹ್ಮನಲ್ಲಿ ಪೂರ್ಣನಾಗಿ ಅನುರಕ್ತನಾಗುವುದರಿಂದ ಜೀವದ ಪ್ರೇಮ ಸಹ ಅಧ್ಯಾತ್ಮವಾಗುತ್ತದೆ. ಪರಮಾತ್ಮನೊಂದಿಗೆ ಮಿಳಿತವಾಗುವ ಆನಂದದ ಆಸೆ ತಡೆಯಲಸಾಧ್ಯವಾದುದಾಗುತ್ತದೆ. ಧರ್ಮ ಅರ್ಥ ಕಾಮ ಮೋಕ್ಷಗಳ ಪೈಕಿ, ಮೊದಲಿನ ಮೂರು ನೀತಿ, ಅರ್ಥಶಾಸ್ತ್ರ ಮನಶ್ಶಾಸ್ತ್ರಗಳಿಗೆ ಸಂಬಂಧಿಸಿದುವು. ಅವುಗಳ ಗುರಿ ಇಲ್ಲಿ ಸುಖ ಮತ್ತು ಮರಣಾನಂತರ ಸ್ವರ್ಗದಲ್ಲಿ ಸುಖ. ಪುರುಷಾರ್ಥಗಳಲ್ಲಿ ಕೊನೆಯದು ಮೋಕ್ಷ. ಬ್ರಹ್ಮನಲ್ಲಿ ಅಮೃತತ್ವವಾದ ಆನಂದವನ್ನು ಹೊಂದುವುದೇ ಅದು. ಮೊದಲಿನ ಮೂರು ಪ್ರವೃತ್ತಿ ಮಾರ್ಗ, ಕೊನೆಯದು ನಿವೃತ್ತಿಮಾರ್ಗ. ಭಕ್ತಿರೂಪವಾದ ಪ್ರೇಮವು ಆದಿಭೌತವನ್ನೂ ಅಧ್ಯಾತ್ಮವನ್ನೂ ಮಿಳನಗೊಳಿಸುತ್ತದೆ. ಭಕ್ತಿ ಅಥವ ಪ್ರೇಮವೇ ಭೂಮಿಯಿಂದ ಸ್ವರ್ಗಕ್ಕೆ ಹಾಕಿರುವ ಪ್ರೇಮದ ಏಣಿ. ಇದರಿಂದ ಮನುಷ್ಯನು ಮುಕ್ತಿಯ ಅಮೃತತ್ವಕ್ಕೆ ಏರುತ್ತಾನೆ. ದೇವರು ಮನುಷ್ಯತ್ವಕ್ಕೆ ಇಳಿದು ಈ ಬಾಳನ್ನು ತನ್ನಂತೆ ಮಾಡಿ ಜೀವವನ್ನು ದೇವನನ್ನಾಗಿಸುತ್ತಾನೆ.

ಆ ನಂ ದ

ಆನಂದವೇ ಬ್ರಹ್ಮವೆಂದು ತೈತ್ತರೀಯೋಪನಿಷತ್ತಿನಲ್ಲಿ ಹೇಳಿದೆ. ಜೀವಿಗಳೆಲ್ಲ ಆನಂದದಲ್ಲಿ ಜನಿಸಿ ಆನಂದದಲ್ಲಿ ಜೀವಿಸಿ ಆನಂದದಲ್ಲಿ ಚಲಿಸಿ ಆನಂದದಲ್ಲಿಯೇ ತಮ್ಮ ಕೊನೆಯನ್ನು ಕಾಣುತ್ತವೆ. ತೈತ್ತರೀಯ ಉಪನಿಷತ್ತು ಬ್ರಹ್ಮನನ್ನು ಆನಂದಮಯನೆನ್ನುತ್ತದೆ. ಕಣ್ಣಿನಲ್ಲಿರುವ ಜ್ಯೋತಿ, ಬ್ರಹ್ಮ, ಅದೇ ಎಲ್ಲ ಜಗತ್ತಿನಲ್ಲಿಯೂ ಪ್ರಕಾಶಿಸುವ "ಭಾಮನಿ." ವರಗಳನ್ನೂ ಮಂಗಳವನ್ನೂ ಉಂಟುಮಾಡುವ "ವಾಮನಿ," ಮುಂಡಕೋಪನಿಷತ್ತು ಮುಕ್ತನ ಲಕ್ಷಣಗಳನ್ನು ಹೀಗೆ ವಿವರಿಸುತ್ತದೆ. "ಯೋಗಿಯು ಪರಮಾತ್ಮನ ದಿವ್ಯ ಜ್ಯೋತಿಯ ದರ್ಶನವನ್ನು ಪಡೆದ ಕೂಡಲೇ ಜ್ಞಾನಿಯಾಗುತ್ತಾನೆ. ಮತ್ತು ದ್ವಂದ್ವಾತೀತನಾಗುತ್ತಾನೆ. ಅವನ ಸಂಶಯಗಳೆಲ್ಲ ನಿವಾರಣೆಯಾಗಿ ಅವನು ಪೂರ್ಣ ಆನಂದದಿಂದ ಹೊಳೆಯುತ್ತಾನೆ. ಬ್ರಹದಾರಣ್ಯಕೋಪನಿಷತ್ ಮತ್ತೂ ಹೀಗೆ ಹೇಳುತ್ತದೆ." "ಪ್ರಿಯಳಿಂದ ಆಲಂಗಿಸಿಕೊಳ್ಳಲ್ಪಟ್ಟ ಪ್ರಿಯನಿಗೆ ಹೇಗೆ ಬಾಹ್ಯ ಅಂತರಂಗಗಳೆಂಬುದೊಂದೂ ಇರುವುದಿಲ್ಲವೋ, ಹಾಗೆಯೇ ಜೀವಾತ್ಮನನ್ನು ಪ್ರಜ್ಞೆ ಆಲಿಂಗಿಸಿಕೊಂಡಾಗ ಆತನಿಗೂ ಬಾಹ್ಯ ಅಂತರಂಗಗಳೆಂಬುವೇನೂ ಉಳಿಯುವುದಿಲ್ಲ" ತೈತ್ತರೀಯ ಉಪನಿಷತ್ತು ಮನುಷ್ಯರ ಆನಂದ ದೇವತೆಗಳ ಆನಂದ ಇವುಗಳ ಒಂದು ಲೆಕ್ಕವನ್ನೇ ಪ್ರಾರಂಭಿಸಿ, ಆತ್ಮದ ಗುರಿಯ ಪರಿಶುದ್ಧವಾದ ಸ್ವಸಂಪೂರ್ಣ

ವಾದ ಬ್ರಹ್ಮಾನಂದವೆಂದು ಮುಗಿಸುತ್ತದೆ. ಆ ಆನಂದ ವಾಕ್ಕಿಗೆ ಅಗೋಚರವಾದುದು, ಮನಸ್ಸಿಗೂ ಸಹ ಅಗೋಚರವಾದುದು. ಯವ್ವನ ಸಂಪತ್ತನ್ನೂ ಅಷ್ಟೈಶ್ವರ್ಯವನ್ನೂ ಅನುಭವಿಸುವ ಮನುಷ್ಯನ ಆನಂದದಿಂದ ಪ್ರಾರಂಭವಾದ ಆನಂದದ ಲೆಕ್ಕ, ಮೆಟ್ಟಲು ಮೆಟ್ಟಲಾಗಿ ದೇವತೆಗಳ, ಗಂಧರ್ವರ ಆನಂದಕ್ಕೆ ಮುಟ್ಟಿ ಅನಂತರ ಪ್ರಜಾಪತಿ (ಸೃಷ್ಟಿಕರ್ತ)ನ ಆನಂದವಾಗಿ ಕೊನೆಯಲ್ಲಿ ಬ್ರಹ್ಮಾನಂದವಾಗುತ್ತದೆ. ಒಂದರಿಂದ ಒಂದು ನೂರರಷ್ಟು ಹೆಚ್ಚು ಆನಂದ. ವಾಕ್ ಅತೀತವಾದ ಬ್ರಹ್ಮಾನಂದವನ್ನು ಹೊಂದುವವನು ಮುಕ್ತನಾಗುತ್ತಾನೆ.

ಈ ಬ್ರಹ್ಮಾನಂದವನ್ನು ಉಪನಿಷತ್ತುಗಳಲ್ಲಿ ಬ್ರಹ್ಮರಸವೆಂದು ಕರೆದಿದ್ದಾರೆ. ತಾನು ಕಂಡ ದಿವ್ಯ ದರ್ಶನವನ್ನು ಕೃತಿಯ ಮೂಲಕ ಹೊರಗೆಡುಹುವುದೇ ಸೌಂದರ್ಯಾನುಭವ. ಕಾವ್ಯವು, ಈ ಆತ್ಮಾನಂದದ ಅತ್ಯಂತ ಸಮೀಪದ ಅನುಭವ. ದಿವ್ಯಸೌಂದರ್ಯದ ಒಳಗಣ್ಣುಳ್ಳ ಕವಿ, ಮಾತಿನ ಮಾಟದಿಂದ, ತಾನು ಕಂಡ ಸೊಬಗನ್ನು ಸಹೃದಯರಿಗೆ ತಿಳಿಸಿ, ಅವರ ಮನಸ್ಸಿನಲ್ಲಿಯೂ ಆ ಸೌಂದರ್ಯ ಮೂಡುವಂತೆ ಮಾಡುತ್ತಾನೆ. ರಸವೇ ಕಾವ್ಯದ ತಿರುಳು. ಅದು ಬರಿಯ ಭಾವಾವೇಶವಲ್ಲ; ನಿಜವಾದ ಅಧ್ಯಾತ್ಮ ಆನಂದ. ಅದರ ಆನಂದ ಇತರರಿಗೂ ಮುಟ್ಟುವಂತಹುದು. ಅದೇ ಆನಂದಜನಕ. ಅದರ ಭಾವಪ್ರೇರಣೆ ಮಾಧುರ್ಯ ಲಾಲಿತ್ಯದಿಂದ ಅದು ಸೌಂದರ್ಯಾನುಭವದ ಮೇಲೆ ಶಾಶ್ವತಪರಿಣಾಮವುಳ್ಳದುದಾಗಿದೆ. ರಸಾನುಭವದ ಆನಂದದಿಂದ ಸರ್ವತೋಮುಖವಾದ ಸಮರಸವುಂಟಾಗುತ್ತದೆ. ರಸಿಕನೊಂದಿಗೂ ಭಕ್ತನೊಂದಿಗೂ ಭಗವಂತನು ಆಡುವ ಲೀಲೆ ಇದು. ಈಶ್ವರನ ಅನಂತತ್ವದೊಂದಿಗೆ ಜೀವದ ಅಲ್ಪತೆಯನ್ನು ಹೋಲಿಸಿದಾಗ, ಈಶ್ವರನಲ್ಲಿ ಭಯವುಂಟಾಗುವುದು ಸ್ವಾಭಾವಿಕ. ಕೃಷ್ಣನು ಅರ್ಜುನನಿಗೆ ತೋರಿಸಿದ ವಿಶ್ವರೂಪ ಈ "ಅದ್ಭುತ ಭಯಾನಕ". ಅರ್ಜುನನು ನೂರಾರು ಯುದ್ಧಗಳಲ್ಲಿ ಅತಿರಥ ಮಹಾರಥರನ್ನು ಗೆದ್ದ ಮಹಾಭಾರತದ ವೀರನೇ ಆದರೂ, ಬ್ರಹ್ಮಾಂಡದ ಲೀಲೆಯ ನಾಯಕನ ವಿಶ್ವರೂಪವನ್ನು ನೋಡಿ ಅವನ ಮನಸ್ಸು ಭಯದಿಂದ ನಡುಗುವುದು. ಹಿಂದಲ ರೂಪವನ್ನೇ ತೋರಿಸಿ ಪ್ರಸನ್ನನಾಗೆಂದು ಬೇಡುವನು.

ಅದೃಷ್ಟ ಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ
ಭಯೇನ ಚ ಪ್ರವ್ಯಥಿತಂ ಮನೋಮೇ
ತದೇವಮೇ ದರ್ಶಯ ದೇವ ರೂಪಂ
ಪ್ರಸೀದ ದೇವೇಶ ಜಗನ್ನಿವಾಸ ೧೧-೪೫
ಕಿರೀಟಿನಂ ಗದಿನಂ ಚಕ್ರಹಸ್ತ
ಮಿಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ
ತೇನೈವ ರೂಪೇಣ ಚತುರ್ಭುಜೇನ
ಸಹಸ್ರ ಬಾಹೋ ಭವ ವಿಶ್ವಮೂರ್ತೇ ೧೧-೪೬

ಈ ಬಾಳಿನ ಅಸಂಬದ್ಧತೆಗಳನ್ನೂ ಅದರ ಸೃಷ್ಟಿಕರ್ತನನ್ನೂ ಕುರಿತು ಯೋಚಿಸುವುದರಲ್ಲಿ ಒಂದು ವ್ಯವಸ್ಥಿತ ಆನಂದ ಅಥವ ವಿನೋದವಿದೆ. ಈ ಆನಂದ ವಿನೋದ ಮೂಲ. ಈ ಜಗತ್ತನ್ನು ವಿನೋದ ದೃಷ್ಟಿಯಿಂದ ನೋಡದವರನ್ನು ಈ ಜಗತ್ತು ಕೊಂದುಬಿಡುತ್ತದೆ. ವೇದಾಂತಿಗಳೂ ಕಲಾವಿದರೂ ಆದ ನಮ್ಮಾಳ್ವಾರಿಗೆ ಈ ಜಗತ್ತಿನ ಪರಸ್ಪರ ವಿರುದ್ಧತೆಗಳೂ—ವಿರುದ್ಧ ವಿಭೂತಿ ಮತ್ತು ಪರಮಾತ್ಮನ ಶಾಶ್ವತವಾದ ನಿತ್ಯ ವಿಭೂತಿಗಳು–ಚೆನ್ನಾಗಿ ಮುಂದಟ್ಟಾಗಿವೆ. ಅವರೂ ಈ ವಿಭೂತಿಯ ಹಿಂದಲ ನಾಯಕ ನಗುವಂತೆ ನಕ್ಕು ಬಿಡುತ್ತಾರೆ. ಕರುಣರಸ ರಾಮಾಯಣದ ಸೃಷ್ಟಿಗೆ ಕಾರಣ. ಶೃಂಗಾರವು ಶಾಕುಂತಲದ ಮುಖ್ಯರಸ. ಎರಡು ಜೀವಿಗಳನ್ನು ಒಟ್ಟುಗೂಡಿಸಲು ಪ್ರಕೃತಿ ಹೂಡಿರುವ ತಂತ್ರವೇ ಸ್ತ್ರೀ ಪುರುಷರ ಆಕರ್ಷಣೆ. ಪರಮಾತ್ಮ, ಕಲಾದೃಷ್ಟಿಯಿಂದ ಸ್ತ್ರೀ ಪುರುಷ ತತ್ವಗಳನ್ನು ಸೃಷ್ಟಿಸಿ ತಾನೇ ಅವುಗಳ ರೂಪವಾಗಿ ಪ್ರಕಟವಾಗುವುದೇ ಸೃಷ್ಟಿ ರಹಸ್ಯವೆಂದು ಉಪನಿಷತ್‌ಗಳು ಹೇಳುತ್ತವೆ. ಶಿವಶಕ್ತಿಯ ಭಾವನೆಗೂ ಈ ತತ್ವವೇ ಮೂಲ. ಕಾಮಶಾಸ್ತ್ರವಾದರೂ ಇಂದ್ರಿಯಗಳ ಪಶು ವ್ಯಾಪಾರಕ್ಕೆ ಸುಂದರ ರೂಪವನ್ನು ಕೊಡುವುದೇ ಆಗಿದೆ. ಪ್ರೇಮದಿಂದ ಎರಡು ಪ್ರಾಣಿಗಳ ಸಮರಸ ಏಕೀಭಾವವುಂಟಾಗುತ್ತದೆ. ಜೀವಂತವಾದ ಪ್ರಾಣಿಗಳಿಗೆಲ್ಲ ಲೈಂಗಿಕ ಪ್ರವೃತ್ತಿ ಇದ್ದೇ ಇದೆ. ಆದರೆ ವಿವೇಕವೂ, ಅಂತರ್ಮುಖನಾಗಿ ತನ್ನನ್ನು ತಾನು ಪರೀಕ್ಷಿಸಿಕೊಳ್ಳುವ ಶಕ್ತಿಯೂ ಇರುವುದು ಮನುಷ್ಯನಿಗೆ ಮಾತ್ರ. ಮೊದಲು ಮನುಷ್ಯನು ಅದು ಎರಡು ದೇಹಗಳ ಸಹಜವಾದ ಲೈಂಗಿಕ ಆಕರ್ಷಣೆ ಎಂದನು. ಅನಂತರ ಅದರಲ್ಲಿ ಒಂದು ಆದರ್ಶವನ್ನು ಕಂಡು ಎರಡು ಜೀವಿಗಳ ದಾಂಪತ್ಯ ಮಿಳನ ಎಂದನು. ಕೊನೆಗೆ ಅಧ್ಯಾತ್ಮವಾದ ಪರಮಾತ್ಮ ಮತ್ತು ಜೀವದ ಪತಿಪತ್ನೀ ಭಾವ ಎಂದನು. ಹೀಗೆ ಸೃಷ್ಟಿನಿಯಮವಾದ ಲೈಂಗಿಕ ಆಕರ್ಷಣೆ ಅಧ್ಯಾತ್ಮವಾಗಿ ಭಕ್ತಿಯ ದಾರಿ ಹಿಡಿಯಿತು. ಪ್ರಕೃತಿ ನಿಯಮವಾದ ಕರ್ಮವನ್ನು ನಿಷ್ಕಾಮ ಕರ್ಮವಾಗಿಸಿ ಕರ್ಮ ಬಂಧನದಿಂದ ತಪ್ಪಿಸಿಕೊಳ್ಳು

ವಂತೆ, ಮತ್ತು ಆ ಕರ್ಮವೇ ಭಗವಂತನ ಕೈಂಕರ್ಯವಾಗುವಂತೆ, ಕಾಮವು ಕಾಮಶಾಸ್ತ್ರ ಪತಿಪತ್ನೀ ಸಂಬಂಧವಾಗಿ ಅಂತ್ಯದ ಆತ್ಮ ಧರ್ಮದಲ್ಲಿ ಆತ್ಮ ವಿವಾಹವಾಗಿ ಕೊನೆಗೊಳ್ಳುತ್ತದೆ. ಅದು ಸ್ವಾಭಾವಿಕವೂ ಏಕಮುಖವೂ ಆದಷ್ಟು ಅದರ ಯೋಗ್ಯತೆ ಹೆಚ್ಚು. ಮನುಷ್ಯ ಪ್ರಪಂಚದ ಶೃಂಗಾರವೇ ಅಧ್ಯಾತ್ಮವಾಗಿ ಭಗವತ್ ಕಾಮವಾಗುವುದು. ಆದುದರಿಂದಲೇ ಅಧ್ಯಾತ್ಮ ಸಾಧನೆಯಲ್ಲಿ ಶೃಂಗಾರರಸದ ಸಂಕೇತಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. ಪ್ರೇಮದಲ್ಲಿ ವಿಶ್ಲೇಷ ಸಂಶ್ಲೇಷ ಎರಡೂ ಉಂಟು. ಪ್ರಿಯವಸ್ತು ಎದುರಿಗೆ ಇಲ್ಲದಿರುವಾಗ ಅದರಲ್ಲುಂಟಾಗುವ ಪ್ರೇಮ ವಿಶ್ಲೇಷ. ಎದುರಿಗಿರುವಾಗ ಉಂಟಾಗುವುದು ಸಂಶ್ಲೇಷ. ಪ್ರೇಮದ ಉದ್ದೀಪನೆಗೆ ಸಂಶ್ಲೇಷ ವಿಶ್ಲೇಷಣಗಳೆರಡೂ ಅಗತ್ಯ. ಅಧ್ಯಾತ್ಮ ಪ್ರೇಮವಾಗಿ ಬದಲಾವಣೆ ಹೊಂದಿದ ಶೃಂಗಾರರಸವೇ ಶ್ರೀ ಕೃಷ್ಣ. ಭಾಗವತವು ಕೃಷ್ಣನನ್ನು ಮನ್ಮಥ ಮನ್ಮಥನೆನ್ನುತ್ತದೆ. ಬ್ರಹ್ಮನನ್ನು ಕುರಿತು ಏಕಾಗ್ರವಾಗಿ ಧ್ಯಾನಿಸುವ ಭಕ್ತನು, ಶ್ರೀ ಕೃಷ್ಣನ ಹುಚ್ಚು ಹಿಡಿದ ಗೋಪೀ ಆಗುತ್ತಾನೆ. ಕಾಮವನ್ನು ಹೀಗೆ ಅಡಗಿಸಿಕೊಳ್ಳುವುದು ಭಕ್ತನಿಗೆ ಮಾತ್ರ ಸಾಧ್ಯ. ಬ್ರಹ್ಮನು ಆನಂದಮಯನೆಂಬ ಈ ಸತ್ಯದ ಮನೋಹರ ವಿವರಣೆಯೇ ಭಾಗವತದ ತತ್ವ.

ಪರಮಾತ್ಮನೆಂಬ ಗಾರುಡಿಗನ ಮನೋಹರ ರೂಪದರ್ಶನಕ್ಕಾಗಿ, ಜೀವಿಯ ಅಧ್ಯಾತ್ಮ ದಾಹಕ್ಕೆ ಉತ್ತರವೇ ರಾಮ, ಕೃಷ್ಣರ ಅವತಾರಗಳು. ಅವತಾರಗಳ ಸೌಂದರ್ಯ ಬುದ್ಧಿಗೆ ಎಟಕದುದು. ಆದರೆ ಬರಿಯ ಮಾಯೆಯಲ್ಲ. ಅದರ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಆ ಆಕರ್ಷಣೆಯಿಂದ ಜೀವಿಯ ಇಂದ್ರಿಯ ವಿಕಾರಗಳು ಧ್ವಂಸವಾಗುತ್ತವೆ. ರಾಮನ ಸೌಂದರ್ಯದ ಮೋಹಕತ್ವದಿಂದ ದಂಡಕಾರಣ್ಯದ ಋಷಿಗಳು ಮಂತ್ರಮುಗ್ಧರಾಗಿ ಆ ರೂಪವನ್ನೇ ನೋಡುತ್ತಾ ನಿಂತುಬಿಟ್ಟರೆಂದು ವಾಲ್ಮೀಕಿ ಹೇಳುತ್ತಾರೆ. ಅನಂತರ ಆ ಅನಿರ್ವಚನೀಯವಾದ ರಸಾನುಭವಕ್ಕಾಗಿ ಅವರೇ ಬೃಂದಾವನದ ಗೋಪಿಯರಾದರು. ವೇದಾಂತಿಗಳ ಸಾರ್ವಭೌಮರಾದ ಶುಕ ಮಹರ್ಷಿಗಳು ಹಿಮಾಲಯ ಪರ್ವತ ಸಮಾಧಿಯ ಶಾಂತಿರಸವನ್ನು ತೊರೆದು ಬೃಂದಾವನದ ಆ ಮೋಹಕ ರೂಪಿನ ಗೋಪಿಯರ ಮಧ್ಯೆ ಬಂದು ಶ್ರೀ ಕೃಷ್ಣನ ದಿವ್ಯ ದರ್ಶನದಿಂದ ಮತ್ತರಾದರು. ಭಾಗವತದ ಹತ್ತನೆಯ ಸ್ಕಂಧ ಈ ಪ್ರೇಮಲೀಲೆಯ ದೈವಿಕ ನಾಟಕ. ಅಧ್ಯಾತ್ಮಸಾಹಿತ್ಯದಲ್ಲಿ ಅದನ್ನು ಹೋಲುವ ಬರವಣಿಗೆ ಅಪರೂಪ. ಪರಿಶುದ್ಧನಾದ ಯೋಗೇಶ್ವರನು ಆತ್ಮಾಕರ್ಷಣೆಯ ಗಾರುಡಿಗನಾಗಿ ಮನ್ಮಥ ಮನ್ಮಥನಾಗುತ್ತಾನೆ. ಪ್ರಕೃತಿ ಮತ್ತು ಅದರ ಗುಣಗಳಿಂದ ಅಬಾಧಿತನಾದ ಶ್ರೀ ಕೃಷ್ಣನು ನಿರವಯವ [ಆಕಾರ ರಹಿತ] ಮತ್ತು ನಿರ್ಗುಣ. ಆತನು ಪರಿಪೂರ್ಣ ಕರ್ಮಗಳಿಗೆ ಒಡೆಯನೇ ಹೊರತು ಅಧೀನನಲ್ಲ. ಬ್ರಹ್ಮಾಂಡದ ಇತರ ದೇವತೆಗಳಾದ ವರುಣ ಇಂದ್ರ ಬ್ರಹ್ಮರು ತಮ್ಮ ಮಿತಿಯನ್ನರಿತು ಶ್ರೀ ಕೃಷ್ಣನಲ್ಲಿ ಶರಣಾಗತರಾಗುತ್ತಾರೆ. ಬ್ರಹ್ಮನು ಗೋವುಗಳನ್ನೂ ಗೋಪಾಲಕರನ್ನೂ ಒಂದು ಸಲ ಎತ್ತಿಕೊಂಡು ಹೋದನು. ಆದರೆ ಯೋಗಮಾಯೆಯಿಂದ ಶ್ರೀ ಕೃಷ್ಣನು ಮತ್ತೆ ಅವರನ್ನು ಸೃಷ್ಟಿಮಾಡಿ ಬ್ರಹ್ಮನ ಅಹಂಕಾರವನ್ನು ಅಡಗಿಸಿದನು. ಆ ನೂತನ ಸೃಷ್ಟಿಯ ಸುಂದರ ನಗರಕ್ಕೆ ಪ್ರೇಮದ ಪ್ರವೇಶವುಂಟಾಯಿತು. ಪ್ರತಿ ಹಸುವಿನಲ್ಲಿಯೂ ಗೋಪಾಲನಲ್ಲಿಯೂ ಶ್ರೀ ಕೃಷ್ಣನನ್ನು ಕಂಡು ಬ್ರಹ್ಮನು ದಿಗ್ಭ್ರಾಂತನಾದನು. ಬ್ರಹ್ಮನು ಅತ್ಯಾಶ್ಚರ್ಯದಿಂದ ವಿನಯವಾಂತು ತನ್ನ ಅಹಂಕಾರ ವಿಕಾರ ನಾಶವಾಗಲೆಂದು, ಬೃಂದಾವನದಲ್ಲಿ ಶ್ರೀ ಕೃಷ್ಣಪರಮಾತ್ಮನ ಅಡಿಗಳು ತಿರುಗಾಡಿದ್ದ ಧೂಳನ್ನೇ ಪೂಜಿಸತೊಡಗಿದನು. ಪರಮಾತ್ಮನು ಶ್ಯಾಮಸುಂದರ, ಮದನಮೋಹನ ತ್ರೈಲೋಕ್ಯನಾಥ; ತನ್ನ ಸೌಂದರ್ಯದಿಂದ ಮೂರು ಲೋಕಗಳನ್ನು ಆಕರ್ಷಿಸುವವನೆಂದು ಶುಕ ಮಹರ್ಷಿಗಳು ವರ್ಣಿಸಿದ್ದಾರೆ. ಆ ಮನೋಹರ ರೂಪವನ್ನು ಕಂಡು ಸ್ತ್ರೀ ಪುರುಷರೆಲ್ಲ ಮುಗ್ಧರಾದರು. "ಮೇವನು ಮರೆತವು ಗೋವುಗಳೆಲ್ಲ ಸಾವಧಾನದಿ ಹರಿದಳು ಯಮುನಾ". ಗಿಡ ಬಳ್ಳಿಗಳು ಸಹ ಆ ಪ್ರೇಮದ ಗಾನಕ್ಕೆ ಮಾರು ಹೋದುವು. ಕೃಷ್ಣ ಪರಮಾತ್ಮ ಬೃಂದಾವನವನ್ನೇ ಒಂದು ಸೌಂದರ್ಯದ ಕಲೆವೀಡಾಗಿ ಮಾಡಿದನು. ಅಲ್ಲಿಂದ ಕುರೂಪ ಮತ್ತು ವಿಕಾರಗಳು ಪೂರ್ಣವಾಗಿ ಮಾಯವಾದುವು. ಚರಾಚರ ವಸ್ತುಗಳೆಲ್ಲ ಶ್ರೀ ಕೃಷ್ಣ ಪ್ರೇಮಿಗಳಾಗಿ ಆ ಕೃಷ್ಣ ಪ್ರೇಮದ ಗಾಳಿಯನ್ನೇ ಉಸಿರಾಡುತ್ತಾ ತಮ್ಮನ್ನು ಮರೆತವು. ದೇವತೆಗಳೂ ಯೋಗಿಗಳೂ ತಮ್ಮ ಅಹಂಕಾರದ ವಿಕಾರ ರೂಪವನ್ನರಿತು, ಬೃಂದಾವನದಲ್ಲಿ ಪರಮಾತ್ಮನು ಸೃಷ್ಟಿಸಿದ ಸತ್ಯ ಶಿವ ಸೌಂದರ್ಯದಲ್ಲಿ ಲೀನರಾದರು. ಕಲೆಗಾರರ ಯಾವ ಊಹನಾಶಕ್ತಿಗೂ ಮೀರಿದ ಅದ್ಭುತ ಸೌಂದರ್ಯವನ್ನು ಪರಮಾತ್ಮ ಬೃಂದಾವನದಲ್ಲಿ ಸೃಷ್ಟಿಸಿದನು.

ಈ ದೃಷ್ಟಿಯಿಂದ ನೋಡುವಾಗ ರಾಸಕ್ರೀಡಾ ಪ್ರಕರಣವು ಅದ್ಭುತ ಕಲಾಕೃತಿ. ಜೀವಿಯು ಪರಮಾತ್ಮನ ಮೋಹಕರೂಪದಿಂದ ಆಕರ್ಷಿತನಾಗಿ ತನ್ನ ಹೃದಯ ಪೀಠದಲ್ಲಿ ಆತನ ನರ್ತನವನ್ನು ಅನುಭವಿಸುತ್ತಾ ಅಧ್ಯಾತ್ಮ ಪತಿಪತ್ನೀ ಸಂಬಂಧಕ್ಕಾಗಿ ಕಾತರನಾಗಿರುವುದನ್ನು ಕವಿ ಹೃದಯಂಗಮವಾಗಿ ವರ್ಣಿಸಿದ್ದಾನೆ. ಬೃಂದಾವನದ ಉಪವನದಲ್ಲಿ ಸುಂದರವಾದ ಶರತ್‌ಜ್ಯೋತ್ಸ್ನಾಮಯಿಯಾ ಅಂತರಿಕ್ಷದ ಸಂಧ್ಯೆ. ಚಂದ್ರಕಿರಣಗಳು ಬಿದ್ದ ಯಮುನೆಯ ನೀರು ಬೆಳ್ಳಿಯಾಗಿ ಹರಿಯುತ್ತಿದೆ, ಮಂದಮಾರುತ ಕುಸುಮುಸುಮಗಂಧಾವೃತವಾಗಿದೆ. ಪಕ್ಷಿಗಳು ಅತ್ಯಂತ ಇಂಪಾಗಿ ಗಾನಮಾಡುತ್ತಿವೆ. ಪರಮಾತ್ಮನ ಆಗಮನಕ್ಕಾಗಿ ಪ್ರಕೃತಿ ಬಹುವಿಧದ ಸಿಂಗಾರಮಾಡಿಕೊಂಡಿದೆ. ಈ ಸೌಂದರ್ಯದ ಅನಿರ್ವಚನೀಯ ಆಕರ್ಷಣೆಯಿಂದ ದೇವತೆಗಳು ಬೃಂದಾವನಕ್ಕೆ ಬರುತ್ತಿದ್ದಾರೆ. ಆಗ

ತಾಸಾಮಾವಿರಭೂತ್ ಶೌರಿ ಸ್ಮಯಮಾನ್ ಮುಖಾಂಬುಜಃ
ಪೀತಾಂಬರಧರ ಸ್ರಗ್ವೀ ಸಾಕ್ಷಾತ್ ಮನ್ಮಥ ಮನ್ಮಥಃ

ಶ್ರೀಕೃಷ್ಣನು ನಗೆಮೊಗದಲ್ಲಿ ಕಿರುನಗೆಯನ್ನು ಬೀರುತ್ತಾ ಹೊನ್ನುಡಿಗೆಯುಟ್ಟು ವನಮಾಲಿಯನ್ನು ಧರಿಸಿ ಮನ್ಮಥನನ್ನೂ ಮರುಳು ಮಾಡುವ ಮೋಹನಾಕಾರದಿಂದ ಕಂಗೊಳಿಸುತ್ತಾ ಕೊಳಲಿನೊಂದಿಗೆ ಪ್ರತ್ಯಕ್ಷನಾಗುತ್ತಾನೆ. ಅವನ ವೇಣುವಿನಿಂದ ಹೊರಟ ಮಧುರಗಾನ ಸಾಧಕರಿಗೆ ಕೇಳಿಸುತ್ತದೆ. ಈ ಯೋಗಮಾಯಿನ್ ಕೃಷ್ಣನ ದರ್ಶನಕ್ಕಾಗಿ ಕಾದಿದ್ದ ಗೋಪಿಯರು ಯೋಗಿನಿಯರೇ. ಅವರು ಅಧ್ಯಾತ್ಮಪ್ರೇಮಪರಿಶುದ್ಧಹೃದಯರು. ಅವರು ಮನೆಗಳನ್ನೂ ಮಕ್ಕಳನ್ನೂ ಗಂಡಂದಿರನ್ನೂ ತೊರೆದು ಪರಮಾತ್ಮ ಪ್ರೇಮದಿಂದ ಆಕರ್ಷಿತರಾಗಿ ಬೃಂದಾವನದ ಮರುಳು ದಿಣ್ಣೆಗಳಿಗೆ ನುಗ್ಗುತ್ತಾರೆ. ಗಾನ ನರ್ತನ ಕ್ರೀಡೆಗಳಿಂದ ಪರಮಾತ್ಮ ಪ್ರತಿ ಗೋಪಿಭಕ್ತರ ಆತ್ಮದೊಂದಿಗೆ ಒಂದಾಗುತ್ತಾನೆ. ಈ ಅಧ್ಯಾತ್ಮ ನರ್ತನದಲ್ಲಿ ಒಬ್ಬೊಬ್ಬ ಗೋಪಿಗೂ ಒಬ್ಬೊಬ್ಬ ಕೃಷ್ಣ. ಪರಿಶುದ್ಧ ಹೃದಯರಿಗೆ ಮಾತ್ರ ಅರ್ಥವಾಗಬಹುದಾದ, ಅನುಭವವಾಗಬಹುದಾದ ಊಹನೆಗೆ ಮಾತ್ರ ನಿಲುಕುವ ಪರಮಾತ್ಮ ದರ್ಶನದ ಆನಂದದಲ್ಲಿ ಗೋಪಿಯರು ತಲ್ಲೀನರಾಗಿದ್ದರು. ನೋಟಕ್ಕಾಗಿ ಬಂದಿದ್ದ ದೇವಸ್ತ್ರೀಯರೂ ಸಹ ಆ ರಾಸಕ್ರೀಡೆಯ ಸೊಬಗಿನಲ್ಲಿ ಸಿಕ್ಕಿ ಮೋಹಗೊಂಡರು. ಗ್ರಹ ನಕ್ಷತ್ರಾದಿಗಳೊಡಗೂಡಿದ ಚಂದ್ರನೂ ಸಹ ಅಚ್ಚರಿಗೊಂಡನು. ಕವಿ ಆ ಲೀಲೆಯನ್ನು ಮುಂದಲ ಅಮೃತ ವಾಕ್ಕಿನಿಂದ ಮುಗಿಸುತ್ತಾನೆ.

ಕೃತ್ವಾ ತಾವಂತಮಾತ್ಮಾನಂ ಯಾವತೀರ್ಗೋಪಯೋಷಿತಃ
ರರಾಮ ಭಗವಾಂ ಸ್ತಾಭಿ ರಾತ್ಮಾರಾಮೋಪಿ ಲೀಲಯಾ

[ಭಗವಂತನಾದ ಕೃಷ್ಣನು ಆತ್ಮಾರಾಮನಾದರೂ, ಗೋಪಸ್ತ್ರೀಯರೆಷ್ಟು ಮಂದಿಯೋ ಅಷ್ಟು ಮಂದಿ ಕೃಷ್ಣರಾಗಿ ಅವರೊಡನೆ ಲೀಲೆ ಮಾಡಿರಮಿಸಿದನು.]

ಮುಕ್ತಿ

"ಲೀಲಾ" ಪ್ರಪಂಚದಲ್ಲಿ ಪರಮಾತ್ಮನ ಶುದ್ಧ ತತ್ವ ಸೌಂದರ್ಯವಾಗಿ ತನ್ನ ಸೌಂದರ್ಯ ಆನಂದವನ್ನು ಜೀವಿಗಳಿಗೆ ಎರೆಯುವ ಲೀಲೆಯಾಡುತ್ತದೆ. ಪ್ರಕೃತಿಯಲ್ಲಿಯೂ ಜೀವದಲ್ಲಿಯೂ ಸತ್ಯದಲ್ಲಿಯೂ ಸೌಂದರ್ಯದ ಅಸ್ತಿತ್ವ ನಿಜ. ಸೌಂದರ್ಯವೂ ವ್ಯಕ್ತಿ ಮತ್ತು ವಸ್ತುಗಳಲ್ಲಿ ಹೆಸರುಗೊಂಡಿರುವುದೂ ನಿಜ. ದೇವರು ಸುಂದರನಾದುದರಿಂದ ಅವನ ಸೃಷ್ಟಿಯಾದ ಜಗತ್ತು ಸುಂದರವಾಗಿರುವುದೂ ನಿಜ. ಆದರೆ ಜೀವಿಗೆ ಪ್ರಾಪಂಚಿಕ ಕಾಮಕ್ರೋಧಗಳೂ ಅಹಂಕಾರಗಳೂ ಹೆಚ್ಚಾಗಿರುವುದರಿಂದ ಇದು ವಿಕಾರವನ್ನೂ ಕುರೂಪವನ್ನೂ ಹೊಂದುತ್ತದೆ. ಆದರೆ ತನ್ನ ಸ್ವಾಭಾವಿಕವಾದ ಸೌಂದರ್ಯದ ಆಸೆಯಿಂದ, ಅದಕ್ಕೆ ಪರಮಾತ್ಮನಲ್ಲಿ ಸೇರುವ ಕಾತರ ಹೆಚ್ಚುತ್ತದೆ. ಸೌಂದರ್ಯಾನ್ವೇಷಿ ಜೀವ ಸಾಧಕನಾಗಿ ಅಹಂಕಾರ ವಿಕಾರವನ್ನು ಕಳೆದುಕೊಂಡು ಅಧ್ಯಾತ್ಮದ ಉಜ್ವಲ ಋಜುಮಾರ್ಗದಲ್ಲಿ ಪ್ರಯಾಣ ಮಾಡುತ್ತದೆ. ಅತ್ಯಂತ ಶ್ರೇಷ್ಠ ಕಲಾವಿದನೂ ಕವಿಯೂ ಆದ ಪರಮಾತ್ಮನ ಮಾರ್ಗದರ್ಶನದಲ್ಲಿ, ಜೀವಿಯು ಸೌಂದರ್ಯದ ಮೆಟ್ಟಲುಗಳನ್ನು ಏರುತ್ತಾ ಹೋಗುತ್ತಾನೆ. ಇಂದ್ರಿಯಗೋಚರ ಸೌಂದರ್ಯದಿಂದ, ಬುದ್ಧಿಗೋಚರ ಸೌಂದರ್ಯವನ್ನು ಮುಟ್ಟಿ, ಅಲ್ಲಿಂದ ದೈವಿಕ ಸೌಂದರ್ಯವನ್ನೂ ಕಾಣುತ್ತಾನೆ. ಪರಮಾತ್ಮನಿಗೂ ಆತನ ಪ್ರೇಮದ ಲೀಲೆಗೂ ನಡುವೆ ಇರುವ ಜವನಿಕೆ ಮರೆಯಾಗುತ್ತದೆ. ಆಗ ಜೀವಿಯು, ಕಣ್ಣು ಕಾಣದಿರುವ ಕಿವಿ ಕೇಳದಿರುವ ಸೌಂದರ್ಯ ದರ್ಶನವನ್ನು ಹೊಂದುತ್ತಾನೆ. ಆ ಸ್ಥಿತಿ ಅನುಭವವಾದಾಗ ಭಕ್ತನು ಮುಕ್ತನಾಗಿ ಸಂಸಾರ ಚಕ್ರದಿಂದ ಎಂದೆಂದಿಗೂ ಬಿಡುಗಡೆ ಹೊಂದುತ್ತಾನೆ.

ಆ ಉಜ್ವಲ ಅಧ್ಯಾತ್ಮ ಪ್ರಪಂಚವೇ "ಪರಮಪದ." ಸೌಂದರ್ಯ ಆನಂದಗಳ ನೆಲೆವೀಡೇ "ಆನಂದ ಲೋಕ." ಬುದ್ಧಿಗೆ ಸಹ ಅಗೋಚರವಾದ, ಕಾಲದೇಶ

ಗಳ ಪರಿಮಿತಿಯನ್ನು ಮೀರಿದ ಲೋಕ ಅದು. ಆದರೆ ಈ "ಬ್ರಹ್ಮಾನಂದದಲ್ಲಿ ಪಾಲುಗೊಳ್ಳಲು ಬನ್ನಿ" ಎಂದು ಅಧ್ಯಾತ್ಮಯೋಗಿಯು ನಮ್ಮನ್ನು ಆಹ್ವಾನಿಸುತಿದ್ದಾನೆ. ಅನಿರ್ವಚನೀಯವೂ ಅಗೋಚರವೂ ಆದ ಬ್ರಹ್ಮನ ದಿವ್ಯ ಸೌಂದರ್ಯವನ್ನು ಸೂಚಿಸಲು ಇಂದ್ರಿಯಗೋಚರ ಸಂಕೇತಗಳನ್ನು ಉಪಯೋಗಿಸುತ್ತಾನೆ. ಅಲ್ಲಿ ಪ್ರಕೃತಿ ತನ್ನ ನಿಜರೂಪದಲ್ಲಿ ಅಪ್ರಾಕೃತವಾಗಿ ಹೊಳೆಯುತ್ತಿದೆ. ಅಲ್ಲಿ ಅಮೃತತ್ವವು ಭೌತ ತತ್ವದಲ್ಲಿ ಅಂತಸ್ಥವಾಗಿದೆ. ಅಲ್ಲಿಗೆ ಸೇರಿದ ಮುಕ್ತನು ಪ್ರತಿಯೊಂದನ್ನೂ ಅಮೃತತ್ವ ದೃಷ್ಟಿಯಿಂದಲೇ ನೋಡುತ್ತಾನೆ. ಅಲ್ಲಿಯ ಚೈತನ್ಯದಾಯಕವಾದ ಆನಂದ ಯಾವಾಗಲೂ "ಸಾಂಪ್ರತ" –ಈಗ. ಬ್ರಹ್ಮನ ಜ್ಯೋತಿ ಇಂತಹ ಕಡೆ ಎಂದು ಗುರುತಿಸುವುದು ಸಾಧ್ಯವಿಲ್ಲ. ಅದು ಅನಂತ ಅಪಾರ ಸಹಸ್ರ ಸೂರ್ಯ ಪ್ರಕಾಶಕ್ಕಿಂತ ಅಧಿಕ. ಮುಕ್ತನು ಪರಮಾತ್ಮನ ಸಿದ್ಧಿಯನ್ನು ಹೊಂದಿ, ಬ್ರಹ್ಮನ ಮೋಹಕವಾದ ಸೌಂದರ್ಯವನ್ನು ನೋಡಿದ ಕೂಡಲೇ ತಾನೂ ಬ್ರಹ್ಮರೂಪ ಬ್ರಹ್ಮಗಂಧ ಬ್ರಹ್ಮರಸವನ್ನು ಅನುಭವಿಸುತ್ತಾನೆ. ಆಗ ಜೀವಿಯು ತಾನು ಎಂಬುದನ್ನು ಕಳೆದುಕೊಂಡು ಬ್ರಹ್ಮನಲ್ಲಿ ಪುನರ್ಮಿಲನದ ಆನಂದವನ್ನು ಹೊಂದಿ ಮುಕ್ತನಾಗುತ್ತಾನೆ. [ಅವಿಭಾಗ] ಸೌಂದರ್ಯಾಧಿದೇವ ಬ್ರಹ್ಮನು ತನ್ನ ಲೋಕದಲ್ಲಿ ಎಂದೆಂದಿಗೂ ಒಂದೇ ಸಮನಾಗಿ ಪ್ರಕಾಶಿಸುತ್ತಲೇ ಇರುತ್ತಾನೆ. ಸುಂದರ ಸೃಷ್ಟಿಯನ್ನು ರಚಿಸಿ ಅದರೊಂದಿಗೆ ಲೀಲೆಯಾಡುತ್ತಾ ಕೊನೆಯಲ್ಲಿ ಅವುಗಳೊಡನೆ ಒಂದಾಗುತ್ತಾನೆ. ಅಧ್ಯಾತ್ಮ ಸಾಧಕನು ಸೌಂದರ್ಯದಲ್ಲಿ ಮಿಳನವನ್ನು ಬಯಸಿ ಆನಂದದಲ್ಲಿ ತಲ್ಲೀನನಾಗುತ್ತಾನೆ.

ಕನ್ನಡದ ಶಾಸ್ತ್ರೀಯ ಗ್ರಂಥಗಳು

ಶ್ರೀ ಡಿ. ಕೆ. ಭಾರದ್ವಾಜ, ಬೆಂಗಳೂರು.

ಇಪ್ಪತ್ತನೆಯ ಶತಮಾನ ಆರಂಭವಾಗುವ ಸಮಯದಲ್ಲಿ ಸುಶಿಕ್ಷಿತರಾದವರು ಕೂಡ "ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳಿಲ್ಲ" ಎಂದು ಹೇಳುತ್ತಿದ್ದ ಕಾಲವಿತ್ತು. ಆದರೆ ಕವಿಚರಿತ್ರಕಾರರಾದ ದಿವಂಗತ ಶ್ರೀ। ಆರ್. ನರಸಿಂಹಾಚಾರ್ಯರು ಮತ್ತು ಶ್ರೀ। ಎಂ. ಎ. ರಾಮಾನುಜ ಅಯ್ಯಂಗಾರ್ಯರ ಕನ್ನಡ ನುಡಿಯ ಮೇಲಣ ಆಸಕ್ತಿ ಮತ್ತು ಪ್ರಯತ್ನಗಳಿಂದ, ಅನೇಕ 'ಪ್ರಾಚೀನ ಕನ್ನಡದ ಶಾಸ್ತ್ರೀಯ ಗ್ರಂಥಗಳ' ಪರಿಚಯವು ಕನ್ನಡಿಗರಿಗೆ ಆಗುವಂತಾಯಿತು. ಈ ವಿಚಾರದಲ್ಲಿ ದಿವಂಗತ ಶ್ರೀ। ಎಂ. ಎ. ರಾಮಾನುಜ ಅಯ್ಯಂಗಾರ್ಯರ ಅಪ್ರಕಟಿತ "ಆತ್ಮಚರಿತ್ರೆ"ಯಲ್ಲಿ ಮುಂದೆ ಹೇಳುವ ಸಂಗತಿಗಳುಳ್ಳ ಪುಟಗಳನ್ನು ಇಲ್ಲಿ ಕನ್ನಡಿಸಿರುವೆನು. ಅದರಿಂದ ಕನ್ನಡ ಗ್ರಂಥಗಳ ಮುಂಚಿನ ಸ್ಥಿತಿಯು ತಿಳಿದು ಬರುವುದು.—"(೧೯ನೆಯ ಶತಮಾನದ ಉತ್ತರಾರ್ಧದಲ್ಲಿ) ಕಳೆದ ೩೫ ವರುಷಗಳಿಂದ ಸರಕಾರದಿಂದ ಪ್ರಕಟವಾದ ಪುಸ್ತಕಗಳ ಸಂಖ್ಯೆ ೨೦ಕ್ಕೆ ಮೀರಿಲ್ಲ. ಈ ಕೊರತೆಯನ್ನು ನಿವಾರಿಸಲು ನಾನೂ ನನ್ನ ದಿವಂಗತ ಮಿತ್ರ ಎಸ್. ಜಿ. ನರಸಿಂಹಾಚಾರ್ಯರೂ ಕೆಲಸಮಾಡಲಾರಂಭಿಸಿ, ನಮ್ಮ ಸ್ವಂತ ಶ್ರಮ ಮತ್ತು ವೆಚ್ಚಗಳಿಂದ ಹಲವೆಡೆ ತಿರುಗಿ ತಿರುಗಿ ಅನೇಕ ಪ್ರಾಚೀನ ಕನ್ನಡ ಗ್ರಂಥಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ, 'ಕರ್ಣಾಟಕ ಕಾವ್ಯಮಂಜರಿ' ಎಂಬ ಹೆಸರಿನ ಮಾಸಿಕ ವಹಿಯನ್ನು ಸನ್ ೧೮೯೨ನೆಯ ಏಪ್ರಿಲ್ ತಿಂಗಳಿನಿಂದ ಆರಂಭಿಸಿ, ಅದರಲ್ಲಿ ಆ ಗ್ರಂಥಗಳನ್ನು ಭಾಗಶಃ ಪ್ರಕಟಿಸಲಾರಂಭಿಸಿದೆವು. ಅದರಿಂದ ಕನ್ನಡದ ನವೋದಯವಾಗಿದೆ ಎಂದು ಮಿ. ರೈಸ್ ಸಾಹೇಬರು ತಮ್ಮ 'ಮೈಸೂರು ಗಜೆಟಿಯರ್' ಸಂಪುಟ ೧, ಪುಟ ೫೨ರಲ್ಲಿ ನಮ್ಮ ಪತ್ರಿಕೆಯನ್ನು ಹೊಗಳಿರುವರು. ನಮ್ಮ ಸಾಹಿತ್ಯದ ಅತ್ಯುತ್ತಮ ರತ್ನಗಳಿಗಾಗಿಯೆ ಆ ಪತ್ರಿಕೆಯನ್ನು ಮೀಸಲಾಗಿಟ್ಟಿದ್ದರಿಂದ, ಮುಂದೆ ಸ್ವಲ್ಪ ಸಮಯದಲ್ಲಿ ಅದರ ಹೆಸರನ್ನು "ಕರ್ಣಾಟಕ ಕಾವ್ಯ ಕಲಾನಿಧಿ" ಎಂದು ಬದಲಾಯಿಸಿದೆವು. ದುರ್ದೈವದಿಂದ ಶ್ರೀ। ಎಸ್. ಜಿ. ನರಸಿಂಹಾಚಾರ್ಯರು ಸನ್ ೧೯೦೭ನೆಯ ಸಾಲಿನಲ್ಲಿ ಸ್ವರ್ಗಸ್ಥರಾದುದರಿಂದ, ನಾನೊಬ್ಬನೆ ಕೆಚ್ಚೆದೆಯಿಂದ ಸನ್ ೧೯೧೬ನೆಯ ಸಾಲಿನ ವರೆಗೆ ಪತ್ರಿಕೆಯನ್ನು ನಡೆಯಿಸಿಕೊಂಡು ಬಂದೆನು. ಅದರಲ್ಲಿ ಪ್ರಕಟವಾಗುತ್ತಿದ್ದುದು ಉಚ್ಚ ರೀತಿಯ ಸಾಹಿತ್ಯವಾದುದರಿಂದ ಕತೆ ಕಾದಂಬರಿಗಳಂತೆ ಅದು ಜನಸಾಮಾನ್ಯರ ಪ್ರೋತ್ಸಾಹಪಡೆಯಲಿಲ್ಲ. ಈ ಕಾರಣದಿಂದಲೆ ನಮ್ಮ ಪತ್ರಿಕೆಗೆ ಚಂದಾದಾರರ ಸಂಖ್ಯೆ ಯಾವಾಗಲೂ ೧೦೦ಕ್ಕೆ ಮೀರಲಿಲ್ಲ. ಈ ನಮ್ಮ ಕಷ್ಟವನ್ನು ನೋಡಿ ೨೦೦ ಪ್ರತಿಗಳಿಗೆ ಸರ್ಕಾರದವರು ಚಂದಾದಾರರಾದರು. ಇದರಿಂದ ಕೊಂಚ ಮಟ್ಟಿಗೆ ಸಹಾಯವಾದರೂ ಪ್ರತಿ ವರ್ಷಾಂತ್ಯದಲ್ಲಿ ನನ್ನ ಸ್ವಂತ ಹಣವನ್ನು ಅದಕ್ಕೆ ಹಾಕಬೇಕಾಗುತ್ತಿತ್ತು. ೧೯೧೬ನೆಯ ಸಾಲಿನಲ್ಲಿ ಸರಕಾರದ ಈ ಸಹಾಯವನ್ನು ಆಗಿನ ವಿದ್ಯಾಧಿಕಾರಿಗಳು ಕಡಿಮೆ ಮಾಡಿದುದರಿಂದ, ನನ್ನ ಬಡತನಕ್ಕಾಗಿ ನನ್ನನ್ನು ನಾನೇ ಧಿಕ್ಕರಿಸಿಕೊಳ್ಳುತ್ತ, ಬೇರೆ ಉಪಾಯ ಕಾಣದೆ, ಮನಸ್ಸಿಲ್ಲದೆ ಪತ್ರಿಕೆ ನಿಲ್ಲಿಸಿಬಿಡಬೇಕಾಯಿತು. ಆದರೆ ನನಗೆ ಶಕ್ತಿಯಿದ್ದ ಮಟ್ಟಿಗೆ ನಾನು ಕನ್ನಡ ಮಾತೆಯ ಸೇವೆ ಮಾಡಿ ಪ್ರಾಚೀನ ಕನ್ನಡ ಸಾಹಿತ್ಯ ರತ್ನಗಳಲ್ಲಿ ೬೭ ಗ್ರಂಥಗಳನ್ನು—ಕಾವ್ಯ, ಪದ್ಯ, ಗದ್ಯ, ಚರಿತ್ರೆ, ನಾಟಕ ಛಂದಸ್ಸು, ಶಬ್ದಕೋಶ, ಅಲಂಕಾರಶಾಸ್ತ್ರ, ವ್ಯಾಕರಣ, ಹಾಡು, ಧರ್ಮ, ವೇದಾಂತ ವಿಷಯಗಳು ಅಡಕವಾಗಿರುವಂತಹ ಗ್ರಂಥಗಳನ್ನು ನನ್ನ ಟೀಕೆ ಟಿಪ್ಪಣಿಗಳೊಂದಿಗೆ ಪ್ರಕಟಿಸಿರುವೆನೆಂಬ ಒಂದು ಬಗೆಯ ಸಮಾಧಾನವಿದೆ. ನನ್ನ ಪತ್ರಿಕೆಯು ನಿಂತು ಹೋದುದರಿಂದ ನಮ್ಮ ಪ್ರಾಚೀನ ಪುರುಷರು ಬರೆದಿರುವ ಅನೇಕ ವೈಜ್ಞಾನಿಕ ಮತ್ತು ಕಲಾವಿಷಯಕ ಗ್ರಂಥಗಳಲ್ಲಿ ನನ್ನ ಬಳಿ ಇರುವವುಗಳನ್ನು ನಾನು ಪ್ರಕಟಿಸಲು ಅವಕಾಶವಿಲ್ಲದಂತಾಯಿತು."—ಎಂದು ಹೇಳಿಕೊಂಡಿರುವರು. ಅವರೀಹೇಳಿಕೆಯಿಂದ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ನುಡಿಯ ಸ್ಥಿತಿ

ಯು ಹೇಗಿತ್ತೆಂದೂ, ಆದರೆ ಅದಕ್ಕೆ ಎಷ್ಟೋ ಕಾಲಕ್ಕೆ ಹಿಂದೆ ಕನ್ನಡದ ಶಾಸ್ತ್ರೀಯ ಗ್ರಂಥಗಳು ರಚಿತವಾಗಿರುವವೆಂದೂ ವ್ಯಕ್ತವಾಗುವುದು. ಆ ಗ್ರಂಥಗಳು ದಿವಂಗತ ಶ್ರೀ। ಎಂ. ಎ. ರಾಮಾನುಜಯ್ಯಂಗಾರ್ಯರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕದೆ, ಧನಾಭಾವದಿಂದ ಪ್ರಕಟವಾಗಿಲಿಲ್ಲ. ಮತ್ತೆ ಆ ಕನ್ನಡದ ಶಾಸ್ತ್ರೀಯ ಗ್ರಂಥಗಳಾವವು ಎಂಬುದನ್ನು ಅವರೂ ತಿಳಿಸಿಲ್ಲ. ಮತ್ತೆ ಕವಿಚರಿತ್ರಕಾರರಾದ ಸ್ವರ್ಗೀಯ ಆರ್. ನರಸಿಂಹಾಚಾರ್ಯರು, ಹೀಗೆ ಬರೆದಿರುವರು:—*"ಕನ್ನಡದಲ್ಲಿ ಹೇರಳವಾಗಿ ಗ್ರಂಥಗಳು ಹುಟ್ಟಿವೆ. ಈ ಭಾಷೆಯ ಸಾಹಿತ್ಯವನ್ನು ದಕ್ಷಿಣ ಹಿಂದೂದೇಶದ ಇತರ ದ್ರಾವಿಡ ಭಾಷೆಗಳ ಸಾಹಿತ್ಯದೊಡನೆ ಹೋಲಿಸಿದರೆ ಹಿಂದಾಗುವಂತಿಲ್ಲ. ಕರ್ಣಾಟಕ ಕವಿಚರಿತೆಯ ಮೂರು ಸಂಪುಟಗಳನ್ನು ಸ್ಥೂಲದೃಷ್ಟಿಯಿಂದ ನೋಡಿದರೂ ಈ ಹೇಳಿಕೆಯ ನಿಜತ್ವವು ದೃಢಪಡಿಸುತ್ತದೆ........ ಕನ್ನಡ ಸಾಹಿತ್ಯವನ್ನು ಪರೀಕ್ಷಿಸಿದರೆ, ಕಾವ್ಯಗಳು, ಛಂದೋಲಂಕಾರ, ವ್ಯಾಕರಣ ವಿಷಯವಾದ ಗ್ರಂಥಗಳು, ನಿಘಂಟುಗಳು ಮಾತ್ರವಲ್ಲದೆ, ಜೀವನ ಚರಿತ್ರೆ, ಸ್ಥಳೀಯ ಚರಿತ್ರೆ, ತತ್ತ್ವಶಾಸ್ತ್ರ ಇವುಗಳ ವಿಷಯವಾದ ಗ್ರಂಥಗಳೂ, ವೈದ್ಯ, ಗಣಿತ, ಜ್ಯೋತಿಷ, ಪಾಕಶಾಸ್ತ್ರ, ಕಾಮಶಾಸ್ತ್ರ ಮುಂತಾದ ವಿಷಯಗಳನ್ನು ಪ್ರತಿಪಾದಿಸುವ ಹಲವು ಗ್ರಂಥಗಳೂ ಗೋಚರವಾಗುತ್ತವೆ" ಇದರಿಂದ ಕನ್ನಡದ ಶಾಸ್ತ್ರೀಯ ಗ್ರಂಥಗಳು ಹೇರಳವಾಗಿ ಹುಟ್ಟಿವೆ, ಆದರೆ ಅವುಗಳು ಉಪಲಬ್ಧವಾಗಿಲ್ಲ ಎಂದು ಕವಿಚರಿತ್ರಕಾರರ ವಾಕ್ಯಗಳಿಂದ ವ್ಯಕ್ತವಾಗುವುದು. ಕವಿಚರಿತೆಯಲ್ಲಿ ಕ್ರಿ. ಶ. ೨ನೆಯ ಶತಮಾನದ ಆದಿಭಾಗದಲ್ಲಿದ್ದ ಸಮಂತಭದ್ರಾಚಾರ್ಯನಿಂದ ಕರ್ಣಾಟಕ ಕವಿ ಕಾಲಗಣನೆಗೆ ಆರಂಭವಾಗಿದೆ, ಆದಿಪಂಪನೂ, ಅಭಿನವಪಂಪನೂ, ಅಗ್ಗಳನೂ ಸಮಂತಭದ್ರಾಚಾರ್ಯನನ್ನು ತಂತಮ್ಮ ಗ್ರಂಥಾರಂಭದಲ್ಲಿ ಸ್ತುತಿಸಿರುವರು. ಆದ್ದರಿಂದ ಇಲ್ಲಿ ಮೊದಲು ೨೦ನೆಯ ಶತಮಾನದ ವರೆಗೆ ಕವಿಚರಿತಕಾರರ ಪ್ರಯತ್ನದಿಂದ ಪ್ರಕಾಶಕ್ಕೆ ಬಂದಿರುವ ಕನ್ನಡ ಶಾಸ್ತ್ರೀಯ ಗ್ರಂಥಗಳ ವಿಚಾರವನ್ನು ಮೊದಲು ಪ್ರಸ್ತಾವಿಸಿ, ಅನಂತರ ೨೦ನೆಯ (ಈಗಿನ) ಶತಮಾನದಲ್ಲಿ ಪ್ರಕಟವಾಗಿರುವ ಕನ್ನಡದ ಶಾಸ್ತ್ರೀಯ ಗ್ರಂಥಗಳ ವಿಚಾರವನ್ನು ಪ್ರಸ್ತಾವಿಸುವೆನು.

ಪ್ರಾಚೀನ ಕನ್ನಡದ ಶಾಸ್ತ್ರೀಯ ಗ್ರಂಥಗಳು

ಇಲ್ಲಿ ಛಂದಸ್ಸು, ವ್ಯಾಕರಣ ಅಲಂಕಾರ ಶಾಸ್ತ್ರಗಳನ್ನು ಬಿಟ್ಟು ವೈಕಾದಿ ಬೇರೆ ಶಾಸ್ತ್ರೀಯ ಪಂಥಗಳ ವಿಚಾರವನ್ನು ಮಾತ್ರ ಹೇಳಲಾಗುವುದು.

ಕ್ರಿ. ಶ. ೨ನೆಯ ಶತಮಾನದ ಸಮಂತಭದ್ರನೂ ೫ನೆಯ ಶತಮಾನದ ಪೂಜ್ಯಪಾದಾಚಾರ್ಯನೂ ವೈದ್ಯ ಗ್ರಂಥಗಳನ್ನು ರಚಿಸಿದ ಕನ್ನಡಿಗರಲ್ಲಿ ಮೊದಲಿಗರು ಎಂದು 'ಶ್ರೀ ಉಗ್ರಾದಿತ್ಯಾಚಾರ್ಯಕೃತ ಕಲ್ಯಾಣಕಾರಕ'ವೆಂಬ ವೈದ್ಯ ಗ್ರಂಥದಿಂದ ತಿಳಿದು ಬರುವುದು. ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿ, ಹಿಂದೀ ಅನುವಾದ ಸಹಿತವಾಗಿ ಕನ್ನಡ ಗಡಿನಾಡಿನ ಸೊಲ್ಲಾಪುರದಲ್ಲಿ ಸಖಾರಾಮ ನೇಮಿಚಂದ ಗ್ರಂಥಮಾಲೆಯಲ್ಲಿ (೧೯೪೦) ಪ್ರಕಟವಾಗಿದೆ. ಈ ಗ್ರಂಥಕರ್ತನು ಈಗ್ಗೆ ಸುಮಾರು ೧೧೦೦ ವರ್ಷಗಳ ಹಿಂದಣವನು ಎಂದರೆ ೯ನೆಯ ಶತಮಾನದ ಮೊದಲ ಭಾಗದವನಾಗಿ ರಾಷ್ಟ್ರಕೂಟದ ಮೊದಲನೆಯ ಅಮೋಘವರ್ಷ ನೃಪತುಂಗ ವಲ್ಲಭ ಮಹಾರಾಜಾಧಿರಾಜನ (೮೧೫–೮೭೭) ಸಭೆಯಲ್ಲಿ ಇದ್ದನೆಂದು ತಿಳಿಯುತ್ತದೆ.† ಈ ಗ್ರಂಥಕರ್ತನು ತನ್ನ ಗ್ರಂಥದಲ್ಲಿ ಹೀಗೆ ಹೇಳಿಕೊಂಡಿರುವನು.

"ಶಾಲಾಕ್ಯಂ ಪೂಜ್ಯಪಾದ ಪ್ರಕಟಿತಮಧಿಕಂ
ಶಲ್ಯತಂತ್ರಂ ಚ ಪಾತ್ರ।
ಸ್ವಾಮಿಪ್ರೋಕ್ತಂ ವಿಷೋಗ್ರ ಗ್ರಹಶಮನ ವಿಧಿಃ
ಸಿದ್ಧಸೇನೈಃ ಪ್ರಸಿದ್ಧೈಃ ।
ಕಾಯೇ ಯಾ ಸಾ ಚಿಕಿತ್ಸಾ ದಶರಥ ಗುರುಭಿರ್ಮೇಘ
ನಾದೈಃ ಶಿಶೂನಾಂ ।
ವೈದ್ಯಂ ವೃಷ್ಯಂ ಚ ದಿವ್ಯಾಮೃತಮಪಿ ಕಥಿತಂ
ಸಿಂಹನಾದೈರ್ಮುನೀಂದ್ರೈಃ ॥
ಅಷ್ಟಾಂಗ ಮಪ್ಯಖಿಲ ಮತ್ರ ಸಮಂತಭದ್ರೈಃ ಪ್ರೋಕ್ತಂ
ಸವಿಸ್ತರವಚೋವಿಭವೈರ್ವಿಶೇಷಾತ್ ।
ಸಂಕ್ಷೇಪತೋ ನಿಗದಿತಂ ತದಿಹಾತ್ಮಶಕ್ತ್ಯಾ ಕಲ್ಯಾಣ
ಕಾರಕಮಶೇಷಪದಾರ್ಥಯುಕ್ತಮ್ ॥*

ಎಂದೆ "ಪೂಜ್ಯಪಾದರು 'ಶಾಲಾಕ್ಯ-ಶಿರಾಭೇದನ'ವೆಂಬ

---

* ಕರ್ಣಾಟಕ ಕವಿಚರಿತ್ರೆ, ಸಂಪುಟ ೩, ಅವತರಣಿಕೆ ಪುಟ ೩೨

† Prof. Salatore's Medieval Jainism P. 38

* ಉಗ್ರಾದಿತ್ಯಾಚಾರ್ಯಕೃತಿ ಕಲ್ಯಾಣಕಾರಕೇ
—ಅ., ೨೦ ಶ್ಲೋಕ ೮೫–೮೬

ಗ್ರಂಥವನ್ನು ರಚಿಸಿದರು. ಪುತ್ರಸ್ವಾಮಿಯಿಂದ 'ಶಲ್ಯ ತಂತ್ರ'ವೆಂಬ ಗ್ರಂಥವು ರಚಿತವಾಯಿತು. ಸಿದ್ಧಸೇನಾ ಚಾರ್ಯನು 'ವಿಷ ಮತ್ತು ಉಗ್ರ ಗ್ರಹಗಳ ಶಮನ ವಿಧಿಗಳನ್ನು' ನಿರೂಪಿಸಿರುವನು. ದಶರಥಗುರು ಮತ್ತು ಮೇಘನಾದ ಆಚಾರ್ಯರಿಂದ ಬಾಲರೋಗ ಚಿಕಿತ್ಸಾ ಸಂಬಂಧವಾದ ಚಿಕಿತ್ಸಾಗ್ರಂಥವು ರಚಿತವಾಯಿತು. ಸಿಂಹನಾದ ಮುನೀಂದ್ರರಿಂದ ಶರೀರ ಬಲವರ್ಧಕ ಪ್ರಯೋಗಗಳು ನಿರೂಪಿತವಾಗಿರುವುವು. ಸಮಂತ ಭದ್ರಾಚಾರ್ಯನು 'ಅಷ್ಟಾಂಗ'ನಾಮಕ ಗ್ರಂಥದಲ್ಲಿ (ಈ ವಿಷಯಗಳನ್ನು) ವಿಸ್ತಾರವಾಗಿಯೂ ಗಂಭೀರವಾಗಿಯೂ ವಿವೇಚಿಸಿರುವನು. ಅದಕ್ಕನುಸಾರವಾಗಿ ನಾನು ನನ್ನ ಶಕ್ತಿಗನುಸಾರವಾಗಿ ಎಲ್ಲ ವಿಷಯಗಳನ್ನೂ ಸಂಕ್ಷೇಪವಾಗಿ ಅಡಗಿಸಿ ಈ 'ಕಲ್ಯಾಣಕಾರಕ'ವೆಂಬ ಗ್ರಂಥವನ್ನು ರಚಿಸಿರುವೆನು."—ಎಂದು ಹೇಳಿಕೊಂಡಿದ್ದಾನೆ. ಆದ್ದರಿಂದ ೯ನೆಯ ಶತಮಾನಕ್ಕೆ ಹಿಂದೆಯೆ ಅನೇಕ ಜೈನ ವೈದ್ಯಕೀಯ ಗ್ರಂಥಗಳು ರಚಿತವಾಗಿದ್ದವೆಂದು ವ್ಯಕ್ತವಾಗುವುದು. ಕವಿಚರಿತೆಯಿಂದ ಸಮಂತ ಭದ್ರಾಚಾರ್ಯನ ಕಾಲವು ೨ನೆಯ ಶತಮಾನವೆಂದೂ ಪೂಜ್ಯಪಾದರ ಕಾಲವು ೫ನೆಯ ಶತಮಾನವೆಂದೂ ತಿಳಿದುಬರುತ್ತದೆ.† ಅದೇ ೫ನೆಯ ಶತಮಾನದಲ್ಲಿ ಸಿದ್ಧನಾಗಾರ್ಜುನನೆಂಬ ಮತ್ತೊಬ್ಬ ಜೈನ ವೈದ್ಯಗ್ರಂಥ ಕರ್ತನು ಲೋಹದಿಂದ ಬಂಗಾರ ಮಾಡುವ "ಕಿಮಿಯಾ ವಿದ್ಯೆ"ಯನ್ನು ಪ್ರಕಟಿಸಿದನೆಂದು ಡಾ। ಪಿ. ಸಿ. ರಾಯ್ ಅವರು ತಮ್ಮ "ಹೈಂದವ ರಸಾಯನ ಶಾಸ್ತ್ರದ ಇತಿಹಾಸ" ಎಂಬ ಗ್ರಂಥದಲ್ಲಿ ಬರೆದಿರುವರು. ಅನೇಕ ರಸಾಯನ ಮತ್ತು ವೈದ್ಯಶಾಸ್ತ್ರ ಗ್ರಂಥಗಳು ನಾಗಾರ್ಜುನನ ಹೆಸರಿನಲ್ಲಿ ಪ್ರಕಟವಾಗಿರುವುವು. ಬೌದ್ಧಧರ್ಮದ ಮಹಾಯಾನ ಪಂಥ ಪ್ರಚಾರಕನಾದ ಮತ್ತೊಬ್ಬ ನಾಗಾರ್ಜುನನು ಕ್ರಿ. ಶ. ಮೂರನೆಯ ಶತಮಾನದಲ್ಲಿ ಶಾಲಿವಾಹನನ (ಸುತವಾಹನನ) ಸಮಕಾಲೀನನಾಗಿ, "ರಸಸಿದ್ಧಿಯ ಪಡೆದು" 'ಕಿಮಿಯಾ ವಿದ್ಯೆ'ಯನ್ನು ಪ್ರಕಟಿಸಿದನೆಂದು ಇತಿಹಾಸದಿಂದ ತಿಳಿದುಬರುವುದು.§

ಆದ್ದರಿಂದ ಬೇರೆ ನಾಗಾರ್ಜುನರ ಗ್ರಂಥಗಳ ವಿಚಾರವು ವಿವಾದಾಸ್ಪದವಾಗಿದೆ. ಆದರೆ ಪೂಜ್ಯಪಾದರ ಬಳಿಕ ಅನೇಕ ಜೈನ ವೈದ್ಯಗ್ರಂಥಕಾರರು ಆಗಿ ಹೋದರೆಂಬುದರಲ್ಲಿ ಸಂಶಯವಿಲ್ಲ. ಪೂಜ್ಯಪಾದರ ಹೆಸರನ್ನು 'ಬಸವರಾಜೀಯ'ವೆಂಬ ವೈದ್ಯಗ್ರಂಥದಲ್ಲಿ ಅಲ್ಲಲ್ಲಿ ಔಷಧಿಯೋಗಗಳ ಅಂತ್ಯದಲ್ಲಿ—"ಮನುಷ್ಯಾಣಾಂ ಹಿತಾರ್ಥಂ ಹಿ ಪೂಜ್ಯಪಾದೇನ ನಿರ್ಮಿತಃ ॥........ಪೂಜ್ಯಪಾದ ಕೃತೋಯೋಗೋ ನರಾಣಾಂ ಹಿತಕಾಮ್ಯಯಾ॥" ಮುಂತಾಗಿ ಹೊಗಳಲಾಗಿದೆ.

ಜಗದ್ದಳ ಸೋಮನಾಥನೆಂಬಾತನು ಪೂಜ್ಯಪಾದ ಕೃತ "ಕಲ್ಯಾಣಕಾರಕ"ವೆಂಬ ಗ್ರಂಥವನ್ನು ಕನ್ನಡ ಭಾಷೆಗೆ ಪರಿವರ್ತಿಸಿದನು. ಇದು ಕರ್ಣಾಟಕ ವೈದ್ಯ ಗ್ರಂಥಗಳಲ್ಲಿ ಬಹು ಪ್ರಾಚೀನವಾದುದೆಂದು ಹೇಳಲಾಗಿದೆ. ಆ ಗ್ರಂಥದಲ್ಲಿ ಸೋಮನಾಥನು ಹೀಗೆ ಹೇಳಿರುವಂತೆ ಪ್ರಕಟವಾಗಿದೆ:—

ಸುಕರಂ ತಾನೆನೆ ಪೂಜ್ಯಪಾದ ಮುನಿಗಳು ಮುಂಪೇಳ್ದ
ಕಲ್ಯಾಣ ಕಾ ।
ರಕಮಂ ಬಾಹಟಸಿದ್ಧಸಾರ ಚರಕಾದ್ಯುತ್ಕೃಷ್ಟಮಂ
ಸದ್ಗುಣಾ ।
ಧಿಕಮಂ ವರ್ಜಿತ ಮದ್ಯಮಾಂಸ ಮಧುವಂ ಕರ್ಣಾ
ಟದಿಂ ಲೋಕ ರ ।
ಕ್ಷಕಮಾ ಚಿತ್ರಮದಾಗೆ ಚಿತ್ರಕವಿ ಸೋಮಂ
ಪೇಳ್ದನಿಂತಳ್ತಿಯಿಂ ॥"+

ಇದರಿಂದ ಜೈನ ವೈದ್ಯಶಾಸ್ತ್ರಕಾರರು ಚರಕಾದಿಗಳಿಂದ ಪ್ರತ್ಯೇಕವಾಗಿ, ಅಹಿಂಸಾಧರ್ಮಕ್ಕನುಸಾರವಾದುದೊ ಎಂಬಂತೆ ತಮ್ಮದೇ ಆದ ಒಂದು ಕ್ರಮವನ್ನನುಸರಿಸಿ 'ಮದ್ಯ ಮಾಂಸ ಮಧುಗಳ ಪ್ರಯೋಗವಿಲ್ಲದೆ ಇರುವ ಚಿಕಿತ್ಸಾಗ್ರಂಥಗಳನ್ನು' ರಚಿಸಿರುವರೆಂದು ವ್ಯಕ್ತವಾಗುವುದು. ಆದರೆ ಆ ಗ್ರಂಥಗಳ ಪ್ರತಿಗಳು ಎಲ್ಲಿರುವವೊ ಎಂಬುದು ಕೂಡ ತಿಳಿಯದಂತಾಗಿದೆ. ಜೈನರಲ್ಲಿ ಶ್ರೀಮಂತರಾದ ಧರ್ಮಾಭಿಮಾನಿಗಳು ಹಲವರಿದ್ದಾರೆ. ಅವರು ತಮ್ಮ ಧರ್ಮ ಪ್ರಚಾರ ದೃಷ್ಟಿಯಿಂದಲಾದರೂ ಆ ಗ್ರಂಥಗಳನ್ನು ಹುಡುಕಿಸಿ ತೆಗೆದು ಪ್ರಕಟಿಸಿದರೆ ಲೋಕೋಪಕಾರ

† ಕರ್ಣಾಟಕ ಕವಿಚರಿತೆ, ಭಾಗ ೧, ಪುಟ ೧, ಮತ್ತು ೫.

§ History of Hindu Chemistry by Sir P. C. Ray, D. Sc., Ph D, Vol II. Introduction P. xxiii.

+ ಸೊಲ್ಲಾಪುರದ ಸೇಠ ಗೋವಿಂದಜಿ ರಾವಜಿ ದೋಶಿ ಪ್ರಕಾಶಿತ 'ಉಗ್ರಾದಿತ್ಯಾಚಾರ್ಯಕೃತ ಕಲ್ಯಾಣಕಾರಕ' (ಹಿಂದೀ ಅನುವಾದ ಸಹಿತ—ಸಂಪಾದಕೀಯ ವಕ್ತವ್ಯ—ಪುಟ ೪೦.

ದೊಂದಿಗೆ, ಜೈನಧರ್ಮ ಜ್ಯೋತಿಯೂ ಪ್ರಜ್ವಲಿಸುವಂತಾಗುವುದು.

ಇದುವರೆಗೆ ಹೇಳಿರುವ ಸಂಗತಿಗಳಿಂದ 'ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳು ಹೇರಳವಾಗಿ ಹುಟ್ಟಿವೆ, ಆದರೆ ಅವುಗಳು ಉಪಲಬ್ಧವಾಗಿಲ್ಲ' ಎಂದು ಕವಿಚರಿತ್ರೆಕಾರರ ವಾಕ್ಯಗಳನ್ನು ಸಮರ್ಥಿಸಬಹುದಾಗಿದೆ. ಆದಾಗ್ಯೂ ಉಪಲಬ್ಧವಾಗಿರುವ ಗ್ರಂಥಗಳನ್ನು ಮಾತ್ರ ಅವುಗಳ ರಚನೆಯ ಕಾಲಕ್ರಮಕ್ಕನುಸಾರವಾಗಿ ಇಲ್ಲಿ ಉಲ್ಲೇಖಿಸಿ, ಈಗ ನಡೆಯುತ್ತಿರುವ ೨೦ನೆಯ ಶತಮಾನದಲ್ಲಿ ಕನ್ನಡ ಶಾಸ್ತ್ರೀಯ ಗ್ರಂಥಗಳ ಪ್ರಕಟನೆಯು ಹೇಗೆ ಶೀಘ್ರಗತಿಯಿಂದ ಮುಂದರಿಯುತ್ತಿದೆ ಎಂದು ಇಲ್ಲಿ ಸೂಚಿಸಲಾಗುವುದು.

ಭರತಖಂಡದಲ್ಲಿ ಹಲವಾರು ಬಗೆಯ ವೈಜ್ಞಾನಿಕ ಗ್ರಂಥಗಳು ಕ್ರಿಸ್ತಶಕಕ್ಕೆ ಬಹು ಹಿಂದಿನ ಕಾಲದಲ್ಲಿಯೆ ರಚಿತವಾಗಿದ್ದವು. ಅವುಗಳೆಲ್ಲ ಸಾಮಾನ್ಯವಾಗಿ ಸಂಸ್ಕೃತ ಭಾಷೆಯಲ್ಲಿಯೆ ರಚಿತವಾಗಿದ್ದುದರಿಂದ ಸಂಸ್ಕೃತ ಭಾಷಾಜ್ಞಾನವುಳ್ಳವರು ಮಾತ್ರ ಆ ಗ್ರಂಥಗಳಿಂದ ಪ್ರಯೋಜನ ಪಡೆಯುತ್ತಿದ್ದರು. ಕ್ರಿಸ್ತಶಕಾರಂಭವಾದ ಬಳಿಕ ದೇಶದ ನಾನಾ ಭಾಗಗಳಲ್ಲಿ ಪ್ರಚಲಿತವಾಗಿದ್ದ ಭಾಷೆಗಳಲ್ಲಿ ಗ್ರಂಥರಚನೆಗೆ ಆರಂಭವಾಗಿರಬಹುದೆಂದು ಊಹಿಸಬಹುದಾಗಿದೆ. ಆ ದೃಷ್ಟಿಯಿಂದ ನಾವು ಈಗ ಕವಿಚರಿತ್ರಕಾರರ ಗ್ರಂಥಾಧಾರದಿಂದ ಕನ್ನಡದ ಶಾಸ್ತ್ರೀಯ ಗ್ರಂಥಗಳ ಕಾಲವನ್ನು ಪ್ರಥಮಕಾಲ (೧ರಿಂದ ೧೪ ಶತಮಾನಗಳು), ಮಧ್ಯಕಾಲ (೧೫ರಿಂದ ೧೭ನೆಯ ಶತಮಾನ) ಆಧುನಿಕ ಕಾಲ (೧೮ನೆಯ ಶತಮಾನಾರಂಭದಿಂದ ಇಂದಿನ ವರೆಗೆ)—ಎಂದು ಮೂರು ಭಾಗವಾಗಿ ವಿಂಗಡಿಸಿಕೊಳ್ಳಬಹುದು.

ಪ್ರಥಮಕಾಲ ಮೊದಲಿನ ೧೪ ಶತಮಾನಗಳು

ಭಾರತೀಯರ ಜೀವನ ತತ್ವಶಾಸ್ತ್ರದ ಕಡೆ ಒಲವುಳ್ಳುದು. ಆದ್ದರಿಂದ ಭಾರತೀಯವಾದ ಯಾವ ಭಾಷೆಯಲ್ಲಿಯೇ ಆಗಲಿ ತತ್ತ್ವಶಾಸ್ತ್ರ ಗ್ರಂಥಗಳೂ ಗ್ರಂಥಕಾರ ಸಂಖ್ಯೆಯೂ ಅಗಣಿತವಾಗಿರುವುದರಿಂದ ಇಲ್ಲಿ ತತ್ವಶಾಸ್ತ್ರವನ್ನುಳಿದು ಮಿಕ್ಕ ಶಾಸ್ತ್ರೀಯ ಗ್ರಂಥಗಳ ಗ್ರಂಥಕಾರರ ವಿಚಾರವನ್ನು ಮಾತ್ರ ಪ್ರಸ್ತಾವಿಸಲಾಗುವುದು.

ಕನ್ನಡ ಸಾಹಿತ್ಯದಲ್ಲಿ ಉಪಲಬ್ಧ ಚಾರಿತ್ರಿಕ ಅಶಂಗಳಿಂದ ೨ನೆಯ ಶತಮಾನದ ಸಮಂತಭದ್ರಾಚಾರ್ಯನು ಮೊದಲನೆಯ ಶಾಸ್ತ್ರೀಯ ಗ್ರಂಥಕಾರನೆಂದು ತಿಳಿದುಬರುವುದು. ಈತನು "ಅಷ್ಟಾಂಗನಾಮಕ" ವೈದ್ಯಗ್ರಂಥವನ್ನು ರಚಿಸಿರುವನೆಂದು ಇತರ ಗ್ರಂಥಕಾರರ ಹೇಳಿಕೆಯಿಂದ ತಿಳಿದುಬರುವುದು. ಅನಂತರ ೫ನೆಯ ಶತಮಾನದಲ್ಲಿ ಪೂಜ್ಯಪಾದಾಚಾರ್ಯನು ವೈದ್ಯಶಾಸ್ತ್ರದಲ್ಲಿ ಪ್ರವೀಣನಾಗಿ 'ಕಲ್ಯಾಣಕಾರಕ'ವೆಂಬ ಗ್ರಂಥವನ್ನು ರಚಿಸಿದನು. ಈ ಗ್ರಂಥವು ಈಗ ಉಪಲಬ್ಧವಾಗಿಲ್ಲ. ಮತ್ತೆ ಈತನು ಜೈನೇಂದ್ರ ವ್ಯಾಕರಣಸೂತ್ರವೆಂಬ ಗ್ರಂಥವನ್ನೂ ರಚಿಸಿರುವಂತೆ ತಿಳಿದುಬರುತ್ತದೆ. 'ಈತನಿಗೆ ಮೊದಲು ದೇವನಂದಿ ಎಂಬ ಹೆಸರು ಇದ್ದಿತು. ತರುವಾಯ ಬುದ್ಧಿ ಮಹಾತ್ಮ್ಯದಿಂದ ಜಿನೇಂದ್ರಬುದ್ಧಿ ಎಂಬ ನಾಮಧ್ಯೇಯವು ಉಂಟಾಯಿತು. ಬಳಿಕ ವನದೇವತೆಗಳಿಂದ ಈತನ ಪಾದಗಳು ಪೂಜಿಸಲ್ಪಟ್ಟುದರಿಂದ 'ಪೂಜ್ಯಪಾದ' ಎಂಬ ಹೆಸರು ಬಂದಿತು. ಈತನ ಪಾದತೀರ್ಥ ಸ್ಪರ್ಶದಿಂದ ಕಬ್ಬಿಣವು ಚಿನ್ನವಾಯಿತು. ಈತನು ಪೂರ್ವ ವಿದೇಹಕ್ಕೆ ಹೋಗಿ ಜಿನದರ್ಶನ ಮಾಡಿದನು" ಎಂದು ಶ್ರವಣಬೆಳಗೊಳದ ಶಾಸನಗಳಿಂದ ತಿಳಿದುಬರುವುದು.* ಚಾವುಂಡರಾಯ (೯೭೮), ವೃತ್ತವಿಲಾಸ (ಸು ೧೧೬೦). ನೇಮಿಚಂದ್ರ (ಸು ೧೧೭೦) ಮೊದಲಾದ ಕವಿಗಳು ಈತನನ್ನು ಸ್ತುತಿಸಿ ಬರೆದಿರುವ ಪದ್ಯಗಳಿಂದ ಈತನು ಸಕಲಶಾಸ್ತ್ರ ನಿಪುಣನಾಗಿ ವೈದ್ಯ, ವ್ಯಾಕರಣ, ತತ್ತ್ವಾದಿ ಶಾಸ್ತ್ರೀಯ ಗ್ರಂಥಗಳನ್ನು ರಚಿಸಿರುವಂತೆ ಕಂಡುಬರುವುದು. ಆದರೆ ಈತನ ಗ್ರಂಥಗಳು ಸಂಸ್ಕೃತದಲ್ಲಿ ರಚಿತವಾದುವೊ ಕನ್ನಡದಲ್ಲಿ ರಚಿತವಾದುವೊ ಎಂದು ಸ್ಪಷ್ಟವಾಗಿ ತಿಳಿಯುವಂತಿಲ್ಲ. ೧೦ನೆಯ ಶತಮಾನದ (ಸು. ೯೯೦) ನಾಗವರ್ಮ I ಎಂಬಾತನು 'ಛಂದೊಂಬುಧಿ' ಎಂಬ ಛಂದಶ್ಶಾಸ್ತ್ರ ಗ್ರಂಥವನ್ನು ಕನ್ನಡದಲ್ಲಿ ರಚಿಸಿದನು. ಆತನ ಬಳಿಕ ೧೨ನೆಯ ಶತಮಾನದಲ್ಲಿ ಮತ್ತೊರ್ವ ನಾಗವರ್ಮ II ಕವಿಯು (ಸು ೧೧೪೫) 'ಕಾವ್ಯಾವಲೋಕ'ನವೆಂಬ ಅಲಂಕಾರ ಶಾಸ್ತ್ರಗ್ರಂಥವನ್ನೂ, 'ಕರ್ಣಾಟಕ ಭಾಷಾಭೂಷಣ'ವೆಂಬ ಕನ್ನಡ ಭಾಷೆಯ ವ್ಯಾಕರಣ ಗ್ರಂಥವನ್ನೂ 'ವಸ್ತುಕೋಶ'ವೆಂಬ ಕನ್ನಡದಲ್ಲಿ ಉಪಯೋಗಿಸುವ ಸಂಸ್ಕೃತ ಪದಗಳಿಗೆ ಅರ್ಥವನ್ನು ಹೇಳುವ ಪದ್ಯರೂಪ

---

*ಕರ್ಣಾಟಕ ಕವಿಚರಿತೆ ಸಂಪುಟ ೧, ಪುಟ ೬

ವಾದ ಸಂಸ್ಕೃತ ಕರ್ಣಾಟಕ ನಿಘಂಟನ್ನೂ ರಚಿಸಿ, ಮೊಟ್ಟಮೊದಲು ಕನ್ನಡದಲ್ಲಿ ಈ ಶಾಸ್ತ್ರಗಳ ವಿಚಾರವಾಗಿ ಬರೆದ ಆದ್ಯ ಗ್ರಂಥಕಾರನೆಂಬ ಕೀರ್ತಿಯನ್ನು ಗಳಿಸಿರುವನು. ಆತನ ಬಳಿಕ ಕೇಶಿರಾಜನು 'ಶಬ್ದಮಣಿದರ್ಪಣ'ವನ್ನು ಭಟ್ಟಾಕಳಂಕನು (೧೬೦೪) 'ಶಬ್ದಾನುಶಾಸನ'ವೆಂಬ ದೊಡ್ಡ ವ್ಯಾಕರಣ ಗ್ರಂಥಗಳನ್ನೂ ಬರೆದಿರುವರು.

ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳ ರಚನೆಗೆ ೧೨ನೆಯ ಶತಮಾನವೇ ಮೊದಲೆಂದು ಉಪಲಬ್ಧ ಗ್ರಂಥಗಳ ದೃಷ್ಟಿಯಿಂದ ಹೇಳಬಹುದಾಗಿದೆ. ರಾಜಾದಿತ್ಯನೆಂಬ ಜೈನಕವಿಯು (ಸು ೧೧೨೦) 'ವ್ಯವಹಾರ ಗಣಿತ' 'ಕ್ಷೇತ್ರಗಣಿತ' 'ವ್ಯವಹಾರ ರತ್ನ' 'ಲೀಲಾವತಿ' 'ಚಿತ್ರಹಸುಗೆ' 'ಜೈನಗಣಿತಸೂತ್ರ ಟೀಕೋದಾಹರಣ' ಮೊದಲಾದ ಗಣಿತಶಾಸ್ತ್ರ ಗ್ರಂಥಗಳನ್ನು ರಚಿಸಿದನು. ಕನ್ನಡದಲ್ಲಿ ಗಣಿತಶಾಸ್ತ್ರವನ್ನು ಬರೆದಿರುವ ಕವಿಗಳಲ್ಲಿ ಇವನೇ ಮೊದಲನೆಯವನು. ಈತನು ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಪ್ರಾಯಶಃ ಎಲ್ಲ ವಿಷಯಗಳನ್ನೂ ತನ್ನ ಗ್ರಂಥದಲ್ಲಿ ತಕ್ಕ ಮಟ್ಟಿಗೆ ಪ್ರತಿಪಾದಿಸಿದ್ದಾನೆ. ಈ ಶಾಸ್ತ್ರವನ್ನು ಜನಗಳಿಗೆ ಸುಬೋಧವಾಗುವಂತೆ ಪದ್ಯರೂಪವಾಗಿ ಬರೆವುದು ಕಷ್ಟ. ಆದರೂ ಈ ಕವಿ ಸೂತ್ರಗಳನ್ನೂ ಉದಾಹರಣೆಗಳನ್ನೂ ಬಹಳ ಲಲಿತವಾದ ಪದ್ಯಗಳಲ್ಲಿ ಚೆನ್ನಾಗಿ ಅವಗಾಹನವಾಗುವಂತೆ ಬರೆದಿದ್ದಾನೆ. ಇದರಿಂದ ಈತನಿಗೆ ಗಣಿತಶಾಸ್ತ್ರದ ಪ್ರವೀಣತೆಯೆ ಅಲ್ಲದೆ, ಕವಿತಾಪ್ರೌಢಿಮೆಯೂ ಉಂಟೆಂಬುದು ವ್ಯಕ್ತವಾಗುತ್ತದೆ* ಈತನ ವ್ಯವಹಾರ ಗಣಿತದಿಂದ ಇಲ್ಲಿ ಒಂದು ಸೂತ್ರವನ್ನು ಉದಾಹರಿಸುವೆವು. 'ದಾಳಿಂಬದ ಬೀಜಸಂಖ್ಯೆಯನರಿವುದಕ್ಕೆ ಸೂತ್ರ'

ಎಸಳಿನಿರಿದೆತ್ತು ನಯದಿಂ । ರಸಕೃತಿಯಿಂ ಬೀಜ
ವಕ್ಕುಮುವು ದಾಳಿಂಬ ।
ಕ್ಕೆಸಗುಂ ಗುಣಿತಕ್ರಮದಿಂ । ವಸುಮತಿಗರಿವಂತೆ
ಪೇಳಿಗಣಿತ ವಿಲಾಸ ॥

ದಾಳಿಂಬದ ಕಾಯ್ ೧ಕ್ಕೆ ಎಸಳು ೫ಕ್ಕೆ ಲಬ್ಧ ಬೀಜ ೩೬೦. ಟೀ ಎಸಳ್ ೫ನು ೨ರಿಂ ಗುಣಿಸಿದೊಡೆ ೧೦. ರಸ ಕೃತಿಯಿಂದೆ ವರ್ಗಂಗೊಳಲು ೩೬. ಇದಂ ೧೦ ರಿಂ ಗುಣಿಸಲು ೩೬೦.

'ಕೀರ್ತಿವರ್ಮ'ನೆಂಬ ಜೈನ ಕವಿಯು (ಸು. ೧೧೨೫) 'ಗೋವೈದ್ಯ'ವೆಂಬ ಗ್ರಂಥವನ್ನು ಬರೆದು ಅದರಲ್ಲಿ ಗೋಗಳ ವ್ಯಾಧಿಗಳಿಗೆ ಔಷಧ, ಯಂತ್ರ, ಬರೆ ಹಾಕುವ ಕ್ರಮಗಳನ್ನು ವಿಸ್ತಾರವಾಗಿ ಹೇಳಿರುವನು. ವೀರಶೈವ ಮತೋದ್ಧಾರಕನೆನಿಸಿದ ಶ್ರೀ ಬಸವೇಶ್ವರನು (ಸು. ೧೧೬೦) 'ಷಟಚಕ್ರದ ವಚನ' 'ಮಂತ್ರಗೋಪ್ಯ' 'ರಾಜಯೋಗದ ವಚನ' ಎಂಬ ಯೋಗ ಶಾಸ್ತ್ರೀಯ ವಿಚಾರದ ಗ್ರಂಥಗಳನ್ನು ರಚಿಸಿದನು. ಬಾಳಚಂದ್ರನೆಂಬ ಕವಿಯು (೧೨೭೩) ದ್ರವ್ಯಸಂಗ್ರಹ ಸೂತ್ರಕ್ಕೆ ಕರ್ಣಾಟಕ ಟೀಕೆಯನ್ನು ಬರೆದಿರುವನು. ೧೩ನೆಯ ಶತಮಾನದ ಪ್ರಾರಂಭದಲ್ಲಿದ್ದಿರಬಹುದೆಂದು ಊಹಿಸಲಾಗಿರುವ ಅಟ್ಟಕವಿ ಅಥವಾ ಅರ್ಹದಾಸನೆಂಬ ಕವಿಯು 'ಅಟ್ಟಮತ ಅಥವಾ ಅಟ್ಟಸೂತ್ರ'ವೆಂಬ ಗ್ರಂಥವನ್ನೂ ರಚಿಸಿದನು. ಇದರಲ್ಲಿ—"ಮಳೆಯ ಕುರುಹು ಆಕಸ್ಮಿಕಲಕ್ಷಣ, ಶಕುನ, ವಾಯುಚಕ್ರ, ಗೋಪ್ರವೇಶ, ಭೂಕಂಪ, ಭೂಜಾತ ಫಲ, ಮಳೆಯ ನಯ, ಉತ್ಪಾತ ಲಕ್ಷಣ, ಇಂದ್ರಧನುಲಕ್ಷಣ, ಪ್ರಥಮ ಗರ್ಭಲಕ್ಷಣ, ದ್ರೋಣ ಸಂಖ್ಯೆ, ಮಿಂಚಿನ ಲಕ್ಷಣ, ಪ್ರತಿಸೂರ್ಯ ಲಕ್ಷಣ, ಸಂವತ್ಸರ ಫಲ, ಮೇಘಗಳ ನಾಮ ಕುಲ ವರ್ಣ ಧ್ವಾನ ವಿಚಾರ, ರಾಹುಚಕ್ರ, ನಕ್ಷತ್ರಫಲ, ಬಪ್ಪುವ ಶಕುನ, ಉದಕಾರ್ಗಳ, ಸಂಕ್ರಾಂತಿ ಫಲ' ಮೊದಲಾದ ವಿಷಯಗಳು ಪ್ರತಿಪಾದಿತವಾಗಿರುವುವು.

೧೪ನೆಯ ಶತಮಾನ ಮಧ್ಯಭಾಗದಲ್ಲಿ ಮಂಗರಾಜ I (ಸು. ೧೩೬೦) ಎಂಬ ಜೈನ ಕವಿಯು 'ಖಗೇಂದ್ರಮಣಿದರ್ಪಣ'ವೆಂಬ ವಿಷವೈದ್ಯ ಗ್ರಂಥವನ್ನು ಕಂದ ವೃತ್ತ ರೂಪದಲ್ಲಿ ಬರೆದನು. ಈ ವೈದ್ಯ ಗ್ರಂಥವನ್ನು ಬರೆದುದರ ಕಾರಣವನ್ನೂ ವೈದ್ಯವು ಮೋಕ್ಷಸಾಧಕವೆಂಬಂಶವನ್ನೂ, ಶೃಂಗಾರಾದಿರಸಪ್ರತಿಪಾದಕ ಗ್ರಂಥಗಳಿಂದ ಸರ್ವಜನೋಪಕಾರಕ ಶಾಸ್ತ್ರಗ್ರಂಥಗಳನ್ನೂ ರಚಿಸುವವನೆ ದೇವರೆಂದೂ ಈ ಪದ್ಯಗಳಲ್ಲಿ ಹೇಳಿರುವನು.

ಮದನಂ ಗಾಳಿಯು ದೂಳಿಯುಂ ರಜಸಿಯುಂ
ನೀರಾಟವುಂ ಬೇಟವುಂ ।
ಸುರರಂ ಸೂಳೆಯರಂ ವಿಟಾಟವಿಕರಂ ಕೊಂಡಾಡಿ
ಬೆಂಡಾಗದೀ ॥
ಧರೆಯೊಳ್ ಸರ್ವಜನೋಪಕಾರಮೆನಲೀ
ಮಂತ್ರೌಷಧ ವ್ರಾತಮುಂ ।
ನಿರುತಂ ಭಾವಿಸಿ ಪೇಳ್ವ ಮಾನವನೆ ತಾಂ ದೇವಂ
ಧರಾಚಕ್ರದೊಳ್ ॥

*ಕವಿಚರಿತೆ ಸಂಪುಟ ೧ ಪುಟ ೧೦೩

ಎಂದಶೇಷ ಬುಧಜನೋಪಕಾರಾರ್ಥಂ ಸ್ಥಾವರಜಂಗಮ ಕೃತ್ರಿಮಪ್ರಭೃತಿ ನಾನಾ ವಿಷಾಪಹರಣಕಾರಣಮಪ್ಪ ಗ್ರಂಥ ಮಂ ಪೇಳಲೊಡರ್ಚಿದೆಂ.

ನರರ್ಗರುಜತೆ ಭೇಷಜದಿಂ । ದರುಜತೆಯಿಂ
ದೇಹ ದೇಹದಿಂದಂ ಜ್ಞಾನಂ
ಪರಮ ಜ್ಞಾನದೆ ಮೋಕ್ಷಂ । ದೊರೆಕೊಳ್ಗುಮದೆಂದು
ಪೇಳ್ದೆಸೆಂ ಭೇಷಜಂ ॥

ಈ ಗ್ರಂಥದಲ್ಲಿ ಸ್ಥಾವರವಿಷ, ಜಂಗಮವಿಷ, ಸಂಗ್ರಹಾದ್ಯಷ್ಟವಿಧ ಗಾರುಡಮಂತ್ರಾಧಿಕಾರಂ, ನಿರ್ವಿಷಪಾನಾಧಿಕಾರಂ, ಸಪ್ತಧಾತುಗಳ ವಿಷಲಕ್ಷಣ ಚಿಕಿತ್ಸಾ ವಿವರಣಂ, ಅಂಜನ ಪ್ರಕರಣಂ, ಸಸ್ಯ ಪ್ರಕರಣಂ ಲೇಪ, ಮಂಡಲಸರ್ಪ, ವೃಶ್ಚಿಕ, ಮೂಷಿಕ ವಿಷ ಪ್ರವರಣ, ಸರ್ವ ಜಂಗಮ ವಿಷಮ ವಿಷ ಚಿಕಿತ್ಸಾ ವಿವರಣಂ, ಕೃತ್ರಿಮ ವಿಷ ಚಿಕಿತ್ಸೆಗಳು, ಬಾಷ್ಪ ಚಿಕಿತ್ಸಾಂಗಗಳು ಸಾಂಗವಾಗಿ ವಿವರಿಸಲ್ಪಟ್ಟಿವೆ. ಈಚೆಗೆ ಈ ಅಮೌಲ್ಯವಾದ ಗ್ರಂಥವನ್ನು ಮದ್ರಾಸ್ ವಿಶ್ವವಿದ್ಯಾನಿಲಯದ ಕರ್ಣಾಟಕ ಗ್ರಂಥಮಾಲೆಯ ೯ನೆಯ ಗ್ರಂಥವಾಗಿ ಮದ್ರಾಸ್ ವಿಶ್ವವಿದ್ಯಾನಿಲಯದವರು (೧೯೪೨) ರಲ್ಲಿ ಪ್ರಕಟಿಸಿರುವರು. ಈ ಕವಿಯ ಬಳಿಕ ೧೪ನೆಯ ಶತಮಾನದ ಅಂತ್ಯಭಾಗದಲ್ಲಿ ಅಭಿನವಚಂದ್ರ ಎಂಬ ಜೈನ ಬ್ರಾಹ್ಮಣ ಕವಿಯು "ಅಶ್ವವೈದ್ಯ"ವೆಂಬ ಗ್ರಂಥವನ್ನು ಬರೆದನು (ಸು. ೧೪೦೦) ಈ ಗ್ರಂಥವು ವಿಶೇಷವಾಗಿ ಕಂದ ಪದ್ಯಗಳಿಂದ ಲಲಿತವಾದ ಬಂಧದಲ್ಲಿ ರಚಿತವಾಗಿರುವುದು; ಇದರಲ್ಲಿ ಕುದುರೆಗಳ ಸರ್ವಾಂಗ ಪರೀಕ್ಷೆ, ವರ್ಣ, ಸುಳಿ, ಹಲ್ಲಿನಿಂದ ವಯಸ್ಸನ್ನು ನಿರ್ಣಯಿಸುವುದು, ಹಯವಯೋಲಕ್ಷಣ, ಪೋಷಣವಿಧಿ, ಚಿಕಿತ್ಸಾದಿ ವಿಷಯಗಳನ್ನು ಹೇಳಿದೆ.

ಮಧ್ಯಕಾಲ (೧೫, ೧೬, ೧೭ನೆಯ ಶತಮಾನಗಳು)

ಈ ಮಧ್ಯಕಾಲ ಸುಮಾರು ೨೨ ಕನ್ನಡ ಶಾಸ್ತ್ರೀಯ ಗ್ರಂಥಗಳು ರಚಿತವಾದಂತೆ ತಿಳಿದುಬರುವುದು. ಸ್ಥಳಾಭಾವದಿಂದ, ವಿಶೇಷ ವಿವರಣೆಗಳಿಲ್ಲದೆ ಅವುಗಳ ಹೆಸರು, ಗ್ರಂಥಕರ್ತರ ಹೆಸರು, ಪ್ರತಿಪಾದಿತ ವಿಷಯ, ಕಾಲಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗುವುದು.

೧೫ನೆಯ ಶತಮಾನಕ್ಕೆ ಹಿಂದಿನ ಗ್ರಂಥಗಳು

ಜಾತಕತಿಲಕ — ಶ್ರೀಧರಾಚಾರ್ಯ ೧೫ನೆಯ ಶತಮಾನಕ್ಕೆ ಹಿಂದಿನವನು, ಸು. ೧೦೪೯ರಲ್ಲಿ ಈ ಗ್ರಂಥ ರಚಿತವಾದುದು. ಇದು ಜ್ಯೋತಿಷಗ್ರಂಥ. ಕರ್ಣಾಟಕ ಕಲ್ಯಾಣಕಾರಕ* ಜಗದ್ದಳ ಸೋಮನಾಥ, ಜೈನ ಕವಿ. ಇದು ವೈದ್ಯಗ್ರಂಥ. ಇದು ಪೂಜ್ಯಪಾದಕೃತ ಕಲ್ಯಾಣಕಾರಕದ ಭಾಷಾಂತರ. ಇದರಲ್ಲಿ 'ಮದ್ಯಮಾಂಸ ಮಧು ವರ್ಜಿತ' ಚಿಕಿತ್ಸೆಗಳನ್ನು ಹೇಳಲಾಗಿದೆ ಎಂದು ಕವಿಯು ಹೇಳಿರುವನು. (ಕಾಲ ಸು. ೧೧೫೦) ಕೀರ್ತಿವರ್ಮನ 'ಗೋವೈದ್ಯ'ವನ್ನು ಬಿಟ್ಟರೆ ಈ ಗ್ರಂಥವೆ ಕನ್ನಡ ವೈದ್ಯಗ್ರಂಥಗಳಲ್ಲಿ ಪುರಾತನವಾದುದೆಂದು ಕವಿಚರಿತಕಾರರು ಹೇಳಿರುವರು. ಅಕಾರಾದಿ ವೈದ್ಯನಿಘಂಟು—ಅಮೃತನಂದಿ ಎಂಬ ಜೈನಕವಿ—ಈ ನಿಘಂಟುವಿನಲ್ಲಿ ಸಂಸ್ಕೃತ ಪದಗಳಿಗೆ ಕನ್ನಡ ಪರ್ಯಾಯ ಶಬ್ದಗಳನ್ನು ಹೇಳಲಾಗಿದೆ. (ಸು. ೧೩೦೦)

೧೫ನೆಯ ಶತಮಾನದ ಗ್ರಂಥಗಳು—(೧) ವಿವೇಕಚಿಂತಾಮಣಿ—ನಿಜಗುಣ ಶಿವಯೋಗಿಕೃತ. ಈತನು ಅರಸಾಗಿದ್ದು ಬಳಿಕ ವಿರಕ್ತನಾಗಿ ಶಿವಯೋಗ ತತ್ಪರನಾಗಿದ್ದನೆಂದು ಹೇಳುತ್ತಾರೆ. ಈ ಗ್ರಂಥವಲ್ಲದೆ ಬೇರೆ ಆರು ಗ್ರಂಥಗಳನ್ನೂ ರಚಿಸಿರುವನು. ವಿವೇಕಚಿಂತಾಮಣಿಯನ್ನು ಗದ್ಯರೂಪದಲ್ಲಿಯೇ ರಚಿಸಿ, ಎಲ್ಲರೂ ತಿಳಿಯಬೇಕಾದ ೭೬೫ ವಿಷಯಗಳನ್ನು "ಆಗಮವ್ನಾಯ ಸಮ್ಮತದಿಂ ಸ್ಮೃತಿ ಪುರಾಣೇತಿಹಾಸ ಪುರಾತನೋಕ್ತಿಗಳನುಸಾರದಿಂದನುಭವಿಗಳಹುದೆಂಬಂತೆ ಸ್ವಕಪೋಲಕಲ್ಪಿತಮಲ್ಲದಸಾರತರಮಾದ ಸತ್ಯಾರ್ಥಂಗಳನೆ ಸಂಗ್ರಹಿಸಿ ಮುನ್ನುಳ್ಳ ಮಣಿಪುಂಜಮಂ ರಂಜನೆಗೆಯ್ದು ತರವಱಿತು ಸರಂಗೊಳಿಸಿ ನವೀನಕಂಠಾಭರಣವೆನಿಸುವಂತೆ ಮುಮುಕ್ಷುಜನಂಗಳೀಜಗತ್ತಿನ ಸ್ಥಿತಿಗತಿಗಳಾವಪ್ರಕಾರವೆಂದಱಿಸಿ ಬಟಲದಭಿವ್ಯಕ್ತಮಾಗಿಲ್ಲಿಯೆ ಸಲ್ಲೀಲೆಯಿಂದಱಿತು ಕೃತಾರ್ಥರಾಗಲೆಂದು ಬೆಳುಗನ್ನಡಮಾದ ವಚನರಚನೆಗಳಿಂ" ಕವಿ ಹೇಳಿರುವನು. (ಕಾಲ ಸು. ೧೫೦೦) ಈತನ ಈ ಈ ಗ್ರಂಥವು ಒಂದು ವಿಶ್ವಕೋಶದಂತಿರುವುದು. (೨) ಶ್ರೀಧರನೆಂಬ ಜೈನಕವಿಯು (ಸು. ೧೫೦೦) ಜಗದೇಕದೇವ ಮಹಾಮಂತ್ರವಾದಿ ಎಂಬ ಬಿರುದಂತಳೆದು, "ವೆ

---

*ಕರ್ಣಾಟಕ ಕವಿಚರಿತಕಾರರು ಈ ಗ್ರಂಥಗಳನ್ನು, ಗ್ರಂಥಕರ್ತರ ವಿಚಾರವನ್ನು, ೨ನೆಯ ಸಂಪುಟದಲ್ಲಿ ವಿವರಿಸಿರುವರು. ಆದ್ದರಿಂದ ಇದರ ಪ್ರತಿಗಳು ಅವರಿಗೆ ಮೊದಲನೆಯ ಸಂಪುಟ ಪ್ರಕಟವಾದ ಬಳಿಕ ದೊರೆತಿರಬಹುದು.

ದ್ಯಾಮೃತ"ವೆಂಬ ಚಂಪೂ ಗ್ರಂಥವನ್ನು ರಚಿಸಿದನು. (೩) ಗುರುನಂಜನೆಂಬ 'ಸ್ಮೃತಿಪುರಾಣಶಾಸ್ತ್ರಾರ್ಥದರ್ಶನ ನಿರಂಜನಸಿದ್ಧ'ನೆಂಬ ಬಿರುದಂ ತಳೆದ ವೀರಶೈವ ಕವಿಯು (ಸು. ೧೫೦೦) ಭಟ್ಟ ಭಾಸ್ಕರಕೃತ ಯಜುರ್ವೇದ ಭಾಷ್ಯಕ್ಕೆ ಪ್ರೌಢ ಕನ್ನಡ ಟೀಕೆಯನ್ನು ಬರೆದಿರುವನು. (೪) ೧೬ನೆಯ ಶತಮಾನದ ಮಧ್ಯಭಾಗದಲ್ಲಿ ಸಾಳ್ವನೆಂಬ ಜೈನ "ಸಾಜ ಕವಿ"ಯು (ಸು. ೧೫೫೦) ಭಾರತ (ಸಾಳ್ವಭಾರತ), ರಸರತ್ನಾಕರ, ವೈದ್ಯಸಾಂಗತ್ಯ ಎಂಬ ಗ್ರಂಥಗಳನ್ನು ರಚಿಸಿದನು. ಮತ್ತೆ ಕನ್ನಡದಲ್ಲಿ ಉಪಲಬ್ಧವಾಗಿರುವ ಧ್ವನಿ ವಿಷಯಕವಾದ ಗ್ರಂಥಗಳಲ್ಲಿ ಏಕಮಾತ್ರವಾದುದೆನಿಸಿರುವ 'ಶಾರದಾ ವಿಲಾಸ'ವೆಂಬ ಗ್ರಂಥವನ್ನು ಈತನೇ ರಚಿಸಿರುವನೆಂದು ತಿಳಿದುಬರುವುದು. (೫) ಈ ಕವಿಗೆ ಸಮಕಾಲೀನನಾದ ಗಂಗಾಧರನೆಂಬ ಬ್ರಾಹ್ಮಣ ಕವಿಯು (ಸು. ೧೫೦೦) 'ರಟ್ಟನ ಜಾತಕ' ಎಂಬ ಜ್ಯೋತಿಷ ಗ್ರಂಥವನ್ನು ರಚಿಸಿದನು. (೬) ಹರಿನಾಡು ರಾಜರಲ್ಲಿ ಒಬ್ಬನೆನಿಸಿದ ಎಳಂದೂರಿನ (ಬಾಲಚಂದ್ರಪುರದ) ಚೆನ್ನರಾಜನು 'ವೈದ್ಯಸಾರಸಂಗ್ರಹ'ವೆಂಬ ವೈದ್ಯ ಗ್ರಂಥವನ್ನು ಬರೆದನೆಂದು ತಿಳಿದು ಬರುವುದು. ಅದರ ಪ್ರಕರಣಗಳ ಅಂತ್ಯದಲ್ಲಿ 'ಇತಿ.....ಬಾಲಚಂದ್ರಪುರಾಧೀಶ್ವರ ಚೆನ್ನರಾಜಭೂಪಾಲ ವಿರಚಿತಮಪ್ಪ ಸರ್ವಲೋಕೋಪಕಾರಕ ಕರ್ಣಾಟಭಾಷಾವಿಶದೀಕೃತ ವೈದ್ಯಸಾರ ಸಂಗ್ರಹೇ' ಎಂಬ ಗದ್ಯವಿದೆ. ಉಪಲಬ್ಧವಾಗಿರುವ ಮತ್ತೊಂದು ಈ ಗ್ರಂಥದ ಪ್ರತಿಯಲ್ಲಿ "ಇತಿ ಶ್ರೀ ಕರ್ಣಾಟಕ ದೇಶಮಧ್ಯೋಲಸತ್ಸ್ವರ್ಣ ನದೀ ತೀರವಿಲಸಿತ ಬಾಲಚಂದ್ರಪುರಸ್ಥಿತ ಸರ್ವವಿದ್ಯಾ ವಿಶಾರದ ನಾರಸಿಂಹಶಾಸ್ತ್ರಿವರ್ಯ ವಿರಚಿತ ಸರ್ವಲೋಕೋಪಕಾರಕ ಕರ್ಣಾಟಕಭಾಷಾವಿಶದೀಕೃತ ವೈದ್ಯಸಾರ ಸಂಗ್ರಹೇ"—ಎಂಬ ಗದ್ಯವಿರುವುದರಿಂದ ನರಸಿಂಹ ಶಾಸ್ತ್ರಿ, ಈ ಗ್ರಂಥವನ್ನು ಬರೆದು ತನ್ನ ಪೋಷಕನಾದ ಚೆನ್ನರಾಜನ ಹೆಸರಿನಲ್ಲಿ ಪ್ರಕಟಿಸಿರಬಹುದೆಂಬ ಅವಕಾಶಕೊಟ್ಟಿದೆ. ಈ ಗ್ರಂಥಕ್ಕೆ 'ನಾರಸಿಂಹ ಭಟ್ಟರ ಸಂಹಿತೆ' ಎಂಬ ಹೆಸರೂ ಇದೆ. (೭) ಶಾಂತರಸ (ಸು. ೧೬೦೦) ನೆಂಬ ಜೈನ ಕವಿಯು ಯೋಗಶಾಸ್ತ್ರ ವಿಷಯಕವಾದ 'ಯೋಗರತ್ನಾಕರ'ವೆಂಬ ಗ್ರಂಥವನ್ನು ರಚಿಸಿರುವನು. (೮) ವೀರಭದ್ರರಾಜನೆಂಬ ರಾಜಕವಿಯು (ಸು. ೧೬೦೦) ಪಾಲಕಾಪ್ಯಕೃತ ಹಸ್ತ್ಯಾಯುರ್ವೇದಕ್ಕೆ ಕನ್ನಡ ಟೀಕೆಯನ್ನು ರಚಿಸಿ ಅದಕ್ಕೆ 'ಪಾಲಕಾಪ್ಯಕೃತ ಹಸ್ತ್ಯಾಯುರ್ವೇದ ಟೀಕೆ' ಎಂಬ ಹೆಸರಿಟ್ಟನು. ಆನೆಗಳ ರೋಗ ಮತ್ತು ಚಿಕಿತ್ಸೆಗಳ ವಿಚಾರಗಳನ್ನು ಅದರಲ್ಲಿ ವಿವರಿಸಲಾಗಿದೆ. (೯) ರಾಮಚಂದ್ರ ಬ್ರಾಹ್ಮಣ ಕವಿಯು ಮೈಸೂರು ಚಾಮರಾಜ ಭೂವರನ ಪ್ರೋತ್ಸಾಹದಿಂದ 'ಅಶ್ವಶಾಸ್ತ್ರ'ವೆಂಬ ಹೆಸರಿನಿಂದ (ಸು. ೧೬೨೫) ಶಾಲಿಹೋತ್ರನ ಅಶ್ವಶಾಸ್ತ್ರಕ್ಕೆ ವಾಕ್ಯರೂಪವಾದ ಕನ್ನಡ ಅನುವಾದವನ್ನು ಬರೆದನು. ಇದರಲ್ಲಿ ಕುದುರೆಗಳ ವಯಸ್ಸು, ಹಲ್ಲು, ಸುಳಿ, ವ್ಯಾಧಿಗಳಿಗೆ ಚಿಕಿತ್ಸೆ ಮುಂತಾದ ವಿಷಯಗಳಿವೆ. (೧೦) ಅದೇ ಚಾಮರಾಜನ ಆಜ್ಞಾನುಸಾರವಾಗಿ ಪದ್ಮಣ ಪಂಡಿತನೆಂಬ ಜೈನ ಕವಿಯು ಕಂದಪದ್ಯಗಳಲ್ಲಿ ಹಯಸಾರ ಸಮುಚ್ಚಯವೆಂಬ ಅಶ್ವವೈದ್ಯ ಗ್ರಂಥವನ್ನು ೧೬೨೭ರಲ್ಲಿ ರಚಿಸಿದನು. ಇದರಲ್ಲಿ ಕುದುರೆಗಳ ಆಕೃತಿ, ಲಿಂಗ, ಭೇಷಜಗಳು ನಿರೂಪಿಸಲ್ಪಟ್ಟಿವೆ. (೧೨) ಚಂದ್ರಮನೆಂಬ ಜೈನಕವಿಯು (ಸು. ೧೬೫೦) ಗಣಿತಸಾರವೆಂಬ ಗ್ರಂಥವನ್ನು ರಚಿಸಿದನು. (೧೩) ಚಿಕ್ಕುಪಾಧ್ಯಾಯನೆಂಬ ಶ್ರೀ ವೈಷ್ಣವ ಕವಿಯು (೧೬೭೨) ತನ್ನ ಇತರ ೨೫ ಗ್ರಂಥಗಳಲ್ಲದೆ (೧) ಕಾಬಂದಕ ಟೀಕೆ (೨) ವೈದ್ಯಾಮೃತ ಟೀಕೆ (೩) ಅರ್ಥ ಪಂಚಕವೆಂಬ ಗ್ರಂಥಗಳನ್ನು ರಚಿಸಿರುವನು. (೧೪) ಸುಮಾರು ೧೭ನೆಯ ಶತಮಾನದ ಪ್ರಾರಂಭದಲ್ಲಿ ಸರ್ವಜ್ಞನೆಂಬ ವೀರಶೈವ ಕವಿಯು ತ್ರಿಪದಿರೂಪವಾದ 'ಸರ್ವಜ್ಞ ವಚನ'ವೆಂಬ ಗ್ರಂಥವನ್ನು ರಚಿಸಿದನು. ಈತನ ಹೆಸರು ಕನ್ನಡ ನಾಡಿನಲ್ಲಿ ಮನೆಮಾತಾಗಿದೆ. ಈತನ ಗ್ರಂಥದಲ್ಲಿ ಧರ್ಮ, ನೀತಿ, ಜ್ಞಾನ, ಜ್ಯೋತಿಷ, ವೈದ್ಯ ಮುಂತಾದ ಹಲವಾರು ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. (೧೫) ಇದೇ ಕಾಲದಲ್ಲಿ ತಿಮ್ಮರಸ (ಸು. ೧೭೦೦) ನೆಂಬ ಬ್ರಾಹ್ಮಣ ಕವಿಯು ಕ್ಷೇತ್ರಗಣಿತ ಗ್ರಂಥವನ್ನು ಕಂದಪದ್ಯರೂಪವಾಗಿ ಟೀಕೆ ಉದಾಹರಣೆಗಳ ಸಮೇತ ರಚಿಸಿರುವನು. ದೈವಜ್ಞ ವಲ್ಲಭನೆಂಬಾತನು ಮಹಾವೀರಾಚಾರ್ಯನ ಗಣಿತಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದನು. ನಂಜನಾಥ ಭೂಪಾಲನೆಂಬ ರಾಜಕವಿಯು ವೈದ್ಯಸಾರಸಂಗ್ರಹವೆಂಬ ಗ್ರಂಥವನ್ನು ಬರೆದನು.—ಈ ವಿಷಯಗಳಿಂದ ಪ್ರಥಮಕಾಲಕ್ಕಿಂತಲೂ ಮಧ್ಯ ಕಾಲದಲ್ಲಿಯೇ ಕನ್ನಡ

ಶಾಸ್ತ್ರೀಯ ಗ್ರಂಥಗಳು ಹೆಚ್ಚಾಗಿ ಹುಟ್ಟಿದವೆಂದು ತಿಳಿದು ಬರುವುದು.

ಆಧುನಿಕ ಕಾಲ (೧೮-೧೯-೨೦ನೆಯ ಶತಮಾನ)

ತತ್ತ್ವಶಾಸ್ತ್ರವನ್ನುಳಿದು ಬೇರೆ ಶಾಸ್ತ್ರೀಯ ಗ್ರಂಥಗಳ ರಚನೆಗೆ ಹದಿನೆಂಟನೆಯ ಶತಮಾನ ಅಷ್ಟು ಫಲವತ್ತಾಗಿದ್ದಂತೆ ಕಂಡು ಬರುವುದಿಲ್ಲ. ಈ ಶತಮಾನದಲ್ಲಿ ಕೇವಲ ೮-೧೦ ಗ್ರಂಥಗಳು ರಚಿತವಾಗಿರುವವು. ಅವುಗಳು ಇಂತಿವೆ:—೧೮ನೆಯ ಶತಮಾನದ ಪ್ರಾರಂಭದಲ್ಲಿ ಬಾಲವೈದ್ಯರ ಚೆಲುವ ಎಂಬ ಬ್ರಾಹ್ಮಣ ಕವಿಯು (ಸು. ೧೭೧೫) ಕನ್ನಡ ಲೀಲಾವತಿ ಮತ್ತು ರತ್ನಶಾಸ್ತ್ರ ಎಂಬ ಎರಡು ಗ್ರಂಥಗಳನ್ನು ರಚಿಸಿದನು. ಕನ್ನಡ ಲೀಲಾವತಿಯು ಕಂದ, ವಾರ್ಧಕ ಷಟ್ಪದಿರೂಪದಲ್ಲಿ ಬರೆದಿದೆ. ಇದರಲ್ಲಿ ಸಾಧಾರಣ ಗಣಿತ, ಕ್ಷೇತ್ರಗಣಿತಗಳೆರಡೂ ನಿರೂಪಿಸಲ್ಪಟ್ಟಿವೆ. ರತ್ನ ಶಾಸ್ತ್ರಗಂಥದಲ್ಲಿ ನವರತ್ನಗಳು, ಅವುಗಳು ದೊರೆವ ದೇಶ, ಗಣಿಗಳು, ವರ್ಣ, ಜಾತಿ, ದೋಷ, ಬೆಲೆ, ಕೃತ್ರಿಮದ ರತುನಗಳು ಮೊದಲಾದವುಗಳನ್ನು ಕವಿಯು ವಾರ್ಧಿಕ ಷಟ್ಪದಿಯಲ್ಲಿ ಅಗಸ್ತ್ಯ ಮುನಿಯ ಮತಾನುಸಾರವಾಗಿ ರಚಿಸಿರುವಂತೆ ಹೇಳುತ್ತಾನೆ. ಈ ಕವಿಗೆ ಸಮಕಾಲೀನನಾಗಿದ್ದ ಕಳಲೆ ಅರಸು ಮನೆತನಕ್ಕೆ ಸೇರಿದ ವೀರರಾಜ (ಸು. ೧೭೨೦) ನೆಂಬಾತನು ಸಕಲ ವೈದ್ಯ ಸಂಹಿತಾಸಾರಾರ್ಣವ* ಎಂಬ ವೈದ್ಯ ಗ್ರಂಥವನ್ನು ರಚಿಸಿದನು. ಇದರಲ್ಲಿ ಸುಮಾರು ೧೬೯ ಔಷಧಪ್ರಯೋಗಗಳನ್ನು ಗದ್ಯದಲ್ಲಿಯೇ ವಿವರಿಸಲಾಗಿದೆ. ಗ್ರಂಥಕಾರನು ಇದನ್ನು ಸಂಸ್ಕೃತ ಗ್ರಂಥಗಳಲ್ಲದೆ ಆಂಧ್ರ ಗ್ರಂಥಗಳಿಂದಲೂ ಸಂಗ್ರಹಮಾಡಿರುವಂತೆ ಕಂಡು ಬರುವುದು. ಚಾಯೇಂದ್ರನೆಂಬ ರಾಜಕವಿಯು (ಸು.೧೭೩೪). ಸಂಸ್ಕೃತ ಕುವಲಯಾನಂದದ ಸಂಗ್ರಹರೂಪವಾದ ಅಲಂಕಾರ ಶಾಸ್ತ್ರದ ಗ್ರಂಥವನ್ನು ಬರೆದನು. ಮತ್ತೆ ರಸಮಂಜರಿ ಎಂಬ ಗ್ರಂಥವನ್ನು ರಚಿಸಿದನು. ೧೮ನೆಯ ಶತಮಾನದ ಮಧ್ಯಕಾಲದಲ್ಲಿ ಬ್ರಹ್ಮನೆಂಬ ಬ್ರಾಹ್ಮಣ ಕವಿಯು (ಸು. ೧೭೫೦) ವೈದ್ಯಕಂದ ಎಂಬ ಗ್ರಂಥವನ್ನು ರಚಿಸಿದನು. ಪದ್ಯರೂಪದಲ್ಲಿ ವೈದ್ಯದಂತಹ ಶಾಸ್ತ್ರೀಯ ಗ್ರಂಥರಚನೆ ಇದುವೆ ಕೊನೆಯದೆಂದು ಕಾಣುವುದು. ಆದ್ದರಿಂದ ಇಲ್ಲಿ ೧-೨ ಪದ್ಯಗಳನ್ನು ಉದಹರಿಸಲಾಗುವುದು:—

ತೊಳೆ ಹಿಪ್ಪಲಿಯನ್ನು ಹುರಿವುದು । ತಿಲತೈಲದಿ
ಕಲ್ಲುಸಕ್ಕರೆಯು ಕೂಡಿಸುತಂ ।
ಬಲುಹುರುಳಿಯ ಕಟ್ಟಿನೊಳಂ । ಕಲಸುತ ಕೊಡ
ಲೊಡನೆ ಕೆಡುವುದಡಸಿದ ಶ್ವಾಸಂ ॥
ಧೂಪವ ಕೊಡುವುದರಿಂದಂ । ಲೇಪನವಭ್ಯಂಗ
ರಕ್ತ ಮೋಕ್ಷರಿಂದಂ ।
ವ್ಯಾಪಿಸಿದ ಮೂಲರೋಗಂ । ತಾಪರಿಹರವಹುದು
ಸಿದ್ಧಬಾಹಟಮತದಿಂ* ।

೧೯ನೆಯ ಶತಮಾನದಲ್ಲಿ ಶಾಸ್ತ್ರೀಯ ಗ್ರಂಥರಚನೆಗೆ ಸರಕಾರದ ಪ್ರೋತ್ಸಾಹ ದೊರೆತುದುದರಿಂದ ಅದು ೧೮ನೆಯ ಶತಮಾನಕ್ಕಿಂತಲೂ ಹೆಚ್ಚು ಫಲವತ್ತಾಗಿತ್ತು. ಮೈಸೂರು ಸರಕಾರದ ವಿದ್ಯಾಖಾತೆಯವರು ತಮ ಇಲಾಖೆಯ ಕೆಲ ಜನ ಪದವೀಧರ ಉಪಾಧ್ಯಾಯರುಗಳಿಂದ ಕೆಲವು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಿದರು. ಮತ್ತೆ ಪದವೀಧರರಾಗಿ ದೊಡ್ಡ ಅಧಿಕಾರದಲ್ಲಿದ್ದವರಲ್ಲಿ ಕನ್ನಡಾಭಿಮಾನಿಗಳು ಕೆಲವರು ಶಾಸ್ತ್ರೀಯ ಗ್ರಂಥಗಳನ್ನು ಬರೆದರು. ಅವುಗಳಲ್ಲಿ ನಮ್ಮ ಗಮನಕ್ಕೆ ಬಂದಿರುವವು ಯಾವುವೆಂದರೆ—ಉದ್ಭಿಜ್ಜ ಶಾಸ್ತ್ರ, ವ್ಯವಸಾಯ ಬೋಧಿನಿ, (ಕೆ. ಶೇಷಾದ್ರಿ ಅಯ್ಯಂಗಾರ್ ರಚಿತ); ಖನಿಜಶಾಸ್ತ್ರ, (ಬಿ. ಎನ್. ದಾಸಪ್ಪ ರಚಿತ); ಆರೋಗ್ಯ ಮಾರ್ಗದರ್ಶನಿ, (ಆರ್. ರಘುನಾಥರಾಯ ಕೃತ); ಅಪಾಯದಲ್ಲಿನ ಉಪಾಯ ಸಂಗ್ರಹ (Ambulance Lectures) (ಜಿ. ಜಿ. ನರೋನಾ ಕೃತ); ಆರೋಗ್ಯಶಾಸ್ತ್ರ; ಪಶುವೈದ್ಯ ಸಂಗ್ರಹ; (ಎನ್. ನರಸಿಂಹಯ್ಯಂಗಾರ್ ರಚಿತ); ಆರೋಗ್ಯ ಸೂತ್ರ ಸಂಗ್ರಹ (ಆರೋಗ್ಯ ಪಿಳ್ಳೆ ಸಂಗ್ರಹೀತ); ಇಂಗ್ಲಿಷ್ ವೈದ್ಯ ಪ್ರಕಾಶಿಕೆ (ಜೆ. ಬಸವಪ್ಪ ಶೆಟ್ಟಿ (ಕ್ರೈಸ್ತ) ರಚಿತ); ವ್ಯವಹಾರ ದೀಪಿಕೆ; ಅರ್ಥಶಾಸ್ತ್ರ (ಎಚ್. ವಿ. ನಂಜುಡಯ್ಯ ರಚಿತ), ವನಸ್ಪತಿ ಶಾಸ್ತ್ರ (ಎಲ್. ಸುಬ್ಬರಾಯ ರಚಿತ) ಈ ರೀತಿಯಾಗಿ ಉಪಾಧ್ಯಾಯ ವರ್ಗದವರು ಮತ್ತು ಅಧಿಕಾರಿ ವರ್ಗದಲ್ಲಿ ಕೆಲವರು ಕನ್ನಡ ಶಾಸ್ತ್ರೀಯ ಗ್ರಂಥಗಳ ರಚನೆಗೆ ಪ್ರಯತ್ನಪಡುತ್ತಿರುವಾಗಲೆ, ವಿದೇಶಿಯ ಪಾದ್ರಿಗಳು ಕೂಡ ಕನ್ನಡನುಡಿದೇವಿಯನ್ನು ಅಲಂಕರಿಸಲು ಕೆಲವು ಗ್ರಂಥರತ್ನಗಳನ್ನು ಅದ

*ಈ ಗ್ರಂಥವನ್ನು ಮೈಸೂರು ಓರಿಯಂಟಲ್ ಲೈಬ್ರರಿ ಅಧಿಕಾರಿಗಳು ಅಚ್ಚು ಮಾಡಿಸಿರುವರು.

*ಕವಿಚರಿತೆ, ಭಾಗ III ಪುಟ 87

ರಲ್ಲಿಯೂ ಮುಖ್ಯವಾಗಿ ಕೋಶ ಗ್ರಂಥಗಳನ್ನು ರಚಿಸಿ, ನಾಡಿನವರ ಕೃತಜ್ಞತೆಗೆ ಪಾತ್ರರಾದರು. ಅವರಲ್ಲಿ ಮುಖ್ಯರಾದವರು—ಮಿ। ಗಳಾದ ರೀವ್, ಆಂಡರ್‌ಸನ್ ಕೇರಿ, ಜೀಗ್ಲರ್, ಬಚೆರ್, ಮೇಬಲ್, ಕ್ಯಾಂಬಲ್, ರೈಸ್, ಕಿಟಲ್—ಇವರು ಪ್ರಮುಖರು. ಇವರ ಗ್ರಂಥಗಳಲ್ಲದೆ ಬೇರಾವ ಶಾಸ್ತ್ರೀಯ ಕಾವ್ಯಗ್ರಂಥಗಳ ರಚನೆಯಾಗಲಿಲ್ಲ.

ಮೇಲೆ ಹೇಳಿದವರಲ್ಲದೆ ಬೇರೆ ಕೆಲ ಪಂಡಿತರು ತಮಗೆ ತಿಳಿದ ಶಾಸ್ತ್ರೀಯ ವಿಚಾರಗಳನ್ನು ಬೇರೆಯವರಿಗೆ ತಿಳಿಸಬೇಕೆಂಬ ಉದ್ದೇಶದಿಂದ ಗ್ರಂಥಗಳನ್ನು ರಚಿಸಿ, ಪ್ರಕಟಿಸಿದರು. ಉಪಲಬ್ಧವಾಗಿರುವ ಅವರ ಗ್ರಂಥಗಳ ಸಹಾಯದಿಂದ ಇಲ್ಲಿ ಅವರ ಮತ್ತು ಅವರ ಕೃತಿಗಳ ಹೆಸರುಗಳನ್ನು ಕೊಡಲಾಗಿದೆ.—ವಿಜ್ಞಾನದೀಪಿಕೆ—ಬೆಳ್ಳಾರೆ ಸೋಮನಾಥಯ್ಯ; (1) ದೀರ್ಘಾಯಸ್ಸೂತ್ರ, (2) ಹವ್ಯಪಾಕಪದ್ಧತಿ—ಗರಣಿ ಕೃಷ್ಣಾಚಾರ್ಯ; (1) ಕರ್ಣಾಟಕ ಭಾಷಾಕರ (2) ಪಾಕಶಾಸ್ತ್ರ—ಜಯರಾಯಾಚಾರ್ಯ (1) ಜ್ಯೋತಿಶ್ಶಾಸ್ತ್ರ (2) ಕರ್ಣಾಟಕದ ಗೆಜೆಟಿಯರ್ (3) ಪ್ರಾಕೃತಿಕ ಭೂಗೋಳ ಶಾಸ್ತ್ರ, (4) ವಿಧವೆಗಳ ಮುಂಡನ ಅನಾಚಾರ (5) ಉಪನ್ಯಾಸವಿದೆ—ಪ್ರಿನ್ಸಿಪಾಲ್ ವೆಂಕಟರಂಗೋ ಕಟ್ಟಿ; (1) ವೈದ್ಯ ಸಂಗ್ರಹ (2) ನಾಡೀ ಪ್ರಕರಣ—ಹೊಸ ಪಂಡಿತ ಭೀಮರಾಯ ಕೃತ; ವೈದ್ಯಸಂಗ್ರಹ--ಅರಮನೆ ಪಂಡಿತ ಮರಿಸೆಟ್ಟಿ; ಹಿಂದೂ ಲಾ—ಮದರಾಸಿನ ಆರ್. ವೆಂಕಟ ಸುಬ್ಬರಾಯ.*

೨೦ನೆಯ ಶತಮಾನ

ಈ ಶತಮಾನದಲ್ಲಿ ಈಗ ಐದು ದಶಕಗಳು ಮುಗಿಯಬಂದಿದೆ. ಈ ಅರ್ಧ ಶತಮಾನವನ್ನು ೫ ದಶಕಗಳ ಐದು ಭಾಗವಾಗಿ ವಿಂಗಡಿಸಬಹುದು. ಮೊದಲನೆಯ ದಶಕವು ಭಾರತವರ್ಷದ ಇತಿಹಾಸದಲ್ಲಿ ಕ್ರಾಂತಿಯ ಆರಂಭಕಾಲವೆನ್ನಬಹುದು. ಇದುವರೆಗೆ ಕೇವಲ ಪಾಶ್ಚಾತ್ಯ—ಅದರಲ್ಲಿ ಇಂಗ್ಲಿಷ ನಾಗರಿಕತೆಯನ್ನೂ ಭಾಷೆಯನ್ನೂ ಮೆಚ್ಚಿ ಜನತೆಯ ಮನಸ್ಸು ಅತ್ತ ಒಲಿದಿತ್ತು. ಆದರೆ ಈ ದಶಕದಲ್ಲಿ ಭಾರತವರ್ಷದ ವೈಸ್ರಾಯನಾಗಿದ್ದ ಲಾರ್ಡ್ ಕರ್ಜನ್ ಸಾಹೇಬನು ವಂಗಪ್ರಾಂತ ವಿಭಜನೆಯ ಕಾರ್ಯವನ್ನು ಕೈಕೊಂಡನು. ಅದು ಬಂಗಾಳಿಗಳಿಗೆ ಸಹನವಾಗಲಿಲ್ಲ. ಒಂದೇ ಸಂಸ್ಕೃತಿಯ ಒಂದೇ ಭಾಷೆ ಮಾತನಾಡುವ ಜನರ ಪ್ರಾಂತ್ಯವನ್ನು ವಿಭಾಗಿಸಿ ಆಳುವುದು, ಭಾರತೀಯರನ್ನು ಶಾಶ್ವತವಾದ ದಾಸ್ಯ ಶೃಂಖಲೆಯಿಂದ ಬಂಧಿಸುವುದು ಇಂಗ್ಲಿಷ ರಾಜನೀತಿ ಎಂದು ಸುಶಿಕ್ಷಿತರಾದ ಬಂಗಾಳಿಗಳು ಮನಗಂಡರು. ಇದಕ್ಕೆ ಮೊದಲು ವಂಗ ದೇಶದ ಸುಪ್ರಸಿದ್ಧ ಕಾದಂಬರಿಕಾರ ಬಂಕಿಮ ಚಂದ್ರ ಚಟ್ಟೋಪಾಧ್ಯಾಯರು ತಮ್ಮ ಐತಿಹಾಸಿಕ ಕಾದಂಬರಿಗಳ ಮೂಲಕ, ಪ್ರಬಂಧಗಳ ಮೂಲಕ ಪರೋಕ್ಷವಾಗಿ ಇಂಗ್ಲಿಷರ ಆಡಳಿತ ನೀತಿಯ ಪರಿಚಯವನ್ನು ಮಾಡಿಕೊಟ್ಟಿದ್ದರು. ಇದರಿಂದ ವಂಗ ಭೂಮಿಯು ಉತ್ತು ಬಿತ್ತನೆಗೆ ಹದವಾದ ಕ್ಷೇತ್ರದಂತಿತ್ತು. ವಂಗ ವಿಭಜನೆಯು ಸುಶಿಕ್ಷಿತ ವಂಗೀಯರ ಮನಸ್ಸನ್ನು ಕೆರಳಿಸಿತು. ಕೆರಳಿದ್ದ ವಂಗೀಯರು ಕ್ರಾಂತಿಮಾರ್ಗವನ್ನವಲಂಬಿಸಿ ಸಮರ ಗರ್ಜನೆಯನ್ನು ಘೋಷಿಸಿದರು. 'ಸ್ವದೇಶಿ ಪ್ರಚಾರ, ವಿದೇಶವಸ್ತು ಬಹಿಷ್ಕಾರ, ಸ್ವರಾಜ್ಯಸಾಧನೆ' ಮಂತ್ರಗಳನ್ನು ಸಮಗ್ರ ಭಾರತದ ಮೂಲೆಮೂಲೆಗಳಲ್ಲಿ ಪ್ರತಿಧ್ವನಿಸುವಂತೆ ಪಠಿಸಲಾರಂಭಿಸಿದರು. ಬಂಗಾಳದಲ್ಲಿ ಸುರೇಂದ್ರನಾಥ ಬಾನರ್ಜಿ, ಅಶ್ವನಿ ಕುಮಾರದತ್ತ, ಅರವಿಂದಘೋಷ ಪ್ರಭೃತಿನಾಯಕರು ರಾಷ್ಟ್ರೀಯ ಶಿಕ್ಷಣ ಶಾಲೆಗಳನ್ನು ತೆರೆದು ಜನತೆಗೆ ತಮ್ಮ ಪ್ರಾಂತೀಯ ಭಾಷೆಯಲ್ಲಿ ಶಿಕ್ಷಣಕೊಡುವ ಪ್ರಯತ್ನ ಮಾಡಿದರು. ಆಗಲೇ ಪಂಜಾಬ ಪ್ರಾಂತ್ಯದಲ್ಲಿ ಲಾಲಾ ಲಜಪತರಾಯ್, ಸಂಯುಕ್ತ ಪ್ರಾಂತ್ಯದಲ್ಲಿ ಪಂಡಿತ ಮೋತಿಲಾಲ್ ನೆಹರು (ನಮ್ಮ ಮಹಾ ಪ್ರಧಾನ ಜವಾಹರಲಾಲ್ ನೆಹರು ಅವರ ತಂದೆ), ಮುಂಬೈ ಪ್ರಾಂತ್ಯದಲ್ಲಿಲೋಕಮಾನ್ಯ ಬಾಲ ಗಂಗಾಧರ ಟಿಲಕ, ಮದ್ರಾಸ್

---

*ಶ್ರೀ ಚಾಮರಾಜೇಂದ್ರ ಒಡೆಯರ ಕಾಲದಲ್ಲಿ ಆಸ್ಥಾನ ವೈದ್ಯರಾಗಿದ್ದ ಭೀಮರಾಯರು 'ವೈದ್ಯಸಂಗ್ರಹ'ವೆಂಬ ತಮ್ಮ ಗ್ರಂಥವನ್ನು ಕನ್ನಡದಲ್ಲಿ ೧೮೮೫ರಲ್ಲಿ ಪ್ರಕಟಿಸುವ ಮುಂಚೆ ೧೮೮೩ರಲ್ಲಿ ಕಂ. ಟಿ. ಶ್ರೀನಿವಾಸಾಚಾರ್ಯರೆಂಬವರು ಅನೇಕ ಸಂಸ್ಕೃತ ಗ್ರಂಥಗಳಿಂದ ಔಷಧ ಚಿಕಿತ್ಸೆಗಳನ್ನು ಸಂಗ್ರಹಿಸಿ 'ವೈದ್ಯಸಾರ ಸಂಗ್ರಹ' ಎಂಬ ಗ್ರಂಥವನ್ನು ತೆಲುಗು, ಅಕ್ಷರ ಕನ್ನಡ ಭಾಷೆಯಲ್ಲಿ ಪ್ರಕಟಿಸಿದರು. ೧೮೯೭ರಲ್ಲಿ ಶ್ರೀ ಮಧೀಂದ್ರ ಕಂಠವಲ್ಲಭಾಚಾರ್ಯರ 'ವೈದ್ಯಚಿಂತಾಮಣಿ' ಎಂಬ ಗ್ರಂಥವನ್ನು ಗೂಡವಲ್ಲಿ ಹರಿರಾವು ಶಾಸ್ತ್ರಿಗಳ ಕನ್ನಡ ಟೀಕಾ ಸಮೇತವಾಗಿ ಬೆಂಗಳೂರಿನ ವಾಜಪೇಯಂ ಗೋವಿಂದಯ್ಯನವರು ಪ್ರಕಟಿಸಿದರು.''

ಪ್ರಾಂತ್ಯದಲ್ಲಿ ಚಿದಂಬರಂ ಪಿಳ್ಳೈ ಅವರು ಈ ರಾಷ್ಟ್ರೀಕರಣಕ್ಕೆ ಬೆಂಬಲವಿತ್ತು, ಸರಕಾರದ ಅವಕೃಪೆಗೆ ಪಾತ್ರರಾದರು. ಆಗಿನ ಸರಕಾರವು ಅವರನ್ನು ಹೀನ ದೃಷ್ಟಿಯಿಂದ ಕಂಡರೂ ಜನತೆಗೆ ಅವರಲ್ಲಿ ಪೂಜ್ಯತೆ ಹೆಚ್ಚಿದುದಲ್ಲದೆ, ರಾಷ್ಟ್ರ, ರಾಷ್ಟ್ರಭಾಷೆ, ಸ್ವದೇಶಿವ್ರತ, ವಿದೇಶಿವಸ್ತು ಬಹಿಷ್ಕಾರಗಳ ಕಡೆಗೆ ಅವರ ಮನಸ್ಸು ಹೊರಳಿತು. ಜ್ಞಾನ ಸಂಪಾದನೆಗೆ ಇಂಗ್ಲಿಷ ಭಾಷೆಯೆ ಅವಶ್ಯಕವೆ? ನಮ್ಮ ಜನತೆಯಲ್ಲಿ ಅವರಾಡುವ ಭಾಷೆಯ ಮೂಲಕ ಜ್ಞಾನಪ್ರಸಾರ ಮಾಡುವುದು ಸಾಧ್ಯವೂ ಕರ್ತವ್ಯವೂ ಆಗಿದೆ ಎಂದು ರಾಜಕೀಯ ಧುರೀಣರು ಹೇಳಲಾರಂಭಿಸಿದರು. ಈ ಭಾವನೆಯು ಪುಷ್ಟಿಗೊಳ್ಳುತ್ತ ಸುಮಾರು ೨ ದಶಕಗಳ ವರೆಗೆ ಬೆಳೆಯುತ್ತ ಬಂದಿತು. ಎರಡನೆಯ ದಶಕದ ಕೊನೆಯ ಭಾಗದಲ್ಲಿ ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಬಂದ ಗಾಂಧೀಜಿಯವರ ನೇತೃತ್ವಕ್ಕೆ (೧೯೧೯-೨೦) ಕಾಂಗ್ರೆಸು ತಲೆಬಾಗಿಸಿತು. ಪುಣ್ಯಸ್ಮರಣೀಯ ಗಾಂಧೀಜಿಯವರ ಅಹಿಂಸಾತ್ಮಕ ಕ್ರಾಂತಿ ವಿಧಾನದಿಂದ ಸಮಗ್ರ ಭಾರತದ ಮೂಲೆಮೂಲೆಗಳಲ್ಲಿ ಕ್ರಾಂತಿಕೂಗು ಮೊಳಗಿತು. ವಿವಿಧ ಪ್ರಾಂತಗಳ ಕವಿಗಳು ಅವರವರ ಪ್ರಾಂತೀಯ ಭಾಷೆಗಳಲ್ಲಿ ಕ್ರಾಂತಿಗಾನವನ್ನು ಹಾಡಿದರು. ತಮಗೆ ಎಲ್ಲ ಜ್ಞಾನದ ಅರಿವು ತಮ್ಮ ಭಾಷೆಯ ಮೂಲಕ ಆಗಬೇಕೆಂಬ ಕೂಗು ಹಬ್ಬಿತು. ಮೊದಲನೆಯದಾಗಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದವರು ಅನೇಕ ಶಾಸ್ತ್ರೀಯ ಇಂಗ್ಲಿಷ ಗ್ರಂಥಗಳನ್ನು ಉರ್ದು ಭಾಷೆಗೆ ಪರಿವರ್ತನೆ ಮಾಡಿಸಿದರು. ಬಂಗಾಳಿಗಳು, ಹಿಂದೀ ವಿಜ್ಞಾನ ಪರಿಷತ್ತಿನವರು, ಆಂಧ್ರರು, ಗುಜರಾಥಿಗಳು, ಮರಾಟಿಗಳು ತಂತಮ್ಮ ಪ್ರಾಂತೀಯ ಭಾಷೆಗಳಲ್ಲಿ ಶಾಸ್ತ್ರೀಯ ಗ್ರಂಥ ಪ್ರಕಟನೆಗೆ ಪ್ರಾರಂಭಿಸಿದರು. ಸುಪ್ತಾವಸ್ಥೆಯಲ್ಲಿದ್ದ ಕನ್ನಡಿಗರು ಅಚ್ಚರಿಯಿಂದ ಆ ಪ್ರಾಂತಗಳ ಕಡೆ ನೋಡುತ್ತಿದ್ದರು.

ಆ ಸಮಯದಲ್ಲಿ ಎಂದರೆ ಮೂರನೆಯ ದಶಕಾರಂಭವಾಗುವುದರೊಳಗೆ, ಮೈಸೂರು ಸಂಸ್ಥಾನದಲ್ಲಿ ವಿದ್ಯೆ, ಅಭಿಮಾನ, ಅಧಿಕಾರಸಂಪನ್ನರಾಗಿ ಮೈಸೂರು ಸರಕಾರದ ವಿದ್ಯಾಶಾಖಾಧಿಕಾರಿಗಳಾಗಿದ್ದ ದಿವಂಗತ ರಾಜಮಂತ್ರಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು ಸಂಸ್ಥಾನದ ಹಲವಾರು ಹೈಸ್ಕೂಲುಗಳಲ್ಲಿ ಕನ್ನಡ ಭಾಷೆಯ ಮೂಲಕವೇ ಶಾಸ್ತ್ರೀಯ ವಿಷಯಗಳ ಶಿಕ್ಷಣವೂ ನಡೆಯಬೇಕೆಂದು ಕಡ್ಡಾಯದ ಪ್ರಯೋಗ ಮಾಡಿ ನೋಡಿದರು. ಅದರಿಂದ ಉತ್ತಮವಾದ ಫಲವು ಕಂಡುಬಂದುದಲ್ಲದೆ ಹೈಸ್ಕೂಲ್ ತರಗತಿಗಳ ಗಣಿತ, ವಿಜ್ಞಾನ, ಭೂಗೋಳ ಶಾಸ್ತ್ರಾದಿ ವಿಷಯಗಳನ್ನೊಳಗೊಂಡ ಶಾಸ್ತ್ರೀಯ ಕನ್ನಡ ಪುಸ್ತಕಗಳು ಸರಕಾರದವರಿಂದಲೆ ಪ್ರಕಟಿಸಲ್ಪಟ್ಟವು. ಶ್ರೀಮಾನ್ ಸುಬ್ಬರಾಯರು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾನಪತಿ ಪದವಿಗೆ ಬಂದ ಬಳಿಕ ಹೈಸ್ಕೂಲು ಶಿಕ್ಷಣದಲ್ಲಿ ತಾವು ಮಾಡಿದ್ದ ಕ್ರಾಂತಿಕಾರಕ ಶಿಕ್ಷಣದಿಂದ ಉತ್ತೇಜಿತರಾಗಿದ್ದುದರಿಂದ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಪ್ರಕಟಣೆಯನ್ನು ಆರಂಭಿಸಿದರು. ಆ ಗ್ರಂಥಮಾಲೆಯಲ್ಲಿ ಇದುವರೆಗೆ ೨೩ ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ ೧೪ ಸಾಹಿತ್ಯಕ್ಕೆ ೧ ಇಸ್ಲಾಂ ಸಂಸ್ಕೃತಿಗೆ ಸಂಬಂಧಪಟ್ಟವುಗಳು. ಉಳಿದ ಎಂಟು ಗ್ರಂಥಗಳು ಶಾಸ್ತ್ರೀಯ ವಿಷಯಕವಾಗಿವೆ. ಅವುಗಳಾವುವೆಂದರೆ:–(೧) ಆರೋಗ್ಯ, ಅದರ ಜ್ಞಾನ ಮತ್ತು ಸಾಧನ (ಸಚಿತ್ರ) ಡಾ। ಜೆ. ಎ. ಈಶ್ವರ ಮೂರ್ತಿ ರಚಿತ (೨) ಹಣ ಪ್ರಪಂಚ (ಅರ್ಥಶಾಸ್ತ್ರ)-ವಿ. ಸೀತಾರಾಮಯ್ಯ (೩) ಜೀವವಿಜ್ಞಾನ(ಬಿ.ವೆಂಕಟನಾರಾಯಣಪ್ಪ) (೪) ಹಿಂದೂದರ್ಶನಸಾರ-ಮಹಾಮಹೋಪಾಧ್ಯಾಯ ಪಂಡಿತ ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ (೫) ರಾಜನೀತಿ-ಎಚ್. ಕೃಷ್ಣರಾವ್ (೬) ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ-ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ (೭) ಪ್ರಾಣಿಶಾಸ್ತ್ರ-ಡಾ। ಎ. ಸುಬ್ಬರಾವ್, (೮) ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು-ಜಿ. ಹನುಮಂತರಾವ್ (೯) ಇಸ್ಲಾಂ ಸಂಸ್ಕೃತಿ-ಮೂಲ ಲೇಖಕರು ಪ್ರೊ॥ ಮಹಮುದ್ ಅಬ್ಬಾಸ್ ಶೂಸ್ತ್ರಿ; ಅನುವಾದಕರು-ರಾಜಸೇವಾಸಕ್ತ ಬಿ. ಎಂ. ಶ್ರೀ ಕಂಠಯ್ಯ. ಈ ಗ್ರಂಥಗಳೆಲ್ಲ ಆಯಾ ವಿಷಯಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿ ವಿಶ್ವವಿದ್ಯಾನಿಲಯದ ಪ್ರಶಸ್ತಿಗಳನ್ನು ಪಡೆದವರಿಂದಲೇ ಬರೆಯಲ್ಪಟ್ಟಿವೆ. ಈ ಕನ್ನಡ ಗ್ರಂಥಮಾಲೆಗೆ ಸ್ವರ್ಗೀಯ ಶ್ರೀ। ಬಿ. ಎಂ. ಶ್ರೀಕಂಠಯ್ಯ ಎಂ. ಎ., ಬಿ. ಎಲ್. ಅವರು ಪ್ರಧಾನ ಸಂಪಾದಕರಾಗಿ ಕೆಲಸಮಾಡಿದರು. ದಿವಂಗತ ಶ್ರೀ ಎನ್. ಎಸ್. ಸುಬ್ಬರಾಯರು ಹೈಸ್ಕೂಲು ತರಗತಿಗಳಲ್ಲಿ ಕನ್ನಡವನ್ನು ಬೋಧಕ ಭಾಷೆಯಾಗಿ ಮಾಡಿದುದಕ್ಕೇ ತೃಪ್ತರಾಗಲಿಲ್ಲ.

ಅವರಲ್ಲಿ ಅಡಗಿದ್ದ ಕನ್ನಡ ಭಾಷಾಭಿಮಾನಕ್ಕೆ ಅವರು ಮೈಸೂರು ವಿಶ್ವವಿದ್ಯಾನಿಲಯ ಸ್ಥಾನಪತಿಪದವಿ ಪ್ರಾಪ್ತಿಯಿಂದ ಮತ್ತಷ್ಟು ಪುಟಕ್ಕಿಟ್ಟಂತಾಯಿತು. ೧೯೩೯ರಲ್ಲಿ ‘ಪ್ರಬುದ್ಧ ಕರ್ಣಾಟಕ’ದ ಸಂಪಾದಕರಾಗಿದ್ದ (ಇವರೂ ದಿವಂಗತ ಟಿ. ಎಸ್. ವೆಂಕಣ್ಣಯ್ಯನವರೂ ಈ ಪತ್ರಿಕೆಯ ಸಂಸ್ಥಾಪಕರು)—ಶ್ರೀ ಪ್ರೊ। ಎ. ಆರ್. ಕೃಷ್ಣಶಾಸ್ತ್ರಿಗಳನ್ನು ಕರೆದು—“ಕೃಷ್ಣ ಶಾಸ್ತ್ರೀ, ‘ಪ್ರಬುದ್ಧ ಕರ್ಣಾಟಕ’ದ ಸಂಪಾದಕನಾಗಿ ಈಗ ನೀನು ಮೂರು ಕೆಲಸ ಮಾಡಬೇಕು—೧. ಪತ್ರಿಕೆಯನ್ನು ಕಾಲಕಾಲಕ್ಕೆ ತಡವಿಲ್ಲದೆ ಹೊರಡಿಸುವುದು. ೨. ಅದರಲ್ಲಿ ಸಾಹಿತ್ಯ ಮಾತ್ರವಲ್ಲದೆ ಶಾಸ್ತ್ರ ವಿಚಾರಗಳನ್ನೂ ಪ್ರಕಟಿಸುವುದು. ೩. ಮೈಸೂರಿನಿಂದ ಹೊರಗೆ ಇರುವ ಕರ್ಣಾಟಕದ ಸಹಾಯ ಸಹಾನುಭೂತಿಗಳನ್ನೂ ಹೆಚ್ಚು ಹೆಚ್ಚಾಗಿ ಪಡೆಯುವುದು. ಇವಿಷ್ಟನ್ನೂ ಮನಸ್ಸಿನಲ್ಲಿಟ್ಟುಕೊಂಡು ಪತ್ರಿಕೆಯನ್ನು ಉತ್ತಮಗೊಳಿಸು, ಉತ್ತಮೋತ್ತಮದದ್ದನ್ನಾಗಿ ಮಾಡು; ಅದಕ್ಕೆ ಬೇಕಾದ ದ್ರವ್ಯವನ್ನು ಒದಗಿಸುವುದು ನನ್ನ ಭಾರ!” ಎಂದು ಸ್ಥಾನಪತಿ ಸುಬ್ಬರಾಯರು ಹೇಳಿದರು.* ಕನ್ನಡ ನುಡಿಯ ಏಳಿಗೆಗಾಗಿ ಕರ್ಣಾಟಕ ಸಂಘವನ್ನು ಸ್ಥಾಪಿಸಿ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ, ೧೯೧೯ನೆಯ ಸಾಲಿನಲ್ಲಿ (ಸಿದ್ಧಾರ್ಥಿ ಸಂವತ್ಸರದ ಯುಗಾದಿಯ ದಿನ) ‘ಪ್ರಬುದ್ಧ ಕರ್ಣಾಟಕ’ದ ಮೊದಲನೆಯ ಸಂಚಿಕೆಯನ್ನು ಪ್ರಕಾಶಕ್ಕೆ ತಂದರು. ಮೊದಲು ಪ್ರಧಾನವಾಗಿ ಅದರಲ್ಲಿ ಸಾಹಿತ್ಯ ವಿಷಯಕ ವಿಚಾರಗಳು, ಕತೆಗಳು ಪ್ರಕಟವಾಗುತ್ತಿದ್ದವು. ಶ್ರೀ ಸುಬ್ಬರಾಯರ ಆಶ್ವಾಸನದಿಂದ ಶ್ರೀ ಕೃಷ್ಣ ಶಾಸ್ತ್ರಿಗಳ ಕನ್ನಡಾಭಿಮಾನಕ್ಕೆ ಪುಟವಿಟ್ಟಂತಾಗಿ ‘ಪ್ರಬುದ್ಧ ಕರ್ಣಾಟಕ’ದಲ್ಲಿ ಶಾಸ್ತ್ರೀಯ ವಿಷಯಕ ಪ್ರೌಢ ಲೇಖನಗಳೂ ಪ್ರಕಟವಾಗಲಾರಂಭಿಸಿದವು. ತಮ್ಮ ಬೆಳ್ಳಿಯ ಹಬ್ಬದ ಸಂಚಿಕೆಯ ಹೊತ್ತಿಗೆ ‘ಪ್ರ. ಕರ್ಣಾಟಕ’ವು ೮೫ ವಿವಿಧ ಶಾಸ್ತ್ರೀಯ ವಿಷಯಕ ಪ್ರೌಢ ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿರುವುದು.† ಮತ್ತೆ ಈಗಲೂ ಹಲವಾರು ಶಾಸ್ತ್ರೀಯ ವಿಷಯಕ ಪ್ರೌಢ ಲೇಖನಗಳು ಅದರಲ್ಲಿ ಪ್ರಕಟವಾಗುತ್ತಿವೆ. ಶ್ರೀ ಕೃಷ್ಣ ಶಾಸ್ತ್ರಿಗಳ ತಪಸ್ಸಿನ ಫಲವಾಗಿ ಜನ್ಮವೆತ್ತಿದ ‘ಪ್ರಬುದ್ಧ ಕರ್ಣಾಟಕ’ ಇಂದು ಪ್ರಬುದ್ಧವಾಗಿ ವಿಶಾಲಕರ್ಣಾಟಕದಲ್ಲಿ ಗುಡುಗಾಡುತ್ತಿದೆ. ಆ ಪತ್ರಿಕೆ ಲೇಖನ ರೂಪವಾಗಿ ಬರೆದ ಶ್ರೀ। ಬಿ. ವೆಂಕೋಬರಾಯರ “ಮೈಸೂರು ದೇಶದ ವಾಸ್ತುಶಿಲ್ಪ (ಸಚಿತ್ರ)” ಗ್ರಂಥರೂಪವನ್ನು ತಳೆದಿದೆ.

ಶ್ರೀ। ಎನ್. ಎಸ್. ಸುಬ್ಬರಾಯರು ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾಗಿ ಕನ್ನಡದಲ್ಲಿ ಶಾಸ್ತ್ರೀಯ ವಿಚಾರ ಪ್ರಚಾರಕ್ಕಾಗಿ ಮತ್ತೊಂದು ಮಹತ್ಕಾರ್ಯವನ್ನು ಮಾಡಿದರು. ಪ್ರಜೆಗಳಲ್ಲಿ ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣ ಶಿಸ್ತುಗಳಲ್ಲಿ ಭಾಗವಹಿಸಲು ಶಕ್ತರಲ್ಲದವರಲ್ಲಿ ಜ್ಞಾನ ಪ್ರಸಾರಮಾಡಲು ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಾಹಿತ್ಯ, ವಿಜ್ಞಾನ ವಿಷಯಗಳನ್ನು ಕುರಿತ ಕೆಲವು ಲಘು ಪುಸ್ತಕಗಳನ್ನು ಪ್ರಕಟಿಸಲು ಅವಕಾಶವಿತ್ತರು. ಶ್ರೀ। ಜಿ. ಹನುಮಂತರಾಯರ ಸಂಪಾದಕತ್ವದಲ್ಲಿ ಈ ಕಾರ್ಯವು ಮೊದಲಾಯಿತು. ಈ ಪುಸ್ತಕ ಮಾಲೆಗೆ ‘ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ’ ಎಂದು ಹೆಸರಿಟ್ಟು ಇದುವರೆಗೆ ಈ ಮಾಲೆಯಲ್ಲಿ ಉಚ್ಚಪದವೀಧರರಿಂದಲೆ ರಚಿತವಾಗಿರುವ ಸಾಹಿತ್ಯ ಮತ್ತು ಶಾಸ್ತ್ರೀಯ ವಿಷಯಕವಾದ ೫೬ ಲಘು ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ಮುಂದೆ ಹೇಳುವ ೩೩ ಶಾಸ್ತ್ರೀಯ ವಿಷಯಕ ಪುಸ್ತಕಗಳು ಪ್ರಕಟವಾಗಿವೆ.—(೧) ಖಗೋಳ ಶಾಸ್ತ್ರ ಪ್ರವೇಶ (೨) ಸಮಾಜದ ರೋಗರುಜಿನಗಳು (೩) ತೆರಿಗೆ (೪) ನವರತ್ನಗಳು (೫) ವಿದ್ಯುಚ್ಛಕ್ತಿಯ ವೈಭವ (೬) ಪ್ರಾಣಿಜೀವನ (೭) ಕನಸುಗಳು (೮) ಮದುವೆ (೯) ನಮ್ಮ ಆರ್ಥಿಕ ದೃಷ್ಟಿ (೧೦) ವಾಯುಗುಣ (೧೧) ಬೆಳಕು (೧೨) ಕಣ್ಣು ಮತ್ತು ಅದರ ರಕ್ಷಣೆ (೧೩) ಸಾರ್ವಜನಿಕ ವೆಚ್ಚ (೧೪) ಶಿಶುವಿಹಾರಗಳು (೧೫) ಸಂಖ್ಯೋದ್ಯಾನ (೧೬) ವಿಡಂಬನ (೧೭) ಎಲ್ಲೋರ ಮತ್ತು ಅಜಂತಾ (೧೮) ಸಾರಜನಕದ ಮಹತ್ವ (೧೯) ಪಾಶ್ಚಾತ್ಯ ರಾಜಕೀಯ ತತ್ವಗಳು (೨೦) ರಕ್ತ (೨೧) ಗಣಿತಶಾಸ್ತ್ರದ ಸ್ವರೂಪ (೨೨) ಋಗ್ವೇದ (೨೩) ಮಕ್ಕಳ ಭಾವಜೀವನ (೨೪) ಕೌಟಿಲ್ಯ (೨೫) ಮುನಿಸಿಪಾಲಿಟಿಗಳು (೨೬) ರುಚಿ (೨೭) ಕೀಟಗಳು (೨೮)

*ಪ್ರಬುದ್ಧ ಕರ್ಣಾಟಕ—ಬೆಳ್ಳಿಯ ಸಂಚಿಕೆ. ಸಂಪಾದಕೀಯ ಲೇಖನ—“ಪ್ರಬುದ್ಧ ಕರ್ಣಾಟಕದ ಹುಟ್ಟು ಮತ್ತು ಬೆಳವಣಿಗೆ”—ಪುಟ ೨೪.

†ಸ್ಥಳಾಭಾವದಿಂದ ಇಲ್ಲಿ ಅವುಗಳ ಹೆಸರು, ಲೇಖಕರುಗಳ ಹೆಸರನ್ನು ಕೊಡಲಾಗಿಲ್ಲ. ನೋಡಿ—ಪ್ರ. ಕ. ಬೆಳ್ಳಿಯ ಸಂಚಿಕೆ—ವಿಷಯ ಸೂಚಿಕೆ (ಉ) ಶಾಸ್ತ್ರ ವಿಷಯ ಪುಟ ೪೦.

ಅಲೆಗಳು (೨೯) ಐವರು ಭೌತ ವೈಜ್ಞಾನಿಕರು (೩೦) ಕೃತಕ ರೇಶ್ಮೆ (೩೧) ಯುದ್ಧಕಾಲದ ಆರ್ಥಿಕ ಸಮಸ್ಯೆ (೩೨) ಆಹಾರ (೩೩) ಶಬ್ದ ಪ್ರಪಂಚ—ಈ ಮಾಲೆಯ ಪುಸ್ತಕಗಳಿಗೆ ಪ್ರಚಾರ ದೃಷ್ಟಿಯಿಂದ ಕೇವಲ ೩ ಆಣೆ ಬೆಲೆಯನ್ನಿಟ್ಟಿರುವುದರಿಂದ ಕರ್ಣಾಟಕದ ಪ್ರತಿಯೊಂದು ಪುಸ್ತಕ ಭಂಡಾರದವರೂ ಈ ಗ್ರಂಥಮಾಲೆಯ ಪುಸ್ತಕಗಳನ್ನೂ, "ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ"ಯ ೨೩ ಗ್ರಂಥಗಳನ್ನೂ (ಇವುಗಳ ಸಾದಾಪ್ರತಿ ಒಂದೊಂದರ ಬೆಲೆ ಕೇವಲ ೦-೧೨-೦) ಸಂಗ್ರಹದಲ್ಲಿಡಬಹುದು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡಗ್ರಂಥ ಸಮಿತಿಯವರು 'ಪ್ರಬುದ್ಧ ಕರ್ಣಾಟಕ'ದವರು ೨೦ನೆಯ ಶತಮಾನದ ೩-೪-೫ ದಶಕಗಳಲ್ಲಿ ಸಾಧಿಸಿರುವ ಕಾರ್ಯ ಮಹತ್ತರವಾದುದು. ಇದಕ್ಕೆ ತಳಹದಿಯನ್ನು ಹಾಕಿ ಕಾರ್ಯಸಾಧನೆಯನ್ನು ಮಾಡಿದ ಶ್ರೇಯಸ್ಸು ದಿವಂಗತ ಶ್ರೀಮಾನ್ ಎನ್. ಎಸ್. ಸುಬ್ಬರಾಯರು ಮತ್ತು ದಿವಂಗತ ಶ್ರೀ ಬಿ. ಎಂ. ಶ್ರೀಕಂಠಯ್ಯನರಿಗೂ, ನಿವೃತ್ತ ಶ್ರೀಯುತ ಎ. ಆರ್. ಕೃಷ್ಣಶಾಸ್ತ್ರಿಗಳಿಗೂ ಅವರೊಂದಿಗೆ ಸಹಕರಿಸಿ ಶಾಸ್ತ್ರೀಯ ಗ್ರಂಥಗಳನ್ನೂ ಲೇಖನಗಳನ್ನೂ ಬರೆದಿತ್ತ ವಿದ್ವಾಂಸರಿಗೂ ಸಲ್ಲತಕ್ಕದಾಗಿದೆ.

೨೦ನೇ ಶತಮಾನದ ೩, ೪, ೫ನೆಯ ದಶಕಗಳು ಕನ್ನಡ ಶಾಸ್ತ್ರೀಯ ಗ್ರಂಥಗಳ ಬೆಳವಣಿಗೆಗೆ ಬಹು ಫಲವತ್ತಾದ ಕಾಲ. ಮೈಸೂರು ವಿದ್ಯಾನಿಲಯವು ಸಾಧಿಸಿದ ಕಾರ್ಯವು ನಡೆದುದು ಇದೇ ಕಾಲದಲ್ಲಿ. ಮತ್ತೆ ಎರಡನೆಯ ದಶಕಾಂತ್ಯದಲ್ಲಿ ಬೆಂಗಳೂರು ಪವನಾಲಯದ (Observatory) ಅಧಿಕಾರಿಗಳಾಗಿದ್ದ ದಿವಂಗತ ಎನ್. ವೆಂಕಟೇಶಯ್ಯಂಗಾರ್ಯರು ಬಿ. ಎ., ಮತ್ತು ಪ್ರೊ। ಬೆಳ್ಳಾವೆ ವೆಂಕಟನಾರಾಯಣಪ್ಪ ಎಂ. ಎ., ಅವರಿಬ್ಬರೂ ಸೇರಿ 'ವಿಜ್ಞಾನ' ಎಂಬ ಮಾಸ ಪತ್ರಿಕೆಯನ್ನು ಪೈಂಗಳ ಸಂ। ಚೈತ್ರ ಮಾಸದಲ್ಲಿ (ಮಾರ್ಚಿ ೧೯೧೭ರಲ್ಲಿ) ಹೊರಡಿಸಿದರು. ಅದಕ್ಕೆ ೫೦೦ ಜನ ಚಂದಾದಾರರು ಕೂಡ ಇಡೀ ಕನ್ನಡ ನಾಡಿನಲ್ಲಿ ಸಿಕ್ಕದೆ, ಅದರ ಪೋಷಣೆಯಾಗದೆ, ೨ ವರುಷಗಳೊಳಗಾಗಿ ಸಂಪಾದಕರು ವಿಷಾದದಿಂದ ಪತ್ರಿಕೆಯನ್ನು ನಿಲ್ಲಿಸಬೇಕಾಗಿ ಬಂತು. ಈ ಶತಮಾನದ ಆದಿಯಲ್ಲಿ ಚಿಕ್ಕ ಬಳ್ಳಾಪುರದ ವಕೀಲರೊಬ್ಬರು ಪಾತಂಜಲಿ ಯೋಗಸೂತ್ರಗಳನ್ನು ಸಂಸ್ಕೃತ ಟೀಕೆ ಮತ್ತು ಕನ್ನಡ ಭಾಷಾಂತರ ಸಹಿತವಾಗಿ ಪ್ರಕಟಿಸಿದ್ದರು. ಆಗ ಕನ್ನಡಿಗರಲ್ಲಿ ವಾಚನಾಭಿರುಚಿ ಹೆಚ್ಚಿರದಿದ್ದುದರಿಂದಲೂ ಅಕ್ಷರಸ್ಥರ ಸಂಖ್ಯೆಯೂ ಹೆಚ್ಚಾಗಿರಲಿಲ್ಲವಾದುದರಿಂದಲೂ ಮೊದಲನೆಯ ಎರಡು ದಶಕಗಳು ಶಾಸ್ತ್ರೀಯ ಗ್ರಂಥಗಳಿಗೆ ಫಲವತ್ತಾಗಿ ಕಂಡು ಬರಲಿಲ್ಲ. ಶಾಸ್ತ್ರೀಯ ಪಠ್ಯಪುಸ್ತಕಗಳಿಗೆ ಮಾತ್ರ ವಿದ್ಯಾರ್ಥಿ ಗಿರಾಕಿಗಳು ಸಿಕ್ಕುತಿದ್ದರು. ಬೇರೆಯವರು ಅವನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ. ಜನರಿಗೆ ಬೇಕಾಗಿದ್ದ ಜ್ಯೋತಿಷ ಶಾಸ್ತ್ರ ಮತ್ತು ವೈದ್ಯ ಗ್ರಂಥಗಳು ಮಾತ್ರ ಕೆಲವು ಪ್ರಚಾರದಲ್ಲಿದ್ದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ-(೧) ಬ್ರ। ಶ್ರೀ। ಬ. ವಿ. ಸುಬ್ರಹ್ಮಣ್ಯ ಶರ್ಮ ವಿರಚಿತ ಸುಧಾರಸಧಾರಾಖ್ಯ ಕರ್ಣಾಟಕ ಟೀಕಾಸಹಿತವಾದ ಅವಂತಿಕಾಚಾರ್ಯ ಶ್ರೀಮದ್ವರಾಹ ಮಿಹಿರಭಟ್ಟಕೃತ ಬೃಹಜ್ಜಾತಖ್ಯಾಖ್ಯ ಹೋರಾಶಾಸ್ತ್ರ—ಪುಟ ೧೩೦೪ಗಳು—ಪ್ರಕಟಣೆ ೧೯೧೩ (೨) ಜ್ಯೋತಿಶಾಸ್ತ್ರ ಪಯೋನಿಧಿ ಪುಟ ೭೧೨ (ಕೀಲಕನಾಮ ಸಂ। ವೈಶಾಖದಲ್ಲಿ ಪ್ರಕಟನೆ) (೩) ಕೃಷ್ಣಮಿಶ್ರೀಯಾ ದಶಾಭುಕ್ತಿನಿರ್ಣಯ ಉದ್ದಿ ನಂಜುಂಡಯ್ಯಕೃತ ಕನ್ನಡ ಟೀಕೆ ಸಹಿತ (೧೯೨೫) (೪) ಕೇರಳ ಪಂಡಿತ ಮಳಯಾಳ ಭಟ್ಟಾಚಾರ್ಯಕೃತ ಕನ್ನಡ ಜಾತಕಫಲ ಚಿಂತಾಮಣಿ-ಪುಟ ೩೫೦ (ಮೂರನೆಯ ಮುದ್ರಣ ೧೯೧೦) (೫) ಸಚ್ಚಿದಾನಂದ ಜೋಯಿಸರ ಕನ್ನಡ ಟೀಕಿನ ಮಾರ್ಕಂಡೇಯ ಜ್ಯೋತಿಷ, ಪುಟಗಳು ೩೫೨ (೧೯೧೯)—ಇವುಗಳಲ್ಲದೆ ಕಾಮಶಾಸ್ತ್ರ ವಿಷಯಕವಾದ ೨-೩ ಪುಸ್ತಕಗಳು ಮದ್ರಾಸಿನಿಂದ ಪ್ರಕಟವಾಗಿ ಯುವಕರ ಮನಸ್ಸಿನ ಮೇಲೆ ದುಷ್ಪರಿಣಾಮವನ್ನುಂಟುಮಾಡುವಂತಿದ್ದುವು. ಅನೇಕರು ಆ ಗ್ರಂಥಗಳನ್ನು ಗುಟ್ಟಾಗಿ ಓದಿ ಪ್ರಚಾರ ಮಾಡುತ್ತಿದ್ದರು. ಅಂತಹ ಗ್ರಂಥಗಳ ಬೆಳವಣಿಗೆಯನ್ನು ನಿಲ್ಲಿಸಿ, ನಿಜವಾದ ಶಾಸ್ತ್ರೀಯ, ಪ್ರಕೃತಿನಿಯಮಬದ್ಧವಾದ ಲೈಂಗಿಕ ವಿಜ್ಞಾನವನ್ನು ತರುಣತರುಣಿಯರಿಗೆ ಬೋಧಿಸುವ ಸಲುವಾಗಿ ಈ ಲೇಖನದ ಲೇಖಕನು ಎರಡು ಗ್ರಂಥಗಳನ್ನು ರಚಿಸಿದನು. ಅವುಗಳಾವುವೆಂದರೆ—(೧) ದಾಂಪತ್ಯವಿಜ್ಞಾನ-ದ. ಕೃ. ಭಾರದ್ವಾಜಕೃತ; (ಮೊದಲನೆಯ ಮುದ್ರಣ ಆಗಸ್ಟ್ ೧೯೨೮) (೨) ಸಂತಾನವಿಜ್ಞಾನ—ದ. ಕೃ. ಭಾರದ್ವಾಜ ರಚಿತ (ಜೂನ್

೧೯೨೯)-ಇವುಗಳ ನಂತರ ಪಂ। ತಾರಾನಾಥರ 'ದಾಂಪತ್ಯ ದರ್ಶನ', ಈಚೆಗೆ ಡಾ। ದೊಡ್ಡೇರಿ ವೆಂಕಟಗಿರಿರಾಯರ 'ಕಾಮಶಿಕ್ಷಣ' ಮತ್ತು 'ಸಂತಾನಸಂಯಮ', ಡಾ। ಗೋಪಾಲಕೃಷ್ಣರಾಯರ 'ಕಾಮದ ಗುಟ್ಟು', 'ಸ್ವರತಿ', ಪೌರುಷ' ಮತ್ತು 'ಪ್ರೇಮಕಲೆ'; ಡಾ। ವಿನಾಯಕ, ರಾವ್ ಬಾಪಟ ಅವರ 'ತರುಣಿಯರ ಆರೋಗ್ಯ' ಎಂಬ ಲೈಂಗಿಕ ವಿಜ್ಞಾನ ಗ್ರಂಥಗಳು ಪ್ರಕಟವಾದವು. ಇತ್ತೀಚೆಗೆ ಈ ವಿಷಯವು ಬಹಿರಂಗವಾಗಿಯೇ, ಶಾಸ್ತ್ರೀಯ ರೀತಿಯಲ್ಲಿ ಕನ್ನಡನಾಡಿನ ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳಲ್ಲಿ ವಿಮರ್ಶಿಸಲ್ಪಡುತ್ತಿರುವುದು ಎಚ್ಚೆತ್ತ ಕನ್ನಡನಾಡಿನ ಪ್ರಗತಿಸೂಚಕವಾಗಿದೆ. 'ವಯಸ್ಕರ ಶಿಕ್ಷಣ ಸಮಿತಿ'ಯವರ ಆಶ್ರಯದಲ್ಲಿ ಮೈಸೂರಿನಿಂದ ಪ್ರಕಟವಾಗುತ್ತಿರುವ 'ಪುಸ್ತಕ ಪ್ರಪಂಚ' ಮಾಸಪತ್ರಿಕೆಯು ಕನ್ನಡೇತರ ಭಾಷೆಗಳಲ್ಲಿ ಪ್ರಸಿದ್ಧವಾದ ಸಾಹಿತ್ಯ ಮತ್ತು ಶಾಸ್ತ್ರೀಯ ಗ್ರಂಥಗಳಸಾರ ಅಥವಾ ಪರಿಚಯಾತ್ಮಕ ಲೇಖನಗಳಿಂದ ಸುಪ್ರಸಿದ್ಧ ಇಂಗ್ಲಿಷ 'ರೀಡರ್ಸ್ ಡೈಜೆಸ್ಟ್' ಮಾರ್ಗವನ್ನನುಸರಿಸಲೆತ್ನಿಸಿರುವುದು ಗಮನಾರ್ಹವಾಗಿದೆ.

ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ದಿವಂಗತ ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರು, ಜನಗಳಲ್ಲಿ ಸುಲಭಗ್ರಾಹ್ಯವಾದ ವೈಜ್ಞಾನಿಕ ಪುಸ್ತಕಗಳನ್ನು ಬರೆಯಿಸಿ ಮುದ್ರಿಸಿ ಪ್ರಕಟಿಸುವುದಕ್ಕಾಗಿ ೨,೫೦೦ ರೂಪಾಯಿಗಳನ್ನು ೧೯೨೬ನೆಯ ಇಸವಿಯಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಕೊಟ್ಟರು. ಪರಿಷತ್ತಿನವರ ಉದಾಸೀನತೆಯಿಂದಲೊ ಕನ್ನಡದಲ್ಲಿ ಪ್ರೌಢ ಶಾಸ್ತ್ರೀಯ ವಿಷಯಗಳನ್ನು ಬರೆಯಬಲ್ಲ ಲೇಖಕರ ಅಭಾವದಿಂದಲೊ ಏನೋ ಪರಿಷತ್ತು ೫ ವರುಷಗಳನಂತರ ಎಂದರೆ ೧೯೩೧ನೆಯ ಇಸವಿಯಲ್ಲಿ ಫ್ರೆಂಚ್ ಜ್ಯೋತಿರ್ವಿದರಾದ ಕೆಮಿಲ್ಲೆ ಫ್ಲಮೇರಿಯನ್ ಎಂಬವರ ಗ್ರಂಥವನ್ನು* ಮೈಸೂರು ಸರಕಾರದ ಪವನಶಾಸ್ತ್ರ ಶಾಲಾಧ್ಯಕ್ಷ ದಿವಂಗತ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರಿಂದ ಕನ್ನಡಿಸಿ ಪ್ರಕಟಿಸಿದರು. ಇದುವರೆಗೆ ಪರಿಷತ್ತಿನಿಂದ ಪ್ರಕಟವಾದ ಶಾಸ್ತ್ರೀಯ ಗ್ರಂಥಗಳು ಅದೇ ಮೊದಲನೆಯದೂ ಕಡೆಯದೂ ಆಗಿರುವುದು ವಿಷಾದಕರ.

ಇನ್ನೂ ೧೩ ತಿಂಗಳಲ್ಲಿ ಮುಗಿಯಲಿರುವ ಇಪ್ಪತ್ತನೆಯ ಶತಮಾನದ ಪೂರ್ವಾರ್ಧಕಾಲದಲ್ಲಿ ವೈದ್ಯಶಾಸ್ತ್ರ ಗ್ರಂಥಗಳ ಬೆಳವಣಿಗೆಯು ಹುಲುಸಾಗಿರುವುದೆಂದು ಮುಂದಿನ ಪಟ್ಟಿಯಿಂದ ತಿಳಿಯಬಹುದು. ಇಲ್ಲಿ ಗ್ರಂಥಗಳ, ಲೇಖಕರ ಹೆಸರನ್ನೂ ಪ್ರಕಟನೆಯ ವರುಷಗಳನ್ನೂ ಸೂಚಿಸಲಾಗಿದೆ:—ವೈದ್ಯಶಾಸ್ತ್ರ ಗ್ರಂಥಗಳು (ಕನ್ನಡದಲ್ಲಿ)-(೧) ಮೈಸೂರು ಸರಕಾರದ ಪ್ರಾಚ್ಯ ಗ್ರಂಥಾಗರದ ಪಂಡಿತರುಗಳಿಂದ ಕನ್ನಡ–ತೆಲುಗು ಭಾಷೆಗೆ ಮೂಲ ಸಂಸ್ಕೃತಸಹಿತ ಅನುವಾದಿಸಲ್ಪಟ್ಟ ಯೋಗರತ್ನಾಕರ ಭಾಗ ೧. (ರಾಯಲ್ ಚತುರ್ಥಾಂಗ ಪುಟ 310, ಶಬ್ದ ಪರಿಭಾಷೆ ವರೆಗೆ ಮಾತ್ರ) ಸನ್ ೧೮೯೯; (೨) ಮಂಗಳೂರು ಭಾರದ್ವಾಜ ಶಿವರಾಯರ ಹೊಮಿಯೊಪಥಿ ಚಿಕಿತ್ಸಾ ಮುಷ್ಟಿ, ಬಾಸೆಲ್ ಮಿಶನ್ ಪ್ರೆಸ್ ೧೯೦೦; (೩) ಜೀವರಸಾಯನಿ ವೈದ್ಯಸಾರ ಶ್ರೀ ಮೇದನ್ ಅವರಿಂದ (೧೯೦೨) ಬಾಸೆಲ್ ಮಿಶನ್ ಬುಕ್ ಡಿಪೊ, ಮಂಗಳೂರು (೪) ವೃಷಾರ್ದ ಸಹಸ್ರ ವರ್ಣನೆ-ಸಸ್ಯಶಾಸ್ತ್ರ, ಬಾಸೆಲ್ ಮಿಶನ್ ಡಿಪೊ (೫) ವೈದ್ಯ ತತ್ವ ನಿರ್ಣಯ ಸಾಗರ ೨ ಭಾಗಗಳು-ಗಣೇಶ ಶಾಂತಯ್ಯ ಕಾರಿಬೈಲಕರ—ಶ್ರೀರಾಮತತ್ವಪ್ರಕಾಶ ಪ್ರೆಸ್ ಬೆಳಗಾಂವಿ (೧೯೦೭) (೬) ಭಿಷಗ್ದರ್ಪಣ, ಶ್ರೀ ಸೌ। ಬಾಯಿ ನಾಗೂ ಬಾಯಿ ಬುಳ್ಳಪ್ಪ ಮಾಮಲೇ ದೇಸಾಯಿ ಸಂಸ್ಥಾನ ಹಂದಿಗನೂರು ಎಂಬಾಕೆ ಸಂಗ್ರಹಿಸಿರುವ ಚಿಕಿತ್ಸಾಗ್ರಂಥ ೧೯೧೭; (೭) ಚಿಕಿತ್ಸಾ ಪ್ರಭಾಕರ ಎಂಬ ಮರಾಠಿ ವೈದ್ಯಕಿ ಪುಸ್ತಕದೊಳಗಿನ ಜ್ವರ (೩೨ನೆಯ ಪ್ರಕರಣ) ಪುಟ ೧೮೮. ಭಿಕಾಜಿ ಪರಶುರಾಮ ಕಾಳೆ ಅನುವಾದಿತ (೧೯೩೧); (೮) ಪಟ್ಲಗೆರೆ ಪಂ। ಸೂರ್ಯನಾರಾಯಣ ಶಾಸ್ತ್ರಿಗಳಿಂದ ಅನುವಾದಿತ ವಾದಿಪಾದ ಮಾಧವ ನಿಧಾನ ಮತ್ತು (೯) ಶಾರ್ಙ್ಗಧರ ಸಂಹಿತಾ (೧೯೩೦); (೧೦-೧೧) ಮಂಗಳೂರಿನ ಪ. ರಾಮಕೃಷ್ಣಯ್ಯನವರ ಆಯುರ್ವೇದಸಾರ ಪ್ರಥಮ ಭಾಗ (೧೯೨೧) ಮತ್ತು ಆಯುರ್ವೇದಸಾರ ದ್ವಿತೀಯ ಭಾಗ (ಪೂರ್ವಖಂಡ) ೧೯೩೩; (೧೨) ರೋಗಚಿಕಿತ್ಸೆ (ಕೆಲವು ಊರೌಷಧಗಳ ಪ್ರಯೋಗ; ಭಾರದ್ವಾಜ ಶಿವರಾವ್ ಮಂಗಳೂರು, ಬಾಸೆಲ್ ಮಿಶನ್ ಬುಕ್

---

*'Astronomy for wemen' translated into English by Francis A. Welby and named 'Astronomy for Amateurs.'

ಡಿಪೊ (೧೯೨೬?) (೧೩-೧೪-೧೫) ತರೀಕೆರೆ ರಾ. ಸೂ. ವೆಂಕಟಕೃಷ್ಣಯ್ಯ ರಚಿತ—ಸಚಿತ್ರ ಮೂಲಕ ವೈದ್ಯ ಪ್ರಕಾಶಿಕೆ (೩ ಭಾಗಗಳು,) ಧಾತುವೃದ್ಧಿ ರತ್ನ ಪ್ರಭೆ ಮತ್ತು ವೈದ್ಯಕಲಾನಿಧಿ (ಅನುಕ್ರಮವಾಗಿ ೧೯೨೩?–೨೬–೨೯ರಲ್ಲಿ ಪ್ರಕಟವಾದವುಗಳು) (೧೬) ವೈದ್ಯ ಗೋವಿಂದರಾಜುಲು ನಾಯಿಡು ರಚಿತ ಶಿಶು ವೈದ್ಯ ಸಂಜೀವನಿ ಮತ್ತು ಹಿಂದು ಯೂನಾನಿ ವೈದ್ಯ ಸಂಗ್ರಹ; (೧೮) ಡಾ। ಎಂ. ಗುರುರಾವ್ ರಚಿತ ಕನ್ನಡ ಆಂಗ್ಲೇಯ ವೈದ್ಯಶಾಸ್ತ್ರ (೧೯೩೦?); (೨೦-೨೧) ಪಂಡಿತ ತಾರಾನಾಥರ ಪ್ರಸಿದ್ಧ ರಸೌಷಧಿಗಳು (೧೯೪೧) ಮತ್ತು ಸುಲಭ ಚಿಕಿತ್ಸೆ (೧೯೩೯); (೨೨) ಬಸರಿ ಮತ್ತು ಬಾಣಂತಿತನದ ಕೈಪಿಡಿ ಆಯುರ್ವೇದ, ವಿದ್ವಾನ್ ಎನ್. ಎಸ್. ಸುಬ್ರಹ್ಮಣ್ಯ ಶಾಸ್ತ್ರೀ ಎಲ್. ಎಂ. ಪಿ. ರಚಿತ (೧೯೪೩); (೨೩) ವೈದ್ಯವಲ್ಲಭ ಎಂ. ಜಿ. ಶಿಂಗ್ರೆಯ್ಯಂಗಾರ್ ಅವರ ಆಯುರ್ವೇದದ ಸುಲಭ ಚಿಕಿತ್ಸೆಗಳು (೧೯೪೧); (೨೪) ಆ। ವಿದ್ವಾನ್ ಮೋಟಗಾನಹಳ್ಳಿ ಮಹಾದೇವ ಶಾಸ್ತ್ರಿ ರಚಿತ ಔಷಧಿಕಲ್ಪನಾ (೧೯೪೬) (೨೫) ಆಯುರ್ವೇದತೀರ್ಥ ಆರ್ಯ ಅನಂತಾಚಾರ್ಯರ ಔಷಧಿಗಳ ಗುಣಶಾಸ್ತ್ರ, ಚರಕಸಂಹಿತೆ (ಚಿಕಿತ್ಸಾ ಸ್ಥಾನ-೧ನೆಯ ಭಾಗ) ಅಷ್ಟಾಂಗ, ಹೃದಯದ ಅನುವಾದ (ಸೂತ್ರಸ್ಥಾನ); (೨೮) ಡಾ। ಎಂ. ಆರ್. ಭಟ್ಟರ ಸಹಸ್ರ ಯೋಗ; (೨೯) ಡಾ। ದೊಡ್ಡೆರಿ ವೆಂಕಟಗಿರಿ ರಾಯರ ಪ್ರಸವ ಶಾಸ್ತ್ರ; (೩೦) ಅನುಭೂತಯೋಗ ಸಂಗ್ರಹ–ಸಂಗ್ರಹಕಾರ–ಆಯುರ್ವೇದತೀರ್ಥ ಗ. ನಿ. ಪಟವರ್ಧನ ಶಿರಸಿ (೧೯೪೮); (೩೦-೩೪) ಆರ್ಯವೈದ್ಯ ಮಾಸ ಪತ್ರಿಕೆಯ ಸಂಪಾದಕರಾದ ವೈದ್ಯ ಶ್ರೀ। ಡಾ. ಅ. ಹಲಸೀಕರ, ಹುಬ್ಬಳ್ಳಿ ಅವರ ವನೌಷಧಿ ಗುಣಾದರ್ಶ (ಪೂರ್ವಾರ್ಧ), ಬೃಹನ್ನಿಘಂಟು, ತರ್ಕಸಂಗ್ರಹ, ರಸವೈದ್ಯ, ಮಾಧವ ನಿಧಾನ (ಕನ್ನಡ ಅನುವಾದ); (೩೫) ರಸಚಂಡಾಂಶು–ಡಾ. ಅ. ಹಲಸಿಕರ ಪ್ರಕಾಶಿತ (೩೬-೩೭) ಮೆಣಸಿಗಿ ವೈದ್ಯ ಶ್ರೀ ಪಾ. ತ. ಕುಲಕರ್ಣಿ ರಚಿತ ಸಚಿತ್ರ ಕನ್ನಡ ಇಂಜೆಕ್ಷನ್ ವಿಜ್ಞಾನ ಮತ್ತು ಐಚ್ಛಿಕ ಸಂತಾನ; (೩೮) ಪಂಡಿತ ಶಿವಕುಮಾರ ಸ್ವಾಮಿಯವರ ಆರೋಗ್ಯದರ್ಪಣ; (೩೯) ಕವಿರಾಜ ಧೀರೇಂದ್ರನಾಥರಾಯ್‌ರ ಇಂಗ್ಲಿಷ ಗ್ರಂಥಾನುವಾದ 'ಆಯುರ್ವೇದದಲ್ಲಿ ತ್ರಿದೋಷ ತತ್ವಗಳು' ದ. ಕೃ. ಭಾರದ್ವಾಜ ಅನುವಾದಿತ (ಆರೋಗ್ಯ ಮಂದಿರದಲ್ಲಿ ಪ್ರಕಟವಾದುದು); (೪೦) ಆಹಾರ ವಿಜ್ಞಾನ–ದ. ಕೃ. ಭಾರದ್ವಾಜ ಕೃತ (ಪ್ರಥಮ ಮುದ್ರಣ ೧೯೩೩); (೪೧) ವೈದ್ಯ ಚಿಂತಾಮಣಿ–ಕನ್ನಡ ಅನುವಾದ ಸಹಿತ–ವಾಜಪೇಯ ಬೆಂಗಳೂರು ಪ್ರಕಾಶಿತ ೨ ಭಾಗಗಳು (೪೨) ಆರೋಗ್ಯ ಸಾಧನ–ಗಾಂಧೀಜಿ (೪೩) ಶರೀರಶಿಕ್ಷೆ, ಜಿ. ಬಾಪಟ (೪೪) ತುಂ. ರ. ನರಸಿಂಹಯ್ಯ ರಚಿತ ಆರೋಗ್ಯ ಸಾಧನೆ (೪೫) ಪ್ರಸವ ಕಾಲದಲ್ಲಿ ಪ್ರಥಮ ಚಿಕಿತ್ಸೆ ಡಾ। ಯು. ರಾಮರಾವ್ (೪೬) ಉಡುಪಿ ನವಭಾರತ ಪುಸ್ತಕ ಭಂಡಾರದ ಡಾ। ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್., ಅವರ 'ಮನೆಮದ್ದು'; (೪೬) ಕೆ. ರಾಮಕೃಷ್ಣ ಉಡುಪ ಮತ್ತು ಬಳ್ಕುಂಜೆ ಸುಬ್ಬರಾಯರ 'ಆರೋಗ್ಯ ಸಾರಸಮುಚ್ಚಯ' (೪೭) ಮಕ್ಕಳ ವ್ಯಾಧಿಗಳು—ಬಿ. ವಿ. ವೆಂಕಟೇಶಯ್ಯ; (೪೮) ಡಾ। ನಂಜಪ್ಪನವರ ಪ್ರಸವಶಾಸ್ತ್ರ; (೪೯) ಕೀರ್ತಿಶೇಷ ಅಗರಂ ಪುಟ್ಟಸಾಮಿ ಪಂಡಿತಕೃತ 'ದೀಪಿಕಾ' ಟೀಕಾ ಸಹಿತ ಲೋಲಂಬ ರಾಜಕೃತ 'ವೈದ್ಯಜೀವನ' (೧೯೨೩)

ವೈದ್ಯೇತರ ಶಾಸ್ತ್ರೀಯ ಗ್ರಂಥಗಳು:—ಈ ಶತಮಾನದ ೪-೫ನೆಯ ದಶಕಗಳು ಕನ್ನಡದಲ್ಲಿ ಎಲ್ಲ ಬಗೆಯ ಶಾಸ್ತ್ರೀಯ ಗ್ರಂಥಗಳ ರಚನೆ ಮತ್ತು ಪ್ರಕಟನೆಗಳಿಗೆ ಬಹು ಫಲವತ್ತಾದ ಕಾಲವೆಂಬುದು ಪ್ರಕಟವಾಗಿರುವ ಗ್ರಂಥಗಳ ಸಂಖ್ಯೆಯಿಂದ ಧಾರಾಳವಾಗಿ ಹೇಳಬಹುದಾಗಿದೆ. ಧಾರವಾಡದ ಶ್ರೀ ಬಿಂದುಮಾಧವ ಬುರ್ಲಿ ಅವರ ಮಿಂಚಿನ ಬಳ್ಳಿ ಗ್ರಂಥಮಾಲೆ ಮತ್ತು 'ಸಮಾಜ' ಪುಸ್ತಕಾಲಯಗಳವರು ಹಲಕೆಲವು ಶಾಸ್ತ್ರೀಯ ಗ್ರಂಥಗಳನ್ನು ಪ್ರಕಟಿಸಿರುವರು. ಮತ್ತೆ ಬೆಂಗಳೂರಿನಲ್ಲಿ ಶ್ರೀ। ನಿಟ್ಟೂರು ಶ್ರೀನಿವಾಸರಾಯರ 'ಸತ್ಯಶೋಧನ ಪುಸ್ತಕ ಭಂಡಾರ'ದವರು ಶ್ರೀ। ಶಿವರಾಮ ಕಾರಂತರ 'ಬಾಲ ಪ್ರಪಂಚ'ವೆಂಬ ಸಚಿತ್ರ ಮಹದ್ಗ್ರಂಥವನ್ನು ಮೂರು ಭಾಗಗಳಲ್ಲಿ ಪ್ರಕಟಿಸಿದರು. ಈ ಪ್ರಕಾಶನಗಳಲ್ಲದೆ ವಿವಿಧ ಲೇಖಕರು ಸ್ವಂತವಾಗಿಯೊ, ವಿವಿಧ ಪ್ರಕಾಶಕರ ಮೂಲಕವೊ ವಿವಿಧ ಶಾಸ್ತ್ರೀಯ ವಿಷಯಕ ಗ್ರಂಥಗಳನ್ನು ರಚಿಸಿ, ಪ್ರಕಟಿಸಿರುವರು. ಅವುಗಳಲ್ಲಿ ನಾನು ನೋಡಿರುವ ಅಥವಾ ನನ್ನ ಗಮನಕ್ಕೆ ಬಂದಿರುವ ಗ್ರಂಥಗಳು ಅವುಗಳ ಲೇಖಕರ ಹೆಸರುಗಳನ್ನು ಇಲ್ಲಿ ಉಲ್ಲೇ

ಖಿಸುವೆನು:—(೧) ಅನಂಗರಂಗ—'ವಿಹಾರಿ' (೨) ಆರೋಗ್ಯ ಸಂಗ್ರಾಮ-ಸರ್. ಜೇಮ್ಸ್ (೩) ಆರೋಗ್ಯ ಜೀವನ-ಹರ್ಡೇಕರ್ ಮಂಜಪ್ಪ, (೪) ಋಗ್ವೇದ ಭಾಷಾಂತರ, ಮಂಡಲ ೧—ಗಾಯತ್ರಿ ಸಾಂಬ ಶಾಸ್ತ್ರಿ; (೫) ಎಕ್ಸ್‌ರೇ—ಯು. ರಾಘವೇಂದ್ರಾಚಾರ್ಯ; (೬) ಕನ್ನಡ ನುಡಿಯ ಹುಟ್ಟು—ಶಂ. ಬಾ. ಜೋಶಿ; (೭) ಕಾಮಕುಂಜ—'ವಿಹಾರಿ'; (೮) ಕಾಮಸೂತ್ರಗಳು—೪ ಭಾಗ—ವಾತ್ಸಾಯನ ಮುನಿ; (೯) ಕಾಮದಹನ ಭ್ರಾಂತಿ-ವಿಹಾರಿ; (೧೦) ಜೀವದ ಉತ್ಪತ್ತಿ ಮತ್ತು ಪರಿವರ್ತನೆ—ಎಸ್. ನಾರಾಯಣ ರಾವ್; (೧೧) ಗಾಂಧಿ ಯೋಜನೆ-ಎಸ್. ಕೃಷ್ಣ ಶರ್ಮ; (೧೨) ಜೀವನಸೌಂದರ್ಯ—ಮತ್ತು ಸಾಹಿತ್ಯ-ಡಿ. ವಿ. ಗುಂಡಪ್ಪ; (೧೩) ಜೇನಿನ ವ್ಯವಸಾಯ—ಪಿ. ಲಕ್ಷ್ಮೀನಾರಾಯಣ ರಾವ್; (೧೪) ತತ್ತ್ವರತ್ನಪ್ರಕಾಶ-ಚಿ. ರಘುನಾಥಾಚಾರ್ಯ; (೧೫) ತತ್ತ್ವಸಮುಸ್ಯೆ—ವೈ. ಸುಬ್ಬರಾವ್; (೧೬) ತತ್ತ್ವಶುದ್ಧಿ-ದೇ. ರಾಮಾನುಜಾಚಾರ್ಯರು; (೧೭) ಜಪಯೋಗ-ಅ. ನಾರಾಯಣ ಸಾಮಿ ಅಯ್ಯರ್ (ಅನುವಾದಕ); (೧೮) ತರಕಾರಿಗಳನ್ನು ಬೆಳೆಯುವ ಕ್ರಮ-ಸಿ. ವಿ. ರಾವ್; (೧೯) ತಾಯ್ನುಡಿಯಲ್ಲಿ ಶಿಕ್ಷಣ—ಗೋರೂರು ರಾಮಸ್ವಾಮಿ ಅಯ್ಯಂಗಾರ್; (೨೦) ಪರಮಾಣು-ಜಿ. ಆರ್. ರಂಗಸಾಮಿ; (೨೧) ಪರಮಾಣು ಚರಿತ್ರೆ-ಜಿ. ಆರ್. ಲಕ್ಷ್ಮಣ; (೨೨) ನವೀನ ವಿದ್ಯಾಭ್ಯಾಸ ಮತ್ತು ಆಧುನಿಕ ಶಿಕ್ಷಣ ಪದ್ಧತಿಗಳು-ಎ. ವೆಂಕೋಬಾಚಾರ್; (೨೩) ಪರಾಪರ ಬ್ರಹ್ಮವಿದ್ಯೆ-ಚಿ. ರಘುನಾಥಾಚಾರ್ಯ; (೨೪) ಪ್ರಾಯೋಗಿಕ ಮನಶ್ಶಾಸ್ತ್ರದ ಪರಿಚಯ, ಎನ್. ಎಸ್. ನಾರಾಯಣ ಶಾಸ್ತ್ರಿ; (೨೫) ಫ್ರಾನ್ಸಿನ ಮಹಾಕ್ರಾಂತಿ-ಪಿ. ಆರ್. ರಾಮಯ್ಯ; (೨೬) ಪಾಕಶಾಸ್ತ್ರ-ಜೆ. ರಘುಪತ್ಯಾಚಾರ್ಯ; (೨೭) ಪಾತಂಜಲಿಯೋಗ ಸೂತ್ರಗಳು-ಲಕ್ಷ್ಮೀಪತಿ ಶರ್ಮ; (೨೮) ಬುದ್ಧಿಶಕ್ತಿಯ ಅಳತೆ-ಎಂ. ವೆಂಕೋಬಾಚಾರ್; (೨೯) ಬೋಧನ ನಿಯಮಗಳು-ಡಾ॥ ಎಸ್. ಪಾಲ್ ಚಿನ್ನಪ್ಪ; (೩೦) ಧರ್ಮಸಂಭವ-ಪಂಡಿತ ತಾರಾನಾಥರು; (೩೧) ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆ-ಎಂ. ವಾಸುದೇವ ರಾವ್; (೩೨) ಭಾರತದ ವ್ಯಾಪಾರ-ಜಿ. ಎನ್. ಕೃಷ್ಣಮೂರ್ತಿ; (೩೩) ಭಾರತದ ರಾಜ್ಯಾಂಗ ರಚನೆ-ವಿ. ಸಿ; (೩೪) ಭಾರತೀಯ ಪೌರ ನೀತಿಯ ಕೈಪಿಡಿ-ಕಂ. ಕೃಷ್ಣಯ್ಯಂಗಾರ್; (೩೫) ಭರತಮುನಿ ಪ್ರಣೀತ ಭರತನಾಟ್ಯಶಾಸ್ತ್ರ-ದ. ಕೃ. ಭಾರದ್ವಾಜ (ಅನುವಾದಕ-ರಂಗಭೂಮಿ ೬ನೆಯ ಸಂಪುಟದಲ್ಲಿ ಪ್ರಕಟವಾಗಿರುವುದು); (೩೬) ಬಾಲ ತ್ರಿಕೋಣಮಿತಿ-ಎಂ. ವಿ. ಜಂಬುನಾಥನ್; (೩೭) ಭಾರತ ಚಿತ್ರಕಲೆಯಲ್ಲಿ ರವಿವರ್ಮನ ಸ್ಥಾನ-ಅ.ನ. ಕೃಷ್ಣರಾಯ; (೩೮) ಮನೋವಿಜ್ಞಾನದ ರೂಪರೇಖೆ ಗೌರೀಶ ಕೈಕಿಣಿ; (೩೯) ಮಕ್ಕಳ ಆಟಗಳು-ವಿ. ಕೆ. ಜಾವಳಿ; (೪೦) ಮನಶ್ಶಾಸ್ತ್ರ ಪರಿಚಯ ಎನ್. ಎಸ್. ನಾರಾಯಣ ಶಾಸ್ತ್ರಿ; (೪೧) ಮಾನವನ ಕೈಪಿಡಿ-ಶಂಕರ ನಾರಾಯಣ ಕಾರಂತ; (೪೨) ಮೀಮಾಂಸ ದರ್ಪಣ—ದೇವುಡು ನರಸಿಂಹ ಶಾಸ್ತ್ರಿ; (೪೩) ಮೈಸೂರಿನ ಆರ್ಥಿಕ ಯೋಜನೆ-ಪಿ. ವಿ. ಎಚ್. ಕೃಷ್ಣರಾವ್; (೪೪) ರತಿರಹಸ್ಯ-'ವಿಹಾರಿ'; (೪೫) ರಾಜನೀತಿಶಾಸ್ತ್ರ-ಕೃಷ್ಣಮಾಚಾರ್ಯ ಜೋಶಿ; (೪೬) ರಾಜ್ಯಾದಾಯವೂ ಬಡತನವೂ-ಡಿ. ಎಸ್. ಶರ್ಮ (ಅನುವಾದಕ); (೪೭) ರೈತನ ಪ್ರಪಂಚ—ಡಿ. ಕೃಷ್ಣಯ್ಯಂಗಾರ್; (೪೮) ಲೇಖನ ಕಲೆ-ಮಿರ್ಜಿ ಅಣ್ಣಾರಾಯರು; (೪೯) ರಂಗವಲ್ಲಿ ಪುಸ್ತಕ-ಸುಭದ್ರಾಬಾಯಿ; (೫೦) ವ್ಯಾಪಾರವೆಂದರೇನು? ಜಿ. ಆರ್. ಜೋಶ್ಯರ್; (೫೧) ವಿದ್ಯುಚ್ಛಕ್ತಿಯ ಪ್ರಭಾವ ಎಸ್. ನಾಗೇಶ ರಾವ್; (೫೨) ವೀರ್ಯನಾಶವೇ ಮರಣ-ಶ್ರೀನಿವಾಸ ರಾವ್ ಹೊದಲೂರ; (೫೩) ವಿಜ್ಞಾನದ ವಿಚಿತ್ರಗಳು-ಕೆ. ವಿಠಲ ಶೆಣೈ; (೫೪) ಶಿಕ್ಷಣ ಶಾಸ್ತ್ರ-ಶ್ರೀನಿವಾಸ ಗುಣಚಾರ್; (೫೫) ಶೈಕ್ಷಣಿಕ ಮನಶ್ಶಾಸ್ತ್ರ—ವಿ. ಕೆ. ಜಾವಳಿ; (೫೬) ವಿಜ್ಞಾನ ಮತ್ತು ಸಾಹಿತ್ಯ—ಕೆ. ಎಸ್. ಸವಣೂರ; (೫೭) ವಿಚಾರ ಮಂಜರಿ-ಬೇಂದ್ರೆ; (೫೮) ವಿಜ್ಞಾನ-ಜಿ. ಹನುಮಂತ ರಾವ್; (೫೯) ವಿದ್ಯಾರ್ಥಿ ವಿಚಾರ ವಿಲಾಸ-ಜಿ. ಪಿ. ರಾಜರತ್ನಂ; (೬೦) ವೇದಾಂಗ ಜ್ಯೋತಿಷ-ಬಿ. ಗೋಪಾಲಯ್ಯ; (೬೧) ವೇದಾಂತ ವಿಚಾರದ ಇತಿಹಾಸ-ವೈ. ಸುಬ್ಬರಾವ್; (೬೨) ಶಿಕ್ಷಣ-ಉ. ಮಂಗೇಶ ರಾವ್; (೬೩) ಶಿಕ್ಷಣ ಕಲಾರಹಸ್ಯ-ಎ. ಎಂ. ಜೋಸೆಫ್; (೬೪) ಶಿಕ್ಷಣ ತತ್ವ-ಎಂ ಸುಲ್ತಾನ್ ಮೊಹಿಯುದ್ದೀನ್; (೬೫) ಶರೀರ ಸಾಧನ ಯೋಗ-ಎಸ್. ಸುಂದರಂ; (೬೭) ಸಮತಾವಾದ-ಕು. ಶಿವರಾವ್; (೬೮) ಸ್ವರಾಜ್ಯ ಶಾಸ್ತ್ರ-ವಿನೋಭಾ; (೬೯) ಸ್ವಾವಲಂಬನ-ಬಿ. ಗೋಪಾ

ಲಯ್ಯ; (೭೦) ಸಮಾಜವಿಕಾಸಕ್ರಮ—ನೆಗಳೂರು ಶ್ರೀನಿವಾಸ ರಾವ್; (೭೧) ಸಾಮ್ಯವಾದ–ಕು. ರಾಮ ಚಂದ್ರ ರಾಯರು; (೭೨) ಸಾಮ್ಯವಾದವೇ ಏಕೆ?–ಗೋವರ್ಧನ ರಾಯರು; (೭೩) ಸೂರ್ಯಭೇದನ ವ್ಯಾಯಾಮ-ಎಂ. ಗುಂಡಪ್ಪ; (೭೪) ಸ್ವಾತಂತ್ರ್ಯವೇ ಧರ್ಮ-ಗೋ. ರಾ. ಅಯ್ಯಂಗಾರ್; (೭೫) ಸತ್ಯಾಗ್ರಹ ಶಾಸ್ತ್ರ-ರಂ. ರಾ. ದಿವಾಕರ; (೭೬) ಸಮಾಜ ದರ್ಶನ-ಶಂ. ಬಾ. ಜೋಶಿ; (೭೭) ಸಹಕಾರ–ಬೈಂದೂರು ಆನಂದ ರಾವ್; (೭೮) ಹಠಯೋಗ (ಸಚಿತ್ರ)-ಸ್ವಾಮಿ ಶಂಕರಾನಂದ ಸರಸ್ವತಿ (ಅನುವಾದಕರು); (೭೯) ಹಳ್ಳಿಗಳ ಆರ್ಥಿಕ ಸ್ಥಿತಿ-ರೂ. ಎ. ಸೊಸ್ಯಾಟಿ ಪ್ರಕಟಣೆ; (೮೦) ಹತ್ತು ಸಹಸ್ರ ಕೋಟಿ ರೂಪಾಯಿಗಳ ಆರ್ಥಿಕ ಯೋಜನೆ-ಸರ್. ಪು. ಥಾಕೂರದಾಸ್ ಗ್ರಂಥಾನುವಾದ; (೮೧) ಹಿಂದೂ ಕುಟುಂಬ ಪುನರ್ದರ್ಶನ-ಡಾ। ಪ. ಸೀತಾರಾಮಯ್ಯ; (೮೨) ಕ್ಷಯ ವಿಜ್ಞಾನ-ಕೆ. ಟಿ. ಅನಂತರಾಮಯ್ಯಂಗಾರ್; (೮೩) ಹಳ್ಳಿಯ ವೈದ್ಯ-ಬುರ್ಲಿ ಬಾಗಲಕೋಟೆ ಅವರು. ಈ ಗ್ರಂಥಗಳಲ್ಲದೆ ನನ್ನ ಗಮನಕ್ಕೆ ಬಾರದಿರುವ ಬೇರೆ ಗ್ರಂಥಗಳಿರಬಹುದು. ಇಲ್ಲಿ ಹೇಳಿರುವ ಗ್ರಂಥಗಳಲ್ಲಿ ಕೆಲವು ಲೇಖಕ ಮಿತ್ರರಿಂದ ನನಗೆ ಬಂದವುಗಳು, ಕೆಲವು ಗ್ರಂಥಗಳು ಪ್ರಕಟಿತ ವಿಮರ್ಶೆಗಳಿಂದ ಪರಿಚಿತವಾದವುಗಳಾಗಿವೆ. ಆದ್ದರಿಂದ ಇಲ್ಲಿ ಉಲ್ಲೇಖಿಸಲಾಗದಿರುವ ಗ್ರಂಥಗಳ ಕರ್ತರು ಈ ಲೋಪಕ್ಕಾಗಿ ಕ್ಷಮಿಸಬೇಕು; ಮತ್ತೆ ಸ್ಥಳಾಭಾವದಿಂದ ಗ್ರಂಥಗಳ ಪೂರ್ಣ ಪರಿಚಯವನ್ನು ಮಾಡಿಕೊಡಲಾಗಿಲ್ಲ. ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳೆಷ್ಟು ಪ್ರಕಟವಾಗಿವೆ, ಅವುಗಳ ಸಂಖ್ಯೆ ಹೇಗೆ ದಿನದಿನಕ್ಕೆ ಹೆಚ್ಚುತ್ತಿದೆ, ಭಾರತೀಯ ಅನ್ಯ ಪ್ರಾಂತ್ಯಗಳಲ್ಲಿ ಆಗುತ್ತಿರುವ ಶಾಸ್ತ್ರೀಯ ಗ್ರಂಥ ಪ್ರಕಟಣೆಗಳಲ್ಲಿ ಕನ್ನಡ ಪ್ರಾಂತ್ಯವು ಹಿಂದುಳಿದಿಲ್ಲ ಎಂಬುದರ ರೂಪರೇಖೆಯನ್ನು ತೋರಿಸುವುದೇ ಈ ಲೇಖನದ ಉದ್ದೇಶ. ಆದ್ದರಿಂದ ನನಗೆ ತಿಳಿಯದ ಇತರ ಗ್ರಂಥಕರ್ತರ ಕ್ಷಮೆ ಇರಲಿ.

ಕೊನೆಯದಾಗಿ ಒಂದು ಮಾತು ಹೇಳಬೇಕಾಗಿದೆ. ಕನ್ನಡದಲ್ಲಿ ಸಾಹಿತ್ಯ ಮಾತ್ರವಲ್ಲದೆ, ಕೇವಲ ಶಾಸ್ತ್ರೀಯ ಮತ್ತು ತತ್ತ್ವಾದಿ ವಿಷಯಗಳಿಗೆ ಮೀಸಲಾಗಿ, (೧) ರಾ. ಸಾ. ಫ. ಗು. ಹಳಕಟ್ಟಿ ಅವರ ಶಿವಾನುಭವ; (೨) ಬಿ. ಶಿವಮೂರ್ತಿ ಶಾಸ್ತ್ರಿಗಳ ಶರಣಸಾಹಿತ್ಯ; (೩) ವೈ. ಸುಬ್ಬರಾಯರ 'ಆಧ್ಯಾತ್ಮ ಪ್ರಕಾಶ' (೪) ದಕ್ಷಿಣ ಕನ್ನಡದ ಹಿರಿಯಡ್ಕದಿಂದ ಹೊರಡುತ್ತಿರುವ 'ಆಯುರ್ವೇದ'; (೫) ಹುಬ್ಬಳ್ಳಿಯಿಂದ ದಾ. ಅ. ಹಲಸೀಕರ ವೈದ್ಯರ ಸಂಪಾದಕತ್ವದಲ್ಲಿ ಹೊರಡುತ್ತಿರುವ 'ಆರ್ಯ ವೈದ್ಯ'; (೬) ಬಿಜಾಪುರದಿಂದ ಅ. ತೀ. ಆದ್ಯ ಅನಂತಾಚಾರ್ಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಧನ್ವಂತರಿ'–ಮಾಸಪತ್ರಿಕೆಗಳೂ ಧಾರವಾಡದ ಮಿಂಚಿನ ಬಳ್ಳಿ ಗ್ರಂಥಮಾಲೆಯೂ ಕನ್ನಡದ ಶಾಸ್ತ್ರೀಯ ಗ್ರಂಥ ಪ್ರಕಟನೆ ಮತ್ತು ಪ್ರಚಾರಕಾರ್ಯಗಳಿಗೆ ಸಹಾಯಕವಾಗಿವೆ. ಅದರಂತೆಯೆ ನಮ್ಮ ನಾಡಿನ ಇತರ ಸಾಪ್ತಾಹಿಕ ಮತ್ತು ಮಾಸ ಪತ್ರಿಕೆಗಳೂ, ಅವುಗಳ ವಿಶೇಷ ಸಂಚಿಕೆಗಳೂ ಶಾಸ್ತ್ರೀಯ ವಿಷಯಕ ಲೇಖನಗಳಿಗೆ ಪ್ರೋತ್ಸಾಹವಿತ್ತು ಪ್ರಕಟಿಸುತ್ತಿರುವುದೂ ಉಲ್ಲೇಖನೀಯವುವಾಗಿದೆ. ಅದರಂತೆಯೆ ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘದವರೂ ಮದ್ರಾಸಿನ ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರೂ ಉತ್ತಮವಾದ ಶಾಸ್ತ್ರೀಯ ಗ್ರಂಥಗಳಿಗೆ ಬಹುಮಾನ ದ್ರವ್ಯವಿತ್ತು ಲೇಖಕರಿಗೆ ಪ್ರೋತ್ಸಾಹವೀಯುತ್ತಿರುವ ವಿಚಾರವೂ ಉಲ್ಲೇಖನೀಯವಾದುದು. ಇನ್ನು ಮುಂದೆ ನಮ್ಮ ನಾಡು ಶೀಘ್ರದಲ್ಲಿ ಪ್ರತ್ಯೇಕ ಪ್ರಾಂತ್ಯವಾಗಿ ಕನ್ನಡದ ವಿಶ್ವವಿದ್ಯಾನಿಲಯವು ಸ್ಥಾಪಿತವಾಗಿ, ಇತೋಪ್ಯತಿಶಯವಾಗಿ ನಮ್ಮ ನುಡಿಯಲ್ಲಿ ಶಾಸ್ತ್ರೀಯ ಗ್ರಂಥಗಳ ಸಂಖ್ಯೆಯು ಬೆಳೆಯುತ್ತ, ಸಿರಿಗನ್ನಡದ ನಂದಾದೀಪವು ಪ್ರಕಾಶಮಾನವಾಗಿ ಬೆಳಗಲಿ ಎಂದು ಹಾರೈಸುತ್ತ, ಈ ಲೇಖನಕ್ಕೆ ಸಹಾಯಕದ ಗ್ರಂಥಗಳು, ಅವುಗಳ ಕರ್ತರು ಪ್ರಕಾಶಕ ಪ್ರಭೃತಿಗಳಿಗೆ ನನ್ನ ವಂದನೆಗಳನ್ನರ್ಪಿಸಿ ವಿರಮಿಸುವೆನು.

ಕನ್ನಡ ಸಾಹಿತ್ಯ ಚರಿತ್ರೆ

(ಕೆಲವು ಸಮಸ್ಯೆಗಳು)

ಶ್ರೀ. ರಂ. ಶ್ರೀ. ಮುಗುಳಿ, ಸಾಂಗ್ಲಿ.

ಕನ್ನಡದಲ್ಲಿ ವಿಪುಲವಾದ ಸಾಹಿತ್ಯವಿದೆ, ವಿಶಾಲವಾದ ಚರಿತ್ರೆಯಿದೆ, ಆದರೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಒಂದಾದರೂ ಪ್ರಮಾಣಭೂತವಾದ ಸರ್ವಸಂಗ್ರಹವಾದ ಗ್ರಂಥವಿನ್ನೂ ಹುಟ್ಟಿಲ್ಲ. ಮೊಟ್ಟಮೊದಲನೆಯದಾಗಿ ದಿವಂಗತ ನರಸಿಂಹಾಚಾರ್ಯರ ಕವಿಚರಿತೆಯ ಮೂರು ಸಂಪುಟಗಳು ಬೆಳಕಿಗೆ ಬಂದುವು. ಅವನ್ನು ಸಿದ್ಧಪಡಿಸುವ ಮಹಾಕಾರ್ಯದಲ್ಲಿ ಅವರು ತಮ್ಮ ಕಣ್ಣನ್ನು ಕಳೆದುಕೊಂಡರೂ ಕನ್ನಡಿಗರಿಗೆ ಹೊಸ ಕಣ್ಣನ್ನು ನೀಡಿದರು. ಅವು ಎಷ್ಟಾದರೂ ಸಾಮಗ್ರಿಯ ಸಂಕಲನವಿದ್ದಂತೆ. ತರುವಾಯ ಇ. ಪಿ. ರಾಯಿಸರ ಇಂಗ್ಲಿಷ್ ಪುಸ್ತಕ, ನರಸಿಂಹಾಚಾರ್ಯರು ಇಂಗ್ಲಿಷಿನಲ್ಲಿ ಬರೆದ ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯ ವಾಹಿನಿ, ಕನ್ನಡ ಸಾಹಿತ್ಯ (ಪ್ರಚಾರ ಪುಸ್ತಕಮಾಲೆ) ಹಾಗೂ ಕನ್ನಡ ಕೈಪಿಡಿ (ಭಾಗ ೨) ಇವು ಹೊರಬಂದಿವೆ. ಇವುಗಳಲ್ಲಿ ಮೆಚ್ಚತಕ್ಕ ಒಂದೊಂದು ನೋಟವಿದೆ. ಆದರೆ ಇವುಗಳ ಅಪೂರ್ಣತೆ ಕಣ್ಣಲ್ಲಿ ಒತ್ತುವಂಥದಾಗಿದೆ. ವರ್ಷ ವರ್ಷವೂ ಅಭಿಮಾನಿಗಳೂ ಅಭ್ಯಾಸಿಗಳೂ ಆದ ಕನ್ನಡಿಗರು 'ಸಂಪೂರ್ಣವಾದ ಸಮರ್ಪಕವಾದ ಕನ್ನಡ ಸಾಹಿತ್ಯ ಚರಿತ್ರೆಯ ಗ್ರಂಥ ಯಾವುದು?' ಎಂದು ಕೇಳುತ್ತಲೇ ಇದ್ದಾರೆ. ನಾವು ಅಂಥ ಗ್ರಂಥವಿಲ್ಲವೆಂದು ನಾಚಿಕೆಯಿಂದ ಹೇಳುತ್ತಲೇ ಇದ್ದೇವೆ. ಈ ವಸ್ತುಸ್ಥಿತಿಗೆ ಮುಖ್ಯ ಕಾರಣವೆಂದರೆ ನಮ್ಮಲ್ಲಿ ಸಂಘಟನೆ ಹಾಗೂ ಸಹಕಾರ್ಯದ ಅಭಾವ. ಯಾರೊಬ್ಬರಿಂದಲೂ ಸಮಗ್ರವಾಗಿ ನೆರವೇರದ ಕೆಲಸಗಳಲ್ಲಿ ಇದು ಒಂದು. ಅನೇಕ ಪಂಡಿತರು ಕಾರ್ಯವನ್ನು ಹಂಚಿಕೊಂಡು ಸಕಾಲಕ್ಕೆ ಕೈಕೊಂಡುದನ್ನು ನಿರ್ವಹಿಸಿ ಇದನ್ನು ಮೂರ್ತಸ್ವರೂಪಕ್ಕೆ ತರಬೇಕು. ಅಂಥ ಯೋಜನೆಯನ್ನು ನಾವು ಮಾಡಿಲ್ಲ, ಯಾಕೆಂದರೆ ಅದರ ಹಣೆಬರಹ ನಮಗೆ ಗೊತ್ತೇ ಇದೆ. ನಮ್ಮ ಸಾಹಿತ್ಯ ಚರಿತ್ರೆಯ ಲೇಖನಕ್ಕೆ ಇದು ಹಿರಿಯ ಸಮಸ್ಯೆಯಾಗಿದೆ. ಇದಲ್ಲದೆ ಬೇರೆ ಸಮಸ್ಯೆಗಳೂ ಇರುತ್ತವೆ. ಸಾಮೂಹಿಕ ಗ್ರಂಥರಚನೆ ಎಂದೇ ಆಗಲಿ, ಅದಕ್ಕಾಗಿ ತಡೆಯದೆ ವೈಯಕ್ತಿಕವಾಗಿ ಪ್ರಯತ್ನಮಾಡಬೇಕೆನ್ನುವವರ ಮುಂದೆ ಅವು ದುತ್ತೆಂದು ನಿಲ್ಲುತ್ತವೆ. ಕನ್ನಡದಲ್ಲಿ ಕನಿಷ್ಟ ಸಾವಿರ ವರುಷಗಳ ಕಾಲದಲ್ಲಿ ಅನೇಕ ಗ್ರಂಥಗಳು ಹುಟ್ಟಿವೆ. ಆದರೆ ಈವೊತ್ತು ಅವುಗಳೆಲ್ಲವೂ ಉಪಲಬ್ಧವಾಗಿಲ್ಲ. ತೀರ ಮಹತ್ವದವೆನ್ನಬಹುದಾದ ಗ್ರಂಥಗಳ ಉಲ್ಲೇಖ ದೊರೆಯುತ್ತದೆ, ಪ್ರಖ್ಯಾತ ಗ್ರಂಥಕಾರರ ಹೆಸರುಗಳು ಕೇಳಬರುತ್ತವೆ. ಆಯಾ ಗ್ರಂಥಗಳು ದೊರೆತಿಲ್ಲ. ದೊರೆಯದ ಗ್ರಂಥಗಳ ಹೆಸರೆತ್ತಿ ಹೊಗಳಬೇಕಾಗುತ್ತದೆ. ಇನ್ನು ಉಪಲಬ್ಧವಾದ ಗ್ರಂಥಗಳಲ್ಲಿ ಹಲವು ಅಭ್ಯಾಸಿಗಳಿಗೆ ಅನುಪಲಬ್ಧವೇ ಸರಿ. ಯಾಕೆಂದರೆ ಅವು ಯಾವುದೋ ಒಂದು ಓರಿಯಂಟಲ್ ಲಾಯಬ್ರರಿಯಲ್ಲಿ, ಸಂಶೋಧನ ಸಂಸ್ಥೆಯಲ್ಲಿ, ಇಲ್ಲವೆ ಮನೆ ಮಠಗಳಲ್ಲಿ ಪ್ರಕಟವಾಗದೆ ಉಳಿದಿವೆ. ಕಾವ್ಯಕಲಾನಿಧಿ, ಸಾಹಿತ್ಯಪರಿಷತ್ತು ಮುಂತಾದ ಸಂಸ್ಥೆಗಳು ಕೆಲವನ್ನು ಪ್ರಕಟಿಸಿ ಮಹೋಪಕಾರ ಮಾಡಿವೆ. ತೀರ ಕೆಲವಾದರೂ ಶಾಸ್ತ್ರಶುದ್ಧವಾದ ರೀತಿಯಲ್ಲಿ ಅಂದವಾಗಿ ಮುದ್ರಣ ಹೊಂದಿ ಪೀಠಿಕೆ-ಟಿಪ್ಪಣಿಗಳಿಂದ ಕಂಗೊಳಿಸುತ್ತವೆ. ಆದರೆ ಪ್ರಕಟಿತವಾದ ಕೆಲವು ತುಂಬ ಅಶುದ್ಧವೂ, ಅಸುಂದರವೂ ಆಗಿ ಓದುಗರಿಗೆ ತಲೆಬೇನೆಯನ್ನು ತರುವಂಥವುಗಳಾಗಿವೆ. ಅವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಕಷ್ಟಸಾಧ್ಯವೆಂದ ಮೇಲೆ ಅವುಗಳ ಗುಣದೋಷ ವಿಮರ್ಶೆ ದೂರದ ಮಾತು. ಗ್ರಂಥ ಸಂಪಾದನೆಯ ಕಲೆಯನ್ನು ನಾವು ಚೆನ್ನಾಗಿ ಅಳವಡಿಸಿಕೊಂಡಿಲ್ಲ ಎಂಬುದು ಎದ್ದು ಕಾಣುವ ಸಂಗತಿಯಾಗಿದೆ. ಈ ಸಮಸ್ಯೆಗಳನ್ನು ಬಗೆಹರಿಸಿ ಪ್ರಗತಿಯ ದಾರಿಯಲ್ಲಿ ನಾವು ಹೆಜ್ಜೆಯಿಡದಿದ್ದರೆ ಸಮಗ್ರವಾದ ಕನ್ನಡಸಾಹಿತ್ಯ ಚರಿತ್ರೆಯ ಗ್ರಂಥವು ಕನಸಿನೊಳಗಿನ ಗ್ರಂಥಿಯೇ ಆಗಿ ಉಳಿಯುವುದು.

ಯಾವುದೇ ಸಾಹಿತ್ಯ ಚರಿತ್ರೆ ಸಾರ್ಥಕವಾಗಬೇಕಾದರೆ ಕವಿಚರಿತ್ರೆ ಸಾಧ್ಯವಾದಷ್ಟು ವಿವರವಾಗಿ ತಿಳಿ

ದಿರಬೇಕು. ಕಾಲದೇಶಾದಿ ಚರಿತ್ರೆಯಂತೂ ಸರಿಯೇ, ಅದಕ್ಕಿಂತ ಹೆಚ್ಚಾಗಿ ಕವಿಯ ವ್ಯಕ್ತಿತ್ವದ ಸಂಪೂರ್ಣ ಚಿತ್ರವು ಕಣ್ಣ ಮುಂದೆ ನಿಲ್ಲಬೇಕು. ಅವನು ಯಾವ ಪರಿಸರದಲ್ಲಿ ಹುಟ್ಟಿ ಬೆಳೆದನು, ಯಾವ ಪ್ರಭಾವಗಳಿಗೆ ಒಳಗಾದನು, ಜೀವನದಲ್ಲಿ ಪ್ರಗತಿಯನ್ನೂ ಸಾಹಿತ್ಯದಲ್ಲಿ ಸಿದ್ಧಿಯನ್ನೂ ಹೇಗೆ ಪಡೆದನು ಎಂಬಿವೇ ಮುಂತಾದ ಚರಿತ್ರೆಯ ಪ್ರಾಣಭೂತವಾದ ಅಂಶಗಳು ಒಂದು ಸಜೀವವಾದ ವ್ಯಕ್ತಿತ್ವದ ಚಿತ್ರವನ್ನು ನಮ್ಮಿದಿರು ಕೊರೆದು ನಿಲ್ಲಿಸಬೇಕು. ಅವನ ಜೀವನವು ಸುಖದ್ದೇ ದುಃಖದ್ದೇ ಇಲ್ಲವೆ ಸುಖದುಃಖದ ತೊಳಲಾಟದಲ್ಲಿದ್ದುದೇ, ಅವನು ಬುದ್ಧಿ ಪ್ರಧಾನನೇ, ಭಾವನಾಪ್ರಧಾನನೇ, ಜ್ಞಾನಮಾರ್ಗಿಯೇ ಕರ್ಮಶೀಲನೇ ತ್ಯಾಗಿಯೇ ಭೋಗಿಯೇ ಇಲ್ಲವೇ ತ್ಯಾಗನಿಷ್ಠ ಭೋಗಿಯೇ, ಅವನು ಹುಟ್ಟಿದ ಮತಕ್ಕೆ ಮಾತ್ರ ಅಂಟಿಕೊಂಡವನೇ ಬೇರೆ ಮತಕ್ಕೆ ಒಲಿದವನೇ ಇಲ್ಲವೇ ಮತಗಳ ಬಗ್ಗೆ ಸಹನೆಯ, ಸಮನ್ವಯದ ದಾರಿಯಲ್ಲಿ ಮುಂದಾದವನೇ—ಈ ಚಾರಿತ್ರಿಕ ವಿಷಯಗಳು ನಿಚ್ಚಳವಾಗಿ ತಿಳಿದಿರಬೇಕು. ಇವು ಗೊತ್ತಿದ್ದರೆ ಕವಿಯ ಜೀವನ ಮತ್ತು ವ್ಯಕ್ತಿತ್ವಕ್ಕೂ ಅವನ ಗ್ರಂಥಗಳಿಗೂ ನಡುವೆ ಒಂದು ಸೇತುವೆಯನ್ನು ಕಟ್ಟಿ ಎರಡನ್ನೂ ಸಂಯೋಜಿಸಬಹುದು, ಅನ್ಯೋನ್ಯ ಸಂಬಂಧವನ್ನು ಗುರುತಿಸಿ ವಿಮರ್ಶೆಯ ಸೂಕ್ಷ್ಮತೆಯನ್ನೂ ಪರಿಪೂರ್ಣತೆಯನ್ನೂ ಸಾಧಿಸಬಹುದು.

ಸಾಮಾನ್ಯವಾಗಿ ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ಹಿಂದೆ ಹಿಂದೆ ಹೋದಂತೆ ಕವಿಚರಿತ್ರೆಯ ವಿಷಯಕವಾದ ಕತ್ತಲೆ ಹೆಚ್ಚುತ್ತ ಹೋಗುತ್ತದೆ. ಕವಿಯ ಗ್ರಂಥವೊಂದೇ ಈ ಕತ್ತಲೆಯಲ್ಲಿ ದಾರಿದೀಪವಾಗಿ ಉಳಿಯುತ್ತದೆ. ಕನ್ನಡ ಸಾಹಿತ್ಯವು ಇದಕ್ಕೆ ಅಪವಾದವಾಗಿಲ್ಲ. ತನ್ನ ನಾಟಕಗಳಲ್ಲಿ ತನ್ನ ಹೆಸರನ್ನು ಸಹ ಹೇಳದೆ ಇರುವ ಭಾಸನಷ್ಟು ಕನ್ನಡ ಕವಿಗಳು ವಿನಯ ಸಾಹಸವನ್ನು ಮಾಡಿಲ್ಲವಾದರೂ ಹೆಸರೊಂದನ್ನು ಹೇಳಿ ಇತರ ವಿಷಯಗಳನ್ನು ನಮ್ಮಿಂದ ಮರೆಮಾಡಿದ ಕಾಲಿದಾಸನಷ್ಟು ಅವರು ವಿನಯಶಾಲಿಗಳಂತೂ ಆಗಿದ್ದಾರೆ. ತಾವು ಕಾಲಿದಾಸನಿಗಿಂತ ನೂರ್ಮಡಿ ಮಿಗಿಲೆಂದು ಹೇಳಿಕೊಂಡ ಕವಿಗಳು ವಿನಯದ ಮೇರೆ ದಾಟಿದ್ದರೂ ಸಾಕಷ್ಟು ತಮ್ಮ ಚರಿತ್ರೆಯನ್ನೇನೂ ತಿಳಿಸಿಲ್ಲ. ಆತ್ಮಪ್ರಶಂಸೆ ಬೇಕಾದಷ್ಟು ಇದ್ದರೂ ಆತ್ಮ ಚರಿತ್ರೆ ತೀರ ಸ್ವಲ್ಪವಾಗಿದೆ. ಅದು ಅವರ ಆತ್ಮದ, ಜೀವಾಳದ ಚರಿತ್ರೆಯಾಗಿ ಇರುವುದಂತೂ ಇನ್ನೂ ವಿರಳ. ಬೇರೆ ಕವಿಗಳು ತಮ್ಮ ಹಿಂದಿನ ಕವಿಗಳ ಇಲ್ಲವೆ ಭಕ್ತರ ಚರಿತ್ರೆಯನ್ನು ಭಕ್ತಿವಿಶ್ವಾಸಗಳಿಂದ ಬರೆದಿರುವುದುಂಟು. ಅಂಥವುಗಳಲ್ಲಿ ಅಪರೂಪವಾಗಿ ಆಯಾ ವ್ಯಕ್ತಿಗಳ ವ್ಯಕ್ತಿತ್ವವು ಸ್ಫುಟವಾಗಿ ತೋರಿದೆ. ಆದರೆ ಹೆಚ್ಚಿನ ಇಂಥ ಚರಿತ್ರಗ್ರಂಥಗಳಲ್ಲಿ ಪವಾಡಗಳೂ ಕಟ್ಟುಕತೆಗಳೂ ಸೇರಿಕೊಂಡು ಸತ್ಯಾಂಶಗಳ ಶೋಧನೆಯನ್ನು ಕಠಿನವಾಗಿ ಮಾಡಿರುತ್ತವೆ.

ಪರಿಸ್ಥಿತಿ ಹೀಗಿರುವಾಗ ಕನ್ನಡ ಸಾಹಿತ್ಯ ಚರಿತ್ರೆ ಅಪೂರ್ಣವಾಗುವುದು ಅಪರಿಹಾರ್ಯವೇ ಅಲ್ಲವೇ? ಕವಿಚರಿತ್ರೆ ಮತ್ತು ಕವಿಕೃತಿ ಇವುಗಳ ಅನ್ಯೋನ್ಯ ಸಂಯೋಜನೆಯನ್ನು ಮಾಡಲು ನಮಗೆ ಮೂಲ ಸಾಮಗ್ರಿಯೇ ದೊರೆತಿಲ್ಲವೆಂದ ಮೇಲೆ ಅಷ್ಟು ಮಟ್ಟಿಗೆ ಸಾಹಿತ್ಯ ಚರಿತ್ರೆ ವಿಫಲವಾಗಲಾರದೇ? ಕೆಲವು ಕವಿಗಳ ಕಾಲ ದೇಶದ ಬಗ್ಗೆ ವಾದಗಳ ಧೂಳಿ ಎದ್ದಿದೆ, ಅದಿನ್ನೂ ನೆಲಕ್ಕಿಳಿದಿಲ್ಲವೆಂಬ ಸಮಸ್ಯೆಯಂತೂ ಇರಲಿ, ಮೇಲಿನ ಸಮಸ್ಯೆ ಎಲ್ಲ ಕವಿಗಳ ವಿಷಯದಲ್ಲಿ ಬಗೆಹರಿಯದ ಸ್ವರೂಪ ತಾಳಿದೆ. ಇದಕ್ಕೆ ಸಮರ್ಪಕವಾದ ಉತ್ತರವಿಲ್ಲ ಎಂಬುದನ್ನು ನಾವು ಅರಿತಿರಬೇಕು. ಆದರೂ ನಾವು ಈ ವರೆಗೆ ದೊರೆತ ಹಾಗೂ ಇನ್ನು ಮೇಲೆ ದೊರೆಯಬಹುದಾದ ಆಧಾರಗಳನ್ನು ಕಣ್ಣಿಟ್ಟು ನೋಡಿದರೆ ಕೆಲಮಟ್ಟಿಗೆ ಕವಿಚರಿತ್ರೆಯ ಇರುಳಲ್ಲಿ 'ಚಿಕ್ಕೆದಾರಿ' ಕಾಣಬಹುದು. ಅದರಿಂದ ನಾವು ಕವಿಜೀವನಕ್ಕೂ ಕೃತಿಗೂ ಹೋಲಿಸಿ ನೋಡಲು ನೆರವಾಗಬಹುದು. ಮುಖ್ಯವಾಗಿ ಕವಿಕೃತಿಯಲ್ಲಿ ಅವನು ನೇರವಾಗಿ ತನ್ನ ಬಗ್ಗೆ ಹೇಳಿದ ಮಾತುಗಳಲ್ಲದೆ ಸೂಚ್ಯವಾಗಿ ತೋರಿದ ಅನುಭವ ಪ್ರಪಂಚ, ಅಭಿರುಚಿ, ಮತದೃಷ್ಟಿ, ಮನೋಧರ್ಮ ಇವನ್ನು ನಾವು ಎಚ್ಚರದಿಂದ ಅರಿತುಕೊಳ್ಳಬಲ್ಲೆವಾದರೆ ಕೃತಿಯ ಅಂತಸ್ಥಪ್ರಮಾಣದಿಂದಲೇ ಕಂಡುಹಿಡಿದ ವ್ಯಕ್ತಿತ್ವವನ್ನು ಕೃತಿಯ ಬೆಲೆ ಕಟ್ಟುವಾಗ ಸಂಯೋಜಿಸಿಕೊಳ್ಳಲು ಸಮರ್ಥರಾಗುತ್ತೇವೆ. ಈ ಮಾರ್ಗದಲ್ಲಿ ಇಲ್ಲದ ಭ್ರಮೆಗಳಿಗೆ ಅವಕಾಶವಿದೆ, ಪೂರ್ವಗ್ರಹಗಳನ್ನು ಸಿದ್ಧಾಂತಗಳೆಂದು ಮಾಡಿಕೊಳ್ಳಬಹುದೆಂಬ ಭಯಕ್ಕೆ ಎಡೆಯಿದೆ. ಆತ್ಮೀಯವಾಗಿರದೆ ಕಥನ ಪ್ರಧಾನವಾದ ಕೃತಿಗಳಲ್ಲಿ ವ್ಯಕ್ತಿತ್ವದ ಪರಿಗಳನ್ನು

ಗುರುತಿಸುವುದು ಬಿಗಿಯಾಗಿದೆ. ಅಂತೇ ವಿಮರ್ಶೆಯ ದೃಷ್ಟಿ ನಿಚ್ಚಳವಾಗದೆ ಇದು ಬಳಸತಕ್ಕ ವಿಧಾನವಲ್ಲ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಬರೆದ ಕವಿಚರಿತೆಕಾರರು ಮೊದಲಾಗಿ ಎಲ್ಲರೂ ಈ ವರೆಗೆ ಕವಿಯ ಹೆಸರಿನ ಮುಂದೆ ಅವನ ಮತವನ್ನು ಹೇಳಿ ಮುಂದೆ ಸಾಗುತ್ತಾರೆ. ಇಂಥ ಕವಿ ಇಂಥ ಮತ ಎಂದು ಹೇಳುವುದು ಬಹಳ ಸಹಜವಾದ ಸಂಪ್ರದಾಯ ವಾಗಿ ಬಿಟ್ಟಿದೆ. ಚರಿತ್ರೆಯಲ್ಲಿಯ ಕಾಲಾವಧಿಗಳನ್ನು ಗೊತ್ತುಪಡಿಸುವಾಗ ಜೈನ, ವೀರಶೈವ, ಬ್ರಾಹ್ಮಣ ಎಂಬ ಯುಗಗಳನ್ನು ಮಾಡಲಾಗಿದೆ. ಈ ಮತೀಯ ವಿಭಜನೆಯನ್ನು ಪ್ರತಿಭಟಿಸಿ ಕವಿ ಕರ್ಮವನ್ನು ರಸ ದೃಷ್ಟಿಯಿಂದ ನೋಡಬೇಕೆಂಬ ಪ್ರತಿಪಾದನೆ ತಲೆದೋ ರಿತು. ಆದರೆ ಅದರ ಮೇರೆಗೆ ಸೂಚಿಸಲಾದ ವಿಭಾಗ ಗಳಲ್ಲಿ ಮೊದಲನೆಯ ಕ್ಷಾತ್ರಯುಗವೊಂದನ್ನು ಬಿಟ್ಟರೆ ಮತಪ್ರಚಾರಕಯುಗ, ಸಾರ್ವಜನಿಕಯುಗ ಎಂಬ ವಿಭಾಗಗಳಲ್ಲಿ ಮತದೃಷ್ಟಿಗೆ ಅವಕಾಶ ದೊರೆಯಿತು, ವಿಭಾಗಗಳು ಅರ್ಥಪೂರ್ಣವಾಗಲಿಲ್ಲ. ಆಯಾ ಯುಗದ ಮಹಾಕವಿ ಇಲ್ಲವೆ ಮಹಾಪುರುಷರ ಹೆಸರಿ ನಲ್ಲಿ ಚರಿತ್ರೆಯನ್ನು ವಿಭಾಗಿಸಬೇಕೆಂಬ ದೃಷ್ಟಿಯಿಂದ ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ ಎಂಬ ನಾಮಕರಣವಾಯಿತು. ಅದೆಷ್ಟೋ ಯುಕ್ತ ವೆನ್ನಬಹುದಾದರೂ ಅದರ ಹಿನ್ನೆಲೆಯಲ್ಲಿ ಮತಪ್ರಜ್ಞೆ ಇಲ್ಲದಿಲ್ಲ. ಚರಿತ್ರಕಾರನು ಅಂದಂದಿನ ದೃಷ್ಟಿಯಿಂದ ನಡೆದ ಘಟನೆಗಳನ್ನೂ ಹುಟ್ಟಿದ ಕೃತಿಗಳನ್ನೂ ಪರೀಕ್ಷಿಸಿ ಹೆಸರಿಸಬೇಕಾಗುತ್ತದೆ. ಆದ್ದರಿಂದ ಮತೀಯ ವಿಭಾ ಗವು ತೀರ ತ್ಯಾಜವೆಂದು ಇಂದಿನ ದೃಷ್ಟಿಯ ಆರೋಪ ದಿಂದ ಹೇಳುವುದು ಸರಿಯಾಗದು. ಸಾಮಾನ್ಯವಾಗಿ ಹಳೆಯ ಗ್ರಂಥಗಳನ್ನು ನೋಡಿದರೆ ಅವುಗಳಲ್ಲಿ ನೂರಕ್ಕೆ ತೊಂಬತ್ತರ ಮೇಲೆ ಮತೀಯ ಗ್ರಂಥಗಳಿವೆ. ಅಂದರೆ ತಮ್ಮ ಮತಸಂಪ್ರದಾಯದ ಕಥೆ, ತತ್ವ, ನೀತಿ, ಪುರಾಣ, ಚರಿತ್ರೆ ಇವುಗಳನ್ನೇ ಕವಿಗಳು ತಮ್ಮ ವಿಷಯವಾಗಿ ಮಾಡಿಕೊಂಡಿದ್ದಾರೆ. ಕೇವಲ ಲೌಕಿಕ ಇಲ್ಲವೆ ಶುದ್ಧ ಸಾಹಿತ್ಯವೆನ್ನಬಹುದಾದ ಗ್ರಂಥಗಳು ತೀರ ಕಡಿಮೆ. ಪಂಪ ರನ್ನರಿಂದ ಪ್ರಾರಂಭವಾದ ಲೌಕಿಕ ಗ್ರಂಥಗಳ ಪರಂಪರೆಯನ್ನು ಅಭಿನವ ಪಂಪನೆಂದು ಕರೆದುಕೊಂಡ ನಾಗಚಂದ್ರನೂ ಮುಂದಿನವರೂ ಅನುಸರಿಸಲಿಲ್ಲ. ಆದಿ ಪಂಪ ವೈದಿಕ ಭಾರತವನ್ನು ಬರೆದರೆ ಅಭಿನವಪಂಪ ಜೈನ ರಾಮಾಯಣವನ್ನು ಬರೆದನು. ಅವನು ವ್ಯಾಸ ನಿಂದ ಸ್ಫೂರ್ತಿ ಹೊಂದಿದಂತೆ ಇವನು ವಾಲ್ಮೀಕಿಯಿಂದ ಹೊಂದಲಿಲ್ಲ, ವಿಮಲಸೂರಿಯ ಕೃತಿಗೆ ಶರಣುಹೋ ದನು. ಹರಿಹರನಿಂದ ಮೊದಲಾಗಿ ವೀರಶೈವ ಕವಿಗಳು ಧಾರ್ಮಿಕ, ಮತೀಯ ವಿಷಯಗಳನ್ನೇ ಕುರಿತು ಕಾವ್ಯ ರಚಿಸಬೇಕೆಂಬ ತತ್ವವನ್ನು ಸಾರಿ ಅದನ್ನು ವ್ರತವಾಗಿ ಪಾಲಿಸಿದರು. ಬ್ರಾಹ್ಮಣ ಕವಿ ಗಳು ಭಾರತ, ಭಾಗವತ, ರಾಮಾಯಣ, ಪುರಾಣಗಳು ಮುಂತಾದ ವೈದಿಕ ಪರಂಪರೆಯ ಮತ್ತು ಮತತ್ರಯದ ವಾಙ್ಮಯಕ್ಕೆ ಮೊರೆಹೋದರು. ಒಂದು ಪಂಚತಂತ್ರ, ಒಂದು ಕಾದಂಬರಿ, ಒಂದು ದಶಕುಮಾರಚರಿತೆ ಇಂಥ ಅನುವಾದ ಗ್ರಂಥಗಳಲ್ಲಿ ಮಾತ್ರ ಲೌಕಿಕತೆ ಅಭಿವ್ಯಕ್ತ ವಾಯಿತು. ಅಂತೂ ಮತವಿಚಾರವನ್ನು ಅಲಕ್ಷಿಸಿ ಇಲ್ಲವೆ ಅಲ್ಲಗಳೆದು ಕನ್ನಡ ಸಾಹಿತ್ಯ ಚರಿತ್ರೆಯನ್ನು ವಿವೇಚಿಸಲಾಗದು.........ಆದರೂ ಒಂದು ಪ್ರಶ್ನೆ ತಲೆ ಯೆತ್ತುವುದು. ಕವಿ ಇಲ್ಲವೆ ಸಾಹಿತ್ತಿಕ ಯಾವುದೇ ಕಾಲದೇಶಕ್ಕೆ ಸಂಬಂಧಿಸಿರಲಿ, ಅವನು ಎಲ್ಲರಂತೆ ಮತೀಯ ವ್ಯಕ್ತಿಯೇ? ಒಂದು ಜಾತಿಯಲ್ಲಿ ಅವನು ಹುಟ್ಟುವನು. ಆ ಜಾತಿಯ ಮತವನ್ನು ಅನುಸರಿ ಸುವನು. ಪ್ರಬುದ್ಧನಾದ ಮೇಲೆ ಬೇರೆ ಮತ ವನ್ನು ಸ್ವೀಕರಿಸಲೂಬಹುದು. ಆದರೆ ಅವನ ಸೌಂ ದರ್ಯನಿಷ್ಠವಾದ ಮಾನವ ಪ್ರೇಮಮಯವಾದ ಮನೋಧರ್ಮದಲ್ಲಿ ಮತಕ್ಕೆ ಯಾವ ಸ್ಥಾನವಿದೆ? ಒಂದು ಮತದಲ್ಲಿ ಕುರುಡು ನಂಬಿಗೆ, ಇತರ ಮತಗಳ ಮೇಲೆ ಕೆಂಗಣ್ಣು ಎಂಬ ಅಭಿನಿವೇಶದ ದಾರಿಯಲ್ಲಿ ಅವನು ಹೋಗುವನೇ? ಹಾಗೆ ಹೋದರೆ ಮತ್ತು ತನ್ನ ಬರೆವಣಿಗೆಯಲ್ಲಿ ಅದಕ್ಕೆ ಆವಿಷ್ಕಾರವನ್ನು ಕೊಟ್ಟರೆ ಅಷ್ಟುಮಟ್ಟಿಗೆ ಅವನು ಕಾವ್ಯದ ಪೀಠದಿಂದ ಚ್ಯುತನಾ ಗುವುದಿಲ್ಲವೇ? ಅವನ ಕೃತಿ ಕಲುಷಿತವಾಗುವುದಿಲ್ಲವೇ, ಅದರ ಬೆಲೆ ಇಳಿಯುವುದಿಲ್ಲವೇ? ಅವನು ಉಳಿದೆಲ್ಲ ವಿಷಯಗಳಲ್ಲಿ ಮಹಾಮನನೂ ಮಹಾ ಕವಿಯೂ ಆಗಿ ಈ ವಿಷಯದಲ್ಲಿ ಅಸಹನೆ, ಅಸೂಯೆ, ಆಕ್ರೋಶ ಇವ ನ್ನು ತೋರಿದ್ದರೆ ಅದು ಅವನ ಅಧಃಪಾತವೇ? ಈ ಸಮಸ್ಯೆಯನ್ನು ಇಂದಿನ ಕನ್ನಡ ಸಾಹಿತ್ಯಕಾರನು ಇದಿ ರಿಸಬೇಕಾಗಿದೆ. ಇದಕ್ಕೆ ಉತ್ತರ ಕೊಡುವಾಗ ಆಯಾ

ಕಾಲಧರ್ಮದ ಸಾಕಷ್ಟು ಸಮ್ಯಕ್ಕಾದ ಜ್ಞಾನ, ಆಯಾ ಕವಿಯ ಮನೋಧರ್ಮದ ಸೂಕ್ಷ್ಮ ಜಟಿಲ ಸ್ವರೂಪದ ಅರಿವು, ಕಾವ್ಯದ ಉಕ್ತಿಯ ವಿವಿಧ ಸ್ವರೂಪದ ಬಗ್ಗೆ ತಿಳಿವಳಿಕೆ, ಸಹಾನುಭೂತಿಪೂರ್ಣವಾದ ದೃಷ್ಟಿಕೋನ ಇವು ಚರಿತ್ರಕಾರನಲ್ಲಿ ಇರಬೇಕು. ಇದರಿಂದ ಸನ್ನದ್ಧವಾಗಿ ನೋಡಿದಾಗಲೂ ರಸಭಂಗವೆಂದೂ ಚ್ಯುತಿಯೆಂದೂ ತೋರಿದ್ದನ್ನು ಧೈರ್ಯವಾಗಿ ಹೇಳಬೇಕು. ಅದರ ಪೃಥಕ್ಕರಣವನ್ನು ಯಥಾವತ್ತಾಗಿ ಮಾಡಬೇಕು. ಕವಿಯ ಸಮಗ್ರಕೃತಿಯಲ್ಲಿ ಅದು ಯಾಕೆ ಹೇಗೆ ಹಣಿಕಿದೆ ಎಂಬುದನ್ನು ಹಿಂಜಿ ತೋರಬೇಕು.

ಕವಿ ಮತಾವೇಶದ ಪ್ರವಾಹದಲ್ಲಿ ತೇಲಿಹೋಗಿರುವಂತೆ ಮತವನ್ನು ಮೀರಿದ, ಸ್ವಂತಕ್ಕೆ ಸಮ್ಮತವಾದ ಒಂದು ತತ್ವದ ಎತ್ತರದಲ್ಲಿ ಹಾರುತ್ತಿರುವುದೂ ಉಂಟು. ಅವನ ಮತವನ್ನು ಹೇಳುವುದರಿಂದ ಅವನ ತತ್ವವನ್ನೂ ಜೀವನದರ್ಶನವನ್ನೂ ಯಾವಾಗಲೂ ಹೇಳಿದಂತಾಗುವುದಿಲ್ಲ. ಇಂದಿನ ತಿಳುವಳಿಕೆಯ ತಕ್ಕಡಿಯಲ್ಲಿ ಅಂದಿನ ಅವನ ಮತವನ್ನು ತೂಗುವುದರಿಂದಲೂ ಅವನಿಗೆ ಅನ್ಯಾಯವಾಗುವುದು. ಹುಟ್ಟಿದ ಮತವನ್ನು ಶ್ರೇಷ್ಠವೆಂದು ತಿಳಿದು ಅವನು ಸಾರುವಾಗ ತನ್ನ ಜೀವಂತ ಶ್ರದ್ಧೆಯಿಂದಲೂ ಆಳವಾದ ಅನುಭವದಿಂದಲೂ ಆ ಮತದ ಶ್ರೇಷ್ಠಾಂಶಗಳ ಬಗ್ಗೆ ಹೆಚ್ಚಿದ ನಿಷ್ಠೆಯನ್ನು ಅವನು ಬಣ್ಣಿಸುತ್ತಿರಬಹುದು. ಎಲ್ಲ ಮತಗಳಲ್ಲಿಯ ಸಾರವತ್ತಾದ ಭಾಗವು ತನ್ನ ಮತದಲ್ಲಿಯೂ ಇದೆ ಎಂದೂ ಹೇಳುತ್ತಿರಬಹುದು. ತನ್ನ ರೀತಿಯಲ್ಲಿ ತಾನು ಕಂಡ ಮತಸಮನ್ವಯವನ್ನು ತಿರುತಿರುಗಿ ಸಾರುತ್ತಿರಬಹುದು. ಬೇರೆ ಬೇರೆ ಸಂಪ್ರದಾಯಗಳಲ್ಲಿ ಬೆಳೆದು ಅವನ ಮನಸ್ಸುಪಡೆದ ಸಂಸ್ಕೃತಿ ಸಂಗಮವನ್ನೂ ವಿಶ್ವಧರ್ಮ ರಹಸ್ಯವನ್ನೂ ಪರಿಪಕ್ವ ಸ್ವರೂಪದಲ್ಲಿ ಅವನ ಕೃತಿ ಒರೆಯುತ್ತಿರಬಹುದು. ಇದೆಲ್ಲದರ ಅರಿವು ಸಾಹಿತ್ಯ ಚರಿತ್ರಕಾರನಿಗೆ ಅತ್ಯಂತ ಅವಶ್ಯವಾಗಿದೆ. ಈ ದೃಷ್ಟಿಯಿಂದ ಕನ್ನಡ ಕವಿಗಣವನ್ನು ನಾವು ಹೆಚ್ಚಾಗಿ ನೋಡಿಲ್ಲ. ಯಾವನ ಮತ ಯಾವುದು ಎಂಬ ವಾದಗಳೇನೊ ಹುಲುಸಾಗಿ ಬೆಳೆದಿವೆ. ಎರಡೂ ಪಕ್ಷಗಳಿಗೆ ಆಧಾರಗಳು ದೊರೆತಿವೆ. ಅದರಿಂದ ಆಯಾ ಕವಿ ಉದಾರ ಮತವಾದಿಯಾಗಿದ್ದನೆಂಬ ನಿರ್ಣಯ ಕೆಲವರಲ್ಲಿ ಅನಿವಾರ್ಯವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ನಮಗೆ ಕವಿಮತ ಮುಖ್ಯವಾಗಿದೆ, ಕವಿ ಮುಖ್ಯವಾಗಿಲ್ಲ, ಕವಿಮನ ಮುಖ್ಯವಾಗಿಲ್ಲ. ಕವಿ ಲಕ್ಷಣವೇನು, ಕವಿ ಮನದ ಸ್ವರೂಪವೇನು ಎಂಬುದನ್ನು ನಾವು ಮುಖ್ಯವಾಗಿ ತಿಳಿದು ಅದರಲ್ಲಿ ಕವಿಮತಕ್ಕೆ ಆಯಾ ಕಾಲದಲ್ಲಿ ಯಾವ ಇಂಬು ದೊರೆತಿದೆ ಎಂಬುದನ್ನು ಅರಿಯಬೇಕು. ಆದಿಪಂಪನು ಜೈನನೆಂದ ಮಾತ್ರಕ್ಕೆ ಅವನ ಮನೋಧರ್ಮವನ್ನು ಬಣ್ಣಿಸಿ ಮುಗಿಸಿದಂತಾಗಲಿಲ್ಲ. ಬಸವೇಶ್ವರನು ವೀರಶೈವನೆಂದೊಡನೆ ಅವನ ಮಹಾವ್ಯಕ್ತಿತ್ವದ ಸುಳಿಯನ್ನು ಕಂಡಂತಾಗಲಿಲ್ಲ. ಕುಮಾರವ್ಯಾಸನು ಶೈವನೋ ಮಾಧ್ವನೋ ವೀರಶೈವನೋ ಎಂದು ತಲೆಪಟ್ಟಿಯನ್ನು ಹಚ್ಚುವುದರಿಂದ ಅವನ ಜೀವನದರ್ಶನದ ಸಾಕ್ಷಾತ್ಕಾರವಾದಂತಾಗಲಿಲ್ಲ. ಆದಿಪಂಪನು ವೈದಿಕ, ಜೈನ ಹಾಗೂ ಇತರ ಪರಂಪರೆಗಳಲ್ಲಿಯ ಸಾರವನ್ನು ಹೀರಿ ಬೆಳೆದು ಹೊಸ ಸಂಸ್ಕೃತಿಯ ಸಮತ್ವವನ್ನು ಪಡೆದನು. ಜೈನ ಮತವೇ ಮೇಲಾದ್ದದೆಂದು ಅವನಿಗೆ ತೋರಿದರೂ ಇತರ ಮತಗಳ ಬಗ್ಗೆ ಕಿಲುಬು ಅವನ ಮನಸ್ಸಿಗೆ ಅಂಟಿಕೊಳ್ಳಲಿಲ್ಲ. ಅವನು ಕಲಾವಿದನ ಗಾಂಭೀರ್ಯದಿಂದಲೂ ಅನಾಸಕ್ತಿಯಿಂದಲೂ ವ್ಯಾಸಭಾರತವನ್ನು ಮಹಾಕೃತಿಯಾಗಿ ರಚಿಸಿ ಚಂಪೂ ಕಾವ್ಯದ ಕಳಸವಾಗಿ ಕನ್ನಡಕ್ಕೆ ನೀಡಿದನು. ಮಾದರಿಯ ಜೈನ ಪುರಾಣವಾಗಿ ಬರೆದ ಆದಿ ಪುರಾಣದಲ್ಲಿ ಅವನು ನಿರೂಪಿಸಿದ ಜೀವನ ದರ್ಶನವೂ ಧರ್ಮದೃಷ್ಟಿಯೂ ಎಷ್ಟು ಜೈನ ಮತದ ಸಾರದಂತಾಗಿದೆಯೋ ಅಷ್ಟು ವಿಶ್ವಧರ್ಮದ ಚಿರಂತನ ಸತ್ಯವಾಗಿದೆ. ಜಾತಿ ವರ್ಣಗಳು ಬೇರೆಯಾದರೂ 'ಮನುಷ್ಯ ಜಾತಿತಾನೊಂದೆವಲಂ' ಎಂದವನು ಸಾರಿದ್ದು ಈ ಆದಿ ಪುರಾಣದಲ್ಲಿಯೇ. ಆದಿಪಂಪನನ್ನು ಅರಿಯುವಾಗ ಅವನ ಕೃತಿಯನ್ನು ವಿಮರ್ಶಿಸುವಾಗ ಈ ವ್ಯಕ್ತಿತ್ವದ ಅಂಶಗಳನ್ನು ನಾವು ನೆನೆದಿರಬೇಕು.

ಬಸವೇಶ್ವರನು ತನ್ನ ಕಾಲದಲ್ಲಿ ಕೂಡಿಬಿದ್ದ 'ಪ್ರಳಯದ ಕಸ'ವನ್ನು ಕಂಡು ರುದ್ರನಂತೆ ಕೆರಳಿದವನಾಗಿ ತೋರಿದರೂ ಹೊಸ ಸಮಾಜ ನಿರ್ಮಾಣಕ್ಕಾಗಿ ವ್ರತಸ್ಥನಾದ ಮಹಾಪುರುಷನು. ವೀರಶೈವ ಮತವನ್ನು ಅವನು ಸ್ಥಾಪಿಸಿದನೋ ವಿಕಾಸಗೊಳಿಸಿದನೋ ಎಂಬ ವಾದವಂತಿರಲಿ. ಆ ಮತದ ಸಂಬಂಧವಾದ ಕಾರ್ಯ ಅವನ ಮಹಾ ವ್ಯಕ್ತಿತ್ವದ ಒಂದು ಭಾಗ

ಮಾತ್ರ. ಧರ್ಮದಲ್ಲಿ ನೈಜತೆ ಸಮಾಜದಲ್ಲಿ ಸಮತೆ ಇವು ನೆಲಸಬೇಕೆಂಬ ಉದ್ದೇಶದಿಂದ ಆತ್ಮಶೋಧನೆ ಮಾಡಿಕೊಂಡು ಕೂಡಲಸಂಗಮನಲ್ಲಿ ಶರಣುಹೋದ ಭಕ್ತನಾಗಿ ನಾಡಿನ ಸಿದ್ಧರನ್ನೂ ಸಾಧಕರನ್ನೂ ಒಟ್ಟುಗೂಡಿಸಿ ಅನುಭವಮಂಟಪದ ಪ್ರಯೋಗಶಾಲೆಯನ್ನು ನಿಲ್ಲಿಸಿದವನು. ಅವನ ವಚನಗಳು ಅವನ ಮಹಾ ಜೀವನದ ಮತ್ತು ವಿಶಿಷ್ಟವಾದ ವ್ಯಕ್ತಿತ್ವದ ಪಡಿನೆಳಲಾಗಿವೆ. ಈ ಎತ್ತರದಲ್ಲಿ ನಿಂತು ಅವನನ್ನು ಕಾಣಬೇಕಾಗುತ್ತದೆ. ಕುಮಾರವ್ಯಾಸನು ಯಾವ ಮತದವನೇ ಆಗಿರಲಿ, ವೀರನಾರಾಯಣನ ಪರಮ ಭಕ್ತನಾಗಿ ಜೀವನಸಂಗ್ರಾಮದ ವೀರನಾಗಿ ಭಕ್ತಿ ಹಾಗೂ ವೀರ ರಸಗಳ ಸಾಕ್ಷಾತ್ಕಾರವನ್ನೂ ಸಮನ್ವಯವನ್ನೂ ಪಡೆದು ತನ್ನ ಭಾರತದಲ್ಲಿ ಉಜ್ವಲವಾಗಿ ತೋರಿದ ಮಹಾಕವಿ. ಅವನಂತೆ ರುದ್ರಭಟ್ಟ; ಲಕ್ಷ್ಮೀಶ ಮುಂತಾದ ಕೆಲವು ಬ್ರಾಹ್ಮಣ ಕವಿಗಳು ಹರಿಹರರ ಅಭೇದವನ್ನು ಎತ್ತಿ ತೋರುವ ಭಾಗವತ ಧರ್ಮವನ್ನೂ ಉಪನಿಷತ್ತತ್ವವನ್ನೂ ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡ ಕವಿಗಳು.

ಇದೇ ಬಗೆಯಲ್ಲಿ ಬೇರೆ ಕೆಲವು ಕನ್ನಡ ಗ್ರಂಥಕಾರರ ಜೀವನದರ್ಶನವನ್ನೂ ವ್ಯಕ್ತಿತ್ವವನ್ನೂ ತಿಳಿದುಕೊಳ್ಳಬಹುದು. ಉದಾಹರಣೆಗೆ, ಜೀವಂಧರ ಚರಿತೆಯನ್ನು ಬರೆದ ಭಾಸ್ಕರನು ಜೈನಮತೀಯನಾದರೂ ಭಾಗವತ ಪರಂಪರೆಯ ಪ್ರಮುಖ ಭಾವಗಳನ್ನು ತನ್ನವಾಗಿ ಮಾಡಿಕೊಂಡಿದ್ದಾನೆ. ಕನಕದಾಸ ಜಗನ್ನಾಥ ದಾಸರು ಮಾಧ್ವ ಪರಂಪರೆಯ ಉಪಾಸಕರಾದರೂ ಅತ್ಯಂತ ವಿಶಾಲವಾದ ಮನೋಧರ್ಮವನ್ನು ತೋರಿದ್ದಾರೆ. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣರು ವೀರಶೈವ ಸಂಪ್ರದಾಯದಲ್ಲಿ ಮುಳುಗಿ ಎದ್ದವರಾದರೂ ಸರ್ವ ಸಂಗ್ರಹವಾದ ಸಮರಸ ದೃಷ್ಟಿಯುಳ್ಳವರು. ಅಲ್ಲಮ ಪ್ರಭುವಿನಂಥ ಮಹಾ ಜ್ಞಾನಿಗೆ ಮತವೆಂಬುದೇ ಸಮ್ಮತವಾದ ಮಾತಲ್ಲ. ರಾಮಕೃಷ್ಣ ಪರಮಹಂಸರಂತೆ ಹಲವು ಮತಗಳಲ್ಲಿ ಸಾಧನೆಮಾಡಿ ಜ್ಞಾನದ ಶಿಖರ ಮುಟ್ಟಿ ಯಾವೊಂದರ ಹೆಮ್ಮೆಯಿಂದಲೂ ಬೀಗದ ಎಲ್ಲವನ್ನೂ ಮೀರಿದ ಪ್ರಭು ಅವನು. ಅಕ್ಕ ಮಹಾದೇವಿಯಂಥ ಅಧ್ಯಾತ್ಮ ಸಾಹಸಿಯನ್ನು ಯಾವ ನಾಡಿನ ಚರಿತ್ರೆಯಲ್ಲಿಯೂ ಕಾಣುವುದು ವಿರಳ. ಈ ಎಲ್ಲ ಶರಣರ ವಿಮರ್ಶೆಗೆ ವೀರಶೈವ ಮತ ಸಹಿತವಾಗಿ ಎಲ್ಲ ಮತಗಳ ಮತೀಯ ಮೋಹ ಸಂಪ್ರದಾಯ ಜಡತೆಗಳು ಗುರಿಯಾಗಿರುತ್ತವೆ. ರತ್ನಾಕರವರ್ಣಿ ತನ್ನ ಭರತೇಶ ವೈಭವ ಕಾವ್ಯದಲ್ಲಿ ಭೋಗ ಯೋಗ ಸಂಯೋಗದಿಂದಲೂ ಆತ್ಮಾನುಭವದ ಪ್ರಜ್ಞೆಯಿಂದಲೂ ಆದರ್ಶ ಪುರುಷನ ಮಹಾ ಸ್ವಪ್ನವನ್ನು ಮಾತಿನ ಅಂಕೆಯಲ್ಲಿ ಹಿಡಿದು ನಿಲ್ಲಿಸಿದ ಮಹಾಕವಿ. ಅವನು ಜೈನನೆಂಬುದು ಅವನ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಭಾಗವಾದರೂ ಅದು ಅದರ ಪೂರ್ಣ ದರ್ಶನವಲ್ಲ. ಸರ್ವಜ್ಞ ಯಾವ ಮತದವನೆಂಬುದನ್ನು ಹೇಳುವ ಎದೆ ಯಾರಿಗಿದೆ? ಎಲ್ಲ ಮತಗಳ ದೋಷಕ್ಕೆ ಬರಸಿಡಿಲು, ಗುಣಕ್ಕೆ ಅರಸುದುಂಬಿ ಎಂದವನನ್ನು ಕರೆದರೆ ಸಾರ್ಥಕವಾದೀತು. ಮತೀಯ ವೃತ್ತಿಗಳಿಂದ ಕೂಡಿದ ಕವಿಗಳು ಇಲ್ಲವೆ ಮತನಿಂದೆಯುಳ್ಳ ಕೃತಿಗಳು ಕನ್ನಡದಲ್ಲಿ ಇಲ್ಲವೆಂದಲ್ಲ. ಮೇಲೆ ಉದಾಹರಿಸಿದ ಕವಿಗಳಲ್ಲಿಯೂ ಉದಾರತೆಯೊಡನೆ ಆತ್ಮಪ್ರೌಢಿಯ, ಅಸಹನೆಯ ಅಂಶಗಳು ಕಂಡು ಬಂದಿಲ್ಲವೆಂದೂ ಅಲ್ಲ. ಅದನ್ನು ಅವರವರ ವ್ಯಕ್ತಿತ್ವದಲ್ಲಿ ಹೇಗೆ ಹೊಂದಿಸಬೇಕೆಂಬ ಸಮಸ್ಯೆ ಸಾಹಿತ್ಯ ಚರಿತ್ರ ಲೇಖಕನಿಗೆ ಇದ್ದೇ ಇದೆ. ಆಯಾ ಕಾಲದಲ್ಲಿ ಪೂರ್ವಾಗ್ರಹರಹಿತವಾಗಿ ಕಲ್ಪನೆಯನ್ನೂ ಬುದ್ಧಿಯನ್ನೂ ಓಡಿಸಿದರೆ ಯಾವ ಸಹೃದಯನೂ ಇದಕ್ಕೆ ಪರಿಹಾರವನ್ನು ಕಾಣಬಹುದು. ಆದರೆ ಚರ್ಚೆ ಇಲ್ಲಿ ಅಪ್ರಸ್ತುತವಾಗಿದೆ.

ಕೆಲ ಸಮಸ್ಯೆಗಳನ್ನು ಗುರುತಿಸುವುದೂ ಉತ್ತರಗಳನ್ನು ಸೂಚಿಸುವುದೂ ಈ ಲೇಖನದ ಗುರಿಯಾಗಿತ್ತು. ಅದು ಕೈಗೂಡಿದ್ದರೆ ಇದು ಸಾರ್ಥಕ.

ನಾಟಕ ಕಲೆ

ಶ್ರೀ ಎಂ. ವಿ. ಸೀತಾರಾಮಯ್ಯ, ಎಂ. ಎ.

'ನಾಟಕ ಕಲೆ' ಎಂಬ ಪದದ ಅರ್ಥವ್ಯಾಪ್ತಿಯಲ್ಲಿ ನಾಟಕ ಬರೆಯುವ ಕಲೆ ಹಾಗೂ ಅದನ್ನು ಆಡಿ ತೋರಿಸುವ ಕಲೆ ಎರಡೂ ಸೇರಿವೆ. ಯಾವುದೇ ಕಾರಣದಿಂದ ನಾಟಕವನ್ನು ಆಡಿ ತೋರಿಸದಿರಬಹುದು; ಆದರೂ ಆಡಿ ತೋರಿಸುವ, ಪ್ರದರ್ಶಿಸಲಾಗುವ, ಶಕ್ಯತೆ ಅದರಲ್ಲಿ ಸಂಪೂರ್ಣವಾಗಿ ಅಡಕವಾಗಿದ್ದರೆ ಅದು ನಾಟಕವಾಗಬಹುದು. ಆ ಶಕ್ಯತೆ ಇಲ್ಲದ್ದು ನಾಟಕ ಎಂಬ ಹೆಸರಿಗೆ ಅರ್ಹವಾಗದು. ಕವಿಯ ಮನೋರಂಗಭೂಮಿಯಲ್ಲಿ ರೂಪಗೊಂಡು ನಿಜವಾದ ರಂಗಭೂಮಿಯ ಮೇಲೆ ರೂಪಗೊಂಡಾಗಲೇ ಕಾವ್ಯ 'ರೂಪಕ'ವಾಗುವುದು; ಬರೆದ ಕಾವ್ಯವನ್ನು ಆಡಿ ನೋಡಬಹುದಾದಾಗ ಮಾತ್ರ ಅದು 'ದೃಶ್ಯ'ವಾಗುವುದು. ನಾಟಕದ ಸಾಹಿತ್ಯ ಭಾಗ ಅಕ್ಕಿ ಬೇಳೆ ಮೊದಲಾದ ಪಾಕಸಾಮಗ್ರಿ, ಅಷ್ಟೆ; ಆ ಸಾಮಗ್ರಿ ಭೋಜ್ಯಮಾನವಾಗಬೇಕಾದರೆ, ರಸ್ಯಮಾನವಾಗಬೇಕಾದರೆ, ಪಾಕಸಂಸ್ಕಾರ ಅತ್ಯಗತ್ಯ. ಬರೆದ ನಾಟಕವು ಅಭಿನಯವೆಂಬ ಪಾಕಸಂಸ್ಕಾರ ಕಾರ್ಯದಿಂದ ರಸದೂಟವಾಗಬೇಕು. ಎಷ್ಟೆಂದರೂ ನಾಟಕ ಕವಿಯ ಭಾವಸಮುಚ್ಚಯ, ಸಂಭಾಷಣ ರೂಪದಲ್ಲಿ ವ್ಯಕ್ತಪಡಿಸಿದ ಭಾವಸಮುಚ್ಚಯ; ಇದಕ್ಕೆ ದೃಶ್ಯಮಾನವಾದ ರೂಪ ಕೊಡುವವರು ನಟರು.

ಕಾವ್ಯ ಗುಣಗಳಲ್ಲಿ 'ನಾಟಕೀಯತೆ' ಎಂಬ ಒಂದು ಗುಣ ಉಂಟೆಂದು ಈಚೀಚೆಗೆ ಹೇಳುವುದು ರೂಢಿಯಾಗಿದೆ. ಈ ನಾಟಕೀಯತೆ ರನ್ನನ 'ಗದಾಯುದ್ಧ'ದಲ್ಲಿಯೂ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿಯೂ ಹೇರಳವಾಗಿದೆ; ರನ್ನನ ಗದಾಯುದ್ಧವನ್ನು ದಿವಂಗತ 'ಶ್ರೀ'ಯವರು ನಾಟಕ ರೂಪಕ್ಕೆ ಬಹಳ ಯಶಸ್ವಿಯಾಗಿ ತಿರುಗಿಸಿ, ನಾಡಿಗೆ ಒಂದು ಅಮೋಘವಾದ ಕಾಣಿಕೆಯನ್ನರ್ಪಿಸಿದ್ದಾರೆ; ಹಲವು ಕಾದಂಬರಿಗಳಲ್ಲೂ ಈ ನಾಟಕೀಯತೆ ಕಂಡು ಬರುತ್ತದೆ. ಅಂತೆಯೇ ಭಾಸಮಹಾಕವಿಯ ನಾಟಕಗಳಲ್ಲಿ ನಾಟಕೀಯತೆ ಪರಿಪೂರ್ಣವಾಗಿದೆಯೆಂದೂ ಕಾಳಿದಾಸ ಮಹಾಕವಿಯ ನಾಟಕಗಳಲ್ಲಿ ಕಾವ್ಯಾಂಶ ಹೆಚ್ಚಾಗಿ ನಾಟಕೀಯತೆ ಕೆಲಮಟ್ಟಿಗೆ ಕಡಮೆಯಾಗಿದೆಯೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದರಿಂದ, ಈ ನಾಟಕೀಯತೆ ಎನ್ನುವ ಗುಣ ಕಾವ್ಯದಲ್ಲಿಯೇ ಅಂತರ್ಗತವಾಗಿದ್ದರೂ ಕೂಡ ಕಾವ್ಯ ಭಿನ್ನವಾದ ಒಂದು ಗುಣವೆಂಬುದು ಸ್ಪಷ್ಟವಾಗುತ್ತದೆ. ಶ್ರೀ ರಾಮನು ಮನುಷ್ಯನಾಗಿಯೂ ದೈವಿಕ ಗುಣೋಪೇತನಾಗಿ ದೇವರೆಂದು ಪೂಜನೀಯನಾದ; ಅವನು ಮನುಷ್ಯನೂ ಅಹುದು, ದೇವರೂ ಅಹುದು. ಅಂತೆಯೇ ಈ ನಾಟಕ: ಅದು ಕಾವ್ಯವೂ ಅಹುದು, ತದ್ಭಿನ್ನವಾದ ಗುಣವನ್ನು ಒಳಗೊಂಡ ಕಲಾಪ್ರಕಾರವೂ ಅಹುದು. ಇತರ ಕಾವ್ಯಪ್ರಕಾರಗಳಲ್ಲಿ ಕಾಣಬರದ ಒಂದು ವಿಶಿಷ್ಟ ರಂಜಕ ಗುಣ ನಾಟಕದಲ್ಲಿ ಇರುವುದರಿಂದಲೇ "ಕಾವ್ಯೇಷು ನಾಟಕಂ ರಮ್ಯಂ" ಎಂದರು ನಮ್ಮವರು.

ಇಂತು ನಾಟಕಕಲೆಯ ರಮ್ಯತೆಯೇ ಅದರ ವಿಶಿಷ್ಟ ಗುಣವೆಂದು ಸಿದ್ಧವಾಗುತ್ತದೆ. ಗಯಟೆ ಮಹಾಕವಿ ನಾಟಕವು ಒಂದು ವಿನೋದಗುಚ್ಛವಾಗಿರಬೇಕೆಂದು ಎಣಿಸಿದನು. ಈಚೆಗೆ ಪ್ರಸಿದ್ಧ ಇಂಗ್ಲಿಷ್ ನಾಟಕಕಾರರಾದ ಸಾಮರ್‌ಸೆಟ್ ಮಾಹಂ (ಅವರು ಕಾದಂಬರಿಕಾರರೂ ಆಗಿದ್ದಾರೆ) ಅವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾಟಕದ ಅತ್ಯಂತ ಪ್ರಾಚೀನ ಉಗಮಸ್ಥಾನಗಳಾದ ಗ್ರೀಸ್ ಮತ್ತು ಭಾರತ ದೇಶಗಳ ನಾಟಕಗಳ ಉತ್ಪತ್ತಿ ಮತ್ತು ಸ್ವರೂಪಗಳನ್ನು ಪರಿಶೀಲಿಸಿದರೂ, ಕಣ್ಣಿನ ಮೂಲಕ ಮನಸ್ಸನ್ನು ರಮಿಸುವ ಕುಣಿತದಿಂದ ನಾಟಕವು ಹುಟ್ಟಿರುವುದು ಕಂಡು ಬರುತ್ತದೆ. ಕುಣಿತದೊಂದಿಗೆ ಹಾಡೂ ಒಡನಾಡಿಯಾಗಿತ್ತು. ಸುಮಾರು ೨೫೦೦ ವರ್ಷಗಳ ಕೆಳಗೆ ಗ್ರೀಸಿನಲ್ಲಿ ಡಯೋನೀಸಿಯ ಹಬ್ಬದಲ್ಲಿ, ಆಡಿನ ವೇಷ ಧರಿಸಿದ ಭಕ್ತರು ಸ್ತೋತ್ರಗೀತಗಳಿಂದಲೂ, ನೃತ್ಯದಿಂದಲೂ ಡಯೋನಿಸಸ್ ದೇವತೆಗೆ ಪೂಜೆ ಸಲ್ಲಿಸುವ ಸನ್ನಿವೇಶದಿಂದ ಗ್ರೀಕ್ ನಾಟಕ ಬೆಳೆಯಿತು. ಟ್ರ್ಯಾಜೆಡಿ (Tragedy) ಎಂಬ ಪದಕ್ಕೆ ಮೂಲ ಅರ್ಥ 'ಅಜಗೀತೆ' ಎಂದು. ನಮ್ಮ ದೇಶದಲ್ಲಿ ಮೂಲತಃ ನಾಟ್ಯಕ್ಕೂ ನಾಟಕಕ್ಕೂ ಭೇದವಿರಲಿಲ್ಲ; ನಾಟ್ಯಕ್ಕೆ

'ರೂಪಕ' ಎಂಬುದು ಇನ್ನೊಂದು ಹೆಸರು. ದಶವಿಧ ರೂಪಕಗಳಲ್ಲಿ 'ನಾಟಕ' ಒಂದು ಮುಖ್ಯ ಜಾತಿ. 'ರೂಪಕ' ಎಂಬ ಸಾಮಾನ್ಯಾರ್ಥದಲ್ಲಿ ಈಗ ನಾಟಕ ಎಂಬ ಪದ ಬಳಕೆಯಲ್ಲಿದೆ. ನಾಟ್ಯ, ನಾಟಕ—ಈ ಎರಡೂ ಪದಗಳ ಮೂಲ 'ನಟ್' ಎಂಬ ಧಾತು. ಇದು 'ನೃತ್' ಧಾತುವಿನ ಪ್ರಾಕೃತರೂಪ. ಆದ್ದರಿಂದ ನೃತ್ತ, ನೃತ್ಯ, ನಟ್, ನಾಟಕ—ಈ ಎಲ್ಲ ಪದಗಳಿಗೂ ಮೂಲತಃ 'ಕುಣಿತ' ಎಂದೇ ಅರ್ಥ. ಇನ್ನು ದ್ರಾವಿಡರ 'ಬಯಲಾಟ', 'ಕಥಕ್ಕಳಿ'—ಇವುಗಳಲ್ಲಿಯೂ ಕುಣಿತ ಪ್ರಧಾನವಾಗಿದ್ದು, ಅದು ಈಗಿಗೂ ಉಳಿದುಕೊಂಡು ಬಂದಿದೆ. ನಮ್ಮ 'ಬಯಲಾಟ'ಕ್ಕೆ 'ದೊಂಬಿದಾಸರ ಕುಣಿತ' ಎಂದು ಹೇಳುವುದೂ ಹಲವು ಕಡೆ ರೂಢಿಯಾಗಿದೆ. ಕುಣಿತದೊಂದಿಗೆ ಹಾಡೂ ಬೆರೆತಂದು ಕಣ್ಣು ಮತ್ತು ಕಿವಿಯ ಮೂಲಕ ಪ್ರೇಕ್ಷಕರ ಮನಸ್ಸನ್ನು ರಮಿಸುವ ಕಲಾಪ್ರಕಾರ ಬೆಳೆಯಿತು. ಕಣ್ಣಿನ ಮೂಲಕ ರಮಿಸುವ ಕುಣಿತದ ಸಾಧನದೊಂದಿಗೆ ಅನುಕರಣಪ್ರಧಾನವಾದ ಅಭಿನಯವೂ ಕಿವಿಯ ಮೂಲಕ ರಮಿಸುವ ಸಂಗೀತಸಾಧನದೊಂದಿಗೆ ಸಂವಾದ, ಕಥೆ ಇವು ಕ್ರಮೇಣ ಬೆರೆತು ಈಗ ನಾವು ನಾಟಕ ಎನ್ನುವ ಕಲಾರೂಪ ಸಿದ್ಧವಾಯಿತು. ನಾಟಕಕಲೆಯ ಬೆಳವಣಿಗೆಯಲ್ಲಿ ನೃತ್ಯ ಮತ್ತು ಸಂಗೀತಗಳು ಹಿಂದಕ್ಕೆ ಸರಿದು ಸಂಭಾಷಣೆಯ ಮೂಲಕ ಪಾತ್ರಗಳ ಆಗುಹೋಗುಗಳನ್ನು ಚಿತ್ರಿಸುವ ಕಥೆಯ ಅಭಿನಯವು ಮುಂದಕ್ಕೆ ಬಂದಿತು. ಬರಬರುತ್ತ ನೃತ್ಯ ಮತ್ತು ಸಂಗೀತಗಳು ನಾಟಕದ ಆವಶ್ಯಕ ಅಂಗವಾಗಿರದೆ ಅನಿವಾರ್ಯವಲ್ಲದ ಮನೋರಂಜಕ ಅಂಶಗಳಾಗಿ ಉಳಿದುಕೊಂಡು ಬಂದು, ನಿತ್ಯದೂಟಕ್ಕೆ ಬೇಕಿಲ್ಲದ, ಹಬ್ಬದೂಟದ ಪಾಯಸ ಪರಮಾನ್ನದ ಸ್ಥಾನವನ್ನು ಅಲಂಕರಿಸಿದುವು. ಕುಣಿತದ ದೃಶ್ಯ ರಮ್ಯತೆಯನ್ನು ಅಭಿನಯವೂ ಸಂಗೀತದ ಶ್ರವ್ಯರಮ್ಯತೆಯನ್ನು ಗದ್ಯ ಪದ್ಯಾತ್ಮಕವಾದ ಕಾವ್ಯವೂ ಆಕ್ರಮಿಸಿ ನಾಟಕವನ್ನು ಬೇರೆಯ ರೀತಿಯಲ್ಲಿ ರಮ್ಯವಾಗುವಂತೆ ಮಾಡಿದುವು. ಅಭಿನಯಕ್ಕೂ ಕಾವ್ಯವೇ ಆಧಾರಭೂತವಾಗಿ ಪರಿಣಮಿಸಿತು. ಕಾವ್ಯದ ಮೆಯ್ಯಲ್ಲಿ ಚಿತ್ರವತ್ತಾದ ವರ್ಣನೆಗಳು ಪಾತ್ರಪೋಷಣೆಯೂ ಪ್ರಧಾನವಾಗಿ, ಪಾತ್ರಗಳ ನಡವಳಿಕೆಗೆ ವಿಧಿ ಅಥವಾ ದೈವವಿಲಾಸವು ಪ್ರೇರಕಶಕ್ತಿಯಾಯಿತು. ಗ್ರೀಕ್ ರುದ್ರನಾಟಕಗಳೂ, ಸಂಸ್ಕೃತ ನಾಟಕಗಳಲ್ಲಿ ಹಲಕೆಲವೂ, ಷೇಕ್ಸ್‌ಪಿಯರನ ರುದ್ರನಾಟಕಗಳೂ ನಾಟಕಕಲೆಯ ಬೆಳವಣಿಗೆಯ ಈ ಮಟ್ಟವನ್ನು ಸೂಚಿಸುತ್ತವೆ. ಕ್ರಮಕ್ರಮವಾಗಿ ನಾಟಕಗಳಲ್ಲಿ ದೇವಾದಿದೇವತೆಗಳು, ಪೌರಾಣಿಕ ವ್ಯಕ್ತಿಗಳು, ಐತಿಹಾಸಿಕ ಇಲ್ಲವೆ ಕಾಲ್ಪನಿಕ ರಾಜರಾಜ್ಞಿಯರು—ಇವರೆ ಮೊದಲಾದ 'ಉದಾತ್ತ' ವ್ಯಕ್ತಿಗಳ ಬದಲು ಸಾಮಾನ್ಯ ವ್ಯಕ್ತಿಗಳ ಮತ್ತು ಅವರ ಜೀವನದ ಚಿತ್ರಣ ಪ್ರಾರಂಭವಾಗಿ, ನಾಟಕಕಲೆ ಮನುಷ್ಯನ ನಿತ್ಯಜೀವನಕ್ಕೆ ಹತ್ತಿರವಾಗುತ್ತ ಬಂದು, ಈಗಿನ ಕಾಲದ ವಾಸ್ತವಿಕ ಗದ್ಯ ನಾಟಕಕ್ಕೆ ಪೀಠಿಕೆಯಾಯಿತು. ಸಂಸ್ಕೃತ ಸಾಹಿತ್ಯದಲ್ಲಿ ಕ್ರಿ. ಶ. ೪೦೦ರ ಹೊತ್ತಿಗೇ 'ಮೃಚ್ಛಕಟಿಕ'ದಂತಹ ರಾಜಕೀಯ ಮಿಶ್ರವಾದ ಸಾಮಾಜಿಕ ವಸ್ತುವನ್ನುಳ್ಳ, ಪಾಶ್ಚಾತ್ಯ ವಿಮರ್ಶಕರನ್ನು ತಲೆದೂಗಿಸಿರುವಂತಹ, ನಿತ್ಯನೂತನವಾದ ನಾಟಕವು ಹುಟ್ಟಿತೆಂದ ಮೇಲೆ, ಸಂಸ್ಕೃತ ನಾಟಕವು ಅದೇ ಪೂರ್ವಪರಂಪರೆಯಲ್ಲಿ ಬೆಳೆದುಕೊಂಡು ಬಂದಿದ್ದಿದ್ದರೆ ಭಾರತೀಯ ನಾಟಕಪ್ರಪಂಚದಲ್ಲಿ ಎಂತೆಂತಹ ಕ್ರಾಂತಿಗಳನ್ನು ಕಾಣುತ್ತಿದ್ದೆವೋ—ನೆನೆಸಿಕೊಂಡರೆ ನಿಟ್ಟುಸಿರುಗರೆಯುವಂತಾಗುತ್ತದೆ. ಯೂರೋಪಿನಲ್ಲಿ ಇಬ್ಸೆನ್ನನು ವಾಸ್ತವಿಕ ಗದ್ಯನಾಟಕದ ನಾಂದಿಯನ್ನು ಹಾಡಿದನು. ಪೂರ್ವದ ಮಹಾ ನಾಟಕಗಳಲ್ಲಿ ದೈವ—ಮಾನುಷಘರ್ಷಣೆಯೇ ನಾಟಕದ ಜೀವಾಳವೆನಿಸಿದ್ದು, ವಾಸ್ತವಿಕ ಗದ್ಯ ನಾಟಕಗಳಲ್ಲಿ ವ್ಯಕ್ತಿ ವ್ಯಕ್ತಿಗಳ ಭಾವ ಭಾವನೆಗಳ ಘರ್ಷಣೆ ಜೀವಾಳವಾಗ ತೊಡಗಿತು. ಪ್ರೇಕ್ಷಕರು ತಮ್ಮ ಅನುಭವದೊಂದಿಗೆ ನಾಟಕದ ಪಾತ್ರಗಳ ಅನುಭವ ಪ್ರಪಂಚವನ್ನು ತೂಗಿ ನೋಡಿ, ಅದರ ಸಾದೃಶ್ಯ ಇಲ್ಲವೆ ವೈಪರೀತ್ಯಗಳಿಂದ ಸಂತೃಪ್ತಿ ಸಂತೋಷಗಳನ್ನು ಪಡೆಯ ತೊಡಗಿದರು. ಜೊತೆಗೆ, ರಂಗಮಂಟಪ ಪ್ರಸಾಧನದಲ್ಲಿ ಕ್ರಾಂತಿಯುಂಟಾಯಿತು; ನಾಟಕದ ವರ್ಣನಾಭಾಗಗಳ ಸ್ಥಾನದಲ್ಲಿ ದೃಶ್ಯ ವೈಭವ (grandeur of Scenery) ಕಂಗೊಳಿಸತೊಡಗಿತು. ನಾಟಕ ಕಲೆಯ ಸಾಹಿತ್ಯಭಾಗ, ಪ್ರಯೋಗ ಭಾಗ—ಎರಡರಲ್ಲಿಯೂ ವಾಸ್ತವಿಕ ನಿರೂಪಣವೇ ಪರಮಧ್ಯೇಯವಾಯಿತು. ಕಿವಿಗಿಂತಲೂ ಹೆಚ್ಚಾಗಿ ಕಣ್ಣಿನ ಮೂಲಕ ರಮಿಸುವುದೇ ಈ ಧ್ಯೇಯಸಾಧನೆಯ ಸಿದ್ಧಿಯಾಗಿ ಪರಿಣಮಿಸಿತು. ಇದು ಕೆಲವು

ಸಂದರ್ಭಗಳಲ್ಲಿ ಅತಿರೇಕಕ್ಕೂ ಇಟ್ಟುಕೊಂಡಿತು. ಈ ಪರಿಸ್ಥಿತಿಯಲ್ಲಿ, ಚಲನಚಿತ್ರಕಲೆ ಬೆಳೆದು, ಈಗ ಪರಮ ಸಿದ್ಧಿಯ ಮುಗಿಲು ಮುಟ್ಟಿ, ಕಣ್ಣಿನ ಮೂಲಕ ರಮಿಸುವ ಕಾರ್ಯದಲ್ಲಿ ನಾಟಕ ಕಲೆಯನ್ನು ಖಂಡಿತವಾಗಿಯೂ ಸೋಲಿಸಿದೆ. ಪಾಶ್ಚಾತ್ಯ ದೇಶಗಳಲ್ಲಿ ಚಲನಚಿತ್ರ ಮಂದಿರಗಳ ಪಕ್ಕಪಕ್ಕಗಳಲ್ಲಿಯೇ ನಾಟಕ ಮಂದಿರಗಳೂ ಇದ್ದು, ನಾಟಕಕಲೆ ಜೀವಂತವಾಗಿಯೇ ಇದ್ದರೂ ಕೂಡ, ಚಲನಚಿತ್ರಕಲೆಯ ಸ್ಪರ್ಧೆಯಿಂದ ನಾಟಕ ಕಲೆಯನ್ನು ಬೇರ್ಪಡಿಸಿ ಉಳಿಸುವ ಸಮಸ್ಯೆ ಅಲ್ಲಿ ತಲೆದೋರಿದೆ.

ನಮ್ಮ ದೇಶದಲ್ಲಿ ಸಂಸ್ಕೃತ ನಾಟಕದ ಬೆಳವಣಿಗೆ ನಿಂತ ಮೇಲೆ, ಯಾವ ದೇಶ ಭಾಷೆಯಲ್ಲಿಯೂ ಈಚೀಚಿನ ವರೆಗೆ ನಾಟಕಸಾಹಿತ್ಯ ತಲೆದೋರಿರಲಿಲ್ಲ. ಸಂಸ್ಕೃತ ನಾಟಕಗಳ ಭಾಷಾಂತರಗಳಾಗಿ ಅವುಗಳನ್ನು ಪ್ರಯೋಗ ಮಾಡುವುದು ನಾಟಕಕಲೆಯ ಬೆಳವಣಿಗೆಯಲ್ಲಿ ಮೊದಲ ಹೆಜ್ಜೆಯಾಯಿತು. ಪಾಶ್ಚಾತ್ಯ ಸಂಪರ್ಕದ ಪ್ರಭಾವದಿಂದ ಹಲವು ಕ್ಷೇತ್ರಗಳಲ್ಲಿ ಕ್ರಾಂತಿಯಾದಂತೆ ನಮ್ಮ ನಾಟಕ ಪ್ರಪಂಚದಲ್ಲಿಯೂ ಕ್ರಾಂತಿಯಾಗಿ, ನಾಟಕಕಲೆ ಹೊಸ ಹಾದಿಯಲ್ಲಿ ಕಾಲಿಡತೊಡಗಿತು. ಇದರೊಂದಿಗೆಯೇ ಚಲನಚಿತ್ರವೂ ಅಡಿಯಿಟ್ಟು ಅದು ಬಹು ತೀವ್ರ ಗಮನದಲ್ಲಿ ಸಾಗಿದುದರ ಪರಿಣಾಮವಾಗಿ ಬೆಳೆಯುವ ಮೊದಲೇ ನಮ್ಮ ದೇಶದ ಆಧುನಿಕ ನಾಟಕಕಲೆ ನಶಿಸಿ ಹೋಗುವ ಚಿಹ್ನೆಗಳು ಕಂಡು ಬರುತ್ತಿವೆ. ಪಾಶ್ಚಾತ್ಯ ದೇಶದಲ್ಲಿ ಇರುವ ಸಮಸ್ಯೆಯೇ ಇಲ್ಲಿಯೂ ಇದ್ದು, ಅದು ತೀವ್ರತರವಾಗಿದೆ. ನಾಟಕ ಕಲಾಭಿಮಾನಿಗಳೆಲ್ಲರೂ ನಾಟಕಕಲೆಯನ್ನು ಉಳಿಸಿ ಬೆಳಸುವ ಕಡೆಗೆ ವಿಶೇಷ ಲಕ್ಷ್ಯಕೊಡಬೇಕಾಗಿದೆ.

ಚಲನಚಿತ್ರಕಲೆ ಲಾಭನಷ್ಟಗಳ ಒಂದು ಉದ್ಯಮವಾಗಿ ಪರಿಣಮಿಸಿ, ನಾಟಕಕಲೆ ಹಾಗಾಗದಿರುವುದು ಸೌಭಾಗ್ಯವೆಂದೇ ನನ್ನ ಭಾವನೆ. ಚಲನಚಿತ್ರ ಕಲೆಯೊಂದಿಗೆ ನಾಟಕಕಲೆ ಸ್ಪರ್ಧೆ ಹೂಡುವುದರಿಂದ ಪ್ರಯೋಜನವೇನೂ ಇಲ್ಲ. ಒದಗಿಸಲಾಗದ ಆನಂದವನ್ನು ನಾಟಕಕಲೆ ಒದಗಿಸುವುದರ ಕಡೆಗೆ ಲಕ್ಷ್ಯಕೊಟ್ಟರೆ ಅದು ಉಳಿದೀತು, ಬೆಳೆದೀತು. ನಾಟಕಕಲೆ ತನ್ನ ಉಗಮಸ್ಥಾನಗಳಿಂದಲೇ ಮತ್ತೆ ಸ್ಫೂರ್ತಿಯನ್ನು ಪಡೆಯಬೇಕು. ಕಣ್ಣಿನ ಮೂಲಕ ರಮಿಸುವುದಕ್ಕಿಂತ ಹೆಚ್ಚಾಗಿ ಕಿವಿಯ ಮೂಲಕವೇ ರಮಿಸುವ ಸಾಹಿತ್ಯದ–ಮತ್ತು ಸಂಗೀತದ—ಸಾಧನವನ್ನು ಆಶ್ರಯಿಸಬೇಕು. ನಾಟಕವು ಮತ್ತೆ "ಕಾವ್ಯೇಷು ರಮ್ಯಂ" ಆಗಬೇಕು.

ತ್ರಿಪದಿಯ ಲಕ್ಷಣ

ಶ್ರೀ ವಿದ್ವಾನ್ ಸೇಡಿಯಾಪು ಕೃಷ್ಣ ಭಟ್ಟ, ಮಂಗಳೂರು.

ತ್ರಿಪದಿ ಕನ್ನಡದಲ್ಲಿ ಪ್ರಸಿದ್ಧವಾಗಿರುವ ಒಂದು ಪದ್ಯರೂಪ. ಸರ್ವಜ್ಞನ ತ್ರಿಪದಿಗಳಂತೂ ಅತ್ಯಂತ ಪ್ರಸಿದ್ಧವಾಗಿವೆ. ಸುಮಾರು ಏಳನೆಯ ಶತಮಾನದಿಂದಲೇ ತ್ರಿಪದಿಯ ಅಸ್ತಿತ್ವವು ಕಂಡು ಬರುತ್ತದೆ. ನಮ್ಮ ನಾಡಿನ ಹೆಂಗಳ ಹಾಡುಗಳಲ್ಲಿ ತ್ರಿಪದಿಗೆ ಪ್ರಮುಖವಾದ ಸ್ಥಾನವಿದೆ. ಹೀಗಿದ್ದರೂ ಇದರ ಛಂದೋಲಕ್ಷಣದ ಕುರಿತು ಒಂದು ಯುಕ್ತವಾದ ನಿರ್ಧಾರಕ್ಕೆ ಇಂದಿನ ಅಕ್ಕರಿಗರೆಲ್ಲ ಬಂದಿರುವುದಿಲ್ಲ. ಇದು ತ್ರಿಮೂರ್ತಿ* ಗಣ ಘಟಿತವೆಂದು ನಾಗವರ್ಮನು ಹೇಳಿರುವನಾದರೂ, ಆ ಅಭಿಪ್ರಾಯವು ಇಂದಿನ ವಿದ್ವಾಂಸರೆಲ್ಲರಿಗೆ ಮನವರಿಕೆಯಾದಂತೆ, ಮೆಚ್ಚಿದಂತೆ, ಕಾಣುವುದಿಲ್ಲ. ಏಕೆಂದರೆ ಇಂದು ಕಾಣಿಸಿಕೊಳ್ಳುವ ತ್ರಿಪದಿಗಳೆಲ್ಲ ಅವನು ಹೇಳಿದ ಲಕ್ಷಣಕ್ಕೆ ಒಡಂಬಡುವಂತೆ ತೋರುವುದಿಲ್ಲ. ಆದುದರಿಂದ ಮಾತ್ರೆಗಳ ಲೆಕ್ಕದಿಂದಲೇ ಅದರ ಲಕ್ಷಣವನ್ನು ಹೇಳುವ ಮತ್ತು ತಿಳಿಯುವ ಪ್ರಯತ್ನಗಳು ಕೆಲವು ಕಾಲದಿಂದ ಕಂಡು ಬರುತ್ತವೆ. ಉದಾಹರಣವಾಗಿ—೧೯೨೪ನೆಯ ಇಸವಿಯಲ್ಲಿ ಮುದ್ರಿತವಾದ 'ಸರ್ವಜ್ಞ ವಚನಗಳ' ಪ್ರಸ್ತಾವನೆಯಲ್ಲಿ ಶ್ರೀ ಉತ್ತಂಗಿಯವರು ಹೀಗೆಂದಿದ್ದಾರೆ:—

"ತ್ರಿಪದಿಯೆಂದರೆ ಮೂರು ಚರಣಗಳುಳ್ಳದ್ದು. ಇವುಗಳಲ್ಲಿ ಮೊದಲನೆಯ ಚರಣಕ್ಕೆ ೨೦ ಎರಡನೆಯದಕ್ಕೆ ೧೭ ಮೂರನೆಯದಕ್ಕೆ ೧೩ ಮಾತ್ರೆಗಳು ಬರುವುವು..............ಎರಡನೆಯ ಚರಣದ ಎರಡನೆಯ ಹಾಗೂ ಮೂರನೆಯ ಚರಣದ ಎರಡನೆಯ ಗಣಗಳಲ್ಲಿ, ಅಂದರೆ ರಸದಶಸ್ಥಾನಗಳಲ್ಲಿ (೬–೧೦),–ಬ್ರಹ್ಮಗಣವು ಬರತಕ್ಕದ್ದು........ಅಂದರೆ ಈ ಎರಡು ಸ್ಥಾನಗಳಲ್ಲಿ ೩–೪ಕ್ಕಿಂತ ಹೆಚ್ಚು, ಉಳಿದ ಸ್ಥಾನಗಳಲ್ಲಿ ೫ಕ್ಕಿಂತ ಹೆಚ್ಚು ಮಾತ್ರೆಗಳು ಬರಲಾಗದು. ಹೇಗಿದ್ದರೂ ಎರಡನೆಯ ಚರಣದ ೧೭ ಮಾತ್ರೆಗೂ ೩ನೆಯ ಚರಣದ ೧೩ ಮಾತ್ರೆಗೂ ಏನೂ ಹೆಚ್ಚು ಕಡಿಮೆ ಆಗಬಾರದು. ಆದರೆ ಷಡಕ್ಷರಿಯ ರಾಜಶೇಖರ ವಿಲಾಸದಲ್ಲಿಯೂ ಸರ್ವಜ್ಞನ ತ್ರಿಪದಿಯಲ್ಲಿಯೂ ರಸದಶಸ್ಥಾನಗಳಲ್ಲಿ ಮೂರು ಮಾತ್ರೆಗಳು ಬರುವುದೇ ವಿಶೇಷ. ತ್ರಿಪದಿಗೆ ಒಂದು ತರದ ವಿಲಕ್ಷಣ ಸ್ವಭಾವವಿದ್ದು, ಇದರಲ್ಲಿ ಪದಗಳನ್ನು ರಚಿಸುವದು ಅನೇಕಾವರ್ತಿ ತೋರುವಷ್ಟು ಸುಲಭವಾಗಿರುವುದಿಲ್ಲ............" (ಪ್ರಸ್ತಾವನೆ ಪುಟ ೪೮–೪೯).

೧೯೨೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಲ್ಪಟ್ಟ 'ಕನ್ನಡ ಕೈಪಿಡಿ'ಯಲ್ಲಿ ತ್ರಿಪದಿಯ ಲಕ್ಷಣವು ಹೀಗಿದೆ:—

"ಐದು ಮಾತ್ರೆಯ ಗಣವು ಒಂದೆರಡನೆಯ ಪಾದಗಳಲ್ಲಿ ನಾಲ್ಕು ನಾಲ್ಕೂ, ಮೂರನೆಯ ಪಾದದಲ್ಲಿ ಮೂರೂ ಇರುವುವು." (ಪುಟ ೧೩೨.) [ಎಂದರೆ ಮೊದಲನೆಯ ಪಾದದಲ್ಲಿ ೨೦, ಎರಡನೆಯ ಪಾದದಲ್ಲಿಯೂ ೨೦, ಮೂರನೆಯ ಪಾದದಲ್ಲಿ ೧೫ ಮಾತ್ರೆಗಳು–ಎಂದಂತಾಯಿತು.—ಲೇಖಕ.] ಮುಂದೆ ಅದೇ ಪುಸ್ತಕದ ೧೩೫ನೆಯ ಪುಟದಲ್ಲಿ—

''ಬಿಸರುಹೋದ್ಭವಗಣಂ ರಸದಶಸ್ಥಾನದೊಳ್
ಬಿಸರುಹನೇತ್ರಗಣಮೆ ಬರ್ಕುಳಿದುವು
ಬಿಸರುಹನೇತ್ರೇ ತ್ರಿಪದಿಗೆ.''

ಎಂದು ನಾಗವರ್ಮನು ಹೇಳಿದ ಲಕ್ಷಣವೂ ದಿಙ್ಮಾತ್ರವಾಗಿ ಸೂಚಿತವಾಗಿದೆ.

೧೯೩೨ನೇ ಇಸವಿಯಲ್ಲಿ ಮಡಿಕೇರಿಯ ಸಾಹಿತ್ಯ ಪರಿಷತ್ತಿನಲ್ಲಿ ಈ ಲೇಖಕನು ಓದಿದ, ಮತ್ತು ೧೯೩೩ನೆಯ ಇಸವಿಯ ಸಾಹಿತ್ಯ ಪರಿಷತ್ ಪತ್ರಿಕೆಯ ೧, ೨ನೆಯ ಸಂಚಿಕೆಗಳಲ್ಲಿ ಪ್ರಕಟವಾದ 'ಕನ್ನಡ ಛಂದಸ್ಸು' ಎಂಬ ವಿಸ್ತೃತವಾದ ಲೇಖನದಲ್ಲಿ ಈ ಕುರಿತು ಹೀಗೆ ಹೇಳಲಾಗಿದೆ:—

"ಅಕ್ಕರಗಳಂತೆ ತ್ರಿಪದಿಯೂ ಮಾತ್ರಾನಿಯಮವಿಲ್ಲದೆ ವಿಶುದ್ಧ ತ್ರಿಮೂರ್ತಿಗಣಘಟಿತವಾದುದಾದರೂ, ಇಲ್ಲಿ ನಾಗವರ್ಮನು ಗಣಾಂತಗಳಲ್ಲಿ ಯತಿಯನ್ನುಲ್ಲಂಘಿಸದೆ ಚೊಕ್ಕವಾಗಿ ಹೇಳಿದ್ದಾನೆ. ಇದಕ್ಕೆ ಅವನ

*ತ್ರಿಮೂರ್ತಿ ಗಣಗಳ ಸ್ವರೂಪವನ್ನು ಈ ಲೇಖನದ ಪರಿಶಿಷ್ಟ ಭಾಗದಲ್ಲಿ ತೋರಿಸಲಾಗಿದೆ.

ಕಾಲದಲ್ಲಿ ಈ ಬಂಧವು ಹಳಸದುದೇ ಕಾರಣ. ಸುಮಾರು ಇತ್ತಿತ್ತಲಾಗಿನ ವರೆಗೂ ಇದರಲ್ಲಿ ಕವಿತಾರಚನೆಯಾಗುತ್ತಿತ್ತು. ಕನ್ನಡ ಜಿಲ್ಲೆಯ ಹೆಂಗುಸರ ತೊಟ್ಟಿಲ ಹಾಡುಗಳು ಈ ಬಂಧದಲ್ಲಿಯೇ ಇಂದಿನ ವರೆಗೂ ಇವೆ. ………ಮುದ್ರಿತವಾದ ಸರ್ವಜ್ಞನ ಪದಗಳು ತ್ರಿಪದಿಯ ಲಕ್ಷಣಕ್ಕೆ ಅಲ್ಲಲ್ಲಿ ಬಹಳ ಬಿಡುತ್ತವೆ. ಅಕ್ಷರಬಂಧಗಳನ್ನು ಅಥವಾ ವಿಶುದ್ಧ ಮಾತ್ರಾಬಂಧಗಳನ್ನು ಹಾಡದೆ ಓದಿದರೂ ಅವುಗಳ ರೂಪವು ನಷ್ಟವಾಗಲಾರದು. ಆದರೆ ಆ ನಿರ್ಬಂಧವಿಲ್ಲದ ಬಂಧಗಳನ್ನು ಹಾಡದೆ ಓದಿದರೆ, ಅವುಗಳಲ್ಲಿ ನಿಧಾನವಾಗಿ ತಪ್ಪು ಸೇರಿಕೊಳ್ಳುವುದು ಸ್ವಾಭಾವಿಕ. ಈ ದೃಷ್ಟಿಯಿಂದ ಸರ್ವಜ್ಞನ ವಚನಗಳನ್ನು ಶೋಧಿಸಿದರೆ ಸರಿಯಾದ ಪಾಠಗಳು ದೊರೆಯದಿರವು…………ತ್ರಿಮೂರ್ತಿ ಗಣದಿಂದಲ್ಲದೆ ಅದರ ಲಕ್ಷಣವನ್ನು ಯಾವ ಇನ್ನೊಂದು ರೀತಿಯಲ್ಲಿಯೂ ಸಮಂಜಸವಾಗಿ ಹೇಳಲು ಸಾಧ್ಯವಲ್ಲ." (ಸಂಪುಟ ೧೮. ಸಂಚಿಕೆ ೨. ಪುಟ ೧೨೮-೨೯).

ಆ ಲೇಖನದಲ್ಲಿ ಅದೇ ಮೊದಲಾಗಿ ನಿರೂಪಿಸಲ್ಪಟ್ಟ 'ಸಾಂಗತ್ಯ'ದ ಲಕ್ಷಣ ಇತ್ಯಾದಿ ವಿಷಯಗಳು ಈಗ ಸರ್ವಸಮ್ಮತವಾಗಿ ವಿದ್ವಾಂಸರಿಂದ ಸ್ವೀಕೃತವಾಗಿರುವುವಾದರೂ,* ತ್ರಿಪದಿಯ ಕುರಿತು ಸಂದೇಹಗಳು ಉಳಿದಿವೆ. ಇದಕ್ಕೆ ಕಾರಣಗಳೂ ಇವೆ. ಉಕ್ತ ಲಕ್ಷಣಕ್ಕೆ ಹೊಂದದ ತ್ರಿಪದಿಗಳು ತುಂಬ ಗೋಚರವಾಗುತ್ತಿರುವಾಗ ಹಾಗಾಗುವುದು ಸ್ವಾಭಾವಿಕ. ಆದುದರಿಂದ ನಾಗವರ್ಮನ ಕಾಲಕ್ಕಿಂತ ಮೊದಲಿನ ತ್ರಿಪದಿಗಳು ತ್ರಿಮೂರ್ತಿಗಣ ಘಟಿತವಾಗಿರಬಹುದಾದರೂ ಅದರಿಂದೀಚೆಯ ತ್ರಿಪದಿಗಳು, ಮುಖ್ಯವಾಗಿ ಸರ್ವಜ್ಞನ ತ್ರಿಪದಿಗಳು, ಭಿನ್ನ ಲಕ್ಷಣಕ್ಕೆ ಒಳಗಾಗಿವೆಯೆಂದು ತಿಳಿದುಕೊಂಡು, ಮಾತ್ರಾನಿಯಮದಿಂದ ಅದರ ಲಕ್ಷಣವನ್ನು ಅನೇಕ ಮಂದಿ ವಿದ್ವಾಂಸರು ಇಂದೂ ಹೇಳುತ್ತಿದ್ದಾರೆ. ಆದರೆ ಮಾತ್ರಾನಿಯಮ ವಿಷಯದಲ್ಲಿಯೂ ಐಕಮತ್ಯವುಂಟಾಗಿಲ್ಲವಾದುದರಿಂದ ಏತದ್ವಿಷಯಕವಾದ ಬೇರೆ ಬೇರೆ ಅಭಿಪ್ರಾಯಗಳನ್ನು ಇಲ್ಲಿ ಕ್ರೋಡೀಕರಿಸಬೇಕಾಗಿದೆ.

*೧೯೨೭ನೆಯ ಇಸವಿಯಲ್ಲಿ ಮುದ್ರಿತವಾದ ಕನ್ನಡ ಕೈಪಿಡಿಯ ಸಾಂಗತ್ಯ ಲಕ್ಷಣವನ್ನೂ, ೧೯೩೬ನೆಯ ಇಸವಿಯ ಎರಡನೆಯ ಮುದ್ರಣದಲ್ಲಿ ಕಾಣುವ ಲಕ್ಷಣವನ್ನೂ ಅವಲೋಕಿಸಿರಿ.

೧. ಹಿಂದೆ ಸೂಚಿಸಿದ ಶ್ರೀ ಉತ್ತಂಗಿಯವರ ಮತದಂತೆ,—ಮೂರು ಪಾದಗಳಲ್ಲಿ ಅನುಕ್ರಮವಾಗಿ ೨೦, ೧೭, ೧೩ ಮಾತ್ರೆಗಳು.

೨. ೧೯೨೭ನೆಯ ಇಸವಿಯ 'ಕನ್ನಡ ಕೈಪಿಡಿ'ಯ ಮತದಂತೆ—೨೦, ೨೦, ೧೫ ಮಾತ್ರೆಗಳು.

೩. ೧೯೩೫ರಲ್ಲಿ ಪ್ರಕಟವಾದ 'ಸರ್ವಜ್ಞ ವಚನಗಳ ಜನಪದಾವೃತ್ತಿ'ಯ ಪ್ರಸ್ತಾವನೆಯ ೧೮, ೧೯ನೆಯ ಪುಟಗಳಲ್ಲಿ ಪ್ರಕಟವಾದ ಶ್ರೀ ಹುಲ್ಕುಂಟೆ ಮಠ ಶಿವಮೂರ್ತಿ ಶಾಸ್ತ್ರಿಗಳ ಮತದಂತೆ—೨೦, ೧೮, ೧೩ ಮಾತ್ರೆಗಳು.

೪. ೧೯೩೬ನೆಯ ಇಸವಿಯ 'ಕನ್ನಡ ಕೈಪಿಡಿ'ಯ ಎರಡನೆಯ ಮುದ್ರಣದ ಮತದಂತೆ—೨೦, ೧೯, ೧೪ ಮಾತ್ರೆಗಳು.

ಇವುಗಳೊಳಗೆ ಒಂದೊಂದನ್ನೇ ಪರೀಕ್ಷಿಸುವ:-

ಮಾತ್ರೆ ಎಂಬುದು ಪ್ರತ್ಯಕ್ಷ ಗಣನೆಗೆ ಒಳಪಟ್ಟ ವಿಷಯವಾಗಿರುವಾಗ ವಿದ್ವಾಂಸರೊಳಗೆ ಈ ಕುರಿತು ಇಷ್ಟು ಮತಭೇದ ಬರಲು ಕಾರಣವೇನು? ಎಲ್ಲಾ ತ್ರಿಪದಿಗಳಲ್ಲಿ ಮಾತ್ರಾಸಂಖ್ಯೆ ಸಮಾನವಾಗಿಲ್ಲವೆಂಬುದಕ್ಕೆ ಬೇರೆ ಯಾವ ಆಧಾರವಾದರೂ ಬೇಕೆ? ಆದರೂ ದೃಷ್ಟಾಂತಕ್ಕಾಗಿ, ಸರ್ವಜ್ಞನ ಕೆಲವು ತ್ರಿಪದಿಗಳನ್ನು ಕೈಗೆ ಬಂದಂತೆ ಹೆಕ್ಕಿ ಮಾತ್ರೆಗಳನ್ನು ಲೆಕ್ಕಿಸೋಣ.

	ಮಾತ್ರೆಗಳು
—⏑ ——⏑⏑⏑ —⏑⏑⏑⏑⏑—⏑ ಮುನ್ನ ಕೈಲಾಸದಲಿ ಪನ್ನಗಧರನಾಳು	೧೯
—⏑⏑ ⏑⏑⏑ —⏑—⏑⏑ —⏑ ಎನ್ನಯ ಪೆಸರು ಪುಷ್ಪದತ್ತನು ಎಂದು	೧೭
—⏑⏑⏑ ⏑⏑⏑ ——⏑ ಮನ್ನಿಪರು ದಯದಿ ಸರ್ವಜ್ಞ	೧೩+೧*
⏑⏑⏑— —⏑— ⏑⏑⏑⏑⏑——⏑ ಒಳಗಣಾ ಜ್ಯೋತಿಯಾ ಬೆಳಗನರಿದಾತಂಗೆ	೨೦
⏑⏑—⏑—⏑ ——⏑——⏑ ಬೆಳಗಾದುದೇಳು ಬೇಹಾರಕೆಂದೆಂಬ	೧೮
⏑⏑⏑⏑—⏑ ——⏑ ಕಳವಳವೇಕೆ ಸರ್ವಜ್ಞ	೧೨+೧*

*ಪಾದಾಂತ ವಿಶ್ರಾಂತಿ ಸ್ಥಾನವಾದುದರಿಂದ ಕೊನೆಯ ಅಕ್ಷರವನ್ನು (ಮಾತ್ರಾಬಂಧದಲ್ಲಿ) ಗುರುವೆಂದೆಣಿಸುವುದು ಯುಕ್ತವಾಗುತ್ತದೆ. ಅದಕ್ಕಾಗಿ +೧ ಎಂದು ತೋರಿಸಲಾಗಿದೆ.

— ∪ ∪ ∪ ∪ — ∪ — ∪ ∪ ∪ ∪ ∪ — ∪
ಯೋಗಿಗೆ ಹೊಲೆಯಿಲ್ಲ ಸಾಗರಕೆ ನೆಲೆಯಿಲ್ಲ ೧೯
— ∪ — ∪ ∪ ∪ ∪ ∪ — ∪ — ∪ ∪
ಯೋಗಿವಟ್ಟಿಗೆಗೆ ವೊಳವಿಲ್ಲ ಜ್ಞಾನಿಗೆ ೧೭
— ∪ — — ∪ — — ∪
ಆಗುಹೋಗಿಲ್ಲ ಸರ್ವಜ್ಞ ೧೪+೧*

[ಇವು ಅನುಕ್ರಮವಾಗಿ, ಶ್ರೀ ಉತ್ತಂಗಿಯವರ ೧೯೨೪ನೆಯ ಇಸವಿಯ ವಿಶೇಷಾವೃತ್ತಿಯ ೨, ೩೧೩, ೩೧೫ನೆಯ ಪದ್ಯಗಳು.]

ಮೇಲೆ ಕ್ರೋಡೀಕರಿಸಿದ ಮತಗಳೊಳಗೆ ಯಾವುದೊಂದಕ್ಕೂ ಈ ಪದ್ಯಗಳಲ್ಲಿ ಪ್ರತಿಯೊಂದು ಒಡಂಬಡುವುದಿಲ್ಲವೆಂಬುದು ಸ್ಪಷ್ಟವಾಗಬಹುದು. ಆದರೆ 'ಕೈಪಿಡಿ'ಯ ಎರಡನೆಯ ಮುದ್ರಣದ (೧೯೩೬) ಮಾತ್ರಾಪ್ರಸ್ತಾರದಲ್ಲಿ ಒಂದು ವಿಶೇಷವಿದೆ. ಅದರಲ್ಲಿ ಹೀಗೆ ಮಾತ್ರಾಸಂಖ್ಯೆಯೊಡನೆ ಗಣವಿಭಾಗ ಮಾಡಿದ್ದಾರೆ:—

೫ ೫ ೫ ೫
ಒಬ್ಬನ । ಲ್ಲದೆ ಜಗಕೆ । ಇಬ್ಬರುಂ । ಟೇ ಪಾತ್ರೆ । ೨೦
೫ ೪ ೪ ೧ ೫
ಒಬ್ಬ ಸ । ರ್ವಜ್ಞ । ಕರ್ತ: ನು ॥ ಜಗಕೆಲ್ಲ । ೧೯
೫ ೪ ೪ ೧
ಒಬ್ಬನೇ । ದೈವ । ಸರ್ವ: ಜ್ಞ ॥ ೧೫

ಇಲ್ಲಿ ಆರನೆಯ ಹತ್ತನೆಯ ಸ್ಥಾನಗಳಲ್ಲಿ ಒಂದೊಂದು ಮಾತ್ರಾಸಂಖ್ಯೆ ಹೆಚ್ಚಿಸಲ್ಪಟ್ಟಿದೆ; ಏಳನೆಯ ಹನ್ನೊಂದನೆಯ ಸ್ಥಾನಗಳಲ್ಲಿಯೂ ಗಣಮಧ್ಯದಲ್ಲಿ ಒಂದೊಂದು ಮಾತ್ರೆ ಹೆಚ್ಚು ಕಾಣಿಸಲಾಗಿದೆ. ಇದೆಲ್ಲಾ ಹಾಡಿನ ಧಾಟಿಯನ್ನು ತೋರಿಸುವುದಕ್ಕಾಗಿ ಮಾಡಿದ್ದು, ಆದರೆ ಪಾದಮಧ್ಯದಲ್ಲಿಯೂ ಹೀಗೆ ಹೆಚ್ಚಿಸಿದ್ದರೂ. ಸರ್ವಜ್ಞ ಎಂಬಲ್ಲಿ ಕೊನೆಯ ಅಕ್ಷರಕ್ಕೆ ಒಂದೇ ಮಾತ್ರೆಯೆಂದು ಲೆಕ್ಕಿಸಲಾಗಿದೆ. ಇದು ಸರಿಯೇ? ಸಾಧಾರ್ಣ ಛಂದಸ್ಸಿನಲ್ಲಿಯೇ ಪಾದಾಂತ ವಿಶ್ರಾಂತಿಯಿರುವಲ್ಲಿ ಕೊನೆಯ ಅಕ್ಷರ ಗುರುವೆನ್ನಿಸುವಾಗ ಹಾಡಿನಲ್ಲಿ ಅದು ಲಘುವಾಗಬಲ್ಲುದೆ? ಮತ್ತು ಆರನೆಯ ಹತ್ತನೆಯ ಸ್ಥಾನಗಳಲ್ಲಿ ಗಣಾಂತದಲ್ಲಿಯೂ, ಏಳನೆಯ ಹನ್ನೊಂದನೆಯ ಸ್ಥಾನಗಳಲ್ಲಿ ಗಣಮಧ್ಯದಲ್ಲಿಯೂ ಮಾತ್ರಾಸಂಖ್ಯೆಯನ್ನು ಏರಿಸಿದುದು ಹಾಡಿನ ಧಾಟಿಯ ದೃಷ್ಟಿಯಿಂದ ಹೊರತು ಅಕ್ಷರಸ್ವರೂಪದಿಂದಲ್ಲವೆಂಬುದು ಸ್ಪಷ್ಟ. ಹೀಗೆ ಪಾದಮಧ್ಯದಲ್ಲಿ ಮಾತ್ರೆಗಳ ಲೆಕ್ಕವನ್ನೇರಿಸುವ ಪದ್ಧತಿ ಯಾವ ಮಾತ್ರಾಬಂಧದಲ್ಲಾದರೂ ಇದೆಯೆ? ಇದ್ದರೂ, ಹಾಡುವಾಗ ಆರನೆಯ ಹತ್ತನೆಯ ಸ್ಥಾನಗಳೂ ಒಂದೊಂದು ತಾಲಖಂಡವಾಗುವುದರಿಂದ ಸಹಜವಾಗಿ ಅವು ಐದು ಮಾತ್ರೆಗಳ ಕಾಲವನ್ನು ಆಕ್ರಮಿಸುವುದಿಲ್ಲವೆ? ಮತ್ತು ಹನ್ನೊಂದನೆಯ ಸ್ಥಾನದ ಪೂರ್ವ ಭಾಗಕ್ಕೂ, ಹಾಡಿಕೆಯ ಪೂರ್ವಾವೃತ್ತಿಯಲ್ಲಿ ಏಳನೆಯ ಸ್ಥಾನದ ಪೂರ್ವ ಭಾಗಕ್ಕೂ ಇದೇ ಅವಸ್ಥೆಯುಂಟಾಗುವುದಿಲ್ಲವೆ? ಹಾಗಾದರೆ ತ್ರಿಪದಿಯ ಮೂರು ಪಾದಗಳಿಗೆ ಅನುಕ್ರಮವಾಗಿ ೨೦, ೧೯, ೧೫ ಮಾತ್ರೆಗಳೆಂದು ಸಮಂಜಸವಾದ ಯಾವ ಗಣನೆಯಿಂದ ಸಿದ್ಧವಾದಂತಾಯಿತು?

ಇಲ್ಲಿ ಇನ್ನೊಂದು ವಿಚಾರ. ಮಾತ್ರೆಗಳು ಎರಡು ವಿಧ; ಒಂದು ಛಂದೋಮಾತ್ರೆ, (ಅಥವಾ ಅಕ್ಷರಮಾತ್ರೆ) ಇನ್ನೊಂದು ತಾಲಮಾತ್ರೆ. ಛಂದಸ್ಸಿನಲ್ಲಿ ಲಘುಗುರುಗಳಿಗೆ ಅನುಕ್ರಮವಾಗಿ ಒಂದು ಎರಡು ಮಾತ್ರೆಗಳು; ವಿಶ್ರಾಂತಿಯುಳ್ಳ ಪಾದಾಂತಲ್ಲಿರುವ ಲಘುವಿಗೂ ಎರಡು ಮಾತ್ರೆ. ಸಂಗೀತದ ತಾಲಮಾತ್ರೆಯಾದರೆ ಹೀಗಲ್ಲ. ಒಂದೇ ಅಕ್ಷರಕ್ಕೆ, ತಾಳಕ್ಕೆ ಬೇಕಾದಷ್ಟು ಸಂದರ್ಭೋಚಿತವಾಗಿ ಎಷ್ಟು ಮಾತ್ರೆಗಳೂ ಬರಬಹುದು; ಅಲ್ಲದೆ, ಸಾಹಿತ್ಯಾಂಶವು ಕೊನೆಗೊಂಡ ಮೇಲೂ ತಾಳದ ಆವರ್ತದ ಕೊನೆಯ ವರೆಗೆ ಮಾತ್ರಾಗಣನೆಯಾಗಬೇಕಾಗುವುದು. ಈ ತಾಲಮಾತ್ರೆಗಳನ್ನು ಯಾವುದೊಂದು ಛಂದೋಬಂಧಕ್ಕೆ ಅನ್ವಯಿಸಿ ಹಾಡಿನ ಗತಿಯನ್ನು ವಿಮರ್ಶಿಸಬಾರದೆಂದಿಲ್ಲ. ಆದರೆ ಒಂದು ಪದ್ಯದ ಕೆಲವು ಭಾಗಗಳಿಗೆ ಅಕ್ಷರ ಮಾತ್ರೆಯನ್ನೂ ಇನ್ನು ಕೆಲವು ಭಾಗಗಳಿಗೆ ತಾಲಮಾತ್ರೆಯನ್ನೂ ಹೊಂದಿಸಿ, ಒಟ್ಟು ಮಾತ್ರೆಗಳನ್ನು ಲೆಕ್ಕಿಸಿದರೆ ಸಹಜವಾದ ಲಕ್ಷಣವು ಕೈಗೂಡದು. ಮೇಲೆ ತೋರಿಸಿದ ತ್ರಿಪದಿಗೆ ಸಾರ್ವತ್ರಿಕವಾಗಿ ತಾಲಮಾತ್ರೆಗಳನ್ನು (ಕೈಪಿಡಿಯ ಧಾಟಿಯಲ್ಲಿ) ಹಾಕಿದರೆ ಅದು ಹೀಗಾಗುವುದು:—

೫ ೫ ೫ ೫
ಒಬ್ಬನ । ಲ್ಲದೆ ಜಗಕೆ । ಇಬ್ಬರುಂ । ಟೇ ಪಾತ್ರೆ । ೨೦
೫ ೫ ೫ ೫
ಒಬ್ಬ ಸ । ರ್ವಜ್ಞ.. । ಕರ್ತ.. । ನು.... ॥ ೨೦

*ಪಾದಾಂತ ವಿಶ್ರಾಂತಿ ಸ್ಥಾನವಾದುದರಿಂದ ಕೊನೆಯ ಅಕ್ಷರವನ್ನು (ಮಾತ್ರಾಬಂಧದಲ್ಲಿ) ಗುರುವೆಂದೆಣಿಸುವುದು ಯುಕ್ತವಾಗುತ್ತದೆ. ಆದಕ್ಕಾಗಿ +೧ ಎಂದು ತೋರಿಸಲಾಗಿದೆ.

೫ ೫ ೫ ೫
(ಒಬ್ಬ ಸ । ರ್ವಜ್ಞ.. । ಕರ್ತ.ನು ।) ಜಗಕೆಲ್ಲ । (೧೫+)೫
೫ ೫ ೫ ೫
ಒಬ್ಬನೇ । ದೈವ.. । ಸರ್ವ.. । ಜ್ಞ.... ॥ ೨೦

[ಹೀಗೆ ಕೈಪಿಡಿಯಲ್ಲಿ ವಿವರಿಸಿದ ಕ್ರಮದಲ್ಲಿ ತ್ರಿಪದಿಯನ್ನು ಹಾಡುವುದಕ್ಕೆ ಒಟ್ಟಿಗೆ ಎಂಬತ್ತು ಮಾತ್ರೆಗಳ ಕಾಲವು ಬೇಕಾಗುತ್ತದೆಂಬುದು ವಿದ್ವಾಂಸರು ತಮ್ಮೊಳಗೇ ಸಾವಧಾನವಾಗಿ ಹಾಡಿಕೊಂಡು ಪರೀಕ್ಷಿಸಿದರೆ ಮನದಟ್ಟುವುದು.]

ಆದರೆ ಇದನ್ನು ತ್ರಿಪದಿಯ ಛಂದೋಲಕ್ಷಣವೆಂದು ತಿಳಿಯುವುದು ಸಮಂಜಸವೇ? ಸಮಂಜಸವೆಂದು ಸಾಧಿಸಿದರೂ, ಆಗ ತ್ರಿಪದಿ ಬರಿಯ ಒಂದು ತಾಲಬಂಧವೆಂದಾಗುವುದು ಹೊರತು ಮಾತ್ರಾಬಂಧಕ್ಕೊಳಪಟ್ಟಿದೆಯೆಂದಾಗುವುದೆ? ಛಂದೋಮಾತ್ರೆಗಳಿಗೂ ತಾಲಮಾತ್ರೆಗಳಿಗೂ ಸಾಹಿತ್ಯಾಂತದ ವರೆಗೆ ಸರಿಯಾದ ಮೇಳವಿದ್ದಲ್ಲಿ ಮಾತ್ರ ಅದೊಂದು ಮಾತ್ರಾಬಂಧವೆಂದಾಗುವುದು; ಅಥವಾ ಯಾವುದೊಂದು ಬಂಧದ ಎಲ್ಲಾ ಪದ್ಯಗಳಲ್ಲಿ ಸಮಾನಸಂಖ್ಯೆಯ ಛಂದೋಮಾತ್ರೆಗಳು ಇರುವ ಪಕ್ಷದಲ್ಲಿ ಮಾತ್ರ ಅದನ್ನು ಮಾತ್ರಾಬಂಧವೆಂದು ಕರೆಯುವುದು (ಉದಾ- ಭಾಮಿನಿ, ವಾರ್ಧಕ ಇತ್ಯಾದಿ ಷಟ್ಪದಿಗಳು; ಆರ್ಯೆ, ಗೀತಿಕೆ, ಕಂದ ಇತ್ಯಾದಿ ಸ್ಕಂಧ ಜಾತಿಗಳು.) ಯುಕ್ತವಾಗುವುದು. ತ್ರಿಪದಿಗಳಲ್ಲಿ, ಸರ್ವಜ್ಞನ ತ್ರಿಪದಿಗಳಲ್ಲಿಯೂ, ಹಾಗೆ ಸಮಾನ ಮಾತ್ರೆಗಳಿಲ್ಲವೆಂಬುದು ಯಾವುವಾದರೂ ನಾಲ್ಕಾರು ಪದ್ಯಗಳನ್ನು ತೆಗೆದುಕೊಂಡು ಪರೀಕ್ಷಿಸಿದೊಡನೆ ಗೊತ್ತಾಗುವುದು. ಇದಕ್ಕೆ ಹಿಂದೆ ಕೊಟ್ಟ ಉದಾಹರಣಗಳೇ ಸಾಕಾಗಬಹುದು.

ತ್ರಿಪದಿಯ ಲಕ್ಷಣವನ್ನು ಮಾತ್ರಾನಿಯಮದಿಂದ ಹೇಳುವ ಪ್ರಯತ್ನದಲ್ಲಿ ಯಾರಿಗೂ ಸಫಲತೆ ದೊರಕಲಿಲ್ಲವೆಂಬುದು ಈಗ ಸ್ಪಷ್ಟವಾಗದಿರದು. ನಾಗವರ್ಮನು ಹೇಳಿದ ತ್ರಿಪದಿಯ ಲಕ್ಷಣಕ್ಕೆ ಸರ್ವಜ್ಞಾದಿಗಳ ಎಲ್ಲಾ ತ್ರಿಪದಿಗಳು ಸಂಪೂರ್ಣವಾಗಿ ಕೂಡಿ ಬರುವುದಿಲ್ಲ. ಹಾಗಾದರೆ ಸರ್ವಜ್ಞಾದಿಗಳ ತ್ರಿಪದಿಗೆ ನಿಶ್ಚಿತವಾದ ಛಂದೋಲಕ್ಷಣವೇ ಇಲ್ಲವೆ? ಅಥವಾ ಅದು ಬರಿಯ ತಾಲಬಂಧವೆ?

ನಾಗವರ್ಮನು ತ್ರಿಪದಿಯ ಲಕ್ಷಣವನ್ನು, ಕೈಪಿಡಿಯ ಎರಡನೆಯ ಮುದ್ರಣದಲ್ಲಿ ಅಂಶಗಣವೆಂದು ಸುಂದರವಾಗಿ ಹೆಸರಿಸಿದ ತ್ರಿಮೂರ್ತಿಗಣಗಳಿಂದಲೇ ಹೇಳಿದ್ದಾನೆ. ಪುರಾತನ ತ್ರಿಪದಿಗಳು ಆ ಲಕ್ಷಣಕ್ಕೆ ಒಳಪಡುತ್ತವೆಂದು ವಿದ್ವಾಂಸರು ಒಪ್ಪಿದ್ದಾರೆ. (ಉದಾ- ಕನ್ನಡ ಕೈಪಿಡಿಯ ಎರಡನೆಯ ಮುದ್ರಣ ಪುಟ ೧೪೭.) ಹೀಗಿರುವಾಗ, ಆಧುನಿಕ ತ್ರಿಪದಿ ಬರಿಯ ಒಂದು ತಾಲಬಂಧವೆಂದು ಹೇಳುವ ಮೊದಲು, ಆ ಗಣಗಳು ಇದಕ್ಕೂ ಹೊಂದುತ್ತವೆಯೋ ಇಲ್ಲವೋ ಎಂಬುದನ್ನು ಚೆನ್ನಾಗಿ ಪರೀಕ್ಷಿಸುವುದು ಯುಕ್ತವೂ ಲಾಭಕರವೂ ಆಗಿದೆ. ನಾಗವರ್ಮನು ತ್ರಿಪದಿಯಲ್ಲಿ ಮೂರು ಭೇದಗಳನ್ನು ಕಾಣಿಸಿದ್ದಾನೆಂಬುದು ನಾವು ಚೆನ್ನಾಗಿ ಗಮನಿಸತಕ್ಕ ವಿಷಯವಾಗಿದೆ. ಇವುಗಳೊಳಗೆ ಮೊದಲನೆಯದನ್ನು ನಾವು ಮೂಲ ತ್ರಿಪದಿಯೆಂದು ಕರೆಯೋಣ. (ಅದರ ಲಕ್ಷಣ—೬—೧೦ನೆಯ ಸ್ಥಾನಗಳಲ್ಲಿ ಬ್ರಹ್ಮಗಣ; ಬೇರೆಲ್ಲಾ ವಿಷ್ಣುಗಣ; ಒಟ್ಟು ಹನ್ನೊಂದು ಗಣಗಳು) ಅದು ಹೀಗಿದೆ:—

ಬಿಸರುಹ ಹೋ । ಧ್ಭವ ಗಣಂ । ರಸದಶ । ಸ್ಥಾನದೊಳ್ ।
ಬಿಸರುಹ । ನೇತ್ರ । ಗಣಮೆ ಬ । ರ್ಕುಳಿದುವು ।
ಬಿಸರುಹ । ನೇತ್ರೇ । ತ್ರಿಪದಿಗೆ ॥

ಈ 'ಸಾಹಿತ್ಯ'ವನ್ನು ತ್ರಿಮೂರ್ತಿಗಣಗಳಲ್ಲಿ ಪ್ರಸ್ತಾರಿಸಿದರೆ ಅದು ಹೀಗಾಗುವುದು:—

ಸ್ಮರಪಿತಂ । ಸ್ಮರಪಿತಂ । ಸ್ಮರಪಿತಂ । ಮಾಧವಂ ।
ಮುರರಿಪು । ಧಾತೃ । ಸ್ಮರಪಿತಂ । ಮುರರಿಪು ।
ಮುರರಿಪು । ಬ್ರಹ್ಮಂ । ಮುರರಿಪು ॥

ತ್ರಿಪದಿ ಜಾತಿಯಲ್ಲಿ ಎರಡನೆಯದಾದ 'ಚಿತ್ರ'ವು ಹೀಗಿದೆ:—

(ಸಾಹಿತ್ಯ)

ಭುಜಗಪಕ್ಷ । ಗತಿಶಿಖಿ । ಪ್ರಜಪದ । ಗಣದೊಳ ।
ಗಜರಸ । ದಶದೊಳ್ । ಪೆರವೆಡೆ । ಯೊಳಗಧೋ ।
ಕ್ಷಜಗಣ । ಮಾದೊ । ಡದು ಚಿತ್ರಂ ॥

(ಪ್ರಸ್ತಾರ)

ಭುಜಗಧಾರಿ । ಸ್ಮರಪಿತಂ । ಮುರರಿಪು । ಮುರರಿಪು ।
ಮುರರಿಪು । ದ್ರುಹಿಣಂ । ಮುರರಿಪು । ಸ್ಮರಪಿತಂ ।
ಮುರರಿಪು । ಧಾತೃ । ಜಲಜಾಕ್ಷಂ ॥

ಮೂರನೆಯದಾದ 'ಚಿತ್ರಲತಿಕೆ' ಇಂತಿದೆ:—

(ಸಾಹಿತ್ಯ)

ತುದಿಯೊಳಗೀ । ಶ್ವರಗಣ । ಮೊದವಿರೆ । ಪದನೆಲ್ಲಂ ।
ಮದಗಜ । ಗಮನೆ । ಪೆರಗಣ । ಚಿತ್ರದಂ ।
ದದೊಳಿರ್ದೊ । ಡದೆ ಚಿ । ತ್ರಲತೆಯಕ್ಕುಂ ॥

(ಪ್ರಸ್ತಾರ)

ಪುರಮಥನಂ । ಮುರರಿಪು । ಮುರರಿಪು । ಜಲಜಾಕ್ಷಂ ।
ಮುರರಿಪು । ಸುರಪ । ಮುರರಿಪು । ಮಾಧವಂ ।
ನರಕಾರಿ । ದ್ರುಹಿಣಂ । ವೃಷಭ ಲಕ್ಷ್ಮಂ ॥

ನಾಗವರ್ಮನು ತೋರಿಸಿದ ಈ ಮೂರರೊಳಗೆ ಮೊದಲನೆಯದಾದ 'ಮೂಲ ತ್ರಿಪದಿ'ಯಲ್ಲಿ ರುದ್ರಗಣಗಳಿಲ್ಲ. ಎರಡನೆಯದಾದ 'ಚಿತ್ರ' ತ್ರಿಪದಿಯಲ್ಲಿ ಮೊದಲನೆಯದೊಂದು ರುದ್ರಗಣ; ಬೇರೆಲ್ಲ ಮೂಲ ತ್ರಿಪದಿಯಂತೆಯೇ. ಮೂರನೆಯ ತ್ರಿಪದಿಯಾದ 'ಚಿತ್ರಲತಿಕೆ'ಯಲ್ಲಿ ಮೊದಲನೆಯದೊಂದು ಮತ್ತು ಕೊನೆಯದೊಂದು ಹೀಗೆ ಎರಡು ಮಾತ್ರ ರುದ್ರಗಣ; ಬೇರೆಲ್ಲ ಮೂಲ ತ್ರಿಪದಿಯಂತೆಯೇ. ರುದ್ರಗಣದ ಈಯೊಂದು ಅಲ್ಪ ಭೇದವಲ್ಲದೆ ಮೂಲ ತ್ರಿಪದಿಗೂ ಉಳಿದೆರಡು ಪ್ರಭೇದಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಈ ದೃಷ್ಟಿಯಿಂದ ನೋಡಿದರೆ ತ್ರಿಪದಿಸಾಮಾನ್ಯದ ಛಂದೋಲಕ್ಷಣದ ಜೀವಾಳವು ಯಾವುದೆಂದು ತಿಳಿಯುವುದು. 'ಬಿಸರುಹೋದ್ಭವಗಣಂ ರಸದಶಸ್ಥಾನದೊಳ್' ಎಂದು ಆ ಜೀವಾಳವನ್ನೇ ನಾಗವರ್ಮನು ಮೊದಲಾಗಿ ಎತ್ತಿ ತೋರಿಸಿದ್ದಾನೆ. ಉಳಿದುವು ಹೆಚ್ಚಾಗಿ ವಿಷ್ಣುಗಣಗಳು; ಅಲ್ಲಲ್ಲಿ ವಿಷ್ಣುಗಣಸ್ಥಾನಗಳಲ್ಲಿ–೬, ೧೦, ಎಂಬ ಬ್ರಹ್ಮಗಣ ಸ್ಥಾನದಲ್ಲಲ್ಲ–ರುದ್ರಗಣಗಳು ಕಾಣಿಸಿಕೊಳ್ಳುವುದೂ ಉಂಟು. ವಿಶಿಷ್ಟವಾದ ವಿಷ್ಣು ಸ್ಥಾನಗಳಲ್ಲಿ ರುದ್ರಗಣವು ಕಾಣಿಸಿಕೊಂಡಾಗ ಚಿತ್ರವೆಂದೋ ಚಿತ್ರಲತಿಕೆಯೆಂದೋ ಬೇರೆಬೇರೆ ಹೆಸರುಗಳನ್ನು ಕಲ್ಪಿಸಬಹುದಾದರೂ ಅವೆಲ್ಲ ತ್ರಿಪದಿಗಳೇ ಎಂಬುದನ್ನು ಮರೆಯಬಾರದು. ಮಾತ್ರವಲ್ಲ, ನಾಗವರ್ಮನಾದರೂ ರುದ್ರಗಣಜನ್ಯವಾದ ಈಯೆಲ್ಲಾ 'ತ್ರಿಪದಿವೈಚಿತ್ರ್ಯ'ಗಳಿಗೆ ಹೆಸರನ್ನು ಹೇಳಿಲ್ಲ. ಅವನಿಗಿಂತ ಮೊದಲಿನ ಕವಿಗಳು ಬರೆದ ತ್ರಿಪದಿಗಳಲ್ಲಿಯೂ, ಅವನು ಹೇಳದ ಎಡೆಗಳಲ್ಲಿ ರುದ್ರಗಣ ಬಂದುದುಂಟು. ಉದಾಹರಣವಾಗಿ, ಏಳನೆಯ ಶತಮಾನದ ಕೊನೆಯ ಬಾದಾಮಿಯ ಶಾಸನದಲ್ಲಿ (ಇಂಡಿಯನ್ ಎಂಟಿಕ್ವರಿ X 61) 'ಕಲಿಯುಗ ವಿಪರೀತನ್' ಎಂಬ ಬಿರುದುಳ್ಳ ಕಪ್ಪೆ ಅರಭಟ್ಟನೆಂಬವನ ಸ್ತುತಿರೂಪವಾದ ತ್ರಿಪದಿಗಳೊಳಗೆ ಒಂದು ಹೀಗಿದೆ:—

(ಸಾಹಿತ್ಯ)

ಒಳ್ಳಿತ್ತ । ಕೆಯ್ವೋರಾರ್ । ಪೊಲ್ಲದು । ಮದರಂತೆ ।
ಬಲ್ಲಿತ್ತು । ಕಲಿಗೆ । ವಿಪರೀತ ಪು ! ರಾಕೃತ ।
ನಿಲ್ಲಿ ಸಂ । ಧಿಕ್ಕು । ಮದು ಬಂದು ॥

(ಪ್ರಸ್ತಾರ)

ಕಂಸಾರಿ । ಮಾಧವಂ । ಶ್ರೀಪತಿ । ನರಕಾರಿ ।
ಕಂಸಾರಿ । ಸುರಪ । ತ್ರಿಜಗದ್ಗುರು । ಶ್ರೀಪತಿ ।
ಮಾಧವಂ । ಧಾತ್ರ । ನರಕಾರಿ ॥

ಇಲ್ಲಿ ಏಳನೆಯ ಗಣಸ್ಥಾನದಲ್ಲಿ 'ತ್ರಿಜಗದ್ಗುರು' ಎಂಬ ರುದ್ರಗಣವಿದೆ; ಬೇರೆಲ್ಲಾ ಬಗೆಯಲ್ಲಿ ಮೂಲ ತ್ರಿಪದಿಯಂತೆಯೇ ಇದೆ. ಪುರಾತನ ತ್ರಿಪದಿಗಳಲ್ಲಿ ವಿಷ್ಣುಸ್ಥಾನದಲ್ಲಿ ಬ್ರಹ್ಮಗಣ ಬಂದುದೂ ಉಂಟು. ಉದಾ—ಪಂಪನ ಆದಿಪುರಾಣದ ೬ನೆಯ ಆಶ್ವಾಸದ ೧೦೦ನೆಯ ಪದ್ಯ ಹೀಗಿದೆ:—

ಸುರಯಿಯೊಳ್ । ಗಿಳಿ ಮುಗು । ಳ್ವರಗಿಳಿ । ಬಿರಯಿಗೆ ।
ಮೊರೆವಂತೆ । ಮೊರೆವ । ಮರಿದುಂಬಿ । ತಳಿರೊಳ್ ।
ಪರಭೃತಂ । ಮುಗುಳ್ವ । ಪರಭೃತಂ ॥

ಇಲ್ಲಿ ಎಂಟನೆಯ ಸ್ಥಾನದಲ್ಲಿ ವಿಷ್ಣುಗಣದ ಬದಲಾಗಿ 'ತಳಿರೊಳ್' (ದ್ರುಹಿಣಂ) ಎಂಬ ಬ್ರಹ್ಮಗಣವಿದೆ. ಮಾತ್ರಾಬಂಧಕ್ಕಿಂತ ತ್ರಿಮೂರ್ತಿಗಣ ಬಂಧವು ಸಹಜವಾಗಿ ಶಿಥಿಲವಾದುದರಿಂದ ಒಮ್ಮೊಮ್ಮೆ ಹೀಗಾಗುವುದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಕವಿಗಳು ಧಾಟಿಯನ್ನೇ ಹಿಡಿದು ಬರೆಯುವರಲ್ಲದೆ, ಗಣಗಳನ್ನು ಲೆಕ್ಕಿಸಿ ಬರೆಯಲಾರರು. ಸಾಂಗತ್ಯದಲ್ಲಿ ವಿಷ್ಣುಸ್ಥಾನದಲ್ಲಿ ಬ್ರಹ್ಮಗಣ ಬರುವುದು ಸಾಧಾರಣವಾಗಿದೆಯೆಂಬುದನ್ನಿಲ್ಲಿ ನೆನಪು ಮಾಡಿಕೊಳ್ಳಬೇಕು.

ನಾಗವರ್ಮನು ತೋರಿಸಿದ ಮೂಲತ್ರಿಪದಿಯ ಮತ್ತು ಅದರ ಪ್ರಭೇದಗಳಾದ ಚಿತ್ರ ಚಿತ್ರಲತಿಕೆಗಳ ಸ್ವರೂಪವನ್ನೂ, ಅವನಿಗಿಂತ ಮೊದಲಿನ ಕವಿಗಳ ತ್ರಿಪದಿಗಳ ವಿಶೇಷಗಳನ್ನೂ ಪರಾಮರ್ಶಿಸಿದರೆ ಅಂದಿನ ತ್ರಿಪದಿಸಾಮಾನ್ಯದ ಲಕ್ಷಣವು ಹೀಗಿತ್ತೆನ್ನಬಹುದು:–

"ಮೂರು ಪಾದಗಳಲ್ಲಿ ಒಟ್ಟು (೪+೪+೩) ಹನ್ನೊಂದು ಗಣಗಳು. ಇವುಗಳೊಳಗೆ ೬, ೧೦ನೆಯ ಗಣಗಳು ನಿಯತವಾಗಿ ಬ್ರಹ್ಮಗಣಗಳು; ಉಳಿದೆಲ್ಲವು ವಿಷ್ಣುಗಣಗಳು. ಆದರೆ ಕೆಲವು ವೇಳೆ ವಿಷ್ಣುಗಣಸ್ಥಾನಗಳಲ್ಲಿ ರುದ್ರಗಣ ಬರಲೂ ಬಹುದು. (ಅಪೂರ್ವವಾಗಿ ವಿಷ್ಣುಗಣಸ್ಥಾನದಲ್ಲಿ ಬ್ರಹ್ಮಗಣ ಕಾಣಿಸಿಕೊಳ್ಳುವುದೂ ಉಂಟು)."

ಹೀಗೆ ನೇರ್ಪಟ್ಟ ತ್ರಿಪದಿಯ ಲಕ್ಷಣಕ್ಕೆ ಸರ್ವಜ್ಞನ ತ್ರಿಪದಿಯೂ ಒಡಂಬಡುವುದೆಂದಾದರೆ, ಅದಕ್ಕೆ ಬೇರೊಂದು ಲಕ್ಷಣವನ್ನು ನಿರ್ಮಿಸುವ ಆವಶ್ಯಕತೆಯುಂಟೇ?

ಹಿಂದೆ ಉದಾಹರಿಸಿದ ಸರ್ವಜ್ಞನ ತ್ರಿಪದಿಯನ್ನೇ ತ್ರಿಮೂರ್ತಿಗಣಗಳ ಒರೆಯಲ್ಲಿ ಪರೀಕ್ಷಿಸುವ:—

(ಸಾಹಿತ್ಯ)

ಒಬ್ಬನ । ಲ್ಲದೆ ಜಗಕೆ । ಇಬ್ಬರುಂ । ಟೇ ಮತ್ತೆ ।
ಒಬ್ಬ ಸ । ರ್ವಜ್ಞ । ಕರ್ತನು । ಜಗಕೆಲ್ಲ ।
ಒಬ್ಬನೇ । ದೈವ । ಸರ್ವಜ್ಞ ॥

(ಪ್ರಸ್ತಾರ)

ಮಾಧವಂ । ಮದನರಿಪು । ಮಾಧವಂ । ಕಂಸಾರಿ ।
ಮಾಧವಂ । ಧಾತೃ । ಶ್ರೀಪತಿ । ನರಕಾರಿ ।
ಮಾಧವಂ । ಧಾತೃ । ಕಂಸಾರಿ ॥

ಇಲ್ಲಿ ಎರಡನೆಯದು ಮಾತ್ರ ರುದ್ರಗಣ, ಬೇರೆಲ್ಲಾ ವಿಷಯಗಳಲ್ಲಿ ಇದು ಮೂಲ ತ್ರಿಪದಿಯಂತೆಯೇ ಇದೆ.

ಇನ್ನೊಂದು ಇದು:—

(ಸಾಹಿತ್ಯ)

ಯೋಗಿಗೆ । ಹೊಲೆಯಿಲ್ಲ । ಸಾಗರಕೆ । ನೆಲೆಯಿಲ್ಲ ।
ಯೋಗವ । ಟ್ಟಿಗೆಗೆ । ಮೊಳವಿಲ್ಲ । ಜ್ಞಾನಿಗೆ ।
ಆಗು ಹೋ । ಗಿಲ್ಲ । ಸರ್ವಜ್ಞ ॥

ಇದರಲ್ಲಿ 'ಸಾಗರಕೆ' (ಕಾಮರಿಪು) ಎಂಬುದೊಂದು ಮಾತ್ರ ರುದ್ರಗಣ. ಬೇರೆಲ್ಲಾ ಮೂಲ ತ್ರಿಪದಿಯ ಲಕ್ಷಣಕ್ಕೆ ಸರಿಯಾಗಿದೆ.

ಇದು ಮತ್ತೊಂದು:—

ಒಳಗಣಾ । ಜ್ಯೋತಿಯಾ । ಬೆಳಗನರಿ । ದಾತಂಗೆ ।
ಬೆಳಗಾದು । ದೇಳು । ಬೇಹಾರ । ಕೆಂದೆಂಬ ।
ಕಳವಳ । ವೇಕೆ । ಸರ್ವಜ್ಞ ॥

ಇದರಲ್ಲಿ 'ಬೆಳಗನರಿ' (ಮದನರಿಪು) ಎಂಬುದೊಂದು ರುದ್ರಗಣ; ಬೇರೆಲ್ಲ ಮೂಲತ್ರಿಪದಿಗೆ ಸರಿ.

ಇದು ಮಗುಳೊಂದು:—

ಇಂದು ನಾ । ಳೆಗೆ ಎಂದು । ತಂದು ಕೂ । ಡಿಡಬೇಡ ।
ಬಂದುದ । ನುಂಡು । ಸುಖಿಯಾಗಿ । ಬೇನೆಯು ।
ಬಂದಾಗ । ನರಳು । ಸರ್ವಜ್ಞ ॥

(ಶ್ರೀ ಉತ್ತಂಗಿಯವರ ಪ್ರತಿ—೩೮೨)

ಇದರಲ್ಲಿ ರುದ್ರಗಣವಿಲ್ಲ; ಶುದ್ಧ ಮೂಲತ್ರಿಪದಿಯಂತಿದೆ.

ಹೀಗೆ ಸರ್ವಜ್ಞನ ಯಾವ ಪದ್ಯವನ್ನು ತೆಗೆದುಕೊಂಡರೂ, ಮೇಲೆ ವಿವರಿಸಿದ ತ್ರಿಪದಿಸಾಮಾನ್ಯದ ಲಕ್ಷಣಕ್ಕೆ ಸರಿಹೋಗುವುದೆಂಬುದು ಪರೀಕ್ಷೆ ಮಾಡಿದಲ್ಲಿ ನಿಸ್ಸಂದಿಗ್ಧವಾಗಿ ತಿಳಿದುಬರುವುದು.

ಆದರೆ ೧೯೩೫ರಲ್ಲಿ ಶ್ರೀ ಉತ್ತಂಗಿಯವರು ಪ್ರಸಿದ್ಧಿಸಿದ ಸರ್ವಜ್ಞ ವಚನಗಳ ಜನಪದಾವೃತ್ತಿಯ ಪ್ರಸ್ತಾವನೆಯಲ್ಲಿ ಶ್ರೀ. ಹುಲ್ಕುಂಟೆ ಮಠ ಶಿವಮೂರ್ತಿ ಶಾಸ್ತ್ರಿಗಳು ಹೀಗೆ ಹೇಳುತ್ತಾರೆ:—" . . . . ತ್ರಿಪದಿಯಲ್ಲಿ ಆರು ಮತ್ತು ಹತ್ತನೆಯ ಗಣ ಬ್ರಹ್ಮಗಣವಾಗಿರಬೇಕೆಂದು ನಾಗವರ್ಮನ ಮತ. ಆದರೆ ಸರ್ವಜ್ಞ, ಷಡಕ್ಷರದೇವ, ಸೋಮರಾಜ ಕವಿಗಳು ಹೇಳುವ ತ್ರಿಪದಿಗಳಲ್ಲಿ ರಸದಶಸ್ಥಾನದಲ್ಲಿ ಪ್ರಾಯೇಣ ನಾಗವರ್ಮನು ಹೇಳಿದ ಲಕ್ಷಣವಿಲ್ಲ. ಕವಿಚಕ್ರವರ್ತಿ ರನ್ನನು ಗದಾಯುದ್ಧದಲ್ಲಿ ಹೇಳಿರುವ 'ತಿವಳಿ'ಯು ಇವೆಲ್ಲಕ್ಕೂ ಭಿನ್ನವಾಗಿದೆ.

ಪದ್ಯರಚನೆಯೊಳ್ ಕಾಳಿದಾಸನುಂ ॥
ಗದ್ಯರಚನೆಯೊಳ್ ಬಾಣನುಂ ಮುಂಕವಿಗಳಿರ್ವರುಂ ॥
ನೆಗಳ್ದರದರಿಂ ಸತ್ಕವಿಗಳಿರ್ವರೆಮಗಭಿವಂದ್ಯರ್ ॥

ಕವಿರತ್ನನ ಈ ತ್ರಿಪದಿಯ ಲಕ್ಷಣವು ಯಾವ ಛಂದೋಗ್ರಂಥದಲ್ಲಿದೆಯೋ ತಿಳಿದು ಬಂದಿಲ್ಲ." (ಪುಟ ೧೯).

ಪ್ರಸ್ತಾವನೆಯಲ್ಲಿ ಹೀಗಿದ್ದರೂ, ಮುಂದೆ ಅದೇ ಪುಸ್ತಕದಲ್ಲಿ ಮುದ್ರಿತವಾದ ಸರ್ವಜ್ಞನ ಎಲ್ಲಾ ತ್ರಿಪದಿಗಳಲ್ಲೆಂಬಂತೆ, ರಸದಶ ಸ್ಥಾನಗಳಲ್ಲಿ ಬ್ರಹ್ಮಗಣವಿದೆಯೆಂಬುದು ಪರೀಕ್ಷೆಮಾಡಿದರೆ ತಿಳಿಯುವ ವಿಷಯವಾಗಿದೆ. ಅಲ್ಲದೆ, ೧೯೨೪ನೆಯ ಇಸವಿಯ ಪುಸ್ತಕದ ಪ್ರಸ್ತಾವನೆಯಲ್ಲಿ ಶ್ರೀ ಉತ್ತಂಗಿಯವರು ".....ಮೂರು ಮೂರು, ನಾಲ್ಕು ನಾಲ್ಕು, ಮಾತ್ರೆಗಳು ಮಾತ್ರವೇ ಮೇಲೆ ಹೇಳಿದ ಆರನೆಯ ಹತ್ತನೆಯ ಸ್ಥಾನಗಳಲ್ಲಿ ಬರಬಹುದು." (ಪುಟ ೪೯.) ಎಂದೂ, "ಷಡಕ್ಷರಿಯ ರಾಜಶೇಖರ ವಿಲಾಸದಲ್ಲಿಯೂ ಸರ್ವಜ್ಞನ ತ್ರಿಪದಿಯಲ್ಲಿಯೂ ರಸದಶ ಸ್ಥಾನಗಳಲ್ಲಿ ಮೂರು ಮಾತ್ರೆಗಳು ಬರುವುದೇ ವಿಶೇಷ". (ಪುಟ. ೪೯.) ಎಂದೂ ಹೇಳಿದ್ದಾರೆ. ಎಂದರೆ ಶ್ರೀ ಉತ್ತಂಗಿಯವರ ಅಭಿಪ್ರಾಯದಂತೆ ಸರ್ವಜ್ಞನ ತ್ರಿಪದಿಯ ರಸದಶ ಸ್ಥಾನಗಳಲ್ಲಿ ಬ್ರಹ್ಮಗಣವೇ ಇರುತ್ತದೆ; ಶ್ರೀ ಶಿವಮೂರ್ತಿ ಶಾಸ್ತ್ರಿಗಳ

ಮತದಂತೆ, ಪ್ರಾಯೇಣ ಇರುವುದಿಲ್ಲ. ಇವುಗಳೊಳಗೆ ಯಾವುದು ಯಥಾರ್ಥವೆಂಬುದನ್ನು ವಿದ್ವಾಂಸರೇ ಪರೀಕ್ಷಿಸಿ ನೋಡಿಕೊಳ್ಳಲಿ. ನಾನು ನಿರೀಕ್ಷಿಸಿದ ಮಟ್ಟಿಗೆ ಪಾಠದೋಷಗಳಿರಬಹುದಾದ ಎಲ್ಲಿಯೋ ಒಂದೆರಡು ಕಡೆಗಳಲ್ಲಿ ಹೊರತು, ಸರ್ವಜ್ಞನ ತ್ರಿಪದಿಗಳಲ್ಲೆಲ್ಲ ರಸ ದಶಸ್ಥಾನಗಳಲ್ಲಿ ಶುದ್ಧವಾದ ಬ್ರಹ್ಮಗಣಗಳೇ ಇವೆ. ಷಡಕ್ಷರಿಯ ರಾಜಶೇಖರವಿಳಾಸದ ತ್ರಿಪದಿಗಳಂತೂ ನಾಗವರ್ಮನ ಮೂಲತ್ರಿಪದಿಯ ಲಕ್ಷಣಕ್ಕೆ ಸಂಪೂರ್ಣವಾಗಿ ಕೂಡಿಬರುತ್ತವೆ; ಒಂದೇ ಒಂದು ತ್ರಿಪದಿಯಲ್ಲಿ ಮಾತ್ರ ವಿಷ್ಣುಗಣಸ್ಥಾನದಲ್ಲಿ ರುದ್ರಗಣ ಬಂದಂತಿದೆ. ಇದು ಸಹ ಪಾಠ ದೋಷವಾಗಿರಲೂ ಬಹುದು. ಆ ಪದ್ಯ ಹೀಗಿದೆ:—

ಮನದಿಚ್ಛೆ । ಯಿಂ ಮುಂಚಿ । ತನುವಿತ್ತು ನಲ್ಲರೊಂ ।
ದನುವರಿ । ದೊಂದಿ । ಸವದೋರ್ಪ । ಸೂಳೆಯುರ ।
ಮನೆಯ ಮುಂ । ದಿರದೆ । ಸುರಥೇನು ॥

ಇಲ್ಲಿ 'ಸೂಳೆಯುರ' (ಕಾಮರಿಪು) ಎಂಬುದೊಂದು ರುದ್ರಗಣ. ಇದು 'ಸೂಳೆಯು' ಇಷ್ಟೇ ಇದ್ದು ವಿಷ್ಣುಗಣವಾಗಿದ್ದಿರಲೂ ಬಹುದು. ಉಳಿದುವೆಲ್ಲ ಮೂಲ ತ್ರಿಪದಿಗೆ ಸಮನಾಗಿವೆ. ಒಂದೆರಡನ್ನು ಇಲ್ಲಿ ನೋಡಿರಿ:—

ಮದನಂಗೆ । ಜಯಮುಕ್ಕೆ । ಮಧುಗೆ ಸಂ । ಪದಮುಕ್ಕೆ ।
ಬಿದುಗದಿ । ರಿಂತು । ನೆಲಸಿರ್ಕೆ । ರತಿಗೆ ಸಂ ।
ಮದವೆಂದು । ತೊಲಗ । ದಿರುತಿರ್ಕೆ ।
ಚದುರಂಗ । ನೆತ್ತ ವಿಂ । ಪೊದವಿದ । ಪಾಡು ಸ ।
ಕ್ಕದದೋದು । ಹಾಸ್ಯ । ಮಿನಿಗಬ್ಬ । ವೊಳ್ಪದಿ ।
ಲ್ಲದ ಸೂಳೆ । ವನೆಯೆ । ಬರಿವನೆ ॥

ಹೀಗೆ ಎಲ್ಲವುಗಳಲ್ಲಿಯೂ ರಸದಶ ಸ್ಥಾನಗಳಲ್ಲಿ ಬ್ರಹ್ಮಗಣಗಳೇ ಇವೆ.

ಇನ್ನು ಸೋಮರಾಜನ ತ್ರಿಪದಿಗಳನ್ನು ನೋಡೋಣ. ಮೇಲೆ ಉದಾಹರಿಸಿದ 'ಮದನಂಗೆ ಜಯಮುಕ್ಕೆ . . . ' ಎಂಬ ಪದ್ಯವೂ, 'ಚದುರಂಗನೆತ್ತ . . . ' ಎಂಬ ಪದ್ಯವೂ ಸೋಮರಾಜನ 'ಉದ್ಭಟ ಕಾವ್ಯ'ದಲ್ಲಿಯೂ ಗೋಚರವಾಗುತ್ತವೆ! ಸೋಮರಾಜನು ಪ್ರಾಚೀನನಾದುದರಿಂದ ಷಡಕ್ಷರಿ ಅವನಿಂದ ಎತ್ತಿಕೊಂಡನೋ, ಅಥವಾ ಆಧುನಿಕ ಲಿಪಿಕಾರರು ಉದ್ಭಟಕಾವ್ಯದಲ್ಲಿ ಷಡಕ್ಷರಿಯ ತ್ರಿಪದಿಗಳನ್ನು ಸೇರಿಸಿದರೋ ಹೇಳಲಾಗುವುದಿಲ್ಲ. ಆದರೆ ಇವರಿಬ್ಬರೂ ನೇಮಿಚಂದ್ರನ 'ಲೀಲಾವತಿ'ಯಿಂದ ಆ ತ್ರಿಪದಿಗಳಿಗೆ ಬೇಕಾದ 'ಸ್ಫೂರ್ತಿ'ಯನ್ನೂ ನೆರವನ್ನೂ ಪಡೆದಿರುವರೆಂಬುದು ತುಲನೆ ಮಾಡಿದಲ್ಲಿ ತಿಳಿಯುವುದು. ಅದು ಹೇಗೂ ಇರಲಿ. ಮುದ್ರಿತವಾದ ಉದ್ಭಟ ಕಾವ್ಯದ ತ್ರಿಪದಿಗಳು ರಾಜಶೇಖರವಿಲಾಸದವುಗಳಷ್ಟು ಶುದ್ಧರೂಪದಲ್ಲಿಲ್ಲ. ಆದರೂ ರಸ ದಶಸ್ಥಾನಗಳಲ್ಲಿ ಬಹ್ಮಗಣಗಳೇ ಇವೆ. ಮದನಂಗೆ ಜಯಮುಕ್ಕೆ— ಎಂಬ ಪದ್ಯದಲ್ಲಿ ಎರಡನೆಯ ಪಾದದಲ್ಲಿ 'ಬಿದುಗದಿರಿಂತು ನೆಲಸಿರ್ಕೆ' ಎಂಬುದರ ಬದಲಾಗಿ, 'ಬಿದುವಗದಿರಿಂತು' ಎಂದು ಒಂದು ಅಕ್ಷರ ಹೆಚ್ಚಿಸಲಾಗಿದೆ. ಚದುರಂಗನೆತ್ತ— ಎಂಬ ಪದ್ಯದ ಕೊನೆಯ ಪಾದದಲ್ಲಿ 'ಸೂಳೆವನೆಯೆ ಬರಿವನೆಯು' ಎಂದು ಒಂದು ಅಕ್ಷರ ಹೆಚ್ಚಿದೆ. ಇದು ಮನನೀಯ ವಿಷಯ. 'ಬರಿವನೆಯು' ಎಂಬ ಪಾಠಕ್ಕಿಂತ 'ಬರಿವನೆ' ಎಂಬ ಪಾಠವು ವ್ಯಾಕರಣ ದೃಷ್ಟಿಯಿಂದ ಪ್ರಾಚೀನವೂ ಶುದ್ಧವೂ ಎಂದು ಹೇಳಬೇಕಾಗಿಲ್ಲ. ಹಾಗೆಯೇ 'ಬಿದುಗದಿರ್' ಎಂಬುದೇ 'ಬಿದುವಗದಿರ್' ಎಂಬುದಕ್ಕಿಂತ ಶುದ್ಧತರವೆಂಬುದೂ ಸ್ಪಷ್ಟ. ಅಷ್ಟು ಮಾತ್ರವಲ್ಲ, ಆಧುನಿಕನಾದ ಷಡಕ್ಷರಿಯ ಭಾಷೆಯಲ್ಲಿ ಹಾಗೆ ಕಾಣಿಸುವುದಕ್ಕಿಂತ, ಪ್ರಾಚೀನನಾದ ಸೋಮರಾಜನ ಭಾಷೆಯಲ್ಲಿ ಹಾಗೆ ಕಾಣಿಸುವುದು ಇನ್ನಷ್ಟು ಆಶ್ಚರ್ಯಕರ. ಆದುದರಿಂದ ಇದು ಲಿಪಿಕಾರರ ದೋಷವೇ ಆಗಿರಬೇಕೆಂದು ತೋರುತ್ತದೆ. ಆದರೂ ಇದು ಪ್ರಮಾದದಿಂದ ಬಂದುದಲ್ಲವೆಂಬುದಕ್ಕೆ ಉದ್ಭಟಕಾವ್ಯದಲ್ಲಿ ಮುದ್ರಿತವಾದ ಬೇರೆ ತ್ರಿಪದಿಗಳೂ ಸಾಕ್ಷಿಯಾಗಿವೆ. ಉದಾ:— ನೆಲೆಮೊಲೆಯಧುಳ್ವಿನಂ ನೆಲೆಯಕ್ಕು ಪೋಪರ್ಗೆ— ಎಂದು ಒಂದು ತ್ರಿಪದಿಯ ಪ್ರಥಮ ಪಾದ. ಇದು ನೇಮಿಚಂದ್ರನ ಲೀಲಾವತಿಯಲ್ಲಿ ಹೀಗಿದೆ:—

ನೆಲೆಮೊಲೆಯುಳ್ವಿನಂ ನೆಲೆಯಕ್ಕು ಪೋಪವರ್ಗೆ —ಹೀಗಿರುವುದನ್ನು ಹಾಗೆ ಮಾರ್ಪಡಿಸಿ ಉದ್ಭಟ ಕಾವ್ಯದಲ್ಲಿ ಸೇರಿಸಲು ಕಾರಣವೇನು? ಲಿಪಿಕಾರರೋ, ಸಂಪಾದಕರೋ ಮಾತ್ರೆಗಳ ಲೆಕ್ಕದಿಂದ ತ್ರಿಪದಿಯನ್ನಳೆಯತೊಡಗಿ, ಸರಿಯಿಲ್ಲವೆಂದು ಕಂಡಲ್ಲಿ ಮಾತ್ರೆಗಳ 'ಭರ್ತಿ'ಗಾಗಿ ಅಕ್ಷರಗಳನ್ನು ಕೂಡಿಸಿಕೊಂಡುದೇ ಇದಕ್ಕೆ ಕಾರಣವಾಗಿರಬೇಕೆಂದು ಹೇಳಿದರೆ ತಪ್ಪಾಗಲಾರದು. ನೋಡಿರಿ:—

೪ ೫

ನೆಲೆಮೊಲೆ । ಯುಳ್ವಿನಂ । ನೆಲೆಯಕ್ಕು । ಪೋಪವರ್ಗೆ ।—ಎಂಬ ಪಾಠದಲ್ಲಿ ಐದೈದು ಮಾತ್ರೆಯ ಗಣವಿಭಾಗವಾಗುವುದಿಲ್ಲ. ಮೊದಲನೆಯ ಗಣದಲ್ಲಿ ನಾಲ್ಕೇ ಮಾತ್ರೆಯಾಗುತ್ತದೆ; ಅಥವಾ ಮುಂದಿನ ಅಕ್ಷರವನ್ನು ತೆಗೆದುಕೊಂಡರೆ ಆರು ಮಾತ್ರೆಯಾಗುತ್ತದೆ; ಮತ್ತು ಮುಂದೆ ಅನವಸ್ಥೆಯುಂಟಾಗುತ್ತದೆ. ಅದಕ್ಕಾಗಿ

೫ ೫ ೫

ನೆಲೆಮೊಲೆಯ । ದುಳ್ವಿನಂ । ನೆಲೆಯಕ್ಕು ।

೫

ಪೋಪವರ್ಗೆ—ಹೀಗೆ ಮಾಡಿದುದಲ್ಲವೆ? ಹಿಂದೆ ಸೂಚಿಸಿದ ರೂಪಾಂತರಗಳಿಗಾದರೂ ಇದೇ ಕಾರಣವಲ್ಲವೆ?

ಬಿದುಗದಿ । ರಿಂತು । ನೆಲಸಿರ್ಕೆ—ಇತ್ಯಾದಿಯಾಗಿದ್ದರೆ, ಮೊದಲನೆಯದು ಐದು ಮಾತ್ರೆಯ ಗಣವಾಗುವುದಿಲ್ಲ. ಅದಕ್ಕಾಗಿ ಬಿದುವಗದಿ । ರಿಂತು ।—ಎಂದು ಮಾಡಿದುದೆಂಬುದರಲ್ಲಿ ಸಂದೇಹವಿದೆಯೆ? ಹಾಗೆಯೇ 'ಬರಿವನೆ' ಎಂದು ನಿಲ್ಲಿಸಿದರೆ ಆ ಪಾದದಲ್ಲಿ ಒಂದು ಮಾತ್ರೆ ಕಡಿಮೆಯೆಂಬಂತೆ ಮಾತ್ರಾಪಕ್ಷಪಾತಿಗಳಿಗೆ ಕಾಣುವುದು. ಅದಕ್ಕಾಗಿ 'ಬರಿವನೆಯು' ಎಂದು ಮಾಡಿದ್ದಾಗಿದೆ. ಇದು ಕೇವಲ ಊಹೆಯಲ್ಲ. ತ್ರಿಪದಿಯಲ್ಲಿ ಹೇಗೆ ಇಂತಹ ಬದಲಾವಣೆಗಳು, ಮಾತ್ರೆಗಳ ಸಂಖ್ಯೆಗಾಗಿ, ಇಂದೂ ಆಗುತ್ತಲೇ ಇವೆ ಎಂಬುದಕ್ಕೆ ಶ್ರೀ ಉತ್ತಂಗಿಯವರ ೧೯೨೪ನೆಯ ಇಸವಿಯ ಪ್ರತಿಯನ್ನೂ ೧೯೩೪ರ ಜನಪದಾವೃತ್ತಿಯನ್ನೂ ಹೋಲಿಸಿ ನೋಡಿದರೆ ಗೊತ್ತಾಗುವುದು. ಉದಾರಣವಾಗಿ ಮೊದಲನೆಯ ಪುಟದಲ್ಲಿಯೇ—

೫ ೫ ೪ ೫

ಮುನ್ನ ಕೈ । ಲಾಸದಲಿ । ಪನ್ನಗ । ಧರನಾಳು ।

೪

ಎನ್ನಯ । ಪೆಸರು । ಪುಷ್ಪದ । ತ್ತನು ಎಂದು ।

ಮುನ್ನಿಪರು । ದಯದಿ । ಸರ್ವಜ್ಞ ॥ (೧೯೨೪ರ ಪ್ರತಿ- ಪದ್ಯ ೨)

ಇದನ್ನೇ ೧೯೩೪ರಲ್ಲಿ ಹೀಗೆ ತಿದ್ದಲಾಗಿದೆ:—

೫ ೫ ೫ ೫

ಮುನ್ನ ಕೈ । ಲಾಸದಲಿ । ಪನ್ನಗನ । ಧರನಾಳು ।

೫

ಎನ್ನಯಾ । ಪೆಸರು ।—ಇತ್ಯಾದಿ.

ಇಲ್ಲಿ 'ಪನ್ನಗನ ಧರನಾಳು' ಎಂಬ ಪ್ರಯೋಗವು ಸಾಧುವಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಹಾಗಿದ್ದರೂ ಮಾತ್ರೆಗಳ ಮೋಹವು ರೂಪಾಂತರವನ್ನುಂಟುಮಾಡಿದೆ. "ಅಪಿಮಾಷಂ ಮಷಂ ಕುರ್ಯಾತ್"! ಇರಲಿ. 'ಎನ್ನಯಾ' ಎಂದು ಮಾಡಿದುದೂ ಇದೇ ಕಾರಣದಿಂದಲೆಂಬುದು ಸ್ಪಷ್ಟ. ಇಂತಹ ಎಷ್ಟು ಉದಾಹರಣಗಳನ್ನೂ ಕೊಡಬಹುದು.

ಇನ್ನು ರನ್ನನ ತ್ರಿಪದಿಯ ವಿಚಾರ. ಅದು ಮೂರು ಸಾಲಾಗಿ ಮುದ್ರಿತವಾದ ಮಾತ್ರದಿಂದ ಅದನ್ನು ತ್ರಿಪದಿಯೆನ್ನಬೇಕೇ? ಅದು ತ್ರುಟಿತ ಭಾಗದಿಂದ ಎತ್ತಿದುದೆಂಬುದನ್ನು ನಾವಿಲ್ಲಿ ಮರೆಯಲಾಗದು. ಮೂರನೆಯ ಪಂಕ್ತಿಯ ಆದಿಯಲ್ಲಿ ಪ್ರಾಸವಿಲ್ಲ—ಅದರಿಂ ಸತ್ಕವಿಗಳಿರ್ವರೆಮಗಭಿವಂದ್ಯರ್—ಎಂಬುದು ಕಂದ ಪದ್ಯದ ದೀರ್ಘಪಾದದಂತಿದೆ. ಆದುದರಿಂದ ಆ ಭಾಗದ ಶುದ್ಧಸ್ವರೂಪವನ್ನು ತೋರಿಸುವ ಒಂದು ಹಸ್ತಪ್ರತಿ ದೊರೆಯದೆ, ಅದೇನೆಂದು ನಿರ್ಣಯಮಾಡಲು ಬರುವಂತಿಲ್ಲ. ಅದರ ವಿಚಾರ ಇಲ್ಲಿ ಅನವಶ್ಯ. ಇರಲಿ.

ಈ ಮೇಲಿನ ವಿವೇಚನೆಯಿಂದ ಸರ್ವಜ್ಞನ ತ್ರಿಪದಿಗಳಿಗೂ ತ್ರಿಪದಿಗಳಿಗೆಲ್ಲ ಸಾಮಾನ್ಯವಾದ ತ್ರಿಮೂರ್ತಿ ಗಣಾವಲಂಬನದಿಂದಲೇ ಸಹಜವಾಗಿ ಲಕ್ಷಣವನ್ನು ಹೇಳಲಾಗುತ್ತದೆ ಎಂಬುದು ಸ್ಪಷ್ಟವಾಗಿರಬಹುದೆಂದು ನಂಬುತ್ತೇನೆ. ಆದರೆ ಹಾಡಿನ ಧಾಟಿ ಕನ್ನಡ ಕೈಪಿಡಿಯ ಎರಡನೆಯ ಮುದ್ರಣದಲ್ಲಿ ತೋರಿಸಿದಂತೆ ಐದು ಮಾತ್ರೆಯ ಗತಿಯಲ್ಲಿರುವಾಗ, ಆ ಮಾತ್ರಾಗತಿಯಿಂದಲೇ ಲಕ್ಷಣ ಹೇಳದೆ, ಹೀಗೆ ಹೇಳುವುದು ಸಮಂಜಸವಾದೀತೇ? ಎಂದು ಕೆಲವರು ಕೇಳಬಹುದು. ಆದರೆ ತ್ರಿಪದಿಗೆ ಕನ್ನಡ ನಾಡಿನ ಎಲ್ಲಾ ಭಾಗಗಳಲ್ಲೂ ಹಾಡುವ ಧಾಟಿ ಒಂದೇ ಇರುವುದಲ್ಲವೆಂಬುದನ್ನು ಅರಿಕೆ ಮಾಡಿಕೊಳ್ಳುತ್ತೇನೆ. [ಪುನರಾವೃತ್ತಿಯ ವಿಷಯವೂ ಹಾಗೆಯೇ, ಸಾರ್ವತ್ರಿಕವಲ್ಲ. ಶ್ರೀ. ಹುಲ್ಕುಂಟೆಮಠ ಶಿವಮೂರ್ತಿ ಶಾಸ್ತ್ರಿಗಳು 'ಜನಪದಾವೃತ್ತಿ'ಯ ಪ್ರಸ್ತಾವನೆಯ ೧೯ನೆಯ ಪುಟದಲ್ಲಿ ಹೀಗೆ ಹೇಳುತ್ತಾರೆ:— "ಕೆಲವರು ತ್ರಿಪದಿಗಳನ್ನು ಹೇಳುವಾಗ ದ್ವಿತೀಯ ಪಾದದ ಮೂರು ಗಣಗಳ ವರೆಗೆ ಹೇಳಿ, ಮತ್ತೆ ಆ ಎರಡನೆಯ ಸಾಲನ್ನು ಮೊದಲಿಂದ ಪ್ರಾರಂಭಿಸುತ್ತಾರೆ. ಈ ಪದ್ಧತಿಯು ಹಳ್ಳಿಗರು ಹೇಳುವ ತ್ರಿಪದಿ ಛಂದಸ್ಸಿನ ಒನಕೆ ಹಾಡುಗಳುಲ್ಲುಂಟೆಂದು ಹೇಳಬಹುದು."

ಕನ್ನಡ ಜಿಲ್ಲೆಯ ಮಟ್ಟುಗಳಲ್ಲಿ ಒಂದರಲ್ಲಿ ಪುನರಾವೃತ್ತಿ ಇದೆ; ಇನ್ನೊಂದರಲ್ಲಿ ಇಲ್ಲ. ಮೂರನೆಯ ಮಟ್ಟಿನಲ್ಲಿ ಏಳನೆಯ ಗಣವನ್ನು ಮಾತ್ರ ಪುನರಾವರ್ತಿಸುತ್ತಾರೆ.] ಈಗಣ ರೂಢಿಯಂತೆ ತ್ರಿಪದಿಯ ಹಾಡುಗಾರಿಕೆಯಲ್ಲಿ–ಧಾರವಾಡದ ಕಡೆಯ ಧಾಟಿಯೊಂದು, ಮೈಸೂರು ಕಡೆಯದಿನ್ನೊಂದು, ಕುಂದಾಪುರದ್ದು ಬೇರೊಂದು, ಹವೀಕರ ತೊಟ್ಟಿಲ ಹಾಡಿನದೊಂದು, ಉದಯರಾಗ ಕದಿರು ತುಂಬುವ ಹಾಡು ಮೊದಲಾದುವುಗಳ ಧಾಟಿ ಮತ್ತೊಂದು—ಹೀಗೆ ಹಲವು ಗತಿ ಅಥವಾ 'ನಡೆ'ಗಳಿರುತ್ತವೆ. ಇದು ತ್ರಿಮೂರ್ತಿ ಗಣಘಟಿತವಾದುದರಿಂದ ಹೀಗೆ ಭಿನ್ನಭಿನ್ನ ಗತಿಗಳು ಒಂದೇ ಪದ್ಯಕ್ಕೆ ಹೊಂದಿಕೊಳ್ಳಬಹುದಾಗುತ್ತದೆ. ತ್ರಿಪದಿಯ ಪದ್ಯಗತಿಯನ್ನು ನಿರ್ಣಯಿಸುವುದು ವಿಷ್ಣುಗಣ. ಆದರೆ ಅದರಲ್ಲಿ ಇರಲೇ ಬೇಕಾದ (೬–೧೦) ಬ್ರಹ್ಮಗಣಗಳ ಕೊನೆಯನ್ನು ಎಳೆಯಬೇಕು; ಅಲ್ಲಲ್ಲಿ ಕಾಣಿಸಿಕೊಳ್ಳಬಹುದಾದ ರುದ್ರಗಣಗಳನ್ನು ವಿಷ್ಣುಗಣದ ಗತಿಗೆ ಒಗ್ಗಿಸಬೇಕು.* ವಿಷ್ಣುಗಣವು ಸಹಜ ಗತಿಯಲ್ಲಿ ಆರು ತಾಲಮಾತ್ರೆಗಳನ್ನು ಪಡೆದು, ರೂಪಕ ತಾಳದಲ್ಲಿ ನಡೆಯುತ್ತದೆ. ರತ್ನಾಕರವರ್ಣಿ ಮೊದಲಾದವರ ಬ್ರಹ್ಮಗಣಾಂತ ಸಾಂಗತ್ಯವು ಈ ಗತಿಯ ಶುದ್ಧ ಸ್ವರೂಪವನ್ನು ತೋರಿಸುತ್ತದೆ. ಉದಾ:—

(ಸಾಹಿತ್ಯ)

ಪರಮ ಪ । ರಂಜ್ಯೋತಿ । ಕೋಟಿ ಚಂ । ದ್ರಾದಿತ್ಯ ।
ಕಿರಣ ಸು । ಜ್ಞಾನ ಪ್ರ । ಕಾಶಾ ॥

(ಪ್ರಸ್ತಾರ)

ಮುರರಿಪು । ಕಂಸಾರಿ । ಮಾಧವಂ । ಕಂಸಾರಿ ।
ಸ್ಮರಪಿತಂ । ಕಂಸಾರಿ । ಬ್ರಹ್ಮಂ ॥

(ಹಾಡು)

ಪರಮಾ ಪಾ । ರಂಜ್ಯೋತೀ । ಕೋಟೀ ಚಂ । ದ್ರಾದಿತ್ಯಾ ।
ಕಿರಣಾ ಸು । ಜ್ಞಾನ ಪ್ರಾ । ಕಾಶಾ.. ॥

ಇದೇ ಗತಿಯನ್ನು ಒಲೆಯಿಸಿ 'ಕೋರೆ'ಯಾಗಿ ಹಾಡಿದರೆ (ಏಳು ತಾಲಮಾತ್ರೆಗಳನ್ನು ಪಡೆದು) 'ಚಾಪು ಅಟತಾಳ'ದಲ್ಲಿ ನಡೆಯುತ್ತದೆ. ದೇಫರಾಜಾದಿಗಳ ವಿಷ್ಣುಗಣಾಂತ ಸಾಂಗತ್ಯವನ್ನೂ ಪಿರಿಯಕ್ಕರವನ್ನೂ ಹೀಗೆ ಹಾಡಿದರೆ ಸೊಗಸಾಗುತ್ತದೆ. ಅಧಿಕ ಮಾತ್ರೆಯ ವಿಷ್ಣುಗಣಗಳನ್ನು ಕುಗ್ಗಿಸಿ, ಅಲ್ಪ ಮಾತ್ರೆಯವನ್ನು ಹಿಗ್ಗಿಸಿ, ಎಲ್ಲವನ್ನು ಐದು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಿದರೆ, ವಿಷ್ಣುಗಣ ಘಟಿತವಾದ ಪದ್ಯವನ್ನು ಝಂಪೆ ತಾಳದ ಗತಿಯಲ್ಲಿ ಹಾಡಲೂ ಬಹುದು. ಈ ಮೂರು ಗತಿಗಳಲ್ಲದೆ ಬೇರೆ 'ನಡೆ'ಗಳೂ ತ್ರಿಪದಿಗೆ ಒಗ್ಗುವುವು. (ಒಂದೇ ಛಂದೋಬಂಧವು ಒಮ್ಮೆ ಒನಕೆವಾಡಾಗಿಯೂ ಇನ್ನೊಮ್ಮೆ ಬೀಸುವ ಹಾಡಾಗಿಯೂ ಮತ್ತೊಮ್ಮೆ ತೊಟ್ಟಿಲ ಹಾಡಾಗಿಯೂ ಮಾರ್ಪಡುವಾಗ ಹೀಗೆ ಭಿನ್ನಗತಿ ಬರುವುದು ಸಹಜವೂ ಸುಂದರವೂ ಆಗಿದೆ.) ಇಷ್ಟು ಗತಿಗಳು ಇದಕ್ಕೆ ಹೊಂದುವುವಾದರೂ ರೂಪಕ ಗತಿಯೇ ವಿಷ್ಣುಗಣದ ಮೂಲಗತಿ.† ಆದುದರಿಂದ ತ್ರಿಪದಿಯನ್ನು ಆ ಗತಿಯಲ್ಲಿ ಹಾಡಿದರೆ, ಅಥವಾ ಚಾಪು ಗತಿಯಲ್ಲಿ ಹಾಡಿದರೆ ಮಾತ್ರ, ಅದರಲ್ಲಿರುವ ಗಣಗಳ ಸ್ವರೂಪವು ಅಚ್ಚಳಿಯದೆ ತೋರುವುದು. ತ್ರಿಪದಿಯನ್ನು ಝಂಪೆಯ ಗತಿಯಲ್ಲಿ ಹಾಡಿದರೆ, ಅನಿಶ್ಚಿತ ಸ್ಥಾನಗಳಲ್ಲಿ ಜಗ್ಗಬೇಕಾದ ಮಾತ್ರಾಬಂಧವಿಕಾರವೆಂಬಂತೆ ಭಾಸವಾಗಲು ಎಡೆಯಿದೆ.

ಆರಂಭದಲ್ಲಿ ತ್ರಿಪದಿಗೆ ರೂಪಕಗತಿಯೇ ರೂಢನಾಗಿತ್ತೆಂದು ಹೇಳುವುದಕ್ಕೆ ಪೊನ್ನನ ಶಾಂತಿಪುರಾಣದ (೨—೯೨)

೬ ೬
ಸಹಕಾರಾ । ಸಾರಾನೋ । ಕಹದ..... ಇತ್ಯಾದಿ

ಯಾಗಿರುವ ತ್ರಿಪದಿಯೂ ಒಂದು ಸಾಕ್ಷಿಯಾಗಿದೆ. ಇದನ್ನು ಆರು ಮಾತ್ರೆಯ ನಡೆಯಲ್ಲಿ ಹಾಡದಿದ್ದರೆ ಅರ್ಥವು ಕಣ್ಮರೆಯಾಗುವಂತಿದೆ. ಅಷ್ಟೇಕೆ? ಸರ್ವಜ್ಞನ ಅನೇಕ ಪದ್ಯಗಳನ್ನು ಐದು ಮಾತ್ರೆಯ ಗತಿಯಲ್ಲಿ ಹಾಡಲಾಗುವುದಿಲ್ಲ. ಉದಾ:—(ಉತ್ತಂಗಿ—೨೭೯)

೬ ೪ ೫
ಸರ್ವಾಂತ । ರ್ಯಾಮಿಯು । ಓರ್ವನೆಂ । ಬು
೫
ವತತ್ವ ।—ಇದನ್ನು ಐದು ಮಾತ್ರೆಯ ಗತಿಯಲ್ಲಿ ಹಾಡಿ

---

*ಸರ್ವಜ್ಞನ ತ್ರಿಪದಿಗಳಲ್ಲಿ ತೋರಬರುವ ರುದ್ರಗಣಗಳು ಹೆಚ್ಚಾಗಿ ಅಲ್ಪ ಮಾತ್ರೆಗಳವು, ಅದುದರಿಂದ ಹಾಡುವಾಗ ವಿಷ್ಣುಗಣದೊಡನೆ ಹೊಂದಿಕೊಳ್ಳುತ್ತವೆಂಬುದನ್ನು ಅರಿಯಬಹುದು.

†ಗೋವಿಂದಂ—ಎಂಬ ಪ್ರಥಮ ವಿಷ್ಣುಗಣವೇ ಆ ವರ್ಗದ ಗಣಗತಿಯನ್ನು ನಿರ್ದೇಶಿಸುವುದು. ಹೆಚ್ಚಿನ ವಿವರಗಳನ್ನು ಹಿಂದೆ ಸೂಚಿಸಿದ 'ಕನ್ನಡಛಂದಸ್ಸು' ಎಂಬ ಲೇಖನದಲ್ಲಿ ನೋಡಿಕೊಳ್ಳಬಹುದು.

ದರೆ ಎಷ್ಟು ಕೃತ್ರಿಮವಾಗುವುದು, ಆರು ಮಾತ್ರೆಯ ಗತಿಯಲ್ಲಿ ಹಾಡಿದರೆ ಎಷ್ಟು ಮನೋಹರವಾಗುವುದು ಎಂಬುದು ಅನುಭವೈಕವೇದ್ಯ.

ಆದರೆ ಇಲ್ಲಿ ಒಂದು ಪ್ರಶ್ನೆ ಹುಟ್ಟಬಹುದು. ಆರಂಭದಲ್ಲಿ ರೂಪಕ ಗತಿಯನ್ನೋ ಚಾಪು ಗತಿಯನ್ನೋ ಹೊಂದಿದ್ದ ತ್ರಿಪದಿ ಕಾಲಾಂತರದಲ್ಲಿ (ಕನ್ನಡ ನಾಡಿನ ಕೆಲವೆಡೆಗಳಲ್ಲಾದರೂ) ಝುಂಪೆ (?) ನಡೆಗೆ ಬಂದು ಮುಟ್ಟಿದಂತಿದೆ. ಈ ಗತಿಯಲ್ಲಿ ಅದೀಗ ಹೆಚ್ಚು ಕಡಿಮೆ ಮಾತ್ರಾಬಂಧದಂತೆ ಕಿವಿಗೆ ಕೇಳುತ್ತಿರುವುದರಿಂದ, ಒಂದು ಕಾಲದಲ್ಲಿ ತ್ರಿಮೂರ್ತಿಗಣಘಟಿತವಾಗಿದ್ದಿರ ಬಹುದಾದ ಷಟ್ಪದಿ, ಉತ್ಸಾಹ ಮೊದಲಾದುವು ಕಾಲಾಂತರದಲ್ಲಿ ಮಾತ್ರಾಬಂಧವೆನ್ನಿಸಿದಂತೆ, ತ್ರಿಪದಿಯೂ ಅವಸ್ಥಾಂತರವನ್ನು ಪಡೆದು ಮಾತ್ರಾಬಂಧವಾಗಿದೆ—ಆಗುತ್ತಿದೆ ಎಂದು ಹೇಳಬಹುದಲ್ಲವೆ? ಸರ್ವಜ್ಞನ ತ್ರಿಪದಿಗಳಲ್ಲಿ ಆರು ಮಾತ್ರೆಯ ವಿಷ್ಣುಗಣಗಳು ಎಲ್ಲಿಯೋ ಕೆಲವೆಡೆ ಮಾತ್ರ ಗೋಚರಿಸುವುದೂ ಐದು ಮಾತ್ರೆಯ ರುದ್ರಗಣಗಳು ಅಲ್ಲಲ್ಲಿ ಕಾಣುವುದೂ, ತ್ರಿಪದಿ ಮಾತ್ರಾಬಂಧಕ್ಕೆ ತಿರುಗುವ ಲಕ್ಷಣವಲ್ಲವೆ?–ಈ ಪ್ರಶ್ನೆಗೆ ಹೀಗೆ ಉತ್ತರ ಹೇಳಬೇಕಾಗುತ್ತದೆ. ತ್ರಿಪದಿ ಮಾತ್ರಾಬಂಧಕ್ಕೆ ತಿರುಗುವ ಲಕ್ಷಣಗಳನ್ನು ತೋರಿಸುತ್ತಿರಬಹುದು; ಆದರೆ ಅದಿನ್ನೂ ಮಾತ್ರಾಬಂಧವಾಗಿಲ್ಲ*. 'ಬಿಸರುಹೋದ್ಭವಗಣಂ ರಸದಶಸ್ಥಾನದೊಳ್' ಎಂಬ ಪ್ರಾಚೀನ ತ್ರಿಪದಿಯ ಜೀವಾಳವೇ ಆಧುನಿಕವೆನ್ನಿಸಿಕೊಳ್ಳುವ (ಸರ್ವಜ್ಞಾದಿಗಳ) ತ್ರಿಪದಿಯ ಜೀವವೂ ಆಗಿದೆ. ಆ ರಸದಶಸ್ಥಾನಗಳಲ್ಲಿ ಐದು ಮಾತ್ರೆಯ ಗಣಗಳು ಬರುವ ವರೆಗೆ ಅದು ಮಾತ್ರಾಬಂಧವೆನ್ನಿಸಲಾರದು. ಆ ಜೀವಾಳವು ತಪ್ಪಿದಾಗ ೬-೧೦ನೆಯ ಸ್ಥಾನಗಳಲ್ಲಿ ಜಗ್ಗುವ ಕೆಲಸವೂ, ಅಲ್ಲಿರುವ ಯತಿಯೂ, ಅದರೊಡನೆ ತ್ರಿಪದಿಯ ಅದೊಂದು ಸೊಬಗಿನ ಗತಿಯೂ ಕೊನೆಗೊಳ್ಳುವುವು. ಅದು ಇನ್ನೂ (ಸರ್ವಜ್ಞನ ಪದ್ಯದ ನಕಲಿಗಳಲ್ಲಿ ಸಹ) ಆಗಿಲ್ಲವಾದುದರಿಂದಲೂ, ಹಿಂದೆ ತೋರಿಸಿದಂತೆ ಈ ವರೆಗೆ ನಿರ್ಮಿತವಾಗಿರುವ ಯಾರ ತ್ರಿಪದಿಗೂ ಕೇವಲ ಮಾತ್ರೆಗಳ ಅವಲಂಬನದಿಂದ ಲಕ್ಷಣವನ್ನು ಸಮಂಜಸವಾಗಿ ಅನ್ವಯಿಸಲಾಗುವುದಿಲ್ಲವಾದುದರಿಂದಲೂ, ಎಷ್ಟೋ ಕಡೆಗಳಲ್ಲಿ ವಿಸಂಧಿ ಮೊದಲಾದುವುಗಳಿಂದ ಮಾತ್ರಾಸಂಖ್ಯೆಯನ್ನು ಏರಿಸಲಾದ ಪಾಠಗಳನ್ನು ಒಪ್ಪಿಕೊಂಡು ವಿವೇಚಿಸಿದರೂ ತ್ರಿಮೂರ್ತಿಗಣಗಳಿಂದಲೇ ಅದರ ಲಕ್ಷಣವನ್ನು ಸಮಂಜಸವಾಗಿ, ನಿರಪವಾದವಾಗಿ, ನಿರೂಪಿಸಲಾಗುವುದರಿಂದಲೂ ಇಂದು ಕೂಡ ತ್ರಿಪದಿ ತ್ರಿಮೂರ್ತಿಗಣಘಟಿತವಾಗಿರುವುದೆಂದೇ—ಅದು ಮಾತ್ರಾಬಂಧವಲ್ಲವೆಂದೇ–ಸಿದ್ಧವಾಗುವುದಿಲ್ಲವೆ? ಸರ್ವಜ್ಞನ ತ್ರಿಪದಿಗಳಿಗಿಂತ ಹೆಚ್ಚಾಗಿ ನಿಜಗುಣ ಶಿವಯೋಗಿಯ ತ್ರಿಪದಿಗಳಲ್ಲಿ ರುದ್ರಗಣದ ಪ್ರಭಾವ ಬೆಳೆದಿದೆ. ಆದರೂ ೬-೧೦ನೆಯ ಸ್ಥಾನಗಳಲ್ಲಿ ಬ್ರಹ್ಮಗಣಗಳೇ ಇವೆ. ಉದಾ:—

(ಸಾಹಿತ್ಯ)

ಕೊರಳ ವಿಷ । ಮಂ ಕಂಡು । ಮರಣವಹು । ದೆಂದಭವ ।
ಹರನನಾ । ರಯ್ಯು । ತಿಹರುದ್ರ । ಪಶುಪತಿಗೆ ।
ಶರಣೆಂದು । ಸಿದ್ಧಿ । ಪಡೆವನು ॥

(ಪ್ರಸ್ತಾರ)

ಮದನರಿಪು । ಕಂಸಾರಿ । ಮದನರಿಪು । ಕಾಮರಿಪು ।
ಸ್ಮರಪಿತಂ । ಧಾತೃ । ನರಕಾರಿ । ಮದನರಿಪು ।
ನರಕಾರಿ । ಧಾತೃ । ಮುರರಿಪು ॥

ಹೀಗೆ ಒಂದೇ ಪದ್ಯದಲ್ಲಿ ನಾಲ್ಕು ರುದ್ರಗಣಗಳು ವಿಷ್ಣುಸ್ಥಾನಗಳನ್ನು ಆಕ್ರಮಿಸಿದರೂ, ಬ್ರಹ್ಮಸ್ಥಾನಗಳು ಅಚ್ಚಳಿಯದೆ ಇವೆ.

ಹಳ್ಳಿಗರ ಬಾಯಲ್ಲೇ ಇರುವ ಹಾಡುಗಳಾಗಿರುವ ಜಾನಪದ ತ್ರಿಪದಿಗಳಲ್ಲೂ ತ್ರಿಪದಿಯ ಜೀವಾಳ ಕೆಟ್ಟಿಲ್ಲ. ಮಾತ್ರವಲ್ಲ, ಹಿಂದೆ ವಿವರಿಸಿದ ತ್ರಿಪದಿ ಸಾಮಾನ್ಯದ ಲಕ್ಷಣಕ್ಕೆ ಇವೂ ಒಳಪಡುತ್ತವೆ. ಕನ್ನಡ ನಾಡಿನ ಬೇರೆ ಬೇರೆ ಭಾಗಗಳ ಅಂತಹ ಹಾಡುಗಳನ್ನು ಪರೀಕ್ಷಿಸಿರಿ:—

೧. ಮೈಸೂರು ಸೀಮೆಯ ಹಾಡು (ಪುನರಾವೃತ್ತಿ ಯುಕ್ತ).

---

*ಸರ್ವಜ್ಞನ ತ್ರಿಪದಿಯಂತೂ ಮಾತ್ರಾಬಂಧವಲ್ಲವೆಂದು ಸಾಧಾರವಾಗಿ ಪ್ರತಿಪಾದಿಸಲಾಯಿತಷ್ಟೆ. ಅಲ್ಲದೆ, ಇನ್ನಾದರೂ ತ್ರಿಪದಿ ಮಾತ್ರಾಬಂಧವಾಗಿ ಪರಿಣಮಿಸುವುದೂ ಅಸಂಭವ; ಏಕೆಂದರೆ ಅದರಲ್ಲಿ ಸಂತತ ನವರಚನೆಯಾಗುವ ಕುರುಹು ಎಲ್ಲಿಯೂ ತೋರಿಬರುವುದಿಲ್ಲ.

(ಸಾಹಿತ್ಯ)

ಮುಡದಿಯನು । ಬಡಿದಾನು । ಮನದೊಳಗೆ । ಮರುಗಿದನು ।
*ಒಳಗ್ಹೋಗಿ । ಕಾಲ । ಹಿಡಿದಾನು ॥
(ಒಳಗ್ಹೋಗಿ । ಕಾಲ । ಹಿಡಿದು ತಾ ।) ಕೇಳಿದನು ।
ನಾಹೆಚ್ಚೊ । ನಿನ್ನ । ತವರ್ಹೆಚ್ಚೊ ॥

(ಪ್ರಸ್ತಾರ)

ಮದನರಿಪು । ನರಕಾರಿ । ಮದನರಿಪು । ಮದನರಿಪು ।
ನರಕಾರಿ । ಧಾತೃ । ನರಕಾರಿ ॥
(ನರಕಾರಿ । ಧಾತೃ । ಸ್ಮರಪಿತಂ ।) ಕಾಮರಿಪು ।
ಕಂಸಾರಿ । ಧಾತೃ । ನರಕಾರಿ ॥

(ಸಾಹಿತ್ಯ)

ಹರಿದರೆ । ಹರಿಯಲೆ । ಮುರಿದರೆ । ಮುರಿಯಲೆ ।
ನಾವೊಬ್ಬರ । ಮನೆಯ । ಸೊಸೆಯದೊ ॥
(ನಾವೊಬ್ಬರ । ಮನೆಯ । ಸೊಸೆಯದೊ ।) ತಂಗ್ಯವ್ವ ।
ತವರೂರ । ಸುದ್ದಿ । ನಮಗೇಕೆ ॥

(ಪ್ರಸ್ತಾರ)

ಮುರರಿಪು । ಮುರರಿಪು । ಮುರರಿಪು । ಮುರರಿಪು ।
ಭೂತಾಗ್ರಣಿ । ಸುರಪ । ನರಕಾರಿ ।
(ಭೂತಾಗ್ರಣಿ । ಸುರಪ । ನರಕಾರಿ ।) ಕಂಸಾರಿ ।
ನರಕಾರಿ । ಧಾತೃ । ನರಕಾರಿ ॥

(ನಮ್ಮ ಊರಿನ ರಸಿಕರು)

೨. ಧಾರವಾಡದ ಕಡೆಯ ಹಾಡು.

(ಸಾಹಿತ್ಯ)

ತಾವರಿಯ । ಗಿಡ ಹುಟ್ಟಿ । ದೇವರಿಗೆ । ನೆರಳಾದಿ ।
ನಾಹುಟ್ಟಿ । ಮನೆಗೆ । ಎರವಾದೆ ॥ ಹಡೆದವ್ವ ।
ನೀಕೊಟ್ಟ । ಮನೆಗೆ । ಹೆಸರಾದೆ ॥

(ಪ್ರಸ್ತಾರ)

ಕಾಮರಿಪು । ನರಕಾರಿ । ಕಾಮರಿಪು । ನರಕಾರಿ ।
ಕಂಸಾರಿ । ಸುರಪ । ನರಕಾರಿ । ನರಕಾರಿ ।
ಕಂಸಾರಿ । ಸುರಪ । ನರಕಾರಿ ॥

(ಸಾಹಿತ್ಯ)

೪ ೪ ೫ ೫
ಶಿವಶಿವ । ಎಂದರ । ಸಿಡಿಲೆಲ್ಲ । ಬಯಲಾಗಿ ।
ಕಲ್ಲಬಂ । ದೆರಗಿ । ಕಡೆಗಾಗಿ ॥ ಎಲೆ ಮನವೆ ।
ಶಿವನೆಂಬ । ಶಬುದ । ಬಿಡಬೇಡ ॥

---

*'ಗ್ಹೋ' ಎಂಬುದು 'ಘೋ' ಎಂಬಂತೆ ಉಚ್ಚರಿಸಲ್ಪಡುವುದರಿಂದ ಹಿಂದಿನ ಅಕ್ಷರವು ಲಘುವಾಗಿಯೇ ಉಳಿಯುತ್ತದೆ; 'ರ್ಹೆ' ಎಂಬುದು ಶಿಥಿಲದ್ವಿತ್ವವಾಗಿ ಉಚ್ಚರಿಸಲ್ಪಡಬೇಕು; ಆದುದರಿಂದ ಅವರ ಹಿಂದಿನ ಅಕ್ಷರವೂ ಗುರುವಾಗಲಾರದು.

(ಪ್ರಸ್ತಾರ)

ಮುರರಿಪು । ಶ್ರೀಪತಿ । ನರಕಾರಿ । ನರಕಾರಿ ।
ಮಾಧವಂ । ಸುರಪ । ನರಕಾರಿ । ಮದನರಿಪು ।
ನರಕಾರಿ । ಸುರಪ । ನರಕಾರಿ ॥

(ಗರತಿಯ ಹಾಡು)

೩. ಕುಂದಾಪುರದ ಒಕ್ಕಲಿಗರ ಹಾಡು (ಪುನರಾವೃತ್ತಿ ಯುಕ್ತ)

(ಸಾಹಿತ್ಯ)

೬ ೫ ೬ ೫
ಅಚೂ ಕ । ಬ್ಬಿನಗೆದ್ದೆ । ಈಚೂ ಕ । ಬ್ಬಿನಗೆದ್ದೆ ।
೬ ೩ ೫
ನಾಚಾರಿನ । ಗೆದ್ದೆ । ನಡುಗೆದ್ದೆ ॥
೫
(ನಾಚಾರಿನ । ಗೆದ್ದೆ । ನಡುಗೆದ್ದೆ ।) ಲಣ್ಣಯ್ಯ ।
೬ ೩ ೬
ಪೇಚಾಟಕೆ । ಬಿದ್ದ । ಅನುಗಾಲೋ ॥

(ಪ್ರಸ್ತಾರ)

ಗೋವಿಂದಂ । ನರಕಾರಿ । ಗೋವಿಂದಂ । ನರಕಾರಿ ।
ಭೂತಾಗ್ರಣಿ । ಧಾತೃ ನರಕಾರಿ ॥
(ಭೂತಾಗ್ರಣಿ । ಧಾತೃ । ನರಕಾರಿ ।) ಕಂಸಾರಿ ।
ಭೂತಾಗ್ರಣಿ । ಧಾತೃ । ಜಲಜಾಕ್ಷಂ ॥

(ಸಾಹಿತ್ಯ)

ಬಡವರು । ಸತ್ತರೆ । ಸುಡುವದಕೂ । ಸೌದಿಲ್ಲೆ ।
ಒಡಲ ಕಿ । ಚ್ಚಿನಲಿ । ಹೆಣಬೆಂತೋ ॥
(ಒಡಲ ಕಿ । ಚ್ಚಿನಲಿ । ಹೆಣಬೆಂತೋ ।) ದೇವರೆ ।
ಬಡವರಿಗೆ । ಸಾವ । ಕೊಡಬೇಡ ॥

(ಪ್ರಸ್ತಾರ)

ಮುರರಿಪು । ಶ್ರೀಪತಿ । ಪುರಮಥನಂ । ಕಂಸಾರಿ ।
ಸ್ಮರಪಿತಂ । ಸುರಪ । ಜಲಜಾಕ್ಷಂ ॥
(ಸ್ಮರಪಿತಂ । ಸುರಪ । ಜಲಜಾಕ್ಷಂ ।) ಶ್ರೀಪತಿ ।
ಮದನರಿಪು । ಧಾತೃ । ನರಕಾರಿ ॥

೪. ಹವೀಕರಲ್ಲಿ ರೂಢವಾಗಿರುವ ತೊಟ್ಟಿಲ ಹಾಡು (ಪುನರಾವೃತ್ತಿ ರಹಿತ).

(ಸಾಹಿತ್ಯ)

ಬಲ್ಲಾಳ । ಹಿತ್ತಿಲ । ಬಳ್ಳಿಯ । ಹೆಸರೇನು ।
ಬೆಳ್ಳಿಯ । ದಂಡೆ । ಬಿಡುನೀರ । ಹಿತ್ತಿಲ ।
ಬಲ್ಲಾಳು । ತಿಂಬ । ಬೆಳಿಯೆಲೆ ॥

(ಪ್ರಸ್ತಾರ)

ಕಂಸಾರಿ । ಶ್ರೀಪತಿ । ಶ್ರೀಪತಿ । ನರಕಾರಿ ।
ಶ್ರೀಪತಿ । ಧಾತೃ । ನರಕಾರಿ । ಶ್ರೀಪತಿ ।
ಕಂಸಾರಿ । ಧಾತೃ । ಮುರರಿಪು ॥

(ಸಾಹಿತ್ಯ)

ವಜ್ರದ | ಹರಳೆ ಬಾ | ಮುದ್ದು ಬಾ | ಮುಗುಳೆ ಬಾ |
೪ ೩ ೪ ೫
ಅಜ್ಜನ | ಕೊರಳ | ಪದಕವೆ | ಬಾರೆಂದು |
ಅಜ್ಜಿ ಮೊ | ಮ್ಮಗನ | ಕರೆದಳು ॥

(ಪ್ರಸ್ತಾರ)

ಶ್ರೀಪತಿ | ಸ್ಮರಪಿತಂ | ಮಾಧವಂ | ಸ್ಮರಪಿತಂ |
ಶ್ರೀಪತಿ | ಸುರಪ | ಮುರರಿಪು | ಕಂಸಾರಿ |
ಮಾಧವಂ | ಸುರಪ | ಮುರರಿಪು ॥*

ಹೀಗೆ ಯಾವ ತ್ರಿಪದಿಯನ್ನು ಪರೀಕ್ಷಿಸಿದರೂ—ಅದು ಪುರಾತನವಾಗಿರಲಿ ಅಲ್ಲದಿರಲಿ, ಗ್ರಂಥಸ್ಥವಾಗಿರಲಿ ಮುಖಸ್ಥವಾಗಿರಲಿ—ರಸದಶಸ್ಥಾನಗಳಲ್ಲಿ ಶುದ್ಧ ಬ್ರಹ್ಮಗಣಗಳು; ಎಲ್ಲ ಗಣಗಳೂ ತ್ರಿಮೂರ್ತಿಗಳೇ† ಮಾತ್ರಾಸಮತೆ ಎಲ್ಲಿ ಹುಡುಕಿದರೂ ಇಲ್ಲ.** ಆದುದರಿಂದ ಎಂದಿನಂತೆಯೇ ಇಂದೂ ತ್ರಿಪದಿ ತ್ರಿಮೂರ್ತಿ ಗಣಬದ್ಧವಾಗಿಯೇ ಇದೆಯೆಂದು ಹೇಳುವುದು ಯುಕ್ತವೂ ಯಥಾರ್ಥವೂ ಆಗಿದೆ.

---

*ತೊಟ್ಟಿಲ ಹಾಡುಗಳು ಹೆಚ್ಚಾಗಿ ಮೂಲ ತ್ರಿಪದಿಗೆ ಸರಿಯಾಗಿವೆ; (ಒಮ್ಮೊಮ್ಮೆ ರುದ್ರಗಣ ಕಾಣಿಸಿಕೊಳ್ಳುವುದುಂಟು, ಉದಾ:—ಬಡತನವೆ | ನೀಯೆನ್ನ | ಬಿಡದೆ ಬೆ | ನ್ನಟಿ ಬಂದೆ |
ಕಡುಕಷ್ಟ | ಗೊಳಿಸಿ | ದಣಿಸಿದೆ | ಹೊನ್ನುಳ್ಳ |
ಹೊಲೆಯಂಗೆ | ಕೈಯ | ಮುಗಿಸಿದೆ ॥
ಈ ಪದ್ಯದಲ್ಲಿ—ಬಡತನವೆ—ಎಂಬುದು 'ಮದನರಿಪು' ಎಂಬ ರುದ್ರಗಣವಾಗಿದೆ.) ಪ್ರತಿಯೊಂದು ಗಣಾಂತದಲ್ಲಿಯೂ ದೀರ್ಘಕಾಲ ವಿಶ್ರಾಂತಿಯಿಂದ ಇದನ್ನು ಹಾಡುವ ಕಾರಣ ತ್ರಿಪದಿಯು ಹಾಗೂ ತ್ರಿಮೂರ್ತಿಗಣಗಳ ಶುದ್ಧ ರೂಪವು ಈ ಈ ಹಾಡುಗಳಲ್ಲಿ ಅಚ್ಚಳಿಯದೆ ತೋರುತ್ತಿದೆ.

†ಮುದ್ರಿತವಾದ ಜನಪದ ಸಾಹಿತ್ಯ ಪುಸ್ತಕಗಳಲ್ಲಿ ಎಲ್ಲಿಯೋ ಒಂದೊಂದು ಗಣ ತ್ರಿಮೂರ್ತಿಗಣವಲ್ಲದ ಹಾಗೆ ಕಂಡು ಬರಬಹುದು. ಚೆನ್ನಾಗಿ ಪರೀಕ್ಷಿಸಿ ನೋಡಿದರೆ, ಅದು ಉಚ್ಚಾರದಲ್ಲಿ ಸರಿಹೊಂದತಕ್ಕ ಪ್ರಾದೇಶಿಕ ವೈಶಿಷ್ಟ್ಯವೋ, ಬಾಯಿಹಾಡು ಬರಹಕ್ಕೆ ಬರುವಾಗ ಉಂಟಾದ ಬದಲಾವಣೆಯೋ, ಅಥವಾ ಪಾಠದೋಷವೋ ಆಗಿದೆಯೆಂದು ತಿಳಿದು ಬಾರದಿರದು.

**ವಾಸ್ತವವಾಗಿ ನೋಡಿದರೆ, ಮೂಲ ತ್ರಿಪದಿಯ ಪ್ರಥಮ ಪಾದದಲ್ಲಿ ಕನಿಷ್ಠ ೧೬, ಗರಿಷ್ಠ ೨೪; ದ್ವಿತೀಯ ಪಾದದಲ್ಲಿ ಕನಿಷ್ಠ ೧೫, ಗರಿಷ್ಠ ೨೨; ತೃತೀಯ ಪಾದದಲ್ಲಿ ಕನಿಷ್ಠ ೧೧+೧, ಗರಿಷ್ಠ ೧೬ ಮಾತ್ರೆಗಳು ಇರಬಹುದಾಗಿದೆ. ವಿಷ್ಣು ಗಣಸ್ಥಾನಗಲ್ಲಿ ರುದ್ರಗಣಗಳನ್ನಿಡುವಾಗ ಮಾತ್ರಾಸಂಖ್ಯೆ ಇನ್ನೂ ಹೆಚ್ಚಾಗುವುದು. ಮಾತ್ರಾಸಂಖ್ಯೆಯಲ್ಲಿ ಇಷ್ಟು ಅನಿಶ್ಚಿತತೆ ಇರುವ ಬಂಧಕ್ಕೆ ಮಾತ್ರಾಗಣನೆಯಿಂದ ಲಕ್ಷಣ ಹೇಳತೊಡಗಿದರೆ, ಅದೆಂದಾದರೂ ಸಮಂಜಸವಾಗಿ ವ್ಯಗೂಡಬಹುದೆ?

ಪರಿಶಿಷ್ಟ ೧.

ತ್ರಿಮೂರ್ತಿಗಣಗಳು. (ಛಂದೋಂಬುಧಿ-ಪಂಚಮಾಧಿಕಾರ).

ಬ್ರಹ್ಮಗಣ—೪

1.	ಬ್ರಹ್ಮಂ	— —
2.	ದ್ರುಹಿಣಂ	⏑ ⏑ —
3.	ಧಾತೃ	— ⏑
4.	ಸುರಪ	⏑ ⏑ ⏑

ವಿಷ್ಣುಗಣ—೮

1.	ಗೋವಿಂದಂ	— — —
2.	ಜಲಜಾಕ್ಷಂ	⏑⏑ — —
3.	ಮಾಧವಂ	— ⏑ —
4.	ಸ್ಮರಪಿತಂ	⏑⏑ ⏑ —
5.	ಕಂಸಾರಿ	— — ⏑
6.	ನರಕಾರಿ	⏑⏑ — ⏑
7.	ಶ್ರೀಪತಿ	— ⏑ ⏑
8.	ಮುರರಿಪು	⏑⏑ ⏑ ⏑

ರುದ್ರಗಣ—೧೬

1.	ಗಂಗಾಧೀಶಂ	— — — —
2.	ಗಿರಿಜಾಕಾಂತಂ	⏑⏑ — — —
3.	ನೀಲಕಂಠಂ	— ⏑ — —
4.	ವೃಷಭಲಕ್ಷ್ಮಂ	⏑⏑⏑ — —
5.	ಕಾಮಾಂತಕಂ	— — ⏑ —
6.	ಪ್ರಮಥಾಧಿಪಂ	⏑⏑ — ⏑ —
7.	ಶೂಲಧರಂ	— ⏑ ⏑ —
8.	ಪುರಮಥನಂ	⏑⏑ ⏑ ⏑ —
9.	ಕಂದರ್ಪಾರಿ	— — — ⏑
10.	ಮದನಧ್ವಂಸಿ	⏑⏑ — — ⏑
11.	ಚಂದ್ರಮೌಳಿ	— ⏑ — ⏑
12.	ಭುಜಗಧಾರಿ	⏑⏑⏑ — ⏑
13.	ಭೂತಾಗ್ರಣಿ	— — ⏑⏑
14.	ತ್ರಿಜಗದ್ಗುರು	⏑⏑ — ⏑⏑
15.	ಕಾಮರಿಪು	— ⏑ ⏑ ⏑
16.	ಮದನರಿಪು	⏑ ⏑ ⏑ ⏑ ⏑

ಪರಿಶಿಷ್ಟ—೨.

ಈ ಬರವಣಿಗೆಗೆ ಒದಗಿದ ಗ್ರಂಥಸಾಹಾಯ್ಯ.

೧. ನಾಗವರ್ಮನ ಛಂದೋಂಬುಧಿ.
೨. ಸರ್ವಜ್ಞ ವಚನಗಳು (ಉತ್ತಂಗಿ–೧೯೨೪).
೩. ಸರ್ವಜ್ಞ ವಚನಗಳ ಜನಪದಾವೃತ್ತಿ (೧೯೩೫).
೪. ಕನ್ನಡ ಕೈಪಿಡಿ (೧೯೨೭).
೫. ಕನ್ನಡ ಕೈಪಿಡಿ–ದ್ವಿತೀಯ ಮುದ್ರಣ (೧೯೩೬).
೬. ಷಡಕ್ಷರಿಯ ರಾಜಶೇಖರ ವಿಳಾಸ.
೭. ಸೋಮರಾಜನ ಉದ್ಭಟಕಾವ್ಯ
೮. ನೇಮಿಚಂದ್ರನ ಲೀಲಾವತಿ.
೯. ಪಂಪನ ಆದಿಪುರಾಣ.
೧೦. ಪೊನ್ನನ ಶಾಂತಿಪುರಾಣ.
೧೧. ಶಾಸನ ಪದ್ಯಮಂಜರಿ.
೧೨. ಗರತಿಯ ಹಾಡು.
೧೩. ನಮ್ಮ ಊರಿನ ರಸಿಕರು.
೧೪. ಸಾಹಿತ್ಯಪರಿಷತ್ ಪತ್ರಿಕೆ–೧೯೩೩
ಇತ್ಯಾದಿ.



ಕನ್ನಡದಲ್ಲಿ ಪ್ರಬಂಧ ವ್ಯವಸಾಯ

ಶ್ರೀ ಕಡೆಂಗೋಡ್ಲು ಶಂಕರ ಭಟ್ಟ, ಮಂಗಳೂರು.

ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ವ್ಯವಸಾಯವು ಹೇಗೆ ನಡೆದಿದೆ? ಎಂಬುದನ್ನು ಪರಾಮರ್ಶಿಸುವುದು ಈ ಲೇಖನದ ಉದ್ದೇಶವಾಗಿದೆ. ವಿಷಯದ ಕಡೆಗೆ ಅಭಿಯೋಗವಾಗುವ ಮುಂಚೆ ಈ ಶಬ್ದದ ಮಥಿತಾರ್ಥವೇನೆಂಬುದನ್ನು ವಿಚಾರಿಸುವುದು ಸೂಕ್ತವಾಗಿದೆ. ಆಂಗ್ಲ ಭಾಷೆಯುಲ್ಲಿರುವ 'Essay' ಎಂಬ ಪದದ ಪರ್ಯಾಯವಾಗಿ ನಾವಿಂದು ಪ್ರಬಂಧ ಪದವನ್ನು ಪ್ರಯೋಗಿಸುತ್ತೇವೆ. ಇಂಗ್ಲೀಷಿನಲ್ಲಿ 'Essay' ಎಂದರೆ ಯತ್ನಿಸು Attempt) ಎಂದರ್ಥ. ಪ್ರಕರಣಬಲದಿಂದ ಅದಕ್ಕೆ ಏಕವಿಷಯನಿಬದ್ಧವಾದ ಲೇಖನ ಎಂಬ ಅಭಿಪ್ರಾಯ ಬಂದಿದೆ. ಪ್ರಬಂಧ ಎಂದರೆ ಕಟ್ಟು; ವಿಷಯುಗಳ ಬಂಧ; ಅಥವಾ "ಅನುಜ್ಝಿತಾರ್ಥ ಸಂಬಂಧಃ ಪ್ರಬಂಧಃ". ಈ ಲಕ್ಷಣದಂತೆ ಪರಿವಿಡಿಯೂ ಹೊಂದಿಕೆಯೂ ಕೆಡದಂತೆ ಅಭಿಪ್ರಾಯಗಳನ್ನು ಮಂಡಿಸುವುದು ಪ್ರಬಂಧವೆನಿಸುತ್ತದೆ. ವಸ್ತು ಪ್ರಸಿದ್ಧವಾಗಿರಬಹುದು; ಕಲ್ಪಿತವಾಗಿರಬಹುದು. ಭಾಷೆ ಗದ್ಯ-ಪದ್ಯ-ಚಂಪೂ ಎಂಬ ಯಾವ ರೂಪದಲ್ಲಿಯೂ ಇರಬಹುದು. ಗಾತ್ರಕ್ಕೂ ಮಿತಿಯೆಂಬುದಿಲ್ಲ. ಕಾದಂಬರಿ, ಹರ್ಷಚರಿತ, ಆದಿಪುರಾಣ, ಲೀಲಾವತಿ, ಜಗನ್ನಾಥ ವಿಜಯ, ಜೈಮಿನಿ . . . . ಎಲ್ಲವೂ ಪ್ರಬಂಧಗಳೆ. ಕೊನೆಗೆ ಯಕ್ಷಗಾನವೂ ಪ್ರಬಂಧ! ಎಂದರೆ ಪ್ರಬಂಧ ಶಬ್ದವು ವಿಶೇಷಾರ್ಥಕವಾಗಿಲ್ಲ; ಸಾಮಾನ್ಯಾರ್ಥಕವಾಗಿದೆ. ಅದರ ಯೌಗಿಕಾರ್ಥವೇನಿದ್ದರೂ ಪ್ರಯೋಗದಿಂದ ಅರ್ಥಚ್ಛಾಯೆ ಬದಲಾಗುತ್ತಾ ಬಂದು ಇಂಗ್ಲೀಷ್ ಪದದ ಅಭಿಪ್ರಾಯಕ್ಕೆ ಸಮೀಪಗತವಾಗಿದೆ. ಹೀಗಾಗಿ ಇಂದು ಸಾಧಾರಣವಾಗಿ 'ಪ್ರಬಂಧ' ಎಂದರೆ ಅರ್ಥವಿಕಲ್ಪವಾಗುವುದಿಲ್ಲ. ಒಂದೇ ಒಂದು ಅರ್ಥವಾಗುತ್ತದೆ; 'Essay' ಎಂದರೇನೋ ಅದೇ ಇದು!

ಆಂಗ್ಲ ಭಾಷೆಯಲ್ಲಿಯೂ ಪ್ರಬಂಧ ಪದಕ್ಕೆ ಪರ್ಯಾಪ್ತ ಲಕ್ಷಣಗಳನ್ನು ಕೊಟ್ಟವರಿಲ್ಲ. ಕೊಟ್ಟ ಲಕ್ಷಣಗಳಲ್ಲಿ ಪರಸ್ಪರ ವಿಸಂವಾದ ಇಲ್ಲದೆಯೂ ಇಲ್ಲ. ಪ್ರಬಂಧ ಎಂದರೆ ಮನಸ್ಸಿನ ಒಂದು ಅಲೆದಾಟ; ಅಸಕ್ತ ವಿಷಯುಗಳ ಪಿಂಡ. (Johnson): ಅದೊಂದು ಬಗೆಯ ಆತ್ಮಚಿತ್ರಣ (It is myself I portray —Montaigue). ನಿಯಮ ನಿಬಂಧನೆಯಿಲ್ಲದೆ ಶಿಥಿಲ ಶಿಥಿಲವಾಗಿ ಸೂಸುವ ಅಭಿಪ್ರಾಯಗಳ ಮೊತ್ತ. ಸಜ್ಜನಿಕೆಗೆ ಅದರ ಸ್ವಭಾವನ್ನೂ ನಿಕೃತಿಗೆ ಅದರ ಪ್ರತಿಬಿಂಬವನ್ನೂ—ಹೆಚ್ಚೇನು? ಕಾಲಪುರುಷನಿಗೆ ತನ್ನ ಆಕಾರ ವಿಕಾರಗಳನ್ನೂ—ಎತ್ತಿ ತೋರಿಸಿಕೊಡುವ ಕೃತಿಯುದು. ಇಂತಹ ಅಭಿಪ್ರಾಯ ಸಂಕಲನಗಳಿಂದ ಪ್ರಬಂಧದ ಸ್ವರೂಪವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಬೇಕಷ್ಟೆ- ಪ್ರಬಂಧವು ಏಕವಿಷಯ ನಿಬದ್ಧವಾಗಿರಬೇಕು. ನಿರ್ವಹಣಕ್ರಮದಲ್ಲಿ ಗಹನತೆಯಿರಬಾರದು; ತತ್ವವಿಮಾಂಸೆಗಳಿರಬಾರದು. ಅದೇ ವೇಳೆಯಲ್ಲಿ ವಿಷಯವು ಇಂತಹದೇ ಆಗಿರಬೇಕೆಂಬ ನಿರ್ಬಂಧವಿಲ್ಲ. "ಕಸಬರಿಗೆ" ಯಿಂದ "ಅನಂತ"ದ ವರೆಗಣ ಯಾವುದೂ ಅದರ ವ್ಯಾಪ್ತಿಗೆ ಬಾಹಿರವಾಗಿಲ್ಲ. ಸಂಪೂರ್ಣತೆಯಿರಬೇಕೆ? ಅದೂ ಇಲ್ಲ. ನೀತಿಬೋಧನೆ ಇರಬೇಕೇ? ಅದೂ ಇಲ್ಲ. ಸರಳತೆ, ಮೃದುಪರಾಮರ್ಶೆ, ಅಭಿಮುಖೀಕರಣ ಶಕ್ತಿ,—ಇವೇ ಪ್ರಬಂಧದ ಮುಖ್ಯ ಗುಣಗಳಾಗಿ, ಗ್ರಹಿಸಲ್ಪಟ್ಟಿವೆ. ಇದರಲ್ಲಿ ವಿಷಯಕ್ಕಿಂತ ನಿರೂಪಣವಿಧಾನಕ್ಕೆ ಪ್ರಾಶಸ್ತ್ಯ ಹೆಚ್ಚು; ಅಭಿಪ್ರಾಯ ಬಂಧುರತೆಗಿಂತ ದ್ಯೋತನರೀತಿ ಚಮತ್ಕಾರಕ್ಕೆ ಹೆಚ್ಚಿನ ಮಹತ್ವ. ಸರಳವಕ್ರೋಕ್ತಿಗಳಿಂದ, ವ್ಯಂಗ್ಯವಿಡಂಬನೆಗಳಿಂದ, ಸ್ತುತಿನಿಂದೆಗಳಿಂದ ಲೇಖಕನು ತನ್ನ 'ಕಾಣ್ಕೆ'ಯನ್ನು ಅನ್ಯರಿಗೆ ಕಾಣಿಸುತ್ತಾನೆ. ಹೀಗೆ ಕಾಣಿಸುವಾಗ ಅವನ ಅಂತರಂಗವೂ ಒಂದಿಷ್ಟು ದ್ಯೋತಿತವಾಗುತ್ತದೆ. ಯಾವ ಕೊಂಕು ಕೋರೆ ನೊಟಗಳಿಂದ ಅವನು ನೋಡಿದ್ದಾನೆ? ಆಗ ಅವನ ಮನೋವೃತ್ತಿ ಹೇಗಿತ್ತು? ಧ್ಯಾನ-ಭಾವಗಳು ಏನಾಗಿದ್ದುವು? ಜೀವನಾನುಭವಗಳ ಯಾವ ಪಾರ್ಶ್ವಗಳನ್ನು ಹೇಗೆ ಚಿತ್ರಿಸಿದ್ದಾನೆ? ಅಬದ್ಧವೋ ಸುಬದ್ಧವೋ ಎಂಬ ಸಂದೇಹಕ್ಕೆಡೆಗೊಡುವ ಅವನ ವಚನಭಂಗಿಯೊಳಗೆ ಹುದುಗಿರುವ ಹುರುಳೇನು? ಎಂಬುದನ್ನು ಪ್ರಬಂಧವು

ತೋರಿಸಿಕೊಡಬೇಕು. ಬೇರೆ ಬಗೆಯ ಬರಹಗಳಲ್ಲಿ ಇಲ್ಲದಂತಹ ಆತ್ಮೀಯತಾಮುದ್ರೆ ಸ್ಫುಟವಾಗಿ ಅಂಚಿತವಾಗಿರಬೇಕು; ಗದ್ಯದಲ್ಲಿ ಬರೆಯಲ್ಪಟ್ಟಿರಬೇಕು; ಇಷ್ಟು ವಿವರಣಗಳಿಂದ ನಾವೀ ಜಿಜ್ಞಾಸೆಯನ್ನು ಹಾಗೆಯೇ ಬಿಡಬೇಕಾಗುತ್ತದೆ.

ಪ್ರಬಂಧಗಳು ಎಂದು ಹುಟ್ಟಿದುವು? ಹೇಗೆ ಬೆಳೆದುವು? ಎಂಬುದೂ ಚರ್ಚಾಬಾಹಿರವಾಗಿಲ್ಲ. ಹದಿನಾರನೆಯ ಶತಮಾನದ ಫ್ರೆಂಚ್ ಲೇಖಕನೊಬ್ಬನು (Montaigue) ಈ ಬಗೆಯ ಬರವಣಿಗೆಯ ಪ್ರವರ್ತಕನು; ಅವನ ಸಂಪ್ರದಾಯವು ಇಂಗ್ಲೆಂಡಿಗೆ ಹರಡಿತು; ಯುರೋಪಿನಲ್ಲಿ ಸಂಕ್ರಮಿಸಿತು; ಈ ಮಹಾನುಭಾವನು ಅವತರಿಸದಿರುತ್ತಿದ್ದರೆ, ಪ್ರಪಂಚದ ಗದ್ಯಸಾಹಿತ್ಯದಲ್ಲಿಂದು ಮಾನಿತಸ್ಥಾನವನ್ನು ಪಡೆದ ಪ್ರಬಂಧಕ್ಕೆ ಜಾಯಮಾನವೇ ಆಗುತ್ತಿರಲಿಲ್ಲ; ಎಂದು ಹೇಳುವವರ ಪಕ್ಷವೊಂದು. ಹಾಗೇನೂ ಅಲ್ಲ, ಆ ಶಬ್ದವು ಹೊಸತು; ವಿಷಯವು ಮಾತ್ರ ಅತಿ ಪ್ರಾಚೀನವಾದುದು. (The word essay is late; but the thing is ancient—Bacon) ಮನುಷ್ಯನ ಸಾಮಾನ್ಯಾನುಭವವು ಪಿಂಡೀಭೂತವಾಗಿ ಚಿಕ್ಕ ಪದಗಳಲ್ಲಿಯೋ ನುಡಿಗಟ್ಟುಗಳಲ್ಲಿಯೋ ಗಾದೆಗಳಲ್ಲಿಯೋ ಹೊರಸೂಸುತ್ತದೆ; ಮೊತ್ತಮೊದಲು ಸೂತ್ರಪ್ರಾಯವಾಗಿರುತ್ತದೆ. ವೃತ್ತಿ–ವ್ಯಾಖ್ಯಾನಸಾಪೇಕ್ಷತೆಯಿಂದ ಮತ್ತದು ಬೆಳೆಯುತ್ತದೆ. ಇದೇ ಇಂದಿನ ರೂಪವಿಸ್ತರವಿರುವ ಪ್ರಬಂಧದ ಮೂಲಧಾತು ಎಂದು ಹೇಳುವ ಇನ್ನೊಂದು ಪಂಗಡವಿದೆ. ಇಂತಹ ಖಂಡಪ್ರಬಂಧಗಳು ಪ್ರಾಚೀನಸಾಹಿತ್ಯದಲ್ಲಿ ಸಂಕೀರ್ಣವಾಗಿ ಸೇರಿಕೊಂಡಿವೆ. ಉಪನಿಷತ್ಪುರಾಣಗಳು, ಕಥಾಖ್ಯಾಯಿಕೆಗಳು, ಕಾವ್ಯನಾಟಕಗಳು...ಹೀಗೆ ಆಕಾರಗಳು ಹಲವಿವೆ; ಆದುದರಿಂದ ಪ್ರಬಂಧದ ನವೀನತೆಯನ್ನು ಒಪ್ಪುವುದು ಕಷ್ಟ. ಪ್ರಪಂಚದಲ್ಲಿ ಯಾವುದೂ ಸಂಪೂರ್ಣವಾಗಿ ಹೊಸತಾಗಿರುವುದಿಲ್ಲ. ಅದರ ಸಂಶೋಧನೆ ಮಾತ್ರ ಹೊಸತು. ಕುರುಡನಿಗೂ ಇತರರಂತೆ ಒಡಲಿದೆ. ಅದನ್ನವನು ಕಂಡಿಲ್ಲ ಎನ್ನುವುದರಿಂದ ಅದಿಲ್ಲ ಎನ್ನುವುದು ಸರಿಯೆ? ಒಂದು ವೇಳೆ ಅವನಿಗೆ ಆಕಸ್ಮಿಕವಾಗಿ ದೃಷ್ಟಿ ಲಭಿಸಿದರೆ ಅದುವರೆಗೆ ಇಲ್ಲದುದು ಮತ್ತವನ ಗೋಚರಕ್ಕೆ ಬರುತ್ತದೆ. ಈ ಗೋಚರದಲ್ಲಿ ನವೀನತೆಯಲ್ಲದೆ ಪದಾರ್ಥದಲ್ಲಿ ಅಲ್ಲ. ಹಾಗೆಯೇ ಪ್ರಬಂಧದ ನಷ್ಟಜಾತಕವನ್ನು ನಿರ್ಮಿಸುವವರು ಅದರ ಉತ್ಪತ್ತಿಕಾಲವನ್ನು ಹದಿನಾರನೆಯ ಶತಮಾನಕ್ಕೆ ಕಟ್ಟಿಹಾಕುವುದು ಅಸಮಂಜಸವಾಗುತ್ತದೆ. ಹೀಗಿದ್ದರೂ ರೂಢಿಯಲ್ಲಿ ೧೬ನೆಯ ಶತಮಾನವನ್ನೆ ಉತ್ಪತ್ತಿಕಾಲ ಎನ್ನುತ್ತಾರೆ. ಇಂಗ್ಲಿಷ್ ಪ್ರಬಂಧಗಳು ಹದಿನೇಳನೆಯ ಶತಮಾನದಲ್ಲಿ ಮೊಳೆತುವೆಂದು ಹೇಳುತ್ತಾರೆ. ಮತ್ತೆರಡು ಶತಮಾನಗಳ ಅನಂತರ ಕನ್ನಡದಲ್ಲಿ, ಸ್ಪಷ್ಟ ರೂಪರೇಖೆಗಳುಳ್ಳ ಪ್ರಬಂಧಗಳು ಚಿಗುರೊಡೆದುವೆಂದು ಹೇಳಬಹುದು.

ಲೇಖಕನ ಕೆರಳಿದ ಬುದ್ಧಿಯಿಂದ ಏನೆಲ್ಲ ಸಿಡಿಯಬಹುದು? ನುರಿತ ಲೇಖನಿಯು ಯಾವ ಭಾವಗಳನ್ನು ಒಸರಿಸಬಹುದು? ಎಂದೂಹಿಸುವುದು ಅಸಾಧ್ಯ. "ಕಲ್ಲಲ್ಲಿ ನಾರೆತ್ತುವರ್; ಮರುಳಂ ಪೋಪುರುಳಾಗಿಪರ್" ಎಂಬ ಮಾತು ಪ್ರಬಂಧ ಕರ್ತೃಗಳಲ್ಲಿ ಅಕ್ಷರಶಃ ಸತ್ಯವಾಗಿದೆ. ಚೀನ ದೇಶಿಯನೊಬ್ಬ (Yuan Mei) ಭೋಜನಕಲೆಯ ಕುರಿತು ಪ್ರಬಂಧ ಬರೆದಿದ್ದಾನೆ. ಟಾಲ್ಸ್ಟಾಯಿ ಮರುಳನ ಟಿಪ್ಪಣಿಗಳನ್ನು ಕುರಿತು ಲಿಖಿಸಿದ್ದಾನೆ. ಜೊನಾಥನ್ ಸ್ವಿಫ್ಟ್ (Jonathan Swift) ಎಂಬ ಆಂಗ್ಲ ಪ್ರಬಂಧಕಾರನಿಗೆ 'ಕಸಬರಿಗೆಯ ಧ್ಯಾನವು' ಮನೋಜ್ಞವಾದ ಊಹಾಮೋಹಗಳಿಗೆ ಎಡೆಕೊಟ್ಟಿತು. ಧರ್ಮ, ದೇವರು, ರಾಜ್ಯಶಾಸನ, ಜೀವನ ಶುಚಿತ್ವ, ಸಭ್ಯಸಂಪ್ರದಾಯ, ಬದುಕು, ಸಾವು, ಆತ್ಮೋದ್ಧಾರ, ಆತ್ಮಹತ್ಯೆ, ರಾಜಕಿರೀಟ, ಬಕ್ಕತಲೆ, ಹರುಕು ಮುಂಡಾಸು, ನಾಯಿ, ಬೆಕ್ಕು, ಹೂದೋಟ, ಸಾಹಿತ್ಯವಿಮರ್ಶೆ, ಇತಿಹಾಸಪರಾಮರ್ಶೆ, ಸಂಗೀತ, ಚಿತ್ರಕಲೆ, ವಿಜ್ಞಾನ....ಇನ್ನೆಷ್ಟೋ ವಿಷಯಗಳು ಪ್ರಬಂಧ ವಸ್ತುಗಳಾಗಿವೆ. ಲೇಖಕನಿಗೆ ಕಾಣುವ ಕಣ್ಣಿರಬೇಕು; ಭಾವತತ್ಪರತೆಯಿರಬೇಕು; ಇಷ್ಟಿದ್ದರೆ ಸಾಕು. ರೇಶ್ಮೆ ಹುಳುವಿನ ಸುತ್ತಲೂ ಗೂಡು ಬಳಸುವಂತೆ ಪ್ರಬಂಧವು ಬೆಳೆಯುತ್ತದೆ; ಎಂದೊಬ್ಬ ವಿಮರ್ಶಕನು ಹೇಳಿದ್ದಾನೆ. ಈ ಮಾತು ಯಥಾರ್ಥ. ಬೆಳೆಯುವ ರೀತಿ ಮಾತ್ರ ವಿವಿಧವಾಗಿರುತ್ತದೆ. ಏನಿದ್ದರೂ ಪ್ರಬಂಧದ ಗುರಿ ವಿಮರ್ಶೆಯಾಗಿದೆ; ಅದು ವಿಧಿ ನಿಷೇಧಾತ್ಮಕವಾಗಿರುವುದಿಲ್ಲ. ಪರಿಣಾಮದಲ್ಲಿ ಒಂದು ಬಗೆಯ ಸಂಸ್ಕಾರವನ್ನು ಕೊಟ್ಟು ಹೃದಯದ ಕಾಳಿಕೆಯನ್ನು ಕಳೆದು ಹಾಕುವ ಶಕ್ತಿಯುಳ್ಳುದಾಗಿದೆ. ವಿಷಯೇಂದ್ರಿಯಗಳನ್ನು ಕೆಣಕುವ ನೂರಾರು ರಸ–ಭಾವ-ವಿಭಾವಗಳಿವೆ. ಇವುಗಳಿಂದ ಎಲ್ಲರೂ ಒಂದೇ ಬಗೆಯ ಅನುಭವವನ್ನು ಪಡೆಯುವುದಿಲ್ಲ. ಲೇಖಕನ ಲೇಖನ ಭಂಗಿಯು ಬುದ್ಧಿಯನ್ನು ಕೆಳಗೆ ಒಂದೊಂದು

ಪ್ರವೃತ್ತಿಯಿಂದ ಒಂದೊಂದು ಅವಲೋಕನವನ್ನೂ ಅನುಭವವನ್ನೂ ಹೊಂದಿಸಿಕೊಡುವಾಗ ವಾಚಕನ ಬುದ್ಧಿ ಹೃದಯಗಳಲ್ಲಿ ಒಂದು ಬಗೆಯ ಪಾಕವಾಗುವುದು. ಲೇಖನವು ರಮ್ಯವಾಗಿರುವುದರಿಂದ ವಾಚಕನ ಬುದ್ಧಿ ಹೃದಯಗಳನ್ನು ಲೇಖಕನ ಅಂತರಾತ್ಮದ ಕಡೆಗೆ ಆಕರ್ಷಿಸಿ ಕೊಂಡುಹೋಗುವುದು; ಹೀಗಿರುವುದರಿಂದಲೇ ಅದರ ಸಾರ್ಥಕತೆ.

ಪ್ರಬಂಧಗಳಲ್ಲಿ ರೂಪಭೇದಗಳಿರುವುದೂ ಸಹಜ. ಗುರು ಶಿಷ್ಯನನ್ನು ಒಂದು ಬಗೆಯ ಅನುಶೀಲನವಿಧಾನದಿಂದ ಉಪದೇಶಿಸುತ್ತಾನೆ. ಮಿತ್ರನು ಮಿತ್ರನೊಡನೆ ಸಲ್ಲಾಪಿಸುವ ರೀತಿ ಬೇರೆ. ಇಪ್ಪತ್ತನಾಲ್ಕು ಸಾವಿರ ಸುತ್ತಳತೆಯುಳ್ಳ ಭೂಗೋಲವನ್ನು ಚಿಕ್ಕ ನಿಂಬೆ ಹಣ್ಣಿನ ಗಾತ್ರದ ವೃತ್ತದಲ್ಲಿ ತೋರಿಸುವ ಚಿತ್ರಣ ಪರಿಪಾಟಿ ಬೇರೆ. ಸೊಳ್ಳೆಗೆ ಭೂತಕನ್ನಡಿ ಹಿಡಿದು ಹಾರುವ ಕೋಟೆಯಂತಹ ರಾಕ್ಷಸ ವಿಮಾನ ರೂಪದಲ್ಲಿ ಕಾಣಿಸುವ ವಿಧಾನ ಇನ್ನೊಂದು. ನಿದ್ರಿಸುವವನನ್ನು ಚಿವುಟಿ ಎಬ್ಬಿಸಬಹುದು; ತುದಿಬೆರಳಿನಿಂದ ಕಿಕ್ಕಿಲಿಮಾಡಿಯೂ ಎಚ್ಚರಿಸಬಹುದು. ನಾವು ನಕ್ಕು ಇತರರನ್ನು ನಗಿಸಬಹುದು. ಅಣಕಿಸಿಯೂ ನಗಿಸಬಹುದು; ಅತ್ತೂ ನಗಿಸಬಹುದು. ಲೇಖಕನು ಎಲ್ಲ ವಿಧಿಗಳನ್ನೂ ಪ್ರಯೋಗದಲ್ಲಿ ತರುತ್ತಾನೆ; ಉದ್ದಿಷ್ಟ ಪರಿಣಾಮಗಳನ್ನು ಮಾಡಿಸಿಯೇ ಬಿಡುತ್ತಾನೆ. ಅನುಕ್ರಿಯೆ ಏನಾಗಬೇಕು? ಅದಕ್ಕೆ ಎಂತಹ ಪದಪಾಕ ಅವಶ್ಯ? ಎಂಬುದನ್ನು ತಿಳಿದು ನಿರ್ಧರಿಸುವುದು ಲೇಖಕನ ಪ್ರತಿಭೆಯನ್ನು ಹೊಂದಿಕೊಂಡಿದೆ. ಪ್ರತಿಭೆಗೆ ತಕ್ಕಂತೆ ಅವನ "ಕೈಗುಣ;" ಅವನ ಇಷ್ಟಸಿದ್ಧಿ. ಆದುದರಿಂದಲೇ ಕೆಲವು ಪ್ರಬಂಧಗಳು ಸ್ವಲ್ಪ ಗಂಭೀರಗತಿಯಲ್ಲಿ ಸಾಗಿ ವಿಷಯ ಸ್ಪಷ್ಟೀಕರಣವನ್ನೆ ಮುಖ್ಯೋದ್ದೇಶವಾಗಿ ಇಟ್ಟುಕೊಂಡಿವೆ. ಸಾಹಿತ್ಯ–ವಿಜ್ಞಾನ–ಕಲಾದಿಗಳ ವಿಮರ್ಶೆಗಳು ಈ ರೀತಿಯವು. ಕೆಲವಕ್ಕೆ ಲಘು ಮನೋವೃತ್ತಿಯೇ ಉದ್ಗಮಭೂಮಿ. ಇಂತಹ ಲೇಖನಗಳಲ್ಲಿ ಅಭಿಪ್ರಾಯಗಳ ಮಂಡನವಿಲ್ಲ. 'ವಿಕರಣ'ವಿರುತ್ತದೆ. ಏನೋ ದೃಷ್ಟಿಯಿಂದ ಯಾವುದೋ ಭಂಗಿಯಿಂದ, ಉಲ್ಲಸಿತ ಮನೋವೃತ್ತಿ ಲಾಸ್ಯವಾಡುತ್ತದೆ. ಅವುಗಳ ಮರ್ಮ ಗೂಢಾರ್ಥಗಳನ್ನು ತಿಳಿಯಲು ಶಕ್ತಿ ಬೇಕು; ಅಭಿಮುಖತೆ ಬೇಕು. ಇಂತಹ ಲೇಖನಗಳು ಸಕ್ಕರೆ ಲೆಪ್ಪದ ತಿಕ್ತಮಾತ್ರೆಗಳಂತೆ ಆಪಾಕ ಮಧುರವಾಗಿದ್ದು ಜಗಿದಂತೆ ಕಹಿಯಾಗುವುದುಂಟು; ಅಥವಾ ದ್ರಾಕ್ಷೆಪಾಕದಂತೆ ಸಮಗ್ರ ಮಾಧುರ್ಯವನ್ನು ಹೊಂದಿರುವುದೂ ಉಂಟು. ಧ್ವನಿ, ವಕ್ರೋಕ್ತಿ, ವಿಡಂಬನೆ ಮೊದಲಾದುವುಗಳಿಂದ ನಾನಾ ರಸಪಾಕಗಳನ್ನು ಅಡುವುದು ಸಾಧ್ಯ. ಪ್ರಬಂಧದ ಪ್ರಕಾರವೇನಿದ್ದರೂ ಸ್ಥೂಲ ದೃಷ್ಟಿಗೆ—ಅಥವಾ ಸೂಕ್ಷ್ಮದೃಷ್ಟಿಗೆ, ಲೇಖಕನ ಆಶಯವು ಪ್ರಕಟಹೊಂದಬೇಕು. ಅವನ ವೈಯಕ್ತಿಕ ಪೌರುಷದ ಅಚ್ಚು ಲೇಖನದ ಮೇಲೆ ಒತ್ತಿರಬೇಕು.

ಕನ್ನಡ ಸಾಹಿತ್ಯದಲ್ಲಿ ಪ್ರಬಂಧಗಳ ಆವಿಷ್ಕರಣವೆಂದು? ಅಥವಾ ಪ್ರಬಂಧವೆನಿಸಲು ಅರ್ಹವಾದ ಬರಿಹಗಳಾದರೂ ಇದ್ದುವೆ? ಎಂಬ ಪ್ರಶ್ನೆಗೆ ಹಿಂದೆಯೇ ಒಂದು ರೀತಿಯ ಉತ್ತರ ಕೊಡಲಾಗಿದೆ. ವಿಶಿಷ್ಟ ಲಕ್ಷಣವುಳ್ಳ, ಕಲಾಪ್ರಪೂರ್ಣವಾದ, ಗದ್ಯಾತ್ಮಕ ಪ್ರಬಂಧಗಳ ಬೆಳವಣಿಗೆಯು ನಮ್ಮ ಭಾಷೆಯಲ್ಲಿ ಮಾತ್ರವಲ್ಲ; ಪ್ರಪಂಚ ಸಾಹಿತ್ಯದಲ್ಲಿಯೂ ಇತ್ತೀಚೆಗೆ ಆದುವೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಪ್ರಬಂಧದ ಮೂಲಧಾತು ಹಿಂದಿನಿಂದಲೇ ನಮ್ಮ ಸಾಹಿತ್ಯ ಖನಿಯಲ್ಲಿ ಒಡೆದು ಮೂಡಿ ಬಂದಿತ್ತು. ಈ ಬಂಧಗಳ ಬಹ್ವಂಶ ಪದ್ಯಮಯವಾಗಿದ್ದಿತೆಂಬುದರಲ್ಲಿ ಸೋಜಿಗವಿಲ್ಲ. ಹದಿನೆಂಟನೆಯ ಶತಮಾನದ ಪ್ರಥಮ ಪಾದದಲ್ಲಿ ಅಲೆಕ್ಸಾಂಡರ್ ಪೋಪ್ (Alexander Pope) ಎಂಬ ಆಂಗ್ಲ ಕವಿ ವಿಮರ್ಶ ವಿಷಯಾತ್ಮಕ ಪ್ರಬಂಧವನ್ನು ಪದ್ಯದಲ್ಲಿಯೇ ಬರೆದಿದ್ದಾನೆ. ನಮ್ಮ ಕವಿಗಳು ಕಾವ್ಯ ಪುರಾಣಗಳ ಪೀಠಿಕಾಸಂಧಿಗಳಲ್ಲಿ ಎಷ್ಟು ಸೂಕ್ಷ್ಮವಾಗಿ ಸಾಹಿತ್ಯ ವಿಮರ್ಶೆಯನ್ನು ಮಾಡಲಿಲ್ಲ? ಆಂಗ್ಲ ಕವಿ ಹದಿನೆಂಟನೆಯ ಶತಮಾನದಲ್ಲಿ ಮಾಡಿದ ಕೆಲಸವನ್ನು ನಮ್ಮ ಕವಿ ವಿಮರ್ಶಕರು ಎಷ್ಟೋ ಶತಮಾನಗಳ ಹಿಂದೆ ಕೈಗೂಡಿಸುವುದಕ್ಕೆ ಯತ್ನಿಸಿದರೆಂಬುದು ಸಂತೋಷಾಸ್ಪದವಲ್ಲವೆ? ಸಾಹಿತ್ಯ ಮಾತ್ರವಲ್ಲ; ಐಹಿಕ-ಆಮುಷ್ಮಿಕ ಶ್ರೇಯಸ್ಸು, ಧರ್ಮಕರ್ಮಗಳು, ಸಂಪ್ರದಾಯಗಳು, ಜನರ ನಡೆವಳಿ, ನುಡಿವಳಿ, ಕಲಾಕೌಶಲ.... ಇವೆಲ್ಲ ನಮ್ಮ ಪ್ರಾಚೀನ ಕಾವ್ಯಗಳಲ್ಲಿ ವಿಮರ್ಶಿತವಾಗಿವೆ. ಒಂಬತ್ತನೆಯ ಶತಮಾನದ ನೃಪತುಂಗದೇವನ ಕವಿಜನತಾರತಮ್ಯ, ಸುಕವಿಕಾವ್ಯ ಪ್ರಶಂಸೆ, ಕಾವ್ಯ ಪ್ರಯೋಜನ, ಆದಿಪಂಪನ ಸುಕಾವ್ಯ ಸ್ತುತಿ, ಅದೇ ರೀತಿಯಲ್ಲಿ ಮತ್ತಿನ ಕವಿಗಳ ಸತ್ಕಾವ್ಯ–ಸಜ್ಜನಸ್ತವಗಳು, ದುಷ್ಕಾವ್ಯ ದುರ್ಜನಗರ್ಹಣಗಳು ಮೊದಲಾದುವನ್ನು ಚುಟುಕು ಪ್ರಬಂಧಗಳಾಗಿ ಲಕ್ಷಿಸಬಹುದು. ಪ್ರಸಂಗವಶಾತ್ ಬರುತ್ತಿದ್ದ ಅಷ್ಟು ದಶ

ವರ್ಣನೆಗಳಲ್ಲಿ ವರ್ಣಕ ಪ್ರಬಂಧ ಶರೀರದ ಮಜ್ಜಾಮಾಂಸಗಳ ಮೂಲರೂಪವನ್ನು ಗುರುತಿಸಬಹುದು. ಶಿವಶರಣರ ವಚನದಲ್ಲಿ ಏಕ ವಿಷಯ ಪರಿಮಿತವಾದ ಖಂಡನ ಮಂಡನಗಳು ಹಲವಿವೆ. ಇವೆಲ್ಲ ಇಂದಿನ ಗದ್ಯ ಪ್ರಬಂಧಗಳ ತಾಯಿಬೇರುಗಳು. ಸರ್ವಜ್ಞ ಕವಿಯ ಕೆಳಗಿನ ತ್ರಿಪದಿಗಳನ್ನು ಅವಲೋಕಿಸಿರಿ.

ಮುಟ್ಟಿ ಶ್ರೀಗಂಧವನು ಇಟ್ಟು ತಾ ನೊಸಲೊಳಗೆ
ನೆಟ್ಟನೆಯೆ ಸ್ವರ್ಗ-ಪಡೆವಡಾ ಸಾಣೆಕಲ್
ಕೆಟ್ಟು ಕೇಡೇನು ಸರ್ವಜ್ಞ?
ಅಟ್ಟಿಟ್ಟಿ ಮುಟ್ಟಿಯನು ಗಟ್ಟಿಯಾಗಿಯೆ ಬಡಿದು
ನೆಟ್ಟನೆಯೆ ಸ್ವರ್ಗ-ಪಡೆವಡಾ ಗುದ್ದೇಡಿ
ಕೆಟ್ಟು ಕೇಡೇನು ಸರ್ವಜ್ಞ?
ಸುಟ್ಟ ಬೂದಿಯ ತಂದು ದಟ್ಟವಾಗಿಯೆ ಬಡಿದು
ಶ್ರೇಷ್ಠ ಸ್ವರ್ಗವನು-ಅಡರುವೆಡೆ ಕತ್ತೆ ತಾ
ಕೆಟ್ಟು ಕೇಡೇನು ಸರ್ವಜ್ಞ?
ಮೂರೆಳೆಯುನಿಟ್ಟಾತ ಹಾರುವಡೆ ಸ್ವರ್ಗಕ್ಕೆ
ನೂರೆಂಟು ಎಳೆಯ ಕಾದಿಯನು ಹೊದ್ದಾತ
ಹಾರನೇಕಯ್ಯ ಸರ್ವಜ್ಞ?

ಇಂತಹ ವಿಡಂಬನ ಭಾಷಿತಗಳನ್ನು ಸಂಗ್ರಹಿಸಿದರೆ ಪ್ರಬಂಧ ಎಂಬ ನಿರ್ದೇಶಕ್ಕೆ ಅರ್ಹತೆ ಪಡೆಯವೇ? ಸರ್ವಜ್ಞನ ತ್ರಿಪದಿಗಳಲ್ಲಿ ಇಂತಹ ನೂರಾರು ಸೂಕ್ತಿಗಳಿವೆ. ಅವನು ಮುಟ್ಟದ ವಿಷಯಗಳಿಲ್ಲ ಎಂದರೂ ಸರಿ. ವಿಡಂಬನ–ವಕ್ರೋಕ್ತಿ–ವ್ಯಂಗ್ಯಗಳಿಗೆ ಅವನ ತ್ರಿಪದಿಗಳಿಂದ ಎಷ್ಟೋ ಲಕ್ಷ್ಯಗಳನ್ನೆತ್ತಿಕೊಡಬಹುದು. ಭರತೇಶ ವೈಭವದ ವೀಣಾಸಂಧಿ, ನಾಟಕ ಸಂಧಿ ಮೊದಲಾದುವುಗಳಿಂದ ಕಲಾವಿಮರ್ಶೆಯನ್ನು ಹೆಕ್ಕಬಹುದು. ಇದೇ ರೀತಿಯಲ್ಲಿ ನಮ್ಮ ರಾಮಾಯಣಭಾರತಗಳೂ, ಕಾವ್ಯಪುರಾಣಗಳೂ, ವಚನದಾಸ ಸಾಹಿತ್ಯಗಳೂ ಪ್ರಬಂಧದ ಮುಡಿಪಿಗೆ ವಿಧವಿಧದ ಕಾಣಿಕೆಯನ್ನು ಕೊಡುವಷ್ಟು ವಿಪುಲವಾಗಿವೆ. ಆದರೆ, ಹುಡುಕಬೇಕು; ಗೇರಬೇಕು; ಸೋಸಬೇಕು. ಕಸಗಳನ್ನು ಜಾಡಿಸಬೇಕು; ಕಲ್ಲುಗಳನ್ನು ಹಿಂಡಿ ತೆಗೆಯಬೇಕು. ಪ್ರಬಂಧ ವ್ಯವಸಾಯದ ಮೊದಲ ಹೆಜ್ಜೆ ಗುರುತುಗಳನ್ನೂ ನಾವಲ್ಲಿ ಕಾಣಬಹುದು.

ಹಿಂದಿನವರ ಕೃತಿಗಳು ಹೆಚ್ಚಾಗಿ ಮಹಾದ್ವಕೃತಿಗಳು; ಮಹಾಪ್ರಬಂಧಗಳು; ಮಹಾಕಾವ್ಯಗಳು. ಚಿಕ್ಕ ವಿಷಯಗಳ ಸಲ್ಲಾಪಕ್ಕೆ ಅವುಗಳಲ್ಲಿ ಆಸ್ಪದವುಂಟೆ? ಅವಶ್ಯತೆಯೇನು? ವಸ್ತು, ನಾಯಕ, ರಸ, ವರ್ಣನೀಯಾಂಶ, ಸಂಧಿ—ಎಲ್ಲ ಒಂದು ಕಟ್ಟುನಿಟ್ಟಿಗೆ ಅಳವಟ್ಟಿರಬೇಕಾದ ಇಂತಹ ಕೃತಿಗಳಲ್ಲಿ ಆನುಷಂಗಿಕವಾಗಿ ಬಂದಿರಬಹುದಾದ ವರ್ಣನೆಗಳಲ್ಲಿಯೂ, ವ್ಯಾಸಗಳಲ್ಲಿಯೂ ಗುಣ ನ್ಯೂನತೆ ಇದ್ದಿತೆಂಬುದು ಒಪ್ಪತಕ್ಕ ವಿಷಯ. ಇಡೀ ಕಾವ್ಯಶರೀರದಲ್ಲಿ ಅಲ್ಲಿ ಇಲ್ಲಿ ವಿಕ್ಷಿಪ್ತ ವಿಕ್ಷಿಪ್ತವಾಗಿರುವ ಅಂಶಗಳನ್ನೆತ್ತಿ ಪ್ರಬಂಧ ಎಂದು ತೋರಿಸುವುದೂ ಗಣಿಯಲ್ಲಿರುವ ಬಂಗಾರದ ಅದುರನ್ನು ಸ್ವರ್ಣಾಭರಣವೆಂದು ಕರೆಯುವುದೂ ಒಂದೆ. ಇಂದಿನ ಪ್ರಬಂಧಗಳು ಅನುದ್ದಿಷ್ಟವಾಗಿ ಬಂದವುಗಳಲ್ಲ. ಕಲಾದೃಷ್ಟಿಯಿಂದ ಪರಿಷ್ಕೃತವಾದವುಗಳು. ಪ್ರತ್ಯೇಕವಾದ ಆವರಣ–ಸಂವರಣಗಳುಳ್ಳವುಗಳು. ಅವುಗಳಿಗೆ ಸ್ಫುಟವಾದ ಗುರಿ-ಓಟ-ನೆಗೆತಗಳಿವೆ. ಖಂಡಕಾವ್ಯ, ಮಹಾಕಾವ್ಯ, ಚಂಪೂ, ನಾಟಕ, ಎಂದರೆ ಹೇಗೆ ಸಾಹಿತ್ಯದ ಭಿನ್ನ ಭಿನ್ನಾಂಗಗಳೋ ಹಾಗೆಯೇ ಪ್ರಬಂಧವೆಂದರೆ ಒಂದು ವಿಶಿಷ್ಟವಾದ ಅಂಗ. ಪ್ರಬಂಧವೆಂದರೆ ಅದೊಂದು ಕಲಾಕೃತಿ. ಪ್ರಬಂಧ ಲೇಖಕರೂ ಕವಿಗಳಂತೆ ಒಂದು ತೆರದ ಪ್ರತಿಭೆಯುಳ್ಳವರು. ಪ್ರಬಂಧಗಳು ಸಮಾಜವನ್ನು ಮೂದಲಿಸುತ್ತವೆ; ಜನಜೀವನವನ್ನು ಅಲುಗಾಡಿಸುತ್ತವೆ; ರಂಜಿಸಬೇಕಾದಲ್ಲಿ ರಂಜಿಸುತ್ತವೆ; ಭುಜಿಸಬೇಕಾದಲ್ಲಿ ಭುಜಿಸುತ್ತವೆ. ಒಟ್ಟಿನ ಮೇಲೆ ಅನುಭವಿಗಳಿಗೂ ಅನುಭಾವ್ಯಗಳಿಗೂ ಮಧ್ಯವರ್ತಿಗಳಾಗಿದ್ದು ನಡುವೆ ಸಾಮರಸ್ಯದ ಸಮಕಟ್ಟನ್ನು ಉಂಟುಮಾಡುವುದೇ ಪ್ರಬಂಧ ಲೇಖಕರ ಉದ್ದೇಶವಾಗಿರುವುದು. ಅವರ ಲೇಖನಿ ಸಮಾಜದ ಸಕಲ ಪಾರ್ಶ್ವಗಳನ್ನೂ ಅಭಿಯೋಗಿಸುವುದು. ಅದರ ತುದಿಯಲ್ಲಿ ನಗು ನೋವುಗಳೆರಡೂ ಹೂಗಳಂತೆ ಅರಳುತ್ತವೆ. ಆದರೆ ಅವುಗಳ ಚಿತ್ರಪಟಲಗಳು ನಾನಾ ವರ್ಣಮಯವಾಗಿದ್ದು ಒಂದರ ಕರ್ಣಿಕೆ ಇನ್ನೊಂದರಲ್ಲಿ ಹೊಂದಿಕೊಂಡಿರುವಂತೆ ಗೋಚರಿಸುವುದೂ ಅಸಂಭವವಲ್ಲ.

ಆಧುನಿಕ ಸಲಕ್ಷಣ ಪ್ರಬಂಧಗಳು ಕನ್ನಡದಲ್ಲಿ ಕಾಣಿಸಿಕೊಂಡುದು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ—ಎಂದು ಈ ಮೊದಲೇ ಹೇಳಿದುದಾಯಿತು. ಆಗ ಇವಕ್ಕೆ ಆ ಹೆಸರಿರಲಿಲ್ಲ; ಉಪನ್ಯಾಸಗಳೆಂಬ ನಾಮಧೇಯವಿತ್ತು. ಈ ಶತಮಾನದ ನಡುವಿನಲ್ಲಿ ಕನ್ನಡ ಪತ್ರಿಕೆಗಳ ಉದಯವಾಯಿತೆಂದು ತೋರುತ್ತದೆ. ಎಲ್ಲ ದೇಶಗಳಲ್ಲಿಯೂ ಪತ್ರಿಕೆಗಳೆ ಪ್ರಬಂಧಗಳ ಕೃಷಿಕ್ಷೇತ್ರಗಳಾಗಿ ಅವತರಿಸಿದುವು. ಕನ್ನಡದಲ್ಲಿಯೂ ಹಾಗೆಯೆ. ಗದ್ಯ ಶೈಲಿಗೆ ಸರಿ ಮಾಡಿದುದೂ ರೆಕ್ಕೆ ಬಲಿತುದೂ ಪತ್ರಿಕೆಗಳಿಂದಲೇ. ಕನ್ನಡದ ಮೊತ್ತ ಮೊದಲಿನ ಪ್ರಬಂಧಗಳಲ್ಲಿ ಇಂದು ಅಪರಿಷ್ಕೃತವೆಂದು

ತೋರಬಹುದಾದ ಕೆಲವು ಉಪಲಕ್ಷಣಗಳಿದ್ದುವು. ಶೈಲಿಯ ಗಾಢತೆ; ಗತಿಯ ಮಂಥರತೆ; ಭಾಷಾಪರಿಶುದ್ಧತೆಯ ಪ್ರಯತ್ನ; ವಾಚಕರು ಬೇರೆ-ಲೇಖಕರು ಬೇರೆ-ಎನ್ನುವ ಒಂದು ಬಗೆಯ "ಅಹಂಮತಿ"; ವಿಷಯ ಗಭೀರತೆ. ಇವೇ ಉತ್ತಮೋಪನ್ಯಾಸಗಳ ಲಕ್ಷಣಗಳೆಂಬ ಭಾವನೆಯಿತ್ತು. ಹಾಸ್ಯವೂ ಇಲ್ಲದಿರಲಿಲ್ಲ. ಆದರೆ ಅದಕ್ಕೆ 'ನಾವೂ ನೀವೂ' ಗುರಿಯಾಗುವಂತಿರಲಿಲ್ಲ. ಕಲ್ಪಿತವಾದ ವ್ಯಕ್ತಿ-ವಸ್ತುಗಳ ಮೂಲಕವಾಗಿ ನಗಿಸುವ ಪ್ರಯತ್ನ ನಡೆಯುತ್ತಿತ್ತು. ಸಾಹಿತ್ಯದಲ್ಲಿ ಹಾಸ್ಯವೆಂತಹ ಸಂಭಾವಿತರಸವಾಗಿದ್ದರೂ ನಾಟಕಗಳಲ್ಲಿ ಮುಖ್ಯ ರಸಾಭಿನಯವನ್ನು ಮಾಡುವ ನಾಯಕ ಪಾತ್ರಧಾರಿಗಿರುವ ಸಮ್ಮಾನ ವಿದೂಷಕನಿಗುಂಟೆ? ಹಾಸ್ಯವಾದರೂ ಅನ್ಯಾಶ್ರಿತವಾಗಿದ್ದರೆ ನಾವದರ ಸುಖವನ್ನು ಹೆಚ್ಚಾಗಿ ಅನುಭವಿಸುತ್ತೇವೆ. ನಾವೇ ಪಾತ್ರರಾದರೆ ರಸದಲ್ಲಿಯೂ ವೈರಸ್ಯವುಂಟಾಗುವುದುಂಟು. ಹಾಸ್ಯಕ್ಕೆ ಇಂತಹ ಪರಿಮಿತಿಯಿರುವಾಗ ಕಾಲಕ್ಷೇಪಾರ್ಥವಾಗಿ ಮಾತ್ರ ಹಾಸ್ಯ ಬೇಕು ಎನ್ನುವ ಮನೋವೃತ್ತಿ ವರ್ಧಿಸುವುದು ಸ್ವಾಭಾವಿಕವೆ. ಆರಂಭ ಕಾಲದಲ್ಲಿ ಗಂಭೀರ ಪ್ರಬಂಧಗಳಿಗೆ ಗೌರವ ಹೆಚ್ಚಿದ್ದಿತು; ಹಾಸ್ಯಕ್ಕೆ ಸಾಹಿತ್ಯದ ಒಂದು ಕಿರಿ ಮೂಲೆಯಲ್ಲಿ ಒಂದಿಷ್ಟು ಎಡೆ ದೊರೆಯುತ್ತಿತ್ತು; ಅಷ್ಟೆ. ಅದರ ಪ್ರವೇಶವೂ ಕುರುಬಾಗಿಲಿನಿಂದ ಆಗಬೇಕಾಗಿತ್ತು. ಹಿಂದಿನ ಉಪನ್ಯಾಸಗಳ ವಿಷಯ ವ್ಯಾಪ್ತಿಯನ್ನು ನೋಡಿದರೆ ಈ ಮಾತು ಸ್ಪಷ್ಟವಾಗುವುದು. ಸಮುದ್ರಯಾನ, ಆಹಾರ ವಿಷಯೋಪನ್ಯಾಸ, ದೀರ್ಘಾಯುಷ್ಯದ ಗುಟ್ಟು, ವ್ಯಾಕರಣೋಪನ್ಯಾಸ, ಚಿತ್ರಗುಪ್ತನ ದಫ್ತರ್. . . ಇತ್ಯಾದಿ ವಿಷಯಗಳಿಂದ ಆ ಉಪನ್ಯಾಸಗಳ ಗತಿಮಿತಿಯನ್ನು ಗುರುತಿಸಬಹುದು. ಈ ಕಾಲದಲ್ಲಿ ಪತ್ರಿಕೆಗಳು ದಟ್ಟಡಿಯಿಡತೊಡಗಿದುವು. ಪತ್ರಿಕೆಯೆನ್ನುವುದು ವಿಸ್ಮಯವಸ್ತುವಾಗಿದ್ದಾಗ ಅದರಲ್ಲಿ ಬಂದ ವಿಷಯಗಳ ಪಾವಿತ್ರ್ಯವನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೆ. ಪತ್ರಿಕಾಲೇಖಕನು ಅವತಾರಿ ಪುರುಷನಿಗಿಂತ ಬಲು ತಗ್ಗಿನ ಹಂತದಲ್ಲಿರುವುದು ಅಸಾಧ್ಯವಾಗಿತ್ತು. ಲೇಖಕನು ಬರೆಯುತ್ತಿದ್ದ; ಉಪದೇಶಿಸುತ್ತಿದ್ದ. ಅಜ್ಞ—ಮೂಕ—ಮನುಷ್ಯ ವರ್ಗವು ಓದುತಿತ್ತು; ಕೇಳುತಿತ್ತು! ಆತ ಬರೆದುದನ್ನು ಓದಿ ತಿಳಿಯುವ ಶಕ್ತಿ ಕೂಡ ಇಲ್ಲವೆಂದು ತಲೆತಲೆ ಹೊಡೆದುಕೊಳ್ಳುತ್ತಿದ್ದ ಪ್ರಾಣಿಕೋಟಿಗೆ ಅವನ ಲೆಕ್ಕಣಿಕೆಯಿಂದ ನಿಸ್ಸರಿಸಿದುದೆಲ್ಲ ಜ್ಞಾನಾಮೃತರಸವಾಗಿ ತೋರಿದ್ದರೆ ತಪ್ಪೇನು? ಕನ್ನಡ ಕವಿಚರಿತ್ರೆಯ ತೃತೀಯ ಭಾಗದ ಅನುಬಂಧದಲ್ಲಿ ಗ್ರಂಥಕರ್ತರು ಅನೇಕ ಲೇಖಕರ ಹೆಸರುಗಳನ್ನು ಕೊಟ್ಟಿದ್ದಾರೆ. ಇವರಲ್ಲಿ ಹಲವರು ಉಪನ್ಯಾಸ ಲೇಖಕರಾಗಿದ್ದರೆಂದು ವಿದಿತವಾಗುತ್ತದೆ. ಈ ಭಾಗದಲ್ಲಿ ಕೈ. ವಾ. ವೆಂಕಟಾಚಾರ್ಯ, ವೆಂಕಟರಂಗೋ ಕಟ್ಟಿ ಇತ್ಯಾದಿ ಮಹನೀಯರು ಸ್ಮರಣೀಯರಾಗಿರುವರು. ಶುದ್ಧ ಪ್ರಬಂಧಲಕ್ಷಣ ಸಮನ್ವಿತವಾದ–ವಿಮರ್ಶಾತ್ಮಕವಾದ ಚುಟುಕು ಬರಹವೊಂದು ಕೈ. ವಾ. ನಂದಳಿಕೆ ಲಕ್ಷ್ಮೀನಾರಣಪ್ಪನವರ ಲೆಕ್ಕಣಿಕೆಯಿಂದ ಹೊರಟಿದೆ. ಹೀಗೆ ಹಲವಾರು ಲೇಖಕರನ್ನೆತ್ತಿ ಪ್ರಬಂಧ ಲೇಖಕರೆಂದು ನಾವಾದರೂ ಮಾಡುವುದು ಕಷ್ಟವಲ್ಲ; ಇಪ್ಪತ್ತನೆಯ ಶತಮಾನವೇ ಈ ಬಗೆಯ ಬರೆವಣಿಗೆಗಳ ಶುಕ್ಲಪಕ್ಷ. ಈ ಶತಮಾನದ ಮುಂಬೆಳಕಿನಲ್ಲಿ ಹಲವು ಮಾಸಿಕಗಳೂ ಸಾಪ್ತಾಹಿಕಗಳೂ ಉದಿತವಾದುವು. ಲೇಖನ ವಿಸ್ತರ ವಿವಿಧತೆಗಳೂ ಹೆಚ್ಚತೊಡಗಿದುವು. ಅನುವಾದಗಳು ಬಹಳವಾಗಿದ್ದುವು. ಅಲ್ಲಲ್ಲಿ ಸ್ವತಂತ್ರ ಲೇಖನಗಳೂ ಪ್ರಕಟನೆಯ ಬೆಳಕನ್ನು ಕಾಣತೊಡಗಿದುವು. ವಾಚನಾಭಿರುಚಿಯೊಂದಿಗೆ ಲೇಖನಾಸಕ್ತಿಯೂ ವರ್ಧಿಸಿತು. ಅನೂಚೀನವಾಗಿ ನಡೆದು ಬಂದ ಸಂಪ್ರದಾಯವಿಲ್ಲದ ಲೇಖನ ಕಲೆಯು ಈ ಅವಧಿಯಲ್ಲಿ ಒಂದು ತೂಕ-ಪ್ರಮಾಣವನ್ನು ಹೊಂದಲು ಪೇಚಾಟಪಟ್ಟುದು ಸ್ಫುಟವಾಗಿ ಕಂಡು ಬರುತ್ತದೆ.

ಇಂದು, ಇಪ್ಪತ್ತನೆಯ ಶತಮಾನದ ಅರ್ಧಭಾಗವು ಸಂದುಹೋಗುವ ಕಾಲಕ್ಕೆ ಕನ್ನಡದಲ್ಲಿ ಪ್ರಬಂಧ ಲೇಖನ ವ್ಯವಸಾಯವು ಬಲು ಮಟ್ಟಿಗೆ ಪ್ರವರ್ಧಮಾನ ಸ್ಥಿತಿಯಲ್ಲಿದೆ ಎನ್ನಬಹುದು. ನಿಯತ ಕಾಲಿಕಗಳಲ್ಲಿ ಪ್ರಕಟಗೊಂಡುವು, ಗ್ರಂಥಗಳ ಮುನ್ನುಡಿಗಳಾಗಿ ಅವತರಿಸಿದುವು, ಕವಿಪ್ರಶಸ್ತಿ ಲೇಖನ ಸಂಗ್ರಹಗಳು, ಸಂಭಾವನಾಗ್ರಂಥಗಳು, ಗ್ರಂಥರೂಪವಾಗಿ ಪ್ರಕಾಶಿತವಾದ ವಿವಿಧವಾದ, ಹರಟೆಗಳು, ಕಲೆಹರಟೆಗಳು, ನಾಡಚಿತ್ರಗಳು, ಸಂಸಾರಚಿತ್ರಗಳು, ಕನಸುಗಳು ಇತ್ಯಾದಿಯಾದ ಲೇಖನ ಸಂಕಲನಗಳು, ಎಂದು ಆಕಾರಗಳನ್ನು ವರ್ಗೀಕರಿಸಬಹುದು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕೋಗಿಲೆ, ಮಧುರ ವಾಣಿ, ಜಯ ಕರ್ಣಾಟಕ, ವಾಗ್ಭೂಷಣ, ಕೃಷ್ಣಸೂಕ್ತಿಗಳಲ್ಲಿ ಉತ್ತಮ ವಿಷಯ ಪ್ರಬಂಧಗಳು ಪ್ರಕಟವಾಗಿವೆ. ಸಾಹಿತ್ಯ ಸಂಸ್ಕೃತಿಯ ವಿಮರ್ಶಾತ್ಮಕ ಲೇಖನಗಳಿಗೆ ಇವು ಉತ್ತಮ ನಿದರ್ಶನಗಳನ್ನು

ಹಾಕಿಕೊಟ್ಟಿವೆ. ಪ್ರಬುದ್ಧ ಕರ್ಣಾಟಕವು ಇಂದೂ ಆ ಕೆಲಸವನ್ನು ಅವಿರತವಾಗಿ ಸಾಗಿಸುತ್ತಿದೆ. ಆರ್ಥಿಕ ರಾಜಕೀಯಾದಿ ವಿಷಯಗಳಲ್ಲಿ ಉತ್ತಮ ವ್ಯಾಸಗಳನ್ನು ಕೊಡುವ ಕೆಲಸ ಮುಖ್ಯವಾಗಿ ವಾರಪತ್ರಿಕೆಗಳದು. ಈ ಕೃಷಿ ಸಾಕಷ್ಟು ಪರ್ಯಾಪ್ತವಾಗಿ ನಡದಂತೆ ತೋರುವುದಿಲ್ಲ. ದಿನ ದಿನದ ವಾರ್ತೆಗಳನ್ನು ಕೊಟ್ಟು, ರಾಜಕೀಯ ಪಕ್ಷಪಂಥಗಳ ತಂಬಟೆಗಳಂತೆ ಭಿನ್ನ ಭಿನ್ನ ಪಕ್ಷಗಳ ಆದರ್ಶ ಘೋಷಣಗಳನ್ನು ಅನುನದಿಸಿದ ಮಾತ್ರದಿಂದ, ವಿಷಯ ವಿಮರ್ಶೆ ಸಾಧಿತವಾಗುವುದಿಲ್ಲ. ವಾರಪತ್ರಿಕೆಗಳು ಕೊಡುತ್ತಿರುವುದು ಇಷ್ಟನ್ನೆ. ಈ ಕಕ್ಷೆಯ ಲೇಖಕರು ಹೆಚ್ಚಾಗಿ ವಿಚಾರ ಸ್ವಾತಂತ್ರ್ಯಕ್ಕೆ ತಿಲಾಂಜಲಿ ಕೊಟ್ಟಂತಿದೆ. ರಾಜಕೀಯ ಪಕ್ಷಗ್ರಹ ವಾಚಕವರ್ಗದ ತಾತ್ಕಾಲಿಕಾಭಿರುಚಿಗಳನ್ನೆ ಲಕ್ಷ್ಯದಲ್ಲಿಟ್ಟು ಲೇಖಕರು ಬರೆದಿದ್ದಾರೆ. ಇಷ್ಟರಿಂದಲೇ ತೃಪ್ತಿ ಹೊಂದಿದ್ದಾರೆ. ಆದರೆ ಕೆಲವು ಪತ್ರಿಕೆಗಳು ವಿಶೇಷ ಸಂಚಿಕೆಗಳನ್ನು ಹೊರಡಿಸಿ ಲೇಖನ ಕಲೆಯ ಗೌರವವನ್ನು ಹೆಚ್ಚಿಸಿವೆ—ಎಂಬುದನ್ನು ಒಪ್ಪಬೇಕು. ಕನ್ನಡದಲ್ಲಿ ಮುನ್ನುಡಿಗಳ ಬರೆವಣಿಗೆ ಅದೊಂದು ಸಂಪ್ರದಾಯದ ಸೀಮೆಯನ್ನು ಮುಟ್ಟಿದೆ. ಮುನ್ನುಡಿಯನ್ನು 'ಬರೆವ' ಪೂಜ್ಯತೆ ಎಲ್ಲರಿಗೂ ಸಲುವುದಿಲ್ಲ; ಬರೆಯಿಸುವ 'ಭಾಗ್ಯ' ಎಲ್ಲರಿಗೂ ಲಭಿಸುವುದಿಲ್ಲ. ಗಣನೀಯ ಸಾಹಿತ್ಯ ಶಲಾಕಾಪುರುಷರೇ ಹೊಸ ಲೇಖಕರ ದೃಷ್ಟಿವಮಾನಕ್ಕೆ ಗುರಿಯಾಗುತ್ತಾರೆ. ಮುನ್ನುಡಿಯ ಅಪೇಕ್ಷಕರ ಬೇಟೆಯಿಂದ ತಪ್ಪಿಸಲಾರದ "ಹಿರಿಯ ಸಾಹಿತಿ"ಗಳು ಬೆನ್ನು ಚಪ್ಪರಿಸುವಂತಹ ನಾಲ್ಕು ಪ್ರಶಂಸಾವಾಕ್ಯಗಳನ್ನು ಬರೆಯದಿದ್ದರೆ, ಅವರ ಹಿರಿಮೆ ಹೇಗುಳಿದೀತು? ಇಂತಹ ಮುನ್ನುಡಿಗಳಲ್ಲಿ ಕೆಲವು ಚೆನ್ನಾಗಿವೆಯೆಂಬುದನ್ನು ಮರೆಯಬಾರದು. ಹಳೆಯ ಗ್ರಂಥಗಳನ್ನು ಸಂಪಾದಿಸುವಾಗ ಉತ್ತಮ ವಿಮರ್ಶೆಗಳನ್ನು ಕೊಡುವ ಅಭ್ಯಾಸ ನಮ್ಮವರಲ್ಲಿ ಇತ್ತೀಚೆಗೆ ದೃಢಮೂಲವಾಗಿ ಬಂದಿದೆ. ಮೈಸೂರು ವಿಶ್ವವಿದ್ಯಾನಿಲಯವೂ ಸಾಹಿತ್ಯ ಪರಿಷತ್ತೂ ಪ್ರಕಟಿಸಿದ ಗ್ರಂಥಗಳಲ್ಲಿ ಕೆಲವು ಮುನ್ನುಡಿಗಳು ಉತ್ತಮ ವಿಮರ್ಶೆಗೆ ಕೈದೀವಿಗೆಗಳಾಗಿವೆ. ಸಾಹಿತ್ಯದಲ್ಲಿ ಅಥವಾ ಸಮಾಜ ಸೇವಾಕ್ಷೇತ್ರದಲ್ಲಿ ಪ್ರಶಸ್ತ ಕಾರ್ಯಗಳನ್ನು ನೆರವೇರಿಸಿದವರ ಸನ್ಮಾನಾರ್ಥವಾಗಿ ಗ್ರಂಥಗಳ ಕಾಣಿಕೆಯನ್ನರ್ಪಿಸುವ ಪರಿಮಿತಿಯು ನಮ್ಮಲ್ಲಿ ಅಷ್ಟು ಬಲವಾಗಿ ಬೆಳೆದಿಲ್ಲ. ಈ ವ್ಯಾಜದಿಂದ ಪ್ರಕಟ ಹೊಂದಿದ ಗ್ರಂಥಗಳಲ್ಲಿ ಶ್ರೀ "ಶ್ರೀ"ಯವರ ಸಂಭಾವನಾಗ್ರಂಥವು ಮೇಲ್ಮಟ್ಟದ ಪ್ರಬಂಧ ಸಂಕಲನ. ವಿಷಯ ವೈವಿಧ್ಯ, ವಿಚಾರಸೂಕ್ಷ್ಮತೆ, ಮಂಡನಕ್ರಮದ ಸಮೀಚೀನತೆಗಳಲ್ಲಿ ಅದರೊಡನೆ ಭುಜಪೊರಸಬಲ್ಲ ಗ್ರಂಥ ಇನ್ನೂ ಆಗಬೇಕಷ್ಟೆ. ಭಿನ್ನ ಕವಿಗಳನ್ನು ನಾನಾ ದೃಷ್ಟಿಕೋನಗಳಿಂದ ವಿಮರ್ಶಿಸುವ ಗ್ರಂಥಗಳು ಹಲವಿವೆ. ರನ್ನ, ಲಕ್ಷ್ಮೀಶ, ಸರ್ವಜ್ಞ, ಅಭಿನವಪಂಪ, ಮುದ್ದಣ ನಾರಣಪ್ಪಾದಿಗಳಿಗೆ ಇಂತಹ ಐಕಾಂತಿಕ ಪ್ರತಿಷ್ಠೆ ದೊರೆತಿದೆ. ವಾಲ್ಮೀಕಿ, ವ್ಯಾಸ, ಭಾಸ, ಕಾಲಿದಾಸ, ಠಾಗೋರರ ಕೃತಿಘಟ್ಟನೆಗಳು ಧಾರಾಳ ಆಗಿವೆ. ಆಗುತ್ತಲೂ ಇವೆ. ನಮ್ಮ ವಿಮರ್ಶಕರು ಅನ್ಯ ವಿಷಯಾಭಾವದಲ್ಲಿ ಈ ಕವಿಗಳಿಗೆ ಶರಣು ಹೋಗುವರೋ ಎಂಬಂತೆ ಭಾಸವಾಗುತ್ತದೆ. ಮಹಾತ್ಮರು ನಮ್ಮ ಸಾಹಿತ್ಯಕ್ಕೂ ಅಹಿಂಸಾಮಯವಾದ ದೊಡ್ಡ ದಾಳಿಯನ್ನೆ ಹೂಡಿರುವರು. ಅವರ ವಿಚಾರದೋಹನಗಳು ಹಲವು ಲೇಖನಗಳಲ್ಲಿ, ಅನೇಕ ಗ್ರಂಥಗಳಲ್ಲಿ ತುಂಬಿ ಹೋಗಿವೆ. ಇವುಗಳಲ್ಲಿ ಅನುವಾದಗಳೂ ವ್ಯಾಖ್ಯಾನಗಳೂ ಅನೇಕವಾಗಿದ್ದರೂ, ಸ್ವತಂತ್ರ ಪರಾಮರ್ಶೆಗಳು ಇಲ್ಲದಿಲ್ಲ. ಸಾಮ್ಯವಾದ ಸಮತಾವಾದಗಳಿನ್ನೂ ಪ್ರಚಾರಾವಸ್ಥೆಯನ್ನು ಮೀರಿ ಬಲು ಮುಂದೆ ಸಾಗಿಲ್ಲ; ಆತ್ಮಪುನೀತತಾಭಾವದ ಅವಗುಂಠನವನ್ನು ಹರಿದೊಗೆದು ಸ್ವತಂತ್ರ ವಿಮರ್ಶೆಯ ತೀಕ್ಷ್ಣ ಕಿರಣಗಳ ಆಘಾತದ ಮುಂದೆ ನಿಲ್ಲುವ ಭಂಗಿಯಲ್ಲಿಲ್ಲ. ಇಂತಹ ತತ್ವಗಳ ಮೂಲವನ್ನೂ ಗುಣದೋಷಗಳನ್ನೂ ನಿರ್ವಿಕಲ್ಪಕ ಬುದ್ಧಿಯಿಂದ ಅನುಶೀಲನ ಮಾಡಿದ ಲೇಖಕರ ಸಂಖ್ಯೆ ಅತ್ಯಲ್ಪ; ಇಲ್ಲವೆಂದರೂ ತಪ್ಪಾಗದು. ಶ್ರೀ ಗುಂಡಪ್ಪ, ಶ್ರೀ ದಿವಾಕರರಂತಹ ಒಬ್ಬಿಬ್ಬರು ಮಾತ್ರ ಆಧುನಿಕ ಸಮಸ್ಯೆಗಳ ಪರಾಮರ್ಶೆಯಲ್ಲಿ ಪ್ರವೀಣತೆಯನ್ನು ತೋರಿಸಿದ್ದಾರೆ. ಸಾಹಿತ್ಯ ಸಂಸ್ಕೃತಿಗಳ ಅವಗಾಹನದಲ್ಲಿ ನಿರತರಾದ ಲೇಖಕರು ಮಾಸ್ತಿ, ಬೇಂದ್ರೆ, ಮುಗಳಿ, ಗೋಕಾಕರಂತಹ ಕೆಲವೇ ಮಂದಿ. ಕೈ. ವಾ. ತಾರನಾಥರ ಕತ್ತಿವರಸೆಯನ್ನು ಹೆಚ್ಚು ಮಂದಿ ಮೆಚ್ಚಿದ ಹಾಗಿಲ್ಲ. ಇತಿಹಾಸ ರಾಜಕೀಯಗಳಲ್ಲಿ ನಮ್ಮವರು ಅಪರಿಣತಮತಿಗಳೆಂದು ಭಾವಿಸಬೇಕೆ? ಆಂಗ್ಲ ಲೇಖಕ ಮೆಕೋಲೆಯಂತೆ ಬರೆದವನು ಒಬ್ಬನೂ ಇಲ್ಲ. ಈ ಪರಂಪರೆಯನ್ನು ಕಾಪಾಡಲು ಚ. ವಾಸುದೇವಯ್ಯ, ಆಲೂರ್, ಪಂಜೆಗಳಂತಹ ಕೆಲಮಂದಿ ಪ್ರಯತ್ನಪಟ್ಟಿದ್ದಾರಾದರೂ, ಮತ್ತಿನವರು ಇವರು ಬರೆದುದಕ್ಕೆ ಒಂದಕ್ಷರವನ್ನೂ ಕೂಡಿಸಿಲ್ಲ. ಈ ದಾರಿಯಲ್ಲಿ ಅಂಧಂತಮವಲ್ಲದೆ ಮತ್ತೇನೂ ಇಲ್ಲ.

ಎಡಿಸನ್, ಹ್ಯಾಸಲಿಟ್, ಲೇಂಬ್, ಸ್ವಿಫ್ಟ್, ಗಾರ್ಡಿನರ್ ಪ್ರಭೃತಿಗಳ ಪ್ರತಿಚ್ಛಾಯೆ ನಮ್ಮ ಭಾಷೆಯ ಮೇಲೆ ಬಿದ್ದಿದೆ. ಆದರೆ ಕಾರ್ಲೈಲ್, ರಸ್ಕಿನರ ನೆರಳು ಕೂಡ ಕಾಣಿಸಲಿಲ್ಲ. ಹಾಲ್ಡೆನರಂಥ ವಿಜ್ಞಾನಿಗಳು ನಮ್ಮಲ್ಲಿಲ್ಲ; ಆದುದರಿಂದ ವಿಜ್ಞಾನವಿನ್ನೂ ಸಾಹಿತ್ಯದಲ್ಲಿ ಮೊದಲ ಹೆಜ್ಜೆಯನ್ನಷ್ಟೆ ಇಡಲು ಅಭ್ಯಾಸಿಸುತ್ತಿದೆ.

ಕೊನೆಯಲ್ಲಿ ವೈಯಕ್ತಿಕ ಅಥವಾ ಆತ್ಮೀಯವೆನ್ನಬಹುದಾದ ಪ್ರಬಂಧಗಳನ್ನು ವಿವೇಚಿಸಬೇಕು. ಆಂಗ್ಲ ಭಾಷೆಯ Personal Essay ಎಂಬುದರ ಲಕ್ಷಣಗಳನ್ನೊಳಗೊಂಡ ವ್ಯಾಸಗಳನ್ನು ನಾವಿಲ್ಲಿ ಲಕ್ಷಿಸುವುದಾಗಿದೆ. ಲೇಖಕನು ಸುವಿಷಯಗಳನ್ನು ನಾನಾ ಪಾರ್ಶ್ವಗಳಿಂದ ಅವಲೋಕಿಸಿ, ನಾನಾ ಭಂಗಿಗಳಲ್ಲಿ ತನ್ನ ಭಾವಗಳನ್ನು ಪ್ರಕಟಿಸುತ್ತಾನೆ. ತನ್ನ ಮಂಡನ ಕ್ರಮದಲ್ಲಿ ಆತ್ಮೀಯತೆಯ ಮುದ್ರೆಯನ್ನು ಒತ್ತುತ್ತಾನೆ. ತನ್ನ ದೃಷ್ಟಿದರ್ಪಣದ ಮುಂದಿಟ್ಟು ವಿಷಯಗಳ ನಾನಾ ವಿಕಿರಣಗಳನ್ನು ಕಾಣಿಸುತ್ತಾನೆ. ವಕ್ರೋಕ್ತಿ, ಕಾಕು, ವಿಡಂಬನೆ, ಹಾಸ್ಯಗಳಿಂದ ವಿಷಯಗಳ ನಿಗೂಹನವನ್ನು ಮಾಡಿದಂತೆ ಕಾಣಿಸಿ, ವಾಚಕರ ಹೃದಯಕ್ಕೆ ಆಸ್ವಾದನೀಯ ಪಾಕವನ್ನೊದಗಿಸಿಕೊಡುತ್ತಾನೆ. ವಾಚಕನು ಮಾತುಗಳನ್ನು ಬಿಡಿಸಬೇಕು. ಅವುಗಳ ಸರಳತೆ ವಕ್ರತೆಗಳ ನಡುವೆ ಏನು ಭಾವವಡಗಿದೆ ಅನ್ವೇಷಿಸಬೇಕು. ವಿಚಾರದ ಹಲ್ಲಿಲ್ಲದ ಮನಸ್ಸು ಇಂತಹ ಪಾಕಗಳನ್ನು ಸವಿನೋಡಲಾರದು; ಕೆಲವೊಮ್ಮೆ ಕುಚೇಷ್ಟೆಗಳಾಗಿ ತೋರುವ ಆಲಾಪಗಳಲ್ಲಿ ಅಡಗಿರಬಹುದಾದ ತಿಳಿವಿನ ತಿರುಳನ್ನು ಹಿಡಿಯಲಾರದು. ಇಂತಹ ಬರೆಹಗಳಿಗೆ ಹರಟೆಯ ಹೆಸರು ಚೀಟನ್ನು ಹಚ್ಚಲಾಗಿದೆ. ಒಂದು ಕಾಲದಲ್ಲಿ ಒಬ್ಬಿಬ್ಬರಾಗಿದ್ದ ಹರಟೆಮಲ್ಲರ ತಂಡವಿಂದು ರಕ್ತಬೀಜರ ಸಂಖ್ಯೆಗಳಲ್ಲಿ ವಿಸ್ತರಿಸುತ್ತಿದೆ. ಒಂದು ಗೀಟಾದರೂ ಪದ್ಯ ಬರೆಯದಿದ್ದರೆ ಮನುಷ್ಯನಲ್ಲ ಎಂಬ ಭಾವನೆಯ ಕಾಲವಿತ್ತು. ಈಗ ಒಂದಾದರೂ ಹರಟೆಹೊಡೆಯದ ಸಾಹಿತ್ಯ ಭಕ್ತನಿಗೆ, ರಸದ ಗಂಧಗಾಳಿಯೂ ಅಡಗಿಲ್ಲ —ಎಂಬೆಣಿಕೆ ಹಲವರಲ್ಲಿ ಇದ್ದಂತೆ ತೋರುತ್ತದೆ. ತಾನೂ ನಗಬೇಕು; ತನ್ನ ನಗುವಿನ ಸಮಾರಾಧನೆಯಲ್ಲಿ ಅನ್ಯರಿಗೂ ಮಣೆ ಕೊಡಬೇಕೆಂಬ ಉದ್ದೇಶ ಉದಾತ್ತವಾದುದು. ನಮ್ಮ ಜನರ ಮುಖಕ್ಕೆ ನಗುವಿನ ಪರಿಚಯವಿಲ್ಲ; ಎಂಬ ಆರೋಪಣೆಯಿದೆ. ನಗಬೇಕು; ಧಾರಾಳ ನಗಬೇಕು; ಆದರೆ ನಗ್ನತೆಯ ನರ್ತನ ನೋಡಿ ನಗುವುದಲ್ಲ. ಅಸಂಭಾವಿತ ಚೇಷ್ಟೆಗಳನ್ನು ಕಂಡು ನಗುವುದಲ್ಲ. ಇಂತಹ ಪ್ರವೃತ್ತಿ ಸಂಸ್ಕಾರ ಜಘನ್ಯತೆಯನ್ನು ಸಾರಿ ಹೇಳುತ್ತದೆ. ನಮ್ಮ ಲೇಖಕರಲ್ಲಿ ಹಲವರು ಹರಟೆಹೊಡೆಯುವುದರಲ್ಲಿಯೇ ತಮ್ಮ ಅಪವರ್ಗವಿದೆ—ಎಂದು ನಂಬಿದಂತಿದೆ. ಗತಾನುಗತಿಕತ್ವವು ಹೆಚ್ಚಾಗುತ್ತಿದೆ. ಇದು ಶುಭಲಕ್ಷಣವಲ್ಲ. ಶ್ರೀ।ಗಳಾದ ಮೂರ್ತಿ ರಾವ್ ಗೋರೂರು ಕಸ್ತೂರಿಯವರಂತಹ ಮೃದುಹಾಸ್ಯ ವಿಡಂಬನಪಟುಗಳು ಬೆರಳೆಣಿಕೆಗೆ ಬರುವಷ್ಟೆ ಇರುವರು. ಶ್ರೀ। ಕಾರಂತರಂತೆ ವಕ್ರ ಭಣಿತಿಯನ್ನು ಬಳಸಿದವರು ಇನ್ನೂ ವಿರಳ. ಅಲ್ಲಲ್ಲಿ ಒಂದೆರಡು ಉತ್ತಮ ಪ್ರಬಂಧವನ್ನೊ ವ್ಯಂಗ್ಯ ಲೇಖನವನ್ನೊ ಬರೆದು ಅಷ್ಟರಿಂದಲೇ ತೃಪ್ತರಾದವರು ಹಲವರಿದ್ದಾರೆ. ಅದೇ ಸರಣಿಯಲ್ಲಿ ಬಲು ದೂರ ಸಾಗಿದವರ ಸಂಖ್ಯೆ ಕಡಿಮೆ. ಇಂತಹ ಪ್ರಬಂಧಗಳ ವೈಪುಲ್ಯದ ಪ್ರಮಾಣಕ್ಕೆ ಸರಿಯಾಗಿ ಲೇಖಕರ ಸಂಖ್ಯೆಯಿಲ್ಲ. ಒಟ್ಟಿನ ಮೇಲೆ, ಇತ್ತೀಚೆಗೆ ಪ್ರಬಂಧ ಲೇಖನ ವ್ಯವಸಾಯದ ವಿಸ್ತೃತಿ ಹೆಚ್ಚಿದಂತೆ ತೋರುತ್ತದೆ; ಅಲ್ಲಗಳೆಯಲಾಗುವುದಿಲ್ಲ. ಉತ್ತಮ ಪ್ರಬಂಧಗಳೂ ನಿರ್ಮಾಣ ಹೊಂದಿವೆ. ಆದರೆ ಸೌಂದರ್ಯವು ಏಕದೇಶಸೌಂದರ್ಯ; ಸಾವಯವ ಪರಿಪೂರ್ಣ ಸೌಂದರ್ಯವಲ್ಲ. ಪ್ರಬಂಧಗಳಲ್ಲಿ ವಿವಿಧತೆ ಸಾಲದು, ವಿಚಾರ ಪ್ರಚೋದನಶಕ್ತಿ ಸಾಲದು; ಗಾಢತ್ವ ಸಾಲದು. ಈ ಕುಂದನ್ನು ತೊಡೆಯುವುದು ನಮ್ಮವರ ಅಳವಲ್ಲ; ಎಂದೇಕೆ ಭಾವಿಸಬೇಕು? ಪ್ರತಿಭಾನ್ವಿತ ಲೇಖಕರು ತಿಳಿತಿಳಿಯಾದ ವಿಚಾರಗಳನ್ನು ಅಷ್ಟೆ ಸ್ವಚ್ಛವಾದ ನುಡಿಗಟ್ಟುಗಳಲ್ಲಿ ತುಂಬಿ ಪ್ರಬಂಧ ಸಾಹಿತ್ಯ ಸೃಷ್ಟಿಯ ಸೌಂದರ್ಯವನ್ನು ಹೆಚ್ಚಿಸುವರೆಂಬ ನಿರೀಕ್ಷಣೆಯ ಸಮಾಧಾನವು ನಮಗಿದೆ.

ಕವಿರನ್ನನು ಚಿತ್ರಿಸಿದ ಸಮಾಜ

ಶ್ರೀ ಎಂ. ಮರಿಯಪ್ಪ ಭಟ್, ಎಂ. ಎ., ಎಲ್. ಟಿ., ಮದ್ರಾಸು.

ಕ್ರಿ.ಶ. ೯೪೯ಕ್ಕೆ ಸರಿಹೋಗುವ ಸೌಮ್ಯಸಂವತ್ಸರದಲ್ಲಿ ಕನ್ನಡಿಗರ ಭಾಗ್ಯರತ್ನನಾದ ಕವಿರನ್ನನು ಜನ್ಮವೆತ್ತಿದನು. ಆ ಶುಭಮುಹೂರ್ತವು ದಾಟಿ ಇಂದಿಗೆ ಸಾವಿರ ಸಂವತ್ಸರಗಳು ಸಂದುವು. ಆತನು ಹುಟ್ಟಿದ ಆ ಪುಣ್ಯಪ್ರದೇಶವು ಉತ್ತರ ಕರ್ನಾಟಕದಲ್ಲಿರುವ ಮುಧೋಳ್ ಎಂಬುದು. ಅಂದು ಅದನ್ನು "ಮುದುವೊಳಲ್" ಎನ್ನುತ್ತಿದ್ದರು. ಗಟ್ಟಿಗೆಯೂ (ಘಟ ಪ್ರಭಾನದಿ) ಪೆರ್ದೊಱೆ (ಕೃಷ್ಣೆ)ಯೂ ಹರಿಯುವಲ್ಲಿ "ತದ್ದವಾಡಿ"ಗೆ ತೆಂಕಲಾಗಿಯೂ "ತೊಱಗಲೆ"ಗೆ ಬಡಗಲಾಗಿಯೂ ಇರುವ "ಬೆಳುಗಲಿ" ದೇಶದಲ್ಲಿ ಶ್ರೇಷ್ಠವಾದ "ಜಂಬುಖಂಡಿ ಎಪ್ಪತ್ತಕ್ಕೆ" ತಿಲಕಪ್ರಾಯವಾಗಿರುವಂತೆ ರನ್ನನ ತೊಟ್ಟಿಲಾದ ಮುದುವೊಳಲು.

ರನ್ನನು ಎಲ್ಲ ವಿಧದಲ್ಲಿಯೂ ಭಾಗ್ಯಶಾಲಿಯಾಗಿದ್ದಂತೆ ಆತನ ಹೇಳಿಕೆಯಿಂದಲೆ ತಿಳಿಯುವುದು. ಬಳೆಗಾಱರ ಕುಲದಲ್ಲಿ ಹುಟ್ಟಿದರೂ ಆತನ ವಿದ್ಯಾಭ್ಯಾಸಕ್ಕೆ ಯಾವ ಕುಂದು ಕೊರತೆಗಳೂ ಇರಲಿಲ್ಲ. "ಅಭಿಮತ ಜೈನೇಂದ್ರವಚೋವಿಭವನೂ ಶಬ್ದಾನುಶಾಸನಪ್ರಭವ ವಚೋ ವಿಭವನೂ" ಆಗಿ ಉಭಯವ್ಯಾಕರಣಪಂಡಿತನಾಗಿದ್ದನಂತೆ ಕವಿರತ್ನ. ಹಿಂದೆ ರಟ್ಟರಾಜ್ಯದಲ್ಲಿ ನರಪತಿಗಳಿಂದ ಪಂಪರನ್ನರು ಗೌರವಿಸಲ್ಪಟ್ಟಂತೆ ಚಾಲುಕ್ಯರಾಜ್ಯದಲ್ಲಿ ಕವಿರನ್ನನು ಪೂಜಿಸಲ್ಪಟ್ಟನು. ಪೊನ್ನಮಯ್ಯ, ನಾಗಮಯ್ಯ, ಕೇಶಿದಂಡನಾಯಕರಂಥ ವೀರಾದಿವೀರರು ಅವನ ಸಂಗಾತಿಗಳು. ಜಿನವಲ್ಲಭೇಂದ್ರ ಅತ್ತಿಮಬ್ಬೆ ಎಂಬ ಸದ್ಗುಣಿಗಳಾದ ತಂದೆತಾಯಿಗಳು, ಅಜಿತಸೇನಾಚಾರ್ಯರಂಥ ಗುರುಗಳು, ವಿನೀತರಾದ ಹೆಂಡರು ಮಕ್ಕಳು, ಚಾವುಂಡರಾಯ ಸತ್ಯಾಶ್ರಯರಂಥ ಪೋಷಕರು ಮೊದಲಾದವರಿಂದ ಕೂಡಿದ ಅನುಕೂಲ ವಾತಾವರಣದಲ್ಲಿ ರನ್ನನು ಜೀವಿಸಿದನು.

ಪ್ರಸ್ತುತ ಲೇಖನದಲ್ಲಿ ರನ್ನನ ಕಾಲದ ಸಮಾಜ ಚಿತ್ರವು ಆತನ ಕೃತಿಗಳಲ್ಲಿ ಎಷ್ಟರ ಮಟ್ಟಿಗೆ ಕಾಣುತ್ತದೆಂಬುದನ್ನು ಪರಿಶೀಲಿಸುವ ಉದ್ದೇಶವಿದೆ. ಇದರಿಂದ ಒಂದಿಷ್ಟು ಪ್ರಯೋಜನವಾಗಬಹುದು. ಮೊದಲಾಗಿ ಎಲ್ಲ ಕಾಲಗಳಲ್ಲಿಯೂ ಮಾನವ ಸ್ವಭಾವ ಮೂಲತಃ ಒಂದೇಯಾಗಿರುತ್ತದೆಂಬುದನ್ನು ಅಂದಿಗೂ ಇಂದಿಗೂ ಇರುವ ಕೆಲವು ಹೋಲ್ವಿಕೆಗಳಿಂದ ತಿಳಿದುಕೊಳ್ಳಬಹುದು. ಎರಡನೆಯದಾಗಿ ನಮ್ಮಲ್ಲಿ ಎಂದರೆ ಕನ್ನಡಿಗರಲ್ಲಿರುವ ವೈಶಿಷ್ಟ್ಯಗಳೇನಾದರೂ ಇದ್ದರೆ ಅವನ್ನು ಗಮನಿಸಬಹುದು. ಮೂರನೆಯದಾಗಿ ನಾವು ಹಿಂದಿದ್ದವುಗಳಲ್ಲಿ ಯಾವುದನ್ನಾದರೂ ಬಿಟ್ಟು ಬಿಟ್ಟಿರುವೆವೆ ಎಂಬುದನ್ನು ತಿಳಿದುಕೊಳ್ಳಬಹುದು. ಇದರಿಂದ ನಮಗೆ ನಮ್ಮ ಹಿರಿಯರು ಸಹಸ್ರ ವರ್ಷಗಳ ಪೂರ್ವದಲ್ಲಿ ಜೀವನವನ್ನು ಸಾಗಿಸಿದ ಪ್ರಕಾರಗಳ ಛಾಯೆಯಾದರೂ ತಿಳಿಯುವುದು. ಅವರ ಸಂಸ್ಕೃತಿಯ ಮಟ್ಟವನ್ನು ಊಹಿಸಬಹುದು. ಇಂಥ ಪರಿಶೀಲನೆ ನಮ್ಮಲ್ಲಿ ಆತ್ಮವಿಶ್ವಾಸವನ್ನೂ ಕಾರ್ಯಶಕ್ತಿಯನ್ನೂ ತನ್ಮೂಲಕ ಉತ್ತಮ ಭವಿಷ್ಯವನ್ನೂ ತಾರದಿರದು.

ಯಾವ ಕವಿಯಾದರೂ ತನ್ನ ಸಮಾಜದೊಳಗಿನ ವ್ಯಕ್ತಿ. ಆದುದುದರಿಂದ ಕವಿಯು ತನ್ನ ಕೃತಿಗಳಲ್ಲಿ ಯಾವ ಕಥಾವಸ್ತುವನ್ನೇ ಹೆಣೆದು ಹಾಡಲಿ-ತನ್ನ ವಾತಾವರಣದ ಚಿತ್ರವು ಅಲ್ಲಲ್ಲಿ ಬಾರದಿರದು. ಇದು ಸ್ವಾಭಾವಿಕ. ಹೀಗಾಗದಿರುವುದು ಅಸ್ವಾಭಾವಿಕ. ಈ ಸತ್ಯವನ್ನು ಎಲ್ಲ ಕವಿಗಳೂ ವಿಮರ್ಶಕರೂ ಮನಗಂಡಿದ್ದಾರೆ. ಮಹಾ ಕವಿರನ್ನನು ಹಾಗಾದರೆ ಈ ಸಾಮಾನ್ಯ ಸೂತ್ರಕ್ಕೆ ಅಪವಾದವಾಗುವುದೆಂತು?

ರನ್ನನು ಸಾಹಸಭೀಮವಿಜಯ (ಗದಾಯುದ್ಧ)ವೆಂಬ ಅತ್ಯಂತ ರಸವತ್ತಾದ ಕಾವ್ಯದಿಂದ ಲೌಕಿಕರ ಹೃದಯವನ್ನು ಸೂರೆಗೊಂಡನು. ಕನ್ನಡ ಲೋಕದಲ್ಲಿ ಈ ಉತ್ತಮ ಕೃತಿಯನ್ನು ಹೊಗಳದವರಾರು? ಇವಲ್ಲದೆ ಪುರಾಣಕಾವ್ಯಗಳಾದ ಅಜಿತತೀರ್ಥಂಕರ ಚರಿತೆ, ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆಗಳನ್ನು ರಚಿಸಿದ್ದನು. ಅವನ್ನು "ರತ್ನತ್ರಯ"ಗಳೆಂದು ರನ್ನನೇ

ಕೊಂಡಾಡಿದ್ದಾನೆ. ಅವುಗಳಲ್ಲಿ ನಮಗೆ ಲಭಿಸಿರುವುದು ಅಜಿತತೀರ್ಥಂಕರ ಪುರಾಣ ಮಾತ್ರ.

ಈ ಮಹಾಕೃತಿಗಳನ್ನು ಪರಾಂಬರಿಸಿದರೆ ಎಷ್ಟೋ ಚಾರಿತ್ರಿಕ ವಿಷಯಗಳೂ ಇತರ ಸಾಂಸ್ಕೃತಿಕ ವಿಷಯಗಳೂ ತಿಳಿದು ಬರುತ್ತವೆ. ಸಾಹಸಭೀಮ ವಿಜಯದಲ್ಲಾಗಲೀ ಅಜಿತತೀರ್ಥಂಕರ ಚರಿತೆಯಲ್ಲಾಗಲೀ ಕನ್ನಡ ಜೀವನವು ಹಾಸುಹೊಕ್ಕಾಗಿದೆಯೆಂದರೆ ತಪ್ಪಾಗದು. ಕೆಲವೆಡೆ ಆ ಚಿತ್ರವು ಮಬ್ಬಾಗಿದ್ದರೂ ಮಿಕ್ಕೆಡೆ ಅದು ಎದ್ದು ಕಾಣುತ್ತದೆ. ವೆಂಗಿ ವಿಷಯವನ್ನು ಬಣ್ಣಿಸುವಾಗ ಯಾವ ಕನ್ನಡಿಗನಿಗೆ ರೋಮಾಂಚನವಾಗದು? ಅಜಿತತೀರ್ಥೇಶ್ವರನ ಚರಿತ್ರೆಯಲ್ಲಿ ವರ್ಣಿತವಾಗುವ ಅಯೋಧ್ಯಾಪುರವು ಕನ್ನಡದ ಬನವಾಸಿಯೋ ಎಂದನ್ನಿಸುತ್ತಿದೆ. ಸತ್ಯಾಶ್ರಯನ ವಂಶಾವಳಿಯನ್ನೆಲ್ಲಾ ಹೇಳಿ ಅವನನ್ನು ಸಾಹಸಭೀಮನೊಡನೆ ಸಮನ್ವಯಿಸಿ ಅಭೇದದಿಂದ ಹೊಗಳಿದಾಗ ಕನ್ನಡಿಗರಿಗೆ ಚಾಲುಕ್ಯ ರಾಜರ ವಿಭವವಿಷ್ಟಾದರೂ ಮನಸ್ಸಿಗೆ ಬಾರದಿರದು. ಇವನ್ನೆಲ್ಲಾ ಅನುಭವಿಸಬೇಕಾದರೆ ಆ ಮಹಾಕೃತಿಗಳನ್ನು ಓದಿಯೇ ನೋಡಬೇಕು. ಒಂದೆರಡು ಉದಾಹರಣೆಗಳನ್ನು ಗಮನಿಸಿರಿ:–(ಅಜಿತತೀರ್ಥಂಕರ ಪುರಾಣದಲ್ಲಿ ಬರುವ ವರ್ಣನೆಯಿದು).

ಆ ಕನ್ನಡ ನಾಡಿನಲ್ಲಿ--ಕಂಟಕವೃತ್ತಿಯುಂ ವಯಃ ಪರಿಣತಿಯುಂ ಫಲತರುಗಳೊಳೆ, ದಾನಭಂಗಮುಂ ಗಜಂಗಳೊಳೆ, ಕಂಠಗ್ರಹಮುಂ ಸಂಭೋಗದೊಳೆ ಚಳನಕ್ರಿಯೆಯುಂ ರಸವಾದದೊಳೆ; ಮತ್ತಂ ಧನದರಲ್ಲದ ಧನದರಿಲ್ಲ, ತಕ್ಕರಿಲ್ಲದೆ ಟಕ್ಕರಿಲ್ಲ, ಜನ್ನಮಿಲ್ಲದೆ ಬನ್ನಮಿಲ್ಲ, ಭೋಗಮಿಲ್ಲದೆ ರಾಗಮಿಲ್ಲ, ಅಬಿನಲ್ಲದೆ ಬಬಿನಿಲ್ಲ, ಪೆರ್ಚಲ್ಲದೆ ಬೆರ್ಚಿಲ್ಲ, ಕುಲೀನರಲ್ಲದೆ ಅಕುಲೀನರಿಲ್ಲ, ವಂದಿಯಲ್ಲದೆ ಬಂದಿಯಿಲ್ಲ, ಜಾತಿಯಲ್ಲದೆ ವಿಜಾತಿಯಿಲ್ಲ............ಪಾರಿಜಾತಮಲ್ಲದೆ ಪರಾಜಿತಮಿಲ್ಲ, ಅಧಿಕಾರಿಗಳಲ್ಲದಧಿಕಾರಿಗಳಿಲ್ಲ, ಪರಹಿತವ್ಯಸನಿಗಳಲ್ಲದೆ ದುರ್ವ್ಯಸನಿಗಳಿಲ್ಲ.

ಇಲ್ಲಿ ಎಂಥ ಅಲಂಕಾರಯುಕ್ತವಾದ ಬಣ್ಣನೆಯಿದ್ದರೂ ಆ ಬಣ್ಣನೆಯೊಳಗೆ ಕನ್ನಡನಾಡಿನ ಅಂದಿನ ಸೊಬಗಿನ ಬಾಳನ್ನು ಕಾಣಲಾರೆವೆ? ಅಲ್ಲಿ ಮುಳ್ಳು ತುಂಬಿರುವುದು ಮುದಿಯಾಗುವುದು ಹಣ್ಣು ಮರಗಳಲ್ಲಿ ಎಂದರೆ ಏನು ಧ್ವನಿತವಾದಂತಾಯಿತು? ಜನರು ಬಹಳ ಮಟ್ಟಿಗೆ ಋಜುಸ್ವಭಾವದವರು; ಆರೋಗ್ಯವಂತರು—ಅವರಿಗೆ ಬೇಗನೆ ವೃದ್ಧಾಪ್ಯ ಅಡಸದು. ದಾನ (ಮದಜಲ) ಭಂಗ ಆನೆಯಲ್ಲಿ. ಜನರಲ್ಲಿ ಭಂಗವಿಲ್ಲದ ದಾನಧರ್ಮಗಳು ಬಹಳ. ಹೆಸರಿಗೆ ಮಾತ್ರ ಕುಬೇರರಲ್ಲ. ನಿಜವಾಗಿಯೂ ಅವರು ಹಣವಂತರಾಗಿದ್ದರು. ಜನ್ನಮಲ್ಲದೆ ಬನ್ನಮಿಲ್ಲವೆಂಬುದರಿಂದ ಲೋಕದಲ್ಲಿ ಸತ್ಕಾರ್ಯಗಳು ನಡೆಯುತ್ತಿದ್ದುವೆಂಬುದನ್ನು ತಿಳಿಯುತ್ತೇವೆ. ಇನ್ನೊಂದು ವಿಚಾರ. ಜೈನನಾದ ರನ್ನನು (ವೈದಿಕ) ಯಜ್ಞಗಳು ನಡೆಯುತ್ತಿದ್ದುವೆಂಬುದನ್ನು ಮರೆಮಾಚದೆ ಹೇಳಿದ್ದಾನೆ. ಇದು ಅಂದಿನ ಜನರ ಪರಮತಸಹಿಷ್ಣುತೆಗೆ ಒಂದು ಉದಾಹರಣೆಯೂ ಆಗಬಹುದು. ಮೇಲಿನ ಪ್ರತಿಯೊಂದು ವರ್ಣನೆಯಲ್ಲಿ ಒಂದು ತಥ್ಯವಿದೆ.

ಮುಂದೆ ವೆಂಗಿಯನ್ನು ಕಾಲುವೆಗಳ ನೀರಿನಿಂದ ಸರ್ವಕಾಲದಲ್ಲಿಯೂ ಫಲವತ್ತಾಗಿರುವ ಹಾಗೂ ಬತ್ತದ "ಪೆರ್ವೆಳಸಿಂದೆ" ದೇವಮಾತೃಕವೆಂದು ಪ್ರಸಿದ್ಧಿ ಪಡೆದ ನೆಲನೆಂದೂ ಅಳಿಗೀತ, ಕುಸುಮಪರಿಮಳ ಫಲರಸ, ಮಂದಾನಿಲ, ಕಾನನ ಮೊದಲಾದುವುಗಳಿಂದ ತುಂಬಿದ ಭೋಗಭೂಮಿಯೆಂದೂ ಹೊಗಳಿರುತ್ತಾನೆ. ಮತ್ತೆ ಕಮ್ಮೆದೇಶ ಪುಂಗನೂರು ಮೊದಲಾದ ವಿಭಾಗಗಳನ್ನು ಸ್ಮರಿಸುತ್ತಾನೆ. ಒಂದೆಡೆ ಕುಮಾರೋದಯವಾದಾಗ ಉಂಟಾದ ಸಂತೋಷವನ್ನು ವಿವರಿಸಲು, ಎಂದಿನ ವರ್ಣವೃತ್ತವು ಸಾಕಾಗಲಿಲ್ಲ ರನ್ನನಿಗೆ. ಅದರಲ್ಲಿ ಪ್ರಾಯಶಃ ದೇಶ್ಯರಗಳೆಯಲ್ಲಿರುವ ಆತ್ಮೀಯತೆ ಅವನಿಗೆ ಕಾಣಲಿಲ್ಲಿ. ಚಾಲುಕ್ಯರಾಜಕುಮಾರೋದಯವಾದುದನ್ನು ನೆನೆದು ಇಲ್ಲಿ ಬಣ್ಣಿಸಿದನು.

ಆ ಕುಮಾರೋದಯದೊಳಾಗಳಾನಂದದಿಂ ।
ಲೋಕಮೋದಿದುದು ನಾನಾ ವಿಧಚ್ಛಂದದಿಂ ॥
ಪರೆಪಲವುಮೊಸೆದುವೆಂಟುಂ ದಿಗಂತಂಬರಂ ।
ತುರುಗಿ ಕಟ್ಟಿದ ಗುಡಿಗಳಿಂದೆಸೆದುದಂಬರಂ ॥
ರಾಜಭವನದೊಳೆಸವ ಮಣಿತೋರಣಂಗಳಿಂ ।
ರಾಜಿಸುವುವೆತ್ತಿ ದಾತಪವಾರಣಂಗಳಿಂ
ಬೀದಿಬೀದಿಯೊಳೆಲ್ಲ ಮೋಕುಳಿಯ ಗಿಂಡಿಯುಂ ॥
ಆದವೊಪ್ಪಿದುದು ಪಲತೆರದ ಪಾಷಂಡಿಯುಂ ॥
ವಾರನಾರೀಜನದ ಸೊಗಯಿಸುವ ನೃತ್ಯದಿಂ ।
ಚಾರಣಗಣಂಗಳೋದುವ ಕಂದವೃತ್ತದಿಂ ॥
ರಂಗವಲ್ಲಿಗಳೆ ಬಿಡುಮುತ್ತುಗಳಿನಿಂಬಾಗೆ ।
ಮಂಗಳರವಂ ಪರೆದು ದಿಗ್ವಳಯಮಂ ತಾಗೆ ॥

ಶುದ್ಧಾಂತಕಾಂತೆಯರ್ ನೆರೆದೊಸಗೆಯಂ ಮಾಡೆ ।
ವೃದ್ಧಕಂಚುಕಿಗಳಂದವರೊಡನೆ ನಲಿದಾಡೆ ॥
ಸಂತಸದೆ ಮೈಮುರಿದು ಕೂಡೆ ಕುಣಿವಜ್ಜರಿಂ ।
ಅಂತವರ ಕಾಲೆಡೆಗಳೊಳ್ ನುಗುಲ್ವಗುಜ್ಜರಿಂ ॥
ಆನೆಯಂ ಕುದುರೆಯಂ ಕುಡೆ ಪಡೆವ ವಂದಿಯಿಂ ।
ಭೂನಾಯಕಂ ಬಿಡಿಸೆ ಬಿಟ್ಟ ಬಹು ಬಂದಿಯಿಂ ॥
ಪಲವಗ್ರಹಾರಮಂ ಕುಡೆ ಪಡೆವ ಪಾರ್ವರಿಂ ।
ಪಲತೆರದ ವಸ್ತುವಂ ನೃಪನೀಯೆ ಪಾರ್ವರಿಂ ॥
... ...
... ...
ಪರಸುವ ಧರಾಮರರ ಪರಕೆಯ ರವಂಗಳಿಂ ।
ನೆರೆದ ಬೂತುಗಳ ಕೋಳಾಹಳ ರವಂಗಳಿಂ ॥
ನೆರೆದೊಡನೆ ಮಂಗಳಂಬಾಡೆ ಗಾಯಕಗಣಂ ।
ಕರಮೆ ಕಣ್ಗೆಸೆದುದು ನರೇಂದ್ರ ಭವನಾಂಗಣಂ ॥

ಇದರಲ್ಲಿ ಉದ್ದಕ್ಕೂ ಬಂದಿರುವ ವರ್ಣನೆ ಅಂದಿನ ಚಾಲುಕ್ಯ ರಾಜರಲ್ಲಿ ನಡೆದ ಕುಮಾರೋತ್ಸವದ ಪ್ರತಿಬಿಂಬವೆಂಬುದನ್ನು ಹೇಳಬಹುದು. ತಳಿರುತೋರಣಗಳೇ ಮೊದಲಾದ ಅಲಂಕಾರಗಳು, ವಿವಿಧ ಮಂಗಳರವಗಳು, ಮೈಮುರಿದು ಕುಣಿಯುವ ಅಜ್ಜರುಗುಜ್ಜರು, ಸಂಗೀತದ ಸುಗ್ಗಿ, ಸುವಾಸಿನಿಯರ ವಿಶೇಷ ಕಾರ್ಯಕ್ರಮಗಳು, ದಾನಧರ್ಮಗಳು ಎಷ್ಟು ಹೃದಯಂಗಮವಾಗಿವೆ! ಅಲ್ಲದೆ ಅನೇಕ ಬಂದಿವಾನರನ್ನು ಈ ಉತ್ಸವ ಕಾಲದಲ್ಲಿ ಭೂನಾಯಕನು ಬಿಡುಗಡೆ ಮಾಡಿದನಂತೆ.

ಅಜಿತತೀರ್ಥಂಕರ ಪುರಾಣದಲ್ಲಿ ಹೊಗಳಲ್ಪಟ್ಟ ಅತ್ತಿಮಬ್ಬೆಯ ಶೀಲವನ್ನು ಒಂದಿಷ್ಟು ತಿಳಿದರೆ ಅಂದಿನ ಆದರ್ಶವು ಕಿಂಚಿತ್ತಾದರೂ ತಿಳಿಯದಿರದು.

ಅತ್ತಿಮಬ್ಬೆ ದೊಡ್ಡ ಜಿನಭಕ್ತೆ. ಪತಿಯಾದ ನಾಗದೇವನು ಕಲಿತನದಿಂದ ಕಾದಾಡಿ ದೇವಲೋಕಕ್ಕೆ ಹೋದನು. ಆಗಿನ ಕಟ್ಟಳೆ ಮೇರೆಗೆ ಕುಲವಧುಗಾಚರಿಸಲಿದ್ದುದು ಪತಿಯ ಮರಣಾನಂತರ ಎರಡೇ:–ಜಿನದೀಕ್ಷಾಚರಣಂ ಅಥವಾ ಶುಭಚರಿತದೆ ಮರಣಂ. ಅತ್ತಿಮಬ್ಬೆಯ ಮಗನು (ಪಡೆವಳ ತೈಲನು) ತೀರಾ ಚಿಕ್ಕವನಾದುದರಿಂದ, ಮಕ್ಕಳಿಲ್ಲದ ಸವತಿ ಮಹಾಸತಿ ಗುಂಡಮಬ್ಬೆ "ಗುಂಡೆಲ್ಲ" ಹೊಗಳುವಂತೆ ಚಿತಾಗ್ನಿಯಲ್ಲಿ ಸಹಗಮನದಿಂದ ಮಡಿದಳು.

ಇತ್ತ ಅತ್ತಿಮಬ್ಬೆಯಾದರೆ ಅಸಿಧಾರವ್ರತದಿಂದ ಒಡಲನ್ನುಪವಾಸದಿಂದಲೂ ತನ್ನೊಡವೆಗಳನ್ನು ಅನವರತ ದಾನಗಳಿಂದಲೂ ಸವೆಯಿಸಿ ತುಂಬ ಯಶಸ್ಸನ್ನು ಪಡೆದಳು. ಅವಳ ಸದ್ಗುಣಾವಳಿಗಳನ್ನು ಮೆಚ್ಚಿದ ರನ್ನನು ಹೇಳುತ್ತಾನೆ:—

ಶ್ರಾವಕ ಧರ್ಮದೊಳ್ ದೊರೆಯನಲ್ ಪೆರರಿಲ್ಲೆನೆ ಸಂದರೇವತೀ ಶ್ರಾವಕಿ ತಾನೆ, ಸಜ್ಜನಿಕೆಯೊಳ್ ಜನಕಾತ್ಮಜೆ ಶೀಲದೊಳ್ ದೇವಕಿ ತಾನೆ, ದಾನಗುಣದಿಂದೆ ಸುಲೋಚನೆ ತಾನೆ, ಎಂದು ಭವ್ಯಾವಳಿ ಮೆಚ್ಚಿ ಬಣ್ಣಿಪುದು ಭವ್ಯ ಮನೋರಥ ಜನ್ಮಭೂಮಿಯಂ ॥

ಜಿನಶಾಸನ ದೀಪಿಕೆಯೆಂದೆನಿಸಿದ ಅತ್ತಿಮಬ್ಬೆ ಮಾಡಿಸಿದ ಸತ್ಕಾರ್ಯಗಳನ್ನು ರನ್ನನಿಗೆ ಎಣಿಸಿದಷ್ಟೂ ಸಾಲದು.

ಅತ್ತಿಮಬ್ಬೆಯ ದಾನವು "ತನ್ನಿಷ್ಟಂ ಯನ್ನದೀಯತೇ" ಎಂಬ ಸೂತ್ರವನ್ನು ಲೋಕಕ್ಕೆ ಸಾರುವಂತಿದ್ದಿತಂತೆ "ಪದೆದರ್ಥಿ ಜನಕಿತ್ತುದೆ ಧನಂ—ಈಯದುದೆ ಕೆಟ್ಟುದು" ಎಂಬುದೇ ಆ ದಾನಚಿಂತಾಮಣಿಯ ತತ್ವ. ಆ ಮಹಾಸತಿಯ ಅಪೇಕ್ಷೆಯಂತೆ ಈ ಪುರಾಣತಿಲಕವನ್ನು ಕವಿತಿಲಕನು ಹೇಳಿದನು. ಅತ್ತಿಮಬ್ಬೆಯ ಚರಿತವು ಅರಳೆಯಂತೆ, ಗಂಗಾಜಳದಂತೆ, ಎಸೆವ ಅಜಿತಸೇನ ಮುನಿಪತಿಯ ಗುಣಾವಳಿಯಂತೆ ಬಿಳುಪು; ಪ್ರಸಿದ್ಧ ಕೊಪಣಗಿರಿಯಂತೆ ಪವಿತ್ರ. ಇದರಿಂದ ರನ್ನನ ಕಾಲದಲ್ಲಿ ಕೊಪಣಗಿರಿಯು (ಇಂದಿನ ಕೊಪ್ಪಳ) ದೊಡ್ಡ ಪುಣ್ಯಕ್ಷೇತ್ರವಾಗಿ ನೆಗಳ್ತೆಪಡೆದಿರಬೇಕೆಂಬುದನ್ನೂ ತಿಳಿಯುವೆವು.

ಇನ್ನೊಂದು ವಿಚಾರ. "ಆಯತಿಯಂ ಪೇಟ್ವಿಡೆ ಕೆಟ್ಟ ಕಾಲದೊಳಿದಂ (ಜಿನಧರ್ಮವನ್ನು) ಕೊಂಡಾಡಿದ್ದೈ;" ದಯೆಯಂ ತಾಳ್ದಿದ ಜೈನಧರ್ಮರುಚಿಯಂ ಕೈಕೊಂಡು ಸಮ್ಯಕ್ತ್ವಶುದ್ಧಿಯನೀಕಾಲದೊಳಪ್ಪು ಕಯ್ದುಭುವನಕ್ಕಾಶ್ಚರ್ಯಮಪ್ಪಂತು ಕೀರ್ತಿಯನಾ......ಚಕ್ರವರ್ತಿಯುಮಂ ಪೆರ್ಚಿಸಿದೊಳ್ಪು ನಿನ್ನೊಳೆಸೆಗುಂ ಶ್ರೀ ದಾನಚಿಂತಾಮಣೀ ॥ (ಆ.೧೨-೧೧). ಚಾಲುಕ್ಯರ ಕಾಲದಲ್ಲಿ ಹಿಂದೆ ಗಂಗ ರಾಷ್ಟ್ರಕೂಟರ ಕಾಲಗಳಲ್ಲಿ ಜೈನಮತಕ್ಕಿದ್ದ ಪ್ರೋತ್ಸಾಹ ಕಡಿಮೆಯಾಗುತ್ತಿದ್ದಿತು. ಆ ಕೆಟ್ಟ ಕಾಲದಲ್ಲಿ ಈ ದಾನಚಿಂತಾಮಣಿ ಮುಂದೆ ಬಂದು ತಾನು ಹಿರಿಯ ಭಾರವನ್ನು ಹೊತ್ತುದಲ್ಲದೆ ಚಕ್ರವರ್ತಿಯ ಪ್ರೋತ್ಸಾಹವೂ ಹೆಚ್ಚುವಂತೆ ಮಾಡಿದಳು ಎಂಬುದು ತಿಳಿದು ಬರುತ್ತದೆ.

ಈ ಒಂದು ಪುಟ್ಟ ಚಿತ್ರದಿಂದ ಹತ್ತನೆಯ ಶತಮಾನದ ಕನ್ನಡನಾಡಿನಲ್ಲಿ ಸ್ತ್ರೀಯರು ಸಹ ಎಂಥ ಕಾರ್ಯಭಾಗಗಳನ್ನು ಸಮಾಜದಲ್ಲಿ ವಹಿಸುತ್ತಿದ್ದರೆಂಬುದು ಮುಂದಟ್ಟಾಗದಿರದು. ದಾನಚಿಂತಾಮಣಿಯಂಥ ನಾರೀರತ್ನವಿದ್ದ ಕನ್ನಡನಾಡು ಎಂದಾದರೂ ಕುಗ್ಗುವುದೆ?

ರನ್ನನು ಹೇಳಿದ ಕೆಲವು ಗಾದೆಗಳನ್ನು ಅಥವಾ ಲೋಕೋಕ್ತಿಗಳನ್ನು ಕೇಳಿರಿ. ಅವುಗಳು ಅಂದೇ ನಾಡಿನ ಜನರಲ್ಲಿ ಬಳಕೆಯಲ್ಲಿದ್ದವುಗಳು. ನಾಡವರು ಅವುಗಳ ರಹಸ್ಯವನ್ನು ಕಂಡುಕೊಂಡವರು. ಅವುಗಳು ಅವರ ಅನುಭವದ ಪ್ರತೀಕಗಳು.

೧. ಗಂಡರ್ ನರಳಲ್ ತಕ್ಕುದೆ? ದುರ್ಯೋಧನನು ಊರುಭಂಗದ ನೋವಿಗಾಗಿ ನರಳಲಿಲ್ಲ; ಮಕುಟಭಂಗದಿಂದಲಾದ ಮಾನಹಾನಿಗೆ ಆ ಅಭಿಮಾನಧನನು ನೊಂದನು ಎಂಬಲ್ಲಿ ಹೇಳಿದ ಮಾತಿದು ಎಷ್ಟು ಸ್ವಾರಸ್ಯವಾಗಿದೆ! ಅಂದಿನ ಗಂಡಸರು ಎಂಥ ಕಷ್ಟನೋವುಗಳನ್ನಾದರೂ ಪಿಟ್ಟೆನ್ನದೆ ಸಹಿಸುವ ಧೀರರಾಗಿದ್ದರು. ಆದುದರಿಂದಲೇ ಕವಿಯ ಬಾಯಲ್ಲಿ ಆ ನಾಣ್ಣುಡಿ ಬಂದುಂಟು.

೨. ಅತ್ತಪುಲಿಯಿತ್ತದರಿ. ಲಕ್ಷ್ಮಿಯು ಅಶ್ವತ್ಥಾಮ-ಕೃಷ್ಣರ ಮಧ್ಯದಲ್ಲಿ ತಳವೆಳಗಾಗಿರುವ ಪರಿಸ್ಥಿತಿಯನ್ನು ಮನೋಹರವಾದ ಉಚಿತ ನಾಣ್ಣುಡಿಯಿಂದ ಬಣ್ಣಿಸಿದ್ದಾನೆ. ಜನರು ಜೀವನದಲ್ಲಿನ ವಿಷಮ ಪರಿಸ್ಥಿತಿಯನ್ನು ಎಷ್ಟು ಸ್ವಾಭಾವಿಕವಾಗಿ ಬಣ್ಣಿಸುವರು!

೩. ತಂದೆ ಸುತರ್ಗೆ ಕೂರದರೊಳರೆ? ತಂದೆಯಾದ ವಾಯುದೇವನು ಮೂರ್ಛೆ ಹೋದ ಭೀಮನನ್ನು ತನ್ನ ಸ್ಪರ್ಶದಿಂದೆಚ್ಚರಿಸಿದನೆಂಬಲ್ಲಿ ಹೇಳಿದ ಅಂದವಾದ ಮಾತು.

೪. "ಗುರುವಚನಮಲಂಘನೀಯ"ವೆಂದು ವಿಧೇಯತೆಯ ಪಾಠವನ್ನು ಸಾರುವ ಈ ಮಹಾವಾಕ್ಯವನ್ನು ರನ್ನನು ಎರಡು ಸಲ ಹೇಳುತ್ತಾನೆ. ಸಾಹಸಭೀಮವಿಜಯದಲ್ಲಿ ಧೃತರಾಷ್ಟ್ರನ ಬಾಯಲ್ಲೊಂದು ಸಲ, ಅಜಿತತೀರ್ಥಂಕರ ಪುರಾಣದಲ್ಲಿ (ಆ. ೬. ಪ. ೩೫) ಗುರುಗಳ ಹೇಳಿಕೆಯನ್ನು ಪರಮನು ಎಡೆಗೊಂಡನೆಂಬಲ್ಲಿ ಮತ್ತೊಂದು ಸಲ. ಇದು ರನ್ನನ ಕಾಲದ ಶಿಸ್ತು.

೫. ಕಯ್ಪೆಸೊರೆಯ ಕುಡಿಯೇಂ ಮಿಡಿಯೇಂ? ಸಂಜಯನು ಸುಯೋಧನನೊಡನೆ ಅಶ್ವತ್ಥಾಮನಿಗೆ ಇನ್ನಾದರೂ ಸೇನಾಧಿಪತ್ಯದ ಪಟ್ಟಕಟ್ಟೆನ್ನುವಾಗ ಸುಯೋಧನನು ಹೇಳಿದ ಕೊಂಕುಮಾತು. "ದ್ರೋಣನು ನಮಗೆ ಒಳ್ಳೆದು ಮಾಡಿದ್ದಾಯಿತು. ಇನ್ನು ಅವನ ಮಗ ಒಳ್ಳೆಯದನ್ನು ಮಾಡದಿರುವನೆ?" ಎಂದು ವ್ಯಂಗವಾಗಿ ಹೇಳುವನು. ಕಹಿಯಾದ ಸೊರೆ ಬೀಳಿನಲ್ಲಿ ಕುಡಿಯಾದರೇನು, ಮಿಡಿಯಾದರೇನು? ಎಲ್ಲವೂ ಒಂದೇ ಕಹಿ ಎಂಥ ಅರ್ಥವತ್ತಾದ ಕನ್ನದ ಮಾತಿದು.

೬. ಸತ್ತರ್ ಪುಟ್ಟರೆ? ಇದೊಂದು ಮಾತು, 'ಹುಟ್ಟಿದವರಿಗೆ ಸಾವು ತಪ್ಪದು' ಎಂಬುದರ ವಿಲೋಮದಂತಿದೆ. ಭವಾವಳಿಗಳಲ್ಲಿ ನಂಬಿಕೆಯಿರುವ ಸಮಾಜದ ಗಾದೆಯಿದು. ಏನಾಯಿತು, ಈ ಜನ್ಮದಲ್ಲಲ್ಲವಾದರೆ ಇನ್ನೊಂದು ಜನ್ಮದಲ್ಲಾಗಲಿ ಜಯ; ಈಗ ಛಲವನ್ನು ಮೆಱೆಯಲೇಬೇಕೆಂಬ ಅಭಿಮಾನಧನ ಸುಯೋಧನನ ಅಭಿಪ್ರಾಯವಿದು. ಇದನ್ನೇ ಭೀಮನೂ ವೈಶಂಪಾಯನ ಸರೋವರದ ಸಮೀಪದಲ್ಲಿ ಸುಯೋಧನನ್ನು ಮೂದಲಿಸುವಾಗ ಹೇಳುವನು: "ಚಿಃ ಸತ್ತರೇಂ ಪುಟ್ಟರೆ"?

೭. "ನೇರ್ಪಿಂಗೆ ನೇರ್ಪು" (ಮುಯ್ಯಿಗೆ ಮುಯ್ಯಿ) ಎಂಬುದನ್ನು ಸುಯೋಧನನು ಹೇಳುತ್ತಲೇ ಇರುವನು.

೮. ತಿಂಬರನಲ್ಲದೆ ಕುಱಿಮೆಚ್ಚದೆಂಬ ನುಡಿ (ಅಜಿತತೀರ್ಥಂಕರ ಆ. ೨. ಪದ್ಯ ೬೮). ಬೇರೆ ಮತಗಳು ಚೆನ್ನಾಗಿಲ್ಲವಾದರೂ ಕೆಲವರು ಅವನ್ನೇ ಹಿಡಿದು ಕೊಳ್ಳುವರೆಂಬಲ್ಲಿ ಹೇಳಿದ ಗಾದೆಯಿದು. ಎಷ್ಟು ಪರಿಣಾಮಕಾರಿಯಾಗಿದೆ ಈ ಮಾತು?

೯. ಪೈತ್ತಿಕ ಮಾರ್ಗಿರ್ದವರ್ಗೆ ಪಾಲ್ ಕಯ್ಪಿಯಪ್ಪವೋಲ್ (ಅಜಿತ ಆಶ್ವಾಸ ೨. ಪದ್ಯ ೯೨). ಕುಮಾರ್ಗವನ್ನು ಹಿಡಿದವರಿಗೆ ಜಿನಧರ್ಮ ಕಥಾಶ್ರವಣವು ಹೇಗೆ ಹಿತವಾಗಿ ಕಾಣದೆಂಬುದನ್ನು ಒತ್ತಿ ಹೇಳಿದ ಸಂದರ್ಭವಿದು. ಹೀಗೆಯೇ—

೧೦. ಮೌನಂ ಸರ್ವಾರ್ಥ ಸಾಧನಂ...

೧೧. ಆರಾಧ್ಯಂ ನ ಪ್ರಕೋಪಯೇತ್,
೧೨. ಅಶುಭಸ್ಯ ಕಾಲಹರಣಂ,
೧೩. ಗಂಡಸ್ಯೋಪರಿ ಸ್ಫೋಟಕಂ,
೧೪. ಪೆಂಡಿರ್ ಪಟಿಯಿಸುವಂದದೆ ಗಂಡರ್ ಪಟಿಯಿಸಿದೊಡೆ,
೧೫. ಕರವಾಳಂ ಮಸೆವಂದದೆ ಮರವಾಳಂ ಮಸೆಯ ಕೂರಿತಕ್ಕುಮೆ?
೧೬. ಬೈತ್ತುದು ಪೆಱಗೆ
೧೭. ಪಾಲೆಂಬ ತೆಱದೆ ಪಶುವಿನ ಪಾಲಂ ಪೋಲುವುದೆ ನಾಯ ಕಳ್ಳಿಯ ಪಾಲ್ಗಳ್

ಇವೆಲ್ಲಾ ಅಂದಿನ ಕನ್ನಡ ಸಮಾಜದ ಸಂಸ್ಕೃತಿಯ ಉನ್ನತಿಕೆಯನ್ನು ಸಾರುವುವು.

ಸಾಹಸಭೀಮವಿಜಯವನ್ನು ಓದುವಾಗ ಕ್ಷಾತ್ರ ಯುಗವು ನಮ್ಮ ಕಣ್ಣ ಮುಂದೆ ಬರುತ್ತದೆ. ಅದೊಂದು ವೀರರಸಪ್ರಧಾನವಾದ ಕಾವ್ಯ. ಚಾಲುಕ್ಯರ ವೀರ ಯುದ್ಧೋದ್ಯಮಗಳು ಅಲ್ಲಿ ಪ್ರತಿಬಿಂಬಿತವಾಗಿವೆ. ಕೆಲವೆಡೆ ಅಂದಿನ ಕೆಲವು ವ್ಯಕ್ತಿಗಳೂ ಸನ್ನಿವೇಶಗಳೂ ನುಸುಳಿಕೊಂಡಿವೆ. ದುರ್ಯೋಧನನು ರಣರಂಗದಲ್ಲಿ ಪ್ರಲಾಪಿಸುತ್ತಿರುವುದು ಮನುಷ್ಯಜೀವನದ ಒಂದು ಸ್ವಾಭಾವಿಕ ಚಿತ್ರವಾಗಿ ಪರಿಣಮಿಸಿದೆ. ವೀರನೂ ಅಭಿಮಾನಧನನೂ ಮಹಾನುಭಾವನೂ ವರ್ತಿಸುವಂತಿದೆ ಅವನ ವರ್ತನೆ.

"ಮಕ್ಕಳ ಮತ್ತು ಪ್ರಿಯಮಿತ್ರಾನುಜರ ಅಳಿವನ್ನು ಕಾಣಿಸಿ ಈ ಪಾಪಕರ್ಮನಿಗೆ ಇನ್ನೇನನ್ನು ಕಾಣಿಸಲಿರ್ಪ ವಿಧಾತ್ರನೆ? ಯಾರೊಡನೆ ಮಾತನಾಡುವೆನು? ಯಾರೊಡನೆ ಓಲಗದಲ್ಲಿರುವೆನು? ಕರ್ಣನು ನನಗಾಗಿ ಪ್ರಾಣವನ್ನೇ ಬಿಟ್ಟನು, ನಾನು ಅವನಿಗಾಗಿ ಕಣ್ಣೀರನ್ನೂ ಬಿಡಲಿಲ್ಲ. ಅವನು ತನ್ನದಾಗಬೇಕಾಗಿದ್ದ ಭೂಮಂಡಲವನ್ನೇ ನನಗೆ ಕೊಟ್ಟನು. ನಾನು ಅವನಿಗೆ ತರ್ಪಣವನ್ನು ಕೂಡ ಕೊಡಲಿಲ್ಲ. ಅವನು ತನ್ನ ಪ್ರತಾಪಾಗ್ನಿಯಿಂದ ಪರರಾಜ್ಯವನ್ನು ಸುಟ್ಟನು; ನಾನಾದರೆ ಶಾಸ್ತ್ರೋಕ್ತವಾಗಿ ಅವನ ಶವಸಂಸ್ಕಾರವನ್ನೂ ಮಾಡಲಿಲ್ಲ. ನನಗೆ ಪ್ರಿಯತಮನೆನಿಸಿದ ಕರ್ಣನಿಗೆ ನಾನು ತೋರಿಸಿದ ಪ್ರೀತಿಯಾದರೂ ಎಂಥದು?" ಅದೇ ಕರ್ಣನ ಇದೊಂದು ಚಿತ್ರ ವೀರ್ಯಜೀವನದ ಎಂಥ ಆದರ್ಶವಾಗಿದೆ?

ಗುರುದೀಕ್ಷಾವಿಧಿಗಳ್ಗೆ ಮಂತ್ರಿಹಿತಕಾರ್ಯಾಳೋಚನಕ್ಕಾಳ್ದನು
ರ್ವರೆಯಂ ಕಾವಗುಣಕ್ಕೆ ನರ್ಮಸಚಿವಂ ಕ್ರೀಡಾರಸಕ್ಕಾನೆಯೊಳ್
ಗುರುಭಾರಕ್ಕಿರಿವಾಳ್ ರಣಕ್ಕೆ ತುಳಿವಾಳ್ ಕಟ್ಟಾಯದೊಳ್ ಮೇಳದಾಳ್
ಪರಿಹಾಸಕ್ಕೆನಿಸಿರ್ದನೆಂತು ಮರೆವಂ ದುರ್ಯೋಧನಂ ಕರ್ಣನಂ ॥

ಗದಾಯುದ್ಧದಲ್ಲಿ ಬರುವ ಲಕ್ಷ್ಮೀವಿಡಂಬನೆ, ಬಾಣಸಿಗನ ಬೆಸನಗಳು ಸ್ವಾಭಾವಿಕ ಚಿತ್ರಗಳು.

ಬಾಣಸಿಗ:—

ಎಸರನಿಡುವಕ್ಕಿಗರ್ಚುವ
ಬೆಸನಂ ಕಯ್ಗೆರೆವ ಕಂಚುಗರ್ಚುವ ಬೆಸನಂ
ಬೆಸನಕ್ಕುಂ ಮತ್ಸ್ಯನ ಬಾ
ಣಸಿಗಂಗಾರಿತ್ತರೆಲವೊ ನಿನಗೀ ಬೆಸನಂ ॥

ಲಕ್ಷ್ಮೀ:—

ಇರಿಯಿಸುವೆ ತಂದೆಮಕ್ಕಳ
ನಿರಿಯಿಸುವೆಯರ್ ಸೋದರರ್ಕಳಂ ತಮ್ಮೊಳ್ ತ-
ಳ್ತಿರಿಯಿಸುವಯರ್ ಗುರುಶಿಷ್ಯರ
ನರಗುಲಿ ನಿನ್ನಿಂ ನಿಕೃಷ್ಟರಾದರು ಮೊಳರೇ ॥

ಈ ಕಾವ್ಯಗಳಲ್ಲಿ ಎಷ್ಟೋ ಅಂದಿನ ಕಾಲದಲ್ಲಿ ರೂಢಿಯಲ್ಲಿದ್ದ ವಸ್ತುಗಳ ಹೆಸರುಗಳು ಬಂದಿವೆ.

ಆಯುಧಗಳು–ಕಯ್ದು, ಹಲ, ಚಕ್ರ, ಅಂಕುಶ, ಭಿಂಡಿವಾಳ, ಅಂಬು, ಕರವಾಳ, ಕಕ್ಕಡೆ, ಕೊಂತ ಮೊದಲಾದುವು.

ಸಂಗೀತನಾಟ್ಯಗಳಿಗೆ ಸಂಬಂಧಿಸಿದುವು—ಜವನಿಕೆ, ನಾಟ್ಯರಂಗ, ಬದ್ದವಣ, ಪಱೆ, ಬೀಣೆ, ತಿಸರ, ದೇಸಿ, ಮಾರ್ಗ, ಐಂದ್ರ ನಾಟಕವಿಧಿ, ಆಂಗಿಕ, ವಾಚಿಕ ಸಾತ್ವಿಕ, ಆಹಾರ್ಯ, ಯತಿ, ಪದವಿನ್ಯಾಸ, ಕರವಿನ್ಯಾಸ, ವಾದ್ಯ, (ಅಷ್ಟವಿಧ), ತಾಂಡವ, ಲಾಸ್ಯ ಇತ್ಯಾದಿ.

ಅಜಿತತೀರ್ಥಂಕರ ಚರಿತೆಯ ಐದನೆಯ ಆಶ್ವಾಸದಲ್ಲಿ ಅಭಿವರ್ಣಿತವಾದ ದೇವಲೋಕದ ನಾಟ್ಯವು ಅಂದು ಕರ್ಣಾಟಕದಲ್ಲಿ ಭರತನಾಟ್ಯವು ಚೆನ್ನಾಗಿ ನೆಲಸಿದ್ದಿತೆಂಬುದನ್ನು ನಿಸ್ಸಂದೇಹವಾಗಿ ಸಾಧಿಸುವುದು.

ಅಜಿತಪುರಾಣದ ಐದನೆಯ ಆಶ್ವಾಸದ ೭೪ನೆಯ ಪದ್ಯದಿಂದ ಅಂದು ಜನರಿಗೆ ಚದುರಂಗದ ಆಟವೂ ತಿಳಿದಿದ್ದಿತೆನ್ನಬಹುದು.

ಮಡಿವಳ್ಳರು, ಮಾಲೆಗಾಜಿರು, ಕೋವರ, ಮಜ್ಜನವಳ್ಳರು ಮೊದಲಾದ ಕಾಯಕವರ್ಗದವರೂ ಅಂದಿನ ಕನ್ನಡ ಸಮಾಜದಲ್ಲಿದ್ದರು.

ಸುಮಂಗಲೆಯರ ಮಾಂಗಲ್ಯಚಿಹ್ನೆಗಳು ಹೀಗಿದ್ದವು:—ಸಿರಿಗನ್ನಡಿ, ಮಂಗಲವಸ್ತ್ರ, ಕಾಲಲತಗೆ, ಕಣ್ಣಕಾಡಿಗೆ. ಇನ್ನು ರಾಣೀವಾಸದ ವಿಳಾಸಕ್ಕೆ ಸೀಗುರಿ, ಡವಕೆ, ಚಾಮರ, ದೀವದ ರಾಜಹಂಸಗಳು, ರಾಜಕೀರಂಗಳು, ಮೃಗ ಪೋತಕಂಗಳು, ಬೀಣೆ, ತಿಸರ, ಇತ್ಯಾದಿ.

ಅಜಿತತೀರ್ಥಂಕರ ಪುರಾಣದಲ್ಲಿ ಏಳನೆಯ ಆಶ್ವಾಸದಲ್ಲಿ ಗ್ರಾಮ, ನಗರ, ಖೇಡ, ಖರ್ವಡ ಮಡಂಬ ಪತ್ತನ ದ್ರೋಣಾಮುಖ ಎಂಬೀ ದೇಶವಿಭಾಗಗಳನ್ನು ಕಾಣುತ್ತೇವೆ.

ತನ್ನ ಮಗನ ಮತ್ತು ಮಗಳ ಜನನ ಕಾಲಗಳನ್ನು ಹೇಳಿದಾಗ ಸಂವತ್ಸರ, ತಿಂಗಳು, ಪಕ್ಷ, ತಿಥಿ, ವಾರ, ನಕ್ಷತ್ರ, ಯೋಗ, ರಾಶಿ, ಲಗ್ನ, ಅಂಶ ಇತ್ಯಾದಿಗಳನ್ನು ವಿವರವಾಗಿ ಕೊಟ್ಟಿರುತ್ತಾನೆ (ಅಜಿತ–ಆಶ್ವಾಸ ೧೨–ಪದ್ಯಗಳು ೫೧, ೫೨). ಇದರಿಂದ ಅಂದು ಜ್ಯೋತಿಷ್ಯಜ್ಞಾನ ಜಾತಕ ಫಲಗಳಲ್ಲಿ ಜನರಿಗೆ ನಂಬುಗೆಯಿದ್ದಂತೆ ಕಾಣುತ್ತದೆಂದರೆ ತಪ್ಪಾಗದು.

ಸಾರಾಂಶ:—ಮೇಲೆ ಹೇಳಿದ ಕೆಲವು ಉದಾಹರಣೆಗಳಿಂದ ಹತ್ತನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿ ಜನರು ಆಸ್ತಿಕರಾಗಿದ್ದರು, ಪುರುಷಾರ್ಥಗಳಾದ ಧರ್ಮಾರ್ಥಕಾಮಮೋಕ್ಷಗಳನ್ನು ಸಾಧಿಸುತ್ತಿದ್ದರು, ತುಂಬ ತಿಳುವಳಿಕೆಯಿದ್ದವರು (ಕುರಿತೋದದೆಯೆ), ಕಲಾವಂತರು, ಮಹಾವೀರರು, ಸ್ತ್ರೀಯರೂ ಗಣನೀಯ ಸ್ಥಾನವನ್ನು ಸಮಾಜದಲ್ಲಿ ಪಡೆದಿದ್ದರು, ಪರಮತ ಸಹಿಷ್ಣುಗಳು, ಸುಸಂಸ್ಕೃತರು ಎಂಬುದಾಗಿ ಎದೆತಟ್ಟಿ ಹೇಳಬಹುದು. ಈ ಚಿತ್ರಕ್ಕೆ ನಾವು ಮಹಾಕವಿ ರನ್ನನಿಗೆ ಋಣಿಗಳು. ಈ ಆತ್ಮವಿಶ್ವಾಸದಿಂದ ನಮ್ಮ ಭವಿಷ್ಯವು ಚೆನ್ನಾಗಲಿ!

ಭಾರತೀಯ ಇತಿಹಾಸದಲ್ಲಿ ಕರ್ಣಾಟಕ

ಪ್ರೋ. ಬಿ. ಎ. ಸಾಲೆತ್ತೂರು, (ಮುಂಬಯಿ ವಿದ್ಯಾ ಇಲಾಖೆ).

ಆಧುನಿಕ ಭಾರತೀಯರ ಮನೋವೃತ್ತಿಯಲ್ಲಿ, ನಮ್ಮ ಹಿಂದುಸ್ತಾನದ ಚರಿತ್ರೆಯಲ್ಲಿ, ಕರ್ಣಾಟಕವು ಹಿಂದೆ ಎಂತಹ ಪಾತ್ರ ವಹಿಸಿತ್ತು ಎಂಬ ವಿಚಾರದಲ್ಲಿ ತೀರ ಹೆಚ್ಚಿನ ಅಜ್ಞಾನ ತಲೆದೋರಿದೆ. ಈ ಅಜ್ಞಾನಕ್ಕೆ ರಾಜ ತಂತ್ರಜ್ಞರೂ, ವಿದ್ವಾಂಸರೂ ಸಮಭಾಗಿಗಳೆಂದರೂ ತಪ್ಪಾಗಲಾರದು. ಕರ್ಣಾಟವು ಏಕೀಕರಣದ ಸಲು ವಾಗಿ ತನ್ನ ಕೇಳಿಕೆಯನ್ನು ಮುಂದಿಟ್ಟಾಗಲೆಲ್ಲ, ಆ ಕೇಳಿಕೆಯನ್ನು ರಾಜಕೀಯ ರಂಗದಲ್ಲಿ ಚುನಾವಣೆಯ ಕಾಲದಲ್ಲಿ ಕೊಟ್ಟ ಭರವಸೆಗಳನ್ನು ಪೂರೈಸಬೇಕು ಎಂಬ ದೃಷ್ಟಿಯಿಂದ ಒಪ್ಪುತ್ತಿದ್ದಾರೆಯೇ ಹೊರತು, ಕರ್ಣಾಟಕಕ್ಕೆ ಏಕೀಕರಣದ ಅಧಿಕಾರವು ಚಾರಿತ್ರಿಕ, ಸಾಂಸ್ಕೃತಿಕ ಮತ್ತು ಭಾಷಾದೃಷ್ಟಿಗಳಿಂದ, ಬರತಕ್ಕದು—ಎಂದು ತಿಳಿಯುವವರು ಕಡಿಮೆ. ಈ ಚಿಕ್ಕ ಬರಹದಲ್ಲಿ ಕರ್ಣಾಟಕದ ಕೇಳಿಕೆಗಳನ್ನು ಚರ್ಚಿಸುವುದು ನಮ್ಮ ಮುಖ್ಯ ಗುರಿಯಲ್ಲ. ಬದಲು ಕ್ರಿ. ಶ. ಮೂರನೆಯ ಶತಮಾನಕ್ಕೂ ಪೂರ್ವದಿಂದ (ಅದಕ್ಕೂ ಮೊದಲೆಂದರೂ ತಪ್ಪಾಗಲಾರದು) ಕರ್ಣಾಟಕವು ಭಾರತೀಯ ಇತಿಹಾಸದಲ್ಲಿ ಯಾವ ಪಾತ್ರವನ್ನು ವಹಿಸಿತ್ತು ಎಂಬುದನ್ನು ತೋರಿಸುವುದೇ ನಮ್ಮ ಆಸೆಯಾಗಿದೆ.

ಕ್ರಿ. ಶ. ಎರಡನೆಯ ಶತಮಾನದಲ್ಲಿ ಕರ್ಣಾಟಕದ ಕೀರ್ತಿ, ಸಾಗರಗಳ ಆಚೆಯೂ ಪಸರಿಸಿತ್ತು ಎಂಬುದಕ್ಕೆ ದಾಖಲೆಗಳಿವೆ. ಈ ವಿಷಯವನ್ನು ಒಳಗೊಂಡ ಗ್ರೀಕ್ ಕನ್ನಡ ಪ್ರಹಸನವೊಂದರಲ್ಲಿ, ಗ್ರೀಕ್ ತರುಣತರುಣಿಯರ ಒಂದು ಗುಂಪು ಪಾತ್ರ ವಹಿಸಿದ ರಾಜಕೀಯ ಮತ್ತು ಶೃಂಗಾರಪೂರಿತವಾದ ಒಂದು ಪ್ರಸಂಗವಿರುತ್ತದೆ. ಇದನ್ನು ಕುರಿತು ಸವಿವರವಾಗಿ "History of Tuluva P.P. 584-597" ಎಂಬ ನಮ್ಮ ಬರಹದಲ್ಲಿ ಹೇಳಿದೆ. ಗ್ರೀಕರಂತಹ ಜನ ಕನ್ನಡದಂತಹ ಬರ್ಬರ ಭಾಷೆಯನ್ನು ಆಡಿರಲಾರರು ಎಂಬ ವಾದ ಹುರುಳಿಲ್ಲದ್ದು. ಆಗಿನ ಕಾಲದ ಗ್ರೀಕರಲ್ಲಿ ಹಲವರಿಗೆ ಕನ್ನಡ ಭಾಷೆಯ ಪರಿಚಯ ಚೆನ್ನಾಗಿತ್ತು. ಮಾತ್ರವಲ್ಲ; ಹಿಂದುಸ್ಥಾನದ ಇನ್ನೂ ಕೆಲವು ಪ್ರಮುಖ ದೇಶಭಾಷೆಗಳನ್ನೂ ಅವರು ಆಡುತ್ತಿದ್ದರು. ಗ್ರೀಕರ ಮತ್ತು ರೋಮನರ ಚಿನ್ನದ ನಾಣ್ಯಗಳು ಕರ್ಣಾಟಕದ ಎಷ್ಟೋ ಭಾಗಗಳಲ್ಲಿ ದೊರಕಿವೆ; ಕರ್ಣಾಟಕದ ಹಲವು ಮುಖ್ಯ ಬಂದರುಗಳ ಮೂಲಕವಾಗಿ ಇಲ್ಲಿನ ಮತ್ತು ಅಲ್ಲಿನ ಜನರೊಡನೆ ವ್ಯಾಪಾರ ಧಾರಾಳವಾಗಿ ನಡೆಯುತ್ತಿತ್ತು. ಕ್ರಿ. ಶ. ಎರಡರಿಂದ ನಾಲ್ಕನೆಯ ಶತಮಾನದ ತನಕ, ಹಿಂದುಸ್ತಾನದ ಕೀರ್ತಿಯನ್ನು ಪಾಶ್ಚಾತ್ಯ ದೇಶಗಳಿಗೆ ಹರಡುವುದರಲ್ಲಿ ಕರ್ಣಾಟಕವು ದೊಡ್ಡ ಪಾತ್ರ ವಹಿಸಿತ್ತೆಂಬುದು ನಿರ್ವಿವಾದದ ಸಂಗತಿ.

ದೇಶದ ಕೇವಲ ಆಂತರಿಕ ವಿಚಾರಗಳನ್ನು ಪರಿಶೀಲಿಸಿದರೂ, ರಾಜಕೀಯ ಕ್ಷೇತ್ರದಲ್ಲಿ ಈ ನಾಡು ವಹಿಸಿದ ಭಾಗ ಅಲ್ಪವೂ ಅಲ್ಲ, ಅನಾದರಣೀಯವೂ ಅಲ್ಲ. ಕರ್ಣಾಟಕ ರಾಜ್ಯವು ವಿಸ್ತಾರಗೊಂಡದ್ದಿದ್ದರೆ ಅದು ಹದಿನೇಳನೆಯ, ಹದಿನೆಂಟನೆಯ ಶತಮಾನದ ಸಾಮ್ರಾಜ್ಯಶಾಹಿಗಳಂತೆ ಬೆಳೆದದ್ದಲ್ಲ ಎಂಬುದು ಹೆಮ್ಮೆಯ ಮಾತು. ಕನ್ನಡ ಸಂಸ್ಕೃತಿ ಬಂಗಾಳದಲ್ಲೂ, ನೇಪಾಳದಲ್ಲೂ ಎಷ್ಟೋ ಶತಮಾನಗಳ ಹಿಂದೆಯೇ ಅಂದರೆ ಅದು ವೈಭವಶಾಲಿಯಾಗಿದ್ದಾಗಲೇ ಹಬ್ಬಿತ್ತು. ಅದು ರಾಜಕೀಯ ವೈಭವದಿಂದ ಕೂಡಿದ್ದಾಗಲೇ ಇಲ್ಲಿನ ಸಂಸ್ಕೃತಿ ಹೊರನಾಡುಗಳಲ್ಲೂ ಬೇರು ಬಿಟ್ಟು ಬೆಳೆದುದನ್ನೂ ಕಾಣುತ್ತೇವೆ. ಶತಮಾನಗಳು ಕಳೆದ ಮೇಲೂ ಅದನ್ನು ನಾವು ಚೆನ್ನಾಗಿ ಗುರುತಿಸಬಹುದಾಗಿದೆ. ಕ್ರಿ. ಶ. 1097ಕ್ಕೆ ಕರ್ಣಾಟಕದ 'ಗಂಗ' ಮನೆತನದ ಒಬ್ಬ ಅರಸು, ನೇಪಾಲದ ಒಂದು ರಾಜವಂಶದ ಸ್ಥಾಪಕನೇ ಆದ. ಈತನೇ ನಾನೀಯ ದೇವ ಅಥವಾ ನಾನ್ಯ ದೇವ ಎಂಬವನು. ಅವನ ಅನಂತರ ಗಂಗದೇವ ಮತ್ತು ನಾಲ್ವರು ಆಳಿದರು. ಅವರಲ್ಲಿ ಕೊನೆಯವನು ನೇಪಾಳದ ರಾಜಧಾನಿಯನ್ನು ಕಾಟ್ಮಂಡು ನಗರಕ್ಕೆ ಒಯ್ದನು. ಆ ರಾಜಮನೆತನ ಅಲ್ಲಿಗೆ ಕೊನೆಗೊಂಡಿತು. ಪ್ರಾಚೀನ ಭಾರತೀಯ ಇತಿಹಾಸದ ಅಭ್ಯಾಸಿಗಳಿಗೆ, ಬಂಗಾಳದ

'ಸೇನ' ವಂಶಸ್ಥರು ಕರ್ಣಾಟಕದವರೆಂಬುದು ತಿಳಿದ ವಿಷಯ. ಈ ಸೇನವಂಶದ ಪ್ರಾರಂಭ ಸುಮಾರು ಕ್ರಿ. ಶ. 1050–1075ರ ಸಮಯವಿರಬೇಕು. ಇದು ಸಮಂತಸೇನ ಎಂಬವನಿಂದ ತೊಡಗಿತು. ಅವನ ವಂಶಜರಲ್ಲಿ ಒಬ್ಬನು ಲಕ್ಷ್ಮಣಸೇನ ಎಂಬವನು. (ಕ್ರಿ.ಶ. 1285–1306) ಮಥಾಯಿ ನಗರದ ನವ ಶಾಸನ ಒಂದಿದೆ. ಶಾಸನದಲ್ಲಿನ ವರ್ಣನೆಯ ಪ್ರಕಾರ ಸಮಂತಸೇನನು ಕರ್ಣಾಟಕ ಕ್ಷತ್ರಿಯರ ಕುಲ ಶಿರೋಧ್ಧಾಮನೆಂದು ಬಣ್ಣಿಸಲಾಗಿದೆ. ಈ ಶಾಸನ ಸ್ಥಾಪಕನ ವಿಚಾರದಲ್ಲೇ, ಇನ್ನೊಂದು ದಾಖಲೆಯಲ್ಲಿ ಇನ್ನೊಂದು ಸಂದರ್ಭದಲ್ಲಿ ಕರ್ಣಾಟಕ ಲಕ್ಷ್ಮೀ ಲುಂಠಕರನ್ನು ಆತ ದಂಡಿಸಿದಾತನೆಂದು ಹೊಗಳಿದ್ದಾರೆ. ಈ ಮಾತಿನಿಂದ ಆತ ಕರ್ಣಾಟಕ ಲಕ್ಷ್ಮಿಯನ್ನು ಆ ಗೌರವವನ್ನು ಕಾಪಾಡಿದ ವ್ಯಕ್ತಿ ಎಂದು ಸೂಚನೆಯಾಗುವುದಿಲ್ಲವೇ? ಕರ್ಣಾಟಕ ಸಂಸ್ಕೃತಿಯ ವರ್ಚಸ್ಸು ಉತ್ತರದಲ್ಲಿ ಕಾಶ್ಮೀರದ ತನಕವೂ, ಪಶ್ಚಿಮದಲ್ಲಿ ಗುಜರಾತಿನ ತನಕವೂ ಹೇಗೆ ಹಬ್ಬಿತೆಂಬುದನ್ನು ಇಲ್ಲಿ ವಿಸ್ತರಿಸಲಾರೆವಾದರೂ ಸುಮಾರು ಆರನೆಯ ಶತಮಾನದಿಂದ ಹನ್ನೆರಡನೆಯ ಶತಮಾನದ ಕೊನೆಯ ವರೆಗೆ ಕರ್ಣಾಟಕದ ಸಂಸ್ಕೃತಿಯು ಬಹುಮಟ್ಟಿಗೆ ಹಿಂದುಸ್ತಾನದ ಎಲ್ಲ ಪ್ರಾಂತಗಳ ಮೇಲೂ ತನ್ನಪ್ರಭಾವವನ್ನು ಬೀರಿ, ಒಂದಲ್ಲ ಒಂದು ರೀತಿಯ ಉತ್ತಮ ಪರಿಣಾಮ ಉಂಟುಮಾಡಿದ್ದನ್ನು ಕಾಣುತ್ತೇವೆ.

ಹದಿನಾಲ್ಕರಿಂದ ಹದಿನೇಳನೆಯ ಶತಮಾನದ ತನಕ ಮತ್ತು ಹದಿನೆಂಟನೆಯ ಶತಮಾನದ ಪೂರ್ವಾರ್ಧದಲ್ಲಿ ವಿಜಯನಗರ ಸಾಮ್ರಾಜ್ಯವೂ, ಅದರ ಪ್ರಬಲ ನಾಯಕರುಗಳೂ ಸುತ್ತಮುತ್ತಲೂ ಬೀರಿದ ವರ್ಚಸ್ಸು ಅಷ್ಟಿಷ್ಟಲ್ಲ. ಆಗ ಈ ವಿಜಯನಗರ ಸಂಸ್ಥಾನದ ಕೀರ್ತಿ ಹಿಂದುಸ್ಥಾನದಲ್ಲಷ್ಟೇ ಅಲ್ಲ; ಯುರೋಪಿನ ದೇಶಗಳಲ್ಲೂ ಹಬ್ಬಿತ್ತು. ಅವರು ವಿಜಯನಗರವನ್ನು 'ಬಿಸ್ ನಗ' ಎಂದು ಕರೆದರು. ಆಗಿನ ಕಾಲದಲ್ಲಿ ಬಿಸ್‌ನಗ ಎಂಬ ಮಾತು ಹಿಂದೂ ಸಂಸ್ಕೃತಿಯ ಹಿರಿಮೆಗೂ, ಸಂಪ್ರದಾಯಕ್ಕೂ ಒಂದು ಸಂಕೇತವೆನಿಸಿತ್ತು. ಹದಿನೈದನೆಯ ಶತಮಾನದಲ್ಲಿ, ಯುರೋಪಿಯಾನರು ಉಳಿದೆಲ್ಲ ಜನಗಳನ್ನು ಕಡೆಗಣಿಸಿ ನೋಡುತ್ತಿದ್ದಾಗಲೂ ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳಲ್ಲಿ ಸ್ನೇಹಸಂಬಂಧವನ್ನು ಬೆಳೆಸುವ ಯೋಜನೆಯಿಂದ, ಒಬ್ಬ ಯುರೋಪಿಯನ್ ರಾಜಕುಮಾರಿಯನ್ನು ವಿಜಯನಗರದ ಅರಸು ಮಗನೊಬ್ಬನಿಗೆ ವಿವಾಹಮಾಡಿಕೊಡುವ ಕಲ್ಪನೆಯನ್ನು ಮಾಡಿದ್ದರು.

ಈ ಹೊತ್ತು, ಹಿಂದೂ ಸಂಸ್ಕೃತಿಗೆ ಕರ್ಣಾಟಕ ಸಲ್ಲಿಸಿದ ವಿವಿಧ ಕಾಣಿಕೆಗಳನ್ನು ನಾವು ಬಹುವಾಗಿ ಬಣ್ಣಿಸಬೇಕಾದ ಅವಶ್ಯಕತೆ ಇದೆಯೇ? ಶಿಲ್ಪದಲ್ಲೇ ಇರಲಿ, ವಾಸ್ತು ಶಿಲ್ಪದಲ್ಲೇ ಇರಲಿ, ಸಂಗೀತ ಕಲೆಯಲ್ಲೇ ಇರಲಿ ಅಥವಾ ತತ್ವಜ್ಞಾನ ಮೊದಲಾದ ಜೀವನದ ಇನ್ನಿತರ ಪ್ರಮುಖ ವಿಚಾರಗಳಲ್ಲೇ ಇರಲಿ– ದೇಶದ ಒಟ್ಟು ಕಲ್ಯಾಣಕ್ಕಾಗಿ ಕರ್ಣಾಟಕ ಸಲ್ಲಿಸಿದ ಕಾಣಿಕೆ ಅಮೋಘವಾಗಿದೆ. ವಿಜಯನಗರ ಸಾಮ್ರಾಜ್ಯವು ಉದಯಿಸಿ, ಮೆರೆದು, ನಶಿಸಿದ ಮೇಲೆಯೂ ಅದರ ಪ್ರಬಲ ನಾಯಕರು ವಿಜಯನಗರದಲ್ಲಿ ಪ್ರಚಲಿತವಾದ ಸಂಪ್ರದಾಯಗಳನ್ನು ದಕ್ಷಿಣ ದೇಶದಲ್ಲೂ ಪ್ರಚಾರಗೊಳಿಸಿದರು. ದಕ್ಷಿಣದ ನಾಯಕ ಅರಸು ಮನೆತನದವರು ತ್ಯಾಗರಾಜ ಭಾಗವತರಂತಹ ಕರ್ಣಾಟಕ ಸಂಗೀತ ಶಿಖಾಮಣಿಗೆ ಆಶ್ರಯವನ್ನು ಕೊಟ್ಟು, ನಾಡಿಗೆ ಅವರಿಂದ ಅಮೋಘ ಭಕ್ತಿಪರ ಕೃತಿಗಳು ದೊರಕುವಂತೆ ಮಾಡಿದರು.

ಹಿಂದುಸ್ತಾನದಲ್ಲಿ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ಒಂದು ಮೂರ್ತಸ್ವರೂಪವೂ, ತಾಳಿಕೆಯೂ ಬರುವಂತೆ ಮಾಡಿದ ಶ್ರೇಯಸ್ಸು, ಇತರ ಎಲ್ಲ ಭಾಗಗಳಿಗಿಂತಲೂ ಹೆಚ್ಚಾಗಿ ಕರ್ಣಾಟಕಕ್ಕೇ ಸಲ್ಲಬೇಕು. ಆದರೂ ನಮ್ಮ ರಾಜಕೀಯ ಮುಂದಾಳುಗಳು ಕರ್ಣಾಟಕದ ಏಕೀಕರಣದ ಪ್ರಶ್ನೆಯನ್ನು ಕುರಿತು ತಾಳುವ ಮನೋಭಾವವನ್ನು ಕಂಡರೆ, ಇದು ಕೇವಲ ಅವರ ಕೃಪಾಭಾವ, ದಯಾಬುದ್ಧಿಗಳನ್ನು ಹೊಂದಿದ ಪಾರಿತೋಷಕವೆಂಬಂತೆ ತೋರಿಸುವುದು ತಕ್ಕುದಲ್ಲ. ಕನ್ನಡ ಭಾಗಗಳು ಹಿಂದುಸ್ಥಾನದ ಇತರ ಯಾವ ಪ್ರಾಂತವಿಭಾಗವೂ ಪಡಲಾರದಷ್ಟು ಸಂಕಷ್ಟಕ್ಕೂ ಅನ್ಯಾಯಕ್ಕೂ ಗುರಿಯಾದ ಭಾಗವಾಗಿದೆ. ಕರ್ಣಾಟಕದ ಏಳಿಗೆಯನ್ನು ಬಿಟ್ಟು, ಭಾರತದ ಉದ್ಧಾರವಾದೀತು ಎಂದು ತಿಳಿಯುವುದು ತೀರ ತಪ್ಪು.

ಕಾವ್ಯ ಲಕ್ಷಣವು

ಶಿರೋಮಣಿ ಕೊಳಕೆ ಪರಮೇಶ್ವರ ಸುಯ್ಯ, ಎಮ್. ಓ. ಎಲ್., ಸಂಸ್ಕೃತಾಧ್ಯಾಪಕ
ಗವರ್ನಮೆಂಟ್ ಆರ್ಟ್ಸ್ ಕಾಲೇಜು, ಅನಂತಪುರ.

ನಮ್ಮ ವಾಙ್ಮಯವು ಲಕ್ಷಣದಿಂದ ಕೂಡಿರುವುದು. ಲಕ್ಷಣವಿಲ್ಲದಿದ್ದರೆ ಒಬ್ಬರಿಂದೊಬ್ಬರಿಗೆ ಅರ್ಥಮಾಡಿಕೊಳ್ಳುವುದು ಕಷ್ಟವು. ಆದುದರಿಂದ ಲಾಕ್ಷಣಿಕರು ಪ್ರತಿಯೊಂದು ವಿಷಯದಲ್ಲಿಯೂ ನಿಯಮವನ್ನು ಮಾಡಿರುವರು. ಹೀಗಿರುವುದರಿಂದ ನಮ್ಮ ಸಂಸ್ಕೃತ ಕನ್ನಡ ವಾಙ್ಮಯಗಳು ರಾಮಸೇತುವಿನಿಂದ ಕೈಲಾಸ ವರೆಗಿರುವ, ನಮ್ಮವರು ಹೇಳಿದ ಗೋದಾವರಿಯಿಂದ ಕಾವೇರಿಯ ವರೆಗಿರುವ ಜನರು, ಅಷ್ಟೇಕೆ, ಸಂಸ್ಕೃತವು ಪ್ರಪಂಚದೆಲ್ಲೆಡೆಯಲ್ಲಿಯೂ ನಮ್ಮ ಕನ್ನಡವು ಗ್ರೀಕ ದೇಶದ ವರೆಗೂ ವ್ಯಾಪಿಸಿರುವುದು ನಮಗೆ ತಿಳಿದಿದೆ. ಕವನ ಮಾಡುವವರೆಲ್ಲರೂ ಕವಿಗಳಾಗಲಾರರು. ಕವಿಯು ಮಾಡಿದ ಕಾವ್ಯದಲ್ಲಿ ರಸ ಮತ್ತು ಭಾವವು ಮಿಶ್ರವಾಗಿರಬೇಕು. ಅಂತಹ ಕವಿತ್ವವು ಆಚಂದ್ರಾರ್ಕವಾಗಿರುವುದು. ಆದುದುರಿಂದ ಕಾಳಿದಾಸಾದಿ, ರನ್ನಾದಿಗಳ ಕಾವ್ಯಗಳನ್ನು ಅಭಿನಂದಿಸಿ ಅವರ ವರ್ಧಂತ್ಯುತ್ಸವಗಳನ್ನು ಜನರು ಆನಂದದಿಂದ ಕೊಂಡಾಡಿ ಜರಗಿಸುತ್ತಿರುವರು. ಕವಿಯಾಗುವವನು ಶಿಷ್ಟ ಪರಂಪರೆಯ ಗ್ರಂಥಗಳನ್ನು ಪರಿಶೀಲಿಸಿ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ಪಾಣಿನಿ, ಭಾಮಹ ಮಮ್ಮಟ, ಕೇಶಿರಾಜ, ಭಟ್ಟಾಕಳಂಕ ನಾಗವರ್ಮಾದಿಗಳೇ ನಮಗೆ ಶಿಷ್ಟರು. ಅವರ ಮಾರ್ಗವನ್ನನುಸರಿಸಿ ನಾವು ಕಾವ್ಯಗಳನ್ನು ಬರೆದರೆ ದೋಷರಹಿತವಾಗುವುದು. ಶಬ್ದರೂಪವಾದ ಜ್ಯೋತಿಯು ಪ್ರಪಂಚವಿರುವಷ್ಟು ಕಾಲ ಬೆಳಗಬೇಕಾದರೆ ಅದು ನಿರ್ದುಷ್ಟವಾಗಿರಬೇಕು. ಮಹಾ ಭಾಷ್ಯಕಾರರಾದ ಪತಂಜಲಿಗಳು

ಯಸ್ತು ಪ್ರಯುಂಕ್ತೇ ಕುಶಲೋ ವಿಶೇಷೇ ಶಬ್ದಾನ್ಯ
ಥಾವದ್ವ್ಯವಹಾರ ಕಾಲೇ ।
ಸೋನಂತ ಮಾಪ್ನೋತಿಜಯಂ ಪರತ್ರವಾಗ್ಯೋಗ
ವಿದ್ದುಷ್ಯತಿಚಾಪಶಬ್ದೈಃ ।

ಎಂದು ವ್ಯವಹಾರದಲ್ಲಿ ದುಷ್ಟ ಶಬ್ದಗಳನ್ನುಪಯೋಗಿಸದೆ ನಿರ್ದುಷ್ಟ ಶಬ್ದಗಳನ್ನುಪಯೋಗಿಸಬೇಕೆಂದು ಹೇಳುವರು. ಅಂತಹ ಯೋಗ್ಯವಾದ ಕಾವ್ಯವು

ಕಾವ್ಯಂಯಶಸೇ ಅರ್ಥ ಕೃತೇ ವ್ಯವಹಾರವಿದೇ
ಶಿವೇತರಕ್ಷತಯೇ ।
ಸದ್ಯಃ ಪರನಿರ್ವೃತಯೇ ಕಾಂತಾ ಸಮ್ಮಿತ
ತಯೋಪದೇಶಯುಜೇ ॥

ಎಂದು ಕಾವ್ಯ ಪ್ರಕಾಶಕಾರನು ಹೇಳುವನು. ಈ ಕಾರಣಗಳಿಂದ ದೋಷರಹಿತವಾದ ಕಾವ್ಯವೇ ಪ್ರಧಾನವು ಹೊರತು ಅಲ್ಪವಾದ ದೋಷವೂ ಸಹ ಕಾವ್ಯದಲ್ಲಿರಬಾರದೆಂದು

'ತದಲ್ಪಮಪಿನೋಪೇಕ್ಷ್ಯಂ ಕಾವ್ಯೇ ದುಷ್ಟಂ ಕಥಂಚನ'

ಎಂದು ಆಚಾರ್ಯದಂಡಿಯು ತನ್ನ ಕಾವ್ಯಾದರ್ಶದಲ್ಲಿ ಹೇಳುವನು. ದುಷ್ಟನಾದ ಮಗನಿಂದ ಇಡೀ ವಂಶವು ಕೆಡುವಂತೆ ದೋಷಸಹಿತವಾದ ಕಾವ್ಯದಿಂದ ಇಡೀ ಕಾವ್ಯವೇ ಕೆಡುವುದಲ್ಲದೆ ತದ್ದ್ವಾರಾ ಪ್ರಪಂಚವೂ ಕೆಡುವುದೆಂದು ಭಾಮಹನ ಮತವಿರುವುದು. ಕಾವ್ಯವು ಹತ್ತು ದೋಷಗಳಿಂದ ರಹಿತವಾಗಿರಬೇಕೆಂದು

ಅಪಾರ್ಥಂ ವ್ಯರ್ಥಮೇಕಾರ್ಥಂ ಸಸಂಶಯಮಪಕ್ರಮಂ ।
ಶಬ್ದಹೀನಂ ಯತಿಭ್ರಷ್ಟಂ ಭಿನ್ನವೃತ್ತಂ ವಿಸಂಧಿಕಂ ।
ದೇಶ ಕಾಲಕಲಾ ಲೋಕನ್ಯಾಯಾಗಮ ವಿರೋಧಿ ಚ ।
ಇತಿ ದೋಷಾದಶೈವೇ ತೇವರ್ಜ್ಯಾಃ ಕಾವ್ಯೇಷು ಸೂರಿಭಿಃ ।

ಎಂದು ವಿದ್ವಾಂಸರುಗಳು ಇವುಗಳನ್ನು ಗಮನಿಸಿ ಕಾವ್ಯವನ್ನು ರಚಿಸಬೇಕೆಂದು ಆಚಾರ್ಯದಂಡಿಯು ಹೇಳುತ್ತಾನೆ.

ತಾರ್ಕಿಕರು ಭೂಜನ್ಯವಾದ ಪದಾರ್ಥಗಳಲ್ಲಿ ಅಂದರೆ ಭೂಮಿ, ವೃಕ್ಷ, ಹೂ, ಕಾಯಿ ಇತ್ಯಾದಿಗಳಲ್ಲಿ ಶುಕ್ಲ, ನೀಲ, ಪೀತ, ರಕ್ತ, ಹರಿತ, ಕಪಿಶ, ಚಿತ್ರ ಈ ಏಳು ಬಣ್ಣಗಳಿವೆ ಎಂದೂ, ಅಭಾಸ್ವರವಾದ ಬಿಳಿ ಬಣ್ಣವು ನೀರಿನಲ್ಲಿದೆ ಎಂದೂ, ಭಾಸ್ವರರೂಪವಾದ ಗುಣವು ತೇಜಸ್ಸಿನಲ್ಲಿದೆ ಎಂದೂ ಹೇಳುತ್ತಾರೆ. ಈ ಬಣ್ಣಗಳನ್ನು ತಿಳಿಯಲು ಕಣ್ಣು ಹೊರತು ಯಾವ ಇಂದ್ರಿಯವೂ ಸಮರ್ಥವಾದುದಲ್ಲ. ಕುರುಡನು ಈ ಬಣ್ಣಗಳ ಭೇದವನ್ನು ತಿಳಿಯಲಾರನು. ಕಾರಣ ಕೈ

ಯಿಂದ ಮುಟ್ಟಿ ತಿಳಿಯಲು ಇದು ಅರ್ಹವಾದುದಲ್ಲ; ಪರಂತು ಕಣ್ಣಿನಿಂದ ನೋಡಿಯೇ ತಿಳಿಯಲು ಸಾಧ್ಯವು. ಯೋಗ್ಯನಾದ ಕವಿಯಾಗಬೇಕಾದರೆ ಛಂದಸ್ಸು, ವ್ಯಾಕರಣ, ಅರ್ಥಶಾಸ್ತ್ರ ಇವುಗಳನ್ನೆಲ್ಲ ತಿಳಿಯದಿದ್ದರೆ ಕಾವ್ಯದ ಗುಣಗ್ರಹಣವನ್ನಾಗಲೀ, ದೋಷೋದ್ಘಾಟನೆಯನ್ನಾಗಲೀ ಮಾಡಲಾರನು. ಗುಣದೋಷಗಳನ್ನು ತಿಳಿಯದವನು ಯೋಗ್ಯ ಕವಿಯಾಗಲಾರನು. ಕವಿ ಯಾರು? 'ಕವಯತೀತಿ ಕವಿಃ' ಎಂದು ಹೇಳುತ್ತಾರೆ. ಅದು ಎಂತಹ ಕವನ? ಪದಪದಾರ್ಥ ವಿಶಿಷ್ಟ ಜ್ಞಾನದಿಂದ ರಸಭಾವಗಳ ಆವಿರ್ಭಾವವೇ ಕವನವು. ಕವಿಯೆಂದರೆ ಜ್ಞಾನಿ ಎಂದರ್ಥವು. ಆ ಜ್ಞಾನವು ಹಿಂದೆ ಹೇಳಿದ ಶಾಸ್ತ್ರಜ್ಞಾನವು. ಅಂತಹ ಶಾಸ್ತ್ರಜ್ಞಾನದಿಂದ ಕೂಡಿದ ಶಿಷ್ಟಾನುಶಿಷ್ಟವಾದ ಜ್ಞಾನವುಳ್ಳವನೇ ಕವಿಯು. ಅವನ ಕಾರ್ಯವೇ ಕಾವ್ಯವು. 'ಅಲಂಕಾರ ಸಹಿತವಾದ ಇಷ್ಟವಾದ ಅರ್ಥಗಳಿಂದ ಕೂಡಿದ ಪದಸಮೂಹವು ಕಾವ್ಯ'ವೆಂದು ಆಚಾರ್ಯದಂಡಿಯು, "ರಮಣೀಯಾರ್ಥ ಪ್ರತಿಪಾದಕವಾದ ಶಬ್ದಸಮೂಹವು ಕಾವ್ಯ" ವೆಂದು ರಸಗಂಗಾಧರಕಾರನು, "ದೋಷರಹಿತವಾದ ಗುಣಾಲಂಕಾರಗಳಿಂದ ಕೂಡಿದ ಶಬ್ದಾರ್ಥ ಸಮೂಹವು ಕಾವ್ಯ"ವೆಂದು ಕಾವ್ಯಪ್ರಕಾಶಕಾರನಾದ ಮಮ್ಮಟನೂ, ಇದನ್ನೆ ಅನುಸರಿಸಿ ಪ್ರತಾಪರುದ್ರೀಯಕಾರನಾದ ವಿದ್ಯಾನಾಥನೂ ಹೇಳುವರು.

ಕಾವ್ಯಕ್ಕೆ ಆಕಾರವನ್ನು ಕೊಟ್ಟು ಜೀವಕಲೆಯನ್ನು ತುಂಬಿಸಿ ಅಲಂಕಾರ ಮಾಡಿದರೆ ಅದು ಸುಕವಿಯ ಪ್ರತಿಭೆಯನ್ನು ತೋರಿಸುತ್ತದೆ. ಕಾವ್ಯಕ್ಕೆ ಶರೀರವಿದೆ, ಆತ್ಮವಿದೆ, ಅಲಂಕಾರವಿದೆ. ಔಚಿತ್ಯದಿಂದ ಕೂಡಿದ ಪದಪದಾರ್ಥ ಸಮೂಹವು ಕಾವ್ಯಶರೀರವು. ರಸಾವಿರ್ಭಾವವೇ ಆತ್ಮವು, ಗುಣಗಳು ಮತ್ತು ಅಲಂಕಾರಗಳು ಆಭರಣಗಳು. ಕಾವ್ಯದ ಮುಖ್ಯ ಜೀವಾಳವೇ ರಸವು ಅಥವಾ ರಸಭಾವವು. ಈ ರಸವು ಹಿಂಡಬರುವಂತಹದಲ್ಲ, ಪರಂತು ಸೂಚಿಸತಕ್ಕದ್ದು. ರಸವು ಆತ್ಮರೂಪವಾದರೆ ರಸಾತ್ಮಕವಾದ ಶಬ್ದಸಮೂಹವು (ಕಾವ್ಯವು) ಶರೀರವಾಗುವುದು. ಏತೇನ ಕವಿಯು ಯಾವ ರಸ, ಯಾ, ಭಾವದಿಂದ ಶಬ್ದವನ್ನು ಸೂಚಿಸುತ್ತಾನೋ ಆ ಶಬ್ದವೇ ಕಾವ್ಯಶರೀರವು. ರಸವಿಲ್ಲದೆ ಕಸದಿಂದ ಕೂಡಿದ ಶಬ್ದಸಮೂಹವು ಜೀವವಿಲ್ಲದ ಶವಶರೀರದಂತೆಯೇ ಸರಿ. ಶರೀರಕ್ಕೆ ಸೌಂದರ್ಯವನ್ನು ಕೊಡುವ ಆಭರಣಗಳು ಕಾವ್ಯಕ್ಕೆ ಉಪಮಾದ್ಯಲಂಕಾರಗಳು. ನೀಲಕಂಠ ದೀಕ್ಷಿತರು:—

ಅನ್ಯೋನ್ಯ ಸಂಸರ್ಗವಿಶೇಷ ರಮ್ಯಾಪ್ಯಪಲಂಕೃತಿಃ
ಪ್ರತ್ಯುತ ಶೋಚನೀಯಾ ।
ನಿರ್ವ್ಯಂಗ್ಯಸಾರೇ ಕವಿಸೂಕ್ತಿ ಬಂಧೇ ನಿಷ್ಕ್ರಾಂತ
ಜೀವೇ ವಪುಷೀವದತ್ತಾ ॥

ಯದ್ಯಪಿ ಮನುಷ್ಯ ಶರೀರಕ್ಕೆ ಆಭರಣಾದಿಗಳು ಪರಸ್ಪರ ಸಂಪರ್ಕ ವಿಶೇಷದಿಂದ ರಮ್ಯಗಳಾಗಿದ್ದರೂ ಅದು ಅಮೃತ ಶರೀರವಾಗಿದ್ದರೆ ಹೇಗೆ ರಮ್ಯವಾಗಲಾರದೋ ಹಾಗೆಯೇ ರಸಸಾರರಹಿತವಾದ ಕಾವ್ಯದಲ್ಲಿಯೂ ಉಪಮಾದ್ಯಲಂಕಾರಗಳಿದ್ದರೂ ರಮ್ಯವಲ್ಲವೆಂದು ಹೇಳುತ್ತಾರೆ. ಆದುದರಿಂದಲೇ ಸಾಹಿತ್ಯದರ್ಪಣಕಾರನಾದ ವಿಶ್ವನಾಥನು "ವಾಕ್ಯಂ ರಸಾತ್ಮಕಂ ಕಾವ್ಯಂ" ಎಂದೆನ್ನುವನು. ಪ್ರತಾಪರುದ್ರೀಯಕಾರನು ಕಾವ್ಯವನ್ನು ಮನುಷ್ಯ ಶರೀರಕ್ಕೆ ಹೋಲಿಸಿ ಶಬ್ದಾರ್ಥಗಳು ಶರೀರವೆಂದೂ, ಜೀವವೇ ವ್ಯಂಗ್ಯ ವೈಭವವೆಂದೂ, ಉಪಮಾದ್ಯಲಂಕಾರಗಳು ಹಾರಗಳಂತೆ ಅಲಂಕಾರಗಳೆಂದೂ, ಶೌರ್ಯಾದಿಗುಣಗಳಂತೆ ಶ್ಲೇಷಾದಿಗುಣಗಳೆಂದೂ, ಆತ್ಮೋತ್ಕರ್ಷವನ್ನುಂಟುಮಾಡುವ ಸ್ವಭಾವಗಳೇ ರೀತಿಗಳೆಂದೂ, ಆನಂದವನ್ನುಂಟುಮಾಡುವ ನಡತೆಗಳೇ ವೃತ್ತಗಳೆಂದೂ, ಹಾಸಿಗೆಯಂತೆ ಪದಾನುಗುಣವಾದ ವಿಶ್ರಾಂತಿಯೇ ಶಯ್ಯೆ ಎಂದೂ, ಮಧುರತಿಕ್ತಾದಿರಸಾಸ್ವಾದ ಭೇದಗಳಿಂದ ಕೂಡಿದ ಪಾಕವೇ ನಾಳಿಕೇರಾದಿ ಪಾಕವೆಂದೂ, ಇವೆಲ್ಲ ಕಾವ್ಯದ ಸಂಪತ್ತೆಂದು ಅವನ ಅಭಿಪ್ರಾಯವು.

ಕಾವ್ಯವು ಗದ್ಯ, ಪದ್ಯ, ಮಿಶ್ರಗಳೆಂದು ಮೂರು ವಿಧವು. ಪದ್ಯವನ್ನು ಬರೆಯುವುದಕ್ಕಿಂತಲೂ ಗದ್ಯವನ್ನು ಬರೆಯುವುದು ಕಷ್ಟವು. ಹೊಸರೀತಿಯ ಗದ್ಯಾತ್ಮಕ ಪದ್ಯಗಳನ್ನು ಬರೆಯುವುದು ಮತ್ತೂ ಕಷ್ಟವೆಂದು ಹೇಳಬೇಕು. ಕವಿಯು ಬರೆಯುವಾಗ ಪದ್ಯವೆಂಬ ಭಾವನೆಯಿಂದ ಬರೆಯುತ್ತಾನೆ. ಆದರೆ ಪದ್ಯದ ಲಕ್ಷಣವು ಅದರಲ್ಲಿಲ್ಲ. ಗದ್ಯವೆಂದು ಹೇಳುವರೆ ಅದು ಗದ್ಯದಂತಿಲ್ಲ. ಆದುದರಿಂದ ಬರೆಯುವವರು ಅಸಿಧಾರಾವ್ರತದಿಂದ ಬರೆಯಬೇಕಾಗುತ್ತದೆ. ಆಗ ಅದು ಗದ್ಯಾತ್ಮಕ ಪದ್ಯವಾಗುತ್ತದೆ. ಅನೇಕರು ಈ ರೀತಿಯ ಸುಧಾ

ರಣಾಪದ್ಧತಿಯನ್ನನುಸರಿಸಿದರೂ ಕೆಲವರು ಬರೆದ ಇಂತಹ ಕಾವ್ಯಗಳು ಮಾತ್ರ ರಮಣೀಯವಾಗಿಯೇ ಇವೆ.

ಗದ್ಯಕಾವ್ಯಗಳು ಸಂಸ್ಕೃತದಲ್ಲಿ ಅತಿ ವಿರಳ. ಬರೆದವರು ಒಬ್ಬರಿಬ್ಬರು ಮೂವರೇ. ಬಾಣನ ಕಾದಂಬರಿ ಹರ್ಷಚರಿತ್ರೆಗಳು ಅತ್ಯಂತ ಮೇಲ್ಮಟ್ಟದವುಗಳು. ಪಾಶ್ಚಾತ್ಯ ಪಂಡಿತರು ಇವುಗಳನ್ನು ನಾನಾ ವಿಧವಾಗಿ ಹೊಗಳಿಯೂ ತೆಗಳಿಯೂ ಇದ್ದಾರೆ. ಆದರೂ ಬಾಣನಂತೆ ಬರೆದವರಾರೂ ದೊರೆಯಲಿಲ್ಲ. ಸುಬಂಧುವಿನ ವಾಸವದತ್ತೆಯೂ ಅತಿ ಚೆನ್ನಾಗಿಯೇ ಇದೆ. ದಂಡಿಯ ದಶಕುಮಾರ ಚರಿತೆಯು ಮೇಲೆ ಹೇಳಿದವುಗಳಿಗೆ ಹೋಲಲಾರದು. ಇದನ್ನು ಆಚಾರ್ಯದಂಡಿಯು ಬರೆದುದೆಂಬುದು ಸಂದೇಹ. ಆಚಾರ್ಯದಂಡಿಯ ನಿಯಮನಿಷ್ಠೆಯು ಅಷ್ಟೊಂದು ಇದರಲ್ಲಿಲ್ಲ. ನೇಮಭೂಪಾಲ ಚರಿತಾದಿಗಳು ಗದ್ಯಗಳೇ. ಆದರೂ ಸಂಸ್ಕೃತ ಪ್ರಪಂಚದಲ್ಲಿ ನೆನಸುವಷ್ಟು ವಿಶೇಷ ಗದ್ಯಕಾವ್ಯಗಳಿಲ್ಲ. ಇತ್ತೀಚೆಗಿನದಾದರೂ ಮುದ್ದಣ್ಣನ ರಾಮಾಶ್ವಮೇಧದಂತಹ ಗದ್ಯಕಾವ್ಯವು ಕನ್ನಡದಲ್ಲಿ ಹುಟ್ಟಲಿಲ್ಲವೆಂದು ಹೇಳಬೇಕು. ಕವಿಯು ಪುರಾತನನಲ್ಲ. ನಮ್ಮ ವಯಸ್ಸಿನವರಿಗೆ ಪರಿಚಿತನೇ. ಕನ್ನಡದ ಗದ್ಯಕಾವ್ಯದಲ್ಲಿ ಬಾಣನ ಕಾದಂಬರಿಗೆ ಸಮಾನವಾದುದೇ. ತಿರುಮಲಾರ್ಯನ ವಚನ ಕಾವ್ಯವಾದ ಚಿಕ್ಕದೇವರಾಯನ ವಂಶಾವಳಿಯೂ ಚೆನ್ನಾಗಿರುವ ಗದ್ಯ ಕಾವ್ಯವೆ. ಕಲಾವತೀ ಪರಿಣಯ ಮೊದಲಾದ ಹಲವು ಗದ್ಯಕಾವ್ಯಗಳು ನಮ್ಮ ಕನ್ನಡದಲ್ಲಿವೆ. ಗದ್ಯ ರಚನೆಯು ಪದ್ಯ ರಚನೆಗಿಂತ ಕಷ್ಟವೆಂದು "ಗದ್ಯಂ ಕವೀನಾಂ ನಿಕಷಂ ವದಂತಿ" ಎಂದು ನಮ್ಮವರು ಹೇಳುವರು. ಎಂದರೆ 'ಕಾವ್ಯ ಬರೆಯುವವರಿಗೆ ಗದ್ಯವು ಒರೆಗಲ್ಲು.' ಪದ್ಯಗಳಿಗಿರುವ ನಿಯಮಗಳು ಗದ್ಯಕ್ಕಿಲ್ಲದಿರುವುದರಿಂದ ಗದ್ಯವನ್ನು ಬರೆಯುವುದು ಕಷ್ಟವೆಂದು ಏಕೆ ಹೇಳಬೇಕು? ಗದ್ಯ ರಚನೆಗೆ ಪದ್ಯಗಳ ನಿಯಮವಿಲ್ಲದಿರುವುದು. ವಾಸ್ತವವೇ-ಯಾವ ನಿರ್ಬಂಧವೂ ಇಲ್ಲ ಖರೆ. ಆದರೆ ಗದ್ಯವು ಸಾಮಾನ್ಯವಾಗಿ ಒಂದು ಕಥಾವಿಶೇಷವು. ಕಥೆಯನ್ನು ಓದುವಾಗ ಸ್ವಾರಸ್ಯವಿಲ್ಲದಿದ್ದರೆ ಜನರು ತಾತ್ಸಾರದಿಂದ ಓದದೆ ಬಿಟ್ಟುಬಿಡುವರು. ಕಥೆಯನ್ನು ಓದಲಿಕ್ಕೆ ಶುರುಮಾಡಿದರೆ ಮುಂದಿನ ಕಥಾಭಾಗವು ಏನಿರಬಹುದು ಎಂದು ತವಕ ಉಂಟಾಗಬೇಕು. ಅಂತಹ ತವಕವುಂಟಾಗದಿದ್ದರೆ ಓದದೆ ಬಿಟ್ಟುಬಿಡುವರು. ಗದ್ಯದ ಶೈಲಿಯು ಮನೋಹರವಾಗಿರಬೇಕು. ಅತಿ ಗಂಭೀರದ ಪದರಚನೆಯಿಂದ, ವಾಕ್ಯರಚನೆಯಿಂದ ಕಥಾಸ್ವಾರಸ್ಯದಿಂದ ಕೂಡಿ ಬರೆದು ಪಾಠಕ ವೃಂದವನ್ನು ಮುಗ್ಧವನ್ನಾಗಿ ಮಾಡುವುದು ಅತಿ ಕಷ್ಟ. ಬಿ. ವೆಂಕಟಾಚಾರ್ಯರ ನಾವೆಲುಗಳು ಹಳೆಯದಾದವು. ಅದರ ಭಾಷೆಯು ಚೆನ್ನಾಗಿರದಿಲ್ಲದಿದ್ದರೂ ಕಥಾಂಶವು ಬಹು ಚೆನ್ನಾಗಿ ಓದುಗರಿಗೆ ಔತ್ಸುಕ್ಯವನ್ನುಂಟುಮಾಡುತ್ತಿದೆ. ಆದುದರಿಂದ ಗದ್ಯವನ್ನು ಬರೆಯುವುದು ಪದ್ಯಕ್ಕಿಂತ ಕಷ್ಟವೆಂದಭಿಪ್ರಾಯವು. ಗದ್ಯವು ಪದ್ಯಕ್ಕಿಂತ ಭಿನ್ನವಾದುದು. ಕಾರಣ ಗದ್ಯರಚನೆಯಲ್ಲಿ ವೃತ್ತಾದಿಗಳಿಲ್ಲ. ಗದ್ಯದಲ್ಲಿ 'ಆಖ್ಯಾಯಿಕಾ' 'ಕಥಾ' ಎಂದೆರಡು ವಿಧವು. ಇವುಗಳಿಗೆ ಕೆಲವು ನಿಯಮಗಳಿದ್ದುವು. ಏಳನೇ ಶತಮಾನದಲ್ಲಿದ್ದ ಆಚಾರ್ಯ ದಂಡಿಯು ಆ ಕಾಲದ ದೊಡ್ಡ ವಿಮರ್ಶಕನಾಗಿದ್ದನು. ಈತನು ಕೆಲವು ಗದ್ಯಗಳಿಗಿದ್ದ ನಿಯಮಗಳನ್ನು ಬದಲುಮಾಡಿದನು. ಆಖ್ಯಾಯಿಕೆಯಲ್ಲಿ ನಡೆದ ವೃತ್ತಾಂತವನ್ನು ಕಥಾನಾಯಕನೇ ಹೇಳುವುದು. ಕಥೆಯಲ್ಲಿ ನಡೆದ ವೃತ್ತಾಂತವನ್ನು ಇತರರು ಹೇಳುವುದು. ಇದೇ ಭೇದವು. ಆಖ್ಯಾಯಿಕೆಯ ಒಂದೊಂದು ಭಾಗಕ್ಕೆ 'ಉಚ್ಛ್ವಾಸ'ವೆಂದು ಹೆಸರು. ಕಥೆಯಲ್ಲಿ ಯದ್ಯಪಿ ಅಂತಹ ವಿಭಾಗಗಳಿರುವುದಿಲ್ಲ. ಇದ್ದರೆ 'ಲಂಬಕ'ವೆಂದು ಹೇಳಬೇಕು. ವಕ್ತ್ರ ಮತ್ತು ಅಪರವಕ್ತ್ರರೂಪವಾದ ಪದ್ಯಗಳು ಆಖ್ಯಾಯಿಕೆಯಲ್ಲಿ ಮುಂಬರುವ ವಿಚಾರಗಳನ್ನು ಊಹಿಸುವ ವಿಷಯದಲ್ಲಿ ಮಧ್ಯ ಮಧ್ಯ ತುರುಕಿಸುವ ಪದ್ಧತಿಯಿದೆ. ಆದರೆ ಕಥೆಯಲ್ಲಿ ಈ ಮೇಲೆ ಹೇಳಿದ ವೃತ್ತದಲ್ಲಿರುವ ಪದ್ಯಗಳನ್ನು ತುರುಕಿಸಬಾರದು. ಪರಂತು ಆರ್ಯಾವೃತ್ತದ ಪದ್ಯಗಳನ್ನು ತುರುಕಿಸಬಹುದೆಂದಿದೆ. ಆಖ್ಯಾಯಿಕೆಯಲ್ಲಿ ಕರ್ತೃವಂಶ ಪ್ರಶಂಸೆಗಳನ್ನು ಕವಿಯು ಮೊದಲು ಗದ್ಯದಲ್ಲಿ ಹೇಳಬೇಕೆಂದಿದೆ. ಕಥೆಯಲ್ಲಿ ಇದನ್ನು ಕವಿಯು ಪದ್ಯರೂಪದಲ್ಲಿ ಹೇಳಬೇಕು. ಏಳನೇ ಶತಮಾನದ ವಿಮರ್ಶಕ ಆಚಾರ್ಯದಂಡಿಯು ಈ ನಿಯಮಗಳನ್ನು ವ್ಯತ್ಯಾಸ ಮಾಡಬಹುದೆಂದನು.

ಅನ್ಯೋಽವಕ್ತಾ ಸ್ವಯಂವೇತಿ ಕೀದೃಸ್ವಾ ಭೇದ ಕಾರಣಂ!
ಭೇದಶ್ಚ ದೃಷ್ಟೋ ಲಂಭಾದಿಃ ಉಚ್ಛ್ವಾಸೋವಾಸ್ತು ... ಕಿಂತತಃ ।

ಆರ್ಯಾದಿವತ್ತ್ರವೇಶಃ ಕಿಂ ನ ವಕ್ತ್ರಾಪರವಕ್ತ್ರಯೋಃ? ।
ಕವಿಭಾವಕೃತಂ ಚಿಹ್ನಂ ಅನ್ಯತ್ರಾಪಿನ ದುಷ್ಯತಿ ॥

ಆಖ್ಯಾಯಿಕೆಯಲ್ಲಾಗಲೀ ಕಥೆಯಲ್ಲಾಗಲೀ ಕಥಾನಾಯಕನೇ ಮೊದಲು ಕಥೆಯನ್ನು ಗದ್ಯದಲ್ಲೆ ಹೇಳಬೇಕು; ಪದ್ಯದಲ್ಲೆ ಹೇಳಬೇಕು. ವಿಭಾಗಗಳಿಗೆ ಉಚ್ಛ್ವಾಸವೆಂದೂ ಲಂಬಕವೆಂದೂ ಹೆಸರಿರಬೇಕು. ವಕ್ತ್ರಾಪವಕ್ತ್ರ ವೃತ್ತಗಳ ಪದ್ಯಗಳು ಆಖ್ಯಾಯಿಕೆಯಲ್ಲಿಯೇ ಇರಬೇಕು, ಕಥೆಯಲ್ಲಿರಬಾರದು. ಆರ್ಯವೃತ್ತವು ಕಥೆಯಲ್ಲಿಯೇ ಇರಬೇಕು, ಆಖ್ಯಾಯಿಕೆಯಲ್ಲಿರಬಾರದೆಂಬ ನಿಯಮವಿರಬಾರದು. ಯಾವ ಪದ್ಯಗಳನ್ನು ಯಾವುದರಲ್ಲಿಯೂ ಹೇಳಬಹುದು. ಕಥಾಭಾಗವನ್ನು ನಾಯಕನೇ ಹೇಳಬೇಕೆಂದು ಕೂಡಾ ನಿಯಮವು ಅಗತ್ಯವಿಲ್ಲ—ಲಂಬಕಗಳು ಯಾ ಉಚ್ಛ್ವಾಸಗಳೆಂದು ಎರಡರಲ್ಲಿಯೂ ಹೇಳಬಹುದು. ಅವುಗಳೆಲ್ಲ ವಿಭಾಗದ ಚಿಹ್ನೆ ಹೊರತು ನಿಯಮವಲ್ಲ. ಕವಿಯು ಇದನ್ನು ಅಕ್ಷರಶಃ ಪರಿಪಾಲಿಸಬೇಕೆಂದಿಲ್ಲ. ತನ್ನ ಮನಸ್ಸಿನಲ್ಲಿರುವ ಒಂದೊಂದು ಚಿಹ್ನೆಯನ್ನು ಅವನು ಲಂಬಕವೆಂದೋ, ಉಚ್ಛ್ವಾಸವೆಂದೋ, ವಕ್ತ್ರವೋ, ಅಪರವಕ್ತ್ರವೋ, ಆರ್ಯೆಯೋ ಯಾವುದೋ ಒಂದು ವೃತ್ತದ ಪದ್ಯವನ್ನು ಸಂದರ್ಭದಲ್ಲಿ ತುರುಕಿಸಬಹುದೆಂದು ಸ್ವಲ್ಪ ಮಟ್ಟಿನ ಅಸ್ತವ್ಯಸ್ತತೆಯನ್ನು ತೋರಿಸಿದ್ದಾನೆ. ಆದರೆ ಇಂತಹ ವಿಮರ್ಶೆಯನ್ನು ಪದ್ಯದಲ್ಲಿ ಯತಿ ಬೇಡ, ಗಣ ಬೇಡ, ಪ್ರಾಸ ಬೇಡವೆಂದು ಎಲ್ಲಿಯೂ ಹೇಳಲಿಲ್ಲ.

ಪದ್ಯವು ಚತುಷ್ಪದಾತ್ಮಕವಾದುದು. ಕನ್ನಡದಲ್ಲಿ ವಿಶೇಷವಾಗಿ ಷಟ್ಪದಿ ಪದ್ಯಗಳು ಮತ್ತು ಕಂದ ಪದ್ಯಗಳು ರೂಢಿಯಲ್ಲಿವೆ. ಪದ್ಯದಲ್ಲಿ 'ವೃತ್ತ' 'ಜಾತಿ' ಎಂದು ಎರಡು ಭೇದವಿದೆ. ವೃತ್ತವು ಗಣಗಳಿಂದ ಕೂಡಿದುದು—ಮಗಣ, ನಗಣ, ಯಗಣ, ರಗಣ, ತಗಣ, ಭಗಣ, ಜಗಣ, ಸಗಣವೆಂದು ಎಂಟು ಗಣಗಳಿವೆ. ಅದನ್ನೇ

ಆದಿಮಧ್ಯಾವಸಾನೇಶು ಯರತಾಯಾಂತಿ ಲಾಘವಂ ।
ಭಜಿಸಾ ಗೌರವಂಯಾಂತಿ ಮ ನೌತು ಗುರುಲಾಘವೇ ।

ಎಂದು ಲಾಕ್ಷಣಿಕರು ಹೇಳುವರು. ಎರಡನೆಯದೇ ಜಾತಿ. ಇದು ಮಾತ್ರಾಗುಣಗಳಿಂದ ಕೂಡಿದ್ದು ಇದರಲ್ಲಿ ಆರ್ಯಜಾತಿ ಗೀತಿಜಾತಿ ಎಂದಿದೆ. ಅನುಷ್ಟುಪ್, ಉಪಜಾತಿ ಇವುಗಳು ವೃತ್ತಗಳು ಜಾತಿಗಳಲ್ಲ. ವೃತ್ತವು ಸಮ, ಅರ್ಧಸಮ, ವಿಷಮವೆಂದು ಮೂರು ವಿಧವು. ವೃತ್ತ ರತ್ನಾಕರದಲ್ಲಿ

ಸಮಮರ್ಧಸಮಂ ವೃತ್ತಂ ವಿಷಮಂ ಚತಥಾಪರಂ ।
ಅಂಘ್ರಯೋಯಸ್ಯಚತ್ವಾರ ಸ್ತುಲ್ಯ ಲಕ್ಷಣಲಕ್ಷಿತಾಃ ।
ಕಚ್ಛಂದಶ್ಯಾಸ್ತ್ರ ತತ್ವಜ್ಞಾಃ ಸಮಂವೃತ್ತಂ ಪ್ರಚಕ್ಷತೇ ॥
ಪ್ರಥಮಾಂಘ್ರಿಸಮೋಯಸ್ಯ ತೃತೀಯಶ್ಚರಣೋಭವೇತ್ ।
ದ್ವಿತೀಯಸ್ತುಲ್ಯವದ್ವೃತ್ತಂತದರ್ಧ ಸಮಮುಚ್ಯತೇ ॥
ಯಸ್ಯಪಾದ ಚತುಷ್ಕೇಪಿ ಲಕ್ಷ್ಮ ಭಿನ್ನಂ ಪರಸ್ಪರಂ ।
ತದಾಹುರ್ವಿಷಮಂ ವೃತ್ತಂ ಛಂದಃ ಶಾಸ್ತ್ರವಿಶಾರದಃ ॥

ಎಂದು ನಾಲ್ಕು ಪಾದಗಳು ಸಮಾನ ಲಕ್ಷಣಗಳಿಂದ ಕೂಡಿದ್ದಾದರೆ ಸಮ ವೃತ್ತವೆಂದೂ, ಪ್ರಥಮ ತೃತೀಯ ಪಾದಗಳು ಸಮಾನವಾಗಿದ್ದು ದ್ವಿತೀಯ ಚತುರ್ಥ ಪಾದಗಳು ಒಂದು ರೀತಿಯಿಂದ ಇದ್ದರೆ ಅರ್ಧಸಮವೃತ್ತವೆಂದೂ, ನಾಲ್ಕು ಪಾದಗಳಲ್ಲಿಯೂ ಭಿನ್ನ ಲಕ್ಷಣಗಳಿದ್ದರೆ ವಿಷಮ ವೃತ್ತವೆಂದೂ ಹೇಳಿಯದೆ. ಇನ್ನು ಕಾವ್ಯದಲ್ಲಿ ಮುಕ್ತಕ, ಕುಲಕ, ಕೋಶ, ಸಂಘಾತ ಎಂದು ನಾನಾ ರೀತಿಯಿದೆ. ಅವನ್ನೆಲ್ಲ ಇಲ್ಲಿ ವರ್ಣಿಸಲಸಾಧ್ಯವು.

ಕಾವ್ಯಗಳಲ್ಲಿ ಮಹಾಕಾವ್ಯವೆಂದಿದೆ. ಮಂಗಳವನ್ನು ಆಶೀರ್ವಾದರೂಪವಾಗಿಯೂ, ನಮಸ್ಕಾರರೂಪವಾಗಿಯೂ, ವಸ್ತುನಿರ್ದೇಶರೂಪವಾಗಿಯೂ ಮಾಡಿ ಸರ್ಗಗಳಿಂದ ಕೂಡಿದ್ದರೆ ಅದು ಮಹಾಕಾವ್ಯವು. ಸರ್ಗಾಂತ್ಯದ ಪದ್ಯವು ಬೇರೆ ವೃತ್ತದಿಂದ ಬರೆಯಬೇಕೆಂದಿದೆ. ಅದರಲ್ಲಿ ಕವಿಯ ಮುದ್ರೆಯನ್ನು ಹಾಕುವ ಪದ್ಧತಿಯೂ ಇದೆ. ಭಾರವಿ, ಮಾಘ, ಇತ್ಯಾದಿ ಕವಿಗಳು ಇದನ್ನನುಸರಿಸಿ ಬರೆದಿರುವರು. ಕಾವ್ಯವನ್ನು ಬರೆಯುವಾಗ ರಾಮಾಯಣ ಮಹಾಭಾರತದಿಂದಲಾಗಲೀ, ಕಥಾಸರಿತ್ಸಾಗರ ಯಾ ಬೃಹತ್ಕಥೆ ಅಥವಾ ತೀರ್ಥಂಕರ ಪುರಾಣ ಇತ್ಯಾದಿ ಸದ್ಧರ್ಮ ಕಥೆಗಳು ಯಾ ಪುರಾಣಗಳಿಂದ ಕಥೆಗಳನ್ನುದ್ಧರಿಸಬೇಕೆಂದೂ, ಧನಾರ್ಥ ಕಾಮಮೋಕ್ಷಗಳಿಂದ ಕೂಡಿದ್ದಾಗಿಯೂ, ಧೀರೋದಾತ್ತ, ಧೀರೋದ್ಧತ, ಧೀರಲಲಿತ, ಧೀರಶಾಂತ ನಾಯಕರಿಂದ ಕೂಡಿದ್ದಿರಬೇಕೆಂದೂ (ರಾಮ, ಜೀಮೂತವಾಹನ ಧೀರೋದಾತ್ತರಾಗಿಯೂ, ಪರಶುರಾಮ, ಭೀಮಸೇನ ರಾವಣಾದಿಗಳು ಧೀರೋದ್ಧತರಾಗಿಯೂ, ವತ್ಸರಾಜನು ಧೀರಲಲಿತನಾಗಿಯೂ,

ಮಾಲತೀ ಮಾಧವರಮಾಧವನು ಧೀರಶಾಂತನಾಗಿಯೂ ಇದ್ದಾನೆ) ನಗರಾದಿ ವರ್ಣನೆಗಳಿಂದ ಕೂಡಿದ್ದಿರ ಬೇಕೆಂದೂ ಇತ್ಯಾದಿ ನಿಯಮಗಳು ಮಹಾಕಾವ್ಯಕ್ಕಿವೆ. ಈ ಎಲ್ಲ ಗುಣಗಳು ಒಂದು ಕಾವ್ಯದಲ್ಲಿರಬೇಕೆಂದಿಲ್ಲ. ಒಂದು ಕಾವ್ಯದಲ್ಲಿ ಯಾವುದಾದರೂ ಕೆಲವು ಗುಣಗಳಿದ್ದರೂ ಸಾಕು. ಕಾವ್ಯವನ್ನು ಬರೆಯುವಾಗ ನಾಯಕನ ಗುಣವರ್ಣನಾಪೂರ್ವಕ ವೈರಿಯ ದೋಷವನ್ನು ಸೂಚಿಸುವ ಮಾರ್ಗವು ವಿಶೇಷವು. ವೈರಿಯ ವಂಶ, ಪರಾಕ್ರಮ ಇತ್ಯಾದಿಗಳನ್ನು ಮೊದಲು ವರ್ಣಿಸಿ ಅಂತಹ ವೈರಿಯನ್ನು ಜಯಿಸುವುದರಿಂದ ನಾಯಕನ ಉತ್ಕರ್ಷವನ್ನು ತೋರಿಸುವ ಮಾರ್ಗವೂ ಒಂದಿದೆ. ಶ್ರೀ ವಾಲ್ಮೀಕಿಯು ಶ್ರೀಮದ್ರಾಮಾಯಣದಲ್ಲಿ ಮೊದಲಿನ ಎರಡು ಕಾಂಡಗಳಲ್ಲಿ ಶ್ರೀ ರಾಮನ ಗುಣ ಕಥನವನ್ನು ಮಾಡಿ ಅರಣ್ಯಕಾಂಡದಲ್ಲಿ ವೈರಿಯಾದ ರಾವಣನ ಕುತಂತ್ರ ಕುಚೇಷ್ಟೆಗಳನ್ನು ವರ್ಣಿಸಿ ಯುದ್ಧಕಾಂಡದಲ್ಲಿ ಶ್ರೀ ರಾಮನು ಜಯವರ್ಣನೆಯನ್ನು ಮಾಡುತ್ತಾನೆ. ಇದು ಮೊದಲಿನ ಮಾರ್ಗವು. ಮಾಘನು ಶಿಶುಪಾಲನ ವಂಶಪರಂಪರೆ ಅವನ ದೌಷ್ಟ್ಯ ಇತ್ಯಾದಿಯನ್ನು ವರ್ಣಿಸಿ ಅವನನ್ನು ಜಯಿಸಿದ ಶ್ರೀ ಕೃಷ್ಣ ನಾಯಕನ ಉತ್ಕರ್ಷತೆಯನ್ನು ತೋರಿಸಿದ್ದು ಎರಡನೆಯ ಮಾರ್ಗ. ಈ ವಿಷಯವು ನಮ್ಮ ಮಹಾ ಕಾವ್ಯಗಳಲ್ಲಿ ಕಂಡು ಬರುತ್ತಿದೆ. ಈ ಪದ್ಧತಿಯನ್ನು ಕನ್ನಡಿಗರಾದ ಪಂಪ, ರನ್ನ, ಪೊನ್ನಾದಿಗಳು ಅನುಸರಿಸಿದಂತಿದೆ. ಕನ್ನಡದಲ್ಲಿ 'ಯತಿ' ಇಲ್ಲಿ ಪ್ರಾಸವು ಪ್ರಧಾನವು. ತೆಲುಗಿನಲ್ಲಿ 'ಯತಿ' ಇದೆ. ಗಮಕಸಮಾಸ, ರಳಕುಳಕ್ಷಳಗಳು, ಯತಿವಿಲಂಘನ, ಷಟ್ಪದೀ ವೃತ್ತ ಇತ್ಯಾದಿ ಕನ್ನಡಿಗರ ವೈಶಿಷ್ಟವು. ಇದನ್ನು ಶ್ರೀ ಕೇಶಿರಾಜನು "ಯತಿವಿಲಂಘನದಿಂದರಿದಲ್ತೆ ಕನ್ನಾಡಂ" ಎಂದು ಹೇಳುತ್ತಾನೆ.

ಚಂಪೂ ಗ್ರಂಥಗಳು ಕಡಿಮೆ. ಚಂಪೂವಿನಲ್ಲಿ ಕವಿಯು ಕೆಲವು ಸಲ ಪದ್ಯದಲ್ಲಿ ಮಾತಾಡುತ್ತಾನೆ. ಕೆಲವು ಸಲ ಗದ್ಯದಲ್ಲಿ ಮಾತಾಡುತ್ತಾನೆ. ಇದನ್ನು ಕಂಡರೆ ಇಬ್ಬರು ಮನುಷ್ಯರಿದ್ದು ಒಬ್ಬನು ಪದ್ಯದಲ್ಲಿ ಕಥೆಯನ್ನು ಹೇಳಿದಂತೆಯೂ ಇನ್ನೊಬ್ಬನು ಗದ್ಯದಲ್ಲಿ ಕಥೆಯನ್ನು ಹೇಳಿದಂತೆಯೂ ಕಾಣುತ್ತದೆ. ಇತರ ಕಾವ್ಯಗಳಂತೆ ಇದೂ ಶ್ರವ್ಯಕಾವ್ಯವು; ಭೋಜಚಂಪೂ, ಭಾರತಚಂಪೂ, ನೀಲಕಂಠಚಂಪೂ, ವಿಶ್ವಗುಣಾದರ್ಶ ಚಂಪೂ ಇತ್ಯಾದಿ ಕೆಲವೇ ಸಂಸ್ಕೃತ ಚಂಪೂ ಗ್ರಂಥಗಳಿವೆ. ಪಂಪರಾಮಾಯಣ ಪಂಪಭಾರತಾದಿ ಗ್ರಂಥಗಳು ಕನ್ನಡದ ಚಂಪೂ ಗ್ರಂಥಗಳು ಹಲವಿವೆ. ಗದ್ಯ, ಪದ್ಯ, ಮಿಶ್ರಕಾವ್ಯಗಳಲ್ಲಿ ಇದನ್ನು ಯಾವ ಕೂಟಕ್ಕೆ ಸೇರಿಸುತ್ತಾರೆ? ಗದ್ಯಪದ್ಯ ಮಿಶ್ರವಾದುದರಿಂದ ಮಿಶ್ರಕಾವ್ಯವೇ? ಎಂದರೆ

'ಗದ್ಯಂ ಪದ್ಯಂಚ ಮಿಶ್ರಂಚ ತತ್ರಿಧೈವ ವ್ಯವಸ್ಥಿತಂ'

ಎಂದು ಮೂರೇ ಭಾಗವನ್ನು ಮಾಡಿದುದರಿಂದಲೂ, ಈ ವಿಷಯಗಳನ್ನು 'ಛಂದೋವಿಚಿತಿ' ಎಂಬ ತನ್ನ ಗ್ರಂಥದಲ್ಲಿ ವಿಮರ್ಶೆಯನ್ನು ಮಾಡಿದ್ದೇನೆಂದೂ (ಈ ಗ್ರಂಥವು ದೊರೆಯುವುದಿಲ್ಲ) ಹೇಳಿ ದೃಶ್ಯ-ಶ್ರವ್ಯ ವಿಭಾಗದಲ್ಲಿ ದೃಶ್ಯವು ಮಿಶ್ರಕಾವ್ಯವೆಂದು ಆಚಾರ್ಯ ದಂಡಿಯು ವಿಮರ್ಶಿಸಿ—

ಮಿಶ್ರಾಣಿ ನಾಟಕಾದೀನಿ ತೇಷಾಮನ್ಯತ್ರವಿಸ್ತರಃ ।
ಗದ್ಯಪದ್ಯಮಯೀಕಾಚಿ ಚ್ಚಂಪೂರಿತ್ಯಭಿಧೀಯತೇ ॥

ಎಂದು ಗದ್ಯ ಮತ್ತು ಪದ್ಯಗಳಿಂದ ಕೂಡಿದ ಒಂದು ವಿಧದ ಗ್ರಂಥಕ್ಕೆ "ಚಂಪೂ" ಎಂದು ಹೆಸರು ಕೊಟ್ಟು ಮಿಶ್ರ ಶ್ರವ್ಯಕಾವ್ಯದ ಕೂಟದಲ್ಲಿ ಸೇರಿಸಿದ್ದಾನೆ.

ನಾಟಕವನ್ನು ಮಿಶ್ರಕಾವ್ಯವೆನ್ನುವರು. ಆದರೆ ಚಂಪೂ ಕಾವ್ಯವಲ್ಲ. ಶ್ರವ್ಯಕಾವ್ಯಗಳಲ್ಲಿ ಕಥಾಂಶವನ್ನು ಒಬ್ಬನು ವರ್ಣಿಸುವುದು. ದೃಶ್ಯಕಾವ್ಯವಾದ ನಾಟಕದಲ್ಲಿ ಕವಿಯು ಒಬ್ಬನಾದರೂ ನಾಯಕ ನಾಯಕಿಯರು ಅವರ ಪರಿವಾರದರು ಎಲ್ಲರೂ ಪಾತ್ರಧಾರಿಗಳಾಗಿ ಬಂದು ರಂಗದಲ್ಲಿ ಪ್ರತ್ಯಕ್ಷವಾಗಿ ಹಲವರಿಂದ ಮಾಡಿ, ಆಡಿ, ಹಾಡಿ ಕೇಳಿಸಿಯೂ ಕವಿಯು ತೋರಿಸುತ್ತಾನೆ.

ನಾಟಕಂ, ಸಪ್ರಕರಣಂ, ಭಾಣಃ, ಪ್ರಹಸನಂ, ಡಿಮಃ ।
ವ್ಯಾಯೋಗ, ಸಮವಕಾರೌ, ವೀಥ್ಯಃ, ಕೇಹಾ ಮೃಗಾದಶ ॥

ಎಂದು ಹತ್ತು ವಿಧವು. ನಾಟಕಕ್ಕೆ ರೂಪಕ ಎಂಬ ಹೆಸರಿದೆ. ಉಪರೂಪಕಗಳು 18 ಇವೆ. ಶಾಕುಂತಲಾ ಉತ್ತರ ರಾಮಚರಿತ ಇತ್ಯಾದಿಗಳು ನಾಟಕಗಳು. ಉಪರೂಪಕಗಳಲ್ಲಿ ನಾಟಿಕಾ, ತ್ರೋಟಕ ಇತ್ಯಾದಿ 18 ಇವೆ. ಉಪರೂಪಕಗಳಲ್ಲಿ ಮುಖ್ಯವಾದದ್ದು ರತ್ನಾವಳೀ ವಿದ್ಧ ಸಾಲಭಂಜಿಕಾ ಇತ್ಯಾದಿ ನಾಟಿಕೆಗಳು. ವಿಕ್ರಮೋರ್ವಶೀಯಾದಿಗಳು ತ್ರೋಟಕಗಳು. ಕಾವ್ಯದ ವಿಭಾಗದಲ್ಲಿ ಶ್ರವ್ಯ, ದೃಶ್ಯವೆಂದು ಎರಡು

ವಿಧವಿರುವುದು. ಹಿಂದೆ ಹೇಳಿದ ಗದ್ಯಾತ್ಮಕ ಪದ್ಯಾತ್ಮಕ ಕಾವ್ಯಗಳೆಲ್ಲ ಶ್ರವ್ಯ ಕಾವ್ಯಗಳು. ಇವುಗಳು ಗಂಟೆಗಂಟೆ ಕುಳಿತು ಕೇಳಲರ್ಹವಾದವುಗಳು, ಕಾಣಲರ್ಹವಾದವುಗಳಲ್ಲ. ದೃಶ್ಯವಾದವುಗಳೇ ನಾಟಕಗಳು. ಅವುಗಳನ್ನು ರೂಪಕಗಳೆಂದು ಕೂಡಾ ಹೇಳುವರು. ರಂಗದಲ್ಲಿ ನಾನಾ ಬಣ್ಣದ ರೂಪಗಳಿಂದ ವ್ಯಕ್ತಿಗಳು ಬರುವರು. ಆದುದರಿಂದ ರೂಪಕಗಳೆಂದು ಹೇಳಲ್ಪಡುತ್ತವೆ. ಕಣ್ಣಿನಿಂದ ನೋಡಿ ಕಿವಿಯಿಂದ ಗಾನವನ್ನು ಕೇಳಿ ಆ ಆ ರೂಪಗಳನ್ನು ಭೇದದಿಂದ ನೋಡಿ ಸಂತೋಷಪಡಲಿಕ್ಕೆ ಅರ್ಹವಾದವುಗಳು. ಆದುದರಿಂದ ನಾಟಕ ಯಾ ರೂಪಕವೆಂದು ಹೆಸರು ಬಂದಿದೆ. ದಶ ರೂಪಕದಲ್ಲಿ:—

ಅವಸ್ಥಾನುಕೃತಿರ್ನಾಟ್ಯಂ ರೂಪ್ಯಂ ದೃಶ್ಯತಯೋಚ್ಯತೇ ।
ರೂಪಕಂ ತತ್ಸಮಾವೇಶಾದ್ದಶಧೈವರಸಾಶ್ರಯಂ । ಎಂದೂ,
ರೂಪ್ಯತೇ ಅಭಿನಯೈರ್ಯತ್ರ ವಸ್ತು ತದ್ರೂಪಕಂವಿದುಃ ।
ನಾಟಕಾದ್ಯೈರ್ದಶವಿಧಂ......

ಎಂದೂ ಹೇಳಿರುವುದರಿಂದ ನಾಟಕದಲ್ಲಿರುವ ಪಾತ್ರಧಾರಿಗಳು ಆಯಾ ಪಾತ್ರಗಳ ಅವಸ್ಥಾನುಕರಣವನ್ನು ಅಭಿನಯಿಸಿ ಅವರವರ ರೂಪ ವೇಷ ಭಾಷಾದಿಗಳನ್ನು ಅನುಕರಿಸುವುದರಿಂದ ರೂಪಕವೆಂದೂ ನಾಟಕವೆಂದೂ ಹೆಸರು ಬಂದಿದೆ ಎಂದು ತಿಳಿಯಬೇಕು. ರೂಪಕ ಅಥವಾ ನಾಟಕವನ್ನು ನಾಟ್ಯವೆಂದು ಹೇಳುವುದೂ ಇದೆ. ನಾಟ್ಯವೆಂದರೆ ಕುಣಿತ ಮಾತ್ರವಲ್ಲ, ನಾಟ್ಯವೆಂದರೆ ನಟನೆ ಎಂದರೆ ಅನುಕರಣವೆಂದು ಹೇಳಬೇಕು. ಕಥಾನಾಯಕ ನಾಯಕಿ ಇತ್ಯಾದಿ ಪಾತ್ರಧಾರಿಗಳು ಆ ಆ ವ್ಯಕ್ತಿಗಳ ಹಾವ, ಭಾವ, ಸ್ವರ, ಗುಣ, ಬಣ್ಣ ಇವುಗಳನ್ನೆಲ್ಲ ಅನುಕರಣಮಾಡಿ ತೋರಿಸುವುದೆಂದರ್ಥ. ಆದುದರಿಂದ ಸಾಮುದಾಯಿಕವಾಗಿ ನಾಟ್ಯವೆಂಬ ಹೆಸರಿನಿಂದ ಕೂಡಿದೆ. ಕಾಳಿದಾಸನ ಮಾಲವಿಕಾಗ್ನಿ ಮಿತ್ರದಲ್ಲಿ ನಾಟ್ಯವನ್ನು ಯಾಗಕ್ಕೆ ಸರಿಹೋಲಿಸಿ "ನಾಟ್ಯಂ ಸಮಾರಾಧನಂ" ಎಂದು ಹೇಳಿದ್ದಾನೆ. ಯಾಗದಿಂದುಂಟಾಗುವ ಫಲವು ನಾಟಕರೂಪವಾದ ನಾಟ್ಯದಿಂದಲೂ ಉಂಟಾಗುತ್ತದೆಂದು ಅಭಿಪ್ರಾಯವು. ಮತ್ತು ನಾಟಕ ವಿಚಾರ ಮತ್ತು ಸಂಗೀತ ಶಾಸ್ತ್ರವನ್ನು ಕಂಡುಹಿಡಿದ ಭರತ ಋಷಿಯು ತನ್ನ ಗ್ರಂಥಕ್ಕೆ ನಾಟ್ಯಶಾಸ್ತ್ರವೆಂದು ಹೆಸರಿಟ್ಟಿದ್ದಾನೆ. ಭಾವ, ರಾಗ, ತಾಳಗಳಿಂದ ಸಮ್ಮಿಳಿತವಾದುದೇ 'ಭರತ' ಎಂದೂ ಆದುದರಿಂದಲೇ ಭರತ-ನಾಟ್ಯ'ವೆಂದೂ ಎಂದರೆ ಭರತನಾಟ್ಯ ಶಾಸ್ತ್ರವು. ದೃಶ್ಯರೂಪ್ಯವಾದುದರಿಂದ ರೂಪಕವೆಂದೂ, ಅಥವಾ ನಾಟಕವೆಂದೂ ಅವಸ್ಥಾನುಕರಣಾ ವಿಶೇಷದಿಂದ ನಾಟ್ಯವೆಂದೂ ಬಂದಿದೆ ಎಂದು ತಿಳಿಯಬೇಕಾಗುತ್ತದೆ.

ನಾಟಕದಲ್ಲಿ ವಸ್ತು, ನೇತಾ ಎಂಬೆರಡು ವಿಧಗಳಿವೆ. ಇದು ಬಹು ವಿಸ್ತೃತವಾದುದರಿಂದ ವಿವರಿಸಲವಕಾಶವಿಲ್ಲ. ಕಥೆಯು ಚಾರಿತ್ರಿಕವಾಗಿದ್ದು ಒಂದು ವೇಳೆ ಸ್ವಲ್ಪ ಬದಲಾವಣೆಯನ್ನು ಕವಿಯು ಮಾಡಬಹುದು. ಆದರೂ ನಾಟಕ ನಿಯಮಗಳನ್ನು ತಪ್ಪಕೂಡದೆಂದಿದೆ. ಆ ಪೈಕಿ ಸೂಚ್ಯ ಮತ್ತು ದೃಶ್ಯ ಶ್ರವ್ಯವೆಂದು ಎರಡು ಭಾಗವನ್ನು ಬಿಡಲಾಗದು. ಸೂಚ್ಯವಾದುದನ್ನು ರಂಗದಲ್ಲಿ ಸೂಚಿಸಬೇಕು ಹೊರತು ತೋರಿಸಲಾಗದು. ದೃಶ್ಯ ಶ್ರವ್ಯವು ಅರ್ಧಾಂಶ ದೃಶ್ಯವಾಗಿಯೂ ಬಾಕಿ ಇರುವುದು ಶ್ರವ್ಯವಾಗಿಯೂ ಇರಬೇಕೆಂದಿದೆ. ಇಂತಹ ವಿಷಯಗಳನ್ನು ರಂಗದಲ್ಲಿ ವಿಷ್ಕಂಭಕ, ಚೂಲಿಕ, ಅಂಕಾಸ್ಯ, ಅಂಕಾವತಾರ ಮತ್ತು ಪ್ರವೇಶಕ ರೀತಿಯಿಂದ ತೋರಿಸತಕ್ಕದ್ದು. ಉತ್ತಮ ಮಧ್ಯಮ ಪಾತ್ರಧಾರಿಗಳು ಈ ವಿಷಯವನ್ನು ಸಂಸ್ಕೃತ ಭಾಷೆಯಲ್ಲಿ ಆಡುವರು. ಇದನ್ನು ಶುದ್ಧ ವಿಷ್ಕಂಭಕವೆನ್ನುವರು. ಮಧ್ಯಮ ಮತ್ತು ನೀಚ ಪಾತ್ರಧಾರಿಗಳು ಸಂಸ್ಕೃತದಲ್ಲಿ ಪ್ರಾಕೃತಗಳಲ್ಲಿ ಆಡುವುದರಿಂದ ಮಿಶ್ರ ವಿಷ್ಕಂಭಕವೆಂದು ತಿಳಿಯಬೇಕು. ಪ್ರಾಕೃತದಲ್ಲಿಯೇ ಆಡುವ ನೀಚ ಪಾತ್ರಧಾರಿಗಳಿರುವುದನ್ನು ಪ್ರವೇಶಕವೆನ್ನುವರು. ಇದು ಜರಗಿದ ಜರಗಲಿರುವ ವೃತ್ತಾಂತ ಘಟಕವಾದುದು. ಸ್ನಾನ, ಪಾನ, ಭೋಜನ, ಯುದ್ಧ ಇತ್ಯಾದಿಗಳನ್ನು ರಂಗದಲ್ಲಿ ತೋರಿಸಬಾರದೆಂದಿದೆ. ಇಂತಹ ವಿಷಯಗಳನ್ನು ವಿಷ್ಕಂಭಕಾದಿಗಳಲ್ಲಿ ಬಾಯಲ್ಲಿ ಹೇಳಿ ಸಂಭಾಷಣೆ ಮಾಡುವದು ಹೊರತು ಯಥಾವತ್ತಾಗಿ ತೋರಿಸಲಾರರು. ಜನರು ಮುಂದಿನ ದೃಶ್ಯವನ್ನು ತವಕದಿಂದ ನೋಡಲು ನಿರೀಕ್ಷಿಸುತ್ತಿರುವುದರಿಂದಲೇ ರಂಗವನ್ನು ಕ್ಷಣಕಾಲವಾದರೂ ಖಾಲಿಯಾಗಿಡಕೂಡದೆಂದಿದೆ. ಇನ್ನು ನಾಟಕದ ವಿಷಯದಲ್ಲಿ ಸರ್ವಶ್ರಾವ್ಯ, ಪ್ರಕಾಶ, ಅಶ್ರಾವ್ಯ, ಸ್ವಗತ, ನಿಯತ ಶ್ರಾವ್ಯಗಳೆಂದು ಐದು ವಿಧವಿದೆ. ಇವುಗಳು ಸುಸ್ಪಷ್ಟವಾಗಿವೆ. ನಿಯತಶ್ರಾವ್ಯವು 'ಜನಾಂತಿಕ' 'ಅಪವಾರಿತಕ'ವೆಂದೆರಡು ವಿಧವು. ಇದಲ್ಲದೆ 'ಆಕಾಶಭಾಷಿತ'

ವೆಂದು ತನ್ನಷ್ಟಕ್ಕೆ ಆಡಿಕೊಳ್ಳುವ ಮಾರ್ಗವೂ ಒಂ ದಿದೆ. ಇವುಗಳೆಲ್ಲ ಸುಸ್ಪಷ್ಟವಾದುದರಿಂದ ವಿವರಣೆ ಗಳು ಅನವಶ್ಯಕವು. ನಾಟಕವು ಹಿಂದೆ ಹೇಳಿದ ಧೀರೋದಾತ್ತಾದಿನಾಯಕರಿಂದ ಕೂಡಿದ್ದಿರಬೇಕು. ನಾಯಕರಲ್ಲಿ–ದಕ್ಷಿಣನಾಯಕ, ಶಠನಾಯಕ, ಧೃಷ್ಟ ನಾಯಕ, ಅನುಕೂಲನಾಯಕಗಳೆಂಬ ಭೇದವಿದೆ. ಧೀರೋದಾತ್ತ ನಾಯಕನಿಗೆ ಔದಾರ್ಯಾದಿ ಎಂಟು ಗುಣಗಳಿರಬೇಕು.

ನಾಯಕಗೂ ಮೇಲೆ ಹೇಳಿದ ಗುಣಗಳಿರಬೇಕು. ಹೊರತು 'ಸ್ವೀಯಾ' (ಭವಭೂತಿಯ ಅಥವಾ ಭಾಸನ ಸೀತೆ) 'ಅನ್ಯಾ' ಎಂದರೆ ಪರನಾಯಕಿ ಅಥವಾ ಸಾಮಾ ನ್ಯಳು (ಮೃಚ್ಛಕಟಿಕದ ವಸಂತಸೇನೆ) ಎಂಬ ಈ ಭೇಧ ಗಳಿವೆ.

ಪ್ರತಿಯೊಂದು ನಾಟಕವೂ ಪ್ರಸ್ತಾವನೆಯಿಂದ ಪ್ರಾರಂಭವಾಗುವುದು. ಪ್ರಸ್ತಾವನೆಯಲ್ಲಿಯೇ ನಾಂ ದಿಯು ಜರಗುವುದು. ನಾಂದಿಯನ್ನು ಸೂತ್ರಧಾರನು ಮಾಡುವನು. ನಾಂದಿಯೆಂದರೆ ಸಂತೋಷವೆಂದರ್ಥವು. ಯಾರಿಗೆ ಸಂತೋಷ? ಸಭಾಪತಿಗೂ, ಸಭ್ಯರಿಗೂ, ಗಾಯಕರಿಗೂ, ವಾದಕರಿಗೂ, ನಟಿಯರಿಗೂ, ನಟ ರಿಗೂ ಸಂತೋಷವು. ಈ ಸಂತೋಷಕ್ಕೆ ವಿಘ್ನ ಬರ ಬಾರದೆಂದು ಪೂರ್ವರಂಗದಲ್ಲಿ ಸ್ತುತಿ ಮಾಡುವುದಕ್ಕೆ 'ನಾಂದೀ' ಎಂದೆನ್ನಬೇಕು. ನಾಟ್ಯ ಪ್ರದೀಪಕಾರನು ಇದನ್ನೇ

ನಂದಂತಿ ಕಾವ್ಯಾನಿ ಕವೀಂದ್ರವರ್ಗಾಃ ಕುಶೀಲವಾ
ಪಾರಿಷದಾಶ್ಚಸಂತಃ ।
ಯಸ್ಮಾದಲಂ ಸಜ್ಜನಸಿಂಧು ಹಂಸೀತಸ್ಮಾದಿಯಂಸಾ
ಕಥಿತೇಹ ನಾಂದೀ ॥

ಎಂದು ಹೇಳುವನು. ಪೂರ್ವರಂಗದಲ್ಲಿ ತೆರೆಯೊಳಗೆ ಇಷ್ಟದೇವತಾಪ್ರಾರ್ಥನೆಯು ಹಣ್ಣುಕಾಯಿ ಸಮರ್ಪಣೆ ಮೂಲಕ ನಟರು ಸ್ತುತಿ ಮಾಡುವುದೂ, ಸಾಂಪ್ರದಾ ಯಕ ನಾಟಕಗಳಲ್ಲಿ ವಿಘ್ನ ಪರಿಹಾರ ನಿಮಿತ್ತದಿಂದಲೂ ಸಂತೋಷಾತಿಶಯದಿಂದಲೂ ಮಾಡುವ ಪದ್ಧತಿ. ಸೂತ್ರಧಾರನು ಮಾಡುವ ಮಂಗಳರೂಪವಾದ ಸ್ತುತಿ ಯು ಬೇರೆ. ಈತನು ಪ್ರಸ್ತಾವನೆಯ ಸೂತ್ರಧಾರನು ಭಾಸನನಾಂದಿಯಲ್ಲಿ ಪೂರ್ವರಂಗದಲ್ಲಿರುವವನು 'ನಾಂದೀವಾದಿನ್' ಅಥವಾ 'ನಾಂದೀಕರ'ನೆಂದಿದೆ. ಪ್ರಸ್ತಾವನೆಯ ಸೂತ್ರಧಾರನು ಬೇರೆ ನಾಂದೀ ಶ್ಲೋಕ ವನ್ನು ಹೇಳುವ ಪದ್ಧತಿಯಿದೆಂದು

ಸೂತ್ರಧಾರ ಕೃತಾರಂಭೈರ್ನಾಟಕೈರ್ಬಹು ಭೂಮಿಕೈಃ ॥
ಸಪತಾಕೈರ್ಯಶೋಲೇಭೇಭಾಸೋ ದೇವ ಕುಲೈರಿವ ॥

ಎಂದು ಬಾಣನು ತನ್ನ ಹರ್ಷ ಚರಿತ್ರೆಯಲ್ಲಿ ಹೇಳು ವನು. ಪ್ರಸ್ತಾವನೆಯ ಸೂತ್ರಧಾರನು ಮಂಗಳವನ್ನು ಸಭೆಯ ಮುಂದೆ ಮಾಡುವನು. ಇದರ ಫಲವೂ ನಿರ್ವಿಘ್ನೋಪಶಾಂತಿಯೇ. ತೆರೆಯ ಸೂತ್ರವನ್ನು ಹಿಡಿ ದವನು ಸೂತ್ರಧಾರನೆಂದು ಕೆಲವರನ್ನುವರು. ಆ ಆ ನಾಟಕಗಳಲ್ಲಿ ಆ ಆ ತೆರೆಗಳನ್ನು ಬಿಡಬೇಕೆಂದು ಮುಖ್ಯ ಪ್ರಧಾನನು ತೋರಿಸುತ್ತಾನೆ. (ಹಗ್ಗ ಹಿಡಿದೆಳೆವವನು ಬೇರೆ ಇರಬಹುದು) ಅವನು ನಾಟಕ ಮಂಡಲಿಯಲ್ಲಿ ಪ್ರಧಾನನಿರಬೇಕು. ನಾಟಕದ ಅನುಷ್ಠಾನವೇ ಸೂ ತ್ರವು—ಅದನ್ನೆ ಧರಿಸಿದವನು ಸೂತ್ರಧಾರನು. ಆತನು ರಂಗ ದೇವತೆಯ ಪೂಜಕನಿರಬೇಕು.

ನಾಟ್ಯಸ್ಯಯದನುಷ್ಠಾನಂ ತತ್ಸೂತ್ರಂಸ್ಯಾತ್ಸ ಬೀಜಕಂ ।
ರಂಗ ದೈವತ ಪೂಜಾಕೃತ್ಸೂತ್ರಧಾರ ಉದೀರಿಕಃ ॥

ಎಂದು ಲಕ್ಷ್ಮಣ ಗ್ರಂಥದಲ್ಲಿದೆ. ಈ ಪ್ರಸ್ತಾವನಾ ಸೂತ್ರಧಾರನು ಪ್ರಸ್ತಾವನೆಯಲ್ಲಿ ಕಥಾಂಶವನ್ನು ಕವಿ ಯನ್ನು ಸೂಚಿಸುವ ಪದ್ಧತಿಯಿದೆ. ಭಾಸ ನಾಟಕಗ ಳಲ್ಲಿ "ನಾಂದ್ಯಂತೇ ಸೂತ್ರಧಾರಃ" ಎಂದಿದೆ. ಈತನು ಪ್ರಸ್ತಾವನೆಯ ಸೂತ್ರಧಾರನು. ಸಾಮಾನ್ಯವಾಗಿ ಸೂತ್ರಧಾರನು ನಟಿಯನ್ನು ಆಹ್ವಾನಿಸಿ ಆಕೆಯ ಕೂಡೆ ಸರಸಲ್ಲಾಪದಿಂದ ಮುಂದಿನ ಕರ್ತವ್ಯಗಳನ್ನು ತಿಳಿಸು ವನು. ಯಾ ಪಾರಿಪಾರ್ಶ್ವಕನ ಕೂಡೆ ತಿಳಿಸುವುದೂ ಇದೆ. ಈತನಿಗೆ ಸ್ಥಾಪಕನೆಂದೂ ಹೆಸರು ಇದೆ. ಈ ಸೂತ್ರಧಾರನಾಗಲೀ ಸ್ಥಾಪಕನಾಗಲೀ ಯಾ ಕವಿಯ 'ಹೆಮ್ಮೆ' ಕವಿಯ ಸಾಮರ್ಥ್ಯ ಯಾ ಪ್ರತಿಭೆ ಇವು ಗಳನ್ನೂ, ಮುಂದಿನ ರಂಗದಲ್ಲಿ ಬರುವ ನಾಯಕ ಯಾ ಪಾತ್ರಧಾರಿಯನ್ನೂ ಬೀಜರೂಪವಾಗಿ ಸೂಚಿ ಸುತ್ತಾನೆ. ಈತನು ಭಾರತೀ ವೃತ್ತಿಯಲ್ಲಿ ಪ್ರೇಕ್ಷಕ ರನ್ನು ಆನಂದಗೊಳಿಸಲು ಯಾವುದಾದರೂ ಋತು ವರ್ಣನಾತ್ಮಕವಾದ ಸಂಗೀತದಿಂದ ಪ್ರೇಕ್ಷಕ ಮಂಡ ಲಿಯನ್ನು ಮುಗ್ಧರನ್ನಾಗಿ ಮಾಡುವುದಿದೆ. ನಾಟ ಕವು ಅಂಕರೂಪವಾಗಿಯೂ ಪ್ರತ್ಯೇಕ ರಂಗರೂಪ ವಾಗಿಯೂ ವಿಭಾಗದಿಂದ ಕೂಡಿದೆ. ಅಂಕಗಳು 5 ರಿಂದ 10ರ ವರೆಗಿರುವುದಿದೆ. ನಾಟಕದ ರಸವು

ಹೆಚ್ಚಾಗಿ ಶೃಂಗಾರವಾಗಿಯೂ ಕೆಲವು ವೇಳೆ ವೀರರಸದ್ದಾಗಿಯೂ ಕೆಲವು ವೇಳೆ ಕರುಣಾರಸದ್ದಾಗಿಯೂ ಇರುತ್ತದೆ. ಉಳಿದ ರಸಗಳು ಇವುಗಳನ್ನು ಪೋಷಿಸುವುವುಗಳಾಗಿರುವುವು. ಅಂಕವು ಬಹು ದೀರ್ಘವಾದುದಾಗಿರಬಾರದು. ರಸವತ್ತಾಗಿಯೂ ಸಂದರ್ಭದಲ್ಲಿ ವಿಷ್ಕಂಭಕಾದಿಗಳಿಗೆ ಕೂಡಿದ್ದಾಗಿಯೂ ಇರುತ್ತದೆ. ನಾಯಕನ ವಧೆಯು ಸರ್ವಥಾ ವರ್ಜ್ಯವು. ಭಾರತೀಯ ನಾಟಕಗಳಲ್ಲಿ ವಿಷಾದಾಂತ ನಾಟಕಗಳೇ ಇಲ್ಲ. ಇರಲೂ ಕೂಡದೆಂದಿದೆ. ವಿಲ್ಸನ್ ಮತ್ತು ಜಾನಸನ್ನರು ಈ ವಿಷಯವನ್ನು ಎತ್ತಿ ಬರೆದಿರುವರು. ವಿಷಾದಾಂತ ನಾಟಕಗಳು ಷೇಕಸ್‌ಫೀಯರನ ಕಾಲದಲ್ಲಿಯೇ ಸಾಕಷ್ಟಾಗಿದೆ. ಮತ್ತು ಸಾಕಾಗಿದೆ ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅಂತಹ ವಿಷಯಗಳನ್ನು ಹೇಳಲೇ ಬಾರದು, ಆಡಲೇ ಬಾರದೆಂಬ ನಿಯಮಗಳಿರುವುದರಿಂದ ವಿಷಾದಾಂತ ನಾಟಕಗಳು ಉಂಟಾಗಲಿಲ್ಲ. ಹೊರತು ಭಾರತೀಯರಿಗೆ ತಿಳಿಯದಿಲ್ಲವೆಂದು ಅಲ್ಲ ಎಂದು ಕೂಡಾ ಹೇಳಿದ್ದಾರೆ. ಭಾರತೀಯ ನಾಟಕ ಕಲೆಯು ಅತ್ಯಿಗಂಭೀರದ್ದೆಂದು ಅಭಿಪ್ರಾಯವು ಅವರಿಗಿದೆ. ನಾಟಕವು ಸ್ತುತಿಯಿಂದ ಪ್ರಾರಂಭವಾದಂತೆ ಸ್ತುತಿರೂಪವಾದ ಭರತವಾಕ್ಯದಿಂದಲೇ ಅಂತ್ಯವಾಗಬೇಕೆಂಬ ನಿಯಮವೂ ಇದೆ. ಭರತ ವಾಕ್ಯವು ಜನಸಾಮಾನ್ಯದ ಸುಖ ಸಂಪದಭಿವೃದ್ಧಿಯನ್ನು ಕೋರುತ್ತದೆ. ನಾಟಕದಲ್ಲಿ ನಾಯಕನು ಸಂಸ್ಕೃತದಲ್ಲಿಯೂ ಹೆಂಗಸರು ಪ್ರಾಕೃತದಲ್ಲಿಯೂ, ನೀಚ ಪಾತ್ರಗಳು ಪ್ರಾಕೃತದಲ್ಲಿಯೂ, ಅರುಂಧತಿಯಾದಿ ದೇವತಾಸ್ತ್ರೀಯರು ಸಂಸ್ಕೃತದಲ್ಲಿಯೂ ಆಡುವ ನಿಯಮವಿದೆ. ಕೆಲವು ಕವಿಗಳು ಮಹಾರಾಷ್ಟ್ರೀ ಕೆಲವರು ಶೌರಸೇನೀ ಕೆಲವರು ಮಾಗದೀ ಪ್ರಾಕೃತಗಳನ್ನು ಉಪಯೋಗಿಸುತ್ತಾರೆ.

ಭಾರತೀಯ ನಾಟಕಗಳಲ್ಲಿ (1) ವಿಲಕ್ಷಣವಾದ ರಚನಾಶಕ್ತಿ (2) ಸುಖಪರ್ಯವಸಾನ ಮತ್ತು ಶೋಕ ಪರ್ಯವಸಾನಗಳ ಭೇದವಿಲ್ಲದಿರುವಿಕೆ (3) ಪಾತ್ರಧಾರಿಗಳಲ್ಲಿ ಭಾಷಾಭೇದ ಈ ಮೂರು ಗುಣಗಳು ಭಾರತೀಯ ನಾಟಕಗಳ ಹೆಗ್ಗುರುತುಗಳು. ಈ ವಿಷಯವು ಪಾಶ್ಚಾತ್ಯ ನಾಟಕಗಳಲ್ಲಿಲ್ಲ.

ನಮ್ಮ ಕಾವ್ಯ ನಾಟಕ ಗ್ರಂಥಗಳು ನಮ್ಮ ಪ್ರಾಚೀನರ ಜನಜೀವನವನ್ನು ಎತ್ತಿ ತೋರಿಸುತ್ತಿವೆ. ಪೂರ್ವಕಾಲದಲ್ಲಿ ದೋಷವಿದ್ದಿಲ್ಲವೆಂದಲ್ಲ. ಜನಜೀವನದ ದೋಷವನ್ನು ಗ್ರಂಥರೂಪವಾಗಿ ತೋರಿಸಬಾರದೆಂಬುದೇ ಮುಖ್ಯ ಧ್ಯೇಯವು. ತೋರಿಸಿದ ದೋಷಗಳಿದ್ದರೆ ಅವು ಜನಜೀವನಕ್ಕೆ ಕೆಡಕನ್ನುಂಟುಮಾಡುವದೆಂದು ನಾವದನ್ನು ಅನುಸರಿಸಬಾರದೆಂದು ಬೋಧಿಸುವಂತಿದೆ. ಕಾವ್ಯ ನಾಟಕ ಪರಿಶೀಲನೆಯಲ್ಲಿ ಆದರ್ಶಪ್ರಾಯವಾದ ನಡತೆಯನ್ನು ಪರಿಗ್ರಹಿಸಬೇಕೆಂಬುದೇ ಮುಖ್ಯ ತತ್ವವಿರುವುದು. ಊಟ ಮಾಡಬೇಕೆಂದು ಶಾಸ್ತ್ರನಿಯಮವಿಲ್ಲ. ಕಾರಣ ಊಟವು ರಾಗಪ್ರಾಪ್ತವಾದುದು. ಆದರೆ ಊಟ ಮಾಡುವಾಗ ಆಹಾರನಿಯಮ ಮತ್ತು ಕಾಲನಿಯಮ ಮಾತ್ರ ಶಾಸ್ತ್ರವು ವಿಧಿಸುತ್ತದೆ. ಆಹಾರಗಳ ನಿಯಮ ಯಾ ಕಾಲನಿಯಮವಿಲ್ಲದಿದ್ದರೆ ಶರೀರದ ಸ್ಥಿತಿಗತಿಗಳು ಅಸ್ತವ್ಯಸ್ತವಾಗುವುವು. ಹೀಗಾದರೆ ಜಾಡ್ಯವುಂಟಾಗುವುದು. ಶಾರೀರಿಕ ಜಾಡ್ಯವು ಮನಸ್ಸಿಗೂ ಸಂಬಂಧಿಸುವುದು. ಮನಸ್ಸು ಪಲ್ಲಟವಾಗುವುದು. ಆಗ ಆಧಿ ವ್ಯಾಧಿ ಎರಡೂ ಉಂಟಾಗುತ್ತದೆ. ಹೀಗಿರುವ ಮನುಷ್ಯನು ಯಾವ ಕೆಲಸವನ್ನೂ ಮಾಡಲಾರನು. ಅವನನ್ನು ರೋಗಿ ಎಂದೆನ್ನಬೇಕು. ರೋಗಿಗೆ ಕ್ರಮೇಣ ಜ್ಞಾನಲೋಪವುಂಟಾಗುವುದು. ಜ್ಞಾನಲೋಪವಾಗದಂತೆ ಆಹಾರಾದಿ ನಿಯಮವು ಬೇಕೇಬೇಕು. ಆದುದರಿಂದ ಅದಕ್ಕೆ ವಿಧಿನಿಯಮವು ಬೇಕಾಗಿದೆ. ಹಾಗೆಯೇ ವಾಙ್ಮಯದಲ್ಲಿಯೂ ಆದರ್ಶಪ್ರಾಯರ ಕಥೆಯನ್ನು ಕಾವ್ಯ ರೂಪವಾಗಿ ಬರೆದು ಅವರ ನಡತೆಯನ್ನು ಅನುಸರಿಸಬೇಕೆಂದೇ ನಮ್ಮವರ ಧ್ಯೇಯವು. ಆದುದರಿಂದಲೇ "ಕಾವ್ಯಾಲಾಪಾಂಶ್ಚ ವರ್ಜಯೇತ್" ಎಂದು ಹೇಳಿದ್ದು. ಕಾವ್ಯಾಲಾಪವೆಂದರೆ ಅಸತ್ಕಾವ್ಯವೆಂದೇ ಇಲ್ಲಿ ಅರ್ಥವು. ಆದುದರಿಂದ ವಾಙ್ಮಯವೂ ಸತ್ಕಾವ್ಯಾಲಾಪವಾಗಿರಬೇಕು.

ಆದಿರಾಜಯಶೋಬಿಂಬ ಮಾದರ್ಶಂ ಪ್ರಾಪ್ಯ ವಾಙ್ಮಯಂ ।
ತೇಷಾಮ ಸನ್ನಿಧಾನೇಪಿ ನಪ್ಸ್ವಯಂ ಪಶ್ಯನಶ್ಯತಿ ।

ಎಂದು ಆಚಾರ್ಯದಂಡಿಯು ಹೇಳಿ

ತದೇತದ್ವಾಙ್ಮಯಂ ಭೂಯಃ ಸಂಸ್ಕೃತಂ ಪ್ರಾಕೃತಂ ತಥಾ

ಎಂದೆನ್ನುವನು. ಅನೇಕ ಪ್ರಾಕೃತಗಳನ್ನು ಹೇಳಿ

ಶೌರಸೇನೀಚ ಗೌಡೀ ಚ ಲಾಟೀಚಾನ್ಯಾ ಎಂದೆನ್ನುವನು. ಲಾಟೀ ಪ್ರಾಕೃತವೆಂದರೆ ನಮ್ಮ ಗ್ರಾಂಥಿಕ ಕನ್ನಡವು. ಈ ವಿಷಯದಲ್ಲಿ

"ಲಾಟ ದೇಶಪ್ರಭು ಪಾಟಿಯಾಗಿರುತಿಹ ಕೋಟಿ ಧನಂಗಳು ಇರ್ಪುದಕೆ ಎಂದು ಕನ್ನಡ ಪದ್ಯವೊಂದು ನೆನಪಾಗುತ್ತಿದೆ.

ಈ ಮೇಲೆ ಹೇಳಿದ ಕಾವ್ಯ ವಾಙ್ಮಯ ಲಕ್ಷಣವು ಸಂಸ್ಕೃತ ಕನ್ನಡಕ್ಕೆ ಸಮಾನವು.

ಈಗಿನ ನವೀನ ಕಾವ್ಯಗಳು ಮತ್ತು ನಾಟಕಗಳು ಈ ಪದ್ಧತಿಯನ್ನು ಬಿಟ್ಟಿವೆ. ವರದಾಚಾರ್ಯರಂತಹ ರಾಜನಟರು ಈ ಪದ್ಧತಿಯನ್ನು ಕನ್ನಡ ನಾಡಿನಲ್ಲಿ ಬಿಟ್ಟಿಲ್ಲವೆಂದು ಕಣ್ಣಾರೆ ಕಂಡ ನಾವು ಅಂತಹ ನಾಟಕಗಳನ್ನು ಕಣ್ಣಿನಿಂದ ನೋಡುತ್ತಿದ್ದೇವೆಯೇ? ಲಕ್ಷ್ಮೀಶನಂತಹ ಕವಿಗಳ ಕಾವ್ಯವನ್ನನುಸರಿಸಿ ಬರೆದ ಮುದ್ದಣ್ಣನ ಪಾದುಕಾಪಟ್ಟಾಭಿಷೇಕದಂತಹ ಕಾವ್ಯಗಳೀಗ ಉಂಟಾಗುತ್ತಿವೆಯೇ? ಅಶ್ವತ್ಥಾಮನು ಆತ್ಮಹತ್ಯೆ ಮಾಡಿಕೊಂಡ ನಮ್ಮ ಸಾಹಿತ್ಯವು ನಮಗಿದೆ ಈಗ.

ಈಗಿನ ನಾಟಕವೆಂದರೆ ಸಂಗೀತವೆಂದರೆ ಚಲಚ್ಚಿತ್ರದಲ್ಲಿಯೇ ಕಾಣಬೇಕು, ಕೇಳಬೇಕು. ರಾಜಕೀಯ ಸಮಾಜದಲ್ಲಿ ಹೊಸ ಹೊಸ ಧರ್ಮಗಳು ತಲೆದೋರುತ್ತಿವೆ. ನವಜೀವನದಲ್ಲಿ ನವೀನ ಸಾಹಿತ್ಯವು ಪ್ರಾಚೀನರ ಪದ್ಧತಿಯನ್ನು ಖಂಡಿಸಿ ಭಕ್ತಿಶ್ರದ್ಧಾದಿಗಳನ್ನು ನಾಶ ಮಾಡಿ ನಾಸ್ತಿಕತ್ವವನ್ನು ಹರಡಿ ಸರ್ವನಾಶವನ್ನುಂಟುಮಾಡುತ್ತಿದೆ. ಸನಾತನ ಧರ್ಮದ ಅಡಿಗಲ್ಲನ್ನು ಕಿತ್ತು ಒಗೆದು ಕೃತ್ರಿಮವೇ ಧರ್ಮವೆಂದು ಬೋಧಿಸುತ್ತಾ ಜನರನ್ನು ಶುಂಠರನ್ನಾಗಿ ಮಾಡುತ್ತಿದೆ. ಲಲಿತ ಕಲೆಗಳ ನಾಶನವೇ ನವೀನ ಸಿದ್ಧಾಂತ ಪ್ರಚಾರದ ಪರಿಣಾಮವಿದು. ಅಶೋಕ ಧರ್ಮದ ಧ್ವಜವನ್ನು ನಾವು ಎತ್ತಿ ಹಿಡಿಯುವವರೇ ಆದರೆ, ಸನಾತನ ಧರ್ಮದ ಗುಣಗಳನ್ನು ಕಂಡು ಹಿಡಿಯಲು ಯೋಗ್ಯತೆಯಿಲ್ಲದೆ ನವೀನ ಸಿದ್ಧಾಂತಗಳನ್ನು ಜನಪದದ ಮುಂದಿಟ್ಟು ಧರ್ಮಕರ್ಮಚ್ಯುತರನ್ನಾಗಿ ಮಾಡಿ ಅನಾರ್ಯರನ್ನು ಮಾಡುವುದಕ್ಕಿಂತಲೂ ಪ್ರಾಚೀನ ಧರ್ಮರಹಸ್ಯಗಳನ್ನು ತಿಳಿದು ಜನರ ಮುಂದಿಟ್ಟು ಪ್ರಚಾರಪಡಿಸುವುದೇ ನಮ್ಮ ಧ್ಯೇಯವಾಗಿರಬೇಕೆಂದು ನಮ್ಮ ಮುಂದಾಳುಗಳು ಮುಂದರಿಯಬೇಕಾದ ಸಮಯವಿದು.

— ಸಂಪೂರ್ಣಂ —



ಆಧುನಿಕ ಕರ್ಣಾಟಕ ಸಾಹಿತ್ಯದ ಮೇಲೆ

ಆಂಗ್ಲ ಸಾಹಿತ್ಯದ ಪ್ರಭಾವ

ಶ್ರೀ ಎಂ. ಗೋವಿಂದ ರಾವ್, ಎಂ. ಎ., ಕನ್ನಡ ಡಿಪಾರ್ಟ್‌ಮೆಂಟ್, ಯುನಿವರ್ಸಿಟಿ, ಮದರಾಸು.

ಆಧುನಿಕ ಕರ್ಣಾಟಕ ಸಾಹಿತ್ಯದ ಹುಟ್ಟು ಎಂದು? ಅದರ ಬೆಳವಣಿಗೆ ಹೇಗಾಯಿತು? ಎಂಬ ಪ್ರಶ್ನೆಗಳಿಗೆ ಉತ್ತರ ಕೊಡುವುದು ಅಷ್ಟೊಂದು ಸುಲಭವಾದ ಕಾರ್ಯವಲ್ಲ. ಯಾಕೆಂದರೆ ನಮ್ಮ ಸಾಹಿತ್ಯವು ಕಾಲಕಾಲಕ್ಕೆ ಬದಲಾವಣೆಯನ್ನು ಹೊಂದುತ್ತ ಬಂದಿರುವುದಲ್ಲದೆ ಒಂದು ಕಾಲದ ಸಾಹಿತ್ಯದ ಲಕ್ಷಣಗಳು ಮತ್ತೊಂದು ಕಾಲದ ಸಾಹಿತ್ಯದಲ್ಲಿ ಕಂಡುಬರುವುದೂ ಉಂಟು. ಆದುದರಿಂದ ಕನ್ನಡ ಸಾಹಿತ್ಯದ ನವಯುಗವು ಎಂದು ಆರಂಭವಾಯಿತೆಂಬುದರ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳುಂಟಾಗಿವೆ. ಜೈನರ ಪುರಾಣ ಯುಗವು ಮುಗಿದ ಮೇಲೆ ವೀರಶೈವರ ವಚನ ಸಾಹಿತ್ಯದ ಪ್ರಭಾವವು ತಲೆದೋರಿ ಕನ್ನಡ ಸಾಹಿತ್ಯದಲ್ಲಿ ದೊಡ್ಡದೊಂದು ಕ್ರಾಂತಿಯೇ ಉಂಟಾಯಿತು. ವೀರಶೈವ ಕವಿಗಳು ಷಟ್ಪದಿ, ರಗಳೆ, ತ್ರಿಪದಿ, ವಚನ ಮುಂತಾದ ಸಾಹಿತ್ಯರೂಪಗಳಿಂದ ಕನ್ನಡ ಸಾಹಿತ್ಯವನ್ನು ವಿಪುಲವಾಗಿ ಬೆಳೆಸಿದರು. ನಾಡಿನ ನುಡಿಗಟ್ಟುಗಳನ್ನೂ ಗಾದೆಗಳನ್ನೂ ತಮ್ಮ ಗ್ರಂಥಗಳಲ್ಲಿ ತುಂಬಿಸಿದರು. ಜೈನರ ಶೈಲಿಯ ಬಿಗುಪನ್ನು ತೊರೆದು ಬಿಟ್ಟು, ಸರಳ ಶೈಲಿಯಲ್ಲಿ ಗ್ರಂಥಗಳನ್ನು ಬರೆದು, ಅವು ಪಾಮರರಿಗೂ ಅರ್ಥವಾಗುವಂತೆ ಮಾಡಿದರು. ಆದುದರಿಂದ ಕೆಲವು ಮಂದಿ ವಿಮರ್ಶಕರು ವೀರಶೈವ ಕವಿಗಳಿಂದಲೇ ಕನ್ನಡ ಸಾಹಿತ್ಯದ ನವಯುಗವು ಆರಂಭವಾಯಿತೆನ್ನುವರು. ಭಾಷೆಯ ದೃಷ್ಟಿಯಿಂದ ನೋಡಿದರೆ ಇದು ಸರಿಯೆಂದು ತೋರುತ್ತದೆ. ಯಾಕೆಂದರೆ ಅದುವರೆಗೆ ಸಂಸ್ಕೃತಪದ ಭೂಯಿಷ್ಠವಾಗಿಯೂ, ದೀರ್ಘ ಸಮಾಸಯುಕ್ತವಾಗಿಯೂ, ಸಕಲ ಲಕ್ಷಣಾನ್ವಿತವಾಗಿಯೂ, ಕ್ಲಿಷ್ಟವಾಗಿಯೂ, ಪಂಡಿತರಿಗೆ ಮಾತ್ರ ರಂಜನೆಯನ್ನುಂಟುಮಾಡುವುದಾಗಿಯೂ ಇದ್ದ ಸಾಹಿತ್ಯವು, ವೀರಶೈವ ಕವಿಗಳ ಕೈಯಲ್ಲಿ ಅಚ್ಚಗನ್ನಡದ ನಲ್ನುಡಿಗಳಿಂದಲೂ, ಸರಳವಾದ ಶೈಲಿಯಿಂದಲೂ, ಸುಲಭವಾದ ಭಾಷೆಯಿಂದಲೂ, ಮಧುರವಾದ ಭಾವಗಳಿಂದಲೂ ಸುಂದರವಾದ ಪದಪ್ರಯೋಗಗಳಿಂದಲೂ ಕೂಡಿ, ಸಾಮಾನ್ಯರಿಗೂ ಅರ್ಥವಾಗುವಂತಾಯಿತು. ಆದರೆ ಜೈನರ ಮೇಲ್ಪಂಕ್ತಿಯನ್ನನುಸರಿಸಿ ವೀರಶೈವರೂ ಧಾರ್ಮಿಕ ಭಾವನೆಗಳನ್ನೇ ಸಾಹಿತ್ಯದ ವಸ್ತುವನ್ನಾಗಿ ಆರಿಸಿಕೊಂಡದ್ದರಿಂದ ವಿಷಯ ವಿಭೇದದ ದೃಷ್ಟಿಯಿಂದ ಯಾವ ವ್ಯತ್ಯಾಸವೂ ಉಂಟಾದಂತೆ ಹೇಳಲು ಬರುವುದಿಲ್ಲ. ಅದುವರೆಗಿನ ಸಾಹಿತ್ಯದಲ್ಲಿ ಸಾಮಾಜಿಕ ಜೀವನವು ಸ್ಫುಟವಾಗಿ ಪ್ರತಿಬಿಂಬಿಸುವುದು ಕಂಡು ಬರುವುದಿಲ್ಲ.

ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಮೈಸೂರು ದೇಶದ ರಾಜನಾದ ಮುಮ್ಮಡಿ ಕೃಷ್ಣರಾಜನು ಆಧುನಿಕ ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ಬೇಕಾದ ಸ್ಫೂರ್ತಿಯನ್ನು ಕೊಟ್ಟು ಅನೇಕ ಉದ್ಗ್ರಂಥಗಳ ರಚನೆಗೆ ಕಾರಣನಾದನು. ಅವನು ಕೈಕೊಂಡು ನಡೆಸಿದ ಮಹತ್ಕಾರ್ಯವು ಶ್ಲಾಘನೀಯವಾಗಿದೆ. ಅವನ ಕಾಲದಲ್ಲಿ ಅನೇಕ ಸಂಸ್ಕೃತ ಗ್ರಂಥಗಳು ಕನ್ನಡಕ್ಕೆ ಪರಿವರ್ತನೆ ಹೊಂದಿದವು; ಹಲವು ಸ್ವತಂತ್ರ ಗ್ರಂಥಗಳೂ ರಚಿತವಾದವು, ಕನ್ನಡದ ಗದ್ಯಶೈಲಿಗೆ ಒಂದು ನಿರ್ದಿಷ್ಟ ರೂಪವು ಅವನ ಕಾಲದಲ್ಲಿಯೇ ಉಂಟಾಯಿತು. ಆದುದರಿಂದ ಹೊಸ ಕನ್ನಡದ ಯುಗವು ಮುಮ್ಮಡಿ ಕೃಷ್ಣರಾಜನ ಕಾಲದಿಂದ ಆರಂಭವಾಯಿತೆಂದು ಇನ್ನು ಕೆಲವು ವಿದ್ವಾಂಸರ ಅಭಿಪ್ರಾಯ. ಇಲ್ಲಿಯೂ ನಾವು ಗಮನಿಸಬೇಕಾದ ಮುಖ್ಯ ವಿಷಯವೇನೆಂದರೆ ಆ ಕಾಲದ ಸಾಹಿತ್ಯವು ಜನಜೀವನದ ಪ್ರತೀಕವಾಗಿದೆಯೇ ಎಂಬುದು. ಹೆಚ್ಚಿನ ಗ್ರಂಥಗಳು ಭಾಷಾಂತರಗಳಾಗಿದ್ದುದರಿಂದ ಸಾಹಿತಿಗಳಿಗೆ ಆಗಿನ ಸಮಾಜದ ಚಿತ್ರಣವನ್ನು ಕೊಡುವುದಕ್ಕೆ ಅವಕಾಶವಿರಲಿಲ್ಲ. ಸಂಪ್ರದಾಯಶರಣರಾದ ಆ ಕಾಲದ ಸಾಹಿತಿಗಳಿಂದ ಇನ್ನೂ

ಹೆಚ್ಚಿನದೇನನ್ನೂ ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ. ಆ ಶತಮಾನದ ಉತ್ತರಾರ್ಧವು ಬಹಳ ಮಹತ್ವದ್ದಾಗಿದೆ.

ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪರದೇಶೀಯರಾದ ಕ್ರೈಸ್ತಬಂಧುಗಳು ಕನ್ನಡ ತಾಯಿಗೆ ತಮ್ಮ ಅನೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ಕೃಷ್ಣರಾಜನು ನಿರ್ವಹಿಸದೆ ಇದ್ದ ಕಾರ್ಯವನ್ನು ಇವರು ಆರಂಭಿಸಿ ಕೃತಕೃತ್ಯರಾಗಿದ್ದಾರೆ. ಕನ್ನಡಿಗರಿಗೆ ಅವರು ಮಾಡಿದ ಉಪಕಾರವು ಶ್ಲಾಘನೀಯವಾಗಿದೆ. ಪರದೇಶದಿಂದ ಬಂದು, ಕನ್ನಡ ಭಾಷೆಯನ್ನು ಅಭ್ಯಾಸಮಾಡಿ, ಅದರಲ್ಲಿ ವಿಶೇಷ ಪಾಂಡಿತ್ಯವನ್ನು ಸಂಪಾದಿಸಿ, ಉಪಯೋಗಕರವಾದ ಅನೇಕ ಗ್ರಂಥಗಳನ್ನು ಪ್ರಕಟಿಸಿ, ಕೀರ್ತಿಯನ್ನು ಗಳಿಸಿದ್ದಾರೆ; ಕನ್ನಡ ಭಾಷೆಯ ಅಭ್ಯಾಸಕ್ಕೆ ಅನುಕೂಲವಾದ ಶಬ್ದಕೋಶ, ವ್ಯಾಕರಣ, ಅಲಂಕಾರಾದಿಲಕ್ಷಣ ಗ್ರಂಥಗಳು, ಪುರಾತನ ಕಾವ್ಯಗಳು—ಇವುಗಳನ್ನು ಕನ್ನಡಿಗರಿಗೆ ಒದಗಿಸಿಕೊಟ್ಟು ಮಹೋಪಕಾರವನ್ನು ಮಾಡಿರುತ್ತಾರೆ. ಆ ಕಾಲದ ಪರಿಸ್ಥಿತಿಯನ್ನು ವಿಚಾರಿಸಿದರೆ, ಅವರ ಕಾರ್ಯವು ಎಷ್ಟು ಕಠಿಣವಾಗಿತ್ತೆಂದೂ ಅವರು ವಹಿಸಿದ ಶ್ರಮವು ಎಷ್ಟು ಅಗಾಧವಾಗಿತ್ತೆಂದೂ ತಿಳಿಯದಿರದು. ಆ ಕಾಲದಲ್ಲಿ ನಮ್ಮ ಜನರಿಗೇ ನಮ್ಮ ಭಾಷೆಯಲ್ಲಿ ಆದರವಿರಲಿಲ್ಲ. ಅಂಥವರಿಗೆ ನಮ್ಮ ಭಾಷೆಯ ಮತ್ತು ಸಾಹಿತ್ಯದ ಮೇಲೆ ಅಭಿಮಾನ ಹುಟ್ಟುವಂತೆ ಮಾಡುವುದು ಸುಲಭ ಸಾಧ್ಯವಾಗಿರಲಿಲ್ಲ. ನಮ್ಮ ಕ್ರೈಸ್ತ ಬಂಧುಗಳು ಈ ಕಾರ್ಯದಲ್ಲಿ ಯಶಸ್ವಿಗಳಾಗಿದ್ದಾರೆ. ಕೇವಲ ಕನ್ನಡಿಗರು ಮಾತ್ರವೇ ಅಲ್ಲದೆ ಇತರರೂ ಕೂಡ ಕನ್ನಡ ಸಾಹಿತ್ಯದ ತಿರುಳನ್ನರಿಯುವಂತೆ ಮಾಡುವುದಕ್ಕಾಗಿ ಅವರು ಅನೇಕ ಕಾವ್ಯಗಳ ಉತ್ತಮ ಭಾಗಗಳನ್ನು ಆಂಗ್ಲ ಭಾಷೆಗೆ ಪರಿವರ್ತಿಸಿದ್ದಾರೆ. ಕನ್ನಡ ಸಾಹಿತ್ಯದ ಚರಿತ್ರೆಯನ್ನೂ ಇಂಗ್ಲೀಷಿನಲ್ಲಿ ಬರೆದು ಕನ್ನಡಿಗರಿಗೆ ಕೊಟ್ಟಿದ್ದಾರೆ. ಕನ್ನಡ ಭಾಷೆ ಮತ್ತು ಕಾವ್ಯಗಳ ಕುರಿತು ವಿದ್ವತ್ಪೂರ್ಣವಾದ ವಿಮರ್ಶೆಗಳನ್ನು ಬರೆದಿರುತ್ತಾರೆ. ಕನ್ನಡ ಸಾಹಿತ್ಯದಲ್ಲಿರುವ ಕುಂದುಕೊರತೆಗಳನ್ನು ನಮಗೆ ತೋರಿಸಿ ಕೊಟ್ಟವರು ಅವರೇ! ನಾವು ಹೇಗೆ ಭಾಷಾಭಿವೃದ್ಧಿ, ಸಾಹಿತ್ಯಾಭಿಗಳನ್ನು ಮಾಡಬಹುದೆಂಬುದಕ್ಕೂ ಅವರೇ ದಾರಿ ತೋರಿಸಿದ್ದಾರೆ. ಕನ್ನಡಿಗರಲ್ಲಿ ವಿಮರ್ಶೆಯ ಮತ್ತು ಸಂಶೋಧನೆಯ ದೃಷ್ಟಿಯುಂಟಾಗುವುದಕ್ಕೆ ಅವರೇ ಕಾರಣರೆಂದರೂ ತಪ್ಪಾಗಲಿಕ್ಕಿಲ್ಲ. ಇಂದಿನ ಹೊಸಗನ್ನಡ ಸಾಹಿತ್ಯ ನಿರ್ಮಾಣಕ್ಕೆ ಅಡಿಗಲ್ಲನ್ನು ಹಾಕಿದವರು ಅವರೇ!

ಈ ದೃಷ್ಟಿಯಿಂದ ನೋಡಿದರೆ ಆಧುನಿಕ ಕನ್ನಡ ಸಾಹಿತ್ಯವು ಇಪ್ಪತ್ತನೆಯ ಶತಮಾನದಿಂದಲೇ ಆರಂಭವಾಯಿತೆಂದು ಹೇಳಬೇಕು; ಅಂದರೆ ಈ ನವಯುಗವು ಆರಂಭವಾಗಿ ಈಗ ಸುಮಾರು ಅರ್ಧ ಶತಮಾನವಾಗುತ್ತ ಬಂದಿರುವುದು. ಈ ಕಾಲಾವಧಿಯಲ್ಲಿಯೂ ಮೊದಲಿನ ಇಪ್ಪತ್ತು ವರ್ಷಗಳಲ್ಲಿ ಗ್ರಂಥರಚನೆಯ ಚಟುವಟಿಕೆಯು ಅಷ್ಟಾಗಿ ಕಂಡುಬರುವುದಿಲ್ಲ. ಸಾಮಾನ್ಯ ಜನರಿಗೆ ಸಾಹಿತ್ಯದ ಮೇಲೆ ಅನಾದರಣೆಯಿತ್ತು; ವಿದ್ವಾಂಸರು—ಆಗ ತಾನೆ ತಮ್ಮ ದೀರ್ಘನಿದ್ರೆಯಿಂದ ಎಚ್ಚತ್ತಿದ್ದರು. ಭೀಕರವಾದ ಮಹಾಯುದ್ಧವು ಲೋಕವನ್ನೇ ನಡುಗಿಸುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಉತ್ತಮ ಸಾಹಿತ್ಯದ ನಿರ್ಮಾಣವಾಗುವುದಾದರೂ ಎಂತು? ಆದುದರಿಂದಲೇ ಸಾಹಿತ್ಯವಾಹಿನಿಯು ಈ ಅವಧಿಯಲ್ಲಿ ಮಂದ ಮಂದವಾಗಿ ಪ್ರವಹಿಸುತ್ತಿದ್ದಿತು. ಯುದ್ಧದ ಕಾರ್ಮೋಡವು ತೊಲಗಿ ಪ್ರಪಂಚದಲ್ಲಿ ಶಾಂತಿಯ ಕಿರಣಗಳು ತಲೆದೋರಿದೊಡನೆಯೇ ಎಲ್ಲೆಲ್ಲೂ ಒಂದು ನವಚೇತನವು ಕಾಣಿಸಿಕೊಂಡಿತು. ಭಾರತದಲ್ಲಿ ಆಗ ತಾನೆ ಉಂಟಾದ ಸ್ವಾತಂತ್ರ್ಯದಾಹವು ಈ ಚೇತನವನ್ನು ಬಡಿದೆಬ್ಬಿಸಿ ಉಜ್ವಲಗೊಳಿಸಿತು. ಇದರ ಪರಿಣಾಮವಾಗಿ ಕರ್ನಾಟಕದ ಸಾಹಿತಿಗಳು ಕ್ರಾಂತಿಕಾರಕವಾದ ಬದಲಾವಣೆಗಳನ್ನು ಕೈಗೊಂಡರು. ಸಾಹಿತ್ಯದಲ್ಲಿಯೂ ಸ್ವಾತಂತ್ರ್ಯವನ್ನು ಬಯಸಿದರು. ಆಂಗ್ಲ ಸಾಹಿತ್ಯದ ಪ್ರಭಾವಕ್ಕೆ ಸಿಕ್ಕಿದ ನಮ್ಮ ಸಾಹಿತಿಗಳು ಅಂತಹ ಉತ್ತಮ ಸಾಹಿತ್ಯ ಪ್ರಕಾರಗಳನ್ನು ಕನ್ನಡ ಜನರಿಗೂ ಒದಗಿಸಿ ಕೊಡುವುದರಲ್ಲಿ ಬದ್ಧಕಂಕಣರಾದರು. ಸ್ವಾತಂತ್ರ್ಯದ ಕೂಗು ನಮ್ಮ ಸಾಹಿತಿಗಳಿಗೆ ಹೊಸ ಸ್ಫೂರ್ತಿಯನ್ನು ಕೊಟ್ಟಿತು. ಯುದ್ಧಕಾಲದಲ್ಲಿ ಪ್ರಗತಿಯನ್ನು ಹೊಂದಿದ ವಿಜ್ಞಾನ, ಜನರು ಪಡೆದ ಅನುಭವ ಮುಂತಾದುವು ಗ್ರಂಥಗಳಿಗೆ ವಿಷಯಗಳನ್ನು ಒದಗಿಸಿ ಕೊಟ್ಟವು. ಇವುಗಳನ್ನು ಕುರಿತು ಸಾಹಿತ್ಯವನ್ನು ನಿರ್ಮಿಸುವುದಕ್ಕೆ ಕನ್ನಡಿಗರು ಮುಂದೆ ಬಂದರು. ರಾಜಕೀಯ ರಂಗದಲ್ಲಿ ತಲೆದೋರಿದ ವಿಪ್ಲ

ವವು ಸಾಹಿತ್ಯದ ಮೇಲೂ ತನ್ನ ಮುದ್ರೆಯನ್ನು ಒತ್ತದೆ ಬಿಡಲಿಲ್ಲ. ಹೀಗೆ ನಾನಾ ಕಡೆಗಳಿಂದ ಸ್ಫೂರ್ತಿಯನ್ನು ಪಡೆದು ಕನ್ನಡ ಸಾಹಿತ್ಯ ವಾಹಿನಿಯು ನಾನಾ ಮುಖ ವಾಗಿ ಹರಿಯಿತು.

ಆಂಗ್ಲ ಸಾಹಿತ್ಯದ ಪ್ರೇರಣೆ ಮತ್ತು ಪ್ರಭಾವ ದಿಂದ ಕನ್ನಡ ಸಾಹಿತ್ಯದಲ್ಲಿ ಹಲವು ಬದಲಾವಣೆಗ ಳುಂಟಾಗಿವೆ. ನಮ್ಮ ಹಿಂದಿನ ಸಾಹಿತಿಗಳಿಗೆ ತಿಳಿಯದೆ ಇರತಕ್ಕ ಅನೇಕ ಸಾಹಿತ್ಯ ಪ್ರಕಾರಗಳೇ ಆಂಗ್ಲ ಸಾಹಿ ತ್ಯದ ಪ್ರಭಾವದಿಂದ ನಮಗೆ ಲಭಿಸುವಂತಾಗಿವೆ. ನಮ್ಮ ಪ್ರಾಚೀನ ಸಾಹಿತ್ಯವು ಪದ್ಯಮಯವಾಗಿತ್ತೆಂಬು ದನ್ನು ಎಲ್ಲರೂ ಬಲ್ಲರು. ಶಾಸ್ತ್ರವಿಚಾರಗಳನ್ನು ಹೇ ಳುವುದಾದರೂ ಪದ್ಯವನ್ನೇ ಉಪಯೋಗಿಸುತ್ತಿದ್ದರು. ಹೀಗಾಗಿ ಜನರಿಗೆ ಪದ್ಯದಲ್ಲಿ ಬೇಸರವುಂಟಾಗಿತ್ತು. ಜನರ ಈ ಮನೋಭಾವನೆಯನ್ನೇ ಇಪ್ಪತ್ತನೆಯ ಶತ ಮಾನದ ಆದಿಯಲ್ಲಿದ್ದ ಪ್ರಸಿದ್ಧ ಕವಿಯಾದ ಮುದ್ದ ಣನು "ಪದ್ಯಂ ವದ್ಯಂ ಗದ್ಯಂ ಹೃದ್ಯಂ" ಎಂಬುದಾಗಿ ತನ್ನ ರಾಮಾಶ್ವಮೇಧದಲ್ಲಿ ಹೇಳಿದ್ದಾನೆ. ಕನ್ನಡ ಸಾಹಿ ತ್ಯದಲ್ಲಿರುವ ಈ ಕೊರತೆಯನ್ನು ಆಂಗ್ಲ ಸಾಹಿತ್ಯದ ಸಹಾಯದಿಂದಲೇ ನಾವು ಕಲಿತುಕೊಂಡೆವೆನ್ನಬಹುದು. ಅದರ ನಿವಾರಣೋಪಾಯವನ್ನೂ ಆ ಸಾಹಿತ್ಯದಿಂ ದಲೇ ನಾವು ತಿಳಿದಿರುತ್ತೇವೆ. ಆ ಮಾರ್ಗದಲ್ಲಿ ಅವಿ ಶ್ರಾಂತವಾಗಿ ಸಾಗುತ್ತಿದ್ದರೂ ಇನ್ನೂ ಈ ಕೊರತೆ ಯನ್ನು ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೆ ಕನ್ನಡಿಗರಿಂದ ಸಾಧ್ಯವಾಗಿಲ್ಲ. ಆಧುನಿಕ ವಿಜ್ಞಾನ, ಶಾಸ್ತ್ರ, ವಿಮರ್ಶೆ ಮುಂತಾದುವನ್ನು ಜನತೆಗೆ ತಿಳಿಯ ಪಡಿಸಿ, ಜನಜೀವನವನ್ನು ಉತ್ತಮಗೊಳಿಸುವುದಕ್ಕೆ ಗದ್ಯ ಸಾಹಿತ್ಯವೇ ವಿಶೇಷ ಅನುಕೂಲವಾಗಿದೆ. ಆದರೆ ಕನ್ನಡ ಸಾಹಿತ್ಯದಲ್ಲಿ ಇನ್ನೂ ಹೆಚ್ಚಿನ ಗ್ರಂಥಗಳ ನಿ ರ್ಮಾಣವಾಗಿಲ್ಲ. ಪತ್ರಿಕೆಗಳಲ್ಲಿಯೂ, ಮಾಸಿಕಗಳ ಲ್ಲಿಯೂ ವೈಜ್ಞಾನಿಕ ಮತ್ತು ಶಾಸ್ತ್ರೀಯ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳು ಆಗಾಗ ಪ್ರಕಟವಾಗುವು ದಾದರೂ ಅವುಗಳನ್ನೆಲ್ಲ ಶೇಖರಿಸಿ ಗ್ರಂಥರೂಪದಲ್ಲಿ ತರುವ ಪ್ರಯತ್ನಗಳಿನ್ನೂ ಸಾಕಷ್ಟು ನಡೆದಿರುವುದಿಲ್ಲ. ಈ ಯುಗದಲ್ಲಿ ಜ್ಞಾನದಾಯಕ ಸಾಹಿತ್ಯದಿಂದಲೇ ಜನ ರಿಗೆ ಹೆಚ್ಚಿನ ಪ್ರಯೋಜನವಿದೆ. ಇಂದಿನ ವಿಜ್ಞಾನದ ವೈಚಿತ್ರ್ಯಗಳನ್ನು ಸಾಮಾನ್ಯರಿಗೂ ತಿಳಿಸುವ ಹಾಗೆ ನಮ್ಮ ಸಾಹಿತಿಗಳು ಪ್ರಯತ್ನಿಸುತ್ತಿದ್ದಾರೆ. ಈ ಕಾರ್ಯ ದಲ್ಲಿ ಅವರು ಸ್ವಲ್ಪ ಮಟ್ಟಿಗೆ ಮುಂದುವರಿದಿರುವುದಾ ದರೂ, ಇದುವರೆಗೆ ಸಾಕಷ್ಟು ಗ್ರಂಥಗಳ ರಚನೆಯಾ ಗಿಲ್ಲ. ನಮ್ಮ ಶಾಲೆ ಕಾಲೇಜುಗಳಲ್ಲಿ ಬೋಧಕ ಭಾಷೆ ಕನ್ನಡವೇ ಆಗಬೇಕೆಂದು ಸಾಧಿಸುವ ಧುರೀಣರು ಈ ಕಡೆಗೆ ತಮ್ಮ ದೃಷ್ಟಿಯನ್ನು ಹರಿಯಗೊಡಬೇಕು. ಇದ ರಿಂದ ನಮ್ಮ ಸಾಹಿತ್ಯಕ್ಕೆ ಪ್ರಯೋಜನವುಂಟು;

ಕಾದಂಬರಿ, ಗದ್ಯನಾಟಕ, ಪ್ರಬಂಧ, ಹರಟೆ, ದಿನಚರಿ, ಪ್ರವಾಸ ಸಾಹಿತ್ಯ, ಏಕಾಂಕ ನಾಟಕ, ಸಣ್ಣ ಕತೆ ಮುಂತಾದ ಸಾಹಿತ್ಯ ಪ್ರಕಾರಗಳು ಆಂಗ್ಲ ಸಾಹಿ ತ್ಯದ ಅನುಕರಣದಿಂದಲೇ ಕನ್ನಡ ಸಾಹಿತ್ಯದಲ್ಲಿ ಉದ್ಭ ವಿಸಿವೆ. ಇವುಗಳ ಶೈಲಿಯೂ ಸರಳವಾಗಿದ್ದು ಬಳ ಕೆಯ ಮಾತುಗಳನ್ನೊಳಗೊಂಡಿವೆ. ಸಮಾಜ ಜೀವ ನದ ಚಿತ್ರವನ್ನು ಕಣ್ಣಿಗೆ ಕಟ್ಟಿದಂತೆ ಇವು ತೋರಿಸು ತ್ತವೆ; ಮತ್ತು ಜೀವನದ ಸಮಸ್ಯೆಗಳನ್ನು ಪರಿಹರಿ ಸುವ ಉಪಾಯಗಳನ್ನೂ ಬೋಧಿಸುತ್ತವೆ. ಆಂಗ್ಲ ಭಾಷೆಯ ಕೆಲವು ಉತ್ತಮ ಕಾದಂಬರಿಗಳು ಕನ್ನಡಕ್ಕೆ ಪರಿವರ್ತನೆ ಹೊಂದಿವೆ. ಕಾದಂಬರಿಗಳು ಬೆಳೆದು ಮಹಾಕಾದಂಬರಿಗಳಾಗಿವೆ; ಕೃಶವಾಗಿ ನೀಳ್ಗತೆಗಳಾ ಗಿವೆ. ಸಣ್ಣ ಕತೆ ಸಾಕೆನಿಸುವಷ್ಟು ಹುಟ್ಟಿದೆ.

ಆಂಗ್ಲ ಸಾಹಿತ್ಯದಲ್ಲಿ ಕವಿಗಳ, ಮೇಧಾವಿಗಳ, ವಿಜ್ಞಾನಿಗಳ ಮತ್ತು ದೇಶನಾಯಕರ ವಿಸ್ತರವಾದ ಮತ್ತು ರಸಭರಿತವಾದ ಜೀವನಚರಿತ್ರೆಗಳಿರುವುದನ್ನು ಕಂಡು ನಮ್ಮ ಸಾಹಿತಿಗಳೂ ಈ ತರದ ಗ್ರಂಥನಿರ್ಮಾ ಣಕ್ಕೆ ತೊಡಗಿದ್ದಾರೆ, ಆದರೂ ಇನ್ನೂ ಹೆಚ್ಚಿನ ಗ್ರಂಥ ಗಳು ಕನ್ನಡಿಗರಿಗೆ ಲಭಿಸಿಲ್ಲ. ಈ ಕೊರತೆಯನ್ನು ನಮ್ಮ ಸಾಹಿತಿಗಳು ಬೇಗನೆ ಪರಿಹರಿಸುವರೆಂದು ನಿರೀ ಕ್ಷಿಸಬಹುದು. ಇದರಂತೆಯೇ ಪ್ರಬಂಧ, ಹರಟೆ, ಪ್ರವಾಸ ಸಾಹಿತ್ಯ, ಮುಂತಾದುವುಗಳ ಬೆಳೆಯೂ ಹೆಚ್ಚಾಗಿ ಆಗಬೇಕು.

ನಮ್ಮ ಏಕಾಂಕ ಮತ್ತು ಗದ್ಯನಾಟಕಗಳಲ್ಲಿ ಸಮಾ ಜದ ಕುಂದುಕೊರತೆಗಳ ಟೀಕೆ ಟಿಪ್ಪಣಿಗಳಿವೆ. ಆಂಗ್ಲ ಸಾಹಿತ್ಯದಿಂದಲೇ ಪಡೆದ ಈ ಹೊಸ ಸಾಹಿತ್ಯ ರೂಪ ಗಳು ಜನಸಾಮಾನ್ಯರ ಜೀವನಕ್ರಮವನ್ನು ತಿದ್ದುವುದ ರಲ್ಲಿ ವಿಶೇಷ ಪರಿಣಾಮಕಾರಿಗಳಾಗಿವೆ. ಜನರಿಗೆ ಜ್ಞಾನಾನಂದಗಳನ್ನೊದಗಿಸುವುದೇ ಇವುಗಳ ಉದ್ದೇಶ

ವಾಗಿದೆ. ಜೀವನದ ವಿಮರ್ಶೆಗಾಗಿ ಈ ತರದ ನಾಟಕಗಳು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ರಚಿತವಾಗುತ್ತಿವೆ.

ಆಂಗ್ಲ ಸಾಹಿತ್ಯದ ಪ್ರಭಾವದಿಂದಾಗಿ ನಮ್ಮ ಯುವಕರಲ್ಲಿ ರಾಷ್ಟ್ರಜೀವನದ ಉತ್ಸಾಹವು ತಲೆದೋರಿದೆ. ದೇಶಪ್ರೇಮ, ರಾಷ್ಟ್ರೀಯ ಶಿಕ್ಷಣ, ಸ್ವಾತಂತ್ರ್ಯದ ಮಹತ್ವ ಮುಂತಾದ ವಿಷಯಗಳ ಕುರಿತು ಆಂಗ್ಲ ಸಾಹಿತ್ಯದಲ್ಲಿ ಉತ್ತಮವಾದ ಗ್ರಂಥಗಳಿವೆ. ಅವುಗಳ ಸಾರವನ್ನು ಹೀರಿದ ನಮ್ಮ ಸಾಹಿತಿಗಳು ಅಂತಹ ಗ್ರಂಥಗಳನ್ನು ನಮ್ಮ ಜನರಿಗೂ ಒದಗಿಸಿಕೊಡಬೇಕೆಂದೂ ಪ್ರಯತ್ನಿಸುತ್ತಿದ್ದಾರೆ. ಹೊಸ ಕವಿತೆಗಳು ರಸಿಕರಾದ ನಮ್ಮ ಯುವಕರನ್ನು ಉತ್ಸಾಹಭರಿತರನ್ನಾಗಿ ಮಾಡಿವೆ. ಅವುಗಳನ್ನು ಓದಿದ ನಮ್ಮ ಜನರ ರಕ್ತವು ಕುದಿಯತೊಡಗಿ, ಹೊಸ ವಿಚಾರಗಳು ಸಮಾಜದಲ್ಲಿ ತಲೆದೋರಿವೆ. ಇಂದಿನ ಕವಿತೆಗೆ ಪ್ರಾಸ, ಛಂದಸ್ಸು, ವ್ಯಾಕರಣ, ಮುಂತಾದುವುಗಳ ಕಟ್ಟುನಿಟ್ಟುಗಳಿಲ್ಲ. ಸರಳವಾದ ಭಾಷೆಯಲ್ಲಿ ಗಹನವಾದ ವಿಚಾರಗಳನ್ನು ಅವು ತಿಳಿಸುತ್ತವೆ. ಆದುದರಿಂದಲೇ ಇಂದಿನ ಕವಿಗಳೂ ಸಾಹಿತಿಗಳೂ ಬರೆದ ಕತೆ, ಕವಿತೆ, ಕಾದಂಬರಿ, ಭಾವಗೀತೆ, ಶಾಸ್ತ್ರಗ್ರಂಥ, ಸರಳ ಪ್ರಬಂಧ, ವಿಮರ್ಶೆ ಮುಂತಾದುವು ಹೆಚ್ಚು ಜನಪ್ರಿಯವಾಗಿವೆ.

ನಮಗೆ ಈಗ ಸ್ವಾತಂತ್ರ್ಯವು ಲಭಿಸಿರುತ್ತದೆ. ಸುಮಾರು ಮೂರು ಶತಮಾನಗಳ ವರೆಗೆ ನಮ್ಮನ್ನು ಆಳುತ್ತಿದ್ದ ಆಂಗ್ಲೇಯರು ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟು ತಮ್ಮ ದೇಶಕ್ಕೆ ಮರಳಿದ್ದಾರೆ. ಅವರು ನಮ್ಮನ್ನು ಬಿಟ್ಟು ಹೋಗಿರುವರೇನೋ ನಿಜ; ಅವರ ಭಾಷೆ ಮಾತ್ರ ನಮ್ಮನ್ನು ಬಿಟ್ಟುಹೋಗಿಲ್ಲ. ಇನ್ನೂ ಕೆಲವು ವರ್ಷಗಳ ವರೆಗೆ ನಾವು ಅವರ ಭಾಷೆಯನ್ನು ಬಿಟ್ಟು ಕೊಡುವ ಲಕ್ಷಣಗಳಾದರೂ ತೋರುವುದಿಲ್ಲ. ಆಂಗ್ಲ ಭಾಷೆ ಮತ್ತು ಸಾಹಿತ್ಯ ನಮಗೆ ಬೇಡವೆನ್ನುವವರು ಆತ್ಮವಂಚಕರು: ಆ ಭಾಷೆಯಿಲ್ಲದೆ ಪ್ರಪಂಚದಲ್ಲಿ ನಾವು ಗಣ್ಯರೆನಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ಆ ಭಾಷೆಯನ್ನು ಕಲಿಯುವುದು ಅಗತ್ಯವಾಗಿದೆ. ಆಂಗ್ಲ ಸಾಹಿತ್ಯದಲ್ಲಿರತಕ್ಕ ಉತ್ತಮವಾದ ಎಲ್ಲಾ ಪುಸ್ತಕಗಳನ್ನೂ ಕನ್ನಡಕ್ಕೆ ಪರಿವರ್ತಿಸಿ ನಮ್ಮ ಜನರಿಗೆ ವಿಜ್ಞಾನ, ಕಲೆ, ಶಾಸ್ತ್ರೀಯ ವಿಚಾರ ಮುಂತಾದುವುಗಳಲ್ಲಿ ಅಭಿರುಚಿಯುಂಟಾಗುವಂತೆ ಮಾಡಬೇಕು. ನಮ್ಮ ಯುವಕರು ಕನ್ನಡ ಭಾಷೆಯ ಮೂಲಕವಾಗಿಯೇ ಉಚ ಶಿಕ್ಷಣವನ್ನು ಪಡೆಯುವುದಕ್ಕೆ ಅನುಕೂಲತೆಯನ್ನು ಒದಗಿಸಿಕೊಡಬೇಕು. 'ಬರೀಗುಲ್ಲು ನಿದ್ದೆಗೇಡು' ಎಂಬ ಗಾದೆಯಂತೆ ಸಾಕಷ್ಟು ಪುಸ್ತಕಗಳಿಲ್ಲದೆ ವಿದ್ಯಾಭ್ಯಾಸವು ಕನ್ನಡದ ಮೂಲಕವಾಗಿಯೇ ನಡೆಯಬೇಕೆಂದು ತೀರ್ಮಾನಿಸುವುದು ಮೂಢತನ. ಆಂಗ್ಲ ಭಾಷೆಯು ನಮ್ಮ ಹಿಂದೂದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ಮಾತ್ರವೇ ಅಲ್ಲದೆ ಇಡೀ ಪ್ರಪಂಚದ ಅನೇಕ ದೇಶಗಳಲ್ಲಿ ಕೂಡ ಬಳಕೆಯಲ್ಲಿರುವುದರಿಂದ ಅದರ ಪ್ರಭಾವ ಪ್ರಯೋಜನಗಳು ಅತಿ ವಿಶೇಷವಾಗಿವೆ. ನಮ್ಮ ದೇಶವು ಅಭಿವೃದ್ಧಿ ಹೊಂದಬೇಕಾದರೆ, ನಾವು ಅಂತರರಾಷ್ಟ್ರೀಯ ಪರಿಷತ್ತುಗಳಲ್ಲಿ ಶ್ರೇಷ್ಠ ಸ್ಥಾನಗಳನ್ನು ಪಡೆಯಬೇಕಾದರೆ, ಆಂಗ್ಲ ಸಾಹಿತ್ಯದ ಅಭ್ಯಾಸ ಮಾಡಲೇಬೇಕು. ನಾವು ಪಡೆದ ಅನುಭವಗಳನ್ನು ಆರ್ಜಿಸಿದ ಜ್ಞಾನವನ್ನು ನಮ್ಮ ಜನರಿಗೆ ತಿಳಿಸಬೇಕಾದರೆ ಅವರ ಪ್ರಯೋಜನಕ್ಕಾಗಿ ಪುಸ್ತಕಗಳನ್ನು ಬರೆಯಬೇಕಾಗುವುದು. ಆಂಗ್ಲ ಭಾಷೆಯು ಭಾರತೀಯರನ್ನು ಮಾತ್ರವೇ ಅಲ್ಲದೆ ಇಡೀ ಪ್ರಪಂಚದ ಜನರೆಲ್ಲರನ್ನೂ ಒಟ್ಟುಗೂಡಿಸುವ ಪ್ರಬಲ ಸಾಧನಗಳಲ್ಲಿ ಒಂದಾಗಿದೆ. ಆದುದರಿಂದ ಆಂಗ್ಲ ಸಾಹಿತ್ಯಾಭ್ಯಾಸದಿಂದ ನಮ್ಮ ಜನಜೀವನವನ್ನು ಉತ್ತಮಗೊಳಿಸುವ ಕನ್ನಡ ಸಾಹಿತ್ಯವನ್ನು ರಚಿಸುವುದು ಪ್ರತಿಯೊಬ್ಬ ವಿದ್ಯಾವಂತನ ಕರ್ತವ್ಯವಾಗಿದೆ.

ನಡೆಯು ನುಡಿ

ಶ್ರೀ ಬಿ. ಶಂಕರ ಭಟ್, ಮಂಗಳೂರು.

ನಾಗರಿಕ ದೃಷ್ಟಿಯಲ್ಲಿ ಸೃಷ್ಟಿ ಎಲ್ಲಾ ಕಾಡಾಗಿದ್ದಾಗ–ಕಾಡು ಪ್ರಾಣಿಗಳದೇ ನಾಡಾಗಿದ್ದಾಗ–ಮನುಷ್ಯ ಜೀವಿ ಹುಟ್ಟಿಕೊಂಡು ಕಾಡುಮೇಡುಗಳಲ್ಲಿ ಗುಹೆ ಗಹ್ವರಗಳಲ್ಲಿ ವಾಸಿಸತೊಡಗಿದ. ಹಾಗೆ ಬಾಳುವೆ ತೊಡಗಿದ ಮನುಷ್ಯ ಜೀವಿ ಒಂದು ಬಗೆಯಲ್ಲಿ ಎರಡು ಕಾಲಿನ ಪ್ರಾಣಿಯೇ ಆಗಿದ್ದನೆನ್ನಬಹುದು. ಈ ಎರಡು ಕಾಲಿನ ಮನುಷ್ಯ ಪ್ರಾಣಿಯಲ್ಲಿದ್ದ ಒಂದೇ ಒಂದು ವಿಶೇಷವೆಂದರೆ ಮೆದುಳು; ಆ ಮೇಲೆ ಭಾಷೆ.

ಪ್ರಾರಂಭದಲ್ಲಿ ಮನುಷ್ಯರು ಬೇಟೆಯಾಡಿಯೇ ಜೀವಿಸುತ್ತಿದ್ದರು; ಬೇಟೆಯ ಸಾಧನವಾಗಿ ಕಲ್ಲು ಗೆಲ್ಲುಗಳನ್ನು ಉಪಯೋಗಿಸುತ್ತಿದ್ದರು. ಇವರು ಆಹಾರ ಸಂಪಾದನೆಗಾಗಿಯೂ, ವೈರಿಗಳೆನ್ನೆದುರಿಸುವುದಕ್ಕಾಗಿಯೂ ಕೈಗಳನ್ನೇ ಉಪಯೋಗಿಸುತ್ತಿದ್ದಾಗ ನರನಾಡಿಗಳಿಗೆ ವ್ಯಾಯಾಮ ದೊರೆತು ಮೆದುಳಿನ ಬೆಳವಣಿಗೆಗೆ ಸಹಾಯವಾಯಿತೆಂದು ವಿದ್ವಾಂಸರ ಅಭಿಪ್ರಾಯ. ಪ್ರಕೃತಿಯೊಂದಿಗೆ ಕಲಬೆರಕೆಯಾಗಿ ಗುಂಪು ಕಟ್ಟಿಕೊಂಡು ಬೆಳೆಯುತ್ತಿದ್ದ ಮನುಷ್ಯರ ಮೆದುಳು ಬೆಳೆದಂತೆ, ಮನಸ್ಸು ವಿಶಾಲಗೊಂಡಂತೆ, ಬಿಸಿಲು ಮಳೆಗಳಿಂದ ತಮಗಾದ ಅನುಭವವನ್ನು—ಸುಂದರವಾದ ವಸ್ತುವನ್ನು ಕಂಡಾಗ, ಕಲಕಲನೆ ಹರಿಯುವ ಹಳ್ಳದ ಕಲದನಿ ಕೇಳಿದಾಗ, ಗಾಳಿ ಸುಯ್ಯನೆ ಬೀಸಿದಾಗ, ಜೇನು ನೊಣಗಳ ಝೇಂಕಾರವನ್ನಾಲಿಸಿದಾಗ ಉಂಟಾದ ಆನಂದವನ್ನು—ಅನುಭವವನ್ನು–ಗುಡುಗು ಮಿಂಚುಗಳನ್ನು ಕೇಳಿದಾಗ ಹುಟ್ಟಿದ ಭಯ ಆಶ್ಚರ್ಯಗಳನ್ನು ಮನಸ್ಸಿನಿಂದ ಹೊರಗೆಡಹಬೇಕಾಗಿ ಬಂದು ಭಾಷೆ ಹುಟ್ಟಿಕೊಂಡಿತು. ಹಾಗೆ ಹುಟ್ಟಿಕೊಂಡ ಭಾಷೆ ಅನುಕರಣದಿಂದ ಬೆಳೆಯಿತು.

ಪ್ರಕೃತಿಯೊಂದಿಗೆ ಬೆರೆತಿದ್ದ ಮನುಷ್ಯನಲ್ಲಿ ಪ್ರಕೃತಿಯಲ್ಲಿ ಉಂಟಾಗುತ್ತಿದ್ದ ಪರಿವರ್ತನೆಗಳ ಪ್ರಭಾವ ಬಿದ್ದೇ ಬೀಳುತ್ತಿತ್ತು. ಇದರಿಂದ ಅವನ ಭಾವನೆಯಲ್ಲಿ ಮಾರ್ಪಾಟವಾಗುತ್ತ ಬಂದಿತು. ಮನುಷ್ಯನ ಸುಖ ದುಃಖಗಳ ಅನುಭವವೇ ಕವಿತೆಯ ಹುಟ್ಟಿಗೂ ಕಾರಣವಾಯಿತು. ಇಲ್ಲಿ ನಾವು ಪರಂಪರೆಯಿಂದ ಬಂದ ರಾಮಾಯಣದ ಹುಟ್ಟಿನ ಕತೆಯನ್ನು ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು. ಗಾನಮಯವಾದ ಪ್ರಕೃತಿಯೊಡನೆ ಬೆಳೆದ ಮನುಷ್ಯನಲ್ಲಿ ಸಂಗೀತ ಸಮಾವೇಶಗೊಂಡುದರಲ್ಲಿ ಸೋಜಿಗವೇನೂ ಇಲ್ಲ. ಚಳಿಗಾಲದಲ್ಲಿ ಬೆಂಕಿಯ ಬಳಿ ಕುಳಿತು ಬೆಂಕಿ ಕಾಯಿಸುತ್ತಿದ್ದ ಮನುಷ್ಯಜೀವಿಯ ಬಾಯಿಂದ "ಅಗ್ನಿ ಆಯಾ ಹೀತಯೇ ...." ಎಂದು ಅಗ್ನಿಯನ್ನು ಹೊಗಳುವ ಮಾತು ರಾಗವಾಗಿ ಹೊರಟಿತು; ಮಂತ್ರವಾಯಿತು. ಕಾಲ ಕಳೆದಂತೆ ಬಿಡಿ ಮಾತುಗಳು ಒಂದೆಡೆ ಸೇರಿ ಗದ್ಯವಾಯಿತು. ರಾಗದಿಂದ ತಾಳಕ್ಕೆ ಸರಿಯಾಗಿ ಹಾಡಲು ಬರುವ ಮಾತುಗಳೇ ಪದ್ಯವಾಯಿತು.

ಆದಿ ಮಾನವರ ಜೀವನ ವೈಯಕ್ತಿಕವಾಗಿಲ್ಲದೆ ಸಾಮೂಹಿಕವಾಗಿಯೇ ಇದ್ದಿತು. ಅಲ್ಲಿಗೆ ವರ್ಗಭೇದಕ್ಕೆ ಎಡೆಯಿರಲಿಲ್ಲವೆಂಬುದು ಋಗ್ವೇದದ ಅತಿಪುರಾತನ ಮಂತ್ರಗಳಿಂದ ವ್ಯಕ್ತವಾಗುತ್ತದೆ. ಋಗ್ವೇದದ ಕಾಲದಲ್ಲಿ ಸಮಾಜ ಜೀವಿಯಾಗಿದ್ದ ಮನುಷ್ಯ ಮುಂದೆ ಕಾಲ ಕಳೆದಂತೆ ವರ್ಗಜೀವಿಯಾಗ ತೊಡಗಿದ ಎಂಬುದಕ್ಕೆ ಋಗ್ವೇದದ ದ್ವೈತ ದೇವತೆಗಳೇ ಸಾಕ್ಷಿ. ಋಗ್ವೇದದ ಕಾಲಕ್ಕೆ ಮೊದಲೇ ನಾಗರಿಕತೆಯ ಶಿಖರವನ್ನೇರಿತೆಂದು ವಿದ್ವಾಂಸರು ಹೇಳುವ ಹರಪ್ಪಾ ಮೊಹೆಂಜೋದಾರೋಗಳ ಗ್ರಂಥ ಸಾಹಿತ್ಯ ನಮಗಿನ್ನೂ ದೊರೆತಿಲ್ಲ. ಆ ಸಾಹಿತ್ಯ ದೊರೆತರೆ ನಮ್ಮ ಎಷ್ಟೋ ಅಭಿಪ್ರಾಯಗಳು ಅಡಿಮೇಲಾಗಬಹುದು.

ಋಗ್ವೇದದ ಆರಂಭದ ದೇವತೆಗಳೂ ಅಂದಿನ ಮಾನವರಂತೆಯೇ ಸಮಾಜ ಜೀವಿಗಳಾಗಿದ್ದರು. ಆರಂಭಕಾಲದ ವಿಶ್ವಕರ್ಮ (ಕಾರ್ಮಿಕ ದೇವತೆ) ಮುಂತಾದ ದೇವತೆಗಳಿಗೆ ಮುಂದೆ ಮಾನವ ಜೀವನದಲ್ಲಿ ವರ್ಗಭೇದ ಉಂಟಾದಾಗ ಸಮಾಜದಲ್ಲಿ ಸ್ಥಾನ ದೊರಕದೆ, ಬುದ್ಧಿಜೀವಿಗಳಾದ ರುದ್ರ ವಿಷ್ಣುಗಳಿಗೆ ಸರ್ವಾಧಿಕಾರ ದೊರಕಿತು. ಇದು ಸಮಾಜಜೀವನದಲ್ಲಿ ವರ್ಗಭೇದವುಂಟಾಗಿ ಕಾರ್ಮಿಕರ ಗುಂಪು ಕೀ

ಳೆಂಬ ಭಾವನೆಯೂ, ಬುದ್ಧಿಜೀವಿಗಳೇ ಮೇಲೆಂಬ ಭಾವನೆಯೂ ತಲೆದೋರಿದ ಕಾಲ. ಆದರೂ ವೇದಗಳ ಆರಂಭಕಾಲದ ಅನಂತರ ಮಧ್ಯ ಕಾಲದಲ್ಲಿ ಬುದ್ಧಿಜೀವಿಗಳ ಮತ್ತು ಶ್ರಮಜೀವಿಗಳ ಮಧ್ಯೆ ಅಷ್ಟೊಂದು ಭೇದ ಬೆಳೆದು ಬಂದುದು ಕಾಣುವುದಿಲ್ಲ. ಆದರೆ ಕಾಲ ಮುಂದುವರಿದಂತೆ ಭೇದ ಭಾವ ಹೆಚ್ಚಿತು. ಬ್ರಾಹ್ಮಣರ ಸರ್ವಾಧಿಕಾರವನ್ನು ಒಂದು ರೀತಿಯಲ್ಲಿ ಕ್ಷತ್ರಿಯರು ವಿರೋಧಿಸಿದರು. ಇದಕ್ಕೆ ಜನಕಾದಿ ಬ್ರಹ್ಮವಾದಿಗಳೇ ಸಾಕ್ಷಿ. ಮುಂದೆ ಭಗವದ್ಗೀತೆಯಂತಹ ಕೃತಿಗೆ ಕರ್ತೃವಾದವನೂ ಕ್ಷತ್ರಿಯ ಕೃಷ್ಣನೇ.

ಮುಂದೆ ಗೌತಮ ಬುದ್ಧನ ಕಾಲಕ್ಕನುವಾಗಿ ಸಾಹಿತ್ಯದಲ್ಲಿ ಕ್ರಾಂತಿ ತಲೆದೋರಿತು. ಬುದ್ಧಗುರು ತನ್ನ ಸಾಹಿತ್ಯವನ್ನೆಲ್ಲ ಜನತೆಯ ಭಾಷೆಯಾದ ಪ್ರಾಕೃತದಲ್ಲಿ ಪಾಲಿ ಭಾಷೆಯಲ್ಲಿ ಬರೆಯಿಸಿದ. ಬೌದ್ಧ ಸಾಹಿತ್ಯ ಆ ಕಾಲದ ಸಂಸ್ಕೃತ ಸಾಹಿತ್ಯಕ್ಕಿಂತ ಪ್ರಗತಿ ಪಥದಲ್ಲಿ ಹರಿದಿತ್ತೆಂದು ಧಾರಾಳವಾಗಿ ಹೇಳಬಹುದು. ಬಲ್ಲವರ ಸೊತ್ತಾಗಿದ್ದು ಶ್ರಮಜೀವಿಗಳನ್ನೂ ಅಜ್ಞಾನಿಗಳನ್ನೂ ತಗ್ಗಿಸಿಡಲು ಸಹಾಯಕವಾಗಿದ್ದ ಸಂಸ್ಕೃತ ಸಾಹಿತ್ಯಕ್ಕೆ ಬೌದ್ಧ ಸಾಹಿತ್ಯದಿಂದ ತುಂಬಾ ಆಘಾತವಾಗಿರಬೇಕು. ಬೌದ್ಧ ಯುಗಕ್ಕಿಂತ ಎಷ್ಟೋ ಶತಮಾನಗಳ ಹಿಂದಿನದಾದ ಮೊಹೆಂಜೋದಾರೋದ ಸಂಸ್ಕೃತಿ ದ್ರಾವಿಡರದೆಂದಾದರೆ ಆ ಕಾಲದ ದ್ರಾವಿಡ ಭಾಷೆಯಲ್ಲಿ ಸಾಹಿತ್ಯ ನಿರ್ಮಾಣವಾಗಿರಲೇಬೇಕು. ಕ್ರಿಸ್ತಪೂರ್ವ ಶತಮಾನಗಳ ಯಾವ ದ್ರಾವಿಡ ಭಾಷಾ ಗ್ರಂಥಗಳೂ ನಮಗೆ ದೊರೆತಿಲ್ಲವಾದರೂ ಕ್ರಿಸ್ತಶಕದ ಆರಂಭದಿಂದ ತಮಿಳು ಸಾಹಿತ್ಯ ಉನ್ನತಿಗೇರುತ್ತ ಬಂದಿದೆ ಎಂಬುದನ್ನು ತೋರಿಸಿಕೊಡುವಂತಹ ಕೃತಿ ದೊರಕಿರುತ್ತದೆ. ಕ್ರಿ. ಶ. ಎರಡನೆಯ ಶತಕಕ್ಕೆ ಸೇರಿದ "ಶಿಲಪ್ಪದಿಕಾರ"ವೇ ಇದಕ್ಕೆ ಸಾಕ್ಷಿ. ಈ ಗ್ರಂಥಗಳಲ್ಲಿ ಬೌದ್ಧ ಜೈನ ಬ್ರಾಹ್ಮಣ ಮೊದಲಾದ ಧರ್ಮಗಳ ನಿರೂಪಣೆ ತೋರುವುದರಿಂದ ಆ ಕಾಲಕ್ಕೆ ಮೊದಲೇ ಉತ್ತರದ ಬೌದ್ಧ ಜೈನ ಧರ್ಮಗಳು ತೆಂಕಣ ತಮಿಳಿಗೂ ಇಳಿದು ಬಂದಿವೆ ಎಂದಾಯಿತಷ್ಟೆ? ತೆಂಕಣ ತಮಿಳಿಗೆ ಈ ಧರ್ಮಗಳು ಇಳಿತರಬೇಕಾದರೆ ಅವು ಕನ್ನಡ ತೆಲುಗುಗಳನ್ನು ದಾಟಿಯೇ ಬರಬೇಕಷ್ಟೆ? 'ಶಿಲಪ್ಪದಿಕಾರ'ದ ವಿಷಯದಲ್ಲಿನ ವಿವರಣೆ ಭಾಷಾಸಂಪತ್ತುಗಳನ್ನು ನೋಡಿದರೆ ಆ ಕೃತಿ ಅಂದಿನ ಜನತೆಯ ಪರಮಪ್ರಿಯ ಕಾವ್ಯವಾಗಿದ್ದಿರಬೇಕೆಂದು ಊಹಿಸಬಹುದಾಗಿದೆ. ಸಾಹಿತ್ಯದಲ್ಲಿ ಪ್ರಗತಿ ಎಂಬುದಕ್ಕೆ ಇದಕ್ಕಿಂತ ಉತ್ತಮವಾದ ಉದಾಹರಣೆ ಇನ್ನೆಲ್ಲಿ ಸಿಗಬೇಕು?

ಇನ್ನು ನಮ್ಮ ಕನ್ನಡದ ಕಾವ್ಯಧಾರೆ—ಸಾಹಿತ್ಯ ವಾಹಿನಿ,—ಹೇಗೆ ಹರಿದುಬಂದಿತೆಂದು ನೋಡುವ. ರಾಮಾಯಣ ಮಹಾಭಾರತಗಳಲ್ಲಿ 'ಶಿಲಪ್ಪದಿಕಾರ'ದಲ್ಲಿ ಕನ್ನಡದ ಮಾತು ಬಂದಿದೆ. ಅಶೋಕನ ಶಾಸನಗಳು ಕರ್ಣಾಟಕದಲ್ಲಿ ದೊರೆತುದರಿಂದ ಮತ್ತು ಇನ್ನೂ ಹಲವು ಆಧಾರಗಳಿಂದ ಕರ್ಣಾಟಕದಲ್ಲಿ ಬೌದ್ಧರಿದ್ದುದು ಖಂಡಿತವಾದರೂ, ಕನ್ನಡದ ಬೌದ್ಧ ಸಾಹಿತ್ಯ ನಮಗಿನ್ನೂ ದೊರೆತಿಲ್ಲ; ದೊರಕುವ ಹಾಗೂ ಇಲ್ಲ. ನಮಗೆ ಕನ್ನಡ ಭಾಷೆಯ ಪ್ರತ್ಯಕ್ಷ ಪರಿಚಯವಾಗುವುದು ಎರಡನೆಯ ಅಥವಾ ಮೂರನೆಯ ಶತಮಾನದ್ದಾಗಿರಬಹುದಾದ ಅದೊಂದು ಗ್ರೀಕ್ ಪ್ರಹಸನದಲ್ಲಿ; ಅದರಲ್ಲಿ ಕನ್ನಡದ ಮಾತು ಸೇರಬೇಕಾದರೆ ಆ ಕಾಲಕ್ಕೆ ಕನ್ನಡ ತಕ್ಕಷ್ಟು ಪ್ರೌಢಾವಸ್ಥೆಗೆ ತಲಪಿರಬೇಕೆಂಬುದು ನಿರ್ವಿವಾದ. ಅಲ್ಲದೆ ಆ ಪ್ರಹಸನವು ಸಾಮಾಜಿಕರಾಗಿರುವುದೂ ಒಂದು ವಿಶೇಷ. ಮುಂದೆ ಮೂರನೆಯದಾಗಿ ಕನ್ನಡ ಬರೆಹ. ಈ ಶಾಸನದ ಭಾಷೆ ಈ ಕಾಲದ ಜನರಾಡುವ ನುಡಿಯಾದರೂ, ರಾಜರು ಬರೆಸಿದ ಶಾಸನವಾದುದರಿಂದ ಸಂಸ್ಕೃತಪದಗಳೂ ಸೇರಿಕೊಂಡಿವೆ. ಇದರಿಂದ ಆ ಕಾಲಕ್ಕೆ ಮೊದಲೆ ಕನ್ನಡದ ಮನೆಯಲ್ಲಿ ಸಂಸ್ಕೃತ ನೆಲೆಮಾಡಿದ್ದಿತೆಂಬುದು ಸ್ಪಷ್ಟ. ಈ ಶಾಸನವು ಗದ್ಯದಲ್ಲಿರುವುದು ಇನ್ನೊಂದು ವಿಶೇಷ.

ಆರನೆಯ ಶತಕದ್ದಾಗಿರಬಹುದಾದ 'ವಡ್ಡಾರಾಧನೆ' ಎಂಬ ಅನುವಾದಿತ ಗದ್ಯ ಕತೆಗಳ ಸಂಗ್ರಹ ನಮಗೆ ದೊರಕಿದ ಅತ್ಯಂತ ಪ್ರಾಚೀನ ಗದ್ಯ ಕೃತಿಯಾಗಿದೆ. ಇದು ಜೈನ ಧರ್ಮದ ಕಥಾ ಸಂಗ್ರಹ. 'ವಡ್ಡಾರಧನೆ'ಯ ಭಾಷೆ, ಕಥಾನಿರೂಪಣೆ, ಜನಜೀವನದ ಚಿತ್ರ ಮೊದಲಾದುವನ್ನು ಪರಿಶೀಲಿಸಿದರೆ ಅಂದಿನ ಸಾಹಿತ್ಯ ಅದೊಂದು ದೇಶಿಯ ಪದ್ಧತಿ ಜನತೆಯಿಂದ ದೂರವಾದ ಮಾರ್ಗಕ್ಕೆ-ಪಂಡಿತ ಶಾಸ್ತ್ರಿಗಳ ಏಕತಂತ್ರಾಧಿಕಾರಕ್ಕೆ-ಒಳಗಾಗಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಏಳನೆಯ ಶತಮಾನದ್ದೆಂದು ನಿರ್ಣೀತವಾದ ಕಪ್ಪೆ ಅರಭಟ್ಟನ ಕುರಿತಾದ ಶಾಸನವು ತ್ರಿಪದಿಯ ರೂಪದಲ್ಲಿದೆ. ತ್ರಿಪದಿ

ಛಂದಸ್ಸು ಶುದ್ಧ ದೇಶಿಯ ಪದ್ಧತಿ-ಜನಪದ್ಧತಿ. ಇದರಿಂದೆಲ್ಲ ಏಳನೆಯ ಶತಮಾನದ ವರೆಗೂ ನಮ್ಮ ಸಾಹಿತ್ಯ ಜನತೆಯನ್ನು ಬಿಟ್ಟು ಪ್ರತ್ಯೇಕವಾದ ದಾರಿ ಹಿಡಿಯಲಿಲ್ಲವೆಂದು ಹೇಳಲು ಯಾವ ಆತಂಕವೂ ತೋರುವುದಿಲ್ಲ.

ಮುಂದೆ ನೃಪತುಂಗನ ಹೆಸರಿನಲ್ಲಿ ಕವಿರಾಜ ಮಾರ್ಗ ರಚಿತವಾಗಿ ಕವಿಗಳಿಗೆ ರಾಜಮಾರ್ಗದ ನಿಯಮ ಹಾಕಿತು. ಕವಿರಾಜ ಮಾರ್ಗದ ಕಾಲದ ತನಕವೂ ಜನತೆಯದೇ ಆದ ದೇಶಿಯ ಸಾಹಿತ್ಯ ಪ್ರಗತಿ ಪಥದಲ್ಲಿ ಸಾಗಿಬಂದಿತೆಂಬುದಕ್ಕೆ ಕವಿರಾಜ ಮಾರ್ಗದಲ್ಲಿ ಹಲವು ದೃಷ್ಟಾಂತಗಳು ಸಿಗುತ್ತದೆ. ನೃಪತುಂಗನು ತನ್ನ ಜೀವನದ ಆರಂಭದಲ್ಲಿ ಹಲವು ಹೋರಾಟಗಳಲ್ಲಿ ಹೋರಾಡಿ ರಾಜ್ಯದಲ್ಲಿ ನೆಮ್ಮದಿ ನೆಲೆಸಿದ ಮೇಲೆ ನಾಡಿನ ಸಾಹಿತ್ಯದ ಕಡೆಗೆ ಗಮನವಿತ್ತನು. ಕನ್ನಡದ ಜನತೆಯನ್ನು—ಕುರಿತೊದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳನ್ನು–ತನ್ನ ಆಸ್ಥಾನಕ್ಕೆ ಬರಿಸಿದನು. ಜನತೆಯ ಜೀವನದಲ್ಲಿ ಬೆರೆತುಕೊಂಡು ಕಾಲ ತಿರುಗಿದಂತೆಯೇ ಬದಲಾಯಿಸುತ್ತ ಬರುತ್ತಿದ್ದ ದೇಶಿಯ ಸಾಹಿತ್ಯಕ್ಕೆ ಅದೊಂದು ರಾಜಮಾರ್ಗವನ್ನು ತೋರಿಸಬಯಸಿದನು. ಈ ಕಾರ್ಯಕ್ಕೆ ಸಂಸ್ಕೃತದ ಸಂಸ್ಕೃತಿಯಿಂದ ಸಂಸ್ಕೃತರಾದ ಶಾಸ್ತ್ರಿಗಳೂ ನೆರವಾದರು. ಈ ಕಾಲಕ್ಕಿಂತ ಎಷ್ಟೋ ಶತಕಗಳ ಮೊದಲೇ ಕನ್ನಡದ ಜನಜೀವನದಲ್ಲಿ ವರ್ಗಭೇದ ಉಂಟಾಗಿ ಬಡವಬಲ್ಲಿದ, ಪಂಡಿತಪಾಮರ, ಆಳುಅರಸು ಎಂದು ಮುಂತಾದ ಭೇದ ತಲೆದೋರಿದ್ದರೂ ಸಾಹಿತ್ಯದಲ್ಲಿ ಯಾವ ವರ್ಗಭೇದಕ್ಕೂ ಏಕತಂತ್ರಾಧಿಕಾರಕ್ಕೂ ಎಡೆ ಇರಲಿಲ್ಲವೆಂಬುದಾಗಿ ತೋರುತ್ತದೆ.

ಕವಿರಾಜ ಮಾರ್ಗದಲ್ಲಿ ಕನ್ನಡ ಜನತೆಯ ಕುರಿತಾಗಿ 'ಪದನರಿದಂ ನುಡಿಯಲುಂ ನುಡಿದುದ ಸರಿದಾರಯಲುಂ ಅರ್ಪರಾನಾಡವರ್ಗಳ ನಿಜದಿಂ, ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತಮತಿಗಳ್' ಎಂಬುದೊಂದು ಪದ್ಯವಿದೆಯಷ್ಟೆ? ಇದರಿಂದ ಆ ಕಾಲದ ಕನ್ನಡದ ಜನ ಕಾವ್ಯ ಪ್ರಯೋಗ ಪರಿಣತಮತಿಗಳಾಗಿದ್ದರೆಂದು ಸ್ಪಷ್ಟವಾಗುತ್ತಿದೆ. ಅಷ್ಟೇ ಅಲ್ಲ. 'ನಾಡವರ್ಗಳ್ ಪದನರಿದು ನುಡಿಯಲುಂ, ನುಡಿದುದನರಿದಾರಯಲುಂ ಅರ್ಪರ್' ಎಂಬುದರಿಂದ ನಾಡವರು ಸಾಹಿತ್ಯರಚನೆ ವಿಮರ್ಶೆಗಳೆರಡರಲ್ಲಿಯೂ ಸಿದ್ಧಹಸ್ತರೆಂದಾಯಿತು. ಅದಲ್ಲದೆ "ಕನ್ನಡಕ್ಕೆ ನಾಡವರ್ ಓವಜರ್" "ಕನ್ನಡಂಗಳೊಳ್ ದೇಶಿ ಬೇರೆ ಬೇರಪ್ಪುದರಿಂ ವಾಸುಗಿಯುಂ ಅರಿಯಲಾರದೆ ಬೇಸರುಗುಂ" ಎಂಬುದರ ತಾತ್ಪರ್ಯವಾದರೂ ಏನು? ಅಂದಿನಿಂದ ಕನ್ನಡ ಸ್ವತಂತ್ರವಾಗಿತ್ತು. ಕನ್ನಡಿಗರು ಯಾವ ಕಟ್ಟುನಿಟ್ಟುಗಳೂ ಇಲ್ಲದೆ ಸಾಹಿತ್ಯ ನಿರ್ಮಾಣವೆಸಗುತಿದ್ದರು. ಕನ್ನಡದ ಸಾಹಿತ್ಯವಾಹಿನಿ ಕೃಷ್ಣಕಾವೇರಿಗಳಂತೆ ಸ್ವತಂತ್ರವಾಗಿ ಹರಿಯುತ್ತಿದ್ದುದೇ ವಿನಾ ಕಾಲುವೆ ಕಡಿದು ಹರಿಯಿಸಿದ ಹೊನಲಿನಂತೆ ಅದೊಂದು ಮಟ್ಟದಲ್ಲಿ ಹರಿಯುತ್ತಿದ್ದಿಲ್ಲ–ಎಂಬುದು ನಿಶ್ಚಿತವಾಗುವುದು. ಅಂದಿನ ನಮ್ಮ ಸಾಹಿತ್ಯ ಶ್ರಮಜೀವಿಗಳ ಜೀವನದಂತೆ ಸುಖದುಃಖಗಳಿಂದ ಕೂಡಿ ಪರಿಸ್ಥಿತಿಗೆ ತಕ್ಕಂತೆ ಬೆಳೆದು ಬಂದಿತಲ್ಲದೆ ಅಲಂಕಾರ ನಿರ್ಬಂಧ, ವ್ಯಾಕರಣದ ನಿಯಮು ಮೊದಲಾದ ಬಂಧನಗಳಿಂದ ಬಂಧಿತವಾಗಿರಲಿಲ್ಲ.

ಇನ್ನೊಂದೆಡೆ ಕವಿಗಳಿಗೆ ರಾಜಮಾರ್ಗ ರಚಿಸಿದ "ಕನ್ನಡಿಗರು ಆಗಮು ಬಲಹೀನರು, ಅವರು ಮಾರ್ಗದಲ್ಲಿ ಬರುವುದಿಲ್ಲ" ಎಂದು ಮುಂತಾಗಿ ಆಕ್ಷೇಪಿಸಿ ಕನ್ನಡಿಗರ ಸ್ವತಂತ್ರ ಮನೋವೃತ್ತಿಗಾಗಿ ಮರುಗಿದ್ದಾನೆ. 'ಕನ್ನಡಂಗಳ್' ಎಂಬ ಪದದಿಂದ ಅಷ್ಟರ ವರೆಗೆ ಇದನ್ನು ಹೀಗೆಯೇ ಬರೆಯಬೇಕೆಂಬ ನಿಯಮುವಿರಲಿಲ್ಲವೆಂದಾಗುವುದಷ್ಟೆ? ಇದರಿಂದ ಅಂದಿನ ಕನ್ನಡ ಸಾಹಿತ್ಯ ಸ್ವತಂತ್ರವಾಗಿ ಜನಜೀವನದೊಂದಿಗೆ ಬೆರೆತು ಬೆಳೆಯಲು ಅನುಕೂಲವಾಯಿತು. ನೃಪತುಂಗನು ತನ್ನ ಕಾಲದ ತನಕದ ಕನ್ನಡ ಸಾಹಿತ್ಯದ ಸಿಂಹಾವಲೋಕನವೆಸಗಿ, ಕನ್ನಡ ಸಾಹಿತ್ಯದ ಸ್ವಾತಂತ್ರ್ಯವನ್ನು ರಾಜಮಾರ್ಗಕ್ಕೆಳೆದು, ಜನತೆಯದಾಗಿದ್ದ ಕನ್ನಡವನ್ನು ಏಕತಂತ್ರಾಧಿಕಾರಕ್ಕೆ ಒಳಪಡಿಸಿದನೆಂದು ಹೇಳಿದರೆ ತಪ್ಪಾದಿತೇ? ನೃಪತುಂಗನ ಕವಿರಾಜ ಮಾರ್ಗ ನಿರ್ಮಾಣವಾದ ಮೇಲೆಯೇ ಕನ್ನಡ ಸಾಹಿತ್ಯದಲ್ಲಿ ಏಕತಂತ್ರಾಧಿಕಾರ ಬಲಗೊಂಡಿತು. ಪ್ರಾಕೃತ ಸಂಸ್ಕೃತಗಳಲ್ಲಿ ಬಲ್ಲಿದರಾದ ಜೈನರು ಉತ್ತರದಿಂದ ದಕ್ಷಿಣಕ್ಕಿಳಿದು ಬಂದು ಸಾಮಾನ್ಯ ಜನತೆಯ ಕಡೆಗೆ ಬೆನ್ನಿಕ್ಕಿ ರಾಜಸ್ಥಾನಗಳನ್ನು ಪ್ರವೇಶಿಸಿ, ರಾಜಮಹಾರಾಜರ ಪ್ರಶಂಸೆಗಾಗಿ ಕಾವ್ಯ ರಚಿಸಿ ಸಾಮ್ರಾಜ್ಯವಾದಕ್ಕೆ ನೆರವಾದರು. ಕವಿರಾಜ ಮಾರ್ಗದ ನಿಯಮದಲ್ಲಿಯೇ ಅಡಿಯಿರಿಸಿ ನಡೆದ ಪಂಪರನ್ನಾದಿಗಳ ಕೃತಿಗಳು ಆ ಕಾಲದ ಜನತೆಯಿಂದ

ಎಷ್ಟೋ ದೂರಕ್ಕೆ ಸರಿದು ನಿಂತುವು. ಆ ಕೃತಿಗಳಿಗೆ ರಾಜಸ್ಥಾನಗಳ ಹಿಂಬಾಲಕರಾದ ಮಠಾಧಿಪತಿಗಳ ಮಠಗಳಲ್ಲಿ ಮಾತ್ರ ಆಶ್ರಯ ದೊರಕಿತು. ಅವು ಬೀದಿ ವರಿದು ಬೀರನ ಕತೆಗಳಾಗಲಿಲ್ಲ.

ಬಲ್ಲಿದರೆನ್ನುವ ಜನಸಾಮಾನ್ಯದ ಕಡೆಗೆ ಬೆನ್ನಿಕ್ಕಿದರೂ ಜನತೆಯೇನೂ ಸುಮ್ಮನೆ ಕುಳಿತಿರಲಿಲ್ಲ. ಜನತೆಯ ಸುಖದುಃಖ ರೀತಿನೀತಿಗಳನ್ನು ಚಿತ್ರಿಸುವುದಕ್ಕೆ 'ಬೆದಂಡೆ' 'ಚಿತ್ತಾಣ'ಗಳಿದ್ದುವು; ಹರಿಕತೆ, ಶಿವಕತೆಗಳಿದ್ದುವು. ಎಲ್ಲಕ್ಕಿಂತ ಮಿಗಿಲಾಗಿ ವೇಷ ಕಟ್ಟಿ ಹಾಡಿ ಕುಣಿಯುವ ಯಕ್ಷಗಾನವಿದ್ದಿತು. ಹೀಗೆ ಮಾರ್ಗ ಸಾಹಿತ್ಯ ಅದೊಂದು ತೆರನಾಗಿ ಸಾಗಿದ್ದರೆ, ಜನತಾಸಾಹಿತ್ಯ ತನ್ನದೇ ದಾರಿಯಲ್ಲಿ ಮುಂದೊತ್ತುತ್ತಿತ್ತು.

ಈ ಕಾಲದಲ್ಲಿ ನಾಟಕಗಳು ಹುಟ್ಟದಿರಲಿಕ್ಕೆ ಸಾಹಿತ್ಯದಲ್ಲುಂಟಾದ ವರ್ಗಭೇದವೇ ಕಾರಣವಾಗಿರಲೂ ಬಹುದು. ನಾಟಕವೆಂದರೆ ಸುಶಿಕ್ಷಿತರಿಗೂ, ಅಶಿಕ್ಷಿತರಿಗೂ ಒಪ್ಪುವ ಸಾಹಿತ್ಯಪ್ರಕಾರ; ರಾಜಮಾರ್ಗದಲ್ಲಿ ನಡೆಯುವ ಕವಿಗಳು ಜನತೆಯ ಕಾಲ್ದಾರಿಯಲ್ಲಿ ನಡೆಯಲಾರದವರಾದ ಕಾರಣ ನಾಟಕಗಳ ರಚನೆಗೆ ಕೈಯಿಕ್ಕದೆ ಕುಳಿತಿರಲೂ ಬಹುದು. ಇದರಿಂದ ಜನತೆಗೇನೂ ಕೆಡುಕೆನಿಸಲಿಲ್ಲ. ಜನತೆಯು ತನ್ನದೇ ಆದ ಜನಸಾಹಿತ್ಯವನ್ನು ಕಟ್ಟಿಕೊಂಡು ಮುಂದುವರಿಯಿತು.

ನೃಪತುಂಗನ ಕಾಲದಿಂದ ಎಂದರೆ ಒಂಬತ್ತನೆಯ ಶತಮಾನದಿಂದ ಬಸವೇಶ್ವರರ ಕಾಲದ ವರೆಗೆ ಪಂಪ ಪೊನ್ನರನ್ನರು ಮಾರ್ಗ ಸಾಹಿತ್ಯವನ್ನು ಸಾಮ್ರಾಜ್ಯವಾದೀ ಬಲ್ಲಿದರ ಸಾಹಿತ್ಯವನ್ನು ಕಟ್ಟಿ ಬೆಳೆಸಿ ರಾಜಸ್ಥಾನಗಳಲ್ಲಿ ಮೆರೆದರು. ಇವರಿಗೆ ರಾಜಸ್ಥಾನದಲ್ಲಿ ಮನ್ನಣೆ ದೊರಕಿರಬಹುದೇ ವಿನಾ ಜನತೆಯಿಂದ ಯಾವ ತರದ ಮೆಚ್ಚುಗೆಯೂ ದೊರಕಿರಲಾರದು.

ಬಸವೇಶ್ವರರ ಕಾಲಕ್ಕಾಗುವಾಗ ನಮ್ಮ ಸಾಹಿತ್ಯ ಅಲಂಕಾರ ವ್ಯಾಕರಣಗಳ ಮುಳ್ಳು ಬೇಲಿಗೆ ಮುರುಟಿ ಹೋಗಿತ್ತು. ಬಸವೇಶ್ವರರು ಕರ್ಣಾಟಕದ ಧರ್ಮ, ಸಮಾಜ, ಸಾಹಿತ್ಯಗಳಲ್ಲಿ ಕ್ರಾಂತಿಯನ್ನುಂಟುಮಾಡಿದರು. ಮಾರ್ಗ ಸಾಹಿತ್ಯದಲ್ಲಿ ಗದ್ಯಕ್ಕೆ ಸ್ಥಾನವೇ ಇದ್ದಿಲ್ಲವೆಂದರೂ ಹೆಚ್ಚಾಗದು. ಕವಿಗಳಾದರೋ ತಮ್ಮ ಪದ್ಯ ಕಾವ್ಯಗಳಲ್ಲಿ ಬಳಸಿಕೊಂಡುದು ಸಂಸ್ಕೃತದ ದೀರ್ಘ ಸಮಾಸದಿಂದ ತುಂಬಿದ ಅಕ್ಷರ ವೃತ್ತಗಳನ್ನು. ಅಲಂಕಾರ ವ್ಯಾಕರಣಗಳ ಕಟ್ಟುನಿಟ್ಟುಗಳನ್ನೆಲ್ಲ ಹರಿದೊಗೆದು ಹಾಡಲಿಕ್ಕೆ ಅನುಕೂಲವಾದಂತಹ ಹೊಸ ಗದ್ಯಸಾಹಿತ್ಯಕ್ಕೆ ಅಡಿಗಲ್ಲು ಹಾಕಿದವರು ಬಸವೇಶ್ವರರು. ಇದರ ಪರಿಣಾಮವಾಗಿ ಕನ್ನಡದ ಮಾರ್ಗ ಸಾಹಿತಿಗಳೂ ಕೆಲವು ವಿಷಯಗಳಲ್ಲಿ ಜನತೆಯ ಕಡೆಗೆ ತಿರುಗಿ ಜನತೆಗೆ ಅರ್ಥವಾಗುವಂತಹ ಭಾಷೆಯನ್ನೇ ಬಳಸಿಕೊಂಡು ನಮ್ಮ ಸಾಹಿತ್ಯ ಕೆಲಮಟ್ಟಿಗೆ ಪ್ರಯೋಜನಕಾರಿಯಾಗುವಂತೆ ಮಾಡಿದರೆನ್ನಬಹುದು. ಇದೇ ದೇಶಿಯ ಸಾಹಿತ್ಯದ ಕಾಲದಲ್ಲಿಯೇ ಹುಟ್ಟಿದ ಜನತೆ ಮೆಚ್ಚಿದ ಕಾವ್ಯವೆಂದರೆ ನಾರಣಪ್ಪನ ಭಾರತ. ನಾರಣಪ್ಪ ಸಾಮಾನ್ಯ ಜನತೆಗಾಗಿಯೇ ಬರೆದನೆಂಬುದಕ್ಕೆ ಇಂದಿಗೂ ಆತನ ಕೃತಿ ಸರ್ವಜನಾದರಣೀಯವಾಗಿ ಮೆರೆಯುತ್ತಿರುವುದೇ ದೃಷ್ಟಾಂತ.

ನಮ್ಮ ಸಾಹಿತ್ಯದ ಜನತಾಯುಗದಲ್ಲಿ–ಹನ್ನೆರಡು ಹದಿಮೂರನೆಯ ಶತಮಾನಗಳಲ್ಲಿ—ವಚನ ಷಟ್ಪದಿಗಳ ರೂಪದಲ್ಲಿ ನಮ್ಮ ಸಾಹಿತ್ಯ ಸಾಗಿತು. ಮುಂದೆ ವಿಜಯನಗರದ ಅಭಿವೃದ್ಧಿಯ ಕಾಲದಲ್ಲಿ ರಾಜ ಮಹಾರಾಜರಿಂದ, ಸಾಮಂತ ಮಹಾಸಾಮಂತರಿಂದ ನಮ್ಮ ಸಾಹಿತ್ಯಕ್ಕೆ ಪೋಷಣ ಪ್ರೋತ್ಸಾಹಗಳು ದೊರೆತರೂ ಅದೊಂದು ಬಗೆಯ ವೈಭವ ಪ್ರದರ್ಶನ ಆಗಿತ್ತೇ ಹೊರತು ಅದರಲ್ಲಿ ಋಜುತ್ವವಿದ್ದಂತೆ ತೋರುವುದಿಲ್ಲ. ವಿಜಯನಗರ ತನ್ನ ಸಾಮ್ರಾಜ್ಯ ವೈಭವವನ್ನು ಮೆರೆಯಿಸುತ್ತಿದ್ದಾಗ ಒಂದು ಕಡೆ ದಾಸಕೂಟದವರು ದಾಸಸಾಹಿತ್ಯದ ನಿರ್ಮಾಣವೆಸಗಿದರು. ದಾಸ ಕೂಟದವರು ಸಾಮ್ರಾಜ್ಯವಾದಿಗಳನ್ನು ಪ್ರತ್ಯಕ್ಷರೂಪದಿಂದ ಎದುರಿಸಲಾರದವರಿಗೆ ಜನತೆಗೆ "ಈ ಲೋಕ ಅನಿತ್ಯ, ಇಲ್ಲಿ ಸಿಕ್ಕಿದುದರಲ್ಲಿಯೇ ತೃಪ್ತರಾಗಿರಿ; ಇಲ್ಲಿ ಹೇಗಿದ್ದರೂ ಅಲ್ಲಿ (ದೇವರ ಮುಂದೆ) ನಾವೆಲ್ಲರೂ ಸಮಾನರು" ಎಂದು ಬೋಧಿಸಲು ಪ್ರಾರಂಭಿಸಿದರು.

ವಿಜಯ ನಗರವು ಸಾಮ್ರಾಜ್ಯಲೋಲುಪತೆಯಿಂದ ಸುಖಭೋಗಗಳ ಮತ್ತಿನಿಂದ ದೇಹಶ್ರಮ ವಹಿಸುವ ಶಕ್ತಿ ಕಳೆದುಕೊಂಡು ವೈರಿಗಳನ್ನೆದುರಿಸಲಾರದೆ ನಾಶದ ದಾರಿ ಹಿಡಿಯಿತು. ವಿಜಯ ನಗರದ ಅಂತ್ಯಕಾಲದಲ್ಲಿ ಜನತೆಯನ್ನೆಚ್ಚರಿಸಿ ಬೋಧಿಸಿ "ನಿಮಗೆ ಬೇಕಾದ ಸಾಹಿತ್ಯ ನನ್ನಲ್ಲಿದೆ" ಎಂದು ಘಂಟಾಘೋಷವಾಗಿ ಸಾರಿದ ಕವಿಯೊಬ್ಬ—ಜನಮನ ಮೆಚ್ಚಿದ ಕವಿಯೊಬ್ಬ—ಆಗಿ ಹೋದ. ಹಿಂಡನಗಲಿದ ಗಂಡುಗಜದಂತಿದ್ದ ಈ

ಸರ್ವಜ್ಞನನ್ನು ನಮ್ಮ ಮಾರ್ಗ ಸಾಹಿತಿಗಳಲ್ಲಿ ಹಲವರು ಕವಿಯೆಂದು ಒಪ್ಪಿಕೊಳ್ಳಲು ಕೂಡ ಹಿಂಜರಿದರು. ನಿಜ! ಈತನನ್ನು ಮಾರ್ಗ ಸಾಹಿತಿಗಳು ಕವಿಯೆನ್ನಲಾರರು! ಸರ್ವಜ್ಞ ಮಾರ್ಗ ಲಕ್ಷಣಗಳ ಕಡೆಗೆ ತುಸುವಾದರೂ ಗಮನವೀಯಲಿಲ್ಲ. ಕನ್ನಡದ ಅರಿವಿದ್ದವನ ಮನದಲ್ಲಿ ಸತತ ನೆಲೆನಿಲ್ಲಬಹುದಾದ ತ್ರಿಪದಿ ಛಂದಸ್ಸು, ಮನಸ್ಸಿಗೆ ನಾಟುವ ಉಪಮಾನ, ಮನಸ್ಸಿನಿಂದ ಜಾರಿ ಹೋಗದ ನುಡಿಗಟ್ಟು, ಕಿರಿದರೊಳು ಪಿರಿದು ಮರ್ಥಮ ನರಿಪಜಾಣ್ಮೆ–ಇವು ಸರ್ವಜ್ಞನ ಲಕ್ಷಣಗಳಾಗಿದ್ದು ಜನತೆಯ ಮನಮೆಚ್ಚಿತು. ಇದರಿಂದಾಗಿ ಅಂದಿನಿಂದ ಇಂದಿನ ತನಕವೂ ಈ ಕವಿ ಜನತೆಯ ಕವಿಯಾಗಿಯೇ ಉಳಿದಿದ್ದಾನೆ. ಜನತೆಯ ನಾಲಿಗೆಯಲ್ಲಿ ನಲಿಯುತ್ತಿದ್ದಾನೆ. ಸರ್ವಜ್ಞನ ಕಾಲದಿಂದ ಟಿಪ್ಪು ಸುಲ್ತಾನನ ಅಂತ್ಯದ ವರೆಗೆ ಮೂರು ಶತಮಾನಗಳ ಕಾಲದಲ್ಲಿ–ಹದಿನೆಂಟನೆಯ ಶತಮಾನದ ವರೆಗೆ ನಮ್ಮ ಸಾಹಿತ್ಯದ ಸಾಗಾಟದಲ್ಲಿ ಯಾವ ಬದಲಾವಣೆಯೂ ತೋರಿಬರುವುದಿಲ್ಲ. ವಿಜಯ ನಗರದ ನಾಶದ ನೋವೂ, ಲೋಕವು ಅನಿತ್ಯವೆಂಬ ದಾಸಬೋಧದ ವಿರಾಗವೂ, ಸಾಹಿತ್ಯದಲ್ಲಿ ಬೇರೂರಿತ್ತು. ಮತ್ತೆ ಮೈಸೂರು ಚಿಕ್ಕ ದೇವ ರಾಜ ಒಡೆಯರ ಕಾಲದಲ್ಲಿ ತಿರುಮಲಾರ್ಯ ಮೊದಲಾದವರಿಂದಾದ ಗ್ರಂಥಸಮುದಾಯ, ರಾಜರನ್ನೊ ಪಾಳಯಗಾರರನ್ನೋ ಹೊಗಳಿ ಬರೆದ ಸಾಧನಗಳೆಂದರೂ ಹೆಚ್ಚಾಗದು. ಹೊಗಳು ಭಟ್ಟರ ಕಾರ್ಯವನ್ನಷ್ಟೆ ಈ ಕವಿಗಳು ಕೈಕೊಂಡರು.

ಹದಿನೆಂಟನೆಯ ಶತಮಾನದ ಅಂತ್ಯದಲ್ಲಿ ಶ್ರೀರಂಗ ಪಟ್ಟಣದ ಅಂತ್ಯದಲ್ಲಿ ಟಿಪ್ಪು ಸುಲ್ತಾನನು ಮಡಿದಾಗ ಅಳಿದುಳಿದ ಕನ್ನಡದ ನೆಲವನ್ನು ಪರಧರ್ಮಿಯರು ಆಳುತ್ತಿದ್ದರೂ ಜನತೆಯಲ್ಲಿ ತಾವು ಪರತಂತ್ರರೆಂಬ ಭಾವನೆ ಹುಟ್ಟಿರಲಿಲ್ಲ. ಆದರೆ ಟಿಪ್ಪುಸುಲ್ತಾನನ ಲಾವಣಿ–ಇವೇ ಮೊದಲಾದುವು ಆಗ ಹುಟ್ಟಿದ ಜನತಾ ಸಾಹಿತ್ಯದ ಒಂದೆರಡು ಕಿಡಿಗಳೆನ್ನಬಹುದು.

ಟಿಪ್ಪು ಸುಲ್ತಾನನ ಅನಂತರ ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಿಂದ ಇಂಗ್ಲಿಷರು ಕರ್ಣಾಟಕವನ್ನು ಆಳತೊಡಗಿದಾಗ ಕನ್ನಡದ ಜನಜೀವನದಲ್ಲಿ ಅದೊಂದು ಬಗೆಯ ಮಾರ್ಪಾಟ ಉಂಟಾಯಿತು. ಯಾಂತ್ರಿಕ ಉದ್ಯೋಗ ಇಂಗ್ಲಿಷ್ ಪದ್ಧತಿಯ ವಿದ್ಯಾಭ್ಯಾಸ ಇವೆಲ್ಲ ಈ ಮಾರ್ಪಾಟಕ್ಕೆ ಕಾರಣವಾದುವು. ನಮ್ಮ ಸಾಹಿತ್ಯದಲ್ಲಿಯೂ ಆ ಮಾರ್ಪಟ ತಲೆದೋರದೆ ಉಳಿಯಲಿಲ್ಲ. ನಮ್ಮ ಸಾಹಿತಿಗಳಲ್ಲಿ—ಮಾರ್ಗ ಸಾಹಿತಿಗಳಲ್ಲಿ—ಹಳೆಯ ಮಾರ್ಗದ ಸಂಸ್ಕೃತ ಕನ್ನಡಗಳ ಪಾಂಡಿತ್ಯ ಪ್ರದರ್ಶನದ್ದೊಂದು ತಂಡ; ಇಂಗ್ಲಿಷ್ ಭಾಷಾ ಸಾಹಿತ್ಯಗಳಿಂದಲೇ ನಮಗೆ ಮೋಕ್ಷವೆನ್ನುವ ಇಂಗ್ಲಿಷ್ ವಿದ್ಯಾಪಾರಂಗತರದೊಂದು ಗುಂಪು; ಸಂಸ್ಕೃತ ಕನ್ನಡಗಳ ಪಂಡಿತರು ವ್ಯಾಕರಣ ಅಲಂಕಾರಗಳ ತೋಳಲಾಡಿನಲ್ಲಿ ಪ್ರಾಸಾನುಪ್ರಾಸುಗಳ ಬಂಬಳದಲ್ಲಿ ತೊಳಲಾಡುತ್ತಿದ್ದರೆ, ಹಳೆಯದೆಲ್ಲ ಹಾಳೆನ್ನುವ ಇಂಗ್ಲಿಷ್ ಭಕ್ತರ ಮನಸ್ಸಿಗೆ ತಾವು ಹಳೆಯ ಕಟ್ಟುನಿಟ್ಟುಗಳಿಂದ ಬಿಡುಗಡೆ ಹೊಂದಿದರೂ ಪರದೇಶೀಯ ಸಾಹಿತ್ಯ ಸಂಸ್ಕೃತಿಗಳ ದಾಸಾನುದಾಸರಾಗಿ ಇನ್ನೊಂದು ಬಗೆಯ ಸರ್ವಾಧಿಕಾರವನ್ನು ತಮ್ಮ ಮೇಲೆ ಹೇರಿಕೊಳ್ಳುತ್ತಿದ್ದೇವೆಂಬಯೋಚನೆ ಹೊಳೆಯಲಿಲ್ಲ.

ಆ ಕಾಲದಲ್ಲಿ ಬಸಪ್ಪ ಶಾಸ್ತ್ರಿ ಮೊದಲಾದವರು ಕನ್ನಡದಲ್ಲಿ ಹಲವು ಕೃತಿಗಳನ್ನು ಕಟ್ಟಿದರೂ ಕನ್ನಡದ ಸಾಹಿತ್ಯದಲ್ಲಿ ಹೊಸ ಜೀವ ತುಂಬಲಿಲ್ಲ. ಕೊನೆಯದಾಗಿ ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಮಾರ್ಗ ಸಾಹಿತ್ಯವನ್ನು—ರಾಜಸಾಹಿತ್ಯವನ್ನು ಹೇಗಾದರೂ ಉಳಿಸಬೇಕೆಂಬ ಯೋಚನೆಯಿಂದ 'ರಾಮಾಶ್ವಮೇಧ' ರಚಿಸಿ ಮಾರ್ಗ ಸಾಹಿತ್ಯದ ಅಂತ್ಯವಿಧಿ ನೆರೆವೇರಿಸಿದ ಮುದ್ದಣ ಕವಿಭಕ್ತರು ಹತ್ತೊಂಬನೆಯ ಶತಮಾನದ ಅಂತ್ಯದ ತನಕವೂ ಸಾಹಿತ್ಯ ರಚನೆಗೆ ವಿಶೇಷವಾಗಿ ಕೈಯಿಕ್ಕಲಿಲ್ಲ. ಬಹುಶಃ ಸರಕಾರದ ಅಧಿಕಾರಿಗಳಾಗಿದ್ದೊ, ಇಲ್ಲವೆ ಇಂಗ್ಲಿಷ್ ಭಾಷಾ ಸಾಹಿತ್ಯಗಳ ಮಿರುಗಿಗೆ ಮರುಳಾಗಿ ಕನ್ನಡವನ್ನು ಕಡೆಗಣಿಸಿದುದೊ ಕಾರಣವಾಗಿರಬಹುದು. ಈ ತೆರನಾಗಿ ಹತ್ತೊಂಬನೆಯ ಶತಮಾನದ ಅಂತ್ಯದ ವರೆಗೂ ನಮ್ಮ ಸಾಹಿತ್ಯ ಹಲವಾರು ವರ್ಷಗಳೊಡನೆ ಸಾಗಿಬಂದು ಮುಂದೆ ಇನ್ನೊಂದು ತೆರನಾಗಿ ಸಾಗ ತೊಡಗಿತು. ಆಗ ನಮ್ಮ ಹೊಸ ಸಾಹಿತ್ಯ ಹೊಸ ದಾರಿ ಹಿಡಿಯಿತು.

ಕನ್ನಡ ಪಂಚತಂತ್ರದಲ್ಲಿ ಜೈನಧರ್ಮದ ವಿಚಾರ

ಶ್ರೀ ವರದರಾಜ ಹುಯಿಲಗೊಳ, ಎಂ. ಎ.

"ಈ ಪಂಚತಂತ್ರದಲ್ಲಿ ಒಂದೆರಡು ಕಡೆ ಸ್ವಲ್ಪ ಜೈನಮತಾನುಸಾರವಾದ ಅಭಿಪ್ರಾಯಗಳಿವೆ" ಎಂದು ಶ್ರೀ। ಎಸ್. ಜಿ. ನರಸಿಂಹಾಚಾರ್ ಮತ್ತು ಶ್ರೀ। ಮ. ಆ. ರಾಮಾನುಜೈಯಂಗಾರ್ ಅವರು ಮಹಾಕವಿ ಶ್ರೀ ದುರ್ಗಸಿಂಹ ವಿರಚಿತ ಕರ್ನಾಟಕ ಪಂಚತಂತ್ರದ ಗ್ರಂಥ ಪೀಠಿಕೆಯಲ್ಲಿ ಕಾಣಿಸಿದ್ದಾರೆ. ಇಲ್ಲಿ 'ಸ್ವಲ್ಪ ಜೈನಮತಾನುಸಾರ ಅಭಿಪ್ರಾಯಗಳಿವೆ' ಎನ್ನುವುದಕ್ಕಿಂತ ಹೆಚ್ಚಾಗಿ ಜೈನಧರ್ಮದ ವಿಚಾರಗಳಿವೆಯೆಂದು ಹೇಳುವುದು ಸರಿಯಾಗಿದೆಯೆಂದು ತೋರುವುದು. ದುರ್ಗಸಿಂಹನ ಪಂಚತಂತ್ರವನ್ನು ಸಂಪೂರ್ಣ ಓದಿದಾಗ ಈ ಮಾತು ಮನವರಿಕೆಯಾಗುವುದು.

ಶ್ರೀ। ಎ. ವೆಂಕಟಸುಬ್ಬಯ್ಯನವರು 'On the Reconstruction of the Panchatantra' ಈ ವಿಷಯದ ಮೇಲೆ ಬರೆಯುತ್ತ ಜಗತ್ತಿನಲ್ಲಿ ಅನೇಕ ಭಾಷೆಗಳಲ್ಲಿ, ಅನೇಕ ಸ್ಥಳಗಳಲ್ಲಿ ಪ್ರಚುರವಾದ ಪಂಚತಂತ್ರಗಳನ್ನು ಮೂಲ ಕಥೆಗಳ ದೃಷ್ಟಿಯಿಂದ ಎರಡೇ ಪಂಚತಂತ್ರಗಳನ್ನು ಕಾಣಬಹುದು ಎಂಬ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.–ಒಂದನೆಯದು ವಿಷ್ಣುಶರ್ಮನದು, ಎರಡನೆಯದು ವಸುಭಾಗ ಭಟ್ಟನದು. ಸಂಸ್ಕೃತದಲ್ಲಿ ಪ್ರಕಟವಾದ ವಿಷ್ಣುಶರ್ಮನ ಪಂಚತಂತ್ರವು ಅತ್ಯಂತ ಪ್ರಸಿದ್ಧವಿದೆ. ವಸುಭಾಗ ಭಟ್ಟ ಬರೆದ ಪಂಚತಂತ್ರ ಈ ವರೆಗೂ ದೊರೆತಿಲ್ಲ.

ವಸುಭಾಗ ಭಟ್ಟನಿಂದ ಬಂದಂಥ ಪಂಚತಂತ್ರಗಳು ನಾಲ್ಕು ಇವೆಯೆಂದು ಪಂಡಿತರ ಮತವಿದೆ. ಇವುಗಳಲ್ಲಿ ಮೂರು ಜಾವಾದಲ್ಲಿ ದೊರೆತಿವೆ. ಈ ಮೂರು ಗ್ರಂಥಗಳಲ್ಲಿ ಎರಡು ಪದ್ಯದಲ್ಲಿ ಇವೆ; ಮತ್ತೊಂದು ಗದ್ಯದಲ್ಲಿದೆ. ಇನ್ನು ನಾಲ್ಕನೆಯ ಗ್ರಂಥವೆಂದರೆ ಮಹಾಕವಿ ದುರ್ಗಸಿಂಹ ಬರೆದ ಕರ್ನಾಟಕ ಪಂಚತಂತ್ರ ದುರ್ಗಸಿಂಹನದು. ಗ್ರಂಥದ ಮೊದಲ ಭಾಗದಲ್ಲಿ

ವಸುಭಾಗಭಟ್ಟ ಕೃತಿಯಂ ।
ವಸುಧಾಧಿಪಹಿತ ಮನಖಿಲ ವಿಭುಧಸ್ತುತಮಂ ॥
ಪೊಸತಾಗಿರೆ ವಿರಚಿಸುವೆಂ ।
ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ ॥

ಎಂದು ವಸುಭಾಗ ಭಟ್ಟನ ಹೆಸರು ಹೇಳಿರುವನು. ದುರ್ಗಸಿಂಹನ ಈ ಗ್ರಂಥವು ಗದ್ಯಪದ್ಯ ಸಮ್ಮಿಶ್ರಿತವಾಗಿ ಚಂಪೂರೂಪದಲ್ಲಿದೆ.

ಮೇಲಿನ ವಿಚಾರದಿಂದ ವಸುಭಾಗ ಭಟ್ಟನ ಪಂಚತಂತ್ರದ ಆಧಾರದ ಮೇಲೆ ಬರೆದ ಗದ್ಯಗ್ರಂಥಗಳು ಜಾವಾದಲ್ಲಿದ್ದುದು ಒಂದು ಮತ್ತು ಕನ್ನಡದಲ್ಲಿರುವುದು ಇನ್ನೊಂದು ಎಂದು ತಿಳಿದುಬರುತ್ತದೆ. ಜಾವಾದಲ್ಲಿ ದೊರೆತ ಗದ್ಯ ಪಂಚತಂತ್ರದ ಕಾಲವು ಕ್ರಿ.ಶ. ೧೨೦೦ಕ್ಕಿಂತ ಹೆಚ್ಚಿಗೆ ಆಗಲಾರದೆಂದು ಹೂಯ್ಕಾಸ (Hooykaas) ಅವರ ಅಭಿಪ್ರಾಯವಿದೆ. ಕನ್ನಡ ಪಂಚತಂತ್ರದ ಕಾಲವು ಕ್ರಿ. ಶ. ೧೦೩೧ ಮಾರ್ಚಿ ಲನೆಯ ದಿನಾಂಕ ಎಂದು ಆರಾ ಪ್ರತಿಯ ಸಹಾಯದಿಂದ ಶ್ರೀ। ಗೋವಿಂದ ಪೈ ಅವರು ಸಂಶೋಧಿಸಿ ಹೇಳಿರುವರು. ಇದರಿಂದ ಅತಿ ಪೂರ್ವವಾದ ಕನ್ನಡ ಪಂಚತಂತ್ರಕ್ಕೆ ಎಷ್ಟು ಮಹತ್ವವಿದೆಯೆಂಬುದು ತಾನೆ ಕಂಡುಬರುವುದು. ದುರ್ಗಸಿಂಹನ ಪಂಚತಂತ್ರದಿಂದಲೆ ವಸುಭಾಗ ಭಟ್ಟನ ಕೃತಿಯ ಗುಣವನ್ನೂ ಅಳೆಯುವ ಕಾಲ ಈಗ ಬಂದಿದೆ.

ವಿಷ್ಣುಶರ್ಮನ ಪಂಚತಂತ್ರಕ್ಕೂ, ಕನ್ನಡ ಪಂಚತಂತ್ರಕ್ಕೂ ಮುಖ್ಯವಾದ ಭೇದವಿರುವುದು ಜೈನಮತಾನುಸಾರದ ವಿಚಾರಗಳಲ್ಲಿ ಮತ್ತು ಹಲವು ಸ್ವತಂತ್ರ ಕತೆಗಳಲ್ಲಿ. ದುರ್ಗಸಿಂಹನ ಗ್ರಂಥದಲ್ಲಿ ಮೊದಲನೆಯ ಪ್ರಕರಣವಾದ ಭೇದಪ್ರಕರಣ ತಂತ್ರದಲ್ಲಿ ಜೈನಧರ್ಮದ ಅನೇಕ ವಿಚಾರಗಳು ಬಂದಿವೆ. ಜೈನಧರ್ಮದ ತಿರುಳನ್ನು ತಿಳಿಸಲೆಂದೇ ಈ ತಂತ್ರವನ್ನು ಕಲ್ಪಿಸಿಕೊಂಡಂತಾಗಿದೆ. ರಾಜಕೀಯ, ಸಾಮಾಜಿಕ ವಿಚಾರಗಳೊಂದಿಗೆ ಜೈನಧರ್ಮದ ಮಾತುಗಳೂ ಹೊರಹೊಮ್ಮುವವು.

ಪಿಂಗಳಕನೆಂಬ ಸಿಂಹವು ಅರಣ್ಯದಲ್ಲಿ ರಾಜನಾಗಿರುವುದು. ಸಿಂಹವು ಸಹಜವಾಗಿ ಹಿಂಸಾವೃತ್ತಿಯುಳ್ಳ ಪ್ರಾಣಿ. ಅದು ಒಮ್ಮೆ ಒಂದು ಭಯಂಕರ ಗುಟುರನ್ನು ಕೇಳಿ ಗಾಬರಿಯಾಗಿ ನಿಲ್ಲುತ್ತದೆ. ಕಾಲಕ್ರಮದಲ್ಲಿ

ಗುಟುರನ್ನು ಹಾಕಿದ ಎತ್ತಿಗೂ ಸಿಂಹಕ್ಕೂ ಗೆಳೆತನವಾಗುತ್ತದೆ. ಎತ್ತು ಸಿಂಹಕ್ಕೆ ಅನೇಕ ರೀತಿ ಉಪದೇಶ ಮಾಡುತ್ತದೆ.

ಎಲ್ಲಕ್ಕೂ ಮೊದಲು ಅದು ಧರ್ಮದ ಮರ್ಮವನ್ನು ತಿಳಿಸಿಕೊಡುತ್ತದೆ.

ಆರೈದು ನೋಡೆ ಧರ್ಮಮೆ
ಸಾರಂ ಸಂಸಾರಿಗೆ...............

ಎಂದು ನುಡಿದು ಜೈನಮತ ತತ್ವಸಾರವನ್ನು ಕೆಳಗಿನಂತೆ ಹೇಳುವುದು.

ಅನಿಮಿಷ ಚಾಪದಂತೆ ಸಿರಿ, ಶಾರದ ನೀರದ
ಕಾಂತಿಯಂತೆ ಯೌ
ವನದೆಸಕಂ ತೃಣಾಗ್ರಗತವಾಃ ಕಣಿಕಾಗಣದಂತೆ ಸಂದ ಜೀ
ವನಮುದರೆಂ ಭವಪ್ರಭವ ಜೀವಿಗೆ ನಿರ್ಮಳಧರ್ಮ
ಮಾರ್ಗದೊಳ್
ಮನನೊಸೆದಾಗಳುಂ ನಡೆಯವೇಳ್ಪುದು
ವಿಶ್ವಮೃಗೇಂದ್ರನಲ್ಲಭಾ ॥

ಈ ಪದ್ಯದಲ್ಲಿ ಜೈನಮತ ತತ್ವಸಾರವೆ ಹೆಪ್ಪುಗಟ್ಟಿ ಕುಳಿತಿದೆ ಎಂದು ಶ್ರೀ। ತ. ಸು. ಶ್ಯಾಮರಾಯರು ಅಭಿಪ್ರಾಯಬಟ್ಟ ಮಾತು ಬಹು ಸತ್ಯವಿದೆ.

ಜೈನಧರ್ಮದಲ್ಲಿ ಬರುವಂತೆ ಪೂರ್ವಜನ್ಮದ ಭವಾವಳಿಯೂ ಈ ತಂತ್ರದಲ್ಲಿ ಬರುವುದು. ಪಿಂಗಳಕನು ಮೊದಲಿನ ಭವದಲ್ಲಿ ಸಿಂಹವರ್ಮನೆಂಬ ರಾಜನಾಗಿದ್ದನಂತೆ. ಅವನು ಗುರೂಪದೇಶಂಗೊಳ್ಳದೆ, ಪಂಚಾಗ್ನಿತಾಪತಪ್ತನಾಗಿ ಭಾವಶುದ್ಧಿಗೆಟ್ಟು ರೌದ್ರಧ್ಯಾನದಲ್ಲಿ ಸತ್ತು ಕೇಸರಿಯಾಗಿ ಹುಟ್ಟಿದನಂತೆ. ಎತ್ತು ಮೊದಲಿನ ಭವದಲ್ಲಿ ಮನುಷ್ಯನಿದ್ದು ತಪಸ್ಸು ಮಾಡುತ್ತಿರುವಾಗ ಜನ್ಮಾಂತರ ದುಷ್ಕರ್ಮವಾಸನೆ ಹೆಚ್ಚಾಗಿ ಕೇವಲಜ್ಞಾನ ಹುಟ್ಟದೆ, ತಾಪಸ ಕನ್ಯಕೆಯನ್ನು ಸಾಪೇಕ್ಷನಾಗಿ ನೋಡಿದನಂತೆ. ಆಗ ಪಶುವಿನ ಬಸಿರಲ್ಲಿ ಹುಟ್ಟುವ ಶಾಪವಾಯಿತು. ಆದರೂ ದಯಾಯಾಚನೆ ಕೇಳಿದ್ದರಿಂದ ಧರ್ಮಶ್ರವಣವುಳ್ಳವರ ಮನೆಯಲ್ಲಿ ಅದು ಹುಟ್ಟಿತಂತೆ! ಆದ್ದರಿಂದಲೆ ಎತ್ತು ಸಿಂಹಕ್ಕೆ ಧರ್ಮದ ಉಪದೇಶಮಾಡುತ್ತಿದೆ.

ಎತ್ತು ಸಿಂಹಕ್ಕೆ ಜೈನ ಧರ್ಮದ ಅಹಿಂಸಾವಾದವನ್ನು ಚೆನ್ನಾಗಿ ತಿಳಿಸಿಕೊಡುತ್ತದೆ. ಜೈನ ಸಿದ್ಧಾಂತವಾದಿಗಳ "ನ ಹಿಂಸ್ಯಾತ್ ಸರ್ವಭೂತಾನಿ" ಎಂಬುದನ್ನು, ಷಟ್ತರ್ಕ ಸಿದ್ಧಾಂತವಾದಿಗಳ "ಅಹಿಂಸಾ ಲಕ್ಷಣೋ ಧರ್ಮಃ" ಎಂಬ ಮಾತನ್ನು ವಿಶದೀಕರಿಸುತ್ತದೆ. ಎತ್ತಿನ ಇವೆಲ್ಲ ಮಾತುಗಳನ್ನು ಕೇಳಿ ಸಿಂಹವು ಅಹಿಂಸಾವಾದಿಯಾಗಿ, ಅಹಿಂಸಾವ್ರತವನ್ನು ಧಾರಣಮಾಡುತ್ತದೆ! ಒಂದು ಅದ್ಭುತ ರಮ್ಯತೆ ಈ ಕತೆಯ ಸಂದರ್ಭದಲ್ಲಿ ಕಂಡು ಬರುತ್ತದೆ! ಮಹಾತ್ಮ ಗಾಂಧಿಯವರೂ ಇಂಥ ಎಷ್ಟು ಸಿಂಹಗಳನ್ನು ಅಹಿಂಸಾವಾದಿಗಳನ್ನಾಗಿ ಮಾಡಿರುವರೊ! ಮೊದಲನೆಯ ತಂತ್ರದ ತಿರುಳು ಈ ಒಂದು ಕತೆಯ ರೂಪದಲ್ಲಿದೆ. ಪಂಚತಂತ್ರದ ಐದು ತಂತ್ರಗಳಲ್ಲಿ ಮೊದಲನೆಯ ತಂತ್ರವೆ ಹಿರಿದಾಗಿದೆ. ಅಂದ ಮೇಲೆ ಕವಿಯು ಈ ತಂತ್ರಕ್ಕೆ ಎಷ್ಟು ಮಹತ್ವ ಕೊಟ್ಟಿರುವನೆಂಬುದನ್ನು ನಾವು ಮನಗಾಣಬಹುದು.

ಅಹಿಂಸೆಯ ಬಗ್ಗೆ ಮಾತನಾಡುವಾಗ, 'ಬ್ರಾಹ್ಮಣರೂ ಕ್ಷತ್ರಿಯರೂ ಪಶುಯಾಗವನ್ನು ಮಾಡುವರಲ್ಲಾ?' ಎಂದು ಸಿಂಹವು ಕೇಳುವುದು. ಆಗ ಎತ್ತು "ನೀನೆಂದಂತೆ–ಬ್ರಾಹ್ಮಣರುಂ ಕ್ಷತ್ರಿಯರುಂ ವೇದವಿಹಿತ ಕರ್ಮಾನುಷ್ಠಾನತತ್ಪರಪ್ಪುದಱಿಂ ಮಾಗಾತಿಥಿ ಪಿತೃದೇವತಾನಿಮಿತ್ತಂ ವಿಧಿಪೂರ್ವಕಂ ಪ್ರಾಣಿವಧೆಗೆಯ್ವರಲ್ಲದೆ ವೃಥಾ ವಧೆಗೆಯ್ವರಿಲ್ಲ. ಅವರ್ಗಮಾಕರ್ಮಂ ಪುಣ್ಯಫಲನೀವುದೊಂದು ಸಂದೆಯವಿಲ್ಲ" ಹೀಗೆ ಹೇಳಿ ಬ್ರಾಹ್ಮಣರ ಮತ್ತು ಕ್ಷತ್ರಿಯರ ಹಿಂಸೆಯನ್ನು ಎತ್ತಿ ಹಿಡಿದಿದೆ. ಈ ಮಾತು ಸ್ವಲ್ಪ ವಿಚಿತ್ರವಾಗಿ ತೋರುವುದು. ಇವು ಎತ್ತು ಹೇಳಿದ ಮಾತುಗಳಾದರೂ, ವಸುಭಾಗ ಭಟ್ಟನ ಕಾಲದ ಜೈನರ ಅಭಿಪ್ರಾಯವಿರಬೇಕು. ಜೈನರು ಹೀಗೆ ಬ್ರಾಹ್ಮಣರ ಕೃತಿಗಳನ್ನು ಪುಷ್ಟೀಕರಿಸುವುದರಿಂದ, ಜೈನಮತವು ಬ್ರಾಹ್ಮಣಮತಕ್ಕೆ ಸಮೀಪ ಸಂಬಂಧಿಯಾಗಿತ್ತೇನೋ ಎಂದು ಎನಿಸುತ್ತದೆ. ಬುಲ್ಹರ್, ಡಾ. ಜಕೋಬಿ ಮುಂತಾದ ಹಲವು ಪಂಡಿತರ ಅಭಿಪ್ರಾಯಗಳೂ ಇದೇ ತೆರನಾಗಿವೆ. ಇದರಿಂದಲೇ ಬ್ರಾಹ್ಮಣ ಕವಿಯಾದ ದುರ್ಗಸಿಂಹನು ಜೈನಮತಾನುಸಾರವಾದ ಪಂಚತಂತ್ರವನ್ನು ಕನ್ನಡದಲ್ಲಿ ಬರೆದಿರಬಹುದೆ? ಏನೆ ಇರಲಿ, ಅಹಿಂಸೆಯನ್ನು ಜೈನರು ತತ್ವತಃ ಒಪ್ಪಿಗೊಂಡಿದ್ದು, ರೂಢಿಯಲ್ಲಿ ಅದು ಬದಲಾವಣೆ ಹೊಂದುತ್ತಿರಬೇಕು. ಇದು ವಸುಭಾಗ ಭಟ್ಟನ ಕಾಲದಲ್ಲಿಯೆ ಕಂಡು ಬಂದಿರಬೇಕು. ಜೈನಧರ್ಮದ ಆದರ್ಶ ಮತ್ತು ಸತ್ಯ ಈ ವಿಷಯದ ಬಗ್ಗೆ ವಿಚಾರಿಸುತ್ತ, ಅಹಿಂಸೆಯ ರೂಪದ ಬಗ್ಗೆ ಪ್ರೊ: ಎಸ್. ಆರ್.

ಶರ್ಮಾ ಅವರು "There seems little doubt that they have changed in practice though not in theory" ಎಂದು ಹೇಳಿ ಇಂತಹದೆ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ.

ಭವಾವಳಿ, ಅಹಿಂಸೆ ಈ ವಿಚಾರಗಳಲ್ಲದೆ ದೇವರು, ಧರ್ಮ ಮುಂತಾದ ವಿಚಾರಗಳೂ ಮೊದಲನೆಯ ಪ್ರಕರಣದಲ್ಲಿ ಬರುವವು. ಇವೆಲ್ಲವುಗಳ ಸಾರವನ್ನು ಒಬ್ಬ ಮುನೀಶ್ವರನು ಒಂದೆ ಪದ್ಯದಲ್ಲಿ ಹೇಳಿರುವನು—

ಸಾವುಂ ಪುಟ್ಟುವುದಿಲ್ಲ
ನಾವನನಂ ದೇವನಾತನೆಂದುದೆ ತತ್ವಂ ।
ಜೀವದಯೆ ಧರ್ಮಮಿಂದ್ರಿಯ
ಸೇವನೆಯಂ ಬಿಟ್ಟೊಡದುವೆ ತಪಮುಪಶಮದಿಂ ॥

ಧರ್ಮದ ಮರ್ಮವೆಲ್ಲ ಬಹು ಸುಂದರವಾಗಿ ಈ ಪದ್ಯದಲ್ಲಿ ಅಡಕವಾಗಿದೆ.

ದ್ವಿತೀಯ ತಂತ್ರವಾದ 'ಪರೀಕ್ಷಾ ವ್ಯಾವರ್ಣ' ದಲ್ಲಿ 'ಪರದನ ಕಥೆ' ಇದೆ. ಈ ಕತೆಯಲ್ಲಿಯೂ ಜೈನಧರ್ಮದ ವಿಚಾರವಿದೆ. ಸವಣರೂ, ದಿಗಂಬರರೂ ಮನೆಗೆ ಬರುತ್ತಾರೆ. ಮುನಿಗಳು ಚರಿಗೆಗೆ ಬರುತ್ತಾರೆ. ಪರದನು ಅವರನ್ನು ಪೂಜಿಸಿ ಪೊನ್ನ ರಾಶಿಗಳನ್ನು ಬೇಡುವನು. ಇದೇ ತಂತ್ರದಲ್ಲಿ 'ಅಜಿತನ ಕಥೆ' ಇದೆ. ಕಥೆಯ ನಾಮಕನ ಹೆಸರು ಜೈನ ಮತದವನಿದೆ. ಹೀಗೆ ಜೈನಮತದವರಿಗೆ ಇರುವ ಹಲವು ಹೆಸರುಗಳು ಹಲವು ಕತೆಗಳಲ್ಲಿ ಕಂಡುಬರುವವು.

ಪಂಚತಂತ್ರದಲ್ಲಿ ಬರುವ ಜೈನಧರ್ಮದ ಈ ಹಲವು ವಿಚಾರಗಳಿಂದ ವಸುಭಾಗ ಭಟ್ಟನು ಜೈನನಿರಬಹುದೆಂದು ಕೆಲವು ಪಂಡಿತರು ಊಹಿಸಿದ ವಿಚಾರ ಸರಿಯೆಂದು ತೋರುತ್ತದೆ. ದುರ್ಗಸಿಂಹನು ಸ್ಮಾರ್ತ ಬ್ರಾಹ್ಮಣ, ಗೌತಮ ಗೋತ್ರದವ, ಕಮ್ಮೆ ಕುಲದವ. ಈತನು ವಸುಭಾಗ ಭಟ್ಟನ ಕೃತಿಯನ್ನು ಭಾಷಾಂತರಿಸಬೇಕಾದರೆ ಆಗಿನ ಕಾಲದ ಪ್ರಭಾವವೆ ಕಾರಣವೆಂದು ಹೇಳಬೇಕು. ೧೦ನೆಯ ಶತಮಾನ ಪಂಪನ ಯುಗ. ಜೈನಧರ್ಮದ ಪ್ರಾಬಲ್ಯವಿತ್ತು. ಜೈನಪುರಾಣಗಳು ಪ್ರಕಟವಾದ ಕಾಲವದು. ದುರ್ಗಸಿಂಹನಿದ್ದ ೧೧ನೆಯ ಶತಮಾನವೂ ಹಾಗೆಯೆ ಇತ್ತು. ಅಂತೆಯೆ ಹೆಚ್ಚಾಗಿ ಜೈನರ ಸ್ವತ್ತಾದ ಚಂಪೂರೂಪದಲ್ಲಿ, ಜೈನ ಮತಾನುಸಾರಿಯಾದ ವಸುಭಾಗ ಭಟ್ಟನ ಪಂಚತಂತ್ರವನ್ನು ಬರೆದಿರುವನು. ಮೊದಲನೆಯ ತಂತ್ರವೆ ಹೆಚ್ಚು ದೊಡ್ಡದಾಗಿರುವುದರಿಂದ, ಅಲ್ಲಿಯ ಜೈನಧರ್ಮದ ವಿಚಾರಗಳಿರುವುದರಿಂದ ಕನ್ನಡ ಪಂಚತಂತ್ರದಲ್ಲಿ ಜೈನಧರ್ಮದ ತಿರುಳು ಹೆಚ್ಚಾಗಿ ಕಂಡುಬಂದಿದೆಯೆಂದು ಹೇಳಬೇಕು.

[ಈ ಲೇಖನಕ್ಕೆ ಸಹಾಯಕ ಲೇಖನಗಳು:—

(1) On the Reconstruction of the Panchatantra by Venktasubbiah; (2) The Panchatantra of Vasubhaga by A. Venkatasubbiah; (3) ಕನ್ನಡ ಪಂಚತಂತ್ರ ತ. ಸು. ಶ್ಯಾಮ ರಾವ್; (4) ಅಭಿನವ ಪಂಪ—ಕಾಲ ನಿರ್ಣಯ—ಗೋವಿಂದ ಪೈ; (5) Jainisum in Karnatak Culture by Pro. S. R. Sharma.]

ಗಮಕ ಕಲೆ

ಗಮಕಿ ಶ್ರೀ ಎಂ. ರಾಘವೇಂದ್ರ ರಾವ್, (ಗಮಕ ತರಗತಿಯ ಅಧ್ಯಾಪಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.)

ಇದರ ಪ್ರಾಚೀನತೆ

ಗಾನರೂಪದಲ್ಲಿ ಕಾವ್ಯಧ್ವನಿಯನ್ನು ಪ್ರತಿಬಿಂಬಿಸುವಂತೆ ಮೊಳಗಿಸಿ ಸಾಹಿತ್ಯದ ಹಿರಿಮೆಯುನ್ನು ಸಾರುವ ವಿದ್ಯೆಯೇ ಗಮಕ ಕಲೆ. ಈ ಕಲೆಯು ನಮ್ಮ ನಾಡಿನ ಶ್ರೇಷ್ಠ ಕಲೆಗಳಲ್ಲೊಂದಾಗಿದೆ. ಇದು ಬಹಳ ಪುರಾತನವಾದುದು ಅಹುದು. ಆಮ್ನಾಯ ಸಂಪ್ರದಾಯದಂತೆಯೇ ಇದೂ ಸಹ ಶ್ರವಣದ ಮೂಲಕ ಬಹಳ ಹಿಂದಿನಿಂದ ಶಿಷ್ಯಪರಂಪರಾನುಗತವಾಗಿ ಪ್ರಚಾರಕ್ಕೆ ಬಂದ ವಿದ್ಯೆಯಾಗಿದೆ. ಗಾಂಧರ್ವ ವಿದ್ಯೆಗಳ ಪೈಕಿ ಇದೂ ಒಂದು ವಿದ್ಯೆಯೆನಿಸಿದೆ.

ಹಿಂದಿನ ಪ್ರಸಿದ್ಧ ಗಮಕಿಗಳು

ಅಷ್ಟಾದಶ ಪುರಾಣಗಳನ್ನು ರಚಿಸಿದ ಶ್ರೀ ವೇದವ್ಯಾಸರು, ಶ್ರೀಮದ್ಭಾಗವತವನ್ನು ಹಾಡಿದ ಶ್ರೀ ಶುಕರೂ, ಶ್ರೀಮದ್ರಾಮಾಯಣವನ್ನು ಬರೆದ ಶ್ರೀವಾಲ್ಮೀಕಿ ಮುನಿಪುಂಗವರೂ ಮಹಾಕವಿಗಳೆಂಬುದನ್ನು ಯಾರು ತಾನೆ ಅರಿಯರು? ಆದರೆ ಇವರೆಲ್ಲರೂ ತಮ್ಮ ತಮ್ಮ ಕಾವ್ಯಗಳನ್ನು ಶಿಷ್ಯ ಪರಂಪರೆಯ ಮೂಲಕ ಜಗತ್ತಿನಲ್ಲಿ ಬೆಳಕಿಗೆ ತರುವ ಅವಸರದಲ್ಲಿ ತಾವೂ ಸ್ವಯಂ ಗಮಕಿಗಳಾಗಿದ್ದರೆಂಬುದನ್ನೂ ಸಹ ತೋರಿಸಿಕೊಟ್ಟಿದ್ದಾರೆಂಬಂಶವನ್ನು ವಾಚಕರು ಇಲ್ಲಿ ಮರೆಯಲಾಗದು. ಜನಮೇಜಯನಿಗೆ ಮಹಾಭಾರತದ ಕಥೆಯನ್ನು ಸರಸವಾಗಿ ವರ್ಣಿಸಿ ಕೇಳಿಸಿದ ವೈಶಂಪಾಯನನೂ, ನೈಮಿಶಾರಣ್ಯದ ಶೌನಕಾದಿ ಮುನಿಗಳ ಕಿವಿಗಳ ಮೇಲೆ ಕಥೆಗಳ ಸುರಿಮಳೆಯನ್ನೇ ಸುರಿಸಿದ ಸೂತಪೌರಾಣೀಕನೂ, ಇಷ್ಟೇ ಏಕೆ, ಅರ್ಜುನನಿಗೆ ರಣರಂಗದಲ್ಲಿ ಗೀತಾಮೃತವನ್ನು ಪಾನಮಾಡಿಸಿದ ಶ್ರೀ ಕೃಷ್ಣನೂ ಪ್ರಸಿದ್ಧ ಗಮಕಿಗಳೇ ಆಗಿದ್ದಾರೆ! ಶ್ರೀ ರಾಮನ ಓಲಗದಲ್ಲಿ ರಾಮಾಯಣವನ್ನು ತಮ್ಮ ಸುಮಧುರವಾದ ಕಂಠದಿಂದ ಗಾನಮಾಡಿದ ಶ್ರೀ ಲವಕುಶರೂ ಪ್ರಸಿದ್ಧ ಗಮಕಿಗಳು. ಈ ಕ್ರಮದಲ್ಲಿ ವಾಚಕರೇ ಹಿಂದಿನ ಗಮಕಿಗಳನ್ನು ಸುಲಭವಾಗಿ ಗುರುತಿಸಿ ಊಹಿಸಬಹುದು.

ಮಾತುಗಳನ್ನು ಆಡುವುದೂ ಹಾಡುವುದೂ

ಕಾವ್ಯಾಗಮದ ಪ್ರಾಶಸ್ತ್ಯವನ್ನು ಎತ್ತಿ ಸಾರುವ ಹಿರಿಮೆಯು ಗಮಕ ಕಲೆಗೆ ಸೇರಿದುದು. ಮಾತುಗಳನ್ನು ಆಡುವ ವೈಖರಿಯೂ ಮಾತುಗಳನ್ನು ಹಾಡುವ ವೈಖರಿಯೂ ಏನೋ ಗಮಕ ವಿದ್ಯೆಯೆನಿಸುವುದು. ಆದರೆ ಮಾತುಗಳನ್ನು ಆಡುವ ಸೊಬಗು ಅಂಗನ್ಯಾಸ ಕರನ್ಯಾಸಾದಿ ಅಭಿನಯಗಳಿಂದೊಡಗೂಡಿ ದೃಶ್ಯರಮ್ಯವಾಗಿರುವುದರಿಂದ ಅಭಿನಯಪ್ರಧಾನವಾಗಿದ್ದು ದೃಶ್ಯಕಾವ್ಯಗಳಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುವುದು. ಇನ್ನು ಮಾತುಗಳನ್ನು ಹಾಡುವ ವೈಖರಿಯಾದರೋ ಗೀತಾಪ್ರಧಾನವಾಗಿದ್ದು ಭಾವರಸೋದ್ಬೋಧಕವಾಗಿದ್ದು ಶ್ರಾವ್ಯಯೋಗ್ಯವೆನಿಸಿ ಶ್ರವ್ಯ ಕಾವ್ಯಗಳಲ್ಲಿ ಎದ್ದು ಕಾಣುವುದು. (ಆದರೆ ಮಿಶ್ರಕಾವ್ಯಗಳಲ್ಲಿ ಪದ್ಯಗಳ ಮಧ್ಯದಲ್ಲಿ ಕಂಡುಬರುವ ವಚನಗಳು ಕಥಾಸನ್ನಿವೇಶವನ್ನು ಸಂಕ್ಷೇಪಿಸುವ ಅಥವಾ ವಿಸ್ತರಿಸುವ ಒಂದು ಸಾಧನವಾಗಿರುವ ಕಾರಣ, ಅವುಗಳ ವಾಚನ ಶೈಲಿಯು ಅಭಿನೇಯ ಕಾವ್ಯಗಳಲ್ಲಿರುವ ವಚನಗಳಂತಿರದೆ ಆಯಾ ಸನ್ನಿವೇಶವನ್ನನುಸರಿಸಿ ಅದರ ಧಾಟಿಯಲ್ಲಿ ಆಡಲೂ (ಓದಲೂ) ಹಾಡಲೂ ಯೋಗ್ಯವಾಗಿದ್ದು ಶ್ರವಣ ಮನೋಹರವಾಗಿರುವುದು.) ಪ್ರಾಯಶಃ ಇದನ್ನೇ ನಮ್ಮ ಹಿರಿಯರು ಗಮಕ ವಿದ್ಯೆಯೆಂದು ನಿರ್ದೇಶಿಸಿದರೆನ್ನಬಹುದು. ಇಲ್ಲಿ ಗೀತಾಪ್ರಧಾನವೆಂದರೆ ಕಾವ್ಯಪ್ರಕಾಶವನ್ನು ಮರೆಸುವ ಗಾನದ ಪ್ರಾಧಾನ್ಯತೆಯೆಂದಲ್ಲ. ಅದಕ್ಕೆ ಬದಲಾಗಿ ಅದರ ಜ್ಯೋತಿಯನ್ನು ನೂರ್ಮಡಿಯಾಗಿ ಬೆಳಗುವಂತೆ ಮಾಡಿ ಮೆರೆಸುವ ಗಾಯನದ ಮುಖ್ಯ ಪಾತ್ರವೆಂದು ಮಾತ್ರ ನಾವು ಅರಿಯಬೇಕು.

ರಾಗದ ಪ್ರಾಮುಖ್ಯತೆ

ಗಮಕ ವಿದ್ಯೆಯಲ್ಲಿ ರಾಗಗಳ ಪಾತ್ರವು ಅತ್ಯಂತ ಮುಖ್ಯವಾದುದು. ರಾಗದ ಬಳಕೆಯು ಪದ್ಯಕ್ಕೆ ಎಡೆಬಿಡದೆ ಎಷ್ಟೇ ಅಧೀನವೆನಿಸಿದ್ದರೂ ಅದರ ಸ್ಥಾನವು ಸಾಹಿತ್ಯಕ್ಕಿಂತ ಸ್ವಲ್ಪವೂ ಕೆಳಮಟ್ಟದಲ್ಲಿರದೆ ಅದಕ್ಕೆ ಸಮ

ಸಮಾನವೆನಿಸಿರುವುದು. ಮೇಲಾಗಿ ಪದ್ಯದ ಹೃದಯವನ್ನು ಪುಷ್ಟೀಕರಿಸುವ ಮೂಲಕ ಅದರ ಭಾವ ಪರಿಪೋಷಕವಾಗಿರುವುದು.

ರಾಗ ಮತ್ತು ಪದ್ಯದ ಹೋಲಿಕೆ

ರಾಗ ಮಾಧುರ್ಯವು ಅದರಲ್ಲಿರುವ ಸ್ವರಗಳ ವಿವಿಧ ವಿನ್ಯಾಸಕ್ರಮದ ಫಲವಾಗಿ ಏರ್ಪಟ್ಟರೆ, ಒಂದು ಪದ್ಯದ ರಮ್ಯ ದೃಶ್ಯವು ಅದರಲ್ಲಡಗಿರುವ ವಿವಿಧ ಪದಗಳ ವಿನ್ಯಾಸಲಕ್ಷಣದ ಪರಿಣಾಮವಾಗಿ,—ಎಂದು ನಾವು ಹೇಳಬಹುದು. ಒಂದೊಂದು ಸ್ವರವೂ ಹೇಗೆ ಸ್ವಯಂಪ್ರಕಾಶಮಾನವಾದ ಗುಣ ಉಳ್ಳದ್ದೋ ಅಂತೆಯೇ ಪ್ರತಿಯೊಂದು ಪದವು ಕೂಡ ಸ್ವಯಂ ಅರ್ಥವೊಂದನ್ನು ಕೊಡಬಲ್ಲ ಶಕ್ತಿಯುಳ್ಳದ್ದಾಗಿರುವುದು. ಇಷ್ಟಾಗಿದ್ದರೂ ಸಹಸ್ವರವು ಹಾಡಿದಲ್ಲದೇ ಹೇಗೆ ಮನೋರಂಜಕವೆನಿಸಲಾರದೋ ಹಾಗೆಯೇ ಪದವೂ ಕೂಡ ಉಚ್ಚರಿಸಿದಲ್ಲದೇ ಅಷ್ಟಾಗಿ ಅದರ ಭಾವ ಬೋಧಕವೆನಿಸಲಾರದು. ಆದಕಾರಣ ಇವೆರಡಕ್ಕೂ ನಾದ ಮತ್ತು ಧ್ವನಿಪ್ರಾಧಾನ್ಯತೆಯನ್ನು ಕೊಟ್ಟಂತಾಯಿತು ಮತ್ತು ಒಂದು ರಾಗದ ಶಾಸ್ತ್ರೋಕ್ತವಾದ ಸ್ವರಗಳ ನ್ಯಾಸಕ್ರಮ ಅಥವಾ ವರ್ಣನಾವೈಖರಿಯನ್ನು ಒಂದು ಪದ್ಯದ ಲಕ್ಷಣಲಕ್ಷಿತವಾದ ಮತ್ತು ಭಾವಬೋಧಕವಾದ ಪದಬಂಧ ಚಾತುರ್ಯಕ್ಕೆ ಸುಲಭವಾಗಿ ಹೋಲಿಸಬಹುದಾಗಿದೆ.

ಗಮುಕಗಳು

ಎಂದ ಮೇಲೆ ಸ್ವರಮೇಳ್ ಮತ್ತು ಪದಮೇಳಗಳನ್ನೇ ನಾವು ಆಯಾ ರಾಗ ಅಥವಾ ರಾಗಭಾಗದ ಮತ್ತು ಪದ್ಯ ಅಥವಾ ಪದ್ಯಭಾಗದ ಗಮುಕವೆಂದು ಕರೆದಂತಾಗುವುದು. ಇಲ್ಲಿ ಗಮುಕವೆಂದರೆ ನಡೆ, ಧಾಟಿ ಅಥವಾ ಶಯ್ಯೆ ಎಂದು ಮಾತ್ರ ತಿಳಿಯಬೇಕು. ಈ ಗಮುಕವು ಏಳು ವಿಧವೆಂದೂ, ಹತ್ತು ವಿಧವೆಂದೂ, ಹದಿನೈದು ವಿಧವೆಂದೂ ಸಂಗೀತ ಶಾಸ್ತ್ರಕಾರರು ಅಭಿಪ್ರಾಯಪಟ್ಟಿರುತ್ತಾರೆ. ಮುಖ್ಯವಾಗಿ ಇವುಗಳ ಪೈಕಿ ದಶವಿಧ ಗಮುಕಗಳು ಪ್ರಸಿದ್ಧವಾಗಿರುವುದೆಂದು ಕಂಡುಬರುವುದು. ಆದರೆ ಗಮುಕಗಳ ಸಂಖ್ಯೆ ಇಷ್ಟೇ ಎಂದು ನಿರ್ಣಯ ಮಾಡುವುದು ಸಂಗೀತದಲ್ಲಿ ಎಷ್ಟು ಕಷ್ಟವೋ ಸಾಹಿತ್ಯದಲ್ಲೂ ಸಹ ಅಷ್ಟೇ ಭಗೀರಥ ಯತ್ನವೇ ಸರಿ. ಒಂದು ರಾಗದ ಕ್ಷೇತ್ರವಿಸ್ತಾರವನ್ನು ವಿವಿಧ ರೀತಿಯಲ್ಲಿ ಅಳೆದು ತೋರಿಸಬಲ್ಲ ಅದರ ಸ್ವರಗಳ ವರ್ಣನಾವೈವಿಧ್ಯ ಕೌಶಲ್ಯತೆಯ ಮಿತಿ ಮೇರೆಗಳನ್ನು ಇಷ್ಟೇ ಎಂದು ನಿರ್ಣಯಿಸಲು ಶಕ್ಯವೆನಿಸುವುದೇ? ಅದರಂತೆಯೇ ಒಂದು ರಸ ಸನ್ನಿವೇಶವನ್ನು ಹೃದಯಂಗಮವಾಗಿ ಚಿತ್ರಿಸಬಲ್ಲ ಪದಗಳ ವಿವಿಧ ನಡೆಯನ್ನು ಇಷ್ಟೇ ಎಂದು ಲೆಕ್ಕಮಾಡಿ ಹೇಳಲು ಯಾರಿಗೆ ಸಾಧ್ಯ? ಆದಾಗ್ಯೂ ಕೆಲವು ಮುಖ್ಯ ಲಕ್ಷಣಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಪದಗಳನ್ನು ಒಂದೊಂದು ಗುಂಪಾಗಿ ವಿಂಗಡಿಸತೊಡಗಿದರೆ ಮೇಲೆ ಹೇಳಿದ, ಸಂಗೀತದಲ್ಲಿ ಪ್ರಸಿದ್ಧವಾದ ಹತ್ತು ಬಗೆಯ ಗಮುಕಗಳೇ ಸಾಹಿತ್ಯದಲ್ಲೂ ಕಂಡು ಬರುತ್ತವೆ. (ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ಪರಿಶೋಧನೆ ಅತ್ಯಗತ್ಯವೆಂದು ಇಲ್ಲಿ ಹೇಳದೆ ವಿಧಿಯಿಲ್ಲ).

ಭಾವ—ರಸಗಳು

ಪ್ರಕೃತ ಒಂದು ಗೊತ್ತಾದ ಪದದ ಗೊತ್ತಾದ ನಡೆಯನ್ನು ಅದರ ಭಾವ ಬೋಧಕವನ್ನಾಗಿ ಮಾಡಲು ಕೇವಲ ಅದರ ಧಾಟಿಯನ್ನನುಸರಿಸಿದ ಉಚ್ಚಾರಣೆಯೊಂದೇ ಸಾಕಾದಷ್ಟು ಸಹಕಾರಿ ಎನಿಸಿದ್ದರೂ ಅದೇ ಪದದ ನಡೆಯನ್ನು ಸ್ಥಿರೀಕರಿಸಬಲ್ಲ ಒಂದು ಸ್ವರ ಮೇಳದ ಗೊತ್ತಾದ ನಾದದೊಡನೆ ಮಿಳನ ಮಾಡಿ ಉಚ್ಚರಿಸಿದರೆ ಎಂದರೆ ಹಾಡಿದರೆ, ಆಗ ಆ ಪದದ ಭಾವವು ನಮ್ಮ ಮನಸ್ಸಿನ ಮೇಲೆ ತತ್ಸಂಬಂಧವಾದ ಪರಿಣಾಮವನ್ನುಂಟುಮಾಡಿ ಅದರ ರಸಾನುಭವವನ್ನು ನಾವು ಪಡೆಯುತ್ತೇವೆ. ಸಾಮಾನ್ಯವಾಗಿ ಭಾವ ಮತ್ತು ರಸ ಇವೆರಡರ ವ್ಯತ್ಯಾಸವನ್ನು ಸ್ಥೂಲವಾಗಿ ನಾವು ಹೀಗೆ ನಿರ್ದೇಶಿಸಬಹುದಾಗಿದೆ. ಸಾಹಿತ್ಯದಲ್ಲಿ ಭಾವವೆಂದರೆ ಪ್ರತಿಯೊಂದು ಪದ, ಪದಸಮೂಹ, ವಾಕ್ಯ ಅಥವಾ ವಾಕ್ಯವೃಂದದ ಅಭಿಪ್ರಾಯ (ಅರ್ಥ) ದಿಂದ ಏರ್ಪಡುವ ಒಂದು ಸನ್ನಿವೇಶ ಬದಲಾವಣೆಯ ಚಿತ್ರವಿಶೇಷ. ಇದು ಕಾವ್ಯಗಳಲ್ಲಿ ಕೇವಲ ನಮ್ಮ ಬುದ್ಧಿಗೋಚರವಾದುದು. ಕಾಲ, ದೇಶ, ವರ್ತಮಾನ, ವ್ಯಕ್ತಿ, ವಸ್ತು, ವಿಷಯ, ಕಾರ್ಯ, ಕಾರಣ ಮುಂತಾದುವುಗಳ ಪರಸ್ಪರ ಸಮ್ಮೇಳನ ಅಥವಾ ಸಂಘರ್ಷಣೆಗಳ ಪರಿಣಾಮವಾಗಿ ಹೆಜ್ಜೆ ಹೆಜ್ಜೆಗೆ ಏರ್ಪಡುತ್ತಿರುವ ಒಂದು ವಾತಾವರಣ ವಿಶೇಷವೇ ತತ್ಸಂಬಂಧವಾದ ಭಾವವೆನಿಸುವುದು. ಕೇವಲ ಬುದ್ಧಿಗೋಚರವಾದ ಈ ಸಾಹಿ

ತ್ಯದ ಸನ್ನಿವೇಶವು ಅಥವಾ ಚಿತ್ರವು ತಾನು ಸುಮ್ಮನಿರದೆ ನಮ್ಮ ಮನಸ್ಸಿನ ಮೇಲೆ ತತ್ಸಂಬಂಧವಾದ ವೇದನೆ ಯನ್ನುಂಟುಮಾಡುವುದು. ಈ ಚಿತ್ತದ ವಿಕಾರ ಅಥವಾ ವಿಕಾಸವೇ ಆ ಭಾವದ ರಸವೆನಿಸುವುದು; ಮತ್ತು ಇದರ ಅರಿವೇ ರಸಾನುಭವವೆನಿಸುವುದು. (ಸೂಚನೆ:—ಈ ಲೇಖನದಲ್ಲಿ ನಮಗೆ ಜಗತ್ತಿನಲ್ಲಿ ಕಾವ್ಯ ಮುಂತಾದುವು ಗಳಿಂದ ನಮ್ಮ ಅನುಭವ ರೂಪದಲ್ಲಿ ಈ ಭಾವ ಮತ್ತು ರಸಗಳು ನಿಜವಾಗಿಯೂ ಏನೆಂದು ನಿರ್ಧರಿಸಲ್ಪಡತಕ್ಕ ವುಗಳೆಂಬುದನ್ನು ಪರಿಶೋಧನೆಯ ಮತ್ತು ವಿಮರ್ಶೆಯ ದೃಷ್ಟಿಯಿಂದ ಇಲ್ಲಿ ಸ್ಥೂಲವಾಗಿ ಪ್ರಸ್ತಾವಿಸಲಾಗಿದೆ. ಈ ಅಭಿಪ್ರಾಯವು ಪ್ರಾಚೀನರ ಮತಕ್ಕೆ ಸಮ್ಮತವೋ ಅಲ್ಲವೋ ಅದು ಈಗ ಅಪ್ರಕೃತ.)

ಇದರಂತೆಯೇ ಸಂಗೀತದಲ್ಲಿಯೂ ಸಹಭಾವ ಮತ್ತು ರಸಗಳನ್ನು ಹೀಗೆಂದು ನಾವು ಊಹಿಸಲು ಸಾಧ್ಯವುಂಟು. ಅದು ಹೇಗೆಂದರೆ: ಒಂದು ರಾಗದಲ್ಲಿ ಅದರ ಸ್ವರಗಳ ಒಂದೊಂದು ಬಗೆಯಾದ ವಿನ್ಯಾಸ ಕ್ರಮವೂ ಕೂಡ ತತ್ಸಂಬಂಧವಾದ ನಡೆಯ, ಎಂದರೆ ಗಮಕದ ಚಿತ್ರವನ್ನು ಕೊಡಬಲ್ಲುದು. ಉದಾ: ಸ್ವರ ಗಳ ತೀವ್ರಮಂದ ನಡೆಯೂ, ಸಮವಿಷಮ ಗತಿಯೂ ಸುತ್ತು ಸುಳಿಗಳೂ, ಏರುಜಾರುಗಳೂ, ಇಂಪುಕಂಪನ ಗಳೂ, ಬೀಸುಬಿರುಸುಗಳೂ, ಮುಕ್ತಾಯದ ಮೂ ರ್ಛನೆಗಳೂ ಇತ್ಯಾದಿಗಳು ತತ್ಸಂಬಂಧವಾದ ಚಿತ್ರ ಗಳನ್ನು ಒಡಮೂಡಿಸುತ್ತವೆ. ಇಂತಹ ಪ್ರತಿಯೊಂದು ಚಿತ್ರವೂ ಆ ಒಂದೊಂದು ಗಮಕದ ಭಾವವೆನಿಸು ವುದು. ಈ ಭಾವಗಳು ನಮ್ಮ ಕಿವಿಗೆ ಬೀಳುತ್ತಿದ್ದಂತೆ ಯೇ ನಮ್ಮ ಹೃದಯವನ್ನು ಪ್ರವೇಶಿಸಿ ತತ್ಸಂಬಂಧ ವಾದ ವೇದನೆಯನ್ನುಂಟುಮಾಡುವುವು. ಆ ವೇದ ನೆಯ ಅರಿವು ನಮಗುಂಟಾಗಿ ನಾವು ಒಂದು ಬಗೆಯ ಆನಂದಾನುಭವವನ್ನು ಪಡೆಯುತ್ತೇವೆ. (ಇದನ್ನು ರಸಾನುಭವವೆನ್ನಲಾಗದು—ಏಕೆಂದರೆ ಅದು ಯಾವ ರಸಕ್ಕೆ ಸಂಬಂಧಿಸಿದ ವೇದನೆ ಎಂಬುದನ್ನು ನಾವು ಒಂದು ಸಾಹಿತ್ಯ ಸನ್ನಿವೇಶದ ಸಹಾಯವಿಲ್ಲದೆ ನಿರ್ದಿಷ್ಟ ವಾಗಿ ತಿಳಿಯಲಾರೆವಾದ್ದರಿಂದ) ಆಂತೂ ಹೀಗೆ ಒಟ್ಟಿ ನಲ್ಲಿ ನಮಗಾಗುವ ಈ ಆನಂದಾನುಭವದಲ್ಲಿ ಎಲ್ಲಾ ರಸಗಳೂ ಸಂಗಮಿಸಿದ್ದು ಅದು ಒಂದು ದಿವ್ಯವಾದ ರಸರಸಾಯನವಾಗಿರುವುದರಿಂದ ಆ ಒಂದು ಗಮಕದ ಭಾವಕ್ಕೆ ಸಂಬಂಧಿಸಿದ ರಸಾನುಭವವೂ ನಮಗಾಗಿರು ವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಮೇಲೆ ಹೇಳಿದ ಒಂದು ರಾಗದ ಸ್ವರ ವಿಶೇಷಗಳ ಎಂದರೆ ಗಮಕಗಳ ಭಾವ ಚಿತ್ರಗಳನ್ನು ನಾವು ಚೆನ್ನಾಗಿ ತಿಳಿದು ಮನನ ಮಾಡಲು ಯಾವಾಗಲೂ ಆ ಸ್ವರ ತರಂಗಗಳಿಗೆ ಒಂದು ಸಾಹಿತ್ಯದ ಹಿನ್ನಲೆಯು ಇದ್ದ ಲ್ಲದೆ ಆ ರಾಗದ ಭಾವ ಚಿತ್ರಗಳಿಗೆ ಹೆಚ್ಚು ಪ್ರಾಶಸ್ತ್ಯ ಬರಲಾರದು. ಆಗ ಆ ಚಿತ್ರಗಳ ಅರಿವು ನಮಗೆ ಮಸಕುಮಸಕಾಗಿ ಕಾಣಿಸುವುದು. ಅವುಗಳ ಪರಿ ಣಾಮವೇನೋ ನಮ್ಮ ಹೃದಯದಲ್ಲುಂಟಾಗಿ ಒಂದು ಬಗೆಯ ಆನಂದಾನುಭವವಾದರೂ, ಆ ಗಾನಶ್ರವಣ ಸುಖವು ಏಕೆ, ಏತರಿಂದ, ಹೇಗೆ, ಎಲ್ಲಿ ಮತ್ತು ಎಷ್ಟರ ಮಟ್ಟಿಗೆ ಆಯಿತೆಂಬುದನ್ನು ನಾವು ಹೇಳಲಾರದಂತಾ ಗುವೆವು. ಅದು ಒಂದು ದೃಷ್ಟಿಯಿಂದ ಮೂಕನೊ ಬ್ಬನು ಅನುಭವಿಸಿದ ಸಂತೋಷದ ತೆರನಾಗುವುದು. ಅದಕ್ಕಾಗಿಯೇ ಸಾಹಿತ್ಯವಿಲ್ಲದ ಸಂಗೀತವು ಎಷ್ಟೇ ಮನೋಹರವಾಗಿದ್ದರೂ ಒಂದು ಗೊತ್ತಾದ ಫಲ, ಪರಿ ಣಾಮ, ಸಂತೋಷ, ತೃಪ್ತಿಗಳನ್ನು ಕೊಡಲಾರದೆಂದೂ ಒಂದು ನಿರ್ದಿಷ್ಟವಾದ ಗುರಿಯನ್ನು ಮುಟ್ಟಲಾರ ದೆಂದೂ ಮಹಾನುಭಾವರು ಬಹಳ ಹಿಂದಿನಿಂದಲೇ ಅಭಿಪ್ರಾಯಪಟ್ಟಿರುವರೆಂಬುದು ನಮಗೆ ತಿಳಿದ ಸಂಗತಿ ಯಾಗಿದೆ.

ಪದಗಳು ಮತ್ತು ಸ್ವರಗಳು

ಇನ್ನು ಪದ ಮತ್ತು ಸ್ವರಗಳ ಲಕ್ಷಣವನ್ನು ಲಕ್ಷಿ ಸೋಣ. ನಾವು ಆಡಿ, ಎಂದರೆ ಉಚ್ಚರಿಸಿ (ಅಭಿ ನಯವೂ ಸೇರಬಹುದು; ಆದರೆ ಅದರ ಪ್ರಸ್ತಾವ ಇಲ್ಲಿ ಬೇಡ) ತೋರಿಸಬೇಕಾದುದು ಮಾತು; ಹಾಡಿ ತೋರಿ ಸಬೇಕಾದುದು ಮಾತು ಮತ್ತು ಧ್ವನಿ ಮಾಡಿ ತೋರಿಸ ಬೇಕಾದುದೂ ಮಾತು. ಇದಕ್ಕಾಗಿಯೇ ವಚನ, ಪದ ಶಬ್ದ ಎಂಬ ಹೆಸರುಗಳು ರೂಢಿಯಲ್ಲಿ ಬಂದಿವೆ. ಇದ ರಂತೆಯೇ ಒಂದು ರಾಗದ ಸ್ವರವು ಹಾಡಿ ತೋರಿಸ ಬೇಕಾದುದೂ ನಾದ ನಿರ್ದಿಷ್ಟಮಾಡಿ ತೋರಿಸಬೇಕಾ ದುದೂ ಆಗಿದೆ. ಆದ್ದರಿಂದ ಪದಗಳನ್ನು ಸುಮ್ಮನೆ ಉಚ್ಚರಿಸುವ ಬದಲು ಅವುಗಳ ನಡೆಯನ್ನು ಎಂದರೆ ರಸೋದ್ಬೋಧಕವಾದ ಧ್ವನಿಯನ್ನು ಸರಿಹೋಲುವ, ಅನುಸರಿಸಿದ, ವ್ಯಕ್ತಪಡಿಸಬಲ್ಲ, ಸ್ಥಿರೀಕರಿಸುವ ಮತ್ತು

ಪುಷ್ಟೀಕರಿಸಬಲ್ಲ ಸ್ವರಮೇಳಗಳನ್ನು ಅವುಗಳೊಡನೆ ಸಮನ್ವಯಗೊಳಿಸಿ ಹಾಡುವುದು ಈ ಗಮಕ ಕಲೆಯ ಒಂದು ವೈಶಿಷ್ಟ್ಯವೆನ್ನಬಹುದು.

ಪದಗಳಲ್ಲಿರುವ ಹ್ರಸ್ವ, ದೀರ್ಘಸ್ವರಗಳೂ, ಅಲ್ಪಪ್ರಾಣ ಮಹಾಪ್ರಾಣ ಅನುನಾಸಿಕಾಕ್ಷರಗಳೂ, ಸಜಾತೀಯ ವಿಜಾತೀಯ ಒತ್ತಕ್ಷರಗಳೂ, ನಿಯಮಬದ್ಧವಾದ ಮತ್ತು ಸ್ಪಷ್ಟವಾದ ಉಚ್ಚಾರಣೆ ಮಾತ್ರದಿಂದಲೇ ಆ ಪದಗಳ ಭಾವಚಿತ್ರಗಳನ್ನು ತತ್‌ಕ್ಷಣದಲ್ಲಿ ರಚನೆ ಮಾಡಿಕೊಡುವ ಸಾಮರ್ಥ್ಯ ಉಳ್ಳವುಗಳೆಂದ ಮೇಲೆ ಆ ಪದಗಳ ಧ್ವನಿ ವಿಶೇಷಕ್ಕೆ ಈ ಸ್ವರಗಳ ನಾದ ವಿಶೇಷವನ್ನು ಎರಕಗೊಳಿಸಿ ಹಾಡಿದರೆ, ಭಾವಸ್ಫೂರ್ತಿಯಾಗಿ ತತ್ಸಂಬಂಧವಾದ ರಸತಲ್ಲೀನತೆ (ಭಾವಸಮಾಧಿ)ಯುಂಟಾಗಿ ನಮ್ಮ ಮನಸ್ಸಿಗೆ ಅಪರಿಮಿತವಾದ ಮತ್ತು ವರ್ಣಿಸಲಾರದ ಆನಂದಾನುಭವವಾಗುವುದರಲ್ಲಿ ಆಶ್ಚರ್ಯವೇನಿದೆ?

ರಾಗ ಸಮನ್ವಯದ ಹಿರಿಮೆ

ಇದರ ವಿಷಯವಾಗಿ ಒಟ್ಟಿನಲ್ಲಿ ನಾವು ಹೇಳಬಯಸುವುದೇನೆಂದರೆ ಪದ್ಯಗಳನ್ನು ಹಾಡಲು ರಾಗಗಳನ್ನು ಬಳಸಿಕೊಳ್ಳುವುದು ಕಾವ್ಯಕ್ಕೆ ಒಂದು ಸಹಜವಾದ ಅಲಂಕಾರ ಮಾಡಿದಂತೆನ್ನಬಹುದು. ನಾವು ನಿಜವಾಗಿಯೂ ನಿರೀಕ್ಷಿಸಿದಲ್ಲಿ, ಕಾವ್ಯಗಳಲ್ಲಿ ನಿಶ್ಚೇಷ್ಟಿತವಾಗಿ ನಿದ್ರಿಸುತ್ತಿರುವ ಈ ಶಬ್ದ ರಾಶಿಗಳನ್ನು ಎಚ್ಚರಗೊಳಿಸುವಲ್ಲಿ ರಾಗಗಳ ಸ್ವರ ಮೇಳಗಳ ಸಮನ್ವಯಕ್ರಮದ ಗಾಯನದಿಂದ ಅಲ್ಲಿ ಒಂದು ಬಗೆಯ ವಿದ್ಯುತ್ಸಂಚಾರವಾದಂತಾಗಿ ಆ ಶಬ್ದಗಳೆಲ್ಲವೂ ಸಚೇತನವಾಗಿಬಿಡುವುವು; ಮತ್ತು ನಮ್ಮ ಮುಂದೆ ಪ್ರತ್ಯಕ್ಷವಾಗಿ ಆ ಪದಗಳು ತಮ್ಮ ತಮ್ಮ ಕಾರ್ಯಭಾಗವನ್ನು ಲವಲವಿಕೆಯಿಂದ ಮಾಡಿ ನಮ್ಮ ಮನಸ್ಸಂತೋಷ ಗೈಯುತ್ತಿರುವಂತೆ ತೋರುವುದು ನಮ್ಮ ಹೃದಯ ಗೋಚರವಾಗದಿರದು.

ವಿವಿಧ ರಾಗಗಳ ಬಳಕೆ

ಗಮಕ ಕಲೆಯ ಇನ್ನೊಂದು ಹಿರಿಮೆಯೆಂದರೆ ಕಾವ್ಯದ ಕಥಾವಸ್ತು ವ್ಯಕ್ತಿ ವಿಷಯಗಳ ವರ್ಣನೆಯ ಆಯಾ ಸಮಯಗಳನ್ನನುಸರಿಸಿ ಸಂಪ್ರದಾಯಬದ್ಧವಾಗಿಯೂ ಸ್ವಾನುಭವದಿಂದಲೂ ಸ್ವಪ್ರತಿಭೆಯಿಂದಲೂ ಅಲ್ಲಲ್ಲಿನ ಕಥಾ ಸಂದರ್ಭಗಳಿಗೆ ಸರಿಹೊಂದಬಹುದಾದ ಬೇರೆ ಬೇರೆ ರಾಗಗಳನ್ನು ಜೋಡಿಸಿ ಪದ್ಯಗಳನ್ನು ಹಾಡುವುದು. ಇದು ಅತ್ಯಂತ ಕಷ್ಟವಾದ ಕೆಲಸವೇ ಸರಿ. ಏಕೆಂದರೆ ಪದ್ಯಗಳ ರಸನಿರ್ಣಯವನ್ನು ಅಲ್ಲಿನ ಸನ್ನಿವೇಶದ ಬಹುಮತದ ಅಭಿಪ್ರಾಯದಿಂದ ಸುಲಭವಾಗಿ ನಿರ್ಧರಿಸಬಹುದು. ಆದರೆ ರಾಗಗಳ ರಸನಿರ್ಣಯವನ್ನು ಮಾಡುವುದು ಹೇಗೆಂಬ ಒಂದು ದೊಡ್ಡ ಪ್ರಶ್ನೆಯೇಳುವುದು. ರಾಗಗಳ ರಸನಿರ್ಣಯದ ವಿಚಾರದಲ್ಲಿ ಬಹಳ ಕಾಲದ ಹಿಂದೆ ನಮ್ಮ ಹಿರಿಯರು ಕೆಲವು ರಾಗಗಳ ಹೆಸರನ್ನು ಮಾತ್ರ ತಿಳಿಸಿ ಆ ಒಂದೊಂದು ರಾಗಗಳು ಒಂದೊಂದು ರಸಕ್ಕೆ ಪ್ರಧಾನವೆಂದು ತಿಳಿಸಿದ್ದಾರೆ; ಮತ್ತು ಯಾವ ಹೊತ್ತಿನಲ್ಲಿ ಯಾವ ರಾಗವನ್ನು ಹಾಡಬೇಕೆಂಬ ವಿಚಾರದಲ್ಲಿಯೂ ಸಹ ಮೇಲೆ ಹೇಳಿದಂತೆ ಒಂದು ಪಟ್ಟಿಯನ್ನು ಕೊಟ್ಟು ಆ ರಾಗಗಳಿಗೆ ಮಾತ್ರ ಅವುಗಳನ್ನು ಹಾಡುವ ಕಾಲನಿರ್ಣಯವನ್ನು ಹೇಳಿದ್ದಾರೆ. ಮತ್ತೊಂದೆಡೆಯಲ್ಲಿ ಒಂದೊಂದು ಸ್ವರವು ಒಂದೊಂದು ರಸಪ್ರಧಾನವಾದುದೆಂದು ಸೂಕ್ಷ್ಮವಾಗಿ ಪ್ರಸ್ತಾವಿಸಿದ್ದಾರೆ.

ಇಷ್ಟಾದರೂ ಈ ಸಂಗತಿಗಳನ್ನು ಸೂಕ್ಷ್ಮವಾಗಿ ಒಳಹೊಕ್ಕು ನೋಡಿದಲ್ಲಿ ಈ ವಿಚಾರಕ್ಕೆ ಸಾಕಾದಷ್ಟು ಮುಂದುವರಿದ ವ್ಯವಸಾಯವು ಆ ಒಂದು ಕಾಲದಿಂದ ಇದುವರೆಗೆ ನಡೆದಿರುವುದಿಲ್ಲವೆಂದು ಹೇಳದೆ ಗತ್ಯಂತರವಿಲ್ಲ. ಏಕೆಂದರೆ ಸಂಗೀತಶಾಸ್ತ್ರದ ಮತ್ತು ಶಿಕ್ಷಣದ ಪದ್ಧತಿಯನ್ನು ಪುನರ್ವ್ಯವಸ್ಥೆಗೊಳಿಸಿದ ಶ್ರೀ ಪುರಂದರದಾಸರ ಕಾಲದಿಂದ, ಒಟ್ಟು ಜನಕರಾಗಗಳ ಸಂಖ್ಯೆ ಎಪ್ಪತ್ತೆರಡು ಎಂದು ನಿರ್ಣೀತವಾಗಿ ಆಯಾ ಜನಕ ರಾಗಗಳಿಂದ ಶಾಸ್ತ್ರೀಯವಾಗಿ ಗಣನೆಗೆ ಬರಬಹುದಾದ ಮತ್ತು ರೂಢಿಯಲ್ಲಿ ಹಿಂದಿನಿಂದಲೂ ಸೇರಿ ಬಂದ, ಜನ್ಯರಾಗಗಳ ಪಟ್ಟಿಯೊಂದು ತಯಾರಾದ ಮೇಲೆ, ಇದನ್ನನುಸರಿಸಿ, ಅಂದಿನಿಂದ ಇಂದಿನವರೆಗೆ, ರಾಗಗಳ ರಸನಿರ್ಣಯದ ವಿಚಾರದಲ್ಲಾಗಲೀ ರಾಗಗಳ ಕಾಲ ನಿರ್ಣಯದ ವಿಷಯದಲ್ಲಾಗಲೀ ನಿರ್ದಿಷ್ಟವಾದ ನಿರ್ಣಯಗಳು ಹೊರಬೀಳಲಿಲ್ಲವೆಂದು ಅತ್ಯಂತ ವ್ಯಸನದಿಂದ ಹೇಳಬೇಕಾಗಿದೆ. (ಈ ಮಹತ್ಸೇವೆಯೊಂದನ್ನು ಸಹೃದಯರೂ, ರಸಿಕರೂ, ಸಾಹಿತ್ಯಾನುರಾಗಿಗಳೂ ಆದ ಸಂಗೀತ ಕಲಾಕೋವಿದರು ನಮ್ಮ ನಾಡಿನ ಜನತೆಗೆ ಸಲ್ಲಿಸಿ ಕೀರ್ತಿಭಾಜನರಾಗ

ಬೇಕೆಂದು ಈ ಸಂದರ್ಭದಲ್ಲಿ ಲೇಖಕನು ಪ್ರಾರ್ಥಿಸುತ್ತಾನೆ)—ಇದಕ್ಕೆ ಹಲವು ಕಾರಣಗಳೂ ಇಲ್ಲದೆ ಇಲ್ಲ. ಅವುಗಳಲ್ಲಿ ರಸಿಕ ಜನರ ಅತಿ ಮುಖ್ಯವಾದ ವಾದವೆಂದರೆ—ಯಾವುದೇ ಒಂದು ಸಂಪೂರ್ಣ ರಾಗವು (ಸಪ್ತಸ್ವರ ಸಹಿತವಾದುದು) ಎಲ್ಲಾ ರಸಗಳನ್ನೂ ಪ್ರತಿಪಾದಿಸಬಲ್ಲ ಶಕ್ತಿಯುಳ್ಳದ್ದು ಎಂದು. ಈ ವಾದದಲ್ಲಿಯೂ ಸತ್ಯಾಂಶವಿದೆ. ಹೇಗೆಂದರೆ, ಯಾವುದೇ ಒಂದು ಜನ್ಯರಾಗದ (ಜನಕ ರಾಗಕ್ಕಿಂತ ಚಿಕ್ಕದು) ಸ್ವರಗಳ ವಿನ್ಯಾಸ ಕೌಶಲ್ಯದ ವೈವಿಧ್ಯದಲ್ಲೇ ಹೇಳುವ ಆ ಒಂದು 'ರೀತಿ'ಯಲ್ಲಿ (ಹಾಡುವವನ 'ಪ್ರಾಣ' ಶಕ್ತಿಯನನುಸರಿಸಿ ಎಂದರೆ ಸ್ವರಸಾಧಕ ಬಲದಿಂದ ಉಸಿರನ್ನು ಪದಗಳ ಉಚ್ಚಾರಣೆಗೆ ಸರಿಯಾಗಿ ಉಪಯೋಗಿಸಿಕೊಳ್ಳುವ ಜಾಣ್ಮೆ ಇತ್ಯಾದಿ) ಎಲ್ಲಾ ರಸಗಳೂ ಬರುವಂತೆ ಮಾಡಬಹುದು ಎಂದು ಅನೇಕ ಸಂದರ್ಭಗಳಲ್ಲಿ ರಸಿಕ ಜನರಿಗೆ ಅನುಭವ ವೇದ್ಯವಾಗಿರುವಾಗ, ಒಂದು ಜನಕ ರಾಗವನ್ನೇ ಬಳಸಿಕೊಂಡಲ್ಲಿ ಆ ರಾಗದ ಕ್ಷೇತ್ರವು ಜನ್ಯರಾಗಕ್ಕಿಂತ ಬಹಳ ವಿಸ್ತಾರವಾದುದರಿಂದ, ಅದರ ಸಪ್ತಸ್ವರಗಳ ವಿವಿಧವಾದ ಮೇಳಗಳ ಸಹಾಯದಿಂದ ಪದ-ಪದ್ಯಗಳನ್ನು ಹಾಡಿ ಎಲ್ಲಾ ರಸಗಳ ಅನುಭವವೂ ಉಂಟಾಗುವಂತೆ ಮಾಡುವುದು ನಿಜವಾಗಿಯೂ ಸಾಧ್ಯವೆಂದ ಹಾಗಾಯಿತಲ್ಲವೆ? ಇದೇ ಅಲ್ಲದೆ ಹಲವು ರಾಗಗಳಿಗೆ ಕೊಟ್ಟಿರುವ ಹೆಸರುಗಳೂ ಅವುಗಳು ಸೂಚಿಸುವ ಅರ್ಥ ವಿಶೇಷವೂ ಆಯಾ ರಸಕ್ಕೆ ಸ್ವಲ್ಪ ಮಟ್ಟಿಗೆ ಪರಿಪೋಷಕವಾಗಿವೆ ಎಂದೂ ಹೇಳಬಹುದು. (ಸೂಚನೆ: ಇದು ಎಲ್ಲಾ ರಾಗಗಳಿಗೂ ಸಮನ್ವಯಿಸುವುದಿಲ್ಲ) ಹಿಂದಿನಿಂದ ನಮ್ಮ ನಾಡಿನಲ್ಲಿ ಆಗಿ ಹೋದ ಅನೇಕ ಭಗವದ್ಭಕ್ತರುಗಳು ಗಾನರೂಪದಲ್ಲಿ ಪರಮಾತ್ಮನನ್ನು ಸ್ತುತಿಸಲು ಹಾಡಿದ ಅಸಂಖ್ಯಾತ ಕೃತಿಕೀರ್ತನೆಗಳೂ ಅವುಗಳಲ್ಲಿ ವರ್ಣಿಸಲ್ಪಟ್ಟ ಸಾಹಿತ್ಯ ಸನ್ನಿವೇಶಗಳೂ, ಅವುಗಳಿಗೆ ತಕ್ಕುವೆಂದೇ ಭಾವಿಸಿ ಬಳಸಿದ ರಾಗಗಳೂ ಹಲವು, ಅವುಗಳ ರಸನಿರ್ಣಯಕ್ಕೆ ತಕ್ಕಮಟ್ಟಿಗೆ ಸಹಕಾರಿಯಾದುವೆನ್ನಬಹುದು.

ಹೀಗೆ ಕಾವ್ಯ ಗಾಯನ ಕಲೆಯಲ್ಲಿ ಅಲ್ಲಲ್ಲಿನ ಕಥಾ ಸಂದರ್ಭಕ್ಕನುಗುಣವಾಗಿ ವಿವಿಧ ರಾಗಗಳ ಬಳಸಾಣಿಕೆಯ ಪದ್ಧತಿಯು ಹಿಂದಿನಿಂದಲೂ ಬಂದಿತೆನ್ನಬಹುದು. ಇದನ್ನು ಯಶಸ್ವಿಗೊಳಿಸಲು ಇಂದು ಗಮಕಿಗಳಿಗೆ ಇರುವ ಸಾಧನಗಳು ಮೇಲೆ ವಿವರಿಸಿದಂತೆ ಸಂಕ್ಷೇಪರೂಪವಾಗಿ ಹೀಗಿರುತ್ತವೆ. ಅವುಗಳು ಯಾವುವೆಂದರೆ:–ಹಿಂದಿನಿಂದಲೂ ಸಂಗೀತ ಶಾಸ್ತ್ರದಲ್ಲಿ ಹೇಳಲ್ಪಟ್ಟ ಅಭಿಪ್ರಾಯಗಳು; ಗಮಕಿಗಳು, ಸಂಗೀತಗಾರರು, ಕೀರ್ತನಗಾರರು ಮತ್ತು ನಟನ ಕಲಾಕೋವಿದರೇ ಮೊದಲಾದ ರಸಿಕ ಜನರ ಅನುಭವ ಗಮ್ಯವಾಗಿ ಬಂದಿರತಕ್ಕ ರಾಗರಸ ನಿರ್ಣಾಯಕವಾದ ಅಭಿಪ್ರಾಯಗಳು.

ಈ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅವುಗಳ ಸತ್ಯತೆಯನ್ನು ಮನಗಂಡು ಅವರವರ ಸಾಮರ್ಥ್ಯವನ್ನನುಸರಿಸಿ ಈ ಒಂದು ಕಲೆಯ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡು ಬರುವುದು ಗಮಕಿಗಳೆಲ್ಲರ ಕರ್ತವ್ಯವಾಗಿದೆ.

ಕಲೆಯ ವ್ಯಾಪ್ತಿ

ಇದರ ಕ್ಷೇತ್ರ ವಿಸ್ತಾರವು ಬಹಳ ದೊಡ್ಡದು. ಮಹಾ ಕವಿಗಳ ಪ್ರಸಿದ್ಧವಾದ ಎಲ್ಲಾ ಕಾವ್ಯಗಳನ್ನೂ ಗಾಯನಮಾಡಲು ಸಾಧ್ಯವುಂಟೆಂಬ ತತ್ವವನ್ನು ಇದು ಸಾರುವುದು. ಎಲ್ಲೋ ಹಲವು ಕಡೆಗಳಲ್ಲಿ ಹೃದಯ ಸ್ಪರ್ಶಿಯಾಗದ ವಿಷಯವಿಸ್ತಾರ, ತತ್ವಬೋಧೆ ಮೊದಲಾದವುಗಳನ್ನು ತ್ಯಜಿಸಿದಲ್ಲದೆ ವಿಧಿಯಿಲ್ಲ. ಈ ಭಾಗಗಳನ್ನು ಬಿಟ್ಟರೆ ಒಟ್ಟಿನಲ್ಲಿ, ಸುಂದರ ಪದಬಂಧಗಳಿಂದೊಡಗೂಡಿದ, ಉತ್ತಮ ವ್ಯಕ್ತಿ, ವಸ್ತು ಮತ್ತು ವಿಷಯಗಳನ್ನು ಕುರಿತು ಬರೆದ (ಕನ್ನಡದ) ಕವಿತೆಗಳೆಲ್ಲವೂ ಗಮಕಕ್ಕೆ ಒಗ್ಗಿ ಬರುವುವು.

ಗಮಕಿಯ ಸ್ಥಾನ

ಗಮಕಿಯು ಸಂಗೀತಗಾರನಲ್ಲ. ಆದರೆ ರಾಗಭಾಗದ ಕಡೆಗೆ ಅವನ ಸಂಪೂರ್ಣ ಲಕ್ಷ್ಯವಿದ್ದೇ ಇರುವುದು. ಹಾಗೆಯೇ ಸಾಹಿತ್ಯದ ಕಡೆಗೂ ಅವನ ಮನಸ್ಸು ವಾಲುವುದು ಮತ್ತು ಸೋಲುವುದು. ಕವಿಹೃದಯ ಚೋರನೆಂದೆನಿಸಿದ ಗಮಕಿಯು, ಕವಿಗೆ ನಿಜವಾಗಿಯೂ ಕೃತಜ್ಞನಾಗಿರುತ್ತಾನೆ. ಗಮಕಿಯ ಕಲಾಸೇವೆಯಿಂದ ಕವಿಯ ಕಾವ್ಯವು ಜಗತ್ತಿನಲ್ಲಿ ಧನ್ಯತೆಯನ್ನೂ ಮಾನ್ಯತೆಯನ್ನೂ ಪಡೆಯುವುದು. ಈ ದೃಷ್ಟಿಯಲ್ಲಿ ಗಮಕಿಯ ಸ್ಥಾನವು ಕವಿಗಿಂತಲೂ ಮಿಗಿಲು. ಆದಾಗ್ಯೂ ಗಮಕಿಯು ಕವಿಗೂ ಸಂಗೀತಗಾರನಿಗೂ ಮಧ್ಯವರ್ತಿ ಎಂದು ನಾವು ಧಾರಾಳವಾಗಿ ಹೇಳಬಹುದು. ಸಾಹಿತ್ಯಕ್ಷೇತ್ರದಲ್ಲಿ ಇವನ ಸೇವೆಯು ಚಿರಸ್ಮರಣೀಯವಾದುದು.

ಕರ್ಣಾಟಕದ ವಾಸ್ತುಶಿಲ್ಪ-ರೂಪರೇಖೆ

ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ. ಎ.

ಭಾರತವರ್ಷದ ಸಾಂಸ್ಕೃತಿಕ ಉನ್ನತಿಯು ಅದರ ವಿವಿಧ ಅಂಗಗಳ ಅನೂಚಾನವಾದ ಪೋಷಣೆಯಿಂದ ಜಗತ್ತಿನ ಇತಿಹಾಸದಲ್ಲಿ ಒಳ್ಳೆಯ ಮೇಲ್ಮೆಯಿಂದ ಸರ್ವರಿಂದ ಮನ್ನಣೆಯನ್ನು ಪಡೆದಿದೆ. ಅದಕ್ಕೆ ಘಟಕ—ರಾಷ್ಟ್ರಗಳಾಗಿದ್ದ ಕರ್ನಾಟಕ, ಆಂಧ್ರ, ದ್ರಾವಿಡ ಮತ್ತು ಗೂರ್ಜರ ಮಾಳವ ವಿದರ್ಭ ಮುಂತಾದ ದೇಶಗಳ ಜನರ ವಿಶಿಷ್ಟ ಕೃತಿಗಳು ಕಾರಣವಾಗಿವೆ. ಅವೆಲ್ಲವುಗಳಲ್ಲಿ ಕರ್ನಾಟಕದ ವಿಶಿಷ್ಟ ಪರಾಕ್ರಮಗಳು ಉಳಿದ ದೇಶಗಳಿಗಿಂತ ಮೊದಲಿನಿಂದಲೂ ಮೇಲ್ತರಗತಿಯುವಿದ್ದು ಹಿಂದುಸ್ಥಾನದ ಕೀರ್ತಿಗೆ ವಿಪುಲವಾಗಿ ಕಾರಣಗಳಾಗಿವೆ. ರಾಜನೀತಿಯಲ್ಲಿಯೂ ಸಾಹಿತ್ಯ ಸಂಗೀತ ವಿದ್ಯೆಗಳಲ್ಲಿಯೂ ನೃತ್ಯ, ಶಿಲ್ಪ, ಚಿತ್ರಾದಿ ಕಲೆಗಳಲ್ಲಿಯೂ, ಆಧ್ಯಾತ್ಮಿಕ ವೇದಾಂತ ವಿಚಾರದಲ್ಲಿಯೂ ಅರ್ಥಶಾಸ್ತ್ರ—ರಾಜ್ಯ ಪದ್ಧತಿಗಳ ಪ್ರಯೋಗದಲ್ಲಿಯೂ ಕರ್ಣಾಟಕದ ಚರಿತ್ರವು ಆದರ್ಶಪ್ರಾಯವಾಗಿದೆ. ಪ್ರಕೃತ, ವಾಸ್ತುಶಿಲ್ಪದಲ್ಲಿ ಕರ್ನಾಟಕದ ಪ್ರಭಾವವನ್ನು ಐತಿಹಾಸಿಕ ವಿಮರ್ಶೆಯಿಂದ ವಿವರಿಸುವುದು ಈ ಲೇಖದ ಮುಖ್ಯ ಉದ್ದೇಶವಾಗಿದೆ. ಸಂಗೀತದಲ್ಲಿ ಕರ್ನಾಟಕ ಸಂಗೀತವು ಹೆಸರಾಂತ ಪದ್ಧತಿಯಾಗಿದ್ದಂತೆ ವಾಸ್ತುಶಿಲ್ಪದಲ್ಲಿಯೂ ಕರ್ನಾಟಕ ವಾಸ್ತುಶಿಲ್ಪವು ಭಾರತದೇಶದ ಕೀರ್ತಿಯನ್ನು ಬೆಳಗಿದೆ. ಈ ವಿಧಾನವು ಕೆಳಗಿನ ಪ್ರಾಚೀನ ದೇವ ಮಂದಿರಗಳ ನಿರ್ಮಾಣಶೈಲಿಗಳ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.

ಶೈಲಿಗಳ ವಿವೇಚನೆಯ ಪೂರ್ವದಲ್ಲಿ ಕರ್ನಾಟಕದ ಭೌಗೋಲಿಕ ಸ್ಥಿತಿಯನ್ನು ತಿಳಿದುಕೊಳ್ಳುವುದು ಅವಶ್ಯವಿದೆ. ಇದರಿಂದ ಕರ್ನಾಟಕದ ಕಲಾಪ್ರಪಂಚದ ಅಭಿವೃದ್ಧಿಗೆ ಅದರ ಸ್ಥಾನಮಾನಗಳು ಹೇಗೆ ಸಹಕಾರಿಗಳಾಗಿರುವವೆಂಬುದು ಸ್ಪಷ್ಟವಾಗುತ್ತದೆ. ಉತ್ತರದಲ್ಲಿ ವಿಂಧ್ಯಾದ್ರಿ, ದಕ್ಷಿಣ-ಪಶ್ಚಿಮ-ಪೂರ್ವ ದಿಕ್ಕುಗಳಲ್ಲಿ ಸಮುದ್ರವೇ ಮೇರೆಯಾಗಿದ್ದ ಭೂಭಾಗದ ಮಧ್ಯದಲ್ಲಿ ಕರ್ನಾಟಕವು ನಿಂತಿದೆ. ಭಾಷಾದೃಷ್ಟಿಯಿಂದ, ಉತ್ತರದಲ್ಲಿ ಮರಾಠಿ, ಪೂರ್ವದಲ್ಲಿ ತೆಲುಗು, ದಕ್ಷಿಣದಲ್ಲಿ ತಮಿಳು,—ಮಲೆಯಾಳಗಳು ಕನ್ನಡ ಭಾಷೆಯ ನೆರೆಯ ಭಾಷೆಗಳಾಗಿವೆ. ಇದಲ್ಲದೆ ಕೆಳಗೆ ವಿವರಿಸಿದಂತೆ ಭೂಗರ್ಭಶಾಸ್ತ್ರದ ದೃಷ್ಟಿಯಿಂದಲೂ ಸೃಷ್ಟಿಸೌಂದರ್ಯದಲ್ಲಿಯೂ ಕರ್ನಾಟಕಕ್ಕೆ ಅನ್ಯಾದೃಶವಾದ ವೈಶಿಷ್ಟ್ಯವಿರುವುದು. ಇವೆಲ್ಲ ಕಾರಣಗಳಿಂದ ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆಗಳಲ್ಲಿಯೂ ಇನ್ನಿತರ ಲೌಕಿಕ ಆಧ್ಯಾತ್ಮಿಕ ವೈಭವದಲ್ಲಿಯೂ ಕನ್ನಡದೇಶದ ಜನತೆಯು ಪ್ರಾಚೀನಕಾಲದಿಂದಲೂ ಅಜರಾಮರವಾದ ಕೀರ್ತಿಯನ್ನು ಪಡೆದಿದೆ. ಈಗಲೂ ತಮ್ಮ ದಿವ್ಯ ಚರಿತೆಯನ್ನು ತಿಳಿಸುವ ಭವ್ಯವಾದ ಕಲಾವಶೇಷಗಳೂ ಪರದೇಶದ ಪ್ರಯಾಣಿಕರು ಮುಕ್ತಕಂಠದಿಂದ ಹೊಗಳಿದ ಮಾತುಗಳೂ ಈ ವಿಷಯದಲ್ಲಿ ನಿಸ್ಸಂಶಯದ ಸಾಕ್ಷ್ಯಗಳಾಗಿವೆ.

ಹಿಂದುಸ್ಥಾನದ ಭೂಪ್ರದೇಶವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು. (೧) ದಕ್ಷಿಣಾಪಥದ ಬೈಲು (೨) ಹಿಮಾಲಯ ಪರ್ವತಾವಳಿ (೩) ವಿಂಧ್ಯ-ಹಿಮಾಲಯಗಳ ನಡುವಿನ ಬೈಲು, (೪) ದ್ರಾವಿಡ-ದೇಶದ ಬೈಲು. ಇವುಗಳಲ್ಲಿ ದಕ್ಷಿಣಾಪಥವು ಅತ್ಯಂತ ಪ್ರಾಚೀನವಾದ ಮತ್ತು ನಿಷ್ಕಂಪವಾದ ತಳದ ಮೇಲೆ ನಿಂತಿರುವುದು. ಇಲ್ಲಿ ಭೂಕಂಪಗಳಿಗೆ ಅವಕಾಶವಿಲ್ಲ. ಭೂಗರ್ಭ ಶಾಸ್ತ್ರಜ್ಞರು, ದಕ್ಷಿಣಾಪಥ-ದ್ರಾವಿಡ ದೇಶಗಳು ಭೂಮಿಯ ಉತ್ಪತ್ತಿಯಲ್ಲಿ ಮೊದಲು ಪ್ರಳಯಜಲದಿಂದ ಬೈಲಿಗೆ ಬಿದ್ದವೆಂದು ಹೇಳುತ್ತಾರೆ. ಇದರಿಂದ ದಕ್ಷಿಣಾಪಥ (ಕರ್ನಾಟಕ)ದಲ್ಲಿ ಪ್ರಾಣಿನಿವಾಸವು ಎಲ್ಲಕ್ಕೂ ಮುಂಚೆ ಆಯಿತೆಂದೂ ತತ್ಪರಿಣಾಮವಾಗಿ ಜನರ ಬುದ್ಧಿಮತ್ತೆಯ ಅವಶೇಷಗಳು ಅತ್ಯಂತ ಪ್ರಾಚೀನಕಾಲದಿಂದಲೂ ಒಂದರ ಮೇಲೊಂದು ಇಲ್ಲಿ ಕೂಡಿ ಬಿದ್ದಿರಬೇಕೆಂದೂ ಊಹಿಸಲು ಅವಕಾಶವುಂಟು. ಈ ಊಹೆಯು ಧಾರವಾಡದ ಕನ್ನಡ ಸಂ

ಶೋಧನ ಸಂಸ್ಥೆಯ ಪ್ರಾಗೈತಿಹಾಸಿಕ ಸನ್ನಿವೇಶಗಳ ಶೋಧನೆಯಿಂದ ತಂದ ಅವಶೇಷಗಳಿಂದ ಬಲಗೊಳ್ಳುತ್ತಲಿದೆ.

ಕರ್ನಾಟಕದ ಸಂಸ್ಕೃತಿಯು ಉಚ್ಚ ಮಟ್ಟಕ್ಕೇರಲು ಅಲ್ಲಿ ಹರಿದ ದೊಡ್ಡ ದೊಡ್ಡ ನದಿಗಳೂ, ನೀಲಗಿರಿ ದಕ್ಷಿಣ-ಉತ್ತರ ಕನ್ನಡ ಜಿಲ್ಲೆಗಳ ಸುಂದರ ವನಗಳೂ, ಗೇರಸೊಪ್ಪೆ, ಗೋಕಾವಿ ಕಾಯಕಾರಾ (ನೀಲಗಿರಿ) ಮೊದಲಾದ ಧಬೆಧಬೆಗಳೂ ತಕ್ಕ ಮಟ್ಟಿಗೆ ಕಾರಣಗಳಾಗಿರುತ್ತವೆ. ನದೀ ತೀರದಲ್ಲಿ ಜನರ ಪಂಗಡಗಳು ವಾಸವಾಗಿ ತತ್ವವಿಮರ್ಶೆ, ವ್ಯಾಪಾರ ಉದ್ಯಮಗಳಿಂದ ತಮ್ಮ ಜೀವನದ ಮಟ್ಟವನ್ನು ಮೇಲಕ್ಕೇರಿಸಿದವು. ಕರ್ನಾಟಕದಲ್ಲಿ ಐಹೊಳಿಯು ದಕ್ಷಿಣ ಹಿಂದುಸ್ಥಾನದ ವ್ಯಾಪಾರ ಸಂಘಗಳ ಮುಖ್ಯ ಕೇಂದ್ರವಾಗಿತ್ತು. ಬಹು ಪ್ರಾಚೀನ ಕಾಲದಿಂದಲೂ ಅಂದರೆ ಸುಮಾರು ೬-೭ ಶತಕದಿಂದಲೂ ಅದರ ಚಟುವಟಿಕೆಗಳು ಎಲ್ಲ ಕಡೆಗೆ ಹಬ್ಬಿದ್ದವೆಂದು ಶಾಸನಗಳಿಂದ ತಿಳಿಯಬರುತ್ತದೆ. ಕನ್ನಡ ದೇಶವು ವ್ಯಾಪಾರದ ಪಡುಮೂಲೆಯಾದ್ದರಿಂದ ಅದು ಸಂಪತ್ತಿನ ಆಗರವಾಗಿತ್ತೆಂದು ಧಾರಾಳವಾಗಿ ಹೇಳಬಹುದು.

ಕರ್ನಾಟಕದಲ್ಲಿ ವಾಸ್ತುಶಿಲ್ಪ – ಮೂರ್ತಿಶಿಲ್ಪಗಳಿಗೆ ಬೇಕಾಗುವ ಕಲ್ಲು ವಿಪುಲವಾಗಿ ಸಿಗುತ್ತದೆ. ಇದರ ಉತ್ತರ ಭಾಗದಲ್ಲಿ 'ಟ್ರಾಪ್‌ರಾಕ್' ಇದ್ದು ಪಶ್ಚಿಮದಲ್ಲಿ ಸಚ್ಛಿದ್ರ (Porus) ಶಿಲಾಮಯ ಪರ್ವತಗಳಿರುವವು. ಇದಕ್ಕೆ 'ಧಾರವಾಡ ಶಿಲಾವಿಭಾಗ'ವೆನ್ನುವರು. ಮಧ್ಯದೇಶದಲ್ಲಿ ಕಲಾದಗಿ ವಿಭಾಗವೆಂದು ಪ್ರಸಿದ್ಧವಾದ ಸೈಕತ ಶೈಲಾವಳಿಯು ಹಬ್ಬಿದೆ. ಉಳಿದ ಕಡೆಗೆ ಮೃದುವಾದ ಬೆಣಚ ಕಲ್ಲಿನ ಬಂಡೆಗಳು ವಿಪುಲವಾಗಿರುವವು. ಅಂತು ಕರ್ನಾಟಕದಲ್ಲಿ ಶಿಲ್ಪಕಲೆಗೆ ಬೇಕಾದ ಕಲ್ಲುಗಳು ಹೇರಳವಾಗಿ ಸಿಗುವಂತೆ ಸೃಷ್ಟಿಯು ಕಲಾವಿದನಿಗೆ ಸೌಕರ್ಯವನ್ನು ಒದಗಿಸಿಕೊಟ್ಟಿದೆ.

ಸೃಷ್ಟಿ ಸೌಂದರ್ಯದ ಸೊಬಗು, ನದಿ, ಪ್ರಪಾತ ಮತ್ತು ಜಲಪಾತಗಳ ಶಾಂತ ಮತ್ತು ಉಗ್ರ ಸ್ವರೂಪಗಳು, ಭೌಗೋಲಿಕ ಸನ್ನಿವೇಶಗಳು ವಿವಿಧ ಗುಣಧರ್ಮಗಳ ಕಲ್ಲಿನ ಖಣಿಗಳೂ, ಪರ್ವತಾವಳಿಗಳೂ ಇವೇ ಮೊದಲಾದ ಸಾಮುಗ್ರಿಗಳು ಕರ್ನಾಟಕದ ಕಲಾಪ್ರಪಂಚದ ಬೆಳವಣಿಗೆಗೆ ಉತ್ತೇಜಕ ಸಾಧನಗಳಾಗಿರುವುದರಿಂದ ಸಂಗೀತ, ಸಾಹಿತ್ಯ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆಗಳಲ್ಲಿ ಈ ನಾಡು ಒಳ್ಳೆಯ ಘನತೆಯನ್ನು ಹೊಂದಿದೆ. ಪ್ರಕೃತ ವಾಸ್ತುಶಿಲ್ಪದಲ್ಲಿ ಕರ್ನಾಟಕವು ಸಿದ್ಧಗೊಳಿಸಿದ ಕೃತಿಗಳನ್ನು ಸಂಕ್ಷೇಪವಾಗಿ ಇಲ್ಲಿ ವಿವರಿಸುತ್ತೇವೆ.

ಯಜ್ಞದ ವೇದಿಕೆಗಳಿಂದ ದೇವಾಲಯಗಳನ್ನು ಕಟ್ಟುವ ಪದ್ಧತಿಯು ರೂಢವಾಯಿತೆಂದು ತಜ್ಞರು ಹೇಳುವರು. ಇಟ್ಟಿಗೆಯೇ ಅದರ ಮುಖ್ಯ ಸಾಮುಗ್ರಿ. ಮುಂದೆ ಕಟ್ಟಿಗೆಯು ಮೇಲ್ಕಟ್ಟಡಕ್ಕೆ ಉಪಯೋಗಿಸಲ್ಪಟ್ಟಿತು. ಮಹೇಂಜೋದಾರುವಿನ ನಿವೇಶನಗಳಲ್ಲಿ ಕೆಲವು ದೇವಾಲಯಗಳಿರಬೇಕೆಂದು ಪಂಡಿತರ ಅಭಿಪ್ರಾಯವಿದೆ. ಇದಕ್ಕೂ ಮುಂಚೆ Dolmens (ಕಲ್ಲುಮನೆಗಳು) ಪ್ರಸಿದ್ಧ ಪುರುಷರ ಸ್ಮಾರಕಾಲಯಗಳಾಗಿದ್ದವು. ಬರಬರುತ್ತ ಪರ್ವತಗಳಲ್ಲಿ ಗವಿಗಳನ್ನು ಕೊರೆದು ದೇವ ಮಂದಿರಗಳನ್ನು ಮಾಡಹತ್ತಿದರು.

ಸಾಮಾನ್ಯವಾಗಿ ಮೊದಲು ಕಲ್ಲಿನಕ್ಕಿಂತ ಕಟ್ಟಿಗೆಯು ವಾಸ್ತುನಿರ್ಮಾಣದಲ್ಲಿ ಉಪಯೋಗಿಸಲ್ಪಡುತ್ತಿತ್ತೆಂದು ಕಾರ್ಲಾ, ಕಾಣ್ಹೇರಿ ಬೇಡ್ಸಾ ಮೊದಲಾದ ಗುಹಾಂತ ದೇವಾಲಯಗಳ ಮತ್ತು ಅಮರಾವತಿಯ ಬೌದ್ಧ ಸ್ತೂಪದ ವಿಮರ್ಶೆಯಿಂದ ತಿಳಿಯ ಬರುತ್ತದೆ. ೭ನೆಯ ಶತಮಾನದ ಪಲ್ಲವ ಅರಸನಾದ ೧ನೆಯ ಮಹೇಂದ್ರವರ್ಮನ ಮಂಡಗಪ್ಪತ್ತೂ ಶಿಲಾ ಶಾಸನದಲ್ಲಿ 'ಏತದ ನಿಷ್ಟಕ-ಮದ್ರುಮಮ ಲೋಹಮ ಸೌಧಂ' ಎಂದು ತಾನು ಕಟ್ಟಿಸಿದ ವಿಷ್ಣುಗೃಹವು ಇಟ್ಟಿಗೆ, ಕಟ್ಟಿಗೆ, ಕಬ್ಬಿಣ, ಗಚ್ಚುಗಳಿಲ್ಲದ್ದಾದುದರಿಂದ ಅವನಿಗೆ 'ವಿಚಿತ್ರಚಿತ್ತ'ನೆಂದು ಬಿರುದು ಬಂದಿತೆಂದು ಬರೆದಿದೆ. ಇದರಿಂದ ತಮಿಳು ದೇಶದಲ್ಲಿ ಕಟ್ಟಿಗೆಯ ಬದಲು ಕಲ್ಲನ್ನು ಉಪಯೋಗಿಸಿದ್ದು ೭ನೆಯ ಶತಮಾನದ ನಂತರವೆಂದು ಗೊತ್ತಾಗುತ್ತದೆ. ಕರ್ನಾಟಕ ಮಹಾರಾಷ್ಟ್ರಗಳಲ್ಲಿ (ದಕ್ಷಿಣಾಪಥದಲ್ಲಿ) ಈ ಸಂಪ್ರದಾಯವು ಕ್ರಿ. ಶ. ೨-೩ನೆಯ ಶತಕದಲ್ಲಿಯೇ ರೂಢವಾಗಿತ್ತೆಂದು ಮೇಲ್ಕಂಡ ಗುಹಾ ದೇವಾಲಯಗಳಿಂದ ಊಹಿಸಬಹುದು.

ಕರ್ನಾಟಕದ ಎಲ್ಲಕ್ಕೂ ಪ್ರಾಚೀನ ದೇವಾಲಯವು ಗುಪ್ತ ಪದ್ಧತಿಯಲ್ಲಿ ಕಟ್ಟಲ್ಪಟ್ಟ ಐಹೊಳೆಯ 'ಲಾಡಖಾನ' ಗುಡಿಯೆಂದು ಹೆಸರುಗೊಂಡ ದೇವಾಲಯವು (ಕ್ರಿ. ಶ. ೫ನೆಯ ಶತಕ) ದುರ್ಗಾಗುಡಿಯು

ಇದಕ್ಕೂ ಪೂರ್ವದಲ್ಲಿ ಬೌದ್ಧ ಸ್ತೂಪ ಶೈಲಿಯಲ್ಲಿ ಕಟ್ಟಲ್ಪಟ್ಟಿದ್ದರೂ ಅದರ ಬೇರೆ ಬೇರೆ ಭಾಗಗಳು ಹಿಂದುಗಡೆ ಜೋಡಿಸಲ್ಪಟ್ಟವೆಂಬುದು ಅಲ್ಲಿಯ ೮ನೆಯ ಶತಮಾನದ ಚಾಳುಕ್ಯ ೨ನೆಯ ವಿಕ್ರಮಾದಿತ್ಯನ ಕಾಲದ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಕರ್ನಾಟಕದ ಅತ್ಯಂತ ಪ್ರಾಚೀನ ವಾಸ್ತು ೫ನೆಯ ಶತಮಾನದ್ದೆಂದು ಹೇಳಬಹುದು. ೧೫–೧೬ನೆಯ ಶತಮಾನದ ವರೆಗೆ ವಾಸ್ತು ಶಿಲ್ಪದಲ್ಲಿ ಬೇರೆ ಬೇರೆ ಶೈಲಿಗಳು ಜೀವಂತವಿದ್ದು ಬಳಕೆಯವಾಗಿದ್ದವು. ಸುಮಾರು (೧೦೦೦) ಒಂದು ಸಾವಿರ ವರ್ಷಗಳ ಅವಧಿಯಲ್ಲಿ ಉದಯ ಹೊಂದಿದ್ದ ಅನೇಕಾನೇಕ ದೇವಾಲಯಗಳನ್ನು ವಿಮರ್ಶಿಸಿ ಕೆಳಗಿನ ವಿಶಿಷ್ಟ ಶೈಲಿಗಳನ್ನು ಅವುಗಳಲ್ಲಿ ವಿಂಗಡಿಸಬಹುದು:—

(೧) ಗುಪ್ತ ಪ್ರಭಾವದ ಓತ್ತರೀಯ ಶೈಲಿ (ಕ್ರಿ. ಶ. ೪-೬ನೆಯ ಶತಮಾನ)

(೨) (ಬಾದಾಮಿಯ) ಚಳುಕ್ಯ ಶೈಲಿ (ಅ) ಶುದ್ಧ ದ್ರಾವಿಡ ರೀತಿ ಮತ್ತು (ಬ) ದ್ರಾವಿಡ ಮತ್ತು ಗುಪ್ತ ಶೈಲಿಗಳ ಸಮ್ಮಿಶ್ರಣದಿಂದಾದ ಚಳುಕ್ಯ ಶೈಲಿ (ಕ್ರಿ. ಶ. ೬—೧೦ನೆಯ ಶತಮಾನ)

(೩) ಚಾಳುಕ್ಯ ಶೈಲಿ ಮೇಲಿನ ಅಂಶಗಳು ಇಲ್ಲಿ ಹೆಚ್ಚು ಶಾಸ್ತ್ರೀಯವಾಗಿ ಮೂರ್ತಿಗೊಂಡಿವೆ. ಹಳೆಯ ಶೈಲಿಯಲ್ಲಿದ್ದ ಜೀವಕಳೆ ಇದರಲ್ಲಿ ಇಲ್ಲ. ಇದು ೧೧ನೆಯ ಶತಮಾನದಿಂದ ೧೩ನೆಯ ಶತಮಾನದ ವರೆಗೆ ಪ್ರಚಾರದಲ್ಲಿತ್ತು. ದೇಶಕಾಲಗಳಿಗನುಗುಣವಾದ ಹೆಚ್ಚು ಕಡಮೆಗಳು ಅಲ್ಲಲ್ಲಿ ತಲೆದೋರುತ್ತವೆ. ಇದರಲ್ಲಿ ದ್ರಾವಿಡರ ಚೋಳ ಶೈಲಿಯ ಪ್ರಭಾವವೂ ಮೂಡಿರುವುದು.

(೪) ೧೩–೧೪ನೆಯ ಶತಮಾನದ ಚೋಳ ಪ್ರಭಾವದಿಂದ ಚಾಳುಕ್ಯ ಶೈಲಿಯು 'ಹೊಯ್ಸಳ ಶೈಲಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

(೫) ಕಾಲಮಾನಕ್ಕೆ ತಕ್ಕ ಬದಲಾವಣೆಗಳಿಂದ ಈ ಹೊಯ್ಸಳ ಶೈಲಿಯು ಮುಂದೆ ೧೪–೧೬ನೆಯ ಶತಕಗಳಲ್ಲಿ ವಿಜಯನಗರ ಶೈಲಿಯೆಂದು ಹೆಸರಾಯಿತು.

೧೬ನೆಯ ಶತಮಾನದಿಂದೀಚೆ ಬೇರೆ ನೈಜ ಶೈಲಿ ಎಂದು ಹೇಳಿಕೊಳ್ಳುವ ರೀತಿಯಲ್ಲಿ ಕಟ್ಟಲ್ಪಟ್ಟ ನಿರ್ಮಾಣಗಳಿಲ್ಲ. ಇದ್ದುದೆಲ್ಲ ವಿಜಯನಗರ ಶೈಲಿಯ ಶೇಷವೆನ್ನಬಹುದು. ಆದರೆ ಮುಸಲ್ಮಾನ ಕಟ್ಟಡದ ಪದ್ಧತಿಯು ೧೭–೧೮ನೆಯ ಶತಕದ ಕೆಲವು ವಾಸ್ತುಗಳಲ್ಲಿ ಸ್ಪಷ್ಟವಾಗಿ ತೋರುತ್ತದೆ. ಅದೇ ಸಮಯದಲ್ಲಿ ಪೋರ್ತುಗೀಜ ಪಾದ್ರಿಗಳು ಹಿಂದುಸ್ಥಾನದಲ್ಲಿ ನೆಲೆಸಿದ್ದರಿಂದ ಗೋವಾ ಮುಂತಾದ ಪಟ್ಟಣಗಳಲ್ಲಿ ಅವರು ಕಟ್ಟಿಸಿದ 'ಚರ್ಚು'ಗಳು ಪಾಶ್ಚಾತ್ಯ 'ಗೊಥಿಕ್' ಶೈಲಿಯಲ್ಲಿವೆ. ಮುಂದೆ ಬರಬರುತ್ತ ಬ್ರಿಟಿಷರ ಆಳಿಕೆಯಲ್ಲಿ ೨೦ನೆಯ ಶತಮಾನದ ಅರ್ಧದ ವರೆಗೆ ಕೇವಲ ಗಚ್ಚು, ಕಲ್ಲು, ಕಬ್ಬಿಣ, ಇಟ್ಟಿಗೆ ಇವುಗಳಿಂದ ವಿಶಿಷ್ಟ ಶೈಲಿಯಿಲ್ಲದ 'ಚಪ್ಪರ'ಗಳೂ, 'ಗುಡಿಸಲು'ಗಳೂ ರೂಢವಾಗಿ ವಾಸ್ತು ಶಿಲ್ಪದಲ್ಲಿದ್ದ ಕುಸುರಿನ ಕೆಲಸವು ಮಾಯವಾಯಿತು. ಆದರೂ ಅವುಗಳಲ್ಲಿ ಕಲೆಗಿಂತ ಉಪಯುಕ್ತತೆಗೆ ಹೆಚ್ಚು ಪ್ರಾಧಾನ್ಯವು ಕೊಡಲ್ಪಟ್ಟಿದೆ.

ಈಗ ಸ್ವತಂತ್ರ ಭಾರತದಲ್ಲಿ ಕಲಾವಸ್ತುಗಳ ಪುನರುಜ್ಜೀವನಕ್ಕೆ ಹೆಚ್ಚು ಆಸ್ಪದ ದೊರೆಯಹತ್ತಿದೆ. ಇದರಿಂದ ಇಲ್ಲಿ ಕಲಾಕೃತಿಗಳು ಹೊಸತಾದ ಸಮ್ಮಿಶ್ರ ಪದ್ಧತಿಯಲ್ಲಿ ಕನ್ನಡ ಸಂಸ್ಕೃತಿಯ ಲಕ್ಷಣಗಳನ್ನು ಸೇರಿಸಿ ಕಟ್ಟಲ್ಪಡುವವೆಂದು ಆಶೆಯಿದೆ.

ಗುಪ್ತಪ್ರಭಾವದ ದೇವಾಲಯಗಳು ಮಾಳಿಗೆಯ ಸಪಾಟು ಛಪ್ಪರಗಳುಳ್ಳವು. ಗರ್ಭಗೃಹದ ಮೇಲಿನ ಗೋಪುರದ ತುದಿಗೆ ಆಮಲಕ (ನೆಲ್ಲಿಕಾಯಿ) ಶಿಖರವಿರುವುದು. ಕಡೆಗೋಲು ಮಾಟದ ವರ್ತುಲ ಶಿಖರಕ್ಕೆ ದಕ್ಷಿಣೋತ್ತರ ರೇಖೆಗಳಿದ್ದು ಅದು ನೆಲ್ಲಿಕಾಯಿಯಂತೆ ಕಾಣಿಸುವುದು. ಪ್ರಾಚೀನ ಅಂದರೆ ೪-೫ನೆಯ ಶತಮಾನದ ಈ ಮಾದರಿಯ ಗುಡಿಗಳು ಕರ್ನಾಟಕದಲ್ಲಿ ವಿಶೇಷವಾಗಿಲ್ಲ. ಐಹೊಳ್ಳಿಯ 'ಲಾಡಖಾನ' ಗುಡಿಯು ಗುಪ್ತ ಶೈಲಿಯದೆಂದು ಪಂಡಿತರ ಅಭಿಪ್ರಾಯ, ಆದರೆ ಇದಕ್ಕೆ ಈಗ ಗೋಪುರವಿಲ್ಲ. ದುರ್ಗಾಗುಡಿಯು ಇದಕ್ಕೂ ಹಳೆಯದಾಗಿರಬೇಕು.

ಈ ಔತ್ತರೀಯ ಪ್ರಭಾವವು ಬರಬರುತ್ತ ದಕ್ಷಿಣಾಪಥದ—ವಿಶೇಷವಾಗಿ ಕರ್ನಾಟಕದ ಗುಡಿಗಳಲ್ಲಿ ಹೆಚ್ಚಾಗುತ್ತ ನಡೆಯಿತು. ದ್ರಾವಿಡ ದೇಶದ ಗೋಪುರದ ಪೂರ್ವ–ಪಶ್ಚಿಮ ಪಟ್ಟಿಕೆಗಳೂ ಔತ್ತರೀಯ ಆಮಲಕ ಗೋಲಕಗಳೂ ಚಳುಕ್ಯ ಕಾಲದ ಕಟ್ಟಡಗಳಲ್ಲಿ ತಲೆದೋರುತ್ತವೆ. ಈ ಎರಡೂ ಲಕ್ಷಣಗಳ ಸಮ್ಮಿಶ್ರಣದಿಂದ ದೇವಮಂದಿರಗಳಿಗೆ ವಿಲಕ್ಷಣವಾದ ಸೌಂದರ್ಯ

ವು ಬಂದಿತು. ಹಿಂದುಸ್ಥಾನದ ಉತ್ತರ–ದಕ್ಷಿಣ ದೇಶಗಳ ನಡುವೆ ಇದ್ದುದರ ಲಾಭವು ಕರ್ಣಾಟಕಕ್ಕೆ ಆಯಿತೆಂದು ಇದರಿಂದ ತಿಳಿಯಬರುತ್ತದೆ. ಶುದ್ಧ ದ್ರಾವಿಡ ಶೈಲಿಯ ಗೋಪುರದಲ್ಲಿ ಅಡ್ಡಗಲಿನ ಪಟ್ಟಿಕೆಗಳು ಒಂದರ ಮೇಲೊಂದು ದೀಪಾಕಾರವಾಗಿ ಏರುತ್ತ ಹೋಗುವವು. ಔತ್ತರೀಯ ಪದ್ಧತಿಯ ಗುಡಿಗಳಲ್ಲಿ ಲಂಬಾಕಾರದ ಕಡೆಗೋಲು ಮಾಟದ ಪಟ್ಟಿಕೆಗಳು ಅದರಂತೆ ಒಂದರ ಮೇಲೊಂದು ಏರುತ್ತ ಹೋಗುವವು. ಇವೆರಡು ಆಕಾರಗಳ ಸಮ್ಮಿಶ್ರಣದಿಂದ ಕಟ್ಟಡದಲ್ಲಿ ಹೊಸ ಮಾದರಿಯ ಅಂದವು ಬರುತ್ತದೆಂದು ಬಾದಾಮಿ ಪಟ್ಟದಕಲ್ಲು, ಐಹೊಳ್ಳಿಯ ದೇವಾಲಯಗಳನ್ನು ನೋಡಿದವರಿಗೆ ಹೊಳೆಯದೆ ಇರದು.

ವಾಸ್ತು ಶೈಲಿಯ ವಿವೇಚನೆಯಲ್ಲಿ ಮೊದಲು ಯಜ್ಞವೇದಿಕೆ. ಆ ಮೇಲೆ ಕಲ್ಲಿನ ಸ್ಮಾರಕ ಮಂಟಪಗಳು ಅಥವಾ ಸಮಾಧಿಗಳು (Dolmens & Cairns). ಮುಂದೆ ಬೌದ್ಧ ವಿಹಾರಗಳೂ, ಚೈತ್ಯಾಲಯಗಳೂ (ಇಟ್ಟಂಗಿ ಗಚ್ಚಿನಲ್ಲಿ); ಅನಂತರ ಪರ್ವತಗಳಲ್ಲಿ ಗುಹಾಂತರ್ದೇವಾಲಯಗಳನ್ನು ಕೊರೆಯುವರು; ಮುಂದೆ ಪರ್ವತಗಳ ಮೇಲೆ ಗುಡಿಗಳನ್ನು ಕಟ್ಟುವುದು; ಕಲ್ಲು ವಿಪುಲವಾಗಿರುವುದರಿಂದ ಬೆಟ್ಟಗಳ ಹತ್ತಿರದಲ್ಲಿಯೇ ವಾಸ್ತುಗಳನ್ನು ಕಟ್ಟುವುದು—ಅದಾದ ಮೇಲೆ ಬೇರೆ ಬೇರೆ ತರದ ಕಲ್ಲುಗಳನ್ನು ತರಿಸಿ ಕುಸುರಿನ ಕೆಲಸವನ್ನು ಹೆಚ್ಚಿಸುತ್ತ ವಿವಿಧ ಶೈಲಿಗಳ ಚಿಹ್ನೆಗಳನ್ನು ಹೊಂದಿಕೆ ಆಗುವಂತೆ ಸೇರಿಸಿಕೊಂಡು ಗುಡಿಗಳಿಗೆ ವಿಶಿಷ್ಟ ಗೋಪುರಗಳನ್ನೂ ಶಿಖರಗಳನ್ನೂ ಜೋಡಿಸುವುದು; ಈ ಗೋಪುರಗಳ ಆಕಾರದಲ್ಲಿ ಬದಲಾವಣೆಗಳನ್ನು ಮಾಡುತ್ತ ಕಟ್ಟಡದ ರೂಪವನ್ನು ಹೆಚ್ಚು ಕಲಾಪೂರ್ಣ ಮಾಡುವದೂ ಇವೇ ಮೊದಲಾದ ಮೆಟ್ಟಲುಗಳಲ್ಲಿ ಕರ್ಣಾಟಕದ ವಾಸ್ತು ಶಿಲ್ಪವು ರೂಪುಗೊಂಡಿದೆಯೆಂದು ಆಯಾ ಕಾಲದ ದೇವಾಲಯಗಳ ವಿಮರ್ಶೆಯಿಂದ ತಿಳಿಯಬರುತ್ತದೆ.

ಕರ್ಣಾಟಕದ ಅತ್ಯಂತ ಪ್ರಾಚೀನ (ಬನವಾಸಿಯ ಕದಂಬರ ಕಾಲದ) ದೇವಾಲಯಗಳ ವರ್ಣನೆಯಲ್ಲಿ 'ನಮೋ ಹರಿಹರ ಹಿರಣ್ಯಗರ್ಭೇಭ್ಯಃ' ಎಂದು ಬರುವುದರಿಂದ ಹಳೆಯ ಕಾಲದಿಂದ ಅಲ್ಲಿ ತ್ರೈಪುರುಷ ದೇವಾಲಯಗಳೂ ಇದ್ದವೆಂದು ಗೊತ್ತಾಗುತ್ತದೆ. ಮೂರು ಗರ್ಭಗೃಹಗಳುಳ್ಳ ದೇವಾಲಯಕ್ಕೆ ಮೂರು ಗೋಪುರಗಳಿರಬೇಕು. ಆ ಕಾಲದ ಅಂಥ ಕಟ್ಟಡಗಳು ಈಗ ನಮ್ಮ ದೃಷ್ಟಿಗೆ ಬೀಳುವುದಿಲ್ಲ. ಕಾಲಾಂತರದಲ್ಲಿ ಅವು ಅಳಿದು ಹೋಗಿರಬೇಕು. ಚಲುಕ್ಯಕಾಲದ ಗುಡಿಗಳಲ್ಲಿ ಕೆಲವಾದರೂ ತ್ರೈಪುರುಷ ಮಂದಿರಗಳಾಗಿದ್ದವೆಂದು ಊಹಿಸಬಹುದು.

ಪಟ್ಟದ ಕಲ್ಲಿನ ವಿರೂಪಾಕ್ಷ ಗುಡಿಯ ಒಂದು ಶಾಸನದಲ್ಲಿ ಶಿಲೆಮುದ್ಧರ ಮಮ್ಮಗನಾದ ಸರ್ವಸಿದ್ಧಿ ಆಚಾರ್ಯರ ಶಿಷ್ಯ ರೇವಡಿ ಒವಜ್ಜರು ದಕ್ಷಿಣ ದಿಶೆಯನ್ನು ನಿರ್ಮಿಸಿದರೆಂದು ಬರೆದಿದೆ. ಅಂದರೆ ದಕ್ಷಿಣದ ದೇವಾಲಯಗಳ ನಿರ್ಮಾಣದಲ್ಲಿ ಪ್ರಧಾನ ಶಿಲ್ಪಿಗಳು (ಉಪ್ಪಾರರು) ಎಂದು ತಿಳಿಯಬಹುದು. ಅಥವಾ ಲೋಕೇಶ್ವರ ದೇವಾಲಯದ ದಕ್ಷಿಣ ಭಾಗವು ಅವರಿಂದ ನಿರ್ಮಿಸಲ್ಪಟ್ಟಿತೆಂದೂ ತಿಳಿಯಬಹುದು. ಶ್ರೀಪಾಲ ದೇವನ ಮಗ ಆದಿತ್ಯನು ಆ ಗುಡಿಯ ಮೇಲ್ಗಟ್ಟನ್ನು ಕಟ್ಟಿದ್ದನೆಂದು ಬರೆದಿದೆ. ಹೀಗೆ ಬೇರೆ ಬೇರೆ ಮೂರ್ತಿಗಳನ್ನು ಕಟ್ಟಿದ ಶಿಲ್ಪಿಗಳ ಹೆಸರುಗಳೂ ಕೆತ್ತಲ್ಪಟ್ಟಿವೆ. ಇದರಿಂದ ಕರ್ಣಾಟಕದಲ್ಲಿ ಪ್ರಾಚೀನ ಕಾಲದಲ್ಲಿ ಶಿಲ್ಪಿ ರೂವಾರಿಗಳ ಶ್ರೇಣಿಗಳು ಆ ಆ ಕಾಲದ ಅರಸರಿಂದ ಮನ್ನಣೆಯನ್ನು ಪಡೆದು ಅದ್ಭುತವಾದ ಕಲಾಕೃತಿಗಳನ್ನು ನಿರ್ಮಿಸಿದ್ದವೆಂದು ಗೊತ್ತಾಗುತ್ತದೆ. ಈ ಪರಂಪರೆಯು ನಮ್ಮಲ್ಲಿ ಮುಸಲ್ಮಾನ ಅರಸರ ಆಕ್ರಮಣದ ವರೆಗೂ ರೂಢಿಯಲ್ಲಿತ್ತು. ಮುಂದೆ ಬರಬರುತ್ತ ಅದು ಮಾಯವಾಗಿ ಆನುವಂಶಿಕ ಕಲೆಯ ಪ್ರಗತಿಗೆ ರಾಜಮರ್ಯಾದೆಯು ತಪ್ಪಿತು.

ಉತ್ತರದಲ್ಲಿ ಗುಪ್ತ ಅರಸರಂತೆ ದಕ್ಷಿಣದಲ್ಲಿ ಜೈನ ಬೌದ್ಧ ಧರ್ಮಗಳ ಪ್ರಾಬಲ್ಯದಿಂದ ಶಿಥಿಲವಾಗಿದ್ದ ವೈದಿಕ ಧರ್ಮವನ್ನು ಉಜ್ಜೀವಗೊಳಿಸಿದವರು ಬಾದಾಮಿಯ ಚಾಲುಕ್ಯರು; ಅವರು ತಮ್ಮದೇ ಆದ ವಿಶಿಷ್ಟ ಚಾಲುಕ್ಯ ಶೈಲಿಯಲ್ಲಿ ವೈಷ್ಣವ ಮಂದಿರಗಳನ್ನೂ ಶಿವಾಲಯಗಳನ್ನೂ ಕಟ್ಟಿಸಿ ಮಹಾಭಾರತ ರಾಮಾಯಾಣ ಭಾಗವತ ಮತ್ತು ಶೈವ ಪುರಾಣಗಳ ಕಥೆಗಳನ್ನು ವಿಗ್ರಹಪಟ್ಟಿಕೆಗಳಲ್ಲಿ ಚಿತ್ರಿಸಿ ಪೌರಾಣಿಕ ಧರ್ಮವನ್ನು ಜನರಲ್ಲಿ ಬಿಂಬಿಸಿದರು. ಇವರ ವರಾಹ ಲಾಂಛನವು ಕುಸಿದಿದ್ದ ವೈದಿಕ ಧರ್ಮದ ಉದ್ಧಾರಕರೆಂಬುದನ್ನೂ ಸೂಚಿಸುತ್ತದೆ.

ರಾಷ್ಟ್ರಕೂಟರು ಜೈನ ವೈದಿಕ ಧರ್ಮಗಳೆರಡಕ್ಕೂ ಪ್ರೋತ್ಸಾಹವನ್ನು ಕೊಟ್ಟರು. ೧ನೆಯ ಕೃಷ್ಣರಾಜನು (೮ನೆಯ ಶತಕ) ಕೊರೆಯಿಸಿದ ವೇರೂಳದ ಗುಹಾಂತರ್ದೇವಾಲಯವಾದ ಕೈಲಾಸ ಮಂದಿರವು ಜಗತ್ತಿನಲ್ಲಿ ಅತ್ಯದ್ಭುತ ಕಲಾಕೃತಿಯೆಂದು ಹೆಸರಾಗಿದೆ. ಇದರಲ್ಲಿ ಕಂಚಿಯ ಕೈಲಾಸನಾಥ ಗುಡಿಯ ದ್ರಾವಿಡ ಶೈಲಿಯು ಒಡೆದು ಕಾಣುತ್ತದೆ. ಕಲ್ಯಾಣದ ಚಾಲುಕ್ಯರಲ್ಲಿ ಪ್ರಸಿದ್ಧ ಶಕಪುರುಷನಾದ ೬ನೆಯ ವಿಕ್ರಮಾದಿತ್ಯನು ಅನೇಕ ಕಲಾಪೂರ್ಣವಾದ ಕಟ್ಟಡಗಳನ್ನು ಕಟ್ಟಿಸಿದ್ದಾನೆ. ಅವನ ಕಾಲದಲ್ಲಿ ದಕ್ಷಿಣದ ಚೋಳ ಶೈಲಿಯ ಲಕ್ಷಣಗಳಿಂದ ಭವ್ಯವಾದ ಅಂಗಣಗಳು, ವಿಮಾನಗಳು ಎತ್ತರವಾದ ಗೋಪುರಗಳು ಇವೇ ಮೊದಲಾದುವು ವಾಸ್ತು ಶಿಲ್ಪದಲ್ಲಿ ಸೇರಿಸಲ್ಪಟ್ಟವು. ಇಂಥ ಲಕ್ಷಣಗಳನ್ನು ಹಾವೇರಿಯ ಸಿದ್ಧೇಶ್ವರಗುಡಿ, ಗದುಗಿನ ತ್ರಿಕೂಟೇಶ್ವರ ಗುಡಿ ಲಕ್ಕುಂಡಿಯ ವಿಶ್ವೇಶ್ವರ ಗುಡಿಗಳಲ್ಲಿ ಕಾಣಬಹುದು. ಇವುಗಳಲ್ಲಿ ಕುಸುರಿನ ಕೆಲಸಕ್ಕೆ ಹೆಚ್ಚು ಅನುವು ದೊರೆಯಿತು. ಡಂಬಳದ ನಕ್ಷತ್ರಾಕಾರದ ತಳವಿನ್ಯಾಸವುಳ್ಳ ದೊಡ್ಡ ಬಸಪ್ಪನ ಗುಡಿಯು ಚಾಳುಕ್ಯ ಶೈಲಿಯ ಅತ್ಯುತ್ತಮವಾದ ದೃಷ್ಟಾಂತವು. ಇದೇ ಶೈಲಿಯು ಹೆಚ್ಚು ಪ್ರಕರ್ಷ ಹೊಂದಿ ಹೊಯ್ಸಳ ಶೈಲಿಯೆಂಬ ಹೆಸರಿನಿಂದ ಮೈಸೂರು ಭಾಗದಲ್ಲಿ ಅಸ್ತಿತ್ವದಲ್ಲಿ ಬಂತು. ತಮಿಳು ದೇಶಕ್ಕೆ ತೀರ ಹೊಂದಿಕೊಂಡಿರುವದರಿಂದ ಮೈಸೂರು ದೇಶದ ೧೨-೧೩ನೆಯ ಶತಮಾನದ ಕಟ್ಟಡಗಳಲ್ಲಿ ಚೋಳ ವಾಸ್ತು ಶಿಲ್ಪದ ಪ್ರಭಾವವು ಹೆಚ್ಚಾಗಿದೆ. ವಿಜಯನಗರದ ಶೈಲಿಯಲ್ಲಿ ಕರ್ನಾಟಕ—ತಮಿಳು ಲಕ್ಷಣಗಳ ಸಮ್ಮಿಶ್ರಣವು ಒಡೆದು ಕಾಣುತ್ತದೆ. ಹಂಪೆಯ ವಿರೂಪಾಕ್ಷ ದೇವಾಲಯದ ಗೋಪುರದಲ್ಲಿ, ಚೋಳ ಶೈಲಿಯ ಸ್ಪಷ್ಟ ಉದಾಹರಣೆಯಾದ ತಂಜಾವೂರಿನ ಬೃಹದೀಶ್ವರ ದೇವಾಲಯದ ಗೋಪುರದ ಹೋಲಿಕೆಯು ಸ್ಪಷ್ಟವಿದೆ.

ವಾಸ್ತು ಶಿಲ್ಪವು ಕರ್ನಾಟಕದಲ್ಲಿ ಅನೂಚಾನವಾಗಿ ಸುಲಕ್ಷಣವಾಗಿ ರೂಪುಗೊಂಡಂತೆ ಬೇರೆ ಯಾವ ಭಾಗಗಳಲ್ಲಿಯೂ ಬೆಳೆದಿಲ್ಲವೆಂದು ತಿಳಿಯಬಹುದು. ಇದಕ್ಕೆ ಇದರ ಭೌಗೋಲಿಕ ಪರಿಸ್ಥಿತಿ, ಕರ್ನಾಟಕದ ರಾಜಮನೆತನಗಳ ಕಲಾಭಿಮಾನ ಮತ್ತು ಜನರ ಕಲಾಪ್ರಿಯತೆ ಇವು ಕಾರಣಗಳಾಗಿವೆ. ಹಿಂದಿನ ಕಾಲದ ಕಲೆಯ ನಿರ್ವ್ಯಾಜ ಸೊಬಗನ್ನು ಕಾಲಾನುಗುಣವಾಗಿ ಉಜ್ಜೀವಗೊಳಿಸಿ ಈಗಿನ ಮನ್ವಂತರದ ಜೀವನದ ಮಟ್ಟನ್ನು ವಿತ್ತರಿಸುವುದವಶ್ಯವಿದೆ. ಅದರಿಂದ ಆಧ್ಯಾತ್ಮಿಕ ಉನ್ನತಿಯಾಗಿ ದೇಶದಲ್ಲಿ ಸುಖ ಶಾಂತಿಗಳು ನೆಲಸುವವು.

ಮೂಲ ಸಂಸ್ಕೃತಿ

ಶ್ರೀ ದೇವುಡು ನರಸಿಂಹ ಶಾಸ್ತ್ರಿ.

ಭಾರತ ಸರ್ಕಾರವು ತಾನು ಕೇವಲ ಲೌಕಿಕ (secular) ಎಂದು ಘೋಷಿಸಿ ಪ್ರಜೆಗಳಿಗೆ ಸಂಸ್ಕೃತಿಯನ್ನು ರೂಢಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಟ್ಟಿತು. ದೇವಾಲಯ ಪ್ರವೇಶ, ಹಿಂದೂ ಕೋಡ್, ಮೊದಲಾದವು ಸರಕಾರದ ದೃಷ್ಟಿಯಲ್ಲಿ ಜನರೆಲ್ಲ ಒಂದೇ ಎಂಬುದನ್ನು ಒತ್ತಿ ಹೇಳುವ ಯತ್ನಗಳು ಎಂದುಕೊಂಡು, ನಮ್ಮ ಸಂಸ್ಕೃತಿಯನ್ನು ಊರ್ಜಿತಪಡಿಸಿಕೊಳ್ಳುವ ದಾರಿ ನೋಡೋಣ.

ಭಾರತಕ್ಕೆ ಇಂದು ಸ್ವಾತಂತ್ರ್ಯ ಬಂದಿದೆ. ಆದರೆ, ವೇಷ, ಭಾಷೆ, ಭಾವಗಳಲ್ಲಿ ತರುಣರು ಆಂಗ್ಲವಾಹಿನಿಗೆ ಸಿಕ್ಕಿದ್ದಾರೆ. ಯುರೋಪಿಯನ್ ಸೈನ್ಸ್ ಸಾಧಿಸಿರುವ ವಿಜಯ ಕಂಡು ಯಾರಿಗೆ ತಾನೇ ಮೋಹ ಹುಟ್ಟುವುದಿಲ್ಲ? ಇಂಗ್ಲಿಷ್ ಸಾಹಿತ್ಯದ ಸೊಬಗು ನೋಡಿ ಸೋಲದವರಾರು? ಅವರ ಶಿಸ್ತು ಕಂಡು ನಾವೂ ಹೀಗಾಗಬೇಕು ಎಂದುಕೊಂಡರೆ ತಪ್ಪೇನು? ಆದರೆ ಇವೆಲ್ಲ ಹೊರ ಗುರುತುಗಳು. ಅವರಂತೆ ಆಗುವ ಪ್ರಯತ್ನ ಅವರೇ ಆಗುವುದರಲ್ಲಿ ಮುಗಿದರೆ, ರಾಜಕೀಯವಾಗಿ ಗೆದ್ದ ಇಂಡಿಯ ಸಾಂಸ್ಕೃತಿಕವಾಗಿ ಸೋತಂತಾಯಿತು. ಚರಿತ್ರೆಯಲ್ಲಿ "ರೋಮ್ ಗ್ರೀಸ್ ದೇಶವನ್ನು ಗೆದ್ದಿತು ಆದರೆ ಅದರ ಸಂಸ್ಕೃತಿಯ ದಾಸನಾಯಿತು" ಎಂದು ಓದಿದ್ದೇವೆ. ಇಂಡಿಯ ಕೂಡ ಹಾಗಾಗುವುದೇನು?

ಗಾಂಧಿಯವರ ಅಹಿಂಸಾವಾದ, ಸತ್ಯಾಗ್ರಹ ಇವುಗಳನ್ನು ಮುಖ್ಯ ತತ್ವಗಳೆಂದು ಒಪ್ಪಿಕೊಂಡು ಹೊರಟ ಕಾಂಗ್ರೆಸ್ ಇಂದು ಸರ್ಕಾರದಲ್ಲಿ ಕುಳಿತ ಮೇಲೆ, ಇಂಗ್ಲಿಷ್ ಸರ್ಕಾರದ ಮರಿಯಾಗಿದೆ. ಅನರು ಹಿಂದೆ ಹೇಳುತ್ತಿದ್ದುದೇ ಇಂದಿನ ಆಡಳಿತಗಾರರ ಬಾಯಲ್ಲಿಯೂ ಬರುತ್ತಿದೆ. ಗಾಂಧೀತತ್ವದ ಕೊಲೆ ಕ್ಷಣಕ್ಷಣವೂ ಆಗುತ್ತಿದೆ.

"ಇಂಡಿಯ ಎಂಬ ಹೆಸರಿಗೆ ಬದಲು ಭಾರತ ಎಂದಾಗಲಿಲ್ಲವೆ? ರಾಜ ಭಾಷೆಯು ಹಿಂದಿಯಾಗಲಿಲ್ಲವೆ? ಇಂಗ್ಲಿಷ್ ತಳ್ಳುವ ಯತ್ನ ನಡೆದಿಲ್ಲವೆ?" ಎಂದು ಕೇಳಬಹುದು. ಇವೆಲ್ಲ ರಾಜಕೀಯ ವ್ಯವಹಾರಗಳು. ಸಂಸ್ಕೃತಿ ಪರಿವರ್ಧನದ ಪ್ರಯತ್ನಗಳಲ್ಲ. ನಾವು ಇನ್ನೂ ಇಂಗ್ಲಿಷ್ ಕ್ಲಾಸಿಕ್ಸ್ ಓದುತ್ತಿದ್ದೇವೆ. ಸೈನ್ಸ್ ಪಾಠ ಹೇಳಿಸುತ್ತಿದ್ದೇವೆ. ಇನ್ನೂ ನಮ್ಮ ಯೂನಿವರ್ಸಿಟಿಗಳು ಮೆಕಾಲೆ ಪದ್ಧತಿ ಬಿಟ್ಟಿಲ್ಲ. ಹೀಗಿರಲು ನಾವು 'ನಮ್ಮತನ' ಉಳಿಸಿಕೊಳ್ಳುವುದೆಂತು?

ತಮ್ಮತನ ಉಳಿಸಿಕೊಳ್ಳುವುದು ಎಂದರೆ ಅನೂಚಾನವಾಗಿ ಬಂದಿರುವ ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳುವುದು. ಗಾಂಧಿಯವರು ಲೋಕಪೂಜ್ಯರಾದುದು ಈ ಸಂಸ್ಕೃತಿಯನ್ನು ಅಂಗೀಕರಿಸಿದವರ ವಂಶದಲ್ಲಿ ಹುಟ್ಟಿ ಆ ಸಂಸ್ಕೃತಿಯನ್ನು ರಕ್ತದಲ್ಲಿ ಜೀರ್ಣಿಸಿಕೊಂಡುದರಿಂದ. ಅವರು ಸಂಸ್ಕೃತಿಯನ್ನು ಕುರಿತು ವಿಶೇಷವಾಗಿ, ಪ್ರಯತ್ನಮಾಡಿ ಅಧ್ಯಯನ ಮಾಡಲಿಲ್ಲ. ಆದರೆ ಪುಣ್ಯವಂತರಾದ ತಾಯಿತಂದೆಗಳ ಗರ್ಭದಿಂದ ಬರುವಾಗಲೇ ಅದನ್ನು ತಂದಿದ್ದರು.

ಈ ಸಂಸ್ಕೃತಿಯನ್ನು ದಕ್ಷಿಣದಲ್ಲಿ ವಿರೋಧಿಸುವವರ ಗುಂಪು ಬಲವಾಗಿದೆ. ಇಂಗ್ಲಿಷರು ತಮ್ಮ ಭದ್ರತೆಗಾಗಿ ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ ಮುಸ್ಲಿಂ ಭೇದದ ಬೀಜ ನೆಟ್ಟರು. ದಕ್ಷಿಣದಲ್ಲಿ ಬ್ರಾಹ್ಮಣ ಬಾಹ್ಮಣೇತರ ವಿಭಾಗಮಾಡಿದರು. ಒಂದು ಪಾಕಿಸ್ಥಾನ ಹಿಂದೂಸ್ಥಾನ ವಿಭಾಗದಲ್ಲಿ ಪರ್ಯವಸಾನವಾಯಿತು. ಇನ್ನೊಂದು ದೇಶವನ್ನು ಒಡೆಯುವಷ್ಟು ಬಲವಾಗುವುದೋ ಅಥವಾ ದೇಶದ ಸೌಖ್ಯಕ್ಕಾಗಿ ತಾನೇ ಸಾಯುವುದೋ ನೋಡಬೇಕು.

ಈಗಿರುವ ಚರಿತ್ರೆಗಳ ಪ್ರಕಾರ ಆರ್ಯರು ಹೊರಗಿನಿಂದ ಬಂದವರು: ದ್ರಾವಿಡರು ಇಲ್ಲಿದ್ದವರು. ಇವರಿಬ್ಬರೂ ಬೇರೆ ಬೇರೆ ಕುಲದವರು. ಚರಿತ್ರೆಗಳು, ಆರ್ಯರು ಇಲ್ಲಿಂದ ಪರದೇಶಕ್ಕೆ ಹೋಗಿ ನೆಲೆಸಿದರು. ದ್ರಾವಿಡರೂ ಆರ್ಯರೂ ಬೇರೆ ಬೇರೆ ಕುಲಗಳಲ್ಲ. ಅಸುರರೂ ಸುರರೂ ಒಬ್ಬ ತಂದೆಯ ಮಕ್ಕಳು ಎಂಬ

ಭಾರತ ಮತವನ್ನು ಒಪ್ಪದಿದ್ದರೆ ಹೋಗಲಿ, ಆರ್ಯರೂ ದ್ರಾವಿಡರೂ ಎಷ್ಟೋ ಸಾವಿರ ವರ್ಷಗಳ ಹಿಂದೆಯೇ ಬೆರತುಹೋದರು; ಒಂದಾದರು ಎಂಬ ಅಂಶವನ್ನು ಒತ್ತಿ ಹೇಳುವುದಿಲ್ಲ. ಈ ಚರಿತ್ರೆಗಳ ಅಧ್ಯಯನದ ಫಲವಾಗಿ, ಭಾರತ ಸಂಸ್ಕೃತಿ ಎನ್ನಿಸಿಕೊಂಡಿರುವುದು ಬ್ರಾಹ್ಮಣರ ಸಂಸ್ಕೃತಿ. ಬ್ರಾಹ್ಮಣೇತರರು ಅದನ್ನು ಒಪ್ಪಿಕೊಂಡರೆ ಬ್ರಾಹ್ಮಣರ ದಾಸ್ಯವನ್ನು ಒಪ್ಪಿಕೊಂಡಂತೆ ಎಂದು ವಾದ ಮುಂದೆ ಬಂದಿದೆ. ಮನುಸ್ಮೃತಿ, ರಾಮಾಯಣಗಳನ್ನು ಸುಟ್ಟುದು ಈ ವಾದದ ಭಕ್ತರು. ಆದರೆ ಭಾರತದ ಸಂಸ್ಕೃತಿಯ ಸ್ವರೂಪ ನೋಡಿದರೆ, ಅರಿತರೆ, ಈ ಭೇದ ವಾದಕ್ಕೆ, ಈ ದ್ವೇಷಕ್ಕೆ ಕಾರಣವಿಲ್ಲ.

ಭಾರತ ಸಂಸ್ಕೃತಿಗೂ ಆಧುನಿಕ ಪಾಶ್ಚಾತ್ಯ ಸಂಸ್ಕೃತಿಗೂ ಇರುವ ಭೇದವನ್ನು ಒಬ್ಬರು ಬಲು ಚೆನ್ನಾಗಿ ಎರಡು ಮಾತಿನಲ್ಲಿ ಹೇಳಿದರು. ಪಾಶ್ಚಾತ್ಯರು ದೇಹದಲ್ಲೊಂದು ಜೀವವನ್ನು ಇಡುತ್ತಾರೆ: ಪೌರ್ವಾತ್ಯರು ಜೀವಕ್ಕೊಂದು ದೇಹಕೊಡುತ್ತಾರೆ ಎಂದರು. ಅದು ತತ್ವ. ಒಳಗಿನ ತಿರುಳು. ಯಾರೇ ಆಗಲಿ ಜೀವವುಂಟು ಎಂದು ಒಪ್ಪಿಕೊಂಡರೆ, ಇಹದ ಯೋಚನೆ ಕಿರಿದಾಗಿ ಪರದ ಯೋಚನೆ ಹೆಚ್ಚುವುದು. ಭಾರತದ ವಿನಾಶ ಇಂಥವರಿಂದ ಆಯಿತು ಆಕಾಶ ನೋಡುತ್ತ ಭಾವಿಯಲ್ಲಿ ಬಿದ್ದ ಜ್ಯೋತಿಷ್ಕನಂತಾಯಿತು ಇಂಡಿಯದ ಅವಸ್ಥೆ ಎನ್ನುವವರೂ ಇದ್ದಾರೆ. ಆದರೆ ಅಂಥವರು ಹಿಟ್ಲರನ ಸಾಹಸವೇನಾಯಿತು? ಬ್ರಿಟಿಷ ಚಕ್ರಾಧಿಪತ್ಯ ಮಾಯವೇಕಾಯಿತು? ಯುದ್ಧವನ್ನು ಗೆದ್ದ ಅಮೇರಿಕದ ಧನಬಲ ಚೀಣದಲ್ಲಿ ಯಾಕೆ ಮುಗ್ಗುರಿಸಿತು? ಏಷಿಯ ಖಂಡವನ್ನು ಹಿಂಗಟ್ಟು ಮುರಿಕಟ್ಟಿ ಹಿಡಿದುಕೊಂಡ ಭದ್ರಮುಷ್ಟಿ ಏಕೆ ಸಡಿಲವಾಯಿತು? ಎಂಬುದನ್ನು ಯೋಚಿಸಬೇಕು.

ಭಾರತದ ಸಂಸ್ಕೃತಿಯು ಬಾಯಿಮಾತು ಅನುಷ್ಠಾನಗಳಿಗೆ ಅಂತರ ಬಹಳ ಬಹಳ ಎನ್ನುತ್ತದೆ. ಬಾಯಿಮಾತಿನಲ್ಲಿ ಎಲ್ಲರೂ ಒಂದೇ ಎಂದು ತತ್ವವನ್ನು ಸಾರಿ ಹಜ್ಜೆ ಹಜ್ಜೆಗೂ ಅದಕ್ಕೆ ಸಮಾಧಿ ಕಟ್ಟುತ್ತಿರುವ ಈಗಿನ ಸಂಸ್ಕೃತಿ, ಎಲ್ಲರೂ ಸೇರಿರುವ ಸಮಾಜ ಒಂದು, ಕುಟುಂಬದಲ್ಲಿರುವ ಜನರು ಬೇರೆ ಬೇರೆಯಾದರೂ ಕುಟುಂಬವೆಲ್ಲ ಒಂದೇ ಎಂಬಂತೆ, ಜಾತಿ ಜಾತಿಯೂ ಅನುಷ್ಠಾನದಿಂದ ಬೇರೆ ಬೇರೆಯಾದರೂ, ವಿಧಾನದಲ್ಲಿ ಭಿನ್ನೈಸಿದರೂ, ಉದ್ದೇಶದಲ್ಲಿ ಒಂದೇ ಎಂದಿತು. ಶ್ರೇಯಸ್ಸು, ಪ್ರೇಯಸ್ಸು ಎಂದು ಜೀವನ ವ್ಯಾಪಾರವನ್ನು ಎರಡು ಭಾಗಮಾಡಿ, ಪ್ರೇಯಸ್ಸಿನಲ್ಲಿ ಭೇದ ಬಿಟ್ಟಿಲ್ಲ ಶ್ರೇಯಸ್ಸಿನಲ್ಲಿ ಭೇದ ಉಳಿಯುವುದಿಲ್ಲ ಎಂಬ ಘನಸಿದ್ಧಾಂತವನ್ನು ಪ್ರತಿಪಾದಿಸಿತು. ವೇದವನ್ನು ಕೇಳಿದ ಶೂದ್ರನ ಕಿವಿಗೆ ಸೀಸ ಕಾಯಿಸಿ ಹೊಯ್ಸಿ ಎಂದಿಲ್ಲವೇ ಎನ್ನುವವರು ವೇದಗಳಲ್ಲಿಯೇ ಬರುವ ಶೂದ್ರರ್ಷಿಗಳ ಕಥೆಗಳನ್ನೇಕೆ ಮರೆತಿದ್ದಾರೆ?

ಭಾರತ ಸಂಸ್ಕೃತಿ ಚಾತುರ್ವರ್ಣ್ಯವನ್ನು ಒಪ್ಪಿಕೊಂಡು ಒಂದು ಕೊನೆಯಲ್ಲಿ ಸರ್ವತಂತ್ರ ಸ್ವತಂತ್ರವನ್ನಿಟ್ಟು ಇನ್ನೊಂದು ಕೊನೆಯಲ್ಲಿ ಗರ್ಭದಾಸರನ್ನಿಟ್ಟಿತಲ್ಲವೇ? ಎಂಬುದು ಇನ್ನೊಂದು ವಾದ. ಹೌದು ಎಂದು ಈ ವಾದವನ್ನು ಗೌರವಿಸಿ ಕೇಳೋಣ. ಇದು ನಿಸರ್ಗದಲ್ಲಿ ಪ್ರಕೃತಿಯು ಮಾಡಿರುವ ಭೇದವಲ್ಲವೇ ದೇಹದಲ್ಲಿ ಹೂವು ಮುಡಿಯುವ ಕಿರೀಟ ಧರಿಸುವ ತಲೆಯೂ ಇದೆ. ಮುಳ್ಳು, ಎಂಜಲು ಮೊದಲಾದುವುಗಳನ್ನು ತುಳಿಯುವ ಕಾಲೂ ಇದೆಯಲ್ಲ. ಎಂದರೆ, ಏನು ಉತ್ತರ? ತಲೆ, ಕಾಲು ಎರಡೂ ಒಂದೇ ದೇಹದ ಅಂಗಗಳು ಎಂದರೆ, ಖೋವಾ ತಿನ್ನುವ ಬಾಯಿ, ಅಮೇಧ್ಯ ಮಾಡಿ ಅದನ್ನು ಹೊರದೂಡುವ ಇನ್ನೊಂದು ಅಂಗ, ಎರಡೂ ದೇಹದ ಸ್ಥಿತಿಗೆ ಇದ್ದೇ ಇರಬೇಕು ಎಂಬುದನ್ನು ಅರಿತರೆ, ಆಗ ಚಾತುರ್ವರ್ಣ್ಯದ ಮೇಲೆ ದ್ವೇಷ ಬರುವುದಿಲ್ಲ. ಇದು ವರೆಗೆ ಭಾರತ ಸುಮಾರು ಐದು ಸಾವಿರ ವರ್ಷಗಳಿಂದ ವಿದೇಶಿಗಳ ಅತ್ಯಾಚಾರಕ್ಕೆ ಗುರಿಯಾಗಿದ್ದರೂ ಇನ್ನೂ ಬದುಕಿರುವ ಗುಟ್ಟು ಕಾಣುವುದು.

ಜೀವನುಂಟು ಎಂದು ಒಪ್ಪಿಕೊಳ್ಳುವುದು ಎಂದರೆ ಹಿಂದುಮುಂದು ಉಂಟು ಎಂದಂತಾಯಿತು. ಸೈನ್ಸ್ಸು ಮುಂದೆ ಮುಂದೆ ಬೆಳೆದು ಇಂದು ಸೂರ್ಯನೂ ನಕ್ಷತ್ರ ರಾಶಿಗಳಲ್ಲೊಂದು ನಕ್ಷತ್ರ ಎನ್ನುವ ಮಟ್ಟಕ್ಕೆ ಎದ್ದಿದೆ. ಇರುವುದೆಲ್ಲ ಎನರ್ಜಿ-ಮ್ಯಾಟರ್ ಕೂಡ ಎನರ್ಜಿಯ ಘನೀಭಾವ ಎನ್ನುತ್ತಿದೆ. ಸೈನ್ಸ್ಸಿನ ಒಂದೊಂದು ಭಾಗ ರಿಯಾಲ್‌ಟಿಯನ್ನು ಒಂದೊಂದು ವಿಧವಾಗಿ ಗುರ್ತಿಸುತ "ಏಕಂ ಸತ್, ವಿಪ್ರಾ ಬಹುದಾವದಂತಿ" ಎಂಬ ಪುರಾತನ ತತ್ವವನ್ನು ಅಂಗೀಕರಿಸುತ್ತಿದೆ. ತಿಳಿ

ದವರು "ಇಂದ್ರಿಯಗಳು ನಿಜವಾಗಿಯೂ ತತ್ವವನ್ನು ಅರಿಯಬಲ್ಲವೆ?" ಎಂದು ಪ್ರಶ್ನಿಸುತ್ತಿದ್ದಾರೆ. ಮೃಗ ಬಲವನ್ನು ನಂಬಿ ಮುಂದುವರಿದವರು, ಮಾನವರ ಮನಸ್ಸನ್ನೇ ಆಳುತ್ತ ಎಲ್ಲೋ ಹಿಂದೆ ಅಡಗಿಕೊಂಡಿರುವ ಕಾಣದ ಕೈಯೊಂದಿದೆ ಎಂದುಕೊಂಡಿದ್ದಾರೆ. ಎದ್ದು ಬಿದ್ದು ಕಣ್ಮರೆಯಾಗುವ ದೇಹದಲ್ಲಿ ಏನೋ ಒಂದು ಶಾಶ್ವತವಾದ ಅಂಶ ಇರಬೇಕು ಎಂಬ ಮಾತು ಸೈನ್ಸ್ ಸಿದ್ಧಾಂತದಲ್ಲಿ ಮುಖ್ಯವಾಗಿ ಬಯಾಲಜಿ ಸೈಕಾಲಜಿಗಳಲ್ಲಿ ಒತ್ತಿ ನುಡಿಯುತ್ತಿದೆ. ಎಂದರೆ ಹಿಂದು-ಮುಂದು ಇರಬೇಕು ಎಂದು ಒಪ್ಪಿಕೊಳ್ಳುತ್ತಿರುವ ಸೈನ್ಸ್ ಹಿಂದು ಮುಂದುಗಳ ಸೇತುವೆಯಾದ ಜೀವನು ಉಂಟು ಎಂದು ಒಪ್ಪಿಕೊಳ್ಳಲು ಇನ್ನೆಷ್ಟು ಕಾಲ ಬೇಕಾದೀತು? ಊರಿಗೆ ಬಂದವಳು ನೀರಿಗೆ ಬರದೆ ಹೋದಾಳೆ?

ಜೀವನುಂಟು ಎಂದವರು ಹಿಂದುಮುಂದುಗಳನ್ನು ಒಪ್ಪುವಂತೆಯೇ ಜೀವಜೀವನಿಗೂ ಸಾಮರಸ್ಯವನ್ನು ಕಲ್ಪಿಸುವ ದೇವನನ್ನು ಒಪ್ಪುತ್ತಾರೆ. ಈಗಿನವರು ದೈವವನ್ನು ಅಂಗೀಕರಿಸಿದ್ದಾರೆ. ಆದರೆ ಜೀವ ದೈವಗಳನ್ನು ಒಟ್ಟಿಗೆ ಅಂಗೀಕರಿಸಿದಲ್ಲದೆ ವ್ಯವಹಾರ ಸುಸೂತ್ರವಾಗಿ ನಡೆಯುವುದಿಲ್ಲ. ಜೀವ ದೇವ ಉಂಟು ಎಂದವರು ರೈಲಿನಲ್ಲಿ ಪ್ರಯಾಣ ಮಾಡುವವರಂತೆ ತಮ್ಮ ಸ್ವಾತಂತ್ರ್ಯವನ್ನು ಅಂಗೀಕರಿಸಿದರೂ ಎಳೆದುಕೊಂಡು ಹೋಗುವ ಎಂಜಿನ್ ಬೇರೆ ಇದೆ ಎಂದು ಅರಿತವರು.

ಜೀವ ದೇವರ ಇರುವಿಕೆಯನ್ನು ಮಾತಿನಿಂದ ಅರಿತವರು ಬಹು ಬಹು ಬಹು ಜನ ಆದರೆ ಸಾಕ್ಷಾತ್ಕರಿಸಿಕೊಂಡವರು ಬಹುಶಃ ಲಕ್ಷಕ್ಕೊಬ್ಬರು ಇರಬಹುದು. ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ । ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂವೇತ್ತಿ ತತ್ವತಃ ಎಂಬ ಭಗವಂತನ ಮಾತು ಸುಳ್ಳಲ್ಲ.

ಈ ಮಾತನ್ನರಿತವರು ಅದು ಏಕೆ ಸುಳ್ಳಲ್ಲ ಎಂಬುದನ್ನು ಬಲ್ಲರು. ದೇವನೇ ಜೀವ ಎನ್ನಿ ಜೀವನೇ ದೇವ ಎನ್ನಿ, ದೇವ ಜೀವರಿಗೆ ನಡುವೆ ಒಂದು ಕೆರೆಯಿದೆ. ದೇಹದ ಒಂದು ಕಡೆ ಕಾಲು ಇನ್ನೊಂದು ಕಡೆ ತಲೆ. ತಲೆಯಲ್ಲಿ ಎಲ್ಲಾ ಆಡಳಿತ ಯಂತ್ರ, ಕಾಲಿನಲ್ಲಿ ಮಾಂಸ ಮೂಳೆ ಹಾಗೆ ಜೀವ ಕಾಲು, ದೇವ ತಲೆ, ತಲೆಗೂ ಕಾಲಿಗೂ ನಡುವೆ ಪ್ರಕೃತಿ ಮೂರು ಮೆಟ್ಟಲು ಮಾಡಿದೆ. ಅದೇ ಗುಣ. ಪ್ರಕೃತಿಯ ಹಿಡಿತದಲ್ಲಿ ಸಿಕ್ಕಿ ಯಾವುದೋ ಮೆಟ್ಟಲಿನಲ್ಲಿ ಬಿದ್ದಿರುವವನು ಜೀವ. ಪ್ರಕೃತಿಯನ್ನು ಮೆಟ್ಟಿ ನಿಂತಿರುವವನು ದೇವ. ಪ್ರಕೃತಿಯಲ್ಲಿ ಸಿಕ್ಕಿ ತಾನಾರು ತಾನೆಲ್ಲಿದ್ದೇನೆ ಎಂದು ತಿಳಿಯುವುದೇ ಕ್ಷೇತ್ರ ಕ್ಷೇತ್ರಜ್ಞಯೋಗ. ಕ್ಷೇತ್ರ ಕ್ಷೇತ್ರಜ್ಞರಿಬ್ಬರೂ ಪುರುಷರು: ಇವರಿಬ್ಬರಿಗೂ ಮೀರಿದವನು ಪುರುಷೋತ್ತಮ ಎಂದು ತಿಳಿಯುವುದೇ ಶ್ರೇಯಸ್ಸು. ಅದು ಬಿಟ್ಟು ಮಿಕ್ಕೆಲ್ಲ ಪ್ರೇಯಸ್ಸು. ಶ್ರೇಯಸ್ಸು ಹಿಡಿದವನಿಗೆ ರೂಪಾಯಿ ಪ್ರೇಯಸ್ಸು ಹಿಡಿದವನಿಗೆ ಆಣೆ ಕಾಸು. ಪರಕೀಯರ ಹಿಡಿತಕ್ಕೆ ಸಿಕ್ಕಿ ಕಂಗಾಲಾಗಿರುವ ಭಾರತ ಎಂದರೆ ಪ್ರೇಯಸ್ಸು ರೂಪುಗೆಟ್ಟಿದೆ ಎಂದರ್ಥ. ಇನ್ನೂ ಶ್ರೇಯಸ್ಸು ಉಳಿದಿದೆ. ರಾಮಕೃಷ್ಣ, ವಿವೇಕಾನಂದರಿಂದ ಹಿಡಿದು ಗಾಂಧಿಯವರೆಗೆ ಬಂದ ಈ ಪರಂಪರೆ ಶ್ರೇಯಸ್ಸು ಪ್ರೇಯಸ್ಸಿಗಿಂತ ಹೆಚ್ಚು ಎಂದು ಪ್ರಾಯೋಗಿಕವಾಗಿ ನಿರ್ದೇಶ ಮಾಡಿಕೊಡಲು, ಡೆಮಾನ್‌ಸ್ಟ್ರೇಟ್ ಮಾಡಲು ಹೊರಕ್ಕೆ ಬಂದು ಪುರುಷೋತ್ತಮನನ್ನು ತಿಳಿದ ಕ್ಷೇತ್ರಜ್ಞರು. ಹೊರಕ್ಕೆ ಬಾರದೆ ಒಳಗೇ ಎಲ್ಲೋ "ಗುಹಾಯಾಂ" ಕುಳಿತಿರುವ ಕ್ಷೇತ್ರಜ್ಞರ ತಂಡ ಎಷ್ಟೋ ಇದೆ. ಅವರು ಭಾರತದ ಯೋಗಕ್ಷೇಮವನ್ನು ನೋಡಿಕೊಳ್ಳುವವರು. ಅವರು ಭಾರತದ ಕ್ಷೇಮಚಿಂತನ ಮಾಡಿದರು. ಭಾರತ ಸ್ವತಂತ್ರವಾಯಿತು. ಭಾರತ ಸ್ವಾತಂತ್ರ್ಯವನ್ನು ಪಡೆಡಿಯುತ್ತಿದ್ದ ಹಾಗೆಯೇ ಏಷ್ಯಾದ ದಾಸ್ಯದ ಸಂಕಲೆಗಳು ಕಳೆಯುತ್ತಿವೆ. ರಾಜಕೀಯ ಸ್ವಾತಂತ್ರ್ಯ ಬಂದಿದೆ. ಬರುತ್ತಿದೆ: ಬರುತ್ತದೆ. ಆದರೆ ರಾಜಕೀಯ ಸ್ವಾತಂತ್ರ್ಯ ಏಕೆ ಬಂತು ಎಂದು ಯೋಚಿಸುವವರ ಸಂಖ್ಯೆ ಹೆಚ್ಚಾಗದಿದ್ದರೆ ಹೇಗೆ? ಅದರಿಂದ ಅನೇಕರು ಇತ್ತ ತಿರುಗಿದ್ದಾರೆ. ಹಿಂದೊಮ್ಮೆ ಲೋಕ ಗುರುವಾಗಿದ್ದ ಭಾರತವು ಇಂದೂ ಅದೇ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಇಲ್ಲಿ ಇಂದು ಹಣತೆಯ ದೀಪವಾಗಿರುವ ಸಂಸ್ಕೃತಿ ಮತ್ತೊಮ್ಮೆ ಸೂರ್ಯನಂತೆ ಪ್ರಖರವಾಗಿ ಬೆಳಗಬೇಕು. ಇಲ್ಲದಿದ್ದರೆ, ಕತ್ತಲೆ, ಚಳಿ, ಜಾಡ್ಯ ಹೋಗಿ ಜಗತ್ತಿಗೆ ಆರೋಗ್ಯ ಬರುವುದಿಲ್ಲ.

ಸಂಸ್ಕೃತಿಯ ವಾಹಿನಿಯಾಗಿ ಭಾಷೆಗಳು ಬಡವರೂ ಐಶ್ವರ್ಯವಂತರಂತೆಯೇ ದುಡ್ಡು ಕಾಸೂ ಇಟ್ಟುಕೊಂಡಿದ್ದರೂ ಅವರನ್ನೂ ಯಾರೂ ಶ್ರಿಮಂತರೆನ್ನುವು

ದಿಲ್ಲ. ನದಿ ಬೇಸಗೆಯಲ್ಲಿ ಒಣಗಿಕೊಂಡಿದ್ದರೆ ಅದರ ಹರಿಯುವ ಪಾತ್ರವೂ ಹೋದೀತೆ? ಮತ್ತೆ ಮಳೆ ಬಂದಾಗ ಆ ಪಾತ್ರದಲ್ಲಿ ಅಲ್ಲದೆ ಇನ್ನೆಲ್ಲೋ ಪ್ರವಾಹವು ಬಂದೀತೆ? ಹಾಗೆ ಕೊರಗಿದ್ದ ಸಂಸ್ಕೃತಿಯ ಸರಸ್ವತೀ ನದಿ ಇಂದು ಮತ್ತೆ ಪ್ರಕಟವಾಗಿ ಹರಿಯುವ ಕಾಲ ಬಂದಿದೆ. ಭಾರತದ ಸಂಸ್ಕೃತಿಯೆಂಬ ನದಿಯ ಪಾತ್ರ ಸಂಸ್ಕೃತ.

ಸಂಸ್ಕೃತ ಸತ್ತ ಭಾಷೆ ಎಂದವರ ಕಾಲವಾಯಿತು. ನಾಣ್ಯ ಚಲಾವಣೆಯಲ್ಲಿದ್ದು ಮಾಸಿ ಹೋದರೆ, ನೋಟು ಕೈಯಾಡಿ ಕೈಯಾಡಿ ಹರಿದುಹೋದರೆ, ನಾಣ್ಯ ನೋಟು ಹಾಕುವ ಸರಕಾರ ಹೋಯಿತೆ? ಹಾಗೆ ಓದುವವರು ಜೀವನಕ್ಕಾಗಿ ಬೇರೆ ಓದು ಹಿಡಿದರೆ, ಸಂಸ್ಕೃತಿ ಹೋಯಿತೆ? ವೇಷ, ಭಾಷೆ, ಭಾವ ಎಲ್ಲವೂ ಬೇರೆಯಾಗುತ್ತಿದೆಯಾಗಿ ನಮ್ಮತನ ಹೋದಂತಿದೆ. ಆದರೆ "ಗುಹಾಯಾಂ" ಕುಳಿತ ಸರಕಾರ ಈ ನಾಣ್ಯಗಳನ್ನೂ ಹಿಂದಕ್ಕೆ ತೆಗೆದುಕೊಂಡು ಹೊಸ ನಾಣ್ಯ ಹಾಕುತ್ತದೆ. ಆ ಪ್ರಯತ್ನ ಅಲ್ಲಿ ನಡೆದುದರ ಫಲವಾಗಿ ಈಗ ಎಲ್ಲರ ಬಾಯಲ್ಲೂ ಸಂಸ್ಕೃತ ಬೇಕು, ಸಂಸ್ಕೃತ ಬೇಕು ಎಂದು ಬರುತ್ತಿರುವುದು.

ಸಂಸ್ಕೃತ ಮರೆಯಾಗದಂತೆ ಪ್ರಕೃತಿ ಅದನ್ನು ಕೆಲವರ ಮಡಿಲಲ್ಲಿ ಮುಚ್ಚಿಟ್ಟಿದ್ದಳು. ಹಿಂದೆ ಭೋಜನ ಕಾಲದಲ್ಲಿ ನೇಗೆಯವರೂ ಕುಂಬಾರರೂ ಕೂಡಾ ಸಂಸ್ಕೃತ ಬಲ್ಲವರಾಗಿದ್ದರು. ಸಂಸ್ಕೃತ ಬಲ್ಲೆ ಎಂದು ನಾನೂ ಸಂಸ್ಕೃತ ಎನ್ನುವುದು ಬೇರೆ. ಸಂಸ್ಕೃತನಾಗಲು ಸಂಸ್ಕೃತ ಓದುತ್ತೇನೆ ಎನ್ನುವುದು ಬೇರೆ. ಈ ಎರಡನೆಯ ಜಾತಿಯ ವಿದ್ಯಾರ್ಥಿಗಳು ಈಗ ಬೇಕಾಗಿರುವುದು. ಮೊದಲನೆಯ ಜಾತಿ ವಿದ್ವಾಂಸರದು. ಎರಡನೆಯದು ಬದುಕಿಸುವವರ ಜಾತಿ. "ಎಚ್ಚರಿಕೆ! ಒಂದು ಸ್ವರ ಹೆಚ್ಚು ಕಡಿಮೆಯಾದರೆ ಮನೆ ಹಾಳಾದೀತು! ಅದರಿಂದ ಅದರ ತಂಟೆಗೇ ಹೋಗಬೇಡಿ" ಎಂಬುದು ಮೊದಲನೆಯವರ ಮಾತು. ಈಗಿನವರು ಹೇಳುವುದಿಲ್ಲವೇ ಸೊಳ್ಳೆ ಎಂದರೆ ಮಲೇರಿಯಾ, ಇಲಿ ಎಂದರೆ ಪ್ಲೇಗ್, ಎಂಬಂತೆ ಇದು. ಇನ್ನೊಂದು ಗುಂಪಿನ ವಾದ "ಏಕಶ್ಶಬ್ದಸ್ಸುಷ್ಟು ಪ್ರಯುಕ್ತ ಸ್ಸ್ವರ್ಗೇಲೋಕೇ ಕಾಮಧುಗ್ಭವತಿ—ಒಂದೇ ಮಾತು ಚೆನ್ನಾಗಿ ನುಡಿದರೆ ಸಾಕು ಸ್ವರ್ಗಲೋಕದಲ್ಲಿ ಕಾಮಧೇನುವಾಗುತ್ತದೆ" ಎಂದು. ಭಾಷೆಯನ್ನು ಸ್ತ್ರೀ ಎಂದ ವಿಚಕ್ಷಣರು ಸ್ತ್ರೀಯಂತೆಯೇ ಭಾಷೆಯೂ ಯಾವಾಗಲೂ ದೋಷವತಿ ಎಂದು ಮನಗಂಡು ಆಡುವ ಮಾತು ಒಂದು ಚೆನ್ನಾದರೆ ಸಾಕು ಎಂದರು. ಮಾತು ಚೆನ್ನಾಗುವುದು ಎಂದರೆ ಅರ್ಥ ತಿಳಿದು ನುಡಿಯುವುದು. ಗಿಣಿ ಮಾತಲ್ಲ; ನಾಟಕದ ಮಾತಲ್ಲ; ಒಳಗಿನ ಅರ್ಥವನ್ನು ಮೂಡಿಸಲು ನುಡಿಯುವ ಮಾತು. ಗಣಿತದಲ್ಲಿ ಕೊಡುವ ಲೆಕ್ಕದ ಲೆಕ್ಕಾಚಾರ ಬೇರೆ: ಬ್ಯಾಂಕಿನಲ್ಲಿ ನಡೆಯುವ ಲೆಕ್ಕಾಚಾರ ಬೇರೆ. ತಿಳಿದು ಆಡುವ ಮಾತು ಬ್ಯಾಂಕಿನ ಲೆಕ್ಕಾಚಾರದಂತೆ. ಅದರಿಂದ ಅದರಲ್ಲಿ ಬದುಕಿಸುವ ಗುಣವಿದೆ.

ಈಗ ನಮಗೆ ಸಂಸ್ಕೃತ ಬೇಕಾಗಿರುವುದು ಹಿಂದಿನಂತೆ ಹದಿನೆಂಟು ದಿನ ವಾದ ಮಾಡುವ ಪ್ರತಿವಾದಿ ಭಯಂಕರರನ್ನು ಸೃಷ್ಟಿ ಮಾಡುವುದಕ್ಕಲ್ಲ. ವಾಲ್ಮೀಕಿ, ವ್ಯಾಸ, ಕಾಲಿದಾಸಾದಿಗಳು ಬರುವುದಕ್ಕೆ ಒಂದು ವಾತಾವರಣ ಬೇಕು. ಹಳ್ಳಿಯಲ್ಲಿ ಮೈಸೂರು ಬ್ಯಾಂಕೇಕೆ ಬೇಕು? ಹಾಗೆ ಸಂಸ್ಕೃತ ಕಲಿತವರೆಲ್ಲ ಕಾಳಿದಾಸರಾಗುವುದಿಲ್ಲ. ಆದರೆ, ಕಾಳಿದಾಸನ ಸೊಬಗನ್ನು, ವ್ಯಾಸರ ಗಾಂಭೀರ್ಯವನ್ನು, ವಾಲ್ಮೀಕಿಯ ರಹಸ್ಯವನ್ನು ಅರಿಯುವವರ ಪಡೆ ಹೆಚ್ಚಾಗಬೇಕು. ಈಗಿನ ಪುನಸ್ಸೃಷ್ಟಿಯ ಗುಟ್ಟನ್ನು ಉಪನಿಷತ್ತಿನ ಋಷಿಗಳು ಯುಗ ಯುಗಾಂತರಗಳಲ್ಲಿಯ ಏವಂ ವೇದ ಎಂಬ ಒಂದು ಮಾತಿನಲ್ಲಿ ಹೇಳಿದರು. ರಾಜಕನ್ಯಾವಿವಾಹದಲ್ಲಿ ಅವಳ ಕೈ ಹಿಡಿದವನೊಬ್ಬನಿಗೆ ಮದುವೆ ಮಿಕ್ಕವರಿಗೆಲ್ಲ ಕೇವಲಂ ತಮಟ ಧ್ವನಿ; ಆದರೆ ತಮಟ ಧ್ವನಿಯಿಲ್ಲದೆ ವಿವಾಹವಿಲ್ಲ; ಹಾಗೆಂದು ತಮಟ ಧ್ವನಿಯೇ ವಿವಾಹವಲ್ಲ; ವಿವಾಹದ ಗುರುತಾಗಿ ತಮಟ ಧ್ವನಿ. ಅದರಂತೆ, ಸಂಸ್ಕೃತಿಯ ಭಂಡಾರವಾದ ಸಂಸ್ಕೃತ ವಾಣಿಯ ಅಧ್ಯಯನ ನಡೆಯಬೇಕಾಗಿರುವುದು ಈ ದೃಷ್ಟಿಯಿಂದ.

ಈಗ ನಡೆಯುತ್ತಿರುವ ಸಂಸ್ಕೃತ ವಿದ್ಯಾಭ್ಯಾಸ ಯೂನಿವರ್ಸಿಟಿಯ ವಿದ್ಯಾಭ್ಯಾಸದ ಹಾಗೆಯೇ ಮಿಲ್ ವೈಭವ. ಯೂನಿವರ್ಸಿಟಿಯ ಮುದ್ರೆಗೆ ಬೆಲೆ ಇದೆ. ಇದಕ್ಕೆ ಇಲ್ಲ. ಅಷ್ಟೇ ವ್ಯತ್ಯಾಸ.

ಸಂಸ್ಕೃತದ ಅಧ್ಯಯನದ ರೀತಿ ಬದಲಾಯಿಸಬೇಕು. ಇಲ್ಲದಿದ್ದರೆ ಹಿಂದಿನಂತೆ ನಾಲ್ಕೈದು ವರ್ಷದ

ಹುಡುಗರಾಗಿರುವಾಗಲೇ ಆರಂಭಿಸಬೇಕು. ಇಂಗ್ಲಿಷ್ ಜೊತೆಯ ಸಂಸ್ಕೃತವಂತೂ ಕತ್ತೆಯೂ ಅಲ್ಲ: ಕುದುರೆಯೂ ಅಲ್ಲ. ಹೈಸ್ಕೂಲಿನಲ್ಲಿಯೇ ವಿಚಕ್ಷಣೆಯಿಂದ ಪಾಠ ಹೇಳಿದರೆ ಸಾಹಿತ್ಯ, ಶಾಸ್ತ್ರ, ವೇದ ಮೂರನ್ನೂ ಅಷ್ಟಷ್ಟಾಗಿ ಅದರ ರುಚಿ ಮನಸ್ಸಿಗೆ ಹಿಡಿಯುವಂತೆ ಕಲಿಸಬಹುದು.

ಈಗ ಭಾಷಾಧ್ಯಯನದಲ್ಲಿರುವ ವಿಧಾನ ವ್ಯಾಕರಣವನ್ನು ತಲೆಯ ಮೇಲೆ ಕೂರಿಸಿದೆ. ಭಾಷೆ ಕಲಿಯುವುದು ವ್ಯಾಕರಣ ಸೂತ್ರಗಳ ಉದಾಹರಣವಾಗಿ ಅಲ್ಲ, ಮನೋಭಾವವನ್ನು ಪ್ರಕಟಿಸುವುದಕ್ಕೆ ಎಂಬ ಗುರಿಯೇ ಮರೆತು ಹೋಗಿದೆ. ವ್ಯಾಕರಣ, ಭಾಷಾಂತರ, ಅಷ್ಟು ಶ್ಲೋಕಗಳು, ಆದರೆ ಪಾಠ ಮುಗಿಯಿತು. ವಾರಕ್ಕೆ ಎಂಟು ಗಂಟೆ ಪಾಠ ಹೇಳಿ ಮಿಕ್ಕ ವಿಷಯಗಳನ್ನೆಲ್ಲ ಇಂಗ್ಲಿಷಿನಲ್ಲಿಯೇ ಹೇಳಿಕೊಟ್ಟರೂ ಆ ಭಾಷೆ ಬರುವುದಿಲ್ಲ ಎನ್ನುವವರೇ, ವಾರಕ್ಕೆ ನಾಲ್ಕು ಪಾಠದಲ್ಲಿ ಕೆಲವು ಶ್ಲೋಕಗಳನ್ನು ಹೇಳಿಕೊಟ್ಟು, ವ್ಯಾಕರಣ ಹೇಳಿ, ಬೇಸರಪಡಿಸಿ, ಸಂಸ್ಕೃತ ಭಾಷೆಯ ಅಧ್ಯಯನ ಪೂರೈಸಿತು ಎನ್ನುವರಲ್ಲ! ಇದೆಲ್ಲಿಯ ನ್ಯಾಯ!

ಈ ವಿಧಾನ ಬದಲಾಗಬೇಕು. ಸಂಸ್ಕೃತ ವ್ಯಾಕರಣ, ನ್ಯಾಯ ಶಾಸ್ತ್ರ, ಇವೆಲ್ಲ ಕಾಶಿಕಾ ನ್ಯಾಯದಂತೆ ಎನ್ನುವುದನ್ನು ಮರೆಯಬಾರದು. "ಕಿಮಧೀತೇ ಮಹಾಭಾಷ್ಯೇ ಕಾಶಿಕಾಯಃ ಪ್ರಯೋಜನಂ । ಅನದೀತೇ ಮಹಾಭಾಷ್ಯೇ ಕಾಶಿಕಾ ಕಿಂ ಪ್ರಯೋಜನಂ" ಎಂಬಂತೆ ನೀಲಕಂಠೀಯ ಶಿತಿಕಂಠೀಯಗಳಿಗೆ ಹಂಬಲಿಸುತ್ತಿದ್ದ ಕಾಲವಾಯಿತು. ಈಗ ಮಾತೃಭಾಷೆ ಬಿಡುವಂತಿಲ್ಲ: ಹಿಂದಿ ಕಲಿತೇ ತೀರಬೇಕು: ಇಂಗ್ಲಿಷ್ ಬಿಟ್ಟರೆ ಜಗತ್ತಿನ ಜ್ಞಾನಭಂಡಾರದ ಬಾಗಿಲು ಮುಚ್ಚಿದ ಹಾಗೆ: ಹೀಗೆ ಮೂರು ಭಾಷೆಗಳ ಜೊತೆಗೆ ಸಂಸ್ಕೃತವಾಗಿರುವಾಗ, ಏನು ಮಾಡಬೇಕು? ಬೆಟ್ಟ ಹತ್ತುವವನು ಹತ್ತು ಮೂಟೆ ಹೊರಬೇಕಾಗಿದ್ದರೆ ನಮ್ಮ ಮೂಟೆಯೂ ಹೊತ್ತುಕೋ ಎನ್ನುವುದೋ? ಅಥವಾ ಅವನು ಹೊರಬಲ್ಲಷ್ಟು ಕೊಟ್ಟು ಮಿಕ್ಕುದನ್ನು ಅತ್ತ ಇಡುವುದೋ?

ಅಲ್ಲದೆ ಸಾಹಿತ್ಯವೊಂದೇ ಅಲ್ಲ ಸಂಸ್ಕೃತದ ಭಾಷೆಯಲ್ಲಿರುವುದು. ಚಂಪೂ ನಾಟಕಗಳನ್ನು ಓದಿ ವಿದ್ವತ್ಪರೀಕ್ಷೆ ಮಾಡಿದವರು ಎಷ್ಟು ಜನ ರಾಮಾಯಣ ಭಾರತಗಳನ್ನು ಓದಿರುತ್ತಾರೆ? ನಾವು ಚಂಪೂ ಹಿಡಿಯೋಣವೋ? ಭಾರತ ರಾಮಾಯಣ ಹಿಡಿಯೋಣವೋ? ಚಂಪೂಭಾರತ ಚಂಪೂರಾಮಾಯಣಗಳೆಂದರೆ ಆದೀತು. ಆದರೆ ಮದುವೆ ಫೋಟೋಗಲ್ಲ: ಫೋಟೋದಲ್ಲಿರುವ ಹುಡುಗಿಗೆ. ಹಾಗೆ ಭಾರತರಾಮಾಯಣಗಳನ್ನು ಮೂಲದಲ್ಲಿ ಓದಬೇಕು. ಕಾಲಿದಾಸನಂತಹ ಕವಿಯಿಲ್ಲ ಎಂದು ನಾವೆಲ್ಲ ಒಪ್ಪುತ್ತೇವೆ. ಆದರೆ, ಆ ಮಹಾನುಭಾವನ ಕಾವ್ಯ ನಾಟಕ ಪಾಠದಲ್ಲಿ ಆತನು ಮಹಾಕವಿ ಎಂದು ತೋರಿಸುವ ಅಂಶ ಏನು ಒತ್ತುತ್ತೇವೆ? ಮತ್ತೆ ವ್ಯಾಕರಣ, ಅಲಂಕಾರ ನುಗಿಯಿತು. ಇಂದಿಗೂ ಮಲ್ಲಿನಾಥರ ವ್ಯಾಖ್ಯಾನವೇ ಪಾಠ ಹೇಳುವವರ ಗುರಿ. ಮಲ್ಲಿನಾಥರು ಹೇಳಿದ ಮಾಘೇಮೇಘೇ ಗತಂ ವಯಃ ಎಂಬ ಮಾತನ್ನು ಸಮರ್ಥಿಸಬಲ್ಲಂತೆ ಪಾಠ ಹೇಳುವವರು, ಹೇಳಬಲ್ಲವರು ಎಷ್ಟು ಮಂದಿ?

ಆಯಿತು. ನಾಟಕಾಂತಂ ಸಾಹಿತ್ಯಂ. ಆದರೆ, ಅದು ಮುಗಿಯುವುದಕ್ಕೆ ಎಷ್ಟು ವರ್ಷ? ಸುಮಾರು ಹನ್ನೆರಡು ವರ್ಷ. ಆ ವೇಳೆಗೆ ವಿದ್ಯಾರ್ಥಿಯ ಉತ್ಸಾಹವೆಲ್ಲ ಸರಸ್ವತೀ ನದಿಯಾಗಿರುತ್ತದೆ. ಅಲ್ಲದೆ, ಮೇಲೆ ಹೇಳಿದಂತೆ ಸಂಸ್ಕೃತದಲ್ಲಿ ಇರುವುದು ಸಾಹಿತ್ಯವೊಂದೇ ಅಲ್ಲ. ಈಗ ಮಿಕ್ಕ ಶಾಸ್ತ್ರಗಳೆಲ್ಲ ಹೋಗಿದ್ದರೂ ದರ್ಶನ ಶಾಸ್ತ್ರಗಳು, ವೇದಗಳೂ ಉಳಿದಿವೆ. ದರ್ಶನ ಶಾಸ್ತ್ರಗಳ ಸ್ಥೂಲ ಪರಿಚಯವಿಲ್ಲದೆ, ವೇದಗಳಲ್ಲಿ ಮಂತ್ರ ಬ್ರಾಹ್ಮಣಗಳಿಲ್ಲದಿದ್ದರೂ ಉಪನಿಷತ್ತುಗಳಲ್ಲಿಯಾದರೂ ಕೊಂಚ ಕೈಯಾಡದೆ ಸಂಸ್ಕೃತದ ಅಧ್ಯಯನ ಮುಗಿಯಿತು ಹೇಗೆ?

ಈ ಉದ್ದೇಶವನ್ನು ಸಾಧಿಸಲು ಬೇರೊಂದು ಸಂಸ್ಥೆಯೇ ಬೇಕು. ಇಂದಿನಂತೆಯೇ ಸ್ಕೂಲುಸಂಸ್ಕೃತ ಎಂದರೆ ರಾಜಮುದ್ರೆ ಬಿದ್ದು ಅದರಿಂದ ಲಭಿಸುವ ಫಲ ಹೆಚ್ಚಬಹುದು. ಆದರೆ ಅದರಿಂದ ಮನಶ್ಶಾಂತಿ ಬರುವುದಿಲ್ಲ. S.S L.C. ಪ್ಯಾಸ್ ಮಾಡಿದರೆ ಕ್ಲಾರ್ಕ್ ಆಗಬಹುದು. My dear Sir, yours obediently ಬರೆಯಬಹುದು. ಆದರೆ ಇಂಗ್ಲಿಷ್ ತಿಳಿದಂತೆ ಆಗಲಿಲ್ಲ. ಹಾಗೆ ಅದೇ ಮಾತನ್ನು ಹಿಂದೀ ಪ್ರಚಾರದ ವಿಷಯವಾಗಿ ಯಾರಾದರೂ ಹೇಳಬಲ್ಲರೇನು? ಮೂರು ತಿಂಗಳಲ್ಲಿ ಹಿಂದಿ ಕಲಿತವನು ಇಷ್ಟವಿದ್ದರೆ ಇನ್ನೂ ಮೂರು ತಿಂಗಳು: ಇನ್ನೂ ಮೂರು ತಿಂಗಳು: ಹೀಗೆಯೇ ಮುಂದೆ ಮುಂದಕ್ಕೆ ಹೋಗಲು

ಮೆಟ್ಟಲುಗಳಿವೆ. ಸಂಸ್ಕೃತಾಧ್ಯಯನ ಹೀಗೆ ಏಣಿಯಾಗಬೇಕು.

ಈ ಏಣಿಯನ್ನು ಕಲ್ಪಿಸಿರುವುದು ಮೂಲ ಸಂಸ್ಕೃತ. ವ್ಯಾಕರಣದಲ್ಲಿ ತಿಳಿಯಲೇ ಬೇಕಾದ ಅಂಶ ರಾಮಾಯ ಹರಯೇ ಎನ್ನುವುದು ಚತುರ್ಥೀ ಏಕವಚನ ಎಂಬುದು. ಭೂಧಾತುವಿನ ವರ್ತಮಾನ ಎಂಬುದು ಭವತಿ ಎಂದು ಅಲ್ಲಿಂದಾಚೆಗೆ ಹೋಗಿ ಆ ರೂಪಗಳ ಸಿದ್ಧಿಯಾಗುವುದನ್ನು ಹೇಳುವುದು ಎಂದರೆ, ಟಿಕೆಟ್ ಕೇಳುವುದಕ್ಕೆ ಬಂದ ಪ್ರಯಾಣಿಕನಿಗೆ ಟಿಕೇಟು ಮಾಡುವುದು ಹೇಗೆ ಎಂದು ಉಪನ್ಯಾಸ ಕೊಟ್ಟ ಹಾಗೆ: ಅಥವಾ ಸಂಸ್ಕೃತದ ರಸಿಕರ ಭಾಷೆಯಲ್ಲಿ "ನೀವೀವಿಮೋಕ್ಷವೇಲಾಯಂ ವಸ್ತ್ರಮೌಲ್ಯ ಮಿಚಿಂತನಂ"

ಅಲ್ಲದೆ, ಭಾಷಾ ವ್ಯವಹಾರವೆನ್ನುವುದು ಸಿದ್ಧರೂಪ ವ್ಯವಹಾರಃ ಸಾಧ್ಯ ರೂಪಗಳನ್ನು ಅರಿತರೆ ತಪ್ಪಿಲ್ಲ. ಅರಿಯದಿದ್ದರೆ ನಷ್ಟವಿಲ್ಲ. ಅದರಿಂದ ಸಿದ್ಧರೂಪವನ್ನು ಅರಿತುಕೊಳ್ಳುವುದಕ್ಕೆ ಬೇಕಾದ, ಮಿನಿಮಂ ವ್ಯಾಕರಣ ನಿಯಮಗಳನ್ನು ಹೇಳಿ, ಭಾಷೆಯ ಜೀವಾಳವಾದ ಭಾವವನ್ನು, ಅದರ ವೈಶಿಷ್ಟ್ಯವನ್ನು ತೋರಿಸಿ ಕೊಡುವ ರೀತಿಯಲ್ಲಿ ಪಾಠ ಹೇಳುತ್ತ, ಹೋಗುವುದು ಮೂಲ ಸಂಸ್ಕೃತದ ಉದ್ದೇಶ.

ಮೂಲ ಸಂಸ್ಕೃತವು ಸಾಹಿತ್ಯವನ್ನು ಅರವತ್ತು ಪಾಠಗಳಲ್ಲಿ ಮುಗಿಸುವುದು. ದಿನಕ್ಕೊಂದರಂತೆ ಈ 60 ಪಾಠಗಳನ್ನು ಮುಗಿಸಿದವರಿಗೆ ಗೀತೆಯು ಅರ್ಥವಾಗುವ ಮಟ್ಟಿಗೆ ಬಾಷೆಯು ಸ್ವಾಧೀನವಾಗುವುದು.

ಎರಡನೆಯ ಮೆಟ್ಟಲು ಶಾಸ್ತ್ರಗಳು. ಅದರಲ್ಲಿ ಷಡ್ದರ್ಶನಗಳು ಮೂಲ. ಇತರ ಶಾಸ್ತ್ರಗಳಿಗೂ ಅದಕ್ಕೂ ಇರುವ ಸಂಬಂಧ, ಆ ಶಾಸ್ತ್ರದ ಚರಿತ್ರೆ, ಆ ಶಾಸ್ತ್ರದ ಪ್ರಮೇಯಗಳು ಇವು ಜೊತೆಗೆ ಬೌದ್ಧ, ಶೈವ, ವೈಷ್ಣವ, ಶಾಕ್ತೇಯ ಶಾಸ್ತ್ರಗಳು ಗೀತೆಯ 2 ಮತ್ತು 18ನೆಯ ಅಧ್ಯಾಯಗಳು ಶಾಂಕರಭಾಷ್ಯದೊಡನೆ ಇದಿಷ್ಟು ಸೇರಿ 90 ದಿನಗಳಲ್ಲಿ.

ಮೂರನೆಯ ಮೆಟ್ಟಲು ಸಂಹಿತೆ, ಬ್ರಾಹ್ಮಣ, ಉಪನಿಷತ್ತು, ಜೊತೆಗೆ ಗೀತಾ ಸಭಾಷ್ಯ ಪೂರ್ತಿಯಾಗಿ, ಆಧುನಿಕ ದರ್ಶನಶಾಸ್ತ್ರಗಳ ಸ್ಥೂಲಪರಿಚಯ ಇದೂ 90 ದಿನಗಳಲ್ಲಿ.

ಮೊದಲನೆಯ ಮೆಟ್ಟಲು ಪೋಸ್ಟಲ್ ಕೋರ್ಸಾಗಿಯೂ ಓದಬಹುದು. ಎರಡು ಮೂರನೆಯ ಮೆಟ್ಟಲು: ಉಪಾಧ್ಯಾಯರ ಬಳಿಯಲ್ಲಿಯೇ ಆಗಬೇಕು. ಇದು ಸ್ಥೂಲದೃಷ್ಟಿಯಿಂದ ಮೂಲಸಂಸ್ಕೃತವು ಸಾಧಿಸಬೇಕೆಂದಿರುವ ಅಂಶ.

ಓದಿನ ಜೊತೆಯಲ್ಲಿ ಅನುಷ್ಠಾನ ನಡೆಯಬೇಕು ಎನ್ನುವುದು ಎಲ್ಲಕ್ಕಿಂತ ಮುಖ್ಯ. ಅದರಿಂದ ಎರಡನೆಯ ಮೆಟ್ಟಲಿಗೆ ಮುಂಚೆ, ಆ ಮೇಲೆ ಎರಡೆರಡು ತಿಂಗಳು ಗುರುಕುಲವಾಸ. ಆಗ ವಿದ್ಯಾರ್ಥಿಯು ಹಗಲಿರುಳೂ ಚಿಂತನ ಮಾಡಿ ಕಲಿತುದನ್ನು ಸಾರ್ಥಕಪಡಿಸಿಕೊಳ್ಳಬೇಕು. ಮೂರನೆಯ ಮೆಟ್ಟಲಾದ ಮೇಲೆ ಮತ್ತೆ ಒಂದು ತಿಂಗಳು ಕಲಿತುದನ್ನು ಕಲಿಸಿದವರ ಮುಂದೆ ಕುಳಿತು ಉಪನ್ಯಾಸವಾಗಿ, ಚರ್ಚೆಯಾಗಿ ಪರೀಕ್ಷೆ ಕೊಡಬೇಕು. ಅನಂತರ ಗಾಯತ್ರಿಹೋಮ. ಕಲಿತ ವಿದ್ಯೆ ಸಾರ್ಥಕವಾಗುವುದು ಹೋಮ ಮಾಡಿದಾಗ ಎಂದು ಹೇಳುವುದಕ್ಕೆ.

ಮೂಲ ಸಂಸ್ಕೃತ ಪ್ರಚಾರ ಮಾಡುವ ಸಂಸ್ಥೆ ಗೀರ್ವಾಣ ವಿದ್ಯಾಪೀಠ. ಮೂಲ ಸಂಸ್ಕೃತವನ್ನು ಮೂರು ಮೆಟ್ಟಲುಗಳಲ್ಲೂ ಬೋಧಿಸುವುದು ಗೀತಾ ಕಾಲೇಜು. ಇವೆರಡರ ಉದ್ದೇಶ ವಿಶ್ವಧರ್ಮ ಪ್ರಚಾರ. ಆ ವಿಶ್ವಧರ್ಮವನ್ನು ಬೋಧಿಸುವ ಗ್ರಂಥ ಭಗವದ್ಗೀತೆ.

ಸರ್ವ ಶಾಸ್ತ್ರಗಳೂ ಉಪನಿಷತ್ತಿನ ಉಪಬೃಂಹಣಗಳು ಸರ್ವೋಪನಿಷತ್ತುಗಳ ಸಾರವೇ ಗೀತೆ. ಅದರಿಂದ ಗೀರ್ವಾಣ ವಿದ್ಯಾಪೀಠದಲ್ಲಿ ಗೀತೆಗೆ ಅಷ್ಟು ಮಹತ್ವ.

ಗೀತೆಯ ವಿಚಾರವಾಗಿ ಭಾರತದ ಸಂಸ್ಕೃತಿಯ ವಿಚಾರವಾಗಿ ಬರುವ ಸಂಶಯಗಳನ್ನು ಪರಿಹರಿಸುವುದಕ್ಕೆ ವಿದ್ಯಾಪೀಠವು ಸಿದ್ಧ. ಸರ್ವದಾ ಸಿದ್ಧ.

(ಈಗ ಈ ವಿದ್ಯಾಪೀಠವು ಬೆಂಗಳೂರಿನ ಪಕ್ಕದಲ್ಲಿ ದೇವಾಶ್ರಮದಲ್ಲಿ ಸ್ಥಾಪಿತವಾಗಿದೆ.)

ಪ್ರೇಮ ಧರ್ಮ

ಶ್ರೀ ಮಧುಗಿರಿ ವಾಸುದೇವ ಮೂರ್ತಿ.

ಪ್ರೇಮ ಧರ್ಮಕ್ಕೆ ಒಂದು ಸೂತ್ರ ಬೇಕು ಎಂದರೆ ನಾವು ಬಹಳ ದೂರ ಹೋಗಬೇಕಾಗಿಲ್ಲ. ಸುಲಲಿತವಾಗಿ ಹೇಳಿಕೊಟ್ಟಿದ್ದಾರೆ ನಮ್ಮ ಹಿರಿಯರು. ದಿನ ನಾವು ಅದನ್ನು ಪಾರಾಯಣ ಮಾಡುತ್ತಿರುತ್ತೇವೆ– 'ಎಲ್ಲ ಜನಕ್ಕೆ ಸುಖ ಆಗಲಿ' ಎಂದು. ಅಂದವಾದ ಈ ಎರಡು ಮಾತುಗಳನ್ನು ವಿಮರ್ಶಿಸುತ್ತ ಹೋದರೆ ಒಂದು ವಿಶಾಲ ಪ್ರಪಂಚ ನಮ್ಮ ಎದುರಿಗೆ ಬರುತ್ತದೆ.

ಸುಖ ಆಗಲಿ ಎಂದು ಸೂತ್ರ ಹೇಳಿತು. ಸುಖ ಎಂದರೇನು? ಮಹಾಭಾರತದ ಉದ್ಯೋಗಪರ್ವದ ಒಂದು ಪದ್ಯವನ್ನು ಕುಮಾರವ್ಯಾಸ ಹೀಗೆ ಹೇಳಿದ್ದಾನೆ; ಕೃಷ್ಣ ಕರ್ಣನಿಗೆ ಹೇಳುವ ಮಾತು:

> ಎನಲು ಕರ್ಣನ ಧೃಢವ ಕಂಡನು
> ಮನದೊಳುತ್ಸಾಹಿಸಿದನಾದೊಡೆ
> ಯನುಜರೈವರ ಹದನು ನಿನ್ನದು ಬಲುಹ
> ಮಾಡಿದೊಡೆ ।
> ಮನಕೆ ಖತಿಯುಹುದರುಹದಿದ್ದೊಡೆ
> ಯೆನಗೆ ಗುಣವಲ್ಲೆಂಬ ಕಾರಣ
> ವಿನಿತನಾನರುಹಿದೆನು ನೀಂ ಸುಖಿಯಾಗು
> ಹೋಗೆಂದ ॥

ಕೃಷ್ಣ ಕರ್ಣನಿಗೆ ಸುಖಿಯಾಗು ಎಂದು ಹೇಳುತ್ತಾನೆ. ಕರ್ಣ ಸುಖ ಕಾಣುವುದು ಯಾವುದರಲ್ಲಿ? ಕೌರವ ರಾಯನೇ ದಾತಾರ. ಆತನ ಹಗೆ ತನ್ನ ಹಗೆ. ಕುರುನೃಪತಿಗೆ ಆದದ್ದು ತನಗೆ. ಕೌರವೇಶ್ವರನ ಒಲವು ತಪ್ಪಿದ ಬಳಿಕ ಜಗದೊಳಗೆ ತನಗೆ ಆಪ್ತಜನವಿಲ್ಲ. ತನ್ನನ್ನು ಮನ್ನಣೆಯಲ್ಲಿ ಸಲಹಿದವನು ಆತ. ನೋಡಿ ದಣಿಯ, ಉಚಿತವ ಮಾಡಿ ದಣಿಯ, ಬಿರುದ ಹೊಗಳಿಸಿ ಹಾಡಿ ದಣಿಯ, ಅಂತಹ ಮಾನನಿಧಿ ಕೌರವೇಂದ್ರನನ್ನು ಮರೆಯುವುದು ತನಗೆ ಅಸಾಧ್ಯ. ಆತನಿಗಾಗಿ

> ಅರುಣಜಲದಾಜ್ಯದೊಳು ಬಂಬಲು
> ಗರುಳ ಚರುವಿನೊಳೆಲುವಿನೊಟ್ಟಿಲ
> ಬೆರಳ ಸಮಿಧೆಯೊಳಡಗಿನಖಿಳಾಹುತಿಯ ರಚನೆಯೊಳು ।
> ನರಕಪಾಲದ ಪಾತ್ರೆಯೊಳು ಸಿಡು
> ದೆರಳೆಗಳ ಕೇಶದ ಸುಧರ್ಭಾಗಂ
> ಕುರದೊಳಾಹವಯಜ್ಞದೀಕ್ಷಿತನಹೆನು........॥

ಎಂಬುದು ಕರ್ಣನ ಧೃಡ. ಅದು ಅವನ ಸುಖ. ಕೃಷ್ಣ ಅವನ ಕಿವಿಯಲ್ಲಿ ಭೇದಮಂತ್ರವನ್ನು ಉಸುರಿದ್ದಾನೆ. ಅವನಿಗೆ ಕೊರಳಸೆರೆ ಹಿಗ್ಗಿ, ದೃಗಜಲ ವುರುವಣಿಸಿ, ಕುರುಪತಿಗೆ ಕೇಡಾದುದೆಂದು ಕಡು ನೊಂದು, ಕಾದಿಕೊಲುವೊಡೆ ಪಾಂಡುಸುತರು ಸಹೋದರರು, ಕೊಲ್ಲದಿದ್ದರೆ ಕೌರವಂಗೆ ಅವನಿಯೊಳು ಹೊಗಲಿಲ್ಲ, ಭೇದದಲಿ ಹೊಕ್ಕಿರಿದನೋ ಮಧುಸೂದನ, ಎಂದು ಚಿಂತೋದಧಿಯೊಳದ್ದಿ, ಚಿತ್ತಗ್ಲಾನಿಯಾಗುವಂತೆ ಮಾಡಿಯೂ, ದುಮ್ಮಾನವೇತಕೆ ನಿನ್ನಪದೆಸೆಯ ಬಯಸುವನಲ್ಲ ಎನ್ನುತ್ತಿದ್ದಾನೆ ಕೃಷ್ಣ. ಸಾಮಾಜಿಕರ ದೃಷ್ಟಿಯಿಂದ ರಾಜ್ಯರಾಜ್ಯದ ಸಿರಿ ಏಳು ಹನ್ನೊಂದು ಆಗುತ್ತಿರುವಾಗ ಯಾರು ಯಾವ ಜೀವನದಿಂದ ಏನು ಸುಖ ಕಾಣುವುದುಂಟು? ಕರ್ಣ ಕಂಡದ್ದು ಯಾವ ಸುಖ? ಆದರೆ ಕರ್ಣನ ಪಾತ್ರವನ್ನು ನೋಡಿದರೆ ಅನ್ನಿಸುತ್ತದೆ ಅವನು ಅನುಸರಿಸಿದ ಮಾರ್ಗ ಸರಿ, ಅವನು ತನ್ನ ಧೃಡತೆಯಲ್ಲಿ ಕಂಡ ಸುಖ ಒಂದು ಬಗೆಯಲ್ಲಿ ಸರಿಯಾದ ಸುಖ ಎಂದು. ಅವನನ್ನು ಅಡ್ಡಹಾದಿಗೆ ಎಳೆಯಲು ಕೃಷ್ಣನು ಕೈಗೊಂಡ ಕ್ರಮವೇ ಕುಹಕ ಎನ್ನಿಸುತ್ತದೆ. ತನ್ನ ಕುಹಕದ ಪರಿಣಾಮ ಕೃಷ್ಣನಿಗೆ ಗೊತ್ತು. ಕರ್ಣ ದುರ್ಯೋಧನಾದಿಗಳೆಲ್ಲರೂ ಸಾಯುವವರಾಗಿದ್ದಾರೆ. ಅಂತಹದರಲ್ಲಿ ಕೃಷ್ಣ ಹೇಳುತ್ತಾನೆ ಹೋಗು, ಸುಖಿಯಾಗು ಎಂದು. ಆದರೆ ಹೀಗೆ ಹೇಳಿದ್ದು ಒಂದು ಕುಹಕದ ಮಾತು ಎನ್ನಿಸುವುದಿಲ್ಲ. ಸುಖಿಯಾಗು ಎನ್ನುವ ಮಾತು ಸಹಜವಾಗಿ ಕಾಣಿಸುತ್ತದೆ. ಇನ್ನೇನು ಹೇಳಿದರೂ ಸರಿಯಾಗದು ಎನ್ನಿಸುತ್ತದೆ. ಹಾಗಾದರೆ ವ್ಯಕ್ತಿ ಸುಖದ ಹಿನ್ನೆಲೆ ಏನು? ಸಮಷ್ಟಿಸುಖದ ಹಿನ್ನೆಲೆ ಏನು?

ಈ ಕಥೆಯಿಂದ ಸುಖ ಎನ್ನುವುದರಲ್ಲೂ ಒಂದು ಧರ್ಮಸಂಕಟ ಇದೆ ಎನ್ನುವುದು ಮುಂದಟ್ಟಾಗುತ್ತದೆ. ಇದಕ್ಕೆ ಉತ್ತರ ಗೀತೆಯ ಮಾತಿನಲ್ಲಿ ಸಿದ್ಧವಾಗಿದೆ.

'ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'-ಇಲ್ಲಿ ಮಾತನಾಡುತ್ತಿರುವ ಕೃಷ್ಣ ಯಾರು? ದೈವ

ಎಂದರೆ ಆ ದೈವವನ್ನು ಹೇಗೆ ಚಿತ್ರಿಸಿಕೊಳ್ಳೋಣ? ಬಹುಶಃ ಆದಿತ್ಯರಲ್ಲಿ ವಿಷ್ಣು, ಜ್ಯೋತಿಗಳಲ್ಲಿ ಸೂರ್ಯ, ನಕ್ಷತ್ರಗಳಲ್ಲಿ ಚಂದ್ರ, ವೇದಗಳಲ್ಲಿ ಸಾಮವೇದ, ದೇವತೆಗಳಲ್ಲಿ ಇಂದ್ರ, ಇಂದ್ರಿಯಗಳಲ್ಲಿ ಮನಸ್ಸು, ಭೂತಗಳಲ್ಲಿ ಚೇತನ, ರುದ್ರರಲ್ಲಿ ಶಂಕರ, ಯಕ್ಷರಾಕ್ಷಸರಲ್ಲಿ ಕುಬೇರ, ವಸುಗಳಲ್ಲಿ ಅಗ್ನಿ, ಶಿಖರಗಳಲ್ಲಿ ಮೇರು, ಪುರೋಹಿತರಲ್ಲಿ ಬೃಹಸ್ಪತಿ, ನೀರುಗಳಲ್ಲಿ ಸಮುದ್ರ, ಮಹರ್ಷಿಗಳಲ್ಲಿ ಭೃಗು, ಗಿರಿಗಳಲ್ಲಿ ಹಿಮಾಲಯ, ವೃಕ್ಷಗಳಲ್ಲಿ ಅಶ್ವತ್ಥ, ಆನೆಗಳಲ್ಲಿ ಗಜೇಂದ್ರ, ಆಯುಧಗಳಲ್ಲಿ ವಜ್ರ, ಗೋವುಗಳಲ್ಲಿ ಕಾಮಧೇನು, ದೈತ್ಯರಲ್ಲಿ ಪ್ರಹ್ಲಾದ, ಮೃಗಗಳಲ್ಲಿ ಸಿಂಹ, ನದಿಗಳಲ್ಲಿ ಗಂಗಾ, ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆ, ಛಂದಸ್ಸುಗಳಲ್ಲಿ ಗಾಯತ್ರಿ, ಋತುಗಳಲ್ಲಿ ವಸಂತ, ಹೀಗೆ ವಿಭೂತಿಪ್ರಕರಣವನ್ನೇ ಅನುಸರಿಸಬೇಕಾದೀತು.

ದೈವವನ್ನು ಹೀಗೆ ದೊಡ್ಡದಾಗಿ ಕಾಣುವುದು ಪ್ರಾಯಶಃ ಎಲ್ಲಾ ಕಾಲಕ್ಕೂ ಸೇರಿದ್ದು. ದೈವ ದೊಡ್ಡದಕ್ಕಿಂತ ದೊಡ್ಡದು ಎಂಬ ಭಾವನೆಯನ್ನು ಹಾಫಿಸ್ ಕವಿ 'ಲೋಕದ ಜನರು ನಿನ್ನ ಸೊಬಗಿನಲ್ಲಿ ಚಂದ್ರನನ್ನೂ ತಾರೆಗಳನ್ನೂ ಕಂಡರು. ಪಾಪ ಇನ್ನೇನು ಕಂಡಾರು. ತಮ್ಮ ಕಣ್ಣಿಗೆಷ್ಟು ಕಂಡಿತೋ ಅಷ್ಟನ್ನು ಮಾತ್ರ ಅವರು ಊಹಿಸಿಕೊಂಡರು.' ಎಂಬ ಮಾತುಗಳಲ್ಲಿ ವ್ಯಕ್ತಪಡಿಸುತ್ತಾನೆ. ಆದರೆ ದೈವದ ಭಾವನೆ ದೊಡ್ಡದು, ಸೊಗಸಾದದ್ದು ಎನ್ನುವುದರಲ್ಲೇ ಅಡಕವಾಗಿಲ್ಲ. ಕಾಲಕಾಲಕ್ಕೆ ಬೇರೆ ಬೇರೆ ರೂಪ ತಾಳತಕ್ಕದ್ದಾಗಿದೆ. ಒಂದು ದೃಷ್ಟಿಯಿಂದ ಧರ್ಮ ತಪ್ಪಿದಾಗ ಅದನ್ನು ಸರಿಪಡಿಸಿ ನಿಲ್ಲಿಸುವುದು ಇದು ಎನ್ನಬಹುದು. ಇನ್ನೊಂದು ದೃಷ್ಟಿಯಿಂದ ಮನುಷ್ಯನ ಭಾವನೆಗೆ ಎಷ್ಟು ಬಲ್ಮೆ ಉಂಟೋ ಅಷ್ಟು ಉನ್ನತವಾಗಿ ಕಾಣತಕ್ಕದ್ದು ಇದು ಎನ್ನಬಹುದು.

ಈ ದೈವಕ್ಕೆ ತನ್ನನ್ನು ತಾನು ಒಪ್ಪಿಸಿಕೊಳ್ಳುವುದು ವ್ಯಕ್ತಿಯ ಸುಖ. ದೈವ, ತಾನು, ಎಂಬ ದ್ವೈತದಲ್ಲಿ ಪ್ರೇಮ, ಒಲುಮೆ ಎನ್ನುವುದು ಉತ್ಪನ್ನವಾಗುತ್ತದೆ. ವ್ಯಕ್ತಿ ದೈವದ ಪ್ರೇಮವನ್ನು ಬಯಸುತ್ತದೆ. ವ್ಯಕ್ತಿಯ ಮತ್ತು ದೈವದ ಸಂಬಂಧ ಪ್ರೇಮಿಗಳ ಸಂಬಂಧವಾಗುತ್ತದೆ. ಆದರೆ ಜನತೆಯನ್ನು ಬಿಟ್ಟು ಜನಾರ್ದನನನ್ನು ಗ್ರಹಿಸುವುದು ಹೇಗೆ? ಇದನ್ನೇ ಹಲವು ಕವಿಗಳು ಹಲವು ವಿಧವಾಗಿ ಹೇಳಿದ್ದಾರೆ.

ಸಾದಿ ಕವಿ ಹೇಳಿದ:—ಮಾನವ ಕುಲವೆಲ್ಲ ಒಂದು ಬುಡದಿಂದ ಬಂದದ್ದು. ಒಬ್ಬರು ಇನ್ನೊಬ್ಬರ ಅಂಗ ಇದ್ದ ಹಾಗೆ. ಒಂದು ಜನಾಂಗ ಇನ್ನೊಂದು ಜನಾಂಗದ ಅಂಗ. ಶರೀರದಲ್ಲಿ ಒಂದು ಅವಯವ ನೊಂದರೆ ಇನ್ನೊಂದಕ್ಕೆ ನೋವಾಗುತ್ತದೆ.

ಪಾರಸಿ ಪಠ್ಯಪುಸ್ತಕವೊಂದರಲ್ಲಿ ಒಂದು ಕಥೆ ಹೀಗೆ ಬರುತ್ತದೆ. ಒಬ್ಬ ಮಹನೀಯ ತನ್ನವನೊಬ್ಬನಿಗೆ ಹೇಳಿದನಂತೆ, ನಮ್ಮ ಮನೆಗೆ ಊಟಕ್ಕೆ ಬಂದರೆ ತೋರಿಸುತ್ತೇನೆ ಎಷ್ಟು ಜನ ಆಳುಗಳು ನಮ್ಮ ಸೇವೆಗೆ ಇದ್ದಾರೆ ಎಂಬುದನ್ನು ಎಂದು. ಹೀಗೆ ಹೇಳಿಸಿಕೊಂಡ ಯುವಕ ಆತನ ಮನೆಗೆ ಊಟಕ್ಕೆ ಹೋದನಂತೆ. ಅಡಿಗೆಯವನು ಒಬ್ಬ ಬಂದು ಬಡಿಸಿದ. ಯುವಕ ಕೇಳಿದ 'ಮಾವ ಅಡಿಗೆಯವನು ಒಬ್ಬನೇ ಇದ್ದಾನಲ್ಲ, ಅಷ್ಟೊಂದು ಆಳುಗಳೆಲ್ಲಿ?' ಎಂದು. ಆತ ಹೇಳಿದ: 'ಸ್ವಲ್ಪ ಕೇಳು, ಈ ಅನ್ನ ಯಾವ ಧಾನ್ಯದಿಂದ ಆಗಿದೆಯೋ ಅದನ್ನು ಬೆಳೆದವರು, ಅದನ್ನು ಸ್ಥಳದಿಂದ ಸ್ಥಳಕ್ಕೆ ತಂದು ತಕ್ಕ ರೂಪಕ್ಕೆ ಸಿದ್ಧಗೊಳಿಸಿದವರು, ಇವರಿಗೆಲ್ಲ ಬೇಕಾದ ಯಂತ್ರ ಸಾಮಗ್ರಿಗಳನ್ನು ಒದಗಿಸಿದವರು, ಈ ತಟ್ಟೆ ಬಟ್ಟಲು ಕುರ್ಚಿ ಮೇಜು ಸಕಲವನ್ನು ಮಾಡಿಕೊಟ್ಟವರು, ಇವರೆಲ್ಲ ಎಷ್ಟು ಮಂದಿಯಾದರು? ನಮಗೆ ಈ ಒಂದು ಹೊತ್ತಿನ ಊಟದ ಸುಖವನ್ನು ಕೊಡುವುದಕ್ಕೆ ಪ್ರಪಂಚವೇ ದುಡಿಯುತ್ತಿದೆಯಲ್ಲವೇ?" ಮುಂದಿನ ಮಾತು ನಾವು ಅವರಿಗೆಲ್ಲ ಸುಖ ಬಯಸಬೇಡವೆ? ಒಂದು ಪ್ರೇಮದ ದೃಷ್ಟಿಯನ್ನು ಬೆಳೆಸಬೇಡವೆ? ಎಂಬುದು.

ಆಬೂ ಬಿನ್ ಆದಮನ ಕತೆ ಎಲ್ಲರಿಗೂ ತಿಳಿದದ್ದಾಗಿದೆ. ಆಬೂ ಒಂದು ಕೋಣೆಯಲ್ಲಿ ಮಲಗಿದ್ದನಂತೆ. ಒಂದು ಪ್ರಕಾಶಮಾನವಾದ ಬೆಳಕು ಕಂಡಿತು. ಕಣ್ಣು ಬಿಟ್ಟು ನೋಡಿದ. ಒಂದು ದೇವತೆ ಏನೋ ಬರೆದುಕೊಳ್ಳುತ್ತಿತ್ತು. ಏನು? ಎಂದು ಕೇಳಿದ. ದೇವರನ್ನು ಯಾರು ಯಾರು ಪ್ರೀತಿಸುತ್ತಿದ್ದಾರೊ ಅವರ ಹೆಸರುಗಳು ಈ ಪಟ್ಟಿಯಲ್ಲಿವೆ ಎಂದು ಉತ್ತರ ಬಂದಿತು. ನನ್ನ ಹೆಸರೂ ಉಂಟೇ ಎಂದು ಆಬೂ ಕೇಳಿದ. ಇಲ್ಲ. ಆಬೂ ಕೇಳಿಕೊಂಡ, ದೇವರನ್ನಲ್ಲದಿದ್ದರೆ ಹೋಗಲಿ ನನ್ನಂತೆ ಇರುವ ಮನುಷ್ಯರನ್ನು ನಾನು ಪ್ರೀತಿಸುವವನು ಎಂದು ಬರೆದುಕೊಂಡು ಹೋಗು ಎಂದು. ದೇವತೆ

ಹಾಗೆಯೇ ಗುರುತು ಮಾಡಿಕೊಂಡು ಹೋಯಿತು. ಒಂದು ದಿನ ಕಳೆಯಿತು. ಮರುದಿನ ರಾತ್ರೆ ಮತ್ತೆ ಆ ದೇವತೆ ಒಂದು ಪಟ್ಟಿಯನ್ನು ಹಿಡಿದುಕೊಂಡು ಬಂದಿತು. ಆಬೂ ಇದೇನು ಎಂದ. ದೇವತೆ ಇದು ದೇವರು ಯಾರ್ಯಾರನ್ನು ಪ್ರೀತಿಸುತ್ತಾನೆ ಅವರ ಪಟ್ಟಿ ಎಂದಿತು. ಓದಿತು. ಆಬೂ ಬಿನ್ ಆದಮನ ಹೆಸರು ಮೊತ್ತ ಮೊದಲನೆಯದಾಗಿತ್ತು.

ಸರಿ—ಒಂದು ವ್ಯಕ್ತಿ ತನ್ನ ಪ್ರೇಮವನ್ನು ಎಷ್ಟು ಮಂದಿಗೆ ಹಂಚುವುದು? ಅದಕ್ಕೇ ಪಾರಸಿಕವಿ ಹೇಳಿದ್ದು ಒಂದು ರಾಜ್ಯ ಕಟ್ಟಿ ಹುಚ್ಚನಾಗುವುದು ಬೇಡ, ಒಂದೇ ಒಂದು ಹೃದಯವನ್ನು ಒಲಿಸಿ ಜಾಣನಾದರೆ ಎಷ್ಟೋ ಕಾರ್ಯ ಸಾಧಿಸಿದ ಹಾಗೆ ಎಂದು.

ಹೀಗೆ ಪ್ರೇಮದ ತುದಿಮೊದಲು ಏನು ಎಂದು ನೋಡುತ್ತಾ ಹೋದರೆ ಹಾಫಿಸ್ ಕವಿ ಪ್ರೇಮವೆನ್ನುವುದು ಮೊದಲು ಸುಲಭವಾಗಿ ಕಂಡಿತು, ಆದರೆ ಒಡನೆಯೇ ನೂರು ತೊಡಕುಗಳು ಉದ್ಭವಿಸಿದವು ಎಂದು ಉದ್ಗಾರ ತೆಗೆದದ್ದು ಸತ್ಯ ಎನ್ನಿಸುತ್ತದೆ. ಉಮ್ಮರ್ ಖಯಾಮನೂ ಪ್ರೇಮದ ಪ್ರಸ್ತಾವ ಮಾಡಿದ್ದಾನೆ. ಅವನು ತತ್ವದ ವಿಚಾರದಲ್ಲಿ ಸ್ವಲ್ಪ ಖಂಡಿತವಾದಿ. ಪ್ರೇಮವೆಂದರೆ ಏನೋ ಊಹಿಸುವ ಎಂದುಕೊಂಡೆ, ನಾನು ತಿಳಿದುಕೊಂಡದ್ದು ಏನು ಎಂದರೆ, ಏನೂ ತಿಳಿಯಲಿಲ್ಲ ಎನ್ನುವುದು ಎನ್ನುತ್ತಾನೆ. ಪ್ರೇಮ ಎಂದರೆ ಊಟ, ನಿದ್ರೆ, ಶಾಂತಿ ಬಿಡುವುದು ಎಂದು ಒಮ್ಮೆ ನುಡಿಯುತ್ತಾನೆ. ಗೆಳೆಯನಿಗೋಸ್ಕರ ನೊಂದುಕೊಂಡೆ ಎನ್ನಲೆ ಅವನನ್ನು ಬೇರೆ ಯಾವುದೋ ನೋವು ಹಿಡಿದಿದೆ; ನಾನೇ ಔಷಧ ಹುಡುಕುತ್ತಿರುವವನು, ವೈದ್ಯನಿಗೇ ಕಾಯಿಲೆಯಾದರೆ ಉಪಾಯವೇನು? ಎಂದು ಇನ್ನೊಮ್ಮೆ ಹೇಳುತ್ತಾನೆ.

ಪ್ರೇಮವೆನ್ನುವುದು ತರ್ಕಕ್ಕೆ ಸಿಕ್ಕದು. ಅತ್ತಾರ್ ಎನ್ನುವ ಪಾರಸಿ ಕವಿ ಬುದ್ಧಿಯನ್ನೂ ಪ್ರೇಮವನ್ನೂ ಕುರಿತು ಹೀಗೆ ಹೇಳುತ್ತಾನೆ: ಬುದ್ಧಿ ಹೇಳುತ್ತದೆ ಕಾರಣಗಳನ್ನು ಹುಡುಕು ಎಂದು; ಪ್ರೇಮ ಕಾರಣಗಳ ಕರ್ತನನ್ನು ಹುಡುಕು ಎನ್ನುತ್ತದೆ. ಬುದ್ಧಿ ಇಹಪರಗಳನ್ನು ಶೋಧಿಸು ಎಂದು ಹೇಳುತ್ತದೆ; ದೇವನನ್ನು ಬಿಟ್ಟು ಬೇರೆ ವಸ್ತುವನ್ನು ಹುಡುಕಬೇಡ ಎಂದು ಪ್ರೇಮ ಹೇಳುತ್ತದೆ. ಬುದ್ಧಿ ಹೇಳುತ್ತದೆ ಶಾಸ್ತ್ರಗಳನ್ನು ಕಲಿ ಎಂದು; ಪ್ರೇಮ ಹೇಳುತ್ತದೆ. ಈ ಪ್ರಪಂಚವನ್ನು ಬಿಡು ಎಂದು. ಬುದ್ಧಿ ನಿನ್ನನ್ನು ನೀನು ದೊಡ್ಡವನಾಗಿ ಮಾಡಿಕೊಳ್ಳೆನ್ನುತ್ತದೆ; ಪ್ರೇಮ ನಾನು ಎನ್ನುವುದನ್ನು ಬಿಡು ಎನ್ನುತ್ತದೆ. ಕುಣಿತ ಮೆರೆತಗಳನ್ನು ಸಾಧಿಸು ಎಂದು ಬುದ್ಧಿ ಕೂಗುತ್ತದೆ; ಪ್ರೇಮ ನೋವೇ ಇರಲಿ ಎನ್ನುತ್ತದೆ. ಪ್ರೇಮದ ದಾರಿ ಹತ್ತಬೇಕೆ, ನಾನು ಎನ್ನುವುದನ್ನು ಸಂಪೂರ್ಣ ಬಿಡಬೇಕು. ದೈವ ಪ್ರಪಂಚವನ್ನು ಪ್ರೇಮದಿಂದ ಕಟ್ಟಿತು; ಎರಡು ಲೋಕಗಳೂ ಕೂಡ ಪ್ರೇಮದಿಂದಲೆ ಹುಟ್ಟಿದವು. ಲೋಕವೆನ್ನುವುದು ಶರೀರವಿದ್ದ ಹಾಗೆ, ಪ್ರೇಮ ಅದರ ಆತ್ಮ; ಆತ್ಮವಿಲ್ಲದ ಮೇಲೆ ಬರೀ ಶರೀರವನ್ನು ತೆಗೆದುಕೊಂಡು ಏನು ಮಾಡುವುದು?

ಪ್ರೇಮಕ್ಕೆ ಸಾವಿರ ಮುಖ, ಇದನ್ನು ನೋಡಿಕೊಳ್ಳುವ ದೇವನಿಗೆ ಸಾವಿರ ಕಣ್ಣುಗಳಿದ್ದ ಹಾಗೆ. ಕವಿ ಹೇಳುತ್ತಾನೆ–ವನದಲ್ಲಿ ಹೂವು ಅರಳಿತು, ಬುಲ್ಬುಲ್ ಹಕ್ಕಿ ಸಾವಿರ ಬಾಯಿಗಳಿಂದ ಹಾಡಿತು ಎಂದು. ಪ್ರೇಮ ಅಂಕುರಿಸಿತು, ಸಾವಿರ ರೀತಿಯಲ್ಲಿ ಕಾಣಿಸಿಕೊಂಡಿತು ಎನ್ನಬಹುದು. ವಿಚಿತ್ರವಾದ ಮಾರ್ಗ ಇದರದು. ದೇವನು ಮನುಷ್ಯನನ್ನು ಲೋಕಕ್ಕೆ ಕಳಿಸುವಾಗ ಪ್ರೇಮವನ್ನು ಅವನ ಜೊತೆಗೆ ಇಟ್ಟು ಕಳಿಸುತ್ತಾನಂತೆ. ಮೊದಲು ವ್ಯಕ್ತಿಗೆ ತನ್ನ ಇಚ್ಛೆ ತನ್ನ ಸುಖ ಹಿರಿದಾಗಿ ಕಾಣಿಸುತ್ತದೆ. ಇದಕ್ಕಾಗಿ ಎಲ್ಲ ಸೊಗಸಿನ ವರ್ಣನೆ. ಎಲ್ಲ ಸವಿ ತನ್ನ ಭೋಗಕ್ಕಾಗಿ. ಈ ಆಕಾಂಕ್ಷೆ ಇಲ್ಲವೋ ಪ್ರೇಮ ಮುಂದುವರಿಯದು. ಇದೇ ಆಶೆ ತಾನೇ ತಾನಾಗಿ ಬೆಳೆಯಿತೊ ಅಲ್ಲಿಗೊಂದು ಬಲ ಕುಂದಿತು, ಜ್ಯೋತಿ ನಂದಿತು. ಒಂದು ವ್ಯಕ್ತಿ ಇನ್ನೊಂದು ವ್ಯಕ್ತಿಯಿಂದ ಸುಖವನ್ನು ಕೋರುವುದು ಸಹಜ. ತನಗೆ ಸುಖ ಕೊಟ್ಟ ಒಂದು ವ್ಯಕ್ತಿಯನ್ನು ಸುಖಪಡಿಸಬೇಕೆನ್ನುವುದು ಸ್ವಭಾವದ ಮುನ್ನಡೆ. ಈ ಮುನ್ನಡೆಯಲ್ಲೆ ಪ್ರೇಮದ ಅಭಿವೃದ್ಧಿ. ಪ್ರೇಮ ಉದ್ಧರಿಸಿದ ಜೀವಕ್ಕೆ ಸಾವಿಲ್ಲ. ಒಂದು ಚಿಗುರು ಒಡೆದ ಪ್ರೇಮ ಸಾವಿರ ಬಳ್ಳಿಯಾಗಿ ಬೆಳೆಯುವುದು, ಸಾವಿರ ಹೂವಾಗಿ ಅರಳುವುದು. ತನ್ನ ಸುಖವನ್ನು ಅಪೇಕ್ಷಿಸಿ ಕುಡಿವಡೆದ ಪ್ರೇಮ ತನ್ನ ಸುಖವನ್ನು ತ್ಯಜಿಸಿ ತನ್ನ ಪ್ರೇಮಕ್ಕೆ ವಸ್ತುವಾದವರ ಸುಖವನ್ನು ಬಯಸು ಎಂದು ಹೇಳಿಕೊಡುವುದು. ಇದೇ ಭಕ್ತಜನರ ಒಡನಾಟ

ಎಂಬ ರಸತಂತ್ರ. ಲೋಕವೆಂಬುವ ಹೊಲದಲ್ಲಿ ಒಂದೇ ಒಂದು ತೆನೆ ಧಾನ್ಯ ಬೆಳೆಯಬೇಕಾದರೆ ತನ್ನನ್ನು ತಾನು ಒಪ್ಪಿಸುವುದು ಎಂಬ ಕಾಳನ್ನು ಬಿತ್ತಿದಲ್ಲದೆ ಆಗದು. ಹೀಗೆ ತನ್ನ ಸುಖದಿಂದ ಪ್ರಾರಂಭಿಸಿ, ಇತರರ ಸುಖದಲ್ಲಿ ಇದನ್ನು ಸ್ವಲ್ಪ ಮರೆಯುವುದು ಎಂಬುದಾಗಿ ಮುಂದರಿದು, ಈ ಮರವೆಯೇ ತ್ಯಾಗ ಅಥವಾ ನೋವಿನ ಮಟ್ಟಕ್ಕೆ ಮುಟ್ಟಿ, ನೋವೇ ಸುಖವಾಗಿ ಸುತ್ತು ಬರುತ್ತದೆ, ಇದೇ ಪ್ರೇಮಚಕ್ರ, ಧರ್ಮಚಕ್ರ ಎನ್ನಬಹುದು.

ಪ್ರೇಮಕ್ಕೆ ಯಾವಾಗಲೂ ಒಂದು ಪರೀಕ್ಷೆ. ಪರಿಣಾಮದಲ್ಲಿ ಒಂದು ದೊಡ್ಡ ಫಲವನ್ನು ಕೊಡುವುದಕ್ಕಾಗಿ ದೇವರು ಈ ಪರೀಕ್ಷೆಗಳನ್ನು ಒಡ್ಡುತ್ತಾನೆ ಎಂಬುದು ಒಂದು ಭಾವನೆ. ಯುಸೋಫನಂತಹ ಮಹಾಪುರುಷ ಗುಲಾಮಗಿರಿಯನ್ನು ಅನುಭವಿಸಬೇಕಾಯಿತು, ಇವನ ಈ ಗುಲಾಮಗಿರಿಯೇ ಜುಲೈಖಳು ಮನಸೋತು ಇವನಿಗೆ ದೊರೆಯಲು ಕಾರಣವಾದದ್ದು. ಲೋಕಕಲ್ಯಾಣಕ್ಕಾಗಿ ಅನೇಕ ಪ್ರವಾದಿಗಳನ್ನು ದೇವರು ಈ ಜಗತ್ತಿಗೆ ಕಳಿಸಿದ್ದಾನೆ. ಮೂಸ, ಈಸ, ಮಹಮದ್; ಬೆಟ್ಟಕ್ಕೆ ಹೋಗಿ, ಬೆಂಕಿಯನ್ನು ಕಂಡು ಭಗವಂತನ ಕರೆಯನ್ನು ಕೇಳಿ ಪರೀಕ್ಷೆ ಕೊಟ್ಟು ಬಂದೇ ದೊಡ್ಡ ಕಾರ್ಯಗಳನ್ನು ಸಾಧಿಸಿದವರು ಇವರು. ಪ್ರವಾದಿಗಳ ಕಥೆಗಳಲ್ಲೆಲ್ಲಾ ಅವರಿಗೆ ತಟ್ಟನೆ ಏನೋ ಹೊಳೆಯಿತು, ಒಂದು ದರ್ಶನ ಆಯಿತು ಎಂಬ ಪ್ರಕರಣ ಬರುತ್ತದೆ. ಅವರಿಗೆ ಹೊಳೆದದ್ದು ಏನಿರಬೇಕು ಎಂದು ವಿಚಾರ ಮಾಡಿದರೆ, ಇದು ಎಲ್ಲ ಸಮಾಜಕ್ಕೂ ಒಂದು ಹಿತ ಆಗಬೇಕು ಎಂಬ ವಿಶಾಲ ದೃಷ್ಟಿಯೇ ಇರಬೇಕು ಎನ್ನಿಸದೆ ಇರಲಾರದು. ಇದು ಎಷ್ಟೇ ಆಕಸ್ಮಿಕವಾಗಿ ಆಯಿತೆಂದರೂ ಈ ದೊಡ್ಡ ಪ್ರೇಮ ದೃಷ್ಟಿಗೆ ಹಿನ್ನೆಲೆಯಾಗಿ ಒಂದು ವ್ಯಕ್ತಿಯ ಬೆಳವಣಿಗೆ, ಮುಂದಿನ ವೃಕ್ಷದ ಪ್ರಭಾವ ಪವಾಡದ ಹಿಂದಿನ ಸಣ್ಣ ಸಂಸಾರದ ಮೊಳಕೆಯಲ್ಲಿ ಇದ್ದುದು ಗೋಚರವಾಗುತ್ತದೆ. ಒಂದು ವ್ಯಕ್ತಿಯನ್ನು ಒಂದು ದೊಡ್ಡ ಕಾರ್ಯಕ್ಕೆ ಸಿದ್ಧಗೊಳಿಸುವುದು, ಪರೀಕ್ಷೆಯನ್ನು ಹೂಡಿ ತನ್ನ ದರ್ಶನ ಕೊಟ್ಟು ಆ ವ್ಯಕ್ತಿಯನ್ನು ಮುಂದರಿಸುವುದು ಈ ಒಂದು ದೈವದ ಆಟ ಅಥವಾ ಕ್ರಮವನ್ನು ನೋಡಿದರೆ ದೈವವೆಷ್ಟು ಸನಾತನವೊ, ಪ್ರೇಮವೂ ಅಷ್ಟೇ ಸನಾತನವಾದುದು, ಪ್ರೇಮ, ಪ್ರೇಮದ ಬೀಜ, ಪ್ರೇಮದ ದೃಷ್ಟಿ ಹುಟ್ಟಿನಲ್ಲಿ ಸಾವಿನಲ್ಲಿ ತೇಲಿ ಬಂದದ್ದು ಎಂದು ಮಂದಟ್ಟಾಗುತ್ತದೆ. ದುಃಖ ಯಾವುದು ಎಂದರೆ ಪ್ರೇಮದ ಮರವು. ಈ ಮರವೆಯನ್ನು ಹೋಗಲಾಡಿಸುವುದು ಪ್ರೇಮದ ಹೋರಾಟ. ಆ ಹೋರಾಟದ ನೋವು ದುಃಖದಂತೆ ಕಂಡರೂ ಅದರಿಂದ ಬೇರೆಯಾದದ್ದು. ಅದಕ್ಕೆ ಕವಿ ದೇವನಲ್ಲಿ ಮೊರೆಯಿಡುತ್ತಾನೆ ಪ್ರೇಮದ ನೋವನ್ನೇ ದಯಪಾಲಿಸು ಎಂದು.

ಮರೆವು ಏತಕ್ಕೆ ಬರುತ್ತದೆ? ಪ್ರೇಮನಿಧಿಯಾದ ಪರಮಾತ್ಮನೊಬ್ಬನಿದ್ದರೆ ಅವನು ಲೋಕದಲ್ಲಿ ಈ ಮರೆವನ್ನು ಉಂಟು ಮಾಡದೆಯೇ ಇರಬಾರದೇಕೆ? ಅಥವಾ ದುಃಖವನ್ನು ಒಡ್ಡುವುದು, ಸುಖವನ್ನು ಕೊಡುವುದು ಎಂಬ ಎರಡು ಕಾರ್ಯಗಳೂ ಅನಿವಾರ್ಯವಾಗಿ ಒಟ್ಟೊಟ್ಟಿಗೆ ನಡೆಯುತ್ತಿರಬಹುದು. ಮನುಷ್ಯರಿಗೆ ಒಂದು ವಸ್ತುವಿನ ಆಸರೆ ಅವಶ್ಯಕವಾಗಿ ಕಂಡು ದುಃಖವನ್ನು ಕೊಡುವ, ಹಾಗೆಯೇ ಅದನ್ನು ಸುಖದಿಂದ ನಿವಾರಿಸುವ ಶಕ್ತಿಯೊಂದಿದೆ ಎಂಬ ಭಾವನೆ ಬಂದಿರಬೇಕು. ಹಾಗಿಲ್ಲದಿದ್ದರೆ ಸುಖ, ದುಃಖಗಳ ಕರ್ತೃತ್ವ ತಾನೇ ಏಕೆ? ಸುಖ, ದುಃಖಗಳು ತಾವೇ ಸ್ವಯಂ ಜನ್ಯಗಳು ಏಕೆ ಆಗಿರಬಾರದು? ಅದೇ ಸುರ ಅಸುರ; ಅದೇ ಅಹುರಮಜ್ದ ಮತ್ತು ಅಹ್ರೀಮಾನ್; ಅದೇ ಒಂದು ದೈವದ ಎರಡು ರೂಪ. ನಮ್ಮವರು ಈ ಎರಡನ್ನು ಮೂರಾಗಿ ಮಾಡಿದರು; ಸೃಷ್ಟಿ, ಸ್ಥಿತಿ, ಲಯ ಎಂದು ಕರೆದರು. ಮೂರನ್ನೂ ಒಂದೇ ಎಂದರು; ಒಂದಕ್ಕೆ ಒಬ್ಬ ಒಡೆಯನನ್ನು ನೇಮಿಸಿದರು. ಹಾಗಾಗಿ ನಾವು ಸಮಸ್ಯೆಯ ಎರಡು ಕೊಂಬುಗಳ ಮೇಲೆ ನಿಂತಿದ್ದೇವೆ. ದೇವರು ಮನುಷ್ಯರನ್ನು ಸೃಷ್ಟಿಸಿದನೋ ಅಥವಾ ಮನುಷ್ಯರು ದೇವರನ್ನು ಸೃಷ್ಟಿಸಿದರೋ? ಇದಕ್ಕೆ ಕವಿಯ ಉತ್ತರ: ನಂಬಿದವರ ತಂಟೆಯೂ ಬೇಡ, ನಾಸ್ತಿಕರ ತಂಟೆಯೂ ಬೇಡ, ಪ್ರೇಮವಿದ್ದರೆ ಸಾಕು. ಇದು ಸೃಷ್ಟಿ, ಸ್ಥಿತಿ, ಲಯಗಳೆಲ್ಲವುಗಳಲ್ಲಿಯೂ ಸುಖ ಅಥವಾ ಪ್ರೇಮವನ್ನು ಕಾಣುವ ದೃಷ್ಟಿ. ಆಗುವುದೆಲ್ಲ ಒಳ್ಳೇಯದಕ್ಕೆ. ಹಾಗಾದರೆ ಪ್ರಯತ್ನಕ್ಕೆ ಪ್ರೇರಣೆ ಎಲ್ಲಿ! ಬೇಡ. ಇದನ್ನೇ ನೂರು ಜನ ನೂರು ಮಾತುಗಳಲ್ಲಿ ಹೇಳಿದರು. ಪ್ರಪಂಚವನ್ನು ಅದರ ಪಾಡಿಗೆ ಬಿಡು, ನೀನು ಬೇರೆಯಾಗು ಎಂದು. ಆದರೆ ಬಿಡುವುದೇ ಒಂದು ಪ್ರಯತ್ನ.

ಲೋಕವನ್ನು ಅದರ ಪಾಡಿಗೆ ಬಿಡುವುದೂ ಪ್ರೇಮವೆ. ಜನ್ನೂನನ ಕತೆ ಸ್ವಾರಸ್ಯವಾಗಿದೆ. ಅವನು ದೊಡ್ಡ ಜೀವ ಎನ್ನುವುದನ್ನು ಜನ ಕಂಡುಕೊಂಡಿದ್ದರಂತೆ. ಒಮ್ಮೆ ಅವನ ಆ ದೇಶದಲ್ಲಿ ಮಳೆ ಆಗಲಿಲ್ಲ. ಮಹಾತ್ಮರು ಮಳೆ ಬರಸಬೇಕು ಎಂದು ಮೊರೆ ಇಟ್ಟರಂತೆ. ಜನ್ನೂನು ಆ ಸ್ಥಳ ಬಿಟ್ಟು ಓಡಿದ. ಏಕೆ? ಎಂದರು ಜನ. ಪಾಪಿಗಳಿದ್ದ ಕಡೆ ಮಳೆ ಬರುವುದಿಲ್ಲ, ನಾನೇ ದೊಡ್ಡ ಪಾಪಿ, ನಾನು ಸ್ಥಳ ಬಿಟ್ಟರೆ ಅಲ್ಲಿ ಮಳೆ ಬರುತ್ತದೆ ನೋಡಿ, ಎಂದ ಜನ್ನೂನು. ಹಾಗೆಯೇ ಆಯಿತಂತೆ. ದೊಡ್ಡ ಮಳೆ ಬಂದು ಜನಕ್ಕೆ ಸುಖವಾಯಿತಂತೆ. ತಾನು ಯಾವುದನ್ನು ಬಿಡಬೇಕು ಯಾವುದನ್ನು ಕಟ್ಟಿಕೊಳ್ಳಬೇಕು ಎನ್ನುವ ಎರಡು ಪ್ರಶ್ನೆಗಳೂ ಸಮಸ್ಯೆಯ ಎರಡು ಕೊಂಬುಗಳೇ. ಭಕ್ತನಾಗಿ ಪ್ರೇಮವನ್ನು ಸಾಧಿಸುವುದಕ್ಕಿಂತಲೂ, ನಾಸ್ತಿಕನಾಗಿ ಪ್ರೇಮವನ್ನು ಸಾಧಿಸುವುದು ಹೆಚ್ಚು ನೆಚ್ಚಿನ ಕೆಲಸ. ಮಹಾಭಾರತಕ್ಕೂ ದೊಡ್ಡದಾದ ಇತ್ತಂಡ ಇದು. ಕೃಷ್ಣ ಕರ್ಣನಿಗೆ ಹೇಳಿದ ಹಾಗೆ 'ಸುಖಿಯಾಗು ಹೋಗು' ಎನ್ನುವುದು ಪ್ರೇಮ ಧರ್ಮ. ಒಂದು ವ್ಯಕ್ತಿಯ ಕನಸಿನ ಕಟ್ಟಡವೆಲ್ಲ ಒಲಿದಿರುವುದು ಒಂದು ಕಡೆಗೆ; ಇನ್ನೊಂದು ವ್ಯಕ್ತಿಯ ಮನೋಧರ್ಮವೆಲ್ಲ ಒಲಿದಿರುವುದು ಇನ್ನೊಂದು ಕಡೆಗೆ; ಧರ್ಮದ ತಕ್ಕಡಿ ನಿಂತದ್ದು ಧೃಢ ಎಂಬ ಒಂದು ನೂತಿನಲ್ಲಿ.

ಹಾಗೆಂದು ಧೃಢ ಎಂಬುದಕ್ಕೆ ಛಲ ಅಥವಾ ಅಂಧಶ್ರದ್ಧೆ ಎಂಬ ಅರ್ಥವನ್ನು ಕಲ್ಪಿಸಲು ಕವಿವಾಣಿ ಒಪ್ಪದು. ಭಾರತದ ಕಲಿಕರ್ಣನನ್ನು ಕೊಂದು ಆ ಮೇಲೆ ದುರ್ಯೋಧನನನ್ನು ಕೊಂದ. ಇಬ್ಬರನ್ನು ಕೊಂದು ಅವರವರ ನಡುವಿನ ಪ್ರೇಮವನ್ನು ಮಹೋನ್ನತ ಸ್ಥಾನದಲ್ಲಿ ನಿಲ್ಲಿಸಿದ ದುರ್ಯೋಧನನನ್ನು ಬಿಟ್ಟು ಕರ್ಣ ಹೋಗಿದ್ದರೆ ಅವನನ್ನು ರೂಢಿ ಎಂದಿಗೂ ಎಂದೆಂದಿಗೂ ಮೆಚ್ಚುತ್ತಿರಲಿಲ್ಲ. ಆದರೆ ರೂಢಿ ಮೆಚ್ಚುವಂತೆ ನಡೆದುಕೊಂಡೂ ಕೂಡಾ ದುರ್ಯೋಧನ ಹೋಗಿ ಕರ್ಣ ಬದುಕಬಾರದಾಗಿತ್ತೆ? ಆದರೆ ಅವನ ಬದುಕು ಅಥವಾ ಸಾವಿಗಿಂತ ಮೇಲಾದ ಬೆಳಕು ಸಾವಿನಲ್ಲಿ ಬದುಕನ್ನು ಕಂಡ ಬೆಳಕು. ಈ ಬೆಳಕು ಹೃದಯದಲ್ಲಿ ಸುಳಿಯಬೇಕಾದರೆ ಅದನ್ನು ತೆರಪಾಗಿ ಇಟ್ಟುಕೊಳ್ಳಬೇಕು. ಎಂದರೆ ಮನಸ್ಸಿನ ವಿಶಾಲತೆ ಬೇಕು. ಈ ವಿಶಾಲತೆಗೇ ಏನೋ ಪಾರಸಿ ಕವಿ ಪ್ರೇಮವಸ್ತು ಎಂದ. ನಿನ್ನ ಹೃದಯದಲ್ಲಿ ಒಂದು ಸ್ಥಾನ ಶುಭ್ರವಾಗಿ ತೆರಪಾಗಿ ಇರಲಿ, ಪ್ರೇಮವಸ್ತು ಬಂದಾಗ ಅದು ಅಲ್ಲಿ ನೆಲೆಸುವುದು ಎಂದು ಬೋಧಿಸಿದ.

ಪ್ರೇಮನೇಮವಿದು—ಪ್ರೇಮಿಗಳಿಗಿದು ಪೂಜೆ



ಆಗಮ ಸಂಸ್ಕೃತಿ

ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು, ಬೆಂಗಳೂರು.

ಸಂಸ್ಕಾರಜನ್ಯವಾದುದು ಸಂಸ್ಕೃತಿ. ಮಾನವನಿಗೂ ಮೃಗಕ್ಕೂ ಇರುವ ಅಂತರವನ್ನು ತೋರುವುದೇ ಇದರ ಲಕ್ಷಣ. ಜೀವನದ ವಿಕಾಸವೇ ಸಂಸ್ಕೃತಿ (culture). ನಾಗರಿಕತೆ (civilization) ಎಂಬುದು ಒಂದು ನಾಡಿನ ಇಲ್ಲವೆ ವ್ಯಕ್ತಿಯ ಬಾಹ್ಯ ಸುಧಾರಣೆಯನ್ನು ಪ್ರತಿಬಿಂಬಿಸುವ ಶಬ್ದ. ಆದರೆ ಸಂಸ್ಕೃತಿಯು ಜೀವನ ಸುಧಾರಣೆ. ಅದು ಮಾನವನ ಅಂತಃಕರಣದಲ್ಲಿದ್ದು ಚಿತ್ತವೃತ್ತಿಯನ್ನೂ ಬುದ್ಧಿ ವ್ಯಾಪಾರವನ್ನೂ ರೂಪುಗೊಳಿಸುವ ಅಂತಸ್ಸತ್ವ. ಹಾಲಿನಲ್ಲಿನ ಬೆಣ್ಣೆಯಂತೆ ಸಂಸ್ಕೃತಿಯು ಮಾನವನ ಜೀವನದಲ್ಲಿ ಓತಪ್ರೋತವಾಗಿ ವ್ಯಾಪಿಸಿದೆ. ಮಾನವನನ್ನು ಅನಾಗರಿಕತೆಯಿಂದ ನಿಜವಾದ ನಾಗರಿಕತೆಯ ಕಡೆಗೂ, ಕತ್ತಲಿನಿಂದ ಬೆಳಕಿನ ಕಡೆಗೂ, ಮೃತ್ಯುವಿನಿಂದ ಅಮರತೆಯ ಕಡೆಗೂ ಒಯ್ಯುವ ಮನಃಪರಿಪಾಕವೇ ಸಂಸ್ಕೃತಿ.

ಜಗತ್ತಿನಲ್ಲಿ ಮಾನವನ ಮನೋವಿಕಾಸವಾದಂದಿನಿಂದ ಇಂದಿನ ವರೆಗೆ ಜೀವನ ಸಂಸ್ಕರಣಕ್ಕೆ ಕಾರಣವಾದ ಅನೇಕ ಧರ್ಮಗಳಿವೆ. ಸಂಸ್ಕರಣ ಕಾರ್ಯದಲ್ಲಿ ಅಂದಂದಿಗೆ ವ್ಯವಸ್ಥಿತವಾದ ಕಟ್ಟು ಕಟ್ಟಳೆಗಳ ಗುಂಪು ಧರ್ಮ. ಧರ್ಮವೇ ಜಗತ್‌ಸ್ಥಿತಿಯನ್ನು ಗೊತ್ತಾದ ನಿಯಮಗಳಿಂದ ಧರಿಸಿದೆ. ಧಾರಣಾತ್ ಧರ್ಮಮಿತ್ಯಾಹ್ಯುಃ" ಎಂಬುದು ಈ ಅರ್ಥವನ್ನು ಸಮರ್ಥಿಸುತ್ತದೆ. ಧರ್ಮದಿಂದಾದ ಸಂಸ್ಕರಣದ ಫಲ ಸಂಸ್ಕೃತಿ. ಇವೆರಡಕ್ಕೆ ಕಾರ್ಯಕಾರಣ ಭಾವ ಇಲ್ಲವೆ ಅವಿನಾಭಾವವೆಂದರೂ ಸಲ್ಲುವುದು.

ಜಗತ್ತಿನಲ್ಲಿ ಮಾನವ ಸಂಸ್ಕೃತಿಗೆ ಮೂಲವಾದ ಧರ್ಮಗಳಲ್ಲಿ ವೈದಿಕಧರ್ಮ ಮೊದಲಿನದು ಎಂದು ವಿದ್ವಾಂಸರ ಅಭಿಪ್ರಾಯ. ಏಕೆಂದರೆ ಇಂದು ದೊರೆಯುವ ಎಲ್ಲ ಮತ ಪಂಥಗಳ, ಧರ್ಮ ಗ್ರಂಥಗಳಲ್ಲಿ ಮೊತ್ತ ಮೊದಲಿನ ಸಾಹಿತ್ಯ ವೈದಿಕಸಾಹಿತ್ಯ. ಇದಕ್ಕಾಗಿಯೇ ಅದು "ಪಳೆವಾತು" ಎನಿಸಿದೆ. ಪ್ರಪಂಚದ ಪ್ರಮುಖವಾದ ಸಂಸ್ಕೃತಿಗಳಿಗೆ ವೈದಿಕಧರ್ಮ ಒಂದಲ್ಲ ಒಂದು ತೆರದಿಂದ ನೆರವಾಗಿದೆಯೆಂಬುದನ್ನು ವಿದ್ವಾಂಸರು ಅಂಗೀಕರಿಸಿದ್ದಾರೆ.

ಭರತಖಂಡದಲ್ಲಿ ಆಧ್ಯಾತ್ಮಿಕ ಸಾಹಿತ್ಯದಲ್ಲಿ ಜ್ಞಾನಪ್ರಚಾರಕ್ಕಾಗಿ ಏರ್ಪಟ್ಟ ಸಾಹಿತ್ಯಗಳಲ್ಲಿ ವೇದಗಳನ್ನು ಬಿಟ್ಟರೆ ಆಗಮಗಳೇ ಅತ್ಯಂತ ಪುರಾತನವಾದವುಗಳು. ಆಗಮ ಸಂಸ್ಕೃತಿಯು ವೈದಿಕ ಸಂಸ್ಕೃತಿಗೆ ಸಮ ಇಲ್ಲವೆ ಪೂರಕ (ಪೋಷಕ)ವಾದುದೆನ್ನಬಹುದು.

ಆಗಮವೆಂದರೇನು?

"ಆಗಮ" ಎಂಬ ಪದಕ್ಕೆ "ಬರು" ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಅಂದರೆ 'ಪರಂಪರೆಯಿಂದ ಬಂದುದು' ಎಂದು ಹೇಳುವುದರಲ್ಲಿ ಸಂದೇಹವಿಲ್ಲ. ಅದಕ್ಕನುಗುಣವಾಗಿ ಆಗಮ ಸಂಪ್ರದಾಯವು ಸಹ ಪರಂಪರಾಗತವಾಗಿ ಬಂದಿರುವುದೆಂದು ಹೇಳಬಹುದು. ಆದರೆ ಗತ್ಯರ್ಥಕವಾದ 'ಗಮ್' ಧಾತುವಿಗೆ "ಯೇಗತ್ಯರ್ಥಕಾಸ್ತೇ ಜ್ಞಾನಾರ್ಥಕಾಃ" ಎಂಬ ನಿಯಮವನ್ನನುಸರಿಸಿ "ಜ್ಞಾನ"ವೆಂದೇ ಅರ್ಥವಾಗುತ್ತದೆ. 'ಆಙ್' ಎಂಬ ಉಪಸರ್ಗದಿಂದ "ಆ+ಗಮ" ಎಂದರೆ "ಪೂರ್ಣಜ್ಞಾನ" ಎಂದಾಗುವುದು. ವೇದ ಶಬ್ದಕ್ಕೂ ಸಹ 'ವಿದ್‌ಜ್ಞಾನೇ' ಎಂಬ ಧಾತ್ವರ್ಥವನ್ನನುಸರಿಸಿ 'ಜ್ಞಾನ'ವೆಂದೇ ಅರ್ಥವಾಗುತ್ತದೆ. ಇದರಿಂದ ಆಗಮವು ವೇದಗಳ ಉದ್ದೇಶವನ್ನೇ ನೆರವೇರಿಸುವುದಾಗಿದೆ. 'ನಿಗಮಾಗಮ' ಎಂದು ವೇದಾಗಮಗಳಿಗೆ ಕ್ರಮವಾಗಿ ಉಪಯೋಗಿಸಲ್ಪಡುತ್ತಿದೆ. ಒಮ್ಮೊಮ್ಮೆ ವೇದಗಳನ್ನೂ ಸಹ 'ಆಗಮ'ಗಳೆಂದೇ ಕರೆಯಲಾಗಿದೆ.

ಇದಲ್ಲದೆ 'ಯಸ್ಯ ನಿಶ್ವಸಿತಂ ವೇದಾಃ' ಎಂಬ ಪ್ರಮಾಣವನ್ನನುಸರಿಸಿ ವೇದಗಳು ಪರಮಾತ್ಮನ ಪ್ರಾಣಾನಿಲವೆಂದು ಪ್ರಯೋಗಿಸಿರುವಂತೆ ಆಗಮವು ಪರಮಾತ್ಮನ ಸ್ಪಷ್ಟ ವಾಣಿಯೆನಿಸಿದೆ. ಆಗಮಗಳಿಗೆ "ತಂತ್ರ"ವೆಂಬ ಮತ್ತೊಂದು ಹೆಸರಿದೆ. ಸೂಕ್ಷ್ಮಾಗಮದಲ್ಲಿ "ಶ್ರುತಿತಂತ್ರ" ಎಂದೇ ಪ್ರಯುಕ್ತವಾಗಿದೆ. "ತನುತೇವಿಸ್ತಾರ್ಯತೇ ಜ್ಞಾನಂ ಅನೇನ ಪ್ರಾಯತೇ ಚ

ಇತಿ ತಂತ್ರಮ್" ಈ ತಂತ್ರದಿಂದ ಮಾನವನ ಜ್ಞಾನ ವಿಸ್ತಾರವಾಗಿ ಉದ್ಧಾರವಾಗುವುದರಿಂದ ಇದಕ್ಕೆ ತಂತ್ರವೆಂಬ ಹೆಸರು ಅನ್ವರ್ಥಕವಾಗಿದೆ. ಕಾಮಿಕಾಗಮದ ತಂತ್ರಾಂತರ ಪಟಲದಲ್ಲಿ—

ತನೋತಿ ವಿಪುಲಾನರ್ಥಾನ್ ತಂತ್ರಮಂತ್ರ ಸಮನ್ವಿತಾನ್ ।
ತ್ರಾಣಂ ಚ ಕುರುತೇ ಯಸ್ಮಾತ್ ತಂತ್ರಮಿತ್ಯಭಿಧೀಯತೇ ॥

ಎಂದರೆ ತತ್ವ ಮತ್ತು ಮಂತ್ರಗಳಿಂದ ಕೂಡಿದ ಅನೇಕ ಅರ್ಥಗಳನ್ನು ಹೇಳುವುದರಿಂದಲೂ, ಮನುಷ್ಯನಿಗೆ ಜ್ಞಾನದಾನ ಮಾಡಿ ರಕ್ಷಿಸುವುದರಿಂದಲೂ ಈ ಶಾಸ್ತ್ರಕ್ಕೆ ತಂತ್ರವೆಂದು ಹೆಸರು ಬಂದಿದೆ. "ಆಪ್ತೋಕ್ತಿರಾಗಮಸ್ತೋಪಿ" ಎಂಬ ಪೌಸ್ಕರ ಸಂಹಿತೆಯ ಹೇಳಿಕೆಯಂತೆ ಆಗಮವು ದೇವರ ವಚನವಾದ್ದರಿಂದ ಅದು 'ಆಪ್ತ ವಚನ' ಆದುದರಿಂದ ಆಗಮಗಳಿಗೂ 'ಶ್ರುತಿ' ಎಂದು ಹೆಸರಿದೆ. 'ವೈದಿಕೀ ತಾಂತ್ರಿಕೀ ಚೈವ ದ್ವಿವಿಧಾ ಶ್ರುತಿ ಕೀರ್ತಿತಾ' ಎಂದು ಮನುಸ್ಮೃತಿಯ ವ್ಯಾಖ್ಯಾನಕಾರನಾದ ಕುಲ್ಲೂಕ ಭಟ್ಟನು ಹೇಳಿದ್ದಾನೆ. ವೇದಗಳಂತೆ ಆಗಮಗಳೂ ದೈವೀಸ್ಫೂರ್ತಿಯಿಂದ ರಚಿತವಾದವುಗಳಾದುದರಿಂದ ಇವುಗಳಿಗೂ ಶ್ರುತಿಗಳೆಂಬ ಅಭಿಧಾನವು ಯುಕ್ತವೇ ಆಗಿದೆ.

"ಶೈವ ಸಿದ್ಧಾಂತಪರಿಭಾಷೆ"ಯಲ್ಲಂತೂ ಆಗಮಗಳು ವೇದಸಾರವೆಂದೇ ಉಕ್ತವಾಗಿದೆ. 'ಶ್ರೂಯತೇ ಹಿ ವೇದಸಾರಃ ಶಿವಾಗಮಃ' ಎಂಬುದು ಈ ಅರ್ಥವನ್ನು ಪುಷ್ಟೀಕರಿಸುತ್ತದೆ. ಅಲ್ಲದೆ ಆಗಮಗಳಲ್ಲಿ ಹೇಳಿರುವ ಆಚಾರ (ಕ್ರಿಯೆ)ಗಳು ಸ್ಮೃತಿಗಳಲ್ಲಿ ಹೇಳಿರುವ ಕಲಿವರ್ಜ್ಯ ಪ್ರಕರಣಗಳನ್ನು ಹೋಲುತ್ತವೆ. ಅದಕ್ಕಾಗಿಯೇ ಕುಲಾರ್ಣವ ತಂತ್ರವೆಂಬ ಶಾಕ್ತಾಗಮದಲ್ಲಿ 'ಕಲಾವಾಗಮ ಸಮ್ಮಾತಾಃ' ಎಂದು ಹೇಳಿದೆ. ಅದೂ ವೇದಾಂಗವೆಂಬುದನ್ನು ಹೇಳಿ 'ತಸ್ಮಾತ್ ವೇದಾತ್ಮಕಂ ಶಾಸ್ತ್ರಂ ವಿದ್ಧಿ ಕೌಲಾತ್ಮಂ ಪ್ರಿಯೇ' ಎಂದು ಹೇಳಿರುವುದರಿಂದ ಆಗಮ ಸಂಸ್ಕೃತಿಯು ವೇದೋಪನಿಷತ್ತುಗಳಲ್ಲಿ ಹೇಳಿದ ಧ್ಯೇಯಗಳನ್ನೇ ಕೈವಶ ಮಾಡಿಕೊಳ್ಳಲು ಹೊರಟ ಸಾಧನ ಶಾಸ್ತ್ರವೆಂದು ಹೇಳಲಾಗಿದೆ. ಮೇಲಾಗಿ ವೇದಗಳಲ್ಲಿ ಬರುವ ಹಿಂಸಾತ್ಮಕವೂ ಸ್ವರ್ಗಾದಿ ಅಲ್ಪ ಫಲಜನಕವೂ ಆದ ಕರ್ಮ ಭಾಗವನ್ನು ತ್ಯಾಗ ಮಾಡಿ ಭಕ್ತಿ ಜ್ಞಾನ ವೈರಾಗ್ಯ ತಪಸ್ಸು ಮುಂತಾದುವುಗಳಿಂದ ಆತ್ಮನ ಸಂಸ್ಕರಣದಲ್ಲಿ ಆಗಮಗಳು ಉದಾತ್ತ ಮಾರ್ಗವನ್ನವಲಂಬಿಸಿವೆಯೆನ್ನಬಹುದು. ಆದುದರಿಂದಲೇ ಬ್ರಹ್ಮಮೀಮಾಂಸೆಯ ಭಾಷ್ಯಕರ್ತೃವಾದ ನೀಲಕಂಠ ಶಿವಾಚಾರ್ಯನು "ವಯಂತು ವೇದಾಗಮಯೋಃ ಭೇದಂ ನ ಪಶ್ಯಾಮಃ" ಎಂದು ಹೇಳಿದ್ದಾನೆ.

ಆಗಮ ವಿಭಾಗಗಳು

ಆಗಮಗಳು ಶೈವ ಶಾಕ್ತ ಮತ್ತು ವೈಷ್ಣವ ಎಂದು ಮೂರು ತೆರನಾಗಿವೆ. ಇವು ಮುಖ್ಯವಾಗಿ ಶಿವ, ಶಕ್ತಿ ಮತ್ತು ವಿಷ್ಣು ಎಂಬ ದೇವತೆಗಳ ವಿಷಯವನ್ನು ಕುರಿತು ಆಗಿವೆ. ಆಯಾಯ ಮತಗಳು ಆವಿರ್ಭವಿಸುವ ಸಮಯದಲ್ಲಿ ಈ ಆಗಮಗಳ ಉಗಮವಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಸಾರ ಮತ್ತು ಗಾಣಾಪತ್ಯ ಎಂಬ ತಂತ್ರಗಳೂ ಇವೆಯೆಂದು ಪ್ರತೀತಿಯಿದೆ.

ಪಾಂಚರಾತ್ರಾಗಮವು ೧೦೮ ಪ್ರಭೇದಗಳೆಂದೂ ಶಾಕ್ತ ತಂತ್ರವು ೬೪ ಪ್ರಭೇದಗಳುಳ್ಳದೆಂದೂ ತಿಳಿದು ಬಂದಿದೆ. ಸಮ್ಮೋಹನ ತಂತ್ರದ ೬ನೇ ಅಧ್ಯಾಯದಲ್ಲಿ ಶಾಕ್ತ ತಂತ್ರಗಳು ೬೪, ಉಪತಂತ್ರಗಳು ೩೨೭, ಶೈವ ತಂತ್ರಗಳು ೩೨, ಉಪತಂತ್ರಗಳು ೧೨೭, ವೈಷ್ಣವ ತಂತ್ರಗಳು ೭೫, ಉಪತಂತ್ರಗಳು ೨೦೫ ಇವೆಯೆಂದು ಹೇಳಿದೆ.

ವೈದಿಕ ಅವೈದಿಕ ಆಗಮಗಳು

ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ಪಾಂಚರಾತ್ರ ಮತ್ತು ಪಾಶುಪತ ಪಂಥಗಳ ವಿಚಾರವನ್ನೆತ್ತಿ ಪಾಂಚರಾತ್ರವು ವೇದದ ಕೆಲವು ಭಾಗಗಳನ್ನು ಮಾನ್ಯ ಮಾಡುವುದೆಂದೂ, ಶೈವವು (ಪಾಶುಪತ) 'ವೇದಮಯ'ವೆಂದೂ ಹೇಳಿದ್ದಾರೆ (ಪಂ. ೫. ಪ. ೬) ಸರ್ವವೇದಾನುಸಾರಿಯಾದ ಶೈವಾಗಮಗಳಿಗೆ "ಸಿದ್ಧಾಂತಾಗಮ"ವೆಂದು ಹೆಸರು. "ಸರ್ವವೇದಾರ್ಥ ಸಾರತ್ವಾತ್ ಪ್ರಾಮಾಣ್ಯಂ ವೇದ ವತ್ಸದಾ" ಇವಲ್ಲದೆ ವಾಮ ಲಾಕುಳ, ದಕ್ಷಿಣ ಮತ್ತು ಮಿಶ್ರವೆಂಬ ಪ್ರಭೇದಗಳೂ ಇವೆ. ವಾಮವು ಶಕ್ತಿ ಪ್ರಧಾನವಾದುದು. ದಕ್ಷಿಣ ಭೈರವಾತ್ಮಕವು. ಮಿಶ್ರವು ಸಪ್ತಮಾತ್ರಕೆಯರಿಗೆ ಪ್ರಾಧಾನ್ಯವಿತ್ತಿದೆ.

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।
ನಿರ್ದಿಷ್ಟ ಮುತ್ತರೇ ಭಾಗೇ ವೀರಶೈವಂ ಮತಂ ಪರಮ್ ॥

ಸಿದ್ಧಾಂತವೆನಿಸಿದ ಶೈವತಂತ್ರವನ್ನುಳಿದು ವಾಮಾಚಾರವನ್ನು ಹೇಳುವ ಕಾಪಾಲ, ಲಾಕುಲ, ವಾಮ, ಭೈರ

ವಾದಿಗಳು ಅವೈದಿಕಗಳು. ಪಾಶುಪತದಲ್ಲಿ ವೈದಿಕ ಪಾಶುಪತ ಮತ್ತು ಅವೈದಿಕ ಪಾಶುಪತವೆಂದು ಎರಡು ವಿಧ (ಕೂರ್ಮ ಪುರಾಣ ಅ. ೧೬.) ಇದಕ್ಕೆ 'ಶ್ರೌತ ಪಾಶುಪತ' ಎಂದು ಹೆಸರು. ಸನತ್‌ಕುಮಾರ ಸಂಹಿತೆಯಲ್ಲಿ—

ಶಿವಾಗಮೋಪಿ ದ್ವಿವಿಧಃ ಶ್ರೌತೋಽಶ್ರೌತಶ್ಚ ಸಂಸ್ಕೃತಃ ।
ಶ್ರುತಿಸಾರಮಯಃ ಶ್ರೌತಃ ಸ್ವತಂತ್ರಸ್ತ್ವಿತರೋ ಮತಃ ॥

ಎಂದು ಹೇಳಿದೆ. ಶ್ರೀಕರ ಭಾಷ್ಯದಲ್ಲಿ ಪಾಶುಪತ ವರ್ಣನೆ ಹೀಗಿದೆ—

ದ್ವಿಧಾ ಪಾಶುಪತಂ ಜ್ಞೇಯಂ ಪೂರ್ವಾಪರವಿಭೇದತಃ
ಶಿವಾಗಮಾನು ಸಾರೇಣ ಭಸ್ಮರುದ್ರಾಕ್ಷ ಧಾರಣಮ್ ।
ಲಬ್ಧ್ವಾ ಶಿವಂ ಮಹಾದೇವಂ ಲಿಂಗರೂಪಮುಮಾಪತಿಮ್ ॥
ಅರ್ಚಯೇತ್ತು ತ್ರಿಕಾಲಂ ವೈಪೂರ್ವ ಪಾಶುಪತಂ ತತ್ ।
ನಿಗಮಾಗಮಾನು ಸಂಧಾನ ಶೈವದೀಕ್ಷಾ ವಿಧಾನತಃ ॥
ಶಿವಲಿಂಗಂ ಕರೇ ಕಂಠೇ ಧೃತ್ವಾವಕ್ಷಸ್ಥಲೇಽಪಿ ವಾ ॥
ತ್ರಿಕಾಲಂ ಯೋಽರ್ಚಯೇದ್ಭಕ್ತ್ಯಾ ಮಹಾಪಾಶು
ಪತೋಽಪಿಸಃ ॥

ನಿಟ್ಟೂರು ನಂಜಣಾರ್ಯನು (ಕ್ರಿ. ಶ. ೧೭೨೫) ವೀರಶೈವರನ್ನು ಮಹಾ ಪಾಶುಪತರೆಂದು ಕರೆದಿದ್ದಾನೆ. ಸುಪ್ರಸಿದ್ದ ಕವಿ ಲಕ್ಕಣ್ಣ ದಂಡೇಶನು ತನ್ನ ಶಿವ ತತ್ತ್ವ ಚಿಂತಾಮಣಿಯಲ್ಲಿ (೧೪೨೮) ತನ್ನ ಗುರುವಾದ ಮಲ್ಲಿಕಾರ್ಜುನನನ್ನು "ಪಾಶುಪತ ಸದ್ವ್ರತ ಗುಣಾಗ್ರಣಿ" ಎಂದಿದ್ದಾನೆ.

ಆಗಮುಗಳ ಕಾಲ

ಆಗಮುಗಳಲ್ಲಿ ಉಕ್ತವಾದ ಭಾಷೆ ಮತ್ತು ಆಚಾರ ವಿಚಾರಗಳನ್ನು ಪರಿಶೀಲಿಸಿದರೆ ಅವು ತೀರ ಇತ್ತೀಚೆಗೆ ರಚಿತವಾದವುಗಳೆಂದು ತಿಳಿದು ಬರುತ್ತದೆ. ಆದರೂ ಆಗಮ ಸಂಪ್ರದಾಯವು ಅತ್ಯಂತ ಪ್ರಾಚೀನವಾದುದೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಪಾಂಚರಾತ್ರಾಗಮೋಕ್ತವಾದ ಪೂಜಾವಿಧಾನವು ಕ್ರಿ. ಪೂ. ೨ನೇ ಶತಮಾನದ್ದೆಂದು ಹೇಳುವ ಮಹಾಭಾರತ ಶಾಂತಿ ಪರ್ವ ೨೫೭ನೇ ಅಧ್ಯಾಯದಲ್ಲಿ ಉಕ್ತವಾಗಿದೆ. ಕ್ರಿ. ಪೂ. ೫ನೇ ಶತಮಾನದ್ದೆಂದು ಹೇಳಲಾಗಿರುವ ಭಗವದ್ಗೀತೆಯಲ್ಲಿ ಪಾಂಚರಾತ್ರಾಗಮೋಕ್ತ ವಾಸುದೇವ ಮಹತ್ವವಿದೆ. ಪಾಂಚರಾತ್ರರಿಗೆ ಸಂಜ್ಞೆಯೆನಿಸಿರುವ "ಸಾತ್ವತ" ಎಂಬ ಪದವು ಐತರೇಯ ಮತ್ತು ಶತಪಥ ಬ್ರಾಹ್ಮಣಗಳಲ್ಲಿ ಕಂಡು ಬರುತ್ತದೆ. ಅಲ್ಲದೆ ಭಗವದ್ಗೀತೆಯಲ್ಲಿ ಅನೇಕ ಶಿವಾಗಮುಗಳ ಅವತರಣಗಳು ಅತಿ ಸ್ಪಷ್ಟವಾಗಿ ಕಂಡು ಬರುತ್ತವೆ. ಈ ಎಲ್ಲ ಕಾರಣಗಳಿಂದ ಪಾಂಚರಾತ್ರಾಗಮುಗಳು ಕ್ರಿ. ಪೂ. ೧೪ ಶತಮಾನಗಳಷ್ಟು ಹಳೆಯವೆಂದೂ, ಶೈವಾಗಮಶಾಖೆ ಅದಕ್ಕಿಂತ ಹಿಂದಿನದೆಂದೂ ಆಂಧ್ರದಲ್ಲಿ ಸುಪ್ರಸಿದ್ಧ ಸಂಶೋಧಕರಾದ ಮಲ್ಲಾದಿ ಸೂರ್ಯನಾರಾಯಣ ಶಾಸ್ತ್ರಿಗಳು ಹೇಳುತ್ತಾರೆ.[1]

ಪಾಂಚಾರಾತ್ರಾಗಮುಗಳಲ್ಲಿ ಶೈವಾಗಮುಗಳ ವಿಚಾರವಿದ್ದು ಶೈವಾಗಮುಗಳಲ್ಲಿ ವೈಷ್ಣವಾಗಮುಗಳ ಉಲ್ಲೇಖವಿಲ್ಲದಿರುವುದರಿಂದ ಶೈವಾಗಮುಗಳು ಪ್ರಾಚೀನವೆಂದು ಡಾ| ಎಸ್. ಸಿ. ನಂದೀಮಠ ಅವರು ಅಭಿಪ್ರಾಯಪಟ್ಟಿದ್ದಾರೆ.[2] ಆದುದರಿಂದ ಶೈವಾಗಮುಗಳ ಕಾಲ ಏನಿಲ್ಲೆಂದರೂ ಕನಿಷ್ಠಪಕ್ಷ ಎರಡು ಸಾವಿರ ವರ್ಷಗಳಾದರೂ ಆಗಿರುವುದರಲ್ಲಿ ಅಡ್ಡಿಯಿಲ್ಲವೆಂದು ಶ್ರೀ ರಂ. ದಿವಾಕರ ಅವರು ಅಭಿಪ್ರಾಯ ಪಟ್ಟಿದ್ದಾರೆ.[3]

ಇತ್ತೀಚೆಗೆ ಮೊಹೆಂಜೋದಾರೋ ಕಣಿವೆಯಲ್ಲಿ ದೊರೆತಿರುವ ಅನೇಕ ಶಿವಲಿಂಗಗಳಿಂದ ಶೈವ ಸಂಸ್ಕೃತಿಯು ವೇದಕಾಲಕ್ಕಿಂತಲೂ ಹಿಂದಿನದೆಂದು ದೃಢಪಟ್ಟಿದೆ. ಇನ್ನು ಚಾರಿತ್ರಕ ದೃಷ್ಟಿಯಿಂದ ಆಗಮುಗಳು ಕ್ರಿ. ಶ. ೫ನೇ ಶತಮಾನಕ್ಕಿಂತ ಹಳೆಯವು. ಕ್ರಿ. ಶ. ೫ನೇ ಶತಮಾನದವುಗಳೆಂದು ನಿಶ್ಚಿತವಾಗಿರುವ ಕಂಚಿ ಪಲ್ಲವರ ಶಾಸನಗಳಲ್ಲಿ ೨೮ ಶಿವಾಗಮುಗಳ ಹೆಸರಿದೆ. ಅಂದಿನ ರಾಜನಾದ 'ರಾಜಸಿಂಹ'ನ ಬಿರುದುಗಳಲ್ಲಿ 'ಆಗಮ ಪ್ರಮಾಣಃ' ಎಂದಿದೆ. ಪಲ್ಲವ ರಾಜರು 'ವಿದಿತ ಬಹು ನಯಃ ಶೈವ ಸಿದ್ಧಾಂತಮಾರ್ಗಃ ಶ್ರೀಮಾನ್ ಅತ್ಯಂತ ಕಾಮಃ ಕ್ಷತ ಸಕಲಮಲೋದುರ್ಧರಃ ಪಲ್ಲವಾನಾಃ' ಎಂದು ಉಲ್ಲೇಖವಿದೆ. ಈ ಶಾಸನಗಳನ್ನು ವಿಮರ್ಶಿಸುತ್ತ ಪ್ರೊ. ಎಸ್. ರಾಧಾಕೃಷ್ಣನ್ ಅವರು ತಮ್ಮ ಇಂಡಿಯನ್ ಫಿಲಾಸಫಿ ಭಾ. IIರಲ್ಲಿ ಶೈವಪಂಥವು ಕ್ರಿ. ಶ. ೫ನೇ ಶತಮಾನಕ್ಕಿಂತ ಹಿಂದಿನದೆಂದು ಉಲ್ಲೇಖಿಸಿದ್ದಾರೆ. ಇದಲ್ಲದೆ ನಿಜಗುಣ ಶಿವಯೋಗಿ (ವಿವೇಕ

---

೧ ಆಂಧ್ರ ಸಂವತ್ಸರಾದಿ ಸಂಚಿಕೆ (ಪಾರ್ಥಿವ)—
ಸಂಸ್ಕೃತ ವಾಙ್ಮಯ ಚರಿತ್ರೆ ಪು. ೮೧.

೨. ಶಿವಾನುಭವ ಸಂ. ೬. ಸಂ. ೧. ಎಪ್ರಿಲ್ ೧೯೩೧.

೩. ವಚನಶಾಸ್ತ್ರ ರಹಸ್ಯ ಪು. ೨೮೯—೨೯೫.

೪. ಶಿವಾನುಭವ ಸಂ. ೬. ಸಂ. ೧೯೩೧. ಎಪ್ರಿಲ್.

ಚಿಂತಾಮಣಿ); ತಿರುಮೂಲರ್ (ಕಿ. ಶ. ೮೦೦) ರಾಜಾನಕ ರಾಮಕಂಠ (೯೦೦-೯೫೫) ಮತಂಗ ವೃತ್ತಿ; ಅಘೋರಶಿವ (೧೧೫೮): ಉಮಾಪತಿ ಶಿವಾಚಾರ್ಯ (೧೩೧೩) ಪೌಷ್ಕರ ಭಾಷ್ಯ; ಮಾಧವಾಚಾರ್ಯ (೧೪೦೦) ಸರ್ವದರ್ಶನ ಸಂಗ್ರಹ; ಈಶಾನಶಿವ (೧೧೦೦) ಈಶಾನ ಶಿವ ಗುರುದೇವ ಪದ್ಧತಿ; ಮುಂತಾದ ಅನೇಕ ಗ್ರಂಥಗಳಲ್ಲಿ ಆಗಮಗಳ ಉಲ್ಲೇಖಗಳು ಹೇರಳವಾಗಿವೆ.

ಆಗಮಗಳ ಪರಂಪರೆ

ಆಗಮ ರಚನೆ ಈಚಿನದಾದರೂ ಆ ಸಂಪ್ರದಾಯ ಪ್ರಾಚೀನವೆಂದು ಹೇಳಲಾಯಿತು. ಅವು ಕಾಲ ಕಾಲಕ್ಕೆ ಪರಂಪರೆಯಾಗಿ ಬಂದವೆಂದು ಅವುಗಳಿಂದಲೇ ತಿಳಿದುಬರುತ್ತದೆ. ಭಗವದ್ಗೀತೆಯು ವಿಷ್ಣುವಿನಿಂದ ವಿವಸ್ವಾನನಿಗೂ, ವಿವಸ್ವಾನನಿಂದ ಮನುವಿಗೂ, ಮನುವಿನಿಂದ ಇಕ್ಷ್ವಾಕುವಿಗೂ ಹೇಳಿರುವಂತೆ (ಭ. ಗೀ. ಅ. ೪. ೧) ಆಗಮಗಳೂ ಸಹ ಒಬ್ಬರಿಂದೊಬ್ಬರಿಗೆ ಹೇಳಿಕೊಂಡು ಬಂದಿವೆ. ಶಿವಾಗಮಗಳ ವಿಷಯವನ್ನೇ ತೆಗೆದುಕೊಂಡರೆ ಅವು ಕಾಮಿಕ ಮೊದಲು ವಾತುಲಕಡೆಯಾಗಿ ೨೮ ಇವೆ. ಇವುಗಳಲ್ಲಿ—ಕಾಮಿಕ, ಯೋಗಜ, ಚಿಂತ್ಯಾ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಹಸ್ರ, ಸುಪ್ರಭ, ಮತ್ತು ಅಂಶುಮಾನ್ ಎಂಬ ಹತ್ತು ಶಿವಾಗಮಗಳು. ಇನ್ನು ಉಳಿದ—ವಿಜಯ, ನಿಶ್ವಾಸ, ಸ್ವಾಯಂಭುವ, ಅನಲ, ಮಾರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಲಲಿತ, ಪ್ರೋದ್ಗೀತ, ಸಿದ್ಧ, ಸಂತಾನ, ಸರ್ವೋಕ್ತ, ಪಾರಮೇಶ್ವರ, ಕಿರಣ, ಮತ್ತು ವಾತುಲ ಎಂಬ ಹದಿನೆಂಟು ರುದ್ರಾಗಮಗಳು.

ಇವುಗಳಲ್ಲಿ ಮೊದಲಿನ ಹತ್ತು ಆಗಮಗಳು ಮೂರು ಸಾರಿ ರೂಪು ತಳೆದವು. ಉದಾಹರಣೆಗಾಗಿ ಕಾಮಿಕವು ಮೊದಲು ಪ್ರಣವಗೂ, ಅವನಿಂದ ತ್ರಿಕಾಲನಿಗೂ, ಅವನಿಂದ ಹರನಿಗೂ ಹೇಳಲ್ಪಟ್ಟಿತು. ಇದರಂತೆ ರುದ್ರಾಗಮಗಳು ಎರಡು ಸಾರಿ ರೂಪು ತಳೆದುವು. ಉದಾ:—ವಿಜಯಾಗಮವು ಮೊದಲು ರುದ್ರನಿಗೂ, ಅವನಿಂದ ಪರಮೇಶನಿಗೂ ಹೇಳಲ್ಪಟ್ಟಿತು. ಇದರಂತೆ ಶಾಕ್ತ, ಪಾಂಚರಾತ್ರಾಗಮಗಳು ಸಹ ಪರಂಪರೆಯಿಂದ ಬಂದುವೇ ಆಗಿವೆ. ಆದುದರಿಂದಲೇ ಸುಪ್ರಭೇದದಲ್ಲಿ 'ಅದು ಮತ್ತೊಂದು ವಿಸ್ತಾರವಾದ ಗ್ರಂಥದಿಂದ ಸಂಗ್ರಹಿಸಿದ 'ಆಕುಂಚಿತ ಆವೃತ್ತಿ' ಎಂದು ಹೇಳಿದೆ. ಇದರಿಂದ 'ಸಾರಾತ್ಸಾರತರ' ಎಂದು ಉಲ್ಲೇಖಗಳು ಅಲ್ಲಲ್ಲಿ ಇವೆ. ಇದರಿಂದ ಆಗಮಗಳಲ್ಲಿ ಅಲ್ಲಲ್ಲಿ ಪ್ರಕ್ಷಿಪ್ತಗಳು ಸೇರಲು ಅವಕಾಶ ವಿರಲೂ ಸಾಕು.

ಆಗಮೋಕ್ತ ವಿಷಯಗಳು

ಆಗಮಗಳಲ್ಲಿ ಕ್ರಿಯಾ, ಚರ್ಯಾ, ಯೋಗ ಮತ್ತು ಜ್ಞಾನ (ವಿದ್ಯಾ) ಎಂದು ನಾಲ್ಕು ಪಾದಗಳಿರುತ್ತವೆ. ಈಗ ದೊರೆಯುವ ಆಗಮಗಳಲ್ಲಿ ಕೆಲ ಕೆಲವು ಪಾದಗಳು ಮಾತ್ರ ದೊರೆಯುತ್ತವೆ. ಆಗಮಗಳಲ್ಲಿ ಉಕ್ತವಾದ ವಿಷಯಗಳನ್ನು ಮುಂದೆ ಕಂಡಂತೆ ವಿಂಗಡಿಸಬಹುದು.

ಕ್ರಿಯಾಪಾದ:—ಇದರಲ್ಲಿ ದೇವಸ್ಥಾನಗಳ ಸ್ಥಾಪನೆ, ವಿಗ್ರಹರಚನೆ, ವಿಗ್ರಹಪ್ರತಿಷ್ಠೆ ಮುಂತಾದುವುಗಳಿಗೆ ಸಂಬಂಧಿಸಿದ ವಿಷಯಗಳಿವೆ. ಇದಲ್ಲದೆ ಶಿವಾಗಮಗಳ ಕ್ರಿಯಾಪಾದದಲ್ಲಿ ವೀರಶೈವರ ಕೆಲವು ವಿಧಿವಿಧಾನಗಳು ಕಂಡುಬರುತ್ತವೆ. ಸುಪ್ರಭೇದ ಕಾಮಿಕಗಳಲ್ಲಿ ದೇವಸ್ಥಾನಗಳ ರಚನೆಯ ವಿಚಾರವು ವಿಪುಲವಾಗಿದೆ. ಗುಡಿಗಳನ್ನು ಸೃಷ್ಟಿ ಸೌಂದರ್ಯವುಳ್ಳ ಸ್ಥಳಗಳಲ್ಲಿ ಕಟ್ಟಬೇಕು. ಮೊದಲು ಆ ಸ್ಥಳವನ್ನು ಹರಗಿ, ಬಿತ್ತಿ, ಬಂದ ಬೆಳೆಯನ್ನು ಪಶುಪಕ್ಷಿಗಳಿಗೆ ತಿನ್ನ ಬಿಟ್ಟು ಅಲ್ಲಿ ದೇವಾಲಯ ಕಟ್ಟಬೇಕು. ಶುಭಮುಹೂರ್ತದಲ್ಲಿ ಶಂಕುಸ್ಥಾಪನೆ ಮಾಡಿ ಬಲಿಹರಣಗಳಾಗಬೇಕು.

ದೇವಾಲಯ ನಿರ್ಮಾಣವು ಅಜ್ಞಜನಮನೋರಂಜನೆಗಾದರೂ ಅವುಗಳಿಂದ ಶಿಲ್ಪ ಶಾಸ್ತ್ರಕ್ಕೆ ಉತ್ತೇಜನ ದೊರೆಯಿತು. ಶಿಲ್ಪ ಶಾಸ್ತ್ರದ ಉಗಮಕ್ಕೆ ಆಗಮಗಳೇ ಮೂಲವೆಂದರೂ ಸಲ್ಲುವುದು. ವೈದಿಕ ಸಾಹಿತ್ಯದಲ್ಲಿ ಶಿಲ್ಪಕ್ಕೆ ಅವಕಾಶವೇ ಇರಲಿಲ್ಲ. ಮೂರ್ತಿ ಪೂಜಾ ವಿಧಾನಕ್ಕೆ ಆಗಮಗಳೇ ಆಕರ. ಆದುದರಿಂದ ಆಗಮೋಕ್ತವಾದ ಶಿಲ್ಪ ವೈಭವಕ್ಕೆ ಇಂದಿಗೂ ಎಲ್ಲೋರ ಅಜಂತ, ಬೇಲೂರು ಹಳೇಬೀಡು ಮುಂತಾದ ಕಡೆಗಳಲ್ಲಿನ ಜಗತ್ಪ್ರಸಿದ್ಧ ದೇವಾಲಯಗಳೇ ಸಾಕ್ಷಿ. ಇವುಗಳಲ್ಲಿ ಕೆಲವು ಜೈನ ಸಂಸ್ಕೃತಿಯವುಗಳೆಂಬ ಶಂಕೆಗೆ ಅವಕಾಶವೇ ಇಲ್ಲ. ಜೈನ ಬೌದ್ಧ ಸಂಸ್ಕೃತಿಗಿಂತ ಮೊದಲಿನ ಹರಪ್ಪ ಕಣಿವೆಯ ಶೈವ ಸಂಸ್ಕೃತಿ ಅತ್ಯಂತ ಪ್ರಾಚೀನವಾದುದರಿಂದ ಈ ಪ್ರಶ್ನೆಗೆ ಅವಕಾಶವೇ ಇಲ್ಲ.

ದಕ್ಷಿಣ ಭಾರತದ ಜಗನ್ಮೋಹಕ ಶಿಲ್ಪಕಲಾ ವಿದ್ಯೆಗೆ ಆಕರವಾದ ಆಗಮಸಂಸ್ಕೃತಿ ಕಲಾಲೋಕದ ಕೃತಜ್ಞತೆಗೆ ಪಾತ್ರವಾಗಿದೆ.

ದೇವಾಲಯಗಳ ರಚನೆಯಲ್ಲಿ ಗರ್ಭನ್ಯಾಸ, ಪೀಠ, ಕಂಠ, ಮಂಟಪ, ಪ್ರಾಗಾರ ಮುಂತಾದ ಅತ್ಯಲ್ಪ ವಿಷಯಗಳೂ ಸಹ ಅಚ್ಚುಕಟ್ಟಾಗಿ ಹೇಳಿವೆ. ವಿಗ್ರಹಾರಾಧನೆಯು ಯದ್ಯಪಿ ವೇದಕಾಲದ್ದಲ್ಲವೆಂದು ಕೆಲವರು ಸಂದೇಹ ಪಡುತ್ತಾರೆ. ಆದರೆ ಅವು ಯಾಸ್ಕ, ಪಾಣಿನಿಯರಿಗಿಂತ ಹಿಂದಿನವೆಂಬುದನ್ನು ಒಪ್ಪಲೇ ಬೇಕಾಗಿದೆ. ಮನಸ್ಸಿನ ಏಕಾಗ್ರತೆಯನ್ನು ಸಾಧಿಸಲಿಕ್ಕೆ ವಿಗ್ರಹಕ್ಕಿಂತ ಉತ್ತಮ ಸಾಧನವು ಮತ್ತೊಂದಿಲ್ಲವೆಂದು ಸ್ವಾಮಿ ವಿವೇಕಾನಂದರು ಒಮ್ಮೆ ಹೇಳಿದ್ದಾರೆ (ಹಿಂದೂ ಧರ್ಮಸಾರ ಪು. ೨೫) ವಿಗ್ರಹಗಳಲ್ಲಿ ಚಲ, ಅಚಲ ಮುಂತಾದ ಅನೇಕ ಪ್ರಭೇದಗಳಿವೆ. ಮೂರ್ತಿಗಳು ಸಕಲವೆಂದೂ ಲಿಂಗಗಳು ನಿಷ್ಕಲವೆಂದೂ ಸಂಕೇತವಿದೆ.

ಚರ್ಯಾಪಾದ

ಇದರಲ್ಲಿ ಮಾನವನು ಸ್ಥಾಪಿಸಿದ ವಿಗ್ರಹಗಳನ್ನು ಪ್ರತಿ ದಿನ ಹೇಗೆ ಪೂಜಿಸಬೇಕೆಂಬ ವಿವರಣೆಯಿದೆ. ಸ್ನಾನ, ಅರ್ಚನೆ, ನೈವೇದ್ಯಾದಿಗಳ ವಿಧಿವಿಧಾನಗಳಿವೆ. ಅಗ್ನಿಕುಂಡ, ಸಮಿತ್ತು ಇತ್ಯಾದಿ ವಿವರಣೆಗಳಿವೆ. ಹೋಮವು ಉಕ್ತವಾಗಿದ್ದರೂ ದೀಕ್ಷಿತನು "ಶೈವಾಗ್ನಿ"ಯನ್ನೇ ಉಪಯೋಗಿಸಬೇಕು. ವೈದಿಕಾಗ್ನಿಗಿಂತ ಶೈವಾಗ್ನಿ ಶ್ರೇಷ್ಠ. ದೀಕ್ಷಿತನಾಗದವನು ಶೈವಾಗ್ನಿಯನ್ನು ಉಪಯೋಗಿಸುವಂತಿಲ್ಲ. ಪಾರಮೇಶ್ವರಾಗಮ ಪಟಲ ೩, ೪, ೫ರಲ್ಲಿ ವೀರಶೈವರು ಹವನಾದಿಗಳನ್ನು ಮಾಡಿ ಶಿವದೀಕ್ಷೆ ಕೊಡಬೇಕೆಂದು ಹೇಳಿದೆ. ಗೋತ್ರ, ವರ್ಣಾಶ್ರಮ ಮುತ್ತು ಷೋಡಶ ಸಂಸ್ಕಾರಗಳ ವಿವರಣೆಯುಂಟು. ಆದರೆ ಇವು ಪ್ರಾಣಿಹಿಂಸೆ ಮುಂತಾದ ಕ್ರೌರ್ಯ ಕರ್ಮಗಳಲ್ಲ.

ಯೋಗಪಾದ

ಪಾತಂಜಲಿ ಯೋಗಶಾಸ್ತ್ರಕ್ಕೆ ಆಗಮಗಳೇ ಮೂಲವೆಂದು ಪಂಡಿತರು ಅಭಿಪ್ರಾಯ ಪಡುತ್ತಾರೆ. ಈಶಾನ ಶಿವಗುರು ಮತ್ತು ನಿಜಗುಣರು ಆಗಮೋಕ್ತವಾದ ಯೋಗಪದ್ಧತಿಯನ್ನೇ ಅನುಸರಿಸಿ ಅಷ್ಟಾಂಗ ಯೋಗ ಸಾಧನೆಯನ್ನು ನಿರೂಪಿಸಿದ್ದಾರೆ.

ಜ್ಞಾನಪಾದ

ವೈಷ್ಣವಾಗಮಗಳಿಗಿಂತ ಶೈವಾಗಮಗಳಲ್ಲಿ ಜ್ಞಾನಪಾದಕ್ಕೆ ಹೆಚ್ಚಿನ ಮಹತ್ವವಿದೆ. ಈ ಪಾದದಲ್ಲಿ ಉಕ್ತವಾದ ವಿಷಯಗಳು ಮೂರು.

ಪತಿ-ಪಶು-ಪಾಶ

ಪತಿ—ವಿಶ್ವದ ಕರ್ತ, ಪಶು—ಜೀವಿಗಳು, ಪಾಶ—ಇವೆರಡಕ್ಕೂ ಇರುವ ಕರ್ಮಸಂಬಂಧ.

ಪತಿಪದಾರ್ಥ:—ಆಗಮಗಳ ಪರಮಾತ್ಮಸ್ವರೂಪವು ಅತ್ಯಂತ ತಾತ್ವಿಕ. ಆತನು ಸಕಲ, ನಿಷ್ಕಳ ಮತ್ತು ಸಕಲನಿಷ್ಕಳ. ಇದನ್ನೇ ವೀರಶೈವರು ಇಷ್ಟ, ಪ್ರಾಣ ಮತ್ತು ಭಾವಲಿಂಗಸ್ವರೂಪನೆಂದು ಕರೆಯುತ್ತಾರೆ. ಶಕ್ತಿಪತಿಯಾದ ಶಿವನಲ್ಲಿ ಅವಿನಾಭಾವದಿಂದಿರುತ್ತದೆ. ಶಿವ-ಶಕ್ತಿಗಳಲ್ಲಿ ಸೂರ್ಯ-ಸೂರ್ಯಪ್ರಕಾಶ, ಧರ್ಮ-ಧರ್ಮಗಳಿಗಿರುವ ಸಂಬಂಧವಿದೆ. ಪತಿಯು ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹಗಳೆಂಬ ಪಂಚಕ್ರಿಯೆಗಳನ್ನುಂಟುಮಾಡುತ್ತಾನೆ. ಶಿವ-ಶಕ್ತಿಗಳ ಸಂಯೋಗ ವಿಶೇಷವೇ ಜಗತ್ತು. ಅವನು ಸಚ್ಚಿದಾನಂದ ನಿತ್ಯಪರಿಪೂರ್ಣ. ಅನಾದಿ.

ಪಶುಪದಾರ್ಥ:—ಪಶುಗಳೆಂದರೆ ಆತ್ಮರುಗಳು. ಅವರು ಅನೇಕ. ಅವರ ಉತ್ಪತ್ತಿಯು ಮಲಸಂಬಂಧವಾದುದು. ಶಿವಾಭಿನ್ನರು, ಚೈತನ್ಯಮಯರು. ಮಲಸಂಪರ್ಕದಿಂದ ಇವರು ವಿಜ್ಞಾನಕಲರು, ಪ್ರಳಯಕಲರು ಮತ್ತು ಸಕಲರೆಂದು ಮೂರು ತೆರನಾಗಿರುವರು. ಮಲಸಂಬಂಧದಿಂದ ಇವರು ತಮ್ಮ ಸ್ಥಿತಿಯನ್ನು ಮರೆತಿರುತ್ತಾರೆ. ಈ ಸ್ಥಿತಿ ಕಳೆಯುವುದಕ್ಕೆ ವಿಶ್ವನಿರ್ಮಾಣವಾಗಿದೆ. ಕರ್ಮದ ಮೂಲಕ ಜೀವನು ೮೪ ಲಕ್ಷ ಜೀವರಾಶಿಗಳಲ್ಲಿ ಹುಟ್ಟುತ್ತಾನೆ. ಹೀಗೆ ಹುಟ್ಟಿ ಹುಟ್ಟಿ ಪರಿಶುದ್ಧವಾದ ಬಳಿಕ ಅವರು ಮುಕ್ತರಾಗುತ್ತಾರೆ. ದೀಕ್ಷೆಯು ಅವರ ಜನ್ಮಗಳನ್ನು ಕಡಮೆಮಾಡುತ್ತದೆ. ಗುರುವು ಆತ್ಮನ ಕರ್ಮವನ್ನು ಕಳೆಯುತ್ತಾನೆ.

ಪಾಶಪದಾರ್ಥ:—ಪಾಶವೆಂದರೆ ಹಗ್ಗ. ಇದು ಆತ್ಮರನ್ನು ಬಂಧನಕ್ಕೆ ಒಳಪಡಿಸುತ್ತದೆ. ಪಾಶಗಳು ಆಣವ, ಕಾರ್ಮಿಕ ಮತ್ತು ಮಾಯಿಕವೆಂದು ಮೂರು ವಿಧ. ಆಣವವು ಭತ್ತಕ್ಕೆ ಹೊಟ್ಟು ಮುಚ್ಚಿರುವಂತೆಯೂ ತಾಮ್ರಕ್ಕೆ ಕಿಲುಬು ಸ್ವಾಭಾವಿಕವಾಗಿ ಕವಿದಿ

ರುವಂತೆಯೂ ಅನಾದಿವಾಸನಾಮಯವಾಗಿ ಅಂಟಿರುತ್ತದೆ. ಕಾರ್ಮಿಕ ಮತ್ತು ಮಾಯಾಮಲಗಳು ಭತ್ತದ ಸ್ಥೂಲವಾದ ಹೊಟ್ಟು ಹೋದ ಮೇಲೆ ತೌಡಿನಂತೆಯೂ, ಅನುಲೇಪನಾತ್ಮಕವಾಗಿಯೂ ಆತ್ಮನಿಗೆ ಅಂಟಿರುತ್ತವೆ. ಇದರಿಂದ ಆತ್ಮನಿಗೆ "ತಾನೇ ಭೋಗ್ಯ ವಸ್ತು"ವೆಂಬ ಭ್ರಾಂತಿಜ್ಞಾನವುಂಟಾಗುತ್ತದೆ. ಇದೇ ಮಾಯಿಕಮಲ. ಮನುಷ್ಯನು ಫಲಪ್ರಾಪ್ತಿಗಾಗಿ ಮಾಡುವ ಕೃತಿಯ ಪರಿಣಾಮವೇ ಕಾರ್ಮಿಕಮಲ. ಈ ಮಲತ್ರಯ ನಿವಾರಣೆಗಾಗಿ ದೀಕ್ಷೆಯು ಉಕ್ತವಾಗಿದೆ.

ದೀಯತೇ ಲಿಂಗಸಂಬಂಧಃ ಕ್ಷೀಯತೇ ಕರ್ಮ ಸಂಚಯಃ ।
ದೀಯತೇ ಕ್ಷೀಯತೇ ಯಸ್ಮಾತ್ ದೀಕ್ಷೇತಿ ಕಥಿತಾ ಬುಧೈಃ ।
(ಸೂಕ್ಷ್ಮ. ಪ ಲ, ಪ. ಲ.)

ದೀಕ್ಷೆಯು ಕ್ರಿಯಾ, ಮಾಂತ್ರೀ ಮತ್ತು ವೇಧಾ ಎಂದು ಮೂರು ತೆರನಾಗಿದೆ. ಕ್ರಿಯಾದೀಕ್ಷೆಯಿಂದ ಆಣವ ಮಲವೂ, ಮಾಂತ್ರೀದೀಕ್ಷೆಯಿಂದ ಕಾರ್ಮಿಕಮಲವೂ ವೇಧಾದೀಕ್ಷೆಯಿಂದ ಮಾಯಿಕಮಲವೂ ನಿವಾರಣೆಯಾಗಿ ಆತ್ಮನು ಮುಕ್ತನಾಗುತ್ತಾನೆ.

ವೀರಶೈವ ಧರ್ಮದಲ್ಲಿ ದೀಕ್ಷಿತನಾದವನು ಭಕ್ತಾದಿ ಆರು ಸ್ಥಲಗಳನ್ನು ಹತ್ತಿ ಮುಕ್ತಿಸ್ಥಿತಿಯನ್ನು ಪಡೆಯುತ್ತಾನೆ.

ಷಟ್‌ಸ್ಥಲ ಸೋಪಾನ

ಆಗಮಕಾರರ ದೃಷ್ಟಿಯಲ್ಲಿ ಪರಬ್ರಹ್ಮವು 'ಅಂಗ' (ಜೀವ) ಮತ್ತು 'ಲಿಂಗ' (ಶಿವ)ವೆಂದು ಎರಡು ತೆರನಾಯಿತು. ಬ್ರಹ್ಮನಲ್ಲಿ ಅವಿನಾಭಾವದಿಂದ ಇರುವ ಶಕ್ತಿಯೂ ಕೂಡ ಭಕ್ತಿ-ಶಕ್ತಿ ಎಂದು ವಿರಡು ವಿಧವಾಯಿತು. ಶಕ್ತಿಯು ಲಿಂಗ (ಶಿವ)ದೊಡನೆ ಸೇರಿ ಪ್ರವೃತ್ತಿರೂಪದಲ್ಲಿ ಸದಾಶಿವಾದಿಯಾಗಿ ಜಗತ್‌ಸೃಷ್ಟಿಗೆ ಕಾರಣವಾಯಿತು. ಅದರಂತೆ ಭಕ್ತಿಯು ಅಂಗನೊಡನೆ ಸೇರಿ ನಿವೃತ್ತಿಮಾರ್ಗದಲ್ಲಿ ಜೀವನು ಶಿವನೊಡನೆ ಐಕ್ಯನಾಗಲು ಸಹಾಯಕವಾಗುತ್ತದೆ. 'ಅಮಿತಿ ಬ್ರಹ್ಮ ಸನ್ಮಾತ್ರಂ ಗಚ್ಛತೀತ್ಯಾಂಗಮುಚ್ಯತೆ' (ಅನುಭವಸೂತ್ರ) ಅಂದರೆ ಬ್ರಹ್ಮನ ಕಡೆಗೆ ಸಾಗುವುದೇ ಶಿವನ ಅಂಶವಾದ ಅಂಗ (ಜೀವ)ನ ಲಕ್ಷಣ. ಅದಕ್ಕೆ ಭಕ್ತಿಯ ನೆರವಿಲ್ಲದೆ ಸಾಧ್ಯವಿಲ್ಲ. ಲಿಂಗವು ಭಕ್ತನ ಉದ್ಧಾರಕ್ಕಾಗಿ ಇಷ್ಟಲಿಂಗ, ಪ್ರಾಣಲಿಂಗ, ಮತ್ತು ಭಾವಲಿಂಗವೆಂದು ಮೂರು ಭಾಗವಾಗಿರುವಂತೆ ಅಂಗವೂ ಸಹ ತ್ಯಾಗಾಂಗ, ಭೋಗಾಂಗ ಮತ್ತು ಯೋಗಾಂಗವೆಂದು ಮೂರು ವಿಧವಾಗಿದೆ. ಗುರುವು ತ್ಯಾಗಾಂಗ (ಸ್ಥೂಲ) ಶರೀರದಲ್ಲಿ ಇಷ್ಟಲಿಂಗವನ್ನೂ, ಭೋಗಾಂಗ (ಸೂಕ್ಷ್ಮ ಶರೀರ)ದಲ್ಲಿ ಪ್ರಾಣಲಿಂಗವನ್ನೂ, ಯೋಗಾಂಗ (ಕಾರಣ ಶರೀರ)ದಲ್ಲಿ ಭಾವಲಿಂಗವನ್ನೂ ಧಾರಣೆ ಮಾಡುತ್ತಾನೆ.

ತ್ಯಾಗಾಂಗವೆಂದರೆ ಸ್ಥೂಲಶರೀರ. ಇದು ಬಾಹ್ಯವಿಷಯಗಳಲ್ಲಿ ಆಸಕ್ತಿಯನ್ನು ಬಿಟ್ಟು ಇಷ್ಟಲಿಂಗದ ಉಪಾಸನೆ ಮಾಡುವ ಸ್ಥಳವು. ಇಲ್ಲಿ ಸಂಸಾರ ಭ್ರಾಂತಿಯ ತ್ಯಾಗವು ಮಾಡಲ್ಪಡುವುದರಿಂದ ಇದಕ್ಕೆ ತ್ಯಾಗಾಂಗವೆಂದು ಹೆಸರು. (ಅನುಭವಸೂತ್ರ) ಇನ್ನು ವಿಷಯಾಸಕ್ತಿಯನ್ನು ತೊರೆದ ಮೇಲೆ ಶಿವಪ್ರಸಾದ ರೂಪವಾಗಿಯೆ ಎಲ್ಲ ಭೋಗಗಳನ್ನು ಭೋಗಿಸುವುದರಿಂದ ಭೋಗಾಂಗವೆನಿಸುವುದು. ಈ ಸ್ಥಲದಲ್ಲಿ ಸಾಧಕನು ಶಿವನೊಡನೆ ಭೋಗ ಮಾಡುತ್ತಿರುವನು. (ಅ. ಸೂ.) ಕಡೆಗೆ ಎಲ್ಲ ವಾಸನೆಗಳ ಲಯವಾಗಿ ಜ್ಞಾನೋದಯವಾಗಿರುವುದರಿಂದ ಕಾರಣಶರೀರವು ಶುದ್ಧವಾಗಿ ಸಾಧಕನು ಯೋಗಾಂಗದಲ್ಲಿ ಶಿವಜ್ಞಾನಯುಕ್ತನಾಗಿ ಎಲ್ಲೆಲ್ಲಿಯೂ ಶಿವನನ್ನೇ ಸಾಕ್ಷಾತ್ಕರಿಸುವನು. ಶಿವಯೋಗ ಮತ್ತು ಅದರಿಂದಾಗುವ ಪರಮ ಸಂತೋಷ ವಳವಡುವುದೇ ಯೋಗಾಂಗದ ಸ್ಥಿತಿ. ಅಂಗ (ಜೀವ)ನ ಈ ಮೂರು ಅಂಗಗಳೂ ಕ್ರಮವಾಗಿ ತ್ಯಾಗಾಂಗದಲ್ಲಿ ಭಕ್ತ-ಮಹೇಶ; ಭೋಗಾಂಗದಲ್ಲಿ ಪ್ರಸಾದಿ–ಪ್ರಾಣಲಿಂಗಿ; ಯೋಗಾಂಗದಲ್ಲಿ ಶರಣ ಐಕ್ಯ ಎಂದು ಆರು ಪ್ರಕಾರವಿರುವುದು.

ಭಕ್ತಸ್ಥಲದಲ್ಲಿ ಶ್ರದ್ಧೆ ಮತ್ತು ಶ್ರದ್ಧಾಪೂರ್ವಕವಾದ ಗುರು-ಲಿಂಗ-ಜಂಗಮರ ಸೇವೆ ಮುಂತಾದ ಆಚಾರವೇ ಮುಖ್ಯವಾದುದು. ಮಹೇಶ್ವರ ಸ್ಥಲದಲ್ಲಿ ನಿಷ್ಠೆ ಅಂದರೆ ಮನೋದಾರ್ಢ್ಯ ಮತ್ತು ಗುರೂಕ್ತ ಮಾರ್ಗದಿಂದ ಆಚರಣೆ ಮುಖ್ಯ. ಈ ಎರಡು ಸ್ಥಳಗಳಲ್ಲಿ ಗುರು-ಲಿಂಗ-ಜಂಗಮ-ಭಸ್ಮ-ರುದ್ರಾಕ್ಷ-ಪಾದೋದಕ-ಪ್ರಸಾದ ಮತ್ತು ಮಂತ್ರವೆಂಬ ಅಷ್ಟಾವರಣಗಳ ಆವಶ್ಯಕತೆಯಿದೆ. ಅಲ್ಲದೆ ಸದಾಚಾರ, ಗಣಾಚಾರ, ನಿತ್ಯಾಚಾರ, ಶಿವಾಚಾರ ಮತ್ತು ಲಿಂಗಾಚಾರಗಳೆಂಬ ಪಂಚಾಚಾರಗಳೂ ಇಲ್ಲಿ ಆಚರಿಸಲ್ಪಡುತ್ತವೆ.

ಪ್ರಸಾದಿಸ್ಥಲ ಮತ್ತು ಪ್ರಾಣಲಿಂಗಿ ಸ್ಥಳಗಳಲ್ಲಿ ಶಿವನಿಗೆ ಅರ್ಪಿತವಾಗದಿರುವುದನ್ನು ಸೇವಿಸದಿರುವುದು, ಮತ್ತು ಶಿವಾರ್ಪಿತವಾದುದನ್ನು ಪ್ರಾಣಾಂತಿಕದಲ್ಲಿಯೂ

ಬಿಡದಿರುವುದು ಮುಖ್ಯ. ತ್ಯಾಗಾಂಗದಿಂದ ವಿಷಯಾಸಕ್ತಿಯಳಿದಿರುವುದರಿಂದ ಭೋಗಾಂಗದಲ್ಲಿ ನಿರ್ಮಲ ಮನಸ್ಸಿನಿಂದ ಭೋಗಗಳನ್ನೆಲ್ಲ ಶಿವಪ್ರಸಾದವೆಂದು ಭೋಗಿಸುತ್ತಾನೆ. ಇದರಿಂದ ಅಂಗಗುಣಗಳ ಮತ್ತು ವಾಸನೆಗಳ ಕ್ಷಯವಾಗುತ್ತದೆ. ಅಂಗವೇ ತನ್ನ ಪ್ರಾಣವು, ಸರ್ವಸ್ವವೆಂಬ ಭಾವವು ದೃಢವಾಗುತ್ತದೆ. ಕಡೆಯದಾದ ಯೋಗಾಂಗದಲ್ಲಿ ಸಾಧಕನು ಶರಣ-ಐಕ್ಯ ಸ್ಥಿತಿಯನ್ನು ಸಾಧಿಸುತ್ತಾನೆ. ಇಲ್ಲಿ ಸಾಧಕನು ಈಷಣತ್ರಯಗಳು ಸಂಪೂರ್ಣವಾಗಿ ಅಳಿದು ನಿತ್ಯ ಶಿವ ಧ್ಯಾನದಲ್ಲಿ ರತನಾಗಿರುವನು. ತರುವಾಯ ಶಿವಲಿಂಗದಲ್ಲಿ ಯಾವಾಗಲೂ ಐಕ್ಯವನ್ನನುಭವಿಸುತ್ತಿರುವುದು.

ಹೀಗೆ ಭಕ್ತಾದಿ ಆರು ಸ್ಥಳಗಳಲ್ಲಿರುವ ಜೀವನು ಭಕ್ತಿಯ ಸಹಾಯದಿಂದ ಇಷ್ಟಾದಿ ಲಿಂಗಗಳಲ್ಲಿ ಐಕ್ಯವಾಗಿ ನೀರಿನಲ್ಲಿ ನೀರು ಬೆರೆವಂತೆಯೂ, ಹಾಲಿನಲ್ಲಿ ಹಾಲು ಬೆರೆವಂತೆಯೂ ಐಕ್ಯನಾಗುವನು. ಇದಕ್ಕೇ ಲಿಂಗಾಂಗ ಸಾಮರಸ್ಯವೆಂದು ಹೇಳಲ್ಪಟ್ಟಿದೆ. ಇದನ್ನೇ ಉಪನಿಷತ್ತು

ಯಥಾನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ
ನಾಮರೂಪೇವಿಹಾಯ ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ
ಪರಾತ್ಪರಂ ಪುರುಷಮುಪೈತಿ ದಿವ್ಯಂ (ಮುಂಡಕ ೩. ೨. ೮.)

ಎಂದು ಹೇಳಿದೆ.

ಆಗಮ ಸಂಸ್ಕೃತಿಯಿಂದಾದ ಪರಿಣಾಮ

ಆಗಮ ಸಂಸ್ಕೃತಿಯ ಪರಿಣಾಮ ವೈದಿಕ ಸಂಸ್ಕೃತಿಯ ಮೇಲೆ ಮಿಗಿಲಾಗಿ ಆಗಿದೆ. ಋಗ್ವೇದ ಕಾಲದ ಕೇವಲ ಅಗ್ನಿಪೂಜೆ ಹಾಗೂ ಪಂಚಭೂತಗಳ ವರ್ಣನೆಯಲ್ಲಿದ್ದ ಪರಿಸ್ಥಿತಿಯು ಆಗಮ ಸಂಸ್ಕೃತಿಯ ಪ್ರಭಾವದಿಂದ ಶಿವಭಕ್ತಿ, ಪೂಜೆ, ತಪಸ್ಸುಗಳ ಕಡೆಗೆ ಒಲಿಯಿತು. ಇದರ ಫಲವಾಗಿ ಯಜುರ್ವೇದದಲ್ಲಿ ಶಿವೋಪಾಸನೆಯ ಅನೇಕ ಅವತರಣಗಳೇ ರಚಿತವಾದವು. ಹಾಗೂ ತೈತ್ತಿರೀಯೋಪನಿಷತ್ತಿನಲ್ಲಿ ಲಿಂಗಧಾರಣೆ, ಶಿವಾರಾಧನೆಗಳಿಗೆ ಪ್ರಾಧಾನ್ಯ ಕೊಡಲ್ಪಟ್ಟಿತು. ಹಿಂಸಾಮಯವಾದ ವೈದಿಕ ಯಜ್ಞಗಳ ಪ್ರಾಬಲ್ಯವು ಅಳಿದು ಸಾತ್ವಿಕ ಹಾಗೂ ಅಹಿಂಸಾತ್ಮಕ ಹೋಮ ವಿಧಾನವು ಆಚರಣೆಯಲ್ಲಿ ಬಂದಿತು. ಶಿವನನ್ನು ಆರಾಧನೆ ಮಾಡಬೇಕಾದರೆ ಅಹಿಂಸೆ, ಇಂದ್ರಿಯ ಜಯ, ಕ್ಷಮೆ, ಸರ್ವಭೂತದಯೆ, ಧ್ಯಾನ, ಜ್ಞಾನ, ತಪಸ್ಸು, ಸತ್ಯ ಎಂಬ ಎಂಟು ಹೂಗಳಿಂದ ಆರಾಧಿಸಬೇಕೆಂದು ಆಗಮಗಳಲ್ಲಿ ಉಲ್ಲೇಖಗಳಿವೆ. ಆಗಮ ಧರ್ಮಗಳ ಮೂಲಕ ಹಿಂದೂಧರ್ಮದಲ್ಲಿ ಪಶುಬಲಿ ಮತ್ತು ಪಶುಯಜ್ಞಗಳು ಸಂಪೂರ್ಣವಾಗಿ ನಿಂತು ಹೋದವೆಂದು ಡಾ। ಪಿ. ಟಿ. ಶ್ರೀನಿವಾಸಯ್ಯಂಗಾರ್ಯರು ಹೇಳಿದ್ದಾರೆ. (ಶಿವಾನುಭವ ೧೯೩೧) ಆಗಮಗಳಲ್ಲಿ ಅಲ್ಲಲ್ಲಿ ವರ್ಣಾಶ್ರಮಗಳ ಉಲ್ಲೇಖಗಳಿದ್ದರೂ ಸಹ ಗುಣ-ಕರ್ಮ-ಶೀಲ ಸ್ವಭಾವಗಳು ಯೋಗ್ಯವಾಗಿದ್ದ ಯಾವನಿಗಾದರೂ ಶಿವದೀಕ್ಷೆ ಕೊಡಲು ಆಗಮಧರ್ಮವು ಮುಕ್ತ ದ್ವಾರದಂತಿದೆ. ಶಿವಜ್ಞಾನದಿಂದ ಶೂದ್ರಾದಿಗಳು ಸಹ ಶಿವತ್ವವನ್ನು ಹೊಂದುತ್ತಾರೆ. 'ಶಾಂಭವೀ ದೀಕ್ಷೆ'ಯಾದ ಮೇಲೆ ಅವನ ಹಿಂದಿನ ಜಾತ್ಯಾದಿಗಳು ನಷ್ಟವಾಗುತ್ತವೆ. (ಸೂಕ್ಷ್ಮ ಪ. ೫ ಶ್ಲೋ ೬೩-೬೪) 'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಸ್ತ್ರೀ, ಬಾಲ, ವೃದ್ಧ, ಹೆಳವ, ಕುರುಡ, ವೇಶ್ಯೆ, ಚಂಡಾಲ ಮುಂತಾದವರೆಲ್ಲರೂ ಶಿವದೀಕ್ಷೆ ಹೊಂದಿದ ಮೇಲೆ ಶಿವಸ್ವರೂಪಿಗಳೇ ಆಗುತ್ತಾರೆ;" (ಪಾರ ಪ. ೧. ಶ್ಲೋ ೫೬-೫೯) ದೀಕ್ಷೆ ಹೊಂದಿದವರಲ್ಲಿ ಜಾತಿ-ಲಿಂಗ ಭೇದಗಳಿಗೆಡೆಯಿಲ್ಲ. (ಪಾರ ಪ. ೭ ಶ್ಲೋ ೫೩-೫೫) 'ಲಿಂಗಾರ್ಚನೆಗೆ ಜನನ ಮರಣ ಸೂತಕಗಳಿರುವುದಿಲ್ಲ' (ಪಾರ ಪ. ೧ ಶ್ಲೋ ೫೪-೫೫)

ಹೀಗೆ ಆಗಮ ಧರ್ಮವು ಭಾರತ ಸಂಸ್ಕೃತಿಗೆ ಬೆನ್ನೆಲುಬಿನಂತಿದೆ. ಇದರಿಂದ ವೈದಿಕ ಧರ್ಮದಲ್ಲಿದ್ದ ಲೋಪದೋಷಗಳು ಸರಿಪಡಿಸಲ್ಪಟ್ಟಿವೆ. ಇಂದು ಭಾರತಾದ್ಯಂತವೂ ಆಗಮ ಸಂಸ್ಕೃತಿಯೇ ಪ್ರಬಲವಾಗಿದ್ದು ಅದಕ್ಕೆ ವೈದಿಕ ಸಂಸ್ಕೃತಿಯ ಹೊಗರು ಕೊಡಲ್ಪಟ್ಟಿದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ವೇದಾಗಮಗಳ ಸಮರಸದಿಂದಾದ ಅಮರ ಸಂಸ್ಕೃತಿ ಭಾರತ ಸಂಸ್ಕೃತಿ. ಅದೇ ನಮ್ಮ ಹಿಂದೂ ಸಂಸ್ಕೃತಿ.

ಕನ್ನಡ ನಾಡಿನ ಶಿಲಾ ಶಾಸನಗಳು
ಮತ್ತು
ಕನ್ನಡ ಭಾಷಾ ಸಾಹಿತ್ಯ

ಶ್ರೀ ತಿರುಮಲ ತಾತಾಚಾರ್ಯ ಶರ್ಮ, ಬೆಂಗಳೂರು ನಗರ.

ಇತಿಹಾಸಕ್ಕೆ ಮೂಲಾಧಾರ ಶಾಸನ

ಒಂದು ದೇಶದ ಇತಿಹಾಸವನ್ನು ಬರೆಯಬೇಕು; ಒಂದು ಜನಾಂಗದ ಜೀವನ ಚರಿತ್ರೆಯನ್ನು ರಚಿಸಬೇಕು. ಇದನ್ನು ಪೂರೈಸಬೇಕಾದರೆ ನಾನಾ ಅಂಶಗಳ ಸಂಗ್ರಹ ಕಾರ್ಯವಾಗಬೇಕು. ಯಾರೂ ಉಸಿರೆತ್ತಲಾಗದಂತಹ, ಪೂರ್ಣ ಸತ್ಯಾಂಶಗಳನ್ನೊಳಗೊಂಡಂತಹ ಸಾಧನ ಸಾಮಗ್ರಿಗಳು ಬೇಕು. ಪ್ರಾಚೀನ ವಸ್ತು, ವಾಸ್ತುಶಿಲ್ಪ, ನಾಣ್ಯ, ಸಾಹಿತ್ಯ, ಪುರಾಣ, ದಂತಕಥೆಗಳು ಇವೆಲ್ಲ ನಮಗೆ ಬೇಕಾದ ಅಂಶಗಳನ್ನು ಒದಗಿಸುತ್ತವೆ. ಸಮಕಾಲದ ನೆರೆಹೊರೆ ನಾಡಿನ ಚರಿತ್ರೆಗಳು, ಪರದೇಶ ಪ್ರವಾಸಿಗಳ ಅನುಭವ ಲೇಖನಗಳು, ಅರಮನೆ ಗುರುಮನೆಗಳ ನಿರೂಪಗಳು, ಪಟ್ಟಾವಳಿಗಳು ಇವೂ ಸಹ ನಮಗೆ ಬಹಳ ಮಟ್ಟಿಗೆ ಸಹಾಯ ಮಾಡುತ್ತವೆ. ಆದರೆ ಶಾಸನಗಳು ಇತಿಹಾಸ ನಿರ್ಮಾಣಕ್ಕೆ ಅತ್ಯಮೂಲ್ಯವಾದ ಸಾಧನ. ಅವು ಸಾವಿರಾರು ವರ್ಷಗಳ ಹಿಂದೆ ಬರೆದುವು. ಅಷ್ಟು ಮಾತ್ರವಲ್ಲ; ಅವುಗಳಲ್ಲಿ ಹೇಳಿರುವ ಅಂಶಗಳಿಗೆ ಸಂಬಂಧಪಟ್ಟ ಕಾಲದಲ್ಲೇ ಅವು ರಚಿತವಾದುವು. ಇಲ್ಲವೆ ಆ ಸಂಗತಿಗಳು ನಡೆದ ಹಲವೇ ವರ್ಷಗಳೊಳಗೆ ಬರೆದವು. ಅಂದಮೇಲೆ ಆ ಶಾಸನಗಳಿಗೆ ಎಷ್ಟು ಬೆಲೆಯುಂಟೆಂಬುದನ್ನು ಸುಲಭವಾಗಿ ಊಹಿಸಬಹುದಾಗಿದೆ.

ಶಿಲಾಶಾಸನಗಳೆಂದೂ, ತಾಮ್ರಶಾಸನಗಳೆಂದೂ ಶಾಸನಗಳಲ್ಲಿ ಎರಡು ಬಗೆ. ಮಡಕೆ ಕುಡಿಕೆಗಳ ಮೇಲೆ ಬರೆದ ಶಾಸನಗಳ ಉದಾಹರಣೆಗಳೂ ಹಲವಿವೆ. ವಸ್ತು ವಾಹನಗಳ ಮೇಲೆ, ವಿಗ್ರಹಗಳ ಪಾದಪೀಠಗಳ ಮೇಲೆ ಬರೆದ ಹಲವು ಶಾಸನಗಳೂ ಉಂಟು. ಆದರೆ ಹುಟ್ಟು ಬಂಡೆಗಳ ಮೇಲೂ, ನಟ್ಟ ಕಲ್ಲು ಕಂಬಗಳ ಮೇಲೂ, ತಾಮ್ರದ ರೇಕುಗಳ ಮೇಲೂ ಕೆತ್ತಿದ ಶಾಸನಗಳೇ ಹೆಚ್ಚು. ಚಿನ್ನದ ಮತ್ತು ಬೆಳ್ಳಿಯ ರೇಕುಗಳ ಮೇಲೂ ಕೆತ್ತಿದ ಶಾಸನಗಳೂ ಒಂದೆರಡಿವೆ.

ಭರತ ಖಂಡದಲ್ಲಿ ಸಾವಿರಾರಲ್ಲ ಲಕ್ಷಗಟ್ಟಲೆ ಶಾಸನಗಳು ಸಿಗುತ್ತವೆ. ಹೋಲಿಸಿ ನೋಡಿದಾಗ ಸಂಖ್ಯಾ ಪ್ರಮಾಣದಲ್ಲಿ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಶಾಸನ ಸಂಪತ್ತು ಹೆಚ್ಚು. ಆದರೆ ಪ್ರಾಚೀನತೆ ಮತ್ತು ವಿಷಯದ ಬೆಲೆಯ ದೃಷ್ಟಿಯಿಂದ ಉತ್ತರ ಭಾರತದ ಶಾಸನಗಳಿಗೇ ಅಗ್ರಸ್ಥಾನ.

ಹರಪಾ—ಮಹೆಂಜೊದಾರೋ ಚಿತ್ರಲಿಪಿ


ಹರಪಾ, ಮಹೆಂಜೊದಾರೋ ಇವೆರಡು ಸಾವಿರಾರು ವರ್ಷಗಳಿಂದ ಭೂಮಿಯೊಳಗೆ ಹೂತುಕೂತಿದ್ದ ನಗರಗಳು. ಇತಿಹಾಸ ಸಂಶೋಧನೆಯ ಜಗತ್ತಿನಲ್ಲೆಲ್ಲ ಇವೀಗ ಹೆಸರು ಪಡೆದಿವೆ. ಮಹೆಂಜೊದಾರೋ ಅವಶೇಷಗಳ ಪ್ರಾಚೀನ ನಗರವು ಲಾರ್ಖಾನಾ ಜಿಲ್ಲೆಯಲ್ಲಿದೆ; ಲಾರ್ಖಾನಾ ಸಿಂಧು ದೇಶದಲ್ಲಿದೆ. ೧೮೫೩ ಸುಮಾರಿನಲ್ಲಿ ಸಂಶೋಧಕರು ಈ ಹಳೇ ನಿವೇಶನವನ್ನು ಪರೀಕ್ಷೆ ಮಾಡಿದರು. ಅನಂತರ ಎರಡು ಮೂರು ಸಾರಿ ಶೋಧನಕಾರ್ಯವಾಯಿತು. ಆದರೆ ೧೯೨೨ರಲ್ಲಿ ಈ ಕ್ಷೇತ್ರಕ್ಕೊಂದು ದೆಶೆ ಬಂತು. ಡಾ। ಬಾನರ್ಜಿಯವರು ಮಹಾಸಾಹಸ ತೋರಿಸಿ ಶೋಧನೆಗಾರಂಭಿಸಿದರು. ಒಂದು ಪ್ರಾಚೀನ ನಗರವನ್ನೇ ಹೊರಕ್ಕೆ ತೆಗೆದರು. ಬುದ್ಧವಿಹಾರವೊಂದು ಕಣ್ಣಿಗೆ ಬಿತ್ತು; ಅಜಂತದಲ್ಲಿರುವಂತಹ ವರ್ಣ ಚಿತ್ರಗಳ ಅವಶೇಷಗಳು, ಬ್ರಾಹ್ಮಿ, ಖರೋಷ್ಠಿ ಲಿಪಿಯ ಶಾಶನಗಳು, ಮುದ್ರಿಕೆಗಳು, ಹಳೆ ಕಾಲದ ಗೋರಿಗಳು, ಮಡಕೆಗಳು, ಅಸ್ಥಿಗಳು, ದಂತ ಕಲ್ಲುಮಣ್ಣುಗಳ ಚಿತ್ರಾಂಕಿತ ಮುದ್ರಿಕೆಗಳು ಇವೆಲ್ಲ ಸಿಕ್ಕಿದುವು. ಚಿತ್ರ ಲಿಪಿಗಳಲ್ಲಿ ನಾನಾ ಮೃಗಗಳೂ ಕಾಣಬಂದುವು. ಈ ಚಿತ

ಲಿಪಿಯನ್ನು ಹೋಲುವ ಮತ್ತೆ ಯಾವ ಲಿಪಿಯೂ ಭರತಖಂಡದಲ್ಲಿ ಸಿಕ್ಕಿಲ್ಲ. ಹರಪಾ ಎಂಬ ಸ್ಥಳದಲ್ಲೂ ಇದೇ ಬಗೆಯ ಅವಶೇಷಗಳು ಸಿಕ್ಕಿದುವು. ದಕ್ಷಿಣ ಪಂಜಾಬಿನಿಂದ ಹಿಡಿದು ಸಿಂಧು ನದಿಯ ಬಲ ದಡದ ಉದ್ದಕ್ಕೂ ಸಿಂಧಿನ ವರೆಗೂ ಈ ಚಿತ್ರಲಿಪಿ ಮತ್ತು ಅವಶೇಷಗಳು ಹರಡಿವೆ. ಭೂಶೋಧನೆ ಮಾಡುತ್ತ ಹೋದಂತೆಲ್ಲ ಹೊರಕೆಗಳ ಮೇಲೆ ಹೊರಕೆಗಳು, ನಗರಗಳ ಮೇಲೆ ನಗರಗಳು ಹೂತು ಕೂತಿರುವುದು ಕಂಡು ಬಂತು. ಪ್ರೇತ ಸಂಸ್ಕಾರಗಳ ಅವಶೇಷಗಳ ಪರೀಕ್ಷೆಯ ಫಲಿತಾಂಶವಾಗಿ ಬಹಳ ಹಿಂದಿನ ಕಾಲದ ಜನರ ಆಚಾರ ವಿಚಾರ, ಸಂಪ್ರದಾಯ ಸಂಸ್ಕಾರಗಳ ಅರಿವುಂಟಾಯಿತು. ವೇದಗಳ ಕಾಲದ ಪ್ರೇತ ಸಂಸ್ಕಾರ ವಿಧಿ ವಿಧಾನಗಳ ಸೂಚನೆಯ ಸಾಹಿತ್ಯವೆಲ್ಲ ಸಿಕ್ಕಿತು.

ಸರ್ ಜಾನ್ ಮಾರ್ಷಲ್, ಸಿ. ಜೆ. ಗ್ಯಾಡ್, ಸಿಡ್ನಿಸ್ಮಿತ್, ಪ್ರೊಫೆಸರ್ ಎ. ಎಚ್. ಸೈಸ್ ಡಾ॥ ಅರ್ನೆಸ್ಟ್ ಮೆಕೆ ಮೊದಲಾದ ಶೋಧನ ಶಾಸ್ತ್ರ ನಿಪುಣರು ಈ ಚಿತ್ರ ಲಿಪಿಗಳನ್ನು ಜಗತ್ತಿನ ಪ್ರಾಚೀನತಮ ಲಿಪಿಗಳೊಂದಿಗೆ ಹೋಲಿಸಿ ನೋಡಿದರು. ಸಿಂಧು ಕಂದರಗಳ ಅವಶೇಷಗಳನ್ನು ದಕ್ಷಿಣ ಮೆಸೊಪೊಟೇಮಿಯಾ (ಸುಮೇರುವೆಂದೂ ಇದಕ್ಕೆ ಹೆಸರುಂಟು) ಅವಶೇಷಗಳೊಂದಿಗೆ ಹೋಲಿಸಿ ನೋಡಿದರು. ಎಲ್ಲ ನಿಪುಣರೂ ಒಟ್ಟಿನಲ್ಲಿ ಸಿಂಧು ನಾಗರಿಕತೆಗೂ ಸುಮೇರುನಾಗರಿಕತೆಗೂ ನಿಕಟವಾದ ಸಂಬಂಧ ಉಂಟೆಂಬ ನಿಶ್ಚಯಕ್ಕೆ ಬಂದರು. ಆ ನಾಗರಿಕತೆಯ ಕಾಲವಾದರೂ ಕ್ರಿಸ್ತಪೂರ್ವ ೨೮೦೦ ವರ್ಷಗಳಾದರೂ ಆಗಿರಬೇಕೆಂದರು. ಮತ್ತಷ್ಟು ಕಾಲ ಈ ಅವಶೇಷಗಳ ವಿಮರ್ಶೆ ನಡೆಸಿ ಸಿಂಧು ಸುಮೇರು ಜನರ ನಾಗರಿಕತೆ ಕ್ರಿಸ್ತಪೂರ್ವ ೩೫೦೦ ವರ್ಷಗಳಿಗೆ ಈಚಿನದಲ್ಲವೆಂದು ಅಭಿಪ್ರಾಯಪಟ್ಟರು. ಈ ಸಿಂಧು ಸುಮೇರು ಅಥವಾ ದಾಸ-ದಸ್ಯು ಅಥವಾ ಮೂಲ ದ್ರಾವಿಡ (ಹೀಗೆಂದು ಹಲವು ವಿದ್ವಾಂಸ ಸಂಶೋಧಕರ ಅಭಿಪ್ರಾಯ) ನಾಗರಿಕತೆಯು ಆರೇಳು ಸಾವಿರ ವರ್ಷಗಳಷ್ಟು ಪ್ರಾಚೀನವಾದುದೆಂದು ಸಿದ್ಧಾಂತವಾಯಿತು. ಈ ಚಿತ್ರಲಿಪಿಯೇ ಭಾರತದ ಮಹಾ ಪ್ರಾಚೀನ ಲಿಪಿ. ಈ ಲಿಪಿ ಮುದ್ರಿಕೆಗಳನ್ನೂ ಪೂರ್ಣವಾಗಿ, ಸಮರ್ಪಕವಾಗಿ ಇನ್ನು ಯಾರೂ ಓದಿಲ್ಲ. ಓದಿದ ಹಲವು ನಿಪುಣರಲ್ಲಾದರೂ ಏಕಾಭಿಪ್ರಾಯವಿಲ್ಲ.

ಬ್ರಾಹ್ಮಿ—ಖರೋಷ್ಠಿ

ಚಿತ್ರ ಲಿಪಿಗಳನ್ನು ಬಿಟ್ಟರೆ ಬ್ರಾಹ್ಮಿ, ಖರೋಷ್ಠಿ ಇವೆರಡೇ ಭರತ ಖಂಡದ ಪ್ರಾಚೀನ ಲಿಪಿಗಳು, ಖರೋಷ್ಠಿ ಅಪಸವ್ಯ ಲಿಪಿ; ಈ ಲಿಪಿಯ ಶಾಸನಗಳು ತೀರ ವಿರಳ. ಬ್ರಾಹ್ಮಿ ಶಾಸನಗಳೇ ವಿಶೇಷ. ಬುದ್ಧನ ಅನಂತರ. ಅಶೋಕನ ಹಿಂದೆ—ಈ ಕಾಲದ ಶಾಸನಗಳು ಇಲ್ಲವೇ ಇಲ್ಲವೆನ್ನಬಹುದು.




ಈ (ಚಿತ್ರ) ಬ್ರಾಹ್ಮೀ ಲಿಪಿಯೇ ಭಾರತದ ಎಲ್ಲ ಲಿಪಿಗಳಿಗೂ ಮೂಲ. ಈ ಮಾತನ್ನು ಕೇಳಿ ಅನೇಕರಿಗೆ ಆಶ್ಚರ್ಯವೆನಿಸಬಹುದು. ಆದರೆ ಭರತ ಖಂಡದ (ಉತ್ತರ ಮತ್ತು ದಕ್ಷಿಣ ಭಾರತ) ನಾನಾ ಲಿಪಿಗಳ ಹುಟ್ಟು ಬೆಳವಣಿಗೆಯನ್ನು ಕ್ರಮವಾಗಿ ಪರಿಶೀಲಿಸಿದಾಗ ಇದು ನಿಜವೆಂದು ಸ್ಪಷ್ಟವಾಗುತ್ತದೆ. ಉತ್ತರ ಭಾರತದ ನಾನಾ ಪ್ರಾಂತ್ಯಗಳ ಲಿಪಿಗಳೂ, ದಕ್ಷಿಣ ಭಾರತದ ದ್ರಾವಿಡ ಲಿಪಿಗಳೂ ಎಲ್ಲ ಬ್ರಾಹ್ಮಿ ಲಿಪಿಯಿಂದ ಮೊದಲಾಗಿ ಕ್ರಮವಾಗಿ ಬೆಳೆಯುತ್ತ ಇಂದಿನ ರೂಪಕ್ಕೆ ಬಂದಿವೆ.

ಪ್ರಾಕೃತ—ಸಂಸ್ಕೃತ—ಕನ್ನಡ ಶಾಸನಗಳು

ಕನ್ನಡ ನಾಡಿನ ಶಾಸನಗಳನ್ನು ಭಾಷೆಯ ದೃಷ್ಟಿಯಿಂದ (೧) ಪ್ರಾಕೃತ ಶಾಸನಗಳು (೨) ಸಂಸ್ಕೃತ ಶಾಸನಗಳು (೩) ಕನ್ನಡ ಶಾಸನಗಳು ಹೀಗೆ ಮೂರು ಭಾಗವಾಗಿ ಮಾಡಬಹುದು. ಸಂಸ್ಕೃತ ಕನ್ನಡ ಎರಡು ಭಾಷೆಗಳಲ್ಲೂ ಬರೆದ ಶಾಸನಗಳೂ ಇವೆ. ಅಶೋಕನ ಶಾಸನಗಳು, ಶಾತವಾಹನರ ಮತ್ತು ಕದಂಬರ ಕಾಲದ ಹಲವು ಶಾಸನಗಳು ಇವೆಲ್ಲ ಪ್ರಾಕೃತ ಭಾಷೆಯಲ್ಲಿವೆ. ಕದಂಬ, ರಾಷ್ಟ್ರಕೂಟ, ಗಂಗ, ಬಾದಾಮಿ ಮತ್ತು ಕಲ್ಯಾಣಿ ಚಾಳುಕ್ಯ, ಆಳುಪ, ನೊಳಂಬ,

ಯಾದವ, ಹೊಯ್ಸಳ, ವಿಜಯನಗರ ರಾಜರ ಶಾಸನಗಳು ಅವರ ಅನಂತರದ ಪಾಳೆಯಗಾರರ ಶಾಸನಗಳೂ ಇವೆಲ್ಲ ಸಂಸ್ಕೃತದಲ್ಲೂ, ಸಂಸ್ಕೃತ ಕನ್ನಡದಲ್ಲೂ, ಶುದ್ಧ ಕನ್ನಡ ಭಾಷೆಯಲ್ಲೂ ಇವೆ.

ಕನ್ನಡ ಲಿಪಿ ವಿಕಾಸವನ್ನು ಈ ಚಿತ್ರದಲ್ಲಿ ನೋಡಬಹುದು.



ಮೊದಲಿನ ಗುಂಪಿನ ಶಾಸನಗಳೆಲ್ಲ ಬ್ರಾಹ್ಮಿ ಲಿಪಿಯಲ್ಲಿವೆ. ಉತ್ತರ ದೇಶದ ಬ್ರಾಹ್ಮಿ ಲಿಪಿಗೂ ದಕ್ಷಿಣ ದೇಶದ ಬ್ರಾಹ್ಮಿ ಲಿಪಿಗೂ ಕೊಂಚ ವ್ಯತ್ಯಾಸವಿದೆ. ಈ ಕಾರಣದಿಂದ ಇದನ್ನು 'ತೆಂಕಣ ಬ್ರಾಹ್ಮಿ' ಎಂದು ಕರೆಯುವುದುಂಟು. ಎರಡು ಮೂರನೆಯ ಗುಂಪಿನ ಶಾಸನಗಳೆಲ್ಲ ಈ 'ತೆಂಕಣ ಬ್ರಾಹ್ಮಿ'ಯಿಂದ ನಾಲ್ಕನೆಯ ಶತಮಾನದಿಂದ ಸುಮಾರು ಹತ್ತು ಹನ್ನೊಂದು ಶತಮಾನಗಳ ಕಾಲ ಕ್ರಮವಾಗಿ ಲಿಪಿಯ ಸಾಧನಗಳು; ಲಿಪಿಕರರ ಶಿಕ್ಷಣ, ಸಂಸ್ಕಾರ ಮತ್ತು ಕಲಾಭಿರುಚಿ ಹೆಚ್ಚಿದಂತೆಲ್ಲ ಬೆಳೆಯುತ್ತ ಬಂದಂತೆಲ್ಲ ರೂಪುವೆತ್ತ ಕನ್ನಡ (ಕರ್ಣಾಟಕ ಎಂಬುದು ವ್ಯಾಪಕವಾಗಿದೆ. ಏಕೆಂದರೆ ೧೪ನೆಯ ಶತಮಾನದ ವರೆಗೆ ಕನ್ನಡ ತೆಲುಗು ಲಿಪಿಗಳೆಂಬ ಭೇದವೇ ಇಲ್ಲ) ಲಿಪಿಯಲ್ಲಿ ಬರೆಯಲ್ಪಟ್ಟಿವೆ.

ಕನ್ನಡ ನಾಡಿನಲ್ಲಿ ಸಿಗುವ ಶಾಸನಗಳಿಗೆ ಲೆಕ್ಕವೇ ಇಲ್ಲ. ಈಗ ಹೊರ ಬಿದ್ದಿರುವುವಲ್ಲದೆ ಇನ್ನೂ ಎಷ್ಟೋ ಶಾಸನಗಳು ಎಲ್ಲೆಲ್ಲೋ ಹೂತು ಬಿದ್ದಿವೆ. ಹಲವು ಶಾಸನಗಳನ್ನಾದರೂ ಕಂಡುಹಿಡಿದು, ಅವುಗಳನ್ನು ಓದಿ ಪ್ರಕಟಿಸಿದ ವಿದ್ವಾಂಸ-ಸಂಶೋಧಕರಿಗೆ ನಾವೆಷ್ಟು ಕೃತಜ್ಞರಾಗಿದ್ದರೂ ಸಾಲದು. ಈ ಕ್ಷೇತ್ರದಲ್ಲಿ ಕೆಲಸ ಮಾಡಿ ನಾಡಿನ ಕೆಣ್ತೆರೆಯಿಸಿದ ಮೆಕಂಜಿ, ಲೂಇಕ್ರಿಸ್, ಜಾನ್‌ಫೆಯಿತ್ ಫುಲ್ ಫ್ಲೀಟ್, ಡಾ॥ ಎಲ್. ಡಿ. ಬಾರ್ನೆಟ್, ರಾವ್ ಬಹದೂರ್ ನರಸಿಂಹಾಚಾರ್, ರಾವ್ ಬಹದೂರ್ ಹೊಸ ಕೋಟೆ ಕೃಷ್ಣ ಶಾಸ್ತ್ರಿ, ಅರ್ಥಶಾಸ್ತ್ರ ವಿಶಾರದ ಆರ್. ಶಾಮ ಶಾಸ್ತ್ರಿ, ಡಾ॥ ಎಂ. ಎಚ್. ಕೃಷ್ಣ ಮೊದಲಾದವರ ಹೆಸರುಗಳನ್ನು ನಾವೆಂದಿಗೂ ಮರೆಯಲಾಗದು. ಲಾರ್ಡ್ ಕರ್ಜನ್‌ರವರ ಉಪಕಾರವನ್ನೂ ಮರೆಯಲು ಸಾಧ್ಯವಿಲ್ಲ. ಅವರೇ 'ಆರ್ಕಿಯಲಾಜಿಕಲ್' ಶಾಖೆಯನ್ನೂ ಕೇಂದ್ರದಲ್ಲೂ ಪ್ರಾಂತ್ಯಗಳಲ್ಲೂ ಹಲವು ಸಂಸ್ಥಾನಗಳಲ್ಲೂ ಸ್ಥಾಪಿಸುವುದಕ್ಕೆ ಕಾರಣಕರ್ತರು. ಸುವ್ಯವಸ್ಥಿತ ರೀತಿಯಿಂದ, ಶಾಸ್ತ್ರೀಯವಾಗಿ ಪ್ರಾಚೀನ ವಾಸ್ತು, ಶಿಲ್ಪ, ನಾಣ್ಯ, ಶಾಸನ, ತಾಡೆವಾಲೆ ಗ್ರಂಥಗಳು ಇವೇ ಮೊದಲಾದವುಗಳ ಸಂಗ್ರಹ, ಸಂರಕ್ಷಣೆ ಮತ್ತು ಅಧ್ಯಯನ ಕಾರ್ಯ ನಡೆಯಲು ಅವರಿಂದ ಸಾಧ್ಯವಾಯಿತು. ಅಂದಿನಿಂದ ದೇಶದ ಪ್ರಾಚೀನೇತಿಹಾಸದ ಸತ್ಯಾಂಶಗಳನ್ನು ತಿಳಿಯಲು ಅನುಕೂಲವಾಯಿತು. ಇದರ ಫಲವಾಗಿ ಮುಂಬಯಿ, ಮದರಾಸು ಪ್ರಾಂತ್ಯಗಳ ಕನ್ನಡ ಭಾಗಗಳ, ಕೊಡಗಿನ, ಮೈಸೂರಿನ, ಹೈದರಾಬಾದಿನ ಶಾಸನಗಳು ಪ್ರಕಟವಾಗಲು ಮೊದ

ಲಾಯಿತು. ಪ್ರಾಂತ್ಯಗಳ ಮತ್ತು ಸಂಸ್ಥಾನಗಳ 'ಆರ್ಕಿಯಲಾಜಿಕಲ್' ಶಾಖೆಗಳ ಅಧಿಕಾರಿಗಳು ಶಾಸನಗಳನ್ನು ಪ್ರಕಟಿಸುತ್ತ ಬಂದರು. ಈ ಶಾಸನ ಪಾಠಗಳನ್ನು ವಿದ್ವಾಂಸರು ಅಧ್ಯಯನ ಮಾಡಲಾರಂಭಿಸಿದರು. ಇಂಡಿಯಾ ಸರಕಾರದವರು ಮದರಾಸು ಮುಂಬಯಿ ಪ್ರಾಂತ್ಯಗಳ ಕನ್ನಡ ಶಾಸನಗಳನ್ನು ಪ್ರಕಟಿಸುತ್ತಿದ್ದಾರೆ. ಮೈಸೂರು ಸಂಸ್ಥಾನದ 'ಆರ್ಕಿಯಲಾಜಿಕಲ್' ಶಾಖಾ ವರದಿಗಳಂತೂ ಜಗದ್ವಿಖ್ಯಾತವೆನಿಸಿವೆ. ಪ್ರತಿ ವರ್ಷವೂ ಆ ಶಾಖೆಯವರು ಹೊಸ ಹೊಸ ಶಾಸನಗಳನ್ನು ಪ್ರಕಟಿಸುತ್ತಿದ್ದಾರೆ.

ಪ್ರಾಚೀನ ಕನ್ನಡ ಶಾಸನಗಳು

ಮೈಸೂರು ಸಂಸ್ಥಾನದ ಹಾಸನ ಜಿಲ್ಲೆಯ ಬೇಲೂರು ಬಳಿ ಹಲ್ಮಿಡಿಯೆಂಬ ಗ್ರಾಮವೊಂದಿದೆ. ಅದರ ಬಳಿ ೧೯೩೧ರಲ್ಲಿ ಮೋಟು ಕಲ್ಲುಕಂಬವೊಂದು ಸಿಕ್ಕಿತು. ನಾಲ್ಕು ಅಡಿ ಉದ್ದ, ಒಂದಡಿ ಅಗಲ, ಮುಕ್ಕಾಲಡಿ ದಪ್ಪವಿದೆ ಆ ಕಂಬ. ಆ ಕಂಬವೀಗ ಮೈಸೂರು 'ಆರ್ಕಿಯಲಾಜಿಕಲ್' ವಸ್ತು ಸಂಗ್ರಹಾಲಯದಲ್ಲಿದೆ. ಈ ಕಂಬದಲ್ಲಿ ಶಾಸನವೊಂದಿದೆ. ಕಂಬದ ಮೇಲ್ಭಾಗ ಅರ್ಧಚಂದ್ರಾಕೃತಿಯಲ್ಲಿದ್ದು ಅದರ ಮಧ್ಯೆ ಕೆತ್ತಿದ ಸುದರ್ಶನ ಚಕ್ರವಿದೆ. ಅರ್ಧಚಂದ್ರಾಕೃತಿಯ ಗೆರೆಯ ಉದ್ದಕ್ಕೂ ಶಾಸನ ಪಾದವಿದೆ. ಅದು ಧ್ಯಾನ ಅಥವಾ ಮಂಗಳ ಶ್ಲೋಕ.

"ಜಯತಿ ಪರಿಷ್ವಜ್ಗ ಶ್ಯಾರ್ಙ್ಗ [ವ್ಯಾಸತಿ] ರಚ್ಯುತಃ
ದಾನವಾತ್ಷ್ಣೋಯರ್ು ನಾನ್ತಾಗ್ನಿಃ [ಶಿಷ್ಟಾನಾನ್ತು]
ಸುದರ್ಶನಃ"

ಉಳಿದ ಹದಿನಾಲ್ಕು ಪಾದಗಳು ಸುದರ್ಶನ ಚಕ್ರದ ಕೆಳಗೆ ಕಂಡುಬರುತ್ತದೆ. ಶಾಸನ ಪಾಠ ಹೀಗಿದೆ.

೨. ನಮಃ ಶ್ರೀಮತ್ಕದಂಬಪನ್ತ್ಯಾಗ ಸಂಪನ್ನ
ಸ್ಕಲ ಭೋರ [ನಾ] ಅರಿ ಕ

೩. ಕುಸ್ಥ ಭಟ್ಟೋರ ನಾಳೆ ನರಿದಾವಿಳೆ
ನಾಡುಳ್ ಮೃಗೇಶನಾ

೪. ಗೇನ್ದ್ರಾಭಿಳಭ್ರ್ಟಹರಪ್ಪೋರ್
ಶ್ರೀ ಮೃಗೇಶ ನಾಗಾಹ್ವಯ

೫. ರಿರ್ವ್ವರಾ ಬಟರಿ ಕುಲಾಲಮಲ ವ್ಯೋಮ
ತಾರಾಧಿನಾಥನ್ನಳಪ

೬. ಗಣಪಶುಪತಿ ಮಾ ದಕ್ಷಿಣಪಥ
ಬಹು ಶತಹವ ನಾ

೭. ಹವದು[ಳ್] ಪಶುಪ್ರದಾನ ಶೌರ್ಯೋದ್ಯ
ದ್ಯಮ ಭರಿತೋ[ನ್ದಾನ] ಪ

೮. ಶುಪತಿಯೆನ್ದು ಪೊಗಳೆ ಪೆೊಟ್ಟಣ
ಪಶುಪತಿ

೯. ನಾಮಧೇಯ ನಾ ಸರಕ್ಕೆಲ್ಲ ಭಟರಿಯಾ
ಪ್ರೇಮಾಲಯ

೧೦. ಸುತನ್ಗೆ ಸೇನ್ದ್ರಕ ಬಣೋಭಯ ದೇಶದಾ
ವೀರಾ ಪುರುಷ ಸಮಕ್ಷ

೧೧ ದೇಕೇಕಯ ಪಲ್ಲವರಂ ಕಾದೆಳಿದು
ಪೆತ್ತ ಜಯನಾ ವಿಜ

೧೨. ಅರಸನ್ಗೆ ಬಾಳ್ಗಳ್ಚ ಪಲ್ಮಡಿಉಂ
ಮೂಳುವಳ್ಳಿಉಂ ಕೊ

೧೩. ಟ್ಟಾರ್ ಬಟಾರಿಕುಲದೊನಳುಕದಮ್ಬ
ನ್ಕಳ್ದೋನ್ ಮಹಾಪಾತಕನ್

೧೪. ಇರ್ವ್ವರುಂ ಸಳ್ಬಙ್ಗದರ್ ವಿಜಾರಸರುಂ
ಪಲ್ಮಡಿಗೆ ಕುರು

೧೫. ವ್ಬಿಡಿ ವಿಟ್ಟಾರ್ ಅದಾನಳಿ ಪೊನ್ಗೆ
ಮಹಾ ಪಾತಕನ್ ಸ್ವಸ್ತಿ


ಕಂಬದ ಬಲ ಮುಖದಲ್ಲೊಂದು ಸಾಲಿದೆ.

೧೬. ಭಟ್ಟರ್ಗ್ಗೀಗಳ್ದೆ ಒಡ್ಡಲಿ ಆ
ಪತ್ತೊನ್ದಿ ವಿಟ್ಟಾರಕರ

ಇದು ವರೆಗೆ ಸಿಕ್ಕಿರುವ ಶಾಸನಗಳಲ್ಲೆಲ್ಲ ಇದೇ ಪ್ರಾಚೀನವಾದುದು. (ಪುಟ ೩೧೧.) ಹೀಗೆ ಹೇಳಲು ಘನವಾದ ಕಾರಣಗಳು ಮೂರಿವೆ.

(೧) ಕಲಭೋರನಾ, ಇರ್ವ್ವರಾ, ದೇಶದಾ, ಭಟಾರಿಯಾ, ನಾಡುಳ್, ಆಹವದುಳ್, ಅಪ್ಪೋರ್, ಕೊಟ್ಟಾರ್, ವಿಟ್ಟಾರ್, ಭರಿತೋನ್ ಕಳ್ದೋನ್—ಎಂಬ ರೂಪಗಳು ಬಿಂದುವಿಗೆ ಬದಲಾಗಿ ನಾಗೇನ್ದ್ರ, ಯೆನ್ದು, ಸುತನ್ಗೆ, ಸೇನ್ದ್ರಕ, ಕದಮ್ಬ, ಅಳಿಮೊಗ್ಗೆ ಎಂಬದಾಗಿ ಬರೆಯುವುದು. ಪಲ್ಮಡಿಉಂ, ಮೂಳುವಳ್ಳಿಉಂ, ಎಂಬ ರೂಪಗಳೂ, 'ಬ'ಕ್ಕೆ ಬದಲಾಗಿ 'ವ' (ವಿಟ್ಟಾರ್) ಬಳಸುವುದೂ ಈ ಭಾಷಾಲಕ್ಷಣಗಳೆಲ್ಲ ಶಾಸನವು ಸುಮಾರು ೫ನೆಯ ಶತಮಾನಕ್ಕೆ ಸಂಬಂಧಪಟ್ಟದೆಂದು ಸೂಚಿಸುತ್ತವೆ.

(೨) ಕನ್ನಡ ಲಿಪಿಯ ಹುಟ್ಟು ಬೆಳವಣಿಗೆಯ ದೃಷ್ಟಿಯಿಂದ ಪರೀಕ್ಷಿಸಿದಾಗಲೂ ಶಾಸನವು ಬಹಳ ಹಿಂದಿನ ಕಾಲದ್ದೆಂದೇ ಹೇಳಬೇಕಾಗುತ್ತದೆ. ಮೈಸೂರು 'ಆರ್ಕಿಯಲಾಜಿಕಲ್' ಶಾಖಾಧಿಕಾರಿಗಳು



ಹಲ್ಮಿಡಿ ಶಾಸನ

"The writing of the inscription at least in the first fifteen lines is in a very late form of the cave alp—habet which has not yet fully developed into the early Kannada of the Chalukyan and Ganga inscriptions". ಎಂಬದಾಗಿ ಹೇಳಿದ್ದಾರೆ. ಶಾಸನದ ಮೊದಲು ಹದಿನೈದು ಸಾಲುಗಳಲ್ಲೂ ಗುಹಾಲಿಪಿಯ ಅರ್ವಾಚೀನ ಸ್ವರೂಪವೇ ಕಂಡುಬರುವುದೆಂದೂ ಚಾಳುಕ್ಯ ಮತ್ತು ಗಂಗರಸರ ಕಾಲದ ಆರಂಭ ದೆಸೆಯ ಲಿಪಿಗಳಂತೆ ಈ ಶಾಸನಲಿಪಿಯು ವೃದ್ಧಿಹೊಂದಿಲ್ಲವೆಂದೂ ಅಭಿಪ್ರಾಯ ಪಟ್ಟಿದ್ದಾರೆ.

'ತೆಂಕಣ ಬ್ರಾಹ್ಮಿ' ಲಿಪಿಯಿಂದ ಶಾತವಾಹನರು, ಶಕರು, ವಲ್ಲಭರು, ಕದಂಬರು, ಚಾಳುಕ್ಯರು, ರಾಷ್ಟ್ರಕೂಟರು, ಚೋಳರು, ಪಲ್ಲವರು, ಗಂಗರು ಮೊದಲಾದವರ ಕಾಲದಲ್ಲಿ ಹುಟ್ಟಿದ ಶಾಸನಗಳು ಬೆಳೆಯುತ್ತ ಬಂದವು. ಇದಕ್ಕೆ 'ಗುಹಾಲಿಪಿ'ಯೆಂದೂ ಹೆಸರು.

(೩) ಈ ಶಾಸನದಲ್ಲಿ 'ಶ್ರೀಮತ್ಕದಂಬಪನ್ತ್ಯಾಗ ಸಂಪನ್ನಸ್ಕಲ ಭೋರನಾ ಅರಿ ಕಕುಸ್ಥಭ ಟೋರನಾಳೆ' ಎಂದು ಹೇಳಿದೆ. ಈ ಕದಂಬ ಕಕುಸ್ಥವರ್ಮನ ಕಾಲ ಕ್ರಿ. ಶ. ೨೮೦ ಇರಬಹುದೆಂದು ಡಾ॥ ಶಾಮಶಾಸ್ತ್ರಿಗಳೂ, ನಾಲ್ಕನೆಯ ಶತಮಾನಾಂತ್ಯವಿರಬಹುದೆಂದು ಲೂಇ ಕ್ಮಿಸರೂ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಡಾ॥ ಎಂ. ಎಚ್. ಕೃಷ್ಣರವರು ಈ ಶಾಸನದ ಕಾಲ ಕುರಿತು ೧೯೩೬ನೆಯ ವಾರ್ಷಿಕ ವರದಿಯಲ್ಲಿ ಈ ರೀತಿಯಾಗಿ ಹೇಳಿದ್ದಾರೆ:

"In fact the appearance of Kannada so early as 450 A.D. gives this record a unique importance, since this is the earliest authentic lithic record in that language. As some scholars have doubted whether the language of the "Oxyhynchus Papyrus" is Kannada at all and the authenticity of the Tagare plates and other Ganga records is questioned, it may as well be claimed that the Halmidi inscription is the earliest undisplayed document till now in Kannada; and it is more than a centuary earlier than the Badami records of Kirtivarmah and Mangalesa which held that position until very recently."


ಅವರ ಅಭಿಪ್ರಾಯದಂತೆ ಹಲ್ಮಿಡಿ ಶಾಸನದ ಕಾಲ ಕ್ರಿ. ಶ. ಸುಮಾರು ೪೫೦. ಇದುವರೆಗೆ ಬಾದಾಮಿಯ ಕೀರ್ತಿವರ್ಮ, ಮಂಗಳೇಶನ ಕಾಲದ ಶಾಸನಗಳೇ (ಹಲ್ಮಿಡಿ ಶಾಸನ ಸಿಗುವ ವರೆಗೆ) ಕನ್ನಡ ಭಾಷೆಯ ಪ್ರಾಚೀನ ಶಾಸನಗಳೆನಿಸಿದ್ದುವು. ಬಾದಾಮಿಯ ಮಂಗಳೇಶನ ಶಾಸನವನ್ನು ಇಲ್ಲಿ ಕೊಡಲಾಗಿದೆ.

(೧) ಸ್ವಸ್ತಿ ಶ್ರೀಮತ್ ಪ್ರಿಥಿವೀ ವಲ್ಲಭ ಮಂಗಲೀಸನಾ

(೨) ಕಲ್ಮನೆಗೆ ಇತ್ತೊದು ಲಂಜಿಗೇಸರಂ
ದೇವಕ್ಕೆರ್ ಪೂನಿರುವ

(೩) ಮೂಲಕಾರನ್ಗೆ ಅರ್ದ್ಧವಿಸದಿ ಇತ್ತೊದಾ
ನಳಿಉವೊನ್

(೪) ಪಞ್ಚಮಹಾಪಾತಕನಕುವರ್ ಏಳನೆಯಾ
ನರಕದಾ ಪುಳು ಆಕುವರ್



ಕನ್ನಡ ಶಾಸನಗಳ ರೂಪರಚನೆ ಕುರಿತೊಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಶಾಸನಗಳನ್ನು ಸಾಮಾನ್ಯವಾಗಿ ನಾಲ್ಕು ವಿಭಾಗ ಮಾಡಬಹುದು. ಶಾಸನ ಬರೆಸುವವರ ಆರಾಧ್ಯದೇವತೆಯನ್ನು ಕುರಿತ

ಧ್ಯಾನ ಅಥವಾ ಮಂಗಳಾಚರಣ ಶ್ಲೋಕ ಅಥವಾ ಶ್ಲೋಕಗಳು ಶಾಸನದ ಮೊದಲನೆಯ ಭಾಗ.

''ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘಲಾಂಛನಂ
ಜೀಯಾತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ''

ಎಂಬ ಶ್ಲೋಕವು ಜೈನರ ಶಾಸನಗಳಲ್ಲಿರುತ್ತದೆ.

''ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ
ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ''

ಈ ಶ್ಲೋಕವು ಶೈವ ಶಾಸನಗಳಲ್ಲಿ ಕಂಡುಬರುತ್ತದೆ. ವೈಷ್ಣವ ಶಾಸನಗಳಲ್ಲಿ

''ಜಯತ್ಯಾವಿಷ್ಕೃತಂ ವಿಷ್ಣೋ
ರ್ವಾರಾಹಂ ಕ್ಷೋಭಿತಾರ್ಣವಂ
ದಕ್ಷಿಣೋನ್ನತದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ''

ಎಂಬೀ ಶ್ಲೋಕವು ಇರುತ್ತದೆ. ಎಲ್ಲ ಶಾಸನಗಳಲ್ಲೂ ಇವೇ ಶ್ಲೋಕಗಳೇ ಇರುವುವೆಂದು ಭಾವಿಸಬಾರದು. ಇತರ ಶ್ಲೋಕಗಳೂ ಇರುವುದುಂಟು. ಶ್ಲೋಕಗಳಿರಲಿ, ಇಲ್ಲದೆ ಇರಲಿ ಶಾಸನಾರಂಭದಲ್ಲಿ 'ಶ್ರೀ,' 'ಸ್ವಸ್ತಿಶ್ರೀ,' 'ಶುಭಮಸ್ತು,' 'ನಮಃ ಸಿದ್ಧೇಭ್ಯಃ' 'ಶ್ರೀಮತೇ ರಾಮಾನುಜಾಯ ನಮಃ' 'ಶ್ರೀ ಗಣಾಧಿಪತಯೇ ನಮಃ' 'ಭದ್ರಮಸ್ತು ಜಿನಶಾಸನಸ್ಯ' ಮುಂತಾದ ಮಾತುಗಳಿರುತ್ತವೆ.

ಶಾಸನದ ಎರಡನೆಯ ಭಾಗ ಬಹಳ ಮುಖ್ಯವಾದುದು. ಶಾಸನ ಬರೆದ ಕಾಲ, ಆ ಕಾಲದಲ್ಲಿ, ಆ ಪ್ರಾಂತ್ಯದಲ್ಲಿ ಆಳುತ್ತಿದ್ದ ಸಾಮಂತ, ಮಹಾಪ್ರಧಾನ, ದಂಡನಾಯಕ ಮೊದಲಾದ ಅಂಶಗಳಿರುತ್ತವೆ. ಆ ಕಾಲದಲ್ಲಿ ಸಂಬಂಧಪಟ್ಟ ದೇಶದಲ್ಲಿ ಆಳುತ್ತಿದ್ದ ಅರಸ, ಅವನ ವಂಶಾವಳಿ, ಆ ವಂಶದ ಹಲವು ಅರಸರ ಶೌರ್ಯಪ್ರತಾಪ, ಯೋಗ್ಯತಾಸಿದ್ಧಿ ಇವೇ ಮೊದಲಾದ ಐತಿಹಾಸಿಕ ಅಂಶಗಳೆಲ್ಲ ಈ ಭಾಗದಲ್ಲಿ ಸಿಗುತ್ತವೆ. ಹೀಗೆ ನಾನಾ ಶಾಸನಗಳಲ್ಲಿ ಸಿಗುವ ಅಂಶಗಳನ್ನೂ, ಅಂಕಿಗಳನ್ನೂ ಹೆಸರುಗಳನ್ನೂ ಅರ್ಥವಾಗುವಂತೆ ಜೋಡಿಸಿಕೊಂಡು ಕ್ರಮವಾಗಿ ಚರಿತ್ರೆಯನ್ನು ಬರೆಯಬೇಕಾಗುತ್ತದೆ. ಅರಸರ, ಅವರ ಸಾಮಂತರ ಬಿರುದುಗಳು ವಿಶೇಷವಾಗಿ ಸಿಗುತ್ತವೆ. ಈ ಬಿರುದುಗಳ ಸಹಾಯದಿಂದ ಇತಿಹಾಸಕ್ಕೆ ಸಂಬಂಧಪಟ್ಟ, ಅನೇಕ ಸಮಸ್ಯೆಗಳನ್ನು ನಾವು ಬಿಡಿಸಬಹುದಾಗಿದೆ, ಕೆಲವು ಉದಾಹರಣೆಗಳಿಂದ ಈ ಅಂಶವು ಸ್ಪಷ್ಟವಾಗುತ್ತದೆ.

''ಸಕನೃಪ ಕಾಳಾತೀತ ಸಂವತ್ಸರ ಸತಙ್ಗ
ಳೆಣ್ಣೂನೂರ ಎಳ್ಪತ್ತರ ಕೀಲಕ ಸಂವತ್ಸರಂ
ಪ್ರವರ್ತ್ತಿಸೆ ಶ್ರೀ ಸ್ವಸ್ತಿ ಸಮಧಿಗತ ಪಞ್ಚ ಮಹಾ
ಸಬ್ದ ಪಲ್ಲವಾನ್ವಯ ಶ್ರೀ ಪೃಥಿವೀ ವಲ್ಲಭ ಪಲ್ಲವ
ಕುಲತಿಲಕ ಪಲ್ಲವರಾಮ ಪಲರೊಡೆಗಣ್ಡ
ಇರುವನೊಳಂಬನೇಕ ವಾಕ್ಯ ಶ್ರೀ ಮತ್ ದಿಲೀ
ಪರಸ ಪ್ರಿಥಿವೀರಾಜ್ಯಂಗೆ ಯುತ್ತಿರೆ''

''ಸ್ವಸ್ತ್ಯ ಕಾಳವರ್ಷದೇವ
ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇ
ಶ್ವರ ಪರಮ ಭಟ್ಟಾರಕಂ ಚಲಕೆ ನಲ್ಲಾ ತಂ
ಶ್ರೀ ಮತ್ಕನ್ನರ ದೇವನ ರಾಜ್ಯ ಮುತ್ತರೋತ್ತರಾಭಿ
ವೃದ್ಧಿಗೆ ಸಲುತ್ತಮಿರೆ ಸ್ವಸ್ತಿ ಸಮಧಿಗತ
ಪಞ್ಚಮಹಾಶಬ್ದ ಮಹಾ ಸಾಮನ್ತ ಳೌಚಾರ್ಣ್ನವಂ
ಸಾರಲೊಳ್ಪಿದೋಂ ಪಮ್ಮನದಾಣ್ಮಂ ಪಗೆಗೆ ಬ
ಲ್ಗಣ್ಡ ನುಡಿದನ್ತೆಗಣ್ಡ ಕೃತಯುಗಗಳ್ಳಂ
ಶ್ರೀಮತ್ ರೊಟ್ಟಯ್ಯಂ ಮಾಸಿವಾಡಿ ನೂರ
ನಾಲ್ವತ್ತುಮಂ ಕೋಗಳಿಯಯ್ನೂರು ಮಂ
ಕುಕ್ಕನೂರ್ಮೂವತ್ತುವ ನಾಳುತ್ತುಮಿರೆ
ಸ್ವಸ್ತಿ ಸಕನೃಪಕಾಳಾತೀತ ಸಂವತ್ಸರ
ಸತಂಗ ೮೭೮ನೆಯ ನಳ ಸಂವತ್ಸರ
ಪ್ರವರ್ತ್ತಿಸೆ ಯುತ್ತರಾಯಣ ಸಂಕ್ರಾನ್ತಿಯೊಳ್
ಬಾಳ್ಗಳಿಯಯೂರೊಡೆಯಂ''

''ಸಮಸ್ತ ಭುವನಾಶ್ರಯ ಶ್ರೀ ಪ್ರಥಿವೀವಲ್ಲಭ
ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕಂ
ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ
ಶ್ರೀಮದಾಹವಮಲ್ಲದೇವರ ವಿಜಯ ರಾಜ್ಯಉತ್ತ
ರೋತ್ತರಾಭಿವೃದ್ಧಿ ಪ್ರವರ್ಧಮಾನ ಮಾಚಂದ್ರಾರ್ಕ್ಕ
ತಾರಂ ಸಲುತ್ತಮಿರೆ ಸಕ ವರ್ಷ ೯೦೩ನೆಯ
ವಿಕ್ರಮ ಸಂವತ್ಸರದ ವೈಶಾಖ ಶುದ್ಧ ೫
ಬ್ರಿಹಸ್ಪತಿ ವಾರಂ''

''ಸಕಲ ತ್ರಯಾಭಿವನ್ದಿತ ಸುರಾ ಸುರಾಧೀಶ
ಪರಮೇಶ್ವರ ಪ್ರತಿಹಾರೀಕೃತ ಮಹಾವಲಿಕುಲೋ
ದ್ಭವ ಶ್ರೀ ಮಹಾವಲಿ ಬಾಣರಸಪ್ರಿಥಿವೀ
ರಾಜ್ಯಜ್ಗೆಯೆ''

'ಸ್ವಸ್ತ್ಯನೇಕ ಸಮರ ಸಂಘಟ್ಟಣೋಪಲಬ್ಧ
ಜಯಲಕ್ಷ್ಮೀ ಸಮಾಲಿಂಗಿತ ವಕ್ಷಸ್ಥಲ ಗಣ್ಡ
ತ್ರಿಣೇತ್ರ ಶ್ರೀ ವೈದುಂಬ ಮಹಾರಾಜರ್ ಪ್ರಿಥಿವೀ
ರಾಜ್ಯಂಗೆಯೆ''

''ಸಮಸ್ತ ಭುವನಾಶ್ರಯ ಶ್ರೀ ಪ್ರಿಥಿವೀ ವಲ್ಲಭ
ಮಹಾರಾಜಾಧಿರಾಜ
ಪರಮೇಶ್ವರ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳ
ತಿಳಕಂ ಚಾಳುಕ್ಯಾಭರಣಂ ಶ್ರೀ ಪುತ್ರೈಲೋಕ್ಯಮಲ್ಲ ದೇವರ
ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧ

ಮಾಗಮಾಚನಪ್ಪ್ರರ್ಕತಾರಂ ಸಲುತ್ತಿರೆ ತತ್ಪಾದ
ಪದ್ಮೋಪಜೀವಿ ಸಮಧಿಗತ ಪಂಚ ಮಹಾಶಬ್ದ
ಪಲ್ಲವಾನ್ವಯ ಶ್ರೀ ಪೃಥ್ವೀ ವಲ್ಲಭಾಂ ಪಲ್ಲವ ಕುಲತಿಳಕ
ನವೋಘವಾಕ್ಯಂ ಕಾಂಚೀ ಪುರವರೇಶ್ವರಂ ವೈರಿ ನಾರಾ
ಯಣಂ ದ್ರೋಹ ಕಾಳಾನಳಂ ಮಣ್ಡಳಿಕ ತ್ರಿಣೇತ್ರಂ
ರಾಜಮನೋಜಂ ಹಯವತ್ಸರಾಜಂ ಚಿಪ್ರವೆಡಂಗಂ
ತ್ಯಾಗಚಿನ್ತಾಮಣಿ ರಾಜಗ ಸರ್ವಜ್ಞರ್ಂ ಶ್ರೀ ಮ
ತ್ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆಮ್ಮಾರ್
ಗಡಿಗಳ್ ಬಲ್ಲಕುಗ್ದೆ ಮೂನೂರು ಕೋಗಳಿ
ಯಯ್ನೂರು ಕಡಂಬಳಿಗೆ ಸಾಯಿರ ಕುದಿಯಹೆರ
ವಿ ಯೆಪ್ಪತ್ತು ಕರಿವಿಡಿ ಮೂವತ್ತುಮಂ ಪಂಚಗ್ರಾ
ಮಂಗಳುಮಂ ಸೋಳಂಬವಾಡಿ ಮೂವತ್ತಿಚ್ಛಾಸಿರ
ಮುಮನಚಳ ಪ್ರವೃತ್ತಿಯಿಂ ದುಷ್ಟ ನಿಗ್ರಹ ವಿಶಿಷ್ಟ
ಪ್ರತಿಪಾಳನದಿನಾಳುತ್ತೊರೆ"

"ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಥಿವೀವಲ್ಲಭ
ಮಹಾರಾಜಾಧಿರಾಜ ಪರಮೇಶ್ವರಂ ಪರಮ ಭಟ್ಟಾರಕಂ
ಯಾದವ ಕುಳಾಂಬರದ್ಯುಮಣಿ ಸಮ್ಯಕ್ತ ಚೂಡಾಮಣಿ
ಮಲೆರಾಜರಾಜ ಮಲೆಪಮೊಳ್ಗಂಡ ಕದನ ಪ್ರಚಂಡ
ಶನಿವಾರಸಿದ್ಧಿ ಗಿರಿ ದುರ್ಗ್ಗಮಲ್ಲ ಚಲದಂಕ ರಾಮ
ನಿಶ್ಯಂಕ ಪ್ರತಾಪ ಚಕ್ರವರ್ತಿ ಶ್ರೀ ವೀರಬಲ್ಲಾಳ ದೇವರು
ಶ್ರೀಮತು ಹರಿಶ್ಚಂದ್ರ ಪತ್ತಿಯಗ್ರಹಾರ ಬಾಳ್ಗುಳಿಯ
ನೆಲೆವೀಡಿನೊಳು ಸಕಳ ದಿಶಾಪರಮನೇಕಾಧಿಷ್ಠಿತಂ
ಮಾಡಿ ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತ
ಮಿದ್ದ್ ಶಕನೃಪ ವರ್ಷದ ೧೧೧೬ನೆಯ ಪ್ರಮಾಥಿ
ಸಂವತ್ಸರದ ಕಾತ್ತಿರ್ಕದ ಪೌರ್ಣಮಿ ಸೋಮವಾರ
ಸೋಮಗ್ರಹಣ ಸಂಕ್ರಾಂತಿ ವ್ಯತೀಪಾತಂ ಕೂಡಿದ ಪುಣ್ಯ
ದಿನದೊಳ್"

ಈ ಉದಾಹರಣೆಗಳು ವಾಚಕರಿಗೆ ಶಾಸನಗಳ ಒಂದು ಚಿತ್ರವನ್ನು ಕೊಡುತ್ತವೆ. ಚರಿತ್ರೆ ಬರೆಯುವವರಿಗೆ, ಚರಿತ್ರೆಗಳನ್ನು ಅಧ್ಯಯನ ಮಾಡುವವರಿಗೆ ಬಹಳ ಉಪಯೋಗವಾಗುವ ಶಾಸನ ಭಾಗವಿದು.

ಶಾಸನದ ಮೂರನೆಯ ಭಾಗದಲ್ಲಿ ಶಾಸನದ ಉದ್ದೇಶವು ಸ್ಪಷ್ಟವಾಗಿ, ವಿಸ್ತಾರವಾಗಿ ವರ್ಣಿತವಾಗಿರುತ್ತದೆ.

(೧) ರಾಜರು, ಅವರ ಸಾಮಂತರು, ನಾಡಾಳ್ವರು ಜನರ ತಿಳಿವಳಿಕೆಗಾಗಿ ರಾಜಶಾಸನಗಳನ್ನೂ, ನಿರೂಪಗಳನ್ನೂ ಪ್ರಕಟಿಸುವುದು.

(೨) ದೇವಾಲಯಗಳಿಗೆ ದೇವರ ಅಂಗ ಭೋಗ ರಂಗ ಭೋಗಗಳಿಗೆ ದತ್ತಿಗಳನ್ನು ಬಿಡುವುದು; ದೇವರ ಸೇವೆಗೆ ನಿಯುಕ್ತರಾಗಿರುವ ನಾನಾ ಅವಸರದವರಿಗೆ, ಉದ್ಯೋಗಿಗಳಿಗೆ, ಸೇವಕರಿಗೆ ಜೀವನ ವಸತಿಗಳನ್ನು ಕಲ್ಪಿಸಲಿಕ್ಕಾಗಿ ಪುದುವಟ್ಟುಗಳನ್ನಿಡುವುದು; ದೇವರ ನಂದಾದೀವಿಗೆಗೆಂದು, ಅಮೃತಪಡಿಗೆಂದು ದಾನ ಮಾಡುವುದು; ಇವೇ ಮೊದಲಾದಂಶಗಳನ್ನೆಲ್ಲ ಎಲ್ಲರೂ ತಿಳಿದುಕೊಳ್ಳಲೆಂಬಾಶಯದಿಂದ ಬರೆಸಿ ಪ್ರಕಟಿಸುವುದು.

(೩) ಮಾಣಿಯರ ಓದಿಗೆ, ವಿದ್ಯಾರ್ಥಿ ತಪೋಧನರ ಅಶನವಸನ ವಸತಿಗಳಿಗೆ ಸಾಕಾದಷ್ಟು ಬೀಜ ಹೊನ್ನನ್ನು ಒದಗಿಸುವುದು.

(೪) ಪ್ರಜೆಗಳಿಗೂ ಪ್ರಭುತ್ವೋದ್ಯೋಗಿಗಳಿಗೂ ಪ್ರಾಪ್ತವಾಹ ಕಲಹ, ಆ ಕಲಹ ಪರಿಹಾರ; ರೈತರೈತರಿಗೂ ಆಗುವ ಘರ್ಷಣ; ಸಾಲಸೋಲಗಳ ವ್ಯವಹಾರ, ಅವುಗಳ ಪಂಚಾಯಿತಿ; ನಾನಾ ಸುಂಕ ಸಾರಿಗೆಗಳು.

(೫) ವೀರಗಲ್ಲುಗಳು, ಮಾಸ್ತಿಗಲ್ಲುಗಳು, ಕರುಗಲ್ಲುಗಳು.

(೬) ಪ್ರಶಸ್ತಿಗಳು, ವಿಜಯ ಸ್ತಂಭಗಳು ನಿಷಿಧಿಗಲ್ಲುಗಳು.

ಜನಜೀವನಕ್ಕೆ ಸಂಬಂಧಪಟ್ಟ ನೂರಾರಲ್ಲ ಸಾವಿರಾರು ಅಂಶಗಳು ಶಾಸನಗಳಲ್ಲಿ ಸಿಗುತ್ತವೆ. ಈ ಮೂರನೆಯ ಭಾಗದಲ್ಲಿ ಇಂತಹ ಮನುಷ್ಯ ಇಂತಹ ದಾನ ಮಾಡಿದನೆಂಬದಾಗಿ ತಿಳಿದುಬರುತ್ತದೆ.

ಕಡೆಯದಾದ ನಾಲ್ಕನೆಯ ಭಾಗದಲ್ಲಿ ಈ ಬಗೆಯ ಶ್ಲೋಕಗಳೂ, ವಚನಗಳೂ ಕಂಡುಬರುತ್ತವೆ:

"ಸ್ವದತ್ತಂ ಪರದತ್ತಂ ವಾ ಯೋ ಹರೇತ ವಸುಂಧರಾಂ
ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ"

"ದಾನಪಾಲನ ಛ್ರೆಯೋರ್ಮಧ್ಯೆ ದಾನಾಚ್ಛ್ರೇಯೋನು
ಪಾಲನಂ
ದಾನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ"

"ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ
ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್"

"ಇದಕ್ಕೆ ಆರು ಅಳುಪಿದವರು ಬಾಯಲಿ ಗೋಮಾಂಸ ತಿಂಬರು"

"ಇದನು ಕೆಡೆಸಿದವನು ತಂದೆ ತಾಯಿಗಳ ದ್ರೋಹಿಯಾಗುವನು"

"ಇಂತೀ ಧರ್ಮಮನಾವನೊರ್ಬ್ಬಂ ಪ್ರತಿಪಾಲಿಸಿದಂಗೆ ಸಾಯಿರ ಕವಿಲೆಯಂ ಕೋಡುಕೊಳಗಮುಂ ಪೊನ್ನಲು ಕಟ್ಟಿ ಗಂಗೆಯ ತಡಿಯಲು ಸಾಸಿರ್ವ್ವರ್ಪಾರ್ವ್ವರ್ಗ್ಗೆ ದಾನಂ ಗೆಯ್ದು ಕೊಟ್ಟ ಫಲಂ. ಈ ಧರ್ಮ

ಮನಾವನೊರ್ವ್ವ ನಳಿದಂ ಸಾವಿರ ಕವಿಲೆಯಂ ಗಂಗೆಯ ತಡಿಯಲು ಸ್ವಹಸ್ತದಿಂ ಕೊಂದ ಪಾತಕನಕ್ಕುಂ”

“ಇದಕೆ ಆರು ಅಳುಹಿದವರು ತಮ್ಮ ತಾಯಿಗೆ ತಪಿದವರು.”

“ಇದಕೆ ಅಳುಹಿದವರು ಗುರುದ್ರೋಹಿಗಳು ಶಿವದ್ರೋಹಿಗಳು.”

“ಇದಾನಟುದಾಸ್ಪಜ್ಜಮಹಾಪಾತಕನಕ್ಕುಮ್”

“ನಿವೇದ್ಯ ಕುಂದಿದಡೆ ಹುಳುಕುಪ್ಪೆಯಲಿ ಬೀಳ್ವಾರು.”

“ಅಳುಹಿದವನು ಹೆಣಬಾ ಅಕ್ಕಿಯನು ನಾಯಿದುಡವನು ತಿಂದವರು.”

“ಇದಕೆ ಅಳುಹಿದವನ ಸಂತಾನ ನಿಸಂತಾನವಾಗಲಿ.”

“ಆರು ವಿಘ್ನವ ಮಾಡಿದವರು ನಂಮ ಬ್ರಾಹ್ಮರಿಗೆ ಹೊರಗು ಗ್ರಾಮ ಬಹಿಷ್ಕೃತರು.”

“ಅಪಹರಿಸಿದವಂಗೆ ಕಾಶಿಯೊಳ್ಮಾಡಿದ ಗೋವಧೆ ಗುರುದಾರಾಗಮನ ಸುರಾಪಾನ ಇವು ಮೊದಲಾದ ಪಾತಕಗಳಪ್ಪವು.”

“ಅವನೊಬ್ಬ ಅಳುಹಿದವನು ಪಂಚಾಳಕ್ಕೆ ಹೊಱಗು ಆಹಳಕ್ಕೆ ಹೊಱಗು ಸಮಯಕ್ಕೆಲೂ ನಾಡಿಗೂ ಹೊಱಗು.”

“ಇದಾನ್ಕೊಳೆ ಈರೆಟ್ಪತ್ತುಱುಳಂ ಒಕ್ಕಲ್ತನಂ ಕೆಯ್ವೊನಾ ವಿತ್ತಿದಲ್ಲಿ ವೆಳೆಯಾದೆ ಕೆಡುಗೆ ಇದಾನ್ಕಾದು ಸಲ್ವೊನ್ಪರಮಕಲ್ಯಾಣ ಭಾಗಿಗಳಪ್ಪೋರ್ ನೆಲಸುಂ ವೆಳೆಗಾ ಪಾರ್ವ್ವರುಂ ಪ್ರಜೆಯುಂ ತಣಿಗೆಗೆ”

“ಈ ಕೆರೆ ನೀರಿಗೆ ಆಸೆ ಮಾಡಿ ತೂಬಿಗೆ ಅವರೋಧನೆ ಮಾಡಿದವ ಹೊಲೇರ ಮಾದಿಗರ ಬೀಜಕ್ಕೆ ಹುಟ್ಟಿದವನು”

“ಈ ಧರ್ಮಕ್ಕೆ ಕಂಟಕರಾದವರು ಉಪೇಕ್ಷಿಸಿದವರು ತಮ್ಮ ತಾಯ ತಂಗಿಯ ಕೆಡ್ಸಿದರು. ಶ್ವಾನಗಾರ್ದಪನ ಭಕ್ಷಿಸಿದವರು. ಅಗ್ರಹಾರವ ಅಳಿದವರು. ಮಹಾತಟಾಕವ ನೊಡೆದ ಪಾತಕ ಹಡದ ತಂದೆಯ ಹಿರಿಯರ, ಶಿಶುಗಳ ಗೋಉಗಳನು ಗಂಗೆಯ ತಡಿಯಲಿ ಕೊಂದವರು.”

ಶ್ರದ್ಧಾಭಕ್ತಿಗಳಿಂದ ಮಾಡಿದ ದಾನ ಧರ್ಮಗಳನ್ನು ಪ್ರತಿಯೊಬ್ಬರೂ ಪಾಲಿಸಿಕೊಂಡು ಬಂದು ಆಚಂದ್ರಾರ್ಕಸ್ಥಾಯಿಯಾಗಿ ನಡೆದುಬರುವಂತೆ ಮಾಡಬೇಕು. ಹಾಗೆ ಮಾಡಿದರೆ ಅವರಿಗೆ ಮಂಗಳವಾಗುವುದು. ಅವುಗಳನ್ನು ಕೆಡಿಸಿದರೆ ನರಕ ಪ್ರಾಪ್ತಿಯಾಗುವುದು. ಹೀಗೆಂದು ಎಚ್ಚರಿಕೆಯ, ಪಾಪ ಭೀತಿಯ ಮಾತುಗಳನ್ನು ಕೊಟ್ಟಿರುತ್ತಾರೆ.

ಹಲವು ಶಾಸನಗಳ ಕಡೆಯ ಭಾಗದಲ್ಲಿ ಶಾಸನವನ್ನು ರಚಿಸಿದವ ಮತ್ತು ಆ ಶಾಸನವನ್ನು ಕಲ್ಲಿನಲ್ಲಿ ಕೆತ್ತಿದವ ಇಬ್ಬರ ಹೆಸರುಗಳು ಕಂಡುಬರುತ್ತವೆ. ಕೆಲವು ಶಾಸನಗಳಲ್ಲಿ ಶಾಸನವನ್ನು ಕೆತ್ತಿದ ಲಿಪಿಕರನ ಹೆಸರನ್ನು ಮಾತ್ರ ನಾವು ನೋಡುತ್ತೇವೆ. ಮಹಾ ಸಾಹಿತಿಗಳೂ, ಶ್ರೇಷ್ಠತಮ ಕವಿಗಳೂ ಶಾಸನಗಳನ್ನು ರಚಿಸಿದವರೆಂದು ಆ ಶಾಸನಗಳಿಂದಲೇ ತಿಳಿದುಬರುತ್ತದೆ.

“ಮರುಪರ ಚಕ್ರಂ ದ್ವಿಜರೊಲ್
ಕರಿಮರಿಯುಳ್ಳೆನಿಪ ಕುರುಬನಾದಿತ್ಯಂ ಸಂ
ದರಿಕೆಯುವಗಾದ ಮಲ್ಲಂ
ಚರುಚದ ಕವಿರಾಜ ಬಾಂಧವಂ ಬರೆದನಿದಂ”

ಎಂಬದಾಗಿ ಹೆಗ್ಗಡದೇವನ ಕೋಟೆಯ ಶಾಸನವೊಂದು ಹೇಳುತ್ತದೆ.*

“ಶ್ರೀಮನ್ಮಹಾಸಂಧಿವಿಗ್ರಹಿ ದಂಡನಾಯಕಂ
ಕಾಳಿದಾಸಭಟ್ಟರಳಿಯಂ ಕವಿತಾಮನೋಹರಂ
ಕವಿಶಳರ ಕರ್ಪರಸಂ ಬರೆದಂ”+

ಎಂದು ಧಾರವಾಡ ಜಿಲ್ಲಾ ಹದಳಿ ಶಾಸನದಲ್ಲಿ ಹೇಳಿದೆ.

“ವಿನುತಮಧುರೋಕ್ತಿಯಂ ತ
ನ್ನನತಿಶಯ ವಚೋವಿಭೂತಿಗಿದುವೆ ಯುಶಸ್ಯಾ
ಸನ ಮಾಡುದೆಂಬಿನಂ ಶಾ
ಸನಮುಸಿದಂ ಬರೆದ ನಾಶುಕವಿಸಿಟಿಲಾಕ್ಷಂ”

“ಕವಿಸುತಮೆಸಲೊರೆದತಿಪಟು
ಕವಿ ಸಾರಸ್ವತ ಮಹೋದಯನ ಕಿಂಕರನೀ
ಶಿವಧರ್ಮ ಶಾಸನವನಭಿ
ನವಮಾಗಿರೆ ಮಲ್ಲಿಕಾರ್ಜುನಾರ್ಯಂ ಬರೆದಂ”

ಇದು ಶಿಕಾರಿಪುರದ ಎರಡು ಶಾಸನಗಳಿಂದ ತಿಳಿದುಬರುವ ಸಂಗತಿ

“ಕ್ಷಿತಿವಿನುತೆ ಸರ್ಬದೇವನ
ಸುತೆಸನ್ನುತೆ ಸೋಮಿಯಕ್ಕನಣುಗಿನ ಪುತ್ರಂ
ಸತುಕವಿ ಸಾಂತಮಹಂತಂ
ಸ್ಥಿತಿಸಾರಂ ಪೇಳ್ದನಲ್ತಿಯಿಂ ಶಾಸನಮಂ”

---

*Epigraphia Carnatica, Mysore No. 18 Heggada Devann Kote

+Indian Antiquary Vol. XIII p. 91.

ನಾಗಮಂಗಲ ತಾಲ್ಲೂಕಿನ ಶಾಸನವೊಂದು ಹೀಗೆ ಹೇಳುತ್ತಿದೆ.

ಶಿವಮುಗ್ಗಿಯ ಶಾಸನವೊಂದನ್ನು 'ಸಂಧಿ ವಿಗ್ರಹಿ ದಾಮರಾಜ' ಬರೆದ; ಅರಸಿಕೆರೆಯ ಶಾಸನವೊಂದನ್ನು ಸೀಗುರಿಯ ಕಾಮನ ತಮ್ಮ ಹರಿಹರಸೂರಿ ರಚಿಸಿದ; ಅಬ್ಬುಲೂರು ಶಾಸನವನ್ನು ಕೇಶವರಾಜ ಚಮೂಪ ಬರೆದ; ಅದನ್ನು ಸರಣ ತಿದ್ದಿದ. ಕಡೂರು ೯೩ನೆಯ ಶಾಸನವನ್ನು ಕವಿ ನಾಗದೇವ ನಿರ್ಮಿಸಿದ; ಕವಿಕಬ್ಬದ ದಾಮೋದರ ಚಿಕ್ಕಮುಗಳೂರು ಶಾಸನ ಬರೆದ; ಮಳವಳ್ಳಿಯ ಶಾಸನವೊಂದರ ಕವಿ ನರಸಿಂಹ; ನಗರದ ಒಂದೆರಡು ಶಾಸನಗಳನ್ನು ಬರೆದವನು ಮಲ್ಲಿನಾಥ; ದಾಸಮಲಪಾಡು ಶಾಸನಕರ್ತ ಗುಣವರ್ಮ; ಭಾಳಚಂದ್ರ ಕವಿಕಂದರ್ಪ ಬೆಳಗಾಂವಿ ಶಾಸನಗಳನ್ನು ರಚಿಸಿದ; ಹೀಗೆಯೇ ನೂರಾರು ಕವಿಗಳು ತಮ್ಮ ಹೆಸರುಗಳನ್ನು ತಾವು ರಚಿಸಿದ ಶಾಸನಗಳಲ್ಲಿ ಕೊಟ್ಟಿದ್ದಾರೆ. ಇನ್ನೂ ಅನೇಕ ಶಾಸನಗಳಲ್ಲಿ ಯಾವ ಹೆಸರೂ ಕಾಣಬರುವುದಿಲ್ಲ.

ಶಾಸನಗಳಲ್ಲಿ ಬಹು ಭಾಗ ದಾನಪತ್ರಗಳು; ಹಲವು ರಾಜ ನಿರೂಪಗಳು; ವೀರಗಲ್ಲು ಮಾಸ್ತಿಗಲ್ಲುಗಳು. ಕರುಗಲ್ಲುಗಳು; ಒಪ್ಪಂದಗಳು. ಇವುಗಳಲ್ಲದೆ ಕೀರ್ತಿಸ್ತಂಭಗಳೂ, ಪ್ರಶಸ್ತಿಗಳೂ ಕೆಲವುಂಟು. ಶಿವಮುಗ್ಗಿ ಜಿಲ್ಲೆ, ಶಿಕಾರಿಪುರ ತಾಲ್ಲೂಕು ತಾಳಗುಂದದ ಗಂಡಭೇರುಂಡ ಸ್ತಂಭ ಕೀರ್ತಿಸ್ತಂಭಕ್ಕೊಂದು ಉದಾಹರಣೆ. ಈ ಸ್ತಂಭದ ಮೇಲಿನ ಶಾಸನವು ಕನ್ನಡ ಕಾವ್ಯ ಶೈಲಿಗೆ (ಹನ್ನೊಂದನೆ ಶತಮಾನ) ಉತ್ತಮ ಉದಾಹರಣೆ. ಮಧ್ಯ ಭಾರತದ 'ಏಜನ್ಸಿ' ಕ್ಷೇತ್ರದಲ್ಲಿ ಮೆಹರ್ ಎಂಬುದೊಂದು ಸಂಸ್ಥಾನ; ಅದರಲ್ಲಿ ಜೂರ ಎಂಬುದೊಂದೂರು. ಅಲ್ಲಿ ಕನ್ನಡ ಶಾಸನವೊಂದು ಸಿಕ್ಕಿತು! ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ವಿಜಯಯಾತ್ರೆ ಹೊರಟು ಅಲ್ಲಿ ಜಯಸ್ತಂಭ ನಿಲ್ಲಿಸಿ, ಅದರಲ್ಲಿ ಪ್ರಶಸ್ತಿಯನ್ನು ಬರೆಸಿದನು! ಆ ಪ್ರಶಸ್ತಿಯ ಪದ್ಯಗಳನ್ನಿಲ್ಲಿ ನೋಡಬಹುದು.

"ಭಾರತದೊಳಿರಿದ ನಿಂದ್ರನೊ
ಳೋರಾಸನ ಜಾಣನೆನಿಪ ಪಾಂಡ್ಯನ ಕುಲವಂ
ಬೇರಿನ್ದೆ ಕಿಲ್ತಚೋಳನ
ಬೇರಂ ಬೇರಿನ್ದೆ ಕಿಲ್ತಿನಾನೆವೆಡೆಙ್ಗಂ"

"ಸೋಲದೆ ಪರವನಿತೆಗೆ ಕ
ಣ್ಸೋಲದು ಮೊಲೆವಾಲನೂಡಿ ನಡಪಿದ ತಾಯಿಂ
ಮೇಲೆನೆ ಬಗೆಗಂ ನೋಡಿರೆ
ಸೋಲದು ಚಿತ್ತಂ ಪರಾಂಗನಾ ಪುತ್ರಕನ"

"ನೋಡಿರೆ ಪರವಧುಗೆ ಮನಂ
ಕೂಡದು ಸೂಳ್ನೂಲೊಳೆತ್ತಿ ನಡಪಿದ ತೋಳು
ಣ್ಡಾಡಿದ ಮೇಲೆ ಬರು ತೊಳಗಿ
ಳ್ದಾಡಿದ ಚಿತ್ತಂ ಪರಾಂಗನಾಪುತ್ರಕನ"

ಮುಮ್ಮಡಿ ಕೃಷ್ಣ ಮಹಾವೀರ, ನಲ್ಲರ ಮರುಳ, ನನ್ನಿವೆಡಂಗ, ಚಲನೆ ನಲ್ಲಾತ, ವೈರಿ ವಿಳಾಸ, ಮದಗಜಮಲ್ಲ, ಪರಾಂಗನಾಪುತ್ರ, ಗಣ್ಡಮಾರ್ತಣ್ಡ. ಈ ಬಿರುದುಗಳಲ್ಲೆಲ್ಲ ಅವನಿಗೆ 'ಪರಾಂಗನಾಪುತ್ರ' ಎಂಬುದು ಬಹಳ ಪ್ರಿಯವಾಗಿದ್ದಿತೆಂದು ಕಂಡು ಬರುತ್ತದೆ.

ಕನ್ನಡ ಸಾಹಿತ್ಯ ದೃಷ್ಟಿಯಿಂದ ಕನ್ನಡ ಶಿಲಾಶಾಸನಗಳಿಗೆ ಅಪೂರ್ವ ಸ್ಥಾನ ಗೌರವವಿದೆ. ಹಲವು ಶಾಸನಗಳಾದರೂ ಪುಟ್ಟ ಕಾವ್ಯಗಳಂತಿವೆ. ಪಂಪ ರನ್ನರನ್ನೂ ಮೀರಿಸದಿದ್ದರೆ ಹೋಗಲಿ, ಅವರಿಗೆ ಸರಿಸಮನಾಗಿ ನಿಲ್ಲುವ ಕವಿಗಳು ಶಾಸನಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯೇತಿಹಾಸದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ಶಾಸನ ಲೋಕವು ಹುಲುಸಾದ ಕ್ಷೇತ್ರ.

ಕ್ರಿಸ್ತ ಶಕ ೭೦೦ಕ್ಕೆ ಸಂಬಂಧಪಟ್ಟ ಬಾದಾಮಿಯ ಶಾಸನವೊಂದನ್ನು ನೋಡಿ; ಮೂರು ತ್ರಿಪದಿಗಳನ್ನಿಲ್ಲಿ ಕೊಡಲಾಗಿದೆ.

"ಸಾಧುಗೆ ಸಾಧು ಮಾಧುಯ್ಯನ್ಗೆ ಮಾದುಯ್ಯಂ
ಬಾದಿಪ್ಪ ಕಲಿಗೆ ಕಲಿಯುಗ ವಿಪರೀತ
ನ್ಮಾಧವ ನೀತನ್ಪೆರನಲ್ಲ
ಒಳ್ಳಿತ್ತರೆಯ್ದೊರಾಪ್ಪೊರ್ಲ್ಲದು ಮದರನ್ತೆ
ಬಳ್ಳಿತ್ತು ಕಲಿಗೆ ವಿಪರೀತ ಪುರಾಕೃತ
ಮಿಲ್ಲಿ ಸನ್ಧಿಕ್ಕುಮದು ಬನ್ದು
ಕಟ್ಟಿದ ಸಿಂಘಮನ್ಕೆಟ್ಟೊಡೆಮಗೆನ್ದು
ಬಿಟ್ಟವೋಲ್ಕಲಿಗೆ ವಿಪರೀತಂಗಹಿತಕ್ಕರ್
ಕೆಟ್ಟವೊರ್ಣ್ಣತ್ತರ ವಿಚಾರವರ್"

ಬಳ್ಳಾರಿ ತಾಲ್ಲೂಕು ಕೋಗಳಿಯ ಬಸ್ತಿಯ ಮುಂದೆ ಒಂದು ಶಿಲಾ ಶಾಸನವಿದೆ. ಕ್ರಿಸ್ತಶಕ ೧೦೫೫ರಲ್ಲಿ ಚಾಳುಕ್ಯ ತ್ರಿಭುವನ ಮಲ್ಲದೇವನ ಕಾಲದಲ್ಲಿ ಬರೆದುದು. ಇಂದ್ರಕೀರ್ತಿ ಮುನಿಯು ಗಂಗರಾಜ ದುರ್ವಿನೀತನಿಂದ ನಿರ್ಮಿತವಾದ ಬಸ್ತಿಗೆ ವಿದ್ಯಾದಾನಕ್ಕಾಗಿ ದತ್ತಿ ಬಿಟ್ಟನೆಂದು ಹೇಳಿದೆ. ಆ ಇಂದ್ರಕೀರ್ತಿಯನ್ನು

ಬಹಳವಾಗಿ ಸ್ತೋತ್ರ ಮಾಡಲಾಗಿದೆ. ಶಾಸನದ ಆ ಭಾಗವಾದ 'ತೋಮರ ರಗಳೆ'ಯನ್ನಿಲ್ಲಿ ಕೊಡಲಾಗಿದೆ.

"ಶ್ರೀಮದರುಹಚ್ಚರಣ ಸರಸಿರುಹ ಭೃಂಗನಂ
ಭೂಮಿಕೀರ್ತಿಸೆ ನೆಗಳ್ದ ಗುಣಗಣೋತ್ತಾಂಗನಂ
ಮಜುಚರಿತನಿರತನಂ ಗುರುಚರಣ ಭಕ್ತನಂ
ವಿನಮಿತ ಜಗಜ್ಜನಂ ಧರ್ಮಾನುರಕ್ತನಂ
ಪರಹಿತ ದಿಲೀಪನಂ ನೃಗಭೂಪಚರಿತನಂ
ಸುರುಚಿರ ಯಶೋಧರ ನಗಕಳಂಕ ಚರಿತನು
ಪಣ್ಡಿತಮುಖಾಂಬುರುಹ ಕಣ್ಡಮಾರ್ತ್ತಣ್ಡನುಂ
ಕೊಣ್ಡಕುನ್ದಾನ್ವಯ ಸಮೂಹ ಮುಖಮಣ್ಡನಂ
ದೇಸೀಯ ಗಣಕುಮುದ ವನಸರಶ್ಚಂದ್ರನಂ
ತ್ರೈಲೋಕ್ಯಮಲ್ಲಸರಸರಸಿಕಳಹಂಸನಂ
ಭೂಲೋಕ ತಿಳಕನಂ ಕರ್ಮವಿಧ್ವಂಸನಂ
ಸರ್ವತೋ ಭದ್ರಜನ ಗ್ರಿಹಸಮುದ್ಧರಣನಂ
ಸರ್ವಶಾಸ್ತ್ರಜ್ಞನಂ ವಿಕಳಜನ ಶರಣನಂ
ಶಿಷ್ಟಸುರಭೂಜನಂ ಕವಿಕುಮುದ ರಾಜನಂ
ಇಷ್ಟ ಸಂತುಷ್ಟನಂ ಖರಕಿರಣ ತೇಜನಂ
ದಶಧರ್ಮಕುಶಳನಂ ಮೇರುಗಿರಿ ಧೈರ್ಯನಂ
ಶಶಿವಿಶದ ಕೀರ್ತ್ತಿಯಂ ದಾನ ತಾತ್ಪರ್ಯನಂ
ಜಿನಧರ್ಮದೀಪಕನ ನಧಿಕ ಭುಜವೀರ್ಯ್ಯನಂ
ವಿನಯ ರತ್ನಾಕರಂ ಕವಿಜನಾಚಾರ್ಯನಂ
ಜಿನಧರ್ಮ ದೀಪಕನ ನಧಿಕಭುಜವೀರ್ಯನಂ
ತ್ರೈಲೋಕ್ಯಮಲ್ಲೇಂದ್ರ ಕೀರ್ತಿ ಹರಿಮೂರ್ತಿಯಂ
ಭೂಲೋಕ ವಿಖ್ಯಾತತರ ಯಶೋವರ್ತ್ತಿಯಂ
ಭವನಬ್ಜ ಭವನಬ್ಜ ಜಠರಗ್ನಿ ಬಣ್ನಿಸ
ಲವಗ್ಗರಿದು ಮಾನವನ್ನೆರೆದಪರೆ ಬಣ್ನಿಸಲು
ಗುರುತನಗೆ ಮಿಥ್ಯೈಕವಾದಿ ಗಜಮೃಗರಾಜ
ರರಿಯರೆನಿಸಿದರಿನ್ದ್ರಣನ್ದಿಪಣ್ಡಿತದೇವ
ರೆನೆ ವಿನಿಯನಿಧಿ ವಿಪುಳ ಗುಣನಿಳಯ ನೆನಿಸಿದಂ
ಮನುಮೃತಮೆಮತಮೆನಿಸಿ ಬಹುಮತನುಮೆನಿಸಿದಂ
ತ್ಯಾಗದೊಳ್ ಶಿಬಿಗುತ್ತ ಶಾದೃಶ್ಯಮೆನಿಸಿದಂ
ಭೋಗದೊಳ್ ಸುರಪತಿಗೆ ಮಿಗಿಲೆ ತಾನೆನಿಸಿದಂ
ದಾನದೊಳ್ ಸುರಕರಿಯ ದೊರೆಸರಿಸಮೆನಿಸಿದಂ
ಕಾನೀನನಂ ತನಗೆ ಹೀನನೆ ದಲೆನಿಸಿದಂ
ಧರ್ಮ್ಮಾನುರಾಗದೋಳ್ ಧರ್ಮಸುತನೆನಿಸಿದಂ
ನೆಮ್ಮಂಬುಧಂಗಹಿಮ ಕರನಂತಿರನಿಸಿದಂ
ನಂದಿಬೃಂದಾರಕ ಮಯೂರಾಂಬುದಾಗಮಂ
ನಂದಿ ಜನಚೂತವನಮುದ ವಸಂತಾಗಮಂ
ಕವಿಗಮಕವಾದಿ ವಾಗ್ಮೀನ್ದ್ರ ಕಳ್ಪದ್ರುಮಂ
ಕವಿಕದಂಬಕ ಕೀರ ಫಳಿತ ಚೂತದ್ರುಮಂ
ಕೇವಳಮೆನೆಗಳ್ದಿನ್ದ್ರಕೀರ್ತ್ತಿ ನೃಪಪೂಜಿತಂ
ಕೇವಳಮೆ ಸಕಳಗುಣಗಣಯಶೋ ರಾಜಿತರ"

ಸಂಸ್ಕೃತದಿಂದ ಭಿನ್ನವಾದ, 'ಶ್ರಿ'ವರು ಸೂಚಿಸುವಂತೆ ದ್ರಾವಿಡ ಛಂದೋರೂಪವನ್ನು ತಳೆದ ರಚನೆಗಳು ಶಾಸನಗಳಲ್ಲಿ ಕಾಣಬರುತ್ತವೆ. ಉದಾಹರಣೆಗಾಗಿ ಮೇಲಿನ ರಗಳೆಯನ್ನೆತ್ತಿ ಕೊಟ್ಟಿದ್ದೇನೆ. ಲಕ್ಷಣ ಗ್ರಂಥಕಾರರು ತೋಮರ ರಗಳೆ ಕುರಿತು ಹೆಚ್ಚಾಗಿ ಹೇಳಿದಂತಿಲ್ಲ. ಅಕ್ಕರಗಳಿಗೆ ಶಾಸನಗಳಲ್ಲಿ ಅನೇಕ ಉದಾಹರಣೆಗಳಿವೆ. 'ಶ್ರಿ'ವರೇ ಶ್ರವಣಬೆಳಗೊಳದ (೯೪೨) ಶಾಸನವೊಂದರಿಂದ

"ಒಳಗಂ ದಕ್ಷಿಣ ಸುಕರ ದುಷ್ಕರವುಂ
ಪೊರಗಣ ಸುಕರ ದುಷ್ಕರ ಭೇದಮುಂ
ಒಳಗೆ ವಾಮದ ವಿಷಮುಂಪುನಲ್ಲಿಮ
ವಿಷಮ ದುಷ್ಕರಮು ಪಿನ್ನದರಪೊರಗ
ಗ್ಗಳಿಕೆಯೆನಿಪತಿ ವಿಷಮನದರತಿ
ವಿಷಮದುಷ್ಕರಮೆಂಬ ದುಷ್ಕರಮುಂ
ಎಳೆಯೊಳೊರ್ವ್ವನೆ ಚಾರಿಸಲ್ ಬಲ್ಲಂ
ನಾಲ್ಕು ಪ್ರಕರಣಮನಿಂದ್ರರಾಜಂ"

ಎಂಬ ಪದ್ಯವನ್ನೆತ್ತಿ ಉದಹರಿಸಿದ್ದಾರೆ.

ಆರಂಭ ದೆಸೆಯಲ್ಲಿ ಕನ್ನಡ ಗದ್ಯರಚನೆ ಹೇಗಿತ್ತೆಂಬುದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ನಮ್ಮೆಲ್ಲರಿಗೂ ಇದೆ. ಆದರೆ ಪ್ರಾಚೀನ ಕನ್ನಡ ಗದ್ಯ ಕಾವ್ಯಗಳಿಲ್ಲ. ಕ್ರಿಸ್ತಶಕ ಆರನೆಯ ಶತಮಾನದಿಂದ ನಮಗೆ ಕನ್ನಡ ಶಾಸನಗಳು ಸಿಗುತ್ತವೆ. ಅವೆಷ್ಟೇ ಚೂರುಪಾರುಗಳಾಗಿರಲಿ ಕನ್ನಡ ಶಬ್ದಸ್ವರೂಪ, ಪ್ರಯೋಗ, ವಾಕ್ಯರಚನೆ, ಶೈಲಿ ಇವುಗಳ ಪರಿಚಯ ಮಾಡಿಕೊಳ್ಳಲು ಹಿಂದಿನ ಕಾಲದ ಶಿಲಾಶಾಸನಗಳು ಬಹಳ ಸಹಾಯ ಮಾಡುತ್ತವೆ.

ಈ ಲೇಖನದ ಆರಂಭದಲ್ಲೇ ಹಲ್ಮಿಡಿ ಮತ್ತು ಬಾದಾಮಿ ಶಾಸನಗಳೆರಡನ್ನು ವಾಚಕರು ನೋಡಬಹುದು. ಅವೆರಡು ಶಾಸನಗಳಿಗಿಂತ ಹಳೆಯವು ಇದುವರೆಗೆ ಕನ್ನಡ ನಾಡಿನಲ್ಲಿ ಸಿಕ್ಕಿಲ್ಲ. ಇನ್ನು ಕೆಲವು ಕನ್ನಡ ಶಾಸನಗಳ ಪಾಠಗಳನ್ನು ಆರಿಸಿ ಕೊಡಲಾಗಿದೆ. ಕನ್ನಡದಲ್ಲಿ ಗದ್ಯ ಹೇಗೆ ಬೆಳೆದು, ಸಾಹಿತ್ಯದ ಮಜಲನ್ನು ಹತ್ತಿ, ಶೈಲಿಯ ವಿಶಿಷ್ಟತೆಗೆ ಉದಾಹರಣೆಯೆನಿಸಿ, ಕಾವ್ಯದ ಕೀರ್ತಿ ಗಳಿಸಿತೆಂಬುದನ್ನು ಶಾಸನಗಳ ಅಧ್ಯಯನದಿಂದ ತಿಳಿದುಕೊಳ್ಳಬಹುದು.

೧

[1]"ಶ್ರೀಮತ್ಪನ್ನಾಡ ಎರೆಯ ಅವುಕನ್......ಗೆ
ಕೈವಾರನಾಡಧಿಪತಿ ಅವ್ಪಲನ್ ತುರುಗಲೂಳ್ಬಿಳ್ದು
ಸೇನೆಯನಿಕ್ಕಿ ಸುರಲೋಕಕ್ಕೆಸನ್ದೋನ್"

೨

[2]ಸ್ವಸ್ತಿಶ್ರೀ ಶಿಲೆ ಮುದ್ದರ ಮುರ್ಮನ್ ಸವ್ವಸಿದ್ಧಿ
ಅಚಾರ್ಯ್ಯರ ಚಟ್ಟರ ರೇವಡಿ ಒವಜ್ಜರ್
ತೆಜ್ಕಣದಿಶೆ ಮಾಡಿದೋರ್''

೩

[3]"ಸ್ವಸ್ತಿಶ್ರೀ ಶಿಲಾದಿತ್ಯನ್ ದಿಶಾವರ್ಬ್ಬಗ್ಗನ್ ಅಕೆವಾಳನ್
ಅಗ್ಗಳ ಕಣ್ಕಕನ್ವೇರಾಳ್ಕೆವರೆ ಪೆತ್ತಣಿ ಸತಾಜ್ಯನ್
ಅಟ್ಟುಳ್ಳಭಟನ್ ಬಿದರೆ ಮಹೇನ್ದ್ರನ್ ಬೇಡರ
ರಾಯರ ಮಲಪ್ಪರ ಕಾಳಿಗದುಳಿ ವಿರಿದು ಸ್ವಗ್ಗಾ
ಲಯಕ್ಕೇರಿದನ್ ಬೆಳೆಯೂಮಾಳ ಕಾದೋನ್
ಕಲ್ಯಾಣವರ್ ಅಕ್ಕೆ ಆಳುವೋನ್ ಪಜ್ಚಮ........."

೪

"ಸ್ವಸ್ತಿ ಸಕಲ ಜಗತ್ರಯಾಭಿವಂದಿತ ಸುರಾಸು ರಾಧೀಶ
ಪರಮೇಶ್ವರ ಪ್ರತಿ ಹಾರೀಕೃತ ಮಹಾವಲಿಕುಲೋದ್ಭವ
ಶ್ರೀಮತ್ ಮಹಾವಲಿ ವಾಣರಸಪ್ರಥುವೀ ರಾಜ್ಯಂಗೆಯೆ
ನೊಲುಮ್ಬನ ದಣ್ಡು ಪುಲಿನಾಡೊ ಮೇಗೆಳ್ತರೆ ವಾಣರಸರ್
ಕೆನ್ದರೆಗಪೆಗ್ಗಂಗಂ ಅವರ ಮಗಂ ದೇವೆಯಸಂ ಬೆಸಗೊಳೆ
ಎಮ್ಮೂರ ಮಿಸುಕಿ ಎಡೆಯೊಳ್ತಾಗಿ ತಳ್ತಿರಿದು
ಸಗ್ಗಮೇರಿದಂ ಅತಂಗೆ ಬಾಣ ವಿದ್ಯಾಧರಂ ಮೆಚ್ಚಿ
ಬಾಳ್ಗಳ್ಚಗೊಟ್ಟದು ಮಿನುಕಿ ಇದನಳುವೊನ್
ಪಞ್ಚಮಹಾಪಾತಕಂ''*

೫

''.........ಬಾಣರಸ ಪ್ರಿಥುವೀ ರಾಜ್ಯಂಗೆಯೆ ಜಯನಾಗನ್
ಶುಕರ ಮಾಸ ದಿವಸದೊಳ್ಕೊಣ್ಡದೊಳ್ ಕಿಚ್ಚಂ ಪುಗುವೆ
ನೆನ್ದೊಗುಗೊಣ್ಡು ಕಿಚ್ಚುಪೊಕ್ಕು ಸುರಲೋಕ ಮೇ
ರಿದೊನವನ............ಕಲ್ನಡಿಸಿದ''×

೬

''ಸ್ವಸ್ತಿ ಸಮಧಿಗತಪಜ್ಚಮಹಾ ಶಬ್ದ ಪಲ್ಲವಾನ್ವಯ
ಶ್ರೀ ಪ್ರಿಥಿವೀ ವಲ್ಲಭ ನೊಳಂಬದಿಯರಸಗಂಗರು
ಸಾಸಿರಮುಮಾನಾಳುತ್ತಿಲ್ದು ತಳೆಕಾಡಾಮೇಗೆಳ್ದನ್ದು
ಪೆರ್ಮ್ಮಾನಡಿಗಳಾ ಬೆಸದೆ ಮಹಾರಾಜಪ್ಪುಲಿನಾಡಾ
ನೆರಿಯಪ್ಪೆಳ್ದೊಡೆ ಅವರಾ ದಣ್ಡಿನುಳ್ಕಾದಿ ಕಾಡು


ಮಟ್ಟಿಯು ಮೃಡುವಾನುಂ ಬನ್ದು ಪೆರ್ಮಾವಿ ಯಾಸೆ
ರಿದು ಸುಟ್ಟಾ ಮಾತ ಕೇಳ್ದುಬೀರಚೂಳಾಮಣಿ
ಎಳ್ದು ಪಡೆಯಾಜ್ಗೆಲ್ದನ್ದು ಆಪರಾಮುನ್ದೊಪಲಬ
ನ್ನಾಯಕರಾ ಕೋಲಾಹಲಮಾಗೆ ಸುರಿಗೆಯಿನಿರಿದು
ಸತ್ರೊನ್ಯೆಳತಿಯನ್ನಯಮಲ್ಲನಜ್ಯಸ್ತೇಜವಾಗಿ
ಯೆಮ್ಬೋನ್ ಅವಜ್ಞರಸರು ಮೊಸದು ಅವರಾಮಣ್ಣ
ಮೇಗೆ ಕಲ ಎಲೆಮಣ್ಣಲಮೆನ್ಬೊವು ಕಲ್ನಾಡು ಗೊಟ್ಟಾ
ರಿದ ಕಾದೊಡವೊನಾ ಪಾದಮೊಂನ ತತಿಯ ಮೇಗಣಮುಂ
ಅರಿವೊನ್ಪಾರಣಾಸಿಯಾಂ ಸಾಸಿರ್ವ್ವಪ್ಪಾರ್ವರು
ಮಾನ್ಯೊನ್ಪಾ
ಪಜ್ಚಮಹಾಪಾತಕನಕ್ಕುವರ್+

೭

*ಸ್ವಸ್ತಿಶ್ರೀ ವಿಕ್ರಮಾದಿತ್ಯ ಯುವರಾಜರ್ ಪೊರಿಗೆರೆಯಾ
ಮಹಾಜನಕ್ಕುಂ ನಕರಕ್ಕುಂ ಪದಿನೆಣ್ಬುಂ ಪ್ರಕೃತಿಗಳ್ಗುಂ
ಕೊಟ ಅಚಾರ ವ್ಯವಸ್ಥೆ ರಾಜಪುರುಷರ್ಮ್ಮನೆಗಳೊಳ್
ವೀಡಿದಲ್ಲಾದದು ರಾಜದತ್ತಂ ರಾಜಶ್ರಾವಿತಂ ಸಪ್ತಮ
ಮರ್ಯ್ಯಾದೆ ತಾಮ್ರ್ರ ಶಾಸನಂ ಭುಕ್ತಾನುಭೋಗಂ......
ಅಯ್ದುಂ ಧರ್ಮ್ಮದಾ ಜೀವಿತನ್ಗಳಾನ್ಕಾವೊದು
ಇದು ಮಹಾಜನಕ್ಕೆ ನಗರ ಮರ್ಯ್ಯಾದೆ ಮನೆ ವೀಡಿಲ್ಲಾ
ದದು ಓರಾಳ್ಕೆ ಒರ್ಮ್ಮೆ ವೈಶಾಖಮಾಸದುಳ್ ದೇಶಾಧಿ
ಪತಿಗಳಪ್ಪೊಗ್ಗೆ ಕುಡುವ ತೆರೆ ಉತ್ತಮಮಪ್ಪ
ಒಕ್ಕಲ್ಗೆ-ಸಂಪತ್ತು ಪಣಮುಂ ಮಧ್ಯಮಮಪ್ಪ ಒಕ್ಕಲೇ
ಳುಂ ಕನೀಯಸರ್ ಮೂರುಮಂತಪ್ಪ ಒಸಗೆ ಉತ್ಸಾಹ
ಙ್ಗಳ್ಗೆ ಒನ್ದೊಕ್ಕಲೊನ್ದು ಪುಟ್ಟಾಗೆ ಮ. ಚೋರಪಾಕದಣ್ಡ
ದಶಾಪರಾಧಂಗಳಪ್ಪವೆಲ್ಲಂ ಪೂರ್ವ್ವಾಚಾರಂ ಅಪುತ್ರಧನ
ಮೆನ್ಬೊದು ತಾನೆ ಇಲ್ಲಿ ಸೇಣಿಗೆ ಕಾರ್ತ್ತಿಕಮಾಸದು
ಳ್ಕೊಡುವದು ಗುತ್ತಂ ರೂವಮ್ಗೆ ಮಾಘಮಾಸದುಳ್ಕೊ
ಡುವದು ಪಾಣ್ಡಿಸೆಟ್ಟಿ ನಾಲ್ಸಾಸಿರಂ ತಿರ್ಮ್ಮಸಗಡೆಣಕ್ಕೊ
ಪೊಳಲಾನಾಳೆ ಕಜ್ಚಗಾರಸೇಣಿಗೆ ಮನೆ ವೀಡಿಲ್ಲಾದದು
ಉತ್ತಮಪ್ಪ ಒಕ್ಕಲ್ವೆಳ್ದೊಡೆ ಇಪ್ಪತ್ತರ್ಪ ಪಲಂ
ಮಧ್ಯಮಂ ಪದಿನಯ್ದು ಕನಿಷ್ಟಂ ಪತ್ತು ಕನೀಯಸಂ
ಅಯ್ದುಮಂತಪ್ಪ ಒಸಗೆ ಉತ್ಸಾಹಂಗಳ್ಗೆ ಸಮೂಹರಿ
ಒತ್ತೊರ್ಲೆ ತೆಲ್ಲಿಗ ಸೇಣಿಗೆ ಮನೆವೀಡಿಲ್ಲಾದದು
ಕೂಳಿಲ್ಲಾದದು ತೆರೆಯುಂ ಕೆಯುಳ್ಪಾರ್ ಅರೆವಾಡ
ಕೆಯ್ಯಿಲಾದದು''

ಕಾವ್ಯಗುಣ ಗೌರವವನ್ನು ಮೇಲ್ಮಟ್ಟಕ್ಕಿಟ್ಟು, ಕಲೆಯನ್ನು ಹಿನ್ನೆಲೆಯಲ್ಲಿಟ್ಟು, ರಚನಾಕೌಶಲವನ್ನು ಲಕ್ಷ್ಯದಲ್ಲಿಟ್ಟು ಹಲವು ಶಾಸನಗಳನ್ನು ಪರಿಶೀಲಿಸುವಾಗ ನಾವು ತಲೆದೂಗಿಸಬೇಕಾಗುತ್ತದೆ.

1 No. 49 M. A. R. 1923—p. 48
2 Ind. Ant. Vol. X—p. 170 ಪಟ್ಟದಕಲ್
3 No. 2 M. A. R. 1923—p. 83
* No. 4. South Indian Inscriptions Vol. IX—part I
× No. 9. S. I. S. Vol IX—part I
+ No. 20 S. I. I. Vol IX—part I—
* Ep. Ind. Vol XIV—P. 188. No. 14



(ಶ್ರವಣಬೆಳ್ಗೊಳದ ಈ ಶಾಸನ ಪದ್ಯ ನೋಡಿ:

"ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆರವೋಲ್
ಮಂಜುವೋಲ್ ತೋರು ಬೇಗಂ
ಪಿರಿಗುಂ ಶ್ರೀ ರೂಪಲೀಲಾ ಧನವಿಭವ ಮಹಾ
ರಾಶಿಗಳ್ನಿಲ್ಲ ವಾರ್ಗ್ಗಂ
ಪರಮಾರ್ಥಂ ಮೆಚ್ಚೆ ನಾನೀ ಧರಣಿಯುಳಿರ
ವಾನೆನುತ್ತ ಸಂನ್ಯಸನಂಗೆ
ಯ್ದುರು ಸತ್ವನ್ನನ್ದಿಸೇನ ಪ್ರವರ ಮುನಿವರ
ನ್ದೇವ ಲೋಕಕ್ಕೆ ಸನ್ದಾನ್"

ಕ್ರಿಸ್ತಶಕ ಎಂಟು ಮುಗಿದು ಒಂಬತ್ತಾರಂಭವಾಗುವ ಕಾಲದ ಕವಿತೆ ಇದು. ಒಂದು ಪದ್ಯ ಒಂದು ಸುಂದರ ಪರಿಪೂರ್ಣ ಚಿತ್ರ. ಕಲೆಯುಂಟು, ಕಾವ್ಯವುಂಟು; ಜೀವವುಂಟು, ಜೀವನದರ್ಶನವುಂಟು.

ಕಡಪ ಜಿಲ್ಲೆ ಜಮ್ಮಲಮಡುಗು ತಾಲ್ಲೂಕಿನಲ್ಲಿ ದಾಸಮುಲಪಾಡೆಂಬ ಗ್ರಾಮವೊಂದಿದೆ. ಅಲ್ಲೊಂದು ಕನ್ನಡ ಶಾಸನ. ಆ ಶಾಸನಗಂಬವೀಗ ಮದರಾಸು 'ಮ್ಯೂಜಿಯಂ'ನಲ್ಲಿದೆ. ಹತ್ತನೆಯ ಶತಮಾನಾಂತ್ಯವೀ ಶಾಸನದ ಕಾಲವೆಂದು ಹೇಳಬಹುದು. ಶಾಸನವನ್ನು ಬರೆದವನು 'ಅನುಪಮ ಕವಿಯ ಸೇನಬೋವಂ ಗುಣ ವರ್ಮಂ'. ದಂಡನಾಯಕ ಶ್ರೀ ವಿಜಯನೆಂಬವನೇ ಅನುಪಮಕವಿ. ಅರಿವಿಂಗೋಜ'ನೆಂಬುದೂ ಅವನ ಬಿರುದು. ಮಹಾ ಪರಾಕ್ರಮಿಯಾಗಿ ರಾಷ್ಟ್ರಕೂಟ ನಿತ್ಯವರ್ಷ ಮುಮ್ಮಡಿ ಇಂದ್ರನ ದಂಡನಾಯಕನಾಗಿದ್ದಿರ ಬೇಕು. ಅಮೋಘವರ್ಷ ನೃಪತುಂಗನ ಕವಿರಾಜ ಮಾರ್ಗದ ಶ್ರೀ ವಿಜಯನೂ ಈ ಶಾಸನದ ಶ್ರೀ ವಿಜ ಯನೂ ಬೇರೆ. ಇವನು ಮಹಾವೀರ ಮಾತ್ರವಲ್ಲದೆ ಮಹಾ ಕವಿಯೂ ಆಗಿದ್ದಂತೆ ಕಂಡುಬರುತ್ತದೆ. ಶಾಸನ ಕವಿ ಗುಣವರ್ಮನು ಹೇಳುವುದನ್ನು ನೋಡಿದರೆ ಶ್ರೀ ವಿಜಯನು ಮಹಾ ಸಾಧಕನೂ ಆಗಿದ್ದಂತೆ ಕಂಡು ಬರುತ್ತದೆ.

"ಅಷ್ಟವಿಧ ಕರ್ಮ್ಮಮೆಲ್ಲಮ
ನಟ್ಟಂಬರಿಗೊಣ್ಡು ಕೊಡಿಪೆನೆಂಬುದೆ ಬಗೆಯಿಂ
ಪುಟ್ಟಿದನುದಾತ್ತಸತ್ವಂ
ನೆಟ್ಟನೆ ವಿಭುದೇನ್ದ್ರವನ್ದ್ಯನರಿವಿಂಗೋಜಂ"
ತಾನರಿದು ತೊರದು ನಟ್ಟನೆ
ಮಾನಿಸವಾಳಾವುದೆಂದು ಸಂನ್ಯಾಸನದೋಳ್
ಮಾನಸಿಕೆ ಗಿಡದೆ ಕೊಣ್ಡೊನ
ನೂನಸುಖಾಸ್ಪದ ಮನಳ್ತಿಯೊಳ್ಶ್ರೀ ವಿಜಯಂ"
"ನಿರ್ಗ್ಗತಭಯ ನೀ ನರಸಂ
ಸರ್ಗ್ಗಮನಾನೊಲ್ಲೆನೆನ್ದು ಪೇಸಿಬಿ ಸುವ್ರ್ವಂ
ಸರ್ಗ್ಗದ ಭೋಗವನುಣ್ಡಪ
ವರ್ಗ್ಗಕ್ಕಡಿಯಿಟ್ಟೊನರಿದೊನನುಪಮ ಕವಿಯಂ"
"ದಣ್ಡಿನ ಸಾಮಗ್ರ್ಯಗೆ ಪರ
ಮಣ್ಡಲಮಲ್ಲಾಡೆ ಸರ್ವ್ವವಿಕ್ರಮ ತುಂಗಂ
ದಣ್ಡಿನ ಬೀರ ಶ್ರೀ ಗೊ
ಳ್ಗಣ್ಡಂ ಶ್ರೀ ದಣ್ಡನಾಯಕಂ ಶ್ರೀ ವಿಜಯಂ"
"ಚಣ್ಡಪರಾಕ್ರಮರದರಿಂ
ಮಣ್ಡಳಿಕರನಟ್ಟಿ ಪಿಡಿದು ಪಳಿಗೊಪ್ಪಿಸುವೊ

ಳ್ಗಣ್ಣಂ ಪ್ರಚಣ್ಣ ನೀ ಭೂ
ಮಣ್ಣಲದೊಳ್ದಣ್ಣ ನಾಯಕಂ ಶ್ರೀ ವಿಜಯಂ"

ಶ್ರೀ ವಿಜಯ ಗುಣವರ್ಮನಂತಹ ಶಾಸನ ಕವಿಗಳು ನೂರಾರು ಮಂದಿ ಈಗಾಗಲೇ ನಮ್ಮ ಕಣ್ಣಿಗೆ ಬಿದ್ದಿದ್ದಾರೆ. ನಮಗೆ ಸಿಗದೆ ಇರುವ, ನಾವು ಓದದೆ ಇರುವ ಶಾಸನಗಳೆಷ್ಟೋ ಇವೆ. ಅವುಗಳಲ್ಲಿ ಇನ್ನೆಷ್ಟು ಮಂದಿ ಕವಿಗಳಿರುವರೋ ಬಲ್ಲವರು ಯಾರು?

ಕನ್ನಡ ಶಿಲಾಶಾಸನಗಳು ಹಲವಾದರೂ ಮಹಾ ಕಾವ್ಯಗಳಂತಿವೆ. ಸಂಪ್ರದಾಯಕ್ಕೆ ಕಟ್ಟುಬಿದ್ದು ವಿಸ್ತಾರವಾಗಿ ಬರೆದ ಕಾವ್ಯ ಗುಣವೊಂದು ಜಾತಿಯದಾದರೆ ಶಾಸನ ಕಾವ್ಯದ ಜಾತಿಯೇ ಬೇರೆ. ಸಣ್ಣ ಅವಕಾಶವೊಂದರಲ್ಲಿ ಕವಿಯು ತನ್ನ ಕರ್ಮ ಕೌಶಲವನ್ನು ತೋರಿಸುತ್ತಾನೆ. ಪ್ರಬಂಧ ವಿಸ್ತಾರ ಭಯದಿಂದ ಹಲವು ಶಾಸನಗಳನ್ನು ಮಾತ್ರ ವಾಚಕರ ಲಕ್ಷ್ಯಕ್ಕೆ ತರುತ್ತೇನೆ. ಮತ್ತು ಮಾದರಿಗಾಗಿ ಹಲವು ಶಾಸನ ಭಾಗಗಳನ್ನು ಉದಹರಿಸುತ್ತೇನೆ.

ಕವಿ ರವಿಚಮೂಪನ ಶಾಸನವಿದು. ಗುಲ್ಬರ್ಗಾ (ಹೈದರಾಬಾದ್) ಜಿಲ್ಲೆಯ ಸುರಪುರ ತಾಲ್ಲೂಕಿನ ಯೇವೂರೆಂಬ ಗ್ರಾಮದ ಸೋಮೇಶ್ವರ ದೇವಾಲಯದ ಮಂಟಪದ ಬಳಿಯ ಕಲ್ಲಿನ ನಾಲ್ಕು ಮುಖದಲ್ಲಿ ಈ ಶಾಸನವನ್ನು ಕೆತ್ತಿದ್ದಾರೆ. ೨೮೩ ಪಾದಗಳ ದೊಡ್ಡ ಶಾಸನವಿದು. ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ (ಕ್ರಿ. ಶ. ೧೦೭೭) ಬರೆದುದು. ರವಿಚಮೂಪನು ಬ್ರಾಹ್ಮಣ. ಆಹವಮಲ್ಲ ಸೋಮೇಶ್ವರನ ಲಾಳ ಸಂಧಿ ವಿಗ್ರಹಿಯಾಗಿದ್ದ. ಇಮ್ಮಡಿ ಸೋಮೇಶ್ವರನಿವನನ್ನು ಹಿರೆ ಸಂಧಿವಿಗ್ರಹಿಯನ್ನಾಗಿ ಮಾಡಿದ. ಆರನೆಯ ವಿಕ್ರಮಾದಿತ್ಯನಿವನಿಗೆ ರಾಜಲಾಂಛನಗಳನ್ನೆಲ್ಲ ಕೊಟ್ಟು ಬಹುಮಾನಿಸಿದ. ಶಾಸನ ಲೇಖಕನೇನು ಸಾಮಾನ್ಯ ಕವಿಯಲ್ಲ. ಒಬ್ಬ ಕವಿ ಇನ್ನೊಬ್ಬ ಕವಿಯನ್ನು ವರ್ಣಿಸುವ ಬಗೆ ಸ್ನೇಹದ ಬಗೆ, ಉತ್ಸಾಹದ ಬಗೆ.

"ಕವಿತಾಕಲ್ಪಲತಾಪ್ರರ್ಣಕ್ಕೆ ಸುರಭೂಜಂ
ಶಬ್ದವಿದ್ಯಾಪಯೋ
ಬ್ಧಿವಿಳಾಸಕ್ಕಮೃತಾಂಶು ತರ್ಕ್ಕವಿಮಳ
ವ್ಯೋಮ ಪ್ರಕಾಶಕ್ಕೆ ಭಾ
ನುವಿಶುದ್ಧಾಗಮ ತತ್ವಕೇಳಿ ಸದನೋ
ದ್ಯೋತಕ್ಕೆ ರತ್ನಪ್ರದೀ
ಪವೆನಿಪ್ಪಂ ಕುಳ ದೀಪಕಂ ರವಿ ಚಮೂಪಂ
ಬಂಧು ಕಲ್ಪದ್ರುಮಂ

"ಅನುಮಾನಕ್ಕೆಡೆಯಿಲ್ಲ ಬಾಜಿಪೊಡೆ
ರೇಖಾಶುದ್ಧಾ ಬೇರೊಂದೆ ಭಿ
ತ್ತಿನಿಯಂ ಚಿತ್ರೈಸೆದಪ್ಪವೀ ನಿಮಿಳ್ದ
ಚಂಚನ್ಮಾತ್ರೆಗಳ್ಪದ್ಮಗ
ರ್ಭಸುಮೇಂ ಬಲ್ಲನೆ ಪೇಳಿ ಮಿನ್ನು ಬರೆಯ
ಲ್ಕೇಬನ್ನೆಗಂ ಶಾನೆ ದೆ
ಟ್ಟನೆ ಬಲ್ಲಂ ಬರೆಯಲ್ಕನೇಕ ಲಿಪಿಯಂ
ಶ್ರೀ ವಿಪ್ರವಿದ್ಯಾಧರಂ

"ಇದು ನವಮಧು ಧಾರಾ ಸಾರವೋ
ಮೇಣ್ಸುಧಾಂಭೋ
ನದಿಯೋ ಕವಿವುದೆಂ ಬೊಂದಂದದಿಂ ನುಣ್ಪನಿಂಪಂ
ಪುದಿದು ರವಿ ಚಮೂಪಂ ಬಾಜಿಪೊನ್ವೋಜೆ ಪೇಳೇ
ನೊದವಿಸುಗುಮೋ ಕರ್ಣ್ನಾನಂದಮಂ ಧಾತ್ರಿಗೆಲ್ಲಂ

"ಮಂಸವೊಲ್ದನ್ದದಿ ನಣ್ಣಬಣ್ಣಿಸಲದಾರ್ಗ್ಗಂ ಸಾಲದೇ
ಬಾಪ್ಪುಶಿ
ಷ್ಟನಿಧಾನಂ ರವಿದೇವನಿಳ್ದ ಭುವನಂ
ಲಕ್ಷ್ಮೀಶನಿಳ್ದಂಬು ರಾ
ಶಿನಿಳಿಂಪದ್ರುಮಮಿಳ್ದ ನನ್ದನವನಂ ತಾರೇಶನಿಳ್ದಂಬರಂ
ವನಜಾತಪ್ರಿಯ ನಿಳ್ದಪೂರ್ವಕಂಧರಂ
ದೇವೇನ್ದ್ರನಿಳ್ದಾಸ್ಪದಂ

"ಇದು ಕಲಿಕಾಲದನ್ದಮಣಮಲ್ಲದು ಧರ್ಮದ
ಬಳ್ಳಿ ಕೊಡೆಪ
ರ್ವಿದುದು ಮತಾಂಕುರಂ ಬಳೆದು ಪಲ್ಲವಿಸಿತ್ತು
ಪರೋಪಕಾರಸ
ಸ್ಯದ ತೆನೆ ಕಾಣಲಾದಪುದು ದಾನಘನಂ
ಕರೆದಪ್ಪುದಣ್ಣ ನೋ
ಡಿದು ರವಿದೇವನೆಂಬ ಪುರುಷೋತ್ತಮನಿಳ್ದ
ಧರಿತ್ರಿಯಾಗದೇ

"ಸುಡಿಜಳರೇಖೆ ಶೌಚಗುಣದೆಳ್ಪದು ತಾರಕಹೀರ ಕೆಂಚಲಿ
ನ್ನಡೆವನೆಗಳ್ತೆಗಾಂಪ ಪತಿಭಕ್ತಿ ಕೆಲಕ್ಕುಪಚಾರವೊಳ್ಪಡಂ
ಬಡುಚದು ರೆಕ್ಕಸೆಕ್ಕಮರಿತಂ ಮೊಲಗತ್ತರ್ತಿಯಾಗಿ
ವರ್ತಿಪೀ
ಗಡಿನವರಂ ಪಳಂಚಲೆವುದುದ್ಭಗುಣಂ ರವಿದಣ್ಡನಾಥನಾ

"ಅದು ಲೋಕೋತ್ತರವೊಪ್ಪದೇ ಪೊಗಳಲಾರ್ಗ್ಗಂ
ಬಾಪ್ಪುಹಂಕಾರ ಮಿ
ಲ್ಲದ ನಿತ್ಯೋನ್ನತಿ ಮಿಥ್ಯೆಯಿಲ್ಲದರಿವನ್ಯ ಸ್ತ್ರೀರತಾಸಕ್ತಿಯಿ
ಲ್ಲದ ಶೌಚವ್ರತ ಮಾನಮಿಲ್ಲದೆಸಕಂ ಪೊಳ್ಳಿಲ್ಲದಾ
ಪ್ಪಾಗ್ಗಮಂ
ಜದ ವಿದ್ಯಾಮಹಿಮೋದಯಂ ಭುವನದೊಳ್ಸ್ರೀವಿ
ಪ್ರಮಾಣಿಕ್ಯನಾ

''ಇದು ನೋಡಚ್ಚರಿ ನೋಡೆನೋಡೆ ಶಶಿಯಿಂದತ್ತತ್ತ
ತಾರಾಸಮೂ
ಹದಿನತ್ತತ್ತ ಕುಳಾದ್ರಿಸಂಕುಳದಿನತ್ತತ್ತಣ್ಣರ್ವಾನೀಕ ತೀ
ರದಿಗತ್ತತ್ತದಿಶಾಗಜೋತ್ಕರದಿಗತ್ತತ್ತಬ್ಜಗರ್ಭಾಣ್ಡಖ
ಣ್ಡದಿನತ್ತತ್ತಪೊದಳ್ಪನಿಳ್ಪುದು ಜಸಂ ಶ್ರೀವಿಪ್ರಮಾಣಿಕ್ಯನಾ
ಎನಿತೆನಿತೆ ಲಕ್ಷ್ಮಿ ಪೆರ್ಚುಗು
ಮನಿತನಿಲಕ್ಷ್ಮಿ ತೊಳ್ಗುಣಮೆ ಕಿಡುಗು ಮುಳಿದೊರ್ಗ್ಗನ್ತ
ಲ್ತೆನಿತನಿತು ಲಕ್ಷ್ಮಿ ಪೆರ್ಚ್ಚುಗು
ಮನಿತನಿ ತೊಳ್ಗುಣಮನಲ್ತೆ ರವಿಗಂ ತಳೆದಂ''

ಬಳ್ಳಾರಿ ಜಿಲ್ಲೆಯ ಕುರುಗೋಡಿನ ಶಾಸನವೊಂದನ್ನು ಗಮನಿಸಬೇಕು. ಹನ್ನೆರಡನೆಯ ಶತಮಾನಕ್ಕೆ ಸಂಬಂಧಪಟ್ಟದ್ದು. ಸಂಸ್ಕೃತ, ಪ್ರಾಕೃತ, ಕನ್ನಡ ಮೂರು ಭಾಷೆಗಳನ್ನೀ ಶಾಸನದಲ್ಲಿ ಬಳಸಲಾಗಿದೆ. ಪ್ರಾಕೃತ, ಸಂಸ್ಕೃತ, ಕನ್ನಡ ಈ ಮೂರು ಭಾಷೆಗಳೂ ಹೇಗೆ ಒಂದರಲ್ಲೊಂದು ಬೆರೆತುಕೊಂಡು ಬಂದುವು; ಕನ್ನಡ ಭಾಷೆ, ಶಬ್ದ ಸಂಪತ್ತಿ, ವಾಕ್ಯರಚನೆ ಇವುಗಳ ಮೇಲೆ ಪ್ರಾಕೃತ ಪ್ರಭಾವವೆಷ್ಟು ಪ್ರಮಾಣದ್ದಿತ್ತು; ಎಲ್ಲಿಯ ವರೆಗಿತ್ತೆಂಬ ಅಂಶ ವಿಮರ್ಶೆ ಅತ್ಯವಶ್ಯಕವಾಗಿದೆ. ಅಂತಹ ಅಧ್ಯಯನಕ್ಕೆ ಈ ಶಾಸನವು ಬಹಳ ಮಟ್ಟಿಗೆ ಸಹಾಯ ಮಾಡುತ್ತದೆ. ಆರಂಭಕಾಲದ ಕನ್ನಡ ಪದ್ಯದಲ್ಲಿ ಪ್ರಾಕೃತವನ್ನು ವಿಶೇಷವಾಗಿ ಬೆರಿಸುವ ಸಂಪ್ರದಾಯವಿತ್ತು.

''ಗೋರೀ ತೀಣತ್ಥಣತತ್ಥತ್ಥಗಿದೆ ಘಸಿಣ
ದಿಣ್ಣೆಕ್ಕವಣ್ಣೊಗ್ಘವಚ್ಛೋ
ಕಂದಪ್ಪೋದಪ್ಪ ವಿಪ್ಪಾಳಣ ಣಿಅಣಿಮಣೋ
ವಿಚ್ಛುರನ್ತತ್ತಿ ಅಚ್ಛೋ
ಗಿಬ್ಬಾಣೊಕ್ಕೇರರಕ್ಖೋ ತಿಹುವಣ ಭವಣ
ರಂಭ ಸಂಭಸ್ತಂಭೋ
ಳಚ್ಛೀಣಹಪ್ಪಿಯೋಸೋ ಜ ಆಇಸ ಇಜ
ಏಣಂಪು ಸಂಭೂ ಸಯಂಭೂ''

ಬೆಳಗಾಂವಿ ರಟ್ಟ ಜಿನಾಲಯ ಶಾಸನಗಳು ಕನ್ನಡದ ಪುಟ್ಟ ಕಾವ್ಯಗಳಂತಿವೆ. ಆ ಕಾವ್ಯ ಬರೆದವನಾದರೋ!

''ಒದವಿಂದೀ ಧಾತ್ರಿಯೆಲ್ಲಂ ಮಿಗೆ ಪೊಗಳೆ
ಚಿರಂ ವರ್ತ್ತಿಸುತ್ತಿರ್ಕ್ಕೆ ನಿತ್ಯಾ
ಭ್ಯುದಯ ಶ್ರೀ ಕಾರ್ತ್ತವೀರ್ಯ್ಯಕ್ಷಿತಿಪ ವಿಪುಳ
ಸಾಮ್ರಾಜ್ಯ ಸಂತಾನ ಮುರ್ವ್ವೀ
ವಿದಿತ ಶ್ರೀ ಬೀಚಿರಾಜ ಪ್ರಥಿತವಿಪುಳ ಶಾಂತೀಶ
ರಾವಾಸ ಧರ್ಮ್ಮಂ
ಸದಲಂಕಾರ ಸ್ಫುಟಾರ್ಥನ್ವಿತಪದಕವಿ
ಕಂದರ್ಪ ಸುವ್ಯಕ್ತ ಸೂಕ್ತಂ''

''ದೋಷವ್ಯತೀತಾರ್ಥವಿ
ಶೇಷಮಿದೆನೆ ಪೇಳ್ದನೊಲ್ದು ಶಾಸನವಂ ಪೀ
ಯೂಷ ಸಮಸೂಕ್ತಿ ಚಾತು
ರ್ಭಾಷಾ ಕವಿಚಕ್ರವರ್ತ್ತಿ ಕವಿಕಂದರ್ಪ್ಪಂ''

ಕವಿಕಂದರ್ಪನು 'ಶ್ರೀಮನ್ಮಾಧವ ಚಂದ್ರತ್ರೈವಿದ್ಯ ಚಕ್ರವರ್ತಿ ವಾಕ್ಸುಧಾರಸನಾಭ್ಯುದಿತ ನಿತ್ಯಸಾಹಿತ್ಯ ಕಮಲವಸನಮರಾಳಂ'. ಸೌಂದತ್ತಿಯ ರಟ್ಟವಂಶದ ನಾಲ್ಕನೆಯ ಕಾರ್ತವೀರ್ಯನ ಕಾಲದಲ್ಲಿ (ಕ್ರಿ. ಶ. ೧೨೦೪) ಬರೆದ ಶಾಸನ. ಕಾರ್ತವೀರ್ಯನೂ ಅವನ ಮಂತ್ರಿ ಬೀಚಿ ರಾಜನೂ ಮಾಡಿದ ದಾನಗಳನ್ನು ಕುರಿತು ಈ ಶಾಸನವು ಹೇಳುತ್ತದೆ. ಅದೇ ಸ್ಥಳದ ಮತ್ತೊಂದು ಶಾಸನ ಕರ್ತೃವೂ ಸಹ ಬಾಳಚಂದ್ರನೇ.

''ಪ್ರಹತಾರಿಬ್ರಜ ಕಾರ್ತ್ತವೀರ್ಯ್ಯಸಚಿವಂ
ಶ್ರೀ ಬಾಚಿರಾಜಂ ಯಶೋ
ಮಹಿತಂ ಪೇಳೆಮೆನಲ್ಕೆ ಶಾಸನಮನೊಳ್ಪಿಂ
ಬಾಳಚಂದ್ರಂ ಗುಣ
ಗ್ರಹಿವಿದ್ವಜ್ಜನಸಮ್ಮತಸ್ಫುಟಪದಾರ್ಥಾ
ಲಂಕ್ರಿಯಾ ಸಂಕುಳಾ
ಪಹಮಪ್ಪಂತಿರೆ ಪೇಳ್ದನಿನ್ತು ಕವಿಕಂದರ್ಪ್ಪಂ
ಬುಧಾಧೀಶ್ವರಂ''

''ಪ್ರಕಟ ಶ್ರೀನಿಧಿ ಬೀಚಣಂ ಕುಲಗೃಹಂ
ಶೀಲಕ್ಕೆ ಲೀಲಾಶ್ರಯಂ
ಸುಕೃತಕ್ಕುದ್ಭವ ಮಂದಿರಂ ಸಿರಿಗೆ
ಸೇವಾಸ್ಥಾನಕಂ ಸದ್ಗುಣ
ಕ್ಕೆಕಳಾಭ್ಯಾಸಪದಂ ಸರಸ್ವತಿಗೆ
ಸಂಚಾರಾಲಯಂ ಧರ್ಮಕಾ
ರ್ಯ್ಯಕಲಾಪಕ್ಕಭಿವೃದ್ಧಿಗೇಹಮಮಳಾ
ಚಾರಕ್ಕೆನಲ್ ರಂಜಿಪಂ''

''ಅನವದ್ಯೋಕ್ತಿ ವಿನೂತವಾಸಿಗುಪದೇಶಂ
ಚಾಗಮುಸ್ವಪ್ನ ಭೂ
ಜನಿಕಾಯಕ್ಕತಿ ವಿಸ್ಮಯ ಸ್ಥಿತಿಕರಂ
ಜೈನಕ್ರಮಾಂಭೋಜ ಪೂ
ಜನವ್ಯೇಂದ್ರ ಧ್ವಜವಿಭ್ರಮ ಶ್ರುತಿಲಸತ್ಕಂ
ವಾದಿಯೆಂದಂದನಿಂ
ದ್ಯನಯ ಶ್ರೀಕರಣಪ್ಪಣಂಗೆ ದೊರೆಯಾರೀ
ಧಾತ್ರಿಯೊಳ್ಧಾರ್ಮ್ಮಿಕರ್''

ಅನುಪಮವಿದ್ಯೆಗುದ್ಭವಿನಯಂ ಸಿರಿಗೊಪ್ಪುವ
ಚಾಗದೇಳ್ಗೆ ಚಾ

ವ್ವನಕೆ ವಿನಿರ್ಮ್ಮಳಾಚರಣ ಪರಾಯುಗೆ
        ವಿಶ್ರುತ ಕೀರ್ತ್ತಿವಾಕ್ಯವ
ತ್ತಸೆಗೆ ಋತೋಕ್ತಿ ತನ್ನೆಸಕದಿಂ
        ಮಂಡನವಾಗೆ ವರ್ತ್ತಿಪಂ
ಜನಪತಿ ಕಾರ್ತ್ತವೀರ್ಯ್ಯ ಸಚಿವೈಕ
        ಶಿರೋಮಣಿ ಬೀಚನುರ್ವ್ವಿಯೊಳ್''
''ಇದು ತಾಂ ಶ್ರೀಕರಣಪ್ರಣಗ್ರಸುತ ಸ
        ತ್ಪುಣ್ಯಪ್ರಭಾಜಾಳದಿಂ
ನ್ನಿದು ರಟ್ಟಕ್ಷಿತಿಪಾಳಮಂತ್ರಿಯ ರಮಾ
        ಸ್ಮೇರಾವಲೋಕಾಂಶು ಮ
ತ್ತಿದುದಲ್ ಧಾರ್ಮ್ಮಿಕ ಚಕ್ರವರ್ತ್ತಿಯ
        ದಯಮುಗ್ಧಾಬ್ಧಿ ವೀಚೀಸಮು
ಳ್ಳುದಯನ್ನಾನೆನೆ ಬೀಚಿರಾಜನಯಶಂ
        ಪರ್ವ್ವಿತ್ತು ಮುಲೋಕಮಂ''

ಹಂಪೆಯ ಮಧ್ಯ ಮಾರ್ಗದ ಕೃಷ್ಣದೇವಾಲಯದ ಬಳಿಯ ಮಂಟಪವೊಂದರಲ್ಲಿ ಕ್ರಿ. ಶ. ೧೪೧೦ರಲ್ಲಿ ಬರೆದ ಶಿಲಾಶಾಸನವೊಂದಿದೆ. ಇಮ್ಮಡಿ ದೇವರಾಯನ ಮಹಾಪ್ರಧಾನ ದಂಡನಾಯಕ ಲಕ್ಷ್ಮೀಧರನು ಪಂಪಾ ಕ್ಷೇತ್ರದ ಮಾಲ್ಯವತ್ಪರ್ವತದ ತೆಂಕಣ ದೆಸೆಯ ಗುಹೆಯೊಂದರಲ್ಲಿ ಮಹಾ ಗಣನಾಥನ ಪ್ರತಿಷ್ಠೆ ಮಾಡಿದ ನೆಂಬಂಶವು ಈ ಶಾಸನದಿಂದ ತಿಳಿದುಬರುತ್ತದೆ.

ಈ ಶಾಸನವು ಕನ್ನಡ ಸಾಹಿತ್ಯ ದೃಷ್ಟಿಯಿಂದಲೂ ಇತಿಹಾಸ ದೃಷ್ಟಿಯಿಂದಲೂ ಅಮೂಲ್ಯವಾದುದು. ಈ ಶಾಸನದ ಕವಿ ಮಧುರ, 'ಕವೀಂದ್ರ ಭರಣ ಮಧುರ.' ಈ ಕವಿಯನ್ನು ಕವಿಚರಿತ್ರೆಕಾರರಾಗಲೇ ಗುರುತಿಸಿದ್ದಾರೆ. ಇವನು 'ಬುಕ್ಕರಾಯನ ಸುತ ಹರಿಹರರಾಯನ ಪ್ರಧಾನನಾದ ಮುದ್ದದಂಡೇಶ್ವರ'ನ ಪೋಷಣೆಗೆ ಒಳಗಾಗಿದ್ದುದು ಮಾತ್ರವಲ್ಲದೆ ಹರಿಹರನ ಆಸ್ಥಾನ ಕವಿಯೂ ಆಗಿದ್ದನೆಂದು ಹೇಳಲಾಗಿದೆ. ಮಧುರನಿಗೆ "ಕಲಾವಿಲಾಸ, ಕವಿರಾಜ ಕಲಾವಿಲಾಸ, ಕವಿಮಾಧವ, ಮಧುರ, ಮಾಧವ, ಸರಸಕವಿ ರಸಾಲವಸಂತ ಭಾರತ ಮಾನಸ ಕೇಳೀ ರಾಜಹಂಸ, ವಿಶ್ವವಿದ್ಯಾಸಮುದಯ, ಸುಮನಸ್ಸಂಚರ ಚಂಚರೀಕ" ಮುಂತಾದ ಬಿರುದುಗಳಿದ್ದುವೆಂದೂ ಕವಿಚರಿತ್ರೆಕಾರರು ಹೇಳಿದ್ದಾರೆ. ಹಂಪೆಯ ಶಾಸನವನ್ನು ರಚಿಸಿದವನೂ ಸಹ ಇದೇ ಮಧುರನೆಂಬುದನ್ನು ಸಕಾರಣವಾಗಿ ನಾನು ತೋರಿಸಿದ್ದೇನೆ.*

ಲಕ್ಷ್ಮೀಧರ ಇಮ್ಮಡಿ ದೇವರಾಯನ ಮಹಾಪ್ರಧಾನ. ಇವನನ್ನು ಮಧುರನು ಸತ್ಕವೀಂದ್ರ, ಕವಿತಾ ಕಲ್ಪವಲ್ಲೀವಿತಾನ, ಕವಿರಾಜ ಲಕ್ಷ್ಮಣ, ಕವಿತಾ ಲಕ್ಷ್ಮೀಧರ ಎಂದನೇಕ ಬಗೆಯಾಗಿ ವರ್ಣಿಸಿದ್ದಾನೆ. ಅಂದ ಮೇಲೆ ಲಕ್ಷ್ಮೀಧನೂ ಸಹ ಒಬ್ಬ ಮಹಾಕವಿಯಾಗಿದ್ದಿರಬೇಕೆಂದು ಹೇಳಬೇಕಾಗುತ್ತದೆ. ಈತನು ಬರೆದ ಕಾವ್ಯಗಳ ವಿಚಾರವೊಂದೂ ನಮಗೆ ಗೊತ್ತಿಲ್ಲವಾದರೂ

''ಸಾರಶ್ರೀ ನೀತಿವಾಕ್ಯಾಮೃತ ಪರಿಸರದೊಳ್ಪುಟ್ಟಿ
        ಮೆಯ್ಯುಂದ ದಾನಂ
ದಾರಾಮಾಸಂಗ ರಾಮಾಯಣದೊಳಮುರ್ದು
        ತಳ್ತಾವಗಂ ಕೃಷ್ಣಲೀಲಾ
ಧಾರಂ ತಾನಾಗಿ ನಾನಾಫಲಮುನಿಳೆಗೆ ಬೀರಿತ್ತು
        ಸಂಸಾರ ಸೌಖ್ಯಾ
ಕಾರಂ ಸನ್ಮಂತ್ರಿ ಲಕ್ಷ್ಮೀಧರನುರುಕವಿತಾ
        ಕಲ್ಪವಲ್ಲೀ ವಿತಾನಂ''

ಎಂಬೀ ಶಾಸನ ಪದ್ಯದಿಂದ ಲಕ್ಷ್ಮೀಧರನು 'ನೀತಿವಾಕ್ಯಾಮೃತ'ವೆಂಬ ನೀತಿ ಶಾಸ್ತ್ರ ಸಂಬಂಧವಾದ ಕೃತಿಯನ್ನೂ, 'ಆನಂದ ರಾಮಾಯಣ'ವೆಂಬೊಂದು ಮಹಾಕಾವ್ಯವನ್ನೂ 'ಕೃಷ್ಣಲೀಲಾ' ಎಂಬೊಂದು ನಾಟಕವನ್ನೂ ರಚಿಸಿರಬಹುದೆಂದು ಊಹೆ ಮಾಡಬಹುದಾಗಿದೆ. ಅದೇನೇ ಆಗಲಿ ಲಕ್ಷ್ಮೀಧರನು ಮಹಾಕವಿ. ವಿದ್ವಜ್ಜನರಿಂದ 'ಬಾಪುರೆ ಬಾಪು' ಎಂದೆನಿಸಿಕೊಂಡು ಬಾಳಿದವ.

''ಗಣನಾಮಾತ್ರಮೆ ದೇವರಾಯುಗರನಾಥಾ
        ಸ್ಥಾನದೊಳ್ಮಾನಪಾ
ಗ್ರಣಿಗಳ್ಸುತ್ತೆ ವಿಚಾರಿಪಾಗಳುಪಧಾಸಂಶು
        ದ್ಧಿಯಿಂ ಬುದ್ಧಿಯಿಂ
ಗುಣದಿಂ ಗೌರವದಿಂ ಪೊದಳ್ಪಿಸೆವ
        ಮುಖ್ಯಾಮಾತ್ಯ ಯೋಗಂಧರಾ
ಯಣ ಚಾಣಾಕ್ಯ ಸುಮಂತ್ರರೊಳ್ದೊ
        ರೆಗೆ ವಂದಂ ಮಂತ್ರಿಲಕ್ಷ್ಮೀಧರಂ''
ಗುರುದ್ಯೆವಂ ಮೆಚ್ಚೆನಿಚ್ಚಂ ಬಗೆದಣಿವ
        ಮನೋಭಕ್ತಿ ವಿದ್ವಜ್ಜನಂ ಬಾ
ಪುರೆಬಾಪೆಂದೆತ್ತಿ ಕೊಂಡಾಡುವ ವಿವಿಧ
        ಕಳಾಪ್ರೌಢಿವಂದಿವ್ರಜಂ ಕಂ
ಡಿರದಿಷ್ಟಾರ್ಥಂಗಳಂ ಕೊಂಡಡರೆ ಪೊಗಳ್ವ
        ವಿಶ್ರಾಣನಂ ವಿಶ್ವವಂದ್ಯಂ

* Kannad Poets mentioned in Inscriptions. No. B Memoirs of the Archaeological Survey of India 1924.

ಚರಿತಂ ತಾನಾಗಲೇನುನ್ನತಿವಡೆದನೋ
        ಲಕ್ಷ್ಮೀಧರಾಮಾತ್ಯವರ್ಯಂ
ಪೊಗಳಲ್ಕೊಂಬುಳಿಯೋದ ಪೆಂಪಿನ
        ಯಶೋಲಕ್ಷ್ಮೀಧರಂ ಬಲ್ಲವ
ರ್ಬ್ಬಗೆಗೊಳ್ವಿಂಪಿನ ಸೊಂಪುವೆತ್ತ ಕವಿತಾ
        ಲಕ್ಷ್ಮೀಧರಂ ರಾಜನೀ
ತಿಗೆನೇರ್ಪ್ಪಡ ಮಹಾಪ್ರಧಾನಪದವೀ
        ಲಕ್ಷ್ಮೀಧರಂ ಧಾತ್ರಿಯೊಳ್
ನೆಗಳ್ದಂ ನಿರ್ಮ್ಮಲ ರಾಮಚಂದ್ರ ತನಯಂ
        ಸನ್ಮಂತ್ರಿ ಲಕ್ಷ್ಮೀಧರಂ"
ಶ್ರೀ ರಾಮಂ ತಂದೆ ದೇವೋತ್ತಮ ದಶರಥ
        ರಾಮಂ ಮನೋದೈವಮಾನಂ
ದಾರಾಮಂ ರೂಢಿವೆತ್ತಗ್ಗದ ಕುಲಗುರು
        ವೆಂದಂತೆ ಪೋಷಿಪ್ಪದೇನಿಂ
ನಾರಂ ಸಿಂಗಾಂಬಿಕಾ ಮಂಗಳ ಜಠರಸುಧಾ
        ವಾರ್ಧಿಸಂಜಾತನಂ ತಾ
ನಾರಾಮಂ ಲಕ್ಷ್ಮಣ ಮಾತ್ಯನೆ ಸಕಲ
        ಜಗಜ್ಞಾತ ಚೇತೋಭಿರಾಮಂ

ಈ ಸಿಂಗಾಂಬಿಕೆ ಅಥವಾ ಸಿಂಗಲೆ 'ಬಲಭದ್ರಾಚ್ಯುತ'ರಂತಿದ್ದ ಮಾದರಸ ಸಾಯಣರೆಂಬ ಪ್ರಧಾನರಿಬ್ಬರ ತಂಗಿ. ಈಕೆಯನ್ನೂ ಕವಿ 'ಸುಭದ್ರೆಯೆನಿಪುದು ಪಿರಿದೆ' ಅನ್ನುತ್ತಾನೆ. ಈ ಸಿಂಗಲೆಯ ಪುತ್ರ ಅಥವಾ ವಿದ್ಯಾರಣ ಸಾಯಣರ ಸೋದರಳಿಯ ಲಕ್ಷ್ಮೀಧರ! ಅಮೂಲ್ಯವಾದ ಐತಿಹಾಸಿಕ ಅಂಶವಿದು. ಈ ಲಕ್ಷ್ಮೀಧರನನ್ನು ಮಧುರನು ಹೀಗೆ ವರ್ಣಿಸಿದ್ದಾನೆ:

"ಕಂನಡಿಗಕುಲಕೆ ರಂನದ
ಕಂನಡಿಯೆನೆ ವಿಶ್ವವಿದಿತವೃತ್ತ ಶ್ರೀಸಂ
ಪಂನಂ ಲಕ್ಷ್ಮೀಧರದೇ
ವಂ ನಿರ್ಮ್ಮಲನಾಗಿ ನೆಗಳ್ದ ನೊಳಗಂ ಪೊರಗಂ"

ವಿದ್ಯಾರಣ್ಯ ಸಾಯಣರು ಕನ್ನಡಿಗರೋ, ತೆಲುಗರೋ, ತಮಿಳರೋ ಎಂಬ ಪ್ರಶ್ನೆಗೆ ಕಡೆಯ ಉತ್ತರ ವಿಲ್ಲಿ ಸಿಕ್ಕಂತಾಯಿತು. ಐತಿಹಾಸಿಕ ದೃಷ್ಟಿಯಿಂದ ಬೆಲೆ ಕಟ್ಟಿ ನೋಡುವಾಗ ಈ ಅಂಶವು ಅತ್ಯಮೂಲ್ಯವಾದುದೆಂದು ಒತ್ತಿ ಹೇಳಬೇಕಾಗಿಲ್ಲ.

ಕವಿ ಮಧುರನು 'ಕರ್ನಾಟ ಲಕ್ಷ್ಮಣ ಪಾದ ಸರೋಜನು' ತನ್ನೊಡೆಯನಾದ ಇಮ್ಮಡಿ ದೇವರಾಯನನ್ನೂ ಲಕ್ಷ್ಮೀಧರನನ್ನೂ ಅಪೂರ್ವ ರೀತಿಯಿಂದ ವರ್ಣಿಸಿ ಅವರ ಗುಣಗಾನ ಮಾಡಿದ್ದಾನೆ.

"ಸಲೆ ನಾನಾ ಸಸ್ಯಸಂಪತ್ತಿಯನೊದವಿಸಿ
        ಸಂತುಷ್ಟಿಯಂ ದಾನಧಾರಾ
ಜಲದಿಂ ಸಂತಾಪಮಂ ತಳ್ಗಿಸಿ ವಿತತಸಿತ
        ಚ್ಛತ್ರಸುಚ್ಛಾಯೆಗೊಯ್ದು
ಜ್ವಲಿಪಾಜ್ಞಾದಾಮದಿಂದಂ ನಿಯಮಿಸಿ ನಿಜ
        ದೋಸ್ತಂಭದೊಳ್ಕಟ್ಟಿ ಗೋಮಂ
ಡಲಮಂ ಸತ್ಕೀರ್ತಿದುಗ್ಧಂಗರೆದ
        ನರಕೆಯಿಂ ದೇವರಾಜಾವನೀಂದ್ರಂ

ಲಕ್ಷ್ಮೀಧರನನ್ನು ಕುರಿತ ಮಧುರನ ಸವಿ ನುಡಿಗಳಿವು:

"ಸುಮನೋವಿನ್ಯಾಸದಿಂ ವಿಶ್ರುತ ವಿಬುಧ
        ಜನಾನೂನ ಸನ್ಮಾನದಾಸ
ಕ್ರಮದಿಂದೀ ರಾಮಚಂದ್ರಾತ್ಮಜ ಸಚಿವ
        ಶಿರೋರತ್ನ ಲಕ್ಷ್ಮೀಧವಂಗಾ
ರ್ಸಮ ರೆಂದಾಸಳ್ಕರಿಂ ಕೇಳ್ದೊಡೆ ಬಿಡು
        ಪೊಸತೇಂ ಪೋಗಿಯುಂ ಬಂದು ಕಲ್ಪ
ದ್ರುಮವೊಂದಂ ಪೇಳ್ವೆ ಮತ್ತಾಳಿಡೆ ನುಡಿ
        ಜಗತೀ ಚಕ್ರದೊಳ್ಸತ್ಯಮೆಂದಾ"
"ಪುಸಿದಾನಜ್ಜಿರ್ಸುವರ್ಣವೇಂ ಮುನಿದ
        ಕಯ್ಯೊಳ್ವೇಳಿಲೇ ವಂದಿ ವಾ
ದಿಸದಿರ್ವಂಶವಿಶುದ್ಧಿಯೊಳ್ವಿಭಾವದೊ
        ಳ್ವಿಖ್ಯಾತಿಯೊಳ್ನೀತಿಯೊ
ಳ್ಜಸದೊಳ್ಪ್ರಾಜ್ಞತೆಯೊಳತ್ಯುದಾರ ಗುಣದೊ
        ಳ್ಗಾಂಭೀರ್ಯದೊಳ್ಕೂರ್ತುಲ
ಕ್ಷಿಸೆ ಲಕ್ಷ್ಮೀಧರನಲ್ಲದುಂಟೆ ಸಭೆಯೊಳ್
        ಶ್ರೀದೇವರಾಜೇಂದ್ರನಾ"
"ಧರಸೀ ಚಕ್ರಂ ಮನಂಗೊಳ್ಪುದಯ ಮುರುತಮ
        ಸ್ತೋಮಮಂ ಲಾಡುವಾತ್ಮಾ
ಚರಣಂ ಸನ್ಮಾರ್ಗಮುದ್ಯೋತಿಸುವ ರುಚಿ ಸದಾ
        ಲೋಕಮುರ್ವ್ವೆಳ್ವ ತೇಜ
ಸ್ಫುರಣಂ ನಿತ್ಯಾನುರಾಗಕ್ಕೆಡೆಗುಡಲೆಸೆವೀ
        ಪೇರ್ಮೆಯಿಂ ದೇವಭೂಭೃ
ದ್ವರಪಾದಾಸಂನ ನೇನುಂನತಿ ಪಡೆದನೋ
        ಲಕ್ಷ್ಮೀಧರಾಮಾತ್ಯ ಮಿತ್ರಂ"

ಕಡೆಗೆ ಮಧುರನು ಮೈಮರೆತು ಹೀಗೆ ಹಾಡಿದ್ದಾನೆ!

''ಪೊಗಳಲ್ಬೊಂಬುಳಿಯೋದ ಪೆಂಪಿನ ಯಶೋ
ಲಕ್ಷ್ಮೀಧರಂ ಬಲ್ಲವ
ರ್ಬ್ಬಗೆಗೊಳ್ವಿಂಪಿನ ಸೊಂಪುವೆತ್ತ ಕವಿತಾ
ಲಕ್ಷ್ಮೀಧರಂ ರಾಜನೀ
ತಿಗೆ ನೇರ್ಪ್ಪಡ ಮಹಾಪ್ರಧಾನಪದವೀ ಲಕ್ಷ್ಮೀಧರಂ
ಧಾತ್ರಿಯೊಳ್
ನೆಗಳ್ದಂ ನಿರ್ಮ್ಮಲ ರಾಮಚಂದ್ರತನಯಂ ಸನ್ಮಂತ್ರಿ
ಲಕ್ಷ್ಮೀಧರಂ''

ಮೇಲೆ ಕೊಟ್ಟಿರುವ ಹಲವು ಪದ್ಯಗಳೇ ಈ ಶಾಸನ ಕಾವ್ಯದ ಗುಣ ಗೌರವವನ್ನು ಸಾರುತ್ತಿವೆ.

ಹೀಗೆ ಉದಾಹರಣೆಗಳನ್ನು ಕೊಡುತ್ತ ಹೋದರೆ ತುದಿ ಮೊದಲೇ ಇಲ್ಲವಾದೀತು. ಮೂಡಬಿದಿರೆಯ ಶಾಸನಗಳಿಂದಲೇ ಅನೇಕ ಉದಾಹರಣೆಗಳನ್ನು ಕೊಡಬಹುದು. ಮೇಲಿನ ಉದಾಹರಣೆಗಳೇ ಸಾಕು. ಕನ್ನಡ ಭಾಷಾ ಸಾಹಿತ್ಯೇತಿಹಾಸ ರಚನೆಗೆ ಗ್ರಂಥಗಳೆಷ್ಟು ಮುಖ್ಯವೋ ಹಲವು ಶಾಸನಗಳಾದರೂ ಅಷ್ಟೇ ಮುಖ್ಯ. ಕಾರಣ ಮಹಾಕವಿಗಳೇ ಶಾಸನಗಳನ್ನು ರಚಿಸಿದ್ದಾರೆ.



ಅಂತರಿಕ್ಷದ ಭರಣಾಧಿಕಾರಿಗಳು

—ವಿಡಂಬನಾತ್ಮಕ ವಿಮರ್ಶೆ—

ಶ್ರೀ ಕೆ. ಎ. ದೇವದಾಸ್, ಶಿರೋಮಣಿ, ಪಿ. ಓ. ಎಲ್. ಉಡುಪಿ.

ಸಪ್ತಗ್ರಹಗಳು

ಸರಕಾರದಲ್ಲಿ ಬೇರೆ ಬೇರೆ ಖಾತೆಗಳಿಗೆ ಮುಖ್ಯಾಧಿಕಾರಿಗಳು ಇರುವಂತೆ ಸೂರ್ಯನೇ ಮೊದಲಾದ ವಾರಾಧಿಪರಾದ ಏಳು ಗ್ರಹಗಳು ಪ್ರತಿ ವರ್ಷವೂ ರಾಜಾದಿ ಸ್ಥಾನಗಳನ್ನೂ ಆಯಾ ಖಾತೆಗಳ ಅಧಿಕಾರಗಳನ್ನೂ ವಹಿಸಿ ಭರಣವನ್ನು ನಡೆಸುತ್ತಾರೆ. ಈ ಸಂಗತಿಯನ್ನು ನಿತ್ಯ ಪಂಚಾಂಗ ಪುಸ್ತಕಗಳಲ್ಲಿ ಕಾಣಬಹುದು. ಆಹಾರ, ಗ್ರಾಮ ಸುಧಾರಣೆ, ಮಳೆ, ಕೃಷಿ ಮೊದಲಾದ ಖಾತೆಗಳು ಅನೇಕ ಇದ್ದರೂ ಕೂಡಾ ಶನಿಯ ವರೆಗಿನ ಏಳು ಮಂದಿಗಳೇ ಅವನ್ನೆಲ್ಲಾ ತಮ್ಮೊಳಗೆ ಹಂಚಿಕೊಳ್ಳುತ್ತಾರೆಯೇ ಹೊರತು ಗ್ರಹಗಳ ಸಾಲಿನಲ್ಲೇ ಸ್ಥಾನಮಾನಗಳನ್ನು ಪಡೆದ ರಾಹು ಕೇತುಗಳಿಗೆ ಯಾವ ಉಚ್ಚ ಪದವಿಯೂ ಮಂತ್ರಿಮಂಡಲದಲ್ಲಿ ಸಿಗುವಂತಿಲ್ಲ. ಅವರಿಗೆ ವಾರಗಳನ್ನುಂಟುಮಾಡುವ ಅಧಿಕಾರವಿಲ್ಲದುದೇ ಅದಕ್ಕೆ ಕಾರಣವಾಗಿದೆ.

ಮಂತ್ರಿಮಂಡಲ

ಗ್ರಹಗಳ ಸರಕಾರದಲ್ಲಿ ರಾಜ, ಮುಖ್ಯಮಂತ್ರಿ, ಮೇಘಾಧಿಪ, ಸೈನ್ಯಾಧಿಪರೇ ಮೊದಲಾದವರು ಇರಬೇಕು. ಸುಮಾರು 8–10 ಮುಖ್ಯ ಖಾತೆಗಳಿವೆ. ಯಾವ ಗ್ರಹಕ್ಕೆ ಯಾವ ಅಧಿಕಾರ ದೊರೆಯುವದೆಂಬ ವಿಷಯದಲ್ಲಿ ಚರ್ಚೆ ಬಾರದಿರಲಿಕ್ಕಾಗಿ ಹಿಂದಿನಿಂದಲೇ ಒಂದು ಕಟ್ಟು ನಿಯಮುವನ್ನಿಟ್ಟಿದ್ದಾರೆ. ಇದರಿಂದ ಚುನಾವಣೆಯ ಗೊಂದಲವಿಲ್ಲ. ಅವರ ಅಧಿಕಾರವಿತರಣೆಯು ಈ ಕೆಳಗಿನ ನಿಯಮದಂತೆ ನಡೆಯುವದು:—

ಸಿಂಹ ಸಂಕ್ರಮಣದ ವಾರಾಧಿಪ ಗ್ರಹಕ್ಕೆ–ಸೈನ್ಯಖಾತೆ.

ಕರ್ಕಟಕ ಸಂಕ್ರಮಣದ ವಾರಾಧಿಪ
ಗ್ರಹಕ್ಕೆ—ಸಸ್ಯಖಾತೆ (ಕೃಷಿ)

ಧನು ಸಂಕ್ರಮಣದ ವಾರಾಧಿಪ
ಗ್ರಹಕ್ಕೆ—ಧಾನ್ಯ (ಆಹಾರ) ಖಾತೆ

ಮಿಥುನ ಸಂಕ್ರಮಣದ ವಾರಾಧಿಪ
ಗ್ರಹಕ್ಕೆ—ಬೆಲೆ (ಕ್ರಯದ) ಖಾತೆ

ತುಲಾ ಸಂಕ್ರಮಣದ ವಾರಾಧಿಪ
ಗ್ರಹಕ್ಕೆ—ರಸದ್ರವ್ಯಗಳ ಖಾತೆ

ಮಕರ ಸಂಕ್ರಮಣದ ವಾರಾಧಿಪ
ಗ್ರಹಕ್ಕೆ—ನೀರಸ (ವಸ್ತ್ರಾದಿ) ಖಾತೆ

ಕನ್ಯಾ ಸಂಕ್ರಮಣದ ವಾರಾಧಿಪ
ಗ್ರಹಕ್ಕೆ—ಧನ (ಹಣಕಾಸು) ಖಾತೆ

ಮೀನ ಸಂಕ್ರಮಣದ ವಾರಾಧಿಪ
ಗ್ರಹಕ್ಕೆ—ಫಲವಸ್ತುಗಳ ಖಾತೆ

ಕುಂಭ ಸಂಕ್ರಮಣದ ವಾರಾಧಿಪ
ಗ್ರಹಕ್ಕೆ—ಗ್ರಾಮ ಸುಧಾರಣೆ ಖಾತೆ

ಈ ಪ್ರಕಾರ ಅಧಿಕಾರ ವಿತರಣೆಯ ಯೋಜನೆಯನ್ನನುಸರಿಸಿ ಮಂತ್ರಿಮಂಡಲದ ರಚನೆಯಾಗುತ್ತದೆ.

"ಚೈತ್ರಾದಿ ಮೇಷ ಹರಿ ಕರ್ಕಟ ಚಾಪಯುಗ
ರೌದ್ರೀ ತುಲಾ ಮಕರ ಸಂಕ್ರಮ ವಾಸರೇಶಾಃ
ರಾಜಾ ಚ ಮಂತ್ರಿ ಭಟನಾಯಕ ಸಸ್ಯನಾಥ
ಧಾನ್ಯಾರ್ಘ್ಯ ಮೇಘ ರಸನೀರಸಪಾಃ ಕ್ರಮೇಣ"

ಇದಾಗಿರಬಹುದು ಅವರ ಕಾನೂನಿನ ವಾಚಕ ಸೂತ್ರ. ನೀರಾವರಿ (ಮೇಘ) ವಿಭಾಗವು. ಆದ್ರಾ ಮಹಾನಕ್ಷತ್ರವು ಯಾವ ವಾರದಲ್ಲಿ ಆರಂಭಿಸುವದೋ ಆ ವಾರಾಧಿಪತಿಗೆ ಒಪ್ಪಿಸಲ್ಪಡುವದು. ಇನ್ನುಳಿದ ಸಣ್ಣ ಖಾತೆಗಳಿದ್ದರೆ ಅವು ಇವರೊಳಗೇನೇ ಹಂಚಲ್ಪಡುತ್ತವೆ.

ಸೌರಮಾನ ಚಾಂದ್ರಮಾನ

ಆದರೆ ರಾಜಾ ಮತ್ತು ಮುಖ್ಯಮಂತ್ರಿ ಪದವಿಗಳಲ್ಲಿ ಚರ್ಚೆಯೆದ್ದಿದೆ. ಆ ಮತ ಭೇದ ಬರಲಿಕ್ಕೂ ಕಾರಣರು ಹಿಂದೂ ಜನತೆಯೇ ಹೊರತು ಗ್ರಹಗಳಲ್ಲ. ಹಿಂದೂ ಜನರಲ್ಲಿ ಕೆಲವರು ಚಾಂದ್ರಮಾನವನ್ನೂ ಕೆಲವರು ಸೌರಮಾನವನ್ನೂ ಆಚರಿಸುತ್ತಿರುವುದರಿಂದ ಎರಡು ಪಂಗಡಗಳಿವೆ ಎನ್ನಬಹುದು. ಚಾಂದ್ರಮಾನದವರು ಚೈತ್ರಮಾಸಾರಂಭವೇ ಹೊಸ ವರ್ಷದ ಆರಂಭ

ವೆನ್ನುತ್ತಾರೆ. ಸೌರಮಾನದವರು ಮೇಷಮಾಸದ ಆರಂಭವೇ ಹೊಸ ವರ್ಷಾರಂಭವೆನ್ನುತ್ತಾರೆ. ಚಾಂದ್ರಮಾನದ ವತ್ಸರಾರಂಭವಾಗಿ ಒಂದೆರಡು ವಾರಗಳಲ್ಲಿ ಸೌರಮಾನ ವತ್ಸರವು ಆರಂಭಿಸುತ್ತದೆ. ಈ ಎರಡರ ಮಧ್ಯಕಾಲದ ಕೆಲವು ದಿನಗಳ ಸಂವತ್ಸರ ನಾಮವು ಯಾವುದೆಂದು ನಿಶ್ಚಯಿಸಲು ತೊಂದರೆಯಾದ್ದರಿಂದ ಇಕ್ಕಡೆಯವರಿಗೂ ಅಸಮಾಧಾನವಾಗಬಾರದೆಂದು ಪಂಚಾಂಗಕರ್ತರು 'ಚಾಂದ್ರದಲ್ಲಿ ಹಾಗೆ, ಸೌರದಲ್ಲಿ ಹೀಗೆ' ಎಂದು ಸಾರಿ ಬಿಡುತ್ತಾರೆ. ಅಂತೂ ಗೊಂದಲವು ತಪ್ಪಿತು. ಅದಿರಲಿ; ಯಾವ ವಾರದಲ್ಲಿ ವರ್ಷವು ಆರಂಭಿಸುತ್ತದೋ ಆ ವಾರಾಧಿಪನೇ ರಾಜನಾಗಬೇಕೆಂಬುದು ನಿಯಮು. ಹಾಗಾದರೆ ಮೇಷ ಸಂಕ್ರಮಣದ ವಾರಾಧಿಪನೇ ರಾಜನಾಗಬೇಕೆಂದು ಸೌರಪಕ್ಷದವರೂ, ಚೈತ್ರಾದಿಯ ವಾರಾಧಿಪನೇ ರಾಜನಾಗಬೇಕೆಂದು ಚಾಂದ್ರದವರೂ ಹಟಹಿಡಿದರು. ಹಿಂದೂ ಕಾಲಗಣನೆಯಲ್ಲಿ ಏಕಸಿದ್ಧಾಂತವನ್ನು ಕಂಡುಹಿಡಿಯಲಾಗದವರು—ಒಂದು ವೇಳೆ ಕಂಡುಹಿಡಿದರೂ ತನ್ಮೂಲಕ ಒಂದು ಪಕ್ಷವನ್ನು ಸಮಾಧಾನಪಡಿಸಿ, ಭರತಖಂಡದಲ್ಲಿ ಏಕಸಿದ್ಧಾಂತವನ್ನು ಸ್ಥಾಪಿಸುವಂತೆ ಪ್ರಯತ್ನಿಸಲು ಅಸಮರ್ಥರೂ ಆದ ವಿದ್ವನ್ಮಣಿಗಳು 'ಚಾಂದ್ರಮಾನದವರಿಗೆ ಚೈತ್ರಾದಿಯ ವಾರಾಧಿಪಗ್ರಹವೇ ರಾಜನೆಂದೂ, ಸೌರಮಾನದವರಿಗೆ ಮೇಷಸಂಕ್ರಮಣದವಾರಾಧಿಪನೇ ರಾಜನೆಂದೂ ತೀರ್ಮಾನವಿತ್ತರು. ಚಿಂತಿಲ್ಲ. ಮುಖ್ಯಮಂತ್ರಿಯು ಚಾಂದ್ರದವರಿಗೆ ಸೌರಮಾನದವರ ರಾಜಗ್ರಹವೂ, ಸೌರದವರಿಗೆ ಚಾಂದ್ರದವರ ರಾಜಗ್ರಹವೂ ಆಗಿದ್ದುಕೊಳ್ಳಲಿ ಎಂದೂ ತೀರ್ಮಾನವಾಯಿತು.

ವಿರೋಧ ಪರಿಹಾರ

ಹೆಚ್ಚು ಅಧಿಕಾರಗಳೂ ಸಂಕ್ರಮಣದ ನಾಯಕರಿಗೇನೇ ಸೇರಿದ್ದರಿಂದ ರಾಜನು ಮೇಷ ಸಂಕ್ರಮಣ ನಾಯಕನೇ ಆಗಬೇಕೆಂದು ನಮಗೆ ಊಹಿಸಬಹುದು. ಆದರೆ ರಾಜನಿಗೆ ಅಧಿಕಾರವೆಲ್ಲಿದೆ? ಎಲ್ಲವೂ ಮಂತ್ರಿಮಂಡಲಕ್ಕಲ್ಲವೇ ಅಧಿಕಾರ! ರಾಜನು ಸಂಕೇತ ಮಾತ್ರವಾಗಿ ಉಳಿಯುವನು. ಆದ್ದರಿಂದ "ಸೌರೇ ರಾಜಾ" ಎಂದು ಬರೆದು ವ್ಯಾಖ್ಯಾನ ಮಾಡುವದೂ, "ಚಾಂದ್ರೇ ರಾಜಾ" ಎಂದು ವ್ಯಾಖ್ಯಾನ ಮಾಡುವದೂ ಅಗತ್ಯವೆಂದು ಕಾಣುವದಿಲ್ಲ. ಚೈತ್ರಾದಿಯ ವಾರಪತಿಯೆ ರಾಜನಾಗಲಿ. ಯಾಕೆಂದರೆ ವರ್ಷಾರಂಭವು ಅಲ್ಲಿಂದ ಆಗುವದು. ಮೇಷಾದಿಯ ಗ್ರಹವು ಮುಖ್ಯ ಮಂತ್ರಿಯಾಗಲಿ. ಯಾಕೆಂದರೆ ಚೈತ್ರವು ಆರಂಭಿಸಿ ಮಂತ್ರಿಮಂಡಲದ ಭರಣವು ಆರಂಭಿಸಲಿಕ್ಕೆ ಕೆಲದಿನಗಳು ಬೇಕೆಂದಿದೆ—ಆದ್ದರಿಂದ ಈ ಪ್ರಮಾಣವು ನಮಗೇಕೆ ಆಗಬಾರದು:—

"ಯಸ್ಮಿನ್ ವಾರೇಕಲಾ ಮಾತ್ರಂ ಚೈತ್ರಾದೌಪ್ರತಿ ಪತ್ತಿಥಿಃ
ಸಂವತ್ಸರಾದಿ ಪೋಜ್ಞೇಯಃ ಇತ್ಯುಕ್ತಂ ರುದ್ರಯಾವಲೇ"

ಇದರಿಂದ ಸೌರರಿಗೇನೂ ಅಪಮಾನವಿಲ್ಲ. ಪ್ರಭುತ್ವವು ಮುಖ್ಯ ಮಂತ್ರಿಯಾದ ವಿಷು ಸಂಕ್ರಮಣದೊಡೆಯನಿಗಿದೆ. ರಾಜತ್ವವು ಚೈತ್ರಾಧಿಪನಿಗೆ ಸೇರಲಿ.

ನಿಯಮದ ಅನೌಚಿತ್ಯ

ಈ ಪರಂಪರಾಗತ ನಿಯಮಕ್ಕನುಸಾರವಾಗಿ ನಾವು ಈ ವಿರೋಧಿ ಸಂವತ್ಸರದ ಗ್ರಹ—ಸರಕಾರದ ಕಡೆಗೆ ಹೊರಳಿ ನೋಡಿದರೆ ಗ್ರಹಗಳ ಈ ಅಧಿಕಾರದಾನದ ವ್ಯವಸ್ಥೆಯಿಂದ ಪ್ರಪಂಚಕ್ಕೆ ತುಂಬಾ ಅವ್ಯವಸ್ಥೆ ಅನರ್ಥಗಳೇ ತಲೆದೋರಲಿವೆ ಎಂದು ಮುಂದಟ್ಟಾಗದಿರದು. 'ಆಯಾ ಮಾಸಗಳ ಆರಂಭದಿನವು ಯಾರ ವಾರದಲ್ಲಾಗುತ್ತದೋ ಅವರು ಆಯಾ ಅಧಿಕಾರಗಳನ್ನು ಗ್ರಹಣ ಮಾಡುವರು' ಎಂಬ ಗ್ರಹಗಳ ನಿಯಮವೇ ನಮಗೆ ಸರಿದೋರುವದಿಲ್ಲ. ಮುಂಬರುವ 30 ದಿನಗಳೊಳಗೆ 7 ಮಂದಿಗಳು ತಾನು ಮೇಲೆ ತಾನು ಮೇಲೆಂದು ಒದ್ದಾಡಿ, ಪೇಚಾಡಿ ಬೇಕೆಂದೇ ಕೆಲವೇಳೆ ತಿಂಗಳುಗಳ ದಿನಗಳನ್ನು ಹೆಚ್ಚಿಸಿ, ಯಾ ಕಡಿಮೆ ಮಾಡಿ ಅದಕ್ಕಾಗಿ ಸೂರ್ಯನಿಗೂ ಮೊರೆಯಿಟ್ಟು, ಅವನ ಗತಿಯನ್ನು ಹಿಂದೆಮುಂದೆ ಮಾಡಿ, ತಮ್ಮ ವಾರವೇ ಸಂಕ್ರಾಂತಿಗೆ ಬರುವಂತೆ ಯತ್ನಿಸಿ, ತಿಂಗಳನ್ನೇ ಉದ್ದ ಗಿಡ್ಡ ಮಾಡಿ, ಕೆಲವು ಗ್ರಹಗಳು ತಮ್ಮ ಕಾರ್ಯ ಸಾಧಿಸಿ ಬಿಡುತ್ತಾರೆ. ಹೀಗಾಗಿ ಅನೇಕ ಸಂಕ್ರಮಣಗಳಲ್ಲೂ, ತಾವೇ ಮುಂದು ಬಂದು ಮೂರು ನಾಲ್ಕು ಪದವಿಗಳನ್ನೂ ಒಬ್ಬನೇ ಪಡೆಯುವದೂ ಉಂಟು. ಕೆಲವು ಖಾತೆಗಳಿಗೆ ಸಂಬಂಧಪಟ್ಟ ವಿಷಯಗಳ ಪರಿಚಯವೇ ಇಲ್ಲದವರು ಆ ಖಾತೆಗಳನ್ನು ವಹಿಸಿ ಅನರ್ಥವನ್ನೇ ತಂದೊಡ್ಡುತ್ತಾರೆ. ನೀರು ಮೊದಲಾದ ಕೆಲವು ಸೌಮ್ಯ

ಖಾತೆಗಳಿಗೆ ಬೆಂಕಿಯಂತಹ ಕ್ರೂರ ಗ್ರಹಗಳು ಅಧಿಕಾರಿಗಳಾಗಿ ಅನರ್ಥವನ್ನೆಸಗುತ್ತಾರೆ. ನಿಜವಾಗಿಯೂ ರಾಜತ್ವವಿದ್ದ ಗ್ರಹಗಳು, ಚಿಕ್ಕ- ಅಪ್ರಧಾನ ಪದವಿಗೆ ಏರಿಸಲ್ಪಡುತ್ತಾರೆ. ಹೀಗಾದರೆ ಅವುಗಳ ಭರಣವು ಲೋಕಕ್ಕೆ ಕ್ಷೇಮಕರವಾಗುವ ಬಗೆಯೇ ಇಲ್ಲ. ಯಾವಾಗಲೂ ಖಾತೆಯ ಮುಖ್ಯಾಧಿಕಾರವನ್ನು— ಅದನ್ನು ನಿರ್ವಹಿಸಲು ತಕ್ಕ ಕಾಲಗುಣ, ವೈಯಕ್ತಿಕ ಯೋಗ್ಯತೆಗಳುಳ್ಳವರಿಗೇನೇ ಒಪ್ಪಿಸುವಂತಾದರೆ ಅದು ಚಂದ. ಹಾಗೆಯೇ ರಾಜ—ಮುಖ್ಯ ಮಂತ್ರೀಗ್ರಹಗಳೂ ಶುಭಗ್ರಹಗಳಾಗಿರಬೇಕು. ಉಚ್ಚಸ್ಥರಾದರೆ ಮತ್ತೂ ಒಳ್ಳೆಯದು. ನೀಚತ್ವಾದಿ ದೋಷಗಳು ಅವರಲ್ಲಿ ಸರ್ವಥಾ ಇರಬಾರದು. ವರ್ಷದ ಮಧ್ಯದಲ್ಲಿ ಮಂತ್ರಿಮಂಡಲ ವಿಸರ್ಜನೆಯಾಗುವದಿಲ್ಲ. ಆದ್ದರಿಂದ ಈ ತರದ ಈ ಗ್ರಹ ಚುನಾವಣೆಯಿಂದ ಆಶಾಂತಿಯೂ ಒಂದು ವರ್ಷದ ಮಟ್ಟಿಗೆ ಕಟ್ಟಿಟ್ಟದ್ದೇ ಸರಿ.

ವಿರೋಧಿ ಸಂವತ್ಸರ

ಈ ವಿರೋಧಿ ಸಂವತ್ಸರದ ಗ್ರಹಗಳೂ, ಅವರ ಸಾಮಾನ್ಯ ಗುಣರೂಪಗಳ ಪರಿಚಯವೂ, ಅವರು ವಹಿಸಿರುವ ಅಧಿಕಾರದ ಪದವಿಗಳೂ ಯಾವ ರೀತಿಯವು ಎಂದೂ, ಅದರ ಪರಿಣಾಮವೇನಾಗಬಹುದೆಂದೂ ನಾವು ಅಲ್ಪ ವಿವೇಚಿಸುವಾ:—

1. ರಾಜಾ ಮತ್ತು ಮುಖ್ಯ ಮಂತ್ರಿ–ಬುಧ. (ಸೌಮ್ಯ ಗುಣ, ಪಾಪ ಸಂಪರ್ಕದಿಂದ ಪಾಪಿ, ನೀಚಾವಸ್ಥೆಯಲ್ಲಿ ಸ್ಥಿತಿ, ರವಿ ಶುಕ್ರರ ಬಲದಿಂದ ನಿಪುಣ ಹಾಗೂ ರಾಜಯೋಗವನ್ನು ಹೊಂದಿಕೊಂಡಿದ್ದಾನೆ.)
2. ಸೈನ್ಯ, ಮಳೆ, ಕ್ರಯ ನಿರ್ಣಯ, ಫಲವಸ್ತು ಈ 4 ಖಾತೆಗಳಿಗೆ—ಕುಜ. (ಸ್ವಕ್ಷೇತ್ರ ಬಲಶಾಲಿ, ಉಗ್ರಗುಣ, ಚಂಚಲ, ಕ್ರೂರದೃಷ್ಟಿಯುಳ್ಳವನು.)
3. ವಸ್ತ್ರಾದಿಗಳ ಮತ್ತು ಆರ್ಥಿಕ ವಿಭಾಗಗಳಿಗೆ— ಶುಕ್ರ. (ಉಚ್ಚ, ಸೌಮ್ಯ.)
4. ತುಪ್ಪ ಮೊದಲಾದ ರಸ ದ್ರವ್ಯಗಳಿಗೆ—ಚಂದ್ರ. (ಸೌಮ್ಯ, ಮಂತ್ರಿ ಮಂಡಲ ರಚನೆಯಾಗುವಾಗ ಪಕ್ಷಬಲ ಪೂರಿತನಾಗಿದ್ದಾನೆ.)
5. ಆಹಾರ ಸಾಮಗ್ರಿ ವಿಭಾಗ—ಗುರು (ಉತ್ತಮನಾದರೂ ನೀಚಾವಸ್ಥೆಗೆ ಇಳಿದಿರುತ್ತಾನೆ.)
6. ಕೃಷಿ ವಿಭಾಗಕ್ಕೆ—ಶನಿ (ಪಾಪಗ್ರಹ, ಕೃಷಿಕಾರಕನೆಂದೂ ಹೇಳಬಹುದು.)
7. ಗ್ರಾಮ ಸುಧಾರಣೆಗೆ—ರವಿ (ಕ್ರೂರನಾದರೂ ತೇಜಸ್ವೀ ರಾಜಗ್ರಹ.)

ಈ ರೀತಿ ಈ ವರ್ಷದ ರಾಜ–ಮಂತ್ರಿಮಂಡಲವು ರಚಿತವಾಗಿದೆ.

ರಾಜಾ—ಮಂತ್ರಿ ಒಬ್ಬನೇ

ಪ್ರಕೃತ ಬುಧನ ಕುರಿತು ನಾವು ಅಲ್ಪ ವಿಚಾರ ಮಾಡಿಕೊಳ್ಳಲಿಕ್ಕಿದೆ:—ಈ ವರ್ಷ ಎರಡು ಯುಗಾದಿಗಳೂ ಬುಧವಾರವೇ ಬಂದುದರಿಂದ ಚಾಂದ್ರಮಾನ ಪಕ್ಷದವರಿಗೂ ಸೌರಮಾನ ಪಕ್ಷದವರಿಗೂ ಅವಿರೋಧವಾಗಿ ಬುಧನೇ ರಾಜನೂ, ಆ ರಾಜನೇ ಮುಖ್ಯ ಮಂತ್ರಿಯೂ ಆದನು. ಅಂತೂ ಈ ವರ್ಷ ರಾಜಾ ಮಂತ್ರಿ ಒಬ್ಬನೇ ಆದನು. ತಾನು ರಾಜನಾಗಿ ಮಂತ್ರಿಯೆನ್ನಿಸಿಕೊಳ್ಳುವವನೂ, ಮಂತ್ರಿಯಾಗಿದ್ದು ರಾಜನೆನ್ನಿಸಿಕೊಳ್ಳುವವನೂ ಆದ ಆ ಬುಧನು ಯಾರು? ಅವನ ಶಕ್ತಿಯೆಷ್ಟು ಇತ್ಯಾದಿಗಳನ್ನು ಪರ್ಯಾಲೋಚಿಸಿದರೆ ಮಾತ್ರ ನಮಗೆ ಈ ಸಂವತ್ಸರದ ಗುಣಾವಗುಣಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವದು. ಹಾಗೆ ವಿಮರ್ಶಿಸದೆ ಕೇವಲ ಎರಡು ಪಕ್ಷದವರೂ 'ನಮ್ಮ ರಾಜ ಮಂತ್ರಿಯಾದ–ನಮ್ಮಮಂತ್ರಿ ನಮ್ಮರಾಜ' ಎಂದು ಹೆಗ್ಗಳಿಸಿಕೊಳ್ಳುತ್ತಾ ಸೌರ-ಚಾಂದ್ರ ಸಂಪ್ರದಾಯದ ಮುಖಂಡರು ತೃಪ್ತಿ ಹೊಂದಿದರೆ ಸಾಲದು. ಜನತೆಯನ್ನು ತಕ್ಕ ರೀತಿಯಲ್ಲಿ ನಡೆಸುವ ರಾಜತ್ವ ವಿವೇಕಾದಿ ನಾಯಕಗುಣಗಳು:—'ಮಹಾ ಸತ್ವೋಽತಿ ಗಂಭೀರ: ಕೃಪಾವಾನವಿಕತ್ಥನ:' ಇತ್ಯಾದಿಗಳು ಅವನಲ್ಲಿ ಇರುವವೋ ಎಂದು ನೋಡಬೇಕು.

ಬುಧನ ಸಾಮಾನ್ಯ ಗುಣ

ಈ ವರ್ಷ ರಾಜಾ, ಮಂತ್ರೀ ಪದವಿಗಳೆರಡನ್ನೂ ಹೊಂದಿದ ಭಾಗ್ಯಶಾಲೀ ಗ್ರಹವಾದ ಬುಧನು ಸ್ವಯಮೇವ ಉತ್ತಮನು. 'ಶ್ಲಿಷ್ಟವಾಕ್ ಸತತ ಹಾಸ್ಯರುಚಿರ್ಜ್ಞ:' ಎಂದರೆ ಎರಡರ್ಥದ ಮಾತುಗಳನ್ನಾಡುವವನೆಂದೂ, ವಿನೋದರಸಿಕನೆಂದೂ ತಿಳಿಯುವದು. ಮಾತಿನ ಸ್ವಾರಸ್ಯದಿಂದ ಜನತೆಯನ್ನು ಒಲಿಸುವ ಪ್ರೌಢಿಮೆಯು ಅವನಿಗಿರುವದು. ಅವನು ವಿದ್ಯಾಕಾರಕನಾದ್ದರಿಂದ ವಿದ್ಯಾವಿಭಾಗದಲ್ಲಿ ಉತ್ತಮರೀತಿಯ ಪರಿ

ವರ್ತನೆಯೂ ಅಭಿವೃದ್ಧಿಯೂ ಉಂಟಾಗಲೆಡೆಯಿದೆ. ಶಿಕ್ಷಕರು ಸದಾಚಾರ-ಸಂಸ್ಕೃತಿಯ ಕೇಂದ್ರವಾಗುವರು. ಶಿಕ್ಷಕರ ಸ್ಥಾನಮಾನಗಳಿಗೆ ಮಹತ್ವವೂ, ಆರ್ಥಿಕ ದುಃಸ್ಥಿತಿಯ ನಿವಾರಣೆಯೂ ಆಗಬಹುದೆಂದು ನಿರೀಕ್ಷಿಸಬಹುದು. ಬುಧನು ಮಾತುಲಕಾರಕನಾದ್ದರಿಂದ ಸೋದರಳಿಯಂದಿರಿಗೆ ಮಾವನ ಆಸ್ತಿಯು ಲಭಿಸುವಂತಾಗುವದು. ಅವನು ಮಿಥುನರಾಶಿಯೊಡೆಯನಾದ್ದರಿಂದ ಮದುವೆಗಳು ಈ ವರ್ಷ ಹೆಚ್ಚು ಜರಗಬೇಕು. ಆತನಿಗೆ ಕನ್ಯಾರಾಶಿಯ ಒಡೆತನವಿದ್ದುದರಿಂದ ಸ್ತ್ರೀಯರಿಗೆ ಸರಕಾರೀ ಉದ್ಯೋಗಗಳು ಹೆಚ್ಚಾಗಿ ದೊರಕಬಹುದೆಂದೂ ಇನ್ನೂ ಅನೇಕಾನೇಕ ವಿಷಯಗಳನ್ನು–ವರ್ತಮಾನ ಪತ್ರಿಕಾವಿಭಾಗ, ವಾಚನಾಲಯ, ಇತ್ಯಾದಿಗಳ ಮೇಲ್ಮೆಯನ್ನೆಲ್ಲಾ ನಿರೀಕ್ಷಿಸಬಹುದು.

ಬುಧನ ರಾಜ ಯೋಗ್ಯತೆ

ಈ ಗುಣಗಳಲ್ಲೆಲ್ಲಾ ಈ ರಾಜಮಂತ್ರಿಯು ನುರಿತವನೆಂಬುದರಲ್ಲಿ ಸಂದೇಹವಿಲ್ಲಧಿದ್ದರೂ ಕಾರ್ಯರೂಪಕ್ಕೆ ಇವು ಎಷ್ಟರ ಮಟ್ಟಿಗೆ ಬರಬಹುದೆಂಬುದನ್ನು ಇನ್ನೂ ಆಳವಾಗಿ ನೋಡಿದರೆ ಹೆಚ್ಚಿನ ಭಾಗದಲ್ಲೂ ನಾವು ನಿರಾಶೆಯನ್ನೇ ತಾಳಬೇಕಾಗುವದು. ಗ್ರಹಗಳ ಅಧಿಕಾರ ಗ್ರಹಣದ ಕಾಲವೆಂದರೆ ಬುಧನಿಗೆ ನೀಚಕಾಲವೆಂಬುದು ಕಟ್ಟಿಟ್ಟ ಮಾತು. ಉಚ್ಚನಾದ ಶುಕ್ರನೂ ಪ್ರಕಾಶಮಾನನಾದ ರವಿಯೂ ನೀಚಭಂಗತ್ವ, ನಿಪುಣತ್ವಾದಿಗಳು ಆ ಬುಧನಲ್ಲಿ ಇರುವಂತೆ ಕಲ್ಪಿಸಿಕೊಟ್ಟದ್ದರಿಂದ ಬುಧನು ಮೆರೆದುಬಿಡುವನೆಂಬುದರಲ್ಲಿ ಸಂದೇಹವಿಲ್ಲ—ನಿಜ. ಆದರೆ ಕೇವಲ ಬುಧನಿಂದೇನಾದೀತು? ಆ ಹಳೆ ಪದ್ಧತಿಯನ್ನು ಬಿಡಬಾರದೆಂಬುದರಿಂದಲ್ಲವೇ ಆ ನೀಚರಾಶಿಯಲ್ಲಿರುವ ಬುಧನು ರಾಜನೂ, ಮಾತ್ರವಲ್ಲ ಮುಖ್ಯಮಂತ್ರಿಯೂ ಆದನು? ರವಿಯಂತಹ ಪ್ರಕಾಶಮಾನಗ್ರಹವೂ, ಶುಕ್ರನೂ ಅಲ್ಲಿರಲಿಲ್ಲವೇ? ಬುಧನಿಗೆ ನೀಚಭಂಗತ್ವವಾದರೂ ಸಿಕ್ಕಿದ್ದರೆ ರಾಜಯೋಗವುಂಟೆಂದು ನಾವು ಸಮಾಧಾನಪಡಬಹುದಿತ್ತು. ರವಿಯ ಪ್ರಭಾಮಹಿಮೆಯಿಂದ ಅಸ್ತಂಗತನಾಗಿದ್ದ ಶುಕ್ರನು ಹೇಗೆ ತಾನೇ ಬುಧನ ನೀಚಭಂಗವನ್ನು ಮಾಡಿ ರಾಜಯೋಗವನ್ನು ಕೊಡುವನೋ – ದೈವಜ್ಞರಿಗೆ ಮಾತ್ರವೇ ಗೊತ್ತು. 'ಬುಧೇನ ನಿಪುಣಂ—' ಎಂಬ ಮಾತಿನಿಂದ ಬುಧನಿಂದ ಕೂಡಿದ ರವಿಯು ನಿಪುಣಯೋಗ ಕೊಡುತ್ತಾನೆಯೇ ಹೊರತು ಬುಧನಿಗೆ ನಿಪುಣಯೋಗದ ಅಧಿಕಾರವಾದರೂ ಇಲ್ಲವೆಂದೇ ತೋರುತ್ತದೆ. ಈ ಎಲ್ಲಾ ಕಾರಣಗಳಿಂದ—ಬುಧನ ಅಧಿಕಾರಾರೋಹಣ ಕಾಲಕ್ಕೆ ರವಿಶುಕ್ರರು ಬೆಂಬಲಕ್ಕಿದ್ದಂತೆ ತೋರಿದರೂ ಪರಮಾರ್ಥಕ್ಕೆ ನೋಡಿದರೆ ಈ ಬುಧನಿಗೆ ಅವರಿಂದ ಒಂದು ಮಹತ್ವವು ಸಿಕ್ಕುವರೆ ಅವಕಾಶ ಕಾಣುವದಿಲ್ಲ. ನೀಚಾವಸ್ಥೆಯನ್ನು ಬಿಟ್ಟು ಬುಧನು ಮುಂದೆಯಾದರೂ ತನ್ನನ್ನು ತಿದ್ದಿಕೊಳ್ಳುವನು ಎಂದು ಯೋಚಿಸಿದರೆ—ಅದೂ ವ್ಯರ್ಥ. ಹೆಚ್ಚಾಗಿಯೂ ರವಿಯ ಆಸುಪಾಸಿನಲ್ಲೇ ಬುಧನಿರುವುದರಿಂದ ಆಗಾಗ ಮೌಢ್ಯವೇ ಪಡುತ್ತದೆ. ಪಾಪಗ್ರಹಗಳ ಸಂಪರ್ಕವಾದೊಡನೆ ಬುಧನು ತನ್ನತನವನ್ನು ಬಿಟ್ಟು ತಾನೂ ಪಾಪಿಯಾಗುತ್ತಾನೆ. ಇಂಥವನು ನಮಗೆ ಖಗೋಳದಲ್ಲಿ ರಾಜನೂ, ಮಹಾಮಂತ್ರಿಯೂ ಆದುದು ನಮ್ಮ ದುರ್ದೈವವೆಂದೇ ಹೇಳಬೇಕು. ಇದೀಗ ಅವನ ಭರಣದ ಪರಿಪಾಟಿ:—

> "ಸದಾಗತಿಃ ಸಾಧ್ವಸಕೃತ್ ಪ್ರಜಾನಾಂ, ನರಾಃ ಸ್ತ್ರಿಯೋಽಪಾ
> ರತಿಕವರ್ಗ ಹೀನಾಃ । ಧಾರಾಧರಾಶ್ಚಾಸ್ಯ ವಿಮುಕ್ತಧಾರಾಃ
> ಪಾಥ್ಯಾನಿ ಸಸ್ಯಾನಿ ೞಂಫೇಽಬ್ದನಾಥೇ" ॥

ಬುಧನು ರಾಜನಾದರೆ ಭಯಂಕರ ಗಾಳಿ, ಮಳೆ ಕಡಿಮೆ, ಸ್ನೇಹನಾಶ ಇತ್ಯಾದಿ ದುಷ್ಫಲಗಳುಂಟಾಗುವವು. ಅವನ ಮಂತ್ರಿಪದದಲ್ಲೂ ಇದೇ ಗತಿ. ಅಂತೂ ಗ್ರಹನಿಯಮದಂತೆ ಈ ಅಸಮರ್ಥನಿಗೆ ಮಹತ್ವಾದ ಒಂದು ಪದವಿಯಲ್ಲ, ಎರಡೂ ಸ್ಥಾನಗಳು ದೊರೆತು ನಾವು ನಿರಾಶೆಪಡಬೇಕಾಯಿತು.

ಗುರುವಿನ ನೀಚತ್ವ

"ಸರ್ವೇಶ್ವರಾಣಾಂ ಧಿಷಣೇಽಸ್ತಿ ನಿತ್ಯಂ ಸಾನ್ನಿಧ್ಯಂ—" ಎಂಬ ಮಾತಿನ ಪ್ರಕಾರ ಸೃಷ್ಟಿ ಸ್ಥಿತಿ ಸಂಹಾರ ಕಾರಣನಾದ ಭಗವಂತನ ಅನುಗ್ರಹವನ್ನು ಸೂಚಿಸುವ ಗುರುವೇ—ರಾಜಾಭಿಷೇಕವು ಎಲ್ಲಿ ನಡೆಯುವದೋ ಆ ಸ್ಥಳದ ಮೀನರಾಶಿಯ ಜೋತಿಃ ಸ್ವರೂಪೀ ಸದ್ಗುರುವೇ—ನೀಚನಾಗಿ ಬಿಟ್ಟಿದ್ದಾನೆಂದರೆ—ಪ್ರಕೃತ ನಾವು ಈ ಎಲ್ಲವನ್ನೂ ಅನುಭವಿಸಲೇ ಬೇಕು. ರಾಜಾಭಿಷೇಕಕ್ಕೆ ಈ ಗ್ರಹಗಳು ಸ್ಥಳ ಹುಡುಕಿ ಮೀನರಾಶಿಯನ್ನೇ ಆರಿಸಬೇಕೇ? ಅಥವಾ ಗುರುವು ಈ ವರ್ಷ ನೀಚಸ್ಥನಾದ್ದರಿಂದಲ್ಲವೇ ಮೀನರಾಶಿಯನ್ನು

ತೆಗಳುವದು? ಗುರುವು ಸುಕ್ಷೇತ್ರದಲ್ಲೋ ವಿಮಾನದಲ್ಲೋ ಇದ್ದರೆ ನಾವು ಆ ವಿಮಾನರಾಶಿಯನ್ನು ಟೀಕಿಸಲು ಹೊರಡುವೆವೇ? ಇಲ್ಲ. ಅದು ಒಳ್ಳೆ ರಾಶಿಯೆಂದೇ ಹೇಳುವೆವು. ಆದರೆ ಗುರುವು ನೀಚಸ್ಥನಾದ ಈ ಕಾಲದಲ್ಲಿ ಏನಾದರೊಂದು ಸುಧಾರಣೆಯಾಗುವದಿದ್ದರೆ ಅದಕ್ಕೆ ಪ್ರಾಪ್ತಿಯುಳ್ಳ ಆ ತೇಜೋಮೂರ್ತಿಯಾದ ಸೂರ್ಯನಾರಾಯಣನೇ ರಾಜನಾಗಬಹುದಿತ್ತೆಂದು ನಮ್ಮ ಒಂದು ಬಯಕೆ. ಈ ಕನ್ಯಾಪತಿಗಿಂತಲೂ ಆಗಬಹುದಿತ್ತು. ಅಥವಾ ನಾವು ಇದನ್ನು ಅನುಭವಿಸಬೇಕು. ಆ ಗುರುದೇವನನ್ನು ಮಕರಕ್ಕೆ ಕಾಲವು ಒಯ್ಯುವಾಗ ತಡೆಯಲು ನಮ್ಮಿಂದಾಗದಿದ್ದುದೇ ಇಂದಿನ ಈ ಕಷ್ಟಾನುಭವಕ್ಕೆ ಕಾರಣವಾಯಿತು. ಎಂದು ಗುರುದೇವನ ಪ್ರಭೆಯು ಜಗತ್ತಿಗೆ ಬೀಳುವದೋ ಅಂದಿಗೆ ಮಾತ್ರ ಕಲ್ಯಾಣ.

ಕುಜನ ಸೈನ್ಯಾಧಿಕಾರ

ಕುಜನ ಆಳ್ವಿಕೆಯನ್ನು ಅಲ್ಪ ವಿವೇಚಿಸಬೇಕಾಗಿದೆ. ನಾಲ್ಕು ಖಾತೆಗಳನ್ನೂ ಒಬ್ಬನೇ ವಹಿಸುವದೆಂದರೆ ಇದೆಂತಹ ಅನ್ಯಾಯ? ಅತ್ತ ಗುರು ಶನಿ ಮೊದಲಾದವರಿಗೆ ಒಂದೊಂದೇ ಖಾತೆಯಿರುವಾಗ, ಸಮರ್ಥನಿಗೆ ಇನ್ನೂ ಒಂದನ್ನು ಕೊಟ್ಟು, ತಾನು ಒಂದನ್ನೋ, ಬೇಕಾದರೆ ಎರಡನ್ನೋ ತೆಗೆದುಕೊಳ್ಳಬಹುದಿತ್ತು. ಅದನ್ನು ಬಿಟ್ಟು ಈ ತರದ ಛಲವು ಖಗೋಳದಲ್ಲಿ ಮಾತ್ರ ನಡೆದೀತೇ ಹೊರತು, ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ನಡೆಯಲಾರವು. ಸಂಕ್ರಮಣದ ವಾರಾಧಿಪರೇ ಆಯಾ ಅಧಿಕಾರಿಗಳಾಗುವರು ಎಂಬ ನಿಯಮದ ದುಷ್ಪರಿಣಾಮವೆಂದರೆ ಇದು. ಪ್ರತಿಯೊಂದೆಡೆಯೂ ಕುಜನ ಕೈವಾಡವನ್ನೇ ನಾವು ಕಾಣುತ್ತೇವೆ. ಸೈನ್ಯಖಾತೆಯು ಅವನಿಗೆ ಸೇರಿದ್ದಕ್ಕಾಗಿ ನಾವೂ ಸಂತೋಷಪಡುತ್ತೇವೆ. ಏಕೆಂದರೆ ಕುಜನು ಪರಾಕ್ರಮಕಾರಕನೂ, ಧಾತ್ವಗ್ನಿ ಪ್ರಹರಣ ರಸಿಕನೂ ಆಗಿದ್ದುಕೊಂಡು, ಸೈನ್ಯಖಾತೆಯ ಮರ್ಮವನ್ನು ತಿಳಿದವನೇ ಆಗಿದ್ದಾನೆ. ಶಸ್ತ್ರಾಸ್ತ್ರ ಸನ್ಯಾಸ ಮಾಡಿ ಶಾಂತಿಯಿಂದ ಮುಂದರಿಯಬೇಕಾದ ಈ 'ಗಾಂಧೀಯುಗ'ದಲ್ಲಿ ಕುಜನು ಸೇನಾ ವಿಭಾಗದ ಅಧಿಕಾರವನ್ನು ವಹಿಸಿದರೆ—"ಆತಂಕ ಪೀಡಾಭುವಿ ಸರ್ವ ನಾಶಂ ಲೋಕಾಃ ಸಮಸ್ತಾ ಜ್ವಲಿತಾ ಭವಂತಿ । ರಾಜ್ಞಾಂರಣಂಸ್ಯಾತ್, ಕ್ರಯವಿಕ್ರಯೇಷು ಹಾನಿಶ್ಚ ಸೇನಾಧಿಪತೌಧ ರಾಜೇ॥" ಎಂದು ಜನತೆಯು ಹೆದರಿಕೊಂಡರೂ ಕೂಡ, ಇಂದಿನ ಪರಿಸ್ಥಿತಿಯನ್ನವಲೋಕಿಸಿದರೆ ಕುಜನೇ ಸೈನ್ಯದ ಅಧಿಕಾರಿಯಾದುದು ಒಳ್ಳೆಯದೆನ್ನಬೇಕು. ಆಯಾ ಖಾತೆಗಳ 'ಗಂಧಗಾಳಿ' ಕೂಡ ಗೊತ್ತಿಲ್ಲದವರಿಗೆ ಅಧಿಕಾರ ಕೊಟ್ಟು 'ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಾಂತಾಗಿ' ಆ ಖಾತೆಯನ್ನು ದುರುಪಯೋಗಪಡಿಸುವಂತೆ ಮಾಡುವುದಕ್ಕಿಂತಲೂ, ಆಯಾ ವಿಷಯಗಳ ತಜ್ಞರಿಗೇನೇ ಅದನ್ನೊಪ್ಪಿಸಿದ್ದು ಎಷ್ಟೋ ಮೇಲು. ಕುಜನು ಈ ಅಧಿಕಾರದಿಂದ—ಆತನು ನೀಚನಲ್ಲ—ಸ್ವಕ್ಷೇತ್ರ ಬಲವುಳ್ಳ ಭೂಮಿತನಯನು. ವಿವೇಕದಿಂದ ವರ್ತಿಸುವನು. ಆದ್ದರಿಂದ ಸಾರ್ವತ್ರಿಕವಾಗಿ ಸೈನ್ಯ ಶಿಕ್ಷಣವು ಪ್ರಸರಿಸಬಹುದು.

ಮಳೆ

ಮೇಘಗಳ ಒಡೆತನವನ್ನು ವಹಿಸುವ ಹವ್ಯಾಸವು ಮಾತ್ರ ಕುಜನಿಗೇಬೇಡವಾಗಿತ್ತು. 'ಅನ್ಯವೃಷ್ಟಿದಾ ಮಹಾಘೋಷಾ ಭೌಮೇ ಮೇಘಾಧಿಪೇ ಸತಿ' ಎಂದು ಆತನ ವೈಯಕ್ತಿಕ ಗುಣಗಳನ್ನು ಬಲ್ಲವರು ಹೇಳುತ್ತಾರೆ. ಮಳೆ ಕಡಿಮೆ ಮಾತ್ರವಲ್ಲ ಗುಡುಗುಮಿಂಚುಗಳೂ ಹೆಚ್ಚಂತೆ. ಯಾಕೆ ಬೇಕಿತ್ತು ಈ ವ್ಯಾಪಾರ ಕುಜನಿಗೆ? ಏನು ಅಧಿಕಾರದ ಅರ್ಹತೆಗೂ, ಯೋಗ್ಯತೆಗೂ ಸಂಬಂಧವುಂಟೆಂದೇ? ಇಲ್ಲ—ಈ ನಿಯಮ ಪ್ರಕಾರ ಸಂಬಂಧವೇ ಇಲ್ಲ.

ಆಹಾರ, ವಸ್ತ್ರ

ಸಾಕು ನಮ್ಮ ವಿಮರ್ಶೆ. ಇದೇ ರೀತಿ ನಾವೆಲ್ಲವನ್ನೂ ಪರ್ಯಾಲೋಚಿಸಿದರೂ ಅವ್ಯವಸ್ಥೆಗೆ ತುದಿಬುಡವೇ ಸಿಗಲಾರದು. ಇಂದು ನಮ್ಮ ಜೀವನದ ಮೊದಲನೆಯ ಸಮಸ್ಯೆ ಆಹಾರದ್ದು. ಧಾನ್ಯಾಧಿಪತಿಯಾದ ಗುರು ನೀಚ ರಾಶಿಯಲ್ಲಿದ್ದುದರಿಂದ, ಆತನು ಆ ವಿಭಾಗಕ್ಕೆಲ್ಲಾ ತಕ್ಕವನಾದರೂ ಕೂಡ ನಮ್ಮ ದೌರ್ಭಾಗ್ಯದಿಂದ ಅದು ಉಚ್ಚಮಟ್ಟದಲ್ಲಿ ಬಗೆಹರಿಯುವಂತಿಲ್ಲ. ಮಕರದ ಗುರುವು ಅಧಿಕಾರಿಯಾದ್ದರಿಂದ ಇದ್ದ ಆಹಾರ ವಸ್ತುಗಳೆಲ್ಲವೂ ಮೊಸಳೆಯ ಬಾಯಿಗೆ ಸೇರಿದಂತಾಗುವದೆಂದೇ ತೋರುತ್ತದೆ. ಕಳ್ಳ ವ್ಯಾಪಾರವು ನಿಲ್ಲುವಂತೆ ತೋರುವದಿಲ್ಲ. ಬಟ್ಟೆಯ ಸಮಸ್ಯೆಯನ್ನು ಶುಕ್ರನು ಬಗೆಹರಿಸಲು ಸಮರ್ಥನು. ಆದ

ರೇನೋ ಒಂದು ಮೌಢ್ಯವೂ ಕಾಣುತ್ತದೆ. ಹತ್ತಿ, ಬಟ್ಟೆಗಳ ಉತ್ಪನ್ನ ಹೆಚ್ಚಾದರೂ, ಕ್ರಯ ನಿರ್ಣಯ ಮಾಡುವವನು ಅವನಲ್ಲ. ಇದ್ದಾನಲ್ಲಾ—ಕುಜ. ಇದರಿಂದ ಕೈನೇಯ್ಗೆಯವರಿಗೆ ಪ್ರೋತ್ಸಾಹವೂ, ಅತ್ತ ಸರಕು—ಮಾರಾಟವಾಗದ್ದರಿಂದ ನಿರುತ್ಸಾಹವೂ ಸಂಭವಿಸಬಹುದು.

ರವಿ

ದಿವ್ಯ ಪ್ರಕಾಶದಿಂದ ಜೀವಜಾಲಕ್ಕೆ ಚೈತನ್ಯವನ್ನು ಕೊಡುವ ಭಗವಾನ್ ಸೂರ್ಯನಾರಾಯಣನಿಗೆ ಗ್ರಾಮಾಧಿಪತ್ಯವು ದೊರಕಿತು. ಆ ರಾಜಮಣಿಯಾದ ದಿನಮಣಿಯು ಅದನ್ನು ಸ್ವೀಕರಿಸದೆ ಬಿಟ್ಟು ನಿಲ್ಲಬಹುದಿತ್ತು. ಆದರೆ ಸಿಕ್ಕಿದ್ದನ್ನು ಬೇಡವೆಂದು ಬಿಡಲಾಗುವದಿಲ್ಲ. ತಿಂಗಳನ್ನು ಬೇಕೆಂದೇ ಉದ್ದಗಿಡ್ಡ ಮಾಡಿ ರವಿಯು ಪಡಕೊಂಡದ್ದಲ್ಲ. ಸ್ವಯಂ ಪ್ರಾಪ್ತವದು. 'ಪಾರ್ಟಿಕಟ್ಟಿ,' ಮಂತ್ರಿಮಂಡಲದಿಂದ ಹೊರಬೀಳಲಾಗುವದಿಲ್ಲ. ಅಧಿಕಾರ ಸಿಕ್ಕಿದ್ದನ್ನು ನಡೆಸಲೇ ಬೇಕು. ಇದು ಸರಿಯಾದ ನಿಯಮ. ಆದರೆ ಆ ರವಿಯು ಮಾಡಿದ್ದೇನು? ಒಳಗಿಂದೊಳಗೇನೇ ಆ ಪ್ರಕಾಶಮೂರ್ತಿಯು ಕುದಿಯುತ್ತಿದ್ದನು. ಜೋತಿರ್ವಿದರು ಆತನನ್ನು ಕ್ರೂರನೆಂದೂ ಹೇಳುತ್ತಿದ್ದಾಗ ಈ ಮೊದಲು ನಮಗೆ ಬಹಳ ಅಸಮಾಧಾನವಾಗುತ್ತಿತ್ತು. ಭಗವಾನ್ ಸೂರ್ಯನಾರಾಯಣನು ಉಗ್ರನಹುದು, ಪ್ರಚಂಡನಹುದು; ಆದರೆ ಕ್ರೂರನಲ್ಲ, ಪಾಪಿಯಲ್ಲ ಎಂದೇ ನಮ್ಮ ಭಾವನೆಯಾಗಿತ್ತು. ಆದರೆ ಆ ಅಭಿಮಾನೀ ಗ್ರಹವು ರಾಜಾದಿ ರಾಷ್ಟ್ರಪದವಿ ತನಗೆ ಸಿಕ್ಕದೆ ಹಳ್ಳಿಗಳ ಅಧಿಕಾರ ಮಾತ್ರ ಸಿಕ್ಕಿದ್ದರಿಂದ ಮತ್ತಿತರರ ಭರಣದಲ್ಲೂ 'ರಾಜಮಂತ್ರೀ ಬುಧನ ನಾಯಕತ್ವದಲ್ಲೂ ಕೆಡುಕನ್ನುಂಟು ಮಾಡಲಿಕ್ಕೋ ಎಂಬಂತೆ, ಹಳ್ಳಿಹಳ್ಳಿಗಳಲ್ಲಿ ಅಶಾಂತಿಯನ್ನುಂಟು ಮಾಡುತ್ತಾನೆ. ಗ್ರಾಮವಾಸಿಗಳು ಅವರಾಗಿಯೇ ಮಂತ್ರಿಮಂಡಲದೆದುರು ಕತ್ತಿ ಕಟ್ಟುವಂತೆ ಮಾಡಲು ಅವನ ಇಚ್ಛೆಯೋ ಎಂದೂ ತೋರಿ ಹೋಗುತ್ತದೆ. ನೋಡಿರಿ ರವಿಯ ಕೆಲಸ:—

''ಸತ್ಯಾಸತ್ಯೇ ನ ಜಾನಂತಿ ಲೋಕೇ ವೈ ಪೀಡಿತಾಃ ಜನಾಃ ।
ಅಸತ್ಯಂ ಸರ್ವದಾ ಲೋಕೇ ರವೌ ಗ್ರಾಮಾಧಿಪೇ ಸತಿ'' ॥

ಕಪಟ, ಕಳ್ಳತನ, ಹಿಂಸೆ, ಅನ್ಯಾಯಗಳೇ ಹೆಚ್ಚುತ್ತವೆಯಂತೆ. ಇದು ಆ ಸೂರ್ಯದೇವನು ಮನಃಪೂರ್ವಕ ಮಾಡುವ ಲೀಲೆ.

ಪರಿಣಾಮ

ಅಂತೂ ಯೋಗ್ಯತೆ, ಅನುಭವ, ವೈಯಕ್ತಿಕ ಗುಣ, ಆಯಾ ಖಾತೆಗಳ ಅನುಭವ ಇವುಗಳನ್ನು ಅವರವರಾದರೂ ಅರಿಯದೆ, ಅನಾತ್ಮಜ್ಞರಾಗಿ, ತಿಂಗಳ ದಿನಗಳ ಆಯ್ಕೆಯಿಂದಲೂ ಸಾಮರ್ಥ್ಯ, ಬೆಂಬಲಗಳಿಂದಲೂ ಈ ಗ್ರಹಗಳು ಮುಂದೆ ಬಂದು, ದೊಡ್ಡ ದೊಡ್ಡ ಅಧಿಕಾರವನ್ನೂ ಆ ಬುಧನು—ನೀಚರಾಶಿಯಿಂದ—ಅದೇ—ಮೀನ ರಾಶಿಯಿಂದ, ತಾನೇ ರಾಜ—ಮಂತ್ರಿಪದಗಳನ್ನೂ ವಹಿಸಿ ಈ ವಿರೋಧಿ ಸಂವತ್ಸರದಲ್ಲಿ ನಾವು ನೆನಸಿದಷ್ಟೇನೂ ಸುಖ ಕೊಡಲಾರದಾದರೆಂದು ನಾವು ತಿಳಿಯಲೇ ಬೇಕು. ಅವರೆಲ್ಲರೂ ಅಂತರಿಕ್ಷದಿಂದ ಯಜ್ಞಕ್ಕೆ ಬಂದು ಹೋಗುತ್ತಾರಂತೆ. ನಮಗೆ ಅವರು ಬರುವದೂ ಹೋಗುವದೂ ಮತ್ತೆ ಗೊತ್ತಾಗುವದು. ಆದ್ದರಿಂದ ಯಾರೊಡನೆ ಮೊರೆಯಿಡಬಹುದು?

ಚಂದ್ರ

ಮೇಷ ಸಂಕ್ರಮಣ ಕಾಲದಲ್ಲಿ ಕನ್ಯಾರಾಶಿಯ ಪಕ್ಷಬಲದಿಂದ ಸಕಲ ಕಲಾಪರಿಪೂರ್ಣನಾಗಿ ಬೆಳಗಿದ ಆ ಮಂಜುಲ ಮೂರ್ತಿಯಾದ ಚಂದ್ರನೊಬ್ಬನೇ ನಮ್ಮ ಸುಖದಾಯಕನು. ಗುರುದೃಷ್ಟಿಯೆಂಬ ಭಗವತ್ಕೃಪೆಯೂ ಆತನಿಗಿದ್ದು ಆತನು ರಸಾಧಿಪತ್ಯವನ್ನೂ ಮಂಗಲ್ಯಾಧಿಪತ್ಯವನ್ನೂ ವಹಿಸಿ, ಶಕ್ತಿಮೀರಿ ಜನತಾ ಕಲ್ಯಾಣವನ್ನೆಸಗುತ್ತಾನೆ.

''ಪೀತತೈಲ ಗುಡಕ್ಷೌದ್ರ ದಧಿ ಕ್ಷೀರಾಣಿ ಶರ್ಕರಾಃ ।
ಪುಷ್ಟಾಃ ಸುಭಿಕ್ಷಮಾರೋಗ್ಯಂ, ವೃಷ್ಟಿಶ್ಚಂದ್ರೇ
ರಸಾಧಿಪೇ'' ॥

''ಸ್ತ್ರೀಣಾಂ ಮಹೋತ್ಸವೋ ನಿತ್ಯಂ, ವೈಶ್ಯಾನಾಂಚ
ಸುಖಪ್ರದಃ ।
ಲೋಕೇ ಮಾಂಗಲ್ಯವೃದ್ಧಿಸ್ಸ್ಯಾತ್ ಶಶಾಂಕೇ
ಮಂಗಲಾಧಿಪೇ'' ॥

ಅರಸಿನ ವಸ್ತು, ಎಣ್ಣೆ ಮೊದಲಾದುವುಗಳು ಸಮೃದ್ಧವಾಗುವವು. ಒಳ್ಳೆಯ ಮಳೆಯೂ ಸುಭಿಕ್ಷವೂ ಉಂಟಾಗುವದು ಆರೋಗ್ಯವುಳ್ಳವರಾಗಿ ಜನರು ಬಾಳುವರು. ವ್ಯಾಪಾರವೂ, ಕೃಷಿಯೂ, ಗೋಧನವೂ ಹೆಚ್ಚು ಫಲಪ್ರದವಾಗಿ ಮಂಗಲವಾಗಿಯೇ ಎಲ್ಲವೂ ಪರಿಣಮಿಸುವ ನಾನಾ ಶುಭಫಲಗಳನ್ನು ಕೊಡಲು ಚಂದ್ರನೊಬ್ಬನು ನಮ್ಮ ಪಾಲಿಗಿರುವದು ನಮ್ಮ ಸುದೈವವಲ್ಲವೇ! ಆತನ ಅಮೃತ ಕಿರಣದಿಂದ ಎಲ್ಲವೂ ಮಂಗಲಮಯವಾಗಲಿ.

ಕೊಡಗು—ಕನ್ನಡ ನುಡಿ

ಶ್ರೀ ಎಂ. ಎಸ್. ಅನಂತಪದ್ಮನಾಭ ರಾವ್, ಮಡಿಕೇರಿ.

೧

ದಕ್ಷಿಣ ಭಾರತದ ಸಾಧಾರಣ ಮಧ್ಯ ಪ್ರದೇಶದಲ್ಲಿ ಪಶ್ಚಿಮ ಘಟ್ಟಗಳ ಮೇಲಿದೆ ಕೊಡಗು ದೇಶ. ಸಮುದ್ರಮಟ್ಟಕ್ಕಿಂತ ಸುಮಾರು ೪,೦೦೦ ಅಡಿಗಳ ಎತ್ತರ ಪ್ರದೇಶ. ಗಂಧ, ಹೊನ್ನೆ, ತೇಗ, ಬಸುರಿ, ಸಂಪಗೆ, ಹಲಸು ಮುಂತಾದ ನಾನಾ ಬಗೆಯ ಉತ್ತಮ ಮರಗಳಿಂದ ನಿಬಿಡವಾದ ದಟ್ಟವಾದ ಕಾಡು ಪ್ರಾಂತ. ಆನೆ, ಹುಲಿ, ಚಿರತೆ, ಕಾಡುಕೋಣ, ಸಾರಗ, ಕೆನ್ನಾಯಿ ಮೊದಲಾದ ಮೃಗಜೀವಿಗಳ ಆವಾಸಸ್ಥಾನ. ೧೫೮೨ ಚದರ ಮೈಲು ವಿಸ್ತೀರ್ಣ. ಪ್ರಜಾ ಸಂಖ್ಯೆ ೧,೬೮,೦೦೦. ಸುಮಾರು ೩೦೦ ಗ್ರಾಮಗಳಿವೆ. ಸಣ್ಣ ಪುಟ್ಟ ಹಳ್ಳಿಗಳನ್ನು ಸೇರಿಸಿದರೆ ೪೫೦ ಹಳ್ಳಿಗಳಾಗಬಹುದು. ಪ್ರತಿಗಾಮಕ್ಕೂ ಪಟೇಲನೆಂಬ ಗ್ರಾಮಾಧಿಕಾರಿ ಇದ್ದಾನೆ. ಇಡೀ ಪ್ರಾಂತ ಎರಡು ತಾಲೂಕುಗಳಾಗಿ ವಿಭಾಗವಾಗಿದೆ. ಪೂರ್ವದಲ್ಲಿ ಏಳು ತಾಲೂಕುಗಳೂ, ಮಧ್ಯ ಕಾಲದಲ್ಲಿ ೫ ತಾಲೂಕುಗಳೂ ಇದ್ದು ಈಗ ಅವನ್ನೇ ಎರಡು ತಾಲೂಕುಗಳಾಗಿ ಮಾಡಿದ್ದಾರೆ. ಇಂಡಿಯಾ ಸರಕಾರ ಚೀಫ್ ಕಮಿಷನರ್‌ರವರ ಮುಖೇನ ಇಲ್ಲಿನ ಆಡಳಿತವನ್ನು ನಡೆಸುತ್ತಿದೆ. ಪ್ರಜಾ ಸಂಖ್ಯೆಯಲ್ಲಿ ಕೊಡಗರು ಅಧಿಕ ಸಂಖ್ಯೆಯವರು. (೪೦,೦೦೦)

ಕೊಡಗರ ಆಚಾರ, ವಿಚಾರ, ಸಂಸ್ಕೃತಿ ಮೊದಲಾದುವು ಇತರ ಹಿಂದೂಗಳಿಂತ ಸ್ವಲ್ಪ ಭಿನ್ನವಾಗಿ ಕಂಡರೂ ಒಟ್ಟಿನಲ್ಲಿ ಇವಾವುವೂ ಹಿಂದೂ ಧರ್ಮಕ್ಕೆ ಹೊರಗಿನದಲ್ಲ. ಇತರ ಧರ್ಮೀಯರು ಅಧಿಕ ಸಂಖ್ಯೆಯಲ್ಲಿ ಕನ್ನಡಿಗರೇ. ಇತರ ಕನ್ನಡ ಪ್ರಾಂತಗಳಂತೆ ಕೊಡಗಿನಲ್ಲೂ ಹಲವು ಭಾಷೆಗಳನ್ನಾಡುವ ವಿವಿಧ ಪಂಗಡಗಳವರಿದ್ದಾರೆ. ಹಿಂದೆ ಈ ದೇಶವು ಕದಂಬ, ಚೇರ, ಗಂಗ, ಚೋಳ, ಚಂಗಾಳ್ವ, ಕೊಂಗಾಳ್ವ ಮೊದಲಾದ ಕನ್ನಡ ಅರಸರ ಆಳ್ವಿಕೆಗೆ ಒಳಗಾಗಿತ್ತೆಂದು ಶಾಸನಗಳಿಂದಲೂ ಚರಿತ್ರೆಗಳಿಂದಲೂ ತಿಳಿದು ಬರುವುದು. ಕೆಲವು ಕಾಲ ಸ್ವತಂತ್ರವಾಗಿಯೂ ಕೆಲವು ಸಮಯ ವಿಜಯನಗರ ಸಾಮ್ರಾಜ್ಯವೇ ಮೊದಲಾದ ಇತರ ರಾಜ್ಯಗಳೊಡನೆಯೂ ಸೇರಿಹೋಗಿತ್ತು. ಮೊದಲಿನಿಂದ ಇದು ವರೆಗೂ ಕೊಡಗಿಗೂ ಮೈಸೂರಿಗೂ ನಿಕಟ ಸಂಬಂಧವುಂಟು.

ಪ್ರಾಚೀನ ಶಾಸನಗಳಿಂದ ಕೊಡಗಿನ ಸಂಬಂಧವಾಗಿ ಏನೂ ತಿಳಿದು ಬರುವುದಿಲ್ಲ. ಕೊಡಗು ಮತ್ತು ಕೊಡಗರ ವಿಷಯದಲ್ಲಿ ಹಿಂದಿನ ಇತಿಹಾಸವು ಇಲ್ಲ. ಕೊಡಗಿನಲ್ಲಿ ದೊರೆಯುವ ಶಾಸನಗಳೆಲ್ಲವೂ—ಎರಡು ಹೊರತು—ಕನ್ನಡ ಭಾಷೆ ಮತ್ತು ಲಿಪಿಯಲ್ಲಿವೆ. ಆದ ಪ್ರಯುಕ್ತ ಕೊಡಗೂ ಕನ್ನಡ ನಾಡಿಗೆ ಸೇರಿದುದೇ ಎಂಬುದು ನಿರ್ವಿವಾದದ ಸಂಗತಿ. ಒಂದೆರಡು ಶಾಸನಗಳಲ್ಲಿ ಕನ್ನಡ ವೃತ್ತಗಳೂ ದೊರೆಯುವುವು. ೧೨ನೇ ಶತಮಾನದಲ್ಲಿ ಈ ಪ್ರಾಂತವನ್ನಾಳಿದ ಹೊಯ್ಸಳರ ಅರಸನಾದ ವೀರಬಲ್ಲಾಳನ ಕಾಲದ ಶಾಸನದಲ್ಲಿ (೧೧೭೪) 'ಕೊಡಗು' ಎಂಬ ಹೆಸರು ತೋರಿ ಬರುವುದು. ಈ ಶಾಸನಗಳ ಸಂಶೋಧನೆಯಿಂದ ೧೬–೧೭ನೇ ಶತಮಾನಕ್ಕೆ ಪೂರ್ವದಲ್ಲಿ ಕೊಡಗು ಕನ್ನಡ ಅರಸರ ಅಧೀನದಲ್ಲಿದ್ದರೂ ಈಗಿನಂತೆ ಎಲ್ಲಾ ಭಾಗಗಳೂ ಒಂದೇ ರಾಜ್ಯವಾಗಿರಲಿಲ್ಲ. ಎರಡು ಮೂರು ಪಾಳೆಯಗಾರರ ಆಳ್ವಿಕೆಗೊಳಪಟ್ಟಿತ್ತು. ಅಲ್ಲದೆ ಈಗಿಗಿಂತಲೂ ಹೆಚ್ಚು ದಟ್ಟವಾದ ಕಾಡುಗಳಿಂದ ಕೂಡಿತ್ತು.

ಸಾಧಾರಣವಾಗಿ ೨ನೇ ಶತಮಾನದ ತಮಿಳು ಗ್ರಂಥಗಳಲ್ಲಿ "ಕುಡುಕಮ್" ಎಂಬ ಪದ ದೊರೆಯುವುದು. ಈ ಪದ "ಕೊಡಗು" ಎಂಬ ಪದಕ್ಕೆ ಅನ್ವಯಿಸಬಹುದೇ ಎಂಬ ಶಂಕೆಯಿದೆ. ೧೦೧೩ರ ಶಾಸನವೊಂದರಲ್ಲಿ "ಕುಡುಮಲ್ಲೈನಾಡು" ಎಂಬ ತಮಿಳುಪದ ಸಿಕ್ಕುವುದು. ಇದನ್ನು ಕನ್ನಡಕ್ಕೆ ಪರಿವರ್ತಿಸಿದರೆ "ಕೊಡಗು ಮಲೆನಾಡ್" ಎಂದು ಅರ್ಥವಾಗುವುದು. ಈ ಕಾಲಕ್ಕೆ ಈ ನಾಡಿನಲ್ಲಿ ಉತ್ತರದಲ್ಲೂ, ದಕ್ಷಿಣದಲ್ಲೂ ಬೇರೆ ಬೇರೆ ಅರಸರಿದ್ದರೂ—ಇಬ್ಬರೂ ಪರಸ್ಪರ ಸ್ನೇಹದಿಂದ ನಡೆದುಕೊಳ್ಳುತ್ತಿದ್ದರು. ಈ 'ಕೊಡಗು ಮಲೆನಾಡು' ಎಂಬ ಪ್ರಯೋಗ ಆ ಮೇಲಿನ ಕನ್ನಡ

ಶಾಸನಗಳಲ್ಲೂ ದೊರೆಯುವುದು. ಹೊಯ್ಸಳರ ನಂತರ ಬಂದ ಚಂಗಾಳ್ವರೂ ಕನ್ನಡಿಗರೇ. ಈ ಚಂಗಾಳ್ವರು ಹೊಯ್ಸಳರನ್ನಟ್ಟಲು ಇಲ್ಲಿನ ಸಮಸ್ತ ಕೊಡಗರ ಸಹಾಯ ಸಂಪತ್ತುಗಳನ್ನು ಪಡೆದಿದ್ದುದಾಗಿ ಶಾಸನಗಳು ನಮಗೆ ತಿಳಿಸುವುವು. ಈ ಚಂಗಾಳ್ವರು ದಕ್ಷಿಣ ಕೊಡಗಿನ 'ಪೆದ್ದೊರಿಗೆರೆ' (ಲಕ್ಷ್ಮಣ ತೀರ್ಥ ಪ್ರಾಂತ) ಎಂಬ ಪ್ರದೇಶದ ಅಧಿಪತಿಗಳಾದರೂ, ಮುಂದೆ ಅವರು ಉತ್ತರ ಕೊಡಗನ್ನು ಆಕ್ರಮಿಸಿಕೊಂಡು ನಂಜರಾಜ ಪಟ್ಟಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ನಂಜರಾಜ ಪಟ್ಟಣದಲ್ಲಿ ಹಿಂದಿನ ಇವರ ಕಾಲದ ಅವಶೇಷಗಳು ಈಗಲೂ ಇವೆ. ಉತ್ತರ ಕೊಡಗಿನ ವರೆಗೆ ವಿಜಯನಗರ ಸಮ್ರಾಟನಾದ ಎರಡನೇ ಹರಿಹರನೂ ಬಂದಿದ್ದುದಾಗಿಯೂ ೧೩೯೦ರಲ್ಲಿ ಈ ಧೊರೆಯು ಗೊಂಕರೆಡ್ಡಿ ನಾಯಕನಿಗೆ ಇಲ್ಲಿನ ಮುಳ್ಳೂರು ನಾಡನ್ನು ಕೊಟ್ಟುದಾಗಿಯೂ ಅಂದಿನ ಶಾಸನ ತಿಳಿಸುವುದು. ಹದಿನಾರನೆಯ ಶತಮಾನದ ಅನಂತರ ಕೊಡಗು ವೀರಶೈವ ಅರಸರ ವಶವಾಯಿತು. ಈ ಶಾಸನಗಳಿಂದ ಬಹು ಪೂರ್ವದಿಂದಲೂ ಕೊಡಗಿಗೂ ಮೈಸೂರಿಗೂ ಇದ್ದ ಸಮೀಪ ಬಾಂಧವ್ಯವನ್ನು ವಿಶದಪಡಿಸುವುದರಿಂದಲೂ, ಮೇಲೆ ಹೇಳಿದಂತೆ ಶಾಸನಗಳ ಆಧಾರಗಳಿಂದಲೂ ಕೊಡಗು ದೇಶ ಹಿಂದಿನಿಂದಲೂ ಕನ್ನಡ ದೇಶವೆಂಬುದನ್ನು ವಿಸ್ತಾರಗೊಳಿಸುವುವು. ಕದಂಬ, ಚೇರ, ಗಂಗ, ಚೋಳ, ಚಂಗಾಳ್ವ, ಕೊಂಗಾಳ್ವ. ಈ ಕನ್ನಡ ಅರಸರೇ ಇಲ್ಲಿ ಆಧಿಪತ್ಯ ನಡೆಸಿದ ಕಾರಣವೂ ಇಲ್ಲಿನ ಪ್ರಜೆಗಳ ಸಂಪೂರ್ಣ ಬೆಂಬಲವೂ ಇದ್ದ ಪ್ರಯುಕ್ತವೂ ಈ ನಾಡು ಕನ್ನಡ ನಾಡು. ಇಲ್ಲಿನ ಭಾಷೆ ಕನ್ನಡ ಭಾಷೆಯಾಗಿತ್ತೆಂಬುದರಲ್ಲಿ ಸಂದೇಹಕ್ಕೆ ಎಡೆಯೇ ಇಲ್ಲ. ಕನ್ನಡ ನಾಡಿನ ಧರ್ಮಗಳಾದ ಜೈನ ವೈಷ್ಣವ, ಶೈವ ಸಂಪ್ರದಾಯಗಳು ಅರಸರ ಸಂಪ್ರದಾಯಗಳಾಗಿದ್ದುವು.

೨

ಕದಂಬ ಪೀಳಿಗೆಯವನಾದ ಚಂದ್ರವರ್ಮ, ಅವನ ಮಗ ದೇವಕಾಂತ ಇವರ ಹೆಸರು ಕಾವೇರಿ ಪುರಾಣದಲ್ಲಿ ಬರುವುದು. ಕೊಡಗರ ಜಾತೀಯ ಮೂಲ ಪುರುಷರು ಇವರೆಂದು ಆ ಪುರಾಣೋಕ್ತವಾಗಿದೆ. ಈ ಕದಂಬರು ಉತ್ತರದಲ್ಲಿ ಕೊಡಗು-ಮಂಜರಾಬಾದು ಪ್ರಾಂತಗಳಲ್ಲಿದ್ದರು. ಹತ್ತು-ಹನ್ನೆರಡನೆಯ ಶತಮಾನಗಳಲ್ಲಿ ಇವರು ದಕ್ಷಿಣಕ್ಕೂ ಬಂದರು. ಈ ಪೀಳಿಗೆಯವನಾದ ರುದ್ರರಸನ ಮಗನಾದ ದಯಸಿಂಹ ನರಪತಿ ಉತ್ತಮ ವಿಮರ್ಶಕನೂ, ನಾಟಕ ಕರ್ತನೂ ಆಗಿದ್ದನೆಂದು ತಿಳಿದುಬರುವುದು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕೀರ್ತಿಶಾಲಿಗಳಾದ ಕವಿಗಳಾರೂ ಇಲ್ಲಿ ಇದುವರೆಗೆ ಕಂಡು ಬರದಿದ್ದರೂ ಶಾಸನಗಳಲ್ಲಿ ಕಂಡು ಬರುವ ವೃತ್ತ-ಪದ್ಯಗಳಿಂದ ಇಲ್ಲೂ ಕನ್ನಡ ಕವಿಗಳು ಆಗಿ ಹೋಗಿರುವರೆಂಬುದು ವ್ಯಕ್ತವಾಗುವುದು.

ಸಾಮಾನ್ಯವಾಗಿ ದೊರೆಯುವ ಚಾರಿತ್ರಿಕ ವಿಷಯಗಳೂ ಶಾಸನದಲ್ಲಿ ಹೇಳಿರುವುವೇ ಆಗಿವೆ. ಕೆಲವು ಕಡೆಗಳಲ್ಲಿ ಈ ಚರಿತ್ರೆಯ ವಿಷಯಗಳೂ ಈ ಶಾಸನಗಳನ್ನೇ ಅವಲಂಬಿಸಿದೆ. ರಾಜಭಕ್ತರಾದ ಇಲ್ಲಿನ ಪ್ರಜೆಗಳು ಸರ್ವವಿಧದಲ್ಲೂ ಇಲ್ಲಿನ ಅರಸರಿಗೆ ಒಲಿದವರಾಗಿದ್ದರು. ಈ ರಾಜ ಪರಂಪರೆಗಳ ಚರಿತ್ರೆ ಯಾವಾಗಲೋ ಹೇಗೋ ನಷ್ಟವಾಗಿರಬೇಕು.

ಇಷ್ಟು ಹೇಳಿದ ಮೇಲೆ ಇಲ್ಲಿ ಕನ್ನಡದ ಪ್ರಭಾವ ಶತಮಾನಗಳಿಂದ ನಡೆದು ಬಂದಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಹಾಗಾದರೂ ಕೊಡಗು ಜನಾಂಗದವರು 'ಕನ್ನಡಿಗರೇ ಅಲ್ಲವೆ?' ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲದಿರುವಾಗಲೂ ಅಲ್ಲಲ್ಲಿ ಈ ಪ್ರಶ್ನೆ ಈಗಲೂ ಏಳುತ್ತಿದೆ. ಇವರ ಧರ್ಮ, ಪದ್ಧತಿ, ರೀತಿ, ನೀತಿ ವಿಷಯಗಳಲ್ಲಿ ಇತರ ಕನ್ನಡಿಗರಿಗಿಂತ ವ್ಯತ್ಯಾಸ ಕಂಡುಬರುವುದೇನೋ ನಿಜ. ಆದರೆ ಈ ವ್ಯತ್ಯಾಸ ಕನ್ನಡಿಗರಿಗೆ ಮಾತ್ರ ಸಂಬಂಧಿಸಿದುದಲ್ಲ. ಹರಿದು ಹಂಚಾಗಿರುವ ಕನ್ನಡ ಪ್ರಪಂಚದಲ್ಲಿ ಈ ಬಗೆಯ ವ್ಯತ್ಯಾಸವಿರುವುದೂ ಅತಿಶಯವಲ್ಲ. ಹಿಂದೂಧರ್ಮ ಶಾಸ್ತ್ರಗಳಲ್ಲಿ ಹೇಳಿರುವ ಪದ್ಧತಿಗಳಿಗೂ ಸ್ವಲ್ಪ ದೂರವಾಗಿ ಕಾಣುವುದಾದರೂ ಸ್ವಲ್ಪ ಬದಲಾವಣೆಯಾಗಿದೆಯಷ್ಟೆ. ಕೆಲವು ಸಂದರ್ಭಗಳಲ್ಲಿ ಮಲೆಯಾಳದ ಪದ್ಧತಿಗಳಿಗನುಸಾರವಾಗಿ ಪೂಜಾಕ್ರಮಗಳು ಕಂಡುಬರುವುವು. ಆದರೆ ಈ ಪೂಜಾದಿಗಳು ತೋಟ, ಗದ್ದೆ ಇವುಗಳ ರಕ್ಷಣೆಗೆ ಸಂಬಂಧಪಟ್ಟವು. ಈ ಪೂಜಾಕ್ರಮಗಳ ಕಾರಣದಿಂದ ತಾವು ಮಲೆಯಾಳದವರೆಂದು ಹೇಳಿಕೊಳ್ಳುವವರೂ ಉಂಟು—ಶಿಶು ಜನನಾನಂತರ ಮಲೆಯಾಳದ ಜ್ಯೋತಿಷ್ಕರು ಜಾತಕ ಬರೆಯುವುದು, ನಾಮಕರಣ ಮಾಡಿಸುವುದು, ಹಳ್ಳಿ-ಗ್ರಾಮಾಂತರಗ

ಳಲ್ಲಿ ಗುಳಿಕ, ಚೌಡಿ, ಮುತ್ತಪ್ಪ ದೇವರು ಮೊದಲಾದ ದೇವರ ಪೂಜೆ ನಡೆಸುವುದು ಇವಿಷ್ಟೇ ಈ ಸಮರ್ಥನೆಗೆ ಆಧಾರಗಳು. ಪ್ರತಿಯೊಬ್ಬ ಕೊಡಗನೂ, ಕೊಡಗಿತಿಯೂ ಸುಲಭವಾಗಿಯೇ ಮಲೆಯಾಳ ಮಾತನಾಡುವರು. ಈ ಬಗೆಯ ಅನುಭವ ದಕ್ಷಿಣ ಕೊಡಗಿನವರಿಗೆ ಮಾತ್ರ. ಉತ್ತರ ಭಾಗವೆಲ್ಲ ಮೈಸೂರಿನವರೊಡನೆ ಸಂಪರ್ಕ ಹೊಂದಿರುವುದು. ಮೊದಲನೆಯ ಶತಮಾನದಲ್ಲಿ ದೊರೆತ ತಾಮ್ರಪಟಗಳೇ ಅಚ್ಚಗನ್ನಡದಲ್ಲಿ ಬರೆಯಲ್ಪಟ್ಟಿವೆಯೆಂದ ಮೇಲೆ ಈ ನಾಡು ಕನ್ನಡ ನಾಡು. ಈ ನಾಡು ಮಲೆಯಾಳ ಭಾಗವಾಗಿದ್ದಲ್ಲಿ ಪ್ರಾಚೀನ ಶಾಸನಗಳೂ ಏಕೆ ಕನ್ನಡ ಭಾಷೆ-ಕನ್ನಡ ಲಿಪಿಯಲ್ಲಿ ಬರೆಯಲ್ಪಡಬೇಕಾಗಿತ್ತು?

ಜಯನೃಪ ಕಾವ್ಯಕರ್ತೃವಾದ ಮಂಗರಸಕವಿಯು ಕೊಡಗಿನಲ್ಲಿದ್ದನೆಂದು ಒಂದು ಶಾಸನದಿಂದ ತಿಳಿದುಬರುವುದು. ಅಣ್ಣನ ಬಂಟನೆಂದು ಪ್ರಸಿದ್ಧನಾದ ರಕ್ಕಸ ಗಂಗನು (ಕ್ರಿ. ಶ. ೯೭೮) ಬೆದ್ದೊರೆಗೆರೆ (ಪೆದ್ದೊರೆಗೆರೆ-ಲಕ್ಷ್ಮಣ ತೀರ್ಥ ಪ್ರಾಂತ)ಯಲ್ಲಿದ್ದನು. ಕೊಡಗರನೇಕರ ಸಾಹಸ ಕೃತ್ಯಗಳನ್ನು ಕುರಿತ ಶಾಸನಗಳೂ ಕನ್ನಡದಲ್ಲೇ ಇವೆ. ಈ ಕಾರಣಗಳಿಂದ ಕೊಡಗರು ಕನ್ನಡ ಅರಸರ ಪ್ರಭಾವದಿಂದ ಕನ್ನಡಿಗರಾದರೆಂಬ ವಾದದಲ್ಲಿ ಹುರುಳಿಲ್ಲ. ಈ ಅರಸರ ಪೀಳಿಗೆಗೆ ಮುಂಚೆಯೇ ಇವರು ಕನ್ನಡಿಗರೆಂಬುದು ಪ್ರಮಾಣ ಪುರಸ್ಸರವಾದುದು.

ಹಿಂದಿನ ಒಬ್ಬಿಬ್ಬರು ರಾಜರ ಅಥವಾ ಪಾಳೆಯಗಾರರ ಆಳ್ವಿಕೆಗೆ ದಕ್ಷಿಣದಲ್ಲಿ ವೈನಾಡು, ಪಶ್ಚಿಮದಲ್ಲಿ ಪುತ್ತೂರು-ಸುಳ್ಯಗಳು ಸೇರಿದ್ದುವೆಂದು ಚರಿತ್ರೆಯಿಂದ ತಿಳಿದುಬರುವುದು. ಈ ಪ್ರಯುಕ್ತ ದಕ್ಷಿಣ ಭಾಗದಲ್ಲಿ ಮಲೆಯಾಳ ಭಾಷೆಯ ಪ್ರಭಾವ ಕಂಡುಬಂದರೂ–ಅವರ ಭಾಷೆ, ನಡೆನುಡಿಗಳು ಜನರ ಅನುಸರಣೆಗೆ ಬಂದೇ ಇಲ್ಲ. ಮಲಬಾರಿನ ಸಂಪರ್ಕವಿರುವ ದಕ್ಷಿಣ ಕೊಡಗಿನಲ್ಲೂ ಕನ್ನಡ ಶಾಸನಗಳೇ ದೊರೆಯುವುವು. ಇದಕ್ಕೆ ಕನ್ನಡ ಅರಸರ ಪ್ರಭಾವಕ್ಕಿಂತಲೂ ಕನ್ನಡ ಪ್ರಜೆಗಳ ಪ್ರಭಾವವೆಂದೇ ಹೇಳಲಾಗದಿರದು.

೩

ಕೊಡಗರೂ ಹಿಂದೂಗಳೇ ಎಂದು ಮೊದಲೇ ಹೇಳಿದೆ. ಹಿಂದೂ ಧರ್ಮಕ್ಕೆ ವಿಲಕ್ಷಣವಾದ ಯಾವ ಧರ್ಮವೂ ಅವರ ಅನುಷ್ಠಾನದಲ್ಲಿಲ್ಲ. ಎಲ್ಲವೂ ನಮ್ಮ ಧರ್ಮ ಶಾಸ್ತ್ರಗಳನುಸಾರವಾಗಿಯೇ ಇವೆ. ಆದರೆ ಅವರ ಯಾವ ಧರ್ಮಕಾರ್ಯಗಳಲ್ಲೂ ವೇದ ಮಂತ್ರಗಳಿಲ್ಲ. ವಿವಾಹಾದಿ ಕ್ರಮಗಳು ಸ್ವಲ್ಪ ವ್ಯತ್ಯಾಸ ಇದ್ದರೂ ಹಲವು ಬಗೆಯ ವಿವಾಹ ಕ್ರಮಗಳಲ್ಲಿ ಅದೂ ಒಂದೆಂದು ಸಿದ್ಧಾಂತ ವಾದಿಗಳು ಹೇಳುವರು. ಇಂತಹ ಕಾರ್ಯಗಳಲ್ಲಿ ಅರುವರೆಂಬವರು ಪೌರೋಹಿತ್ಯ ನಡೆಸುವರು. ಈ ದಟ್ಟ ಕಾಡಿನ ಪ್ರದೇಶಕ್ಕೆ ವಿವಿಧ ಪ್ರಾಂತಗಳಿಂದ ಜನರು ಚಲನವಲನತ್ವೇನ ಬಂದು ಸೇರಿ, ನಾನಾ ಭಾಷೆಯಾಡುವ ಪಂಗಡದವರಾದ ಪ್ರಯುಕ್ತ ಬೇರೆ ಬೇರೆ ಭಾಷೆಯ ಸಮ್ಮಿಲನದ ಫಲಿತಾಂಶವೇ ಈ ಒಂದು ಕೊಡಗು ಭಾಷೆಯೆಂದು ಹೇಳಬೇಕು. ಈ ನುಡಿಯಲ್ಲಿ ಕನ್ನಡ ಭಾಷೆಯ ಅದರಲ್ಲೂ ಹಳೆಗನ್ನಡದ ಪ್ರಭಾವ ಹೆಚ್ಚು. ಕೊಡಗು ಭಾಷೆಗೆ ಸ್ವಂತ ಲಿಪಿ ಇಲ್ಲ. ಇಲ್ಲಿ ಪ್ರಾಚೀನ ಕಾಲದಲ್ಲಿ ಬಂದು ಸೇರಿದ ಜನರಲ್ಲಿ ನಾನಾ ಬಗೆಯ ನಾನಾ ಪದ್ಧತಿಯ ಜನರಿದ್ದ ಕಾರಣವೂ ಹಿಂದೆ ಈಗಿನಂತೆ ಹಲವಾರು ಧರ್ಮಗಳಿಲ್ಲದಿದ್ದ ಕಾರಣವೂ ಬಂದವರೆಲ್ಲರೂ ಒಂದೇ ಕೊಡಗು ಪಂಗಡದವರಾಗಿ ಉಳಿದರೆಂದು ತೋರುವುದು. ಕಾರಣಾಂತರಗಳಿಂದ ಚದರಿ ಹೋದ ಈ ಗುಂಪು ಸಂಸ್ಕೃತ ದೂರರಾದುದರಿಂದಲೋ, ಆ ಗುಂಪಿನಲ್ಲಿ–ವೇದ ಶಾಸ್ತ್ರಗಳನ್ನರಿತ ಜನರಿಲ್ಲದ ಕಾರಣದಿಂದಲೋ ಸಂಸ್ಕೃತ ಮಂತ್ರಗಳನ್ನು ಬಿಟ್ಟು, ಶಾಸ್ತ್ರಸಮ್ಮತವಾದ, ತಮ್ಮದೇ ಆದ ಒಂದು ಕಟ್ಟು—ಕಟ್ಟಳೆಗಳನ್ನು ಅನುಸರಿಸಲು ಮೊದಲು ಮಾಡಿರಬೇಕು.

ಇವರ ಶಾಸ್ತ್ರಸಮ್ಮತವಾದ ವಿಷಯಗಳು ಕೊಡಗು ಪದಗಳ ರೂಪದಲ್ಲಿವೆ. ಇತರ ಹಿಂದೂಗಳಲ್ಲಿ ಹಾಡುಗಳ ಪದ್ಧತಿಯಿರುವಂತೆ, ಇವರ ಎಲ್ಲಾ ಶುಭ-ಶೋಭನ ಮತ್ತು ಇತರ ಕಾರ್ಯಗಳಲ್ಲಿ ದುಡಿ ಎಂಬ ಸಣ್ಣ ಡೋಲನ್ನು ಬಾರಿಸಿಕೊಂಡು ಸಂದರ್ಭೋಚಿತವಾದ ಹಾಡುಗಳನ್ನು ಹೇಳುವ ವಾಡಿಕೆ. ಉಳಿದ ವ್ರತಾದಿಗಳಿಗೆ ಇತರ ಹಿಂದುಗಳಂತೆ ಮಂತ್ರ ಮಾರ್ಗವನ್ನೇ ಅನುಸರಿಸುವರು. ಕೊಡಗು ಪೀಳಿಗೆಯನ್ನು ಪರಿಶೀಲಿಸಿದರೆ ಇತರರಿಗೆ ಗೋತ್ರಗಳಿರುವಂತೆ, ಇವರ ಒಂದೊಂದು ವಂಶಕ್ಕೂ ವಂಶದ ಅಥವಾ ಮನೆಯ ಹೆಸರಿದೆ. ಕೋದಂಡ್ರ ಪಟ್ಟಡ, ಪಟ್ಟಮಾಡ, ಪಾಂ

ಡಂಪ್ರ, ಕೊಡಂದೆರ, ಇತ್ಯಾದಿ. ಈ ಹೆಸರುಗಳ ಕೊನೆಯ ಅಕ್ಷರ 'ಡ' ಅಥವಾ 'ರ' ಮನೆ ಎಂಬರ್ಥದಲ್ಲಿ ಪ್ರಯೋಗವಾಗಿದೆ. 'ಡ'ಕಾರ 'ರ'ಕಾರವಾಗಿ ಪರಿಣಮಿಸುವುದು ಕನ್ನಡಕ್ಕೇನೂ ಹೊಸದಲ್ಲ. 'ಕೋದಂಡ' ಎಂಬ ಶಬ್ದವು ಕೋದಂಡ ಧನುಸ್ಸಿನ ಹೆಸರಿನ ಉತ್ಪತ್ತಿಯೆಂದೂ, ಆ ಹೆಸರು ವರಪ್ರಸಾದವಾಗಿ ಈ ಪರಂಪರೆಗೆ ಬಂದುದೆಂದೂ ಪ್ರತೀತಿ. 'ಕೊಡಂದೆರ' ಎಂಬುದು 'ಕೊಡು ಎಂದವರ' ಪರಂಪರೆ. 'ಪಟ್ಟಮಾಡ' ಎಂಬ ಹೆಸರಿನಲ್ಲಿ "ಪಟ್ಟಮ" ಎಂದರೆ ಬ್ರಾಹ್ಮಣ ಎಂದರ್ಥ. ಪಟ್ಟವಣೆ-ಎತ್ತರವಾದ ಆಸನ ಅಥವಾ ಸಿಂಹಾಸನ ಎಂಬರ್ಥದಲ್ಲಿ ಪ್ರಯೋಗವಾಗಿದೆ. ಇಂತಹ ಉನ್ನತಾಸನದಲ್ಲಿ ಎಂದರೆ ತಮಗಿಂತ ಉನ್ನತವಾದ ಪೀಠದಲ್ಲಿ ಕುಳ್ಳಿರಲು ಅರ್ಹತೆಯುಳ್ಳವನು ಬ್ರಾಹ್ಮಣ ಎಂದರೆ "ಪಟ್ಟಮ". ಬ್ರಾಹ್ಮಣನ ಕಾರಣವಾಗಿ ಬೆಳೆದು ಬಂದ ವಂಶ "ಪಟ್ಟಮಾಡ" ಮನೆತನ. ಹೀಗೆ ಪ್ರತಿಯೊಂದು ಮನೆತನಕ್ಕೂ ಒಂದೊಂದು ಅರ್ಥವಿರುವುದು. ಅನೇಕ ಹೆಸರುಗಳು ಕನ್ನಡ ನುಡಿಗೆ ಸಂಬಂಧಿಸಿದುದಾಗಿದೆ. ಅವುಗಳಲ್ಲಿ ಅಪಭ್ರಂಶಗಳಿರಬಹುದು. ಹಾಗೆಯೇ ಹಳ್ಳಿಗಳ ಮತ್ತು ಊರುಗಳ ಹೆಸರು. ಉತ್ತರ ಕೊಡಗು ಅಚ್ಚಗನ್ನಡ ಸೀಮೆಯೆಂಬುದರಲ್ಲಿ ಚರ್ಚೆಯೇ ಇಲ್ಲವಾದ ಕಾರಣ ದಕ್ಷಿಣ ಕೊಡಗಿನ ಊರು ಮತ್ತು ಹಳ್ಳಿಗಳ ಹೆಸರು ಕೆಲವನ್ನು ನೋಡೋಣ. ದೇವನೂರು, ತಿರುಗೂರು (ಕಿರಿದು+ಊರು) ಶ್ರೀಮಂಗಲ, ಹುದಿಕೇರಿ ಪುದಿ+ಕೇರಿ=ಪುದಿ=ಹೊಸದು), ಪೊನ್ನಂಪೇಟೆ (ಪೊನ್ನಪ್ಪ+ಪೇಟೆ), ಐವತ್ತೊಕ್ಕಲು, ನಾಗರ ಹೊಳೆ, ಕಡಂಗ ಮೂರೂರು (ಕಡಂಗ=ಗಡಿಗಾಗಿ ತೋಡಿರುವ ಅಗಲವಾದ ಕಾಲುವೆ=ಮೂರು+ಊರು), ನಾಲ್ಕು ನಾಡು. ಇನ್ನು ನದಿಗಳ ಹೆಸರೂ ಹಾಗೆಯೇ—ಲಕ್ಷ್ಮಣ ತೀರ್ಥ, ಕುಮಾರ ಧಾರಾ. ೯–೧೦ನೇ ಶತಮಾನಗಳಲ್ಲಿ ಈ ಲಕ್ಷ್ಮಣ ತೀರ್ಥ ಪ್ರಾಂತದಲ್ಲಿ ಕೊಂಗಾಳ್ವರು ಮೊದಲಾದವರು ರಾಜ್ಯಭಾರ ಮಾಡಿದ್ದಾರೆ. ಇದೇ ಪೆದ್ದೂರೆಗೆರೆ ಪ್ರಾಂತ. ಸೋಮುನಬೆಟ್ಟ, ದಕ್ಷಿಣದಿಂದಲೇ ಬ್ರಹ್ಮಗಿರಿಶ್ರೇಣಿ ವಿಸ್ತರಿಸಿಕೊಂಡು ಬಂದಿದೆ. ಈ ಪ್ರದೇಶಗಳು ಮಲಬಾರು ದೇಶಕ್ಕೆ ಒತ್ತಾಗಿರುವ ಪ್ರಯುಕ್ತ ಉತ್ತರದಲ್ಲಿ ಮೈಸೂರಿನ ಸಂಪರ್ಕವಿರುವಂತೆ; ಮಲಬಾರು ಸಂಪರ್ಕವಿರುವುದು ಅತಿಶಯವಲ್ಲ. ಹೀಗೆ ಕೇರಿ, ಕೊಪ್ಪಲು, ಪೇಟೆ, ಹೊಳೆ, ನಾಡು, ಕುಂದು, ಮಲೆ, ಒಕ್ಕಲು ಎಂಬ ಅಚ್ಚ ಕನ್ನಡ ಪದಗಳು ಊರು, ಹಳ್ಳಿ ಬೆಟ್ಟ ಮೊದಲಾದುವುಗಳಿಗೆ ಹೆಚ್ಚಾಗಿ ಪ್ರಯೋಗವಾಗಿವೆ. ಅಲ್ಲಲ್ಲಿ ಮಲೆಯಾಳದ ಪ್ರಯೋಗಗಳೂ ಅಲ್ಪ ಸ್ವಲ್ಪ ಇರಬಹುದು. ಆದರೆ ಕನ್ನಡ ಪದಪ್ರಯೋಗವೇ ಹೆಚ್ಚು.

ದಕ್ಷಿಣ ಪ್ರಾಂತದಲ್ಲಿ ಕೊಡಗರೇ ಹೆಚ್ಚು. ಇತರರ ಸಂಖ್ಯೆ ಕಡಮೆ. ಕೊಡಗರಲ್ಲಿ ಕೊಡಗರು, ಅಮ್ಮ ಕೊಡಗರು, ಹೆಗ್ಗಡೆಗಳು ಎಂಬ ಮೂರು ಪಂಗಡಗಳವರೂ ಈ ಪ್ರಾಂತದಲ್ಲಿದ್ದಾರೆ. ಕೊಡಗರಿಗೆ ಕಾವೇರಮ್ಮನು ಕೊಟ್ಟ ಶಾಪದ ಪರಿಣಾಮವಾಗಿ ಅಮ್ಮ ಕೊಡಗರ ಪಂಗಡವಾಯಿತೆಂದು ಪ್ರತೀತಿ. ಈ ಪಂಗಡದವರ ಗಂಡುಸರ ಹೆಸರ ಕೊನೆಯಲ್ಲಿ 'ಅಮ್ಮಯ್ಯ' ಎಂಬ ಪ್ರತ್ಯಯ ಬರುವುದು. ಮುದ್ದಮ್ಮಯ್ಯ, ಕಾಳಮ್ಮಯ್ಯ, ಅಪ್ಪಣ್ಣಮ್ಮಯ್ಯ ಹೀಗೆ. ಹಳೆಗನ್ನಡದಲ್ಲಿ ಅಮ್ಮ (ಅಬ್ಬೆ) ಎಂಬ ಶಬ್ದಕ್ಕೆ ಅಪ್ಪ ಎಂಬ ಅರ್ಥವೂ ಇರುವುದಷ್ಟೆ. ಅದೇ ರೀತಿ 'ಅಪ್ಪಯ್ಯ' ಎಂಬುದು ಹಿಂದಿನಿಂದಲೂ 'ಅಮ್ಮಯ್ಯ' ಎಂಬ ಪ್ರಯೋಗದಲ್ಲಿ ರೂಢಿಯಾಗಿರುವುದು. ಶೀನಪ್ಪಯ್ಯ ರಾಮಪ್ಪಯ್ಯ ಎಂದು ಕನ್ನಡಿಗರಿಗೆ ಹೆಸರಿರುವಂತೆ, ಇನ್ನು ಇತರ ಹೆಸರುಗಳು. ಪೂವಯ್ಯ ಇದೇ ಹೆಸರು ಉತ್ತರದಲ್ಲಿ ಹೂವಯ್ಯ ಎಂದು ಈಗಲೂ ಇದೆ. ಕಾರ್ಯಪ್ಪ, ಚಿನ್ನಪ್ಪ, ಪೊನ್ನಪ್ಪ (ಹೊನ್ನಪ್ಪ) ಪೊನ್ನಮ್ಮ, (ಹೊನ್ನಮ್ಮ) ಕುಟ್ಟಯ್ಯ (ಕೃಷ್ಣಯ್ಯ), ನಾಣಯ್ಯ (ನಾರಣಯ್ಯ), ಪೂಣಚ್ಚ (ಪೂರ್ಣ ಎಂಬ ಪದದ ಪ್ರಯೋಗ), ಅಚ್ಚಯ್ಯ (ಅಚ್ಯುತ ಎಂಬ ಪದದ ಜನ್ಯ) ಮಾದಯ್ಯ-ಮಾದಪ್ಪ (ಮಹದೇವಯ್ಯ) ಇವಲ್ಲದೆ ಅಪ್ಪಣ್ಣ, ನಂಜುಂಡ, ಸುಬ್ಬಯ್ಯ, ಪೊನ್ನಮ್ಮ ಸೀತಮ್ಮ ಮೊದಲಾದ ಕರ್ಣಾಟಕದಲ್ಲಿ ವಾಡಿಕೆಯಾದ ಹೆಸರುಗಳೂ ಇವೆ.

೪

ಕೊಡಗು ಭಾಷೆಗೆ ಲಿಪಿಯಿಲ್ಲ. ಕೊಡಗು ಭಾಷಾ ಲೇಖಕರು ಕನ್ನಡ ಲಿಪಿಯಲ್ಲಿ ತಮ್ಮ ಲೇಖನಗಳನ್ನೂ, ಗ್ರಂಥ, ಕಾವ್ಯಗಳನ್ನೂ ಕನ್ನಡ ಲಿಪಿಯಲ್ಲೇ ಅಚ್ಚು ಮಾಡಿಸಿರುವರು. ಆಡುವ ಭಾಷೆ ಕನ್ನಡ,

ತುಳು ಮತ್ತು ಮಲೆಯಾಳ ಭಾಷೆಗಳ ಸಮ್ಮಿಶ್ರವಾಗಿದೆ. ಈ ಮೂರೂ ದ್ರಾವಿಡ ಭಾಷಾ ಶಬ್ದಗಳ ಮಿಶ್ರವಾದರೂ ಹಳೆಗನ್ನಡ ಶಬ್ದಗಳು ಹೇರಳವಾಗಿ ಸಿಕ್ಕುತ್ತವೆ. ಅಂದು, ಇಂದು, ಅಕ್ಕು, ಬಪ್ಪ, ಕೊಡಿ (ತುದಿ), ಮುತ್ತ್ಪಪಟ್ಟ (ರತ್ನಸಿಂಹಾಸನ) ಇತ್ಯಾದಿ ಶಬ್ದಗಳು. ಕೊಡಗು ಆಚಾರ ವಿಚಾರ ಪದ್ಧತಿಗಳಿಗೆ ಸಂಬಂಧಪಟ್ಟ ಹಾಡುಗಳು ಕೊಡಗು ಭಾಷೆಯಲ್ಲಿವೆ ಮತ್ತು ಈ ಹಾಡುಗಳು ಈಗಲೂ ಬಳಕೆಯಲ್ಲಿವೆ. ಅವುಗಳ ಸಂದರ್ಭ ವಿಶೇಷವನ್ನೂ ಕನ್ನಡ ಅನುವಾದವನ್ನೂ ಕೊಟ್ಟರೆ, ಈ ಭಾಷೆ ಕನ್ನಡಕ್ಕೆ ಎಷ್ಟು ಸಮೀಪವೆಂಬುದು ಸ್ಪಷ್ಟವಾಗುವುದು.

ಕನ್ಯಾರ್ಥಿಯಾಗಿ ಬರುವ ತರುಣನೊಬ್ಬನು ಕನ್ಯೆಯ ಮನೆಯ ಅಂಗಳವನ್ನು ಪ್ರವೇಶಿಸುವಷ್ಟರಲ್ಲಿ ಕನ್ಯೆಯ ತಂದೆತಾಯಿಗಳಾರೂ ಮನೆಯಲ್ಲಿರದೆ ಕೆಲಸದ ಮೇಲೆ ಹೋಗಿರುವರು. ಅವಳೊಬ್ಬಳೇ ಇರುವಳು. ಬಂದ ಆಗುಂತಕನ ಸುಳಿವನ್ನರಿತ ಆಕೆ ಆಲೋಚಿಸಿದ ರೀತಿ ಹೀಗಿದೆ:—ಆ ಕನ್ನೆಗೆ ಗೆಜ್ಜೆ ಶಬ್ದ ಕೇಳಿದಂತಾಗಿ ಯಾರದೋ ಎತ್ತು ಅಂಗಳಕ್ಕೆ ಬಂದಿರಬೇಕೆಂದೂಹಿಸಿ ಕೊನೆಗೆ ತಾನೇ ಹೊರಕ್ಕೆ ಬಂದು ಸ್ವಲ್ಪ ಸಮಯದ ನಂತರ ಯುವಕನನ್ನು ಕಂಡು ಅವನಲ್ಲಿ ಅನುರಕ್ತಳಾಗುವಳು: ಆ ಪದ್ಯಗಳು ಸರಳ ರಗಳೆಯಲ್ಲಿ ಹೀಗಿವೆ:—

ಆಡ ಚೋಮು ಬಂದುದೊ	ಆರ ಎತ್ತು ಬಂದುದೊ
ಎಂದೆಣ್ಣಿ ನೆನತಿತ್	ಎನ್ನುತ ನೆನೆಯುತ
ಓಡಿ ಬಂದ್ ನೋಟಣೆ	ಓಡಿ ಬಂದು ನೋಡಲು
ಕಾಜುಮೆ್ಮ ಕಣಿವೆಲ್	ಗಾಜುವೆಟ್ಟ ಕಣಿವೆಲಿ
ಪುಂಡಂಡ ಸಿರೆಸಿರೆ	ಬಿದಿರು ಮೆಳೆ ಮಧ್ಯದಿ
ನೇರ ಬಂದುದಿ ಚೋಲೆ	ಸೂರ್ಯನುದಿಸಿ ಬಂದಂತೆ
ಬೊಳ್ಳಿ ಮಾಡ ಪಟ್ಟಿಲ್	ಬೊಳ್ಳಿ ಮಾಡ ಹಟ್ಟಿಯಲಿ
ಬಾಲ ಬಂದೊಳ ಪಾಂಜ	ತರುಣ ಬಂದು ನಿಂದಿರೆ
ಅದ್ ಕಂಡ ಮಾಚಮ್ಮ	ಅದನು ಕಂಡ ಮಾಚಮ್ಮ
ಓಡಿ ಪಾರಿ ಪೊಯಿತ್	ಓಡಿ ಹಾರಿ ಹೋದಳು
ಕೆತ್ತ್ರಂಗಲ್ ಗುಡ್ಡತ್	ಕರಿಕಲ್ಲ ಗುಡ್ಡದಿ
ಚಂಚೋಲೆ ತಳತಿಂಜ	ಸರಪಳಿಯಿಂ ಬಿಗಿದಿರ್ದ
ತನ್ನಡಣ್ಣ ದೇವಂಡ	ತನ್ನ ಅಣ್ಣ ದೇವರ
ಖಳುಳ್ಳ ಕಡಿನಾಯ	ಕಚ್ಚುವ ಖಳ್‌ನಾಯ
ಕೂಟ್‌ಲ್ ತಲೆನಾಯ	ಕೂಟದಿ ಹಿರಿನಾಯ್ಗೆ
"ಒಂದು ಕೇಳು ಬೊಳ್ಳು*ವೆ	'ಒಂದು ಕೇಳು ಬೊಳ್ಳು'ವೆ
ಇಕ್ಕ ಬಂದ ಬೆಂದುವೊ	ಈಗ ಬಂದ ಬಂಧುವು
ನಾಕಾಯಿಲ್ ಬಂದಿನೊ	ಎನಗಾಗಿ ಬಂದಿರಲು
ನೀ ಕಡಿಪ ಕಾಗಲ	ನೀನ ಕಚ್ಚಲಾಗದು
ನಾಟಕಾಯಿ ಬಂದಿರೆ	ನಟನೆಯಿಂದ ಬಂದಿರೆ
ಪಾರಿತ್ ಕಡಿ ಚೋಳೊ	ಹಾರುತ ಕಡಿದೋಡಿಸು

ಅವಳ ಮಾತುಗಳ ಇಂಗಿತವನ್ನರಿತ ಆ ನಾಯಿ ಬಂದ ಕನ್ಯಾರ್ಥಿಯನ್ನು ಸಮೀಪಿಸಲು ಆತನು ಸಣ್ಣ ಕಲ್ಲೊಂದನ್ನು ಮಂತ್ರಿಸಿ, ಅದರ ಕಡೆಗೆಸೆಯುವನು. ಮಂತ್ರಮುಗ್ಧವಾದ ಆ ನಾಯಿ, ಆ ಆಗುಂತಕನು ಕನ್ನೆಯನ್ನು ಬಯಸಿಯೇ ಬಂದಿರುವನೆಂದು ತಿಳಿದುಕೊಂಡಿತೋ ಎಂಬಂತೆ ಬಾಲ ಮುದುರಿ ಹಿಂದಕ್ಕೆ ಹೊರಟು ಹೋಗುವುದು. ಆ ಕನ್ಯಾರ್ಥಿ ವರನಲ್ಲಿ ಮೋಹಗೊಂಡ ಆ ಯುವತಿ ಅವನನ್ನು ಉಪಚರಿಸಿ ಕುಳ್ಳಿರಿಸುವಳು:—

ಉಂಬಳ ಮನೆಯಿಂಜಿ	ಅಡುಗೆಯ ಮನೆಯಿಂದ
ದುಂಬ್‌ನ ಕಲತ್‌ಂಜಿ	ತುಂಬಿದ ಕೊಡದಿಂದ
ಬೆಳ್ಳಿ ಚೊಂಬ್ ನೀರಾಯಿ	ಬೆಳ್ಳಿ ಕಲಶೋಧಕವ
ಸುಬ್ಬರಾಯ ದೇವಂಡ	ಸುಬ್ರಹ್ಮಣ್ಯ ದೇವರ
ಪೀಲಿಯಂಡ ಮೈಲ್‌ಡ	ವಾಹನವಾದ ನವಿಲಿನ
ಮೈಲ್‌ನ ನಡೆಪೊರೆ	ನವಿಲಿನ ನಡೆಯಂತೆ
ಆಡಿಲಾಡಿ ಬಂದಿತ್	ನಲಿದು— ಒಲಿದು ಬರುತ
ಬಾಲಮಿಂಜ ನೀ ಬೆಚ್ಚ	ಬಾಲನಿದಿರು ನೀರಿಟ್ಟಳ್

ಇನ್ನೂ ಹೀಗೆ ಸಾವಿರಾರು ಸಾಲುಗಳುಳ್ಳ ಪದ್ಯಗಳಿವೆ. ಮೇಲೆ ಹೇಳಿದ ಪದ್ಯಗಳಲ್ಲಿ ಹಲವಾರು ಕನ್ನಡ ಶಬ್ದಗಳು ಸಿಗುವುವು. ಪಾಟ್‌ಪಾಡಿ=ಹಾಡು ಹಾಡಿ ಪಲರು=ಹಲವರು, ತುದಿಕು=ಪುತಿಸುಗು, ಪಳಿಯು=ಹಳಿಯು, ಕೂ=ಕೂಳ್, ಪೇನು=ಜೇನು, ಪೆರೆಮೋರ್=ಕೆನೆಮೊಸರು, ಮೊದ್‌ರತ್=ಮಧುರತರ, ಕೈಪ-ಪುಳಿಪ=ಕಹಿ ಹುಳಿಯಾಗುವುದು, ಕೊಡಿಯೆಲೆ=ಚಿಗುರೆಲೆ, ದನಿಬಂದ=ಧ್ವನಿಬಂತು, ಬಾಡತೆ=ಬಾಡದೆ, ಒಣಂಗತೆ=ಒಣಗದೆ, ಇಕ್ಕ=ಈಗ, ಅಕ್ಕ=ಆಗ, ಎಕ್ಕ=ಯಾವಾಗ, ಪಟ್ಟಕ್‌ಟ್ಟಿತ್=ಪಟ್ಟಕಟ್ಟಿ ಹೀಗೆ ಅನೇಕ ಕನ್ನಡ ಶಬ್ದ ಸರಣಿ ದೊರೆಯುವುವು.

ಶುಭ ಸಂದರ್ಭಗಳಲ್ಲಿ ಮನೆಯಲ್ಲಿ ರಂಗವಲ್ಲಿಯಿಡುವಾಗ ಸೂರ್ಯನ ರೂಪವನ್ನೂ, ನೀರಿನಲ್ಲಿ ತಾವರೆಯನ್ನೂ, ತನ್ನ ಇಷ್ಟದೇವತೆಯ ರೂಪವನ್ನೂ ಬರೆಯುವರೆಂದು ಕೊಡಗು ಭಾಷೆಯಲ್ಲಿ ಬರೆದಿರುವುದಾದರೂ ಅಚ್ಚಗನ್ನಡ ಪದಪ್ರಯೋಗ ಅದರಲ್ಲಿ ಒಡೆದು ಕಾಣುವುದು.

---

*ಬೊಳ್ಳು=ನಾಯ ಹೆಸರು.

ಸೂರಿಯ ದೇವಂಡ ರೂಪ ಬರಂದ,
ನೀರ್‌ಲ್ ತಾವರೆ ರೂಪ ಬರಂದ,
ಕೆಂಬತ್ತಿ ಪೂವ್‌ರ ರೂಪ ಬರಂದ,
ಕನ್ನಡ ದೇವಂಡ ರೂಪ ಬರೆಂದ—ಇತ್ಯಾದಿ

ಕೊಡಗು ಸಾಹಿತಿಗಳಾರೂ ಕನ್ನಡವನ್ನುಳಿದು, ಮಲೆಯಾಳದಲ್ಲಾಗಲೀ, ತಮಿಳಿನಲ್ಲಾಗಲೀ ಇತರ ಯಾವ ಭಾಷೆಯಲ್ಲೇ ಆಗಲಿ ಗ್ರಂಥ ರಚನೆ ಮಾಡಿಲ್ಲ. ಅಷ್ಟೇ ಅಲ್ಲದೆ ಯಾರಿಗೂ ಆ ಭಾಷಾ ಬರವಣಿಗೆಯ ಅರಿವೂ ಇಲ್ಲ. ಹಿಂದಿನಿಂದಲೂ ಕನ್ನಡ ಭಾಷಾ ಅಭ್ಯಾಸ ಅವ್ಯಾಹತವಾಗಿ ನಡೆದು ಬಂದಿದೆ. ೩೦-೪೦ ವರ್ಷಗಳಿಗೆ ಪೂರ್ವದಲ್ಲಿ ಪ್ರತಿಯೊಂದು ಮನೆಯಲ್ಲೂ ಕರ್ಣಾಟಕ ಜೈಮಿನಿ ಭಾರತವನ್ನು ಬಾಯಿಪಾಠ ಮಾಡಿಸುವ ರೂಢಿ ನಡೆದು ಬಂದಿತ್ತು. ಈಗಲೂ ಅನೇಕ ಹಿರಿಯರ ಮನೆಗಳಲ್ಲಿ ಜೈಮಿನಿ ಭಾರತದ ಹಳೆ ಪ್ರತಿಗಳು ದೊರೆಯುವುವು. "ಪಟ್ಟೋಲೆ ಪಳಮೆ"ಯ ಸಂಪಾದಕರಾದ ಶ್ರೀ॥ ನ. ಚಿಣ್ಣಪ್ಪನವರು ಈ ಗ್ರಂಥವನ್ನು, ಕೊಡಗು ಹಾಡುಗಳ ಹೊರತು ಸುಲಭ ಕನ್ನಡ ನುಡಿಯಲ್ಲೇ ರಚಿಸಿರುತ್ತಾರೆ. ಇಲ್ಲಿನ ಹೆಸರುವಾಸಿಯಾದ ಹರಿದಾಸ ಶ್ರೀ॥ ಅಪ್ಪಚ್ಚು ಕವಿಗಳೂ ಕೊಡಗು ಭಾಷೆಯಲ್ಲಿ, ಹಲವು ನಾಟಕಗಳನ್ನು ಕನ್ನಡದಲ್ಲಿ ದೇವರ ನಾಮುಗಳನ್ನೂ ಬರೆದಿರುವರು. ತಮ್ಮ ಕೊಡಗು ನಾಟಕಗಳಲ್ಲಿ ಬಹುತೇಕವಾಗಿ ಕನ್ನಡ ಪದಪ್ರಯೋಗ ಮಾಡಿರುವರು.

೧೯೧೭ರಲ್ಲಿ ಕಾಲವಾದ ಕವಿ ವೆಂಕಟಾದ್ರಿ ಶಾಮರಾಯರು ೭-೮ ನಾಟಕಗಳನ್ನೂ ಸಾವಿರಾರು ದೇವರ ನಾಮುಗಳನ್ನೂ ರಚಿಸಿರುತ್ತಾರೆ. ಇಲ್ಲಿ ಕನ್ನಡ ಸಾಹಿತ್ಯ ಈಚೀಚೆಗೆ ಬೆಳೆಯುತ್ತಿದೆ. ಅನೇಕ ಸಾಹಿತಿಗಳು ಶ್ರಮಿಸುತ್ತಿದ್ದಾರೆ. ದಿವಂಗತ ಗೇರಮ್ಮನವರ ಸಣ್ಣ ಕತೆಗಳು ಕರ್ಣಾಟಕದಲ್ಲಿ ಪ್ರಸಿದ್ಧವಾಗಿವೆ. ಶ್ರೀಮತಿ ಪದ್ಮಾವತಿ ಚಿಣ್ಣಪ್ಪನವರೂ ಸಣ್ಣ ಕತೆಗಳನ್ನು ಬರೆಯುತ್ತಿರುವರು. "ಕೊಡಗು" "ಜನ್ಮಭೂಮಿ" ಎಂಬ ವಾರ ಪತ್ರಿಕೆಗಳು ಜನಾದರಣೀಯವಾಗಿವೆ. ಕನ್ನಡ ನಾಡಿನ ಹಬ್ಬಗಳೂ ಆಚರಣೆಯಲ್ಲಿವೆ. ಹೀಗೆ ಯಾವ ಕೋಣದಿಂದ ನೋಡಿದರೂ ಕನ್ನಡದ ಹಿರಿತನ ಇಲ್ಲಿ ಚೆನ್ನಾಗಿ ಕಾಣಬರುವುದು. ಕಾಡು, ಬೆಟ್ಟ, ಗುಡ್ಡ, ಹೊಳೆ, ನೆಲ, ಮಣ್ಣು, ಮಾತು, ಕಟ್ಟು, ಕಟ್ಟಲೆ, ಬಿಗಿ, ಬಿನ್ನಾಣ, ಈ ಸಮಸ್ತದರಲ್ಲೂ ಕನ್ನಡದ ಹಿರಿಮೆ ಕೆಚ್ಚು ಇದೆ.



ಮರಾಠಿ ಸಾಹಿತ್ಯದ ವಿಹಂಗಮಾವಲೋಕನ

ಶ್ರೀ ಶಂ. ಬಾ. ಜೋಶಿ, ಧಾರವಾಡ.

ಭಾರತದ ಮುಂದುವರೆದ ಪ್ರಾಂತಗಳಲ್ಲಿ ಮರ್‍ಹಾಟವೂ ಒಂದು. ತನ್ನ ನೆರೆಯ ಪ್ರಾಂತದ ಸಾಹಿತ್ಯದ ವಿಕಾಸಕ್ರಮವನ್ನು ಅರಿತುಕೊಳ್ಳುವುದರಿಂದ ಕರ್ಣಾಟಕಕ್ಕೂ ಲಾಭವಿಲ್ಲದಿಲ್ಲ.

ಮರ್‍ಹಾಟಿ ಸಾಹಿತ್ಯದಲ್ಲಿ ಎರಡು ದೊಡ್ಡ ಕಾಲ ವಿಭಾಗಗಳಿವೆ. ಸೇವುಣಯಾದವರಿಂದ ಪೇಶವರ ಅಳಿಗಾಲದ ವರೆಗೆ ಒಂದು. ಬಳಿಕ ಬ್ರಿಟಿಷರಾಡಳಿತದಿಂದ ಇನ್ನೊಂದು. ಮೊದಲನೆಯ ಭಾಗದ ಯುಗಪುರುಷನು ಜ್ಞಾನೇಶ್ವರ. ಎರಡನೆಯದರ ನಿರ್ಮಾತೃವು ಹಿರಿಯ ರಾನಡೆ.

ಸಂಕಲ್ಪವೆ ಕೃತಿಯ ಅಡಿಗಲ್ಲು. ಆದುದರಿಂದ ಸಂಕಲ್ಪವು ಎಷ್ಟು ಶುದ್ಧ, ಪವಿತ್ರ ಹಾಗೂ ಉದಾತ್ತವೊ, ಅಷ್ಟು ಆ ಅಡಿಗಲ್ಲ ಮೇಲೆ ನಿಂತ ಕೃತಿ–ಮಂದಿರವು ಭದ್ರವೂ ಸುಖಾವಹವೂ ಆಗುತ್ತದೆ. ಈ ದೃಷ್ಟಿಯಿಂದ ಜ್ಞಾನೇಶ್ವರ ಮತ್ತು ರಾನಡೆಯವರಂತಹ ನಡೆ–ನುಡಿಗಳೆರಡರಲ್ಲೂ ಹೊಂದಿಕೆಯಿರುವ ಧೀರೋದಾತ್ತ ಮಹಾವಿಭೂತಿಗಳು ನಾಯಕರಾಗಿ ದೊರೆತುದು ಮಹಾರಾಷ್ಟ್ರದ ಮಹದ್ಭಾಗ್ಯ.

ಚಕ್ರಧರನಿಂದ ದೀಕ್ಷೆಗೊಂಡ ಮಹಾನುಭಾವ ಮತದವರೆ ಮರ್‍ಹಾಟಿ ಸಾಹಿತ್ಯದ ಮೊದಲಿಗರಾದರೂ ಮಹಾರಾಷ್ಟ್ರವು ಅವರ 'ಕೃತಿ'ಗಳನ್ನು ಮೆಚ್ಚದೆ ಧಿಕ್ಕರಿಸಿತು. ಲೋಕಭೀತಿಗೆ ಪೇಶಾವರ-ಕಾಬೂಲಗಳತ್ತ ಅಡಗಿದ ಇವರ ಗ್ರಂಥಗಳು ಆ ನಾಡಿನಲ್ಲಿ ದೊರೆಯುತ್ತಿವೆ.

ಗ್ರಂಥಲೇಖನ ಪಾಂಡಿತ್ಯಪ್ರದರ್ಶನಕ್ಕಲ್ಲ; ಲೋಕಶಿಕ್ಷಣಕ್ಕಾಗಿ. ಆದಕಾರಣ ಮರ್‍ಹಾಟಿಯಲ್ಲೇ ಬರೆಯಿರೆಂದು ಚಕ್ರಧರನು ಶಿಷ್ಯರಿಗೆ ಆಜ್ಞಾಪಿಸಿದನು. ಮರ್‍ಹಾಟಿ ಸಾಹಿತ್ಯವು ತಲೆದೋರಿತು. ಭಾಸ್ಕರ ಕವಿಯ ಶಿಶುಪಾಲವಧ ಕಾವ್ಯವು ಸುಂದರವಾಗಿದೆ. ಶಿಷ್ಯರು ಬರೆದ ಗುರುಲೀಲೆಗಳ ದಿನಚರಿ ಅಪೂರ್ವವಾಗಿದೆ. ಆಗಿನ ಜನರ ನಡೆ-ನುಡಿಗಳ ವಾಸ್ತವ ಚಿತ್ರವು ನೋಡಲು ಸಿಕ್ಕುತ್ತದೆ. ಆಗಿನ ಯಾವ ಭಾರತೀಯ ಸಾಹಿತ್ಯದಲ್ಲೂ ಇಂತಹ ದಿನಚರಿಗಳು ದೊರೆತಿಲ್ಲ. ಆಗಿನ ಗದ್ಯ-ಪದ್ಯಗಳಿಂದ ಮರ್‍ಹಾಟಿ ಸಾಹಿತ್ಯದ ಬೆಳವಿಯ ಬಗೆಯು ಚೆನ್ನಾಗಿ ತಿಳಿದುಬರುತ್ತದೆ.

ಆದರೆ ಬೇಗನೆಯೆ ಮಹಾನುಭಾವ ಪಂಥವು ಮುಲೆಗುಂಪಾಯಿತು. ಮರ್‍ಹಾಟಿ ಸಾಹಿತ್ಯದ ವಿಕಾಸಕ್ಕೆ ಅದೊಂದು ಆಘಾತವೇ ಸರಿ. ಆದರೂ ಜ್ಞಾನೇಶ್ವರನ ಪ್ರಭಾವದಿಂದ ಮರ್‍ಹಾಟಿಯ ಪುಣ್ಯವು ಫಲಿಸಿತು. ಗೀತೆಯ ಭಾವಾರ್ಥ ದೀಪಿಕೆಯೆಂಬ ಗ್ರಂಥದಿಂದ ಮರ್‍ಹಾಟಿಗೆ ಅಮರಪದವಿಯು ಪ್ರಾಪ್ತವಾಯಿತು. ಈ ಗ್ರಂಥವೆ ಜ್ಞಾನೇಶ್ವರಿಯೆಂಬ ಹೆಸರಿನಿಂದ ವಿಖ್ಯಾತವಾಗಿದೆ. ವಿಷಯವು ವೇದಾಂತವಾದರೂ ಹೇಳುವ ಹದ ಹೃದಯಂಗಮವಾಗಿದೆ. ಜ್ಞಾನೇಶ್ವರಿಯ ಮಾಧುರ್ಯದ ಮುಂದೆ ಅಮೃತವೂ ಸಪ್ಪೆಯೆಂಬ ಮಾತು ಗಾದೆಯಂತಾಗಿದೆ.

ಆಗ ಜನ ಮರ್‍ಹಾಟಿಯನ್ನು ಕೀಳರ ನುಡಿಯೆಂದು ಎಣಿಸಿತ್ತು. ವೈದಿಕ ಆಚಾರ, ಸಂಸ್ಕೃತ ಭಾಷೆಯ ಒಣಹೆಮ್ಮೆ ಮಿತಿಮೀರಿತ್ತು. ಹೊಸ ಆಚಾರ, ಹೊಸ ಸಾಹಿತ್ಯ ನಿರ್ವಂಸ ಹೋಗಿ ಮಹಾನುಭಾವ ಮತವು ಲೋಕನಿಂದೆಗೆ ಗುರಿಯಾಯ್ತು. ಸಂನ್ಯಾಸಿಯ ಮಕ್ಕಳೆಂದು ಜ್ಞಾನೇಶ್ವರ ಮನೆತನದ ಮೇಲೂ ಬಹಿಷ್ಕಾರದ ಗೂಬೆ! ಇವರ ತಾಯ್ತಂದೆಗಳು ಈ ತಾಪಕ್ಕಾಗಿ ಗಂಗೆಯಲ್ಲಿ ಜಲಸಮಾಧಿ ಹೊಂದಿದರು. ಸಂಪ್ರದಾಯವಾದಿಗಳು ಜ್ಞಾನೇಶ್ವರ ಬಂಧುಗಳ ಉಪನಯನಕ್ಕೂ ಸಿದ್ಧರಿದ್ದಿಲ್ಲ.

ಹೀಗೆ ಪೀಡಿತ ಜ್ಞಾನೇಶ್ವರನಿಗೆ ರೇಗಿ ಸಮಾಜವನ್ನು ಬೈದು ವಿಡಂಬನ ಮಾಡುವ ಮೋಹವುಂಟಾಗಬೇಕಿತ್ತು. ಆದರೆ ಆತನ ಹೃದಯ ವೈಶಾಲ್ಯವೇನು! ಎಲ್ಲೆಲ್ಲೂ ಕೋಮಲಾಂತಃಕರಣದ ಮಹಾತ್ಮಾಯ ಉದಾರ ಭಾವ, ವಾತ್ಸಲ್ಯ, ಪ್ರೀತಿ ತಾನೆ ತಾನಾಗಿ ಹೊರಹೊಮ್ಮುತ್ತಿದೆ. ಜ್ಞಾನೇಶ್ವರನ ಸುಧಾಮಧುರ ದಿವ್ಯೋಪದೇಶವನ್ನಾಲಿಸಿ ನಮಿರೇಳದ, ಎದೆ ಹಿಗ್ಗದವರಿಲ್ಲ. ನಾಸ್ತಿಕರು ಕೂಡ ಇವನ ಕವಿತ್ವಕ್ಕೆ ಮನಸೋತು ಹೊಗಳಿದ್ದಾರೆ.

ಜ್ಞಾನೇಶ್ವರರ ಮಂತ್ರದಿಂದ ಮುಗ್ಧವಾದ ಮರ್ಹಾಟವು ಅಂದಿನಿಂದ ಇಂದಿನ ವರೆಗೆ ಭಾವೋನ್ಮಾದದಲ್ಲಿ ಕುಣಿಯುತ್ತಲಿದೆ. ಪ್ರತಿ ವರ್ಷವೂ ಒಂದಲ್ಲ ಎರಡು ಬಾರಿ ಎಡೆಬಿಡದೆ ಪಂಢರಿಯಲ್ಲಿ ನೆರೆವ ನಾಲ್ಕಾರು ಲಕ್ಷ ಯಾತ್ರಿಕರ ವೈಭವದ ನಾಮಸಂಕೀರ್ತನವೇ ಇದಕ್ಕೆ ಸಾಕ್ಷಿ.

ಯಾರಿಗೂ ಎದುರಾಡದೆ ಜ್ಞಾನೇಶ್ವರನು ಮಾಡಿದ ಸಾಹಿತ್ಯಕ್ರಾಂತಿ, ಸಾಮಾಜಿಕಕ್ರಾಂತಿ ಆಶ್ಚರ್ಯಕರವಾಗಿದೆ. ಜ್ಞಾನೇಶ್ವರಿಯ ರಮ್ಯ ಕವಿತ್ವಕ್ಕೆ ಮಾರುಹೋದ ಜನ ಮರ್ಹಾಟಿ ಭಾಷೆಯನ್ನು ಮೆಚ್ಚಲಾರಂಭಿಸಿತು. ಏಕನಾಥ ಮುಕ್ತೇಶ್ವರಾದಿ ಸಂಸ್ಕೃತದಲ್ಲಿ ಘನ ವಿದ್ವಾಂಸರೂ ಮರ್ಹಾಟಿಯಲ್ಲಿ ಕಾವ್ಯ ರಚನೆಗೆ ತೊಡಗಿದರು. ಭಾಗವತ, ಭಾರತಗಳನ್ನು ರಸವತ್ತಾದ ಮರ್ಹಾಟಿಯಲ್ಲಿ ಬರೆದರು. ಏಕನಾಥನೇ ಆಧುನಿಕ ಮರ್ಹಾಟಿಯ ಜನಕನು. ಜ್ಞಾನೇಶ್ವರಿಯ ದಿವ್ಯೋಪದೇಶದಿಂದ ಮರ್ಹಾಟರಲ್ಲಿ ಜಾತಿವೈಷಮ್ಯವು ಹಿಮ್ಮೆಟ್ಟಿತು. ನಾಮದೇವ ತುಕಾರಾಮಾದಿಗಳ ಪಾದಧೂಳಿಯನ್ನು ಪಡೆವಲ್ಲಿ ಬ್ರಾಹ್ಮಣರೂ ಧನ್ಯತೆಯನ್ನು ತಾಳುವರು. ಇದೆಲ್ಲವೂ ಜ್ಞಾನೇಶ್ವರ ಪಂಥದ ಮಹಿಮೆ. ಆ ಪಂಥವೇ ಏಕನಾಥ, ನಾಮದೇವ, ತುಕಾರಾಮಾದಿಗಳಿಂದ ಮುಂದೆ ಪ್ರವರ್ಧಮಾನ ಸ್ಥಿತಿಯನ್ನೈದಿತು.

ಸುಮಾರು ೧೨೦೦ರಿಂದ ೧೬೦೦ರ ವರೆಗೆ ನಿರ್ಮಾಣವಾದ ಸಾಹಿತ್ಯಕ್ಕೆ ಭಕ್ತಿಯೇ ಪ್ರಚೋದಕ ಶಕ್ತಿ. ಪರರಾಜರ ಆಕ್ರಮಣಕ್ಕೆ ನುಗ್ಗುನುಸಿಯಾಗುತ್ತಿರುವ ಪ್ರಜೆಗಳಲ್ಲಿ ಇಹಕ್ಕಿಂತ ಪರಲೋಕವೇ ಸುಖಶಾಂತಿಗಳ ಆಗರವೆಂಬ ಭಾವವು ಬೆಳೆದುಕೊಂಡು ಬಂದರೆ ಸೋಜಿಗವೇನು? ಭಕ್ತಿಯ ಆವೇಶದಲ್ಲಿ ಮೈಮರೆತು ಪರರಾಜರಿಂದ ನಡೆದ ಅತ್ಯಾಚಾರ ಅನಾಚಾರಗಳತ್ತ ಕಣ್ಣುಮುಚ್ಚಿಕೊಂಡಿರುವ ಪ್ರವೃತ್ತಿಯು ಬೆಳೆಯ ಹತ್ತಿತ್ತು. ಮನೆಯಲ್ಲಿ ದತ್ತ, ವಿಠಲಾದಿದೇವನ ಭಜಿಸಿ, ಹೊಟ್ಟೆಯ ಪಾಡಿಗಾಗಿ ಮಾಡುವ ಪರಕೀಯ ಸೇವೆಯ ಪಾತಕವನ್ನು ತೊಳೆದುಕೊಂಬ ಭ್ರಾಂತಿಯಲ್ಲಿ ಜನ ಸಮಾಧಾನ ತಾಳುತ್ತಲಿತ್ತು.

ಈ ಸಂಧಿಕಾಲದಲ್ಲಿ ರಾಮದಾಸನೆಂಬ ತೇಜೋನಿಧಿಯು ಮುಂದೆ ಬಂದು ಓಜಸ್ವಿಯಾದ ಉಪದೇಶದಿಂದ ಮರ್ಹಾಟರನ್ನು ಎಚ್ಚರಿಸಿದನು. ಶಿವಾಜಿಯ ಸ್ವರಾಜ್ಯ ಸ್ಥಾಪನೆಗೆ ಬೇಕಾದ ಮನೋಭೂಮಿಕೆಯನ್ನು ಸಿದ್ಧಪಡಿಸಿದನು. ದಾಸಬೋಧ, ಮನಾತೇ ಶ್ಲೋಕಗಳು ತ್ಯಾಗ–ಸೇವೆಯ ಸ್ಫೂರ್ತಿಯನ್ನು ಆಗಿನ ಕಾಲಕ್ಕಂತೂ ಸರಿಯೇ, ಲೋಕಮಾನ್ಯಾದಿ ಆಧುನಿಕರಿಗೂ ಅವು ನವಜೀವನದಾಯಿಯಾದುವು. ಜೀವಂತ ಸಾಹಿತ್ಯ ಪರಂಪರೆಯು ಇಲ್ಲಿಗೆ ಮುಗಿಯಿತು. ಭಾವುಕ ಕವಿಗಳ ಸ್ಥಾನದಲ್ಲಿ ಪಂಡಿತ ಕವಿಗಳು ಮೆಚ್ಚಿಗೆ ಪಡೆದರು. ವಾಮನ ಪಂಡಿತ, ರಘುನಾಥ ಪಂಡಿತ, ಮೋರೋಮಂತರ ಕಾವ್ಯ ಕನ್ಯೆಯ ಯಮಕದ ಒಯ್ಯಾರದ ಕಾಲವಿದು. ಕುಮಾರವ್ಯಾಸನ ಕೃತಿಗೆ ಮೆಚ್ಚಿ ಚಂದ್ರಾತ್ಮಜರುದ್ರನು ಭೀಷ್ಮ ಪರ್ವವನ್ನು ಮರ್ಹಾಟಿಗೆ ಭಾಷಾಂತರಿಸಿದನು. ಇತ್ತ ಸಂತರ ಹಾಗೂ ಪಂತರ ಕವನಗಳನ್ನು ಕಂನಾಡ ಕೀರ್ತನಕಾರರು ಮೆಚ್ಚಿ ಹೇಳುವ ವಾಡಿಕೆಯುಂಟಾಯಿತು. ಮರ್ಹಾಟರ ವಿಠಲ ಹಾಗೂ ದತ್ತ ಸಂಪ್ರದಾಯಗಳು ಕಂನಾಡವರನ್ನೂ ಸೂರೆಗೊಂಡು ತಮ್ಮ ಪ್ರಭುತ್ವಕ್ಕೆ ಒಳಗು ಮಾಡಿಕೊಂಡವು. ಮೈಸೂರು ದಕ್ಷಿಣ ಕಂನಡದ ವರೆಗೂ ಇದರ ಪ್ರಭಾವವು ಕಂಡು ಬರುವುದು.

ಪೇಶವಾಯಿಯ ಕೊನೆಗಾಲದಲ್ಲಿ ಜನ ಶೃಂಗಾರಕ್ಕೆ ಮರುಳಾಗಿದ್ದರು. ಹೊನ್ನಾಜಿ, ಬಾಳಪ್ಪ ಮತ್ತು ರಾಮಜೋಗಿ ಮೊದಲಾದವರ ಉತ್ತಾನ ಶೃಂಗಾರದ ಲಳಿತ, ಲಾವಣಿಗಳ ಹುಚ್ಚು ಹೊಳೆ ಮರ್ಹಾಟಿಯಲ್ಲಿ ಹರಿಯಿತು. ಮರ್ಹಾಟರು ಸ್ವರಾಜ್ಯಕ್ಕೆ ಎರವಾದರು.

೧೦ನೆಯ ಶತಮಾನದಿಂದಲೆ ಮರ್ಹಾಟಿಯು ಮೈದಾಳ ಹತ್ತಿತಾದರೂ ಜ್ಞಾನೇಶ್ವರರ ಕಾಲದಿಂದಲೇ ಅದಕ್ಕೆ ಪ್ರೌಢಿಮೆ-ಗೌರವ ಪ್ರಾಪ್ತವಾಯ್ತು. ಜ್ಞಾನೇಶ್ವರಿಯಂತೆಯೆ ಆ ಬಳಿಕಿನ ದತ್ತ-ವಿಠಲ ಪರಂಪರೆಗಳೂ ಸರಸ ಕಾವ್ಯಗಳೂ ಮರ್ಹಾಟದ ಹೊರಗಿನವರನ್ನೂ ತನ್ನತ್ತ ಸೆಳೆದುಕೊಂಡವು. ನಾಮದೇವಾದಿ ಸಂತರ ಅಭಂಗಗಳೂ ನಾನಕನ ಗ್ರಂಥದಲ್ಲಿ ಇಂಬುಗೊಂಡಿವೆ. ಜ್ಞಾನೇಶ್ವರಾದಿಗಳೇ 'ಕಾನಡಹೋ ವಿಠಲು ಕರ್ನಾಟಕೂ' ಎಂದು ಸಾರಿದ ವಿಠಲನ ಕ್ಷೇತ್ರವು ಮರ್ಹಾಟಿಯಾಯ್ತು. ಕರ್ನಾಟರೇ ಮರ್ಹಾಟಿಗೆ ಮಾರುಹೋಗಿ ಗುರುಚರಿತ್ರಾದಿ ಗ್ರಂಥ ರಚಿಸಿದ್ದಾರೆ. ಹಂಪಿ-ಕುಂದಾಪುರಗಳ ವರೆಗೆ ಈ ಮಠಗಳು ಹಬ್ಬಿದುವು.

ನಿಜವಾಗಿ ೧೩ನೆಯ ಶತಮಾನದ ವರೆಗೆ ಕರ್ನಾಟ

–ಮರ್ಹಾಟಗಳು ಅಭಿನ್ನವಾಗಿದ್ದುವು. ಕಂನಾಡವರು ಸಂಸ್ಕೃತದಂತೆ ಪ್ರಾಕೃತಕ್ಕೂ ಮೆಚ್ಚಿ ತಮ್ಮದೆಂದೇ ಸ್ವೀಕರಿಸಿದ್ದರು. ಈ ಪ್ರಾಕೃತವೆ ೧೨ನೆಯ ಶತಮಾನದಿಂದ ಮುಂದೆ ಮರ್ಹಾಟಿ ರೂಪ ತಾಳಿತು. ಮರ್ಹಾಟಿ ಮನೆಮಾತಾದವರಲ್ಲಿ 'ಹೇ ಆಮ್ಹಾಸಿ ಕಾನಡೇ'—'ಕಾನಡಿ' ಎಂದರೆ ನಮಗೆ ತಿಳಿಯದ್ದು ಎಂಬ ಪಡೆನುಡಿ ತಲೆದೋರಿತು. ಮರ್ಹಾಟಿಯ ಜನ್ಮಕಾಲವು ಕರ್ಣಾಟ ಸಾಹಿತ್ಯದ ವೈಭವ ಕಾಲ. ಆದುದರಿಂದ ಆರಂಭದಲ್ಲಿ ಅದರ ಮೇಲೆ ಕಂನಾಡದ ಪ್ರಭಾವವು ಕಾಣಿಸಿಕೊಳ್ಳುವುದಾದರೂ ಈಗ ಮರ್ಹಾಟಿಯಿಂದ ಬಡ್ಡಿ ಸಹಿತ ಸಾಲ ಸಂದಿದೆ.

ಬ್ರಿಟಿಷರ ಆಡಳಿತದಿಂದ ಮರ್ಹಾಟಿಯ ಅರ್ವಾಚೀನ ಯುಗಕ್ಕೆ ಆರಂಭವಾಗುತ್ತದೆ. ಈ ಯುಗ ಪುರುಷರು ರಾನಡೆ. ಸರ್ವಗಾಮಿಯಾದ ಸೂಕ್ಷ್ಮಬುದ್ಧಿಯ ಈ ಮಹಾ ಪುರುಷನು ಸೃಷ್ಟಿ ಮಾಡದ ಜೀವನ ಕ್ಷೇತ್ರವು ಒಂದೂ ಇಲ್ಲ. ಸಾಹಿತ್ಯಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ, ಆರ್ಥಿಕ–ಮೊದಲಾದ ಎಲ್ಲ ಬಗೆಯ ಚಳವಳಿಗಳ ಪುಣ್ಯಾಹವಾಚನವು ಇವರಿಂದಲೆ ಆಯ್ತು. ಮರ್ಹಾಟದ ಮಾತ್ರವಲ್ಲ, ಕಾಂಗ್ರೆಸ್ ಮೊದಲಾದ ಅಖಿಲ ಭಾರತೀಯ ಅಂದೋಲನಗಳನ್ನು ಆರಂಭಿಸುವಲ್ಲೂ ಇವರ ಕೈವಾಡವುಂಟು. ಹೀಗಿದ್ದರೂ ಇವರು 'ಅವ್ಯಕ್ತ ಬ್ರಹ್ಮ'.

ವ್ಯಕ್ತ ಸೃಷ್ಟಿಗೆ ಆರಂಭವಾದುದು ವಿಷ್ಣುಶಾಸ್ತ್ರಿಗಳಿಂದ. ನವೀನ ವಿದ್ಯಾವಿಭೂಷಿತರು ಆಂಗ್ಲರ ಪ್ರಭಾವಕ್ಕೆ ಸಿಲುಕಿ ತಮ್ಮ ದೇಶ, ಧರ್ಮ, ಭಾಷೆಗಳ ಬಗೆಗೆ ಹೀನಭಾವವುಳ್ಳವರಾಗಿದ್ದರು. ಬ್ರಿಟಿಷರು ಬಂದುದು ದೇವರ ಕೃಪೆ, ಕಡಲರಾಣಿ ಬ್ರಿಟನು ತಮ್ಮನ್ನು ಆಚಂದ್ರಾರ್ಕವೂ ಆಳಲಿ ಎಂದು ನಿಃಸ್ಸಂಕೋಚವಾಗಿ ಬರೆದು ಭಲೆಯೆನ್ನಿಸಿಕೊಳ್ಳುತ್ತಿದ್ದರು. ಆಗ ವಿಷ್ಣುಶಾಸ್ತ್ರಿಗಳು 'ನಿಬಂಧಮಾಲೆ'ಯು ವಜ್ರಾಯುಧದಂತೆ ಮರ್ಹಾಟರೊಳಗಿನ ಆಂಗ್ಲವ್ಯಾಮೋಹವನ್ನು ನಾಶ ಮಾಡಿತು. ಸ್ವದೇಶ, ಸ್ವಭಾಷೆಯ ಅಭಿಮಾನದ ಬೀಜಾಂಕುರವಾಯಿತು. ಶಾಸ್ತ್ರಿಗಳ ಶೈಲಿ ಅಮೋಘವಾದುದು. ಅವರ ಲೇಖದೊಳಗಿನ ಆವೇಶ, ಉತ್ಸಾಹ, ವಿನೋದ, ವಿಡಂಬನಾದಿಗಳು ಎದುರಾಳಿಗಳ ತೇಜೋಭಂಗ ಮಾಡಿದುವು. ಇವರ ಲೇಖನದಲ್ಲಿ ಆಧುನಿಕ ಸಾಹಿತ್ಯದ ಹಲವು ಪ್ರಕಾರಗಳು ಸ್ಪಷ್ಟವಾಗಿ ಕಣ್ಣಿಗೆ ಬೀಳುತ್ತವೆ. ಇವರೇ ಆಧುನಿಕ ಸಾಹಿತ್ಯದ ತಂದೆ.

ಈ ಉಜ್ವಲ ಪರಂಪರೆಯಲ್ಲಿಯ ತಿಲಕ, ಆಗರಕರ, ಗೋಖಲೆ, ಆಪ್ಟೆ, ಪರಾಂಜಪೆ, ರಾಜವಾಡೆ-ಒಂದೇ ಎರಡೇ ಅನೇಕ ವಿದ್ವಾಂಸರೂ ತ್ಯಾಗಿಗಳೂ ಆದ ಲೋಕಸೇವಕರು ಆದರು. ಮಹಾರಾಷ್ಟ್ರದ ಗಗನಾಂಗಣದಲ್ಲಿ ಹಲವು ದಿವ್ಯ ನಕ್ಷತ್ರಪುಂಜಗಳೂ ಒಂದಕ್ಕಿಂತ ಹೆಚ್ಚು ಶಶಿ–ಸೂರ್ಯರೂ ಒಂದೇ ಕಾಲಕ್ಕೆ ತೊಳಗಿ ಬೆಳಗಿದ ಅದ್ಭುತರಮ್ಯ ನೋಟವು ಭಾರತವನ್ನೆ ಬೆರಗುಗೊಳಿಸಿತು. ಇಂತಹರ ವಾಣಿಯಿಂದ ಬಂದ ಸಾಹಿತ್ಯವು ಎಂತಹ ಮೃತರಾಷ್ಟ್ರವನ್ನೂ ಜೀವಂತ ಮಾಡಬಲ್ಲದು. ಇವರೆಲ್ಲರಿಂದ 'ಮಹಾರಾಷ್ಟ್ರ'ವು ಸಾರ್ಥನಾಮವಾಯ್ತು.

ವಿವಿಧಾಂಗಗಳಲ್ಲಿ ಮರ್ಹಾಟಿ ಸಾಹಿತ್ಯವು ಅನುದಿನವು ಉತ್ಕರ್ಷ ಹೊಂದುತ್ತಲಿದೆ. ಕೇಶವ ಸುತರಿಂದ ಆಧುನಿಕ ಕಾವ್ಯಯುಗಕ್ಕೆ ಆರಂಭವಾಯ್ತು. ವಿಶ್ವಸಂಚಾರಿಯಾದ ಪ್ರತಿಭೆ ಇವರದು. ಭಾವ ನಿರ್ಭರತೆ, ಓಜಸ್ಸು ಇವರ ವಿಶೇಷ ಗುಣ. 'ತುತಾರಿ'ಯನ್ನೂದಿ ವಿಚಾರಕ್ರಾಂತಿಗೆ ಕೈಬೀಸಿದರು. ರೆವರಂಡ ಟಿಳಕ, ವಿನಾಯಕ, ಬಾಲಕವಿ, ಗೋವಿಂದಾಗ್ರಜರು ಈ ಪಂಗಡದವರೇ. ಆದರೂ ಪ್ರತಿಯೊಬ್ಬರಲ್ಲೂ ಒಂದು ವೈಶಿಷ್ಟ್ಯವಿದೆ. ಟಿಳಕರ ಸಹಜ ಮನೋಹಾರತ್ವ, ವಿನಾಯಕರಲ್ಲಿಯ ಸ್ವದೇಶಿಭಾವ; ಬಾಲಕವಿಯ ನಿಸರ್ಗಪ್ರೇಮ, ಕೋಮಲ ಭಾಷೆ, ಗೋವಿಂದಾಗ್ರಜರ ಭಾಷಾಪ್ರಭುತ್ವ, ಕಲ್ಪನಾವೈಚಿತ್ರ್ಯಾದಿ ಗುಣಗಳು ಜನರಲ್ಲಿ ಹೊಸ ಕವಿತೆಯ ವಿಷಯದಲ್ಲಿ ಕುತೂಹಲ ಪ್ರೀತಿಯನ್ನುಂಟುಮಾಡಿದುವು.

ಪುಣೆಯ ಶಾರದಾ ಮಂದಿರದಿಂದ ರವಿಕಿರಣ ಮಂಡಲವು ಮೈದೋರಿತು. ಮಾಧವ ಜ್ಯೂಲಿಯನ್ ಗಿರೀಶ ಮತ್ತು ಯಶವಂತರು ಇವರಲ್ಲಿ ನಾಮಾಂಕಿತರಾದರು. ಗುಜರಾತಿ, ಬಂಗಾಲಿ, ಫಾರ್ಸಿಗಳನ್ನೂ ಇಂಗ್ರೇಜಿಯೊಡನೆ ಅಡಗಿಸಿಕೊಂಡು ಮಾಧವ ಜ್ಯೂಲಿಯನ್‌ರು ಮರ್ಹಾಟಿಗೆ ಕೊಟ್ಟ ಕಾಣಿಕೆಯು ಅಪೂರ್ವವಾಗಿದೆ. ಫಾರ್ಸೀ ಕೋಶವನ್ನು ರಚಿಸಿ, ಛಂದಶ್ಶಾಸ್ತ್ರ ಬರೆದು, ಕಾವ್ಯತತ್ವದ ವ್ಯಾಸಂಗಿಯಾಗಿದ್ದೂ ಕಾವ್ಯಪ್ರತಿಭೆಯನ್ನು ಮಾಸಗೊಡದ ಸವ್ಯಸಾಚಿಗಳಿವರು.

ಆಧುನಿಕ ಸಾಹಿತ್ಯದ ಬೆಳವಣಿಗೆಗೆ ಇವರು ಅನಿಶ್ರಾಂತ ಶ್ರಮಪಟ್ಟು ಸ್ಥಿರವಾದ ಕೀರ್ತಿ ಗಳಿಸಿದ್ದಾರೆ. ಗಿರಿಶರು ಜಾನಪದ ಜೀವನದತ್ತ ಗಮನ ಸೆಳೆದಿದ್ದಾರೆ. ಯಶವಂತರ ಭಾವನೆಯ ಉತ್ಕಟತೆ ವಿಶೇಷ. ಬಡೋದೆಯ ರಾಜಕವಿಗಳಾಗಿ ಮನ್ನಣೆ ಪಡೆದಿದ್ದಾರೆ. ಕಾಣೇಕರರು 'ಚಾಂದರಾತ'ದಿಂದ ಬೆಳಕಿಗೆ ಬಂದರು.

ತಾಂಬೆಯವರು ಸ್ವಯಂಪ್ರಭೆಯಿಂದ ಆಧುನಿಕ ಸಾಹಿತ್ಯದಲ್ಲಿ ಆಹ್ಲಾದದಾಯಕರಾಗಿ ಬೆಳಗುತ್ತಿದ್ದಾರೆ; ಅಭಿಜಾತ ಕವಿಗಳು. ನಾದಮಧುರವಾದ ಇವರ ಕವನಗಳು ರಸಿಕರ ನಾಲಗೆಯಲ್ಲಿ ನಲಿಯುತ್ತಲಿವೆ.

ನವೋದಿತ ಕವಿಗಳಲ್ಲಿ ಕುಸುಮಾಗ್ರಜ, ನಿಕುಂಭ ಪ್ರಭೃತಿಗಳು ಸುಭಗತೆ ಸಾಧ್ಯದಿಂದ ರಸಿಕರನ್ನು ಆಕರ್ಷಿಸಿದ್ದಾರೆ.

ಇಂದು ಕಾವ್ಯಾರಾಮದಲ್ಲಿ ಜೀವನದ ವಿವಿಧಾಂಗಗಳ ದರ್ಶನ ಮಾಡಿಸುವ ಎಲ್ಲ ಬಗೆಯ ಕವನಗಳೂ ಅರಳಿ ಮರ್ಹಾಟಿಗರ ಅಂತಃಕರಣವನ್ನು ಅರಳಿಸುತ್ತಿವೆ.

ಕಥೆ-ಕಾದಂಬರಿಗಳಲ್ಲೂ ಮರ್ಹಾಟಿಯು ತುಂಬ ಮುಂದುವರೆದಿದೆ. ಹರಿನಾರಾಯಣ ಆಪ್ಟೆಯವರಿಂದ ಹೊಸ ಬಗೆಯ ರಚನೆಗೆ ಆರಂಭವಾಯ್ತು. ಐತಿಹಾಸಿಕ, ಸಾಮಾಜಿಕ ಪರಿಣಾಮಕಾರಿಯಾದ ಕಾದಂಬರಿಗಳನ್ನು ಬರೆದರು. ಒಂದರಿಂದ ದೇಶಾಭಿಮಾನವೂ ಇನ್ನೊಂದರಿಂದ ಆಧುನಿಕ ವಿಚಾರಗಳೂ ಪ್ರಸಾರವಾದುವು. ವಾಮನ ಮಲ್ಹಾರರ 'ರಾಗಿಣಿ'ಯು ಕಾವ್ಯಶಾಸ್ತ್ರದ ಚರ್ಚೆಯಿಂದೊಡಗೂಡಿದ ನವೋನವ ಕಾದಂಬರಿ. ಖಾಂಡೇಕರರು ಕತೆ ಮತ್ತು ಕಾದಂಬರಿಗಳೆರಡರಲ್ಲೂ ಅದ್ವಿತೀಯರು. ಜೀವನ ಮತ್ತು ಕಲೆಯ ಎರಡು ಧ್ರುವಗಳನ್ನು ಸಾಧಿಸಿ ಜೀವನದ ಆಳ ಮತ್ತು ಆನಂದವನ್ನು ಹೆಚ್ಚಿಸುವ ದೃಷ್ಟಿಕೋನವನ್ನು ಕೊಟ್ಟರು. ಇವರು ಬಳಸದ ತಂತ್ರ ಮತ್ತು ಕಥಾವಸ್ತುಗಳೇ ವಿರಳ. ಪ್ರೊ. ಫಡಕೆಯವರ ಕಾದಂಬರಿಗಳ ಸೊಗಸೇ ಒಂದು. ಮಾದಕ ಶೃಂಗಾರದ ಅಚ್ಚುಕಟ್ಟಾದ ನಿರೂಪಣಾಪದ್ಧತಿ, ರಮ್ಯಶೈಲಿ, ಚಿತ್ತಾಕರ್ಷಕ ಭಾಷೆಯಿಂದ ಓದುಗರನ್ನು ಮರುಳು ಮಾಡುವರು. ಇವರ ಕಾದಂಬರಿಯೆಂದರೆ ಉನ್ಮಾದಕ ಪೇಯ ಇವರು ಪ್ರಗತಿ ಶೀಲರು. ದಿಘೆಯವರು ಈಗ ತಮ್ಮ ತೀರ ಹೊಸ ಬಗೆಯ ಕಥಾನಕ ಕಥನ ಶೈಲಿಗಳಿಂದ ಲೋಕಪ್ರಿಯರಾಗುತ್ತಿದ್ದಾರೆ. ಸಾನೆ ಗುರೂಜಿಯವರ ಕಥೆ ಕಾದಂಬರಿಗಳು ಸಾಮಾಜಿಕ ದೃಷ್ಟಿಯನ್ನು ಜನರಲ್ಲಿ ಉಂಟುಮಾಡುತ್ತಿವೆ.

ಮರ್ಹಾಟಿ ರಂಗಭೂಮಿಗೆ ಕಂನಾಡ ದಶಾವತಾರದ ಆಟಗಳಿಂದ ಆರಂಭವಾದರೂ ಈ ವಿಷಯದಲ್ಲಿ ಅವರು ಮಾಡಿರುವ ಪ್ರಗತಿ ಅಪೂರ್ವವಾಗಿದೆ. ಕಿರ್ಲೋಸ್ಕರರು ಸಂಗೀತದಿಂದ ಜನಕ್ಕೆ ನಾಟಕದ ಹುಚ್ಚು ಹಿಡಿಸಿದರು. ಕೋಲ್ಹಟಕರರ ಹೊಸ ಬಗೆಯ ನಾಟ್ಯವಿಷಯ ವಿನೋದಾದಿಗಳಿಂದ ರಂಗಭೂಮಿಗೆ ಇನ್ನೂ ಹೆಚ್ಚಿನ ಕಳೆ ಕಟ್ಟಿತು. ಖಾಡೀಲಕರರ ರಚನಾವಿಶೇಷ, ಪರಿಣಾಮಕಾರಿಯಾದ ಭಾಷೆ, ವ್ಯಂಗ್ಯ, ಧ್ವನಿಗಳಿಂದ ಅವರ ಪೌರಾಣಿಕ ನಾಟಕಗಳ ಕಾಲದಲ್ಲಿ ರಂಗಭೂಮಿಯ ವೈಭವವೇ ವೈಭವ. ಗಡಕರಿಯವರು ಮಹಾರಾಷ್ಟ್ರದ ರಸಿಕರ ಪಂಚಪ್ರಾಣ. ಇವರ ನಾಟಕಗಳು ಶ್ರಾವ್ಯ ಕಾವ್ಯಗಳಾದರೂ ರಂಗಭೂಮಿಯ ಮೇಲೂ ಲೋಕಪ್ರಿಯವಾದುವು. ವರೇರಕರರು ಅತ್ಯಾಧುನಿಕ ತಂತ್ರ ಕಥಾವಸ್ತುಗಳಿಂದ ರಂಗಭೂಮಿಯ ಮುನ್ನಡೆಗೆ ಕಾರಣರಾಗಿದ್ದಾರೆ. ಅತ್ರೆಯವರ ವಿಡಂಬನಗಳು ನವೋನವವಾಗಿವೆ. ರಾಂಗಣೇಕರಾದಿಗಳ ಏಕಾಂಕಗಳ ಹಲವು ಪ್ರಕಾರಗಳನ್ನು ಮಾಡಿ ನೋಡುತ್ತಲಿದ್ದಾರೆ.

ಎಲ್ಲ ಬಗೆಯ ಸಾಹಿತ್ಯ ಶಾಖೆಗೂ ತಮ್ಮ ಕಾಣಿಕೆಯನ್ನರ್ಪಿಸಿ ಶ್ರೇಷ್ಠ ಲೇಖಕರೆಂದು ಹೆಸರಾದ ಕೇಳಕರರು ಪತ್ರಿಕಾಕರ್ತರೆಂದು ಮಾಡಿದ ಕಾರ್ಯವು ಮಹತ್ವದ್ದಾಗಿದೆ. ಭವ್ಯವಾದ ರೂಪಕ, ಮರ್ಮಗ್ರಾಹಿ ಮಂಡನ ಪದ್ಧತಿ, ವಕ್ರೋಕ್ತಿ ಕೌಶಲವೆಂದರೆ ಪರಾಂಜಪೆಯವರದು. ಪರಾಂಜಪೆ, ಅಚ್ಯುತಬಳವಂತ ಮೊದಲಾದವರು ಆಂಗ್ಲ ಪ್ರಭುತ್ವದ ವಿನಾಶಕ್ಕಾಗಿ ತಮ್ಮ ಸಾಹಿತ್ಯ ಶಕ್ತಿಯನ್ನು ಮುಡುಪಾಗಿರಿಸಿದ್ದರೆ ಕೋಲ್ಹಟಕರ, ಗಡಕರಿ, ಜೋಶಿ ಮೊದಲಾದವರು ತಮ್ಮ ಉಪಹಾಸ ವಿಡಂಬನ ವ್ಯಾಜೋಕ್ತಿಗಳಿಂದ ಪುರಾಣ ಮತವಾದಿಗಳ ಹೂರಣ ಹೊರಗೆಡವಿದರು.

ಡಾ. ಕೇತಕರು ಮಹಾರಾಷ್ಟ್ರ ಜ್ಞಾನಕೋಶವನ್ನು ಬರೆದು ಅಮೋಘ ಸೇವೆ ಸಲ್ಲಿಸಿದ್ದಾರೆ. ಪರದೇಶಕ್ಕೆ ಹೋಗಿ ಜ್ಞಾನ ಸಂಪಾದನ ಮಾಡಿ, ಘನವಾದ ವಿಶ್ವವಿದ್ಯಾಲಯದಿಂದ ಪದವಿ-ಪ್ರಶಸ್ತಿ ಪಡೆದು ಮರಳಿ ಸ್ವದೇಶಕ್ಕೆ ಬಂದ ತರುಣರು ಸರಕಾರಿ ನೌಕರಿಯ ಮೋಹಕ್ಕೆ, ಧನದ ಆಶೆಗೆ ಬಲಿಬೀಳದೆ ಮಹಾರಾಷ್ಟ್ರದ ಪುನ

ರುದ್ಧಾರಕ್ಕೆ ಸೊಂಟಕಟ್ಟಿ ನಿಲ್ಲುವ ಒಂದು ಅಪೂರ್ವ ಸಂಪ್ರದಾಯವು ಆ ನಾಡಿನ ತೇಜಸ್ವೀ ತರುಣರಿಂದ ಆರಂಭವಾಗಿದೆ. ಡಾ. ಕೇತಕರ, ಧನಂಜಯರಾವ ಗಾಡಗೀಳ ಪ್ರಭೃತಿಗಳು ಈ ಮಾಲಿಕೆಯಲ್ಲಿಯ ವಿಶೇಷ ರತ್ನಗಳು. ಧನಂಜಯರಾಯರು ಅರ್ಥಶಾಸ್ತ್ರದ ವಿಚಾರದಲ್ಲಿ ನಡಸಿರುವ ಕಾರ್ಯವು ಮಹಾರಾಷ್ಟ್ರಕ್ಕೆ ಅಖಿಲ ಭಾರತೀಯ ಮಹತ್ವವನ್ನು ತಂದುಕೊಟ್ಟಿದೆ. ಮರ್ಹಾಟಿಯಲ್ಲಿಯೂ ಈ ವಿಷಯವಾಗಿ ಒಂದು ಗ್ರಂಥ ಅವರು ಬರೆದಿರುವರು. ಡಾ. ಕೇತಕರರ ಕೈಯಲ್ಲಿ ಪಳಗಿದ ಹಲವು ತಜ್ಞರು ಮಹಾರಾಷ್ಟ್ರ ಶಬ್ದಕೋಶ, ಗಾದೆಗಳ ಕೋಶಗಳ ಪ್ರಚಂಡ ಕಾರ್ಯ ಮಾಡಿದ್ದಾರೆ. ಭಾರತೀಯ ಚರಿತ್ರಕೋಶ, ಋಗ್ವೇದ ಭಾಷಾಂತರಾದಿ ಕಾರ್ಯಗಳು ಜರುಗಿವೆ.

ಡಾ. ಭಂಡಾರಕರ, ರಾಜವಾಡೆ, ಕಾಣೆ ಪ್ರಭೃತಿಗಳ ಲೇಖನ, ಸಂಶೋಧನಗಳಿಂದ ಅಖಿಲ ಭಾರತೀಯ ಮಾತ್ರವಲ್ಲ, ಜಾಗತಿಕ ವಿದ್ವಾಂಸರಲ್ಲಿ ಮರ್ಹಾಟಿಗರು ಸ್ಥಾನಮಾನಗಳನ್ನು ಪಡೆದುಕೊಂಡಿದ್ದಾರೆ. ವಿಷ್ಣು ಶಾಸ್ತ್ರಿ ಚಿಪಳೂಣಕರರಿಂದ ಆರಂಭವಾದ ಪ್ರಬಂಧ ಲೇಖನದ ಪರಂಪರೆಯು ಕಾಲಮಾನಕ್ಕನುಸರಿಸಿ ವಿವಿಧ ವೇಷ ತಾಳುತ್ತ ಶ್ರೀ ವಿನೋಬಾ ಭಾವೆಯವರ ವರೆಗೂ ಇಂದು ಪ್ರಭಾವಿಯಾಗಿ ನಡೆದು ಬಂದುದು ಗೋಚರವಾಗುತ್ತದೆ. ಪ್ರಾಚೀನ ಅರ್ವಾಚೀನ ಸಾಹಿತ್ಯೋದಧಿಯ ಇತಿಮಿತಿಗಳನ್ನು ಅಳೆದು ಹೇಳುವ ವಿಮರ್ಶೆಯ ವಿವಿಧ ಪ್ರಯತ್ನಗಳ ಮಹಾ ಗ್ರಂಥಗಳೂ ಆಗಿವೆ. ಇವೆಲ್ಲ ಮೇಲಣ ಒಂದೊಂದು ಪ್ರಕಾರದ ಗ್ರಂಥಗಳಲ್ಲಿ ಕೆಲವನ್ನಾದರೂ ಹೇಳಿ ಅವುಗಳ ಪರಿಚಯ ಮಾಡಿ ಕೊಡಬೇಕೆಂದರೂ ಅದು ಒಂದು ಸಣ್ಣ ಹೊತ್ತಗೆಯೆ ಆದೀತು.

ಇಂತೀ ಬಗೆಯಾಗಿ ಸಾಹಿತ್ಯವು ಮರ್ಹಾಟದ ಹೃದಯಬುದ್ಧಿಗಳ ವಿಕಾಸಕ್ಕೆ ಕಾರಣವಾಗಿ ಭಾರತಕ್ಕೆ ತನ್ನ ವಿಶಿಷ್ಟ ಕಾಣಿಕೆಯನ್ನು ಸಲ್ಲಿಸುತ್ತಿರುವುದು ಉಳಿದ ಪ್ರಾಂತದವರಿಗೂ ಅನುಕರಣೀಯವಾಗಿದೆ.

ಯಕ್ಷಗಾನ ಕಲೆ

ಕವಿಭೂಷಣ ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟಿ.

ಶ್ರೀಮನ್ಮಂಜುಳ ಮಂಜುನಾಥ ಪುರದಾಣ್ಮಂ
ಸತ್ಯಶೀಲಾನ್ವಿತಂ ।
ಭೂಮಾನ್ಯಂ ಸಿರಿಮಂಜಯಾಖ್ಯ ಜಿನವಂಶೋದ್ಭಾವ
ರತ್ನತ್ರಯಂ ॥
ಸೋಮಾರ್ಕಂಬರನಿಳ್ಪಿನೂರ್ಜಿತಯಃಶಂ ಬಾಳ್ಪಿರ್ಕೆ
ಸೌಭಾಗ್ಯದಿಂ ।
ಧರ್ಮಾತ್ಮರ್ಮುನಿ ಪಾರ್ವರೀಯುಗೆ ಶುಭಾಶೀ
ರ್ವಾದ ಸಂದೇಶಮಂ ॥

ಕಲೆಯ ಪರಂಪರೆ

ಯಕ್ಷಗಾನ ಕಲೆಯು ನೂತನವಾದುದಲ್ಲ. ದೇವಗಾನ, ಗಂಧರ್ವಗಾನ-ಕಿನ್ನರಗಾನಗಳಂತೆ ಪುರಾತನವಾದದ್ದಿದೆ. ಇದು ಮಾರ್ಗ ಸಂಗೀತದ, ದೇವ ಗಂಧರ್ವ ಗಾನಗಳಂತೆ, ಸುಸಂಸ್ಕೃತವಾದ ಶಾಸ್ತ್ರೀಯ ರಾಗಾಂಗಗಳ, ಮೇಳಗೊಂಡ ಕಲೆಯಲ್ಲ. ಸಾಹಿತ್ಯ ಪ್ರಧಾನವಾಗಿದ್ದು ಜನಪದಗಳ "ನಾಟ್ಯಗರಣ"ಗಳಲ್ಲಿ ರೂಢಿಗೊಂಡ ಅತ್ಯುತ್ತಮವಾದ ಮೋಹಿನೀ ಕಲೆಯಾಗಿದೆ. ಗಾನ ಪರಂಪರೆಗಳಲ್ಲಿ "ಗೀತ ವಾದ್ಯ-ನಾಟ್ಯ"ಗಳು ಸೇರಿಕೊಂಡು "ಸಂಗೀತ"ವೆನಿಸಿಕೊಂಡಂತೆ ಇವು ಮೂರೂ ಯಕ್ಷಗಾನದಲ್ಲಿಯೂ ಸೇರಿಕೊಂಡಿದ್ದು ಗಾನ ಪ್ರಪಂಚದೊಳಗಿರುವ ದೇಸಿ ವಡೆದ ಕಲೆಯಾಗಿದೆ.

ಅಮರ ಸಿಂಹನ ನಾಮಲಿಂಗಾನುಶಾಸನದಲ್ಲಿ:- "ವಿದ್ಯಾಧರೋಪ್ಸರೋ "ಯಕ್ಷ" ರಕ್ಷೋ ಗಂಧರ್ವ ಕಿನ್ನರಾಃ । ಪಿಶಾಚೋಗುಹ್ಯಕ ಸಿದ್ಧೋ ಭೂತೋಽಮೀ ದೇವಯೋನಯಃ" ॥ [ಸ್ವ. ವ. ೧೧] ಎಂದಿದೆ.

ಇದರಿಂದ "ಯಕ್ಷ-ಕಿನ್ನರಾದಿ"ಗಳು ದೇವಯೋನಿ ವಿಶಿಷ್ಟರೆಂದು ತಿಳಿದುಬರುತ್ತದೆ. ದೇವ, ಗಂಧರ್ವ-ಕಿನ್ನರಾದಿಗಳು ಹಾಡಿದ ಗಾನಗಳು ಅವರವರ ಸ್ವನಾಮ ಪ್ರಸಿದ್ಧಿಯ ಗಾನಗಳೆಂದು ಹೆಸರುಗೊಂಡಂತೆ- "ಯಕ್ಷ"ರು ಹಾಡಿದ ಗಾನವು "ಯಕ್ಷಗಾನ"ವೆಂದು ಹೆಸರುಗೊಂಡಿದೆ.

ಚಾರಿತ್ರಕವಾಗಿ:—ಉತ್ತರಕಾಂಡ ರಾಮಾಯಣದಲ್ಲಿ-ತೆಂಕಣ ಲಂಕಾ ಸಾಮ್ರಾಜ್ಯವನ್ನು ಪೂರ್ವಯುಗದಲ್ಲಿ ಯಕ್ಷರಾಜನಾದ ಕುಬೇರನು ಆಳುತ್ತಿದ್ದು ಆ ಲಂಕೆಯು ರಾವಣನ ವಶವಾದ ಬಳಿಕ-ಕುಬೇರನು ಮಹಾದೇವನ ಕೃಪೆಗೆ ಪಾತ್ರನಾಗಿ ಬಡಗಣ ದಿಶಾಭಾಗದ ಅಳಕಾವತಿಯಲ್ಲಿ ನೆಲೆಗೊಂಡನೆಂದು ವಿವರಣೆಗಳಿವೆ. ದೇಶಭ್ರಷ್ಟರಾದ ಯಕ್ಷ ಬಳಗದವರಲ್ಲಿ ಹಲವರು ದಕ್ಷಿಣ ಭಾರತದ ಕರ್ಣಾಟಕದಲ್ಲಿ ಬಂದು ನೆಲಸಿಕೊಂಡಂತೆ ತಿಳಿದುಬರುತ್ತದೆ. ಜೈನವಾಙ್ಮಯದ ಪಂಪಾರಾಮಾಯಣಾದಿ ಗ್ರಂಥಗಳಲ್ಲಿ ರಾವಣಾದಿ ರಾಕ್ಷಸರನ್ನು ಜೈನಮತಾವಲಂಬಿಗಳಾದ ಖೇಚರ [ಯಕ್ಷ]ರೆಂದು ಹೇಳಿರುತ್ತದೆ.

''ಕಡಲೊಳಗೊಂದೆರಳ್ ಜಲಕಣಂ ಪವನಾಹತಿಯಿಂ
ವಿನಾಶಮಾ ।
ದೊಡೆ ಜಲ ರಾಶಿ ಕುಂದುಗುಮೆ ಮೇರೆಗೆ
ದೂರಮೆನಿಪ್ಪನಮ್ಮ ಪೆ ॥
ರ್ಪಡೆ ಖರದೂಷಣರ್ ಕಳಿಯೆ ಕುಂದುಗುಮೇಕಪಿ
ಚಿಹ್ನರಿಲ್ಲದೇಂ ।
ಕಿಡುವುದೊ ಭೂಚರರ್‌ಧುರದೊಳಾಂಪರೆ ''ಖೇಚರ''
ಚಕ್ರವರ್ತಿಯಂ ॥

ಈ ಪ್ರತಿ ವಸ್ತೂಪಮಾಲಂಕಾರದ ಪದ್ಯದಲ್ಲಿ ಹೇಳಿದ ಖೇಚರ ಚಕ್ರವರ್ತಿಯಂದರೆ ರಾವಣನು.

ಜೈನಮತೀಯರಿಗೆ ಯಕ್ಷರಲ್ಲಿ ಪೂಜ್ಯ ಭಾವವಿದೆ. ೧೦ನೇ ಶತಮಾನದ ಕವಿಚಕ್ರವರ್ತಿಯಾದ "ರನ್ನನು" ತನ್ನ ಗದಾಯುದ್ಧದ, ಪ್ರಥಮಾಶ್ವಾಸದ ಮಂಗಳಾಚರಣೆಯ ೫ನೇ ಕಂದದಲ್ಲಿ:—

"ಕೂರಿಸಿ ವಿಜಯ ಶ್ರೀಯಂ । ಕೂರದರಂ ಕೊಂದುಸಮರಜಯಮುಂ ಮಾಡಲ್ ॥ ಕೂರಸಿಯೊಳ್ನೆಲಸುಗೆ ಕಂ । ಠೀರವ ವಾಹನೆ ಚಳುಕ್ಯ ಕಂಠೀರವನಾ ॥"

ಈ ಪದ್ಯದಲ್ಲಿ ಕಂಠೀರವ ವಾಹನೆಯಾದ ಯಕ್ಷಿಯು ಚಾಳುಕ್ಯ ಕಂಠೀರವನಾದ [ತನ್ನ] ಯುವರಾಜ ಸತ್ಯಾಶ್ರಯನ ಕೂರಸಿಯಲ್ಲಿ ನೆಲೆಗೊಂಡು ವಿಜಯ ಶ್ರೀಯನ್ನುಂಟುಮಾಡಲೆಂದು ಕವಿಯು ಪ್ರಾರ್ಥಿಸಿಕೊಂಡಿರುವನು.

೧೩ನೇ ಶತಮಾನದ ಮಹಾಕವಿಯಾದ ಜನ್ನನು ಅನಂತನಾಥ ಪುರಾಣದಲ್ಲಿ:—

ವೃತ್ತ ॥

ಪಳಪದ್ಮಂ ಹಳ ಶೂಳವಂಕುಶ ಕಶಾಯುಗ್ಮಂ
ಭುಜಾದಂಡ ಮಂ ।
ಡಳದೊಳ್ತಳ್ತಿರೆ ಮೂರು ವಕ್ತ್ರವಳಯಂ ಶ್ವೇತಾಂಗ
ವರ್ಣಕ್ಕೆ ಪಾ ॥
ಲ್ಗೊಳದೊಳ್ ಪಂಕಜ ಪುಂಜದಂತೆಸೆದು ತೋರ್ಪ್ಪಂ
ಮತ್ಕೃತಿ ಶ್ರೀಗೆ ಮಂ ।
ಗಂಳವಂ ಮಾಳ್ಕಧಿ ರೂಢ ಹಸ್ತಿಮಕರಂ ಪಾತಾಳ
ಯಕ್ಷೇಶ್ವರಂ ॥ ಅ ೧-೧೦ ॥

ಎಂದು ಪಾತಾಳ ಯಕ್ಷೇಶ್ವರನನ್ನು ಪ್ರಾರ್ಥಿಸಿಕೊಂಡಿರುತ್ತಾನೆ. ದಕ್ಷಿಣ ಭಾರತದ ಕರ್ಣಾಟದಲ್ಲಿರುವ ಜೈನ ಬಂಧುಗಳು ಪ್ರತ್ಯಕ್ಷವಾಗಿ ಯಕ್ಷ-ಯಕ್ಷಿಣಿಯರನ್ನು ಆರಾಧಿಸಿಕೊಂಡು ಬರುವುದನ್ನು ನೋಡಿದರೂ, ಕನ್ನಡ ನಾಡುಗಳಲ್ಲಿ ಪುರಾತನದಿಂದಲೇ ಯಕ್ಷರು ಮಾನ್ಯತೆಗೊಂಡಿರುತ್ತಾರೆಂದು ತಿಳಿದುಬರುತ್ತದೆ. ಆದರೆ:—

ಜೈನ ಪುರಾಣಗಳ ಕಥೆಗಳಿಂದ, ಜೈನಕವಿಗಳು ವಿರಚಿಸಿದ ಯಕ್ಷಗಾನ ಪ್ರಬಂಧಗಳು ಪ್ರಚಾರದಲ್ಲಿ ಇಲ್ಲದಿರುವದು ಚೋದ್ಯವಿದೆ. ಇಲ್ಲವೆನ್ನುವುದಕ್ಕೆ ನನ್ನ ಮಿತ್ರರಾಗಿದ್ದ ದಿವಂಗತ ಶ್ರೀ ಬಿ. ಧರಣಪ್ಪ ಆರಿಗರೆಂಬ ಬೆಳ್ತಂಗಡಿ ಪ್ರಾಂತದ ಜೈನಬಂಧುಗಳೊಬ್ಬರು ತಾರೀಕು 20–1–1932ಲ್ಲು "ನಾಗಕುಮಾರ ಚರಿತೆ" ಎಂಬ ಜೈನ ಪುರಾಣಾಂತರ್ಗತ ಯಕ್ಷಗಾನ ಪ್ರಬಂಧವನ್ನು ತಿದ್ದಿ ಬರೆಯಲಿಕ್ಕಾಗಿ ನನಗೆ ಕೊಟ್ಟಿರುತ್ತಾರೆ.

ಇದರ ಪ್ರಾರಂಭದ ಮಂಗಳಾಚರಣೆಯಲ್ಲಿ "ಶ್ರೀ ನೇಮಿನಾಥಂ ಭಜೇ" ಎಂದು ೨೨ನೇ ತೀರ್ಥಂಕರರನ್ನು ಪ್ರಾರ್ಥಿಸಿಕೊಂಡ ಒಂದು ವೃತ್ತವಿದ್ದು, ಇದರ ಕಥಾವಸ್ತುವು ನೇಮಿಶನ ಪುರಾಣದೊಳಗಿನದ್ದಾಗಿದೆ. ಆದಿ ತೀರ್ಥಂಕರರು ಪೂರ್ವದಲ್ಲಿ ಈ ಕಥೆಯನ್ನು ಭರತನಿಗೂ ನಂತರ ಗೌತಮ ಗಣಧರರು ಶ್ರೇಣಿಕ ಮಹಾರಾಜನಿಗೂ ಹೇಳಿದರು. ಆ ಬಳಿಕ ಜಿನ ಮುನಿಗಳಾದ ಲಲಿತಕೀರ್ತಿ ಭಟ್ಟಾರಕರ ಅಪ್ಪಣೆಯಂತೆ ರಾಜಕವಿಯಾದ ಬಾಹುಬಲಿಯು ಭೈರವರಾಜನಿಗೆ ಹೇಳಿದಂತೆ ಆ ಪ್ರಬಂಧದ ಪದ್ಯಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದನ್ನು ಬರೆದ ಕವಿಯು ತ್ರಿವುಡೆ ತಾಳದ ಒಂದು ಪದ್ಯದಲ್ಲಿ:—"ವರಮಹಿಸಪುರವೆಂಬ ಹೊರ್ನಾ । ಡುರುತರದ ಪಾರಿಶ್ವ ಜಿನಪನ । ಚರಣ ಕಮಲಾರಾಧ್ಯ ಪುಟ್ಟಯ-ನೊರೆದ ಕಥೆಯಾ ॥ ಎಂದಿದೆ.

ಹೀಗೆ ಜೈನಪುರಾಣದಿಂದ ಜೈನಕವಿಯು ಬರೆದ ಇದೊಂದು ಯಕ್ಷಗಾನ ಪ್ರಸಂಗವಲ್ಲದೆ ಬೇರೆ ಪ್ರಬಂಧಗಳು ನನಗೆ ಇದುವರೆಗೆ ದೊರೆಯಲಿಲ್ಲ.

ಪ್ರಸಿದ್ಧ ಲಕ್ಷಣ ಗ್ರಂಥಗಳ ಕವಿ ಸಮಯಗಳಿಂದ ಜಾನಪದ ಸಾಹಿತ್ಯಗಳಾದ ಹಾಡುಗಬ್ಬಗಳ ಕೆಲವು ವಿವರಗಳು ತಿಳಿದುಬರುತ್ತದೆ. ೯ನೇ ಶತಮಾನದ ನೃಪತುಂಗನ "ಕವಿರಾಜ ಮಾರ್ಗ" ೧೨ನೆಯ ಶತಮಾನದ ನಾಗವರ್ಮನ ಕಾವ್ಯಾವಲೋಕನಗಳಲ್ಲಿ ಬೇರೆ ಬೇರೆ ವಿಧವಾದ ಜಾನಪದ, ಹಾಡುಗಬ್ಬಗಳ ಹೆಸರುಗಳೂ, ಅವುಗಳ ಲಕ್ಷಣವೂ ಹೇಳಲ್ಪಟ್ಟಿದೆ. ಇದರಿಂದ ಈ ಲಕ್ಷಣಗಳಿಗೆ ಲಕ್ಷ್ಯವಾದ ಆ ಜಾನಪದ ಪ್ರಬಂಧಗಳೂ-ಹಾಡುಗಳೂ, ಪೂರ್ವದಲ್ಲೇ ಇರಬೇಕೆಂದು ಹೇಳಬೇಕಾಗುತ್ತದೆ.

ನೃಪತುಂಗನ ಕವಿರಾಜಮಾರ್ಗ ಸೂತ್ರ ೧-೩೪ "ಬೆದಂಡೆ ಗಬ್ಬ" ಸೂ. ೧-೩೫ "ಚತ್ತಾಣಂ" ಇವುಗಳ ಲಕ್ಷಣಗಳಿವೆ. "ಚತ್ತಾಣ"ವೆಂಬದು ಹಿಮ್ಮೇಳದೊಡನೆ ಹಾಡಿ, ಬಾರಿಸಿ, ಕೇಳಲಿಕ್ಕಿರುವ ಶ್ರಾವ್ಯಕಲೆಯು. "ಬೆದಂಡೆ" [ವೀಣಾದಿ ದಂಡ ವಾದ್ಯಗಳಿಲ್ಲದೆ ಹಾಡುವ ದೇಸಿ ಹಾಡು] ಇದು ಕೇಳಲಿಕ್ಕೂ-ನೋಡಲಿಕ್ಕೂ ಇರುವ ದೇಸೀ ಗಾನದ ದೃಶ್ಯ ಕಲೆಯು; ಇದನ್ನೇ ಮುಂದೆ ವಿಸ್ತರಿಸಿ ನಾಗವರ್ಮನು ಕಾವ್ಯಾವಲೋಕನದ ಲಕ್ಷಣ ಸೂತ್ರಗಳಲ್ಲಿ "ಪದ, ಮೆಲ್ವಾಡು, [೯೫೨] ಪಾಡು [೯೫೩] ಮೆಲ್ಪಾಡು" ಬೆದಂಡೆ [೯೫೪) ಬಾಜನೆ ಗಬ, [೯೫೫]ಗಳೆಂದು ವಿವರಿಸುತ್ತಾನೆ. ನಾಗವರ್ಮನು "ಪಲ ತೆರದ ಪದ್ಯದಿಂದಂ" ಎಂದು ಸೂತ್ರ ೯೫೫ಲ್ಲು ಹೇಳುವ ಲಕ್ಷಣದ ಪದ್ಧತಿಕೆ ನಡೆದು ಬಂದ ಲಕ್ಷ್ಯಗಳು ಯಕ್ಷಗಾನ ಪ್ರಬಂಧಗಳಲ್ಲಿ ಮಾತ್ರ ದೊರೆಯುವುದರಿಂದ "ಬಾಜನ ಗಬ್ಬ" ವಂದರೆ ಯಕ್ಷಗಾನವೇ ಆಗಿದೆ ಎಂದು ನಿರ್ಧರಿಸಿ ಹೇಳಲಿಕ್ಕೆ ಬರುತ್ತದೆ.

ನಾಗವರ್ಮನು "ಛಂದೋಂಬುಧಿ"ಯ ೧ನೆಯ ಅಧಿಕಾರದಲ್ಲಿ ಸಂಸ್ಕೃತ ಛಂದಸ್ಸಿಗೆ ಸೇರದ "ದೇಸಿ" ಪದ್ಯಗಳನ್ನು ಹೇಳುತ್ತಾನೆ. ಇದು ಕನ್ನಡದ ಅತಿ ಪ್ರಾಚೀನ ಗ್ರಂಥವಿದೆ.

"ಮದನವತಿ, ಯಕ್ಕರಂ ಚೌ । ಪದಿಗೀತಿಕೆಯೇಳೆ ತಿವದಿಯುತ್ಸಾಹಂ ಷ । ಟ್ಪದಿಯಕ್ಕರಿಕೆ ಕರಂಚೆ । ಲ್ವೊದವಿದ-ಛಂದೋವತಂಸಮಬ್ಜದಳಾಕ್ಷಿ ॥ [೧-೪೭]

ಇವುಗಳು ಅಚ್ಚಗನ್ನಡದ ಛಂದಸ್ಸುಗಳ ಪದ್ಯಗಳು. ಈ ವರ್ಗಕ್ಕೆ ಸೇರಿದ ಪದ್ಯಗಳ:—ದ್ವಿಪದಿ, ತ್ರಿಪದಿ, ಚೌಪದಿ, ಸಾಂಗತ್ಯ ತ್ಯಾಗವಾನ–ಯಾಲಪದ, ಪಾರ್ಥ ಜೋಗಿ ಹಾಡು, ಗೀತಗೋಪಾಲ, ಷಟ್ಪದಿಗಳು—ಇವೆಲ್ಲಾ ಯಕ್ಷಗಾನ ಪ್ರಬಂಧಗಳಲ್ಲಿ ಹಾಸುಹೊಕ್ಕಾಗಿ "ಪಲತೆರದ ಪದ್ಯದಿಂದಂ । ಲಲಿತ ವಚೋರಚನನಿಚಯ ಪದ್ಧತಿಕೆಗಳಿಂ" ಎಂಬ ನಾಗವರ್ಮನ ಕಾವ್ಯಾವಲೋಕನದ ಬಾಜನೆಗಬ್ಬದ, ಲಕ್ಷಣಕ್ಕೆ ಲಕ್ಷ್ಯಗಳಾಗಿವೆ.

ನಾಗವರ್ಮನ ಛಂದೋಂಬುಧಿಯ ಅಧಿಕಾರ ಇಲ್ಲಿ ಸಂಸ್ಕೃತ ಛಂದಸ್ಸಿಗೆ ಸೇರಿಸಿರುವ ಸೂತ್ರ ೨೨೨= "ಗಣನಿಯಮವಿಪರ್ಯಾಸದೊ । ಳೆಣೆವಡೆದೊಳ್ಪೆಸೆಯೆ ಮಾತ್ರೆ ಸಮನಾಗಿಗುಣಾ ॥ ಗ್ರಣಿಯ ಮತದಿಂದೆ ತಾಳದ । ಗಣನೆಗೊಡಂಬಟ್ಟುದದುವೆ ರಘಟಾ ಬಂಧಂ ॥"

ಈ ರಗಳೆಗಳಲ್ಲಿ "ಮಂದಾನಿಲ-ಲಲಿತೆ-ಉತ್ಸಾಹ" ಗಳೆಂಬುದೆಲ್ಲಾ ಸೇರಿಕೊಂಡಿವೆ. ಮಾತ್ರಾ ಗಣಗಳ [೩-೪-೫] ಪ್ರಸ್ತಾರಗಳಿಂದ ವಿಪರ್ಯಾಸಗೊಂಡು ತಾಳದ ಪದ್ಯಗಳಲ್ಲಿ ಸೇರಿ ಎಣೆವಡೆದು ಯಕ್ಷಗಾನದ ಹಾಡುಗಳಲ್ಲಿ ವಿಶೇಷವಾಗಿ ಪ್ರಯೋಗದಲ್ಲಿವೆ.

ವೀರಶೈವ ಕವಿಗಳ ಕವಿತೆಗಳು—ಲಾವಣಿಗಳು—ದಾಸರ ಪದ್ಯಗಳು, ಜನಪದ ಸಾಹಿತ್ಯ-ಗೀತೆಗಳೆಲ್ಲಾ ಅಚ್ಚಗನ್ನಡದ ಮೇಲೆ ಬರೆದ ಪದ್ಯಗಳ ಮಾತ್ರಾ ಗಣಗಳಿಂದಲೇ ವಿರಚಿತವಾದವುಗಳಾಗಿವೆ. ಭಾಮಿನಿ ಷಟ್ಪದಿಯ ಮಾತ್ರಾಗಣಗಳಿಂದ ವಿರಚಿತವಾದ ತ್ರಿವುಡೆ ತಾಳದ ಪದ್ಯವನ್ನು ೧೭ನೆಯ ಶತಮಾನದ [1653] ವೀರಶೈವ ಕವಿಯಾದ "ಷಡಕ್ಷರದೇವ"ನ ರಾಜಶೇಖರ ವಿಲಾಸದ ೧೩ನೇ ಆಶ್ವಾಸದ ೧೨೧ ರಿಂದ ೧೨೮ರ ವರೆಗಿನ-ತಿರುಕೊಳವಿನಾಚಿಯ ಪ್ರಳಾಪವರ್ಣನಾ ಭಾಗದಲ್ಲಿ ಕಾಣಬಹುದು.

ತಾಳದ ಗಣನೆಗೊಡಂಬಟ್ಟ ಷಟ್ಪದಿಗಳು

ಕುಸುಮ ಷಟ್ಪದಿ ವಾರ್ಧಿಕ ಷಟ್ಪದಿಗಳ ಮಾತ್ರಾ ಗಣಗಳು "ಝಂಪೆ ತಾಳ"ಕ್ಕೂ–ಭೋಗ ಷಟ್ಪದಿಯ ಗಣಗಳು "ಮಟ್ಟೆ ತಾಳ"ಕ್ಕೂ ಭಾಮಿನಿ ಷಟ್ಪದಿಯ ಗಣಗಳು "ತ್ರಿವುಡೆ ಮತ್ತು ಅಷ್ಟತಾಳ"ಗಳಿಗೂ ಪರಿವರ್ಧಿನಿ ಮತ್ತು ಶರಷಟ್ಪದಿಯ ಗಣಗಳು ಏಕತಾಳಕ್ಕೂ, ಸಾದ ಮತ್ತು ಪ್ರಸ್ತಾರಗಳಿಂದ ಸೇರಿ ಬರುತ್ತಿವೆ. ಸಂಗೀತ ಶಾಸ್ತ್ರದಂತೆ:-ಖಂಡ ಜಾತಿಯ ಪ್ರಸ್ತಾರಗಳು "ಝಂಪೆ"ಗೂ, ತಿಸ್ರ ಜಾತಿಯ ಪ್ರಸ್ತಾರಗಳು "ಮಟ್ಟೆ" ಉತ್ಸಾಹಗಳಿಗೂ, ಚತುರಶ್ರದ ಪ್ರಸ್ತಾರಗಳು "ಏಕತಾಳ" ಮಂದಾನಿಲಕ್ಕೂ–ಮಿಶ್ರಜಾತಿಯ ಪ್ರಸ್ತಾರಗಳು "ತ್ರಿವುಡೆ" ಭಾಮಿನಿಗಳಿಗೂ, ಸಂಕೀರ್ಣ ಜಾತಿಯ ಪ್ರಸ್ತಾರಗಳು ಮಿಶ್ರಗಳಾಗಿಯೂ ಯಕ್ಷಗಾನದ ಹಾಡುಗಳಲ್ಲಿ ಸೇರಿಕೊಂಡಿವೆ. ವಸ್ತು ಕಾವ್ಯಗಳಂತೆ ಸಕಲ ಲಕ್ಷಣದ ಬಿಗಿತೆಗಳು ಯಕ್ಷಗಾನದ ವರ್ಣಕ ಪ್ರಬಂಧಗಳಲ್ಲಿ ಇಲ್ಲವಾದರೂ, ಛಂದಸ್ಸಿಗೂ, ಸಂಗೀತ ಶಾಸ್ತ್ರಕ್ಕೂ ವಶವರ್ತಿಯಾದ ಕಲೆಯಾಗಿದೆ.

ರತ್ನಾಕರ ವರ್ಣಿಯು "ಭರತೇಶ ವೈಭವ"ದ ಆಸ್ಥಾನ ಸಂಧಿ ಪದ್ಯ ೯ಲ್ಲು "ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು । ವಿಕಳವಾದರು ದೋಷವಿಲ್ಲ ॥ ಸಕಲ ಲಕ್ಷಣಕಾಗಿ ಬಿರುಸು ಮಾಡಿದರೆ ಪು । ಸ್ತಕದ ಬದನೆಕಾಯಹುದು" ಎಂದು ಹೇಳಿದಂತೆ ಯಕ್ಷಗಾನ ಪ್ರಬಂಧಗಳನ್ನು ಪರಿಶೀಲಿಸಿದರೆ ಕನ್ನಡ ಸಾಹಿತ್ಯದಲ್ಲಿ ಅವುಗಳ ಸ್ಥಾನದ ಯೋಗ್ಯತೆಯನ್ನು ಕಾಣಬಹುದು.

೧೭ನೆಯ ಶತಮಾನದ ವರೆಗೆ ಕನ್ನಡ ಸಾಹಿತ್ಯದಲ್ಲಿ ಮಹಾ ಕಾವ್ಯಗಳ ಬೆಳವಣಿಗೆಗಳೇ ಕಂಡು ಬರುತ್ತವೆ. ರತ್ನಾವಳಿಯ ಪರಿವರ್ತನೆಯೆಂದೂಹಿಸುವ "ಮಿತ್ರವಿಂದಾ ಗೋವಿಂದಾ" ಎಂಬ ಅದೊಂದೇ ನಾಟಕವು ಕನ್ನಡ ಸಾಹಿತ್ಯದಲ್ಲಿ ತೋರುತ್ತದೆ. ಕನ್ನಡದಲ್ಲಿ ಸಂಗೀತ ನಾಟಕಗಳು ಹುಟ್ಟುವ ಪೂರ್ವವೇ ಯಕ್ಷಗಾನ ಕಲೆಯು ಜನಪದಗಳ ಜನರ ಆದರಕ್ಕೆ ಪಾತ್ರವಾಗಿದೆ.

ಹಳೆಗನ್ನಡ-ನಡುಗನ್ನಡದ ಗ್ರಂಥಗಳಲ್ಲಿ "ಎಕ್ಕಡಿಗರ್—ಎಕ್ಕಲಗಾಣ"ರೆಂಬ ನಾಮ ನಿರ್ದೇಶಗಳಿಂದ "ಯಕ್ಷಗಾನದ ಕೂಟದವರನ್ನೂ– ಹಾಡುಗಾರನಾದ ಭಾಗವತನನ್ನೂ ಕುರಿತಾಗಿ ವಿವರಿಸಿ ಹೇಳಿದಪದ್ಯಗಳಿವೆ. ೧೨ನೆಯ ಶತಮಾನದ ಆದಿ ಭಾಗ [1105]ದ ನಾಗಚಂದ್ರನ ಮಲ್ಲಿನಾಥ ಪುರಾಣ [ಅ ೬-೯೪]ನೇ ಪದ್ಯದ ಕೊನೆಯ ೪ನೇ ಚರಣ-ತಾ । 'ವರೆಯೊಳಗಿರ್ದ ಲಕ್ಷ್ಮಿಯ ಮನಂಬಡೆ' ವೆಕ್ಕಲಗಾಣ" ನಂದದಿಂ ॥

೧೨ನೇ ಶತಮಾನ [1189] ಅಗ್ಗಳನ ಚಂದ್ರಪ್ರಭಾ ಪುರಾಣ [೭-೯೬]. ಉತ್ತರಾರ್ಧ "ದಾಣತಿ ಮಾಡಿ ಸಾಳಗದ ದೇಸಿಯ ಗೀತಮುನಂದು ಪಾಡುವಿಂ ।

ಪಾಣನನುರ್ವರಾಧಿಪತಿ ಲೀಲೆಯಿ "ನೆಕ್ಕಲಗಾಣ"ನೊರ್ವನಂ ಕೇಳುತ್ತುಮಿರ್ದಂ ॥" ಅಜಿತಸೇನ ಮಹರಾಜನು ಪ್ರಿಯಪತ್ನಿಯಾದ ಶಶಿಪ್ರಭಾದೇವಿಯೊಡಗೂಡಿ ವಸಂತ ಮಂಟಪದಲ್ಲಿ ವಿಹರಿಸುತ್ತಿರುವಾಗ್ಗೆ ದೇಸಿಯಾದ ಸಾಳಗ ರಾಗದಿಂದ ಇಂಪಾಗಿ ಹಾಡುವ ಇಂಪಾಣನಾದ ಎಕ್ಕಲಗಾಣನೊರ್ವನ [ಯಕ್ಷಗಾನದ ಹಾಡುಗಾರನಾದ ಭಾಗವತನೊಬ್ಬನ] ಗೀತವನ್ನು ಕೇಳುತ್ತುಮಿರ್ದಂ ॥

೧೬ನೇ ಶತಮಾನದ ರತ್ನಾಕರ ವರ್ಣಿಯ ಭರತೇಶ ವೈಭವ ಆಸ್ಥಾನ ಸಂಧಿ ಪದ್ಯ ೫೮:—ಉತ್ತರಾರ್ಧ "ನಿಲೆ ಹಿಂದೆ ಹಿತವರು ಬಳಸಿ "ದೆಕ್ಕಡಿಗರ" । ಬಲುಬಜಾವಣೆಯೊಳೊಪ್ಪಿದನೂ".

ನಾಗವರ್ಮನ ಕಾವ್ಯಾವಲೋಕನದ ಸೂತ್ರ ೯೫೫ಲ್ಲಿ ಲಕ್ಷಣವನ್ನು ಹೇಳಿದ "ಬಾಜನೆಗಬ್ಬ"ದ ಮೇಳದವರನ್ನೇ ರತ್ನಾಕರ ವರ್ಣಿಯು ಮೇಲಿನ ಪದ್ಯದಲ್ಲಿ "ಬಲುಬಜಾವಣೆಯ ಎಕ್ಕಡಿಗ"ರೆಂದು ಹೇಳಿರುವನು. "ಬಾಜನೆ ಮತ್ತು ಬಜಾವಣೆ" ಈ ಶಬ್ದಗಳು ಸಮಾನಾರ್ಥವುಳ್ಳವುಗಳಾಗಿವೆ.

ಇಲ್ಲಿ ಸಂಸ್ಕೃತದ "ಯಕ್ಷ" ಶಬ್ದದಲ್ಲಿರುವ "ಕ್ಷ" ಕಾರಕ್ಕೆ ದ್ವಿತ್ವದ "ಕ" ಕಾರವು ಸೇರಿ "ಯಕ್ಕ-ಎಕ್ಕಲ, ಎಕ್ಕಡಿಗ" ಎಂದು ತದ್ಭವವಾಗಿದೆ. ಹೀಗೆ ೯ನೇ ಶತಮಾನದ ಕವಿರಾಜ ಮಾರ್ಗದಲ್ಲಿ ಬೆದಂಡೆ-ಚತ್ತಾಣಗಳಾಗಿ ಹೇಳಿದ ಪಾಡುಗಬ್ಬಗಳು ೧೨ನೇ ಶತಮಾನದ ಕಾವ್ಯಾವಲೋಕನದಲ್ಲಿ ಪದ, ಮೆಲ್ಪಾಡು, ಪಾಡು, ಬಾಜನೆಗಬ್ಬಗಳೆಂದು ರೂಪಾಂತರ ವಡೆದು-ನಾಗಚಂದ್ರ-ಅಗ್ಗಳ ಕವೀಶ್ವರರಿಂದ "ಎಕ್ಕಲಗಾಣ"ವೆಂದು ಧ್ವನಿಸಿ ೧೬ನೇ ಶತಮಾನದಲ್ಲಿ ರತ್ನಾಕರ ವರ್ಣಿಯಿಂದ "ಬಲುಬಜಾವಣೆಯ ಎಕ್ಕಡಿಗ"ರೆಂದು ಪ್ರಸಿದ್ಧವಾಗಿ ರೂಢಿಗೊಂಡು [ತಿಳಿಯತಕ್ಕ ಗ್ರಂಥ ಪರಂಪರೆಗಳಿಲ್ಲದೆ] ಬಂದ ಈ ಕಲೆಯನ್ನೇ ಈಗಿನ ಕಾಸರಗೋಡು ತಾಲೋಕಿಗೆ ಸೇರಿದ ಕುಂಬಳೆಯ [ಕಣ್ವಪುರ-ಕಣಿಪುರ-ಕಣ್ಯಾರ-ದ] ಸೇಡಿಕಾಪಿನ ಸ್ಥಾನಿಕ ಬ್ರಾಹ್ಮಣ ಜಾತಿಯ ಪಾರ್ತಿ [ಪಾರ್ವತಿ] ಎಂಬವಳ ಮಗನಾದ ಪಾರ್ತಿಸುಬ್ಬನೆಂಬ ವರ ಕವಿಯು-ಸಭಾ ಲಕ್ಷಣವೆಂಬ ದಶಾವತಾರದ ಆಟಕ್ಕೆ ಬೇಕಿದ್ದ ಪೂರ್ವರಂಗ [ಪ್ರಸಂಗ ಪ್ರಾರಂಭವಾಗುವ ವರೆಗೆ ಕೋಡಂಗ, ಸುಬ್ರಹ್ಮಣ್ಯ-ಗಣಪತಿ, ಅರ್ಧನಾರೀಶ್ವರ, ಸ್ತ್ರೀ ವೇಸಗಳನ್ನು ಕುಣಿಸುವ ಕ್ರಮಿಕ ಪದ್ಯಗಳುಳ್ಳದ್ದು]ವನ್ನೂ-ರಾಮಾಯಣದ ಕಥೆಗಳ ಯಕ್ಷಗಾನ ಪ್ರಬಂಧಗಳನ್ನೂ ೧೮ನೆಯ ಶತಮಾನದ ಆದಿಯಲ್ಲಿ ವಿರಚಿಸಿ, ಬೈಲಾಟಗಳ ಮೂಲಕ ಕನ್ನಡ ನಾಡುಗಳಲ್ಲಿ ಪ್ರಚಾರಕ್ಕೆ ಬರುವಂತೆ ಮಾಡಿದನು. ಈತನೇ ಯಕ್ಷಗಾನ ವಾಲ್ಮೀಕಿಯೆಂದು ಪ್ರಸಿದ್ಧನಾದ ಯಕ್ಷಗಾನದ ಆದಿ ಕವಿಯು. ಉದ್ದಾಮ ಕವಿಗಳಿಂದ ವಿರಚಿತವಾದ ಮಹಾಕಾವ್ಯಗಳಾಗಲೀ-ಭಾರತ ರಾಮಾಯಣ-ಭಾಗವತ ಮೊದಲಾದ, ಪುರಾಣ ಐತಿಹಾಸಿಕ ಗ್ರಂಥಗಳಾಗಲೀ ಕನ್ನಡ ನಾಡಿನ ಹಳ್ಳಿಗಳಿಗಿಳಿದು ಓದುಬರಹಗಳಿಲ್ಲದ ಪಾಮರ ಜನರನ್ನು ಬೋಧಿಸದಿರುವ ಆ ಕಾಲದಲ್ಲಿ, ನಮ್ಮ ಪಾರ್ತಿಸುಬ್ಬ ಕವಿಯ, ಯಕ್ಷಗಾನ ಪ್ರಬಂಧಗಳು, ಬೈಲಾಟಗಳ ಮೂಲಕ ಪ್ರತಿಯೊಂದು ಕನ್ನಡ ಸೀಮೆಗಳ ಜನಪದಗಳಿಗಿಳಿದು, ದಶಾವತಾರದ ಆಟಗಳನ್ನಾಡಿ-ನೋಡಲಿಕ್ಕೂ, ಕೇಳಲಿಕ್ಕೂ, ಬಹು ಸೊಗಸಾದ ಯಕ್ಷಗಾನ ಕಲೆಯಿಂದ, ಪಂಡಿತ, ಪಾಮರ, ಸ್ತ್ರೀ-ಬಾಲ-ವೃದ್ಧರೆಂಬ ಭೇದವಿಲ್ಲದೆ, ತನಿರಸದ ಕಜ್ಜಾಯದಿಂದ, ಸಮಾರಾಧನೆಯನ್ನು ಮಾಡಿದೆ. ಹಳ್ಳಿಗರಿಗೆ-ಧಾರ್ಮಿಕ, ಸಾಮಾಜಿಕ-ಐತಿಹಾಸಿಕ, ಲೌಕಿಕ, ಪಾರಲೌಕಿಗಳ ಬೋಧನೆಯ ನ್ನಿತ್ತ ಪಾಠಶಾಲೆಯೆಂದರೆ ಯಕ್ಷಗಾನ ಕಲೆಯೇ ಆಗಿರುವದು. ಯಕ್ಷಗಾನ ಕಲೆಯು ಹಳ್ಳಿಗಳ ಜನರಿಗೆ ಮಾಡಿದಷ್ಟು ಸಾಹಿತ್ಯ ಸೇವೆಯನ್ನು-ಸಂಗೀತ ನಾಟಕಗಳಾಗಲೀ ವಸ್ತು ಕಾವ್ಯಗಳಾಗಲೀ ಇದುವರೆಗೆ ಮಾಡಿದ್ದಿಲ್ಲ. ಕಾಡು ಗುಡ್ಡೆಗಳಲ್ಲಿ ದನಗಳನ್ನು ಮೇಯಿಸುವ ಹುಡುಗರು ಜೊತೆಗೂಡಿಕೊಂಡು "ತಂಡ ತಂಡ ದದ್ರಿಗಳನು-ಕೊಂಡು ಕೊನರಿ" ಎಂದು ಒಬ್ಬ ಬಾಲಕನು ಹಾಡಿದರೆ—ಮತ್ತೊಬ್ಬ ಹುಡುಗನು "ಧಿತ್ತ ದಿನ್ನಂ-ಡಗ್ರ ರಡ್ಡಾಂ" ಎಂದು ಮೃದಂಗ ಚೆಂಡೆಗಳ ಅನುಕರಣ ಧ್ವನಿಗಳನ್ನು ಬಾಯಿಯಿಂದ ಮಾಡಿ-ಎದೆಗೆ-ತೊಡೆಗಳಿಗೆ ಕೈಗಳಿಂದ ತಾಳ ಬಡಿದು ಬೇರೆ ಹುಡುಗರು ಹಾರಿ ಕುಣಿದು-"ಭಲಾ! ನಿಲ್ಲು" ಎಂದು ಅರ್ಥವನ್ನು ಹೇಳಿ-ಕ್ರೀಡಿಸುವುದನ್ನು ನೋಡಿದರೂ, ಹಳ್ಳಿಗಳ ಪಾಮರಿಯರು ಮುಸುರೆ ತಿಕ್ಕುವಾಗ್ಗೆ "ಹೆಣ್ಣು ಜನ್ಮವೆ ಸಾಕು ಎನ ಕಂಡು ಮರೆಯಿರೊ ರಾಮ ರಾಮಾ" ಎಂದು ಹಾಡುವುದನ್ನು ಕೇಳಿದರೂ, ಪಾರ್ತಿಸುಬ್ಬ ಕವಿಯ ಯಕ್ಷಗಾನದ ಪ್ರಚಾರವು, ನಿರಕ್ಷರ

ಕುಕ್ಷಿಗಳಾದ ಜನರ ಮೇಲೆ ಕೂಡ ಎಂತಹ ಪರಿಣಾಮವನ್ನುಂಟುಮಾಡಿರುವುದೆಂಬದನ್ನು ಇದರಿಂದ ಮನಗಾಣಬಹುದು. ಕಾರಣ ಕನ್ನಡದ ಸಾಹಿತ್ಯಸೇವೆಯನ್ನು ಮಾಡಿದ ಪ್ರತಿಭಾನ್ವಿತ ಕಲೆಗಳಲ್ಲಿ ಯಕ್ಷಗಾನದ ಕಲೆಯು ಒಂದಾಗಿದೆ.

ಪಾರ್ತಿ ಸುಬ್ಬ ಕವಿಯು ಕನ್ನಡ ತೊರವೆ ರಾಮಾಯಣದ ಕಥೆಗಳನ್ನು ಪಟ್ಟಾಭಿಷೇಕ—ಪಂಚವಟಿ—ವಾಲಿಸಂಹಾರ-ಉಂಗುರ ಸಂಧಿ-ಅಂಗದ ಸಂಧಾನ-ಅತಿಕಾಯ ಕಾಳಗ-ಕುಂಭಕರ್ಣ ಕಾಳಗ-ಇಂದ್ರಜಿತು ಕಾಳಗ-ರಾವಣ ವಧೆಗಳೆಂಬ ಯಕ್ಷಗಾನ ಪ್ರಬಂಧಗಳಾಗಿ ವಿರಚಿಸಿರುತ್ತಾನೆ. ಈತನಿಂದ ವಿರಚಿತವಾದ ಪ್ರಸಂಗಗಳಲ್ಲಿ [ಕುಂಬಳೆಯ] ಕಣ್ವಪುರಪತಿ ಶ್ರೀ ಗೋಪಾಲಕೃಷ್ಣ ದೇವರ ಅಂಕಿತದ ಕೃತಿಮುದ್ರೆಗಳಿವೆ. ಪಾರ್ತಿ ಸುಬ್ಬ ವಿರಚಿತವೆಂದು ಅಚ್ಚಾದ ಪ್ರತಿಗಳಲ್ಲಿ ಕೆಲವು ಪದ್ಯಗಳು ಪ್ರಕ್ಷಿಪ್ತಗಳಾಗಿಯೂ, ಕೆಲವು ತಿದ್ದಿ ವಿರೂಪಗಳಾಗಿಯೂ ಇದ್ದು, ಕವಿಯ ಮೂಲಕೃತಿಗಳನ್ನು ಅವುಗಳಿಂದ ಪ್ರತ್ಯೇಕಿಸುವದು ಪ್ರಯಾಸದ ಕೆಲಸವಾಗಿದೆ. ಒಂದೆರಡು ಪ್ರಬಂಧಗಳು ದೊರಿಯಲಿಲ್ಲ. ಈತನು ರಾಮಾಯಣದಿಂದ ಕಥೆಗಳನ್ನು ಮಾತ್ರ ಸಂಗ್ರಹಿಸಿಕೊಂಡದ್ದಲ್ಲದೆ ಕಥಾ ಭಾಗಗಳನ್ನು ತನ್ನ ಯಕ್ಷಗಾನ ಪ್ರಬಂಧಗಳಲ್ಲಿ ದಶಾವತಾರದ ರಂಗಕ್ಕೆ ಬೇಕಿದ್ದಂತೆ ಸ್ವಾತಂತ್ರವಾಗಿಯೇ ವಿರಚಿಸಿಕೊಂಡಿರುತ್ತಾನೆ. ಈತನ ಕವಿತೆಯ ಪದ್ಯಗಳೆಲ್ಲಾ ಸರಳವೂ, ಅರ್ಥಗಂಭೀರಗಳೂ, ಆಗಿದ್ದು ಕಥೆಗಳನ್ನು ಸಂಕ್ಷೇಪ ರೂಪದ ಕೆಲವೇ ಹಾಡುಗಳಿಂದ ಮುಗಿಸಿರುತ್ತಾನೆ. ಹುಟ್ಟು ಕವಿಯಾದ ಪಾರ್ತಿ ಸುಬ್ಬನ ಪ್ರಬಂಧಗಳಲ್ಲಿ—ನಾಗವರ್ಮನ ಕಾವ್ಯಾವಲೋಕನದಲ್ಲಿ ವಿವರಿಸಿದ ೨೪೫ನೇ ಸೂತ್ರದ "ನಗರಾರ್ಣವ ಸರಿದಟವೀ । ನಗಚಂದ್ರಾರ್ಕೋದಯರ್ತು ಸಲಿಲಕ್ರೀಡಾ ॥ ದಿಗಳಾದಿಯಾಗೆ ಸರಸೋ । ಕ್ತಿಗಳಿಂ ವರ್ಣಿಸುಗೆ ವರ್ಣಕಂಗಳನದಱೋಳ್ ॥ ಎಂಬ ಪ್ರಮಾಣದಂತೆ—ವನ ವರ್ಣನೆ—ಸಮುದ್ರ ವರ್ಣನೆ-ಯುದ್ಧ ವರ್ಣನೆ ಮೊದಲಾದುವುಗಳನ್ನೂ—ಶೃಂಗಾರ, ವೀರ, ಕರುಣಾದಿ ರಸಗಳನ್ನೂ [ವರ್ಣಕದ ಲಕ್ಷಣಕ್ಕೊಪ್ಪುವ ಲಕ್ಷ್ಯಗಳನ್ನು] ಅಲ್ಲಲ್ಲಿ ಕಾಣಬಹುದಾಗಿದೆ. ದಕ್ಷಿಣ ಕನ್ನಡದಲ್ಲಿ ಜನ್ಮವೆತ್ತಿ ಅದ್ಭುತ ರಾಮಾಯಣ-ಶ್ರೀರಾಮ ಪಟ್ಟಾಭಿಷೇಕ-ರಾಮಾಶ್ವಮೇಧಗಳೆಂಬ ಕನ್ನಡದ ರತ್ನತ್ರಯ ಕೃತಿಗಳನ್ನು ವಿರಚಿಸಿ, ಕೀರ್ತಿಶೇಷರಾದ ನಂದಳಿಕೆ ಲಕ್ಷ್ಮೀನಾರ್ಣಪ್ಪ [ಮುದ್ದಣ್ಣ]ನವರಂತಹ ಗದ್ಯ ಕಾವ್ಯಗಳನ್ನು ಬರೆಯುವ ಕವಿಗಳು ಹೇಗೆ ದುರ್ಲಭರಾಗಿರುವರೋ! ಅದರಂತೆ ಯಕ್ಷಗಾನ ಪ್ರಬಂಧಗಳನ್ನು ಪಾರ್ತಿ ಸುಬ್ಬ ಕವಿಯಂತೆ-ಜೀವಂತ ಕಲೆಯಾಗಿ ವಿರಚಿಸುವ, ವಿರಚಿಸಿದ ಕವಿಗಳು ಇದು ವರೆಗೆ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ಪಾರ್ತಿ ಸುಬ್ಬನ ಕೃತಿಗಳನ್ನು ನೋಡಿ ಕನ್ನಡ ನಾಡಿನ ಅನೇಕ ಕವಿಗಳು—ಭಾರತ, ಭಾಗವತದೊಳಗಣ ಕಥೆಗಳನ್ನು ಯಕ್ಷಗಾನ ಪ್ರಬಂಧಗಳಾಗಿ ವಿರಚಿಸಿರುತ್ತಾರೆ. ಮುಟ್ಟಿ ವಾಸುದೇವ ಪ್ರಭುಗಳು, ಮೂಲ್ಕಿ ವೆಂಕಣ್ಣ ಕವಿ, ಬಾಯಾರು ಸಂಕಯ ಭಾಗವತರು, ಗೆರೆಸೊಪ್ಪೆ ಶಾಂತಪ್ಪಯ್ಯನವರು, ನಂದಳಿಕೆ ಲಕ್ಷ್ಮೀನಾರ್ಣಪ್ಪನವರೇ ಮೊದಲಾದ ಕೀರ್ತಿಶೇಷ ಕವಿಗಳು ಯಕ್ಷಗಾನದ ಕಲಾಸೇವೆಯನ್ನು ಮಾಡಿರುತ್ತಾರೆ. ಪಾರ್ತಿ ಸುಬ್ಬನ ನಂತರದ ಕವಿಗಳಲ್ಲಿ ಯಕ್ಷಗಾನ ಕಲೆಯನ್ನು ತನು, ಮನ, ಧನಗಳಿಂದ ಬೆಳಗಿಸಿದವರೆಂದರೆ ಗೆರೆಸೊಪ್ಪೆ [ಭಲ್ಲಾತಕೀಪುರ] ಶಾಂತಪ್ಪಯ್ಯನವರೆಂದೇ ತಿಳಿದು ಬರುತ್ತದೆ.

ಪಾರ್ತಿ ಸುಬ್ಬ ಕವಿಯ ಸಂಕ್ಷೇಪ ಚರಿತೆ

ಈತನು ಬರೆದ ಮೊದಲನೆಯ "ಪಟ್ಟಾಭಿಷೇಕ" ವೆಂಬ ಯಕ್ಷಗಾನ ಪ್ರಬಂಧದ ಮಂಗಳಾಚರಣೆಯ ವೃತ್ತ. ಒಂದರಲ್ಲಿ [ಈ ವೃತ್ತವು ೨ ಪ್ರತಿಗಳಲ್ಲಿ ವ್ಯತ್ಯಾಸವಾಗಿ ಕಾಣುತ್ತಿದೆ.]

೧:—''ಧಾತ್ರೀಪೂಜಿತಕಣ್ವನಾಮಃಪುರದೆಳ್ನಿಂತಿರ್ಪ
ಶ್ರೀ ಕೃಷ್ಣನಾ ।
ಸತ್ಪಾದಾಂಬುಜ ಭಕ್ತಿಭಾವಬಲದಿಂದೀ ಪಾರ್ವತೀ
ನಂದನಂ ।
ಬತ್ತೀಸಾಕೃತಿತಾಳರಾಗವಿಧದಿಂ ರಾಮಾಯಣಂ ಪೇಳ್ದುದಂ ।
ಭಕ್ತಿ ಜ್ಞಾನದಿ ಕೇಳ್ವ ಪುಣ್ಯ ಕಥೆಯಂ ಸಂತೋಷ ಮಂ
ತಾಳ್ವುದೂ ॥ ೧ ॥

೨:—ಧಾತ್ರೀಮಂಡನ ಕಣ್ವನಾಮ ಪುರದೊಳ್ ವ್ಯ
ದೋರಿ ಭಕ್ತಾಳಿಯಂ ।
ಸತ್ಪಾದಾಬ್ಜ ಮರಂದದಿಂ ತಣಿಯಿಸುತ್ತಾರಯ್ವ
ಶ್ರೀ ಕೃಷ್ಣನಾ ॥
ಭಕ್ತಿ ಸ್ರೋತದೊಳೊಂದುಗೂಡಿ ಹರಿಯುತ್ತೀ
ಪಾರ್ವತೀ ನಂದನಂ ।
ಬತ್ತೀಸಂಕೆಯ ರಾಗತಾಳಗಳೊಳೀ ರಾಮಾಯಣಂ
ಪಾಡಿದಂ ॥ ೧ ॥

ಇವೆರಡು ಪದ್ಯಗಳೂ "ಶಾರ್ದೂಲ ವಿಕ್ರೀಡಿತ" ವೃತ್ತ ಬಂಧಗಳಾಗಿವೆ. ಶಬ್ದ ಪ್ರಯೋಗಗಳ ವ್ಯತ್ಯಾಸವಿದ್ದರೂ "ಕಣ್ವನಾಮ ಪುರದೊಳ್ ನಿಂತಿರ್ಪ ಶ್ರೀ ಕೃಷ್ಣ" "ವೈದೋರಿ ಭಕ್ತಾಳಿಯಂ.......ಅರಯ್ವ ಶ್ರೀ ಕೃಷ್ಣ" ಇವೆರಡು ಕೃಷ್ಣನ ಹೆಸರುಗಳೂ ಕಣ್ವನಾಮ ಪುರದ ಅಧಿಷ್ಠಾನ ಮೂರ್ತಿಯಾದ ಶ್ರೀ ಗೋಪಾಲಕೃಷ್ಣ ದೇವರದೇ ಆಗಿದೆ. ಇದರಲ್ಲಿ ತೋರುವ "ಪಾರ್ವತೀ ನಂದನಂ" ಅಂದರೆ ಪಾರ್ತಿ ಸುಬ್ಬ ಕವಿಯೆಂಬದು ಪ್ರಸಿದ್ಧವಿದೆ. ಈ ವೃತ್ತದಲ್ಲಿ ಕವಿಯು ಹೇಳುವಂತೆ ಪಾರ್ತಿ ಸುಬ್ಬನು ಕುಂಬಳೆಯ ಕಣ್ವಪುರದ [ಸೇಡಿಕಾಪು ಎಂಬಲ್ಲಿ ಜನ್ಮವೆತ್ತಿದವನೂ]ವನೂ, ಪಾರ್ವತಿ [ಪಾರ್ತಿ] ಎಂಬವಳ ಮಗನೂ ಆಗಿರುತ್ತಾನೆಂಬುದು ಸ್ಪಷ್ಟವಾಗುತ್ತಿದೆ.

ಕನ್ನಡ ಪ್ರಾಂತವು ಜಿಲ್ಲೆ ತಾಲೋಕುಗಳಾಗಿ ವಿಭಾಗವಾಗುವ ಮೊದಲು, ಹೋಬಳಿ-ಸೀಮೆ,-ಮಾಗಣೆಗಳೆಂಬ ಹೆಸರಿನಿಂದಿದ್ದು. ಬಂಗರು, ಚೌಟರು, ಅಜಿಲ, ಸಾವಂತರೆಂಬ ಜೈನ ಅರಸುಗಳು—ತಮ್ಮ ತಮ್ಮ ಹೆಸರಿನ [ಬಂಗರಸೀಮೆ, ಚೌಟರಸೀಮೆ ಇತ್ಯಾದಿ]ಗಡಿಗೊಂಡ ಸೀಮೆಗಳನ್ನು ಆಳುತ್ತಿದ್ದರು. ಆ ಕಾಲದಲ್ಲಿ ಕುಂಬಳೆಗೆ ಮೂರು ಸಾವಿರ ಸೀಮೆಯೆಂದು ಹೆಸರಿತ್ತು—ಕದಂಬ ವಂಶದ ರಾಜರು ಕುಂಬಳೆಯ ಅರಸುಗಳಾಗಿದ್ದು ಚಂದ್ರಗಿರಿಪಯಸ್ವಿನೀ ನದಿಯ ವರೆಗೆ ಗಡಿಗೊಂಡ ಸೀಮೆಯನ್ನು ಆಳುತ್ತಿದ್ದರು.

ಕಣ್ವ ಪುರದ ಶ್ರೀ ಗೋಪಾಲಕೃಷ್ಣ ದೇವಾಲಯವೂ-ಮದವೂರಿನ ಮಹಾ ಗಣಪತಿ ದೇವಾಲಯವು, ಕುಂಬಳೆ ರಾಜರ ರಾಜಮನೆತನದ [ಈಗಿನ ಮಾಯಿಪ್ಪಾಡಿ ಅರಸುಗಳ] ಆಡಳಿತೆಗೊಳಪಟ್ಟ ದೇವಾಲಯಗಳಾಗಿವೆ. ಪಾರ್ತಿಸುಬ್ಬ ಕವಿಯು ಕುಂಬಳೆ ರಾಜರ ಆಶ್ರಯದಲ್ಲಿದ್ದುದರಿಂದ ಕವಿಯ ಜನ್ಮಭೂಮಿಯಲ್ಲಿ ಪ್ರಸಿದ್ಧವಾಗಿದ್ದ ಮದವೂರಿನ ಮಹಾ ಗಣಪತಿಯನ್ನು ಅತನ ಸಭಾ ಲಕ್ಷಣದ ಪ್ರಾರಂಭದಲ್ಲಿರುವ "ಮುದದಿಂದ ನಿನ್ನಕೊಂಡಾಡುವೆನು । ಮದವೂರ ವಿಘ್ನೇಶ ದೇವ ಜಗಧೀಶಾ ॥" ಎಂಬ ಝಂಪೆ ತಾಳದ ಪದ್ಯದಲ್ಲಿ ಪ್ರಾರ್ಥಿಸಿಕೊಂಡಿರುತ್ತಾನೆ. ಕಣ್ವ ಪುರದ [ಕುಂಬಳೆಯ] ಶ್ರೀ ಗೋಪಾಲಕೃಷ್ಣ ದೇವರ ಹೆಸರಲ್ಲಿ ತನ್ನ ಪ್ರಬಂಧಗಳೆ ಕವಿ ಮುದ್ರೆಯನ್ನಿಟ್ಟು ಕೃತಿ ಸಮರ್ಪಣೆಗಳನ್ನು ಮಾಡಿರುತ್ತಾನೆ. ಇದರಿಂದ ಕೂಡ ಪಾರ್ತಿಸುಬ್ಬನು ಕುಂಬಳೆಯ ಕಣ್ವ ಪುರದವನೆಂದು ಸಿದ್ಧವಾಗುತ್ತದೆ. ಪಾರ್ತಿಸುಬ್ಬನು "ಗಣಪತಿ ದೇವ"ರ ಉಪಾಸಕನೂ, ಶ್ರೀ ಕೃಷ್ಣ ದೇವರ ನಚ್ಚಿನ ಭಕ್ತನೂ, ಸರಳ ಜೀವನದ ಆಧ್ಯಾತ್ಮಿಕ ಚರಿತನೂ ಆಗಿದ್ದನೆಂದು ತಿಳಿದು ಬರುತ್ತದೆ.

ಪಾರ್ತಿಸುಬ್ಬನು ಕುಂಬಳೆ ರಾಜರ ಸಹಾಯದಿಂದ ಕೇರಳದ ಕೋಲತ್ತಿರಿ ರಾಜನ ಕಥಕ್ಕಳಿಯ ಮೇಳದಿಂದ ದಶಾವತಾರ ರಂಗಕ್ಕೆ ಬೇಕಿದ್ದ ವೇಷ, ಭೂಷಣ ಕ್ರಮಗಳನ್ನೆಲ್ಲಾ ಸಂಗ್ರಹಿಸಿದನೆಂದು ಆತನ ಸಭಾಲಕ್ಷಣದ ಕೆಲವು ಪದ್ಯಗಳ ಹಾಡಿನಿಂದ ತಿಳಿದು ಬರುತ್ತದೆ. ಸಭಾಲಕ್ಷಣದಲ್ಲಿರುವ "ಶರಣಿತಿರುವಗ್ರಶಾಲಿವಾಹಿನಿ"—"ಅರುತಿರು, ಮರುತಿರು, ವಿಘ್ನವಿನಾಯಕ" ಇತ್ಯಾದಿ ಪದ್ಯಗಳು ಕಥಕ್ಕಳಿಯ ರಂಗದ [ಮಲೆಯಾಳದ] ಪರಿವರ್ತನೆಗಳಾಗಿವೆ. ಪ್ರಸಂಗ ಪೀಠಿಕೆಯ "ಹರಿಹರಜಿತು" ಎಂಬ ಹಾಡಿನಲ್ಲಿ "ಜಯಜಯ ಕೇರಳ ವಿಭು"ವೆಂಬ ಕೇರಳ ರಾಜನ ಸ್ತುತಿಪರವಾದ ಪದ್ಯವಿದೆ. ಈ ಕೇರಳ ವಿಭುವಂದರೆ ಕೋಲತ್ತಿರಿ ರಾಜನೇ ಆಗಿರುವನು. ಕುಂಬಳೆಯ ರಾಜರೂ, ಕೋಲತ್ತರಸನೂ ಸ್ನೇಹಿತರಾಗಿದ್ದರೆಂದು ತಿಳಿದು ಬರುತ್ತದೆ. ೧೭೩೪ನೇ ಇಸವಿಯಲ್ಲಿ ಕುಂಬಳೆಯ ಅರಸನೂ, ಕೋಲತ್ತರಸನೂ ಕನ್ನಡ ಜಿಲ್ಲೆಯ ತೆಂಕಣ ಪ್ರದೇಶಗಳನ್ನು ಸುಲಿಗೆ ಮಾಡಿದಂತೆ ಚರಿತ್ರೆಗಳಿಂದ ತಿಳಿದು ಬರುತ್ತದೆ. ಇದು ಕವಿಯ ಕಾಲ ನಿರ್ಣಯಕ್ಕೆ ಸಹಾಯಕವಾಗಿದೆ.

ಕವಿಯ ಕಾಲ

ಪಾರ್ತಿ ಸುಬ್ಬ ಕವಿಯು ಯಾವಾಗ್ಗೆ ಹುಟ್ಟಿದನು? ಯಾರಲ್ಲಿ ವಿದ್ಯಾಭ್ಯಾಸವನ್ನು ಮಾಡಿದನು? ಈತನ ಜೀವಿತ ಕಾಲವೆಷ್ಟು? ಎಂಬದನ್ನು ನಿರ್ಣಯಿಸಿ ಹೇಳಲು ಬೇಕಿದ್ದ ಸಾಧನಗಳಿರುವುದಿಲ್ಲ. ಈತನಿಂದ ವಿರಚಿತವಾದ ಯಕ್ಷಗಾನ ಪ್ರಬಂಧಗಳನ್ನು, ಬೈಲಾಟಗಳ ಮೂಲಕ ಪ್ರಚಾರಕ್ಕೆ ತಂದ ದಶಾವತಾರದ ಮೇಳಗಳ ಜನನ—ಶ್ರುತಿಯಾಗಿ ಬಂದ ಮಾತುಗಳು. ಇವುಗಳ ಆಧಾರಗಳಿಂದಲೇ ಮುಂದುವರಿಯಬೇಕಾಗಿದೆ. ಈ ಕುರಿತು ಈಗಿನ ಯಕ್ಷಗಾನದ ಪ್ರಖ್ಯಾತ ಹಾಡುಗಾರರಾದ ಶ್ರೀ॥ ಬಲಿಪ ನಾರಾಯಣ ಭಾಗವತರಿಂದ ದೊರೆತ ಅನುಭವ ಮತ್ತು ಒಂದು ಚರಮುಕಂದ ಇವೆರಡು ಈ ವಿಷಯಕ್ಕೆ ನೆರವಾದ ಅತ್ಯುತ್ತಮ ಸಾಧನಗಳಾಗಿವೆ.

೧:—ಕಾಸ್ರಗೋಡು ತಾಲೋಕಿಗೆ ಸೇರಿದ ಪಡ್ರೆ ಗ್ರಾಮದ ಬಲಿಪ ಮನೆತನದಲ್ಲಿ ವಯೋವೃದ್ಧರಾಗಿ ಬಾಳಿದ ದಿವಂಗತ ಕೃಷ್ಣ ಭಟ್ಟರು ೧೦೨ ವರುಷಗಳ ತನಕ ಜೀವಿಸಿ ೧೯೦೦ನೇ ಇಸವಿಯಲ್ಲಿ ಪರಲೋಕ ವಾಸಿಗಳಾದರಂತೆ. ಇವರು ತನ್ನ ೨೫ನೇ ವಯಸ್ಸಿನಲ್ಲಿ ಕುಂಬಳೆಯ ಮಂಜಯ ಪ್ರಭುಗಳು ಕಟ್ಟಿದ ದಶಾವ ತಾರದ ಮೇಳದಲ್ಲಿ ಮೃದಂಗ ವಾದನ ಮಾಡಿದವರಿರು ತ್ತಾರೆ. ಆಗ್ಗೆ ಆ ಮೇಳದಲ್ಲಿ ಮುಖ್ಯ ಹಾಸ್ಯಗಾರರಾ ಗಿದ್ದ ಮಂಜಯ ಪ್ರಭುಗಳು ೫೦ ವರ್ಷ ಪ್ರಾಯದವ ರಾಗಿದ್ದರಂತೆ; ಮಂಜಯ ಪ್ರಭುಗಳು ಹುಟ್ಟುವ ೩೫ ವರ್ಷಗಳ ಪೂರ್ವದಲ್ಲಿ ಪಾರ್ತಿ ಸುಬ್ಬ ಕವಿಯು ಕಾಲ ವಶನಾಗಿದ್ದನೆಂದು ಬಲಿಪ ಕೃಷ್ಣ ಭಟ್ರಿಗೆ ಮಂಜಯ ಪ್ರಭುಗಳು ಹೇಳಿದ್ದರಂತೆ. ಮಂಜಯ ಪ್ರಭುಗಳ ಮೇಳದಲ್ಲಿ ಪಾರ್ತಿ ಸುಬ್ಬ ಕವಿ ವಿರಚಿತಗಳಾದ ಸಭಾ ಲಕ್ಷಣ ಮತ್ತು ಯಕ್ಷಗಾನ ಪ್ರಬಂಧಗಳೇ ಪ್ರಚಾರದಲ್ಲಿ ದ್ದವಂತೆ. ಇದರಂತೆ ೧೯೪೯ನೇ ಇಸವಿಗೆ ಬಲಿಪ ಕೃಷ್ಣ ಭಟ್ರು ಸ್ವರ್ಗಸ್ಥರಾಗಿ ೪೯ ವರ್ಷಗಳು. ಅವರ ಜೀವಿತ ಕಾಲ ೧೦೨ ಕೂಡ ೧೫೧ ವರ್ಷಗಳಾಗುತ್ತವೆ. ಬಲಿಪ ಕೃಷ್ಣ ಭಟ್ರಿಗೆ ಮಂಜಯ ಪ್ರಭುಗಳು ಹಿರಿಯ ಪ್ರಾಯದವರಾಗಿದ್ದ ವರುಷಗಳು ೨೫. ಪಾರ್ತಿ ಸುಬ್ಬನು ಕಾಲವಾದ ಇದಕ್ಕೆ ಪೂರ್ವದ ವರ್ಷಗಳು ೩೫ ಕೂಡ ೬೦ ವರ್ಷಗಳನ್ನು ಮೇಲಿನ ೧೫೧ಕ್ಕೆ ಕೂಡಿಸಿದರೆ ಪಾರ್ತಿ ಸುಬ್ಬನು ಕೀರ್ತಿಶೇಷನಾಗಿ ೧೯೪೯ಕ್ಕೆ ೨೧೧ ವರ್ಷಗಳಾಗಿರಬೇಕು.

೨:–ನನಗೆ ದೊರೆತ ರಾವಣೋದ್ಭವವೆಂಬ ಯಕ್ಷಗಾನ ಪ್ರಬಂಧದ ಕೈ ಬರಹದ ಪ್ರತಿಯೊಂದರಲ್ಲಿ ರುವ ವಾರ್ಧಿಕ ಷಟ್ಪದಿಯ ಉತ್ತರಾರ್ಧದಲ್ಲಿ ಅದನ್ನು ವಿರಚಿಸಿದ ಕವಿಯ ಉಲ್ಲೇಖವಿದೆ–ನಗರಾಜ್ಯ ಪಟ್ಟಣದಿ ಭೂಸುರರ ಕುಲದೊಳು—"ನೇಮದಿಂದೆಸೆವ ವಿಠ್ಠಲನೆ ಸತಿ ಗೌರಿಸು । ಪ್ರೇಮದಿಂ ಪಡೆದಸುತ ಸುಬ್ಬಯ್ಯ ನೆಂಬವಂ । ಶ್ರೀ ಮಹಾ ವೆಂಕಟಾಚಲನನುಗ್ರಹದಿಂದ ಲೊರೆದನೀ ಸತ್ಕಥೆಯನೂ ॥

ಈ ಪ್ರಬಂಧವನ್ನು ಬರೆದ ಕಾಲವು ಸುಭಾನು ಸಂವತ್ಸರ ಎಂದು ಬರೆದಿದೆ. ಇದರಲ್ಲಿ ಪಾರ್ತಿ ಸುಬ್ಬನ ಪರವಾದ ಒಂದು ಚರಮ ಕಂದವಿದೆ—

"ರಸಿಕಂ ರಸಾರ್ದ್ರ ಚಿತ್ತಂ । ಪೊಸದೇಸಿಯ ಕಬ್ಬಿಗ ನೊವಜಂ ಪಾರ್ವತಿಜಂ ॥ ಕುಶಲಿಗ ಯಕ್ಷರ ಸಾಹಿತಿ । ಯಸುವಳಿಸಿದ ದುರ್ಮತಿ ಪೆಸರಿರದಿರ್ಕೆಂದುಂ ॥"

ಈ ಪದ್ಯದಲ್ಲಿ ತೋರುವ "ದುರ್ಮತಿ" ಎಂಬ ಸಂವತ್ಸರವು ಪಾರ್ತಿ ಸುಬ್ಬನ ಅಸುವಳಿಸಿದ ಸಂವತ್ಸರ ವೆಂದು ಕಾಣುತ್ತದೆ. ರಾವಣೋದ್ಭವ ಪ್ರಸಂಗವನ್ನು ಬರೆದ ಸುಭಾನು ಸಂವತ್ಸರವಂದರೆ, ಶಾ. ಶಕ ೧೬೪೫ ಇಸವಿ ೧೭೬೫ ಆಗುತ್ತದೆ. "ಯಕ್ಷರ ಸಾಹಿತಿಯ ಅಸುವಳಿಸಿದ ದುರ್ಮತಿ ಸಂವತ್ಸರವಂದರೆ ಶಾ. ಶಕ ೧೬೬೩ ಇಸವಿ ೧೭೪೩ ಆಗುತ್ತದೆ. ಇದರಂತೆ ಪಾರ್ತಿ ಸುಬ್ಬನು ಕಾಲವಾದ ೨೨ ವರುಷಗಳ ನಂತರ ರಾವ ಣೋದ್ಭವ ಪ್ರಸಂಗವನ್ನು ವಿರಚಿಸಿದಂತೆ ತೋರುತ್ತಿದೆ. ಶಕ ೧೮೭೦ನೇ ಸರ್ವಧಾರಿ ಸಂವತ್ಸರಕ್ಕೆ [೧೯೪೮-೧೯೪೯ನೆ ಇಸವಿಗೆ] ಪಾರ್ತಿ ಸುಬ್ಬನು ಪರಲೋಕವಾಸಿ ಯಾಗಿ ೨೦೭ ವರ್ಷಗಳಾಗುತ್ತದೆ. ಶ್ರುತಿಯಾಗಿ ಬಂದ ಗಣನೆಯ ಲೆಕ್ಕಕ್ಕೂ ಈ ಕಂದದ ಲೆಕ್ಕಕ್ಕೂ ೪ ವರ್ಷ ಗಳ ವ್ಯತ್ಯಾಸಗಳಿವೆ. ೨೦೭ ಎಂಬ ಸಂಖ್ಯೆಯೇ ಸರಿ ಯಾಗಿರಬೇಕೆಂದು ಕಾಣುತ್ತಿದೆ.

ದಶವತಾರದ ಮೇಳಗಳು

ನಮ್ಮ ಕನ್ನಡ ನಾಡಿನ ಪ್ರಸಿದ್ಧ ದೇವಾಲಯಗ ಳಲ್ಲಿಯೇ ದಶಾವತಾರದ ಮೇಳಗಳಿದ್ದಂತೆ ತಿಳಿದು ಬರುತ್ತದೆ. ಕುಂಬಳೆ ಶ್ರೀ ಗೋಪಾಲಕೃಷ್ಣ ದೇವಳದ ಮೇಳವು ಎಲ್ಲಾ ಮೇಳಗಳಿಗಿಂತಲೂ ಮೊದಲನೆಯ ದಾಗಿದ್ದು ಪಾರ್ತಿಸುಬ್ಬ ಕವಿಯು ಆ ಮೇಳದಲ್ಲಿ ಭಾಗ ವತನಾಗಿಯೂ ಇದ್ದಂತೆ ತಿಳಿದು ಬರುತ್ತದೆ. ಇದು ಕುಂಬಳೆ ರಾಜರ ದೇವಾಲಯವು. ಕಾಸರಗೋಡು ತಾಲೋಕಿನ ಶ್ರೀಮಂತ ಕೂಡ್ಲು ಮನೆತನದ ಶ್ರೀ ಗೋ ಪಾಲಕೃಷ್ಣ ದೇವಳದ ಮೇಳವು. ಆ ಮನೆತನದವರಲ್ಲಿ ಕೀರ್ತಿಶೇಷರಾದ–೧. ಪಾಡಿ ಸುಬ್ಬಯ್ಯ ಶ್ಯಾನಭಾಗರು ೨. ಈಶ್ವರ ಶ್ಯಾನಭಾಗರು ೩. ಸಂಕಯ್ಯ ಶ್ಯಾನಭಾಗರು ೪. ಕುಂಞ ಮಾಣಿ ಶ್ಯಾನಭಾಗರು ೫. ಸುಬ್ರಾಯ ಶ್ಯಾನ ಭಾಗರು. [ಸುಬ್ರಾಯ ಶ್ಯಾನಭಾಗರು ಮಾರ್ಗ ಸಂ ಗೀತಜ್ಞರೂ, ಪ್ರಖ್ಯಾತ ಯಕ್ಷಗಾನದ ಹಾಡುಗಾರರೂ, ಅನೇಕ ವಿಧವಾದ ತತ, ಆನದ್ಧ, ಸುಷಿರ ವಾದ್ಯಗಳ ವಾದಕರೂ, ಕವಿಗಳೂ, ಶಿಷ್ಯಮಂಡಲ ಪರಿವೃತರೂ ಆದ ಪ್ರಸಿದ್ಧಿ ಪಡೆದ ಧಾರ್ಮಿಕರಾಗಿದ್ದರು] ಅದು ಇವರ ತಲಾಂತರಗಳಿಂದ ಇಂದಿಗೂ ಇದೆ. **ಈ ದಶಾ**

ವತಾರದ ಮೇಳವು, ಪ್ರಾರಂಭವಾಗಿ ೧೨೫ ವರ್ಷಗಳು ದಾಟಿತೆಂದು ತಿಳಿದುಬರುತ್ತದೆ. ಕೂಡ್ಲು ಮೇಳಕ್ಕಿಂತಲೂ ಬಡಗಲಾಗಿನ ಮಂದಾರ್ತಿ ದೇವಳದ ಮೇಳವು ಸುಮಾರು ೨೦ ವರ್ಷಗಳ ಮೊದಲಿನದೆಂದು ಹೇಳುತ್ತಾರೆ. ಪಾರ್ತಿಸುಬ್ಬನು ಕಾಲವಾದ ನಂತರ ಕುಂಬಳೆ ಮಂಜಯ ಪ್ರಭುಗಳು ಕಟ್ಟಿದ ಮೇಳವು ಮಂದಾರ್ತಿ ಮೇಳಕ್ಕಿಂತಲೂ ಮೊದಲಿನದ್ದಿದ್ದು ೧೯೪೯ನೇ ಇಸವಿಗೆ ೧೭೦ ವರ್ಷಗಳು ದಾಟಿದಂತೆ ತಿಳಿದು ಬರುತ್ತದೆ. ಇದಕ್ಕೂ ಪೂರ್ವದ್ದು ಕುಂಬಳೆ ದೇವಾಲಯದ ಮೇಳವಾಗಿದೆ.

ಯಕ್ಷಗಾನ ಕಲೆಗೆ ದೊರೆತ ರಾಜ ಮಾನ್ಯತೆ

ಮಹತೋಭಾರ ಶ್ರೀ॥ ಧರ್ಮಸ್ಥಳದ ಮಂಜುನಾಥ ಸ್ವಾಮಿಯ ದೇವಸ್ಥಾನದಲ್ಲಿ ದಶಾವತಾರದ ಮೇಳವಿದ್ದು ೧೮೧೨ನೇ ಇಸವಿಯಲ್ಲಿ ಆಗಿನ ಶ್ರೀ॥ ಸ್ಥಳದ ಧರ್ಮಾಧಿಕಾರಿಗಳಾಗಿದ್ದ ಕೀರ್ತಿಶೇಷ ಕುಮಾರಯ್ಯ ಹೆಗ್ಗಡೆಯವರು ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀ॥ ಶ್ರೀ॥ ಮುಮ್ಮಡಿ ಕೃಷ್ಣರಾಜ ಒಡೆಯರವರ ಸಂನಿಧಿಗೆ ದಶಾವತಾರ ಮೇಳದವರನ್ನು ಕೊಟ್ಟು ಕಳುಹಿಸಿದ್ದರೆಂದೂ, ನಂತರ ಮಹಾರಾಜರವರು ತಾ. ೧೨-೧೧-೧೮೬೭ಲ್ಲು ಆಗಿನ ಧರ್ಮಸ್ಥಳದ [ದಿವಂಗತ] ಮಂಜಯ್ಯ ಹೆಗ್ಗಡೆಯವರಿಗೆ, ಒಬ್ಬ ಭಾಗವತನನ್ನೂ ನಾಲ್ಕು ಜನ ವೇಷದವರನ್ನೂ ಧರ್ಮಸ್ಥಳದಿಂದ ಕೊಟ್ಟು ಕಳುಹಿಸಬೇಕೆಂದು ಬರೆದ ರಾಜ ಮುದ್ರಾಂಕಿತದ [ಈಗಿನ ಶ್ರೀ॥ ಮಂಜಯ್ಯ ಹೆಗ್ಗಡೆಯವರ ವಶದಲ್ಲಿರುವ]ನಿರೂಪಣ ಪತ್ರದಿಂದ ತಿಳಿದು ಬರುತ್ತದೆ. ೧೮೧೨ನೆ ಇಸವಿಯ ಪೂರ್ವದಲ್ಲಿಯೇ ಧರ್ಮಸ್ಥಳದ ಮೇಳವಿತ್ತು; ಈಗಲೂ ಇದೆ. ಇದರಿಂದ ನಮ್ಮ ಜಿಲ್ಲೆಯಲ್ಲಿ ಅನೂಚಾನವಾಗಿ ಬಂದ ಯಕ್ಷಗಾನ ಕಲೆಯು ಗೋಪಾಲರಿಂದ ಭೂಪಾಲರ ವರೆಗೆ ಮೋಹಿಸಿದ ಸಜೀವ ಕಲೆಯೆಂದು ಗೊತ್ತಾಗುತ್ತಿದೆ.

ಯಕ್ಷಗಾನದ ತಿಟ್ಟುಗಳು

ಇದರಲ್ಲಿ ಬಡಗಣ ತಿಟ್ಟು ಮತ್ತು ತೆಂಕಣ ತಿಟ್ಟುಗಳೆಂಬ ಎರಡು ಭೇದಗಳಿವೆ. ನೃಪತುಂಗನು ಕವಿರಾಜ ಮಾರ್ಗದಲ್ಲಿ ಸ್ವಭಾವೋಕ್ತಿ ದಕ್ಷಿಣ ಮಾರ್ಗಕ್ಕೂ ವಕ್ರೋಕ್ತಿ ಉತ್ತರ ಮಾರ್ಗಕ್ಕೂ ಭೇದಕ ಗುಣವೆಂದು ಲಕ್ಷಣವನ್ನು ಹೇಳಿದ್ದಾನೆ. ಕಾವ್ಯಗಳಲ್ಲಿ ರೀತಿ ಭೇದಗಳೂ ಪ್ರಾಂತಗಳಲ್ಲಿ ಭಾಷಾ ಭೇದಗಳು ಇರುವಂತೆ ಈ ತಿಟ್ಟುಗಳೂ ಭೇದಗೊಂಡಿವೆ.

ಬಡಗಣ ತಿಟ್ಟಿನ ಭಾಗವತರು ತಾಳವನ್ನು ಉಪಯೋಗಿಸಿಕೊಂಡರೆ ತೆಂಕಣ ತಿಟ್ಟಿನ ಭಾಗವತರು ಜಾಗಟೆಯನ್ನು ಉಪಯೋಗಿಸಿಕೊಳ್ಳುತ್ತಾರೆ. ಉತ್ತರ ಮಾರ್ಗೀಯರ ಮೃದಂಗವು ಸಪೂರ ತೂಬಿನಾಕೃತಿಯಿದ್ದು ತಾರತಾಮ್ರ ಸ್ವರವುಳ್ಳದ್ದಾಗಿದ್ದರೆ ದಕ್ಷಿಣ ಮಾರ್ಗದವರ ಮೃದಂಗವು ವೃತ್ತ ಪರಿಧಿಯುಳ್ಳದ್ದಾಗಿ "ಝುಂಕಾರ, ಧಿಂಕಾರ"ಗಳ ನಾದಪೂರಿತವಾಗಿದೆ. ಬಡಗಣ ಮೇಳದ ಚೆಂಡೆಯು ತಾಸೆಯಂತಿದ್ದರೆ, ತೆಂಕಣ ಮೇಳದ್ದು ವೀರರಸದ ರಣವಾದ್ಯವಾಗಿದೆ. [ಚರ್ಮವಾದ್ಯಗಳ ಮುಚ್ಚಿಗೆಯಲ್ಲಿ ಬಡಗಣದವರು ತೆಂಕಲಾಗಿನವರಷ್ಟು ಚತುರರಲ್ಲ] ಅದು ಕಾರಣ ಬಡಗಿನ ತಿಟ್ಟಿನ ಚೆಂಡೆ ಮೃದಂಗಗಳ ನಾದಕ್ಕೆ ಅಲ್ಲಿನ ತಾಳವೇ ಸಾಕಾಗಿದೆ. ತೆಂಕಣ ತಿಟ್ಟಿನವರ ಚೆಂಡೆ ಮೃದಂಗಗಳಿಗೆ, ಜಾಗಂಟೆ—ಚಕ್ರತಾಳಗಳೇ ಬೇಕಾಗಿದೆ. ಉತ್ತರದವರು ಅಭಿನಯದಲ್ಲಿ ಮೇಲಾದರೆ, ದಕ್ಷಿಣದವರು ನಾಟ್ಯದಲ್ಲಿ ಕುಶಲಿಗರಿರುತ್ತಾರೆ. ಬಡಗಲಾಗಿನ ತಾಳ ಮೃದಂಗಗಳು ಮೂರಾವರ್ತನೆಯಲ್ಲಿ ಮುಕ್ತಾಯಗೊಂಡರೆ ತೆಂಕಣದವರದು ಒಂದಾವರ್ತನೆಯಲ್ಲಿಯೇ ಮುಕ್ತಾಯಗೊಳ್ಳುತ್ತದೆ. ಬಡಗಲಾಗಿನ ಭಾಗವತರೂ, ವೇಷದವರೂ, ಒಟ್ಟಾಗಿ ಪದ್ಯಗಳನ್ನು ಹಾಡುವದಿದ್ದರೆ—ತೆಂಕಲಾಗಿನ ಭಾಗವತರು ಮಾತ್ರ ಪದ್ಯಗಳನ್ನು ಹಾಡುತ್ತಾರೆ. ಇದರಂತೆ ಬಡಗು ತಿಟ್ಟಿನ ಪ್ರಬಂಧ ರಚನೆ, ವೇಷ, ಭೂಷಣ, ನುಡಿಕಟ್ಟುಗಳೆಲ್ಲಾ-ತೆಂಕು ತಿಟ್ಟಿನದಕ್ಕಿಂತ ವ್ಯತ್ಯಾಸಗೊಂಡಿದೆ. ಒಂದು ಕಡೆಯವರು ಇನ್ನೊಂದು ಕಡೆಯವರಿಂದ ಸಂಗ್ರಹಿಸತಕ್ಕ ಉತ್ತಮಾಂಶಗಳು ಬಹುತೇಕವಾಗಿವೆ. ಇವುಗಳನ್ನು ಪರಿಶೀಲಿಸದೆ, ತಮ್ಮ ತಿಟ್ಟುಗಳೇ ಮೇಲು—ಇನ್ನೊಂದು ಕೀಳೆಂಬುದು ತಿರುಳಿಲ್ಲದ ವೃಥಾಲಾಪವಿದೆ.

ಯಕ್ಷಗಾನವು ಸಿರಿಗನ್ನಡದ ಕಲೆಯಾಗಿ ಬೆಳಗಲಿ! ಯಕ್ಷಗಾನದ ಸುಧಾರಕರಿಗೆ ಜಯವಾಗಲಿ.

ನಿರೂಪ ಪತ್ರ

ಕೃಷ್ಣರಾಜವಡೆಯರವರು

ಪ್ರಭವ ಸಂವತ್ಸರದ ಕಾರ್ತಿಕ ಬ। ೧ ಬುಧವಾರದಲ್ಲು ಶ್ರಿಮುತು॥ ॥ಧರ್ಮಸ್ಥಳದ ಮಂಜೆ ಹೆಗ್ಗಡಿಗಳಿಗೆ

ಬರಶಿ ಕಳುಯಿಸಿದ ನಿರೂಪ ಆದಾಗಿ ಈ ನಿರುದ್ಧಕ್ಕೆ ಯಿಲ್ಲಿ ಸಪರಿವಾರವಾಗಿ ನಾವು ಕ್ಷೆಮದಲ್ಲಿ ಇಥೆವೆ ಅಲ್ಲಿ ಇರೂವಂಥ ಸರ್ವರು ಸಹಾ ನಿಂಮ ಕ್ಷೆಮಕ್ಕೆ ಆಗಿಂದಾಗ್ಯೆ ಅರ್ಜಿಬರದು ಕಳುಯಿಸುತ್ತಾ ಬರುವದು ಸಾಂಪ್ರತಾ ನಿಂಮ ತಂದೆ ಕೊಮಾರ ಹೆಗ್ಗಡೀರು ಇದ್ದಾಗ್ಯೆ ಅವರು ಯಿಲ್ಲಿಗೆ ಬಂದು ನಂಮ ಭೇಟಿ ತೆಗೆದುಕೊಂಡು ಯಿಲ್ಲಿಂದ ಮಾನಮರ್ಯಾದೆಯಂನು ಪಡದವರಾದ್ದರಿಂದ ನೀವು ಯಾವಾಗಲೂ ನಂಮ ಸಂಸ್ಥಾನಕ್ಕೆ ಶೇರಿದಂಥಾವರೆ ಸರ್ರಿ—ನೀವು ನಿಂಮ ಯಜಮಾನರ ಹಾಗೆ ನಿರಂತರದಲ್ಲು ಮಂಜುನಾಥ ದೆವರ ಪೂಜೆಯಲ್ಲು ದೆವಬ್ರಾಹ್ಮರ ಸೆವೆಯಲ್ಲು ಆಸಕ್ತರಾಗಿ ವಿಹಿತವೃತ್ತಿಯಲ್ಲಿ ಯಿರುವದಂನು ವೇದ ಎಕಾಂತಾಚಾರ್ರ ಕಡೆಯಿಂದಾ ಕೇಳಿ ನಮಿಗೆ ಬಹಳ ಸಂತೊಷವಾಯಿತು ನಿಮಿಗೆ ಉಡಿಗೆರಿಯಾಗಿ ವಂದು ಕಲಾಬತ ಶಾಲ ಜೊಡಿಯಂನು ಎಕಾಂತಾಚಾರ್ರ ಕೈಲಿ ಅಪ್ಪಣೆಕೊಟ್ಟು ಕಳುಹಿಶಿಯಿಥೆ ನೀವು ಅದಂನು ಸ್ವೀಕರಿಸಬೆಕು—ನಮಿಗೆ ನಿಮಂನು ನೊಡಬೆಕೆಂಬ ಕುತೂಹಲ ಯಿರೂವದ್ದರಿಂದಾ ಅವಶ್ಯವಾಗಿ ವಂದಾವರ್ತಿ ನೀವು ಯಿಲ್ಲಿಗೆ ಬಂದು ನಮಿಗೆ ಭೇಟಿಕೊಟ್ಟು ಸಂತೊಷಪಡಿಸಬೇಕು—ಆಂಗೀರಸ ಸಂವತ್ಸರದಲ್ಲಿ ನಿಂಮ ಯಜಮಾನರ ಕಡೆಯಿಂದಾ ದಶಾವತಾರದ ಆಟದವರು ಕೆಲವರು ಯಿಲ್ಲಿಗೆ ಬಂದು ಯಿಲ್ಲಿ ಬಹು ಸಂಸಾರಿಗಳಾಗಿ ಅವರೆಲ್ಲರಿಗೂ ನಂಮಲ್ಲಿ ಸಂಬಳ ಯಿನಾಮು ಮುಂತಾದ್ದು ಸಲ್ಲುತ್ತಾ ಭಾಗವತ ಆಟ ನಡೆಯುತ್ತಾ ಯಿತ್ತು. ಯಿಗ ಆ ಪೈಕಿ ಬಹು ಜನಗಳು ನಷ್ಟರಾಗಿ ಆಟಕ್ಕೆ ಜನ ಸಾಲದೆ ಯಿರೂವದ್ದರಿಂದಾ ಆ ಬಗ್ಯೆ ಯಿಲ್ಲಿ ದಶಾವತಾರದ ಆಟದ ಗೊತ್ತುಗಾರನಾದ ಶೇಷಪ್ಪಂನು ಅಲ್ಲಿಗೆ ಕಳುಯಿಶಿಯಿಥೆ ಆ ಪ್ರಾಂತದಲ್ಲಿ ನೀವು ವಿಚಾರಿಶಿ ಭಾಗವತ ಮುಂತಾದ್ದಂನು ವೊದಿ ಕಥಾಪ್ರಸಂಗವಂನು ಹೇಳತಕ್ಕದ್ದಕ್ಕೆ ಬುದ್ಧಿವಂತನಾದವನು ವಬ್ಬ- ರಾಕ್ಷಸವೇಷ ಮುಂತಾದ್ದಂನು ಹಾಕತಕ್ಕವರು ನಾಲ್ಕು ಜನ—ಉಭಯಂ ಐದು ಜನವಂನು ಯಿಲ್ಲಿಗೆ ಕಳುಹಿಶಿ ಕೊಟ್ಟಲ್ಲಿ ಅವರಿಗೆ ಸಂಬಳ ಮುಂತಾದ್ದಂನು ಮಾಡಿಶಿ ಕೊಡುತ್ತಾ ಇಥೆ—ನಿಮಿಗೆ ಯಿ ನಿರೂಪವು ಕಲಾಬತ ಶಾಲ ಜೊಡಿಯು ಸಹಾ ಬಂದು ತಲಪಿದ್ದಕ್ಕೂ ನೀವು ಕ್ಷೆಮದಲ್ಲಿ ಯಿರೂ ಬಗ್ಯೆ ಸಹಾ ಅರ್ಜಿ ಬರದು ಕಳುಯಿಸುವದು ಮರಕುಂ ಸಾಂನ್ ೧೮೬೭ನೆ ನವಂಬರು ತಾರ್ರಿಖ ೧೨ಲ್ಲು ಖತ್ತು ಶಹಾ ನಂಜಪ್ಪ ಹಜೂರು ಪುರನೂರು.

ರ್‍ರುಜು **ಶ್ರಿ ಕೃಷ್ಣ** (ಈ ರುಜು ಶ್ರೀ. ಶ್ರೀ. ಮುಮ್ಮಡಿ ಕೃಷ್ಣರಾಜ ಒಡೆಯರವರ ಸ್ವಹಸ್ತಾಕ್ಷರದಲ್ಲಿದೆ.)

(ಪತ್ರವನ್ನು ಮೂಲಪ್ರತಿಗನುವಾಗಿ ಅಚ್ಚು ಹಾಕಿಸಿದೆ)

ಕಲಾಕೃತಿಯ ಅರ್ಥ

ಶ್ರೀ ವಿ. ಸೀತಾರಾಮಯ್ಯ, ಎಂ. ಎ., ಚಿಕ್ಕಮಗಳೂರು.

ಶಾಸ್ತ್ರಪ್ರಪಂಚದಲ್ಲಿ ಎಲ್ಲಕ್ಕೂ ಖಚಿತವಾದ ಅರ್ಥವಿರುತ್ತದೆ; ಇರಬೇಕು. ಯಾವ ಸಂದೇಹಕ್ಕೂ ಎಡೆಯಿಲ್ಲದಂತೆ ಪ್ರಮಾಣ, ಕಾರ್ಯಕಾರಣ ವ್ಯಾಪಾರ, ವಿವರಣೆ, ನಿದರ್ಶನ — ಅಲ್ಲಿ ಇರುತ್ತವೆ. ವಿಷಯಾಂಶಗಳಿಗಿರುವ ಪರಸ್ಪರ ಸಂಬಂಧವೂ, ಪರಿಶೀಲನೆಯಲ್ಲಿ ಬಳಸುವ ಬೆಲೆಗಳೂ ಯುಕ್ತಿಯೂ ಇಂಥವೇ ಎಂದು ಗೊತ್ತಿರುತ್ತದೆ. ವಾದಸರಣಿ, ಪರಿಭಾಷೆ ಮತ್ತು ತತ್ವವನ್ನು ಸ್ಥಾಪಿಸುವ ಕ್ರಮಗಳು ಸಿದ್ಧವಾಗಿರುತ್ತವೆ; ಸರ್ವಗ್ರಾಹ್ಯವಾಗಿರುತ್ತವೆ. ಯುಕ್ತಿಯನ್ನು ಒಪ್ಪುವ ಎಲ್ಲರೂ ಎಲ್ಲ ಕಾಲ ಎಲ್ಲ ದೇಶಗಳವರೂ ಬಹುಮಟ್ಟಿಗೆ ಇದು ಹೀಗೆಯೇ ಸರಿ ಎಂದು ಅರ್ಥ ಮಾಡಲು ಅಲ್ಲಿ ಅವಕಾಶ ಹೆಚ್ಚು. ಉದ್ದೇಶವೇ ಅದು. ವಿಜ್ಞಾನದಲ್ಲಿಯೂ ಇದೇ ರೀತಿಯ ಅವಕಾಶ ಸೌಲಭ್ಯಗಳುಂಟು. ಜೊತೆಗೆ ಅದಕ್ಕೇ ವಿಶೇಷವಾದ ಅಳತೆ, ತೂಕ, ಎಣಿಕೆಗಳ ವಿಧಾನವೂ ಪರೀಕ್ಷಾ ಪ್ರಯೋಗಗಳ ಮಾರ್ಗವೂ ಸೇರುವುವು. ಪ್ರತೀಕ್ಷಣ ಪ್ರಯೋಗಗಳಿಂದ ಒಂದು ರೀತಿ ಏರ್ಪಟ್ಟ ವಾದವೋ ಸಿದ್ಧಾಂತವೋ ಸರಿ ಅಥವಾ ಅಲ್ಲ ಎಂದು ನೇರವಾಗಿ ಎಲ್ಲರೂ ಒಪ್ಪಿಯೇ ತೀರಬೇಕು. ಅವುಗಳಿಂದ ಹುಟ್ಟುವ ಅನುಮಾನವೂ ಹಾಗೇ ಸರ್ವಥಾ ನಿರ್ಣಾಯಕ. ವೇದಾಂತಾದಿ ದರ್ಶನಗಳಲ್ಲಿಯೂ ವಾದಭಾಗ ಇಂಥ ವಿಧಾನಗಳನ್ನು ಅನುಸರಿಸಿಯೇ ಸಾಕಲ್ಯದಿಂದ ತೀರ್ಮಾನಗಳನ್ನು ಸಾಧಿಸಬೇಕಾದೀತು. ಈ ಎಲ್ಲಿಯಾಗಲಿ, ವಿಶದತೆ, ಖಚಿತತೆ, ಅಸಂದಿಗ್ಧತೆ, ಸಾಂಗತ್ಯಗಳಿಗೇ ಬೆಲೆ. ವ್ಯಕ್ತಿಯ ಅಂತಃಕರಣಕ್ಕೆ, ಭಾವರಂಜನೆಗೆ, ಮೋಹಕ್ಕೆ, ಅಭಿಮಾನಕ್ಕೆ ಸ್ಥಾನವಿಲ್ಲ. ಕಲೆಯ ಪ್ರಪಂಚದಲ್ಲಿ ಅರ್ಥ ಇಷ್ಟೇ-ಹೀಗೇ-ಸರಿ ಎಂದು ಖಂಡಿತವಾಗಿ ಎಲ್ಲ ಸಂದರ್ಭಗಳಲ್ಲಿಯೂ ಎಲ್ಲರೂ ಒಪ್ಪುವಂತೆ ಹೇಳುವುದು ಕಷ್ಟ.*[1]

ಕಲೆಯ ಸ್ವರೂಪವೇ ಈ ಕಷ್ಟಕ್ಕೆ ಕಾರಣ. ಕಲೆಗೂ ದರ್ಶನಾದಿಗಳಿಗೂ ಭೇದವುಂಟು. ಆದ್ದರಿಂದಲೇ ಕಲಾಕೃತಿಯೊಂದರ ಅರ್ಥವನ್ನು ಕುರಿತು ಬಗೆಬಗೆಯ ಭಿನ್ನಾಭಿಪ್ರಾಯ ಹುಟ್ಟುವುದು. ಅರ್ಥಗ್ರಹಣದಲ್ಲಿ ಈ ಭಿನ್ನತೆ ಉಂಟಾದರೆ ವಿಮರ್ಶೆ ಹೆಚ್ಚು ಕಡಮೆ ಆಗುವುದು ಸಹಜವೇ ಅಲ್ಲವೆ?

ಕಲಾಕೃತಿಗಳ ಅರ್ಥ ಇದೇ ಸರಿ ಎಂದು ಹೇಳುವುದು ಶಕ್ಯವೆ ಇಲ್ಲವೆ ಎಂದರೆ ಇಲ್ಲವೆಂದು ಯಾರೂ ಹೇಳಲಾರರು. ಸ್ಥೂಲಾರ್ಥ ಎಲ್ಲರಿಗೂ ಸ್ಪಷ್ಟ ಗೋಚರವಾಗುವುದು; ಗ್ರಾಹ್ಯವಾಗಬಲ್ಲದು. ನಯಸೂಕ್ಷ್ಮಗಳಲ್ಲಿ ಕೃತಿ ಉತ್ತಮವಾದಂತೆಲ್ಲ ಗ್ರಹಣ ಕಷ್ಟತರವಾಗುವುದು. ಈ ಕಷ್ಟ ಶಾಸ್ತ್ರಗಳಲ್ಲಿನಂತಲ್ಲ. ಕಲೆಗೇ ವಿಶೇಷವಾಗಿ, ಅದರ ಮೂಲಸ್ವರೂಪಕ್ಕೂ ಭಾವಗ್ರಹಣಕ್ಕೂ ಕಲಾವ್ಯಾಪಾರವೆನ್ನಬಹುದಾದ ಒಂದು ವಿಶಿಷ್ಟ ಕ್ರಿಯಾಯೋಗಕ್ಕೂ ಸಂಬಂಧಿಸಿದ್ದು. ಕಲೆಗಾರನ ಮನಸ್ಸಿನಲ್ಲಿ ಹುಟ್ಟಿ ಬೆಳೆದು ರೂಪುಗೊಂಡ ಯಾವುದೋ ಒಂದು ಅರ್ಥಕಲ್ಪನೆ ಇನ್ನೊಬ್ಬರ ಮನಸ್ಸನ್ನು ಮುಟ್ಟುವಾಗ ಪ್ರತಿ ಹೆಜ್ಜೆಯಲ್ಲಿಯೂ ಮಾರ್ಪಡಲು ಅವಕಾಶವಿದೆ. ವ್ಯಕ್ತಿಗಳ ಮತ್ತು ಬಳಸಿರುವ ದ್ರವ್ಯದ (Medium) ವಸ್ತು, ಸಾಮಗ್ರಿ, ಸಾಧನಗಳ ಲಕ್ಷಣಕ್ಕೂ ಚರಿತ್ರೆಗೂ, ಜನರ ಅನುಭವ, ಸಂಸ್ಕಾರ, ಭಾವಸೂಕ್ಷ್ಮತೆಗಳಿಗೂ ಹೊಂದಿರುತ್ತದೆ. ರಾಗದ್ವೇಷಗಳ ಕೆರಳುವಿಕೆಗೋ ಉಪಶಾಂತಿಗೋ ಉದಾಸೀನತೆಗೋ ಕಾರಣವಾಗುತ್ತದೆ. ಇದು ಕೇವಲ ಬುದ್ಧಿಗಾಗಲಿ ಖಚಿತತೆಗಾಗಲಿ ಮಾತ್ರ ಒಳಪಟ್ಟುದಲ್ಲ. ಚಿತ್ತವೇಧಕವಾಗಿ ಮನಸ್ಸಿನ ಮೇಲೆ ಬಗೆಬಗೆಯ ಭಾವಪರಿಣಾಮಗಳನ್ನು ಉಂಟುಮಾಡುವುದು. ಹೊಳೆದ, ಅರಿತ ಅರ್ಥ ಅಗಲವಾಗಿ ಹರಡಿಕೊಳ್ಳುವುದು. ಆವೇಶಗಳನ್ನೂ ಸುಖದುಃಖಗಳನ್ನೂ ಹರಿಸಬಲ್ಲ ಒಂದು ವ್ಯಾಪಾರ ಈ ಅರ್ಥ ಪ್ರಪಂಚದಲ್ಲಿ ಕವಿದು ಸೇರುತ್ತದೆ.

---

[1] *ಆದರೆ ಇದನ್ನು ಸಾಧಿಸುವುದು ಪರಮ ಪ್ರಯತ್ನವಾಗಬೇಕಾದುದು ಅಗತ್ಯ. ಸಯೆನ್ಟಿಫಿಕ್ ಕ್ರಿಟಿಸಿಸಂ (ಶಾಸ್ತ್ರ ಶುದ್ಧ ವಿಮರ್ಶೆ) ಒಂದಿದೆಯೆಂಬವರಿಗೆ ಈ ಗುರಿಯೇ ಮೆಕ್ಕಾ. ಇಲ್ಲಿ ಮೆಕ್ಕಾ ಅಂತಹ ಯಾತ್ರಾಸ್ಥಾನ ಒಂದಿದೆಯೋ ಎಂಬುದೇ ಚರ್ಚಾಂಶವಾಗಬಲ್ಲದು.

ಭಿನ್ನ ಪ್ರಕೃತಿ, ಸಂಸ್ಕಾರ, ಶಿಕ್ಷಣ, ರುಚಿಗಳುಳ್ಳ ಜನಕ್ಕೆ ಭಿನ್ನ ಫಲಗಳನ್ನು ತರುತ್ತದೆ.†[2] ಗಣಿತದಲ್ಲಿ ಮೂರಕ್ಕೆ ಮೂರು ಸೇರಿದರೆ ಮೊತ್ತ ಆರಾಗಲೇ ಬೇಕು.+[3] ಕಲೆಯಲ್ಲಿ ಮೂರಕ್ಕೆ ಮೂರು ಸೇರಿದಾಗ ಆರೇ ಆಗುತ್ತದೆಂಬ ನಂಬಿಕೆ ಖಂಡಿತವಿಲ್ಲ. ಜೊತೆಗೆ ಇನ್ನೂ ಏನೇನೋ ಆಗುತ್ತದೆ.*[4] ಭೂಮಿ ಆಕಾಶ ಗಳಿಗೆ ಇರುವಷ್ಟು ವ್ಯತ್ಯಾಸ ಹುಟ್ಟಿಕೊಂಡು ಪ್ರಬಲಿಸ ಬಲ್ಲುದು. ಕಲಾಸತ್ಯವೇ ಹೀಗೆ.

ಇರುವುದೆಲ್ಲ ಸತ್ಯ;×[5] ಆಗುವುದೆಲ್ಲ ಸತ್ಯ; ಭಾವಿಸುವುದೆಲ್ಲ ಸತ್ಯ; ಆಗದಿದ್ದರೂ ಆಗುವುದೆಂದು ಭ್ರಮಿಸುವ ಭ್ರಮೆಗಳೂ ಸಂಶಯ ಸಂದೇಹಗಳೂ ಸತ್ಯ; ಹೀಗೆ ವಸ್ತು ಸತ್ಯ, ಭಾವ ಅಥವಾ ಕಲ್ಪನಾ ಸತ್ಯ ಎಲ್ಲ ಸತ್ಯವೇ. ಗುಣಾರೋಪಣೆ, ವಾದ, ವಿಮರ್ಶೆ, ಅಣಕ, ಪಕ್ಷಪಾತ ಇವೂ ಹಾಗೇ. ಅದಕ್ಕೆ ಕಾಲ ದೇಶ, ವರ್ತಮಾನ, ಲಿಂಗಾದಿ ಭೇದಗಳ ಮಿತಿ ಇಲ್ಲ. ಏಕೆಂದರೆ ಜೀವನದಲ್ಲಿ ಇವೆಲ್ಲ ಕಾರ್ಯಕಾರಿ; ಕರ್ಮಪ್ರೇರಕ.§[6] ಹಾಗೂ ಸತ್ಯವೆನ್ನುವಾಗ ಕಲೆಯಲ್ಲಿ ವಿಶೇಷ ವಿವೇಚನೆ ಮಾಡುತ್ತೇವೆ. ಕಲೆಗಾರನು ಕಂಡು ಕಾಣಿಸುವ ಸತ್ಯದ ಸ್ವರೂಪವೂ ಅವನ ದರ್ಶನ ಮತ್ತು ಅವನ ಮಾಟಗಳೂ (The Vision and the Design) ಒಂದು ಬಗೆಯಲ್ಲಿ ಪೂರ್ತಿ ಕೃತಕ.

ಕಲಾಕೃತಿಯಲ್ಲಿ ರೂಪುಗೊಂಡಿರುವ ಸತ್ಯ ಯಾವುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿರುವಾಗ ಹೀಗೇ ಇನ್ನೂ—ಅನೇಕ ವಿಚಿತ್ರ-ಅಂಶಗಳು ಎಣಿಕೆಗೆ ಬರುವುವು. ಇದ್ದುದೇನು? ಕೃತಿಕಾರನ ಮನಸ್ಸಿನಲ್ಲಿ ಮೊದಲು ಸುಳಿದುದೇನು? ಅಲ್ಲಿ ಅದು ಹೇಗೆ ಬೆಳೆಯಿತು? ಎಲ್ಲಿನ ಯಾವ ಅಂಶಗಳು ಹೇಗೆ ಸೇರಿ ರೂಪಾಂತರವಾಯಿತು? ಕಡೆಗೆ ಇದು ಹೇಗೆ ಅವಯವಗೊಂಡಿತು, ಅರ್ಥ ಸಂಪತ್ತಿ ಪಡೆಯಿತು? ಯಾವ ಕ್ರಿಯಾ ವಿಧಾನದಿಂದಲೂ ದ್ರವ್ಯಸಾಧನಗಳ ಪ್ರಯೋಗದಿಂದಲೂ ಅನುಭವ ಕುಶಲತೆಗಳ ನೆರವಿಂದಲೂ ಹೊರಬಂದು ಈ ನಿರ್ಮಿತಿಯಾಯಿತು ಎಂಬವರೆಗೂ ನಿರ್ಮಾಣ-ವಿಧಾನದ ವ್ಯಾಪ್ತಿ ಇರುತ್ತದೆ.‡[7] ಪ್ರೇರಣೆ, ಕಲ್ಪನೆ, ಕ್ರಿಯಾಕುಶಲತೆ, ನಿರ್ಮಿತಿ ಇದು ಜಾಡು. ಮೊದಲು ಸುಳಿದ ಅರ್ಥ ಸ್ಫುಟವಾದ ಆಕೃತಿಯನ್ನು ತಾಳಿ ಒಂದು ಸಮಗ್ರ ಕೃತಿಯಾಗುತ್ತದೆ. ಎಂದರೆ ವಸ್ತುಸ್ಥಿತಿ, ಸಾಮಗ್ರಿ ಯಾವುದೇ ಇದ್ದಿರಲಿ, ಕಲೆಗಾರನು ಅದನ್ನು ಕಂಡ ಸನ್ನಿವೇಶ, ರೀತಿ,

---

[2]†ಹೀಗಾಗಿ ಸಕಲ ಮನೋಜ್ಞತ್ವ (Universal appeal) ಎಂಬ ಮಾತಿಗೇ ಮಿತಿ ಉಂಟಾದೀತು. ಕಲೆಯಲ್ಲಿ ಏಕಲೋಕತೆಗಿಂತ ಭಿನ್ನಲೋಕತೆ, ಬಹು ಲೋಕ (Multiverse) ಪ್ರಕಾಶಕ್ಕೇ ಬೆಲೆ. ಮನೋಪ್ರಪಂಚಗಳು ಬೇರೆಯಾದಂತೆ ಕಲೆಯ ಅರ್ಥವಿಲಾಸ ಅನೇಕ ಬಗೆಯಾಗುವುದು. ಪ್ರತಿಯೊಬ್ಬರಿಗೂ ಬೇರೆ ಮಟ್ಟದ ಅರ್ಥವಾಗುವುದು. ಗ್ರಹಣದಲ್ಲಿ ಕ್ರಮಕ್ರಮವಾಗಿ ಅರ್ಥ ಬೆಳೆಯುತ್ತದಾಗಿ ಮೊದಲ ಅರ್ಥ ಕೊನೆಯಲ್ಲಿಯೂ, ಕೊನೆಯದು ಮೊದಲಿನದರಿಂದಲೂ ಮಾರ್ಪಡುವುದು. [3]+ನವೀನ ಗಣಿತದಲ್ಲಿ ಇದು ಹೀಗೆ ಆಗಬೇಕಿಲ್ಲವಂತೆ. ಆ ವಿಚಾರ ಸದ್ಯಃ ಬೇಡ. [4]*ಸಂಖ್ಯೆ ಆರಾದರೂ ಅನಾವಶ್ಯಕವೋ ಅತಿಶಯವೋ ಆಗಬಹುದು; ಬೇಸರ ತರಬಹುದು; ಒಟ್ಟಂದ ಕೆಡಿಸಬಹುದು; ವಿರಸ ಹುಟ್ಟಬಹುದು; ಸಂತೋಷ ಹೊಮ್ಮಬಹುದು; ಲಡಾಯಿ ಹತ್ತಬಹುದು; ತಲೆಗಳು ಕಡಿದು ಬೀಳಬಹುದು; ಮದುವೆಗಳೋ ನಿರ್ಣಯಗಳೋ ನೆರೆಯಬಹುದು; ಮುರಿಯಬಹುದು. [5]×ಸತ್ಯವೆಂಬ ಪದದ ಅರ್ಥಗ್ರಹಣದಲ್ಲಿ ಒಂದು ಅನಿಶ್ಚಯ ಇರುವುದುಂಟು; ಮೂಲಾರ್ಥ ಇರವಿಗೆ ಸಂಬಂಧಿಸಿದ್ದು; ಜೊತೆಗೆ, ಅದನ್ನು ಕುರಿತು ಮನುಷ್ಯರು ಇದು ಹಾಗೆ, ಅದು ಮತ್ತೊಂದು ರೀತಿ, ಇದರ ಸ್ವರೂಪ, ಗುಣ, ಕ್ರಿಯೆ, ಪ್ರಯೋಜನ ಇಂಥಾದ್ದು ಮಾತ್ರ, ಬೇರೊಂದಲ್ಲ ಎಂದು ಮಾಡುವ ಯುಕ್ತಿ ಮುಂತಾದ ಬುದ್ಧಿ ವ್ಯಾಪಾರದ ಫಲವಾಗಿ ಮಾಡಿದ ವಿವೇಚನಗೂ ಸೇರುತ್ತದೆ. ಅದು ಅರಿವಿನ ಭಾಗ. ಇಂಗ್ಲಿಷಿನಲ್ಲಿ ಕೂಡ Truth ಎಂಬ ಪದಪ್ರಯೋಗದಲ್ಲಿ ಈ ಸಂದಿಗ್ಧತೆ ಹುಟ್ಟಿದೆ. ಅಲ್ಲಿಯೂ Reality ಎಂಬುದನ್ನು ಇರವನ್ನು ಸೂಚಿಸುವ ಅರ್ಥದಲ್ಲಿಯೂ Truth ಎಂಬುದನ್ನು ಅರಿವಿಂದ ಕಂಡು ಹೇಳುವ ಅರ್ಥದಲ್ಲಿಯೂ ಬಳಸಿದರೆ ಈ ಸಂದಿಗ್ಧತೆ ಸ್ವಲ್ಪ ನಿವಾರಣೆಯಾದೀತು. [6]§ಮನುಷ್ಯನ ಮನಸ್ಸನ್ನೂ ಬದುಕನ್ನೂ ಒಳಗಿಂದಲೂ ಹೊರಗಿಂದಲೂ ಮಿಡಿಸುವ, ಉದ್ವೇಗಗೊಳಿಸುವ ಎಲ್ಲವೂ ಸತ್ಯವೇ ಎಂಬುದನ್ನು ಒಪ್ಪಲಾರದವರು ವ್ಯವಹಾರ ಜಗತ್ತಲ್ಲದ ಬೇರೊಂದು ಅಲೌಕಿಕ ಪ್ರಪಂಚದವರು ಎನ್ನಬೇಕು. [7]‡ ಇದರ ಪರಿಶೀಲನೆ, ವಿಧಾನ ನಿರೂಪಣೆ, ಇನ್ನೂ ಖಚಿತವಾಗಿ ನಡೆಯಬೇಕಾಗಿದೆ. ಮೂಲ ಕಲ್ಪನೆ, ಅದು ರೂಪುಗೊಳ್ಳುವ ವಿಧಾನಗಳಿಗೆ ಸಂಬಂಧಿಸಿದ ಸಂಗತಿಗಳು ಇನ್ನೂ ಎಲ್ಲ ತಿಳಿದಿಲ್ಲ.

ದೃಷ್ಟಿಯ ಫಲವಾಗಿ ಅವನು ಕಾಣಿಸುತ್ತಿರುವ ಅರ್ಥ ಅವನ ಕರ್ಮದಲ್ಲಿ ರೂಪಿತವಾಗಿ ಕೃತಿಯಾಯಿತು. ಅವನ ಮಟ್ಟಿಗೆ ಕ್ರಿಯೆ ಮುಗಿಯಿತು.

ಆದರೆ ಅದರ ಅರ್ಥ ಇದೇ ಸರಿ ಎಂದು ಅದನ್ನು ನೋಡಿದವರೂ ಪರಿಚಯ ಮಾಡಿಕೊಂಡವರೂ ಅರಿಯಬೇಕಲ್ಲವೆ? ಕೃತಿ ನಿರ್ಮಾಣ ಮಾಡಿದ ಮೇಲೆ ಕೃತಿಕಾರನು ಹಿಂದಕ್ಕೆ ಸರಿದು ನಿಲ್ಲುತ್ತಾನೆ; ಅಲ್ಲಿಗೆ ಅವನ ಅಲಂಕಾರ, ಅಲಂ-ಅರಂ-ಆಯಿತು;*[೮] ಇನ್ನು ಮುಂದೆ ನೇರವಾಗಿ ಅವನ ನೆರವು ಅಷ್ಟಾಗಿ ಅಗತ್ಯವಾಗಬಾರದು. ತಾಯಿ ಮಗುವಿನಂತೆ, ತಂದೆ ಮಗನಂತೆ ಈ ಎರಡೂ ಒಂದೇ ಕ್ರಿಯೆಯಲ್ಲಿ ಕೂಡಿದಂತೆ ಇಲ್ಲಿ ಸಂಬಂಧ. ಹುಟ್ಟಿದುದು ಪೂರ್ತಿ ಬೇರೆ ಜೀವ; ವ್ಯಕ್ತಿ ಬೇರೆ; ಮಗುವಿನದರಂತೆಯೇ ಕೃತಿಯ ಜೀವನ ಇನ್ನು ಮುಂದೆ ಇಲ್ಲಿಯೂ ಬೇರೆ; ಸ್ವತಂತ್ರ. ಮಗುವಿನ ಹಸುಳೆತನದಲ್ಲಿ ಅಸಹಾಯವಾದ ಅದರ ಪೋಷಣೆ, ಲಾಲನೆ ತಾಯಿತಂದೆಯರ ಹೊಣೆ. ಕಲಾನಿರ್ಮಿತಿಯ ವಿಚಾರ ಹಾಗಲ್ಲ. ಕೃತಿಯಾಗಿ ಒಂದು ಸಲ ರೂಪುಗೊಂಡ ಮೇಲೆ ಅವನ ಕಾಪು ಅದಕ್ಕೆ ಬೇಕಿಲ್ಲ. ಅದರ ಬದುಕು ಪೂರ್ತಿ ಬೇರೆಯಾಯಿತು. ಅಂದಿನಿಂದ ಎಂದೆಂದಿಗೂ ಅದು ಸ್ವಸಂಪೂರ್ಣ ಸತ್ವ;–ಕಲೆಯಾಗಿ. ಇತರ ಜನ ಅದರಲ್ಲಿ ಕಾಣಲಾಗದ ಅರ್ಥವನ್ನು ಎಂಥ ಕಲೆಗಾರನೂ ತೋರಿಸಿ ಕೊಡಲಾರ.×[೯] ಪ್ರಪಂಚಕ್ಕೆ ಒಂದು ಹೊಸ ಪದಾರ್ಥ ಉಂಟಾಗಿ ಈಗ ಅದು ಎದುರಿಗೆ ಇದೆ. ಅದನ್ನು ಜನ ಸಂದರ್ಶಿಸುತ್ತಾರೆ. ತಮಗೆ ತೋರುವ ಅರ್ಥವನ್ನು ತೆಗೆದುಕೊಳ್ಳುತ್ತಾರೆ; ನುಡಿಯುತ್ತಾರೆ. ಕಂಡು ಪ್ರೀತಿಯನ್ನೋ ಅಪ್ರೀತಿಯನ್ನೊ ಪಡೆಯುತ್ತಾರೆ; ವಿಮರ್ಶೆ ಮಾಡಿ ಬೆಲೆ ಕಟ್ಟುತ್ತಾರೆ; ಅದರ ಉಪಯುಕ್ತತೆಯನ್ನು ಕುರಿತು ಹಾಗೆ, ಹೀಗೆ, ಅಷ್ಟು ಇಷ್ಟು ಎನ್ನುತ್ತಾರೆ. ಒಪ್ಪಿಗೆಯಾಯ್ತು, ಚೆನ್ನಾಗಿಲ್ಲ ಎನ್ನುತ್ತಾರೆ. ಕೃತಿಯಿಂದ ಬಗೆಬಗೆಯ ಜನಕ್ಕೆ ಬೋಧೆಯಾಗುವ ಅರ್ಥವೂ ಅವರ ಮನಸ್ಸಿನ ಮೇಲೆ ಆಗುವ ಪರಿಣಾಮಗಳೂ, ಅವರ ಸಂಸ್ಕಾರ, ಬೆಲೆತೂಕ, ನಯನಾಜೂಕು, ವಿವೇಚನೆ, ಔದಾರ್ಯ ಕಾರ್ಪಣ್ಯ, ಶುಚಿರುಚಿ ಇವೆಲ್ಲ-ಆಗ ಅದರ ಅರ್ಥಾಂಗವಾಗಿ ಪ್ರಪಂಚಕ್ಕೆ ಸಂಚರಿಸಿ ಬರುತ್ತವೆ. ಸಹೃದಯರಾದ ವಿಮರ್ಶಕರು ಕೃತಿಯಿಂದ ಯಾವೆಲ್ಲ ಅನುಭವಗಳನ್ನು ಪಡೆಯುವರೋ, ಅದೆಲ್ಲ ಕೃತಿಯ ಅರ್ಥ. ಅವರ ಗೃಹಿಕೆಯಲ್ಲಿನ ಲೋಪದೋಷ ಅನೌಚಿತ್ಯ ಕಳೆದು ಅದರ ಗ್ರಹಿಕೆಗೆ ಸೇರುವ ಭಾವಪುಷ್ಟಿಯೆಲ್ಲ ಅದಕ್ಕೆ ಸೇರುವುದು. ಕೃತಿ ದೊಡ್ಡದಾದಷ್ಟೂ*[10] ಅನುಭವಶಾಲಿಗಳಾದ ರಸಿಕರ, ವಿಮರ್ಶಕರ ವಿವೇಚನೆ ಉತ್ತಮವಾದಷ್ಟೂ ಕೃತಿಯ ಅರ್ಥ ನಯವಾಗುವುದು, ಆಳವಾಗುವುದು, ವಿಸ್ತಾರವಾಗುವುದು. ಇಂತಹ ಅರ್ಥ ವಿಮರ್ಶೆಗಳ ಪ್ರಕಾಶನ ನಡೆದಂತೆಲ್ಲ ಕೃತಿಯ ಅರ್ಥ ಬೆಳೆದು ಆ ಅರ್ಥದ ಚರಿತ್ರೆ ಹಬ್ಬುವುದು. ಇದನ್ನು ಅನುಭವಿಸಬಲ್ಲ ಮನುಷ್ಯರು ಪ್ರಪಂಚದಲ್ಲಿ ಇರುವವರೆಗೂ-ಕಡೆಯ ಮನುಷ್ಯನ ಕೊನೆಯ ಅರ್ಥಗ್ರಹಿಕೆಯ ವರೆಗೂ-ಈ ಅರ್ಥಚರಿತ್ರೆ ನಡೆಯುವುದು. ಈ ಬಗೆಯ ಕ್ರಿಯೆಗೆ ನಿಲವು, ನಿಲುಗಡೆ, ಇತಿಮಿತಿ ಇಲ್ಲ. ಇದೊಂದು ಅನಂತ ವ್ಯಾಪಾರ.

ಕೆಲವು ಕೃತಿಗಳ ಅರ್ಥ ಇಷ್ಟೇ ಸರಿ. ಅದರಲ್ಲಿ ಇನ್ನೇನೂ ಇಲ್ಲ ಎಂದು ಹೇಳಿ ಮುಗಿಸಬಹುದು. ಅಂತಹದು ಸಾಮಾನ್ಯ ಕೃತಿ. "ಹಾಸಿ ಉಂಡು ಬೀಸಿ ಎಸೆದ ಬಾಳೆ ಎಲೆಯಂತೆ" ಯಾವುದೋ ಕೆಲಸ ಮಾಡಿತು; ಅದರ ಪ್ರಯೋಜಕತೆ ಅಲ್ಲಿಗೆ ಮುಗಿಯಿತು. ಹಲವು ವೇಳೆ ಅದರ ಅರ್ಥ ಅದರ ಮೇಲ್ಮೈಯ್ಯಲ್ಲಿಗೇ

8*Finished ಎಂಬ ಮಾತಿನಲ್ಲಿನ ಎರಡು ಅರ್ಥಗಳೂ ಹೀಗೇ ಮುಗಿಯಿತು, ಇನ್ನು ಸಾಕು, ಸರ್ವಾಭರಣ ಭೂಷಿತವಾಗಿ ಸಜ್ಜುಗೊಂಡು ಹೊರ ಬಿದ್ದಿತು — ಎಂಬಲ್ಲಿ ಕೂಡಿರುವಂತೆ. 9×ನನ್ನ ಕಾಲದವರಾರಿಗೂ ನನ್ನ ಅರ್ಥವನ್ನು ಗ್ರಹಿಸುವ ಯೋಗ್ಯತೆಯಿಲ್ಲ. ಮುಂದಿನ ಕಾಲಗಳಲ್ಲಿ ನನಗೆ ಸಮಾನ ಸತ್ವರಾರಾದರೂ ಹುಟ್ಟಿದರೆ ಅವರಿಗೆ ತಿಳಿದೀತೋ ಏನೋ ಎಂಬ ಅಹಂತೆ ಇರುವಲ್ಲಿಯೂ ಇದು ಸತ್ಯ. ಒಬ್ಬ ಗಣಿತಕಾರನು ೪೦–೫೦ ವರ್ಷ ಲೆಕ್ಕ ಮಾಡಿ ತನ್ನ ತೀರ್ಮಾನವನ್ನೂ ಸಮೀಕರಣಗಳನ್ನೂ ಬರೆದಿಟ್ಟನಂತೆ; ಕಡೆಯಲ್ಲಿ 'ಔಫ್'– ಇದು ಮುಗಿಯಿತು; ಇನ್ನಾರಿಗೂ ಎಂದಿಗೂ ತಿಳಿಯದೆ ಇರಲಿ ಎಂದನಂತೆ. ಇಂಥ ಸಿದ್ಧಿ ವಿಚಿತ್ರ. ಆದರೆ ಮನಸ್ಸಿನ ಒಂದು ಸ್ಥಿತಿಯ ದ್ಯೋತಕ ಅದು. 10*ಇಷ್ಟಕ್ಕೆ ಅವಕಾಶ ಕೊಡುವಷ್ಟಾದರೂ ಕೃತಿ ಅರ್ಹವಾಗಿರಬೇಕು ಮಾತ್ರ—ದೊಡ್ಡಕೃತಿ, ಚಿಕ್ಕಕೃತಿ ಎಂದರೇನು? ಪ್ರಮಾಣಗಳಾವುವು? ಎಂಬುದೂ ವಿವೇಚನೆಗೆ ಒಳಪಡುವ ವಿಷಯ.

ತಿಳಿದು ಹೋಗುವುದು. ಅದರಲ್ಲಿ ಮಟ್ಟ, ಪದರ,—ಅಂತರಾಂತರ-ಹೃದಯ, ಗೂಢ, ಚರ್ವಣ ಮಾಡಿದಂತೆಲ್ಲ, ಮೆಲುಕಿದಂತೆಲ್ಲ ರಸಪುಷ್ಟಿ ಹೆಚ್ಚುವ-ಅಂಥದೇನೂ ಇಲ್ಲ. ಲೋಕದ ಶ್ರೇಷ್ಠ ಕೃತಿಗಳೆಂದು ಹೆಸರುಗೊಂಡು ರಸಜ್ಞರ ಪ್ರೀತಿಗೂ ಗೌರವಕ್ಕೂ ಪುನಃ ಪುನಶ್ಚರ್ವಣಕ್ಕೂ ಎಡೆಗೊಟ್ಟು ಅಮರವಾಗುವ ಕೃತಿಗಳ ಅರ್ಥ ಹಾಗಲ್ಲ.‡[11] ಕಾಲದಿಂದ ಕಾಲಕ್ಕೆ ಅವುಗಳ ಅರ್ಥವಂತಿಕೆ ಹೊಸ ಅಂಶಗಳ ಪರಿಶೀಲನದಿಂದಲೂ ಹೊಸ ದರ್ಶನದಿಂದಲೂ ಕಳೆಗೊಳ್ಳುತ್ತದೆ. ಹೊಸ ಸನ್ನಿವೇಶ, ಮನಃಸ್ಥಿತಿಗಳಲ್ಲೂ ಅವುಗಳ ಪರಿಚಯವನ್ನು ಮಾಡಿಕೊಂಡವರು ಹೊಸ ಭಾವ, ಆದೇಶ, ಅರ್ಥ ಕಲ್ಪನೆಗಳನ್ನು ಮಾಡಿಕೊಂಡು ಅದರ ಅರ್ಥ ಚರಿತ್ರೆಗೆ ತಮ್ಮ ದರ್ಶನವನ್ನು ಸೇರಿಸುವಾಗ ಅದೇ ಆಗತಾನೇ ಕಂಡ ಸತ್ಯದಂತೆ, ಅದರ ಸೌಂದರ್ಯಮಂಡಲ ಪ್ರಕಾಶಗೊಳ್ಳುವುದು. ಕಲಾಸತ್ಯ ಹೀಗೆ ಸಂತತವಾಗಿ ನೂತನ; ಸನಾತನ.†[12] ವಾಲ್ಮೀಕಿ, ಷೇಕ್ಸ್‌ಪೀಯರ್, ಸಾಫೋಕ್ಲೀಸ್, ವ್ಯಾಸಾದಿಗಳಿಂದ ಇಂದಿಗೂ - ಮುಂದಿಗೂ ದಿನದಿನವೂ ಕಾವ್ಯಕೃತಿ ಪ್ರೇರಿತವಾಗುವುದು ಶಕ್ಯ. ಅವರ ತಂದೆತನ ಈ ಕಾಲದ–ಬೇರೆ ದೇಶದ, ಭಾಷೆಯ ಮಕ್ಕಳಲ್ಲಿಯೂ ಸದಾ ನಡೆಯುತ್ತಿರುವುದು. ಅವರ ಅಮೃತತ್ವ, ವೀರ್ಯ, ಸೃಷ್ಟಿ ಶಕ್ತಿ ಹೀಗೆ ನಿರಂತರವಾದ್ದು. ಇದು ವಸ್ತುಪಿಗೆ ಮಾತ್ರ ಸೇರಿದ್ದಲ್ಲ; ಕಲ್ಪನೆ, ಕಲಾ ದ್ರವ್ಯ, ಉಪಯೋಗಿಸುವ ಕರಣ ಸಾಧನಗಳಿಗೆ ಮಾತ್ರ ಮಿತವಾದ್ದಲ್ಲ; ಒಂದು ದೃಷ್ಟಿಗೆ, ರೂಪಣಕ್ರಮಕ್ಕೆ ಮಾತ್ರ ಒಳಪಡುವುದಲ್ಲ. ಈ ಎಲ್ಲಕ್ಕೆ ಸಂಬಂಧಿಸಿದ ಸಂಪ್ರದಾಯ ರೀತಿ- ನವ್ಯತೆಗಳಲ್ಲಿ ಅಳೆದು ಮುಗಿಯುವುದಲ್ಲ; ಒಂದು ಜೀವಂತ ಕ್ರಿಯಾಪ್ರಸರ (A live continuum) ಅದು. ಕಲೆಗಾರನ ಮನಸ್ಸಿನಲ್ಲಿ ಯಾವ ಕಲ್ಪನೆ ಜಾಗ್ರತವಾಯಿತೊ, ಯಾವ ಬೆಳಕು ಮಿಂಚಿಮಾಯವಾಯಿತೊ, ಅದು ಅವಯವಗೊಂಡು ಬಲಿತು ಪೂರ್ತಿ ರೂಪುಗೊಂಡಾಗ ಯಾವ ಅಂಶಗಳು ಹಿಂಗಿ ಇನ್ನಾವ ಸತ್ವ ಸೇರಿಕೊಂಡಿತೊ, ಹುಟ್ಟಿದ ಕೃತಿಯನ್ನು ನೋಡಿದಾಗ ಯಾರು ಯಾರು ಹೇಗೆ ಹೇಗೆ ಅದನ್ನು ಅನುಭವಿಸಿ ಅರ್ಥ ಮಾಡಿಕೊಂಡರೋ ವಿವೇಚನೆ ಮಾಡಿದರೋ, ಅದರಿಂದ ಏನೇನು ಫಲಪರಿಣಾಮಗಳುಂಟಾದುವೊ ಇವೆಲ್ಲ ಕೃತಿಯ ಅರ್ಥ ಪ್ರಪಂಚವೇ. ಕಲ್ಪಿಸಿದ, ಅನುಭವಿಸಿದ ಅರ್ಥ ಕೃತಿನಿಷ್ಠವಾಗಿ ಅಲ್ಲಿನ ಅಂಶಗಳಿಂದ ಸಾಧಿಸಬಲ್ಲವಾಗಿರುವವರೆಗೂ ಆ ಕಲ್ಪನೆಗೆಲ್ಲ ಅವಕಾಶವುಂಟು. ಅದೆಲ್ಲ ಸರಿ.

ಕೃತಿಕಾರನ ಮನಸ್ಸಿನಲ್ಲಿ ಈ ಹೊಸಕಂಡ ಅರ್ಥವಿತ್ತೆ? ಎಂಬ ಪ್ರಶ್ನೆ ನ್ಯಾಯವಾಗದು. ಇತ್ತೋ ಇಲ್ಲವೋ ನಮಗೇನು ಗೊತ್ತು ಇದು ನನ್ನ ಅರ್ಥವಲ್ಲವೆಂದು ಅವನೇ ಹೇಳದೆ ಇರುವ ವರೆಗೂ? ಅವನು ಹೇಳಿದರೆಷ್ಟು, ಬಿಟ್ಟರೆಷ್ಟು? ಅದನ್ನು ಕಟ್ಟಿಕೊಂಡು ನಮಗೇನು? ನಾವು ಇಲ್ಲಿ ಈಗ ಯೋಚಿಸುತ್ತಿರುವುದು ಅವನ ಅರ್ಥವಲ್ಲ—ಕೃತಿಯ ಅರ್ಥ. ಅವನ ಅರ್ಥ ಅವನ ಕೃತಿಯಲ್ಲಿ ಬೇರೆಯಾಗಿ ಆಕೃತಿಗೊಂಡಿದೆಯೆಂದು ಇತರರೆಲ್ಲರಿಗೆ ತೋರುತ್ತಿದ್ದರೆ ಅವನ ಮನಸ್ಸಿನಲ್ಲಿ ಏನಿದ್ದರೆ ಏನು ಏನಿಲ್ಲದಿದ್ದರೆ ಏನು? ಸ್ವಂತವಾಗಿ ಅವನು ಇದು ನನ್ನ ಅರ್ಥ ಎಂದು ಹೇಳಿದರ ಅದನ್ನೂ ಗಮನಕ್ಕೆ ತಂದುಕೊಳ್ಳಬಹುದು. ಕೃತಿಯ ಅರ್ಥಸಾಧಕವಾದ ಅಂಶಗಳಲ್ಲಿ ಅದೂ ಒಂದು. ಅಷ್ಟೇ. ಕೃತಿಕಾರನ ಇಷ್ಟ ಅವನು ಹೇಳುವಂತೆ ನೆರವೇರಿದೆಯೆ ಇಲ್ಲವೆ ಎಂಬುದನ್ನು ಇತರರು ಪ್ರತ್ಯೇಕವಾಗಿ ಕೃತಿಯ ಆಧಾರದ ಮೇಲಿಂದ ನಿರ್ಣಯಿಸಬೇಕಾಗುತ್ತದೆ. ಎಂದರೆ, ಆತನ ಅರ್ಥ, ಉದ್ದೇಶ ಭವ್ಯವಾಗಿದ್ದು ಕೃತಿ ಆ ಮಟ್ಟಕ್ಕೆ ಏರಿಲ್ಲದಿರುವುದು ಶಕ್ಯ.+[13] ಅವನ ಕಲ್ಪನೆಯ ನೂರು

---

[11]‡ಇದು ಎಂದು ನಿಂತು ಹೋಗುವುದೋ ಹೇಳುವ ಧೈರ್ಯ ಯಾರಿಗಿದೆ?—ನಿಂತಂದು ಅವು ಮೃತ. ಅವುಗಳ ಭಾವ ಪ್ರೇರಕ, ಕ್ರಿಯಾಪ್ರೇರಕ ಶಕ್ತಿ-ನಿಂತಿತು, ಆದ್ದರಿಂದ. ಅಮೃತತ್ವದ ಮೂಲಾಧಾರ ತತ್ವ ಇಲ್ಲಿದೆ ಎನ್ನಿಸುತ್ತದೆ. [12] †ಸನಾತನ, ಸದಾತನ ಎರಡೂ ಒಂದೇ ಸತ್ಯದ ಎರಡು ಮುಖಗಳು. [13]+ನನ್ನ ಕೃತಿಯನ್ನು ಜನ ಅರ್ಥ ಮಾಡಿಕೊಂಡಿಲ್ಲ, ಕೊಳ್ಳಲಾರರು ಎಂದು ಮುಂತಾಗಿ ಕೃತಿಕಾರನು ಈ ಕಾರಣದಿಂದಲೂ ಹೇಳಬಹುದು. ತಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗಿದ್ದದ್ದು ಕೃತಿಯಲ್ಲಿ ಮೂಡಿಯೇ ಇರಬೇಕು ಎಂಬ ಭ್ರಾಂತಿಗೆ ಅವಕಾಶವುಂಟಾದ್ದರಿಂದ. ಅದು ಮೂಡದಿರಬಹುದು. ದ್ರವ್ಯವನ್ನು ಬಳಸುವ ಜಾಣ್ಮೆ, ಕೃತಿಗಾರಿಕೆ ಶಕ್ತಿ ಅವನಲ್ಲಿ ಇಲ್ಲದಿರಬಹುದು. ಸಾಕಾದಷ್ಟು 'ಸಮಾಧಿ'ಯೋ ರೂಪಣ ಶಕ್ತಿಯೋ ಇಲ್ಲದಿರುವುದರಿಂದ. ಭ್ರಾಂತಿ ಇಂಥಲ್ಲಿ ಕರುಣಾಜನಕವಾಗುವುದು. ಆತನು ಅತಿ ಜಾಣನಾಗಿ ತನ್ನ ಕಾಲದವರ ಶಕ್ತಿಗಿಂತ ಬಹು ವೇಗವಾಗಿ ಚಿಂತಿಸಬಲ್ಲವನಾಗಿದ್ದರೆ ಸದ್ಯಕ್ಕೆ ಅವನ ಅರ್ಥ ಗ್ರಾಹ್ಯವಾಗದೆ ಕ್ಲಿಷ್ಟವಾಗಿದ್ದೊ ಮುಂದಿನ ಕಾಲಗಳಲ್ಲಿ ಹೆಚ್ಚು ಸುಲಭವಾಗುವ, ವೇದ್ಯವಾಗುವ ಸಂಭವವೇನೂ ಉಂಟು. ಹಾಗಯೇ ಈ ಅಧಿಕಯೋಗ್ಯತಾವಾದವನ್ನು ಅಯೋಗ್ಯರು ತಮ್ಮ ಕೃತಿಯ ಪರವಾಗಿ ಆಡಿ ಗುಣಾರೋಪಣೆ ಮಾಡಿಕೊಳ್ಳಲೂ ಬಹುದು. ಇಂಥ ಜಾಣತನ ಏಲುತನಗಳಿಗೆ ಕೊನೆಯಿಲ್ಲ.

ಮುಡಿ ಸುಂದರವಾದ—ಹೃದಯ ಸ್ಪೃಕ್ಕಾರ—ಅರ್ಥ ಸಂಪುಷ್ಟಿ ಹುಟ್ಟಿ ಅವನ ಕಾಲದ ಇತರರಿಗೊ ಬೇರೆ ಕಾಲದವರಿಗೊ ಹಾಯ್ದು ಅವರನ್ನು ರೋಮಾಂಚ ಗೊಳಿಸಬಹುದು. ಒಂದು ನೇರವಾದ ಉದ್ದಿಷ್ಟ ಭಾಗ; ಇನ್ನೊಂದು ಅದರಲ್ಲಿ ಇತರರು—ಬಹುಶಃ ತಾನೇ ಕೆಲವು ಕಾಲಾನಂತರ—ಕಂಡ, ಉಂಡ ಭಾಗ.

ಇಷ್ಟೆಲ್ಲ ಒಂದು ಕೃತಿಯ ವಿಚಾರವಾಯಿತು,—ಸ್ಥೂಲವಾಗಿ. ಅದು ಕಲೆಗಾರನ ಮನಸ್ಸಿನಲ್ಲಿದ್ದ ಮಟ್ಟಿಗೂ ನಿಜ. ಅದನ್ನು ಅನುಭವಿಸಿದ ರಸಾನುಭವಿಗಳಲ್ಲಿ ಇದ್ದಷ್ಟೂ ನಿಜ. ಅದನ್ನು ಕುರಿತು ಅವರು ಮಾಡಿದ ವ್ಯಾಖ್ಯಾನಾದಿಗಳೂ ಮಾಡಿದ ಪ್ರತಿಪಾದನೆಗಳೂ ನಿಜ. ಅನಂತ ಕಾಲದ ವರೆಗೂ ಈ ಅರ್ಥ ಬೆಳೆಯುವಾಗ ಕೃತಿಯ ಅರ್ಥವೆಂದರೆ ಈ ವ್ಯಾಪನೆಯುಳ್ಳ ಸಮಗ್ರ ಅರ್ಥಚರಿತ್ರೆ ಎಂದರಿಯಬೇಕು. ಇದರಲ್ಲಿ ವಿಮರ್ಶೆಯ ಚರಿತ್ರೆಯೂ ಸೇರುತ್ತದೆ. ಯಾವ ಅರ್ಥ ಕಲ್ಪನೆ ನ್ಯಾಯ್ಯ, ಸಲ್ಲುವುದು ಯಾವುದಲ್ಲ ಎಂದು ತೇಲಿ, ಅಳಿದ ಭಾಗ ಅಳಿದು ಉಳಿದು ನಿಂತದ್ದೂ ಬೆಳೆದದ್ದೂ ಈ ಪ್ರಪಂಚದ ಜೀವಸತ್ವವೇ ಆಗುವುದು.

ಕಲೆ ಎಂಬ ಮಾತು ಒಂದು ಬಗೆಯ ಕೃತಿ ಜಾತಿಯ ವಿಚಾರಕ್ಕೆ ಸಂಬಂಧಪಟ್ಟ ವಾಚಕ. ಒಂದೇ ಕಲೆಗೆ ಸಂಬಂಧಿಸಿದ ಎಲ್ಲ ಕಾಲದ ಎಲ್ಲ ರೀತಿಯ ಕೃತಿಗಳೂ ಒಂದರಿಂದ ಇನ್ನೊಂದು ಅರ್ಥವಂತವಾಗುವುವು. ತಾರತಮ್ಯ ಜ್ಞಾನ, ಇದಕ್ಕೆಲ್ಲ ಸಂಬಂಧಿಸಿದ ತತ್ವಭಾಗ—ಬೆಳೆಯುವುದು. ಸ್ಫೂರ್ತಿ, ನಿರ್ಮಿತಿ, ಆಸ್ವಾದನ, ವಿಮರ್ಶೆ ಈ ಎಲ್ಲದರ ಚರಿತ್ರೆ ಎಂಬ ಭಾಗಗಳ ಸಾಂಗತ್ಯವನ್ನೂ ನಿರಂತರ ಪರಿಸರ ಸ್ವರೂಪವಾದ ಯಾವುದೋ ವ್ಯಾಪಾರ ಈ ಅರ್ಥದ ನೆಲಸನ್ನು ಸೂಚಿಸುವುದು.§14

ಕಲೆ ಎಂಬುದು ಒಂದು ಕಲೆಯಲ್ಲಿನ ಕೃತಿಗಳಲ್ಲಿ ಕಾಣುವುದು ಮಾತ್ರವಲ್ಲ; ಹಲವು ಬಗೆಯ ಕಲೆಗಳಿಗೆ ಸಂಬಂಧಿಸಿದ ಮಾತೂ ಹೌದು. ಪ್ರತಿ ಕಲೆಗೂ ಅದರದೇ ಆದ ವಿಶಿಷ್ಟ ಲಕ್ಷಣ ಉಂಟು. ಇತರ ಕಲೆಗಳಿಗೂ ಅದಕ್ಕೂ ಸಾಮಾನ್ಯವಾದ ಅಂಶಗಳುಂಟು. ಯಾವುದೋ ನಿರ್ಮಾಣ ಶಕ್ತಿಯ ರೂಪಣಕ್ಕೆ ಸಂಬಂಧಿಸಿದ ಮನೋವ್ಯಾಪಾರವೊಂದು ಕಡೆ; ಕ್ರಿಯಾರಚನೆಯೊಂದು ಕಡೆ—ಪ್ರತಿಭಾತ್ಮಕವಾದ್ದು

14§ಉದಾ: ಕಡೆಗೆ—ಒಂದು ಮಂಚ, ಪೆಟ್ಟಿಗೆ ಎಂಬವನ್ನು ನೋಡೋಣ. ಜನ ಯಾವುದೋ ಒಂದು ಉಪಯೋಗಕ್ಕಾಗಿ ಲೋಕದಲ್ಲಿ ಒಂದು ವಸ್ತುವನ್ನು ತಯಾರು ಮಾಡಿಕೊಳ್ಳುತ್ತಾರೆ. ಬಗೆಬಗೆಯ ಗಾತ್ರ, ಆಕಾರ, ಗುಣಉಳ್ಳ ಮಂಚಗಳೂ ಪೆಟ್ಟಿಗೆಗಳೂ ಅತ್ಯನಾಗರಿಕರಿಂದ ಹಿಡಿದು ಅತಿ ಕುಶಲ ಕಲೆಗಾರರ ಕೈವಾಡದಿಂದಾದ ಸುಂದರ ಕೃತಿ ನಿರ್ಮಿತಿಯವರೆಗೂ ಹರಡುವ ಮಂಚಗಳೂ ಪೆಟ್ಟಿಗೆಗಳೂ ದೇಶದೇಶಗಳಲ್ಲಿ ತಯಾರಾಗುತ್ತವೆ. ಒಂದು ಕಾಲದಿಂದ ಇನ್ನೊಂದಕ್ಕೆ ಒಂದು ದೇಶದಿಂದ ಬೇರೊಂದಕ್ಕೆ ವಸ್ತುಗಳಾಗಿ ಚಿತ್ರಗಳಾಗಿ ರೂಪಸೂಚಿಕೆಗಳಾಗಿ ಬರುತ್ತವೆ. ಒರಟಾದವು, ವಿಕಾರವಾದವು ತ್ಯಾಜ್ಯವಾಗಿ ನಾಶವಾಗಿರುತ್ತವೆ; ಬೇಸರ ಅಸಹ್ಯ ತಂದಿರುತ್ತವೆ. ಒಂದನ್ನು ನೋಡಿ ಮತ್ತೊಂದು ಅದನ್ನು ಬದಲಿಸಿ ಮೀರಿ ಇನ್ನೊಂದು ಆಕೃತಿಗೊಳ್ಳುತ್ತಿರುತ್ತವೆ. ಕೆಲವು ಸುರೂಪಿ (ಆದರೆ ರೂಪ ಯಾವಾಗ ಸುರೂಪಿ ಯಾವಾಗ ಕುರೂಪಿ ಎಂಬುದೇ ಇಲ್ಲಿ ವಿಚಾರ್ಯ)—ಕೆಲವು ಚೆನ್ನಿಲ್ಲ (ಏಕೆ? ಎಂಬುದು ಬೆಲೆಗಳಿಗೆ ಸಂಬಂಧಿಸಿದ್ದು, ಯಾರಿಗೆ? ಎಂಬುದು ರುಚಿ ಸಂಸ್ಕಾರಗಳಿಗೆ ಹೊಂದಿದ್ದು)—ಹೀಗಾಗಿ ಅನಂತ ಕಾಲದ ವರೆಗೂ ಯಾವ ಯಾವ ಮಂಚಗಳೂ ಪೆಟ್ಟಿಗೆಗಳೂ ಅಲ್ಲಿನ ಕುಸುರಿ, ನಯ, ನುಣುಪು, ಆಕಾರ, ಅಂಗರಚನೆ, ಸುಭಗತೆಗಳೊಡನೆ ತಯಾರಾಗುವುವೊ ಅವೆಲ್ಲವುಗಳ ಆಕೃತಿಸಂಪತ್ತಿ, ಅವುಗಳ ಅರ್ಥಲಕ್ಷಣದಲ್ಲಿ ಸೇರಿರುತ್ತವೆ. ಮಂಚವೆಂದರೆ ಅಂಥ ಎಲ್ಲವೂ, ಪೆಟ್ಟಿಗೆಯೆಂದರೆ ಪೆಟ್ಟಿಗೆಯೆಂಬ ಹೆಸರಲ್ಲಿ ಹುಟ್ಟಿದ, ಬಳಸಿದ ಎಲ್ಲವೂ—ಜೊತೆಗೆ ಮಂಚ ಪೆಟ್ಟಿಗೆ ಎಂದರೆ ಆಲಂಕಾರಿಕವಾಗಿ ಬಲಿಯುವ ಲಕ್ಷಣ ವ್ಯಂಗ್ಯಾರ್ಥಗಳೂ, ಭಾವಾರ್ಥಗಳೂ, ಸಂಕೇತಗಳೂ ಒಡಬೆರೆತ ಸರಸ ವಿರಸಗಳ ವ್ಯಾಪಾರವೂ ಸೇರಿಕೊಂಡು ಸುಖದುಃಗಳನ್ನು ಉಂಟು ಮಾಡುವುವು. ಮೂಲಾರ್ಥವನ್ನು ಪೋಷಿಸುವುವು. ವಸ್ತುಸತ್ವಗಳಾದ ಇಂಥವುಗಳ ಅರ್ಥವೇ ಹೀಗೆ ಹರಡುವುದೆಂದಾಗ ಗಾನ, ನಾಟ್ಯ, ಚಿತ್ರಾದಿಗಳಲ್ಲಿನ ಪ್ರತಿಭಾಸಂಪನ್ನವಾದ ಸತ್ವಗಳ ಅರ್ಥವಂತಿಕೆ ಇನ್ನೆಷ್ಟು ಸರಸ ಪ್ರಸರವುಳ್ಳದ್ದಾಗಬಹುದೆಂಬುದನ್ನು ಕಲ್ಪಿಸಿಕೊಳ್ಳಬಹುದು.

ಕರ್ಮಕೌಶಲ ರೂಪವಾದ್ದು—ಒಂದೇ ವಿಧಾನದ ಎರಡು ಮುಖಗಳಂತೆ, ವಾಕ್ ಅರ್ಥಗಳಂತೆ, ಸೂರ್ಯನ ಶಾಖ ಬೆಳಕುಗಳಂತೆ, ಹಾರುವ ಹಕ್ಕಿಯು ಎರಡೂ ರೆಕ್ಕೆಯ ಬಡಿತದಂತೆ – ಒಂದರೊಳಗೊಂದು, ಸೇರಿಕೊಂಡಿರುವುದು. ಕಲೆಯು ಅರ್ಥವೆಂದಾಗ ಈ ಮನೋವ್ಯಾಪಾರದ, ಈ ಕ್ರಿಯಾಯೋಗದ ಎಲ್ಲ ತತ್ವ ಭಾಗ, ಎಲ್ಲ ಚರಿತ್ರ ಭಾಗ, ಎಲ್ಲ ಕೃತಿಯ ಅನುಭವ ವಿಮರ್ಶಾಚರಿತ್ರೆಗಳ ಭಾಗ, ರುಚಿ ನೀತಿಗಳ ಭಾಗ ಸೇರುವುವು. ಒಂದು ವಿಶಿಷ್ಟ ರೀತಿಯಲ್ಲಿ ಮನಸ್ಸಿನಲ್ಲಿ ಹುಟ್ಟಿದ್ದು ಒಂದು ವಿಶಿಷ್ಟ ರೀತಿಯಲ್ಲಿ ಆಸಾದ್ವಿಸಿದಾಗ ಮಾತ್ರ ಮಹಾನುಭವವನ್ನು ತಂದು ಜಗತ್ತನ್ನು ಸಂಸ್ಕಾರಗೊಳಿಸಬಲ್ಲ ಯಾವುದೋ ಸತ್ವಪ್ರಕರಣವಾಗಿ ಪ್ರಭಾಮಂಡಲವನ್ನು ರಚಿಸಿಕೊಂಡು ಬಾಳಿನ ಸಾರವನ್ನು ಪೋಷಣೆ ಮಾಡುತ್ತಿರುವುದು.



ದೇವರ ಸ್ವರೂಪ ಮತ್ತು ದೈವ ಭಕ್ತಿ

ಪಂಡಿತರತ್ನ ಶ್ರೀ ಎ. ಶಾಂತಿರಾಜ ಶಾಸ್ತ್ರಿ, ಮೈಸೂರು.

"ದೇವರ ಸ್ವರೂಪ ಮತ್ತು ದೈವಭಕ್ತಿ" ಎಂಬುದರಲ್ಲಿ ಅಡಕವಾಗಿರುವ ದೈವಭಕ್ತಿಗೆ ದೇವರ ಸ್ವರೂಪಜ್ಞಾನವು ಮೂಲವಾಗಿರುವುದು. ಆ ಸ್ವರೂಪಜ್ಞಾನಕ್ಕೆ ದೇವರ ಅಸ್ತಿತ್ವವು ಮೂಲವಾಗಿರುವುದು. ಅಂದರೆ ದೇವರ ಅಸ್ತಿತ್ವವು ಸಿದ್ಧವಾದರೆ ದೇವರ ಸ್ವರೂಪಜ್ಞಾನವೂ ಅದಾದರೆ ದೇವರಲ್ಲಿ ಭಕ್ತಿಯೂ ಉಂಟಾಗುವುವು. ದೇವರ ಅಸ್ತಿತ್ವವು ಸಿದ್ಧವಾದರೆ ಅದು ಮುಂದಿನ ವಿಷಯಗಳಿಗೆ ತಳಹದಿಯಾಗಿರುವುದು. ಗೋಡೆಯಿದ್ದರೆ ತಾನೆ ಚಿತ್ರ? ಆದುದರಿಂದ ಮೊತ್ತಮೊದಲು ನಾನು ದೇವರ ಅಸ್ತಿತ್ವವನ್ನು ಸಿದ್ಧಮಾಡಲು ಪ್ರಯತ್ನಿಸಿ ಮುಂದಿನ ವಿಷಯಗಳಿಗೆ ಮುಂದುವರಿಯುವೆನು.

ದೇವರ ಅಸ್ತಿತ್ವವು ಪ್ರಮಾಣದಿಂದ ಸಿದ್ಧವಾಗಬೇಕು. ಜೈನಸಿದ್ಧಾಂತ ರೀತಿಯಾಗಿ "ಸಮ್ಯಗ್ಜ್ಞಾನಂ ಪ್ರಮಾಣಂ" ಎಂದು ಹೇಳಿರುವುದರಿಂದ ಸತ್ಯ ಜ್ಞಾನಕ್ಕೆ ಪ್ರಮಾಣವೆಂದು ಹೆಸರು. ಅಂತಹ ಪ್ರಮಾಣವು ಪ್ರತ್ಯಕ್ಷ ಪರೋಕ್ಷ ಭೇದದಿಂದ ಎರಡು ಪ್ರಕಾರವಾಗಿರುವುದು. ಈ ಕ್ಷೇತ್ರದಲ್ಲಿ ಈ ಕಾಲದಲ್ಲಿ ಯೋಗಿ ಪ್ರತ್ಯಕ್ಷವು ಅಸಂಭವವಾಗಿರುವುದರಿಂದ "ಸಾಂವ್ಯವಹಾರಿಕಪ್ರತ್ಯಕ್ಷ"ವೆಂದು ಸಂಕೇತಿತವಾಗಿರುವ ನಮ್ಮ ಇಂದ್ರಿಯ ಪ್ರತ್ಯಕ್ಷ ಪ್ರಮಾಣದಿಂದ ದೇವರ ಅಸ್ತಿತ್ವವನ್ನು ಸಿದ್ಧಮಾಡೋಣವೆಂದರೆ ನಮ್ಮ ಯಾವುದೊಂದು ಬಾಹ್ಯೇಂದ್ರಿಯಕ್ಕೂ ದೇವರು ಗೋಚರಿಸದಿರುವುದರಿಂದ ನಮ್ಮ ಇಂದ್ರಿಯ ಪ್ರತ್ಯಕ್ಷವು ದೇವರ ಅಸ್ತಿತ್ವವನ್ನು ಎಂದರೆ ದೇವರಿದ್ದಾನೆಂಬುದನ್ನು ಸಿದ್ಧಮಾಡಲಾರದು. ಹಾಗಾದರೆ ದೇವರಿಲ್ಲವೆಂದು ಹೇಳಿಬಿಡೋಣವೇ? ಎಂದರೆ ಹಾಗೂ ಹೇಳಲಾಗುವುದಿಲ್ಲ. ಏತಕ್ಕೆಂದರೆ, ನಮ್ಮ ಇಂದ್ರಿಯಗಳು ನಿಯತವಾದ ದೇಶಕಾಲಗಳಲ್ಲಿರುವ ವಸ್ತುಗಳನ್ನು ತಿಳಿಯಬಲ್ಲುವಲ್ಲದೆ ಅನಿಯತವಾದ ದೇಶಕಾಲಗಳಲ್ಲಿರುವ ವಸ್ತುಗಳನ್ನು ತಿಳಿಯಲಾರವು. ಎಂದರೆ, ನಿಯತ ದೇಶಕಾಲವರ್ತಿಗಳಾದ ಪದಾರ್ಥಗಳನ್ನು ತಿಳಿಯತಕ್ಕ ನಮ್ಮ ಇಂದ್ರಿಯಗಳು ಸರ್ವದೇಶ ಸರ್ವಕಾಲಗಳಲ್ಲಿ ದೇವರಿಲ್ಲವೆಂಬುದನ್ನು ಹೇಗೆ ಸಿದ್ಧಮಾಡಬಲ್ಲುವು? ನಮ್ಮ ಇಂದ್ರಿಯಗಳಿಗೆ ಗೋಚರವಾದ ದೇಶಕಾಲಗಳಲ್ಲಿ ದೇವರಿಲ್ಲದಿದ್ದರೂ ಅವುಗಳಿಗೆ ಗೋಚರವಾದ ದೇಶ ಕಾಲಗಳಲ್ಲಿರಬಾರದೇಕೆ? ವಿವಕ್ಷಿತವಾದ ಒಂದು ವಸ್ತುವು ಸರ್ವದೇಶಗಳಲ್ಲಿಯೂ ಸರ್ವಕಾಲಗಳಲ್ಲಿಯೂ ಇಲ್ಲವೆಂದು ಸಿದ್ಧಮಾಡಬೇಕಾದರೆ ನಮಗೆ ಆ ದೇಶ ಕಾಲಗಳ ಜ್ಞಾನವಾಗಬೇಕು.

ಗೃಹೀತ್ವಾ ವಸ್ತುಸದ್ಭಾವಂ । ಸ್ಮೃತ್ವಾ ಚ ಪ್ರತಿಯೋಗಿನಂ ॥
ಮಾನಸಂ ನಾಸ್ತಿತಾಜ್ಞಾನಂ । ಜಾಯತೇಕ್ಷಾನಪೇಕ್ಷಯಾ ॥

ಹೀಗೆ ಸರ್ವದೇಶಕಾಲಗಳನ್ನು ತಿಳಿದು ಅಭಾವ ಪ್ರಮಾಣಕ್ಕೆ ವಿಷಯವಾದ ಪದಾರ್ಥವನ್ನು-ದೇವರನ್ನು ನೆನೆದು ಇಂದ್ರಿಯಾಪೇಕ್ಷೆಯಿಲ್ಲದೆ ಇಲ್ಲವೆಂಬ ಮಾನಸ ಜ್ಞಾನವುಂಟಾದರೆ ಆಗ ದೇವರಿಲ್ಲವೆಂದು ಹೇಳಬಹುದು. ಅಂತಹ ಸರ್ವದೇಶ ಕಾಲಗಳ ಪ್ರತ್ಯಕ್ಷ ಜ್ಞಾನವು ನಮ್ಮಗಳಿಗಿಲ್ಲವಾದುದರಿಂದ ನಮ್ಮಗಳ ಪ್ರತ್ಯಕ್ಷಕ್ಕೆ ದೇವರ ಅಸ್ತಿತ್ವವನ್ನಾಗಲಿ ನಾಸ್ತಿತ್ವವನ್ನಾಗಲಿ ಸಿದ್ಧಮಾಡಲು ಅರ್ಹತೆಯಿಲ್ಲ. ಭಿನ್ನದೇಶಸ್ಥಿತ ಮೇರುಕೈಲಾಸಾದಿಗಳೂ ಭಿನ್ನಕಾಲಸ್ಥಿತ ರಾಮರಾವಣಾದಿಗಳೂ ನಮ್ಮ ಪ್ರತ್ಯಕ್ಷಕ್ಕೆ ವಿಷಯರಲ್ಲದಿದ್ದರೂ ಅವರ ಅಸ್ತಿತ್ವವು ಹೇಗೆ ಬೇರೆ ಪ್ರಮಾಣಗಳಿಂದ ಸಿದ್ಧವಾಗುವುದೋ ಹಾಗೆಯೇ ದೇವರ ಅಸ್ತಿತ್ವವೂ ಬೇರೆ ಪ್ರಮಾಣಗಳಿಂದ ಸಿದ್ಧವಾಗುವುದು. ಅಂತಹ ಪ್ರಮಾಣಗಳಾವುವೆಂದರೆ, ಮೇಲೆ ಹೇಳಿದ ಪ್ರಮಾಣಗಳಲ್ಲಿ ಎರಡನೆಯದಾದ ಪರೋಕ್ಷಪ್ರಮಾಣದ ಭೇದಗಳಾದ ಅನುಮಾನಾದಿಗಳು. ಪರೋಕ್ಷ ಪ್ರಮಾಣದಲ್ಲಿ ಸ್ಮೃತಿ, ಪ್ರತ್ಯಭಿಜ್ಞಾನ, ತರ್ಕ, ಅನುಮಾನ, ಆಗಮಗಳೆಂದು ಐದು ಭೇದಗಳಿವೆ. ಪೂರ್ವಾನುಭೂತ ವಿಷಯ ಸ್ಮರಣೆಗೆ ಸ್ಮೃತಿಯೆಂದೂ "ಅವನೇ ಇವನು" ಇತ್ಯಾದಿ ಶೃಂಖಲಾರೂಪವಾದ ಜ್ಞಾನಕ್ಕೆ ಪ್ರತ್ಯಭಿಜ್ಞಾನವೆಂದೂ ಊಹಾರೂಪವಾದ ವ್ಯಾಪ್ತಿ ಜ್ಞಾನಕ್ಕೆ ತರ್ಕವೆಂದೂ ಸಾಧನ

(ಹೇತು) ದಿಂದುಂಟಾಗುವ ಸಾಧ್ಯವಿಜ್ಞಾನಕ್ಕೆ ಅನುಮಾನವೆಂದೂ ಆಪ್ತ-ಸರ್ವಜ್ಞವಚನದಿಂದಾಗುವ ಅರ್ಥಜ್ಞಾನಕ್ಕೆ ಆಗಮವೆಂದೂ ಹೆಸರು. ಇವುಗಳಲ್ಲಿ ಮೊದಲನೆಯದಾದ ಸ್ಮೃತಿ ಮತ್ತು ಪ್ರತ್ಯಭಿಜ್ಞಾನಗಳಿಗೆ ದೇವರ ಅಸ್ತಿತ್ವವನ್ನು ಸಿದ್ಧಮಾಡುವ ಯೋಗ್ಯತೆಯೇ ಇಲ್ಲ. ಏತಕ್ಕೆಂದರೆ—ಹಿಂದೆ ನಾವುಗಳು ದೇವರನ್ನು ನೋಡಿಲ್ಲ. ನೋಡಿರುವ ಪದಾರ್ಥದಲ್ಲಿ ಸ್ಮೃತಿ ಪ್ರತ್ಯಭಿಜ್ಞಾನಗಳುಂಟಾಗುವುವು. (ಉಪಮಾಪ್ರಮಾಣವು ಪ್ರತ್ಯಭಿಜ್ಞಾನದಲ್ಲಿಯೂ ಅರ್ಥಾಪತ್ತಿಪ್ರಮಾಣವು ಅನುಮಾನಪ್ರಮಾಣದಲ್ಲಿಯೂ ಅಂತರ್ಭಾವವಾಗುವುದರಿಂದ ಅವುಗಳನ್ನು ಬೇರೆ ವಿವರಿಸಿಲ್ಲ) ತರ್ಕ ಮತ್ತು ಅನುಮಾನ ಪ್ರಮಾಣಗಳು ದೇವರ ಅಸ್ತಿತ್ವವನ್ನು ಸಾಧಿಸುವುದಕ್ಕೆ ಬಹಳ ಸಹಕಾರಿಗಳಾಗಿವೆ. ಈ ಎರಡು ಪ್ರಮಾಣಗಳನ್ನು ಬಿಟ್ಟರೆ ದೇವರ ಅಸ್ತಿತ್ವವನ್ನು ಸಾಧಿಸುವುದಕ್ಕೆ ಬೇರೆ ಪ್ರಮಾಣಗಳೇ ಇಲ್ಲ. ಆಗಮ ಪ್ರಮಾಣಕ್ಕೆ ಪ್ರಾಮಾಣ್ಯವು ಬರಬೇಕಾದರೆ ಅದು ದೇವರಿಂದ ಹೇಳಲ್ಪಟ್ಟುದಾಗಿರಬೇಕು; ದೇವರ ಅಸ್ತಿತ್ವಸಿದ್ಧಿಯಾದರೋ ಆಗಮಪ್ರಮಾಣದಿಂದಾಗಬೇಕು. ಹೀಗೆ ಆಗಮ ಪ್ರಮಾಣವು ಅನ್ಯೋನ್ಯಾಶ್ರಯದೋಷದೂಷಿತವಾಗಿರುವುದರಿಂದ ಮೊತ್ತಮೊದಲು ಆಗಮ ಪ್ರಮಾಣಕ್ಕೆ ದೇವರ ಅಸ್ತಿತ್ವವನ್ನು ಸಿದ್ಧಮಾಡುವ ಯೋಗ್ಯತೆಯೇ ಇರುವುದಿಲ್ಲ. ತರ್ಕಾನುಮಾನಪ್ರಮಾಣಗಳಿಂದ ದೇವರ ಅಸ್ತಿತ್ವವು ಸಿದ್ಧವಾದ ಮೇಲಾದರೋ ಆಗಮ ಪ್ರಮಾಣಕ್ಕೆ ಜೀವಕಳೆಯು ಬಂದು ಆ ಮೇಲೆ ಅದೂ ದೇವರ ಅಸ್ತಿತ್ವವನ್ನು ಸಮರ್ಥಿಸುವುದಕ್ಕರ್ಹವಾಗುವುದು. ಅಲ್ಲದೆ ಆಗಮ ಪ್ರಮಾಣದಿಂದಲೇ ದೇವರ ಅಸ್ತಿತ್ವವನ್ನು ನಂಬುವ ಆಜ್ಞಾಪ್ರಧಾನಿಗಿಂತಲೂ ಬುದ್ಧಿಘರ್ಷಣರೂಪವಾದ ತರ್ಕಾನುಮಾನಪ್ರಮಾಣಗಳಿಂದ ದೇವರ ಅಸ್ತಿತ್ವವನ್ನು ಸಿದ್ಧಮಾಡಿ ನಂಬುವ ಪರೀಕ್ಷಾಪ್ರಧಾನಿಯು ಶ್ರೇಷ್ಠನೆನಿಸುವನು.

ವ್ಯಾಪ್ತಿಜ್ಞಾನವು ತರ್ಕಪ್ರಮಾಣದ ಲಕ್ಷಣವೆಂದು ಮೇಲೆ ಹೇಳಿದೆನು. "ಕಾರಣವಿದ್ದರೇನೇ ಕಾರ್ಯವಿರುವುದು; ಕಾರಣವಿಲ್ಲದಿದ್ದರೆ ಕಾರ್ಯವಿರುವುದಿಲ್ಲ" ಎಂಬೀ ಮೊದಲಾದ ಸ್ವರೂಪವುಳ್ಳ ಜ್ಞಾನಕ್ಕೆ ವ್ಯಾಪ್ತಿಜ್ಞಾನವೆಂದು ಹೆಸರು. ಉದಾಹರಣೆ—ಬೆಂಕಿಯಿದ್ದರೇನೇ ಹೊಗೆಯಿರುವುದು; ಬೆಂಕಿಯಿಲ್ಲದಿದ್ದರೆ ಹೊಗೆಯಿರುವುದಿಲ್ಲವು. ಇಲ್ಲಿ ಬೆಂಕಿಯು ಕಾರಣ; ಹೊಗೆಯು ಕಾರ್ಯ. ಇದರಂತೆ ದೇವರ ಅಸ್ತಿತ್ವದಲ್ಲಿ ಘಟನೆ ಮಾಡಿ ನೋಡೋಣ—

(೧) ಜನರಲ್ಲಿ ಅನಾದಿಕಾಲದಿಂದಲೂ "ದೇವರಿದ್ದಾನೆ" ಎಂಬ ವ್ಯವಹಾರವೂ ನಂಬಿಕೆಯೂ ದೇವರ ಉಪಾಸನೆಯೂ ರೂಢವಾಗಿ ಬಂದಿರುವುವು. ದೇವರೇ ಇಲ್ಲದಿರುವ ಪಕ್ಷದಲ್ಲಿ ಅನಾದಿಕಾಲದಿಂದ ಈ ರೂಢಿಯು ಬರುತ್ತಿರಲಿಲ್ಲ. ದೇವರ ಅಸ್ತಿತ್ವರೂಪವಾದ ಕಾರಣವಿಲ್ಲದಿರುತ್ತಿದ್ದರೆ ಈ ರೂಢಿರೂಪವಾದ ಕಾರ್ಯವಿರುತ್ತಿರಲಿಲ್ಲವೆಂದು ಭಾವವು. ಲೋಕದಲ್ಲಿ "ಹಂಸಪಕ್ಷಿ" ಎಂದು ವ್ಯವಹಾರದಲ್ಲಿ ಹೇಳುವುದುಂಟಷ್ಟೆ? ಅದರ ಆಕಾರವೂ ಬಣ್ಣವೂ ಬಣ್ಣಿಸಲ್ಪಡುತ್ತವೆ. ಆದರೆ ಹಂಸಪಕ್ಷಿಯು ನಮಗೆ ಯಾರಿಗಾದರೂ ಎಂಥಾದರು ಪ್ರತ್ಯಕ್ಷವಾಗಿದೆಯೇ? ಇಲ್ಲ. ಆದರೂ ಹಂಸಪಕ್ಷಿಯು ಇಲ್ಲವೆಂದು ಯಾರೂ ವಾದಿಸುವುದಿಲ್ಲ. ಹೀಗೆಯೇ "ಗಂಡಭೇರುಂಡ ಪಕ್ಷಿ" ಎಂಬ ವ್ಯವಹಾರವೂ ಅದರ ಆಕೃತಿ ವರ್ಣ ವರ್ಣನೆಯೂ ರೂಢಿಯಲ್ಲಿದೆ. ಅದನ್ನೂ ನಾವು ಯಾರೂ ಕಂಡಿಲ್ಲ. ಆದರೂ ಗಂಡಭೇರುಂಡ ಪಕ್ಷಿಯಿಲ್ಲವೆಂದು ಹೇಳುವ ಸಾಹಸವು ನಮ್ಮಲ್ಲಿ ಯಾರಲ್ಲಿಯೂ ಇಲ್ಲ. ಈ ಕ್ಷೇತ್ರದಲ್ಲಿ ಮತ್ತು ಈ ಕಾಲದಲ್ಲಿ ಹಂಸ ಪಕ್ಷಿಯೂ ಗಂಡಭೇರುಂಡ ಪಕ್ಷಿಯೂ ನಮಗೆ ಪ್ರತ್ಯಕ್ಷಗಳಲ್ಲದಿದ್ದರೂ ದೇಶಾಂತರ ಕಾಲಾಂತರಗಳಲ್ಲಿರಬಹುದೆಂದು ನಾವು ಹೇಳುತ್ತೇವೆ. ಅದರಂತೆ ದೇಶಾಂತರ ಕಾಲಾಂತರಗಳಲ್ಲಿ ದೇವರಿರಬಹುದೆಂಬ ಊಹೆಗೂ ಬಾಧಕವಾವುದೂ ತೋರುವುದಿಲ್ಲ.

(೨) ಲೋಕದಲ್ಲಿ ಪುಣ್ಯ ಪಾಪರೂಪವಾದ ಅದೃಷ್ಟವೆಂಬ ವಸ್ತುವಿರುವುದೆಂಬುದು ಪ್ರಾಣಿವರ್ಗದಲ್ಲಿ ತೋರುವ ಸುಖದುಃಖ ತಾರತಮ್ಯದಿಂದ ಗೊತ್ತಾಗುವುದು. ಆ ಅದೃಷ್ಟ ಫಲಾನುಭವಕ್ಕೆ ತಕ್ಕುದಾದ ಸ್ವರ್ಗ ನರಕಾದಿ ಕ್ಷೇತ್ರಗಳೂ ನಿಯತವಾಗಿವೆಯೆಂದು ಹೇಳುವುದು ಮಾತ್ರವಲ್ಲದೆ ಮನುಷ್ಯವರ್ಗದ ನಂಬಿಕೆಯೂ ಹಾಗೆಯೇ ಇದೆ. ಆದರೆ ಆ ಪುಣ್ಯ, ಪಾಪ, ಸ್ವರ್ಗ, ನರಕ, ಮೋಕ್ಷ ಮೊದಲಾದ ಪದಾರ್ಥಗಳನ್ನು ನೋಡಿದವರಾರೂ ನಮ್ಮಲ್ಲಿಲ್ಲ. ಅವುಗಳ ವರ್ಣನೆಯೇನೋ ಪರಂಪರೆಯಾಗಿ ಬಂದಿದೆ. ಈ ವರ್ಣನಾ

ರೂಪವಾದ ಕಾರ್ಯಕ್ಕೆ ಕಾರಣನಾದ ಅತೀಂದ್ರಿಯ ಜ್ಞಾನಿ-ಸರ್ವಜ್ಞನು ಇದ್ದೇ ಇರಬೇಕು. ಅತೀಂದ್ರಿಯ ಜ್ಞಾನಿಯಲ್ಲದವನು ಸ್ವರ್ಗಾದಿ ಪರೋಕ್ಷ ವಿಷಯಗಳನ್ನು ನೋಡಲಾರನು. ಆ ಅತೀಂದ್ರಿಯ ಜ್ಞಾನಿಯಾದ ಕಾರಣನು ಇಲ್ಲದಿರುತ್ತಿದ್ದರೆ ಈ ಪುಣ್ಯ ಪಾಪ ಸ್ವರ್ಗಾದಿಗಳ ಉಪದೇಶರೂಪವಾದ ಕಾರ್ಯವಿರುತ್ತಿರಲಿಲ್ಲ. ಇವುಗಳನ್ನು ತನ್ನ ದಿವ್ಯಜ್ಞಾನದೃಷ್ಟಿಯಿಂದ ಪ್ರತ್ಯಕ್ಷವಾಗಿ ಕಂಡೂ ಕಾಣುತ್ತಲೂ ಇರುವವನಾರೋ ಅವನೇ ದೇವರು. ದೇವರಿಲ್ಲವೆಂದು ಹೇಳುವುದಾದರೆ ಪುಣ್ಯ ಪಾಪ ಸ್ವರ್ಗಾದಿಗಳೂ ಇಲ್ಲವೆಂದು ಹೇಳಬೇಕಾಗುವುದು. ಹಾಗೂ ಆಗಲಿಯೆಂದು ಹೇಳುವುದಾದರೆ ಅದು ಪ್ರಾಣಿ ವರ್ಗದಲ್ಲಿ ಕಂಡುಬರುವ ಸುಖದುಃಖ ತಾರತಮ್ಯ ಪ್ರತ್ಯಕ್ಷದಿಂದ ಬಾಧಿತವಾಗುವುದು. ಆಸ್ತಿಕರಾರೂ ಹಾಗೂ ಹೇಳುವುದೂ ಇಲ್ಲ.

ತರ್ಕಪ್ರಮಾಣವು ಮೇಲೆ ಹೇಳಿದಷ್ಟು ಮಟ್ಟಿಗೆ ದೇವರ ಅಸ್ತಿತ್ವವನ್ನು ಸಿದ್ಧಮಾಡಲು ಹೋರಾಡಬಲ್ಲುದಲ್ಲದೆ ಅದಕ್ಕಿಂತ ಹೆಚ್ಚು ಹೋರಾಡಲು ಅದಕ್ಕೆ ಶಕ್ತಿಯಿಲ್ಲ. ಇದು ಅನುಮಾನಪ್ರಮಾಣಕ್ಕೆ ಅಂಗವಾದಾಗ ಬೇಕಾದಷ್ಟು ವಿವೇಚನೆಗೆ ಅವಕಾಶವನ್ನು ಕೊಡುವುದು. ಏವಂಚ ಈ ತರ್ಕಪ್ರಮಾಣ ವಿವೇಚನೆಯಿಂದ ತಮ್ಮಗಳಿಗೆ ದೇವರ ಅಸ್ತಿತ್ವವು ಸ್ವಲ್ಪ ಮಟ್ಟಿಗೆ ಗೊತ್ತಾಗಿರಬಹುದು. ಇನ್ನೂ ವಿಶದವಾಗಿ ತಿಳಿಯಲು ಅನುಮಾನಪ್ರಮಾಣಕ್ಕೆ ದಾಂಟೋಣ.

ಅನುಮಾನಪ್ರಮಾಣಕ್ಕೆ ಯುಕ್ತಿಪ್ರಮಾಣವೆಂದೂ ಹೆಸರಿದೆ. ಸಾಧನದಿಂದುಂಟಾಗುವ ಸಾಧ್ಯ ಜ್ಞಾನವು ಅನುಮಾನಪ್ರಮಾಣವೆಂದೂ ಮೇಲೆ ಹೇಳಿರುವೆನು. ಆವುದರಿಂದ ಸಾಧ್ಯದ ಜ್ಞಾನವಾಗುವುದೋ ಅದಕ್ಕೆ ಸಾಧನ ಅಥವಾ ಹೇತುವೆಂದು ಹೆಸರು. ಸಾಧ್ಯದೊಡನೆ ನಿಶ್ಚಿತವಾದ ಅವಿನಾಭಾವ ಸಂಬಂಧದಿಂದಿರುವುದಾವುದೋ ಅದೇ ಸಾಧನವು. ಅಂತಹ ಸಾಧನದಿಂದ ಸಾಧಿಸುವುದಕ್ಕೆ ಯೋಗ್ಯವಾದ ವಸ್ತುವಿಗೆ ಸಾಧ್ಯವೆಂದು ಹೆಸರು.

ಉದಾಹರಣೆ—"ಪರ್ವತದಲ್ಲಿ ಹೊಗೆಯಿರುವುದರಿಂದ ಅದು ಬೆಂಕಿಯುಳ್ಳುದಾಗಿದೆ" ಇಲ್ಲಿ ಪರ್ವತವು ಪಕ್ಷ; ಬೆಂಕಿಯು ಸಾಧ್ಯ; ಹೊಗೆಯು ಸಾಧನ; ಪರ್ವತದಲ್ಲಿ ಹೊಗೆಯು ಪ್ರತ್ಯಕ್ಷವಾಗಿದೆ; ಬೆಂಕಿಯು ಪ್ರತ್ಯಕ್ಷವಾಗಿಲ್ಲ. ಆದರೂ ಹೊಗೆಯಿದ್ದಲ್ಲಿ ಬೆಂಕಿಯಿದ್ದೇ ಇರಬೇಕೆಂಬ ನಿಯಮವಿರುವುದರಿಂದ ಪರ್ವತದಲ್ಲಿ ಬೆಂಕಿಯು ಕಾಣದಿದ್ದರೂ ಹೊಗೆಯಿರುವುದರಿಂದ ಬೆಂಕಿಯಿದೆಯೆಂದು ತಿಳಿಯುವುದು ತಪ್ಪಾಗುವುದಿಲ್ಲ. ಅಪ್ರತ್ಯಕ್ಷವಾದ ಬೆಂಕಿಯ ಜ್ಞಾನಕ್ಕೆ ಪ್ರತ್ಯಕ್ಷವಾದ ಹೊಗೆಯ ಜ್ಞಾನವು ಸಾಧನವಾಗಿದೆ. ಸಾಧನರೂಪವಾದ ಹೊಗೆಯು ಸಾಧ್ಯರೂಪವಾದ ಬೆಂಕಿಯನ್ನು ಪರ್ವತದಲ್ಲಿ ಸಾಧಿಸುತ್ತದೆಂದು ಭಾವವು.

ಪರ್ವತದಲ್ಲಿ ಬೆಂಕಿಯಿದೆ ಎನ್ನುವಂತೆ, ಲೋಕದಲ್ಲಿ ದೇವರಿದ್ದಾನೆ ಎನ್ನುವುದೇ ಇಲ್ಲಿ ನಮ್ಮ ಪ್ರಕೃತ ವಿಷಯ. ಪರ್ವತದಲ್ಲಿ–ಬೆಂಕಿಯಿರುವುದೆಂಬುದನ್ನು ಹೊಗೆಯು ಸಾಧಿಸುವಂತೆ ಲೋಕದಲ್ಲಿ ದೇವರಿದ್ದಾನೆಂಬುದನ್ನು ಸಾಧಿಸುವ ಸಾಧನ ಅಥವಾ ಹೇತುವಾವುದು? ಎಂದು ಪ್ರಶ್ನೆಯನ್ನು ಮುಂದಿಟ್ಟುಕೊಂಡು ನಮ್ಮ ವಿವೇಚನೆಯನ್ನು ಮುಂದುವರಿಸಿದರೆ ಅಲ್ಲಿ ನಮಗೆ ಈ ಕೆಳಗಿನ ವಾಕ್ಯವು ತೋರುವುದು.

> (೧) "ಕಶ್ಚಿತ್ಪುರುಷಃ ಸಕಲ ಪದಾರ್ಥಸಾಕ್ಷಾತ್ಕಾರೀ, ತದ್ಗ್ರಹಣ ಸ್ವಭಾವತ್ವೇ ಸತಿ ಪ್ರಕ್ಷೀಣ ಪ್ರತಿಬಂಧಪ್ರತ್ಯಯತ್ವಾತ್, ಯದ್ಯದ್ಗ್ರಹಣಸ್ವಭಾವತ್ವೇ ಸತಿ, ಪ್ರಕ್ಷೀಣಪ್ರತಿಬಂಧಪ್ರತ್ಯಯಂ ತತ್ತತ್ಸಾಕ್ಷಾತ್ಕಾರಿ; ಯಥಾ ಅಪಗತತಿಮಿರಂ ಲೋಚನಂ ರೂಪಸಾಕ್ಷಾತ್ಕಾರಿ"—

ಒಬ್ಬಾನೊಬ್ಬ ಪುರುಷನು ಸಮಸ್ತ ಪದಾರ್ಥಗಳನ್ನು ಪ್ರತ್ಯಕ್ಷವಾಗಿ ತಿಳಿಯುವವನಾಗಿರುತ್ತಾನೆ, ಏತಕ್ಕೆಂದರೆ—ಅವನಿಗೆ ಆ ಪದಾರ್ಥಗಳನ್ನು ತಿಳಿಯುವ ಸ್ವಭಾವವಿದ್ದು ಆ ಸ್ವಭಾವಕ್ಕೆ ಅಡ್ಡಿಯಾದ ಕಾರಣವು ನಷ್ಟವಾಗಿರುವುದರಿಂದ; ಯಾವುದು ಯಾವುದನ್ನು ತಿಳಿಯುವ ಸ್ವಭಾವವುಳ್ಳುದಾಗಿ ಆ ಸ್ವಭಾವಕ್ಕೆ ಅಡ್ಡಿಯಾದ ಕಾರಣವಿಲ್ಲದುದಾಗಿರುವುದೋ ಅದು ಆ ಪದಾರ್ಥವನ್ನು ಪ್ರತ್ಯಕ್ಷವಾಗಿ ತಿಳಿಯುವುದು. ಉದಾಹರಣೆ—ಕತ್ತಲೆಯಿಲ್ಲದಿದ್ದರೆ ಕಣ್ಣು ರೂಪವನ್ನು ಪ್ರತ್ಯಕ್ಷವಾಗಿ ನೋಡುವುದು.

ಮೇಲಿನ ವಾಕ್ಯದಲ್ಲಿ ಸಕಲ ಪದಾರ್ಥಸಾಕ್ಷಾತ್ಕಾರಿತ್ವವು ಸಾಧ್ಯವಾಗಿದೆ; ಆ ಸ್ವಭಾವವಿದ್ದು ಅದಕ್ಕೆ ಅಡ್ಡಿಯಾದ ಕಾರಣವು ನಷ್ಟವಾಗಿರುವುದರಿಂದ ಎಂಬುದು ಸಾಧನ; ಲೋಚನವು ದೃಷ್ಟಾಂತ. ರೂಪ ಸಾಕ್ಷಾ

ತ್ಕಾರಕ್ಕೆ ಅಡ್ಡಿಯಾದ ಕತ್ತಲೆಯಿಲ್ಲದಿದ್ದರೆ ಕಣ್ಣು ರೂಪವನ್ನು ಹೇಗೆ ನೋಡಬಲ್ಲುದೋ ಹಾಗೆ ಸಕಲ ಪದಾರ್ಥವನ್ನು ಸಾಕ್ಷಾತ್ಕರಿಸುವ ಜ್ಞಾನಸ್ವಭಾವವುಳ್ಳ ಪುರುಷನು, ಆ ಜ್ಞಾನಕ್ಕೆ ಆವರಣವಾಗಿರುವ ಕರ್ಮವು ನಷ್ಟವಾಗಿರುವುದರಿಂದ, ಸಕಲ ಪದಾರ್ಥ ಸಾಕ್ಷಾತ್ಕಾರ ಮಾಡುತ್ತಾನೆಂದು ಭಾವವು. ಅಂತಹ ಸಕಲ ಪದಾರ್ಥ ಸಾಕ್ಷಾತ್ಕಾರಿಯೇ ಸರ್ವಜ್ಞನು; ಅವನೇ ದೇವರು.

ಜ್ಞಾನಕ್ಕೂ ಜ್ಞೇಯ ಅಂದರೆ ತಿಳಿಯತಕ್ಕ ವಸ್ತುವಿಗೂ ಪರಸ್ಪರ ಸಂಬಂಧವಿದೆ. ಜ್ಞಾನದಿಂದ ತಿಳಿಯಲ್ಪಡುವುದೇ ಜ್ಞೇಯಕ್ಕೆ ಸಾರ್ಥಕಥೆ, ಜ್ಞೇಯವನ್ನು ತಿಳಿಯುವುದೇ ಜ್ಞಾನಕ್ಕೆ ಸಾರ್ಥಕತೆ. ಬಿಸಿಲು ಎಲ್ಲೆಲ್ಲಿರುವುದೋ ಅಲ್ಲಲ್ಲಿ ಪ್ರಕಾಶವೂ ಪ್ರತಾಪವೂ ಪರಸ್ಪರವಾಗಿ ಹೊಂದಿಕೊಂಡಿರುವಂತೆಯೂ ಗಾಡಿಗೆ ಕಟ್ಟಿದ ಕುದುರೆಗಳನ್ನು ಗಾಡಿಯು ಅನುಸರಿಸುವಂತೆಯೂ ನಿರಾವರಣ ಜ್ಞಾನವು ಸಂಪೂರ್ಣ ಜ್ಞೇಯವನ್ನು ಅನುಸರಿಸಿರುತ್ತದೆ ಅಥವಾ ಜ್ಞಾನಜ್ಞೇಯ ಭಾವದಿಂದ ಪರಸ್ಪರವಾಗಿ ಹೊಂದಿಕೊಂಡಿರುತ್ತವೆಂಬುದು ನ್ಯಾಯಸಂಗತವಾದ ಮಾತು. ಜ್ಞಾನದಿಂದ ತಿಳಿಯಲ್ಪಡುವ ಆಕಾಶ ಮೊದಲಾದ ಜ್ಞೇಯಗಳು ಅನಂತವಾಗಿವೆ. ಅನಂತಜ್ಞೇಯಗಳನ್ನು ತಿಳಿಯತಕ್ಕ ಜ್ಞಾನವೂ ಅನಂತವಾಗಿಯೇ ಇರಬೇಕು. ಅಂತಹ ಅನಂತ–ಅಪಾರವಾದ ಜ್ಞಾನವುಳ್ಳವನೇ ದೇವರು. ಅವನೇ ಸಕಲ ಪದಾರ್ಥ ಸಾಕ್ಷಾತ್ಕಾರಿ.

ನಮ್ಮಗಳ ಜ್ಞಾನವು ತರತಮವಾಗಿರುವುದು ಕಂಡುಬರುತ್ತದೆ. ಅಂದರೆ ಒಬ್ಬನು ಸ್ವಲ್ಪ ವಿಷಯಗಳನ್ನು ತಿಳಿಯುತ್ತಾನೆ; ಇನ್ನೊಬ್ಬನು ಹೆಚ್ಚು ವಿಷಯಗಳನ್ನು ತಿಳಿಯುತ್ತಾನೆ, ಮತ್ತೊಬ್ಬನು ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯುತ್ತಾನೆ. ಈ ತರತಮಭಾವಕ್ಕೆ ಕಾರಣವೇನಿರಬಹುದೆಂದು ನಾವು ವಿಚಾರ ಮಾಡಿದರೆ ಜ್ಞಾನಜ್ಯೋತಿಯನ್ನು ಯಾವುದೋ ಒಂದು ಪರದೆಯು ಆವರಿಸಿರುವುದೆಂದು ಗೊತ್ತಾಗುವುದು. ಅದೇ ಕರ್ಮಾವರಣವೆಂಬುದು, ಅದಕ್ಕೇ ಜ್ಞಾನಾವರಣಕರ್ಮವೆಂದು ಹೆಸರು. ಪುಟ್ಟಕ್ಕಿಟ್ಟ ಚಿನ್ನವು ಕ್ರಮಕ್ರಮವಾಗಿ ಕಿಟ್ಟಕಾಲಿಕಾದೋಷಗಳಿಂದ ಬಿಡಲ್ಪಟ್ಟು ಕೊನೆಗೆ ಅಪರಂಜಿ—ಚಿನ್ನವಾಗುವಂತೆ ಆ ಕರ್ಮಾವರಣವೆಂಬ ಪರದೆಯು ಹೇಗೆ ಹೇಗೆ ಸವೆದು ತೆಳುವಾಗುತ್ತ ಹೋಗುವುದೋ ಹಾಗೆ ಹಾಗೆ ಜ್ಞಾನವು ವಿಶದವಾಗುತ್ತಿರುವುದು. ಆ ಜ್ಞಾನವಿಶದತ್ವದ ಕೊನೆಯ ಸ್ಥಾನವೇ ದೇವರ ಜ್ಞಾನವೆಂಬುದು. ಪರ್ವತದಲ್ಲಿ ಹೊಗೆಯಿಂದ ಅನುಮೇಯವಾದ ಬೆಂಕಿಯನ್ನು ಯಾವನಾದರೂ ಸಾಹಸಿಪುರುಷನು ಪ್ರತ್ಯಕ್ಷವಾಗಿ ಕಾಣಬಲ್ಲನು. ಅದರಂತೆ ಸೂಕ್ಷ್ಮವಾದ ಪರಮಾಣು ಮೊದಲಾದುವುಗಳನ್ನೂ ಕಾಲಾಂತರಿತರಾದ ರಾಮ ರಾವಣಾದಿಗಳನ್ನೂ ದೇಶಾಂತರಿತಗಳಾದ ಮಹಾಮೇರು ಕೈಲಾಸಾದಿಗಳನ್ನೂ ಒಬ್ಬಾನೊಬ್ಬನು ಪ್ರತ್ಯಕ್ಷವಾಗಿ ನೋಡಬಲ್ಲನು. ಬೆಂಕಿಯಂತೆ ಪರಮಾಣು ಮೊದಲಾದುವುಗಳೂ ಅನುಮೇಯವಾಗಿರುವುದರಿಂದ ಇಲ್ಲಿ "ಅನುಮೇಯವಾಗಿರುವುದರಿಂದ" ಎಂಬುದು ಸಾಧನ. ಪ್ರತ್ಯಕ್ಷತ್ವವು ಸಾಧ್ಯ. ಬೆಂಕಿಯು ದೃಷ್ಟಾಂತ. ಇದೇ ಅಭಿಪ್ರಾಯವನ್ನು ಶ್ರೀ ಸಮಂತ ಭದ್ರಾಚಾರ್ಯರು ಹೀಗೆ ಹೇಳಿದ್ದಾರೆ—

ಸೂಕ್ಷ್ಮಾಂತರಿತದೂರಾರ್ಥಾಃ ಪ್ರತ್ಯಕ್ಷಾಃ
ಕಸ್ಯಚಿದ್ಯಥಾ ।
ಅನುಮೇಯತ್ವತೋಗ್ನ್ಯಾದಿರಿತಿ
ಸರ್ವಜ್ಞಸಂಸ್ಥಿತಿಃ ॥

ಮೇಲೆ ಹೇಳಿದಂತೆ ಅನುಮಾನ ಪ್ರಮಾಣದಿಂದಲೂ ದೇವರ ಅಸ್ತಿತ್ವವು ಸಿದ್ಧವಾದ ಮೇಲೆ ಆಗಮ ಪ್ರಮಾಣಕ್ಕೆ ಬರೋಣ. ಈ ಪ್ರಮಾಣದಿಂದ ದೇವರ ಅಸ್ತಿತ್ವವೂ ಸ್ವರೂಪವೂ ನಿರೂಪಿಸಲ್ಪಡುವುವು.

ಶ್ಲೋ॥ ಯಃ ಸರ್ವಾಣಿ ಚರಾಚರಾಣಿ ವಿವಿಧ
ದ್ರವ್ಯಾಣಿ ತೇಷಾಂ ಗುಣಾನ್ ।
ಪರ್ಯಾಯಾನಪಿ ಭೂತಭಾವಿಭವತಃ
ಸರ್ವಾನ್ ಸದಾ ಸರ್ವಥಾ ॥
ಜಾನೀತೇ ಯುಗಪತ್ಪ್ರತಿಕ್ಷಣಮತಃ
ಸರ್ವಜ್ಞ ಇತ್ಯುಚ್ಯತೇ ।
ಸರ್ವಜ್ಞಾಯ ಜಿನೇಶ್ವರಾಯ ಮಹತೇ
ವೀರಾಯ ತಸ್ಮೈ ನಮಃ ॥

ಭಾವಾರ್ಥ--ನಾನಾ ಪ್ರಕಾರವಾದ ಸಮಸ್ತ ಚರಾಚರ ವಸ್ತುಗಳನ್ನೂ ಅವುಗಳ ಗುಣಗಳನ್ನೂ ಭೂತ ಭವಿಷ್ಯತ್ ವರ್ತಮಾನಕಾಲಸಂಬಂಧಿ ಸಮಸ್ತ ಅವಸ್ಥೆಗಳನ್ನೂ ಪ್ರತಿ ಸಮಯದಲ್ಲಿ ಏಕ ಕಾಲದಲ್ಲಿ ತಿಳಿಯುವವನು ಸರ್ವಜ್ಞನು. ಅಂತಹ ಮಹಾವೀರ ಸರ್ವಜ್ಞ—ಜಿನೇಶ್ವರನಿಗೆ ನಮಸ್ಕಾರವು.

ಶ್ಲೋ॥ ತ್ರೈಲೋಕ್ಯಂ ಸಕಲಂ ತ್ರಿಕಾಲ ವಿಷಯಂ
ಸಾಲೋಕಮಾಲೋಕಿತಂ।
ಸಾಕ್ಷಾದ್ಯೇನ ಯಥಾ ಸ್ವಯಂ ಕರತಲೇ
ರೇಖಾತ್ರಯಂ ಸಾಂಗುಲಿ॥
ರಾಗದ್ವೇಷಭಯಾಮಯಾಂತಕಜರಾ
ಲೋಲತ್ವಲೋಭಾದಯೋ।
ನಾಲಂ ಯತ್ಪದಲಂಘನಾಯ ಸ ಮಹಾ
ದೇವೋ ಮಯಾ ವಂದ್ಯತೇ॥

ಭಾವಾರ್ಥ—ಅಲೋಕಸಹಿತವಾದ ಮೂರು ಲೋಕ ಮತ್ತು ಮೂರು ಕಾಲ ಸಂಬಂಧಿಯಾದ ಸಮಸ್ತ ವಿಷಯಗಳನ್ನು, ಕೈಬೆರಲ್ಗಳ ಮೂರು ರೇಖೆಗಳನ್ನು ನೋಡುವಂತೆ, ಸಾಕ್ಷಾತ್ತಾಗಿ ಯಾವನು ನೋಡಿರುವನೋ ರಾಗ, ದ್ವೇಷ, ಭಯ, ರೋಗ, ಮರಣ, ಮುಪ್ಪು ಚಂಚಲತ್ವ, ಲೋಭ ಇವೇ ಮೊದಲಾದುವುಗಳು ಯಾವನ ಹೆಜ್ಜೆಯನ್ನು ಮೀರುವುದಕ್ಕೂ ಸಮರ್ಥಗಳಲ್ಲವೋ ಅವನು ಮಹಾದೇವನು. ಅವನನ್ನು ನಾನು ವಂದಿಸುತ್ತೇನೆ.

ಶ್ಲೋ॥ ಭವಬೀಜಾಂಕುರಜನನಾ। ರಾಗಾದ್ಯಾಃ
ಕ್ಷಯಮುಪಾಗತಾ ಯಸ್ಯ॥
ಬ್ರಹ್ಮಾವಾ ವಿಷ್ಣುರ್ವಾ। ಹರೋ
ಜಿನೋ ವಾ ನಮುಸ್ತಸ್ಮೈ॥

ಭಾವಾರ್ಥ—ಭವಪರಂಪರೆಗೆ ಕಾರಣವಾದ ರಾಗ ದ್ವೇಷ ಮದ ಮಾತ್ಸರ್ಯಾದಿ ದೋಷಗಳು ಯಾವನಲ್ಲಿ ಇಲ್ಲವೋ ಅಂಥವನು ಬ್ರಹ್ಮನಾಗಲಿ ವಿಷ್ಣುವಾಗಲಿ ಈಶ್ವರನಾಗಲಿ ಜಿನನಾಗಲಿ ಅವನಿಗೆ ನಮುಸ್ಕಾರವು.

ಶ್ಲೋ॥ ಯೋ ವಿಶ್ವಂ ವೇದ ವೇದ್ಯಂ ಜನನ
ಜಲನಿಧೇರ್ಭಂಗಿನಃ ಪಾರದೃಶ್ವಾ।
ಪೌರ್ವಾಪರ್ಯಾವಿರುದ್ಧಂ ವಚನ ಮನು
ಪಮಂ ನಿಷ್ಕಲಂಕಂ ಯದೀಯಂ॥
ತಂ ವಂದೇ ಸಾಧುವಂದ್ಯಂ ಸಕಲ
ಗುಣನಿಧಿಂ ಧ್ವಸ್ತದೋಷದ್ವಿಷಂತಂ।
ಬುದ್ಧಂ ವಾ ವರ್ಧಮಾನಂ ಶತದಲ
ನಿಲಯಂ ಕೇಶವಂ ವಾ ಶಿವಂ ವಾ॥

ಭಾವಾರ್ಥ—ತಿಳಿಯುವುದಕ್ಕೆ ಯೋಗ್ಯವಾದ ಸಮಸ್ತವನ್ನೂ ಯಾವನು ತಿಳಿಯುತ್ತಾನೋ ಅವಸ್ಥಾಂತರಗಳನ್ನೊಳಗೊಂಡಿರುವ ಭವಸಾಗರದ ಪಾರವನ್ನು ಯಾವನು ಕಂಡಿರುವನೋ ಯಾವನ ವಚನವು ನಿಷ್ಕಳಂಕವೂ ಉಪಮಾರಹಿತವೂ ಪೂರ್ವಾಪರ ವಿರೋಧವಿಲ್ಲದುದೂ ಆಗಿರುವುದೋ ಸಾಧುಗಳಿಂದ ವಂದಿಸಲ್ಪಡತಕ್ಕವನೂ ಸಮಸ್ತ ಗುಣಗಳಿಗೆ ನಿಧಿಯೂ ರಾಗ, ದ್ವೇಷ, ಮದ, ಮಾತ್ಸರ್ಯಾದಿ ದೋಷಗಳೆಂಬ ಶತ್ರುಗಳನ್ನು ನಾಶಮಾಡಿರುವವನೂ ಆದ ಅಂಥವನು ಬುದ್ಧನಾಗಲಿ, ವರ್ಧಮಾನನಾಗಲಿ, ಬ್ರಹ್ಮನಾಗಲಿ, ವಿಷ್ಣುವಾಗಲಿ, ಶಿವನಾಗಲಿ—ಯಾವನೇ ಆಗಲಿ ಅವನನ್ನು ವಂದಿಸುತ್ತೇನೆ.

ದೇವರ ಅಸ್ತಿತ್ವವನ್ನೂ ಸ್ವರೂಪವನ್ನೂ ನಿರೂಪಿಸುವ ಇಂತಹ ಅನೇಕಾನೇಕ ಗ್ರಂಥಾಧಾರಗಳಿರುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿರುವೆನು.

ಮೇಲ್ಕಂಡ ಪದ್ಯಗಳ ಮುಖ್ಯ ಸಾರಾಂಶವಿದು:—ದೇವರು ಲೋಕದಲ್ಲಿರುವ ಸಮಸ್ತ ವಸ್ತುಗಳಿಗಿಂತಲೂ ಪವಿತ್ರತೆಯಲ್ಲಿ ಮೇಲಾದವನು. ದೇವರಲ್ಲಿ ಯಾವ ವಿಧವಾದ ಕರ್ಮಲೇಪವೂ ಇಲ್ಲದೆ ಅತನು ಪರಿಶುದ್ಧ ವಸ್ತುವಾಗಿರುವುದರಿಂದ ಕರ್ಮ ಪ್ರೇರಣೆಯಿಂದುಂಟಾಗುವ ರಾಗ, ದ್ವೇಷ, ಮದ, ಮಾತ್ಸರ್ಯ, ಕಪಟ, ಮೋಹ, ಲೋಭ ಮೊದಲಾದ ಯಾವ ವಿಕಾರ ಭಾವಗಳೂ ಆ ವಿಕಾರ ಭಾವಗಳ ಪ್ರೇರಣೆಯಿಂದಾಗುವ ಬಾಹ್ಯ ಕಾರ್ಯಗಳೂ ದೇವರಲ್ಲಿ ಉಂಟಾಗುವುದಕ್ಕವಕಾಶವಿಲ್ಲ. ಆತ್ಮನಿಗೆ ಶರೀರವೂ ಕರ್ಮಲೇಪದಿಂದಾಗುವ ಒಂದು ಬಂಧನವಾಗಿರುವುದರಿಂದ ಕರ್ಮಲೇಪರಹಿತನಾದ ದೇವರಿಗೆ ಯಾವ ವಿಧವಾದ ಶರೀರವೂ ತನ್ಮೂಲಕವಾದ ಕ್ಷುದಾ ತೃಷಾದಿ ಬಾಧೆಗಳೂ ಇರುವುದಿಲ್ಲ. ಯಾವ ಮನುಷ್ಯನಾದರೂ ಫಲಪ್ರಾಪ್ತಿಯ ಉದ್ದೇಶದಿಂದ ಯಾವುದಾದರೂ ಕೆಲಸವನ್ನು ಮಾಡುತ್ತಾನಲ್ಲದೆ ನಿರುದ್ದೇಶವಾಗಿ ಮಾಡುವುದಿಲ್ಲ. ದೇವರು ಕೃತಕೃತ್ಯನಾಗಿರುವುದರಿಂದ ಆತನಲ್ಲಿ ಯಾವುದೊಂದು ಫಲಪ್ರಾಪ್ತಿಯ ಉದ್ದೇಶವೂ ಇರುವುದಿಲ್ಲ. ಈ ಉದ್ದೇಶವಿಲ್ಲದಿರುವುದರಿಂದಲೂ ಆ ಉದ್ದೇಶಕ್ಕೆ ಪ್ರೇರಕವೂ ಕರ್ಮಲೇಪಜನ್ಯವೂ ಆದ ಮನೋವಿಕಾರಗಳಿಲ್ಲದಿರುವುದರಿಂದಲೂ ಬಾಹ್ಯ ಕಾರ್ಯಕ್ಕೆ ಸಾಧಕವಾದ ಶರೀರವಿಲ್ಲದಿರುವುದರಿಂದಲೂ ದೇವರು ಫಲ ಪ್ರಾಪ್ತಿಯ ಉದ್ದೇಶ ಮೂಲಕವಾದ ಯಾವ ಕೆಲಸವನ್ನೂ ಮಾಡುವುದಿಲ್ಲ; ಹಾಗೆ ಮಾಡಬೇಕಾದ ಅವಶ್ಯಕತೆಯೂ

ನಿರ್ಬಂಧವೂ ದೇವರಿಗಿರುವುದಿಲ್ಲ. ದೇವರು ನಿಖಿಲ ವಸ್ತು ಸಮೂಹವನ್ನು ತಿಳಿಯುವ ಮತ್ತು ನೋಡುವ ಅಪಾರ ಜ್ಞಾನದರ್ಶನಸ್ವರೂಪಿಯೂ ಅಪಾರ ಸುಖ ಸ್ವರೂಪಿಯೂ ಅಪಾರ ದಯಾಮಯನೂ ನಿರ್ದೋಷಿಯೂ ಅನಂತಶಕ್ತಿಸಂಪನ್ನನೂ ರೂಪರಸಗಂಧಸ್ಪರ್ಶ ರಹಿತನೂ ಪುರುಷಾಕಾರನೂ ನಿರ್ವಿಕಾರನೂ ಆಗಿರುತ್ತಾನೆ. ಒಂದು ವಾಕ್ಯದಿಂದ ಹೇಳುವುದಾದರೆ ಚೈತನ್ಯ ಪದಾರ್ಥದಲ್ಲಿರುವ ನಿಖಿಲಗುಣಗಳ ಪೂರ್ಣ ವಿಕಾಸದ ತುತ್ತತುದಿಯೇ ದೇವರು.

ದೈವಭಕ್ತಿ

ಮನುಷ್ಯನ ಅನುರಾಗ ಅಥವಾ ಪ್ರೀತಿಭಾವವು ಪಾತ್ರವಿಶೇಷದಿಂದ ನಾನಾ ರೂಪವನ್ನು ಹೊಂದುವುದೆಂಬುದು ನಮ್ಮ ನಮ್ಮ ಅನುಭವದಿಂದ ಎಲ್ಲರಿಗೂ ವೇದ್ಯ. ತನಗಿಂತ ಗುಣಾಧಿಕರ ವಿಷಯದಲ್ಲಿ ಉಂಟಾಗುವ ಗುಣಾನುರಾಗ ಮಿಶ್ರವಾದ ಪೂಜ್ಯ ಬುದ್ಧಿಗೆ ಭಕ್ತಿಯೆಂದು ಹೆಸರು. ಆ ಪವಿತ್ರ ಗುಣಗಳ ಪರಾಕಾಷ್ಠತೆಯೇ ದೇವರು. ಆದುದರಿಂದ ಮಾತಾಪಿತೃ ಗುರು ಮೊದಲಾದವರ ವಿಷಯದಲ್ಲಿರುವ ಭಕ್ತಿಗಿಂತಲೂ ದೇವರ ವಿಷಯದಲ್ಲಿರುವ ಮತ್ತು ಇರಬೇಕಾದ ಭಕ್ತಿಯು ಅತಿಶಯವಾದುದು. ಭಕ್ತಿ ಶಬ್ದಕ್ಕೆ ಸೇವೆಯೆಂದು ಅರ್ಥವಾದರೂ ಆ ಸೇವೆಗೆ ಗುಣಾನುರಾಗ ಮಿಶ್ರವಾದ ಪೂಜ್ಯ ಬುದ್ಧಿಯು ಮೂಲವಾಗಿರುವುದರಿಂದ ಕಾರಣದಲ್ಲಿ ಕಾರ್ಯದ ಉಪಚಾರವನ್ನು ಮಾಡಿ ಆ ಬುದ್ಧಿಯನ್ನು ಭಕ್ತಿಯೆಂದು ಕರೆದುದಾಗಿದೆ.

ಮನುಷ್ಯರ ಬುದ್ಧಿಯ ಉಪಯೋಗವು ಅಶುಭೋಪಯೋಗ ಶುಭೋಪಯೋಗ ಶುದ್ಧೋಪಯೋಗಗಳೆಂದು ಮೂರು ಪ್ರಕಾರವಾಗಿರುವುದು. ಪರದ್ರೋಹ–ಪರಾಪಕಾರಚಿಂತನೆ ಪರಹಿಂಸಾಚಿಂತನೆ ಮೊದಲಾದ ದುರ್ಭಾವನೆಗೆ ಅಶುಭೋಪಯೋಗವೆಂದೂ ಪರೋಪಕಾರಚಿಂತನೆ ಪ್ರಾಣಿರಕ್ಷಣಚಿಂತನೆ ಗುಣಿಗಳ ಗುಣಾನುರಾಗ ದೈವಭಕ್ತಿ ಮೊದಲಾದ ಶುಭ ಭಾವನೆಗೆ ಶುಭೋಪಯೋಗವೆಂದೂ ಶುದ್ಧಾತ್ಮಚಿಂತನೆಗೆ ಶುದ್ಧೋಪಯೋಗವೆಂದೂ ಹೆಸರು. ಅಶುಭೋಪಯೋಗದಿಂದ ಪಾಪ ಸಂಘಟನೆಯೂ ಶುದ್ಧೋಪಯೋಗದಿಂದ ಪುಣ್ಯ ಸಂಘಟನೆಯೂ ಶುದ್ಧೋಪಯೋಗದಿಂದ ಸಂಚಿತ ಪಾಪ ಪುಣ್ಯ ನಿವೃತ್ತಿಯೂ ಆಗುವುವೆಂದು ಸಿದ್ಧಾಂತ. ಅಶುಭೋಪಯೋಗಜನ್ಯವಾದ ಪಾಪದ ಫಲವು ದುಃಖ, ಶುಭೋಪಯೋಗಜನ್ಯವಾದ ಪುಣ್ಯದ ಫಲವು ಸುಖ, ಶುದ್ಧೋಪಯೋಗಜನ್ಯವಾದ ಸಂಚಿತ ಕರ್ಮನಿವೃತ್ತಿಯ ಫಲವು ಅತೀಂದ್ರಿಯ ಸುಖ—ನಿತ್ಯ ಸುಖ. ಈ ಶುದ್ಧೋಪಯೋಗವು ಪರಮ ಯೋಗಿಗಳಿಗೆ ಸಾಧ್ಯವಲ್ಲದೆ ನಮ್ಮಂತಹ ಗೃಹಸ್ಥರಿಗೆ ಸಾಧ್ಯವಲ್ಲ. ದುಃಖನಿವೃತ್ತಿಯೂ ಸುಖಪ್ರಾಪ್ತಿಯೂ ಆಗಬೇಕೆಂದಿಚ್ಛಿಸುವ ನಮ್ಮಂತಹ ಗೃಹಸ್ಥರಿಗೆ ಶುಭೋಪಯೋಗವು ಸಾಧ್ಯ. ಈ ಶುಭೋಪಯೋಗದಲ್ಲಿ ದೈವ ಭಕ್ತಿಯೇ ಕೊನೆಯದು ಅಂದರೆ ಸರ್ವಶ್ರೇಷ್ಠ. ಗ್ರಹಸ್ಥರು ಲೌಕಿಕ ಪಾರ ಲೌಕಿಕ ಸುಖದ ಪರಾಕಾಷ್ಠವನ್ನು ಹೊಂದಲು ದೈವಭಕ್ತಿಗಿಂತ ಮಿಗಿಲಾದ ಸಾಧನವಿಲ್ಲ. ಅಂದ ಮೇಲೆ ನಿರ್ದುಷ್ಟವಾದ—ಪವಿತ್ರವಾದ ದೈವ ಭಕ್ತಿಯು ಸಾಂಸಾರಿಕ ಸಕಲ ಸುಖವನ್ನು ಕೊಡಬಲ್ಲುದಾದ ಕಾಮಧೇನುವೆಂದರೆ ತಪ್ಪಾಗದು?

ದೇವರ ಸ್ತೋತ್ರ—ಗುಣಗಾನವನ್ನು ಮಾಡುವುದು, ಶುದ್ಧವಾದ ಜಲ ಗಂಧಾಕ್ಷತ ಪುಷ್ಪಫಲಾದಿ ಪವಿತ್ರ ವಸ್ತುಗಳಿಂದ ದೇವರನ್ನು ಪೂಜಿಸುವುದು. ದೇವರ ಗುಣಗಳನ್ನು ಸ್ಮರಿಸುವುದು, ಮನೋವಾಕ್ಕಾಯಗಳಿಂದ ದೇವರನ್ನು ವಂದಿಸುವುದು ಇವೇ ಮೊದಲಾದ ದೇವರ ವಿಷಯಕವಾದ ಶುಭ ಕ್ರಿಯೆಗಳು ದೈವ ಭಕ್ತಿಯ ಭೇದಗಳಾಗಿರುತ್ತವೆ. ಈ ಭಕ್ತಿಯು ದೇವರ ವಿಷಯಕವಾದುದಾದರೆ ಇವಕ್ಕೆ ಭೇದಭಕ್ತಿಯೆಂದೂ ತನ್ನ ಶುದ್ಧಾತ್ಮ ವಿಷಯಕವಾದುದಾದರೆ ಅಭೇದ ಭಕ್ತಿಯೆಂದೂ ಹೆಸರು ಈ ಅಭೇದ ಭಕ್ತಿಯು ಶುದ್ಧೋಪಯೋಗದ ನಾಮಾಂತರ. ಮೋಕ್ಷಕ್ಕೆ ಸಾಕ್ಷಾತ್ಸಾಧನವೂ ಮೇಲೆ ಹೇಳಿದಂತೆ ಪರಮಯೋಗಿಗಮ್ಯವೂ ಆದ ಈ ಅಭೇದ ಭಕ್ತಿ ಪ್ರಾಪ್ತಿಗೆ ಭೇದಭಕ್ತಿಯು ಅಂದರೆ ದೈವ ಭಕ್ತಿಯು ಸಾಧನವಾಗಿರುವುದು. ಆದುದರಿಂದ ಮೋಕ್ಷಕ್ಕಿದು ಪರಂಪರಾಸಾಧನವಾಗಿರುವುದೆಂದು ಬೇರೆ ಹೇಳಬೇಕೇಕೆ? ಭಕ್ತಿ, ಜ್ಞಾನ, ವೈರಾಗ್ಯಗಳಲ್ಲಿ ನಮ್ಮಂತಹ ಗೃಹಸ್ಥಾಶ್ರಮಿಗಳಿಗೆ ಈ ಕಾಲದಲ್ಲಿ ಜ್ಞಾನ ವೈರಾಗ್ಯಗಳು ಕಷ್ಟಸಾಧ್ಯಗಳಾಗಿರುವುವಾದರೂ ಭಕ್ತಿಯು ಸುಲಭಸಾಧ್ಯವಾಗಿರುವುದು. ಇದು ಸಾಂಸಾರಿಕ ಸುಖಕ್ಕೆ ಗಣಿ; ನಿತ್ಯ ಸುಖಕ್ಕೆ ಪ್ರಥಮಸೋಪಾನ.

ಲಲಿತ ಕಲೆ

ಶ್ರೀ ಅ. ನ. ಕೃಷ್ಣರಾಯ, ಬೆಂಗಳೂರು.

ಲಲಿತ, ಆದರ್ಶ ನೈಸರ್ಗಿಕ ಮೊದಲಾದ ವಿಶೇಷಣಗಳೊಂದಿಗೆ ಕಲೆ ಶಬ್ದವನ್ನು ನಾವು ಧಾರಾಳವಾಗಿ ಬಳಸುತ್ತ ಬಂದಿದ್ದೇವೆ. ಕಲಾವಿದ ಮಾಡಿದ ಕೃತಿಯನ್ನು ಒಂದು ಶ್ರೇಣಿಗೆ ಸೇರಿಸಿ, ಅದಕ್ಕೆ ಒಂದು ನಿಷ್ಕೃಷ್ಟವಾದ ಹೆಸರು ಕೊಟ್ಟ ಹೊರತು ವಿಮರ್ಶಕರಿಗೆ ಸಮಾಧಾನವಿಲ್ಲ. ವಿಷಯವು ಅತ್ಯಂತ ವಿಪುಲವೂ ವಿಶಾಲವೂ ಆದುದರಿಂದ ಅದನ್ನು ಒಂದು ಪ್ರಮಾಣದೊಳಗೆ ಅಳವಡಿಸಿದಲ್ಲಿ ಸಾಮಾನ್ಯ ಮನುಷ್ಯ ಅದರ ಅರ್ಥವನ್ನು ಗ್ರಹಿಸಬಹುದೆಂಬ ಉದ್ದೇಶ ಇದಕ್ಕೆ ಕಾರಣವಾಗಿರಬಹುದು.

ಇಂದು ನಾವು ಕಲೆಯನ್ನು ಹೆಚ್ಚು ಕಡಿಮೆ ಎರಡು ಭಾಗವಾಗಿ ವಿಂಗಡಿಸಿದ್ದೇವೆ. ಯಾವುದು ಕೇವಲ ಮಾನಸಿಕ ಉಲ್ಲಾಸವನ್ನು ಕೊಡುವುದೋ ಅದು ಲಲಿತ ಕಲೆ; ಯಾವುದು ಹೊಟ್ಟೆಯ ಹೋರಾಟಕ್ಕೆ ನೆರವಾಗುವುದೋ ಅದು ಉಪಯುಕ್ತ ಕಲೆ. ಲಲಿತಕಲೆ ನಿತ್ಯ ಜೀವನದ ದೃಷ್ಟಿಯಿಂದ ಪ್ರಯೋಜನಕಾರಿಯಲ್ಲ ಎಂಬ ಸಿದ್ಧಾಂತ ನಮ್ಮೆದುರು ನಿಲ್ಲುತ್ತದೆ. ಜೀನ್ ಪಾಲ್ ರೀಷರ್ ಸಮನ್ವಯ ತರಲೆತ್ನಿಸಿ 'ಕಲೆ ಜೀವನದ ಅನ್ನವಲ್ಲ–ಜೀವನದ ಮಧು'ವೆಂದು ಹೇಳುತ್ತಾನೆ. ಮಧುವಿಲ್ಲದೆ ಮನುಷ್ಯ ಬಾಳಬಹುದು, ಅನ್ನವಿಲ್ಲದೆ ಅವನು ಬದುಕಬಲ್ಲನೇ ಎಂದು ವಿಮರ್ಶಕ ಕೇಳುತ್ತಾನೆ.

ಲಲಿತ ಕಲೆಗಳಿಗೆ ದೊರೆತಿರುವ, ದೊರೆಯುತ್ತಿರುವ ಶ್ರೇಷ್ಠ ಸ್ಥಾನವನ್ನು ಟಾಲ್‌ಸ್ಟಾಯ್, ಎರಿಕ್ ಜಿಲ್ ಒಪ್ಪುವುದಿಲ್ಲ. ಸುಂದರವಾಗಿದ್ದರೂ ನಿಷ್ಪ್ರಯೋಜಕವಾದ ವಸ್ತುವನ್ನು ಸೃಜಿಸುವವನು ಆಲಸಿಗರಾದ ಶ್ರೀಮಂತರ ಕೈಗೂಸು, ಅವನಿಂದ ಜಗತ್ತಿನ ಕಲ್ಯಾಣವಾಗುವುದಿಲ್ಲ ಎಂದು ಅವರು ವಾದ ಮಾಡುತ್ತಾರೆ.

ಈ ವಾದವಿವಾದಗಳ ಸೂಕ್ಷ್ಮಾರ್ಥ ತಿಳಿಯುವುದಕ್ಕೆ ನಾವು ಮೊದಲು 'ಕಲೆಯೆಂದರೇನು' ಎಂದು ಖಚಿತಪಡಿಸಿಕೊಳ್ಳಬೇಕು. ಮಾನವ ಕಲ್ಯಾಣಕ್ಕೆ ಹೇತುವಾದುದು ಕಲೆ ಎಂದು ಟಾಲ್‌ಸ್ಟಾಯ್, ಮಾನವನ ಚಿತ್ತರಂಗ ದಿಗ್ದರ್ಶನವೇ ಕಲೆಯೆಂದು ಹೆಬ್ಬಲ್, ನಿಸರ್ಗದ ರಸಗಟ್ಟಿಯೇ ಕಲೆಯೆಂದು ಬಾಲ್‌ಜಾಕ್ ಜೀವನ ದರ್ಶನ ಮಾಡಿಸುವುದೇ ಕಲೆಯೆಂದು ಹ್ಯಾವಲಾಕ್ ಇಲ್ಲಿಸ್, ನಾಡಿನ ಸಂಸ್ಕೃತಿಯ ಪ್ರತೀಕವೇ ಕಲೆಯೆಂದು ಸಿ. ಇ. ಎಮ್. ಜೋಡ್, ಆತ್ಮದರ್ಶನ ಮಾಡಿಸುವುದೇ ಕಲೆಯೆಂದು ಅರವಿಂದ ಯೋಗಿಗಳು ಅಭಿಪ್ರಾಯ ಪಡುತ್ತಾರೆ.

ಕಲೆಯ ಸಂಬಂಧ ಜೀವನ, ಧರ್ಮ, ಸಂಸ್ಕೃತಿಗಳೊಂದಿಗೆ ನಿಕಟವಾಗಿರುವಂತೆ ಕಂಡು ಬರುತ್ತದೆ. ಈ ಸಂಬಂಧವನ್ನು ನಾವು ಸ್ವಲ್ಪ ವಿವರವಾಗಿ ವಿಚಾರ ಮಾಡುವುದಗತ್ಯ.

ಕಲಾವಿದನಿಗೂ ಜೀವನಕ್ಕೂ ವಿಚಿತ್ರ ಸಂಬಂಧ ವೇರ್ಪಟ್ಟಿರುತ್ತದೆ. ಜೀವನವನ್ನು ಒಂದು ಸಮಾಜದ ಮಾನದಂಡದಿಂದ ಅಳೆಯುವಾಗ ಕಲಾವಿದ ಸಮಾಜದ ಮುಖಂಡನೂ ಆಗುತ್ತಾನೆ, ಸಮಾಜ ಬಾಹಿರನೂ ಆಗುತ್ತಾನೆ. ಸಮಾಜ ನಡೆಸುವ ಜೀವನವನ್ನು ಅವನು ಒಪ್ಪಬಹುದು, ಒಪ್ಪದಿರಬಹುದು. ಅವನು ಒಪ್ಪಿದಾಗ ಸಮಾಜ ಅವನನ್ನು ಆದರಿಸುತ್ತದೆ, ತನ್ನ ಪ್ರತಿನಿಧಿಯಾಗಿ ಪರಿಗ್ರಹಿಸುತ್ತದೆ. ಸಮಾಜ ರವಿವರ್ಮನಿಗೆ ಕೊಡುವ ಮಾನ್ಯತೆಯನ್ನು ಜಾಮಿನಿರಾಯನಿಗೆ ಕೊಡುವುದಿಲ್ಲ. ಸಮಾಜವನ್ನು ಸಮಾಜದ ಕಣ್ಣಿಂದಲೇ ನೋಡುವ ಗುಣ ರವಿವರ್ಮನಿಗೆ ಸಾಧಿಸಿದ್ದರೆ, ಅದನ್ನು ತನ್ನ ಕಣ್ಣಿನಿಂದ ನೋಡುವ ಗುಣ ಜಾಮಿನಿರಾಯನಿಗೆ ಸಾಧಿಸಿದೆ.

ಜೀವನ ಹಲವು ಬಣ್ಣಗಳನ್ನು ಹಲವು ಬಗೆಯಲ್ಲಿ ಚೆಲ್ಲುವ ಕಾಮನ ಬಿಲ್ಲಿನಂತಿದೆ. ಅದರ ಸಮಗ್ರ ನೋಟ ಸಿಗುವುದು ದುಸ್ತರ. ಸಮಾಜ, ಸಂಪ್ರದಾಯದ ಕಣ್ಣಿನಲ್ಲಿ ಜೀವನವನ್ನು ನೋಡಿದರೆ ಕಲಾವಿದ, ವೈಯಕ್ತಿಕ, ಪ್ರತಿಭೆ ವಿಚಾರಗಳ ಕಣ್ಣಿನಿಂದ ನೋಡುತ್ತಾನೆ. ಅವನ ನೋಟ ಸಂಪ್ರದಾಯದ ನೋಟಕ್ಕಿಂತ ತೀಕ್ಷ್ಣ. ಅವನು ಇದ್ದುದನ್ನು ನೋಡುವಂತೆ ಇರಬೇಕಾದುದನ್ನೂ ನೋಡುತ್ತಾನೆ. ತನ್ನ ನಿಜ ರೂಪ ದರ್ಶನ ಮಾಡಿಸುವ ಕಲಾವಿದನ ಎದೆಗಾರಿಕೆಗೆ ಅಂಜಿ ಸಮಾಜ ಅವನನ್ನು ತುಳಿಯಲೆತ್ನಿಸುತ್ತದೆ.

ಆದರೆ ಕಲಾವಿದನ ನೋಟ ಸತ್ಯಪೂರ್ಣವಾದುದೇ? ಪ್ರತಿಭೆಯ ಪ್ರಭಾವಕ್ಕೆ ಸಿಲುಕಿಯೋ, ಮಾನಸಿಕ ವಿಭ್ರಾಂತಿಯಿಂದಲೋ ಅವನು ಜೀವನದ ವಿಡಂಬನೆ ಮಾಡುತ್ತಿರಬಾರದೇಕೆ? ಅವನು ಕಂಡುದು ಸತ್ಯವಾದರೆ ಇತರರು ಕಂಡುದೂ ಸತ್ಯವಾಗಿರಬೇಕು? ಸತ್ಯಕ್ಕೆ ಎಷ್ಟು ಮುಖವಿದೆ? ಪ್ರತಿಯೊಬ್ಬನೂ ತಾನು ಕಂಡುದು, ಆಡುವುದೇ ಸತ್ಯವೆಂದು ಸಾರುತ್ತ ಬಂದರೆ ನಾವು ಯಾವದನ್ನು ಸತ್ಯವೆಂದು ಪರಿಗ್ರಹಿಸಬೇಕು ಎಂಬ ಸಮಸ್ಯೆಗಳು ತಲೆದೋರುತ್ತವೆ.

ಸತ್ಯದ ವ್ಯಾಖ್ಯೆ ಬದಲಾಯಿಸಬಹುದು, ಆದರೆ ಸತ್ಯ ತನ್ನ ಸ್ವರೂಪವನ್ನು ಬದಲಾಯಿಸುವುದಿಲ್ಲ. 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂದು ಹೇಳಿದ ಉಪನಿಷತ್ತಿನ ಋಷಿ ಇದೇ ತತ್ತ್ವವನ್ನು ಮಂಡಿಸುತ್ತಿದ್ದಾನೆ. ಹೇಳುವ ಮಾತು ಹಲವು ಬಗೆಯಾದರೂ ಅದರ ಹಿಂದಣ ಮನೋಭಾವ ಒಂದೇ ಆಗಿರುತ್ತದೆ. ಒಬ್ಬನಿಗೆ ಕಲೆ ದಾರಿ ತೋರಿಸಬಹುದು, ಇನ್ನೊಬ್ಬನಿಗೆ ಯೋಗ ದಾರಿ ತೋರಿಸಬಹುದು, ಮಗದೊಬ್ಬನಿಗೆ ಕರ್ಮ ದಾರಿ ತೋರಿಸಬಹುದು. ಇವರೆಲ್ಲಾ ಮುಟ್ಟುವುದು ಒಂದೇ ಗುರಿಗೆ. ಎರಡು ಭಿನ್ನ ಸಂಪ್ರದಾಯಗಳಿಗೆ ಸೇರಿದ ಗ್ರೀಕರ, ಭಾರತೀಯರ ತತ್ತ್ವ ದರ್ಶನದಲ್ಲಿ ಸಮದರ್ಶನ ಕಂಡು ಬರುತ್ತದೆ. ಐಹಿಕಾನಂದೇಚ್ಛುಗಳಾದ ಗ್ರೀಕರೂ ಸತ್ಯ, ಸೌಂದರ್ಯ, ಶೀಲಗಳಿಗೆ ಬೆಲೆಯಿತ್ತರು; ಆಮುಷ್ಮಿಕಾನಂದೇಚ್ಛುಗಳಾದ ಭಾರತೀಯರು ಸತ್ಯಂ, ಶಿವಂ, ಸುಂದರಂ ಎಂದು ಸಾರಿದರು.

ಕಲೆಗೆ ಮಾನದಂಡವನ್ನು ಗೊತ್ತುಪಡಿಸುವಾಗ ಟಾಲ್‌ಸ್ಟಾಯ್ ಮೂರು ಗುಣಗಳ ಕಡೆಗೆ ನಮ್ಮ ಲಕ್ಷ್ಯವನ್ನೆಳೆಯುತ್ತಾನೆ. (೧) ನಿರ್ಮಾಣವಾಗುವ ಕಲಾಕೃತಿಗೂ, ನಿರ್ಮಾತೃವಾದ ಕಲಾವಿದನಿಗೂ ನಿಕಟವಾದ ನೈತಿಕ ಸಂಬಂಧವಿರಬೇಕು. (೨) ಕಲಾಕೃತಿಯ ಆಕಾರ ಸುಂದರವಾದುದಾಗಿರಬೇಕು. ಉಚ್ಚಾರಣೆ ಸುಲಭವಾಗಿರಬೇಕು. (೩) ತಾನು ಚಿತ್ರಿಸುವ ವಸ್ತುವಿನ ಬಗ್ಗೆ ಕಲಾವಿದ ಶ್ರದ್ಧಾವಂತನಾಗಿರಬೇಕು. ಅದರಲ್ಲಿನ ಒಳ್ಳೆಯದನ್ನು ಅವನು ಪ್ರೀತಿಸುವವನೂ, ಕೆಟ್ಟದನ್ನು ದ್ವೇಷಿಸುವವನೂ ಆಗಿರಬೇಕು. ಟಾಲ್‌ಸ್ಟಾಯ್ ಹೆಚ್ಚು ಕಡಿಮೆ ಸತ್ಯ, ಶಿವ, ಸುಂದರ ತತ್ತ್ವವನ್ನು ಒಪ್ಪಿಕೊಂಡು ಮಂಡಿಸುತ್ತಿದ್ದಾನೆ.

ಕಲಾಕೃತಿ ಸತ್ಯ ಸೌಂದರ್ಯಗಳಿಂದ ಕೂಡಿದ್ದರೆ ಸಾಲದು, ಅದು ಶಿವಮಯವಾಗಿರಬೇಕು. ಆ ಕೃತಿಯಿಂದ ಲೋಕಕ್ಕೆ ಮಂಗಳ (ಶಿವ)ವಾಗಬೇಕು ಎನ್ನುವ ಪ್ರಸ್ಥಾನದಿಂದ ಹೊರಡುವ ಕಲಾವಿದ ಇತರ ಜಿಜ್ಞಾಸುಗಳು, ಮುಮುಕ್ಷುಗಳು ಮುಟ್ಟುವ ಗುರಿಯನ್ನೇ ಮುಟ್ಟುತ್ತಾನೆಂಬುದು ಸ್ವತಃಸಿದ್ಧ.

'ಸತ್ಯವನ್ನು ಹೇಳು—ಆದರೆ ಹೇಳುವುದನ್ನು ಪ್ರಿಯವಾಗುವಂತೆ ಹೇಳು' ಎನ್ನುವುದು ಭಾರತೀಯರ ಅಭಿಮತ. ಪಾಶ್ಚಾತ್ಯ ವಿಚಾರವಂತರಿಗೂ ಭಾರತೀಯರ ವಿಚಾರವಾಹಿನಿಗೂ ಇಲ್ಲಿ ವಿಶೇಷ ಅಂತರ ಕಂಡು ಬರುತ್ತದೆ. ಜೀವನವನ್ನು ಹೆಚ್ಚು ಹೆಚ್ಚು ಸುಂದರವಾಗಿ ಮಾಡುತ್ತ ಹೋಗುವುದೇ ಕಲಾವಿದನ ಗುರಿ. ಅದರಲ್ಲಿ ಕಾಳ್ಕೆಯಿಲ್ಲವೆಂದಲ್ಲ. ಆದರೆ ಕಾಳ್ಕೆಯನ್ನು ಎತ್ತಿ ತೋರಿ, ಮೊದಲೇ ವ್ಯಗ್ರವಾಗಿರುವ ಮನಸ್ಸನ್ನು ಮತ್ತಷ್ಟು ವ್ಯಗ್ರಮಾಡುವುದರಲ್ಲಿ ಅರ್ಥವಿಲ್ಲ, ಪ್ರಯೋಜನವಿಲ್ಲ. ದುಃಖವಿದೆಯೆನ್ನುವುದನ್ನು ಒಪ್ಪಿಕೊಂಡರೂ ಆ ಕಡೆಗೆ ಲಕ್ಷ್ಯಕೊಡದೆ ಮಾನವ ಕೇವಲ ಆನಂದ ಸಾಧಕನಾದರೆ ಅವನ ಬಾಳು ಹಸನಾಗುತ್ತದೆ, ರಮ್ಯವಾಗುತ್ತದೆ ಎಂದು ನಂಬಿದ ಭಾರತೀಯರು ರುದ್ರ, ಭೀಭತ್ಸ, ಭಯಾನಕ ರಸಗಳನ್ನು ಗೌಣವಾಗಿ ಭಾವಿಸಿದರು. ಅವರ ಕಾವ್ಯ, ನಾಟಕಗಳೆಲ್ಲಾ ಸುಖಪರ್ಯವಸಾಯಿಯಾದವು. ಗ್ರೀಕ್ ತತ್ತ್ವಜ್ಞಾನದಿಂದ ಸ್ಫೂರ್ತಿಗೊಂಡ ಪಾಶ್ಚಾತ್ಯ ಜಗತ್ತು, ಜೀವನದ ಕಾಳ್ಕೆಯನ್ನು ಕಳೆಯದಿದ್ದರೆ, ಮಲಿನವನ್ನು ತೊಳೆಯದಿದ್ದರೆ ಅದರ ಸೌಂದರ್ಯ ಮಸುಕಾಗುತ್ತದೆ. ಕನ್ನಡಿ ಸ್ಪಷ್ಟವಾಗಿ ಕಾಣಬೇಕಾದರೆ, ಅದಕ್ಕೆ ಹತ್ತಿಕೊಂಡಿರುವ ಹೊಗೆಯ ಅವಕುಂಠನವನ್ನು ನಿವಾರಿಸಬೇಕು. ಜೀವನದಲ್ಲಿ ಶುಚಿ ಅಶುಚಿ, ಹೊಲಬು ಪರಿಶುದ್ಧತೆ, ಆಕಾರ ವಿಕಾರಗಳೆರಡೂ ಸಮಸಮವಾಗಿ ಸೇರಿಕೊಂಡಿರುತ್ತವೆ. ಅವುಗಳನ್ನು ಇಂಗಡಿಸಿ ತೋರಿಸಬೇಕಾದುದಗತ್ಯ. ಸತ್ಯಾರ್ಥಿಯಾದವನು ಹೊಲಬಿನ ಕಡೆ ಕಣ್ಣು ಮುಚ್ಚಬಾರದು. ಅದನ್ನು ದಿಟ್ಟತನದಿಂದ ನೋಡಿ, ಅದರ ಮಾಲಿನ್ಯವನ್ನು ಕಳೆಯಬೇಕು ಎಂದು ವಾದ ಮಾಡಿದರು. ಇಬ್ಸನ್, ಷಾ, ಫ್ಲಾಬೋ, ವ್ಯಾಗ್ನರ್ ಇವರ ಕೃತಿಗಳು ಈ ಉದ್ದೇಶದಿಂದಲೇ ರೂಪುಗೊಂಡಿವೆ.

ಕಲೆಗೂ ಧರ್ಮಕ್ಕೂ ಇರಬೇಕಾದ ಸಂಬಂಧ

ವಾದಗ್ರಸ್ತವಾದುದು. ಮಾನವನಿಗೆ ಋಜು ಬಾಳ್ವೆಯ ಪರಿಚಯ ಮಾಡಿಸುವ ಜೀವನ ಕಲೆಯೇ ಧರ್ಮವೆಂದು ಒಪ್ಪಿಕೊಂಡರೆ ಈ ಸಂಬಂಧದಲ್ಲಿ ಅವಿನಾಭಾವ ಕಂಡು ಬರುತ್ತದೆ. ಜಗತ್ತಿನ ವಿವಿಧ ಭಾಗಗಳ ಶ್ರೇಷ್ಠ ಕಲೆ ಧರ್ಮದಿಂದಲೇ ಪ್ರೇರಿತವಾದುದು. ಮೈಖೇಲ್ ಏಂಜಲೋ, ಬೊಟಾಸಿಲಿ, ರಾಫೇಲ್, ರೆಂಬ್ರ್ಯಾಂಟ್, ಅಜಂತೆಯ ಚಿತ್ರಕಾರರು ಮೊದಲಾದ ಕುಂಚ ಶಿಲ್ಪಿಗಳೂ, ಬಾಕ್, ಬಿಥೊವನ್, ಮೊಜಾರ್ಟ್, ತ್ಯಾಗರಾಜ, ಪುರಂದರ ಮೊದಲಾದ ನಾದ ಶಿಲ್ಪಿಗಳೂ, ವಾಲ್ಮೀಕಿ, ಹರಿಹರ, ಬ್ಲೇಕ್, ಡಾನ್, ಅಕೆಂಪಿಸ್, ಅಕ್ಕ ಮಹಾದೇವಿ ಮೊದಲಾದ ಶಬ್ದ ಶಿಲ್ಪಿಗಳೂ ಧರ್ಮದಿಂದಲೇ ಸ್ಫೂರ್ತಿಗೊಂಡವರು. ಆದರೆ ಧರ್ಮದ ದಾರಿಯಲ್ಲೇ ಕಲೆ ನಡೆಯಬೇಕು, 'ಕಲೆ ಧರ್ಮದ ಛಾಯಾನುವರ್ತಿಯಾಗಿರಬೇಕು' ಎಂಬ ವಾದ ತಕ್ಕುದಲ್ಲ. ಧರ್ಮದ ಸಮಗ್ರ ನೋಟವನ್ನು ತಂದುಕೊಳ್ಳುವುದು ಎಷ್ಟು ಕಷ್ಟವೊ ಜೀವನದ ಸಮಗ್ರ ನೋಟವನ್ನು ತಂದುಕೊಳ್ಳುವುದೂ ಅಷ್ಟೇ ಕಷ್ಟ. ಧರ್ಮದ ಪ್ರಚಂಡ ಪ್ರಭಾವವನ್ನು ನೋಡಲಾಗದ ಮಾನವ ಅದರ ಒಂದು ಅಂಶವನ್ನೇ ಆಶ್ರಯಿಸಿ ತೃಪ್ತನಾಗುತ್ತಾನೆ. ಅದೇ ಪರಿಪೂರ್ಣವೆಂಬ ಕಲ್ಪನೆ, ಭ್ರಾಂತಿ ಅವನಲ್ಲಿ ಮೊಳೆಯುತ್ತದೆ. ಶ್ರೀ ಕೃಷ್ಣನ ವಿಶ್ವರೂಪ ದರ್ಶನ ಮಾಡಲಸಮರ್ಥನಾದ ಪಾರ್ಥ 'ಸ್ವಾಮಿ—ನನಗೆ ಈ ಬೃಹತ್ ನೋಟ ಸಾಕು. ನೀನು ನನ್ನ ಗೆಳೆಯ ಕೃಷ್ಣನಾಗಿಯೇ ಕಾಣಿಸಿಕೋ' ಎಂದು ಬೇಡಿದನಂತೆ. ಪಾರ್ಥನ ಶ್ರೀ ಕೃಷ್ಣ ಸರ್ವಾಂತರ್ಯಾಮಿಯೂ ವಿಶ್ವರೂಪಿಯೂ ಆದ ಭಗವಂತನೇ ಹೌದು; ಆದರೆ ಭಗವಂತ ಶ್ರೀ ಕೃಷ್ಣ ಮಾತ್ರವೇ ಅಲ್ಲ. ಅವನ ರೂಪ, ಪ್ರಭಾವ, ಪ್ರಕಾಶ ಅದಕ್ಕಿಂತಲೂ ನೂರ್ಮಡಿ ಮಿಗಿಲಾದುದು. ಧರ್ಮಾನುವರ್ತಿಯಾದ ಕಲೆಯಲ್ಲಿ ಈ ಸಂಕುಚಿತ ಭಾವನೆ ಅನಿವಾರ್ಯವಾಗುತ್ತದೆ. ಸ್ಥಿತಪ್ರಜ್ಞನಾದ ಕಲಾವಿದ ಸೂರ್ಯರಶ್ಮಿಯಲ್ಲಿ ತೃಪ್ತನಾಗುವುದಿಲ್ಲ. ಅವನಿಗೆ ಸ್ವಯಂ ಸೂರ್ಯನೇ ಬೇಕು.

ಈಶಾವಸ್ಯೋಪನಿಷತ್ತಿನ ಶಾಂತಿ ಮಂತ್ರವನ್ನು ಸುರಿದ ಮಹರ್ಷಿ ಇದೇ ತತ್ತ್ವವನ್ನು ಪ್ರತಿಪಾದಿಸುತ್ತಾನೆ.

''ಓಂ ಪೂರ್ಣಮದಃ ಪೂರ್ಣಮಿದಃ ಪೂರ್ಣಾರ್
ಪೂರ್ಣ ಮುದಚ್ಯತೆ ॥
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವ ಶಿಷ್ಯತೆ ॥

"ಪರಾತ್ಪರ ವಸ್ತುವು ಸರ್ವ ಸಂಪೂರ್ಣವಾದುದು. ಪೂರ್ಣದಿಂದ ಪೂರ್ಣದ ಉತ್ಪತ್ತಿಯಾಗುವುದು. ಪೂರ್ಣದೊಳಗಿಂದ ಪೂರ್ಣವನ್ನು ಕಳೆದರೂ ಪೂರ್ಣವು ಅಚ್ಚಳಿಯದೆ ಉಳಿಯುವುದು."

ಪೂರ್ಣತೆಯ ಕಡೆಗೆ ಧರ್ಮಜಿಜ್ಞಾಸು ಒಂದು ಮಾರ್ಗದಿಂದ ಹೋದರೆ ಕಲಾವಿದ ಬೇರೊಂದು ಮಾರ್ಗದಿಂದ ಹೋಗುತ್ತಾನೆ. ಆದರೆ ಎಲ್ಲಿ ಕಲಾವಿದನ ಮನಸ್ಸೂ ಧರ್ಮ ಜಿಜ್ಞಾಸುವಿನ ಮನಸ್ಸಿನಂತಿರುವುದೋ ಅಲ್ಲಿ ಧರ್ಮ, ಕಲೆಗಳ ಮಧುರ ಸಂಯೋಗವನ್ನು ನಾವು ಕಾಣುತ್ತೇವೆ. ಅಂಥ ಅಪ್ರತಿಮ ಮನೋಭಾವನೆ ಪಡೆದ ಶಿಲ್ಪಿ ಶ್ರವಣಬೆಳಗೊಳದ ಗೋಮಟೇಶ್ವರ ಸ್ವಾಮಿಯನ್ನು ಕಡೆಯುತ್ತಾನೆ, ಗೀತಾಗೋವಿಂದ ಬರೆಯುತ್ತಾನೆ, ಒಂಭತ್ತನೆಯ ಸಿಂಫನಿ ಹಾಡುತ್ತಾನೆ.

ಕಲಾವಿದ ನಾಡ ಸಂಸ್ಕೃತಿಯನ್ನು ರೂಪುಗೊಳಿಸುವ ರೂವಾರಿ. ಆದರೆ ನಾಡಿನಲ್ಲಿ ಹಲವು ಸಾವಿರ ವರ್ಷಗಳಿಂದ ಬೆಳೆದು ಬಂದ ಸಂಸ್ಕೃತಿಯ ಪರಂಪರೆಯಲ್ಲಿ ಬಂದ ಕಲಾವಿದ ಅದನ್ನು ತೊಳೆದು ಬೆಳಗಿಸುವ ಉದ್ಯಮದಲ್ಲಿ ಪ್ರವರ್ತನಾಗುವುದಲ್ಲದೆ, ಆ ಸಂಸ್ಕೃತಿಗೆ ತನ್ನ ವಿಶಿಷ್ಟ ಕಾಣಿಕೆಯನ್ನು ಅರ್ಪಿಸುತ್ತಾನೆ.

ಕಲೆ ನಾಡ ಸಂಸ್ಕೃತಿಯ ಪ್ರತೀಕವಾದುದನ್ನು ಭಾರತ ವರ್ಷದಲ್ಲಿಯೇ ನಾವು ನೋಡಬಹುದು. ವೇದಾಂತ, ಬೌದ್ಧಧರ್ಮಗಳ ಪ್ರಭಾವ ಉಜ್ವಲವಾಗಿದ್ದ ಕಾಲದಲ್ಲಿ ಅಜಂತೆಯ ಚಿತ್ರಕಾರರು ತಮ್ಮ ಅಮರ ಕೃತಿಗಳನ್ನು ರಚಿಸಿದರು. ಮಧ್ಯಕಾಲದಲ್ಲಿ ಇಸ್ಲಾಮಿನ ಸಂಸ್ಕೃತಿ ಅದರ ಭೋಗ ಜೀವನ ವ್ಯಾಪಿಸಿದಾಗ ರಜಪೂತ, (ಕಾಂಗ್ರಾ) ಮತ್ತು ಮುಘಲ ಚಿತ್ರಕಲಾ ಸಂಪ್ರದಾಯಗಳು ಬೆಳೆದವು. ಇಂದು ಕ್ರಾಂತಿಯೇ ಜೀವನದುಸಿರಾಗಿರುವಾಗ ಜಾಮಿನಿರಾಯರ ಕಲೆ ಬೆಳೆಯುತ್ತಿದೆ. ಧರ್ಮದ ಪ್ರಾದುರ್ಭಾವವಿದ್ದ ಕಾಲಕ್ಕೆ ಭರತನಾಟ್ಯ ಶಾಸ್ತ್ರ, ಸಂಗೀತ, ಕಥಾವಳಿ ತಲೆಯೆತ್ತಿದವು, ವಿಲಾಸಕ್ಕೆ ಬೆಲೆ ಬಂದ ಮಧ್ಯಕಾಲದಲ್ಲಿ ಹಿಂದುಸ್ಥಾನಿ ಸಂಪ್ರದಾಯ ಬೆಳೆಯಿತು. ಕಥಕ್ ನಾಟ್ಯ ಪ್ರಚಾರಕ್ಕೆ ಬಂದಿತು. ಈಗಿನ ಅಲ್ಲೋಲ ಕಲ್ಲೋಲ ಜೀವನಕ್ಕನುಗುಣವಾಗಿ ಕಲೆಬೆರಕೆ ಸಿನೀಮಾ ಸಂಗೀತ ಬೆಳೆಯುತ್ತಿದೆ.

ಪರಂಪರೆ, ಪರಿಸ್ಥಿತಿ ಎರಡೂ ಕಲಾವಿದನನ್ನು ಸದಾ ಜಗ್ಗುತ್ತಲೇ ಇರುತ್ತವೆ. ಆದರೆ ಕ್ರಿಯಾಶಾಲಿಯಾದ ಕಲಾವಿದ ಅವುಗಳ ನೊಗಭಾರದಿಂದ ಕುಗ್ಗುವುದಿಲ್ಲ. ತನ್ನ ಪ್ರತಿಭೆಯ ಮೇಲೆ ಇವು ಪ್ರಭಾವ ಚೆಲ್ಲಿ, ರೂಢಿಮಾರ್ಗದಲ್ಲಿ ಒಯ್ಯದಂತೆ ಎಚ್ಚರವಾಗಿದ್ದು ತನ್ನ ಪಳವಿಗೆಯನ್ನು ಈ ಕುರುಕ್ಷೇತ್ರದ ಮಧ್ಯೆ ನೆಡುತ್ತಾನೆ.

ಲಲಿತ ಕಲಾವಿದ ತನ್ನ ಕೃತಿಯಿಂದ ಸಾಧಿಸುವುದು ಮಾನವ್ಯದ ಪೂರ್ಣವಿಕಾಸ, ಆತ್ಮನ ಅನಂತ, ಅಮರ ಸ್ವರೂಪದರ್ಶನ. ಅರವಿಂದರ ಮಾತಿನಲ್ಲಿ ಹೇಳಬೇಕಾದರೆ

"To suggest the strength and virile unconquerable force of the divine Nature in man and in the outside world its energy, its calm, its powerful inspiration, its august enthusiasm, its wildness, its greatness, attractiveness, to breathe that into man's soul and gradually mould the finate into the image of the infinate is another spiritual utility of Art. This is its loftiest function, its fullest consummation, its most perfect previlege"

ವಿದ್ಯಾಸಂಸ್ಥೆಗಳ ದೃಷ್ಟಿಕೋನ ಬದಲಾಗಲಿ

ಶ್ರೀ ಎಸ್. ಮುಕುಂದ ರಾವ್, ಎಂ. ಎ., ಎಲ್. ಟಿ., ಮಂಗಳೂರು.

ಪ್ರಾಚೀನ ಕಾಲದ ಭಾರತದಲ್ಲಿ ಸರ್ವಮಾನ್ಯ ವಿದ್ಯೆಯೆಂಬುದು ಕೆಲವರಿಗೆ ಮಾತ್ರವೆಂದಿತ್ತು. ಹೀಗೆ ಹೇಳಿದೊಡನೆ ಸ್ವಾರ್ಥಿಗಳಾದ ಕೆಲವರು ವಿದ್ಯೆಯನ್ನು ತಮಗೆಂದೇ ಗೋಪ್ಯವಾಗಿಟ್ಟುಕೊಂಡು ಇತರರನ್ನು ಅಜ್ಞಾನದಲ್ಲಿ ನರಳಿಸಿದರೆಂದರ್ಥವಲ್ಲ. ಉಚ್ಚವಿದ್ಯೆಯನ್ನು ಕಲಿಯಲಾಶಿಸುವವರು ಬುದ್ಧಿಯ ಚುರುಕನ್ನು ಪ್ರದರ್ಶಿಸಿದರೆ ಸಾಲದಿತ್ತು, ನೀತಿ ನಿಯಮ ಸಂಯಮಗಳನ್ನೂ ಪಾಲಿಸಬೇಕಿತ್ತು; ವಿದ್ಯಾರ್ಥಿ ದೆಸೆಯೆಂದರೆ ಬ್ರಹ್ಮಚರ್ಯ, ದೇವರ ಸಮಕ್ಷಮದಲ್ಲೇ ಇರುವಂಥ ನಡತೆಯಲ್ಲಿರಬೇಕಿತ್ತು. ಇಂಥ ಶಿಸ್ತು, ಸಂಯಮಗಳನ್ನು ಪಾಲಿಸಲಾರದ ಹಲವರಿಗೆ 'ಮಂತ್ರೋಪದೇಶ' ದೊರಕುತ್ತಿರಲಿಲ್ಲ. ಹಾಗೆಂದು ಹಲವರು ಸಂಪೂರ್ಣ ವಿದ್ಯಾವಿಹೀನರೇ ಆಗಿದ್ದರೆಂದು ತಿಳಿಯಲೂ ಬಾರದು. ಅವರು ಸಹ ತಮ್ಮ ವಂಶಪಾರಂಪರ್ಯದ ವೃತ್ತಿಯನ್ನು ತಂತಮ್ಮ ಹಿರಿಯರಿಂದ ಕಲಿತು ತಂತಮ್ಮ ಕಟ್ಟಿನ ಕಟ್ಟುಕಟ್ಟಳೆಗಳನ್ನು ತಿಳಿದು ಅಂತೆಯೇ ನಡೆಯಬೇಕಿತ್ತು. ಅವರಿಗೂ ಪುರಾಣ, ಕಥೆ, ದೃಶ್ಯಕಾವ್ಯಗಳಿಂದ ಸಂಸ್ಕೃತಿಯ ಲೇಪ ಕೊಡುತಿದ್ದರು. ಆದರೆ ಅವರನ್ನು ಜ್ಞಾನಿಗಳೆಂದಾಗಲಿ ಯಾವ ಸ್ಥಾನಕ್ಕೂ ಯೋಗ್ಯರೆಂದಾಗಲೀ ಯಾರೂ ಎಣಿಸುತ್ತಿರಲಿಲ್ಲ.

ಯುರೋಪಿನಲ್ಲಿ ಸಹ ಹೆಚ್ಚುಕಡಿಮೆ ಇದೇ ರೀತಿ ಇತ್ತು. ಗುರುಮಠವನ್ನು ಹೊಕ್ಕು ಮುಂದೆ ಗುರುಗಳಾಗ ಬಯಸುವವರೂ ಅವರ ಸಮಾನಸ್ಕಂಧರೂ ವಿಶೇಷ ವಿದ್ಯೆಯನ್ನು ಪಡೆಯುತ್ತಿದ್ದರಲ್ಲದೆ ಇತರರು ಆಯಾ ವೃತ್ತಿಯ ಹಿರಿಯರ ಸೇವೆ ಮಾಡಿ 'ಎಪ್ರೆಂಟಿಸ್' ಎಂದು ಗಣಿಸಲ್ಪಟ್ಟು ತಕ್ಕ ವೃತ್ತಿಶಿಕ್ಷಣವನ್ನು ಪಡೆಯುತ್ತಿದ್ದರು.

ಫ್ರಾನ್ಸಿನಲ್ಲಿ ಕ್ರಾಂತಿಯುಂಟಾದ ನಂತರ ರಾಜದಂಡವು ದೇವದತ್ತವಲ್ಲ, ಪ್ರಜಾದತ್ತವೆಂಬ ತತ್ವವೇ ಸಾಮಾನ್ಯವಾಗುತ್ತ ಬಂದಾಗ ಹಲವರಿಗೂ ವಿದ್ಯಾದಾನ ಮಾಡುವ ಅಗತ್ಯ ಬಿತ್ತು. ರಾಷ್ಟ್ರದ ರಥವನ್ನು ನಡೆಸುವವರು ಹಲವರಿಂದ ಆರಿಸಲ್ಪಡಬೇಕು, ಆರಿಸುವಾಗ ಪ್ರತಿಯೊಬ್ಬನಿಗೂ ತನ್ನ ಮತ ಕೊಡುವ ಅಧಿಕಾರವಿರಬೇಕು, ಯಾವನೊಬ್ಬ ವ್ಯಕ್ತಿಯ ಮತಕ್ಕೂ ಇನ್ನೊಬ್ಬನ ಮತಕ್ಕಿಂತ ಹೆಚ್ಚಿನ ಬೆಲೆಯಿರಕೂಡದು ಎಂಬ ಪ್ರಜಾತಂತ್ರದ ಸೂತ್ರಗಳು ಆಚರಿಸಲ್ಪಡುವಾಗ ಪ್ರಜೆಗಳೇ ಆಳುವವರಾಗುವಾಗ ಮಂತ್ರಿಗಳೂ ಶಾಸನಕರ್ತರೂ ತಮ್ಮ ಭವಿಷ್ಯವನ್ನು ನಿಶ್ಚಯಿಸುವವರಿಗೆ ಒಂದಿಷ್ಟಾದರೂ ಜ್ಞಾನವಿರಲಿ ಎಂದು ಪ್ರಯತ್ನಿಸುವುದು ಸಹಜವೇ ಸರಿ.

ಸಾರ್ವತ್ರಿಕ ಶಿಕ್ಷಣ ಪದ್ಧತಿಯಿಂದ ಇಂಗ್ಲಾಂಡು ಮೊದಲಾದ ದೇಶಗಳಲ್ಲಿ ಪ್ರಬುದ್ಧ ಪ್ರಜೆಗಳೇ ವಿವೇಕದಿಂದ ತಮ್ಮ ಪ್ರತಿನಿಧಿಗಳನ್ನು ಆರಿಸುವಂತಾಯಿತು ಎಂದು ಹೇಳುವುದಕ್ಕೆ ಧೈರ್ಯ ಬರುವುದಿಲ್ಲ. ಅಲ್ಲಿನ ವಿದ್ವಾಂಸರು ಒಂದು ಶತಮಾನದ ಸಾರ್ವತ್ರಿಕ ಶಿಕ್ಷಣ ಪದ್ಧತಿಯ ಫಲದ ವಿಷಯ ಹೇಳುವಾಗ "ಕೀಳು ತರದ ಪತ್ರಿಕೆಗಳೂ ಪುಸ್ತಕಗಳೂ ಲಕ್ಷಗಟ್ಟಲೆಯಲ್ಲಿ ಮಾರಿ ಹೋಗುತ್ತವೆ. ಅವನ್ನು ಸಹ ಪೂರ್ಣ ಓದದೆ ಪತ್ರಿಕೆಗಳಲ್ಲಿ ಬರುವ ಬಹುಮಾನಸ್ಪರ್ಧೆ, ದುಡ್ಡಿನ ಆಟಗಳು, ಜೂಜುಗಳು—ಇವುಗಳನ್ನು ಮಾತ್ರ ಪರಿಶೀಲಿಸುವ ಮಂದಿ ಹೆಚ್ಚು." ಎಂದು ಮುಂತಾಗಿ ಗೋಳಿಟ್ಟಿದ್ದಾರೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಸಫಲವಾಗಲಿಲ್ಲವೆಂದು ಸಾರ್ವತ್ರಿಕ ಹಾಯ್‌ಸ್ಕೂಲ್ ಶಿಕ್ಷಣವನ್ನು ಕೈಕೊಂಡಿದ್ದಾರೆ.

ಸಾರ್ವತ್ರಿಕ ಶಿಕ್ಷಣವೆಂದಾದೊಡನೆ ವಿದ್ಯಾಸಂಸ್ಥೆಗಳಲ್ಲಿ ವಿದ್ಯೆಗಾಗಿ ತೃಷಿಸದ ಹಲವರೇ ಹೆಚ್ಚಾಗಿ ಪ್ರತಿಯೊಂದು ತರಗತಿಯಲ್ಲೂ ಶಿಕ್ಷಣದ ಮಟ್ಟ ಕೆಳಗಿಳಿಯುವುದು. ನಮ್ಮಲ್ಲಿ ಸಹ ಹಿಂದಿನಕ್ಕಿಂತ ಹತ್ತು ಪಾಲು ವಿದ್ಯಾರ್ಥಿಗಳು ಹಾಯ್‌ಸ್ಕೂಲುಗಳಿಗೆ ಬರಲಾರಂಭವಾದೊಡನೆ ಪ್ರತಿ ತರಗತಿಯಲ್ಲೂ ಅದಕ್ಕೆ ಯೋಗ್ಯರಲ್ಲದ ಮಂದಿ ಮುಕ್ಕಾಲುಪಾಲಿನಷ್ಟು ಇದ್ದು ಅಧ್ಯಾಪಕರು ಅವರ ಮೇಲೆ ದೃಷ್ಟಿಯಿಟ್ಟು ಕಲಿಸಬೇಕಾದ್ದರಿಂದ ವಿಚಕ್ಷಣರಿಗೆ ಶಾಲೆಗಳಿಂದ ಸಿಕ್ಕಬೇ

ಕಾದ ಪ್ರಯೋಜನ ಸಿಕ್ಕುವಂತಿಲ್ಲ. ಶಾಲೆಗೆ ಹೋಗುವುದು ಒಂದು ಬೇಸರವಾಗಿದೆ, ಚುರುಕು ಬುದ್ಧಿಯವರಿಗೆ. ಶಾಲೆಯೆಂದರೊಂದು ಕೆಲಸಗಳ್ಳರ ಸಂತೆಯಾಗಿದೆ, ಮಂದಮತಿಗಳಿಗೆ. ಅಂತೂ ಇಂತೂ ಯಾರಿಗೂ ಪ್ರಯೋಜನ ದೊರಕುತ್ತಿಲ್ಲ. ಇದೇ ರೀತಿ ಮುಂದರಿಯುತ್ತ ಹೋದರೆ ಇನ್ನು ಕೆಲವು ವರ್ಷಗಳಲ್ಲಿ ನಮ್ಮ ಸರ್ಟಿಫಿಕೇಟುಗಳೂ ಡಿಗ್ರಿಗಳೂ ಕಸಬುಟ್ಟಿಯ ಕಾಗದದ ಚೂರಾಗಬಹುದು.

ಇಂಗ್ಲಾಂಡಿನಲ್ಲೂ ಇಂಥ ಸಂಕಟ ಉಂಟಾಗಿ ಅಲ್ಲಿನವರು ಹಾಯ್‌ಸ್ಕೂಲು ಶಿಕ್ಷಣವೆಂದರೆ ಎಲ್ಲರಿಗೂ ಒಂದೇ ತರದ ಶಿಕ್ಷಣವೆಂಬ ಅರ್ಥವನ್ನು ಬಿಟ್ಟು ವಿವಿಧ ರೀತಿಯ ವಿಷಯಗಳಲ್ಲಿ ಹೆಚ್ಚಿನ ಯೋಗ್ಯತೆ ಕೊಡುವ ಶಿಕ್ಷಣವೆಂದು ಅರ್ಥಮಾಡಿಕೊಂಡಿದ್ದಾರೆ. ಕೃಷಿ, ಪಶುಪಾಲನೆ, ಯಂತ್ರಸನ್ನಾಹ, ಇವು ಸಹ ಹಾಯ್‌ಸ್ಕೂಲಿನ ವಿಷಯಗಳಾಗಿ ಕೆಲವರು ಭಾಷೆಗಳಲ್ಲಿ, ಕೆಲವರು ಗಣಿತದಲ್ಲಿ, ಕೆಲವರು ವಿಜ್ಞಾನದಲ್ಲಿ ಮಗ್ನರಾಗಿರುವಾಗ ಇನ್ನು ಕೆಲವರು ಗದ್ದೆ ಉಳುವುದರಲ್ಲೋ ಪಶುಪಾಲನೆಯಲ್ಲೋ ನಿರತರಾಗುವರು. ಅಂತೂ ಅವರಲ್ಲಿ ಮೇಲು ಕೀಳಿಲ್ಲದೆ ಎಲ್ಲರೂ ಒಂದೇ ಮಟ್ಟದವರೆಂದು ಗಣಿಸಲ್ಪಡುತ್ತಾರೆ.

ನಾವು ಸಹ ಎಲ್ಲರಿಗೂ ಒಂದೇ ರೀತಿಯ ಹಕ್ಕು ಎಂದು ಹೇಳುವಾಗಲೇ ಪ್ರಾಚೀನ ಕ್ರಮಕ್ಕೆ ನೂತನ ನಾಮಕರಣ ಕೊಟ್ಟ ವೈವಿಧ್ಯದ ವಿದ್ಯಾಭ್ಯಾಸವೆಂಬ ಕ್ರಮವನ್ನು ಕೈಕೊಳ್ಳಬೇಕು. ಒಂದು ಹಾಯ್‌ಸ್ಕೂಲಿನಲ್ಲಿ ಒಂದು ತರಗತಿಯವರು ಯಂತ್ರ ವಿದ್ಯೆಯನ್ನೂ ಇನ್ನೊಂದು ಕೃಷಿಯನ್ನೂ ಮತ್ತೊಂದು ಮರಗೆಲಸವನ್ನೂ ಹೀಗೆ ನಾನಾ ತರದ ವೃತ್ತಿಪರ ಕುಶಲತೆಯನ್ನೇ ಮುಖ್ಯವಾಗಿಟ್ಟುಕೊಂಡು ವಿದ್ಯೆ ಪಡೆಯುವಂತಾಗಬೇಕು. ವಾರ್ಧಾಕ್ರಮದ ತಿರುಳು ಸಹ ಇದೇ ರೀತಿಯಿದೆಯೆಂದರೆ ತಪ್ಪಾಗದು.

ಹಾಗೆ ಮಾಡದೆ ಈಗಿನಂತೆ ಎಲ್ಲರೂ ಇಂಗ್ಲಿಷು, ಹಿಂದೀ, ಗಣಿತ, ವಿಜ್ಞಾನಗಳನ್ನು ಕಲಿಯಬೇಕೆಂದರೆ ಯಾರೂ ಸರಿಯಾಗಿ ಕಲಿಯದಂತೆ ಮಾಡಿದಂತಾಗುವುದು. ವಿದ್ಯಾರ್ಥಿಗಳೆಲ್ಲ ಒಂದೇ ಜಾತಿ ಹೌದು, ಅವರವರ ಮಾನಸಿಕಕ್ಕೆ ಹೊಂದಿ ಒಳ ಜಾತಿಗಳನ್ನಾಗಿ ವಿಂಗಡಿಸದಿದ್ದರೆ ನಿಜವಾಗಿಯೂ ಧರ್ಮಸಂಕರ ಎಂದರೆ ಒಬ್ಬನಿಗೆ ಒಗ್ಗದ ಅಧ್ಯಯನವನ್ನು ಅವನ ಮೇಲೆ ಹೊರಿಸಿ ಧರ್ಮಭ್ರಷ್ಟ ಕರ್ಮಭ್ರಷ್ಟರಾಗುವೆವು.

ಮಾತ್ರವಲ್ಲ, ವಿದ್ಯಾಸಂಸ್ಥೆಗಳಲ್ಲಿ ವಿನಯಕ್ಕೂ ಶೀಲಕ್ಕೂ ಪ್ರಥಮಸ್ಥಾನ ಕೊಡಬೇಕು. ಈಗಲಾದರೆ ನಮ್ಮ ವರದಿಗಳಲ್ಲಿ ಹೊರತು ದಿನನಿತ್ಯದ ಕೆಲಸದಲ್ಲಿ ಶೀಲಸೌಜನ್ಯಗಳ ಕಡೆಗೆ ಗಮನ ಕೊಡುವುದು ಕಡಿಮೆಯಾಗಿದೆ. ಈ ಕಾರಣದಿಂದಲೇ ಹುಡುಗಿಯರ ನಾಟಕವನ್ನು ನೋಡಲಿಕ್ಕೆ ಬಿಡಲಿಲ್ಲವೆಂದು ಒಂದು ಕಾಲೇಜಿನ ವಿದ್ಯಾರ್ಥಿಗಳ ಗಲಭೆ, ಸಿನೆಮಾದವರು ಕಡಿಮೆ ದರದಲ್ಲಿ ಟಿಕೇಟು ಕೊಡಲಿಲ್ಲವೆಂದು ಇನ್ನೊಂದು ಕಡೆ ಗದ್ದಲ, ಪರೀಕ್ಷಾಪತ್ರದಲ್ಲಿ ಕೆಲವು ಕಠಿಣ ಪ್ರಶ್ನೆಗಳಿದ್ದುವೆಂದು ಮತ್ತೊಂದೆಡೆ ಹರತಾಳ. ಸ್ವತಂತ್ರ ಭಾರತವು ಸ್ವಾತಂತ್ರ್ಯವನ್ನು ಸದಾಕಾಲ ಅನುಭವಿಸಬೇಕೆಂತಾದರೆ, ದೇಶದ 'ಸರ್ವೇ ಜನಾಃ ಸುಖಿನೋ ಭವಂತು' ಎಂದಾಗಬೇಕಾದರೆ ವಿದ್ಯಾರ್ಥಿಗಳ ಜೀವನವನ್ನು ಸನ್ಮಾರ್ಗದಲ್ಲಿರಿಸಲು ಮೊದಲಾಗಿ ಪ್ರಯತ್ನ ಮಾಡಬೇಕು.

ವಿದ್ಯಾರ್ಥಿಗಳನ್ನು ಸರಿಪಡಿಸಬೇಕಾದರೆ ಆರಂಭದಲ್ಲಿ ಅಧ್ಯಾಪಕವೃಂದವನ್ನೇ ಸರಿಪಡಿಸಬೇಕಾಗುವುದು. ಅಧ್ಯಾಪಕನಾಗಲಪೇಕ್ಷಿಸುವವನ ಡಿಗ್ರಿಗಳನ್ನು ಮಾತ್ರ ನೋಡಿದರೆ ಸಾಲದು, ನೇಮಿಸುವವರು ಅವನನ್ನು ಕಣ್ಣಾರೆ ಕಂಡು ಮಾತಾಡಿ ಅವನ ಗುಣ ನಡತೆ, ಅಭ್ಯಾಸ ದುರಭ್ಯಾಸಗಳು ಏನೆಂದು ಪರೀಕ್ಷಿಸಬೇಕು. ವಿವಿಧ ತರದ ಪ್ರಸಂಗಗಳಲ್ಲಿ ಅವನ ಚರ್ಯೆ ಹೇಗೆ ನಿಂತೀತೆಂದು ಊಹಿಸುವುದು ಕಷ್ಟವಲ್ಲ. ಈ ರೀತಿ ಗಾಳಿಸಿ, ಹೆಕ್ಕಿ, ಆರಿಸಿ ತೆಗೆದವರೇ ಅಧ್ಯಾಪಕರಾಗಬೇಕು.

ಶಾಲೆಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳನ್ನು ಸಹ ಸಾಧಾರಣ ಅದೇ ರೀತಿ ಆರಿಸುವಂತಾಗಬೇಕು. ಅರ್ಜಿ ಬರೆಸಿ ತಂದ ಪ್ರತಿಯೊಬ್ಬನನ್ನು ಸೇರಿಸಿಕೊಳ್ಳದೆ ವಿದ್ಯಾರ್ಥಿಯೊಡನೆ ಕೆಲ ನಿಮಿಷ ಮಾತಾಡಿ ಅವನ ಹಿರಿಯರನ್ನು ಕಂಡು ಅವನ ಮನೆನಡತೆಯನ್ನು ತಿಳಿದು ಶಾಲೆಯ ನೀತಿನಿಯಮಗಳನ್ನು ತಿಳಿಸಿ ಅವನ್ನು ಕಾಯಾ ವಾಚಾ ಪಾಲಿಸುವ ಭರವಸೆಯನ್ನು ಪಡೆದೇ ಸೇರಿಸಬೇಕು. ಎಳೆತನದಿಂದಾಗಿ ಮುಂದೆ ಅನೇಕ ಸಲ ಅವನ್ನು ತಪ್ಪಿಬಿದ್ದರೂ ತಿರುತಿರುಗಿ ಆರಂಭದ ವಾಗ್ದಾನದ ನೆನಪು ಮಾಡಿ ಅವನನ್ನು ತಿದ್ದುವುದು ಕಷ್ಟವಲ್ಲ.

ಸಾಲೆಗೆ ಸೇರುತ್ತೇನೆಂಬ ಒಂದೇ ಮಾತು ಕೊಟ್ಟವನು ಮತ್ತೆ ಹಾಗೆ ಮಾಡಬೇಕಿತ್ತು ಹೀಗೆ ಮಾಡಬಾರದಿತ್ತು ಎಂದರೆ ಅವನಿಗೆ ನಾಟದು.

ವಿದ್ಯಾರ್ಥಿ ದೆಸೆಯಲ್ಲಿರುವವರೆಲ್ಲ ಪುಂಡರು, ಕೆಲಸಗಳ್ಳರು, ನೀತಿಬಾಹಿರರೆಂದು ಹೇಳಿದ್ದೇವೆಂದು ಭಾವಿಸಬಾರದು. ನಿಜವಾಗಿ ನೋಡಿದರೆ ಯೌವನಸ್ಥರಲ್ಲಿ ಶ್ರಮಪಡುವ ಸಾಹಸವನ್ನು ಕೈಕೊಳ್ಳುವ ಧೀರತೆಯೂ ಉತ್ಸಾಹವೂ ಇವೆ. ಈಗ ಧೀರತೆಯೆಂದರೆ ಪುಂಡಾಟಿಕೆಯೆಂದಾಗಿದೆ, ಪುಂಡರ ಪೋಕಾಟಿಕೆಯೆದರು ವಿನಯಿಗಳಾದ ವಿದ್ಯಾರ್ಥಿಗಳು ಸುಮ್ಮನಿರುತ್ತಾರೆ; ಹತ್ತು ಮಂದಿ ಬಾಗಿಲ ಬಳಿ ಗುಂಪು ನಿಂತು ನೂರು ಮಂದಿ ಒಳಹೋಗದಂತೆ ಮಾಡಿದ ನಿದರ್ಶನಗಳಿವೆ. ಶಾಲೆಗಳು ನೀತಿಗೆ ಮರ್ಯಾದೆ ಕೊಡದೆ ಗಲಭೆಗೆ ಬಗ್ಗುವುದರಿಂದ ಈ ಅವಸ್ಥೆಯಾಗಿದೆ.

ಶಿಸ್ತು, ನಿಯಮಗಳನ್ನು ಅತಿ ಕಠಿಣ ರೀತಿಯಲ್ಲಿ ಹೊರಿಸುವ ಸಂಸ್ಥೆಗಳಲ್ಲಿ ಸಹ ಸಾವಿರಾರು ಯುವಕ ಯುವತಿಯರು ಶ್ರಮಪಡುವುದನ್ನು ನೋಡಿಯಾದರೂ ವಿದ್ಯಾಸಂಸ್ಥೆಗಳು ಪಾಠ ಕಲಿಯಬಾರದೇ? ಇನ್ನು ಮುಂದಾದರೂ ವಿದ್ಯಾಲಯಗಳು ಪರೀಕ್ಷಾಲಯಗಳಾಗಿ ಮಾತ್ರ ಇರದೆ 'ವಿನಯಮ್ ದದಾತಿ' ಎಂಬುದು ಸತ್ಯವಾಗಲಿ!

ನಾವೆತ್ತ ಹೋಗುತ್ತಿದ್ದೇವೆ?

ಶ್ರೀ ಎ. ಜೆ. ಖಲೀಲ್, ಬಿ. ಎ., ಬಿ. ಎಲ್., ಎಂ. ಆರ್. ಎ., ಬೆಂಗಳೂರು.

ಇಪ್ಪತ್ತನೆಯ ಶತಮಾನವನ್ನು ಜ್ಞಾನಪ್ರಕಾಶದ ಯುಗವೆಂದು ನಿಸ್ಸಂದೇಹವಾಗಿ ಕರೆಯಬಹುದು. ಪ್ರಾಕೃತಿಕ ವಿಜ್ಞಾನ ಶಾಸ್ತ್ರಗಳು ನೀಡಡಿ ಹಾಕಿವೆ. ಸಮಯ ಮತ್ತು ದೂರ ಇವು ನಿರ್ನಾಮಗೊಂಡಿವೆ. ''ಡೆಲ್ಲಿ-ದೂರ್-ಆಸ್ತ," ಡಿಲ್ಲಿ ದೂರದಲ್ಲಿದೆ ಎಂಬುದಿನ್ನು ನಿಜವಲ್ಲ. ಬೆಂಗಳೂರಿನಲ್ಲಿ ನಿಮ್ಮ ಕೊಟಡಿಯಲ್ಲಿ ಕುಳಿತುಕೊಂಡು, ನೀವು "ಲಂಡನ್ ಕರೆ"ಯನ್ನು ಕೇಳಬಹುದು; ಮತ್ತೆ ಸ್ವಲ್ಪ ಸಮಯದಲ್ಲಿಯೇ, 'ಟೆಲಿವಿಜನ್' ಯಂತ್ರ ಸಾಧನದ ಸಹಾಯದಿಂದ 'ಮೈಕ್' ಎಂಬ ಯಂತ್ರದ ಮೂಲಕ ವ್ಯಕ್ತಿಗಳು ಮಾತಾಡುತ್ತಿರುವುದನ್ನು ನೀವು ನೋಡಬಹುದು. ವಾಯು, ನೀರು, ಆಕಾಶದ್ರವ್ಯ ಮತ್ತು ಇತರ ಪದಾರ್ಥಗಳನ್ನೆಲ್ಲ ಹತೋಟಿಗೆ ತಂದುಕೊಳ್ಳಲಾಗಿದೆ. ಅಣುಶಕ್ತಿಯ ಬಾಂಬುಗಳು, ಲೋಕರೂಢಿಯಾಗಿ ಶಾಂತಿನಗರವೆಂದು ಕರೆಯತಕ್ಕ ಹಿರೋಶಿಮವನ್ನು ಕಣ್ಣು ಮುಚ್ಚಿ ಬಿಡುವುದರೊಳಗಾಗಿ ಧ್ವಂಸ ಮಾಡಿ ತಮ್ಮ ಮೃತ್ಯುಕಾರಕವಾದ ಕಾರ್ಯಸ್ಥಾನವನ್ನು ತೋರಿಸುವ ಮೂಲಕ, ಸೊಕ್ಕಿದ ಜಪಾನೀಯನು ತನ್ನ ಆಯುಧಗಳನ್ನು ಕೆಳಗೆ ಬಿಸಾಡುವ ಹಾಗೆ ಅವನನ್ನು ಸ್ಮೃತಿಗೆ ತಂದಿವೆ. ವದಂತಿಗಳನ್ನು ನಂಬಬಹುದಾದರೆ, ಅಣುಶಕ್ತಿಯ ಬಾಂಬುಗಳಿಗಿಂತಲೂ ಅಧಿಕ ಮೃತ್ಯುಕಾರಕವಾದ ಇನ್ನೊಂದು ಆಯುಧವೇ ತಯಾರಾಗುತ್ತಿದ್ದು, ಯುದ್ಧಕಾರ್ಯದಲ್ಲಿ ಮಗ್ನವಾಗದಂತೆ, ಇಡಿಯ ಮಾನವ ವರ್ಗವನ್ನೇ ದುರ್ಬಲಪಡಿಸಲು ಅದು ಸಾಕಾಗಿದೆ. ಪಾಶ್ಚಾತ್ಯ ಜನಾಂಗಗಳು, ಪ್ರಯೋಗ ವಿಜ್ಞಾನ ಶಾಸ್ತ್ರಗಳಲ್ಲಿ ವಿಚಾರಪರರೂ ಕಾರ್ಯಾಸಕ್ತರೂ ಆಗಿರುವ ನಾಯಕರು, ಒಬ್ಬರನ್ನೊಬ್ಬರು ಕೊಲೆಮಾಡಿಕೊಳ್ಳಲಿಕ್ಕೂ ತಮ್ಮ ಕುಲಕ್ಕೆ ಸೇರದ, ಬೇರೊಂದು ಬಣ್ಣವನ್ನೇ ಉಳ್ಳ ಇತರ ಜನರನ್ನು ಗುಲಾಮರನ್ನಾಗಿ ಮಾಡಲಿಕ್ಕೂ ಈ ಮೃತ್ಯುಕಾರಕವಾದ ಆಯುಧಗಳ ತಯಾರಿಗಾಗಿ ತಮ್ಮ ಜ್ಞಾನವನ್ನೆಲ್ಲ ಉಪಯೋಗಿಸುವಲ್ಲಿ ಮಗ್ನರಾಗಿದ್ದಾರೆ.

ಭಗವಂತನ ಸೃಷ್ಟಿಯಲ್ಲಿ ಈ ಜ್ಞಾನಪ್ರಕಾಶವು ಎಷ್ಟು ಮಟ್ಟಿಗೆ ಶಾಂತಿಯನ್ನೂ ಅಭ್ಯುದಯವನ್ನೂ ಹೆಚ್ಚಿಸಿದೆ ಎಂಬ ಪ್ರಶ್ನೆ ಈಗ ಉಂಟಾಗುತ್ತಿದೆ. ಆ ಕತ್ತಲೆಯ ಯುಗದೊಡನೆ ಹೋಲಿಸುವಲ್ಲಿ ನಮ್ಮ ಸ್ಥಿತಿ ಉತ್ತಮಗೊಂಡಿದೆಯೆ? ಈ ಜಗತ್ತನ್ನು ಸೃಷ್ಟಿಸಿದ್ದೇಕೆ, ಮನುಷ್ಯನನ್ನು ಭೂಮಿಗೆ ಕಳುಹಿಸಿದ್ದೇಕೆ, ಜೀವನವೆಂದರೇನು, ಮರಣಾನಂತರ ಮನುಷ್ಯ ಎಲ್ಲಿಗೆ ಹೋಗುತ್ತಾನೆ ಎಂಬುದನ್ನು ಅರಿಯಲು ನಮ್ಮ ಪಾಂಡಿತ್ಯ ನಮಗೆ ಸಹಾಯ ಮಾಡಿದೆಯೆ? ಈ ವಿಶ್ವದ ಹಿನ್ನೆಲೆಯಲ್ಲಿ ಮಾರ್ಗದರ್ಶಿಯಾದ ಯಾವುದಾದರೊಂದು ಕೈ ಇದೆಯೆ? ಭಗವಂತ ಸೃಷ್ಟಿಕರ್ತನಾಗಿ ಮನುಷ್ಯವರ್ಗ ಆತನ ಮಕ್ಕಳಾಗಿದ್ದರೆ ಅವರನ್ನು ಮುನ್ನಡೆಸಲು ಏನನ್ನಾದರೂ ಮಾಡಲಾಗಿದೆಯೆ? ದಯಾಭರಿತನೂ ಕರುಣಾಮಯನೂ ಆಗಿರುವ ಭಗವಂತನು, ಮನುಷ್ಯ ಈ ವಿಶ್ವದೃಶ್ಯಕ್ಕೆ ಬರುವ ಮುನ್ನ ಈ ಭೂಮಿಯನ್ನೂ ಅದರೊಂದಿಗೆ ಇತರ ವಸ್ತುಗಳನ್ನು ಸೃಷ್ಟಿಸಿದನು; ಅಂಥವನು ಮನುಷ್ಯನನ್ನು ಸರಿಯಾದ ಹಾದಿಯಲ್ಲಿ ನಡೆಸಲಾರದಷ್ಟು ಸಂಕೋಚದೃಷ್ಟಿಯುಳ್ಳವನಾಗಿದ್ದನೆ? ಮಾನವಕುಲದ ಪ್ರಯೋಜನಕ್ಕಾಗಿ ಬಂಜರು ಭೂಮಿ ಮಳೆಯಿಂದ ಫಲಭರಿತವಾಗಿ ಅಲ್ಲಿ ಉಪಯುಕ್ತ ಸಾಧನಗಳು ಬೆಳೆಯುವಂತಾಯಿತು. ಅನ್ನುವಾಗ ದೇವರು ತನ್ನ ಅನಂತ ಕರುಣೆಯಿಂದ, ಮನುಷ್ಯ ವರ್ಗವನ್ನು ಮುನ್ನಡೆಸಲು, ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ಯುಗಗಳಲ್ಲಿ, ವಿಶ್ವದ ಬೇರೆ ಬೇರೆ ಭಾಗಗಳಿಗೆ 'ನಿಜವಾದ ಮಾರ್ಗದರ್ಶನ' (ವಾಹಿ) ದೊಡನೆ, ತನ್ನ ಸಂದೇಶ ಸೇವಕರನ್ನು ಕಳುಹಿಸಿರುವನೆಂದೇ, ಅವೆಲ್ಲ ಪ್ರಶ್ನೆಗಳಿಗೂ ಉತ್ತರವಾಗಿ ಒಬ್ಬನು ಒಪ್ಪಿಸಿಕೊಳ್ಳಬೇಕಾಗಿದೆ. ಅಂಥವರನ್ನು ಪ್ರವಾದಿಗಳು, ಸಂದೇಶಗಳ ದೂತರು, ಅವತಾರಗಳು ಎಂದು ಬೇರೆ ಬೇರೆ ಜನಗಳು ಕರೆದರು. ಅವರನ್ನು ಗೌರವಿಸಿ ಸನ್ಮಾನಿಸುವಷ್ಟು ಕಾಲ ಶಾಂತಿಯೂ ಅಭ್ಯುದಯವೂ ಆಳುತ್ತ ಬಂದುವು.

ಬೇರೆ ಬೇರೆ ಮತಗಳ ಅನುಯಾಯಿಗಳು ತಾವು ಹಿಂಬಾಲಿಸುವ ಪ್ರವಾದಿಗಳು ಪ್ರತ್ಯೇಕವಾಗಿ ತಮ್ಮದಾದ ಸ್ವತ್ತು ಎಂದೇ ಭಾವಿಸುವುದನ್ನು ನಿಲ್ಲಿಸಿ ಬಿಟ್ಟರೆ, ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಸ್ಥಳಗಳಿಗೆ ಬಂದಿರುವ ದೀರ್ಘಪಂಕ್ತಿಯ ಪ್ರವಾದಿಗಳು ದೇವರಿಂದಲೇ ಕಳುಹಿಸಲ್ಪಟ್ಟವರೆಂದು ಯೋಚಿಸುವುದಾದರೆ, ದೇವರು ತನ್ನ ಸಂದೇಶದ ದೂತರ ಮೂಲಕ ಕಳುಹಿಸಿದ ಈ ಸಂದೇಶದ ಅಂತರ್ಗತವಾದ ಯೋಜನೆಯನ್ನು ಅರಿಯಲು ಒಂದು ಮೇಜಿನ ಸುತ್ತಲೂ ಕುಳಿತು ಸಂಕೋಚಮನೋವೃತ್ತಿ, ಶ್ರೇಷ್ಠಕನಿಷ್ಠಭಾವ, ಪರರಲ್ಲಿನ ತಿರಸ್ಕಾರ ಬುದ್ಧಿ ಇವನ್ನು ಕದಲಿಸಿ ಬಿಡುವುದಾದರೆ, ದೇವರ ಮಕ್ಕಳು ಪರಸ್ಪರ ಒಬ್ಬರನ್ನೊಬ್ಬರು ಒದೆಯದಂತೆ, ಕೊಲೆ ಮಾಡದಂತೆ, ತಮ್ಮ ಸೃಷ್ಟಿಕರ್ತನೆಂದು ದೇವರಿಂದಲೇ ಸಂಪೂರ್ಣ ದೈನ್ಯವೃತ್ತಿಯಿಂದ ಮಾರ್ಗದರ್ಶನವನ್ನು ಹುಡುಕಿ ಹಾರೈಸುವುದಾದರೆ ಈಗಲು ಕೂಡ ನಿಜವಾದ ಮಾರ್ಗದರ್ಶನವೂ ಪ್ರಪಂಚದಲ್ಲಿ ಹಬ್ಬಿಕೊಂಡಿರುವ ಎಲ್ಲ ಕೆಡಕುಗಳಿಗೆ ಪರಮೌಷಧವೂ ಜ್ಞಾನಪ್ರಕಾಶವುಳ್ಳವರ ಆ ಸಂದೇಶಗಳಲ್ಲಿ ಮಾತ್ರವೇ ಕಾಣಲು ಸಾಧ್ಯವಾಗುವುದು. ಆಗ ಬಿಳಿ ಜನಾಂಗಗಳು ವರ್ಣದ ಜನಾಂಗಗಳನ್ನು ನಿರ್ಮೂಲಿಸಬೇಕಾಗಿಲ್ಲ; ಬಂಡವಾಳ ಶ್ರಮಜೀವಿಗಳನ್ನು ಧ್ವಂಸಮಾಡಬೇಕಾಗಿಲ್ಲ ಮತ್ತು ಶ್ರಮಜೀವನವೂ ಕೆಂಪು ಬಣ್ಣ ಬಳಿದುಕೊಂಡು ಮನುಷ್ಯವರ್ಗಕ್ಕೆ ವಿರೋಧವಾಗಿ ಹೋರಾಡಬೇಕಾಗಿಲ್ಲ.

ಸಂಕೋಚವಾದ ಪ್ರಾಂತಿಕ ಭಾವನೆ ಭಾರತವರ್ಷದಲ್ಲಿ, ವೈದಿಕ ಋಷಿಗಳ ಈ ಭೂಮಿಯಲ್ಲಿ ಭಾಷಾವಾರು ಪ್ರಾಂತರಚನೆಯ ಮೂಲಕ ತನ್ನ ಅಂದಗೆಟ್ಟ ತಲೆಯನ್ನು ಎತ್ತಲಾರಂಭಿಸಿದೆ. ಎಲ್ಲಿ ಕೋಟ್ಯಾಂತರ ಮಂದಿ ಬೇರೆ ಬೇರೆ ಭಾಷೆಗಳನ್ನಾಡುತ್ತ ಏಬ್ರಾಹಂ (ಬ್ರಹ್ಮ), ಬುದ್ಧ, ಮೋಸಸ್, ರಾಮ ಮತ್ತು ಕೃಷ್ಣ ಮೊದಲಾದ ಬೇರೆ ಬೇರೆ ಪ್ರವಾದಿಗಳಲ್ಲಿ ರಾಜನಿಷ್ಠೆಯುಳ್ಳ ಹಲವು ಮತಗಳನ್ನು ಅನುಸರಿಸಿ ಬಾಳಿ ಬದುಕುತ್ತಿರುವರೋ—ಈ ಪ್ರವಾದಿಗಳಲ್ಲಿ ದೇವರ ಕೊನೆಯ ಪ್ರವಾದಿ ಪ್ರಪಂಚದೊಡನೆ ಮನುಷ್ಯನ ವಿಶ್ವಭ್ರಾತೃತ್ವವೇ ಏಕವೆಂದು ಸಾರಿ ತನಗಿಂತಲೂ ಮೊದಲು ಬಂದ ಒಂದು ಲಕ್ಷದ ಎಂಭತ್ತು ಸಾವಿರ ಪ್ರವಾದಿಗಳನ್ನು ಗೌರವಿಸಲೂ ಪೂಜಿಸಲೂ ತನ್ನ ಅನುಯಾಯಿಗಳಿಗೆ ಕಲಿಸಿದ್ದನೆಂಬ ಈ ಮಾತಾದರೂ ಹಾಗಿರಲಿ—ಅಲ್ಲಿ ಈ ಭಾಷಾವಾರು ಪ್ರಾಂತ ನಿರ್ಮಾಣವೆಂಬುದು ಕಟ್ಟುಕಥೆಯ ಆ ಮಹಾಸರ್ಪದ ದಂತಗಳನ್ನು ಬಿತ್ತಿ, ಆ ಮೂಲಕ ಆಗಲೇ ಭಾರತದಲ್ಲಿ ಉಂಟಾಗಿರುವ ಗೊಂದಲವನ್ನು ಹೆಚ್ಚಿಸಬೇಕಾಗಿಲ್ಲ.

ಇದೆಲ್ಲ ಸಂಭವಿಸುವುದೇ? ಎಂಬುದು ಪ್ರಶ್ನೆ. ದೇವರ ಹೆಸರಲ್ಲಿ ಇಷ್ಟು ಕಾಲವೂ ಯುದ್ಧಕಾರ್ಯದಲ್ಲಿ ಸಾಲಾಗಿ ನಿಂತ ಧಾರ್ಮಿಕ ಗುಂಪಿನವರು ಒಂದುಗೂಡಲಾರರು, ಒಂದುಗೂಡಿ ಜಗತ್ತಿನ ಶಾಂತಿಸ್ಥಾಪನೆಗೆ ಮತ್ತು ಜನಾಂಗಗಳ ಸದ್ಭಾವ ಕಲ್ಪನೆಗೆ ಅವಕಾಶವಾಗುವಂತೆ ತಮ್ಮ ಶಕ್ತಿಗಳನ್ನು ಒಟ್ಟುಗೂಡಿಸಲಾರರು ಎಂದು ಜಗದ್ವೇಷಿಯನ್ನುವನು. ಅಂಥ ಮನುಷ್ಯನಿಗೆ ನನ್ನ ಉತ್ತರವಿಷ್ಟೆ:—ಪ್ರಕಟಿತವಾಗಿರುವ ಗ್ರಂಥಗಳಿಂದ ಬೇರೆಯಾಗಿರುವುದೊಂದು ಶಾಂತಮಯ ನಿವಾರಣೋಪಾಯವನ್ನು ಜಗತ್ತಿನ ಎಲ್ಲ ಕೆಡಕುಗಳ ಪರಿಹಾರಕ್ಕಾಗಿಯೂ ಕಂಡುಹಿಡಿಯಲೇಬೇಕೆಂಬ ಧೃಡನಿರ್ಧಾರದಿಂದ, ನಾನಾ ಧರ್ಮಗಳನ್ನು ಅವಲಂಬಿಸುತ್ತಿರುವ ಜನರು, ಪ್ರತಿವರ್ಷ ಯಾವ ಸ್ಥಳದಲ್ಲಿ ಒಟ್ಟಿಗೆ ಕುಳ್ಳಿರುವರೋ ಆ ಧರ್ಮಸ್ಥಳಕ್ಕೆ ಅವನು ಹೋಗಿ ಅಲ್ಲಿ ಶ್ರೀಮಾನ್ ಡಿ. ಮಂಜಯ್ಯ ಹೆಗ್ಗಡೆಯವರು ನಡೆಸುತ್ತಿರುವ ನಾನಾ ಧರ್ಮಗಳ ಮಹಾಸಭೆಯನ್ನು ನೋಡಲಿ!

ಭಾಷಾಪ್ರಾಂತ–ಕರ್ನಾಟಕ ಏಕೀಕರಣ

ಶ್ರೀ ಬ್ಯೆಕಾಡಿ ವೆಂಕಟಕೃಷ್ಣರಾಯರು, ಬೆಂಗಳೂರು.

ಸ್ವತಂತ್ರ ಭಾರತದ ರಾಜ್ಯಾಂಗ ಪ್ರಜಾಪ್ರಭುತ್ವದ ಮೂಲಾಧಾರದಿಂದ ನಿರ್ಮಿತವಾಗಬೇಕು. ಪ್ರಜಾಪ್ರಭುತ್ವವೇ ಸ್ವತಂತ್ರ ಭಾರತದ ಜೀವಾಳ. ಪ್ರಜಾಪ್ರಭುತ್ವ ಸರ್ವರ ಸಮತೆ ಮತ್ತು ಪ್ರಜೆಗಳ ಪರಮಾಧಿಕಾರವನ್ನು ಸಾರುವುದಾದರೂ ಅದು ಯಶಸ್ವಿಯಾಗಿ ನಡೆಯಲು ಸರಿಯಾದ ಆವರಣಬೇಕು.

ರಚಿತವಾದ ಭಾರತದ ರಾಜ್ಯಾಂಗ ಇಂದು ಈ ತತ್ವವನ್ನು ಒಳಗೊಂಡಿದೆಯೆ? ವಿಮರ್ಶಿಸಿ ನೋಡಿದಲ್ಲಿ ಎಲ್ಲ ಮಟ್ಟಿಗೆ ಇದು ತೃಪ್ತಿಕರವಾಗಿಲ್ಲ. ಮುಖ್ಯವಾಗಿ ಪ್ರಾಂತಾಡಳಿತದ ವಿಚಾರದಲ್ಲಿ. ದೇಶದ ಆಡಳಿತ ಸುವ್ಯವಸ್ಥಿತವಾಗಿರಬೇಕಾದರೆ, ಆಡಳಿತವನ್ನ ವ್ಯವಸ್ಥಿತವಾಗಿ ವಿಭಜಿತವಾದ ಪ್ರಾಂತಗಳಿಗೆ ಬಹು ಮಟ್ಟಿಗೆ ಒಪ್ಪಿಸಬೇಕು. ಮುಖ್ಯ ವಿಚಾರಗಳಲ್ಲಿ ಆಡಳಿತ ಎಲ್ಲ ಪ್ರಾಂತಗಳಲ್ಲೂ ಒಂದೇ ತತ್ವಕ್ಕನುಗುಣವಾಗಿ ಸಮಾನವಾಗಿದ್ದರೂ, ಒಳಾಡಳಿತದ ವಿಷಯಗಳಲ್ಲಿ ಪ್ರಾಂತಗಳಿಗೆ ಸ್ವಾತಂತ್ರ್ಯವಿರಬೇಕು. ಕೇಂದ್ರ ಇಲ್ಲಿ ಕೈಹಾಕಬಾರದು.

ಹೀಗಿರಬೇಕಾದರೆ ಪ್ರಾಂತಗಳು ಯಾವ ತಳಹದಿಯ ಮೇಲೆ ವಿಭಜಿತವಾಗಿರಬೇಕು? ಆಯಾ ಪ್ರಾಂತದ ಆಡಳಿತ, ಅಲ್ಲಿನ ಶಾಸನ ಸಭೆಗಳ ನಡವಳಿಕೆಯನ್ನ ಹೊಂದಿರಬೇಡವೇ? ಶಾಸನ ಸಭೆಗಳ ವ್ಯವಹಾರ ಯಾವ ಭಾಷೆಯಲ್ಲಿರಬೇಕು? ರಾಷ್ಟ್ರಭಾಷೆಯಲ್ಲಿರಲೆ? ರಾಷ್ಟ್ರಭಾಷೆ ಸಾರ್ವತ್ರಿಕವಾಗಿ ಇಡೀ ಇಂಡಿಯದಲ್ಲಿ ಪ್ರಚಾರವಾಗಿದೆಯೆ? ಹಾಗೆ ಪ್ರತಿಯೊಬ್ಬ ಪ್ರಜೆ ರಾಷ್ಟ್ರಭಾಷೆಯ ಅಭ್ಯಾಸವುಳ್ಳವನಾಗಬೇಕಾದರೆ ಇನ್ನೂ ಎಷ್ಟು ಶತಮಾನ ಬೇಕಾದೀತು? ರಾಷ್ಟ್ರಭಾಷೆ ಇಷ್ಟು ಪ್ರಧಾನಸ್ಥಾನ ವಹಿಸಿದರೆ ಪ್ರದೇಶ ಭಾಷೆಗಳ ಗತಿ ಏನು? ಸಹಸ್ರ ವರ್ಷಗಳ ಸಾಹಿತ್ಯ, ಸಂಸ್ಕೃತಿಯುಳ್ಳ ಪ್ರದೇಶ ಭಾಷೆ, ಸಂಸ್ಕೃತಿಗಳು ಬೆಳೆದು ಬರಬೇಡವೆ? ಜನ್ಮವೆತ್ತಿದ ಮಗು ಮೊದಲು ಯಾವ ಭಾಷೆ ಕಲಿಯಬೇಕು? ವಾಸ್ತವವಾಗಿ ತಾಯಿಯ ಭಾಷೆಯನ್ನೇ ಆಡುತ್ತದೆ. ಮೊದಲು ಪ್ರದೇಶ ಭಾಷೆ ಆ ಮೇಲೆ ರಾಷ್ಟ್ರ ಭಾಷೆ. ಹೀಗೆ ನೂರಾರು ಪ್ರಶ್ನೆ ಒಂದೇ ಸಮನೆ ಏಳುತ್ತದೆ. ಇದಕ್ಕೆಲ್ಲ ಉತ್ತರ ಪ್ರಾಂತದ ಆಡಳಿತ ಪ್ರದೇಶ ಭಾಷೆಗಳಲ್ಲಿಯೇ ನಡೆಯಬೇಕು. ಪ್ರಾಂತಗಳ ಶಾಸನ ಸಭೆಗಳ ಭಾಷೆ ಪ್ರದೇಶ ಭಾಷೆಯಾಗಿರಬೇಕು. ಆಯಾ ಪ್ರಾಂತಗಳ ಕೋರ್ಟು ಕಚೇರಿಗಳ ಭಾಷೆ ಆಯಾ ಪ್ರದೇಶ ಭಾಷೆ ಆಗುವುದೇ ಸಾಧ್ಯ. ಹೀಗಾದರೆ ಮಾತ್ರ ಪ್ರತಿ ಪ್ರಜೆಗೆ ಅಲ್ಲಿನ ಆಡಳಿತದ ಕ್ರಮ ತಿಳಿದೀತು. ಆ ಸರಕಾರ ಪ್ರಜಾ ಸರಕಾರ ಆದೀತು. ಇಲ್ಲವಾದರೆ ಇಂಗ್ಲಿಷರ ಸರಕಾರದಂತೆ ಎಲ್ಲೆಲ್ಲೂ ಇಂಗ್ಲಿಷೇ ವ್ಯಾಪಿಸಿ ಅದು ಸಾಂಕುಶ ಪ್ರಭುತ್ವದ ಬದಲು ನಿರಂಕುಶ ಪ್ರಭುತ್ವ ಆದೀತು.

ಪ್ರಾಂತಗಳ ವಿಭಜನೆ ಭಾಷೆಯ ತತ್ವವನ್ನೇ ಅವಲಂಬಿಸಿರಬೇಕು; ಅಲ್ಲದೆ ಇನ್ನಾವ ಕ್ರಮವೂ ಆಗದು. ಎಂಬುದು ಇದರಿಂದ ಸ್ಪಷ್ಟವಾಗುವುದಿಲ್ಲವೆ? ದೇಶದ ಆಡಳಿತದಲ್ಲಿ ಭಾಷೆಯ ಕೈವಾಡ ಬಹಳವಿದೆ. ಪ್ರದೇಶ ಭಾಷೆಯ ಚರಿತ್ರೆಯ ಹಿನ್ನೆಲೆಯಲ್ಲಿ ಅದರ ಸಾಹಿತ್ಯ, ಅದರ ಸಂಸ್ಕೃತಿ, ಆ ಪ್ರದೇಶದ ಜನಜೀವನ ಹೀಗೆ ಒಂದು ದೊಡ್ಡ ಚರಿತ್ರೆಯೇ ಇದೆ. ಒಂದು ಪ್ರದೇಶ ಅಥವಾ ಪ್ರಾಂತ, ಇನ್ನೊಂದು ಪ್ರದೇಶ ಅಥವಾ ಪ್ರಾಂತದೊಡನೆ ಸಂಸ್ಕೃತಿಯ ದೃಷ್ಟಿಯಿಂದ, ಭಾಷೆಯ ದೃಷ್ಟಿಯಿಂದ, ಜನಜೀವನದ ದೃಷ್ಟಿಯಿಂದ ಸಮಹೋಲಿಕೆಯದಾಗಿಲ್ಲ. ಹೀಗೆ ಬೇರೆ ಬೇರೆ ಭಾಷೆ ಸಂಸ್ಕೃತಿಯುಳ್ಳ ಬೇರೆ ಬೇರೆ ಭಾಷೆ ಆಡುವ ಜನವನ್ನ ಒಂದು ಕಡೆ ಸೇರಿಸಿ, ಅವರಿಗೆ ಆಡಳಿತದ ಸ್ವಾತಂತ್ರ್ಯ ಕೊಟ್ಟು, ಆ ಜನದ ಬೆಳವಣಿಗೆಗೆ ಅವಕಾಶ ಒದಗಿಸಿದರೆ ಆ ಬೇರೆ ಬೇರೆ ಪ್ರಾಂತಗಳು ಒಂದಾಗಿ ಒಟ್ಟು ಭಾರತ ಬೆಳೆಯುತ್ತದೆ. ಈಗ ಭಾರತದಲ್ಲಿರುವ ಆಡಳಿತ ಪ್ರಾಂತಗಳಾಗಿರುವ ಬೊಂಬಾಯಿ, ಮದರಾಸು, ಮಧ್ಯಪ್ರಾಂತ, ಬಿಹಾರ್, ಅಥವಾ ಸಂಸ್ಥಾನಗಳಾದ ಮೈಸೂರು, ತಿರುವಾಂಕೂರು, ಹೈದರಾಬಾದು, ಇವು ಯಾವ ಕ್ರಮ

ಕ್ಕನುಗುಣವಾಗಿಯೂ ರಚಿತವಾದುವುಗಳಲ್ಲ. ಇವುಗಳ ಒಂದೊಂದರ ಹಿಂದೆಯೂ ಒಂದೊಂದು ಕಂತೆ ಪುರಾಣವೇ ಇದೆ. ಈಸ್ಟ್ ಇಂಡಿಯಾ ಕಂಪೆನಿ ಭಾರತದ ನೆಲವನ್ನ ಆಕ್ರಮಿಸಿದ ಹಾಗೆಲ್ಲ ಒಂದೊಂದರ ಜತೆಗೆ ಒಂದೊಂದು ಸೇರಿಸಿ ಪ್ರಾಂತ ಮಾಡಿಬಿಟ್ಟಿದೆ. ಮೊದಲ ಆಕ್ರಮಣ ಕರಾವಳಿಯ ಭಾಗಗಳಾದ ಕಲ್ಕತ್ತ, ಬೊಂಬಾಯಿ, ಮದರಾಸು. ಆ ನಂತರ ಕೊಳ್ಳೆ ಹೊಡೆದ ಒಳನಾಡುಗಳನ್ನ ಒಂದೊಂದನ್ನಾಗಿ ಹತ್ತಿರದ ಈ ಪ್ರದೇಶಗಳಿಗೆ ಸೇರಿಸಿ ಈ ಪ್ರಾಂತಗಳ ನಿರ್ಮಾಣ ಆಯಿತು. ಹೀಗೆ ಒಂದೇ ಸಂಸ್ಕೃತಿ, ಭಾಷೆ, ನಡೆನುಡಿ ಎಲ್ಲವೂ ಇದ್ದ ದಕ್ಷಿಣ, ಉತ್ತರ ಕನ್ನಡಗಳಲ್ಲಿ ಒಂದು ಮದರಾಸಿಗೆ, ಇನ್ನೊಂದು ಬೊಂಬಾಯಿಗೆ. ಮದರಾಸ್ ಪ್ರಾಂತದ ಶಾಸನ ಸಭೆಯಲ್ಲಿ, ತೆಲುಗು ಮಾತಾಡುವವರು, ತಮಿಳರು, ಮಲಯಾಳಿಗರು, ಕನ್ನಡಿಗರು, ಕನ್ನಡಿಗರು ಕೈಬೆರಳಲ್ಲಿ ಎಣಿಸುವಷ್ಟು, ಹೀಗೆ ಒಂದು ಭಾಷೆಯ ಕಲಸು ಮೇಲೋಗರ. ವ್ಯವಹಾರ ಭಾಷೆ ಇಂಗ್ಲಿಷ್. ಎಲ್ಲ ಸದಸ್ಯರಿಗೂ ಇಂಗ್ಲಿಷ್ ಬರುತ್ತದೊ ಇಲ್ಲವೊ, ಅಂತೂ ಆಡಳಿತದ ಭಾಷೆ ಇಂಗ್ಲಿಷ್. ಹೀಗೆಯೇ ಬೊಂಬಾಯಿ. ಹೀಗೆಯೇ ಇತರ ಪ್ರಾಂತಗಳು. ಹೈದರಾಬಾದು, ಮೈಸೂರು, ಕೊಡಗು, ಇಲ್ಲಿ ಕನ್ನಡ, ತೆಲುಗು, ಮರಾಠಿ ಭಾಷೆ ಜನರ ಸಮ್ಮಿಶ್ರ. ಇವು ಯಾವ ಪ್ರಾಂತದ ಆಡಳಿತಕ್ಕೂ ಸಿಕ್ಕದೆ ಪ್ರತ್ಯೇಕವಾಗಿ ದೇಶೀಯ ರಾಜರ ಕೈಗೆ ಸಿಕ್ಕ ಸಂಸ್ಥಾನಗಳು. ಇದು ಬ್ರಿಟಿಷರ ಇನ್ನೊಂದು ಅವಾಂತರ. ಒಂದು ಮಾತನಾಡುವ ನಾಲ್ಕು ಮಂದಿಯನ್ನ ಒಂದು ಕಡೆ ಸೇರಿಸಿದರೆ ಇವರೆಲ್ಲ ಒಂದಾಗಿ ಒಂದು ದಿನ ನಮ್ಮ ಮೇಲೆ ದಂಗೆ ಎದ್ದಾರು ಎಂದೇ ಬ್ರಿಟಿಷರು ಹೀಗೆ ಕಲಸುಮೇಲೋಗರ ಮಾಡಿ ಪ್ರಾಂತ ನಿರ್ಮಿಸಿದರು.

ಈ ಸತ್ಯ ಬ್ರಿಟಿಷರಿಗೆ ಕಂಡಿತ್ತು. ಮೋಂಟ್ ಫೋರ್ಡ್ (Mont Ford) ಮತ್ತು ಸೈಮನ್ (Simon) ವರದಿಗಳು ಈ ಸತ್ಯವನ್ನ ಬಯಲಿಗೆಳೆದಿದ್ದುವು. ಆಗ ಭಾಷಾತತ್ವದ ತಳಹದಿಯ ಮೇಲೆ ಗಡಿನಾಡು ಪ್ರಾಂತ (ಈಗ ಪಾಕಿಸ್ಥಾನದಲ್ಲಿದೆ), ಅಸ್ಸಾಂ, ಬಿಹಾರ್, ಸಿಂಧು ಮತ್ತು ಒರಿಸ್ಸಾ ಪ್ರಾಂತಗಳನ್ನ ನಿರ್ಮಿಸಿದರು. ಅಲ್ಲದೆ ಈ ವರದಿ, ಇನ್ನುಳಿದ ಪ್ರಾಂತಗಳನ್ನೂ ಈ ತತ್ವಕ್ಕನುಗುಣವಾಗಿ ನಿರ್ಮಿಸಬೇಕೆಂದು ಸಲಹೆ ಮಾಡಿತ್ತು.

ಭಾರತದ ಸ್ವಾತಂತ್ರ್ಯ ಚಳವಳಿಯ ಜತೆಯಲ್ಲೇ ಭಾಷಾಪ್ರಾಂತದ ಚಳುವಳಿಯೂ ಹುಟ್ಟಿದೆ. 1917 ರಿಂದ ಕಾಂಗ್ರೆಸ್ ಸಂಸ್ಥೆ ಬ್ರಿಟಿಷರ ಪ್ರಾಂತಗಳನ್ನ ಮನ್ನಿಸದೆ, ತನ್ನ ಆಡಳಿತಕ್ಕಾಗಿ ಪ್ರಾಂತಗಳನ್ನ ಭಾಷಾವಾರು ವಿಂಗಡಿಸಿಕೊಂಡಿತ್ತು. 1917ರಲ್ಲಿ ಮೊದಲು ನಿರ್ಮಿತವಾದದ್ದು ಆಂಧ್ರ. ಆಗಲೇ ಕರ್ಣಾಟಕದ ಚಳವಳಿಯೂ ಇತ್ತು. 1921ರಲ್ಲಿ ಕರ್ಣಾಟಕ ಕಾಂಗ್ರೆಸ್ ಪ್ರಾಂತ, ಹಾಗೆ, ಕೇರಳ, ಹಾಗೆ, ಮಹಾರಾಷ್ಟ್ರ ಹೀಗೆ ಒಂದೊಂದಾಗಿ ನಿರ್ಮಿತವಾದುವು. 1928ರಲ್ಲಿ ನೆಹರು ಸಮಿತಿ ವರದಿ ತನ್ನ ಸ್ಪಷ್ಟೋಕ್ತಿಯಿಂದ ಭಾಷಾವಾರು ಪ್ರಾಂತದ ಅವಶ್ಯಕತೆಯನ್ನ ವಿವರಿಸಿದೆ. ಕರ್ಣಾಟಕ ಪ್ರಾಂತದ ವಿಚಾರವಾಗಿ ವರದಿ ಮಾಡುತ್ತಾ ಕರ್ಣಾಟಕ ಪ್ರಾಂತ ನಿರ್ಮಾಣ ಪ್ರಶ್ನೆಗೆ ಬಲವಾದ ಅರ್ಹತೆ ಇದೆ. ಆರ್ಥಿಕ ದೃಷ್ಟಿಯಿಂದ ಕರ್ಣಾಟಕ ಪ್ರಾಂತ ಸ್ವಾವಲಂಬನ ಪ್ರಾಂತವಾಗುವುದರಲ್ಲಿ ಸಂಶಯವಿಲ್ಲ. ಬ್ರಿಟಿಷ್ ಕರ್ಣಾಟಕ ಭಾಗಗಳೇ ಉಳಿಕೆಯ ಭಾಗಗಳಾಗಿವೆ ಎಂದಿದೆ.

ಭಾಷಾಪ್ರಾಂತದ ಪ್ರಶ್ನೆಯನ್ನ ಕರ್ಣಾಟಕ ಏಕೀಕರಣದ ದೃಷ್ಟಿಯಿಂದ ವಿಮರ್ಶಿಸುವ. ಏಕೀಕರಣದ ಚಳುವಳಿ ಈಗ ಸುಮಾರು 43 ವರ್ಷಗಳಿಗೂ ಹಿಂದಿನದು. 1907ರಲ್ಲಿ ಧಾರವಾಡದಲ್ಲಿ ಮೊದಲ ಕನ್ನಡ ಬರಹಗಾರರ ಒಂದು ಸಮ್ಮೇಳನ ನಡೆಯಿತು. ಅದರ ವ್ಯವಸ್ಥಾಪಕರು, ಅಂದಿನ ಕಾಂಗ್ರೆಸ್ ಸಂಸ್ಥೆಯ ಪ್ರಮುಖನಾಯಕರು. 1917ರಲ್ಲಿ ಪ್ರ. ಪ್ರಥಮವಾಗಿ ಕರ್ಣಾಟಕ ಏಕೀಕರಣದ ನಿರ್ಣಯ ಗೊತ್ತು ಮಾಡಲಾಯಿತು. 1915ರಲ್ಲಿ ಬೆಂಗಳೂರಲ್ಲಿ ಕರ್ಣಾಟಕದ ನಾಲ್ಕು ಮೂಲೆಯ ಕನ್ನಡದ ಹಿರಿಯರೂ ಸೇರಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಶ್ರೀಗಳಾದ ಕಡೆಕಾರ್ ರಾಜಗೋಪಾಲಕೃಷ್ಣರಾಯರು, ಬೆನೆಗಲ್ ರಾಮರಾಯರು, ಆಲೂರ ವೆಂಕಟರಾಯರು, ರೂದ್ದ, ಕರಿಗುದರಿ, ಕರ್ಪೂರ ಶ್ರೀನಿವಾಸರಾಯರು ಮುಂತಾದವರು ಈ ಸಂಸ್ಥೆಯ ಸ್ಥಾಪಕರು. ಆಗಿನ ಮೈಸೂರು ದಿವಾನರಾಗಿದ್ದ ಶ್ರೀ ಸರ್. ಎಂ. ವಿಶ್ವೇಶ್ವರಯ್ಯನವರು, ನಂತರದ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರು ತಮ್ಮ ಸಂಪೂರ್ಣ ಬೆಂಬಲವಿತ್ತು ಪರಿಷತ್ತಿನ ಅಸ್ತಿತ್ವಕ್ಕೆ ಕಾರಣರಾದರು. ಆಳಿದ ಮಹಾಸ್ವಾಮಿಯವರು

ಪರಿಷತ್ತಿನ ಮಹಾಪೋಷಕರಾಗಿದ್ದರು. ಪರಿಷತ್ತಿನ ಗುರಿ, ನಾಡ, ನುಡಿಯ ಏಕೀಕರಣವಾಗಿತ್ತು. ಮೈಸೂರು ಏಕೀಕರಣ ತತ್ವ ಸಮೂಲವಾಗಿ ಅಂಗೀಕರಿಸಿತ್ತು ಅನ್ನುವುದಕ್ಕೆ ಇದು ನಿದರ್ಶನವಲ್ಲವೆ? ಸರ್ ಮಿರ್ಜಾ ಇಸ್ಮಾಯಿಲ್‌ರವರ ಕೃಪೆಯಿಂದ ಕರ್ಣಾಟಕ ಏಕೀಕರಣ ಪ್ರಶ್ನೆ 1931ರಲ್ಲಿ ಲಂಡನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನ ಮುಂದೆಯೂ ಚರ್ಚೆಗೆ ಬಂದಿತ್ತು. ಸರ್ ಮಿರ್ಜಾರವರು 1939ರಲ್ಲಿ ಮಂಗಳೂರಲ್ಲಿ ಒಂದು ಭಾಷಣದ ಸಂದರ್ಭದಲ್ಲಿ ಮೈಸೂರು ಮಂಗಳೂರು ಒಂದಾಗುವುದರಿಂದ ಮೈಸೂರು ವ್ಯಾಪಾರಕ್ಕೆ ಬಹಳ ಅನುಕೂಲ ಅಲ್ಲದೆ ಕರ್ಣಾಟಕ ಏಕೀಕರಣದ ಕೆಲಸವೂ ಇದರಿಂದ ಬಹಳ ಸುಲಭವಾಗುತ್ತದೆ ಅಂದಿದ್ದರು. 1924ರಲ್ಲಿ ಬೆಳಗಾಂವಿಯಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ ಸೇರಿದ ರಾಷ್ಟ್ರೀಯ ಕಾಂಗ್ರೆಸ್ ಏಕೀಕರಣದ ನಿರ್ಣಯವನ್ನ ಅಂಗೀಕರಿಸಿತು.

ಕರ್ಣಾಟಕ ಪ್ರಾಂತದ ಬೇಡಿಕೆ ಭಾವಾತಿರೇಕದಿಂದ ಕೂಡಿದ್ದಲ್ಲ. ಅಥವಾ ಇದೊಂದು ಕನಸೂ ಅಲ್ಲ. ಇದು ಕಾರ್ಯರೂಪಕ್ಕೆ ಬರಬಹುದಾದ, ಒಂದು ರಚನಾತ್ಮಕವಾದ ಬೇಡಿಕೆ. ಒಂದು ಲಕ್ಷ ನಲವತ್ತೇಳು ಸಾವಿರದ ಇನ್ನೂರ ಅರವತ್ತೊಂದು ಚದರ ಮೈಲಿ ವಿಸ್ತೀರ್ಣವುಳ್ಳ ಎರಡು ಕೋಟಿ ಪ್ರಜಾಸಂಖ್ಯೆಯಿಂದ ಒಡಗೂಡಿದ, ಇಪ್ಪತ್ತುಕೋಟಿ ರೂಪ್ಯಾ ವರಮಾನವುಳ್ಳ ಸುಮಾರು 200 ಮೈಲಿಯಷ್ಟು ಕರಾವಳಿ ಪ್ರದೇಶದಿಂದ ಆವೃತ್ತವಾದ ಕನ್ನಡನಾಡು ಭಾರತ ಒಕ್ಕೂಟದ ಒಂದು ಪ್ರಾಂತವಾಗಲು ಅರ್ಹತೆಯುಳ್ಳದ್ದಾಗಿಲ್ಲವೆ? ಇತರ ಪ್ರಾಂತಗಳಿಗೆ ಇದನ್ನ ಹೋಲಿಸಿದರೆ ಕರ್ಣಾಟಕದ ಪ್ರಶ್ನೆಯ ಅರ್ಹತೆ ತಿಳಿಯುವುದಿಲ್ಲವೆ?

ಪ್ರಾಂತ	ವಿಸ್ತೀರ್ಣ		ಜನಸಂಖ್ಯೆ	ವರಮಾನ	
ಸಿಂಧ್	48,136	ಚ. ಮೈ.	45,35,008	8·0	ಕೋಟಿ
ಆಸ್ಸಾಂ	54,941	,,	1,02,04,733	5·15	,,
ಓರಿಸ್ಸಾ	32,198	,,	87,28,544	3·6	,,

ಇನ್ನು ಕರ್ಣಾಟಕದ ಚಾರಿತ್ರಿಕ, ಇತಿಹಾಸ, ಕಲೆಯ ಬೆಳವಣಿಗೆ ಇವುಗಳನ್ನೆಲ್ಲ ವಿವರಿಸುವ ಅವಶ್ಯವಿಲ್ಲ. ಪಲ್ಲವ, ಕದಂಬ, ಚಾಳುಕ್ಯ, ರಾಷ್ಟ್ರಕೂಟ, ವಿಜಯನಗರ ಸಾಮ್ರಾಜ್ಯಗಳ ಏಳ್ಗೆಯ ಇತಿಹಾಸವೇ ಇದಕ್ಕೆ ಸಾಕ್ಷಿ. ಕರ್ಣಾಟಕದ ಕಲೆಯ ವೈಭವಕ್ಕೆ ಹಂಪಿಯ ಕಲ್ನಾಡು ಸಾಕ್ಷಿ.

ಈಗಿನ ಪ್ರಾಂತಗಳ ಕ್ರಮದಿಂದ ಕನ್ನಡಿಗನಿಗೆ ಆದ ಅಪರಾಧ ಅಷ್ಟಿಷ್ಟಲ್ಲ. ದಕ್ಷಿಣ ಕನ್ನಡ ಜಿಲ್ಲೆ ಪ್ರಾಂತದ ಕೇಂದ್ರ ಪಟ್ಟಣಕ್ಕಿಂತ 500 ಮೈಲು ದೂರದಲ್ಲಿದೆ. ಹಾಗೆ ಉತ್ತರ ಕರ್ಣಾಟಕ ಬೊಂಬಾಯಿಗೆ. ಪ್ರಾಂತಗಳ ಬಾಲದ ತುದಿಯಲ್ಲಿರುವ ಈ ಪ್ರದೇಶಗಳ ಗತಿಯನ್ನು ಇತ್ಯರ್ಥಿಸುವುದಾದರೂ ಹೇಗೆ? ಇನ್ನು ಈ ಕನ್ನಡ ಭಾಗಗಳಿಗೆ ಬರುವ ಆಡಳಿತದ ಅಧಿಕಾರಿಗಳೂ ಕನ್ನಡದ ಲಿಪಿಯನ್ನೂ ಕಾಣದವರು. "ಕೆನರೀಜ"ದ ಸಂತಾನಕ್ಕೆ ಸೇರಿದವರು. ಇನ್ನು ಕನ್ನಡ ಬಲ್ಲ ದಕ್ಷ ನೌಕರರು ಕನ್ನಡವಲ್ಲದ ಜಿಲ್ಲೆಗಳಿಗೆ ಅಧಿಕಾರಿಗಳು. ಹೀಗೆ ಇದು ಒಂದು ಪರಂಪರೆಯಿಂದ ನಡದು ಬಂದಿದೆ.

ಇಂದು ಕರ್ನಾಟಕದ ಪ್ರಶ್ನೆ ಬರಿಯ ಕನ್ನಡಿಗನ ಪ್ರಶ್ನೆ ಮಾತ್ರವಲ್ಲ. ಇಡಿಯ ಇಂಡಿಯಕ್ಕೆ ಸೇರಿದ ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬ ಭಾರತೀಯನಿಗೂ ಅವನವನ ಮಾತೃಭಾಷೆಯಲ್ಲಿ ಖಡ್ಡಾಯವಾಗಿ ಶಿಕ್ಷಣ ದೊರೆಯಬೇಕು. ಯಾವ ಜಾತಿ, ಪಂಗಡ, ಗುಂಪು ಇವುಗಳ ಭೇದಭಾವಗಳಿಲ್ಲದೆ ಪ್ರತಿಯೊಬ್ಬನಿಗೆ ಸಮಾನ ಸ್ಥಾನ ಸಮಾನನ್ಯಾಯ ದೊರೆಯಬೇಕು. ಪ್ರಜೆಯ ಅಪೇಕ್ಷೆಯಂತೆ, ಇಷ್ಟದಂತೆ, ಸರಕಾರ ನಡೆಯಬೇಕಾದಲ್ಲಿ, ಪ್ರಜೆಯಿಂದಲೇ ಚುನಾಯಿತರಾದ ಸದಸ್ಯರ ಶಾಸನ ಸಭೆ ಇರಬೇಕು. ಆ ಪ್ರಜೆಗಳಿಗೆ ತಮ್ಮದೇ ಆದ ಒಂದು ವಿಶ್ವವಿದ್ಯಾನಿಲಯ, ಒಂದು ನ್ಯಾಯಸ್ಥಾನ, ಹೀಗೆ ಇವೆಲ್ಲ ಪ್ರಜಾಪ್ರಭುತ್ವದ ಜೀವಾಳದ ಕುರುಹು, ಚಿಹ್ನೆ. ಕನ್ನಡಿಗನಿಗೆ ಇವೆಲ್ಲ ಎಲ್ಲಿ? ಪ್ರಜಾಪ್ರಭುತ್ವದ ನೀತಿಗೆ ಒಳಪಟ್ಟ ಸ್ವತಂತ್ರ ಭಾರತದಲ್ಲಿ ಕನ್ನಡಿಗನಿಗೂ ಅದರ ಸಮಭಾಗ ಬೇಡವೆ? ಎರಡು ಕೋಟಿ ಕನ್ನಡ ಪ್ರಜೆಗಳಿಗೆ ಪ್ರಜಾಪ್ರಭುತ್ವ ರಾಜ್ಯಾಂಗದಲ್ಲಿ ಪಾಲು ಇಲ್ಲವೆ? ಆಡಳಿತದ ದೃಷ್ಟಿಯಿಂದ ಕರ್ಣಾಟಕದ ಕೈಕಾಲು ಈಗಿರುವಂತೆ ಮುರಿದು ಹಾಕಿದರೆ ಇದು ಭಾರತದ ಸರ್ವತೋಮುಖ ಅಭಿವೃದ್ಧಿಗೆ ತೊಡಕಾಗಿ ನಿಲ್ಲುವುದು ನಿಶ್ಚಯ; ಖಂಡಿತ.

ಕರ್ಣಾಟಕ ಪ್ರಾಂತ ನಿರ್ಮಾಣಕ್ಕೆ ಹಿಂದೆ ಇದ್ದ ತೊಡಕುಗಳು ಈಗ ಬಹುಮಟ್ಟಿಗೆ ಮಾಯವಾಗಿವೆ.

ಭಾರತದ ದಾಸ್ಯ ದೊಡ್ಡ ತೊಡಕಾಗಿತ್ತು. 1947ರ ಆಗಸ್ಟ್ 15ರ ನಂತರ ಭಾರತ ಸ್ವತಂತ್ರ ರಾಷ್ಟ್ರ. ಆದ್ದರಿಂದ ಈ ತೊಡಕು ನಿವಾರಣೆಯಾಯಿತು. ದಕ್ಷಿಣ ಸಂಸ್ಥಾನಗಳು ಮುಂಬಯಿ ಪ್ರಾಂತದಲ್ಲಿ ಐಕ್ಯವಾಗಿ ಕನ್ನಡದ ಸಮಸ್ಯೆ ಬಹುಮಟ್ಟಿಗೆ ಹಗುರವಾಗಿದೆ. ಆದರೂ ಹೈದರಾಬಾದು, ಮೈಸೂರು, ಕೊಡಗು ಹಾಗೆಯೇ ಉಳಿದಿವೆ. ಹೈದರಾಬಾದಿನಲ್ಲಿ ಸುಮಾರು ೨೬ ಸಾವಿರ ಚದರ ಮೈಲಿಯ ಪ್ರಾಂತ ಕನ್ನಡಕ್ಕೆ ಸೇರಿದ್ದು. ಆದರೆ ಇಂದು ಹೈದರಾಬಾದು ಬರಿಯ ಕನ್ನಡಕ್ಕೆ ಮಾತ್ರವಲ್ಲ, ಮಹಾರಾಷ್ಟ್ರ, ಆಂಧ್ರಗಳಿಗೂ ಸೇರಿದ ಪ್ರಶ್ನೆಯಾಗಿದೆ. ಇಷ್ಟರಲ್ಲೇ ಸೇರಲಿರುವ ಹೈದರಾಬಾದ್ ರಾಜ್ಯಾಂಗಸಭೆ ಹೈದರಾಬಾದಿನ ಮುಂದಿನ ಭವಿಷ್ಯವನ್ನ ಇತ್ಯರ್ಥಿಸಲಿದೆ.

ಹೈದರಾಬಾದ್ ಬಿಟ್ಟರೆ, ಉಳಿದ ದೊಡ್ಡ ತೊಡಕು ಮೈಸೂರು. ಇಲ್ಲಿನ ಜನಸಂಖ್ಯೆ ಸುಮಾರು ಎಪ್ಪತ್ತೈದು ಲಕ್ಷ. ವಿಸ್ತೀರ್ಣ 30,000 ಚ. ಮೈ. ಉತ್ಪನ್ನ ಸುಮಾರು 10 ಕೋಟಿ ರೂ. ಮೈಸೂರು ಆರ್ಥಿಕ ವಿಷಯದಲ್ಲಿ ಸ್ವಲ್ಪ ಮುಂದುವರಿದಿದೆ ಎನ್ನಬಹುದು. ಅರ್ಧ ಶತಮಾನಕ್ಕಿಂತಲೂ ಹೆಚ್ಚುಕಾಲ ಇಲ್ಲಿ ಸುವ್ಯವಸ್ಥಿತವಾದ ಆಡಳಿತವಿದ್ದು, ಪ್ರಜಾಪ್ರಿಯರಾದ ಅರಸುಮನೆತನವಿದ್ದು, ಸಂಸ್ಥಾನದ ನಾನಾ ಮುಖ ಬೆಳವಣಿಗೆಗೆ ಸಹಾಯವಾಗಿದೆ. ಹಾಗಂತ ಕರ್ಣಾಟಕದ ಇತರ ಭಾಗಗಳೇನೂ ಹಾಳು ಮೂಲೆಗಳಲ್ಲ. ಆದರೆ ಸಾಕಷ್ಟು ಪ್ರೋತ್ಸಾಹವಿಲ್ಲದೆ ಹಿಂದುಳಿದ ಪ್ರಾಂತಗಳಾಗಿ ಉಳಿದಿವೆ. ಒಂದು ದೃಷ್ಟಾಂತ ಹೇಳುವುದಾದರೆ, ಕರ್ಣಾಟಕಕ್ಕೆ ಯಾವ ಒಂದು ಯೋಜನೆಯೂ ಇಲ್ಲದೆ, ಒಂದು ಹೊಳೆ ಅತ್ತ ಹರಿಯುವುದನ್ನ ಇತ್ತ ಹರಿಸದೆ, ನೈಸರ್ಗಿಕ ಅನುಕೂಲದಿಂದ ಮಾತ್ರ, ಕರ್ಣಾಟಕದ ಪ್ರಾಂತಗಳು ಆಹಾರದಲ್ಲಿ ಉಳಿಕೆಯ ಪ್ರಾಂತಗಳು. ಮೈಸೂರು, ಕಾವೇರಿಯನ್ನು ತಡದು ನಿಲ್ಲಿಸಿ ಇರ್ವಿನ್ ನಾಲೆಯ ಮೂಲಕ ಗದ್ದೆ ಗದ್ದೆಗಳಿಗೆ ನೀರು ಹರಿಸಿಯೂ, ಆಹಾರದಲ್ಲಿ ಕೊರತೆಯ ಪ್ರಾಂತ. ಇವೆರೆಡೂ ಸೇರಿದರೆ ಆಹಾರದಲ್ಲಿ ಕರ್ಣಾಟಕ ಸ್ವಾವಲಂಬನ ಪ್ರಾಂತವಾಗುವುದರಲ್ಲಿ ಸಂಶಯವೇ ಇಲ್ಲ. ಇಡಿಯ ರಾಷ್ಟ್ರಕ್ಕೆ ಉಪಯುಕ್ತವಾದ ಪ್ರಬುದ್ಧ ಬಂದರ ಕರ್ಣಾಟಕದಲ್ಲಿದೆಯಾದ ಮೇಲೆ ವ್ಯಾಪಾರದಲ್ಲಿ ಕರ್ಣಾಟಕ ಎಷ್ಟು ಮುಂದುವರಿಯಬಹುದೆಂದು ಊಹಿಸಿ ನೋಡಿ.

ಮೈಸೂರು ಒಂದು ತೊಡಕು ಅಂದೆ, ಅಲ್ಲವೆ? ಹೌದು. ಅದು ಹೇಗೆ ಎಂದು ವಿವರಿಸುತ್ತೇನೆ. ಮೈಸೂರು ಒಂದು ದೇಶೀಯ ಸಂಸ್ಥಾನ. ಮೈಸೂರ ಚರಿತ್ರೆ ಸಾಧುವಾದ ಚರಿತ್ರೆಯಲ್ಲ. ಮೈಸೂರ ಅರಸ ಕರ್ಣಾಟಕದ ಅರಸು ಆಗಿದ್ದ. ಅಂದಿನ ಕರ್ಣಾಟಕ ಕಾವೇರಿಯಿಂದ ಗೋದಾವರಿಯ ತನಕದ್ದು. ಆ ಕಂತೆ ಪುರಾಣ ಕಟ್ಟಿಕೊಂಡು ನಮಗೇನು ಆಗಬೇಕು? ಇಂದಿನ ಮೈಸೂರು ನೋಡುವ. ಇದು ಒಡೆಯರ ಮೈಸೂರು. 1881ರ ಒಂದು ಚಾರಿತ್ರಿಕ "ಆಕಸ್ಮಿಕ" ಇಂದಿನ ಮೈಸೂರು ಹೀಗಿರಲು ಕಾರವಾಯಿತು. ಮೈಸೂರಿನ ಇಂದಿನ ರಾಜರು ಮೈಸೂರ ಪ್ರಜೆಗಳಿಗೆ ಜವಾಬ್ದಾರಿ ಸರಕಾರ ಒಪ್ಪಿಸಿದ್ದಾರೆ. ರಾಜರು ಇಂದು ಶಾಸನಬದ್ಧ ರಾಜರು.

ಮೈಸೂರ ಸಂಸ್ಥಾನ ಕಾಂಗ್ರೆಸ್ ಮತ್ತು ಅದರ ಮುಂದಾಳುಗಳು ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತ ರಚನೆಗೆ ಯಾವಾಗಲೂ ಬೆಂಬಲ ಕೊಟ್ಟಿರುವರು. 5—11—1949ರಂದು ದಾವಣಗೆರೆಯಲ್ಲಿ ಸೇರಿದ ಮೈಸೂರ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಈ ತತ್ವ ಒಪ್ಪಿಕೊಂಡಿದೆ. ಮೈಸೂರ ರಾಜ್ಯಾಂಗ ಸಭೆ (ಇಂದು ಅದು ಶಾಸನ ಸಭೆ) ಕನ್ನಡದ ಇತರ ಭಾಗಗಳನ್ನು ಸೇರಿಸಿಕೊಂಡು ಮಹಾರಾಜರ ಶಾಸನಬದ್ಧ ಅಧಿಕಾರಕ್ಕೆ ಒಳಪಟ್ಟ ಕರ್ಣಾಟಕ ಪ್ರಾಂತ್ಯಕ್ಕೆ ಸಂಪೂರ್ಣ ಅವಕಾಶ ಕಲ್ಪಿಸಿ ನಿರ್ಣಯ ಹಿಂದೆಯೇ ಮಾಡಿದೆ.

ಇಂದು ಈ ತತ್ವ ವಿರೋಧಿಸುವ ಮೈಸೂರಿಗರು, ಒಂದೇ ಸ್ವಾರ್ಥಿಗಳು, ಇಲ್ಲ ಅವರು ಮೈಸೂರಿಗರಲ್ಲ. ತಮಿಳ, ತೆಲುಗ ಪ್ರಭಾವವುಳ್ಳ ಮೈಸೂರಿಗರಿಂದ ಇಂತಹ ಆಕ್ಷೇಪದ ಮಾತು ಮುಂದೆ ಬರುತ್ತಿದೆ. ಕೇಂದ್ರ ಸರಕಾರವಾಗಲೀ ಕಾಂಗ್ರೆಸ್ ಹೈಕಮಾಂಡ್ ಆಗಲೀ ಇದನ್ನೇ ಎತ್ತಿ ಆಡಬಾರದು.

ಕೇಂದ್ರ ಸರಕಾರದ ಸಂಸ್ಥಾನಗಳ ಶಾಖೆ ಭಾರತಾದ್ಯಂತ ಒಂದೇ ಸಮನಾದ ಆಡಳಿತವನ್ನ ಏರ್ಪಡಿಸುವ ಉದ್ದಿಶ್ಯ, ಸುಮಾರು ಆರುನೂರ ಸಂಸ್ಥಾನಗಳನ್ನ ಒಂದಲ್ಲ ಒಂದು ರೀತಿ ವಿಲಯನಗೊಳಿಸಿ ಆ ನೆಲಗಳನ್ನ ಪ್ರಾಂತದ ಮಟ್ಟಕ್ಕೆ ತಂದಿದೆ. ಹಾಗೆ ಆಗದೆ ಉಳಿದವು ಕಾಶ್ಮೀರ, ಹೈದರಾಬಾದು, ಮೈಸೂರು.

ಕಾಶ್ಮೀರ, ಅಂತರರಾಷ್ಟ್ರೀಯ ಪ್ರಶ್ನೆ. ಹೈದರಾಬಾದು, ಅಲ್ಲಿನ ಪ್ರಜೆ ಮತ್ತು ರಾಜ್ಯಾಂಗ ಸಭೆ ಇತ್ಯರ್ಥಿಸಬೇಕಾದ ವಿಚಾರ. ಅದೂ ವಿಲಯನ ಆಗದೆ ಉಳಿಯದು. ಅದರ ಸಂಬಂಧ ಪೂರ್ತ ಭಾರತದೊಡನೆಯೇ ಇದೆ. ಇಂದು ರಜಕರರ ಹಾವಳಿಯಿಂದ ತಪ್ಪಿಸಿ ಅದರ ಅಸಿತ್ವಕ್ಕೆ ಕಾರಣವಾದದ್ದು ಭಾರತದ ಸರಕಾರ ಅಂದಮೇಲೆ ಹೈದರಾಬಾದು ಬಹಳ ದೊಡ್ಡ ತೊಡಕಾಗಿ ನಿಲ್ಲುವುದಿಲ್ಲ. ಮೈಸೂರು ಏಕೆ ಹೀಗೆ ಉಳಿಯಿತೋ ಹೇಳುವುದು ಕಷ್ಟ. ಭಾರತ ಸ್ವತಂತ್ರ ಆದ ಮರು ದಿನದಿಂದ ಭಾರತದ ಹಿರಿಯ ಕಾಂಗ್ರೆಸ್ ಭಕ್ತರೇ ಭಾಷಾ ಪ್ರಾಂತದ ತತ್ವ ವಿರೋಧಿಸುತ್ತಾ ಬಂದರು. ಅದೇ ನೆಪವಾಗಿ ಮೈಸೂರನ್ನ ವಿಲಯನಗೊಳಿಸದೆ ಉಳಿಸಿದರೋ ಹೇಳುವುದು ಕಷ್ಟ. ಸಂಸ್ಥಾನದ ಶಾಖೆ ಮನಸ್ಸು ಮಾಡಿದ್ದರೆ ಮೈಸೂರ ವಿಲಯನ ಏನು ಅಂಥ ಪ್ರಮಾದದ ಪ್ರಶ್ನೆ ಅಲ್ಲ. ಕರ್ಣಾಟಕಕ್ಕೆ ಅಡ್ಡಗಾಲಾಗಿ ಇದೊಂದು ಇರಲಿ ಎಂದು ಹೀಗೆ ಮಾಡಿದರೇ? ಸಂದೇಹ. ಮೈಸೂರ ಆರ್ಥಿಕ ವಿಲಯನ, ರೈಲ್ವೆ ಸಮಾವೇಶ, ಕೈಗಾರಿಕಾ ಸಮೀಕರಣ ಎಲ್ಲವೂ ನಡದೇ ಇದೆ. ಇನ್ನೂ ವಿಲಯನಕ್ಕೆ ಮಾತ್ರ ಮೈಸೂರ ಪ್ರಜೆ ಅಡ್ಡಿ ಎಂದರೆ ನಂಬಲಾರದ ಮಾತು. ಅರಸೊತ್ತಿಗೆ ವಿಚಾರ; ಭಾರತದ ಮುಂದಿನ ಆಡಳಿತದ ವ್ಯವಸ್ಥೆಯಲ್ಲಿ ರಿಪಬ್ಲಿಕ್ ಅಧ್ಯಕ್ಷರನ್ನ ಬಿಟ್ಟರೆ ಇದಕ್ಕಿಂತ ದೊಡ್ಡ ಆಡಳಿತದ ಅಧಿಕಾರಿ ಯಾರೂ ಇಲ್ಲ. ಗವರ್ನರ್, ರಾಜಪ್ರಮುಖ ಎಲ್ಲವೂ ಇವರ ಆಧೀನ. ರಾಜಪ್ರಮುಖ, ಗವರ್ನರ್ ಪದವಿಗಳು ಅನುವಂಶೀಯವಲ್ಲ. ಇದನ್ನೆಲ್ಲ ಗಮನಿಸಿಯೇ ಕನ್ನಡಿಗರು ಮೈಸೂರ ದೊರೆಯನ್ನ ಕನ್ನಡದ ಗವರ್ನರ್ ಆಗಲಿ ಅಂತ ಒಪ್ಪಿದ್ದಾರೆ. ರಾಜರ ಪ್ರಶ್ನೆ ಇತರ ಪ್ರಶ್ನೆಗಳಂತೆಯೇ ಕೇಂದ್ರದ ಸಂಸ್ಥಾನಗಳ ಶಾಖೆ ಇತ್ಯರ್ಥಿಸಲಿ. ಅದು ಕರ್ಣಾಟಕಕ್ಕೆ ತೊಡಕಾಗುವುದು ಬೇಡ. ಕರ್ಣಾಟಕಕ್ಕೆ ರಾಜರಿದ್ದರೂ ಒಪ್ಪಿಗೆ, ಇಲ್ಲವಾದರೂ ಒಪ್ಪಿಗೆ.

1950ರ ಜನವರಿ 26ರ ನಂತರ ಭಾರತಾದ್ಯಂತ ಪ್ರಾಂತ ಸಂಸ್ಥಾನಗಳ ಭೇದವೇ ಇಲ್ಲ. ಎಲ್ಲವೂ ಅಮೇರಿಕದ ಸಂಸ್ಥಾನಗಳಂತೆ (States) ಸಂಸ್ಥಾನಗಳೆಂದು ಕರೆಯಲ್ಪಡುತ್ತದೆ. ಮೈಸೂರ್ ಒಂದು ಸಂಸ್ಥಾನ. ರಾಜರು ಮೈಸೂರಿಗೆ ರಾಜಪ್ರಮುಖರು. ಇತರ ಕಡೆಗಳಲ್ಲಿ ಗವರ್ನರ್ ಇದ್ದ ಹಾಗೆ. ಆಗ ಮೈಸೂರು, ಕನ್ನಡದ ಭಾಗಗಳು ಸೇರಿ ಕರ್ಣಾಟಕ ಆಗುವುದು ಸುಲಭವಲ್ಲವೆ? ಇದು ಆಡಳಿತಕ್ಕೆ ಒಳಪಟ್ಟ ಕರ್ಣಾಟಕದ ಪ್ರದೇಶಗಳನ್ನ ಒಂದು ಆಡಳಿತಕ್ಕೆ ತರುವುದು ಹಿತ, ಅನುಕೂಲ, ಪ್ರಜಾಪ್ರೀತಿಗೆ ಕಾರಣವಲ್ಲವೆ?

1947ರ ಆಗಸ್ಟ 15ರ ನಂತರ ಕಾಂಗ್ರೆಸ್‌ನ ಆಡಳಿತಕ್ಕೆ ಒಳಪಟ್ಟ ಭಾರತ, ತನ್ನ ಹೊಸ ರಾಜ್ಯಾಂಗ ನಿರ್ಮಿಸುವ ಕಾಲದಲ್ಲಿ ಭಾಷಾಪ್ರಾಂತದ ಪ್ರಶ್ನೆಗೆ ಯಾವ ರೂಪು ಕೊಟ್ಟಿದೆ, ಈ ಪ್ರಾಂತಗಳ ನಿರ್ಮಾಣದ ಕೆಲಸ ಹೇಗೆ ಕೈಗೊಂಡಿದೆ ಎಂದು ವಿಮರ್ಶಿಸುವುದು ಅವಶ್ಯವಿದೆ. ಹೊಸ ರಾಜ್ಯಾಂಗದ ಕರಡಿನಲ್ಲಿ ಹೊಸ ಪ್ರಾಂತಗಳ ಹೆಸರು ನಿರೂಪ ಆಗದೆ, ಅಂತಹ ಪ್ರಾಂತಗಳ ನಿರ್ಮಾಣಕ್ಕೆ ರಾಜ್ಯಾಂಗದಲ್ಲಿ ಅವಕಾಶವಿಲ್ಲದೆ ಹೋದರೆ ರಾಜ್ಯಾಂಗ ಒಪ್ಪಿಗೆ ಆದ ಮೇಲೆ ಈ ಕೆಲಸ ಸಾಧ್ಯವಲ್ಲ. ಭಾರತದ ರಾಜ್ಯಾಂಗ ರಚನಾ ಸಭೆ 1948ರ ಜೂನ್ 17ರಂದು ಒಂದು ಪ್ರಕಟನೆ ಹೊರಡಿಸಿ, ಭಾಷಾಪ್ರಾಂತಗಳ ನಿರ್ಮಾಣದ ಕುರಿತು, ಅವುಗಳ ಆರ್ಥಿಕ, ಹಣಕಾಸು, ಆಡಳಿತ ಮತ್ತು ಇತರ ವಿಚಾರಗಳನ್ನ ಪರಿಶೀಲಿಸಿ ವರದಿ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಿತು. ಇದರ ಅಧ್ಯಕ್ಷರು ಶ್ರೀ. ಎಸ್. ಕೆ. ಧಾರ್ ಅವರು. ಅಂತಲೇ ಇದು ಧಾರ್ ಸಮಿತಿ. ಈ ಸಮಿತಿ ತನ್ನ ಯಾತ್ರೆ ಮುಗಿಸಿ ಸುಮಾರು 2,000 ಸಾಕ್ಷ್ಯಗಳನ್ನ ಪಡದು 1948ರ ಡಿಸೆಂಬರ್ ತಿಂಗಳಲ್ಲಿ ತನ್ನ ವರದಿ ಒಪ್ಪಿಸಿತು. ಡಾ। ಎಂ. ಆರ್. ಜಯಕರ್ ಹೇಳಿದಂತೆ ಇದು ಒಂದು ಪರ್ವತ ಪ್ರಸವದ ಕತೆಯಂತಿದೆ. ಭಾಷಾ ಪ್ರಾಂತಗಳ ನಿರ್ಮಾಣದ ಪ್ರಶ್ನೆಯನ್ನ ಪರಿಶೀಲಿಸಿ ವರದಿ ಮಾಡು ಅಂದರೆ, ತತ್ವವೇ ಮೂಲತಃ ತಪ್ಪು ಅಂದಿತು ಸಮಿತಿಯ ವರದಿ. ಆದರೂ ಕರ್ಣಾಟಕ, ಕೇರಳ ಪ್ರಾಂತಗಳ ನಿರ್ಮಾಣದ ಅವಶ್ಯಕತೆಯ ಕುರಿತು ವರದಿಯಲ್ಲಿ ಹೇಳಿದ ಮಾತುಗಳು ಗಮನಾರ್ಹವಾಗಿವೆ. ಕನ್ನಡಿಗರ ಮತ್ತು ಕೇರಳದವರ ಬೇಡಿಕೆಗೆ ತಕ್ಷಣ ಗಮನ ಕೊಡುವುದು ಅವಶ್ಯ ಇದೆ. ಈಗಿರುವ ಪ್ರಾಂತಗಳ ಕ್ರಮದಿಂದ ಕನ್ನಡಿಗರಿಗೆ, ಕೇರಳದವರಿಗೆ ಬಹಳ ಅನ್ಯಾಯವಾಗಿದೆ. ಈಗಿರುವ ಮದರಾಸು ಪ್ರಾಂತದಲ್ಲಿ ಇವರು ಶಕ್ತಿಕುಂದಿದ ಅಲ್ಪ ಸಂಖ್ಯಾಕರು. ಈ

ಜನರೇ ತಮ್ಮದೇ ಆದ ಒಂದು ಆಡಳಿತವನ್ನ ಏರ್ಪಡಿಸಿಕೊಂಡು ತಮ್ಮದೇ ಆದ ಒಂದು ನ್ಯಾಯಸ್ಥಾನ, ವಿಶ್ವವಿದ್ಯಾಲಯ ಇವುಗಳನ್ನ ನಿರ್ಮಿಸಿಕೊಂಡಲ್ಲಿ, ಈ ಬುದ್ಧಿವಂತ ಮಂದಿ ಅಭಿವೃದ್ಧಿ ಹೊಂದುವಲ್ಲಿ ಸಂಶಯವಿಲ್ಲ. ಧಾರ್ ಸಮಿತಿ ವರದಿಯ ಈ ಮಾತುಗಳು ಬಹಳ ಸತ್ಯಾಂಶದಿಂದ ಕೂಡಿದೆ.

ಧಾರ್ ಸಮಿತಿಯ ವರದಿಯಿಂದ ನಿರಾಶರಾದ ಜನ ಜಯಪುರ ಕಾಂಗ್ರೆಸ್ ಹೊತ್ತಿಗೆ ಕಾಂಗ್ರೆಸ್ ಅಧ್ಯಕ್ಷ ಡಾ। ಪಟ್ಟಾಭಿಯವರಿಂದ ಒಂದು ರೂಪದ ಪರಿಹಾರ ದೊರೆತೀತೆಂದು ಹಾರೈಸಿದರು. ಬಹಳ ಗದ್ದಲವಾದ ಮೇಲೆ ತ್ರಿಮೂರ್ತಿ ಸಮಿತಿ ನೇಮಕವಾಗಿ ಅದರ ವರದಿಯೂ ಹೊರ ಬಿತ್ತು. ಈ ಮಧ್ಯೆ ರಾಷ್ಟ್ರ ನಾಯಕರು ತಮ್ಮ ಭಾಷಣಗಳಲ್ಲೆಲ್ಲ ಭಾಷಾವಾರು ಪ್ರಾಂತ ತತ್ವವನ್ನ ಹೀನಾಮಾನವಾಗಿ ಖಂಡಿಸಲು ಪ್ರಾರಂಭಿಸಿದರು.

ತ್ರಿಮೂರ್ತಿ ಸಮಿತಿಯ ವರದಿ ಸಮಸ್ಯಾಪರಿಹಾರೋಪಾಯದ ಹಾದಿಯನ್ನ ಗುರುತಿಸಲಿಲ್ಲ. ಕರ್ಣಾಟಕದ ಮಾತಿನಲ್ಲಿ ಮೊದಲು ಸಂಸ್ಥಾನಗಳ ಸಮಾವೇಶ, ಆ ಮೇಲೆ ಪ್ರಾಂತಗಳ ನಿರ್ಮಾಣ ಅಂದಿತು.

ಕರ್ಣಾಟಕ ಪ್ರಾಂತಿಕ ಕಾಂಗ್ರೆಸ್ ಪದೇ ಪದೇ ತನ್ನ ಬೇಡಿಕೆಯನ್ನ ವರಿಷ್ಠರ ಕಿವಿಗೆ ಮುಟ್ಟಿಸಿದೆ. ಗಾಂಧೀಜಿಯವರ ಮರಣಕ್ಕೆ ಒಂದು ವಾರದ ಮುಂಚೆ ಮೈಸೂರ ಮತ್ತು ಇತರ ಭಾಗದ ಕನ್ನಡಿಗರ ಒಂದು ನಿಯೋಗ ಗಾಂಧೀಜಿಯನ್ನು ಕಂಡಾಗ ಕರ್ಣಾಟಕ ಪ್ರಾಂತದ ಪ್ರಶ್ನೆ ನನಗೆ ಬಹಳ ಪ್ರಿಯವಾದದ್ದು, ಈ ಪ್ರಶ್ನೆಯನ್ನು ಅರ್ಹತೆಯ ಮೇಲೆ ಪ್ರತಿಭಟಿಸುವುದು ಸಾಧ್ಯವಲ್ಲ ಅಂದಿದ್ದರು.

ಇನ್ನೇನು, ಹೊಸ ರಾಜ್ಯಾಂಗ ಜ್ಯಾರಿಗೆ ಬರುತ್ತಿದೆ. ಜನವರಿ 26 ಭಾರತಾದ್ಯಂತ ಸಂಭ್ರಮವೇ ಸಂಭ್ರಮ—ಅದು ರಿಪಬ್ಲಿಕನ್ ದಿನ. ಅಂದು ಭಾರತದ ಚರಿತ್ರಾರ್ಹವಾದ ರಾಜ್ಯಾಂಗವನ್ನ ಭಾರತೀಯರು ಅಂಗೀಕರಿಸುತ್ತಾರೆ. ಈ ರಾಜ್ಯಾಂಗ ಸರ್ವ ಪ್ರಜೆಗೂ ಪ್ರಿಯವಾದದ್ದು ಆಗಬೇಕು. ಕನ್ನಡಿಗನಿಗೆ ಅದು ಆಗಿಲ್ಲ. ಆಂಧ್ರ ಪ್ರಾಂತದವರು ಜನವರಿ 26ರ ಮುನ್ನವೇ ತಮ್ಮ ಪ್ರಾಂತ ನಿರ್ಮಾಣ ಆಗಬೇಕೆಂದು ಹಟ ತೊಟ್ಟರು. ಎಲ್ಲ ಪ್ರಾಂತಗಳ ಹೆಸರು ಹೊಸ ರಾಜ್ಯಾಂಗದಲ್ಲಿ ಸೇರಿಸಬೇಕಿತ್ತು. ಕನ್ನಡಿಗರೂ ವಿನಯವಾಗಿ ಅದನ್ನೇ ಬೇಡಿದರು. ಊಹುಂ. ಹಾಗಾದರೆ ಕಾಂಗ್ರೆಸನ್ನ ಬಿಡಲೇ ಅಂದರು. ಈಗ ಭಾರತದ ಕಾಂಗ್ರೆಸ್ ನಾಯಕರಿಗೆ, ಆಡಳಿತದ ಅಧಿಕಾರಿಗಳಿಗೆ ಕನ್ನಡಿಗರ ಮೇಲೆ ಬಹಳ ಅಸಮಾಧಾನ ಉಂಟಾಗಿದೆ. ಇತ್ತೀಚಿನ ಕಾಂಗ್ರೆಸ್ ಕಾರ್ಯಸಮಿತಿ ತೀರ್ಮಾನ ಈ ಕೋಪವನ್ನ ವ್ಯಕ್ತಪಡಿಸಿದೆ.

ಕನ್ನಡಿಗನಾದರೂ ಈ ವಿರಸಕ್ಕೆ ಏಕೆ ಎಡೆ ಕೊಟ್ಟ? ನಮ್ಮ ಸರಕಾರಕ್ಕೆ ಏಕೆ ಈ ತಿರುಮಂತ್ರ ಹೇಳಿದ? ದೇಶದ ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಅದರ ಆಡಳಿತದ ಕೀಲು ತಪ್ಪಿಸಲು ಏಕೆ ಯತ್ನಿಸಿದ? ಕಾರಣವೇನು? ಕಾರಣವಿದೆ.

ಮೊದಲೇ ಹೇಳಿದೆ—ಕನ್ನಡ ಐದು ಆಡಳಿತದ ಪ್ರಾಂತಗಳಲ್ಲಿ ಹಂಚಿ ಹೋಗಿದೆ. ಹೊಸ ರಾಜ್ಯಾಂಗದ ಕಾನೂನಿನಂತೆ ಯಾವದೇ ಹೊಸ ಪ್ರಾಂತ ನಿರ್ಮಾಣವಾಗಬೇಕಾದರೂ, ಈಗಿರುವ ಪ್ರಾಂತಗಳ ಗಡಿ ಬದಲು ಆಗಬೇಕಾದರೂ ಆಯಾ ಪ್ರಾಂತಗಳ ಶಾಸನ ಸಭೆ ಒಪ್ಪಿ ನಿರ್ಣಯ ಮಾಡಬೇಕು. ಆ ನಿರ್ಣಯ ಭಾರತದ ಪಾರ್ಲಿಮೆಂಟಿನಲ್ಲೂ ಮಂಜೂರಾಗಿ ಅಧ್ಯಕ್ಷರ ಸಹಿ ಬೀಳಬೇಕು.

ಕರ್ಣಾಟಕದ ಮಟ್ಟಿಗೆ ಇದು ತೀರ ಕಷ್ಟ. ಮೈಸೂರಲ್ಲಿ ಕನ್ನಡಿಗರು ಬಹು ಸಂಖ್ಯಾಕರಾದರೂ, ಏಕೀಕರಣ ತತ್ವ ಒಪ್ಪಿದರೂ (ಭಾಷಣಗಳಲ್ಲಿ, ನಿರ್ಣಯದಲ್ಲಿ), ಕಾರ್ಯತಃ ಆಗುವಲ್ಲಿ ಬಹುಮಟ್ಟಿಗೆ ಇವರು ವಿರೋಧಿಗಳು. ಕೊಡಗೂ ತಾನು ಬೇರೆ ಇರುತ್ತೇನೆ ಅಂದೀತು! ಯಾವ ಗುಬ್ಬಚ್ಚಿ ತನ್ನ ಗೂಡು ಬಿಟ್ಟು ಕೊಡಲು ಸಿದ್ಧವಿದೆ? ಬೊಂಬಾಯಿ, ಮದರಾಸಿನಲ್ಲಿ ಕನ್ನಡಿಗರು ಅಲ್ಪ ಸಂಖ್ಯಾಕರು. ಹೈದರಾಬಾದಿನ ಭವಿಷ್ಯ ಹೇಳಲಾರೆವು. ಮುಂದಿನ ಈ ಕಷ್ಟ ಊಹಿಸಿಯೇ ಕನ್ನಡಿಗರು ತಮ್ಮ ಬೇಡಿಕೆಯ ಮೇಲೆ ಇಷ್ಟು ಬಲ ಹಾಕಿದ್ದು.

ಆಂಧ್ರಕ್ಕೆ ಇಷ್ಟು ಕಷ್ಟವಿಲ್ಲ. ಮದರಾಸು, ಹೈದರಾಬಾದು ಒಪ್ಪಿದರೆ ಆಯ್ತು. ಮಹಾರಾಷ್ಟ್ರದವರಿಗೂ ಅಷ್ಟೇ. ಬೊಂಬಾಯಿನ ಪ್ರಶ್ನೆ ಇತ್ಯರ್ಥ ಆದರೆ ಮುಗಿಯಿತು. ಕೇರಳದಲ್ಲಿ ಮಲಬಾರ್ ಜಿಲ್ಲೆ ಒಂದೇ ಹೊರಗೆ ಇದೆ.

ಇದಕ್ಕಾಗಿಯೇ ಕನ್ನಡಿಗ ಇಂದು ಇಷ್ಟು ಉಗ್ರ ರೂಪ ತಾಳಿದ್ದಾನೆ. ಆಂಧ್ರ ಆಗಿ ಕರ್ಣಾಟಕ ಆಗದೆ ಉಳಿದರೆ ಬಳ್ಳಾರಿ ಒಂದು ಅಂತರ್ನಿವಿಷ್ಟ ಪ್ರಾಂತವಾಗಿ ಉಳಿಯುತ್ತದೆ. ಮದರಾಸಿಗೆ ಇದರ ಆಡಳಿತ ಕಷ್ಟವಾಗುತ್ತದೆ.

ಕರ್ಣಾಟಕ ಆಗದೆ ಉಳಿದರೆ—(1) ಆಡಳಿತದ ದೃಷ್ಟಿಯಿಂದ ಕನ್ನಡಿಗನಿಗೆ ಅಸ್ತಿತ್ವ ದೊರೆಯದೆ, ಕರ್ಣಾಟಕ ಸಬಲವಾಗಿ ಸಚೇತನವಾಗಿ ಜೀವನದ ಎಲ್ಲ ರಂಗಗಳಲ್ಲೂ ಮುಂದುವರಿಯಲು ಅವಕಾಶ ದೊರೆಯದೆ ಉಳಿದೀತು.

(2) ಕನ್ನಡಿಗರು ಅಲ್ಪಸಂಖ್ಯಾಕರಾಗಿ ರಾಜಧಾನಿಗಳಿಂದ ದೂರ ಉಳಿದು ಮರಾಠಿ ಗುಜರಾಥಿಗಳ ನಡುವೆಯೋ ತಮಿಳು ತಲುಗರ ನಡುವೆಯೋ ಸಿಕ್ಕು ಅಸಹಾಯರಾಗಿ ಬಿಡುತ್ತಾರೆ.

(3) ಕನ್ನಡಿಗರಿಗೆ ಶೈಕ್ಷಣಿಕ ಹಾನಿ ಪರಂಪರೆಯಾಗಿ ಉಳಿಯುತ್ತದೆ. ಉತ್ತರದಲ್ಲಿ ಕನ್ನಡಿಗರು ಹೆಚ್ಚಾಗಿ ಮರಾಠಿಯ ಪ್ರಭಾವಕ್ಕೂ ತೆಲುಗು, ಗಡಿಗಳಲ್ಲಿ ತೆಲುಗು ಪ್ರಭಾವಕ್ಕೂ ಹೀಗೆ ತೆಲುಗು ತಮಿಳು, ಮಲಯಾಳಿಗಳ ಪ್ರಭಾವಕ್ಕೆ ಸಿಲುಕಿ ಕೊನೆಗೆ ಕನ್ನಡ ಸಂಪೂರ್ಣ ನಾಶವಾಗುತ್ತದೆ.

(4) ಕರ್ನಾಟಕಕ್ಕೆ ತಟ್ಟುವ ಆರ್ಥಿಕ ಹಾನಿ ಸ್ವಲ್ಪವಲ್ಲ. ಪಶ್ಚಿಮ ಘಟ್ಟಗಳು ಮಲೆನಾಡು ಸಂಪತ್ತಿನಿಂದ ತುಂಬಿ ತುಳುಕುತಿದ್ದರೂ ಆ ಕಡೆ ಸರಕಾರದ ಲಕ್ಷ್ಯವಿಲ್ಲ. ಔದ್ಯೋಗಿಕ ಬೆಳವಣಿಗೆಯಲ್ಲಿ ಕನ್ನಡಿಗನಿಗೆ ಪಾಲೇ ಇಲ್ಲ. ನೀರಾವರಿ ಯೋಜನೆ ಕನ್ನಡಿಗನ ಬರಿಯ ಕನಸು.

(5) ಭಾಷೆಯ ಏಕರೂಪತೆ ನಷ್ಟವಾಗುತ್ತದೆ ಇದರಿಂದ ವಾಙ್ಮಯಾಭಿವೃದ್ಧಿಗೆ ಬಹಳ ತೊಡಕು.

(6) ಒಕ್ಕೂಟ ಭಾರತದ ಬಹು ಮುಖ ಭಾಗವಾದ ಕರ್ಣಾಟಕ, ಅಲ್ಲಿನ ಜನ ಸಾಮಾಜಿಕ, ರಾಜಕೀಯ ದುರ್ಬಲತೆಗಳಿಂದ ಪ್ರಗತಿ ಕುಂದುತ್ತ, ರಾಷ್ಟ್ರಕ್ಕೆ ಹಾನಿ ತಟ್ಟೀತು.

ವಿಜಯ ನಗರದ ಆಳಿಕೆಯಿಂದೀಚೆಗೆ ಕನ್ನಡಿಗರಿಗೆ ತಮ್ಮ ಹಿಂದಿನ ಪರಂಪರೆ ಬೆಳಗಿಸಿ ಇಡಿಯ ಭಾರತಕ್ಕೆ ತಮ್ಮ ಕಾಣಿಕೆ ಒಪ್ಪಿಸಲು ಸಾಮರ್ಥ್ಯ ಬರಲಿಲ್ಲ. ಏಕೀಕರಣದಿಂದ ಈ ಬಲ ಮತ್ತೆ ಕನ್ನಡಿಗರಿಗೆ ಮರಳಿ ತಾವು ಬದುಕಿ ರಾಷ್ಟ್ರ ಬದುಕಿಸುವ ಸಾಮರ್ಥ್ಯ ಬರುತ್ತದೆ. ಆದ್ದರಿಂದಲೇ ಏಕೀಕರಣ ಒಂದು ರಾಷ್ಟ್ರದ ಪ್ರಶ್ನೆ ಅಂದದ್ದು.

ರಾಜಕೀಯ, ಭೌಗೋಲಿಕ, ಸಾಂಸ್ಕೃತಿಕ, ಐತಿಹಾಸಿಕ, ಆರ್ಥಿಕ, ಔದ್ಯೋಗಿಕ ಈ ಎಲ್ಲ ದೃಷ್ಟಿಯಿಂದಲೂ ಏಕೀಕರಣ ಸಹಜವಾದ ಪ್ರಶ್ನೆ. ಇದು ಫಲಿಸಿಯೇ ತೀರಬೇಕೆಂಬುದನ್ನ ಈ ಲೇಖನದಲ್ಲಿ ವಿವರಿಸಲು ಪ್ರಯತ್ನಪಟ್ಟಿದೆ.

ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾಂಗ್ರೆಸ್ ಸಂಸ್ಥೆ ಭಾಷಾನುಗುಣ ಪ್ರಾಂತೀಕರಣದ ವಿಚಾರದಲ್ಲಿ ಅದು ಹೊತ್ತ ಧೋರಣೆ, ಬಹಳ ಅಮೂಲ್ಯವಾದದ್ದು.

ಅದೇ ಕಾಂಗ್ರೆಸ್ಸು ಈಗ ಆಡಳಿತಕ್ಕೆ ಬಂದ ಮೇಲೆ ತಾನು ಕೈಗೊಂಡಿರುವ ಕಾರ್ಯಕ್ರಮ ಪರಿಶೀಲಿಸಿದರೆ ಎಂತಹನಿಗೂ ಮೈ ಜುಂ ಎನ್ನದಿರದು. ಮುಖ್ಯವಾಗಿ ಕರ್ನಾಟಕ ಏಕೀಕರಣಕ್ಕೆ ಇಂದು ಕಾಂಗ್ರೆಸು ಅಪರಾಧವನ್ನೇ ಮಾಡಿದೆ ಅಂದರೆ ತಪ್ಪಲ್ಲ.

ನಮ್ಮ ನಾಡಿನ ಇಂದಿನ ಪರಿಸ್ಥಿತಿಯಲ್ಲಿ ಏಕೀಕರಣದ ವಿಷಯ ಪ್ರತಿಯೊಬ್ಬ ಕನ್ನಡಿಗನಿಗೂ, ಹಳ್ಳಿಗರಿಗೂ ತಿಳಿಯುವದು ಅಗತ್ಯ. ಹಾಗೆ ಎಚ್ಚತ್ತು ಕನ್ನಡಿಗರು ಬಹು ಬೇಗ ತಮ್ಮ ಪ್ರಾಂತ ಸಾಧಿಸಿಕೊಂಡು, ತಮ್ಮ ವ್ಯಕ್ತಿತ್ವ ಉಳಿಸಿಕೊಂಡು, ಭಾರತದ ಬೆಳವಣಿಗೆಗೆ, ವಿಶ್ವದಲ್ಲೇ ಭಾರತ ಒಂದು ಗಣ್ಯ ರಾಷ್ಟ್ರವಾಗಿ ಉಳಿಯಲು ಸಹಾಯಕರಾಗಬೇಕು. ಆಗಲೆಂದು ಹಾರೈಸುತ್ತೇನೆ.

[ಈ ಲೇಖನ ಬರೆದ ದಿನದಿಂದ ಪ್ರಕಟವಾಗುವ ಹೊತ್ತಿಗೆ ಆಗಿರುವ ರಾಜಕೀಯ ಬದಲಾವಣೆಗಳನ್ನ ಓದುಗರು ಗಮನಿಸಬೇಕೆಂದು ಪ್ರಾರ್ಥನೆ:— ಈ ಲೇಖನದಲ್ಲಿ ಬರುವ ಅಂಕೆ, ಅಂಶಗಳಿಗೆ ಮಂಗಳೂರು, ಕರ್ಣಾಟಕ ಏಕೀಕರಣ ಸಂಘದವರ ಪ್ರಕಟಣೆಗಳು ಮತ್ತು ಕಾಂಗ್ರೆಸ್ ಸ್ವರೂಪ ದರ್ಶನದ ಕರ್ಣಾಟಕ ಏಕೀಕರಣದ ಹೊತ್ತಿಗೆ, ಇವು ಆಧಾರ: ಈ ಪ್ರಕಟಣೆಗಳನ್ನ ಒದಗಿಸಿ ಕೊಟ್ಟ ಏಕೀಕರಣ ಸಂಘ ಮಂಗಳೂರು ಇವರಿಗೆ ನಾನು ಕೃತಜ್ಞನಾಗಿದ್ದೇನೆ.]

ವಿಶಿಷ್ಟಾದ್ವೈತಮತ

ಶ್ರೀ ಐರೋಡಿ ಯಜ್ಞನಾರಾಯಣ ಉಡುಪ, ವಿದ್ವಾನ್, ಹಿರಿಯ ಕನ್ನಡ ಪಂಡಿತ, ಬೋ। ಹಾಯರ್ ಸ್ಕೂಲು, ಬೈಂದೂರು

ಶಂಖಚಕ್ರ ಗದಾಪಾಣೇ ದ್ವಾರಕಾನಿಲಯಾಚ್ಯುತ ।
ಗೋವಿಂದ ಪುಂಡರೀಕಾಕ್ಷ ರಕ್ಷ ಮಾಂ ಶರಣಾಗತಂ ॥

ವಿಶಿಷ್ಟಾದ್ವೈತವೆಂಬ ಪದವು ವಿಶಿಷ್ಟ ಮತ್ತು ಅದ್ವೈತವೆಂಬೆರಡು ಪದಗಳ ಸೇರಿಕೆಯಿಂದಾಗಿದೆ. ವಿಶಿಷ್ಟವೆಂದರೆ ವಿಶೇಷಣ-ಚಿದಚಿತ್ತು ಅಥವಾ ಜೀವಪ್ರಕೃತಿಗಳು. ವಿಶಿಷ್ಟಾದ್ವೈತವೆಂದರೆ ಜೀವಪ್ರಕೃತಿಗಳೇ ಶರೀರವಾಗಿ ಉಳ್ಳ ವಾಸುದೇವನೊಬ್ಬನೇ ತತ್ವವೆಂಬ ಭಾವವು. ಜೀವಪ್ರಕೃತಿಗಳೊಡನೆ ಈಶ್ವರನು ಕೂಡಿದ್ದರೂ ಅವುಗಳ ವಿಕಾರವೊಂದು ಅವನನ್ನು ಹೊದ್ದಲಾರವು. ಈ ಮತಕ್ಕೆ ಜೀವಗಾಳಿಯನ್ನೂದಿದವರು ಶ್ರೀಮದ್ರಾಮಾನುಜಾಚಾರ್ಯರು. ಈ ಮಹಾಪುರುಷರು ಕಾಂಚೀಪ್ರದೇಶದಲ್ಲಿ ಹನ್ನೊಂದನೆಯ ಶತಮಾನದಲ್ಲಿ ಜನ್ಮವೆತ್ತಿ, ಮುನ್ನೂರು ವಿಘ್ನಗಳಿಗಾಗಿ ಜನ್ಮಭೂಮಿಯನ್ನು ಬಿಟ್ಟು ಕರ್ನಾಟಕ ರಾಜಕುಲಭೂಷಣ ಹೊಯ್ಸಳ ಬಿಟ್ಟಿದೇವನಿಂದ ಆಶ್ರಯ ಪಡೆದು, ಅವನ ಅಖಂಡ ಬೆಂಬಲದಿಂದ ಈ ಮತವನ್ನು ಶ್ರೀರಂಗ, ತಿರುಪತಿ, ಮೇಲುಕೋಟೆ ಮೊದಲಾದ ಸ್ಥಳಗಳಲ್ಲಿ ಪ್ರಚಾರ ಮಾಡಿದರು. ಶ್ರೀಮದಾಚಾರ್ಯರ ಪವಾಡ ಶಕ್ತಿಗಳೂ, ಅದ್ಭುತ ತಾರ್ಕಿಕ ಶಕ್ತಿ, ವಿದ್ವತ್ತು—ಇವೆಲ್ಲಕ್ಕಿಂತ ಮಿಗಿಲಾದ ಅವರ ಅಧ್ಯಾತ್ಮಿಕ ತೇಜಶ್ಶಕ್ತಿಗಳು ಜನರ ತಲೆಯನ್ನು ಭಾಗಿಸಿ, ಅವರ ಹೃದಯಗಳನ್ನು ಸೆರೆವಿಡಿದು, ಅವರ ತನುಮನಧನಗಳನ್ನು ಆಚಾರ್ಯರ ಮಹಾಕಾರ್ಯಕ್ಕಾಗಿ ಮೀಸಲಾಗಿರಿಸಿದುವು. ಅವರು ದ್ರಾವಿಡ ಪ್ರಪಂಚದಲ್ಲಿ ತಮ್ಮ ಮರಣಹರಣವಾಣಿಯಿಂದ ಈ ವಿಶಿಷ್ಟಪಂಥವನ್ನು ಪ್ರಚಾರ ಮಾಡುತ್ತಾ—'ಕೇಳಿರಿ. ಇದು ಪರಮಾತ್ಮನ ಸಾನ್ನಿಧ್ಯವನ್ನು ಸೇರುವ ಸುಲಭ ಮಾರ್ಗ. ಕಲಿಯುಗದ ಹೈಲು ಮಾನವರು ಈ ಪಂಥಕ್ಕೆ ಶರಣುಹೋಗುವುದೇ ಲೇಸು.' ಎಂದು ಡಂಗುರ ಸಾರಿದರು. ಇವರ ಹರಿಕಂಠಗರ್ಜನೆಯು ದಿಕ್‌ದಿಗಂತದಲ್ಲಿ ಅನುರಣಿತವಾಯಿತು. ವಿಶಿಷ್ಟಾದ್ವೈತವು ವಿಶಿಷ್ಟ ದ್ರಾವಿಡರ ಹೃದಯಗಳಲ್ಲಿ ಧಾರ್ಮಿಕ ಹುಚ್ಚೆಬ್ಬಿಸಿತು. ರಾಮಾನುಜ ಪಂಥವು 'ಹಾ ಹಾ' ಅನ್ನುವುದರೊಳಗೆ ದ್ರಾವಿಡ ಭೂಮಿಯಲ್ಲಿ ಹಾಸು ಹೊಕ್ಕಾಗಿ ಇಣಿಕ ತೊಡಗಿತು. ಅದ್ವೈತ ಭೂಮಿಯು ಬಾಯಿಯಲ್ಲಿ ಅಕ್ಕಿ ಕಾಳನ್ನು ಹಾಕಿಕೊಂಡು ದಿನಗಳನ್ನು ಎಣಿಸತೊಡಗಿತು.

ತಾರ್ಕಿಕಾಚಾರ್ಯರಾದ ಉದಯನಾಚಾರ್ಯರು ಆತ್ಮತತ್ವವಿವೇಕದಲ್ಲಿ ಸೇಶ್ವರ ಮೀಮಾಂಸ ಪಕ್ಷವನ್ನು ಹೇಳಿರುತ್ತಾರೆ. ಇದೇ ವಿಶಿಷ್ಟಾದ್ವೈತಕ್ಕೆ ಸಮ್ಮತವಾದ ಪಕ್ಷ. ಈ ಸಿದ್ಧಾಂತದಲ್ಲಿ ಸಕಲ ಜೀವಾತ್ಮರಿಗೂ ಶರೀರ ಭೇದವಲ್ಲದೆ ಸ್ವರೂಪ ಭೇದವಿಲ್ಲ. ಜೀವಾತ್ಮನಿಗೂ ಪರಮಾತ್ಮನಿಗೂ ಕೆಲವು ವಿಷಯಗಳಲ್ಲಲ್ಲದೆ ಉಳಿದ ಹೆಚ್ಚಿನ ವಿಷಯಗಳಲ್ಲಿ ಹೋಲಿಕೆ ಇರುವುದು. ಪರಮಾತ್ಮನ ಪ್ರಾಪ್ತಿಗೆ ಅನೇಕ ಸಾಧನಗಳಿವೆ. ಜೀವನದ ಗುರಿಯೇ ಪರಮಾತ್ಮನ ಪರಮಾನುಗ್ರಹ. ಪರಮಾತ್ಮನು ಪರಮ ಕಾರುಣಿಕನಾಗಿದ್ದು, ಸಮಸ್ತ ಜೀವಾತ್ಮರೂ ತನ್ನ ಪರಮ ಸಾಮ್ಯವನ್ನು ಹೊಂದಿ 'ಬ್ರಹ್ಮಾನಂದಃ ಸವಿಯುತ್ತಿರಬೇಕೆಂದು ಸದಾ ನಿರೀಕ್ಷಿಸುತ್ತಿದ್ದು, ಅದಕ್ಕಾಗಿ ಸೃಷ್ಟಿ, ಸ್ಥಿತಿ, ಪ್ರಳಯ, ಅವತಾರ, ಉಪದೇಶ ವ್ಯಾಪಾರಗಳಲ್ಲಿ ಸದಾ ನಿರತನಾಗಿರುವದು' ಎಂದಿದೆ.

ವಿಶಿಷ್ಟಾದ್ವೈತಮತದಲ್ಲಿ ಚಿತ್ತು, ಅಚಿತ್ತು ಮತ್ತು ಈಶ್ವರನೆಂದು ತತ್ವಗಳು ಮೂರಿವೆ. ಚಿತ್ತು ಅಂದರೆ ಜೀವಾತ್ಮ. ಇದು ಅಣುವಾಗಿದ್ದು ಸ್ವರೂಪ ಸ್ವಭಾವದಲ್ಲಿ ವಿಕಾರ ಹೊಂದದೆ ಜ್ಞಾನಕ್ಕೆ ಆಶ್ರಯವಾಗಿದೆ. ಆಯಾ ಕರ್ಮಗಳಿಂದ ಇದಕ್ಕೆ ಇಳಿತ ಭರತಗಳು ಕಾಣಿಸುವುದುಂಟು. ಜೀವಾತ್ಮರಲ್ಲಿ ನಿತ್ಯರು, ಮುಕ್ತರು ಮತ್ತು ಬದ್ಧರೆಂದು ಮೂರು ವರ್ಗಗಳಿವೆ. ಶ್ರೀಮದ್ವಾಸುದೇವನ ಸಾನ್ನಿಧ್ಯದಲ್ಲಿದ್ದುಕೊಂಡು ಅವನ ಸೇವೆಯನ್ನೆಸಗುತ್ತಿರುವವರೇ ನಿತ್ಯರು. ಸಂಸಾರ ಬಂಧನ

ದಿಂದ ಮುಕ್ತರಾದವರೇ ಮುಕ್ತರು. ಸಂಸಾರದ ಹೊಲಸು ವ್ಯಾಪಾರಗಳಲ್ಲಿ ಮುಳುಗೇಳುತ್ತಾ ಜನನ ಮರಣ ದುಃಖಗಳಿಂದ ತಪಿಸುವವರೇ ಬದ್ಧರು. ಜೀವನಿಗೆ ಮೋಕ್ಷವುಂಟಾಗಬೇಕಾದರೆ ಮೊದಲು ಅರ್ಥಪಂಚಕಗಳ (ಸ್ವಸ್ವರೂಪ-ಜೀವಾತ್ಮನು ಇಂಥವನು, ಪರಸ್ವರೂಪ-ಪರಮಾತ್ಮನು ಇಂಥವನು, ಉಪಾಯಸ್ವರೂಪ-ಪರಮಾತ್ಮನನ್ನು ಹೊಂದಲು ಸಾಧನವಿಂಥಾದ್ದು, ಪುರುಷಾರ್ಥ ಸ್ವರೂಪ—ಪಡೆಯಬೇಕಾದ ಫಲವಿಂಥಾದ್ದು, ವಿರೋಧಿಸ್ವರೂಪ–ಫಲಪ್ರಾಪ್ತಿಗೆ ಪ್ರತಿಬಂಧಕವಿಂಥಾದ್ದು) ಜ್ಞಾನವುಂಟಾಗಬೇಕು. ಅಲ್ಲದೆ ಮೋಕ್ಷಕ್ಕೆ ಕರ್ಮ, ಜ್ಞಾನ, ಭಕ್ತಿ, ಪ್ರಪತ್ತಿ ಎಂಬ ಮಾರ್ಗಗಳು ಶಾಸ್ತ್ರಗಳಲ್ಲಿ ಹೇಳಿವೆ. ಇವುಗಳಲ್ಲಿ ಭಕ್ತಿ ಪ್ರಪತ್ತಿಗಳು ಮುಖ್ಯವಾದುವು.

ಅಚಿತ್ತು ಎಂದರೆ ಪ್ರಕೃತಿ. ಇದು ಜಡ ಪದಾರ್ಥ. ಇದಕ್ಕೆ ಪ್ರತಿ ನಿಮಿಷದಲ್ಲೂ ವಿಕಾರ ಹೊಂದುವುದೇ ಸ್ವಭಾವ.

ಈಶ್ವರನು ಸರ್ವದಾ ಸರ್ವವ್ಯಾಪ್ತಿ ಮತ್ತು ಜ್ಞಾನಕ್ಕೆ ಆಶ್ರಯನಾಗಿದ್ದು ಏಕರೂಪನು. ಇವನನ್ನೇ ವಾಸುದೇವ, ನಾರಾಯಣ ಮೊದಲಾದ ಹೆಸರುಗಳಿಂದ ಕರೆಯುವರು. ಇವನು ಆದರ್ಶ ಗುಣ ಸ್ವರೂಪಗಳಿಂದ ಕೂಡಿದವನು. ಪರಮಾತ್ಮನಿಗೂ ಪ್ರಪಂಚಕ್ಕೂ ಶರೀರಾತ್ಮ ಸಂಬಂಧವಿರುವುದು. ಸಕಲ ಪ್ರಾಣಿಗಳಿಗೂ ಶರೀರಕ್ಕಿಂತ ಪ್ರಿಯವಾದ ವಸ್ತುವಾವುದೂ ಇಲ್ಲದಿರುವಂತೆ, ಪರಮಾತ್ಮನಿಗೂ ಪ್ರಪಂಚದಲ್ಲಿ ಅಧಿಕಾಸಕ್ತಿ ಇದ್ದು ಅದರ ಸುರೂಪಕ್ಕಾಗಿ ಸದಾ ಪ್ರಯತ್ನಿಸುತ್ತಿರುವನು.

ಪರಮಾತ್ಮನ ಕಾರ್ಯಗಳನ್ನೆಲ್ಲಾ ಸೃಷ್ಟಿ, ಸ್ಥಿತಿ, ಸಂಹಾರ, ಅಂತಃಪ್ರವೇಶ, ನಿಯಮನವೆಂದು ಐದು ವಿಭಾಗ ಮಾಡಿರುವರು. ಸೃಷ್ಟಿ ಸ್ಥಿತಿ ಸಂಹಾರಗಳೆಂಬ ಪರಮಾತ್ಮನ ವ್ಯಾಪಾರಗಳು ಪ್ರಸಿದ್ಧಗಳೇ. ಅಂತಃಪ್ರವೇಶವೆಂದರೆ ಸೃಷ್ಟಿಸಲ್ಪಟ್ಟ ವಸ್ತುಗಳಲ್ಲಿ ತಾನು ಪ್ರವೇಶಿಸಿ ತನ್ನ ಸಾನ್ನಿಧ್ಯವನ್ನಿಡುವುದು. ಎಲ್ಲಾ ವಸ್ತುಗಳನ್ನು ಆಯಾ ಸ್ವಭಾವದಲ್ಲಿರಿಸುವ ಅಧಿಕಾರವೇ ನಿಯಮನವು. ಅನಾದಿಕಾಲದಿಂದ ಸಾಧಿಸಿದ ಜೀವಾತ್ಮನ ಸಾಧನೆಗಳು ಆತನನ್ನು ಮುಕ್ತಿಗೆ ಅಧಿಕಾರಿಯನ್ನಾಗಿ ಮಾಡುವುವು. ಆಚಾರ್ಯಾನುಗ್ರಹವು ಮುಕ್ತಿಗೆ ಪ್ರಬಲ ಸಾಧನ. ಈ ಸೃಷ್ಟ್ಯಾದಿ ವ್ಯಾಪಾರಗಳೆಲ್ಲಾ ಪರಮಾತ್ಮನ ಲೀಲೆಗಳು.

ಈ ಸಿದ್ಧಾಂತದಂತೆ ಪ್ರತಿ ಶಾಸ್ತ್ರದಲ್ಲೂ ತತ್ವ, ಹಿತ, ಪುರುಷಾರ್ಥವೆಂದು ಮೂರು ಪ್ರಕಾರವಿದೆ. ಚಿದಚಿತ್ತು ಈಶ್ವರರೇ ಮೂರು ತತ್ವಗಳು. ಭಕ್ತಿ ಪ್ರಪತ್ತಿಯೇ ಹಿತವು. ಪಡೆಯುವ ಪ್ರಯೋಜನವೇ ಪುರುಷಾರ್ಥವು. ಪರಮೇಶ್ವರನ ಧ್ಯಾನ, ಅರ್ಚನೆ, ನಮಸ್ಕಾರ ಮೊದಲಾದವುಗಳು ಭಕ್ತಿ ಎನ್ನಲ್ಪಡುವುವು. ಇದು ನಾಮಸಂಕೀರ್ತನೆ, ಜಪರೂಪವಾಗಿದ್ದರೆ ವಾಚಕ ಭಕ್ತಿ ಎಂದೂ, ಪೂಜೆ ಪ್ರದಕ್ಷಿಣೆ ನಮಸ್ಕಾರಗಳಾಗಿದ್ದರೆ ಕಾಯಕಭಕ್ತಿ ಎಂದೂ, ಧ್ಯಾನಧಾರಣ ಸಮಾಧಿಗಳಲ್ಲಿ ಸಮರಸವಾದರೆ ಮಾನಸಿಕಭಕ್ತಿ ಎಂದೂ ಕರೆಯಲ್ಪಡುವುದು. ಭಕ್ತಿಗಿಂತ ಪರಭಕ್ತಿಯು ಶ್ರೇಷ್ಠ. ಪರಭಕ್ತಿಗೆ ಪರಮಾತ್ಮನ ಸಾಕ್ಷಾತ್ಕಾರವೇ ಪ್ರಯೋಜನ. ಈ ಭಕ್ತಿಯೋಗದ ಹಿಮ್ಮೆಟ್ಟಲೇ ಕರ್ಮಜ್ಞಾನ ಯೋಗಗಳು.

ಯಾಗ, ದಾನ, ದೇವತಾರ್ಚನೆ, ವೇದಾಧ್ಯಯನ, ವೇದಾಂತ ಪಾಠಪ್ರವಚನ, ತೀರ್ಥಯಾತ್ರೆ, ತತ್ವವಿಚಾರ, ಪ್ರಾಣಾಯಾಮ, ವ್ರತ, ಉಪವಾಸಗಳೆಲ್ಲಾ ಕರ್ಮಯೋಗದ ವಿವಿಧ ಮುಖಗಳಾಗಿದ್ದು, ಇವುಗಳಲ್ಲಿ ಫಲಾಪೇಕ್ಷೆ ಇಲ್ಲದೆ ಭಗವತ್ಪ್ರೀತಿಗೋಸ್ಕರವಾಗಿಯೇ ಕರ್ತವ್ಯವೆಂದು ಒಂದನ್ನು ಆಶ್ರಯಿಸಿ ಆಚರಿಸುವುದೇ ಕರ್ಮಯೋಗಿಯ ಮುಖ್ಯ ಧ್ಯೇಯ. ಇದರಿಂದ ಚಿತ್ತ ಶುದ್ಧಿಯಾಗಿ ಜ್ಞಾನಯೋಗಕ್ಕೆ ತಕ್ಕ ಅಧಿಕಾರಿಯಾಗುವನು. ಈ ಸಾಧನೆಯಿಂದ ಮನುಷ್ಯನಿಗೆ ಪ್ರಪಂಚದ ಸುಖದುಃಖಗಳೆಲ್ಲಾ ತನ್ನದಾಗಿ ತೋರಿ, ಮುಂದೆ ಆ ವ್ಯಕ್ತಿಯಿಂದ ಜಗತ್ತಿಗೆ ಹಿತಕರವಾದ ಕಾರ್ಯಗಳೇ ಆಗತೊಡಗುವುವು.

ಭಕ್ತಿಮಾರ್ಗವು ಸುಲಭಸಾಧ್ಯವಲ್ಲ. ಫಲಕ್ಕಾಗಿ ಬಹುಕಾಲ ಆಚರಿಸಲ್ಪಡಬೇಕು. ವ್ಯಾಸ ಪರಾಶರರಂಥವರೇ ಇದಕ್ಕೆ ಅರ್ಹರು. ಇದಕ್ಕಾಗಿಯೇ ಸರ್ವ ಜಾತಿ, ಕುಲ, ಕಾಲ, ದೇಶಗಳಿಗೆ ಸಾಧ್ಯವಾದ ಪ್ರವೃತ್ತಿಮಾರ್ಗವು ಪರಕಾಲ, ನಾಥಮುನಿ, ಯಾಮುನಮುನಿ, ರಾಮಾನುಜ ಮುನಿಗಳಿಂದ ಪ್ರಚಾರ ಪಡಿಸಲ್ಪಟ್ಟಿತು. ಮಾನವನು ತಾನು ಪರಮೇಶನ ಶೇಷಾಂಶವೆಂದು ಅನುಸಂಧಾನ ಮಾಡುತ್ತಿರುವುದೇ ಪ್ರಪತ್ತಿ.

ಇದರ ಬೆನ್ನಿಗೆ ಬಿದ್ದವನು ತನ್ನ ಮತ್ತು ಸಂಸಾರದ ಸಮುಸ್ತ ಭಾರವನ್ನು ಪರಮಾತ್ಮನ ಮೇಲೆ ಹೊರಿಸಬೇಕಾಗುವುದು. ಪರಿಕರ, ಅನುಸಂಧಾನಗಳೂ ಜೀವಾತ್ಮನನ್ನು ಮುಕ್ತಿಗೆ ಅಧಿಕಾರಿಯನ್ನಾಗಿ ಮಾಡುವುವು. ಪರಿಕರದಲ್ಲಿ ಆನುಕೂಲ್ಯ ಸಂಕಲ್ಪ (ಚರಾಚರ ವಸ್ತುಗಳು ಪರಮಾತ್ಮನ ಶರೀರವಾಗಿರುವುದೆಂದು ಎಣಿಸಿ ಸಮುಸ್ತರಿಗೂ ಉಪಕಾರಿಯಾಗಿ ಬಾಳುವುದು), ಪ್ರಾತಿಕೂಲ್ಯ ವರ್ಜನೆ (ಮೊದಲಿನಂತೆಯೇ ಭಾವಿಸಿ ಅಪಕಾರ ಬಿಡುವುದು), ಕಾರ್ಪಣ್ಯ (ಮೋಕ್ಷವೇ ಗುರಿ, ಭಗವಂತನೇ ರಕ್ಷಕನೆಂಬ ಭಾವನೆ), ಮಹಾವಿಶ್ವಾಸ (ಪರಮಾತ್ಮನು ರಕ್ಷಿಸುವನೆಂಬ ದೃಢಭಾವನೆ), ರಕ್ಷಕತ್ವ ಪ್ರಾರ್ಥನೆಯೆಂಬ ಐದು ವಿಧಗಳಿವೆ. ಇವುಗಳೆಲ್ಲಾ ಪ್ರಪತ್ತ್ಯನುಷ್ಠಾನ ಕಾಲದಲ್ಲಿ ಬೇಕಾಗುವ ಪ್ರಮುಖ ಅಂಗಗಳು. ಅನುಸಂಧಾನದಲ್ಲಿ ಸಕಲ ಚೇತನಾಚೇತನ ವಸ್ತುಗಳು ಪರಮೇಶ್ವರನ ಶೇಷಭೂತವಾಗಿರುವುದರಿಂದ ಆತ್ಮಸಮರ್ಪಣೆಯನ್ನೆಸಗಬೇಕಾಗುವುದು. ಹೀಗೆ ಮೋಕ್ಷಾಧಿಕಾರಿಯಾದ ಜೀವಾತ್ಮನು ಭಕ್ತಿ ಮತ್ತು ಪ್ರಪತ್ತಿಯಿಂದ ಕಸವನ್ನು ಕಳೆದ ಕಸವರವಾಗಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗಿ ಮೋಕ್ಷವನ್ನು ಪಡೆಯುವನು. ಇದೇ ಜೀವಾತ್ಮನ ಚರಮ ಧ್ಯೇಯ! ಇದೇ ಬಾಳ್ವೆಯ ತಿರುಳು! ಇದೇ ಮಾನವತ್ವದ ಅಂತಿಮ ಗುರಿ!

ಶ್ರೀಮಾನ್ ಹೆಗ್ಗಡೆಯವರ ಜೀವನ ಪರಿಚಯ

''ಶ್ರೀಪಾದರೇಣು.''

ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರದ ಪಟ್ಟವನ್ನೇರಿ ಸುಮಾರು ೩೨ ವರ್ಷಗಳೂ ಜನ್ಮತಾಳಿ ೬೦ ವರ್ಷಗಳೂ ತುಂಬಿ ಬಂದ ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರು ಕನ್ನಡ ನಾಡಿನ ಒಬ್ಬ ಪ್ರಸಿದ್ಧ ಪುರುಷರು; ಅಂಥ ಮಹನೀಯರ ಜೀವನದ ಪರಿಚಯ ಮಾಡಿಸಿಕೊಡುವುದೂ ಮಾಡಿಕೊಳ್ಳುವುದೂ ಇಂದಿನ ಅವಶ್ಯಕರ್ತವ್ಯವೆನ್ನಿಸಿದೆ.

ಶ್ರೀಮಾನ್ ಹೆಗ್ಗಡೆಯವರು ಕಳೆದ ವಿರೋಧಿ ಸಂವತ್ಸರದಲ್ಲಿ ಪುತ್ತೂರು ತಾಲೂಕಿನ ವಿಟ್ಲ ಪ್ರಾಂತದ ಕೇಪು ಗ್ರಾಮದಲ್ಲಿ ಜನ್ಮ ತಳೆದರು; ಆ ಗ್ರಾಮ ಹಿಂದೆ ವಿಟ್ಲದ ಹೆಗ್ಗಡೆಯವರ ಅಥವ ಅರಸರ ಆಳಿಕೆಗೆ ಸೇರಿತ್ತು. ಆಗಲೂ ಈಗಲೂ ಶ್ರೀಮಾನ್ ಹೆಗ್ಗಡೆಯವರ ಮನೆತನಕ್ಕೆ ವಿಶೇಷ ಗೌರವ ಮೊದಲ ಮರ್ಯಾದೆ ಜನತೆಯಿಂದಲೂ ಅರಸರಿಂದಲೂ ಸಲ್ಲುತ್ತಿತ್ತು; ಸಲ್ಲುತ್ತಿದೆ. ಪಟೇಲಿಕೆಯೂ ಅದೇ ಮನೆತನಕ್ಕೆ ಸೇರಿದ್ದು ನ್ಯಾಯಾನ್ಯಾಯದ ದೂರುಗಳನ್ನು ವಿಚಾರಿಸುವ, ತೀರ್ಮಾನಿಸುವ ಈ ಕೆಲಸವೂ ಅವರ ಪಾಲಿಗೇ ಬಂದಿತ್ತು. ಈಗ ಆ ಪಟೇಲಿಕೆ ಈ ಮನೆತನದವರಲ್ಲಿ ನೋಡುವವರಿಲ್ಲದೆ ಬೇರೆಯವರದಾಗಿದೆ.

ಶ್ರೀಮಾನ್ ಹೆಗ್ಗಡೆಯವರ ತಾಯಿ ಶ್ರೀಮತಿ ಅನಂತಮತಿ ಅಮ್ಮ; ಇವರನ್ನು ಚೆಕ್ಕಿತ್ತಡಿ ಅಣ್ಣಿಯಾನೆ ಪದ್ಮ ಶೆಟ್ಟರಿಗೆ (ವಾಡಿಕೆಯ ಹೆಸರು ಅಣ್ಣಿ ಶೆಟ್ಟರು) ಲಗ್ನ ಮಾಡಿಕೊಡಲಾಗಿತ್ತು. ಅನಂತರ ಶ್ರೀಮಾನ್ ಹೆಗ್ಗಡೆಯವರ ತಾಯಿಯವರ ತಂಗಿಯನ್ನು ಅಣ್ಣಿ ಶೆಟ್ಟರಿಗೆ ವಿವಾಹಮಾಡಲಾಯಿತು. ಶ್ರೀಮಾನ್ ಹೆಗ್ಗಡೆಯವರ ತಾಯಿಗೆ ಅವರೊಬ್ಬರೇ ಮಗನಾಗಿ ಉಳಿದವರು; ಅವರ ಚಿಕ್ಕತಾಯಿಗೆ ಇಬ್ಬರು ಗಂಡು ಮಕ್ಕಳು; ಹಿರಿಯರಾದ ಶ್ರೀ. ಕುಮಾರಯ್ಯ ದೈವಾಧೀನರಾದರು; ಅವರ ತಮ್ಮನೇ ಈಗ—ಶ್ರೀ. ಪುಟ್ಟಸ್ವಾಮಿ—ಮಂಗಳೂರಿನ ಎಡ್ವೊಕೇಟ್‌ರು; "ವಿವೇಕಾಭ್ಯುದಯ"ದ, ಸಂಪಾದಕರು.

ಶ್ರೀಮಾನ್ ಹೆಗ್ಗಡೆಯವರ ತಂದೆ ಸುಮಾರು ೨೭ ವರ್ಷಗಳ ಹಿಂದೆಯೂ, ತಾಯಿ ಸುಮಾರು ೧೭ ವರ್ಷಗಳ ಹಿಂದೆ ಉತ್ತರ ದೇಶಕ್ಕೆ ತೀರ್ಥಯಾತ್ರೆಗಾಗಿ ಹೋಗಿ ಮರಳುವಾಗ ಅಕಸ್ಮಾತ್ತಾಗಿಯೂ ವಿಧಿವಶರಾದರು. ಇದಕ್ಕೆ ಕೆಲ ವರ್ಷಗಳ ಮೊದಲೇ ಶ್ರೀಮಾನ್ ಹೆಗ್ಗಡೆಯವರ ಚಿಕ್ಕ ತಾಯಿಯೂ ಸ್ವರ್ಗಸ್ಥರಾಗಿದ್ದರು. ಶ್ರೀಮಾನ್ ಹೆಗ್ಗಡೆಯವರ ತಂದೆಯವರ ತಾಯಿಯ ದೊಡ್ಡತಾಯಿಯವರನ್ನು ಪೂರ್ವದಲ್ಲಿ ಪಟ್ಟದ ಅಧಿಕಾರಿಗಳಾಗಿದ್ದ ಶ್ರೀ ಚಂದಯ್ಯ ಹೆಗ್ಗಡೆಯವರಿಗೆ ಕೊಟ್ಟು ಲಗ್ನವಾಗಿತ್ತು. ಅವರಿಗೆ ಗಂಡುಮಕ್ಕಳಿಬ್ಬರು—ಶ್ರೀ ಕುಮಾರಯ್ಯ ಮತ್ತು ಶ್ರೀ ಮಂಜಪ್ಪ. ಇವರಲ್ಲಿ ಶ್ರೀ ಕುಮಾರಯ್ಯನವರ ಪುತ್ರ ಧರ್ಮಪಾಲ ಹೆಗ್ಗಡೆಯವರು ಪಟ್ಟಕ್ಕೆ ಬಂದ ಅಲ್ಪ ಸಮಯದಲ್ಲೇ ಕಾಲವಶರಾದರು. ಬಳಿಕ ಅವರ ತಾಯಿ ಶ್ರೀಮತಿ ಲಕ್ಷ್ಮೀಮತಿ ಅಮ್ಮನವರಿಗೆ ಬೇರೆ ಸಂತತಿ ಇಲ್ಲದ ಕಾರಣ ಅವರು ಪೂರ್ವ ಬಾಂಧವ್ಯವನ್ನು ನೆನೆದು, ಶ್ರೀಮಾನ್ ಹೆಗ್ಗಡೆಯವರ ತಂದೆಯನ್ನು ಕೇಳಿ ಶ್ರೀಮಾನ್ ಹೆಗ್ಗಡೆಯವರ ತಂಗಿಯ ಮಗ ಶ್ರೀ ಚಂದಯ್ಯ ಎಂಬವರನ್ನೂ ಶ್ರೀಮಾನ್ ಹೆಗ್ಗಡೆಯವರನ್ನೂ ಇಬ್ಬರನ್ನೂ ಏಕಕಾಲದಲ್ಲಿ ದತ್ತಕ್ಕೆ ತೆಗೆದುಕೊಂಡರು; ದತ್ತಪತ್ರದಲ್ಲಿ ಅವರು ಈ ರೀತಿ ಬರೆಸಿದ್ದಾರೆ:—

"ಮೊದಲಿನ ಹೆಗ್ಗಡೆಯವರು ಅನುಮತಿ ಕೊಟ್ಟ ಪ್ರಕಾರ ಮತ್ತು ನಮ್ಮ ಕುಟುಂಬದಲ್ಲಿ ನಡೆದು ಬಂದಿರುವ ವಿಶೇಷ ಪದ್ಧತಿ ಪ್ರಕಾರ ವಿಟ್ಲ ಚೆಕ್ಕಿತ್ತಡಿ ಅಣ್ಣಿಯಾನೆ ಪದ್ಮ ಶೆಟ್ಟರ ಅಳಿಯ ೧೩ ವರ್ಷ ಪ್ರಾಯದ ಚಂದಪ್ಪು ಮತ್ತು ಸದ್ರಿ ಅಣ್ಣಿ ಯಾನೆ ಪದ್ಮ ಶೆಟ್ಟರ ಮಗ ಮಂಜಪ್ಪನನ್ನು ಈ ದಿವಸ ದತ್ತಕ್ಕೆ ಪಡೆದುಕೊಂಡು ಒಂದನೆ ಚಂದಪ್ಪುಗೆ ನನ್ನ ಕುಟುಂಬದ ಪಟ್ಟವನ್ನೂ ಕಟ್ಟಿಸಿದ್ದೇನೆ. ೨ನೆಯವನಾದ ಮಂಜಪ್ಪನು ೧ನೆಯವನ ಸಹೋದರನಂತೆ ವರ್ತಿಸುತ್ತಾ ೨ ಜನರೂ ನನಗೆ ವಿಧೇಯರಾಗಿ ನಡೆದುಕೊಂಡು ಒಬ್ಬನ ನಂತರ ಮತ್ತೊಬ್ಬನು ಪಟ್ಟಕ್ಕೆ ಅಧಿಕಾರಿಯಾಗಬೇಕು"—"ಲಕ್ಷ್ಮೀಮತಿ ಅಮ್ಮನ ರುಜು."

ಶ್ರೀಮತಿ ಲಕ್ಷ್ಮೀಮತಿ ಅಮ್ಮನವರು ಕಾಹಿಲೆ

ಯಲ್ಲಿ ಬಿದ್ದರು; ಆಗ ಪಟ್ಟಕ್ಕೆ ಬಾಧ್ಯಸ್ತರಾದ ಇಬ್ಬರೂ ಅಪ್ರಾಯಸ್ಥರಾದ ಕಾರಣ ಸರ್ವಾಡಳಿತೆಯನ್ನು ನೋಡಲು ಶ್ರೀಮಾನ್ ಹೆಗ್ಗಡೆಯವರ ತಂದೆಯನ್ನೂ ಇನ್ನೊಬ್ಬರನ್ನೂ ನೇಮಿಸಲಾಯಿತು. ಕ್ರಮಶಃ ಶ್ರೀಮತಿ ಲಕ್ಷ್ಮೀಮತಿ ಅಮ್ಮನವರು ದೈವಾಧೀನರಾದರು. ಅನಂತರ ೬ ವರ್ಷಗಳಲ್ಲಿ ಚಂದಯ್ಯ ಹೆಗ್ಗಡೆಯವರು ಪ್ರಾಯ ಭರಿತರಾಗಿ ಆಡಳಿತ ವಹಿಸಿಕೊಂಡು ೨೧ ವರ್ಷಗಳ ಕಾಲ ಪಟ್ಟದಲ್ಲಿದ್ದರು. ಇವರ ಕಾಲದಲ್ಲಿ ಆಸ್ತಿಯ ಉತ್ಪನ್ನ ಹೆಚ್ಚಿತು; ಜಮಾ ಉಗ್ರಾಣದ ಕಟ್ಟಡವಾಗಿ ನಳ್ಳಿ ನೀರಿನ ಏರ್ಪಾಡೂ ಅನೇಕಾನೇಕ ಇತರ ಧರ್ಮ ಕಾರ್ಯಗಳೂ ನಡೆದುವು.

ಹೀಗೆ ಅತ್ತ ಕ್ಷೇತ್ರದ ವ್ಯವಹಾರಗಳು ಸಾಗುತ್ತಿದ್ದಾಗ ದತ್ತಕ್ಕೆ ಬಂದ ಎರಡನೆಯವರಾದ ನಮ್ಮ ಶ್ರೀಮಾನ್ ಹೆಗ್ಗಡೆಯವರ ವಿದ್ಯಾಭ್ಯಾಸ ಕ್ರಮವಾಗಿ ಸುಸೂತ್ರವಾಗಿ ನಡೆಯಲಾರದೆ ವಿಘ್ನಪರಂಪರೆಗಳಿಂದ ತುಂಬಿ ಹಾಗೂ ಹೀಗೂ ಅದು ಮೆಲ್ಲಡಿ ಇಡುತ್ತಿತ್ತು. ಚಿಕ್ಕಂದಿನಲ್ಲಿ ಅಷ್ಟೇನೂ ಶಿಕ್ಷಣಕ್ಕೆ ಅನುಕೂಲವಾಗದ ಶ್ರೀಮಾನ್ ಹೆಗ್ಗಡೆಯವರಿಗೆ ಪ್ರಾಯವಾದ ಬಳಿಕವೇ ಅವರ ಹಟದಿಂದ ಒಂದಿಷ್ಟು ವಿದ್ಯಾಲಾಭವಾದದ್ದು. ಅವರ ಹೆತ್ತವರು ಇವರ ಶಿಕ್ಷಣದ ವಿಷಯದಲ್ಲಿ ಸರಿಯಾಗಿ ಲಕ್ಷ್ಯಕೊಡದೆ ಹೋದುದರಿಂದಲೇ ಶ್ರೀಮಾನ್ ಹೆಗ್ಗಡೆಯವರಿಗೆ ಕಾಲೋಚಿತವಾದ ಶಿಕ್ಷಣ ಆಯಾ ಕಾಲದಲ್ಲಿ ದೊರಕದೆ ಹೋಯಿತು.

ಶ್ರೀಮಾನ್ ಹೆಗ್ಗಡೆಯವರ ಪ್ರಾಥಮಿಕ ಶಿಕ್ಷಣ ಮೊದಲು ವಿಟ್ಲ ಶಾಲೆಯಲ್ಲಿಯೂ ಅನಂತರ ಧರ್ಮಸ್ಥಳ ಶಾಲೆಯಲ್ಲಿಯೂ ಅಂತೂ ನಾಲ್ಕನೆಯ ತರಗತಿಯ ವರೆಗಾಯಿತು. ಮತ್ತೆ ಅಲ್ಲಿ ಶಾಲೆ ಇಲ್ಲ. ಮುಂದೆ ಬೇರೆ ಕಡೆಗೆ ಹೋಗಿ ಓದಲಿಕ್ಕೆ ಅವರ ಹಿರಿಯರು ಬಿಡಲಿಲ್ಲ; ಸ್ವಲ್ಪ ಕಾಲ ಒಬ್ಬ ಉಪಾಧ್ಯಾಯರ ಖಾಸಗಿ ಶಿಕ್ಷಣದ ಮೂಲಕ ಸ್ವಲ್ಪ ಇಂಗ್ಲಿಷಿನ ಪರಿಚಯವಾದರೂ ಅದೂ ಅಷ್ಟಕ್ಕೆ ನಿಂತಿತು. ಅನಂತರ ಶ್ರೀಮಾನ್ ಹೆಗ್ಗಡೆಯವರು ಜತೆ ಹುಡುಗರೊಡನಾಡುತ್ತಿದ್ದಾಗ ಎತ್ತರವಾದ ಸ್ಥಳದಿಂದ ಕೆಳಗೆ ಬಿದ್ದು ಕಾಲಿಗೆ ಪೆಟ್ಟಾಗಿ ಒಂದೆರಡು ವರ್ಷ ಹಾಸಿಗೆಯಲ್ಲಿಯೇ ಬಿದ್ದು ಹೊರಳಿ ನರಳಬೇಕಾಯಿತು. ಅನಂತರ ಗುಣ ಹೊಂದಿ, ಛಲ ಹಿಡಿದು, ಶ್ರೀಮಾನ್ ಹೆಗ್ಗಡೆಯವರು ತಮ್ಮ ೧೬ನೆಯ ವಯಸ್ಸಿನಲ್ಲಿ ಪುತ್ತೂರಿಗೆ ಹೋಗಿ ಅಲ್ಲಿನ ಶಾಲೆಯ I ಫಾರ್ಮಿಗೆ ಸೇರಿದರು; ಮುಂದೆ ವಿಶ್ವಪ್ರಯತ್ನದಿಂದ ಮಂಗಳೂರಿನ ಕೆನರಾ ಹೈ ಸ್ಕೂಲಿಗೆ III ಫಾರ್ಮಿಗೆ ಸೇರಿ ಅಲ್ಲಿ ಆರೋಗ್ಯ ಕೆಟ್ಟು ವಿಟ್ಲಕ್ಕೆ ಬಂದು ಅಲ್ಲಿ ವರ್ಷದ ತನಕ ಆರೋಗ್ಯ ಸುಧಾರಿಸದೆ ಬಹಳ ರಗಳೆಗಿಟ್ಟಿತು. ಆದರೂ ಕಲಿಯುವ ಹಂಬಲವುಳ್ಳ ಶ್ರೀಮಾನ್ ಹೆಗ್ಗಡೆಯವರು ತಿರುಗಿ ಕೆನರಾ ಹೈ ಸ್ಕೂಲಿಗೆ ಸೇರಿ, ಅಲ್ಲಿಂದ ಸೈಂಟ್ ಎಲೋಶಿಯಸ್ ಕಾಲೇಜಿನ ವಿದ್ಯಾರ್ಥಿಯಾಗಿ ಇಂಟರ್‌ಮಿಡಿಯೆಟ್ ತರಗತಿಯಲ್ಲಿ ವ್ಯಾಸಂಗ ಮಾಡಿದರು. ಅಷ್ಟಕ್ಕೇ ಇವರ ಶಿಕ್ಷಣ ನಿಂತಿತು; ಅವರ ಜೀವನಕ್ರಮ ಬೇರೆಯಾಯಿತು. ಶ್ರೀಮಾನ್ ಚಂದಯ್ಯ ಹೆಗ್ಗಡೆಯವರು ತಮ್ಮ ಮಧ್ಯ ವಯಸ್ಸಿನಲ್ಲೇ ವಿಷಮ ಜ್ವರದಿಂದ ಕಾಲವಶರಾದರು. ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರು ೧೯೧೮ನೇ ಅಕ್ಟೋಬರದಲ್ಲಿ ಪಟ್ಟಕ್ಕೆ ಬಂದರು. ಅವರ ಪಟ್ಟಾಭಿಷೇಕ ಮಹೋತ್ಸವವೂ ಪುರಾತನ ಪದ್ಧತಿಯಂತೆ ನಡೆದುಹೋಯಿತು.

ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಅದನ್ನು ಬಿಟ್ಟು ಪ್ರಸಿದ್ಧ ಶ್ರೀ ಧರ್ಮಸ್ಥಳ ಕ್ಷೇತ್ರದ ಗುರುತರವಾದ ಬಹುಮುಖದ ಜವಾಬುದಾರಿಯುಳ್ಳ ಆ ಧರ್ಮಾಧಿಕಾರವನ್ನು ವಹಿಸಿಕೊಳ್ಳಲೇಬೇಕಾದ ಸನ್ನಿವೇಶವು ಏರ್ಪಟ್ಟರೂ ಶ್ರೀಮಾನ್ ಹೆಗ್ಗಡೆಯವರು ಸಾಮಾನ್ಯನಂತೆ ಅಧೀರರಾಗದೆ ತಮ್ಮ ಹೊಸ ಜೀವನದಲ್ಲಿ ಉತ್ಸಾಹದಿಂದ ಕರ್ತವ್ಯನಿಷ್ಠೆಯಿಂದ ಕಾಲಿಟ್ಟರು. ಕಾಡು ಪ್ರಾಂತದಲ್ಲಿದ್ದು ಮಲೇರಿಯಕ್ಕೆ ಅನಾರೋಗ್ಯಕ್ಕೆ ತವರು ಮನೆಯಾದ ಆ ಧರ್ಮಸ್ಥಳದಲ್ಲಿ ಅಗತ್ಯವಾಗಿಯೂ ಆರೋಗ್ಯದ ಸಂಬಂಧ ಆಗಲೇ ಬೇಕಾಗಿದ್ದ ಕಾರ್ಯಗಳು ಹಲವೂ ಇದ್ದುವು; ಅವಕ್ಕಾಗಿ ಹೇರಳ ಹಣವೂ ಬೇಕಾಗಿತ್ತು. ಶ್ರೀಮಾನ್ ಹೆಗ್ಗಡೆಯವರು ಅವನ್ನೆಲ್ಲ ಕ್ರಮಶಃ ಮಾಡಿಸುತ್ತ ಬಂದರು. ಹತ್ತಿರದ ಕಾಡು ಕಡಿಸಿ, ತೇವದ ಜವುಗು ಹೊಂಡಗಳನ್ನು ಮುಚ್ಚಿಸಿ, ಮಾರ್ಗಗಳನ್ನು ಮಾಡಿಸಿ, ಹೊಸ ಬಾವಿ ಕೆರೆಗಳನ್ನು ಅಗೆಸಿ, ನಳ್ಳಿ ನೀರನ್ನು ವ್ಯವಸ್ಥೆಗೊಳಿಸಿ, ರೋಗಿಗಳಿಗೆ ಉಚಿತ ಔಷಧಿಗಾಗಿ ಏರ್ಪಡಿಸಿ, ಕ್ಷೇತ್ರವನ್ನು ನಿರ್ಮಲವಾಗಿ, ಆರೋಗ್ಯವರ್ಧನೆಗೆ ಅನುಕೂಲಿಸುವಂತೆ ಕಾಪಾಡಿಕೊಂಡು ಬಂದರು. ಹೊಸ ಕಟ್ಟಡಗಳು ತಲೆ ಎತ್ತಿದುವು; ಸುಂದರ ಉಪವನದ ನಿರ್ಮಾ

ಣವಾಯಿತು; ವಿದ್ಯುಚ್ಛಕ್ತಿಯ ದೀಪ ಬೆಳಗಿತು. ಹೊಸ ಅಡಿಕೆ ತೆಂಗು ಮಾವು, ಬಾಳೆ, ಏಲಕ್ಕಿ ತೋಟಗಳು ಕಂಗೊಳಿಸಿ ಉತ್ಪತ್ತಿ ಅಧಿಕವಾಯಿತು. ಪ್ರಯಾಣಿಕರ, ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಪವಿತ್ರವಾದ ಹೊಳೆಗೊಂದು ಸೇತುವೆಯನ್ನೂ ಶ್ರೀಮಾನ್ ಹೆಗ್ಗಡೆಯವರೇ ಸ್ವತಂತ್ರವಾಗಿ ಕಟ್ಟಿಸಿದರು. ಹಾಗೆ ಇಂದು ಸರ್ವ ಜಾತಿಮತಗಳವರಿಗೆ ಏಕಪ್ರಕಾರವಾಗಿ ತಾರತಮ್ಯವಿಲ್ಲದೆ ಪೂರ್ವ ಸಂಪ್ರದಾಯದಂತೆ ನಡೆಯುತ್ತಿರುವ ಉಚಿತವಾದ ಊಟೋಪಚಾರ ಮತ್ತು ಇತರ ಧರ್ಮಕಾರ್ಯಗಳಿಂದಲೂ ಈ ಹೊಸ ಏರ್ಪಾಡುಗಳಿಂದಲೂ ಕ್ಷೇತ್ರದ ಕೀರ್ತಿ ದಿನದಿನಕ್ಕೂ ಬೆಳೆದು ಅತ್ತಣ ಯಾತ್ರೆ ಮಹದಾನಂದಕರವಾಗಿದೆ; ಸುಲಲಿತವೆನ್ನಿಸಿದೆ.

ಶ್ರೀಮಾನ್ ಹೆಗ್ಗಡೆಯವರು ಪಟ್ಟಕ್ಕೆ ಬಂದ ಆ ಸಮಯ, ಕ್ಷೇತ್ರದ ಆರ್ಥಿಕ ದೃಷ್ಟಿಯಿಂದ ಕೆಟ್ಟದಲ್ಲದಿದ್ದರೂ ಚೆನ್ನಾಗಿರಲಿಲ್ಲ; ೧೯೧೮-೧೯ನೆಯ ಇಸ್ವಿಯ ಆ "ಇನ್‌ಫ್ಲುಯೆಂಜ"ದ ಹಾವಳಿಯಿಂದ ಯಾತ್ರಿಕರ ಸಂಖ್ಯೆ ಕಡಿಮೆಯಾಗಿ ಉತ್ಪತ್ತಿ ಕ್ಷೀಣಿಸಿತು; ಆಡಳಿತೆ ನಡೆಸುವುದು ಕಷ್ಟವಾಯಿತು. ಅನಂತರ ೧೯೨೩ರ ಮಹಾಪ್ರವಾಹದಿಂದ ಧರ್ಮಸ್ಥಳಕ್ಕೆ ಸೇರಿದ ಆಸ್ತಿಗಳಿಗೆ ಹೇರಳ ನಷ್ಟ-ಬಂಟವಾಳ ಉಪ್ಪಿನಂಗಡಿ ಮೊದಲಾದ ಕಡೆ ಇದ್ದ ಹಲವು ಭಂಡಸಾಲೆ, ಬೀಡು ಮೊದಲಾದ ದೊಡ್ಡ ಕಟ್ಟಡಗಳು ಬಿದ್ದು, ಸಾವಿರಾರು ಮುಡಿ ಅಕ್ಕಿ ನೀರುಪಾಲಾಗಿ ಹಾಗೂ ಹೇರಳ ನಷ್ಟವಾಗಿ, ಮುಂದೆ ಆ ಕಟ್ಟಡಗಳ ನಿರ್ಮಾಣಕ್ಕಾಗಿ ೩೦-೪೦ ಸಾವಿರ ರೂ.ಗಳ ವೆಚ್ಚವಾಯಿತು. ಆದರೂ ಅಂಥ ಸಮಯದಲ್ಲಿ ಎರಡು ದೊಡ್ಡ ಸಂಗತಿಗಳು ಎದ್ದು ಕಾಣುತ್ತಿವೆ—ಆಗ ಹಾಳಾಗದೆ ಉಳಿದ ಸಾವಿರಾರು ಮುಡಿ ಅಕ್ಕಿಯನ್ನು,—ಮುಡಿಯೊಂದಕ್ಕೆ ಊರಲ್ಲಿ ರೂ. ೧೫ರಂತೆ ಮಾರುತ್ತಿದ್ದಾಗ,—ಬಡಬಗ್ಗರಿಗೆ ಹಂಚುವಂತೆ ಮುಡಿಗೆ ೭ ರೂಪಾಯಿಯಂತೆ ಸರಕಾರಕ್ಕೆ ಕೊಟ್ಟದ್ದು; ಕ್ಷೇತ್ರದ ಧರ್ಮಕಾರ್ಯ ಸಾಂಗವಾಗಿ ನಡೆಸಿದ್ದು.

ಶ್ರೀಮಾನ್ ಹೆಗ್ಗಡೆಯವರು ಪ್ರವರ್ಧಮಾನನಾದ ತಮ್ಮ ಈಚಿಗಿನ ಆಡಳಿತದ ಕಾಲದಲ್ಲಿ ಸುಮಾರು ೧೬-೧೮ ವರ್ಷಗಳಿಂದ ಪ್ರತಿ ವರ್ಷವೂ ದೀಪೋತ್ಸವದ ಸಮಯದಲ್ಲಿ ಜಿಲ್ಲೆಯ ಮತ್ತು ಅಖಿಲ ಕರ್ಣಾಟಕದ ಇತರ ಭಾಗಗಳ ವಿದ್ವಾಂಸರುಗಳನ್ನು ಕರೆಸಿಕೊಂಡು, 'ವಿವಿಧಧರ್ಮ ಸಮ್ಮೇಳನ'ವನ್ನು ನೆರೆಯಿಸಿ, ಮುಖ್ಯವಾಗಿ ಪಾರಮಾರ್ಥಿಕ ವಿಚಾರದಲ್ಲಿ ಜನತೆಗೆ ಜ್ಞಾನಬೋಧ ಆತ್ಮೋನ್ನತಿಯಾಗುವಂತೆ ಉಪನ್ಯಾಸಗಳನ್ನು ಕೊಡಿಸುತ್ತಿದ್ದಾರೆ. ಇದು ಧಾರ್ಮಿಕ ಕ್ಷೇತ್ರಗಳ ಬದ್ಧಕರ್ತವ್ಯವೆಂದು ತಿಳಿದು ಇದನ್ನು ಆಚರಣೆಗೆ ತಂದುಕೊಂಡವರಲ್ಲಿ ಶ್ರೀಮಾನ್ ಹೆಗ್ಗಡೆಯವರು ಅಗ್ರಗಣ್ಯರು.

ಸಿದ್ಧವನದಲ್ಲಿ ಅನ್ಯ ಸಹಾಯವನ್ನು ಅಪೇಕ್ಷಿಸದೆ, ನಾನಾ ಭಾಷೆಗಳ ಮತ್ತು ಇತರ ಉಪಯುಕ್ತ ಪಾಠಕ್ರಮಗಳ ಒಂದು "ಗುರುಕುಲ" ಪದ್ಧತಿಯ ಸಂಸ್ಥೆಯನ್ನು ಶ್ರೀಮಾನ್ ಹೆಗ್ಗಡೆಯವರು ಸುಮಾರು ೧೯೪೦ನೇ ಇಸ್ವಿಯಲ್ಲಿ ಸ್ಥಾಪಿಸಿದರು. ಅಲ್ಲಿ ವಿದ್ಯಾರ್ಥಿಗಳಿಗೆ ಎಲ್ಲವೂ ಉಚಿತ. ಅವರ ಎಲ್ಲ ಖರ್ಚೂ ಶ್ರೀಮಾನ್ ಹೆಗ್ಗಡೆಯವರದೇ. ೧೯೪೫-೪೬ರಲ್ಲಿ ಈ ಸಂಬಂಧ ಆದ ಖರ್ಚು ಸುಮಾರು ೬ ಸಾವಿರ; ಅನಂತರ ಒಂದು ವರ್ಷದ ಖರ್ಚು ಸುಮಾರು ೭೫೦೦ ರೂ.ಗಳು; ಇದರಲ್ಲಿ ವಿದ್ಯಾರ್ಥಿಗಳಿಗಾಗಿಯೇ ೫ ಸಾವಿರ ವೆಚ್ಚವಾಗಿದೆ; ಪ್ರತಿಯೊಬ್ಬ ವಿದ್ಯಾರ್ಥಿಗಾಗಿ ಆಗ ವರ್ಷಕ್ಕೆ ಸರಾಸರಿ ರೂ. ೧೪೦ರಷ್ಟು ವೆಚ್ಚವಾಗುವಂತೆ ತಿಳಿದುಬಂದಿದೆ. ಈ ಸಂಸ್ಥೆ ಶಾಶ್ವತವಾಗಿ ನಡೆಯುವಂತೆ ಒಂದು ಟ್ರಸ್ಟನ್ನು ನಿರ್ಮಿಸಿ ಆ ಟ್ರಸ್ಟಿಗೆ ವಾರ್ಷಿಕವಾಗಿ ಸುಮಾರು ೫ ಸಾವಿರ ರೂ.ಗಳಷ್ಟು ಉತ್ಪನ್ನ ಬರುವ ಹಾಗೆ ಶ್ರೀಮಾನ್ ಹೆಗ್ಗಡೆಯವರು ವ್ಯವಸ್ಥೆ ಮಾಡಿದ್ದಾರೆ. ಗುರುಕುಲದ ವರ್ಷವರ್ಧಂತಿಯೂ ಬಹಳ ಸಂಭ್ರಮದಿಂದ ಜರಗುತ್ತದೆ.

ಉಜಿರೆಯ ಹ್ಯಾಸ್ಕೂಲಿನ ಸ್ಥಾಪನಾಕಾರ್ಯದಲ್ಲಿ ಶ್ರೀಮಾನ್ ಹೆಗ್ಗಡೆಯವರು ಕಾರ್ಯತಃ ತೋರಿರುವ ಆಸಕ್ತಿಯೂ ಕಡಮೆಯಾದುದಲ್ಲ. ಆ ಸಂಬಂಧದ ಕರ್ಣಾಟಕ ಗುರುಕುಲ ವಿದ್ಯಾವರ್ಧಕ ಸಂಘ, ಉಜಿರೆ, ಅದಕ್ಕೆ ರೂ. ೧೦ ಸಾವಿರವನ್ನೂ ೩೦ ಎಕ್ರೆ ಭೂಮಿಯನ್ನೂ ದಾನ ಮಾಡಿದ್ದೇ ಅಲ್ಲದೆ ಆ ಹ್ಯಾಸ್ಕೂಲಿಗೆ ನೂತನ ವಿದ್ಯಾರ್ಥಿಭವನವೊಂದನ್ನು, ಅಪ್ರಾರ್ಥಿತರಾಗಿಯೇ, ಅವರು ಸುಮಾರು ೪೦ ಸಾವಿರ ರೂ.ಗಳ ವೆಚ್ಚದಿಂದ ಕಟ್ಟಿಸಿಯೂ ಕೊಟ್ಟಿದ್ದಾರೆ. ಒಟ್ಟು, ವಿದ್ಯಾ ಸಂಬಂಧ

ವಾಗಿಯೇ ಶ್ರೀಮಾನ್ ಹೆಗ್ಗಡೆಯವರು ಇದುವರೆಗೆ ದಾನರೂಪದಲ್ಲಿ ವಿನಿಯೋಗಿಸಿದ ಹಣದ ಮೊಬಲಗು ಸುಮಾರು ಒಂದೂವರೆ ಲಕ್ಷಕ್ಕೂ ಮಿಾರಬಹುದೆಂದು ಗೊತ್ತಾಗಿದೆ.

ಶ್ರೀಮಾನ್ ಹೆಗ್ಗಡೆಯವರು ತಮ್ಮ ಸಾರ್ವಜನಿಕ ಜೀವನದಲ್ಲಿಯೂ ಆದರ್ಶಪ್ರಾಯರಾಗಿದ್ದಾರೆ. ಮಲೆನಾಡಿನ ಜನಗಳ ಉದ್ಧಾರವನ್ನು ಬಯಸಿ ಅದಕ್ಕಾಗಿ ಶ್ರಮಿಸುವವರು ಅವರು; ಎಂ. ಎಲ್. ಸಿ., ಗಳಾಗಿ ಹಲವಾರು ವರ್ಷಗಳಿಂದ ಶಾಸನಸಭೆಯಲ್ಲಿ ಪ್ರಜಾಸೌಕರ್ಯಗಳನ್ನು ನೋಡಿಕೊಳ್ಳುವವರು ಅವರು; ಗವರ್ನರರನ್ನೋ, ಮುಖ್ಯ ಸಚಿವರನ್ನೋ, ಸಚಿವರನ್ನೋ ಮಲೆನಾಡಿನ ಕಡೆಗೆ ಬರುವಂತೆ ಆಮಂತ್ರಿಸಿ ಒತ್ತಾಯಿಸಿ, ಅವರಿಗೆ ಇಲ್ಲಿನ ಹೀನ ದೀನ ಸ್ಥಿತಿಯನ್ನು ಕಣ್ಣಾರೆ ಕಾಣಿಸಿ, ಇಲ್ಲಿ ಅವಶ್ಯವಾಗಿರುವ ಏರ್ಪಾಡುಗಳನ್ನು ಭೇಟಿಗಳ ಮೂಲಕವೂ ಬಿನ್ನಹ ಪತ್ರಗಳ ಮೂಲಕವೂ ಅರಿಕೆ ಮಾಡಿಕೊಳ್ಳುವವರು ಅವರು ಅಥವ ಅಂಥವರನ್ನು ಮುನ್ನಡೆಸುವವರು ಅವರು; ಜಿಲ್ಲೆಯ ಯಾವ ಮುಖ್ಯ ಸಮಿತಿಗಳಲ್ಲಿ ಅವರಿಲ್ಲ? ಜಿಲ್ಲಾ ಆಹಾರ ಸಮಿತಿ, ಪ್ರಾಣಿದಯಾ ಸಮಿತಿ ಮೊದಲಾದ ಹತ್ತು ಸಮಸ್ತ ಸಮಿತಿಗಳಲ್ಲಿ ಅವರು; ಜಿಲ್ಲಾ ವರ್ಗದಾರರ ಸಂಘದ ಅಧ್ಯಕ್ಷತೆ, ಉಡುಪಿ ರೈತ ಸಮ್ಮೇಳನದ ಅಧ್ಯಕ್ಷತೆ, ಕಾಸರಗೋಡಿನ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷತೆ, ಕಾರ್ಕಳದ ಜಿಲ್ಲಾ ವೈದ್ಯಸಂಘದ ಸ್ವಾಗತ ಸಮಿತಿ ಅಧ್ಯಕ್ಷತೆ—ಈ ಹಲವಾರು ಅಧ್ಯಕ್ಷತೆಯ ಸರಮಾಲೆಯೇ ಇವರ ಕೊರಳಲ್ಲಿ.

೧೯೪೩ರಲ್ಲಿ, ಶ್ರೀಮಾನ್ ಹೆಗ್ಗಡೆಯವರ ೨೫ ವರ್ಷಗಳ ಜನೋಪಕಾರದ ಆಡಳಿತದ ಸಂಬಂಧ, "ರಜತೋತ್ಸವ ಸಮಿತಿ"ಯೊಂದು ಏರ್ಪಟ್ಟು, ಆ ಸಮಿತಿಯವರು ತಮ್ಮ ಕೃತಜ್ಞತಾಪೂರ್ವಕವಾದ ಸಂತೋಷವನ್ನು—"ರಜತ ಮಹೋತ್ಸವ ಗ್ರಂಥ"ದ ಪ್ರಕಟಣೆ ಮತ್ತು ಅದರ ಕಾಣಿಕೆಯ ಅರ್ಪಣೆಯ ಮೂಲಕ ಪ್ರದರ್ಶಿಸಿದ್ದೊಂದು; ೪೮ನೇ ಇಸ್ವಿ ನವೆಂಬರದಲ್ಲಿ ನಮ್ಮ ಹಿಂದಿನ ವಿದ್ಯಾಮಂತ್ರಿ ಶ್ರೀ। ಅವಿನಾಶಿಲಿಂಗಂ ಚೆಟ್ಟಿಯಾರರು ಉಜಿರೆ ಹ್ಯಾಸ್ಕೂಲಿನ ವಿದ್ಯಾರ್ಥಿಭವನದಲ್ಲಿ ಶ್ರೀಮಾನ್ ಹೆಗ್ಗಡೆಯವರ ತೈಲಚಿತ್ರವನ್ನು ಅನಾವರಣಗೊಳಿಸಿ ಅವರನ್ನು ಸನ್ಮಾನಿಸಿದ್ದೊಂದು; ಇಂದು ಸಮಗ್ರ ಕರ್ಣಾಟಕದ ಪ್ರಾತಿನಿಧ್ಯವುಳ್ಳ "ಸಂಭಾವನಾ ಸಮಿತಿ"ಯವರು ಶ್ರೀಮಾನ್ ಹೆಗ್ಗಡೆಯವರಿಗೆ ಅರವತ್ತು ವರ್ಷ ತುಂಬಿದಂದು ಅಖಿಲ ಕರ್ಣಾಟಕದ ವಿದ್ವಜ್ಜನರ ಶ್ರೇಷ್ಠ ಲೇಖಕರ ಪ್ರಬಂಧಗಳ ಸಂಗ್ರಹವುಳ್ಳ ಒಂದು ಸಮುಚಿತ ಸಂಪುಟವನ್ನು ಪ್ರಕಟಿಸಿ ಅದನ್ನು ಸಮರ್ಪಿಸಲು ಸಿದ್ಧರಾಗಿ ಶ್ರೀಮಾನ್ ಹೆಗ್ಗಡೆಯವರ ಚಿರಂಜೀವಿ ಪಟ್ಟಕ್ಕಾಗಿಯೂ ಭಗವಂತನಲ್ಲಿ ಕೈ ಜೋಡಿಸಿ ಬೇಡುತ್ತ ನಿಂತಿರುವುದೊಂದು—ಶ್ರೀಮಾನ್ ಹೆಗ್ಗಡೆಯವರದು ಸಾರ್ಥಕವೆನಿಸಿದ ಒಂದು ದೊಡ್ಡ ಜೀವನವೆಂಬುದಕ್ಕೆ ಈ ಮೂರು ಉಜ್ವಲ ಮೂರ್ತಿಮಂತ ನಿದರ್ಶನಗಳಿಗಿಂತ ದೊಡ್ಡವೂ ಹೆಚ್ಚಿನವೂ ಬೇಕೇ?

Printed at
The Saraswathi Printing Works, Ltd., Mangalore.
1000/18-5-1950.



ನೇತ್ರಾವತಿಯ ನೋಟ—ಶ್ರೀ। ಹೆಗ್ಗಡೆಯವರು ಹಾಕಿಸಿದ ಸೇತುವೆ

Photo: K. S. Karanth



ಶ್ರೀ ಮಂಜುನಾಥಸ್ವಾಮಿ ದೇವಾಲಯ, ಬೀಡುಗಳ ಒಂದು ದೃಶ್ಯ

Photo: K. S. Karanth.



ಶ್ರೀ। ಮಂಜುನಾಥಸ್ವಾಮಿ ದೇವಾಲಯ—ಪಾರ್ಶ್ವನೋಟ

Photo: K. S. Karanth.



ಯಾತ್ರಿಕರ ನಿವಾಸದ ಮನೆಗಳ ಒಂದು ದೃಶ್ಯ

Photo: K. S. Karanth.



ಧರ್ಮಸ್ಥಳದ ವಿಹಂಗಮ ದೃಶ್ಯ

Photo: K. S. Karanth.



ಜಮಾ ಉಗ್ರಾಣ—ಧರ್ಮಸ್ಥಳ

Photo: K. S. Karanth.



ಶ್ರೀ ಚಂದ್ರನಾಥ ಬಸದಿಯ ಒಂದು ದೃಶ್ಯ

Photo: K. S. Karanth.



ನಗರೋದ್ಯಾನದ ಸುಂದರ ದೃಶ್ಯ

Photo: K. S. Karanth.